Registered No. M. 498

ಚಂದಾನಿರ್ಣಯ — ವರ್ಷ 1ಕ್ಕೆ ರೂ. 1—8—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ್ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡಿಯುತೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ತಾರೀಕು ೫ನೇ ಜನವರಿ ಶುಕ್ರವಾರ ೧೯೧೭. | ಸಂಚಿಕೆ ೧.

ಬಿಡಿ ಪ್ರತಿ ... ರೂ. 2—8—0.

THE CANARA BNK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Authorised Capital Rs.	... 3,000—0—0	ನಿಯಮಿತ ಮೂಲ ಧನವು ರೂಪಾಯಿ		300,000—0—0
Issued Capital	... 2,000—0—0	ಹುಟ್ಟಿಬಂದ ಮೂಲ ಧನವು	,,	225,000—0—0
Subscribed Capital	... 2,000—0—0	ಪ್ರತಿಜ್ಞಾತ ಮೂಲ ಧನವು	,,	225,000—0—0
Paid up Capital	... 2,000—0—0	ಆಗತ ಮೂಲ ಧನವು	,,	200,000—0—0
Deposits	... 3,227—9—4	ಠೇವಣಾತಿಯಾಗಿ ಕೊಡಲ್ಪಟ್ಟ ಮೊಬಲಗುಗಳು		336,227—9—4
Reserve Fund	... 0,442—8—0	ರಕ್ಷಿತ ಧನವು	... ...	40,442—8—0

Besides the uncalled apital of Rs. 25,000/-25% of the net pro are added annually to the Reserve Fund. Rs. 8,485/ have been invested in Governmt Paper of the face value of Rs. 29,300.

Dividends of not less than 6% paid during the past years and a bons of ½ to 2% paid in addition during the last even years.

Fixed Deposits of Rs. 50/- an above in multiples of Rs. 5/ receivd for 6, 12 and 24 months @ 4, 4½, 5 and 5½% respectively at the discretion of the maaging ommittee.

Short-notice Deposit requiring one weeks notice of withdrawal after one moth received @ 2½% per annum at the discetion of the managing committee.

Current Deposit Acount opened free of charge.

Savings Bank Accout opened for any sum not less than As. and multiples thereof and interest paid @ 4%.

Loans granted on proper securities and pledges.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡ 25ಕ್ಕೆ ಕಡಿಮೆಯಾದ ಮೊಬಲಗು ಕೂಡಿಸಲ್ಪಡುತ್ತದಲ್ಲದೆ ಹಿಸೆ ಸ್ಟಾಕ್ಯಗಳಂಥ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಪ್ರಾಮಿಸರಿ ಪತ್ರಗಳಲ್ಲಿ ಠೇವಣಿ ಮಾಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಗಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ ½ರಿಂದ 2ರ ವರೆಗಿನ 'ಬೋನಸ್' ಎಂಬ ಅಧಿಕ ಲಾಭಾಂಶವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮ ಪ್ರಕಾರ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ರ ಧರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ವಿನಾ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಲಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡಲಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಒತ್ತೆಯ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ld,

Mangalore, 1st Decber 1916.

P. Gopal Naik,
Secretary.

ಶಾರದಾ ಛಾಪಖಾನೆಯ
1917ನೇ
ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವವಾದರೂ ವಿನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೋ ಕವರು.

ದೊಡ್ಡ ಸ್ಯಾಜು 2 ಆಣೆ ಕ್ರಯದ
ಅಪ್ಸಲ್ ಪೆನ್ಸಿಲು ಸಹಿತ ಆಣೆ 0—10—0
ಚಿಕ್ಕದು .. .. 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕಾವ್ಯಗಳು:

ಇವರಡಿಯಲ್ಲಿ ನಮೂದಿಸಿರುವ ಮಹಾಕಾವ್ಯಗಳಿರುವ ಪ್ರತಿಯೊಂದು ಶ್ಲೋಕಕ್ಕೂ ಪದಚ್ಛೇದ, ಪ್ರತಿಪದಾರ್ಥ, ತಾತ್ಪರ್ಯ, ಪ್ರಕೃತರೂಪ, ಆಕಾಂಕ್ಷೆ, ಭಾವಾರ್ಥ ವಿಶೇಷಾಂಶಗಳು ವಿಶದವಾಗಿ ಬರೆದಿವೆ. ಸಂಸ್ಕೃತ ಭಾಷೆಯ ಪರಿಚಯವಾಗಬೇಕೆಂದಿರುವ ಕನ್ನಡಿಗರಿಗೆ ಈ ಪುಸ್ತಕಗಳು ಅವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು	3—12—0
ಮೇಘಸಂದೇಶ ಪೂರ್ತ	2— 0—0
ಕುಮಾರಸಂಭವ 1, 2ನೇ ಸರ್ಗ	1— 4—0
ಕಿರಾತಾರ್ಜುನೀಯ ಪ್ರಥಮ ಸರ್ಗ	0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಎಲ್ಲಾ ಪ್ರಕರಣಗಳನ್ನು ಒಳಗೊಂಡಿದೆ. ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಸಿಗೆ ಬಂದು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. 2—4—0 ಹಾಸಲು ೬ ಆಣೆ.

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಚಕ್ರಕೋಡಿ ವಿಷ್ಣುಶಾಸ್ತ್ರಿಗಳ ಮಗ ಸುಬ್ಬಣ್ಣ ಶಾಸ್ತ್ರಿಗಳು ಗುಣಿಸಿ
ಜಿ. ಗೋಪಾಲಪ್ಪ ಶಾಸ್ತ್ರಿಗಳು ಮತ್ತು ತಿರಂಕಲ್ಲು ಸುಬ್ರಾಯ ಜೋಯಿಸರಿಂದ
ಪರಿಶೋಧಿಸಲ್ಪಟ್ಟ

ಪಿಂಗಳ ಸಂವತ್ಸರದ ಪಂಚಾಂಗವು.

ಈಗಲೇ ಮಾರಾಟಕ್ಕೆ ಸಿದ್ಧವಾಗಿರುವುದು.

ಕ್ರಯ ಪ್ರತಿ ಒಂದಕ್ಕೆ ಆಣೆ 3, 1 ಡಜನು ಪ್ರತಿಗಳಿಗೆ ರೂ. 1—14—0, 100 ಪ್ರತಿಗಳಿಗೆ ರೂ. 14—0—0. ಬೇಕಾದವರು ಬೇಗನೇ ಬರೆಯುವುದು.

ವಿಳಾಸ:—
ಕೆ. ಅಣ್ಣಪ್ಪ ನಾಯ್ಕ,
ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕ.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇನೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಹುಡುಕಿದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೪೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೪೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಹೊರೆಯಿಡುವುದು ನಿಶ್ಚಯವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮೈಬದ್ಧ, ಕೆಮ್ಮು, ಗಬೆಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

- ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
- ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
- ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಬೊಂಬ್ಬೆ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿರುವದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಬಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಅದ್ಭುತವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಸಂತೋಷವುಳ್ಳವನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲೈಫ್ ಎಸ್ಯೂರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮ॥ ಲಲ್ಲುಬಾಯಿ, ಸಾಮಲ್ ದಾಸರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವ ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ ಮ॥ ಜೋರ್ಜ್‌ಕಿಂಗ್ ಎಫ್. ಐ. ಎ. ಎಫ್. ಐ.

ಇಂಥ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಿ ಮಾಡಿಟ್ಟಿರುವದು.

ಹಣತುಂಬಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯ ವಿಳಾಸ:—

ಕೆಟ್ಟಿ ಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮಾಬಲಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಲಿ. ಭಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸತಕ್ಕದ್ದು.

ಸೇಲಂ, ತಾ. 10—4—16.

ಮುಂಬಯಿಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಿಗೆ—

ನನ್ನ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಅವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾಗುವ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣ ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿರುವದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮಾ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ರಿಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ ಯವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ಸೇವಿಸುತ್ತಾರೆ. ಇದರಿಂದ ಅಜೀರ್ಣ, ಕೆಮ್ಮು, ಕೈಕಾಲುಗಳು ತಿರಿಯ ಗೋತ್ರುನೆಗಡಿಯಿಂದ ಮೂಗು ಸೋರುವಿಕೆ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸುಂದರವುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಪೀರ ಡಾಕ್ಟರ್, ಸುರಗಾಣ, ಜಿಲ್ಲಾ ಮುಝಫ್ಫರಪುರ, ಬರೆಯುವದೇನಂದರೆ:—ಡಾಕ್ಟರ ಕೆಲಸ ಮಾಡುತ ನಾನು ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂತೆ ಪರಿಣಾಮ ಮಾಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಬೇರೆ ಗುಣಕಾರಕ ಔಷಧವು ಮತ್ತಾವದೂ ಇಲ್ಲವೆಂಬುದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಅಲನ್ ಮಾರ್ಟ್,
ಹ್ಯಾಮಿಲ್ಟನ್ ಬಿಲ್ಡಿಂಗ್ಸ್, ಮಂಗಳೂರು.

ಪರಿಷತ್ತುಗಳು.

ರಾಷ್ಟ್ರೀಯ ಸಭೆ:—ಸೂರತಿನಲ್ಲಿ ನಡೆದ ರಾಷ್ಟ್ರೀಯ ಸಭೆಯು ಇತ್ತಂಡವಾದನಂತರ ಈ ಸಾರಿ ಲಖನೌದಲ್ಲಿ ನಡೆದ ರಾಷ್ಟ್ರೀಯ ಸಭೆಯಲ್ಲಿಯೇ ಈ ತಂಡಗಳಿಗೆ ಪುನರೈಕ್ಯವಾದದರಿಂದ ಈ ಸಾರೆಯು ಸಭೆಯಲ್ಲಿ ಸೌವ್ಯಪಕ್ಷ ರಾಷ್ಟ್ರೀಯಪಂಬ ಬೇಧಗಳಿಲ್ಲದೆ ಎಲ್ಲಾ ತಂಡಗಳ ಪ್ರತಿನಿಧಿಗಳು ಒಗ್ಗಟ್ಟಾಗಿ ಕೂಡಿ ಬಂದುದರಿಂದ ರಾಷ್ಟ್ರೀಯ ಸಭೆಯ ಹಂದರದಲ್ಲಿ ೩೩ಪ್ರತಿನಿಧಿಗಳೂ, ೪೦೦೦ ಪ್ರೇಕ್ಷಕರೂ ತುಂಬಿದ್ದರು. ಬಹಳ ಮಹಮ್ಮದೀಯ ಪ್ರತಿನಿಧಿಗಳೂ, ಪ್ರೇಕ್ಷಕರೂ, ಕೆಲಯೂರೋಪಿಯನ ಪ್ರೇಕ್ಷಕರೂ ಈ ಸಾರೆಯು ರಾಷ್ಟ್ರೀಯಸಭೆಗೆ ಬಂದಿದ್ದರು. ಮಿಸೆಸ್ ಬಿಸೆಂತ, ಮೆಸರ್ಸ್ ತಿಲಕ, ಗಾಂಧಿ, ಬಿಪಿನಚಂದ್ರ ಪಾಲ, ಮಜುರುಲ್ ಹೇಕ್, ಜಿನ್ನಾ, ಡಾಕ್ಟರ್ ರಾಷ್ ಬಿಹಾರಿ ಘೋಷ್ ಮತ್ತು ಇತರ ಹಿಂದಿ ಪ್ರಖ್ಯಾತ ಮುಂದಾಳುಗಳು ಹಂದರದ ಒಳಪ್ರವೇಶಿಸುವಾಗಲ್ಲಿ ಸಭಿಕರು ಅವರಿಗೆ ಧನ್ಯವಾದವನ್ನಿತ್ತರು. ಅಧ್ಯಕ್ಷರ ಮಾನ್ಯ ಅಂಬಿಕಚರಣ ಮುಜುಮದಾರರು ಖಾಸಗಿ ಸೆಕ್ರೆಟರಿಗಳೊಡನೆ ಬರುತ್ತಲೇ ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿ ಮೆಂಬರರಾದ ಬಾಬು ಸುರೇಂದ್ರನಾಥ ಬೆನರ್ಜಿ ಮೊದಲಾದ ಪ್ರಖ್ಯಾತರು ಅವರನ್ನು ಸ್ವಾಗತಮಾಡಿಕೊಂಡು ಅವಸ್ಥಾನದಲ್ಲಿ ಕೂಡ್ರಿಸಿದರು. ಸಭಾಕಾರ್ಯವು ವಂದೇ ಮಾತರಂ ರಾಷ್ಟ್ರಗೀತದೊಂದಿಗೆ ಪ್ರಾರಂಭವಾಯಿತು. ಹಿಂದೂ ಬಾಲಕರು ಇತರ ಎರಡು ರಾಷ್ಟ್ರೀಯ ಗೀತವನ್ನು ಹಾಡಿದರು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಪಂಡಿತ ಜಗತ್ ನಾರಾಯಣರವರು ಸ್ವಾಗತ ಭಾಷಣವನ್ನು ಓದಿದನಂತರ ಅಧ್ಯಕ್ಷರ ಭಾಷಣವನ್ನು ಮ॥ ರಾ॥ ಜೆ. ಚೌದುರಿಯವರು ಓದಿದರು. ಅಂದಿನಾಯಂಕಾಲ ಹಿಂದೀ ಮಹಮ್ಮದೀಯರ ಮತ್ತು ಹಿಂದೂಗಳ ಪ್ರತಿನಿಧಿಗಳ ಸಂಖ್ಯೆಯು ನ್ಯಾಯವಿಧಾಯಕ ಸಭೆಗಳಲ್ಲಿ ಸೇಕಡಾ ಎಷ್ಟರಂತೆ ಇಡಬೇಕೆಂಬ ವಿಷಯದ ಇತ್ಯರ್ಥವು ಆದುದರಿಂದ ಮರುದಿನ ರಾಷ್ಟ್ರೀಯ ಸಭೆಗೆ ಕೂಡಿ ಬಂದ ಮಹಮ್ಮದೀಯನರ ಸಂಖೆಯು ಬಹಳ ಹೆಚ್ಚಾಗಿತ್ತು. ಮಧ್ಯಾಹ್ನ ೧ ಗಂಟೆಗೆ ರಾಷ್ಟ್ರೀಯ ಸಭೆಗೆ ಲೆಫ್ಟನೆಂಟ ಗವರ್ನರವರೂ ಅವರ ಪತ್ನಿಯವರೂ ಸಭಾಕಾರ್ಯಗಳನ್ನು ನೋಡಲು ಬಂದಿದ್ದರು. ರಾಷ್ಟ್ರೀಯ ಗೀತಗಳು ಹಾಡಿದನಂತರ ಗತಿಸಿ ಹೋದ ಕಾಂಗ್ರೆಸ್ ಮುಂದಾಳುಗಳ ಪರವಾದ ವಿಷಾದಸೂಚಕ ನಿರ್ಣಯವೂ, ಕಿಚನರ್ ಪ್ರಭುಗಳ ಮರಣದಿಂದಾದ ವಿಷಾದವನ್ನು ಸೂಚಿಸುವ ನಿರ್ಣಯವೂ ಮತ್ತು ರಾಜಭಕ್ತಿಪರವಾದ ನಿರ್ಣಯವೂ ಅಧ್ಯಕ್ಷರಿಂದ ಸಭೆಯ ಮುಂದೆ ತರಲ್ಪಟ್ಟು ಸಭಿಕರ ಅನುಮೋದನೆಯನ್ನು ಹೊಂದಿದವು. ಅನಂತರ ಬಹುಮಾನಪಟ್ಟ ರಾಧಾಕೃಷ್ಣ ದಾಸರವರು "ಆರ್ಮ್ಸ್ ಆಕ್ಟ್" ಆಯುಧ ಸಂಬಂಧವಾದ ಆಕ್ಟನ್ನು ಅತಂತ್ರಪಡಿಸಬೇಕೆಂಬ ಮಸೂದೆಯನ್ನು ಸಭೆಯ ಮುಂದೆ ತಂದರು. ಮಿಸೆಸ್ ಸರೋಜಿನಿ ನ್ಯಾಡುರವರು ಈ ಮಸೂದೆಯನ್ನು ಕಾಲೋಚಿತ ಮಾತುಗಳಿಂದ ಅನುಮೋದಿಸಿದರು. ಹೀಗೆ ಈ ಮಸೂದೆಯು ಸಭಿಕರಿಂದ ಮಂಜೂರಾಯಿತು. ಬಳಿಕ ಮಾನ್ಯ ರಾಧಾಕೃಷ್ಣ ದಾಸರವರು ಈ ದೇಶಕ್ಕೆ ಸ್ವಯಂ ಸೇನಿಕತ್ವದ ಹಕ್ಕು ಕೊಡಬೇಕೆಂಬ ಮಸೂದೆಯನ್ನು ಸಭೆಯ ಮುಂದೆ ತಂದರು. ಈ ಮಸೂದೆಯನ್ನು ಮ॥ ರಾ॥ ಬಿ. ಸಿ. ಚಟರ್ಜೀಯವರೂ ರಾಯಬಹದ್ದೂರ ದ್ವಾರಕನಾಥರವರೂ ಅನುಮೋದಿಸಿ ಹಿಂದೀಗಳಿಗೆ ಈ ವಿಷಯದಲ್ಲಿರುವ ಪಾತ್ರತೆಯನ್ನು ವಿವರಿಸಿದ ನಂತರ ಈ ಮಸೂದೆಯೂ ಸಭಿಕರಿಂದ ಮಂಜೂರಾಯಿತು.

ಬಳಿಕ ಮದ್ರಾಸಿನ ಮ॥ ರಾ॥ ಸಿ. ಪಿ. ರಾಮಸ್ವಾಮಿಯವರು ಪ್ರೆಸ್ ಆಕ್ಟನ್ನು ಖಿಲಪಡಿಸಬೇಕೆಂಬ ಮಸೂದೆಯನ್ನು ಸಭೆಯ ಮುಂದಿಟ್ಟು ಈ ಆಕ್ಟಿನಿಂದ ಉಂಟಾಗುತ್ತಿರುವ ಬಾಧಕಗಳನ್ನು ವಿವರಿಸಿ, ಈ ಆಕ್ಟನ್ನು ಪೂರ್ಣವಾಗಿ ತೆಗೆದುಬಿಡಬೇಕೆಂತ ಹೇಳಿದರು. ರಾ॥ ಆರ್. ಜಿ. ಪ್ರಧಾನರವರು, ರಾ॥ ಎಸ್. ಜಿ. ಪಂತುಲುರವರು, ಮೊದಲಾದವರು ಕಾಲೋಚಿತ ಮಾತುಗಳಿಂದ ಈ ಮಸೂದೆಯನ್ನು ಅನುಮೋದಿಸಿದರು. ಹೀಗೆ ಈ ಮಸೂದೆಯೂ ಸಭಿಕರ ಮಂಜೂರಾತಿಯನ್ನು ಹೊಂದಿತು.

ಮೆ॥ ಎಚ್. ಎಸ್. ಎಲ್. ಪೋಲಕರು ವಸಾಹತುಗಳಲ್ಲಿ ಹಿಂದೀಗಳನ್ನು ನಡೆಸುವ ವಿಷಯವಾದ ಮಸೂದೆಯನ್ನು ಸಭೆಯ ಮುಂದೆ ತಂದು ಹಿಂದೂಸ್ಥಾನವು ಕೂಲಿಗಳನ್ನು ಮಾತ್ರ ಹುಟ್ಟಿಸಬಲ್ಲುದೆಂಬದಾಗಿ ದಕ್ಷಿಣ ಆಫ್ರಿಕದಲ್ಲಿದ್ದ ಅಭಿಪ್ರಾಯವು ಮಾನ್ಯ ಗೋಖಲೆಯವರು ದಕ್ಷಿಣ ಆಫ್ರೀಕವನ್ನು ಸಂದರ್ಶಿಸಿದಂದಿನಿಂದ ಕಡಿಮೆಯಾದದೆಂದು ಹೇಳಿ, ದಕ್ಷಿಣ ಆಫ್ರೀಕದಲ್ಲಿ ಹಾರಕೇಳುತ್ತಿರುವ ವಿಧವಿಧದ ಅನಾನುಕೂಲಗಳನ್ನು ಹೇಳಿ ಯಪಡಿಸಿದರು. ಮ॥ ರಾ॥ ನಟೇಸನರವರು ಈ ಮಸೂದೆಯನ್ನು ಅನುಮೋದಿಸಿ ಸಾಮ್ರಾಜ್ಯದ ಕೌನ್ಸಿಲುಗಳಲ್ಲಿ ವಸಾಹತಿಗಳಂತೆ ಹಿಂದೂಸ್ಥಾನಕ್ಕೆ ಸ್ಥಾನವನ್ನು ಕೊಡದಿದ್ದರೆ ಹಿಂದೂಸ್ಥಾನಕ್ಕೂ ಹಿಂದೀಗಳಿಗೂ ದೊಡ್ಡ ಅವಮರ್ಯಾದೆಯನ್ನು ಮಾಡಿದಂತಾಗುವದೆಂದೂ ಹೇಳಿದರು. ಮ॥ ರಾ॥ ಟಿವಾರಿ ಮತ್ತು ಸಚೀಂದ್ರ ಪ್ರಸಾದ ಬೊಸುರವರು ಈ ಮಸೂದೆಯನ್ನು ಅನುಮೋದಿಸಿದನಂತರ ಇದು ಮಂಜೂರಾಯಿತು.

೩ನೇ ದಿನ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ಬಾಬು ಸುರೇಂದ್ರನಾಥ ಬೆನರ್ಜಿಯವರು ಸೆಲ್ಫ್ ಗವರ್ನಮೆಂಟ ಸಂಬಂಧವಾದ ಮಸೂದೆಯನ್ನು ಸಭೆಯ ಮುಂದೆ ತಂದು ಹಿಂದೂಸ್ಥಾನಕ್ಕೆ ಸೆಲ್ಫ್ ಗವರ್ನಮೆಂಟನ್ನು ಆದಷ್ಟುಬೇಗ ಸಾಮ್ರಾಜ್ಯ ಸರಕಾರದವರು ಕೊಡುವದರ ಅವಶ್ಯಕತೆಗಳನ್ನೂ ಸೆಲ್ಫ್ ಗವರ್ನಮೆಂಟ್ ಕೊಡುವದರಿಂದುಂಟಾಗುವ ಒಳ್ಳೇತನ್ನೂ ತಿಳಿಯಹೇಳಿದರು. ಮಿಸೆಸ್ ಬಿಸೆಂತರು, ಲೊ॥ ತಿಲಕರವರು, ಮೆ॥ ಮುಜುರಲ್ ಹೇಕು, ಸರ್. ದಿನ್‌ಶೋಪೆಟಿಟ್ ಮೊದಲಾದ ಗೃಹಸ್ಥರು ಈ ಮಸೂದೆಯನ್ನು ಅನುಮೋದಿಸಿದನಂತರ ಈ ಮಸೂದೆಯು ಸರ್ವಮತದಿಂದ ಮಂಜೂರಾಯಿತು.

ಆಲ್ ಇಂಡಿಯಾ ಮಹಮ್ಮದನ್ ಎಡ್ಯುಕೇಶನಲ್ ಕನ್ಫರೆನ್ಸ್ ಎಂಬ ಮಹಮ್ಮದೀಯ ಶಿಕ್ಷಣಪರವಾದ ಸಭೆಯು ಇದೇ ಕಳೆದ ದಶಂಬರ ತಿಂಗಳ ತಾ. ೨೭ರಲ್ಲು ಅಲಿಗರದಲ್ಲಿ ಬಹುಮಾನಪಟ್ಟ ಮೆ॥ ಖಾನ್‌ಮಹಮ್ಮದ್ ಶಾಫಿ ಸಿ. ಐ. ರವರ ಅಧ್ಯಕ್ಷತೆಯಲ್ಲಿ ಕೂಡಿಬಂದಿರುತ್ತದೆ. ಅಧ್ಯಕ್ಷರು ಉದ್ದವಾದ ಮತ್ತು ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟು, ಮಹಮ್ಮದೀಯರಲ್ಲಿ ಶಿಕ್ಷಣ ಹೊಂದಿರುವವರ ಸಂಖ್ಯೆಯು ತೃಪ್ತಿಕರವಾಗಿಲ್ಲವೆಂಬದನ್ನು ತನ್ನ ಭಾಷಣದಲ್ಲಿ ತೋರಿಸಿಕೊಟ್ಟಿರುತ್ತಾರೆ. ಶಿಕ್ಷಣ ಸಂಬಂಧವಾಗಿ ಸರಕಾರದ ಮತ್ತು ಜನರ ಕರ್ತವ್ಯಗಳೇನೆಂಬ ವಿಷಯಗಳೂ ಅಧ್ಯಕ್ಷರ ಭಾಷಣದಲ್ಲಿ ಅಡಕವಾಗಿದ್ದವು. ಹಿಂದೂಸ್ಥಾನದಲ್ಲಿ ಉಚಿತವಾದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆ ತರುವ ಸಮಯವು ಬಂದೊದಗಿದೆಂಬದಾಗಿ ಅಧ್ಯಕ್ಷರು ಭಾಷಣದಲ್ಲಿ ಸೂಚಿಸಿರುತ್ತಾರೆ. ಸೆಕಂಡರಿ ಶಿಕ್ಷಣ, ಯುನಿವರ್ಸಿಟಿ ಶಿಕ್ಷಣಗಳು ಮಹಮ್ಮದೀಯರಿಗೆ ಯಾವ ರೀತಿಯಲ್ಲಿ ದೊರಕುತ್ತದೆಂಬವನ್ನು ಅಧ್ಯಕ್ಷರು ವಿವರಿಸಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದಾದರೂ ಮಹಮ್ಮದೀಯರ ಹೈಸ್ಕೂಲು ಇರುವಂತೆ ಪ್ರಯತ್ನಿಸುವದೂ ಅವಶ್ಯವೆಂತೆ ಒತ್ತಿ ಹೇಳಿರುವರು.

ಆಲ್ ಇಂಡಿಯಾ ಟೆಂಪರೆನ್ಸ್ ಕನ್ಫರೆನ್ಸ್ ಎಂಬ ಮದ್ಯಪಾನ ನಿವಾರಣಾ ಸಭೆಯ ೧೩ನೇ ಅಧಿವೇಶನವು ಇದೇ ಕಳೆದ ದಶಂಬರ ತಾ. ೨೭ರಲ್ಲು ಲಖನೌ ನಗರದಲ್ಲಿ ಮದರಾಸಿನ ಬಹುಮಾನಪಟ್ಟ ಬಿ. ಎಸ್. ಶರ್ಮರವರ ಅಧ್ಯಕ್ಷತೆಯಲ್ಲಿ ಜರಗಿರುತ್ತದೆ. ರುಶ್ಯಾ, ಫ್ರಾನ್ಸ್ ಮತ್ತು ತಕ್ಕಮಟ್ಟಿಗೆ ಬ್ರಿಟನಿನಲ್ಲಿಯೂ ಮದ್ಯ ಸೇವಿಸಲೂ, ಮಾರಲೂ ಕೂಡದೆಂಬ ಕಟ್ಟಾಜ್ಞೆಯು ಆದ ವಿಷಯವನ್ನು ಅಧ್ಯಕ್ಷರು ಭಾಷಣದಲ್ಲಿ ತೋರಿಸಿಕೊಟ್ಟು ಮದ್ಯ ಸೇವನೆಯಿಂದ ಉಂಟಾಗುವ ಕೆಡಕುಗಳು ಯುದ್ಧಕ್ಕೆ ಸೇರಿದ ರಾಜ್ಯಗಳಿಗೂ, ಸರಕಾರದವರಿಗೂ, ಪ್ರಜಾಜನರಿಗೂ ಹೇಗೆ ಗೋಚರಕ್ಕೆ ಬಂದವೆಂಬದನ್ನು ಮದ್ಯಸೇವನೆಯನ್ನು ನಿಲ್ಲಿಸಿದ್ದರಿಂದ ಆಯಾ ರಾಜ್ಯಗಳವರಿಗೆ ಆದ ಪ್ರಯೋಜನಗಳನ್ನೂ ವಿವರಿಸಿ ಇಂಡಿಯಾ ಸರಕಾರದವರು ಈ ವಿಷಯದಲ್ಲಿರುವ ತಮ್ಮ ಭಾವವನ್ನು ಬದಲಾಯಿಸುವದು ಅವಶ್ಯವೆಂಬದನ್ನು ಸೋದಾಹರಣವಾಗಿ ಖಚಿತಪಡಿಸಿರುವರು.

ಔದ್ಯೋಗಿಕ ಸಭೆ:—ಇದೇ ದಶಂಬರ ತಾ. ೩೦ರಲ್ಲು ಔದ್ಯೋಗಿಕ ಸಭೆಯ ೧೨ನೇ ಅಧಿವೇಶನವು ಲಖನೌ ನಗರದಲ್ಲಿ ಬಹುಮಾನಪಟ್ಟ ರಾಯ ಸಿಥನಾಥ ರೋಯಿ ಬಹದ್ದೂರರವರ ಅಧ್ಯಕ್ಷತೆಯಲ್ಲಿ ಜರಗಿರುತ್ತದೆ. ಅಧ್ಯಕ್ಷರು ಭಾಷಣದಲ್ಲಿ ಹಿಂದೂಸ್ಥಾನವು ಕೈಗಾರಿಕೆ ಸಂಬಂಧವಾಗಿ ಎಷ್ಟು ಹಿಂದೆ ಇದೆ ಎಂಬದನ್ನು ತೋರಿಸಿಕೊಟ್ಟು ಹಿಂದೂಸ್ಥಾನದಲ್ಲಿ ಈ ಕೈಗಾರಿಕೆಯ ಅಭಿವೃದ್ಧಿಗೆ ಅವಶ್ಯವಾದ ೧೦ಭತ್ತು ಸೂಚನೆಗಳನ್ನು ಕೊಟ್ಟು ಅವುಗಳನ್ನು ಪ್ರತ್ಯಪ್ರತ್ಯೇಕವಾಗಿ ವಿವರಿಸಿರುತ್ತಾರೆ.

ಆಲ್ ಇಂಡಿಯಾ ಮುಸ್ಲಿಮ್ ಲೀಗ್:—ಈ ಲೀಗಿನ ಅಧಿವೇಶನವು ಇದೇ ತಾ. ೩೦ರಲ್ಲು ಲಖನೌ ನಗರದಲ್ಲಿ ಬಹುಮಾನಪಟ್ಟ ಜಿನ್ನಾರವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಈ ಲೀಗಿನ ಸಭೆಯ ಸ್ವಾಗತ ಕಮಿಟಿಯ ಚೇಯರ್ಮನರಾದ ಮೆ॥ ನಬಿಉಲ್ಲಾರವರು ಸ್ವಾಗತ ಭಾಷಣ ಮಾಡಿ ಈ ಯುದ್ಧಕಾಲದಲ್ಲಿ ಹಿಂದೂಸ್ಥಾನವು ತೋರ್ಪಡಿಸಿದ ರಾಜಭಕ್ತಿಯನ್ನು ವಿವರಿಸಿ ಈ ಸಂದರ್ಭದಲ್ಲಿ ಹಿಂದೂಸ್ಥಾನದ ಮುಸಲ್ಮಾನ ಸೇನಿಕರು ತಮ್ಮ ಖಲೀಫನಿಗೆ ವಿರೋಧವಾಗಿ ಯುದ್ಧ ಮಾಡಲು ಅತಿ ಸಂತೋಷದಿಂದ ಸಾಮ್ರಾಜ್ಯ ಸೇನೆಯಲ್ಲಿ ಸೇರಿಕೊಂಡ ಮಹತ್ವವನ್ನು ಸಭಿಕರಿಗೆ ತಿಳಿಯ ಹೇಳಿದರು. ಅನಂತರ ಈ ಕಾಲದಲ್ಲಿ ಹಿಂದೂಸ್ಥಾನದಲ್ಲಿ ತಲೆ ಎತ್ತಿರುವ ಚಟುವಟಿಕೆಯ ವಿಶೇಷತ್ವ ಹಿಂದುಗಳೂ, ಮುಸಲ್ಮಾನರೂ ತಮ್ಮ ತಮ್ಮೊಳಗಿನ ಭೇದಾಭೇದಗಳನ್ನು ಬಿಟ್ಟು ಐಕ್ಯವಾದುದರ ಮಹತ್ವ ಮೊದಲಾದ ವಿಷಯಗಳನ್ನು ಹೇಳಿ, ಮುಸಲ್ಮಾನರ ರಾಜಕೀಯ ಹಕ್ಕು ಸ್ವಾತಂತ್ರ್ಯವನ್ನು ಕಾಪಾಡುವದೂ ಸೆಲ್ಫ್ ಗವರ್ನಮೆಂಟನ್ನು ಪಡೆಯುವ ಹಾಗೆ ಇತರ ಹಿಂದೀಗಳೊಡನೆ ಪರಸ್ಪರ ಐಕ್ಯದಿಂದ ಸೇರಿಕೊಳ್ಳುವದೂ ಈ ಲೀಗಿನ ಮುಖ್ಯ ಉದ್ದೇಶವೆಂಬದನ್ನು ಅರ್ಥಗರ್ಭಿತವಾದ ಮಾತುಗಳಿಂದ ತಿಳಿಯ ಹೇಳಿದರು. ಕಡೆಗೆ ಪ್ರೆಸ್ ಆಕ್ಟು ಡಿಫೆನ್ಸ್ ಆಫ್ ಇಂಡಿಯಾ ಆಕ್ಟು ಇವುಗಳ ತೀಕ್ಷ್ಣತೆಯನ್ನು ವಿವರಿಸಿದರು. ಸ್ವಾಗತ ಕಮಿಟಿಯ ಚೇಯರ್ಮನರ ಭಾಷಣದನಂತರ ಅಧ್ಯಕ್ಷರಾದ ಮಾನ್ಯ ಜಿನ್ನಾರವರ ಭಾಷಣವಾಯಿತು. ಮಾನ್ಯ ಜಿನ್ನಾರವರು ಈಗ ಹಿಂದೂಸ್ಥಾನದಲ್ಲಿ ಇರುವ ಚಳವಳದಲ್ಲಿ ಮಹಮ್ಮದೀಯರು ಹಿಂದೂ ಭ್ರಾತೃಗಳೊಡನೆ ಏಕತ್ರವಾಗಿ ಹೇಗೆ ಕೂಡಿರುವರೆಂಬದನ್ನು ವಿವರಿಸಿ ಹಿಂದೂ ಮತ್ತು ಮಹಮ್ಮದೀಯರೊಳಗೆ ಮತಭೇದವಿದೆಂಬ ಮಾತನ್ನು ಇನ್ನೂ ಯಾರಾದರೂ ನಂಬಕೂಡದೆಂಬ ವಿಷಯವನ್ನು ಉದಾಹರಣೆ ಮೂಲಕ ಸ್ಪಷ್ಟಪಡಿಸಿರುತ್ತಾರೆ.

ಆಲ್ ಇಂಡಿಯಾ ಕ್ರಿಶ್ಚಿಯನ್ ಕನ್ಫರೆನ್ಸ್ ಹಿಂದೂಸ್ಥಾನದ ಕ್ರೈಸ್ತರ ತೃತೀಯ ಸಭೆಯು ಈ ಸಾರಿ ಮದರಾಸಿನಲ್ಲಿ ಬಹುಮಾನಪಟ್ಟ ದಾಸರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಪರಿಷತ್ತಿಗೆ ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದ ಜ್ಞಾನಪ್ರಕಾಶರವರು ಮದ್ರಾಸ್ ಸಂಸ್ಥಾನದ ಕ್ರೈಸ್ತಸಮಾಜದ ಮಹತ್ವವನ್ನು ವಿವರಿಸಿದ ನಂತರ ಅಧ್ಯಕ್ಷರಾದ ಮಾನ್ಯ ದಾಸರವರು ಭಾಷಣವನ್ನು ಕೊಟ್ಟರು. ಅಧ್ಯಕ್ಷರು ಭಾಷಣದಲ್ಲಿ ಕ್ರೈಸ್ತರಿಗೂ ಕ್ರೈಸ್ತರಲ್ಲದ ಹಿಂದೀಗಳಿಗೂ ಇರುವ ಸಂಬಂಧವನ್ನು ವಿವರಿಸಿ ಹಿಂದೀ ಕ್ರೈಸ್ತರು ಹಿಂದೀಗಳಂತೆಯೇ ಈ ರಾಷ್ಟ್ರದ ಒಂದಂಶವೆಂಬದನೂ ಈ ಕ್ರೈಸ್ತರು ಹಿಂದೀಗಳೇ ಎಂಬದನ್ನೂ ಸ್ಪಷ್ಟವಾಗಿ ತೋರಿಸಿರುವರು.

ಸಮಾಜ ಸುಧಾರಣಾ ಸಭೆಯು ಇದೇ ದಶಂಬರ ತಾ. ೩೦ರಲ್ಲು ರಾಷ್ಟ್ರೀಯ ಸಭೆಯ ಹಂದರದಲ್ಲಿ ಜರಗಿತು. ಈ ಸಭೆಗೆ ಬಾಬು ಜ್ಯೋತಿಸ್ವರೂಪರವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಕಾಲೋಚಿತ ಭಾಷಣ ಕೊಟ್ಟು ಸಂಘ ಸುಧಾರಣೆಯ ಅವಶ್ಯಕತೆಯನ್ನು ವಿವರಿಸಿ ಸ್ತ್ರೀ ವಿದ್ಯಾಭ್ಯಾಸವು ಹೆಂಗಸರು ಸ್ತ್ರೀತ್ವವನ್ನು ಹೊಂದಲು ಅವಶ್ಯವಾದದ್ದು ಎಂಬದನ್ನು ಒತ್ತಿ ಹೇಳಿದರು. ಗಂಡಸರ ವಿವಾಹ ಪ್ರಾಯವು ೨೫, ಹೆಂಗಸರ ವಿವಾಹ ಪ್ರಾಯವು ೧೬ ಆಗಿರಬೇಕೆಂಬದಾಗಿ ಅಧ್ಯಕ್ಷರು ಅಭಿಪ್ರಾಯಪಟ್ಟಿರುತ್ತಾರೆ. ಪರದಾ ಪದ್ಧತಿಯನ್ನು ತೆಗೆದುಹಾಕಬೇಕು, ವಿಧವೆಯರಿಗೆ ಪುನರ್ವಿವಾಹಮಾಡಬೇಕು, ಸಹಪಂಕ್ತಿ ಭೋಜನ, ಪತಿತರರನ್ನು ಉದ್ಧರಿಸುವದರ ಅವಶ್ಯಕತೆ ಮೊದಲಾದ ಮಹತ್ವದ ವಿಷಯಗಳು ಅಧ್ಯಕ್ಷರ ಭಾಷಣದಲ್ಲಿ ಅಡಕವಾಗಿದ್ದವು.

ಮದ್ರಾಸ್ ವಿದ್ಯಾರ್ಥಿಗಳ ಪ್ರಥಮ ಪರಿಷತ್ತು ಇದೇ ಕಳೆದ ದಶಂಬರ ತಾ. ೨೭ರಲ್ಲು ಮದ್ರಾಸಿನ ಗೋಖಲೆ ಸಭಾಮಂದಿರದಲ್ಲಿ ಜರಗಿತು. ವಿದ್ಯಾರ್ಥಿಗಳ ಈ ಪರಿಷತ್ತಿಗೆ ಡಾಕ್ಟರ್ ಎಸ್. ಸುಬ್ರಮಣಯ್ಯರರು ಅಧ್ಯಕ್ಷರಾಗಿದ್ದರು. ಬಹುಮಾನಪಟ್ಟ ರೆವರೆಂಡ್ ಪಿಟ್ಟೆನ್‌ಡ್ರಿಗ್, ಮೊದಲಾದ ಮಹನೀಯರೂ ಸಂಸ್ಥಾನದ ಇತರ ಪ್ರಾಂತ್ಯಗಳಿಂದ ಸುಮಾರು ೨೦೦ ಪ್ರತಿನಿಧಿಗಳೂ ಪರಿಷತ್ತಿಗೆ ಬಂದಿದ್ದರು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಡಾ॥ ಸಿ. ಎ. ಸುಬ್ರಮಣ್ಯ ಅಯ್ಯರರು ಸ್ವಾಗತ ಭಾಷಣ ಕೊಟ್ಟು ಈ ಪರಿಷತ್ತಿನ ಉದ್ದಿಷ್ಟ ಹೇತುಗಳನ್ನು ವಿವರಿಸಿ ಈ ಉದ್ದಿಷ್ಟ ಹೇತುಗಳನ್ನು ಸಾಧಿಸಿಕೊಳ್ಳುವಂತೆ ಯಾವ ಸಾಧನಗಳನ್ನು ಮಾಡಿಕೊಳ್ಳಬೇಕೆಂದೆಂಬದನ್ನು ತಿಳಿಯ ಹೇಳಿದನಂತರ ಅಧ್ಯಕ್ಷರಾಗಿ ಆರಿಸಲ್ಪಟ್ಟ ಡಾಕ್ಟರ ಸುಬ್ರಮಣಯ್ಯರರು ಅರ್ಥಗರ್ಭಿತವಾದ ಭಾಷಣದಿಂದ ವಿದ್ಯಾರ್ಥಿವರ್ಗಕ್ಕೂ ಉಪಾಧ್ಯಾಯರಿಗೂ ತಕ್ಕ ಬುದ್ಧಿವಾದವನ್ನು ಕೊಟ್ಟಿರುವರು.

ದಶಂಬರ ೩. ೩೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಪ್ಲೇಗ ರೋಗದಿಂದ ೧೦೨೪೧ ಮಂದಿ ಮೃತರಾಗಿರುವರು. [illegible] ಮುಂಬಯಿ ೪೩೩೩, ಮದ್ರಾಸ್ ೬೧೮, [illegible] ಸಂಯುಕ್ತ ಸಂಸ್ಥಾನ ೯೬೧, ಪಂಜಾಬು ೨೭, ಬರ್ಮ ೧೧೭, [illegible] ಹೈದರಾಬಾದ್ ೧೪೩೬ ಮತ್ತು ಹಿಂದೂಸ್ಥಾನ [illegible] ಜನರು ಮರಣಹೊಂದಿರುವರು.

ಅನುಕ್ರಮಣಿಕೆ.

	ಪಾನು.
ಅಗ್ರಲೇಖ—ಸ್ವದೇಶಾಭಿಮಾನಿಯ ಸಂಸ್ಕರಣ.	೪.
ಸ್ಫುಟವಿಚಾರಗಳು:—	
೧—೨—೩—೪ ರಾಷ್ಟ್ರೀಯ ಸಭೆಯ ಪ್ರಸ್ತಾಪಗಳು,,	೪—೫
೫ ಮಂಗಳೂರಿನ ವಾರ್ ಫಂಡಿನ ವಿಚಾರ	೫
೬ ಹೊಗೆಸೊಪ್ಪಿನ ವ್ಯಾಪಾರ	,,
ಸ್ಥಳಿಕ — ಮಂಗಳೂರು	,,
ಯೂರೋಪದ ಮಹಾಯುದ್ಧ	,,
ವರ್ತಮಾನಸಂಗ್ರಹ ವಗೈರೆ	೬
ಪತ್ರವ್ಯವಹಾರ — ೧ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ	,,
೨ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆ	,,
೩ ಪೋಳ್ಯದ ವಿದ್ಯಾವರ್ಧಕ ಸಭಾ	,,
ಪರಿಪತ್ರ್ರಗಳು	೩

ಸ್ವದೇಶಾಭಿಮಾನಿ.

ಶಕ ೧೮೩೮ ಪೌಷ ಶು. ೧೨. ಶುಕ್ರವಾರ.

ಸ್ವದೇಶಾಭಿಮಾನಿಯ ಸಂಸ್ಕರಣ.

ಸರ್ವಶಕ್ತನಾದ ಪರಮೇಶ್ವರನ ಅನುಗ್ರಹದಿಂದ 'ಸ್ವದೇಶಾಭಿಮಾನಿ'ಗೆ ಹತ್ತು ವರ್ಷಗಳು ದಾಟಿ ಈ ಹೊತ್ತಿನಿಂದ ಹನ್ನೊಂದನೆಯ ವರ್ಷವು ಪ್ರಾರಂಭವಾಗಿದೆ. ಹನ್ನೊಂದನೆಯ ವರ್ಷದ ಈ ಶುಭ ದಿನವು ಮೂಡಿದುದಕ್ಕಾಗಿ ಜಗತ್ಪಾಲಕನಾದ ಪರಮೇಶ್ವರನ ಉಪಕಾರಗಳನ್ನು ಸ್ಮರಿಸುವುದು ನಮ್ಮ ಪ್ರಥಮ ಕರ್ತವ್ಯವಾದುದರಿಂದ ಆ ಉಪಕಾರಗಳನ್ನು ಸ್ಮರಿಸಿ ಇನ್ನು ಮುಂದಿನ ನಮ್ಮ ಕಾರ್ಯಗಳಲ್ಲಿಯೂ ಅವನ ಪೂರ್ಣ ದಯೆಯಿರಲೆಂದು ಪ್ರಾರ್ಥಿಸುವೆವು.

ಈ ಹೊತ್ತಿನ ಪ್ರಸಂಗದಲ್ಲಿ ನಮ್ಮ ಪತ್ರಿಕೆಯು—ಸ್ವದೇಶಾಭಿಮಾನಿಯು

ಕಳೆದ ಹತ್ತು ವರ್ಷಗಳಲ್ಲಿ ಯಾವ ಕಾರ್ಯವನ್ನು ಮಾಡಿದೆ?

ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುವುದು ಅಯುಕ್ತವಾಗಲಾರದು. ನಮ್ಮ ಜಿಲ್ಲೆಗೆ "ದಕ್ಷಿಣಕನ್ನಡ" ವೆಂಬ ಹೆಸರಿದ್ದರೂ ಈ ಜಿಲ್ಲೆಯಲ್ಲಿ ಕನ್ನಡದ ಪ್ರಗತಿಯು ಅಷ್ಟೊಂದಿಲ್ಲ. ಏತದ್ದೇಶೀಯರಲ್ಲಿ ತುಳು, ಉತ್ತರದಿಂದ ಬಂದವರಲ್ಲಿ ಕೊಂಕಣಿ ಮತ್ತು ಸುಶಿಕ್ಷಿತರಲ್ಲಿ ಇಂಗ್ಲಿಷು ಈ ಮೂರು ಭಾಷೆಗಳ ಪ್ರಚಾರ ಅಥವಾ ವಾಡಿಕೆ ಇದ್ದುದರಿಂದ ಇಲ್ಲಿಯ ಕನ್ನಡವು ಬೇರೆ ಪ್ರಾಂತಗಳ ಮಾನದಿಂದ ಮುಂದರಿಯುವದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸ್ವದೇಶಾಭಿಮಾನಿಯು ಹತ್ತು ವರ್ಷಗಳಿಂದ ಜಿಲ್ಲೆಯೊಳಗಿನ ಸಾಮಾನ್ಯ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಿ ಕನ್ನಡನಾಡು, ಕನ್ನಡ ಭಾಷೆ, ಕನ್ನಡ ವಾಙ್ಮಯ ಮುಂತಾದ ಈ ತಿಳಿವು ಜನರಲ್ಲಿ ಅವಿರ್ಭವಿಸುವಂತೆ ಮಾಡಿದೆಂದು ಹೇಳಿಕೊಳ್ಳುವುದು ಆತ್ಮಸ್ತುತಿಯಾದರೂ ಯಥಾರ್ಥವಾದ ವಿಷಯವೇ ಸರಿ. ಜನರೊಳಗೆ ವಾಚನಾಭಿರುಚಿಯು ಹುಟ್ಟಿದ ಕೂಡಲೆ ಪತ್ರಿಕೆಗಳು ತಮ್ಮ ಮುಂದಿನ ಕರ್ತವ್ಯವನ್ನು ಮಾಡಬೇಕಾಗುವದು. ಸರಕಾರ ಮತ್ತು ಪ್ರಜೆಗಳ ಅಭಿಪ್ರಾಯಗಳನ್ನು ಒಬ್ಬರಿಗೊಬ್ಬರು ತಿಳಿಸಿಕೊಳ್ಳಲು ಪತ್ರಿಕೆಗಳ ಸಾಹಾಯ್ಯವು ಬೇಕಾಗುತ್ತದೆ. ಹೀಗೆ ಹೇಳುವುದಕ್ಕಿಂತ ಹಿಂದೂಸ್ಥಾನದೊಳಗಿನ ಪತ್ರಿಕೆಗಳ ವಿಷಯದಲ್ಲಿ ಹೇಳುವುದಾದರೆ ಪತ್ರಿಕೆಗಳೆಂದರೆ ಪ್ರಜೆಗಳ ಹಾಲಹವಾಲಗಳನ್ನು—ಕಷ್ಟನಷ್ಟಗಳನ್ನು ಸರಕಾರಕ್ಕೆ ತಿಳಿಸುವ ಮುಖ್ಯ ಸಾಧನಗಳು. ಈ ದೃಷ್ಟಿಯಿಂದ ನೋಡುವಾಗ ಜನರ ವಿಪತ್ತುಗಳನ್ನು ಪತ್ರಿಕೆಗಳು ಬೈಲಿಗೆ ತರುವುದು ಅಗತ್ಯವು. ಈ ಕರ್ತವ್ಯದೊಟ್ಟಿಗೆನೆ ಸರಕಾರದ ಕಾಯಿದೆ ಕಾನೂನುಗಳಿಂದ, ರಾಜ್ಯದೋರಣ ಮತ್ತು ವ್ಯವಸ್ಥೆಗಳಿಂದ ಜನತೆಯ ಮೇಲೆ ಹಿತಾಹಿತ ಪರಿಣಾಮಗಳು ಹೇಗುಂಟಾಗುತ್ತವೆಂಬುದನ್ನು ಸರಕಾರದ ದೃಷ್ಟಿಗೆ ತಂದುಕೊಡುವುದು ಕೂಡ ಪತ್ರಗಳದ್ದೆ ಕೆಲಸವಾಗಿದೆ. ಈ ಎಲ್ಲ ಕೆಲಸಗಳನ್ನು ಇಷ್ಟರವರೆಗೆ ಸ್ವದೇಶಾಭಿಮಾನಿಯು ಹೇಗೆ ಮಾಡುತ್ತ ಬಂದದೆಂಬುದರ ಕುರಿತು ನಾವಿಲ್ಲಿ ಪ್ರಸಂಗಿಸುವುದು ಅಗತ್ಯವಿಲ್ಲೆಂದು ತೋರುತ್ತದೆ. ಆದರೂ ಮುಂದಿನ ಒಂದು ಸಂಗತಿಯನ್ನು ಹೇಳುವುದು ಅಗತ್ಯವಿದೆ. ಇಂಗ್ಲಿಷ್ ವಿದ್ಯೆಯನ್ನು ಕಲಿತು ಕೊನೆಗೆ ಅಲಂಕಾರಕ್ಕಾದರೂ ಕೈಯಲ್ಲಿ ಒಂದು ಪತ್ರಿಕೆಯನ್ನು ತೆಕ್ಕೊಂಡು ಕುಳಿತುಕೊಳ್ಳುವ ಸುಶಿಕ್ಷಿತರಿಗೆ ನಮ್ಮ ಪತ್ರಿಕೆಯು ಯಾವ ಹೊಸ ಸಂಗತಿಯನ್ನು ಕಲಿಸದಿದ್ದರೂ ಈ ಜಿಲ್ಲೆಯೊಳಗಿನ ಸಾಮಾನ್ಯ ಜನ ಸಮುದಾಯಕ್ಕೆ ಮೇಲೆ ಹೇಳಿದ ರಾಜ್ಯವ್ಯವಸ್ಥೆ, ಕಾಯಿದೆ ಕಾನೂನುಗಳು, ಅಧಿಕಾರಿ ಮಂಡಲದ ರಾಜ್ಯಶಾಸನದ ವಿವಕ್ಷಿತ ಕ್ರಮದಿಂದ ಜನಾಂಗದ ಮೇಲೆ ಉಂಟಾಗುವ ಒಳ್ಳೆ ಅಥವಾ ಕೆಟ್ಟ ಪರಿಣಾಮ, ಇವುಗಳನ್ನು ಎಂದರೆ ಒಂದೇ ಮಾತಿನಿಂದ ರಾಜಕೀಯ ಶಿಕ್ಷಣವನ್ನು ಇಷ್ಟರವರೆಗೆ ಕೊಟ್ಟಿದೆ. ಆದರೆ ಇಷ್ಟರಿಂದಲೆ ನಮ್ಮ ಪತ್ರಿಕೆಯು ಕೃತಾರ್ಥವಾಗಿದೆಂದು ನಾವು ನಂಬುವುದಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಕೈಯಿಂದ ಆದ ಕೆಲಸಕ್ಕಿಂತಲೂ

ಮುಂದಿನ ನಮ್ಮ ಕಾರ್ಯವು

ಎಷ್ಟೋ ಪಾಲಿನಿಂದ ಹೆಚ್ಚಿರುವುದು. ಈಗಿನ ಕಾಲದಲ್ಲಿ ದೇಶಹಿತಕ್ಕೆ ಸಂಬಂಧಪಟ್ಟ ಎಷ್ಟೋ ಮಹತ್ವದ ವಿಷಯಗಳು ನಮ್ಮ ಮುಖಂಡರಲ್ಲಿಯೂ ರಾಜ್ಯಕರ್ತರಲ್ಲಿಯೂ ಚರ್ಚೆಗೆ ಬಂದಿರುವವು. ವಿದ್ಯೆ, ಕೈಗಾರಿಕೆ, ವ್ಯಾಪಾರ ಮತ್ತು ಸಂಪತ್ತು ಮುಂತಾದ ದೇಶೋನ್ನತಿಯ ಪ್ರಮುಖ ಸಾಧನಗಳು ನಮ್ಮಲ್ಲಿ ಕಾಲಕ್ರಮೇಣ ಹೆಚ್ಚಾಗುತ್ತ ಬರಬೇಕಾದವುಗಳು. ಹಾಗೆ ಬಂದುದಾಗಿ ಕಂಡುಬರುವುದಿಲ್ಲ. ಇಂಥ ಸಮಯದಲ್ಲಿ ಬರೆ ನಾಲ್ಕು ಸುಶಿಕ್ಷಿತರು ಗುಲ್ಲು ಹಾಕುವುದರಿಂದ ಆ ಗುಲ್ಲಿಗೆ ಒಂದು ಹುಲ್ಲು ಕಡ್ಡಿಯಷ್ಟು ಸಹ ಬೆಲೆ ಬಾರದು; ಸಾಮಾನ್ಯ ಜನ ಸಮಾಜದ ಬೆಂಬಲವು ಬೇಕು. ಆದುದರಿಂದ ಈಗ ಹೇಳಿದ ಎಲ್ಲ ಸಂಗತಿಗಳ ವಿಷಯದಲ್ಲಿ ಸಾಮಾನ್ಯ ಜನ ಸಮಾಜದೊಳಗೆ ಸಾತ್ವಿಕ ಚಳವಳವನ್ನು ಹುಟ್ಟಿಸಿ ಲೋಕಮತದಲ್ಲಿ ಜಾಗ್ರತೆ ಹುಟ್ಟಿಸುವುದು ನಮ್ಮ ಪತ್ರಿಕಾಕಾರರ ಕರ್ತವ್ಯವಾದ ಕಾರಣ ಈ ಪವಿತ್ರ ಕರ್ತವ್ಯವನ್ನೆ ಸ್ವದೇಶಾಭಿಮಾನಿಗಾದರೂ ಇನ್ನು ಮುಂದೆ ನಡಿಸಬೇಕಾಗಿದೆ. ನಮ್ಮ ಮುಂದಿನ ಕಾರ್ಯದ—ನಮ್ಮ ಮುಂದಿನ ದಾರಿಯ ಚಿತ್ರವನ್ನು "ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮ ವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ॥೧॥" ಈ ಶಬ್ದಗಳಿಂದ ಚಿತ್ರಿಸಬಹುದು. ಈ ಪದ್ಯದ 'ದೇವತೆಗಳು ಬಹಳ ಕ್ರಯದ ರತ್ನಗಳಿಂದ ತೃಪ್ತಿ ಹೊಂದಲಿಲ್ಲ, ಇಲ್ಲವೆ ಭಯಂಕರವಾದ ವಿಷದಿಂದ ಭಯಪಡಲಿಲ್ಲ, ಅಮೃತವನ್ನು ಹೊಂದದೆ ಅವರು ತಮ್ಮ ಪ್ರಯತ್ನವನ್ನು ನಿಲ್ಲಿಸಲಿಲ್ಲ; ಗುರಿಯನ್ನು ಸಾಧಿಸದೆ ಪ್ರಯತ್ನವನ್ನು ಬಿಡದಿರುವುದೇ ಧೀರರ ಕರ್ತವ್ಯವು' ಎಂಬೀ ಅರ್ಥವನ್ನು ಆಲೋಚಿಸಿ ದೇಶೋನ್ನತಿಯೆ ನಮ್ಮ ಗುರಿಯಾದುದರಿಂದ ಅದನ್ನು ಸಾಧಿಸುವುದೇ ನಮ್ಮ ಉದ್ದೇಶವೆಂದು ನಾವು ಸ್ಪಷ್ಟ ಶಬ್ದಗಳಿಂದ ಹೇಳುತ್ತೇವೆ. ಈ ಉದ್ದೇಶಕ್ಕೆ ಅನುಗುಣವಾಗಿ, ಮಾಡಬೇಕೆಂದು ಸಂಕಲ್ಪಿಸಿದ ಕೆಲವು

ಮುಖ್ಯ ಸಂಸ್ಕರಣಗಳು

ಯಾವುವೆಂದರೆ ಪತ್ರದ ಆಕಾರ, ಮುದ್ರಣದ ಸುಧಾರಣೆ, ವಿಷಯಗಳ ವ್ಯವಸ್ಥೆ. ಈ ಆಕಾರವು ಮೊದಲಿನದಕ್ಕೆ ಇಮ್ಮಡಿಯಾಗಿದೆ; ಆದರೆ ಪೃಷ್ಠಗಳು ಅಷ್ಟಿಲ್ಲ. ಈ ಆಕಾರವು ವರ್ತಮಾನ ಪತ್ರಗಳಿಗೆ ಹೇಳಿದ್ದೆ. ಈ ಆಕಾರಕ್ಕೆ ಅನುಕೂಲವಾಗುವಂತೆಯೆ ಕಾಲಮುಗಳನ್ನು ಇಟ್ಟಿದ್ದೇವೆ. ವರ್ತಮಾನ ಸಂಗ್ರಹದ ಪೃಷ್ಠಕ್ಕೆ ನಾಲ್ಕು ಕಾಲಮುಗಳನ್ನು ಕೊಟ್ಟರೆ ವಿಷಯವು ಕಡಿಮೆಯಾಗುವುದು. ಆದುದರಿಂದ ಈ ವಿಷಯದಲ್ಲಿ ಬೇರೆ ಕ್ರಮವನ್ನಿಟ್ಟಿದ್ದೇವೆ. ಪೃಷ್ಠ ಸಂಖ್ಯೆಗೆ ಕನ್ನಡ ಅಂಕೆಗಳನ್ನು ಉಪಯೋಗಿಸಿದ್ದೇವೆ. ಸಾರಾಂಶ ಮುದ್ರಣ ವಿಷಯಕವೆಲ್ಲ ಆದಷ್ಟು ಸುಧಾರಣೆಯನ್ನು ಮಾಡಿದ್ದೇವೆ. ಮೂರನೆಯ ಸಂಸ್ಕರಣವು ವಿವೇಚನೀಯ ವಿಷಯಗಳ ವ್ಯವಸ್ಥೆ. ನಾವು ಮೇಲೆ ತೋರಿಸಿರುವ ಉದ್ದೇಶದಂತೆ ಹಳ್ಳಿಯೊಳಗಿನ ಸಾಮಾನ್ಯ ಕನ್ನಡಿಗರಲ್ಲಿ ಸಹ ಮಹತ್ವದ ರಾಜಕೀಯ ಪ್ರಶ್ನೆಗಳ ಸ್ವರೂಪವು ಮತ್ತು ಪರಿಚಯವು ಉಂಟಾಗುವುದು ಈಗಿನ ಕಾಲದಲ್ಲಿ ಅಗತ್ಯವಿರುವುದರಿಂದ ಆ ವಿಷಯವನ್ನೆ ಮುಖ್ಯವಾಗಿ ವಿವೇಚಿಸುವೆವು. ಒಂದೊಂದು ಉದ್ದೇಶಕ್ಕಾಗಿ ಪತ್ರವಿರುವುದು ದೇಶದ ಸೌಕರ್ಯಕ್ಕೆ ಒಳ್ಳೆದಾಗಿದ್ದರೂ ಆ ಎಲ್ಲ ಕೆಲಸಗಳು ಪ್ರಕೃತ ನಮ್ಮ ಪಾಲಿಗೆ ಬಂದಿರುವುದರಿಂದ ಸಮಯ ವಿಶೇಷದಲ್ಲಿ ಬೇರೆ ಪ್ರಶ್ನೆಗಳಿಗೂ ಮಹತ್ವವನ್ನು ಕೊಡಬೇಕಾಗುತ್ತದೆ. ಎಂದ ಮೇಲೆ ವರ್ಷದ ೩೬೫ ದಿವಸಗಳಲ್ಲಿ ಬರೆ ರಾಜಕೀಯ ವಿಷಯವೆಂಬ ಕಬ್ಬಿಣದ ಕಡಲೆಯನ್ನೆ ವಾಚಕರು ಒಡೆಯುತ್ತ ಕೂಡ್ರಬೇಕೆಂತಿಲ್ಲ. ಮಧ್ಯ ಮಧ್ಯದಲ್ಲಿ ಅವರು ಸಾಮಾಜಿಕ ಮತ್ತು ಧಾರ್ಮಿಕ ವಿಷಯದ ಕಬ್ಬಿನ ರಸವನ್ನು ಆಸ್ವಾದಿಸುವಂತೆ ಆ ಪ್ರಶ್ನೆಗಳನ್ನು ಚರ್ಚಿಸುವೆವು, ಅಲ್ಲದೆ ಉಪಯುಕ್ತ ಮತ್ತು ಯೋಗ್ಯವಾದ ಬೇರೆ ಲೇಖಗಳಿಗೂ ನಮ್ಮ ಪತ್ರದಲ್ಲಿ ಯಥಾವಕಾಶ ಎಡೆಯನ್ನು ಕೊಟ್ಟೇವು. ಪತ್ರವ್ಯವಹಾರದ ಭಾಗದಲ್ಲಿ ಮಹತ್ವದ ಪ್ರಶ್ನೆಗಳ ಚರ್ಚೆ, ಮನೋರಂಜಕ ಮತ್ತು ಉಪಯುಕ್ತವಾದ ವಾರ್ತೆ ಹಾಗು ವರ್ತಮಾನಗಳ ಸಂಗ್ರಹ ಇವುಗಳಿಗೂ ಸಾಕಷ್ಟು ಸ್ಥಲವನ್ನಿಟ್ಟು ರಾಜಕೀಯ ಅಥವಾ ತಾತ್ವಿಕದಂಥ ಘೂಕ್ಷ್ಮ ವಿಷಯಗಳನ್ನು ಅರಿಯುವ ಪಾತ್ರತೆಯಿಲ್ಲದವರಿಗೂ ನಮ್ಮ ಪತ್ರದಿಂದ ಪ್ರಯೋಜನವಾಗುವಂತೆ ಯತ್ನಿಸಿದ್ದೇವೆ. ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ತಿಳಿಸುವುದು ಅವಶ್ಯಕವಾಗಿದೆ. ಸಾರ್ವಜನಿಕ ಹಿತಕ್ಕೆ ಸಂಬಂಧಪಡದ ಮತ್ತು ನೀರಸವಾದ ವಿಷಯಗಳಿಗಾಗಲಿ, ವ್ಯಕ್ತಿಕ ಹಾಗೂ ಪಕ್ಷಾಭಿಮಾನದ ಸಂಗತಿಗಳಿಗಾಗಲಿ ಇಲ್ಲವೆ ಜಾಹಿರಾತು ಹಾಕಿ ಒಂದು ಸ್ವರದ ರೂಪವನ್ನು ಕೊಟ್ಟಂಥ ಯಾವುದೇ ವ್ಯಕ್ತಿಕ ವಿಷಯಕ್ಕಾಗಲಿ ಸ್ವದೇಶಾಭಿಮಾನಿಯಲ್ಲಿ ಎಡೆಸಿಗಲಾರದು. ಸಂಕ್ಷೇಪದಿಂದ ಹೇಳುವುದಾದರೆ ೧॥ ರೂಪಾಯಿ ವರ್ಗಣಿ ಕೊಟ್ಟು ನಮ್ಮ ಪತ್ರಿಕೆಯನ್ನು ಕೊಂಡುಕೊಳ್ಳುವ ಗ್ರಾಹಕರಿಗೆ ಸಂಪೂರ್ಣವಾಗಿ

ಸ್ವದೇಶಾಭಿಮಾನಿಯ ಉಪಯುಕ್ತತೆಯು

ಉಂಟಾಗುವಂತೆ ನಾವು ಈ ಎಲ್ಲ ಸಂಸ್ಕರಣಗಳನ್ನು ಮಾಡಿರುವೆವು. ಈ ಸಂಸ್ಕರಣಗಳಲ್ಲಿಯೇ ನಮ್ಮ ತೃಪ್ತಿಯೆಂದು ಯಾರೂ ತಿಳಿಯಬಾರದು. ನಮ್ಮ ಕೆಲವು ಆಪ್ತಸ್ನೇಹಿತರು ಸೂಚಿಸಿರುವಂತೆ ಬೇರೆ ಸುಧಾರಣೆಗಳನ್ನು ಮಾಡುವುದಾಗಲಿ, ಇಲ್ಲವೆ ಇದನ್ನೊಂದರಲ್ಲಿ ಎರಡು ಸಾರಿ ಹೊರಡಿಸುವಂತೆ ಮಾಡುವುದಾಗಲಿ ಅಗತ್ಯವಿದೆಂಬುದು ನಿಜವು. ಮಾತ್ರವಲ್ಲ, ಪತ್ರದ ವಾಚನೀಯ ಪೃಷ್ಠಗಳನ್ನು ಹೆಚ್ಚಿಸಿದರೂ ಅದು ಈ ಹೊತ್ತು ಬೇಕೇ ಆಗಿದೆ. ಆದರೆ ಈ ಎಲ್ಲ ಸೂಚನೆಗಳಿಗೆ ಪ್ರಕೃತ ಮಹಾಯುದ್ಧವೆ ಮರ್ಮಕವಾದ ಉತ್ತರವಾಗಿರುವುದರಿಂದ ಯುದ್ಧ ಕಾಲವು ಹೋಗಿ, ಲೋಕದಲ್ಲಿ ಶಾಂತತೆಯುಂಟಾಗಿ ಪೂರ್ವವತ್ ವ್ಯಾಪಾರವು ಪ್ರತಿಬಂಧವಿಲ್ಲದೆ ನಡೆಯಲು ಆರಂಭಿಸಿದ ನಂತರ ಆ ಎಲ್ಲ ಸೂಚನೆಗಳನ್ನು ಅವಶ್ಯವಾಗಿ ವಿಚಾರದಲ್ಲಿ ತೆಕ್ಕೊಳ್ಳುವೆವು. ಈ ಎಲ್ಲ ಕೆಲಸಗಳು ಬರೆ ಒಬ್ಬನ ಸಾಹಸದಿಂದ ಆಗತಕ್ಕವಲ್ಲ. ಇಂಥ ದೇಶಸೇವೆಯ ಕೆಲಸಗಳಿಗೆ

ದೇಶಬಂಧುಗಳ ಬೆಂಬಲು ಮತ್ತು ಉದಾರ ಆಶ್ರಯವು

ಬೇಕಾಗಿರುವುದರಿಂದ ಕನ್ನಡಿಗರು ನಮ್ಮ ಈ ನಮ್ರ ಸೇವೆಗೆ ಮೊದಲೊಂದು ನಾವು ಹೇಳಿದಂತೆ ಸ್ವಹಸ್ತ ಪರಹಸ್ತದಿಂದ ಉದಾರ ಆಶ್ರಯವನ್ನು ಕೊಡಬೇಕಾಗಿ ಕೇಳುತ್ತೇವೆ. ಒಬ್ಬೊಬ್ಬ ಚಂದಾದಾರರು ಇನ್ನೊಬ್ಬೊಬ್ಬನನ್ನು ಮಾಡಿಕೊಟ್ಟರೆ ನಮ್ಮ ಕೆಲಸವು ಸುಲಭವಾಗಿ ನಡಿಯುವಂತಿದೆ. 'ಕನ್ನಡ ದೇಶದ' ಕನ್ನಡಿಗರ; ಮತ್ತು ಕನ್ನಡ ವಾಙ್ಮಯದ ಪತ್ರವಿದು. ಈ ಕಾರ್ಯದ ಅಭ್ಯುದಯಕ್ಕಾಗಿ ಸಹಾಯ್ಯಮಾಡುವುದು ತಮ್ಮ ಕರ್ತವ್ಯವಾಗಿದೆ! ಪತ್ರಿಕೆಗಳು ದೇಶಪುರುಷನ ಮುಖಗಳಾಗಿರುವುದರಿಂದ ಅವುಗಳಲ್ಲಿ ಒಂದು ಶಿಷ್ಟಶಕ್ತಿ, ಸಾಮರ್ಥ್ಯ ಮತ್ತು ಉತ್ಸಾಹ ಇವು ಸದಾ ಸರ್ವದಾ ಇರುವಂತೆ ಮಾಡುವುದು ತಮ್ಮ ಕರ್ತವ್ಯ. ಈ ತರದ ಆಲೋಚನೆಗಳು ನಮ್ಮ ಮಹನೀಯ ಚಂದಾದಾರರಲ್ಲಿ ಹುಟ್ಟಿ ನಾವು ಕೈಕೊಂಡ ಈ ಪವಿತ್ರ ವ್ರತದಲ್ಲಿ ಅವರ ಪೂರ್ಣ ಅನುಕೂಲ್ಯವು ದೊರೆಯಬೇಕೆಂದು ತುಂಬಾ ಭರವಸೆ ಪಡುತ್ತೇವೆ. ಮೇಲೆ ಹೇಳಿದ ಸದ್ಬುದ್ಧಿಯನ್ನು ಕನ್ನಡಿಗರಲ್ಲಿ ಪರಮೇಶ್ವರನು ಪ್ರೇರಿಸಲೆಂದು ಪ್ರಾರ್ಥಿಸಿ ನಮ್ಮ ಆಶ್ರಯದಾತೃಗಳ ಸದಾ ಶ್ರೇಯಸ್ಸನ್ನು ಚಿಂತಿಸಿ ಈ ಸ್ವವಿಷಯದ ಲೇಖನವನ್ನು ಇಲ್ಲಿಗೆ ಮುಗಿಸುತ್ತೇವೆ.

ಸ್ಫುಟ ವಿಚಾರಗಳು.

೧. ಕಳೆದ ಡಿಸೆಂಬರ ತಿಂಗಳ ಅಂತ್ಯದಲ್ಲಿ ಹಿಂದುಸ್ಥಾನದಲ್ಲಿ ಅನೇಕ ಪರಿಷತ್ತುಗಳು ಸೇರಿದವು. ಅವುಗಳೊಳಗಿನ ಮುಖ್ಯ ಮುಖ್ಯ ಪರಿಷತ್ತುಗಳ ಅಲ್ಪ ಸಾರಾಂಶವನ್ನು ಬೇರೆ ಕಡೆಯಲ್ಲಿ ಕೊಟ್ಟಿರುವೆವು. ಈ ಎಲ್ಲ ಸಭೆಗಳಲ್ಲಿ ಈ ವರ್ಷದ ರಾಷ್ಟ್ರೀಯ ಸಭೆಯ ವೃತ್ತಾಂತವು ಚಿರಸ್ಮರಣೀಯವಾಗಿ ನಿಲ್ಲುವುದು. ರಾಷ್ಟ್ರೀಯ ಸಭೆಯ ಖರ್ಚು ಬಹಳ, ಮಂಟಪವು ಭವ್ಯವಾದುದು, ಪ್ರತಿನಿಧಿಗಳು ತುಂಬಾ, ಅಧ್ಯಕ್ಷರು ವಿದ್ವಾಂಸರು, ಪಾಸಾದ ಠರಾವುಗಳು ಮಹತ್ತರವು ಈ ಎಲ್ಲ ಕಾರಣಗಳಿಂದ ಈ ವರ್ಷದ ರಾಷ್ಟ್ರೀಯ ಸಭೆಯು ಚಿರಸ್ಮರಣೀಯವಾಗಿದೆಂತಲ್ಲ, ಈ ಸಂಗತಿಗಳು ಈ ವರ್ಷದಂತೆಯೆ ಪ್ರತಿ ವರ್ಷದಲ್ಲಿಯೂ ಸಾಂಗವಾಗಿ ನೆರವೇರುತ್ತಲೇ ಇದ್ದವು; ಇವು ಈ ವರ್ಷದ ರಾಷ್ಟ್ರೀಯ ಸಭೆಯ ಮಹತ್ವಕ್ಕೆ ಕಾರಣಗಳಲ್ಲ. ಹತ್ತು ವರ್ಷಗಳ ಹಿಂದೆ ಸುರತದ ರಾಷ್ಟ್ರೀಯ ಸಭೆಯಲ್ಲಿ ದ್ವೈತವು ಬೆಳೆದು ಎರಡು ತಂಡಗಳಾಗಿದ್ದವು. ರಾಷ್ಟ್ರೀಯ ಸಭೆಯು ಎರಡು ಹೋಳುಗಳಾಗಿದ್ದವು. ಪಕ್ಷಭೇದವು ಬೆಳೆದು ಹೋಗಿತ್ತು. ಪರಸ್ಪರ ದೂಷಣೆಗಳು

ನಡೆಯುತ್ತಿದ್ದವು. ಅವರವರ ಉದ್ದೇಶ ಮತ್ತು ಸಾಧನೆಗಳಲ್ಲಿ ಕೂಡ ಆಶಂಕೆಗಳು ಬರಹತ್ತಿದವು. ಒಬ್ಬರಲ್ಲೊಬ್ಬರು ಅಸದ್ಹೇತುವನ್ನು ಆರೋಪಿಸಿಕೊಳ್ಳುತ್ತಿದ್ದರು. ಈ ರೀತಿಯಿಂದ ಇಷ್ಟುರವರೆಗೆ ಪಕ್ಷಾಭಿಮಾನದ ಕತ್ತಲೆಯಿಂದ ಕಣ್ಣು ಮುಚ್ಚಿಹೋದ ಕಾರಣ ನಮ್ಮ ನಮ್ಮಲ್ಲಿ ಜಗಳಾಡುವುದು, ಪಕ್ಷಭೇದಗಳನ್ನಿಟ್ಟುಕೊಳ್ಳುವುದು ಸರಿಯಲ್ಲೆಂಬ ಭಾವವು ಪ್ರಾಯಶಃ ಯಾರಲ್ಲಿಯೂ ಮೂಡಿರಲಿಲ್ಲ. ಆದರೆ ಈಗ ಒಂದೆರಡು ವರ್ಷಗಳಿಂದ ಈ ಸ್ಥಿತಿಯು ಬೇಗನೆ ಬದಲಾಗಿ ಈ ಎರಡು ಪಕ್ಷಗಳು ಕೈಗೆ ಕೈಹಿಡಿದು ಪೂರ್ವವತ್ ಸ್ನೇಹದಿಂದ ರಾಷ್ಟ್ರಸೇವೆಯ ಕೆಲಸವನ್ನು ಮಾಡುವವೆಂಬ ವಿಷಯದಲ್ಲಿ ಕೆಲವು ಚಿಹ್ನೆಗಳು ಈಚೆಗೆ ತೋರುತ್ತಿದ್ದವು. ಮತ್ತು ಈ ಶುಭನಿರೀಕ್ಷಣೆಯಂತೆಯೇ ಮೊನ್ನೆಯ ರಾಷ್ಟ್ರೀಯ ಸಭೆಯಲ್ಲಿ ಎರಡು ಪಕ್ಷಗಳ ಐಕ್ಯವುಂಟಾಗಿದೆ; ಇದೇ ಈ ವರ್ಷದ ರಾಷ್ಟ್ರೀಯ ಸಭೆಯ ಚಿರಸ್ಮರಣತೆಯ ಕಾರಣವು. ಈ ಸಂಗತಿಯನ್ನು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ. "ಸ್ವರಾಜ್ಯ"ದ ಠರಾವಿಗೆ ಪುಷ್ಟಿಕೊಡುವಾಗಲೇ ತಿಲಕರು ("We have united in the United Provinces and we have found that luck in Lucknow") ಎಂದರೆ "ಸಂಯುಕ್ತ ಪ್ರಾಂತದಲ್ಲಿ ನಾವು ಸಂಯುಕ್ತರಾಗಿದ್ದೇವೆ, ಮತ್ತು ಈ ಸುದೈವವು ನಮಗೆ ಲಖನೌದಲ್ಲಿಯೇ ಲಭಿಸಿದೆ" ಎಂದು ಹೇಳಿದಂತೆ ಕಾಂಗ್ರೆಸು ಲಕನೌ ಪಟ್ಟಣದಲ್ಲಿ ಸಂಯುಕ್ತವಾದುದು ಅದಕ್ಕೊಂದು ಭೂಷಣವೆ ಸರಿ. ಇದೇ ಸಂಯುಕ್ತ ರಾಷ್ಟ್ರೀಯ ಸಭೆಯಲ್ಲಿ ಮುಸಲಮಾನರೂ ಒಂದು ಸೇರಿರುವದರಿಂದ ಅದು ಎಲ್ಲ ವಿಧಗಳಿಂದಲೂ, ದಾರಿಗಳಿಂದಲೂ ಸಂಯುಕ್ತವಾಗಿ "ಸಾರಾಲಂಕಾರ"ದ ಒಂದು ಪ್ರಶಸ್ತವಾದ ಉದಾಹರಣೆಯಾಗಿದೆಂಬುದಕ್ಕೆ ಸಂದೇಹವಿಲ್ಲ.

೨. ಪ್ರಕೃತ ಸಂಯುಕ್ತ ರಾಷ್ಟ್ರೀಯ ಸಭೆಯಲ್ಲಿ ಆದ ಸ್ವಾಗತ ಕಮಿಟಿಯ ಅಧ್ಯಕ್ಷರ ಭಾಷಣವಾಗಲೀ, ಸಭಾಧ್ಯಕ್ಷರ ಭಾಷಣವಾಗಲೀ ಇವು ಅನೇಕ ದೃಷ್ಟಿಯಿಂದ ಮನನೀಯವಾಗಿವೆ. ಸ್ವಾ. ಕ. ಅಧ್ಯಕ್ಷರಾದ ನಾಮದಾರ ಜಗತ್ ನಾರಾಯಣ ಇವರು ತಮ್ಮ ಭಾಷಣದಲ್ಲಿ ಅನೇಕ ಸಂಗತಿಗಳನ್ನು ಹೇಳಿರುವರು. ಇವರು ಅಲ್ಲಿಯ ಸ್ಥಾನಿಕ ಸರಕಾರದ ಅನಾವಶ್ಯಕವಾದ ಗಾಬರಿಯ ಕುರಿತು ತಮ್ಮ ವಿಷಾದವನ್ನು ವ್ಯಕ್ತಪಡಿಸಿ ಸರಕಾರವು ಈ ಅವ್ಯಾಪಾರೇಷು ವ್ಯಾಪಾರವನ್ನು ಮಾಡದೆ ಇದ್ದರೆ ಯಾವ ತೊಂದರೆಯು ಒದಗುವ ಹಾಗಿತ್ತು? ರಾಷ್ಟ್ರೀಯ ಸಭೆಯ ವಕ್ತೃಗಳಿಗೆ ಈ ರೀತಿಯಿಂದ ಕೊಟ್ಟಿರುವ ಮುಂಜಾಗ್ರತೆಯು ಕೇವಲ ಅವಿಚಾರದ್ದಾಗಿದೆಂದು ಸ್ಪಷ್ಟ ಶಬ್ದಗಳಿಂದ ಅದನ್ನು ನಿಷೇಧಿಸಿದರು. ಪ್ರಕೃತ ಮಹಾ ಯುದ್ಧದಲ್ಲಿ ಹಿಂದೂಸ್ಥಾನವು ಇಂಗ್ಲಂಡಕ್ಕೆ ಹೇಗೆ ಹೇಗೆ ಸಹಾಯ್ಯವನ್ನು ಮಾಡಿದೆ? ಇಂಗ್ಲಂಡದ ಪಕ್ಷವು ಸತ್ಯಪೂರ್ಣವಾಗಿರುವುದರಿಂದ ಯುದ್ಧದಲ್ಲಿ ಅದಕ್ಕೆ ಜಯಬರುವುದು ಹೇಗೆ ಯುಕ್ತವಾದುದು ಮುಂತಾದ ವಿಷಯಗಳನ್ನು ವಿವರಿಸಿ ನಾಮ. ಜ. ನಾರಾಯಣ ಪಂಡಿತರು ಹಿಂದೀ ಸ್ವರಾಜ್ಯದ ಕುರಿತು ವಿಸ್ತಾರವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಿದರು. ಈ ವಿಷಯದಲ್ಲಿ ಅವರು ವ್ಯಕ್ತಗೊಳಿಸಿದ ವಿಚಾರಗಳು ವಿಶೇಷವಾಗಿ ಮನನೀಯವಾಗಿದ್ದವು. ಈಗಿನ ಪ್ರಾತಿನಿಧಿಕ ಸ್ವರಾಜ್ಯವು ಪ್ರಾಪ್ತವಾಗುವುದಕ್ಕಿಂತ ಮುಂಚೆ ಇಂಗ್ಲಂಡದ ಪರಿಸ್ಥಿತಿಯು ರಾಜಕೀಯ ವಿಷಯದಲ್ಲಿ ಹೇಗಿತ್ತು. ಸ್ವರಾಜ್ಯದ ಪಾತ್ರತೆಯು ಅದರಲ್ಲಿ ಎಷ್ಟರ ಮಟ್ಟಿಗಿತ್ತು. ಈ ಹೊತ್ತು ಇಲ್ಲಿದ್ದಂತೆ ಮೊದಲು ಅಲ್ಲಿಯೂ ಹೇಗೆ ಬೇರೆ ಬೇರೆ ತೊಂದರೆಗಳಿದ್ದವು. ಆದರೆ ಅವೆಲ್ಲ ಸ್ವರಾಜ್ಯದ ಉಪಭೋಗದಿಂದ ಹೇಗೆ ನಷ್ಟವಾದವು ಮೊದಲಾದ ಐತಿಹಾಸಿಕ ಸಮಾಲೋಚನೆಗಳನ್ನು ಪಂ. ನಾರಾಯಣ ಇವರು ಅದಷ್ಟು ವಿಶದವಾಗಿ ಹೇಳಿದರು. ಅಲ್ಲದೆ, ಮೊದಲಿರುವ ಅವ್ಯವಸ್ಥೆಗಳು ಸ್ವರಾಜ್ಯದ ಪ್ರಾಪ್ತಿಯಿಂದ ಸುವ್ಯವಸ್ಥೆಯಲ್ಲಿ ಪರಿಣಮಿಸುತ್ತವೆಂಬ ಈ ಸಿದ್ಧಾಂತವನ್ನ ಕೆನಡಾ ಆಸ್ಟ್ರೇಲಿಯಾ ಮೊದಲಾದವುಗಳ ದೃಷ್ಟಾಂತದಿಂದ ದೃಢಪಡಿಸಿದರು. ಸಾರಾಂಶ ಪಂಡಿತ ಜಗತ್ ನಾರಾಯಣರ ಭಾಷಣವು ಉಪಪತ್ತಿ, ಪ್ರಮಾಣ ಮತ್ತು ದೃಷ್ಟಾಂತ ಇವುಗಳಿಂದ ಸಮರ್ಪಕವಾಗಿತ್ತು.

೩. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಹುಮಾನಪಟ್ಟ ಅಂಬಿಕಾಚರಣ ಮುಜುಮದಾರರ ಭಾಷಣವಂತು ಸರ್ವಥಾ ಯೋಗ್ಯವಾಗಿಯೇ ಇತ್ತು. ರಾಷ್ಟ್ರೀಯ ಸಭೆಯೊಳಗಿನ ಪಕ್ಷಭೇದಗಳು ಮುರಿಯಲ್ಪಟ್ಟು ಈ ವರ್ಷ ಎಲ್ಲರು ಒಟ್ಟಿಗೆ ಸೇರಿದ್ದಕ್ಕಾಗಿ ಸ್ವಾ. ಕ. ಯ ಅಧ್ಯಕ್ಷರಂತೆಯೇ ಇವರು ಸಹಾ ಸಹೃದಯತನದಿಂದ ಎಲ್ಲ ಪಕ್ಷಗಳ ಮುಖಂಡರನ್ನೂ ಗೌರವದ ಶಬ್ದಗಳಿಂದ ಮನ್ನಿಸಿ ಈ ವರ್ಷ ಗತಿಸಿದ ರಾಷ್ಟ್ರಮುಖಂಡರ ಮರಣದ ಕುರಿತು ಯಥೋಚಿತ ಶಬ್ದಗಳಿಂದ ವಿಷಾದವನ್ನು ವ್ಯಕ್ತಗೊಳಿಸಿದರು. ಅನಂತರ ಪ್ರಕೃತ ರಾಜ್ಯವ್ಯವಸ್ಥೆಯ ದೋಷಗಳನ್ನು, ಅಧಿಕಾರಿ ಮಂಡ(bureaucracy)ಯ ಪ್ರತಿಷ್ಠೆಯನ್ನೂ, ದೇಶದೊಳಗಿನ ಚೈತನ್ಯವನ್ನೂ, ಮತ್ತು ಬೇರೆ ಸಂಗತಿಗಳನ್ನೂ ಅಧ್ಯಕ್ಷರಾಗಿ ವಿವೇಚಿಸಿದರು. ಹಾಗೆಯೆ ಹಿಂದೂಸ್ಥಾನದ ಶಿಕ್ಷಣ, ಪ್ರೆಸ್‌ಆಕ್ಟ್, ಹತ್ಯಾರುಗಳ ಕಾಯಿದೆ, ರಾಜ್ಯಸ ಕಾನೂನು ಮತ್ತು ಅದಕ್ಕಾಗಿ ಮಾಡಿದ ಪ್ರತಿಬಂಧಗಳು ಮತ್ತು ಅನ್ನಿಬಿಝಾಂಟರ ಮೊಕದ್ದಮೆಗಳು ಇವೇ ಮೊದಲಾದ ತಾತ್ಕಾಲಿಕ ವಿಷಯಗಳನ್ನು ವಿಮರ್ಶಿಸಿ ಮಾನ್ಯ ಅಧ್ಯಕ್ಷರು "ಸ್ವರಾಜ್ಯ"ಕ್ಕೆ ಬಂದು ಆ ವಿಷಯದಲ್ಲಿ ಸಮಾಧಾನಕರವಾದ ವಿಚಾರಗಳನ್ನು ಸಭಿಕರಿಗೆ ಶ್ರುತಪಡಿಸಿದರು. ಈ ಇವರ ಭಾಷಣವನ್ನು ಸಮಗ್ರವಾಗಿ ಕೊಡುವಷ್ಟು ಸ್ಥಳವಿಲ್ಲ. ಮುಂದಿನ ಸಂಚಿಕೆಯಲ್ಲಿ ಅದನ್ನು ಸ್ವತಂತ್ರವಾಗಿ ವಿಮರ್ಶಿಸುವೆವು. ಆದರೂ ಈಗ ಇಷ್ಟು ಸಂಗತಿಯು ವಾಚಕರಿಗೆ ತಿಳಿಸಬಹುದಾಗಿದೆ. ಕಳೆದ ವರ್ಷ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ (ಆದರೆ ಈಗ ಬಂಗಾಳದ ಎಗ್ಸಿ ಕೌನ್ಸಿಲರಾದ) ನಾಮದಾರ ಸಿಂಹರಂತೆ ಇವರು ಸ್ವಮಾರ್ಗದಲ್ಲಿ ಬಿದ್ದಿರುವ ರಾಷ್ಟ್ರೀಯ ಸಭೆಯ ಹೆಜ್ಜೆ ಮುನ್ನಿಯಲ್ಲಿಲ್ಲ. ಈ ವಿಷಯದಲ್ಲಿ ಇವರ ಗರ್ಜನೆಯು ನಿಜಸಿಂಹದ ಗರ್ಜನೆಯಾಗಿತ್ತು.

೪. ರಾ. ಸಭೆಯ ಮೂರನೆ ದಿವಸದಲ್ಲಿ ಅನೇಕ ಠರಾವುಗಳು ಪಾಸಲ್ಪಟ್ಟವು. ಇವುಗಳನ್ನು ನಾವು ಈ ಹೊತ್ತಿನ ಸ್ಥಳದ ಬೇರೆ ಕಡೆಯಲ್ಲಿ ಕೊಟ್ಟಿರುವೆವು. ಆದರೂ ಈ ಠರಾವುಗಳಲ್ಲಿ ಪ್ರೆಸ್‌ಆಕ್ಟು, ಹತ್ಯಾರುಗಳ ಕಾಯಿದೆ ಮತ್ತು ಈ ಮೂರು ಅತಿ ಮಹತ್ವದವಿದ್ದವು. ಈ ಮೂರು ಠರಾವುಗಳ—ಹೆಚ್ಚಾಗಿ ಸ್ವರಾಜ್ಯದ ಠರಾವು ಪಾಸಾಗುವಾಗ ಆದ ವಕ್ತೃಗಳ ಭಾಷಣವನ್ನೂ ನಮ್ಮ ವಿಮರ್ಶೆಯೊಡನೆ ಬರುವ ಕೊಡುವೆವು.

೫. ನಮ್ಮ ಪತ್ರದಲ್ಲಿಯೂ ಬೇರೆ ಕಡೆಗಳಲ್ಲಿಯೂ ಪ್ರಕಟವಾದಂತೆ ನಾಳೆಯ ದಿನ ಒಲ್ಮರದ ಕಂಪೌಂಡಿನೊಳಗೆ ಮಹೋತ್ಸವದಲ್ಲಿಯ "ವಾರಪೇಟೆ ಪಂಡಿ"ನ ವಿನೋದಗಳು ಪ್ರಾರಂಭವಾಗುವವು. ಈ ಕಾರ್ಯದಲ್ಲಿ ನಮ್ಮ ಈಗಿನ ಲೋಕಪ್ರಿಯ ಕಲೆಕ್ಟರ ದೊರೆಗಳೂ ಮತ್ತು ಅವರ ಶಿರಸ್ತೆದಾರರೇ ಮೊದಲಾದ ಕೆಲವು ಸದ್ಗೃಹಸ್ಥರು ಬಹು ಪರಿಶ್ರಮವನ್ನು ತಕ್ಕೊಂಡು ಜನರ ವಿನೋದವೂ, ಪ್ರಕೃತ ಕಾರ್ಯವೂ ಸಾಧಿಸುವ ಮಾಡಿದ್ದಾರೆ. ಈ ಬಗ್ಗೆ ಅವರೆಲ್ಲರು ಸ್ತುತಿಗೆ ಪಾತ್ರರಾದರು. ನಾಳೆಯ "ವಿಹಾರ"ದಲ್ಲಿ ಬೇರೆ ಬೇರೆ ಸರಕಾರಿ ಕೆಲಸಗಳ ಉದ್ಯೋಗಸ್ಥರೂ, ಖಾಸಗಿ ವಿದ್ಯಾಸಂಸ್ಥೆಗಳ ಅಧಿಕಾರಿಗಳೂ, ಬೇರೆ ಸಾರ್ವಜನಿಕ ಸಂಸ್ಥೆಗಳ ಮಾಲಿಕರೂ ಹಾ ಮಾನ್ಯ ಮತ್ತು ಸುಪ್ರಸಿದ್ಧರಾದ ಪಟ್ಟಣಿಗರೂ ಮೊದಲೇ ಮೇಲಿನ ದೊರೆಗಳಿಗೂ ಸರಕಾರಕ್ಕೂ ಉದಾರ ಬುದ್ಧಿಯಿಂದ, ಉತ್ಸಾಹದಿಂದಲೂ ಮದತು ಮಾಡಿ ಆರಂಭಿಸಿದ ಘಂಟದ ಶಸ್ವಿಯಾಗುವಂತೆ ಯತ್ನಿಸುವರೆಂದು ನಾವು ಪೂರ್ಣ ಭರವಸುತ್ತೇವೆ. ಈ ವಿನೋದದ ಸಂತೆಯಲ್ಲಿ ನಾವು ನಮ್ಮ ರಾಷ್ಟ್ರೆಯನ್ನು ಮಾತ್ರ ತೋರಿಸುವುದೆಂತಲ್ಲ, ಬೇರೆ ಬೇರೆ ಹಸ್ತಶಿಲ್ಪ, ಮನೋರಂಜಕ ಆಟ, ಕೃಷಿಸಾಧನೆ, ಮೊದಲಾದವುಗಳಿಂದ ನಾವು ಯೋಗ್ಯ ಮನೋರಂಜನೆಯನ್ನು ಮತ್ತು ಬೋಧೆನ್ನು ಕೂಡ ಪಡೆಯಬಹುದಾಗಿದೆ. ಆದದ್ದರಿಂದ ನಾವು ಅತ್ಯಾಗ್ರಹದಿಂದ ಹೇಳುವದೇನಂದರೆ ನಾಳೆಯ "ವಿಹಾರ"ದ ಎಲ್ಲ ತರದ ಜನರು ಸೇರಿ ಸರಕಾರಕ್ಕೆ ಸಾಹಾಯ್ಯ ಮಾಡುದು ಅತ್ಯಗತ್ಯವಾಗಿದೆ.

೬. **ಹೊಗೆಸೊಪ್ಪಿನ ವ್ಯಾಪಾರ:**—ದೇಶೀಯರ ವ್ಯಾಪಾರವನ್ನು ವ್ಯವಗೊಳಿಸಿ ಅದರಿಂದ ದೇಶಕ್ಕೂ ಅದನ್ನು ನಡಿಸುವ ವ್ಯಕ್ತಿಗಳಿಗೂ ಯಶಸ್ಸೂ, ಲಾಭವೂ ಉಂಟಾಗುವಂತೆ ಮಾಡುವ ಪ್ರಯತ್ನಗಳು ಇಷ್ಟರ ತನಕ ಮುಂಬಯಿ ಕಲ್ಕತ, ಮದ್ರಾಸು ಮೊದಲಾದ ಕಡೆಗಳಲ್ಲಿ ಪ್ರಾರಂಭವಾಗಿವೆ ಅಲ್ಲದೆ ಮಂಗಳೂರಿನಂಥಾ ಪಟ್ಟಣಗಳಲ್ಲಿ ಈ ಬಗ್ಗೆ ಯಾವ ಪ್ರಯತ್ನವೂ ಇರದು. ಇದರಿಂದ ದೇಶೀಯ ವ್ಯಾಪಾರ ವ ವ್ಯಾಪಾರಸ್ಥರ ಸ್ಥಿತಿಯು ಕುಂದುತ್ತ ಬರುವದು. ಲಾಭ ನಷ್ಟಗಳ ಕಾರಣವೇನು? ಇವು ತಾತ್ಕಾಲಿಕವೋ ಹೇಗೆ? ಲಾಭನಷ್ಟ ಇವೆರಡರ ಹೊರತು ವ್ಯಾಪಾರಿಗಳು ಲಕ್ಷ್ಯಕ್ಕೆ ತಂದುಕೊಳ್ಳಬೇಕಾದಂಥ ಇತರ ವಿಷಯಗಳು ಯಾವಾಗುವವು? ಆಯಾ ವ್ಯಾಪಾರದ ಬೆಳವಣಿಗೆಗೆ ಇರುವ ಮುಖ್ಯ ಪ್ರತಿಬಂಧಕಗಳು ಯಾವವು? ಇವುಗಳ ನಿವೃತ್ತಿ ಏನು, ಸರಕಾರದಿಂದ ಎಂಥೆಂಥಾ ಸಹಾಯ್ಯವನ್ನು ಪಡೆಯಲು ವ್ಯಾಪಾರಸ್ಥರು ಅರ್ಹರಾಗಿರುವರು? ತವು ಸಮಾಜ . . .—ಇವುಗಳೆಲ್ಲವನ್ನು ಶೋಧಿಸಿ ತಿಳಿಯಲು ಅಗತ್ಯವಾದ . . .ಯಾಗಲಿ, ಇದಕ್ಕೆ ಬೇಕಾದಂಥ ಶಿಕ್ಷಣವಾಗಲಿ ಇಲ್ಲದಿರುವದರಿಂದ ಒಂದೊಂದೇ ವ್ಯಾಪಾರವು ಕ್ರಮವಾಗಿ ಕೆಡುತ್ತ ಬರುವದು—ಅಂದರೆ ಅದು ದೇಶೀಯರ ಕೈಯಿಂದ ಪರದೇಶೀಯರ ಕೈಸೇರುವದು ಅಥವಾ ಪರಮುಂದರಿಗೆಸ್ಸು . . . ವದು. ಹಲವು ಸಂದರ್ಭಗಳಲ್ಲಿ ದೇಶ . . . ನಡೆಸಲ್ಪಡುವ ಕೃತ್ರಿಮ ಕುತಂತ್ರಗಳಿಂ. . . ಗಳಿಗೆ ಗಿರಾಕಿಯು ಇಲ್ಲದೆ ಅವುಗಳನ್ನ . . . ವೃತ್ತಿಯು ಸಹ ನಿರ್ನಾಮವಾಗಿ ಹೋಗುತ್ತದೆ.

ಈ ಜಿಲ್ಲೆಯಲ್ಲಿ ಹೊಗೆಸೊಪ್ಪಿನ ಕೃಷಿಯ . . . ತ್ತಿರುವವರೂ ಮತ್ತು ಇದರ ವ್ಯಾಪಾರವನ್ನು ಬಹಳ . . . ಸುತ್ತಿರುವ ಮಂಗಳೂರಿನ ಸಾವುಕಾರರೂ ಹೊಗೆಸೊಪ್ಪಿನ ವ್ಯಾಪಾರಕ್ಕೆ ಬಂದೊದಗುತ್ತಿರುವ ಅಪಾಯಗಳನ್ನು ಬೇಗನೆ ಲಕ್ಷ್ಯಕ್ಕೆ ತಂದುಕೊಳ್ಳುವದು ಅಗತ್ಯವಾಗಿದೆ. ಕೃಷಿಕರಿಂದ ಕಟ್ಟಿ ಬರುವ ಹೊಗೆಸೊಪ್ಪಿನ ಕಟ್ಟುಗಳಲ್ಲಿ ಸಾಧಾರಣವಾಗಿ ತೂಕಕ್ಕೆ ತೂಕ ಹೊಗೆ ಇರುವದು. ಇದರಿಂದ ಗಿರಾಕಿಗಳು ಕ್ರಯಕೊಟ್ಟು ಹೊಗೆಸೊಪ್ಪನ್ನು ಮಾತ್ರವಲ್ಲ ಹೊಗೆಯನ್ನೂ ಪಡಕೊಳ್ಳುವರು. ಒಳ್ಳೇ ತರಗತಿಯ ಹೊಗೆಸೊಪ್ಪು ಇಲ್ಲಿ ದೊರಕುತ್ತದೆಂತ ಸಿಗರೆಟ್ ಕಾರ್ಖಾನೆಗಳ ಮಾಲಿಕರು ಕಲ್ಕತ್ತಾ ಪ್ರಾಂತ್ಯದಿಂದ ಬಂದು ಇಲ್ಲಿಗೆ ಒಂದೆರಡು ವೆಗ್ಗನ್ ಹೊಗೆಸೊಪ್ಪು ಕೊಂಡುಕೊಳ್ಳುವಷ್ಟರಲ್ಲಿ ಇವರಿಗೆ ಹೊಗೆ ತುಂಬಿರುವ ಇಲ್ಲಿಯ ತಂಬಾಕು ಕಟ್ಟುಗಳನ್ನು ನೋಡಿ ಇಲ್ಲಿಯ ವ್ಯಾಪಾರವು ಸಾಕಾಯಿತೆಂಬದಾಗಿ ಕೇಳುತ್ತೇವೆ. ಮಂಗಳೂರಿನ ವ್ಯಾಪಾರಸ್ಥರು ಈ ಸೂಚನೆಯನ್ನು ತಿಳಕೊಂಡು ಮಂಗಳೂರಲ್ಲಿ ಈ ಬಗ್ಗೆ ತಾ. ೧-೧-೧೭ರಲ್ಲಿ ಸಭೆಕೂಡಿ ಹೊಯಿಗೆ ತಂಬಾಕನ್ನು ಹೊಯಿಗೆ ಸಿವಾಯಿ ತಕ್ಕೊಳ್ಳಬೇಕೆಂತ ನಿರ್ಣಯಿಸಿರುತ್ತಾರೆ. ಜಿಲ್ಲೆಯ ಇತರ ವ್ಯಾಪಾರಸ್ಥರೂ ಮತ್ತು ಹೊಗೆಸೊಪ್ಪನ್ನು ಬೆಳೆಸುವ ಕೃಷಿಕರೂ ಈ ಸಾಹುಕಾರರಿಗೆ ಈ ನಿರ್ಣಯದ ಜ್ಯಾರಿಯನ್ನು ಯಥಾರೀತಿ ನಡಿಸುವಂತೆ ಬೇಕಾದ ಸಹಕಾರವನ್ನು ಮಾಡಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ಮಂಗಳೂರು.

ಮುನ್ಸಿಪಾಲಿಟಿಯೊಳಗೆ ಅಲ್ಲಲ್ಲಿ ಪ್ಲೇಗ ಇಲಿಗಳು ಬೀಳಹತ್ತಿವೆ. ಮುನ್ಸಿಪಾಲಿಟಿಗೆ ಸೇರಿದ ವೆಬಸ್ಟರ್ ಮಾರ್ಕೆಟಿನಲ್ಲಿಯೂ ಪ್ಲೇಗ ಇಲಿಗಳು ಬಿದ್ದುದರಿಂದ ಮಾರ್ಕೆಟಿನೊಳಗಿನ ಅಂಗಡಿಗಳು ಹೊರಹಾಕಲ್ಪಟ್ಟಿರುವವು. ಹಿಂದೆ ಈ ಮಾರ್ಕೆಟಿನೊಳಗೆ ಇಲಿಗಳು ಬಿದ್ದಿದಾಗ ಇದೇ ಮಾರ್ಕೆಟನ್ನೇ ಮುಚ್ಚಿ ಲೈಟ್‌ಹೌಸ್ ಮೈದಾನಿಗೆ ಮಾರ್ಕೆಟ್ ವೈಯ್ಯೋಣಾಗಿತ್ತು. ಆದರೆ ಈ ಸಾರೆ ಇಲಿ ಬಿದ್ದ ಕಾಲ ಒಳಗಿನ ಅಂಗಡಿಗಳನ್ನು ತೆಗೆದು ಮಾರ್ಕೆಟಿನ ಕಂಪೌಂಡಿನೊಳಗೆನೇ ಹಾಕಿರುವರು. ಸೋಂಕು ತಟ್ಟುವ ಅಪಾಯವು ಇದರಿಂದ ಕಡಿಮೆಯಾಗುವದೋ?

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳೆದ ವಾರ ೩ ಪ್ಲೇಗು ಮರಣಗಳಿದ್ದವು.

ನಾಳೆಯ ದಿನ ಶನಿವಾರ ತಾ. ೬ರಲ್ಲು ಇಲ್ಲಿ ಯುದ್ಧ ಫಂಡಿನ ವಿಹಾರವು ಒಲ್ಮರ ಮೈದಾನಿನಲ್ಲಿ ಜರಗುವದು. ಅಪರಾಹ್ನ ಮೂರು ಗಂಟೆಗೆ ಮಂಗಳೂರು ಲೋರ್ಡ ಬಿಷೋಪ ಸಾಹೇಬರು ಈ ವಿಹಾರದ ಪ್ರಾರಂಭೋತ್ಸವವನ್ನು ಮಾಡುವರು. ಅನಂತರ ರಾತ್ರಿ ೯ ಗಂಟೆಯ ವರೆಗೆ ವಿನೋದಪರವಾದ ನಾಟಕ, ಖೇಳಮೇಳಗಳೂ, ಸಂತೆಗಳೂ ಇರುವವು.

ಮಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಎಸೋಶಿಯೇಶನ್ ಎಂಬ ಜಿಲ್ಲಾ ಪ್ರಜಾ ಜನಕ ಸಂಘವನ್ನು ಏರ್ಪಡಿಸುವ ವಿಷಯವನ್ನು ಪರ್ಯಾಲೋಚಿಸುವರೆ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಒಂದು ಸಭೆಯು ಕೂಡಬೇಕೆಂದು ನಿರ್ಣಯಿಸಲ್ಪಟ್ಟಿರುತ್ತದೆ. ಇಂಥಾದ್ದೊಂದು ಸಂಘವು ಈ ಜಿಲ್ಲೆಯಲ್ಲಿ ಏಕೆ ಅಗತ್ಯ, ಪ್ರಜಾಮತವನ್ನು ಇಂಥಾ ಸಂಘಗಳ ಮೂಲಕ ಹೇಗೆ ಐಕ್ಯಗೊಳಿಸಬಹುದು, ಇದರ ಮೂಲಕ ಜನರ ಸಂಕಷ್ಟಗಳನ್ನು ಸರಕಾರದವರ ಗೋಚರಕ್ಕೆ ತಂದು ಅವುಗಳ ನಿವೃತ್ತಿಯನ್ನು ಹೇಗೆ ಪಡೆಯಬಹುದು ಎಂಬಿತ್ಯಾದಿ ವಿವರಗಳನ್ನು ಕುರಿತು ಬಹುಮಾನಪಟ್ಟ ಸದಾಶಿವ ಭಟ್ಟರವರು ಸಭೆಯಲ್ಲಿ ಮಾತಾಡುವರು. ಜಿಲ್ಲೆಯ ಆಯಾ ಕಡೆಗಳಿಂದ ಬಂದಿರುವಂಥ ಮತ್ತು ಇಲ್ಲಿಯ ಸದ್ಗೃಹಸ್ಥರೂ ದಯಮಾಡಿ ಈ ಸಭೆಗೆ ಇದೇ ತಾ 7ನೇ ಆದಿತ್ಯವಾರ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಶ್ಯಾಮ ಘಂಟೆ ೫ಕ್ಕೆ ಬರಬೇಕೆಂತ ಈ ಮೂಲಕ ವಿಜ್ಞಾಪಿಸೋಣಾಗಿರುವದು.

ಯೂರೋಪದ ಮಹಾ ಯುದ್ಧ.

ಶತ್ರುರಾಜ್ಯಗಳವರು ಮಿತ್ರರಾಜ್ಯಗಳವರಿಗೆ ಅಮೇರಿಕದವರ ಮೂಲಕ ಕಳುಹಿಸಿಕೊಟ್ಟ ಸಂಧಿ ಪ್ರಸ್ತಾವಕ್ಕೆ ಮಿತ್ರರಾಜ್ಯಗಳವರು ಒಟ್ಟು ಕೂಡಿ ಈಗತಾನೆ ಉತ್ತರ ಕಳುಹಿಸಿಕೊಟ್ಟಿರುತ್ತಾರೆ. ಯುದ್ಧಕ್ಕೆ ಕಾರಣ ಕೊಟ್ಟವರು ಮಿತ್ರರಾಜ್ಯಗಳವರು ಮತ್ತು ಈ ಶತ್ರುರಾಜ್ಯಗಳವರಿಗೆ ಜಯವಾಗಿದೆಂಬದಾಗಿ ಶತ್ರುರಾಜ್ಯಗಳವರ ಸಂಧಿ ಪ್ರಸ್ತಾವದಲ್ಲಿ ತೋರುವ ಸೂಚನೆಯನ್ನು ಮಿತ್ರರಾಜ್ಯಗಳವರು ತಮ್ಮ ಉತ್ತರದಲ್ಲಿ ಖಂಡಿಸಿ, ಶತ್ರುರಾಜ್ಯಗಳ ಈ ಪ್ರಸ್ತಾವದಲ್ಲಿರುವ ಠಕ್ಕು ವಿಧಾನಗಳನ್ನು ತೋರಿಸಿಕೊಟ್ಟು ನಿರರ್ಥಕವಾದ ಮತ್ತು ಕೃತಿಮತ್ವದ ಶತ್ರುಗಳ ಈ ಸಂಧಿ ಸೂಚನೆಗೆ ಮಿತ್ರರಾಜ್ಯಗಳವರು ಒಪ್ಪುವ. . . . . . ವರು ಬಲಾತ್ಕಾರದಿಂದ . . . . . . ಸ್ವಾತಂತ್ರ್ಯಗಳನ್ನು . . . . . . ಪ್ರತಿಫಲ ಕೊಡುವವರೆಗೆ ಸಂಧಿ ಇಲ್ಲ ಎಂಬುದಾಗಿ ಉತ್ತರ ಕೊಟ್ಟಿರುತ್ತಾರೆ.

ವಿದೇಶ ವೃತ್ತಾಂತ.

ಹೊಸ ವರ್ಷದ ದಿನ ಸಾರ್ವಭೌಮರವರು ಕೊಡುವ ಬಹುಮಾನಗಳು ಶೀಮೆಯಲ್ಲಿ ಈ ವರ್ಷ ಇದೇ ಜನವರಿ ತಿಂಗಳ ಮಧ್ಯಕಾಲ ಪ್ರಕಟಿಸಲ್ಪಡಲಾಗುವದು ಎಂತ ಪ್ರಕಟವಾಗಿದೆ. ಆದರೆ ಹಿಂದೂಸ್ಥಾನದಲ್ಲಿ ಈ ಬಹುಮಾನಗಳ ಪಟ್ಟಿಯು ಜನವರಿ ತಾ. ೧ರಲ್ಲಿಯೇ ಪ್ರಕಟವಾಗಿರುವದು.

ಫ್ರಾನ್ಸಿನ ಜನರಲ್ ಜೊಫ್ರೆಯ್ಯವರು ಫ್ರಾನ್ಸಿನ ಮಾರ್ಶಲರಾಗಿ ನೇಮಿಸಲ್ಪಟ್ಟಿರುತ್ತಾರೆ.

ಅಸ್ಟ್ರಿಯದಲ್ಲಿರುವ ಸರ್ವಿಯನರ ಸೆರೆಸಿಕ್ಕ ಸೇನಿಕರು ವಿಶೇಷ ಕಷ್ಟಪಡುತ್ತಿದ್ದಾರೆ. ಈ ಸೇನಿಕರು ಆಹಾರದ ಬಗ್ಗೆ ಮರದ ಬೇರುಗಳನ್ನು ಹುಡುಕುತ್ತಿದ್ದಾರೆ. ಅನೇಕರಾವರ್ತಿ ಬೇಡುತ್ತಿದ್ದಾರೆ. ಮನುಷ್ಯ ವರ್ಗದಲ್ಲಿ ಇಂಥಾ ಕಷ್ಟಕ್ಕೆ ಒಳಗಾಗಿರುವ ಜನರನ್ನು ತಾನು ಎಂದೂ ನೋಡಿಲ್ಲ ಎಂತ ಅಸ್ಟ್ರಿಯನರ ಸೆರೆಸಿಕ್ಕ ತಪ್ಪಿಸಿಕೊಂಡು ಬಂದ ಮನುಷ್ಯನರ ಒಬ್ಬ ಪಾದ್ರಿಯು ಹೇಳಿರುವನು.

ಫ್ರಾನ್ಸಿಗೆ ಮತ್ತು ಅಲ್ಜೀರಿಯಕ್ಕೆ "ಆಲ್ಕಹೋಲ್" ಮದ್ಯವನ್ನು ತರಿಸಿಕೊಳ್ಳಕೂಡದೆಂತ ಫ್ರಾನ್ಸ್ ಸರಕಾರದವರು ಆಜ್ಞಾಪಿಸಿರುತ್ತಾರೆ.

ಹಿಂದೂಸ್ಥಾನದ ವೃತ್ತಾಂತಗಳು.

ಸಿಂಧ್ ಪ್ರಾಂತ್ಯದಲ್ಲಿ ಚರ್ಮದ ಕ್ರಯವು ಫಕ್ಕನೇ ಬಿದ್ದು ಹೋಗಿರುತ್ತದೆ. ಆಗಿನ ಚರ್ಮ ೧ಕ್ಕೆ ರೂ. ೫—೮—೦ ಕ್ರಯವಿತ್ತು. ಈಗ ಒಂದು ಚರ್ಮಕ್ಕೆ ರೂಪಾಯಿ ೩—೦—೦ ಬೆಲೆ ಸಿಕ್ಕುವದೂ ಕಷ್ಟಸಾಧ್ಯವಾಗಿದೆ. ಸಾಹುಕಾರರು ಚರ್ಮಗಳನ್ನು ಪರವೂರಿಗೆ ಕಳುಹಿಸುವದನ್ನು ನಿಲ್ಲಿಸಿದ್ದೇ ಬೆಲೆ ಕಡಿಮೆಯಾಗಲು ಕಾರಣವಾಗಿರುವದು.

ಬರೋಡೆಯ ಮಹಾರಾಜರವರು ಮುಂಬಯಿಯ ಮಲಬಾರ್ ಹಿಲ್ಲಿನಲ್ಲಿರುವ ತನ್ನ ಅರಮನೆಯನ್ನು ಯುದ್ಧದಲ್ಲಿ ಗಾಯ ಬಿದ್ದವರ ಉಪಯೋಗಾರ್ಥವಾಗಿ ಇಂಡಿಯಾ ಸರಕಾರದವರ ಸ್ವಾಧೀನಕೊಟ್ಟಿರುತ್ತಾರೆ.

ಡಿಲ್ಲಿಯಲ್ಲಿ ಸ್ಥಾಪಿಸಬೇಕೆಂದಿರುವ ರಾಮ್‌ದಾಸ್ ಕಾಲೇಜಿಗೆ ಪಂಜಾಬ್ ಪ್ರೊವಿನ್ಶಿಯಲ್ ಸಿವಿಲ್ ಸರ್ವಿಸಿನ ರಿಟಾಯರ್ಡ್ ಮೆಂಬರರಾದ ರಾಯಿಸಾಹೇಬ್ ಕೆದರ್‌ನಾಥರವರು ರೂ. ೬೦,೦೦೦ ಕ್ರಯ ಬಾಳುವ ತನ್ನ ಎಲ್ಲಾ ಆಸ್ತಿಯನ್ನು ದಾನ ಮಾಡಿರುತ್ತಾರೆ.

ರುಶ್ಯಾ ದೇಶದ ವ್ಯಾಪಾರ ಮಾಹಿತಿಯನ್ನು ಪಡೆಯುವ ಬಗ್ಗೆ ಹಿಂದೂಸ್ಥಾನದಿಂದ ಪೆಟ್ರೋಗ್ರೇಡಿಗೆ ಹೋಗಿದ್ದ ಮಿ। ಚೆಟ್ವಿಕ್ ಐ. ಸಿ. ಎಸ್. ಮತ್ತು ಮದ್ರಾಸ್ ಬೇಂಕಿನ ಮಿ। ಬ್ಲೇಕ್‌ರವರು ರುಶ್ಯದಲ್ಲಿ ತಮ್ಮ ಕೆಲಸಗಳನ್ನು ತೀರಿಸಿ ಈ ಸಂಬಂಧವಾದ ವರದಿಯನ್ನು ಪೂರೈಸುವರೆ ಇಂಗ್ಲಾಂಡಿಗೆ ಹಿಂತಿರುಗುವರು. ಫ್ರಾನ್ಸಿನಲ್ಲಿಯೂ ವ್ಯಾಪಾರ ಸಂಬಂಧವಾದ ಮಾಹಿತಿಯನ್ನು ಪಡೆಯುವ ಬಗ್ಗೆ ಕೆಲವರನ್ನು ಅಲ್ಲಿಗೆ ಕಳುಹಿಸಿಕೊಡುವ ಏರ್ಪಾಡು ನಡೆಯುತ್ತಿದೆ.

ಪತ್ರವ್ಯವಹಾರ.

ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ.

ಅಯ್ಯಾ ಪತ್ರಕರ್ತರೇ,

ಬಡವನಾದ ನನ್ನ ಈ ಕೆಳಗೆ ಬರೆಯುವ ಪತ್ರವನ್ನು ನಿಮ್ಮ ಪತ್ರಿಕೆಯಲ್ಲಿ ಒಂದಿಷ್ಟು ಎಡೆಕೊಡುವಿರಾಗಿ ನಂಬಿ, ಬಹು ಉಪಕಾರಸ್ಮರಣೆ ಮಾಡುತ್ತೇನೆ. ದೇಶೋನ್ನತಿಗೆ ಆವಶ್ಯವಾದುದು ದರಿದ್ರರ ಸಂಕಷ್ಟಗಳನ್ನು ಹೋಗಲಾಡಿಸುವುದೇ ಹೊರತು ಬಡಬಗ್ಗರ ಹೊಟ್ಟೆ ಹೊಡೆದು ತಮ್ಮ ಉದರವನ್ನು ಪೋಷಣೆಗೈಯುತ್ತಿರುವದು ಯಾವ ಹೊಗಳಿಕೆಗೊಳಪಟ್ಟೀತು. ಇಂಥಾ ಉದ್ದೇಶವನ್ನು ಪೂರೈಸುವ ಅರಿವಿಲ್ಲದ ವೃತ್ತಿಯನ್ನು ಆದರಿಸಿಕೊಳ್ಳುವ ಪುರುಷನಿಗೆ ಎಷ್ಟರ ಹೊಗಳಿಕೆ ಇರಬಹುದು ಎಂಬುದನ್ನು ವಾಚಕ ಮಹಾಶಯರೇ ಊಹಿಸಿ ತಿಳಕೊಳ್ಳಿರಿ.

ಕಲ್ಲಿಕೋಟೆಯ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿಯು (ಲಿಮಿಟೆಡ್) ವ್ಯಾಲ್ಯೂಗಳನ್ನು ಬಡ ಪಾಲಿಸಿ ಹೋಲ್ಡರರ ಹಣ [illegible] ಮಾಡಿ ಕೊಂಡಿರಲಿಕ್ಕೆ ಯಾವ ಕಾರಣ ಇರುತ್ತದೆಂಬುದು ಸದ್ಯ ಪಾಲಿಸಿ ಹೋಲ್ಡರುಗಳಿಗೆ ತಿಳಿಯದು. ಸದರಿ ಕಂಪೆನಿಯ ಚೀಫ್ ಏಜಂಟರುಗಳು ಸರ್ವ ಪ್ರಯತ್ನಗಳನ್ನು ಮಾಡಿಕೊಂಡು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹು ಮಂದಿಯನ್ನು ಈ ಕಂಪೆನಿಗೆ ಹಣ ಕಟ್ಟುವವರನ್ನಾಗಿ ಮಾಡಿದ್ದು ಇಂದು ಬರುತ್ತದೆ ಹೊರತು ಹೀಗೆ ಸೇರಿಸಿದವರಿಗೆಲ್ಲ ಮುಂದೆ ಕಂಪೆನಿಯಿಂದ ಬೋನಸ್ ಎಂಬ ಹಣ ಸಿಕ್ಕುವುದೆಂದೂ ಇನ್ನು ಎಷ್ಟು ಮುಂದೆ ಹಣ ಸಿಗದೆ 'ಬಾಕಿ' ಎಂಬ [illegible] ತಿದ್ದುತ್ತದೆಂದೂ ಸದರಿ ಕಂಪೆನಿಯ ಚೀಫ್ ಏಜಂಟರುಗಳು ಬಹು ಉಪಕಾರವಾಗುತ್ತಿತ್ತು.

ಇಂಥಾ ಕಂಪೆನಿಗಳ ಮರುತೆಯ ಕಾಣುವ ಫಂಡಿಗೂ ಸೇರಲಿಕ್ಕಿರುವವರೂ, ಕಂಪೆನಿಗೆ ಈ ಮೊದಲು ಕಟ್ಟುತ್ತಾ ಬರುವವರೂ ನನ್ನ ಈ ಪತ್ರವನ್ನಾದರೂ ಓದುವುಗಳು ಕಂಪೆನಿಗೆ ಕಟ್ಟುವ ಹಣವು ಹಿಂದೆ ಸಿಕ್ಕುವದೋ ವಿಷಯ ಸ್ವಲ್ಪ ಹೊತ್ತು ಆಲೋಚನೆ ಮಾಡಿಕೊಂಡರೆ ಹೆಚ್ಚು ದೊರಕಲಾರದೆ ಇರದು.

ಇಂತಿ ತಮ್ಮ ವಿಧೇಯ
ಮಂಗಳೂರು, ತಾ. 2—1—1917. } ಕಲ್ಲೊಬ್ಬ.

ಬಾತಮಿಗಳು

ಬಂಟರ ಯಾನೆ ನಾಡವರ ವಾರ್ಷಿಕ ಮಹಾಸಭೆ

ಇದೇ ಜನವರಿ ತಾ. ೧ರಲ್ಲು ಕಾಸರಗೋಡಿಯಲ್ಲಿ ಈ ಮಹಾಸಭೆಯು ಬಹಳ ವಿಜೃಂಭಣೆಯಿಂದ ಜರಗಿತು. ಊರುಗಳಿಂದಲೂ ಪ್ರಮುಖ ವರ್ಗದಾರರು ಹಲವರು ಬಂದು ಸಭೆಯಲ್ಲಿ ಸುಮಾರು ಸಾವಿರದ ಸ್ವಜಾತಿ ಗ್ರಹಸ್ಥರು ನೆರೆದಿದ್ದರು. ಉಡುಪಿ ಮುನ್ಸೀಫರಾದ ಮ। ರಾ। ಕುಂಬ್ಳೆ ರಾಮಣ್ಣಯರವರೂ ತಹಸೀಲ್‌ದಾರರಾದ ಮ। ರಾ। ಅನಂತನಾಯರವರು ಬಂದು ಸಭೆಯನ್ನು ಅಲಂಕರಿಸಿದ್ದರು. ಸಭಾರಂಭದಲ್ಲಿ ಸ್ವಾಗತ ಕಮಿಟಿ ಅಧ್ಯಕ್ಷರಾದ ರಾ। ಇಚ್ಲಂಪಾಡಿ ಕೋಟ್ಯಣ್ಣಾಳ್ವರ ಭಾಷಣ ಪತ್ರವನ್ನು ಓದಿ ಸಂಘದ ಸ್ಥಾಪಕರಲ್ಲೊಬ್ಬರಾದ ಮ। ರಾ। ಬೈಂದೂರು ಎಡ್ಡಿ ಸೆಟ್ರನ್ನು ಅಧ್ಯಕ್ಷರಾಗಿ ಆರಿಸಲಾಯಿತು. ಸಭೆಯು ಶ್ರೇಯ ಬಯಸಿ ಕಳುಹಿಸಿದ ಮುಂಬಾಯಿ, ಮದ್ರಾಸು ಮುಂತಾದ ಸ್ಥಳಗಳ ಗ್ರಹಸ್ಥರು ಬರೆದಿದ್ದ ತಂತಿ ಮತ್ತು ಕಾಗದಗಳನ್ನು ಓದಿದರು. ಬ್ರಿಟಿಷ್ ರಾಜರಿಗೆ ಯುದ್ಧದಲ್ಲಿ ಜಯವಾಗಲೆಂದು ಸಭೆಯ ಇಚ್ಛೆಯನ್ನು ಮದ್ರಾಸ್ ಗವರ್ನರ್ ದೊರೆಗಳವರಿಗೆ ತಿಳಿಸಬೇಕಾಗಿ ನಿಶ್ಚಯಿಸಲಾಯಿತು. ಸಂಘದ ವಾರ್ಷಿಕ ವರದಿಯನ್ನು ಕಾರ್ಯದರ್ಶಿಯವರು ಓದಿದರು. ಅಳಿಕ್ಕೆ ಉಂಞಾಕ್ಕೆ ಸೆಟ್ಟಿಯರು ವಿದ್ಯಾರ್ಥಿವೇತನದ ೭ ಸ್ಥಿರ ಜಮಾಬ್ದಾರಿಯಿಂದ ವರ್ಷ ಒಂದಕ್ಕೆ ರೂಪಾಯಿ ೪೮ ಕೊಟ್ಟಕಾರಣ, ವಿದ್ಯಾರ್ಥಿಭವನದ ಸಭಾಸದನ ಕಟ್ಟಿಸುವ ಉದ್ದಿಶ್ಯ ಸಭೆಯು ಈ ಮೊದಲೇ ವಾಗ್ದಾನ ಮಾಡಿದ ರೂಪಾಯಿ ೩೦೦೦ ಕ್ಷೇತ್ರಪಾಲರ ಮನೆಕಡೆ ಶ್ರೀಮತಿ ಲಕ್ಷ್ಮಿ ಸೆಟ್ಟಿಯರು ಸುಮಾರು ರೂಪಾಯಿ ೧೧೦೦ ಕ್ರಯದ ಜಾಗೆ ಬಹುದಾದ ಸಭಾಸದನದ ಎದುರಿನ ಜಾಗೆ, ಕಿಟಕಿಗಳು ಮತ್ತು ಮೆಟ್ಟುಗಳನ್ನು ಕಟ್ಟಿಸುತ್ತಿದ್ದಾರೆಂತಲೂ, ಮ। ರಾ। [illegible] ರಾಳ್ವರು ರೂಪಾಯಿ ೧೫೦ ಕ್ರಯಬಾಳುವ ಮರ [illegible]ಗಳನ್ನೂ, ಮ। ರಾ। ಸಾಹುಕಾರ್ ಹೊನ್ನೆಗೆ ಬಜಾರ್ ಕೊರಗಪ್ಪನವರು ರೂಪಾಯಿ ೩೯—೯ ಕ್ರಯದ ಕಿಟಕಿ ಸರಳುಗಳನ್ನು ಸಭಾಸದನದ ಬಗ್ಗೆ ಕೊಟ್ಟಿರುತ್ತಾರೆಂದೂ ವರದಿಯಿಂದ ತಿಳಿದು ಬಂತು. ಬಂಟರ ಬಡ ವಿದ್ಯಾಸಹಾಯ ಫಂಡಿಗೆ ವರ್ಷಂಪ್ರತಿ ಕೊಡುವುದಾಗಿ ವಾಗ್ದಾನ ಮಾಡಿದ ಮೊಬಲಗು ರೂಪಾಯಿ ೬೬೭—೧೨—೦ ರಲ್ಲಿ ರೂಪಾಯಿ ೪೫೦—೭ ವಸೂಲು ಆಗಿರುವುದೆಂದೂ, ಈ ಪೈಕಿ ರೂಪಾಯಿ ೩೦೭—೯ ಒಂಭತ್ತು ವಿದ್ಯಾರ್ಥಿಗಳಿಗೆ ಈ ವರೆಗೆ ಸಹಾಯಾರ್ಥವಾಗಿ ಕೊಡುವುದೆಂದೂ, ಕಳೆದ ವರ್ಷ ಸಂಘಕ್ಕೆ ರೂಪಾಯಿ ೩೦೪೯—೮—೭ ವಸೂಲು ಆಗಿರುವುದಾಗಿಯೂ, ರೂಪಾಯಿ ೧೦೯೭—೧೩—೧೧ ಖರ್ಚಾಗಿರುವುದಾಗಿಯೂ, ಈಗ ಒಟ್ಟಿಗೆ ರೂಪಾಯಿ ೩೫೩೩—೧೩ ಸಿಲ್ಕು ಜಮೆಯಲ್ಲಿರುವುದಾಗಿಯೂ ವರದಿಯಿಂದ ವ್ಯಕ್ತವಾಯಿತು.

ಸಭೆಯಲ್ಲಿ ವಸೂಲಾದ ಬಿನೇಜಿನ ವಿವರ.

ಕುಂದಾಪುರ ತಾಲೂಕಿನವರಿಂದ		ರೂಪಾಯಿ	೨—೦—೦
ಉಡುಪಿ	,,	,,	೧—೦—೦
ಕಾರ್ಕಳ	,,	,,	೩—೦—೦
ಮಂಗಳೂರು	,,	,,	೯—೦—೦
ಉಪ್ಪಿನಂಗಡಿ	,,	,,	೧—೦—೦
ಕಾಸರಗೋಡು	,,	,,	೯—೪—೦
ಮಡಿಕೇರಿಯಿಂದ	,,	,,	೨—೦—೦
		ಜುಮ್ಲಾ ರೂ.	೨೮—೪—೦

ಅಲ್ಲದೆ ಮುಂಬಾಯಿ ಪೂಲ್ ಕಂಪೆನಿಯ ಮ್ಯಾನೇಜರಾದ ಮ। ರಾ। ಡಾಕ್ಟರ್ ನಾಯರ್‌ರವರು ವಿದ್ಯಾರ್ಥಿವೇತನದ ಬಗ್ಗೆ ರೂಪಾಯಿ ೫೦ ಕಳುಹಿಸಿದ್ದರು. ಸಭಾಧ್ಯಕ್ಷರಾದ ಮ। ರಾ। ಎಡ್ಡಿ ಸೆಟ್ಟರು ಜಾತಿ ವರ್ಗದಾರರು ತಾವು ಕೊಡುವ ತೀರ್ವೆ ಬಿನೇಜಿನ ೩ ರೂಪಾಯಿ ಒಂದಕ್ಕೆ ೩ ಪೈಗಳಂತ ವರ್ಷಂಪ್ರತಿ ಸಂಘಕ್ಕೆ ಸಹಾಯ ಮಾಡಿದರಾಗ ಬಹುದಾಗಿ ಸೂಚಿಸಿದ್ದಲ್ಲದೆ ಅವರ ಬಾಬ್ತು ಆ ಪ್ರಕಾರ ೭ನ ರೂಪಾಯಿ ೧೦೦ರಲ್ಲಿ ರೂಪಾಯಿ ೭೫ ಸಂಘಕ್ಕೂ ರೂಪಾಯಿ ೨೫ರ ವಿದ್ಯಾರ್ಥಿ ಸಹಾಯ ಫಂಡಿಗೂ ಸ್ಥಿರಾಸ್ತಿ ಜಮಾಬ್ದಾರಿ ಮೇಲೆ ವರ್ಷಂಪ್ರತಿ ಕೊಡುತ್ತಾ ಬರುವುದಾಗಿ ವಾಗ್ದಾನ ಮಾಡಿದರು. ಆಯಾಯ ತಾಲೂಕುಗಳಲ್ಲಿ ಇನ್ನು ಮುಂದೆ ವಸೂಲಾಗಬಹುದಾದ ಬಿನೇಜಿನಲ್ಲಿ ಕೇಳದ ಅರಂತೆ ಅಲ್ಲಲ್ಲಿ ಉಪಭವನಗಳನ್ನು ಕಟ್ಟಿಸುವ ಉದ್ದಿಶ್ಯ ವಿನಿಯೋಗಿಸಬೇಕಾಗಿ ನಿರ್ಧರಿಸಲಾಯಿತು. ಮುಂದಿನ ಸಭೆಯು ಉಡುಪಿ ತಾಲೂಕಿನವರ ಅಪೇಕ್ಷೆ ಪ್ರಕಾರ ಅಲ್ಲಿ ಸೇರುವುದಾಗಿ ನಿಶ್ಚಯಿಸಲಾಯಿತು. ಅಧ್ಯಕ್ಷರು [illegible] ಭಾಷಣ ಕೊಟ್ಟನಂತರ ಅವರಿಗೂ ನೆರೆದ ಸಭಿಕರಿಗೂ ಧನ್ಯವಾದವನ್ನು ಸ್ವಾಗತ ಕಮಿಟಿಯವರ ಕಡೆಯಿಂದ ಮ। ರಾ। [illegible] [illegible] [illegible] [illegible] ಸಭೆಯನ್ನು ಮುಂದಗೊಳಿಸುವ [illegible] [illegible] ಸಭೆಯು ಯಾವ [illegible] [illegible] [illegible] [illegible] [illegible] [illegible] [illegible] [illegible] ಸಭೆಯು ಮುಕ್ತಾಯವಾಯಿತು.

ವಿದ್ಯಾರ್ಥಿಗಳಿಂದ ಸ್ಥಾಪಿಸಲ್ಪಡಲಾದ ಬಡ ವಿದ್ಯಾರ್ಥಿಗಳ ಸಹಾಯ ಫಂಡಿಗೆ ರೂಪಾಯಿ ೬೦ ನೆರೆದ ಸಭಿಕರಲ್ಲಿ ಕೆಲವರು ಸಹಾಯ ಮಾಡಿರುತ್ತಾರೆ.

ಹಾಜರಿದ್ದ ಮೆಂಬರರಲ್ಲೊಬ್ಬ.

ಪೋಳ್ಯದ ವಿದ್ಯಾವರ್ಧಕ ಸಭೆ.

ಕಳೆದ ದಶಂಬರ ತಾ. ೨೮ನೆಯ ಗುರುವಾರ ಪುತ್ತೂರ ಸಮೀಪದ ಪೋಳ್ಯಛತ್ರದಲ್ಲಿ ಮ। ರಾ। ಪಂಜಿಗುಡ್ಡೆ ಅಪ್ಪಣ್ಣ ಭಟ್ಟರ ಉದಾರಾಶ್ರಯದಿಂದ ದ್ರಾವಿಡ ಹವ್ಯಕಬ್ರಾಹ್ಮಣರ ವಿದ್ಯಾವರ್ಧಕ ಸಭೆಯ ದ್ವಿತೀಯ ವಾರ್ಷಿಕ ವರ್ಧಂತಿಯು ನೆರವೇರಿತು. ೨। ಗಂಟೆಗೆ ಸಭಾಕಾರ್ಯವು ಪ್ರಾರಂಭವಾಯಿತು. ಮಂಗಳೂರು ಮಿಶ್ಯನ್ ಹೈಸ್ಕೂಲ್ ಸಂಸ್ಕೃತ ಪಂಡಿತ ವೇ। ಮೂ। ಓಡ್ಲಮನೆ ಅಣ್ಣಾರಾಯ ಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಮಡಿಕೇರಿಯಿಂದ ಮ। ರಾ। ಸಿ. ಎನ್. ವೆಂಕಪ್ಪಯ್ಯ ಬಿ. ಎ. ಬಿ. ಎಲ್. ಇವರೂ, ಮಂಗಳೂರಿನಿಂದ ಕೆನರಾ ಹೈಸ್ಕೂಲ್ ಉಪಾಧ್ಯಾಯರು ಎ. ಭೋಜರಾಯರೂ, ಮಿಶ್ಯನ್ ಹೈಸ್ಕೂಲ್ ಕನ್ನಡ ಪಂಡಿತ, ಎಮ್. ಶಿವರಾಮಯ್ಯನವರೂ, ಪುತ್ತೂರಿಂದ ಮ। ರಾ। ರಾವ್ ಬಹದ್ದೂರ್ ಎಮ್. ರಘುನಾಥರಾಯರು, ಎಮ್. ಶಿವರಾಯರು ಮೊದಲಾದವರೂ ಮ। ರಾ। ಕೀಲಾರು ರಾಮಚಂದ್ರಯ್ಯನವರೂ, ಪೆರ್ಡಾಲು ಮಹಾಜನ ಸಂಸ್ಕೃತ ಪಾಠಶಾಲಾ ಮನೇಜರ್, ಮಂಡಿಗೆ ಈಶ್ವರ ಭಟ್ಟರು, ಅಲ್ಲಿಯ ಪ್ರಧಾನೋಪಾಧ್ಯಾಯರು, ಕೆ. ಪರಮೇಶ್ವರ ಶಾಸ್ತ್ರಿಗಳು, ದುಪೋಪಾಧ್ಯಾಯರು, ಮಾಣಿಪ್ಪಾಡಿ ಭೀಮಭಟ್ಟರು, ಕಟ್ಟಂಪಾಡಿ ಸುಬ್ಬರಾಯರು ಮೊದಲಾದವರು ದಯಮಾಡಿಸಿದ್ದರು. ಮಂಗಳಾಚರಣೆಯೊಡನೆ ಸಭಾಕಾರ್ಯವು ಪ್ರಾರಂಭವಾಗಿ ಗತವರ್ಷದ ಸಭಾ ವೃತ್ತಾಂತವು ಪ್ರೊ। ಕಾರ್ಯದರ್ಶಿ ಬಿ. ನಾರಾಯಣಭಟ್ಟರಿಂದ ಓದಲ್ಪಟ್ಟಿತು. ಧಾರ್ಮಿಕ ವಿಷಯವಾಗಿ ಕೆ. ಪರಮೇಶ್ವರ ಶಾಸ್ತ್ರಿಗಳೂ, ಬಿತಿಜ ರಾಮಜೋಯಿಸರೂ, ಸ್ವಾರ್ಥತ್ಯಾಗದ ವಿಷಯವಾಗಿ ಎಮ್. ಶಿವರಾಮಯ್ಯನವರೂ, ಧೃಢನಿಶ್ಚಯದ ಕಾರ್ಯದ ಬೆಳವಣಿಗೆಯ ವಿಷಯವಾಗಿ ಎ. ಭೋಜರಾಯರೂ ಚೆನ್ನಾಗಿ ಉಪನ್ಯಾಸಮಾಡಿದರು. ಆಮೇಲೆ ಸಿ. ಎನ್. ವೆಂಕಪ್ಪಯ್ಯನವರು ಈ ವರ್ಷದ ರಿಪೋರ್ಟಿನಲ್ಲಿ ತೋರುವಂತೆ ಸಭೆಯಲ್ಲಿ ಐನೂರು ಚಿಲ್ಲರೆ ರೂಪಾಯಿಗಳು ಇರುವಂತೆ ತೋರುವುದಲ್ಲದೆ ಅದರಿಂದ ಯಾವದೊಂದು ಸಂಸ್ಥೆಯೂ ನೆಲೆಗೊಳ್ಳಲಿಲ್ಲ. ಪ್ರಕೃತ ಪುತ್ತೂರಲ್ಲಿಯ ಸೆಕೆಂಡರಿಸ್ಕೂಲಿನ ಹವ್ಯಕ ವಿದ್ಯಾರ್ಥಿಗಳ ಬಗ್ಗೆ ಈ ವಿದ್ಯಾವರ್ಧಕ ಸಭೆಯ ಹೆಸರಿನಿಂದಲೆ ಒಂದು ಹೋಸ್ಟೆಲನ್ನು ಕಟ್ಟಿಸಿದರೆ ತುಂಬಾ ಅನುಕೂಲವೆಂದು ಹೇಳಿದರು. ರಾವ್ ಬಹದ್ದೂರ್ ಎಮ್. ರಘುನಾಥರಾಯರೂ ಅದನ್ನು ಆದರಿಸಿ ಚೆಲುವಾಗಿ ಉಪನ್ಯಾಸ ಮಾಡಿದರು. ಆದರೆ ಉಪ್ಪಿನಂಗಡಿ ತಾಲೂಕಿನವರು ಏಮಾತ್ರ ಈ ಹೋಸ್ಟೆಲಿನ ಪ್ರಯೋಜನವನ್ನು ಪಡೆಯಲಿಕ್ಕಿರುವುದರಿಂದ ಆ ಹೋಸ್ಟೆಲಿನ ಸ್ಥಾಪನೆ ಅವರ ಪಾಲಿಗೆ ಮಾತ್ರವಿರುವುದಲ್ಲದೆ ಹವ್ಯಕರ ಸಾರ್ವಜನಿಕವಾದ ವಿದ್ಯಾವರ್ಧಕ ಸಭೆಗೆ ಸಂಬಂಧಿಸಿಲ್ಲವೆಂದೂ ಪ್ರಕೃತ ಇಡೀ ಹವ್ಯಕರು ಒಡಗೂಡಿ ಪ್ರಯತ್ನಿಸಿ ತಾವು ಹವ್ಯಕರೆಲ್ಲರಿಗೂ ಸಂಬಂಧಿಸುವ ಕರ್ತವ್ಯಗಳಲ್ಲಿ ಕೈಹಾಕಬೇಕೆಂದು ಇತರರೂ ವಾದಿಸಿದರು. ಮ। ರಾ। ಎಮ್. ಶಿವರಾಯರು ಅದನ್ನು ಆದರಿಸಿ ಹವ್ಯಕರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ರಿಜಿಸ್ಟರ್ ಮಾಡಿ ಮುಂದುವರಿಯಬೇಕೆಂದು ಸದಭಿಪ್ರಾಯವನ್ನು ಸೂಚಿಸಿದರು. ತದನಂತರ ಅಧ್ಯಕ್ಷರು ಕಳೆದ ವರ್ಷಕ್ಕಿಂತ ಈ ವರ್ಷ ಸಭೆ ಅಭಿವೃದ್ಧಿಹೊಂದಿದ್ದಕ್ಕೆ ತೃಪ್ತರಾಗಿ ಎಲ್ಲಾ ವಿಷಯಗಳನ್ನು ವಿಮರ್ಶಿಸಿ ಈ ಸಭೆ ಇನ್ನೂ ಐಕ್ಯವಾಗುವವರೆಗೆ ಚೇರಿ ಇದ್ದು ಕೆಲಸಮಾಡಿದರೆ ಫಲಕಾರಿಯಾದೀತೆಂದು ಸರಸವಾಗಿ ಅಪ್ಪಣೆಕೊಡಿಸಿದರು. ಗೋಮುಲೆ ಪ್ರೈಸು ಕೆ. ಗಣಪತಿಭಟ್ಟ ಎಂಬ ವಿದ್ಯಾರ್ಥಿಗೆ ಕೊಡಲ್ಪಟ್ಟು ರಾಜರಿಗೆ ಪ್ರಕೃತ ಯುದ್ಧದಲ್ಲಿ ಜಯವಾಗಲೆಂಬ ಜಯಘೋಷದೊಡನೆ ಸಭೆಯು ಅಂತ್ಯವಾಗಿ ಕಾಫಿ ತಿಂಡಿಗಳಿಂದ ಸಭಿಕರು ಆನಂದಹೊಂದಿದರು. ತದನಂತರ ಮ। ರಾ। ಎಚ್. ಕೃಷ್ಣಮೂರ್ತಿಯವರ ಸರಸವಾದ ಸಂಗೀತದಿಂದ ಜನರು ಆನಂದ ಹೊಂದಿದರು. ಆಮೇಲೆ ಸಿ. ಎನ್. ವೆಂಕಪ್ಪಯ್ಯನವರ ಅಧ್ಯಕ್ಷತೆಯಿಂದ ಇನ್ನೊಂದು ಸಭೆಯಾಗಿ ದಕ್ಷಿಣ ಕನ್ನಡ ಹವ್ಯಕ ಬ್ರಾಹ್ಮಣರ ವಿದ್ಯಾವರ್ಧಕ ಸಂಘವು ಸ್ಥಾಪಿತವಾಗಿ ರಿಜಿಸ್ಟರ್ ಆಗಲಿಕ್ಕೆ ಕೆಲವು ಮೆಂಬರರನ್ನು ಆರಿಸಿ ಆ ಮೆಂಬರರನ್ನು ಬರೆಸಿ, ಸಭೆಗೂಡಿಸಲಿಕ್ಕೆ ಪಿ. ಮರಿಯಪ್ಪಭಟ್ಟರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಿ ಸಭೆ ಕೊನೆಗೊಂಡಿತು.

ನೋಟೀಸು.

ಆಕ್ಕಿಧಾರಣೆ ಏರಿದ ಸಂಬಂಧ ಉಂಟಾದ ಸಂಕಟ ನಿವೃತ್ತಿ ಬಗ್ಗೆ ಈ ಪಟ್ಟಣದ ನಿವಾಸಿಗಳು ಸಭೆಕೂಡಿ ಚಂದಾ ಎತ್ತಿದ ರೂ. ೧೮೩೪—೦—೦ರಿಂದ ೪೫ ದಿವಸಗಳವರೆಗೆ ಕಮ್ಮಿ ಧಾರಣೆಯಿಂದ ಬಡಬಗ್ಗರಿಗೆ ಅಕ್ಕಿಯನ್ನು ಹಂಚಿದ್ದರಿಂದ ಖರ್ಚಿನ ರೂ. ೧೩೧೮—೦—೨ ಕಳೆದು ಬಾಕಿ ಉಳಿದ ರೂ. ೨೦೫—೧೫—೧೦ಯನ್ನು ಇದೇ ೧೯೧೭ನೇ ಇಸವಿ ಜನವರಿ ತಿಂಗಳಲ್ಲಿ ಈ ಊರ, ಬಡಬಗ್ಗರಿಗೆ ಹಂಚಬೇಕಾಗಿ ಸಬ್ ಕಮಿಟಿಯವರು ನಿರ್ಣಯಿಸಿದ ಪ್ರಕಾರ ಇದೇ ಜನವರಿ ತಾ. ೭ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೪ಕ್ಕೆ ಸದರಿ ಹಣವನ್ನು ಕೊಸ್ಮೊಪೊಲಿಟನ್ ಕ್ಲಬ್ಬಿನ ತೋಟದಲ್ಲಿ ಹುಜೂರತ್ ಜಿಲ್ಲಾ ಕಲೆಕ್ಟರವರ ದೊರೆಸಾನಿಯವರು ಅಗ್ರಸ್ಥಾನವನ್ನು ವಹಿಸಿ ಬಡಬಗ್ಗರಿಗೆ ಹಂಚಬೇಕಾಗಿ ಅಪೇಕ್ಷಿಸಿದ್ದಕ್ಕೆ ಸದರಿ ದೊರೆಸಾನಿಯವರು ಅನುಮತಿ ದಯಪಾಲಿಸಿದ್ದರಿಂದ ಆ ದಿನ ಅವರಿಂದ ಅದು ಹಂಚೋಣಾದೀತು. ಸದರಿ ಫಂಡಿಗೆ ವಂತಿಗೆ ಕೊಟ್ಟ ಚಂದಾದಾರರೂ ಸಬ್ ಕಮಿಟಿಯವರು ಕೂಡಾ ಆ ಸಮಯ ದಯಮಾಡಿ ಹಾಜರಿದ್ದು ಸದರಿ ಕಾರ್ಯವನ್ನು ಚಂದಗೊಳಿಸಬೇಕಾಗಿ ಈ ಮೂಲಕ ಅಪೇಕ್ಷೆ ಮಾಡಲಾಗುತ್ತದೆ.

ಮಂಗಳೂರು, ತಾ. 6—1—1917. } S. Nagappa Nayak, [illegible]

ಸಿದ್ಧೌಷಧ!] [ಪರೀಕ್ಷಿಸಿ ನೋಡಿರಿ!!!

ಇಕ್ಲಿಪ್ಸ್ ಡ್ರೊಪ್ಸ್!

ಇಕ್ಲಿಪ್ಸ್‌ಡ್ರೊಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆಕಸಾರಿಕೆಗಳಿಗೆ ಕೈ ಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡೆ, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ಸೀವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯಾ ಜ್ವರ ಮಣಿಯುವವು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ. ಸೀಸೆ 1ಕ್ಕೆ ಕ್ರಯ ರೂ. 0—6—0. ವಿ. ಪಿ. ಬೇರೆ.

"ಸಮಯಕ್ಕೆ ಒದಗಿದವನೇ ಮಿತ್ರ"ನೆಂಬುದು

ನಮ್ಮ

ಇಕ್ಲಿಪ್ಸ್ ಬಾಮ್

ಪ್ರಯೋಗಿಸಿ ನೋಡಿದವರೆಲ್ಲರಿಗೂ ಖಾತ್ರಿಯಾಗಿದೆ. ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುಳುಕು, ತುರಿಕಜ್ಜಿ, ಮೂಲವ್ಯಾಧಿ, ಬೆಂಕಿಯಬೊಕ್ಕೆ, ಮೊಡವೆ, ಚೇಳು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕಳಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ. 1 ಡಜನ್ ಕಂಡಿಗಗಳಿಗೆ ವಿ. ಪಿ. ಸಹಿತ ರೂ. 4—12—0.

ತಾಜಾ ಯುಕಲಿಪ್ಟಸ್ ತೈಲ ೯ ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಬಿ. ನರಸಿಂಗರಾವ್, ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು; ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುತ್ತಿದ್ದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮಗ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,
Avenue Road, ವೇದಪಾಠಶಾಲಾ,
BANGALORE CITY. [illegible]

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ್ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಬಿಜಾದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೇವೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್‌ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಕ್ಮಲಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸೆರಗೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತವೆ. ಇದು ಉಡುವುದಕ್ಕೆ ಧಮೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವದು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

100 ರೂಪಾಯಿಗಳ ಬಹುಮಾನ.

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿಮಾಡಲ್ಪಟ್ಟಿರುವ

ಸರ್ವ ಚೇಳು ವಿಷಸಂಜೀವಿನಿ

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳಿನ ಹೊಡೆತಕ್ಕೆ ಸಿಲುಕಿದ ಕೂಡಲೆ ಉರಿಯನ್ನೂ ಚಳುಕನ್ನೂ ಪರಿಹಾರ ಮಾಡಿಕೊಳ್ಳಲು ತಕ್ಕ ಔಷಧವು ಇಲ್ಲದೆ ಚೇಳಿನ ಹೊಡೆತದಿಂದ ಕಷ್ಟಪಡುತ್ತಿರುವವರನ್ನು ನೋಡಿ ನಾವು ಬಹಳ ಪ್ರಯಾಸದಿಂದ ಈ ಔಷಧವನ್ನು ತಯಾರಿಸಿರುತ್ತೇವೆ. ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳು ವಿಷಸಂಜೀವಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗುವಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ನಮ್ಮ ಔಷಧವನ್ನು ವಾಪಸುಮಾಡಿ ತಮ್ಮ ನಾಣ್ಯಗಳನ್ನು ವಾಪಸು ಪಡೆಯುವದಲ್ಲದೆ ಮೇಲ್ಕಂಡ ಬಹುಮಾನಕ್ಕೂ ಬಾಧ್ಯರಾಗಿರುತ್ತಾರೆ. ಕ್ರಯ ಶೀಸೆ 1ಕ್ಕೆ ಆ. 8; ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪ್ರಾಣ್ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಜಾತು ಬರುವುದು, ಉಳುಕು, ಕುರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಕಡು ಕಮಿಶನ್ ದೊರಕಲಾರದೇನು.. ಏಜಂಟರು ಬೇಕಾಗಿದ್ದಾರೆ.

ಇವೇ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:—

ಎಸ್. ಪಿ. ಧಾಬಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯ ತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆವ ಕಾಗದವನ್ನು ವಿಳಾಸವನ್ನು (ಮಾತ್ರ) ಇಂಗ್ಲೀಷಿನಲ್ಲಿ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**
Fergusson Road, BOMBAY.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರರ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗೆಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ಮ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಕಂಪನ್‌ಕಟ್ಟೆ ಶೋಪುಗಳಲ್ಲಿ ದೊರಕುವವು.	STANY BROTHERS Sole Agents C. M. C's. Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡವಾಗದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0-14-0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1-10-0. ಟಪ್ಪಾಲ್‌ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂಶ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣಕೊಡುವದು. ಬಾಟಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ರೋಗಗಳನ್ನೂ ಖಂಡಿತವಾಗಿಯೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ನೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಜೀರ್ಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸಿಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಖ್ಯಸೆ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ಹಸ್ತಮೈಥುನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಕ್ಸ್ ೬ ಆಣೆ. ೩ ಬಾಕ್ಸಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸಪ್ತೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಖರ್ಚು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ, ವೆಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists*, Vepery Post, MADARS.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜೆ. ಎ. ಡಿ'ಸೋಜರು ಬರಿಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡ ತರಿಸಿದ್ದು 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರಿಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾಶ್ಯಾವಾಡನ ವಿಠಲ್‌ನಿಂದ ಮ. ಜಿ. ರಸ್ಕಿಣರು ಬರಿಯುತ್ತಾರೆ:—ಒಂದು ವರುಷದ ಲಾಗಾಯಿತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೋನಿಕ್‌ಗಳನ್ನೂ ತೆಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತೆಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:— The Malariana Company, *Kankanady S. C*

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co., *Mangalore.*

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಿಷಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಅಬಿಸೀನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ ಅವಶ್ಯಕ]

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಪವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅವ್ಯಕ್ತ ಪ್ರೇಮ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರಫುಲ್ಲ ,, ,,	0—12—0
ಅಂಬಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—6—0
ಚಂದ್ರಹಾಸ (ಹೊಸ ಕಥೆ).	0—1—0
ಧ್ರುವ ,,	0—2—0
ಮಕ್ಕಳ ತಿದ್ದುವಿಕೆ (School Disciplina)	0—12—0
ಪುಷ್ಪರಚನೆ (Flower-Making)	0—14—0
ಕನ್ನಡ ಅಚ್ಚಿನ ಮಂಚಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"×28"ಕ್ಕೆ	0—1—0

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮಣಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ., 8 ಇರುಳಪ್ಪನ ಬೀದಿ, ಮದರಾಸ್.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0
ಯಜುರ್ವೇದ ಸಂಧ್ಯಾವಂದನ	0	4	0
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0
ದೇವಪೂಜಾ ಪದ್ಧತಿ	0	3	0
ವೈಶ್ವದೇವ ಪದ್ಧತಿ	0	3	0
ಅಭಿಷೇಕ ಸೂಕ್ತಗಳು	0	2	0
ಶ್ರೀಸೂಕ್ತ ಪುರುಷಸೂಕ್ತ	0	1	0
ವಾಯುಸ್ತುತಿ	0	2	0
ವಿಷ್ಣುಸಹಸ್ರನಾಮ ಸ್ತೋತ್ರ	0	2	0
ವಿಷ್ಣುಸಹಸ್ರನಾಮಾವಳಿ	0	2	0
ದ್ವಾದಶ ಸ್ತೋತ್ರ	0	2	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6
ಗಜೇಂದ್ರ ಮೋಕ್ಷ	0	1	6
ಪಾಂಡವ ಗೀತಾ	0	1	6
ಹನುಮದ್ಭೀಮ ಮಧ್ವಾನ್ತೋತ್ರರ	0	2	0
ಗೋಪಿಕಾ ಗೀತ	0	1	0
ಶ್ರೀರಾಘವೇಂದ್ರ ಸ್ತೋತ್ರ ವಾದಿರಾಜಕವಚ	0	2	0
ಹರಿಕಥಾಮೃತಸಾರ ಮೂಲ	0	10	0
ಪುರಂದರ ದಾಸರ ಕೀರ್ತನೆಗಳು ೨ನೇ ಭಾಗ	0	6	0
ಉದಯರಾಗ ೧ನೇ ಭಾಗ	0	4	0
ಲಕ್ಷ್ಮೀ ಶೋಭನ ಹಾಡು	0	2	0
ತುಲಸಿಸಂಕೀರ್ತನೆ ಪದಗಳು	0	2	0
ಹರಿಭಕ್ತಿಸಾರ	0	1	0
ಉಡುಪಿ ಶ್ರೀಕೃಷ್ಣಚರಿತ್ರೆ	0	3	0
ಸ್ವಪ್ನಪದ ಮಧ್ವಸಾರ	0	1	6
ಬೀಗರಹಾಡು ದೂರುವಪದಗಳು	0	2	0
ತುಳು ಕನ್ನೋಪದೇಶ	0	2	0
ಆಚಾರದರ್ಪಣ	0	4	0

ಇವುಗಳಲ್ಲದೆ ಇನ್ನೂ ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀ ಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ **ಸ್ಥಾಪನೆ 1888.**

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರೆ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆ ೩-೪ ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳೆತ, ಕೈಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೭ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ. ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಾಲ ಕೈ ಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವವು. ಕಾಯಿಕ ಮಾನಸಿಕ ತಪ್ಪುಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು—ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವ್ಯಾಸಿಯು ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರೆದರೆ ಕಳುಹಿಸಲಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,
Ayurvedodaya Aushadhalaya,
20, CHINA BAZAAR ROAD, MADRAS.

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ರಾತ್ರೆ ಕಥೆಗಳು. ಸಂಪೂರ್ಣ ಗ್ರಂಥ. ೧,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರ ಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲವಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆಕಂಡು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಬೋಧಕವಾಗಿ ಸುಲಭ ಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೭ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಕಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಕ್ರಯಕ್ಕೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ,
ಬುಕ್ ಸೆಲ್ಲರ್ಸ್, ಬೆಂಗಳೂರು ಸಿಟಿ.

ಆರ್. ಮಾರ್ಟಿನ್ಸರ ಮಾತ್ರೆಗಳು

ನಂ. ೨.

ಡಮಿಯಾನ ಮತ್ತು ಕಂಪೌಂಡ್ ಫಾಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಎಲು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಸಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಇದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ವಾಚುಗಳನ್ನು ತರಿಸುವವರಿಗೆ

ಒಳ್ಳೇ ಸಂದರ್ಭ!

ತಮಗೆ ಅತ್ಯುತ್ತಮವಾದ ವಾಚುಗಳು ಯಾವ ತರಹದ್ದು ಬೇಕಾಗಿದ್ದರೂ ನಮಗೆ ಬರೆಯಿರಿ!

ನಂಬ್ರ 1. ಮೆಟಲ್ ಕೇಸ್.—ವಿದ್ಯಾರ್ಥಿಗಳಿಗೆ ಅತೀ ಉಪಯೋಗಕರವಾದ್ದು. ರೂ. 3—0—0. ಫೆನ್ಸಿ ಡಾಯಲ್ ರೂ. 3—8—0. 3 ವರ್ಷಗಳ ಗ್ಯಾರಂಟಿ.

ನಂಬ್ರ 2. ಮೆಟಲ್ ಅಥವಾ ಗನ್‌ಮೆಟಲ್ ಕೇಸ್.—ಸರಿಯಾದ ಸಮಯವನ್ನು ತೋರಿಸುತ್ತದೆ. ರೂ. 4—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 3. ಅತ್ಯುತ್ತಮವಾದ ನಿಕ್ಕಲ್ ಸಿಲ್ವರ್ ಕೇಸ್.—ಜುವೆಲ್, ಲೀವರ್ ಗಿಲ್ಟ ಮೆಸ್ಸಿನು ಹೆಚ್ಚು ಕ್ರಯಬಾಳುವ ವಾಚುಗಳಿಗಿಂತಲೂ ಉತ್ತಮ ತರದ್ದು. ಪೆಟ್ಟಿಗೆ, ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ನಂಬ್ರ 4.—ವಾರಕ್ಕೊಂದಾವರ್ತಿ ಕೀ ಕೊಡುವಂಥಾದ್ದು ನಿಕ್ಕಲ್ ಸಿಲ್ವರ್‌ಕೇಸ್ ರೂ. 7. ಸಿಲ್ವರ್ ಕೇಸ್ ರೂ. 9—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 5.—ರಿಸ್ಟ ವಾಚು ನಿಕ್ಕಲ್ ಸಿಲ್ವರ್ ಕೇಸ್ ರೂ. 5. ಸಿಲ್ವರ್ ಕೇಸ್ ಸ್ಟ್ರೇಪ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ಮೇಲ್ಕಂಡ ವಾಚುಗಳಲ್ಲದೆ ವೆಸ್ಟ್ ಎಂಡ್ ವಾಚ್ ಕಂಪೆನಿ, ರಾಸ್ಕೋಪ್ ಪೇಟೆಂಟ್ ಮುಂತಾದ ಪ್ರಖ್ಯಾತವಾದ ಕಂಪೆನಿಗಳ ಎಲ್ಲಾ ತರಹದ ಚಿಕ್ಕ ವ ದೊಡ್ಡ ಸೈಜಿನ ವಾಚುಗಳನ್ನು ಚಿಲ್ಲರೆಯಾಗಿಯೂ ರಖಂ ಆಗಿಯೂ ಮಾರಾಟಕ್ಕಿರುತ್ತದೆ.

ವಿಳಾಸ:— **N. GOPALJEE,**
Watch maker.
JOOMA MASJID SHEIK MEMON STREET,
BOMBAY 2.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4.
ಪೋಸ್ಟೇಜ್ ಪ್ರತ್ಯೇಕ.
೫ ವರುಷಗಳು ಗ್ಯಾರಂಟಿ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ಗಳಿಸಿ ಕುಸ್ತಿಗೂನಲ್ಲಿ ಚಿನ್ನದ ಮೆಡಲ್ ಹೊಂದಿಕೊಂಡು ಪ್ರಸಿದ್ಧವಾದ ಅಮೃತ ಸಂಜೀವಿನಿಗುಳಿಗೆ. 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ 12 ಆಣೆ ಮಾತ್ರ. ಪೋಸ್ಟುಚಾರ್ಜು 4 ಆಣೆ.

ಈ ಸುಂದರವಾದ 'ವಾಚ್ ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ವಾಚಾಗಿಯೂ ಇಂಜಿನ್‌ಸ್ಟಾಂಪು ಹಾಕಿಯೂ ಇರುವದು.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಪುಷ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು. ನಿದ್ರೆಯಲ್ಲಿ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೋ ದಿಲ್-ಚಮಾನ್.
(ರಿಜಿಸ್ಟರ್ಡ್.)
ಸುರಭಿಗಳೆಲ್ಲ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತೊಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೋ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.
ವಿ. ಪಿ. ಚಾರ್ಜು 0—4—0 ಬೇರೆ.

ಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.
H. R. MODY & Co.,
10 Princes Street, BOMBAY

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೋ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ, ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಛರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಲ್ಲಿ ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.
ಏಜಂಟರು:—ಡಿ. ಜೂಲಿಯನ್ ಮಾರ್ಟಿಸ್,
ಮಾರ್ಕೆಟ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಸೆಟ್ಟು ೧ಕ್ಕೆ ೩-೦-೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಕಾಮುಲ ಇಂಗು.

ಉತ್ತಮ ತರದ ರೂಪಾಯಿ ೧ಕ್ಕೆ ೪ ತೊಲೆ, ದುಯಂ ರೂಪಾಯಿ ೧ಕ್ಕೆ ೮ ತೊಲೆ, ತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾಗುವದು; ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪೆನಿ,
ಚೌಕಂಬಾ, ಕಾಶಿ.
SHIROMANI NARAYANA CHARYA & CO.,
Choukhamba,
BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.
ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Swadeshi Press, Mangalore.

Registered No. M. 608

ಮುಂಗಡವಾರ್ಷಿಕ ವರ್ಗಣಿಯು:— ವರ್ಷ 1ಕ್ಕೆ ರೂ. 1—8—0

ಟಪ್ಪಾಲು ಹಾಸಲು ಸೇರಿ ರೂಪಾಯಿ 2—5—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೨ನೇ ಜನವರಿ ಶುಕ್ರವಾರ ೧೯೧೭. | ಸಂಚಿಕೆ ೨.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲೈಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital ...	200,000—0—0	ಆಗತ ಮೂಲ ಧನವು ,,	200,000—0—0
Deposits	336,227—9—4	ಠೇವಣಾತಿಯಾಗಿ ಕೊಡಲ್ಪಟ್ಟ ಮೊಬಲಗುಗಳು	336,227—9—4
Reserve Fund	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 18,485/- have been invested in Government Paper of the face value of Rs. 29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಸಿ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 18,485—0—0 ಸರಕಾರದ ರೂ. 29,300ರ ಪ್ರಾಮಿಸರಿ ಪತ್ರಗಳಲ್ಲಿ ಠೇವಣಿ ಯಾಗಿಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last seven years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

ಸ್ಥಾಯಿ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೂ ಹಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.,

Mangalore, 1st December 1916.

P. Gopal Naik,
Secretary.

ಶಾರದಾ ಛಾಪಖಾನೆಯ
1917ನೇ
ವರುಷದ ಡೈರಿಗಳು.

ಕಾಗದ ವಸ್ತುರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸ್ಯಾಜು 2 ಆಣೆ ಕ್ರಯದ
ಅವ್ವಲ್ ಪೆನ್ಸಿಲು ಸಹಿತ ಅಣೆ 0—10—0
ಚಿಕ್ಕದ್ದು ... ... 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕಾವ್ಯಗಳು.

ಇದರವರೆಯಲ್ಲಿ ನಮೂದಿಸಿರುವ ಮಹಾಕಾವ್ಯಗಳಿರುವ ಪ್ರತಿಯೊಂದು ಶ್ಲೋಕಕ್ಕೂ ಪದಚ್ಛೇದ, ಪ್ರತಿಪದಾರ್ಥ, ತಾತ್ಪರ್ಯ, ಶಬ್ದರೂಪ, ಅಕಾಂಕ್ಷೆ, ಧಾತ್ವರ್ಥ ವಿಶೇಷಾಂಗಗಳು ವಿಶದವಾಗಿ ಬರೆದಿವೆ. ಸಂಸ್ಕೃತ ಭಾಷೆಯು ಪರಿಚಯವಾಗಬೇಕೆಂದಿರುವ ಕನ್ನಡಿಗರಿಗೆ ಈ ಪುಸ್ತಕಗಳು ಅವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು...3—12—0
ಮೇಘಸಂದೇಶ ಪೂರ್ತಿ..................2— 0—0
ಕುಮಾರಸಂಭವ 1, 2ನೇ ಸರ್ಗ.........1— 4—0
ಕಿರಾತಾರ್ಜುನೀಯ ಪ್ರಥಮ ಸರ್ಗ.........0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರಿವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ, ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೦೦. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. [illegible] ಹಾಸಲು ೬ ಆಣೆ.

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
[illegible]

ಚಕ್ರಕೋಡಿ ವಿಷ್ಣುಶಾಸ್ತ್ರಿಗಳ ಮಗ ಸುಬ್ಬಣ್ಣ ಶಾಸ್ತ್ರಿಗಳು ಗುಣಿಸಿ
ಚ। ಗೋಪಾಲಕೃಷ್ಣ ಶಾಸ್ತ್ರಿಗಳು ಮತ್ತು ತಿರಂಕಲ್ಲು ಸುಬ್ರಾಯ ಜೋಯಿಸರಿಂದ
ಪರಿಶೋಧಿಸಲ್ಪಟ್ಟ

ಪಿಂಗಳ ಸಂವತ್ಸರದ ಪಂಚಾಂಗವು.

ಈಗಲೇ ಮಾರಾಟಕ್ಕೆ ಸಿದ್ಧವಾಗಿರುವುದು.

ಕ್ರಯ ಪ್ರತಿ ಒಂದಕ್ಕೆ ಆಣೆ 3, 1 ಡಜನು ಪ್ರತಿಗಳಿಗೆ ರೂ. 1—14—0, 100 ಪ್ರತಿಗಳಿಗೆ ರೂ. 14—0—0 ಬೇಕಾದವರು ಬೇಗನೇ ಬರೆಕೊಳ್ಳುವದು.

ವಿಳಾಸ:—
ಕೆ. ಅಣ್ಣಾಪ್ಪ ನಾಯ್ಕ,
ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕ.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೩೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೩೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದುವರ ಹಾಗೂ ಕೇಳುವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಪ್ಪಾದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಿಮಗೆ ಮಾತಿಗೂ ವೈದ್ಯರ ಸಹಾಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ| ರಾ| ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಟೊಂಟ್ಯ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ಷಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ವಿಷಮಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ| ರಾ| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ತಂದೆಯವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಆಶ್ಚರ್ಯವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ| ಲಲ್ಲುಭಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿ ಮಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ಕ್ಷಣ ಕೊಟ್ಟ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ರಮದ ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ರಮದ ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ರವರಿಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಂವ, ಜಿಲ್ಲಾ ಮುರುಖರಪುರ, ಬರಿಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತಾವದೂ ಇಲ್ಲೆಂಬುದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಲೂಲನ್ ಮಾರ್ಟಿನ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಯೂರೋಪದ ಮಹಾ ಯುದ್ಧ.

ಫ್ರೆಂಚರು ಬ್ಯುಸೆ ಮತ್ತು ಐಸೆಯು ಮಧ್ಯೆ ಶತ್ರುದಳ ಕಂದಕಗಳ ಮೇಲೆ ದಾಳಿಮಾಡಿ ಶತ್ರುಗಳ ಕಂದಕಗಳನ್ನು ಒಡೆದು ಹಾಕಿರುತ್ತಾರೆ. ಮ್ಯೂಸ್ ಮತ್ತು ಏಪ್ರೊಕೋರ್ಟಿನ ಮಧ್ಯೆ ಶತ್ರುಗಳು ಫ್ರೆಂಚರ ಕಂದಕಗಳ ಮೇಲೆ ರೋಷಾವೇಶದಿಂದ ಹಲ್ಲೆ ಮಾಡಿರುವರು.

ಫ್ರೆಂಚರು ೧೯೧೭ನೇ ಇಸವಿಯಲ್ಲಿ ವೆರ್ಡನ್ ಮತ್ತು ಸೊಮ್ಮೆಯ ಬಳಿ ಜರ್ಮನರ ೭೮,೫೦೦ ಸೇನಿಕರನ್ನು ಸೆರೆಹಿಡಿದಿರುವರು. ಈ ಪೈಕಿ ೨೬,೭೮೦ ವೆರ್ಡನಿನಲ್ಲಿ ಮತ್ತು ೫೧,೮೫೦ ಸೊಮ್ಮೆಯಲ್ಲಿ. ಬ್ರಿಟಿಷರು ಕಳೆದ ವರ್ಷ ೪೦,೫೦೦, ಇಟಲಿಯನರು ೫೨,೩೫೦, ರುಶ್ಯನರು ೪೦೦,೦೦೦, ಮೆಸೆದೋನಿಯದ ಸೇನೆಯು ೧೧,೧೭೩ ಮಂದಿ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಒಟ್ಟಿಗೆ ಕಳೆದ ಒಂದು ವರ್ಷದಲ್ಲಿ ೫೮೨,೪೨೩ ಮಂದಿ ಶತ್ರುಸೇನಿಕರು ಮಿತ್ರರಾಜ್ಯಗಳವರ ಸೆರೆಬಿದ್ದಿರುವರು ಎಂತ ಒಬ್ಬ ಬಾತ್ಮೀದಾರನು ಒಂದು ಪತ್ರಿಕೆಗೆ ಬರದಿರುವನು.

ಬ್ರಿಟಿಷರು ಫ್ರಾನ್ಸ್ ರಣರಂಗದಲ್ಲಿ ಶತ್ರುಗಳ ಕಂದಕಗಳ ಮೇಲೆ ಅಲ್ಲಲ್ಲಿ ಬಿದ್ದು ದಾಳಿಮಾಡಿ ಶತ್ರುಗಳನ್ನು ಸೋಲಿಸುತ್ತಿದ್ದಾರೆ.

ಸಂಧಿ ಪ್ರಸ್ತಾಪ.

ರುಶ್ಯಾ ಚಕ್ರವರ್ತಿಯವರು ಭೂಜಲ ಸೇನೆಗಳಿಗೆ ಸಂಧಿ ಪ್ರಸ್ತಾಪದ ವಿಷಯದಲ್ಲಿ ಹೀಗೆಂದು ಅಪ್ಪಣೆಕೊಡಿಸಿರುವರು:— ಶತ್ರುಗಳ ಬಲವು ದಿನೇ ದಿನೇ ಕುಂದುತ್ತಾ ಬರುತ್ತಿದೆ. ಮಿತ್ರರಾಜ್ಯಗಳ ಬಲವು ದಿನೇ ದಿನೇ ವೃದ್ಧಿಯಾಗುತ್ತಿದೆ. ಜರ್ಮನರಿಗೆ ಪೂರ್ಣ ಅಪಜಯವು ಆಗುವುದು ನಿಶ್ಚಯವೆಂದೂ ರಾಷ್ಟ್ರಗಳನ್ನು ಹಂಚಿಹಾಕುವ ಕಾಲವು ಸಮೀಪಿಸಿಯದೆಂದೂ ಈಗ ಅದಕ್ಕೆ ತಿಳದದೆ. ತನ್ನ ಯುದ್ಧಬಲವು ಪೂರ್ಣಾವಸ್ಥೆಯಲ್ಲಿದೆಂದು ಜರ್ಮನಿಯು ತಿಳಿದುಕೊಂಡಿದ್ದಾಗ ಯುದ್ಧವನ್ನು ಸಾರಿತು. ಆ ಬಲವು ಕ್ಷೀಣದೆಸೆಗೆ ಮುಟ್ಟಿತೆಂದು ತಿಳಿದಾಗ ಈಗ ಫಕ್ಕನೇ ಸಂಧಿ ಪ್ರಸ್ತಾಪವನ್ನು ಎತ್ತಿದೆ. ಅದರ ಕ್ಷಾತ್ರವೃತ್ತಿಯು ಪೂರ್ಣವಾಗಿ ಅಡಗಿಹೋಗುವ ಮೊದಲೇ ಸಂಧಿಮಾಡುವದು ಉತ್ತಮವೆಂದು ಅದು ತಿಳಿದು ಈಗ ತಾನೇ ಸಂಧಿಪ್ರಸ್ತಾಪವನ್ನು ಎತ್ತಿರುವದಾದರೂ ಅದರೊಡನೆಯೇ ತನ್ನ ಸೇನಾಬಲವು ಉಚ್ಚಸ್ಥಿತಿಯಲ್ಲಿದೆಂದು ಲೋಕಕ್ಕೆ ಭರವಸೆಯನ್ನು ಕೊಡುತ್ತಿದೆ. ಆದರೆ ಮಿತ್ರರಾಜ್ಯಗಳವರು ಕಾಲವು ಸಾನುಕೂಲವಾಗಿರುವಾಗ ಮಾತ್ರವೇ ಸಂಧಿ ಮಾಡಬಲ್ಲರು. ಈಗ ಕಾಲವು ಮಿತ್ರರಿಗೆ ಸಾನುಕೂಲವಾಗಿಲ್ಲ. ಶತ್ರುಗಳು ಸ್ವಾಧೀನಮಾಡಿಕೊಂಡ ಪ್ರಾಂತ್ಯಗಳಿಂದ ಇನ್ನೂ ಹೊರ ಅಟ್ಟಲ್ಪಡಲಿಲ್ಲ. ಶತ್ರುಗಳ ಸ್ವಾಧೀನವಾದ ಪ್ರಾಂತ್ಯಗಳಿಂದ ಅವರು ಹೊರ ಅಟ್ಟಲ್ಪಟ್ಟನಂತರ ಮತ್ತು ಶಾಶ್ವತವಾದ ಸಂಧಾನವಾಗುವದೆಂತ ಭರವಸೆ ಸಿಕ್ಕಿದನಂತರ ಮಾತ್ರವೇ ಸಂಧಾನವಾದೀತು.

ಜರ್ಮನರ ಸಂಧಿಪ್ರಸ್ತಾಪದ ಪತ್ರಕ್ಕೆ ಮಿತ್ರರಾಜ್ಯಗಳವರು ಏಕತ್ರಕೂಡಿ ಕಳುಹಿಸಿಕೊಟ್ಟ ಉತ್ತರದಲ್ಲಿ ಜರ್ಮನರು ೩॥ ವರ್ಷಗಳಿಂದ ಬೆಲ್ಜಿಯಮ್ ರಾಷ್ಟ್ರಕ್ಕೆ ಮಾಡಿದ ವಿಧವಿಧದ ಅನ್ಯಾಯಗಳು ಸೂಚಿಸೋಣಾಗಿದ್ದವು. ಆ ರಾಷ್ಟ್ರದ ಕೈಗಾರಿಕೆಯನ್ನು ಕೆಡಿಸಿದ್ದು, ಗ್ರಾಮ-ಪಟ್ಟಣಗಳನ್ನು ಹಾಳುಮಾಡಿಸಿದ್ದು, ಅಲ್ಲಿಯ ಜನರನ್ನು ಕೊಂದದ್ದು, ಸೆರೆಯಲ್ಲಿಡಿಸಿದ್ದು ಮೊದಲಾದ ಅನ್ಯಾಯಗಳಲ್ಲದೆ ಜರ್ಮನರು ಸಂಧಿಪ್ರಸ್ತಾಪವನ್ನು ಎತ್ತಿದಾಗಲೇ ಸಾವಿರಾರು ಬೆಲ್ಜಿಯನರನ್ನು ಹಿಡಿದು ಜರ್ಮನ ದೇಶಕ್ಕೆ ಕೆಲಸದ ಬಗ್ಗೆ ಕಳುಹಿಸಿಕೊಟ್ಟ ದುಷ್ಕೃತ್ಯವೂ ಈ ಉತ್ತರದಲ್ಲಿ ಸೂಚಿಸೋಣಾಗಿತ್ತು. ಮಿತ್ರರಾಜ್ಯಗಳವರು ಬಹಳ ಕಷ್ಟನಷ್ಟಪಟ್ಟಿರುವರೆಂದೂ ಸಂಧಿಪ್ರಸ್ತಾಪ ಎತ್ತಿದಾಗಲೇ ಸಂಧಿಗೆ ಒಪ್ಪಿಕೊಳ್ಳುವರೆಂದೂ ನಂಬಿದ್ದ ಶತ್ರುಗಳ ಮತ್ತು ಕೆಲವು ತಟಸ್ಥರಾಜ್ಯಗಳ ಭಾವನೆಗಳು ಮಿತ್ರರಾಜ್ಯಗಳ ಈ ಖಂಡಿತ ಉತ್ತರದಿಂದ ಮಾಚಿ ಹೋದಂತಾಯಿತು.

ಜರ್ಮನರು ಒಪ್ಪಂದದ ಶರ್ತಗಳನ್ನು ಯುನೈಟೆಡ್ ಸ್ಟೇಟಿನ ಪ್ರೆಸಿಡೆಂಟರಾದ ಡಾಕ್ಟರ್ ವಿಲ್ಸನರಿಗೆ ಕಳುಹಿಸಿಕೊಟ್ಟಿದ್ದಾರೆಂತ ಪ್ರಕಟವಾಗಿದೆ.

ಬಾಲ್ಕಾನ್

ಶತ್ರುಗಳು ಕುತ್ಸ್ ಕಣಿವೆಗಳಲ್ಲಿ ಕೆಲವು ಪರ್ವತ ಶಿಖರಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ರುಶ್ಯನರು ಫೋಕ್ಷನಿ ಮತ್ತು ನೊಸ್‌ಮೆಚೋ ಎಂಬಲ್ಲಿ ಸೇನೆಯನ್ನು ಒಟ್ಟುಹಾಕಿರುವರು. ರಿಮ್‌ನಿಕ್ ಸೆರೆಟನಲ್ಲಿ ಶತ್ರುಗಳು ಭೀಕರ ಕಾಳಗ ಮಾಡುತ್ತಿರುವರು. ಬ್ರೊಡೆಶ್ಟಿ ಎಂಬ ಸ್ಥಳವು ಶತ್ರುಗಳ ಸ್ವಾಧೀನವಾಗಿದೆ. ರಿಮ್ನಿಕ್ ಸೆರೆಟ್ ಜರ್ಮನರ ಸ್ವಾಧೀನವಾಯಿತೆಂತ ಹಿಗ್ಗಿಕೊಂಡರೂ ಜರ್ಮನರಿಗೆ ಇಲ್ಲಿ ಆದ ನಷ್ಟದ ಗಣನೆ ಮಾಡಿದರೆ ಈ ಜಯವು ಅಲ್ಪವಾದುದೇ ಎಂದು ಹೇಳಬೇಕಾಗಿಯದೆ.

ಕೆಜಿನೋ ನದಿಯ ಎರಡು ದಡಗಳಲ್ಲಿಯೂ ಶತ್ರುಗಳು ರುಮೇನಿಯನರ ಮೇಲೆ ಬಿದ್ದಿರುತ್ತಾರೆ. ರುಮೇನಿಯನರು ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುತ್ತಾರೆ. ಪೆಟ್ರೋಸೆನಿ ಪ್ರಾಂತ್ಯದಲ್ಲಿ ರುಮೇನಿಯನರು ಹಿಂದೆ ಸರಿದಿರುತ್ತಾರೆ. ಬ್ರಿಟಿಷ್ ಕಣಿವೆಯ ಬಳಿ ಕಠಿಣ ಕಾಳಗ ನಡೆದಿರುವದು. ಶತ್ರುಗಳಿಗೆ ದಂಡಬಲ ಸೇನೆಯು ಬಂದು ಕೂಡಿದ್ದರಿಂದ ಅವರು ಪುನಃ ಪುನಃ ಹಲ್ಲೆ ಮಾಡಿ ಕೆಲವು ಪರ್ವತ ಶಿಖರಗಳನ್ನು ಗೆದ್ದುಕೊಂಡಿರುತ್ತಾರೆ.

ಪೂರ್ವ ಆಫ್ರಿಕ

ಪೂರ್ವ ಆಫ್ರಿಕದ ಉಳುಗುರು ದಿನ್ನೆಯ ದಕ್ಷಿಣದಲ್ಲಿ ಬ್ರಿಟಿಷರು ಶತ್ರುಗಳ ನೆಲೆಗಳ ಮೇಲೆ ಬಿದ್ದು ಶತ್ರುಗಳನ್ನು ಅಟ್ಟಿರುತ್ತಾರಲ್ಲದೆ ಕೆಲವು ಫಿರಂಗಿಗಳನ್ನೂ ಯುದ್ಧಸಾಮಾಗ್ರಿಗಳನ್ನೂ ಹಿಡಿದಿರುತ್ತಾರೆ. ಇರಿಂಗ ಉಬೇಗೆ ಎಂಬಲ್ಲಿಯೂ ಬ್ರಿಟಿಷರು ಶತ್ರುಗಳ ಒಲವಾದ ಒಂದು ಸೇನಾಪಂಗಡವನ್ನು ಮಹೇಂಗದ ಕಡೆಗೆ ಅಟ್ಟಿರುವರು.

ಇಟಲಿ.

ಎಡಿಜೆ ಮತ್ತು ಗಾರ್ಡ ಸರೋವರದ ಮಧ್ಯೆ ಇಟಲಿಯನರು ಶತ್ರುಗಳ ಮೇಲೆ ರಾತ್ರಿಕಾಲ ಬಿದ್ದು ಭೀಕರಕಾಳಗ ಮಾಡಿರುತ್ತಾರೆ. ಶತ್ರುಗಳು ವಿಶೇಷ ನಷ್ಟಪಟ್ಟು ಹಿಂದೆ ಸರಿದಿರುತ್ತಾರೆ.

ಗ್ರೀಸ್.

ಗ್ರೀಸ್ ದೇಶದ ಸ್ಥಿತಿಯು ಇನ್ನೂ ಮಾರ್ಪಟ್ಟಿರುವದಿಲ್ಲ. ಗ್ರೀಕ-ಅರಸರು ಮಿತ್ರರಾಜ್ಯಗಳವರು ಕೇಳಿದುವ ವಿಷಯಗಳಿಗೆ ಒಪ್ಪುವದಕ್ಕೆ ಅಲ್ಲಿಯ ಜನರು ಬಿಡುವದಿಲ್ಲ. ಮಿತ್ರರಾಜ್ಯಗಳವರು ಗ್ರೀಕ ದೇಶಕ್ಕೆ ವ್ಯಾಪಾರ ಇತ್ಯಾದಿ ನಡೆಯದಂತೆ ಅಡ್ಡಕಟ್ಟಿರುವದರಿಂದ ಗ್ರೀಸ್ ದೇಶದೊಳಗೆ ಅಂತಃಕಲಹಗಳು ಹುಟ್ಟುವಹಾಗಿದೆ.

ಜಲಂತರ್ಗಾಮಿ ನಾವೆಗಳು.

೧೯೧೬ನೇ ಇಸವಿಯಲ್ಲಿ ನೋರ್ವೇಯವರ ೬೬೭,೦೦೦ ಟನ್ ಭರಾವಣೆಯ ೩೬೩ ಹಡಗಗಳು ಶತ್ರುಗಳ ಜಲಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ.

ತಾ. ೧–೨ರಲ್ಲು ಡೆನ್‌ಮಾರ್ಕಿನವರ "ಡೆನ್‌ಮಾರ್ಕ್" ಬ್ರಿಟಿಷರ "ಎಪ್‌ಸ್ಲೆಹಾಲ್" ರುಶ್ಯನರ "ಟಸ್ಕರ್" ನೋರ್ವೆಯವರ "ಫ್ಲೋರ" "ಎಡ್ನ" ಮತ್ತು "ಇವ" ಗ್ರೀಕರ "ಡೆಮಿತ್ರಿಯೋಸಿಂಗ್‌ಲೆಸಿಸ್" ಮತ್ತು ಇತರ ಎರಡು ಹಡಗಗಳೂ ತಾ. ೪ರಲ್ಲು ಬ್ರಿಟಿಷರ "ಬೆಕ್ರೈಗ್" ನೋರ್ವೇಯವರ "ಬ್ರಿಟಾನಿಕ್" ಮತ್ತು "ಎಲಿಕ್" ಹಡಗಗಳೂ, ತಾ. ೫ರಲ್ಲು ಫ್ರೆಂಚರ "ಲಿಯೊನ್" ನೋರ್ವೆಯವರ "ಒಡ್ನಾ" ಸ್ಪಾನಿಯರ "ಸಾನ್‌ಲಿಯಾನ್ಡ್ರೊ" ಗ್ರೀಕರ "ಡಿಮಿತ್ರಿಯೋಸ್ ಗೌಲಿನ್ಡ್ರಿಸ್" ಹಡಗಗಳೂ ಇನ್ನು ಇತರ ಕೆಲವು ಹಡಗಗಳೂ ಶತ್ರುಗಳ ಜಲಂತರ್ಗಾಮಿ ನಾವೆಗಳಿಂದ ಮುಣುಗಿಸಲ್ಪಟ್ಟಿರುವವು.

ಉತ್ತರ ಹಿಂದೂಸ್ಥಾನ.

ಬಂಗಾಳದಲ್ಲಿ ಏರ್ಪಡಿಸೋಣಾದ ಬಂಗಾಳಿ ಸೇನಾ ಪಂಗಡದ ೨೫೦ ಬಂಗಾಳಿ ಸೇನಿಕರು ತರ್ಬೀತು ಹೊಂದಿ ಈಗತಾನೇ ರಣರಂಗಕ್ಕೆ ಹೋಗಿರುತ್ತಾರೆ.

ಹಿಂದೂಸ್ಥಾನದ ಈಗಿನ ವೈಸರಾಯರಾಗಿರುವ ಚೇಮ್ಸಫರ್ಡ ಪ್ರಭುಗಳವರು ಹಿಂದಿನ ವೈಸರಾಯರಾಗಿದ್ದ ಹಾರ್ಡಿಂಜ ಪ್ರಭುಗಳಂತೆಯೇ ವಿದ್ಯಾರ್ಥಿಗಳ ವಿಷಯ ಹೆಚ್ಚಿನ ಮಮತೆಯುಳ್ಳವರಾಗಿದ್ದಾರೆ. ಚೇಮ್ಸಫರ್ಡ ಪ್ರಭುಗಳು ಈ ಸಾರಿ ಕಲ್ಕತ್ತೆಯನ್ನು ಸಂದರ್ಶಿಸಿದ್ದಾಗ ಹಿಂದೀ ವಿದ್ಯಾರ್ಥಿಗಳು ಇರುವ ಹೊಸ್ಟೆಲುಗಳಿಗೆ ಮೊದಲಾಗಿ ತಿಳಿಸದೇನೇ ಹೋಗಿರುವರು. ಇದರಿಂದ ಕಲ್ಕತ್ತೆ ವಿದ್ಯಾರ್ಥಿಗಳ ನಿಜವಾದ ಸ್ಥಿತಿಯು ಹೇಗಿದೆಂಬದು ಪ್ರಭುಗಳವರಿಗೆ ತಿಳಿದಂತಾಗಿದೆ.

ಮುಂಬಾಯಿಯ ಪ್ರೊಫೆಸರ್ ದಾವರ್ ಕಮ್ಮರ್ಸ್ ಕಾಲೇಜಿಯ ರಾ| ಆರ್. ಜಯರಾಮ ಎಂಬವರಿಗೆ ಲಂಡನ್ ಚೇಂಬರ್ ಅಫ್ ಕಮ್ಮರ್ಸ್ ಎಂಬ ವಾಣಿಜ್ಯ ಸಂಘದವರ ಚಿನ್ನದ ಪದಕವು ದೊರಕಿರುವದು. ವ್ಯಾಪಾರ ಮಾಹಿತಿ ಸಂಬಂಧವಾದ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಇಂಥಾ ಬಹುಮಾನ ಪದಕವನ್ನು ಹೊಂದಿದ ಹಿಂದೀಗಳಲ್ಲಿ ರಾ| ಜಯರಾಮರೇ ಮೊದಲನೆಯವರು. ಈ ಪರೀಕ್ಷೆಗೆ ಬ್ರಿಟಿಷ ಸಾಮ್ರಾಜ್ಯದ ಎಲ್ಲಾ ಕಡೆಗಳಿಂದಲೂ ಸಾವಿರಾರು ಉಮೇದ್ವಾರರು ಮೇಲಾಟ ಮಾಡಿದ್ದರು. ಪರಂತು, ರಾ| ಜಯರಾಮರೇ ಪ್ರಥಮ ಸ್ಥಾನವನ್ನು ಪಡೆದು ಚಿನ್ನದ ಬಹುಮಾನ ಪದಕಕ್ಕೆ ಪಾತ್ರರಾದರು. ಮ| ಜಯರಾಮರವರು ಮೈಸೂರು ಗವರ್ನಮೆಂಟು ಛಾಪಖಾನೆಯ ಸುಪರಿಂಟೆಂಡೆಂಟರಾದ ಮ| ರಾ. ರಾಮಚಂದ್ರ ಮುದಲ್ಲಿಯಾರರ ಪ್ರಥಮ ಪುತ್ರರು. ೩ ವರ್ಷಗಳಿಂದ ಮುಂಬಾಯಿ ಪ್ರೊಫೆಸರ್ ದಾವರರ ಕಮ್ಮರ್ಸ್ ಕಾಲೇಜಿಯಲ್ಲಿ ವಿದ್ಯಾರ್ಥಿಯಾಗಿ ವಾಣಿಜ್ಯ ಮಾಹಿತಿಯನ್ನು ಪಡೆಯುತ್ತಿದ್ದಾರೆ.

ಇಂಡಿಯಾ ಕೌನ್ಸಿಲ್ ಮೆಂಬರರಾಗಿರುವ ಜನರಲ್ ಸರ್. ಚಾರ್ಲ್ಸ್ ಎಗರ್ಟನ್ ಸಿ. ಬಿ., ಡಿ. ಎಸ್. ಓರವರು ರಿಟಾಯರ್ ಆಗುವದರಿಂದ ಸ್ಟೇಟ್ ಸೆಕ್ರಟರಿಯವರು ಸರ್. ಎಡ್ಮಂಡ್ ಬಾರ್ರೊ. ಜಿ. ಸಿ. ಬಿ., ಜಿ. ಸಿ. ಎಸ್. ಐ. ರವರನ್ನು ಇಂಡಿಯಾ ಕೌನ್ಸಿಲ್ ಮೆಂಬರರಾಗಿ ನೇಮಿಸಿರುತ್ತಾರೆ.

ದಶಂಬರ ತಾ. ೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲೆಲ್ಲಾ ೯೮೫೯ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೭೭,೩೩ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಿ ಮತ್ತು ಸಿಂಧ್ ಸಂಸ್ಥಾನದಲ್ಲಿ ೨,೧೫೮; ಮದ್ರಾಸ್ ೬೩೭, ಬಿಹಾರ್ ಮತ್ತು ಒರಿಸ್ಸ ೫೩೦; ಸಂಯುಕ್ತ ಸಂಸ್ಥಾನ ೧,೧೦೪; ಪಂಜಾಬು ೩೦; ಬರ್ಮ ೮೭; ಮಧ್ಯಸಂಸ್ಥಾನಗಳು ೮೭೧; ಮೈಸೂರು ೧೬೨; ಹೈದರಾಬಾದ್ ೧೯೯; ಮಧ್ಯಹಿಂದೂಸ್ಥಾನ ೧೭೭; ರಜಪುತಾನ ೪೧, ವಾಯವ್ಯ ಸರಹದ್ದು ೮ ಮರಣಗಳಾಗಿರುವವು.

ಮುಂಬಾಯಿ ಬೇಂಕಿಗೆ ೧೯೧೬ನೇ ದಶಂಬರಕ್ಕೆ ಅಂತ್ಯವಾಗುವ ಅರ್ಧ ವರ್ಷದಲ್ಲಿ ರೂ ೧೫,೪೦,೭೩೪—೧—೯ ಲಾಭ ಹುಟ್ಟಿಬಂದಿರುವದು.

ಲಾಹೋರ್ ರಾಜದ್ರೋಹ ಸಂಬಂಧವಾದ ೨ನೇ ಸಪ್ಲಿವೆಂಟರಿ ಮೊಕದಮೆಯ ತೀರ್ಮಾನವು ಇದೇ ತಾ. ೫ರಲ್ಲು ಕೊಡೋಣಾಗಿದೆ. ಈ ಮೊಕದಮೆಯ ತನಕಿಯು ಕಳೆದ ನವಂಬರ ತಾ. ೮ರಲ್ಲು ಪ್ರಾರಂಭವಾಗಿತ್ತು. ೧೮ ಮಂದಿ ಆಪಾದಿಸಲ್ಪಟ್ಟಿದ್ದರು. ಸರಕಾರಿ ಕಡೆಯಿಂದ ೧೧೭ ಸಾಕ್ಷಿಗಾರರ ಮತ್ತು ಆಪಾದಿತರ ಕಡೆಯಿಂದ ೧೦೧ ಸಾಕ್ಷಿಗಾರರ ವಿಚಾರಣೆಯಾಯಿತು. ಆಪಾದಿತರಲ್ಲಿ ಥಾಬುರಾಮ ಧಲವಂತ ಸಿಂಘ್, ಕಾರ್ತರ್ ಸಿಂಘ್, ಹಬೀಜ್, ಅಬ್ದುಲ್ಲ, ಮತ್ತು ದುರ್‌ಸಿಂಘ ಎಂಬವರಿಗೆ ಫಾಶಿ ಶಿಕ್ಷೆಯೂ, ಬೋಟಮ್ ಸಿಂಘನಿಗೆ ಗಡಿಪಾರು ಶಿಕ್ಷೆಯೂ, ಫಜುಲದ್ದೀನ್, ಹರಿಸಿಂಘ, ಮಾನ್ಯಸಿಂಘ್, ಕಮರಸಿಂಘ್, ಎಂಬವರಿಗೆ ಜೀವಾಂತ ಸಜೆಯೂ, ಅಮರಸಿಂಘನಿಗೆ ೨ ವರ್ಷಗಳ ಸಜೆಯೂ ವಿಧಿಸೋಣಾಗಿದೆ. ವಿಶನ್ ಸಿಂಘ, ದಲೀಪ ಸಿಂಘ, ದಯಾಳಸಿಂಘ, ಭಿಕಾರ್ ಸಿಂಘ, ಮತ್ತು ಅಟುಕುರ ಸಿಂಘ ಎಂಬವರನ್ನು ಖುಲಾಸುಪಡಿಸಿರುತ್ತಾನೆ. ತೀರ್ಮಾನವು ೮೩ ಹಾಳೆಗಳಲ್ಲಿ ಛಾಪೆಯಾಗಿದೆ. ಆಪಾದಿತರು ಯುನೈಟೆಡ್ ಸ್ಟೇಟ್ಸ್, ಪೆನಾಂಗ್, ಶಾಂಗಾಯಿ, ಮನಿಲ್ಲ, ಕೆನಡಾ ಮತ್ತು ಸಿಯಾಮ್ ಮೊದಲಾದ ಪ್ರಾಂತ್ಯಗಳಲ್ಲಿ ರಾಜದ್ರೋಹಕರವಾದ ಪಿತೂರಿಗಳ ಸನ್ನಾಹಮಾಡುತ್ತಿದ್ದ ಕಡೆಗೆ. ಹಿಂದೂಸ್ಥಾನಕ್ಕೆ ಬಂದು ಯುದ್ಧ ಪ್ರಾರಂಭವಾದಾಗ ರಾಜದ್ರೋಹಕರವಾದ ಪಿತೂರಿಯನ್ನು ನಡೆಸಿದ್ದರು. ಈ ಪಿತೂರಿಕಾರರಲ್ಲಿ ಕೆಲವರು ಜರ್ಮನರಿಂದ ಸಹಾಯ್ಯವನ್ನು ಪಡೆದು ಬಂದಿದ್ದವರು. ರಾಜದ್ರೋಹಕರವಾದ ಅನೇಕ ಗ್ರಂಥಗಳೂ ಪತ್ರಿಕೆಗಳೂ ಈ ಪಿತೂರಿ ಮಂಡಲಿಯವರಿಂದ ಹೊರಡಿಸೋಣಾಗಿದೆ. ಹರಿದಯಾಳ, ರಾಮಚಂದ್ರ ಮೊದಲಾದ ಪಿತೂರಿ ಮುಖಂಡರು ಇನ್ನೂ ಜರ್ಮನಿ, ಸಾನ್ ಫ್ರಾನ್ಸಿಸ್ಕೊ, ಮನಿಲ್ಲಾ ಮೊದಲಾದ ಪ್ರಾಂತ್ಯದಲ್ಲಿದ್ದುಕೊಂಡು ರಾಜದ್ರೋಹಕರವಾದ ವಹಿಗಳನ್ನು ಪ್ರಕಟಿಸುತ್ತಿದ್ದಾರೆ ಎಂಬಿತ್ಯಾದಿ ವಿಷಯಗಳು ಈ ಮೊಕದಮೆ ತನಿಕೆ ಕಾಲ ಹೊರಬಿದ್ದಿರುತ್ತವೆ.

ಏಲಂ! ಏಲಂ!!

ಅಪೂರ್ವ ಸಂದರ್ಭ!

ಬಂದು ನೋಡಿರಿ! ಬಂದು ಕೊಳ್ಳಿರಿ!!

ರಥೋತ್ಸವದ ಬಗ್ಗೆ ಉಡುಪುಗಳನ್ನು ಮಾಡಿಸತಕ್ಕವರಿಗೆ ಇದಕ್ಕಿಂತ ಒಳ್ಳೇ ಸಂದರ್ಭವಿರದು. ಇದೇ ತಿಂಗಳ ತಾ. ೨೧ರಿಂದ ೩೧ರ ವರೆಗೆ ಎಲ್ಲ ವಿಧದ ಸೀರೆಗಳು, ಕಾಶ್ಮೀರ್ ಶಾಲ್ಸ್, ಸಿಲ್ಕ್ ವಸ್ತ್ರ ವಸ್ತ್ರಗಳು ಏಲಂ ಮಾಡೋಣಾಗುವವು.

ಶರ್ತ:—ನಗದು.

ನರಸಿಂಹ ಲಕ್ಷ್ಮಣಶಾಲು,

ರಥಬೀದಿ, ಮಂಗಳೂರು.

ಅನುಕ್ರಮಣಿಕೆ.

	ಪಾನು.
ಅಗ್ರಲೇಖ — ಸ್ವರಾಜ್ಯಕ್ಕೆ ರಾಷ್ಟ್ರೀಯ ಸಭೆಯ ಮೊಹರು	೪
ಸ್ಫುಟವಿಚಾರಗಳು:—	
೧ ಜಿಲ್ಲಾ ವಿಭಜನೆಯ ಒಗಟು	,,
೨ ನಾಮಕರಣದ ಬಗ್ಗೆ ದೂರದರ್ಶಿತ್ವ	೪—೫
೩ ಮಂಗಳೂರಿನ ಬಂದರು	೫
ಸ್ಥಳಿಕ — ಮಂಗಳೂರು	೫
ವರ್ತಮಾನಸಂಗ್ರಹ—	
ಯೂರೋಪದ ಮಹಾಯುದ್ಧ	೩
ಉತ್ತರಹಿಂದೂಸ್ಥಾನ	,,
ವಿದೇಶವೃತ್ತಾಂತ	೬
ಪತ್ರವ್ಯವಹಾರ ಮತ್ತು ಬಾತಮಿಗಳು	೬
೧ ಕಾಸರಗೋಡಿನ ವಿಭಜನೆ	,,
೨ ಭತ್ತದ ಮತ್ತು ಕಬ್ಬಿನ ಕೃಷಿಕರಿಗೆ ಸೂಚನೆ	,,
೩ ಕಟಪಾಡಿ	,,

ಸ್ವದೇಶಾಭಿಮಾನಿ.

ಶಕ ೧೮೩೮ ಪೌಷ ಬ. ೪ ಶುಕ್ರವಾರ.

ಸ್ವರಾಜ್ಯಕ್ಕೆ ರಾಷ್ಟ್ರೀಯ ಸಭೆಯ ಮೊಹರು.

ಈ ವರ್ಷ ಲಖನೌ ಪಟ್ಟಣದಲ್ಲಿ ರಾಷ್ಟ್ರೀಯ ಸಭೆಯು ಸಂಯುಕ್ತ ಅಧಿವೇಶನವು ಆಗಿ ಅದು ಯಾವ ಕೆಲಸ ಮಾಡಿತು? ರಾಷ್ಟ್ರೀಯವೆಂಬ ಹೆಸರನ್ನು ಅನ್ವರ್ಥಗೊಳಿಸುವಂತೆ ಹಿಂದು, ಮುಸಲಮಾನ, ಪಾರ್ಸಿ ಮುಂತಾದ ಮುಖ್ಯ ಮುಖ್ಯ ಜಾತಿಗಳೂ, ಪುನಃ ಬಿರುಸು, ಸಪ್ಪೆ, ರಾಷ್ಟ್ರೀಯ ಮೊದಲಾದ ಒಳತಂಡಗಳೂ ಏಕತ್ರ ಸೇರಿ ನೆರೆದ ಸಭೆಯು ಯಾವ ಕೆಲಸ ಮಾಡಿತು? ಸಭೆಯ ಅಧ್ಯಕ್ಷರು ಹೇಳಿದಂತೆ ೧೯೦೭ನೆ ವರ್ಷದಲ್ಲಿ ಸುರತ ಪಟ್ಟಣದ ಫ್ರೆಂಚರ ಉದ್ಯಾನದಲ್ಲಿ ವಿಭಕ್ತವಾದ ಸಭೆಯು ಈ ವರ್ಷ ಐತಿಹಾಸಿಕ ಪಟ್ಟಣವಾದ ಲಖನೌದ ಲಾಲಬಾಗಿನಲ್ಲಿ ಪುನಃ ಐಕ್ಯವನ್ನು ಹೊಂದಿದ ರಾಷ್ಟ್ರೀಯ ಸಭೆಯು ಯಾವ ಕೆಲಸ ಮಾಡಿತು? ಈ ಪ್ರಶ್ನೆಗಳಿಗೆ ಒಂದೇ ಉತ್ತರವು. ಅದು ಸ್ವರಾಜ್ಯಕ್ಕೆ ರಾಷ್ಟ್ರೀಯ ಸಭೆಯು ಸಮ್ಮತಿಯ ಮೊಹರು ಬಿತ್ತು — ಇದೇ ಸರಿ.

ರಾಷ್ಟ್ರೀಯ ಸಭೆಯ ಅಧಿವೇಶನದ ಕಾರ್ಯಕ್ರಮವನ್ನು ಎರಡು ವಿಧವಾಗಿ ವಿಂಗಡಿಸಬಹುದು, ೧. ಒಂದು ವರ್ಷದಲ್ಲಿ ಜನಸಮಾಜಕ್ಕೆ ಯಾವ ಯಾವ ವಿಷಯವಾಗಿ ತೊಂದರೆ, ಅಡ್ಡಿ ಬಂದಿರುವವೋ ಅವುಗಳನ್ನೂ, ದೇಶದೊಳಗೆ ವಿಶೇಷವಾಗಿ ಚರ್ಚೆಗೆ ಬಂದಿರುವ ಮಹತ್ವದ ರಾಜಕೀಯ ಪ್ರಶ್ನೆಗಳನ್ನೂ, ರಾಷ್ಟ್ರದೊಳಗಿನ ವರಿಷ್ಠರಿಂದ ಕನಿಷ್ಠರ ವರೆಗಿನ ಎಲ್ಲ ಜನರಲ್ಲಿ ನೆಲೆಗೊಂಡಿರುವ ರಾಷ್ಟ್ರೀಯ ಆಕಾಂಕ್ಷೆಗಳನ್ನೂ ರಾಜ್ಯಕರ್ತರ ಮುಂದಿಟ್ಟು ಆ ವಿಷಯದಲ್ಲಿ ಅವರ ಸಹಾಯವನ್ನು ಕೇಳುವುದು. ೨. ರಾಷ್ಟ್ರೀಯ ಆಕಾಂಕ್ಷೆಗಳನ್ನು ಸಂಪಾದಿಸಲು ಆಯಾ ಪ್ರಾಂತಿಕ ಮತ್ತು ಸ್ಥಳಿಕ ಮುಖಂಡರು ತಂತಮ್ಮ ಸೀಮೆಗಳಲ್ಲಿ ಹೇಗೆ ಹೇಗೆ ಕೆಲಸವನ್ನು ಮಾಡಬೇಕಾದುದು ಈ ವಿಷಯದಲ್ಲಿ ಒಂದು ಕಾರ್ಯಕ್ರಮವನ್ನು ಸಾಧಾರಣವಾಗಿ ನಿರ್ಣಯಿಸುವುದು, ಕನಿಷ್ಠಪಕ್ಷಕ್ಕೆ ಆ ಅಧಿವೇಶನದ ಅಧ್ಯಕ್ಷರು ಅಥವಾ ಅಷ್ಟೆ ಯೋಗ್ಯರಾದ ಬೇರೆ ದೇಶನಾಯಕರು ಸಂದೇಶ ರೂಪದಿಂದಲಾದರೂ ಭವಿಷ್ಯತ್ ಕಾರ್ಯಕ್ರಮದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದು. ಈ ಎರಡು ಕೆಲಸಗಳು ಕಳೆದ ಅಧಿವೇಶದಲ್ಲಿ ಸಾಂಗವಾಗಿ ನಡೆದವೆಂದು ನಾವು ಹಿಂದಿನ ಎರಡು ಸಂಚಿಕೆಗಳಲ್ಲಿ ಪ್ರಕಟಿಸಿದ ರಾಷ್ಟ್ರೀಯ ಸಭೆಯ ಸಾರಾಂಶದಿಂದ ನಮ್ಮ ವಾಚಕರಿಗೆ ತಿಳಿಯದೆ ಇರದು. ರಾಷ್ಟ್ರೀಯ ಸಭೆಯ ಮೊನ್ನೆಯ ಅಧಿವೇಶನವಾಗುವ ವರೆಗಿನ ಒಂದು ವರ್ಷದಲ್ಲಿ ಹಿಂದುಸ್ಥಾನದೊಳಗಿನ ರಾಜಕೀಯ ವಾತಾವರಣವನ್ನು "ವಿಹಂಗಮ ದೃಷ್ಟಿ"ಯಿಂದ (ಪಕ್ಷಿಯ ನೋಟದಿಂದ) ನಿರೀಕ್ಷಿಸಿದರೆ ನಮ್ಮ ಹಿಂದೀ ರಾಜಕೀಯ ವಾತಾವರಣವು ಸಾತ್ವಿಕವಾದ ಆಕಾಂಕ್ಷೆಗಳಿಂದ ತುಂಬಿ ಹೋಗಿರುತ್ತದೆ. ಈ ಒಂದು ವರ್ಷದಲ್ಲಿ ಆದ ಮಹಾಜನರ ಯಾವ ಸಭೆಯನ್ನೆ ನೋಡಿರಿ, ಅದರಲ್ಲಿ ಸ್ವರಾಜ್ಯದ ಪ್ರಸ್ತಾಪವು ಇದ್ದೆ ಇರುವುದು. ಈ ಒಂದು ವರ್ಷದ ವರ್ತಮಾನ ಪತ್ರಿಕೆಗಳನ್ನು ಓದಿರಿ, ಅವುಗಳಲ್ಲಿ ಸ್ವರಾಜ್ಯದ ಆಕಾಂಕ್ಷೆಯು ಪ್ರತಿಬಿಂಬಿಸಿರುವದು. ಇಬ್ಬರು ಹಿಂದೀ ಸುಶಿಕ್ಷಿತರು ಪ್ರಯಾಣ ಮಾಡುವಾಗ ರೈಲಿನ ಕೋಣೆಯಲ್ಲಿ ಕುಳಿತುಕೊಂಡಾಗ—ಅವರು ಅಪರಿಚಿತರಾಗಿದ್ದರೂ—ಈ ಸ್ವರಾಜ್ಯದ ವಿಷಯವೆನ್ನುತ್ತ ಬಹು ಪ್ರೇಮದಿಂದ ಒಂದೆರಡು ಮಾತುಗಳನ್ನಾಡುವರು. ಇದು ಇಬ್ಬರು ಹಿಂದೀ ಸುಶಿಕ್ಷಿತರ ವಿಷಯವೇ ಹೀಗೆಂತ ಅಲ್ಲ, ಹಿಂದೀ ಸುಶಿಕ್ಷಿತನೊಟ್ಟಿಗೆ ಉದಾರ ಮನಸ್ಸಿನ ಒಬ್ಬ ಇಂಗ್ಲಿಷ ಮನನು ಸೇರಿದರೂ—ಕೊನೆಗೆ ಆ ಇಂಗ್ಲಿಷ ಮನನ ಮತವು ಹೇಗಿದ್ದರೂ—ಈ ಪ್ರಸ್ತಾಪವು ಬಂದೇ ಬರುವುದು. ಸಾಮಾನ್ಯ ಜನರ ಭಾಷಣ, ಪತ್ರಿಕೆಗಳ ಲೇಖನ, ಸಭೆಗಳ ಕಾರ್ಯಕ್ರಮ, ಇವುಗಳಲ್ಲಿ ಸ್ವರಾಜ್ಯದ ವಿಷಯವು ಚರ್ಚೆಗೆ ಬಂದಿರುವಂತೆಯೆ ಈ ದೇಶದ ಪ್ರತಿನಿಧಿಗಳ ಹೃದಯದಲ್ಲಿ ಈ ಆಕಾಂಕ್ಷೆಯು ಉದ್ಭವಿಸಿರುವುದು. ಎಂದರೆ ವೈಸರಾಯರ ಕೌನ್ಸಿಲಿನಲ್ಲಿ ಕೂಡ ಸ್ವರಾಜ್ಯವು ತನ್ನ ಪ್ರವೇಶವನ್ನು ಪಡಕೊಂಡಿರುವುದು. ಮಾತ್ರವಲ್ಲ, ಈ ಎಲ್ಲ ಸಂಗತಿಗಳ ಪರಿಣಾಮದಿಂದ ಒಮ್ಮೊಮ್ಮೆ ಉದಾರರಾದ ಇಂಗ್ಲಿಷ ಅಧಿಕಾರಿಗಳ ಬಾಯಿಂದ ಕೂಡ ಹಿಂದೀ ಸ್ವರಾಜ್ಯಕ್ಕೆ "ತಥಾಸ್ತು" ಎಂಬ ಆಶೀರ್ವಚನವು ಬಂದು ಹೋಗುವುದು ಆಶ್ಚರ್ಯವಲ್ಲ. ಏವಂಚ ಸಾಮಾನ್ಯ ಜನರ ಸಂಭಾಷಣೆಯಿಂದ ವರಿಷ್ಠ ಕೌನ್ಸಿಲಿನ ಪ್ರತಿನಿಧಿಗಳ 'ಟಿಪ್ಪಣಿ' (Memorandum) ಯ ವರೆಗೆ ಮಾತ್ರ ನಿಲ್ಲದೆ ಅಧಿಕಾರಿಗಳ ಸಮ್ಮತಿಗೂ ಪಾತ್ರನಾದ ಸ್ವರಾಜ್ಯವು ಇದೀ ದೇಶದ ಸಾತ್ವಿಕಾಕಾಂಕ್ಷೆಯೆಂದೆನ್ನಲು ಯಾವ ಅಡ್ಡಿಯೂ ಇಲ್ಲ. ಸಾರ್ವತ್ರಿಕವಾದ ಇಂಥ ಆಕಾಂಕ್ಷೆಯು ರಾಷ್ಟ್ರೀಯ ಸಭೆಯ ಕಾರ್ಯಕ್ರಮದಿಂದ ಮಾತ್ರ ಹೇಗೆ ತಪ್ಪಿ ಹೋದೀತು? ಸರ್ವಗಾಮಿಯಾದ ರಾಷ್ಟ್ರೀಯ ಆಕಾಂಕ್ಷೆಯನ್ನು ರಾಜ್ಯಕರ್ತರ ಮುಂದಿಡುವುದು ಆ ಸಭೆಯ ಕರ್ತವ್ಯಗಳಲ್ಲೊಂದಾಗಿರುವಾಗ ಆ ಕರ್ತವ್ಯದಲ್ಲಿ ಅದು ಹೇಗೆ ತಪ್ಪೀತು! ಮತ್ತು ಅದುದರಿಂದಲೇ ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರೂ, ಸಭೆಯ ಅಧ್ಯಕ್ಷರೂ ತಂತಮ್ಮ ಪ್ರಾಸ್ತಾವಿಕ ಭಾಷಣಗಳಲ್ಲಿ ಸ್ವರಾಜ್ಯಕ್ಕೆ ಅಗ್ರಸ್ಥಾನವನ್ನು ಕೊಟ್ಟಿದ್ದರು. ಇಷ್ಟೆ ಅಲ್ಲ, ಇದೇ ವಿಷಯದ ಠರಾವು ಬಂದಾಗ ಹಿಂದು ಮುಸಲಮಾನ, ಯುರೋಪಿಯನ್ ಮತ್ತು ನೇಟಿವ್ ಕ್ರಿಶ್ಚನ್, ಪಾರ್ಸಿ ಹಾಗೂ ಉಗ್ರಪಕ್ಷ, ಶಾಂತಪಕ್ಷ ಮುಂತಾದ ಎಲ್ಲ ಮತಸ್ಥರೂ ಪಕ್ಷಗಾರರೂ ಕೂಡಿ ಪುಷ್ಟೀಕರಿಸಿ ತಂತಮ್ಮ ಉತ್ಸಾಹವನ್ನೂ, ತತ್ಪರತೆಯನ್ನೂ ವ್ಯಕ್ತಗೊಳಿಸಿದರು. ಇವರ ಚರಿತ್ರೆಯನ್ನು ಹೇಳುವುದಾದರೆ ಬಹುಮಾನಪಟ್ಟ ಮತ್ತು ವೃದ್ಧನೂ ತಜ್ಞರೂ ಆದ ಹಾಗು ಶಾಂತಪಕ್ಷದ ಧುರೀಣರಾದ ಸುರೇಂದ್ರನಾಥ ಬಾನರ್ಜಿಯವರು ಸ್ವರಾಜ್ಯದ ಠರಾವನ್ನು ತಂದರು; ಯುರೋಪಿಯನ್ ಕ್ರಿಶ್ಚನ್ ಮಿಸೆಸ್ ಎನಿಬೆಸಾಂಟ, ನೇಟಿವ್ ಕ್ರಿಶ್ಚನ್ ಬಿ. ಬೆಪ್ಟಿಸ್ಟ್, ಮುಸಲ್ಮಾನ ಎ. ಮಾ. ಮಝರುಲ್ ಹಕ್ಕ, ಪಾರ್ಸಿ ಸರ್ ದಿನಶಾ ಪೆಟಿಟ್, ಪುನಃ ಶಾಂತಪಕ್ಷದ ಬ. ಮಾ. ಮದನಮೋಹನ ಮಾಲವೀಯ, ರಾಷ್ಟ್ರೀಯ ಪಕ್ಷದ ಲೋ. ತಿಲಕ ಮತ್ತು ಖಾಪರ್ಡೆ ಈ ಪ್ರಕಾರ ಒಂದೇ ಈ ಸ್ವರಾಜ್ಯದ ಠರಾವಿನ ಮೇಲೆ ಎಲ್ಲ ಜಾತಿಯ ಮತ್ತು ಮತದ ಹದಿನೇಳು ಗೃಹಸ್ಥರ—ಮುಖಂಡರ—ಭಾಷಣವಾಗಿ ಅದು ಪಾಸಾಯಿತು! ಈ ರೀತಿಯಿಂದ ರಾಷ್ಟ್ರೀಯ ಸಭೆಯ ಸಮ್ಮತಿಯ ಮೊಹರಿಗೆ ಪಾತ್ರವಾದ ಈ ಸ್ವರಾಜ್ಯವನ್ನು ಇನ್ನು ಮುಂದೆಯಾದರೂ ಯಾರೂ ಆಕ್ಷೇಪಿಸಲಿಕ್ಕೆ ಕಾರಣವಿಲ್ಲೆಂದು ನಮ್ಮ ವಾಚಕರು ತಿಳಿಯುಕೊಂಡಾರು. ಆದರೂ ಈ ಹಿಂದೀ ಸ್ವರಾಜ್ಯಕ್ಕೆ ವಿರೋಧಿಗಳಾದ ಎಂಗ್ಲೋ ಇಂಡಿಯನರು ಇನ್ನೂ ಹಿಂದಿನಂತೆ ತಂಬೂರಿಯನ್ನು ಬಾರಿಸುತ್ತಲೇ ಇದ್ದಾರೆ! ಇದ್ದುಕೊಳ್ಳಲಿ! ಅದು ಅವರ ವ್ರತ. ನಮ್ಮ ಹಿತಸಂಬಂಧಕ್ಕೂ ಮತ್ತು ಅವರ ಹಿತಸಂಬಂಧಕ್ಕೂ ಮೂವತ್ತಾರನೆಯ ಅಂಕೆಯನ್ನು ಹೋಲುವಂತಿರುವುದರಿಂದ ಅವರು ನಮ್ಮಲ್ಲಿ ಅವನ್ನು ಪಂಗಡಗಳನ್ನು ಬಯಸುವುದಾಗಲಿ, ನಮ್ಮಲ್ಲಿಯ ಏಕವಾಕ್ಯತೆಯನ್ನು ಬಯಸದಿರುವುದಾಗಲಿ ಆ ಎಂಗ್ಲೋ ಇಂಡಿಯನರ ಪೂರ್ವ ಚರಿತ್ರೆಯನ್ನು ನಿರೀಕ್ಷಿಸಿದರೆ ಆಶ್ಚರ್ಯಕರವಲ್ಲೆಂತ ಹೇಳಬಹುದಾಗಿದೆ. ಇರಲಿ. ನಾವು ನಮ್ಮ ಕರ್ತವ್ಯವನ್ನು ಮಾಡಿದರೆ ಸರಿ. ಮತ್ತು ಈ ಕರ್ತವ್ಯದ ತತ್ವವನ್ನು ಅರಿತೆ ನಮ್ಮ ಹಿಂದೀ ರಾಷ್ಟ್ರವು ಈಗ ಎಲ್ಲ ವಿಧಗಳಿಂದಲೂ ಸಾಧನೆಗಳಿಂದಲೂ ಐಕ್ಯದ ಮಾರ್ಗಕ್ಕೆ ಬಂದಿದೆ. ಈ ವಿಷಯದಲ್ಲಿ ಸ್ವರಾಜ್ಯದ ಠರಾವಿನ ಮೇಲೆ ರಾಷ್ಟ್ರೀಯ ಸಭೆಯು ಮತ್ತು ಮೊಸಲೇಮ ಲೀಗಿನ ಮೊಹರು ಬಿದ್ದುದೆ ಸಾಕ್ಷಿ ಎಂಬುದನ್ನು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ.

ಸ್ಫುಟ ವಿಚಾರಗಳು.

೧. ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ, ಸರಕಾರವು ಈ ಜಿಲ್ಲೆಗೆ ಸೇರಿದ ತೆಂಕು ಪಾರ್ಶ್ವದ ಕಾಸರಗೋಡ ತಾಲೂಕನ್ನು ಮಲಬಾರ್ ಜಿಲ್ಲೆಗೆ ಸೇರಿಸುತ್ತದೆಂಬುದಾಗಿ ಒಂದು ಸುದ್ದಿಯು ನಮ್ಮ ಜಿಲ್ಲೆಯಲ್ಲಿಯೂ ಮಲಬಾರಿನಲ್ಲಿಯೂ ಈಗ ಎಷ್ಟೋ ಸಮಯದಿಂದ ಹಬ್ಬಿಕೊಂಡಿದೆ. ಇದೇ ವಿಷಯದ ಕುರಿತು ನಮ್ಮ ಪತ್ರದಲ್ಲಿ ಆಗಾಗ್ಗೆ ಎಷ್ಟೊ ಪತ್ರಗಳು ಪ್ರಸಿದ್ಧವಾಗಿವೆ. ಈ ಹೊತ್ತು ಸಹ ಇದೆ ವಿಷಯಕ್ಕೆ ಸಂಬಂಧಪಟ್ಟ ಒಂದು ಪತ್ರವನ್ನು ಬೇರೆ ಕಡೆಯಲ್ಲಿ ಅಚ್ಚು ಹಾಕಿರುವೆವು. ಕಾಸರಗೋಡಿನಿಂದ ಬಂದ ಈ ಪತ್ರದಿಂದ—ಯಾರ ಸೌಕರ್ಯಕ್ಕಾಗಿ ಈ ವಿಭಜನೆಯು ಬೇಕೆಂದು ಪ್ರಸ್ತಾಪಗಳು ನಡೆಯುತ್ತವೊ ಅಂಥ ಕಾಸರಗೋಡಿನವರಿಗೆನೆ ಬೇಡಾಗಿದೆಂಬುವುದು ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಮಲಬಾರಿನ ಲೋಕಮತಕ್ಕೂ ಇದು ಅಷ್ಟೊಂದು ಸಮ್ಮತವಾದ ಸಂಗತಿಯಲ್ಲೆಂದು ಕೂಡ ಆ ಪತ್ರದಿಂದ ತಿಳಿಯುತ್ತದೆ. ಹೀಗಿರುತ್ತ ಇದು—ಈ ವಿಭಜನೆಯು—ಯಾರ ಸೌಕರ್ಯಕ್ಕೆ ಆಗಬೇಕಾಗಿದೆ? ಎಂಬ ಪ್ರಶ್ನೆಯು ಪುನಃ ಬರುವುದು. ಜನರ ಸೌಕರ್ಯವೇನು ಇದರಲ್ಲಿ ಇಲ್ಲೆಂದ ಮೇಲೆ ಆಡಳಿತೆಯ ಅಧಿಕಾರಿಗಳ ಸೌಕರ್ಯದ, ದಸೆಯಿಂದ ಈ ವಿಭಾಗವು ಅವಶ್ಯವಾಗಿದೆಂದು ಅರ್ಥಾತ್ ನೆನಸಬೇಕಾಗುತ್ತದೆ. ಈ ಅನುಮಾನವು ನಮ್ಮ ಕಾಸರಗೋಡಿನ ಬಾತಮಿಯ ಪತ್ರದಿಂದಂತೂ ದೃಢವೆ ಆಗುವುದು. ಮೊದಲೆ ಕೊಂಚ ಮಟ್ಟಿಗೆ ವಿಸ್ತೃತವಾಗಿದ್ದ ಮಲಬಾರಿಗೆ ತಿರಿಗಿ ಕಾಸರಗೋಡನ್ನು ಸೇರಿಸಿ ಪುನಃ ಆ ಇಡಿ ಮಲಬಾರನ್ನು ಎರಡು ಜಿಲ್ಲೆಗಳನ್ನಾಗಿ ವಿಂಗಡಿಸುವುದು ಅಧಿಕಾರಿಗಳ ಆಲೋಚನೆಯಲ್ಲಿ ಸೇರಿರಬಹುದೆಂದು ಮಲಬಾರಿನವರು ಸಕಾರಣವಾಗಿ ಅನುಮಾನಪಡುತ್ತಿದ್ದಾರೆ. ಅವರ ಈ ಅನುಮಾನವು ಒಂದುವೇಳೆ ನಿಜವಾದುದಿದ್ದರೆ ಅಧಿಕಾರಿಗಳು ಈ ಅವ್ಯಾಪಾರೇಷು ವ್ಯಾಪಾರವನ್ನು ಯಾಕೆ ಮಾಡುವರೆಂಬುದು ಗೊತ್ತಾಗುವುದಿಲ್ಲ. ಇದರಲ್ಲಿ ತಿರಿಗಿ ತಿರಿಗಿ ಆಶ್ಚರ್ಯವನ್ನುಂಟು ಮಾಡುವ ಇನ್ನೊಂದು ಸಂಗತಿಯೇನೆಂದರೆ ದಕ್ಷಿಣ ಕನ್ನಡ ಮತ್ತು ಮಲಬಾರ ಈ ಎರಡು ಜಿಲ್ಲೆಗಳ ಜನರಲ್ಲಿ ಹಬ್ಬಿಕೊಂಡಿರುವ ಈ ವಿಭಜನೆಯ ಸುದ್ದಿಯು ಬರೆ ಪೇಟೆಯ ವರ್ತಮಾನವೊ ಅಥವಾ ಆಗಲಿಕ್ಕಿದ್ದ ನಿಜವಾದ ಸಂಗತಿಯೋ ಎಂಬುದನ್ನು ಸರಕಾರವು ಇನ್ನಿಷ್ಟರ ವರೆಗೆ ಸಾರ್ವಜನಿಕವಾಗಿ ಪ್ರಕಟಿಸಿದ್ದಂತೆ ಕಂಡು ಬರುವುದಿಲ್ಲ. ಈ ಸಂಗತಿಯು ಕೆಲವು ಕಲ್ಪಕರ ತಲೆಯಲ್ಲಿ ಮಾತ್ರ ಬಂದುದಲ್ಲದೆ ಇದಕ್ಕೆ ಮುಂದೆ ಯಾವ ಮೂರ್ತ ಸ್ವರೂಪವು ಬರಲಿಕ್ಕಿಲ್ಲೆಂದು ಸರಕಾರದ ಅಭಿಪ್ರಾಯವಿದ್ದುದಾದರೆ ಅದನ್ನು ಅದು ಯಾಕೆ ಪ್ರಕಟಿಸಕೂಡದು? ಅಥವಾ ಈ ವಿಭಜನೆಯನ್ನು ಮಾಡುವುದು ಅದಕ್ಕೆ ಅವಶ್ಯಕವಾಗಿ ಕಂಡು ಬಂದುದಾದರೆ ಜನರ ತಿಳುವಳಿಕೆಯ ಬಗ್ಗೆ ಆದರೂ ಈ ಮಾತನ್ನು ಬಹಿರಂಗಪಡಿಸಬಹುದಲ್ಲವೆ? ಹೀಗೆ ತಿಳಿಸುವುದರಿಂದ ಜನರಿಗೆ ತಮ್ಮ ಲೋಕಮತವನ್ನು ವ್ಯಕ್ತಗೊಳಿಸಲು ಸಂದರ್ಭವನ್ನು ಕೊಟ್ಟಂತಾಗುವುದು. ಜನರ ಹಿತಕ್ಕೆ ಸಂಬಂಧಪಟ್ಟ ಸಂಗತಿಯನ್ನು ಜನರಿಗೆ ತಿಳಿಪಡಿಸದೆ ಗುಪ್ತವಾಗಿ ಮಾಡುವುದು ಯೋಗ್ಯವಲ್ಲ. ಸರಕಾರವು ಕೊನೆಗೆ ಇಂಥ ವಿಷಯದಲ್ಲಾದರೂ ಈ ಗೋಪ್ಯಕೃತ್ಯದ ಪ್ರವೃತ್ತಿಯನ್ನು ಬಿಟ್ಟುಬಿಡಬೇಕು. ಸರಕಾರವು ಇದರ ಕುರಿತು ಮೌನವನ್ನು ಸ್ವೀಕರಿಸಿಕೊಂಡ ಕಾರಣ ನಮ್ಮ ಜಿಲ್ಲೆಯ ಮತ್ತು ಮಲಬಾರಿನ ಪ್ರತಿನಿಧಿಗಳಾದ ಮ. ರಾ। ಸ. ಭಟ್ಟರು ಒಡೆಯ ಕೌನ್ಸಿಲಿನಲ್ಲಿ ಈ ಬಗ್ಗೆ ಪ್ರಶ್ನೆಯನ್ನು ಕೇಳಿ ಭಂಗದ ಕುರಿತು ಧರಿಸಿದ ಅದರ ಮೌನವ್ರತವನ್ನು ಭಂಗಪಡಿಸಿ ಈ ಒಗಟನ್ನು ಬಿಚ್ಚಬೇಕೆಂದು ಸೂಚಿಸುವೆವು. ಇದೇ ವಿಷಯದ ಮೇಲೆ ನಾವು ಮೊದಲೊಮ್ಮೆ ನಮ್ಮ ವಿಚಾರಗಳನ್ನೇ ವಿಸ್ತಾರದಿಂದ ವ್ಯಕ್ತಗೊಳಿಸಿರುವುದರಿಂದ ಪ್ರಕೃತ ಇದಕ್ಕೆಂತ ಹೆಚ್ಚು ಬರೆಯಬೇಕಾದುದಿಲ್ಲ.

೨. ಮೇಲೆ ಹೇಳಿದ ವಿಭಜನೆಯಂಥಾದ್ದೆ ಅಲ್ಲ, ಬೇರೆ ಎಷ್ಟೋ ಕೆಲಸಗಳಿಗಾಗಿ ಇದೀ ಜಿಲ್ಲೆಗೆ ಒಂದು ಮಧ್ಯವರ್ತಿಯಾದ ಸಂಘವು ಅಥವಾ ಸಂಸ್ಥೆಯು ಇರಬೇಕೆಂಬುದಾಗಿ ನಾವು ಈ ಮೊದಲು ಎಷ್ಟೋ ಸಾರಿ ಹೇಳಿದ್ದೇವೆ. ಆದರೆ ಅಂಥಾದ್ದೊಂದು ಸಂಸ್ಥೆಯು ನಮ್ಮ ಜಿಲ್ಲೆಯಲ್ಲಿ ಬೇಗನೆ ಅಸ್ತಿತ್ವದಲ್ಲಿ ಬಂದೀತೆಂದು ತೋರುತ್ತದೆ. ಮಾನ್ಯ ಸದಾಶಿವ ಭಟ್ಟರ ಸಹಿಯಿಂದ ಪ್ರಕಟವಾದ ಆಮಂತ್ರಣ ಪತ್ರಿಕೆಗೆ ಮಾನಕೊಟ್ಟು ಇಲ್ಲಿಯ ನಾಗರಿಕರದೊಂದು ಚಿಕ್ಕ ಸಭೆಯು ಕಳೆದ ಆದಿತ್ಯವಾರ ಕಾಸ್ಮೊಪೊಲಿಟನ ಕ್ಲಬಿನಲ್ಲಿ ಸೇರಿತ್ತು. ಅಲ್ಲಿಯ ವೃತ್ತಾಂತವನ್ನು ನಮ್ಮ ಸ್ಥಳಿಕ ಬಾತಮಿಯಲ್ಲಿ ಪ್ರಕಟಿಸಿದ್ದೇವೆ. ಆ ದಿವಸ ಸೇರಿದ ಸಭೆಯಲ್ಲಿ "ಡಿಸ್ಟ್ರಿಕ್ಟ ಎಸೋಸಿಯೇಷನ್" ಎಂಬ ಹೆಸರಿನ ಒಂದು ಸಂಘವು ಸ್ಥಾಪಿಸಬೇಕೆಂತಲೂ, ಅದರ ಉದ್ದೇಶಗಳು ಮುಖ್ಯವಾಗಿ ಜಿಲ್ಲೆಯೊಳಗಿನ ಸುಧಾರಣೆಗಳೆ ಇದ್ದರೂ ಕಾಂಗ್ರೆಸಿಗೆ ಅವಿರೋಧಿಯಾಗಿಯೂ ಕೆಂಬಹುನಾ ಆ ಕಾಂಗ್ರೆಸಿನ ನಿಯಮಗಳಲ್ಲಿರುವ ಪ್ರಥಮ ಪ್ರತಿಜ್ಞೆಯನ್ನು ಈ ಸಭೆಯ ಮೆಂಬರರು ಸಮ್ಮತಿಸುವುದು ಅಗತ್ಯವೆಂತಲೂ ಮತ್ತು ಹೀಗೆ ಸಮ್ಮತಿಸುವುದರಿಂದ ಈ ಸಭೆಯ ಕಡೆಯಿಂದ ಪ್ರತಿನಿಧಿಗಳಾಗಿ ಕಾಂಗ್ರೆಸಿಗೆ ಹೋಗಬಹುದು ಮಾತ್ರವಲ್ಲ, ಹೋಗಬೇಕೆಂತಲೂ ಮಾನ್ಯ ಭಟ್ಟರು ತಂದ ಒಂದು ಸೂಚನೆಯನ್ನು ಸಭಿಕರಲ್ಲಿಯು ಒಪ್ಪಿದು ಸಮ್ಮತಿಸಿದರು. "ಡಿಸ್ಟ್ರಿಕ್ಟ ಎಸೋಸಿಯೇಷನ್" ಎಂಬ ನಾಮಕರಣವನ್ನು ಮಾಡುವಾಗ ಬಹುಮಾನಪಟ್ಟ ಭಟ್ಟರು "ಈ ಸಂಸ್ಥೆಯು ಕಾಂಗ್ರೆಸಿನ ಅನುಯಾಯಿಯಾಗಿರುವುದೆಂ"ಬ ಮಾತನ್ನು ಸ್ಪಷ್ಟವಾಗಿ ಹೇಳಿದರು. ಎಂದಮೇಲೆ ಈ ಹೆಸರಿನ ಸೂಚನೆಗೆ ಪ್ರತಿ ಸೂಚನೆಯು ಬರುವುದು ಸಹಜವಾಗಿಯೆ ಇತ್ತು. ಮತ್ತು ಆ ತೆರದಿಂದ ಒಂದು ಪ್ರತಿಸೂಚನೆಯು ಸಹ ಆ ಸಭೆಯಲ್ಲಿ ಬಂತೆಂಬುದಾಗಿ ಸ್ಥಳಿಕ ವೃತ್ತದಿಂದ ವಾಚಕರಿಗೆ ಗೊತ್ತಾಗುವಹಾಗಿದೆ. ಕಾಂಗ್ರೆಸ ಕಮಿಟಿಯ ನಿಯಮಗಳನ್ನೂ, ಉದ್ದೇಶವನ್ನೂ ಒಪ್ಪಿಕೊಂಡು, ಅದರ ಅನುಯಾಯಿಯಾಗಿದ್ದು ಅದರ ಅಧಿವೇಶನಕ್ಕೆ ಪ್ರತಿನಿಧಿಗಳನ್ನು ಕೂಡ ಕಳುಹಿಸುವ ಹಾಗೆ ಇರುತ್ತ ಹೆಸರಿನಲ್ಲಿ ಮಾತ್ರ "ಕಾಂಗ್ರೆಸ" ಶಬ್ದವು ಬಂದರೆ ಅದು ಹೇಗೆ ಅನರ್ಹ, ಅಶುಚಿ ಅಥವಾ ಶಂಕಾಸ್ಪದವಾಗುವುದು ಇದು ನಮಗಂತೂ ಗೊತ್ತಾಗದು. ಕಾಂಗ್ರೆಸಿನಲ್ಲಿ ಸರ್ ನಾರಾಯಣರಾವ ಚಂದಾವರಕರರಂಥ ರಾಜಮಾನ್ಯರಾದ ಸದ್ಗೃಹಸ್ಥರು ಸೇರಿ ಕೆಲಸವನ್ನು ನಡಿಸುತ್ತಿರುವಾಗ ಅದರ ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿಯಲ್ಲಿ ರಿಟಾಯರ್ಡ (ಉದ್ಯೋಗ ನಿವೃತ್ತ) ಗೃಹಸ್ಥರಿಗೆ ಸೇರಲು ಯಾವ ದೂರದರ್ಶಿತ್ವಕ್ಕೂ ವ್ಯತ್ಯಯ ಕಾಣದು. ಮಾತ್ರವಲ್ಲ ಮದ್ರಾಸ ಕಾಂಗ್ರೆಸಿನ ಅಧಿವೇಶನದಲ್ಲಿ ಸ್ವತಃ ಮದ್ರಾಸಿನ ಗವರ್ನರರೂ ಮತ್ತು ಈ ವರ್ಷ ಲಖನೌ ಪಟ್ಟಣದೊಳಗಿನ ಅಧಿವೇಶನದಲ್ಲಿ ಸರ್. ಜೇಮ್ಸ ಮೆಸ್ಟನ್ ಮುಂತಾದ ಅಧಿಕಾರಿಗಳು ಸಹಾನುಭೂತಿಯಿಂದ ಚಿತ್ತೈಸಿದ ಸಂಗತಿಗಳನ್ನು ಪರ್ಯಾಲೋಚಿಸುವಾಗ ಕ್ಲಬ್ಬಿನೊಳಗಿನ ಮೊನ್ನೆಯ ಸಭೆಯಲ್ಲಿ ನಾಮಕರಣದ ಬಗ್ಗೆ ದೂರದರ್ಶಿತ್ವವು ಮಿತಿಮೀರಿ ಉಪಯೋಗಿಸಲ್ಪಟ್ಟಿತೆಂದು ಹೇಳಬೇಕಾಗುತ್ತದೆ. "ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿ" ಎಂದರೆ ವರ್ಷಕ್ಕೊಮ್ಮೆ ಸಭೆಗೆ ಡೆಲಿಗೇಟರನ್ನು ಕಳುಹಿಸಿ ಬಾಕಿ ಇಡೀ ಸಮಯ ನಿದ್ದೆ ಮಾಡುವುದು, ಜಿಲ್ಲೆಯ ಹಿತಾಹಿತಗಳ ಕಡೆಗೆ ದುರ್ಲಕ್ಷ್ಯ ಮಾಡುವದೆಂಬ ಅರ್ಥವಲ್ಲ. ಅದುದ

ರಿಂದ ಈ ಹೆಸರಿನಲ್ಲಿ ದೋಷವೇನೂ ಕಂಡುಬರುವುದಿಲ್ಲ. ಹೇಗೂ ಇರಲಿ. ಹೆಸರಿನ ಬಗ್ಗೆ ವಿವಾದವು ಬೇಡ. ಹೆಸರು ಯಾವುದಾದರೇನು ? 'ಲಕ್ಷ್ಮೀಪತಿ' ಎಂಬ ಹೆಸರಿನವನು ಎಷ್ಟೋ ಸಾರಿ 'ಭಿಕ್ಷಾಪತಿ'ಯಾಗಿಯೂ ಇರುವನು. 'ಕೊರಗಪ್ಪ'ನು ಎಷ್ಟೋ ಸಾರಿ ಐಶ್ವರ್ಯವಂತನಾಗಿಯೂ ಇರುವನು. ಆದುದರಿಂದ ಬಹುಮಾನಪಟ್ಟ ಭಟ್ಟರ ಸದುದ್ಯೋಗದಿಂದ ಆಗಲಿಕ್ಕಿದ್ದ ಈ ಸಂಘದಿಂದ ಲೋಕಸೇವೆಯು ನಡೆಯಲೆಂದು ನಾವು ಹೃತ್ಪೂರ್ವಕವಾಗಿ ಬಯಸುತ್ತೇವೆ.

೩. ಹಿಂದೂಸ್ಥಾನದ ಮುಖ್ಯ ವ್ಯಾಪಾರ ಸ್ಥಳವಾದ ಮುಂಬಯಿ ಶಹರಿನಲ್ಲಿ ಸಹ ಮಂಗಳೂರು ಬಂದರದ ಸಾಹುಕಾರರಿಗೆ ವಿಶೇಷ ಮನ್ನಣೆಯುಂಟು. 'ಖಾನಾ ಮಂಗಳೂರು ವಾಲಾ' ಅಂದರೆ ಇವರ ಕೂಡೆ ನಡಿಸುವ ಮಾತು ಕಥೆಯೇ ಬೇರೆ, ವ್ಯಾಪಾರ ವಹಿವಾಟಗಳ ರೀತಿಯು ಇತರರಿಗಿಂತ ವಿಶೇಷರಿಯಾಯತಿದ್ದು. ಇಲ್ಲಿಯ ಸಾವುಕಾರರಿಗೆ ಇಷ್ಟು 'ವಿಶೇಷ ಮನ್ನಣೆ ಮುಂಬಯಿಯಲ್ಲಿತ್ತು. ಈಗಲೂ ಇರಬಹುದೆಂದು ನಮಗೆ ಕಾಣುವದು. ಮುಂಬಯಿಯಲ್ಲಿ ಹೀಗೆ ಮಂಗಳೂರು ಬಂದರದ ಸಾಹುಕಾರರು ಹೆಸರುವಾಸಿಯಾಗಲು ಕಾರಣವೇನು? ಈ ಪ್ರಶ್ನೆಗೆ ಉತ್ತರವು ಎರಡು ಪಕ್ಷದವರಿಂದ ಎರಡು ವಿಧವಾಗಿ ದೊರಕುತ್ತದೆ. ಸರಕುಗಳು ಖರೀದಿ ಮಾಡುವಾಗ್ಯೆ ಅನಾವಶ್ಯಕ ಕಸಾಕಸಿ ಮಾಡಿ ವೃಥಾ ಸಮಯ ಕಳೆಯುವ ದುರ್ಗುಣವು ಮಂಗಳೂರಿನವರಲ್ಲಿಲ್ಲ. ಸಾಮಾಗ್ರಿಗಳನ್ನು ಕಡ ಪಡಕೊಂಡರೂ ಹೇಳಿದ ವಾಯಿದೆಯೊಳಗೆ ಬಹಳ ವಿಶ್ವಾಸದಿಂದ ಹಣ ವಸೂಲು ತಂದು ಕೊಡುವರು. ಈ ಗುಣಗಳಿಂದ ಇಲ್ಲಿಯವರು ಮುಂಬಾಯಿಯಲ್ಲಿ ಮೆರೆದರು—ಎಂತ ಕೆಲವು ವರುಷಗಳಿಂದ ವ್ಯಾಪಾರ ನಡಿಸುತ್ತಿದ್ದ ಪ್ರಾಚೀನ ವ್ಯಾಪಾರಸ್ಥರು ಹೇಳುತ್ತಿದ್ದಾರೆ. ವ್ಯಾಪಾರದ ಅರ್ವಾಚೀನರು ಹೀಗೆನ್ನುವರು. ದಕ್ಷಿಣಕನ್ನಡ ಜಿಲ್ಲೆಗೆ ಅನೇಕ ಕಾಲದಿಂದ ರೈಲ್ವೆ ಮಾರ್ಗಗಳೇ ಮೊದಲಾದ ಸೌಕರ್ಯಗಳಿಲ್ಲ. ತಿಂಗಳಿಗೆ ಅಥವಾ ಎರಡು ತಿಂಗಳಿಗೊಮ್ಮೆ ಪತ್ತೆಮಾರಿಗಳು ಮುಂಬಯಿಂದ ಬರುವದಿತ್ತು. ಮುಂಬಾಯಿಗೆ ಬರುವಂಥಾ ಸರಕುಗಳು ಎಲ್ಲಿಂದ ಮತ್ತು ಹೇಗೆ ಬರುತ್ತದೆಂಬುದು ಗೊತ್ತಿರಲಿಲ್ಲ. ಇಂಥಾ ಅಜ್ಞಾನದ ಅವಸ್ಥೆಯನ್ನು ನೋಡಿಕೊಂಡು ಮುಂಬಾಯಿಯ ಸಾಹುಕಾರರು ಇವರನ್ನು ಕರೆದು ಬಹಳವಾಗಿ ಸತ್ಕರಿಸಿ, ಸರಕುಗಳನ್ನು ಇವರಿಗೆ ಕೊಟ್ಟು ವಿಶೇಷವಾಗಿ ಲಾಭವನ್ನು ಪಡಿಯುತ್ತಿದ್ದರು. ವಿಶೇಷ ಲಾಭವು ಮಂಗಳೂರಿನವರಿಂದ ಮುಂಬಯಿಯವರಿಗೆ ಪ್ರಾಪ್ತವಾಗುತ್ತಿತ್ತಾದ್ದರಿಂದ 'ಖಾನಾ ಮಂಗಳೂರು ವಾಲಾ' ಎಂತ ಮಂಗಳೂರಿನವರು ಅಲ್ಲಿ ಖ್ಯಾತಿಪಡೆದರು. ಅರ್ವಾಚೀನ ಮತ್ತು ಪ್ರಾಚೀನ ವ್ಯಾಪಾರಸ್ಥರ ಈ ಅಭಿಪ್ರಾಯಗಳನ್ನು ಪರ್ಯಾಲೋಚಿಸಿದರೆ ಮಂಗಳೂರಿನವರ ಖ್ಯಾತಿಯು ಕಾರಣಗಳೇ ತೋರಿಬರುವವಲ್ಲದೆ ವಿರೋಧಾರ್ಥವು ಕಂಡುಬಾರದು. ಇದೆಲ್ಲ ಹಾಗಿರಲಿ, ಮಂಗಳೂರ ಸಾಹುಕಾರರ ಪ್ರಸ್ತಾಪವು ಪ್ರಕೃತ ಇಷ್ಟೇನು ವಿಶೇಷ ಎಂತ ವಾಚಕರಿಗೆ ತೋರಿಬರಬಹುದು. ಇಲ್ಲಿ ಹೊಗೆಸೊಪ್ಪಿನ ಸಾಹುಕಾರರು ಈ ತಿಂಗಳ ತಾ. ೧೦ರಲ್ಲಿ ಸಭೆ ಕೂಡಿ ಮಾಡಿದ ನಿರ್ಣಯವನ್ನು ಕುರಿತು ಪ್ರಸ್ತಾಪಿಸುವಾಗ ಇಲ್ಲಿಯ ಬಂದರದಲ್ಲಿ ಸಾಹುಕಾರರು ಸಭೆ ಕೂಡಿದ ವೃತ್ತಾಂತವನ್ನು ಹೇಳಲು ಮರೆತುಬಿಟ್ಟೆವು. ಬಂದರದ ಸ್ಥಿತಿಗತಿಯು ಕೆಟ್ಟಿದೆ. ಇದನ್ನು ಒಳ್ಳಿತಾಗಿ ಮಾಡಿ ಇತರ ಬಂದರುಗಳಂತೆ ಇದಕ್ಕೂ ಸಹ ತಕ್ಕ ಗೌರವವನ್ನು ತರುವ ವ್ಯವಸ್ಥೆಯನ್ನು ಮಾಡಬೇಕೆಂದು ಸಭೆಯವರು ಅಭಿಪ್ರಾಯಪಟ್ಟಿರುವರಂತೆ. ಇಂಥಾ ಸಮಯದಲ್ಲಿ ಮಂಗಳೂರಿನ ಬಂದರದ ಪ್ರಸ್ತಾಪ ಮಾಡಬೇಕೆಂತ ಅಪೇಕ್ಷಿಸಿದೆವು. 'ಖಾನಾ ಮಂಗಳೂರು ವಾಲಾ' ಇಂಥವರು ಇರುವಂಥ ಬಂದರದ ಸ್ಥಿತಿಗತಿಯು ಕೆಟ್ಟಿದೆ ಅಂದರೇನು, ಯಾವ ಕಾರಣದಿಂದ ಮತ್ತು ಹೇಗೆ? ಅದನ್ನು ತಿಳಿಯಬೇಕೆಂತಲೇ ಈ ವಿಷಯವನ್ನು 'ಖಾನಾ ಮಂಗಳೂರು ವಾಲಾ' ಇವರಿಂದ ಪ್ರಾರಂಭಿಸಿರುತ್ತೇವೆ. ಸಾಹುಕಾರರ ಸಭೆಯ ಮುಂದಿನ ಗತಿಯನ್ನು ತಿಳಕೊಂಡು ಇನ್ನೊಮ್ಮೆ ಈ ವಿಚಾರ ಮಾಡುವದು ಹಿತ.

ಸ್ಥಳೀಕ—ಮಂಗಳೂರು.

ಯುದ್ಧ ಫಂಡಿನ ಜಾತ್ರೆಯ ಫಲಿತಾಂಶವನ್ನು ಬರೆಯುವಾಗ ನಾವು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದ ಒಂದೇ ಒಂದು ಮುಖ್ಯವಾದ ಮಾತು ಇರುವದು—"ನಿಮ್ಮ ಬಗ್ಗೆ ರಣರಂಗದಲ್ಲಿ ಕಾದಾಡುವವರಿಗಾಗಿ ಚಿಂತಿಸಿರಿ"—ಶಹಬಾಸ್! ದಕ್ಷಿಣ ಕನ್ನಡ! ನಿನ್ನ ಚಿಂತನೆ ಏನೆಂಬುದನ್ನು ಕಾರ್ಯತಃ ತೋರಿಸಿ ಕೊಟ್ಟೆ. ವಿಶೇಷತ್ವದಲ್ಲಿಯೂ ವಿಸ್ತಾರದಲ್ಲಿಯೂ ಸಾಧಾರಣ ಎರಡಷ್ಟು ದೊಡ್ಡದಾಗಿರುವ ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಇದೇ ಈಗಿನ ನಮ್ಮ ಜಿಲ್ಲಾ ಕಲೆಕ್ಟರ್ ದೊರೆಗಳವರಾದ ಲಾಯೊನಲ್ ವ್ಯಾಬರ್ಟ ದೊರೆಗಳು ಕಳೆದ ವರ್ಷ ಆ ಜಿಲ್ಲೆಯಲ್ಲಿ ಇಂಥಾ ಜಾತ್ರೆಯನ್ನು ಏರ್ಪಡಿಸಿದಾಗ ರೂ. ೭೦೦೦ ಮಾತ್ರ ಕೂಡಿಬಂದಿತ್ತು. ಇಲ್ಲಿಯ ಮೊನ್ನೆಯ ಜಾತ್ರೆಯಿಂದ ಸಂಗ್ರಹಿಸಲ್ಪಟ್ಟ ಐವಜು ಮೊನ್ನೆಯ ತನಕ ರೂ. ೧೫,೦೦೦ಕ್ಕೆ ಏಕ್ಕಿರುವದೆಂದು ಕೇಳುತ್ತೇವೆ. ಇನ್ನು ಅಲ್ಲಲ್ಲಿ ಸಂಗ್ರಹಿಸಲ್ಪಟ್ಟದ್ದು ಅಲ್ಪಸ್ವಲ್ಪ ಬರಲಿಕ್ಕೆ ಇರುವದು; ಮತ್ತು ಇದರಲ್ಲಿ ಖರ್ಚಿನ ಅಂಶವನ್ನು ಕಳೆಯಲಿಕ್ಕಿರುವದು. ಬೆಳ್ಳಿಗೆ ಒಂದೆರಡು ದಿವಸಗಳಲ್ಲಿ ನಮ್ಮ ಬಗ್ಗೆ ರಣರಂಗದಲ್ಲಿ ಕಾದಾಡುವವರ ಬಗ್ಗೆ ರೂ. ೧೫,೦೦೦ಕ್ಕೆ ಕಡಮೆಯಾಗದ ಮೊಬಲಗು ಈ ಜಿಲ್ಲೆಯು ಕಳುಹಿಸಿಕೊಡಲು ಶಕ್ತವಾಗುವದೆಂಬುದನ್ನು ಸರ್ವರೂ ಕೇಳಿ ಸಂತೋಷಪಡದೆ ಇರಲಾರರು. ನಮ್ಮ ಜಿಲ್ಲೆಯ ಸಾಮಾನ್ಯ ಸ್ಥಿತಿಗತಿ, ಅದರ ಉತ್ಪತ್ತಿ, ನಿವಾಸಿಕರ ವೃತ್ತಿ ಮತ್ತು ನಾವು ಈತನಕ ಮಹಾ ಯುದ್ಧದ ಸಹಾಯಾರ್ಥವಾಗಿ ಕೊಟ್ಟ ಮೊಬಲಗುಗಳ ತುಲನೆಯನ್ನು ಈ ಸಂಸ್ಥಾನದ ಇತರ ಯಾವ ಜಿಲ್ಲೆಗಳೊಡನೆಯಾದರೂ ಮಾಡಿ ನೋಡಿದರೆ ನಮ್ಮ ಜಿಲ್ಲೆಯು ಪ್ರಥಮ ಸಾಲಿನ ಸ್ಥಾನಗಳಲ್ಲೊಂದನ್ನು ಪಡೆಯುವುದರೆಂಬುದರಲ್ಲಿ ಸಂದೇಹವಿರದು.

ಯುದ್ಧ ಫಂಡಿನ ಜಾತ್ರೆಯಲ್ಲಿ ಈ ಏರ್ಪಾಡನ್ನು ಇಲ್ಲಿ ಪ್ರಥಮದಲ್ಲಿ ಸೂಚಿಸಿ ಜಾತ್ರೆಯ ಮುಖ್ಯ ಉದ್ದೇಶವು ಸಾಂಗವಾಗಿ ನೆರವೇರುವಂತೆ ಮಾಡಿದ ಜಾತ್ರೆಯ ಕಮಿಟಿಯ ಪ್ರೆಸಿಡೆಂಟ ಮತ್ತು ಇವರಿಗೆ ಬೇಕಾದಂತೆ ಸರ್ವ ಸಹಾಯ್ಯವನ್ನು ಕೊಟ್ಟ ಕಮಿಟಿ ಮೆಂಬರರುಗಳ ಸಾಹಸವಾದರೋ ತುಂಬಾ ಶ್ಲಾಘನೀಯವಾಗಿತ್ತು. ಹಜೂರು ಶಿರಸ್ತೆದಾರರಾದ ಮ| ರಾ| ರಾ| ಎಮ್. ಅಚ್ಯುತಯ್ಯ, ಮ| ರಾ| ರಾವ್ ಬಹದ್ದೂರ್ ಎಸ್. ಸುಬ್ಬರಾವ್, ಮುನಿಸಿಪಾಲ್ ಚೇರ್ಮೆನರಾದ ರಾವ್ ಸಾಹೇಬ ಡಾಕ್ಟರ್ ವರ್ಗಿಸ್, ಮ| ರಾ| ಸುಬೇರ ರಘುನಾಥಯ್ಯ, ಮ| ರಾ| ಎನ್. ವೆಂಕಟರಾವ್ ಮತ್ತು ಮ| ರಾ| ವಕೀಲ ಎಮ್. ಎನ್. ಪ್ರಭು ಈ ಸದ್ಗೃಹಸ್ಥರ ಪರಿಶ್ರಮವು ವಿಶೇಷವಾಗಿತ್ತು.

ಜಾತ್ರೆಯ ಅಂಗಣದಲ್ಲಿ ಚಲಾವಣೆ ಬಗ್ಗೆ ತಯಾರಿಸಿದ ಎರಡಾಣೆ ಟಿಕೇಟುಗಳನ್ನು ಉಪಯೋಗಿಸುವುದರಲ್ಲಿ ವಿಶೇಷ ಗಲಿಬಿಲಿ ಇದ್ದದ್ದರಿಂದಲೂ ಈ ಎರಡಾಣೆ ಟಿಕೇಟುಗಳಿಗೆ ಬೇಕಾದಷ್ಟು ಸಾಮಾಗ್ರಿಗಳು ಸಂತೆಗಳಲ್ಲಿ ಜಾತ್ರೆಯ ಪ್ರಾರಂಭವಾದ ಒಂದೆರಡು ತಾಸುಗಳಲ್ಲಿಯೇ ಖರ್ಚಾಗಿ ಹೋಗಿ ನಂತರ ಸಿಕ್ಕದೆ ಹೋದ್ದರಿಂದಲೂ ಎರಡಾಣೆ ಟಿಕೇಟುಗಳನ್ನು ಹಲವರು ಉಪಯೋಗವಿಲ್ಲದೆ ಮನೆಗೆ ತಕ್ಕೊಂಡು ಹೋಗಬೇಕಾಗಿ ಬಂದುದರಿಂದಲೂ ಜಾತ್ರೆಯಿಂದ ಯುದ್ಧ ಫಂಡಿಗೆ ಸಿಕ್ಕುವ ಮುನಾಫೆಯು ಕಡಮೆಯಾಗಿರಬಹುದೆಂದು ಕೆಲವರ ಅಭಿಪ್ರಾಯವಿದೆ. ಆದರೆ ಜಮೆಯಾದ ಮೊಬಲಗನ್ನು ತಿಳಿದರೆ ಇಂಥಾ ಅಭಿಪ್ರಾಯವು ತಪ್ಪು ಮತ್ತು ಇಂಥಾ ಗಲಿಬಿಲಿಯು ಜಾತ್ರೆಯ ಉದ್ದಿಷ್ಟ ಹೇತುವಿನ ಮುಂದೆ ಪರಿಗಣಿಸತಕ್ಕದ್ದಲ್ಲವೆಂತ ಭಾವಿಸುತ್ತೇವೆ.

ಪ್ರತಿ ವರ್ಷದಲ್ಲಿಯೂ ಇಂಥಾ ಜಾತ್ರೆಗಳು ನಡೆದು ಯುದ್ಧ ಫಂಡಿಗೆ ಸಹಾಯ ದೊರಕಲಿ ಎಂತ ಕೆಲವರ ಅಪೇಕ್ಷೆ ಇದೆ. ತಿಥಿಯ ಮೇಲೆ ತಿಥಿ ಬರಲಿ ಎಂತ ಹಿಂದೆ ಭೋಜನಪ್ರಿಯರಾದ ಯಾರೋ ಬ್ರಾಹ್ಮಣರು ಅಪೇಕ್ಷಿಸಿದಂತೆ ನಾವು ಅಪೇಕ್ಷಿಸೆವು. ಬ್ರಿಟಿಷ ಸಾಮ್ರಾಜ್ಯಕ್ಕೆ ಜಯವು ಬೇಗನೆ ಪ್ರಾಪ್ತವಾಗಿ ಸರ್ವ ಸೃಷ್ಟಿಗೂ ಅತೀ ಭೀಕರವಾದ ಈ ಯುದ್ಧವು ಬೇಗನೆ ಮುಗಿದು ಯುದ್ಧ ಫಂಡುಗಳು ಆ ಮೂಲಕ ಕೊನೆಗೊಳ್ಳಲಿ ಎಂತ ನಾವು ಪ್ರಾರ್ಥಿಸುತ್ತೇವೆ.

ಕಾರ್ಯಕ್ರಮ ಪಟ್ಟಿಯಲ್ಲಿ ಸೂಚಿಸಿದ ಸಮಯ ಪ್ರಕಾರ ವಿಹಾರದ ಪ್ರಾರಂಭವು ಆಗದೆ ಇದ್ದರೂ ಕಾರ್ಯಕ್ರಮ ಪಟ್ಟಿಯಲ್ಲಿ ಸೂಚಿಸಿದ ನಾಟಕ, ನರ್ತನ, ಗೊಂಬೆಆಟ, ಪ್ರದರ್ಶನಗಳು, ಸಂತೆಗಳು ಇತ್ಯಾದಿ ಪೂರ್ಣವಾಗಿದ್ದವು. ಅಲೆಕ್ಸಂಡ್ರಿಯಾ ಥಿಯೇಟ್ರಿಕಲ್ ಕಂಪೆನಿಯ ನಾಟಕಗಳು, ರಾಜೇಶ್ರಿ ನಗರಕಾರರವರ ಜವಳಿಯ ಪ್ರದರ್ಶನ, ಕೆಡ್ಡೂರ್ ವೆಂಕಟರಾವ್ ರವರ ಆಭರಣಗಳ ದೇಖಾವೆಗಳು ಬಹಳ ಮನೋರಂಜಕಗಳಾಗಿದ್ದವು. ಮಹಿಳಾ ಸಭೆಯವರ ಮತ್ತು ಕಲೆಕ್ಟರರ ಪತ್ನಿಗಳ ಪುಸ್ತಕ ಸಂತೆಗಳಲ್ಲಿ ಬಹಳ ಗಿರಾಕಿಗಳಿದ್ದರು. ಕೈಗಾರಿಕೆಗಳ ಪ್ರದರ್ಶನಗಳಲ್ಲಿ ಇಲ್ಲಿಯ ಡಿಪ್ರೆಸ್‌ಡ್ ಕ್ಲಾಸ್ ಮಿಶನಿನ ಪಂಚಮರಿಂದ ತಯಾರಿಸಲ್ಪಟ್ಟ ಕುರ್ಚಿ ಮೇಜು ಮೊದಲಾದ ಮರದ ಸಾಮಾನಗಳೂ, ಸೈಂಟ್ ಜೋಸೆಫ್ ಎಸ್ಯಾಲಮ್, ಮತ್ತು ಬಾಸೆಲ್ ಮಿಶನಿನವರ ಕಾರ್ಖಾನೆಗಳಲ್ಲಿ ತಯಾರಿಸಲ್ಪಟ್ಟ ಒಡವೆಗಳೂ, ಕಾಣೂರಿನ ಸರಕಾರಿ ಸಾಬೂನುಗಳೂ ಪ್ರಶಂಸನೀಯವಾಗಿದ್ದವು. ಕೃಷಿ ಪ್ರದರ್ಶನಗಳಲ್ಲಿ ಮ| ರಾ| ಕೆ. ಟಿ. ಆಳ್ವರವರು ಕಬ್ಬಿನ ವ್ಯವಸಾಯದವರಿಗೆ ಬೇಕಾಗಿರುವ ಹೊಸ ನಮೂನೆಯ ಗಾಣ, ಒಲೆ, ಮತ್ತು ಮೋರಿಸಿಯಸ್ ಮತ್ತು ಬಾರ್ಬಡೆಸ್ ಜಾತಿಯ ಕಬ್ಬುಗಳು ಇವುಗಳನ್ನಿಟ್ಟುಕೊಂಡು ಜನರಿಗೆ ಇವುಗಳ ಉಪಯೋಗವನ್ನು ವಿವರಿಸುತ್ತಿದ್ದರು. ಡಿ. ಚಿರಿಯನ್ ನೈಟ್ರೇಟ್ ಪ್ರೊಪೆಗಾಂಡದವರು ಇದರ ಸಮೀಪ ತಮ್ಮ ಸಂತೆಯನ್ನಿಟ್ಟು ನೈಟ್ರೇಟ್ ಒಫ್ ಸೋಡಾ ಮೊದಲಾದ ಗೊಬ್ಬರವನ್ನೂ ಅವುಗಳನ್ನು ಉಪಯೋಗಿಸುವ ವಿಧಾನಗಳಿರುವ ಚಿಕ್ಕ ಪುಸ್ತಕಗಳನ್ನೂ ಹಂಚುತ್ತಿದ್ದರು.

ಸಾಯಂಕಾಲ ದೀಪೋತ್ಸವದ ಗಲಿಬಿಲಿಯಲ್ಲಿ ಹೊರಗಿನ ಕಮಾನಿಗೆ ಬೆಂಕಿ ಬಿದ್ದರೂ ಅದು ಕೂಡಲೇ ನೊಂದಿಸಲ್ಪಟ್ಟದ್ದರಿಂದ ಇದರಿಂದ ವಿಶೇಷ ಏನೂ ಸಂಭವಿಸಿಲ್ಲ.

[illegible] ಟನ್ ಕ್ಯಾದ್ಗನಲ್ಲಿ ಜಿಲ್ಲಾ ಜನರ ಒಂದು ಸಭೆಯು ಕಳೆದ ತಾ. ೭ನೇ ಆದಿತ್ಯವಾರ ಸಾಯಂಕಾಲ ಕೂಡಿತ್ತು. ಮ| ರಾ| ರಾ| ವಕೀಲ ಗಂಗೊಳ್ಳಿ ಕೃಷ್ಣರಾಯರವರು ಸಭಾ ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು. ರವಿನ್ಯೂ ಪೊಲೀಸು ಇತ್ಯಾದಿ ವಿಷಯಗಳಲ್ಲಿ ಈ ಜಿಲ್ಲೆಯ ಜನರು ಪಡುವ ಸಂಕಷ್ಟಗಳನ್ನು ಸಭಿಕರಿಗೆ ವಿವರಿಸಿ ಇಂಥಾದೊಂದು ಸಂಸ್ಥೆಯು ಇದ್ದರೆ ಈ ಕಷ್ಟಗಳ ನಿವಾರಣೆಯ ಪ್ರಯತ್ನವನ್ನು ವ್ಯವಸ್ಥಿತವಾಗಿ ಹೇಗೆ ನಡಿಸಬಹುದೆಂದು ಬಹುಮಾನಪಟ್ಟ ಸದಾಶಿವ ಭಟ್ಟರವರು ಸಭಿಕರಿಗೆ ವಿವರಿಸಿ ಹೇಳಿ ಇಂಥಾ ಸಂಘವನ್ನು ಸ್ಥಾಪಿಸುವದು ಅಗತ್ಯವೆಂತ ಸೂಚಿಸಿದರು. ಈ ಸೂಚನೆಯು ಸಭಿಕರೆಲ್ಲರಿಂದಲೂ ಮಂಜೂರು ಮಾಡಲ್ಪಟ್ಟಿತು. ಕೊಂಗ್ರೆಸ್ ಸಭೆಯ ಆದರ್ಶವನ್ನು ಈ ಸಂಘದ ಆದರ್ಶವನ್ನಾಗಿಟ್ಟುಕೊಂಡು ಈ ಸಂಘದ ಬಗ್ಗೆ ತಯಾರಿಸಲ್ಪಟ್ಟ ನಿಯಮಗಳು ನಂತರ ಸಭೆಯಲ್ಲಿ ಓದಲ್ಪಟ್ಟವು. ಡಿಸ್ಟ್ರಿಕ್ಟ್ ಕೊಂಗ್ರೆಸ್ ಕಮಿಟಿಯೆಂಬ ಹೆಸರು ಈ ಸಂಘಕ್ಕೆ ಉಚಿತವೆಂತ ಸಭೆಯಲ್ಲಿ ಸೂಚಿಸಲಾಯಿತು. ಆದರೆ ಕೊಂಗ್ರೆಸ್ ಶಬ್ದವು ಆಕ್ಷೇಪಕರವಲ್ಲದಿದ್ದರೂ ಅದು ಬೇಡ ಎಂತಾಯಿತು. ಆದ್ದರಿಂದ ಡಿಸ್ಟ್ರಿಕ್ಟ್ ಎಸೋಶಿಯೇಶನ್ ಎಂಬ ಹೆಸರಲ್ಲಿಯೇ ಇದನ್ನು ಸ್ಥಾಪಿಸಬೇಕೆಂತ ನಿರ್ಣಯಿಸಲ್ಪಟ್ಟಿತು. ಈ ಎಸೋಶಿಯೇಶನಿಗೆ ಮೆಂಬರರನ್ನು ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಕೂಡಿಸುವದೆ ಒಂದು ಹಂಗಾಮಿ ಕಮಿಟಿಯು ನೇಮಿಸಲ್ಪಟ್ಟಿರುವದು. ಬಹುಮಾನಪಟ್ಟ ಸದಾಶಿವ ಭಟ್ಟರವರು ಈ ಕಮಿಟಿಯ ಕಾರ್ಯದರ್ಶಿಗಳಾಗಿರುತ್ತಾರೆ.

ಬಂಟವಾಳದ ಆಸ್ಪತ್ರೆಯಲ್ಲಿ ಡಾಕ್ಟರರಾಗಿರುವ ಮ| ರಾ| ರಾ| ಅಣ್ಣಪ್ಪ ಕಾಮತರವರು ಬಂಟವಾಳದಿಂದ ಕಾರ್ಕಳಕ್ಕೂ, ಕಾರ್ಕಳದಲ್ಲಿ ಎಪ್ರೊತ್ಕರಿಗಳಾಗಿರುವವರು ಬಂಟವಾಳಕ್ಕೂ ವರ್ಗಾಯಿಸಲ್ಪಟ್ಟಿರುವರು. ಡಾಕ್ಟರ್ ಕಾಮತರವರನ್ನು ಇಷ್ಟು ಬೇಗನೆ ಬಂಟವಾಳದಿಂದ ವರ್ಗಾಯಿಸ ಕೂಡದೆಂದು ಅಲ್ಲಿಯ ಜನರು ಡಿಸ್ಟ್ರಿಕ್ಟ್ ಸರ್ಜನರಿಗೂ, ಜಿಲ್ಲಾ ಕಲೆಕ್ಟರಿಗೂ ಒಂದು ಮನವಿಯನ್ನು ಮಾಡಿರುವರು. ಕಾಮತರವರನ್ನು ಏಕೆ ವರ್ಗಾಯಿಸ ಕೂಡದೆಂಬುದಕ್ಕೆ ಕಾರಣ ಇತ್ಯಾದಿಗಳನ್ನು ಕೊಟ್ಟು ಒಬ್ಬ ಬಂಟವಾಳ ನಿವಾಸಿಕರು ಒಂದು ಪತ್ರವನ್ನು ಬರೆದಿರುತ್ತಾರೆ. ಈ ಪತ್ರವು ನಮ್ಮ ಕೈಸೇರುವಾಗ ವಿಳಂಬವಾದ್ದರಿಂದ ಅದನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲು ಆಗಲಿಲ್ಲ.

ಹಿರಿಯಡ್ಕದಲ್ಲಿ ಒಂದು ಸಾರ್ವಜನಿಕ ಪುಸ್ತಕಾಲಯವು ಇತ್ತಲಾಗೆ ತೆರೆಯಲ್ಪಟ್ಟಿರುವದೆಂಬುದಾಗಿ ಒಬ್ಬ ಬಾತ್ಮೀದಾರರು ಬರೆದಿರುವರು. ಪುಸ್ತಕಾಲಯಗಳು ಕ್ಲಬ್ಬುಗಳು ಇತ್ತಿತ್ತ ಹೆಚ್ಚೆಚ್ಚಾಗಿ ಸ್ಥಾಪಿಸಲ್ಪಡುವದು—ಶುಭಸೂಚಕ ಚಿನ್ಹೆಯೇ ಸರಿ. ಆದರೆ ಇಂಥವುಗಳು ವೃತ್ತಿವಂತರ ವೃತ್ತಿಯನ್ನು ಸಹ ಕೆಡಿಸುವ ಬರೇ ಇಸ್ಪೀಟು ಆಟಗಳ ವಿಹಾರಮಂದಿರಗಳಾಗದಂತೆ ಸ್ಥಾಪಕರು ಜಾಗರೂಕರಾಗಿರುವದು ಒಳ್ಳೇದು.

ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರರಾಗಿರುವ ಮಿ| ಯೇಟ್ಸ್ ದೊರೆಗಳವರು ಇಲ್ಲಿಗೆ ಬಂದಿರುವರು. ಒಂದೆರಡು ದಿನಗಳಿಂದ ಇಲ್ಲಿಯ ವಿದ್ಯಾ ಇಲಾಖೆಯ ಆಫೀಸರರ ಕನ್ಸರೆನ್ಸು ನಡಿಯುತ್ತಿರುವದು.

ಕಳೆದ ನವಂಬರ ತಾ. ೧೬ನೇ ರಾತ್ರಿ ಗಣಪತಿ ಸೆಕಂಡರಿ ಶಾಲೆಯ ಸಮೀಪದಿಂದ ಇಲ್ಲಿಯ ಪಂದ್ಯಾಟಗಳ ಪಂಗಡಗಳವರು ಬಹುಮಾನ ಕಪ್ಪುಗಳೊಡನೆ ಮೆರವಣಿಗೆ ಬರುತ್ತಿರುವಾಗ ಆ ಮೆರವಣಿಗೆಯೊಡನೆ ಇದ್ದ ೯ ವರ್ಷ ವಯಸ್ಸಿನ ವಾಮನ ಕಿಣಿ ಎಂಬ ಬಾಲಕನ ಕೈಯಲ್ಲಿದ್ದ ಚಿನ್ನದ ನಾಲ್ಕು ಬಳೆಗಳನ್ನು ಕಸಕೊಂಡ ಬಂಟ್ವಾಳದ ಅಣ್ಣಪ್ಪ ಬೋಳಗನಿಗೆ ೪ ತಿಂಗಳ ಕಠಿಣ ಸಜೆ, ೪ ತಿಂಗಳ ಸಾಧಾರಣ ಸಜೆ, ಒಟ್ಟಿಗೆ ೮ ತಿಂಗಳ ಸಜಾ ವಿಧಿಸೋಣಾಗಿದೆ.

ಕೊಡಿಯಾಲಬೈಲು ಮ| ರಾ| ಕೃಷ್ಣ ಸುಲಾಯರ ಮನೆಯಿಂದ ಕಳವಾದ ಸಂಬಂಧ ಕಳ್ಳರ ಪತ್ತೆಮಾಡಿ ಕೊಡುವರೆ ಪೋಲಿಸಿನವರಿಗೆ ಸಹಾಯ್ಯ ಮಾಡಿದ ಜುವಾನ್ ಲುಯಿಸನಿಗೂ ಮಂಜಪ್ಪ ಸೆಟ್ಟಿಗೂ ಪೋಲಿಸ ಸುಪರಿಂಟೆಂಡೆಂಟ ದೊರೆಗಳವರು ನಾಲ್ಕು ನಾಲ್ಕು ರೂಪಾಯಿಗಳ ಇನಾಂ ಕೊಡಿಸಿರುತ್ತಾರೆ.

ಮ| ರಾ| ಕೃಷ್ಣಸುಲಾಯರ ಮನೆಯಿಂದ ಕಳವು ಮಾಡಿದ್ದಾಗಿ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಕೆ. ಡಿ. ಮೂಸೆ ಬ್ಯಾರಿನಿಗೆ ೫ ವರ್ಷಗಳ ಕಠಿಣ ಸಜಾ, ಕೊರಗ ಸೆಟ್ಟಿಗೆ ೩ ವರ್ಷಗಳ ಕಠಿಣ ಸಜಾ ವಿಧಿಸೋಣಾಗಿದೆ. ಈ ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟ ತಿಮ್ಮಪ್ಪನನ್ನು ಸೆಶ್ಶನ್ಸ ಜಡ್ಜರು ಖುಲಾಸುಪಡಿಸಿರುತ್ತಾರೆ.

ಕಂಕನಾಡಿಯಲ್ಲಿ ತಾ. ೧೦ನೇ ರಾತ್ರಿ ನಡೆದ ಬೈದ್ಯರ ನೇಮದ ದಿನ ಗಾಣಿಗ ನಾರಾಯಣ ಎಂಬವನು ಜಟ್ಕಾ ಡ್ರೈವರ್ ಕೊರಗ ಎಂಬವನಿಗೆ ಕೋಳಿ ಜೂಜಿನ ಕತ್ತಿಯಿಂದ ಗಾಯಪಡಿಸಿರುವನೆಂತ ಕೇಳುತ್ತೇವೆ. ಗಾಯ ಪಡೆದ ಕೊರಗನು ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿರುತ್ತಾನೆ. ಈ ಕೃತ್ಯವು ನಡೆಯಲು ಮದ್ದತು ಕೊಟ್ಟವರೆಂಬ ಅನುಮಾನದಿಂದ ಸಂಕಪ್ಪ ಮತ್ತು ರಾಮಯ್ಯ ಎಂಬವರನ್ನು ಪೋಲಿಸಿನವರು ಸೆರೆ ಮಾಡಿರುತ್ತಾರೆ. ನಾರಾಯಣನ ಪತ್ತೆಯಾಗಲಿಲ್ಲ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ [illegible] ಪ್ಲೇಗು ಮರಣಗಳಿದ್ದವು.

ವಿದೇಶ ವೃತ್ತಾಂತ.

ಕಳೆದ ವರ್ಷದ ಮೊದಲನೇ ೧೦ ತಿಂಗಳಲ್ಲಿ ಜಪಾನ್ ದೇಶದವರು ಆಸ್ಟ್ರೇಲಿಯ ದೇಶದವರೊಡನೆ ೬,೩೧೩,೩೬೩ ಪವನುಗಳ ಮೌಲ್ಯದ ವ್ಯಾಪಾರ ನಡಿಸಿರುವರು.

ಕಿಚನರ್ ಮೆಮೋರಿಯಲ್ ಫಂಡಿಗೆ ಈ ವರೆಗೆ ೪೦೦,೦೦೦ ಪವನುಗಳ ವಂತಿಗೆ ಕೂಡಿರುತ್ತವೆ.)

ದಶಂಬರ ತಾ. ೧೫ರಲ್ಲು ಮುಂಬಾಯಿಂದ ಹೊರಟ ಟಪ್ಪಾಲು ಹಡಗವು ಇದೇ ತಾ. ೪೮ರಲ್ಲು ಲಂಡನಿಗೆ ಸರಕ್ಷಿತವಾಗಿ ತಲಪಿರುತ್ತದೆ.

ಲಂಡನಿನಲ್ಲಿ ಜರಗಲಿಕ್ಕಿರುವ ಯುದ್ಧ ಸಂಬಂಧವಾದ ಸಾಮ್ರಾಜ್ಯ ಸಭೆಗೆ ಹಿಂದೂಸ್ಥಾನದ ಪರವಾಗಿ ಸ್ಟೇಟ್ ಸೆಕ್ರೆಟರಿಯವರು ಪ್ರತಿನಿಧಿಗಳಾಗಿರುವರೆಂದೂ ಸ್ಟೇಟ್ ಸೆಕ್ರೆಟರಿಯವರಿಗೆ ತಕ್ಕ ಸಲಹೆ ಕೊಡುವ ಬಗ್ಗೆ ಹಿಂದೂಸ್ಥಾನದವರಿಂದ ಇಬ್ಬರನ್ನು ಆರಿಸಿ ಕಳುಹಿಸಬೇಕಾಗಿದೆಂದೂ ತಿಳಿಸಿತ್ತಷ್ಟೆ. ಹಿಂದೂಸ್ಥಾನದಿಂದ ಯಾರನ್ನು ಕಳುಹಿಸಬಹುದೆಂಬದರ ವಿಷಯ "ಇಂಡಿಯಾಮೇನ್" ಪತ್ರಿಕೆಯು ಇಂಗ್ಲಾಂಡಿನ ಪ್ರಖ್ಯಾತರ ಆಲೋಚನೆಗಳನ್ನು ಕೇಳಿರುವದು. ಸರ್ ಜೋನ್ ಹ್ಯುವೇಟರವರು ಈ ಸಂದರ್ಭದಲ್ಲಿ, ಹಿಂದೂಸ್ಥಾನದಿಂದ ಹಿಂದೀಗಳಲ್ಲಿ ಒಬ್ಬರನ್ನು ಆರಿಸಬೇಕೆಂತ ಸೂಚಿಸಿರುವರು. ಸರ್. ಜೋರ್ಜ್ ಬರ್ಡ್‌ವೂಡರವರು ಬಿನ್ ಸರಕಾರಿ ಹಿಂದೀಗಳಲ್ಲಿ ಮಹರಾಜ ಸರ್. ಪ್ರತಾಪಸಿಂಘರಂಥವರನ್ನು ಹಿಂದೂಸ್ಥಾನದ ಪ್ರತಿನಿಧಿಯಾಗಿ ಆರಿಸಬೇಕೆಂದೂ ಮತ್ತು ಒಬ್ಬ ಆಫೀಸಿಯಲ್ ಯೂರೋಪಿಯನನ್ನೂ ಅಥವಾ ಹಿಂದೀ ಮೆಂಬರನನ್ನೂ ಆರಿಸಬೇಕೆಂದೂ ಹೇಳಿರುವರು.

ಹಿಂದೂಸ್ಥಾನ ಮತ್ತು ಫ್ರಾನ್ಸಿನ ವ್ಯಾಪಾರ ಸಂಬಂಧವನ್ನು ಬೆಳಸುವ ವಿಷಯದಲ್ಲಿ ವಿಚಾರ ನಡಿಸುವರೆ ಮಿ| ಚಡ್‌ವಿಕ್ ಮತ್ತು ಬ್ಲೇಕ್‌ರವರೇ ನೇಮಿಸಲ್ಪಡುವ ಸಂಭವವಿದೆಂತ ವಾರ್ತೆ ಇದೆ.

ಲಂಡನಿನಲ್ಲಿ ಕೂಡುವ ಯುದ್ಧ ಸಂಬಂಧವಾದ ಸಾಮ್ರಾಜ್ಯದ ಮಹಾ ಸಭೆಯಲ್ಲಿ ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯವರಿಗೆ ಸಲಹೆ ಕೊಡಲಿಕ್ಕೆ ಸರ್ ವಿಲಿಯಂ ವಿನ್‌ಸೆಂಟ್ ಮತ್ತು ಸರ್ ಶಂಕರನ್ ನಾಯರರು ಈ ಇಬ್ಬರು ತಕ್ಕವರು ಎಂಬದಾಗಿ 'ಕೆಪಿಟಲ್' ಎಂಬ ಪತ್ರಿಕೆಯಲ್ಲಿ ಸೂಚಿಸೋಣಾಗಿದೆ.

ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯವರಾದ ಮಿ| ಚೇಂಬರ್ಲೇನವರಿಗೆ ಪತ್ರ ಪ್ರತಿನಿಧಿಗಳು ಭೇಟಿ ಕೊಟ್ಟಲ್ಲಿ ಯುದ್ಧ ಸಂಬಂಧವಾದ ಸಾಮ್ರಾಜ್ಯ ಸಭೆಗೆ ಹಿಂದೂಸ್ಥಾನದಿಂದ ಇಬ್ಬರನ್ನು ಆರಿಸುವ ವಿಷಯ ತಾನು ವೈಸರಾಯರೊಡನೆ ಪತ್ರವ್ಯವಹಾರ ನಡಿಸುತ್ತಿದ್ದೇನೆಂತ ಹೇಳಿರುವರು. ಹಿಂದೂಸ್ಥಾನದವರು ಈ ಯುದ್ಧಕಾಲ ಸಾಮ್ರಾಜ್ಯ ಸರಕಾರಕ್ಕೆ ಮಾಡಿದ ಸಹಾಯವನ್ನು ಸಾಮ್ರಾಜ್ಯ ಸರಕಾರದವರು ಮಾನ್ಯ ಮಾಡಿದ್ದಾರೆಂಬದನ್ನೂ ಹಿಂದೂಸ್ಥಾನಕ್ಕೆ ಸಾಮ್ರಾಜ್ಯದಲ್ಲಿ ಸ್ಥಾನವನ್ನು ಕೊಟ್ಟಿದ್ದಾರೆಂಬದನ್ನೂ ತಿಳಿಯುವದರಿಂದ ಹಿಂದೂಸ್ಥಾನದಲ್ಲಿ ವಿಶೇಷ ಸಂತೃಪ್ತಿ ಉಂಟಾಗುವದು, ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿದ ಕೆನಡಾ ಆಸ್ಟ್ರೇಲಿಯ ಮೊದಲಾದ ಸಂಸ್ಥಾನಗಳವರೂ ಇದಕ್ಕೆ ತಕ್ಕ ಪುಷ್ಟಿ ಕೊಡುವರು, ಈ ಸಂಸ್ಥಾನಗಳ ಸೇನಿಕರು, ಮುಖ್ಯವಾಗಿ ಗೆಲಿಪೋಲಿಯಲ್ಲಿದ್ದವರು ಹಿಂದೀ ಸೇನಿಕರ ಧೈರ್ಯ ಸಾಹಸಗಳನ್ನು ಬಹಳವಾಗಿ ಕೊಂಡಾಡುತ್ತಿದ್ದಾರೆಂಬದಾಗಿಯೂ ಹೇಳಿರುವರು.

ಬ್ರಿಟಿಷ ಪ್ರಧಾನ ಮಂತ್ರಿಯಾಗಿರುವ ಲ್ಯೊಡ ಜೋರ್ಜರವರು ರೋಮ ನಗರಕ್ಕೆ ಹೋಗಿರುತ್ತಾರೆ. ಅಲ್ಲಿ ಇವರೊಡನೆ ಫ್ರೆಂಚ ಇಟಲಿ ಮಂತ್ರಿಗಳವರು ಕೂಡಿ ಯುದ್ಧ ಸಂಬಂಧವಾದ ಆಲೋಚನೆ ನಡಿಸಿರುವರು.

ಪತ್ರವ್ಯವಹಾರ.

ಜಿಲ್ಲಾ ವಿಭಾಗ.

ನಮ್ಮ ಕಾಸರಗೋಡು ತಾಲೂಕಿನಲ್ಲಿ ಮಾಪಿಳೆಯವರು, ನಾಯಮ್ಮಾರ್ ಎಂಬವರು, ಬಿಲ್ಲವರು ಇವರೇ ಮೊದಲಾದವರ ಮಾತ್ರ ಭಾಷೆಯು ಮಲೆಯಾಳ ಭಾಷೆಯಾಗಿರುತ್ತದೆ. ಆದರೆ ಈ ಭಾಷೆಗೂ ಶುದ್ಧ ಮಲೆಯಾಳ ಭಾಷೆಗೂ ಬಹಳ ವ್ಯತ್ಯಾಸವಿದೆಯೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ. ಕಾಸರಗೋಡು ತಾಲೂಕಿನಲ್ಲಿ ಶುದ್ಧ ಮಲೆಯಾಳ ಮಾತಾಡುವ ನಿವಾಸಿಗಳು ಇಲ್ಲವೇ ಇಲ್ಲವೆಂಬುದಾಗಿ ಹೇಳಬಹುದು. ಹ್ಯಾಗೂ ಅವರ ಸಂಖ್ಯೆಯು ಶುದ್ಧ ಕನ್ನಡ ಮಾತಾಡುವ ಜನರ ಸಂಖ್ಯೆಗಿಂತ ಬಹು ಕಡಿಮೆಯಾಗಿದೆ.

ಈಗ ಕೆಲವರು, ಕಾಸರಗೋಡು ತಾಲೂಕನ್ನು ಮಲಬಾರ್ ಜಿಲ್ಲೆಗೆ ಸೇರಿಸಿದರೆ ದೊಡ್ಡ ಪ್ರಯೋಜನ ನಮಗೆ ಉಂಟಾಗುವುದೆಂದೂ ಕಾಸರಗೋಡು ತಾಲೂಕಿನ ನಿವಾಸಿಗಳು ಬಹು ಕ್ಷಣದಲ್ಲಿಯೇ ಸದ್ಗತಿಗೆ ಮುಟ್ಟುವರೆಂದೂ ಭಾವಿಸಿ ಕಾಸರಗೋಡು ತಾಲೂಕನ್ನು ಆ ಜಿಲ್ಲೆಗೆ ಸೇರಿಸಬೇಕಾಗಿ ಪ್ರಯತ್ನಪಡುತ್ತಾರೆ. ನಾವು ದಕ್ಷಿಣ ಕನ್ನಡ ಜಿಲ್ಲೆಯನ್ನು ಬಿಟ್ಟು ಮಲಬಾರ್ ಜಿಲ್ಲೆಗೆ ಸೇರಿದರೆ ನಮಗೆ ಸಿಕ್ಕುವ ಪ್ರಯೋಜನವೇನೆಂದು ಅವರನ್ನು ಕೇಳಿದರೆ ತಕ್ಕ ಪ್ರತ್ಯುತ್ತರವನ್ನು ಕೊಡಲಿಕ್ಕೆ ಅವರಿಗೆ ಸಾಧ್ಯವಿಲ್ಲ. ಅವರು ಕೆಲವು ಗ್ರಾಮಗಳಿಗೆ ಹೋಗಿ, ಆಯಾ ಗ್ರಾಮದ ಅಧಿಕಾರಸ್ಥ ಎಂಬ ಹೆಸರಿನಿಂದ ಕರೆಯಲ್ಪಡುವ ಉದ್ಯೋಗಸ್ಥನನ್ನು ಉಪದೇಶದಿಂದ ತಮ್ಮ ಪಕ್ಷಕ್ಕೆ ಸೇರಿಸಿಕೊಂಡು, ಆಯಾ ಗ್ರಾಮದಲ್ಲಿ ಸಭೆಯನ್ನು ಏರ್ಪಡಿಸುವರು. ಮತ್ತು "ಕೋಮನ್ನಾಯರ ರುಜು" ಎಂದು ಒತ್ತಾಯದಿಂದ ಆ ಸಭೆಯಲ್ಲಿ ಕೂಡಿದ ಜನರ ದಸ್ಕತುಗಳನ್ನು ಪಡಕೊಳ್ಳುವರು.

ಕಳೆದ ದಶಂಬರ ತಾ. ೨೬ಕ್ಕೆ ಪಳ್ಳಿಕ್ಕರೆ ಗ್ರಾಮದ ಕೋಟೇಕುಲ ಮಾಪಿಳಾ ಬೋರ್ಡ ಶಾಲೆಯಲ್ಲಿ ಮೀಟಿಂಗು ಉಂಟೆಂಬ ವರ್ತಮಾನ ಕೇಳಿ ನಾನು ಸಹಾ ಅಲ್ಲಿಗೆ ಹೋದೆ. ಆದರೆ ಈ ಸಭೆಯ ಆಶ್ಚರ್ಯವೇನು? ಸಭಾ ಅಧ್ಯಕ್ಷರಾಗಿ ಕೂತುಕೊಂಡವರು ಯಾರೂ ಅಲ್ಲಿ ಇರಲಿಲ್ಲ. ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸುವುದರ ಕುರಿತು ಅಲ್ಲಿ ಕೂಡಿದ ಕೆಲವರು ಚರ್ಚೆ ಮಾಡುತ್ತಿದ್ದರು. ಕೋಟೇಕುಲದ ಕೆ ಎನ್ ಮಮ್ಮಿಂಞ ಮೌಲವಿ ಸಾಹೇಬ್ ಅವರ್ಗಳು ಚಂದವಾದ ಭಾಷಣದಲ್ಲಿ ಕಾಸರಗೋಡು ತಾಲೂಕನ್ನು ಬೇರೆ ಜಿಲ್ಲೆಗೆ ಸೇರಿಸುವುದರಿಂದುಂಟಾಗುವ ಸ್ವಲ್ಪ ಗುಣವನ್ನೂ ಅದರ ಪೂರ್ತಿ ದುರ್ಗುಣವನ್ನೂ ಅದರ ನಿಮಿತ್ತ ನಮಗೆ ಬಂದೊದಗುವ ಕಷ್ಟವನ್ನೂ ವಿವರವಾಗಿ ಹೇಳಿದರು.

ಕಳೆದ ದಶಂಬರ ೨೩ಕ್ಕೆ ಮಲಬಾರಿನಿಂದ ಬಂದ ಕೇರಳ ಪತ್ರಿಕೆಯಲ್ಲಿ ಪಿ. ಕೆ. ಮೇನವನ್ ಎಂಬವರ ಲೇಖನದಿಂದ ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸಬೇಕೆಂಬ ಮನಸ್ಸು ಆ ಜಿಲ್ಲೆಯ ಜನರಿಗೆ ಇಲ್ಲವೆಂಬದಾಗಿ ಕಂಡು ಬರುತ್ತದೆ. ಈಗ ಮಲಬಾರ್ ಜಿಲ್ಲೆಯಲ್ಲಿ ಹತ್ತು ತಾಲೂಕುಗಳಿವೆ ಈ ಹತ್ತು ತಾಲೂಕುಗಳನ್ನು ತನ್ನ ಜವಾಬ್ದಾರಿಕೆಯಲ್ಲಿ ಇಟ್ಟುಕೊಳ್ಳಲಿಕ್ಕೆ ಒಬ್ಬ ಜಿಲ್ಲಾ ಕಲೆಕ್ಟರಿಗೆ ಕಷ್ಟವಾಗಬಹುದು. ಇನ್ನು ಕಾಸರಗೋಡು ತಾಲೂಕನ್ನು ಆ ಜಿಲ್ಲೆಗೆ ಸೇರಿಸಿದರೆ ಕಷ್ಟವು ಮತ್ತೂ ಹೆಚ್ಚಾಗುವುದು. ಆಗ ಮಲಬಾರನ್ನು ಎರಡು ಜಿಲ್ಲೆಗಳಾಗಿ ಪಾಲು ಮಾಡಬೇಕಾಗುತ್ತದೆ. ಹೀಗೆ ಮಾಡುವುದಕ್ಕೆ ಮಲಬಾರಿನವರಿಗೆ ಮನಸಿದ್ದುದಾಗಿ ಕಾಣುವುದಿಲ್ಲ.

ನಿಜವಾಗಿ ನೋಡಿದರೆ ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸುವುದರಿಂದ ಸಿಕ್ಕುವ ಪ್ರಯೋಜನವೇನು? ಕಾಸರಗೋಡು ತಾಲೂಕಿನಲ್ಲಿರುವ ಕೋರ್ಟು ಆಫೀಸು ಮೊದಲಾದವುಗಳಲ್ಲಿ ಕನ್ನಡ ಭಾಷೆಯ ಬದಲಿಗೆ ಮಲೆಯಾಳ ಭಾಷೆಯು ಪ್ರಚಾರಕ್ಕೆ ಬರುವುದು. ಆಗ ಶುದ್ಧ ಮಲೆಯಾಳ ಮಾತಾಡುವ ಕೆಲವು ಜನರಿಗೆ ಸ್ವಲ್ಪ ಪ್ರಯೋಜನವಿರಬಹುದು. ಆದರೆ ಉಳಿದ ಜನರಿಗಿರುವ ಕಷ್ಟವನ್ನೂ ನಷ್ಟವನ್ನೂ ಯಾರು ತಾನೆ ಹೇಳುವರು? ಮನೆಯಲ್ಲಿರುವ ಇಲಿಯನ್ನು ಕೊಲ್ಲಬೇಕಾಗಿ ಇಡೀ ಮನೆಯನ್ನು ಸುಟ್ಟಂತಾಗುವುದು. ಒಂದು ಹೊಸ ಜಿಲ್ಲೆಯನ್ನು ಮಾಡಿ ಹಜೂರು ಕಚೇರಿ ಮೊದಲಾದ ಆಫೀಸುಗಳನ್ನು ಕಟ್ಟಿ, ಕಲೆಕ್ಟರೇ ಮೊದಲಾದ ಉದ್ಯೋಗಸ್ಥರನ್ನು ಹೊಸದಾಗಿ ನೇಮಿಸಬೇಕಾದರೆ ಸರಕಾರವು ಎಷ್ಟು ಲಕ್ಷ ರೂಪಾಯಿಯನ್ನು ವೆಚ್ಚಮಾಡಬೇಕು? ಆ ಹಣವನ್ನೆಲ್ಲಾ ಬೇರೆ ಕೆಲಸಕ್ಕೆ ವೆಚ್ಚಮಾಡಿ ದಕ್ಷಿಣ ಕನ್ನಡ ಮತ್ತು ಮಲಬಾರ್ ಈ ಎರಡು ಜಿಲ್ಲೆಗಳ ದಾರಿದ್ರ್ಯವನ್ನು ಓಡಿಸಬಹುದಲ್ಲವೇ? ಆದ್ದರಿಂದ ಜಿಲ್ಲಾ ವಿಭಾಗ ಮಾಡುವ ಮೊದಲು ಸರಕಾರದವರು ಮೊದಲು ಚೆನ್ನಾಗಿ ಆಲೋಚನೆ ಮಾಡಿ ಪ್ರವರ್ತಿಸುವರೆಂದೂ, ಕಾಸರಗೋಡು ನಗರ ನಿವಾಸಿಗಳು ನಮ್ಮ ತಾಲೂಕನ್ನು ಬೇರೆ ಜಿಲ್ಲೆಗೆ ಸೇರಿಸದ ಹಾಗೆ ಪ್ರಯತ್ನ ಮಾಡುವರೆಂದೂ ನಾನು ಪೂರ್ಣ ನಂಬುತ್ತೇನೆ. ಕೋಟೇಕುಲ ಮಮ್ಮಿಂಞಿ.

ಭತ್ತದ ಮತ್ತು ಕಬ್ಬಿನ ಕೃಷಿಕರಿಗೆ ಸೂಚನೆಗಳು.

'ಊಟ ಬಲ್ಲವನಿಗೆ ರೋಗವಿಲ್ಲ' ಎಂಬುದು ಎಲ್ಲರೂ ತಿಳಿದ ಮಾತು. ಎಲ್ಲರಿಗೂ ಒಂದೇ ಬಗೆಯ ಆಹಾರವು ಸುಖಕಾರಿಯಾಗಲಾರದು. ಕಾಯಕಷ್ಟದ ವೃತ್ತಿಗಳನ್ನು ಅವಲಂಬಿಸುವವರಿಗೆ ಪುಷ್ಟಿಕರವಾದ ಆಹಾರವು ಬೇಕಾಗಿದೆ. ಅದು ಸಿಕ್ಕದಿದ್ದರೆ ಅವರಿಂದ ದುಡಿಯಲಿಕ್ಕೆ ಸಾಧ್ಯವಿಲ್ಲ. ಮೆದುಳಿನ ಕೆಲಸ ಹೆಚ್ಚಾಗಿರುವವರಿಗೆ ಬೇಕಾದ ಆಹಾರವೇ ಬೇರೆ. ಸ್ವಭಾವಿಕವಾಗಿ ಬಲಹೀನರಾದವರು ಪುಷ್ಟಿಕರವಾದ ಆಹಾರವನ್ನು ಒಂದೇ ಸಲ ತಿನ್ನಲಾರಂಭಿಸಿದರೆ ಅದು ಕರಗಲಾರದು; ಮತ್ತು ಆ ಆಹಾರ ಸೇವನೆಯಿಂದ ಇಲ್ಲದ ಸಲ್ಲದ ದೇಹ ಬಾಧ್ಯಗಳು ತಲೆದೋರುವವು. ಸಣ್ಣ ಮಕ್ಕಳಿಗೆ ಬೇಕಾದ ಆಹಾರವೇ ಬೇರೆ. ಹೀಗೆ ಅವರವರ ದೇಹ ಪ್ರಕೃತಿ, ಅವರವರ ವೃತ್ತಿ ವ್ಯಾಪಾರಗಳು, ಪ್ರಾಯ ಮುಂತಾದುವುಗಳ ಮೇಲೆ ಜನರ ಆಹಾರ ಸ್ಥಿತಿಯು ಹೊಂದಿರುವುದು. ಇದೇ ರೀತಿಯಲ್ಲಿ ಪೈರುಗಳಿಗೂ ಅವುಗಳ ಸ್ಥಿತಿಗೆ ಅನುಸಾರವಾಗಿ ಗೊಬ್ಬರವನ್ನು ಕೊಡಬೇಕಾಗಿದೆ. ಈ ಅನುಭವವು ಕೃಷಿಕರಿಗೆ ಗೊತ್ತಾಗದಿದ್ದರೆ ಒಂದು ಕಡೆಯಲ್ಲಿ ಪ್ರಯತ್ನ ನಷ್ಟ, ದ್ರವ್ಯ ನಷ್ಟ, ಇನ್ನೊಂದು ಕಡೆಯಲ್ಲಿ ಇಂಥ ಪ್ರಯತ್ನಗಳ ಮೇಲೆ ಜನರಿಗೆ ಅವಿಶ್ವಾಸವು ಉಂಟಾಗುವುವು. ಆದ್ದರಿಂದ ಕೃಷಿಕನು ಈ ಸಸ್ಯಾಹಾರದ ಮರ್ಮವನ್ನು ತಿಳಿದುಕೊಳ್ಳಬೇಕಾದುದು ಅತ್ಯಗತ್ಯ.

ಕಬ್ಬಿನ ಪೈರು ನೆಲದ ಸಾರವನ್ನು ಎಳೆದು ಬಿಡುತ್ತದೆಂದು ಕೃಷಿಕರಿಗೆ ಚೆನ್ನಾಗಿ ಗೊತ್ತು. ಈ ಕಾರಣದಿಂದ ಅವರು ಈ ಪೈರಿಗೆ ಯೋಗ್ಯವಾದ ಮತ್ತು ಪುಷ್ಟಿಕರವಾದ ಗೊಬ್ಬರವನ್ನು ಕೊಡಲಿಕ್ಕೆ ಪ್ರಯತ್ನಿಸುತ್ತಾರೆ. ಕಬ್ಬನ್ನು ರಸಾಯನಿಕ ಶಾಸ್ತ್ರ ದೃಷ್ಟಿಯಿಂದ ಪರೀಕ್ಷೆ ಮಾಡಿದರೆ ಒಂದು ಟನ್ (80 ಮಣ) ತೂಕದ ಕಬ್ಬಿನಲ್ಲಿ ಸುಮಾರು 40¼ ರಾತ್ತು ನೈಟ್ರೊಜನ್, 35 ರಾತ್ತು ಸುಣ್ಣ, 13¾ ರಾತ್ತು ಫೊಸ್ಫೊರಿಕ್ ಎಸಿಡ್, ಮತ್ತು 1¼ ರಾತ್ತು ಪೊಟೆಶ್ ಇವೆ ಎಂದು ಗೊತ್ತಾಗುತ್ತದೆ. ಅಮೆರಿಕದಲ್ಲಿ ಕಬ್ಬಿನಲ್ಲಿರುವ ನೈಟ್ರೊಜನ್ ಮತ್ತು ಪೊಟೆಶಿನ ಅಂಶವನ್ನು ಹೆಚ್ಚಿಸಿ, ಫೊಸ್ಫೊರಿಕ್-ಎಸಿಡಿನ ಅಂಶವನ್ನು ತಗ್ಗಿಸಲಿಕ್ಕೆ ಸಾಧನೆ ಮಾಡುತ್ತಾರೆ.

ಇದೇ ರೀತಿಯಲ್ಲಿ ೧೦೦೦೦ ರಾತ್ತು ತೂಕದ ಅಕ್ಕಿಯಲ್ಲಿ 12 ರಾತ್ತು ನೈಟ್ರೊಜನ್, 3¼ ರಾತ್ತು ಫೊಸ್ಫೊರಿಕ್ ಎಸಿಡ್, 1¾ ರಾತ್ತು ಪೊಟೆಶ್ ಇವೆ. ಇದಲ್ಲದೆ ೧೦೦೦೦ ರಾತ್ತು ಭಾರದ ಹುಲ್ಲು ಹುಲ್ಲಿನಲ್ಲಿ 7¼ ರಾತ್ತು ನೈಟ್ರೊಜನ್ 4½ ರಾತ್ತು ಫೊಸ್ಫೊರಿಕ್ ಎಸಿಡ್, 2¼ ರಾತ್ತು ಪೊಟೆಶ್ ಇವೆ.

ಇದನ್ನು ನೋಡಿದಾಗ ಈ ಬೆಳೆಗಳಿಗೆ ಈ ನೈಟ್ರೊಜನ್ ಕೂಡಿದ ಆಹಾರವು ಅತಿ ಅಗತ್ಯವೆಂಬುದು ಸ್ಪಷ್ಟವಾಗುವುದು. ಇತರ ವಿಧದ ಸಸ್ಯಾಹಾರದ ಅಂಶವು ಹೆಚ್ಚಾಗಿರುವ ಗೊಬ್ಬರಗಳು ಭತ್ತ ಮತ್ತು ಕಬ್ಬಿನ ಬೆಳೆಗಳಿಗೆ ಅಷ್ಟು ಪ್ರಯೋಜನಕಾರಿಯಲ್ಲ. ಅವುಗಳಿಗೆ ನೈಟ್ರೊಜನ್ ಸಾಕಷ್ಟು ಒದಗಿಸುವ ಮತ್ತು ಅನಾವಶ್ಯಕವಾದ ನಷ್ಟವಿಲ್ಲದೆ ಬೇಗನೆ ಅದನ್ನು ಒದಗಿಸುವ ರೀತಿಯ ಗೊಬ್ಬರಗಳೆ ಅತಿ ಅಗತ್ಯದಾಗಿರುವವು.

ಈ ಮೊದಲು ವಾಚಕರಿಗೆ 'ನೈಟ್ರೆಟ್ ಒಫ್ ಸೋಡಾ' ಎಂಬ ಸೌಲ್ಟಿನ ಪರಿಚಯವು ಈ ಪತ್ರದ ಮೂಲಕ ಆಗಿರುವದು. ಆದರೂ ಈ ಸಂದರ್ಭದಲ್ಲಿ ಅದೇ ಮಾತನ್ನು ಪುನಃ ಎತ್ತಿದರೆ ನಿರರ್ಥಕವಾಗಲಾರದು. ಯಾಕೆಂದರೆ ಭತ್ತ ಕಬ್ಬುಗಳ ಕೃಷಿಕರು ಇತರ ಗೊಬ್ಬರಗಳನ್ನು ಉಪಯೋಗಿಸುವ ಸಂದರ್ಭದಲ್ಲಿ ಈ ಪೈರುಗಳಿಗೆ ಅಗತ್ಯವಿಲ್ಲದ ಸಸ್ಯಾಹಾರವನ್ನು ಒದಗಿಸಿಕೊಡುವಂತಾಗಬಹುದು. ನಾವು ಆಹಾರವನ್ನು ತೆಗೆದುಕೊಳ್ಳುವಾಗ ನಮ್ಮ ದೇಹಪುಷ್ಟಿಗೆ ಅಗತ್ಯವಿಲ್ಲದ ಅಥವಾ ಬೇಗನೆ ಅರಗದ ಆಹಾರವನ್ನು ತಿಂದರೆ ಅದು ನಿರರ್ಥಕವಾಗಿ ಹೊರ ಬೀಳುವಂತೆ ಅನಗತ್ಯವಾದ ಸಸ್ಯಾಹಾರದಿಂದ ಕೂಡಿದ ಗೊಬ್ಬರಗಳ ಪರಿಣಾಮವಾಗುವುದು. ಆದರೆ ನೈಟ್ರೆಟ್ ಒಫ್ ಸೋಡಾ ಬಹು ಬೇಗನೆ ನೈಟ್ರೊಜನ್ ಮತ್ತು ನೆಲದಿಂದ ಪೊಟೆಶನ್ನು ಬಿಡುಗಡೆಮಾಡಿ ಸಸಿಗಳಿಗೆ ಒದಗಿಸಿಕೊಡುತ್ತದೆ ವಿನಾ ಈ ಪೈರುಗಳಿಗೆ ಅನಗತ್ಯವಾದ ಯಾವ ಸಸ್ಯಾಹಾರವೂ ಈ ನೈಟ್ರೆಟ್ ಒಫ್ ಸೋಡಾದಲ್ಲಿ ಬೆರತುಕೊಂಡಿಲ್ಲ. ಹೀಗಾಗಿ ಇದರ ಪ್ರಯೋಗವು ಸೂಕ್ಷ್ಮ ವಿಚಾರದಿಂದ ನೋಡಿದರೆ ಖರ್ಚು ಕಡಿಮೆಯಾಗಿ ಭತ್ತ, ಕಬ್ಬುಗಳಿಗೆ ಬಲಕಾರಿಯಾಗುವುದು. ನೈಟ್ರೆಟ್ ಒಫ್ ಸೋಡಾದಲ್ಲಿ 'ಅಯೋಡಿನ್' ಎಂಬ ಧಾತು ಸ್ವಲ್ಪ ಸೇರಿಕೊಂಡಿದೆ. ಇದು ಹಲವು ಸಲ ಈ ಪೈರುಗಳಿಗೆ ಬಾಧಕವಾದ ಕೆಲವು ಕ್ರಿಮಿಕೀಟಗಳಿಗೆ ಶತ್ರುಪ್ರಾಯವಾಗಿದೆ. ಆದಕಾರಣ ಕೃಷಿಕರು ಈ ನೈಟ್ರೆಟ್ ಒಫ್ ಸೋಡಾ ಸೌಲ್ಟ ಗೊಬ್ಬರವನ್ನು ಮೀನು ಗೊಬ್ಬರ ಅಥವಾ ಹಿಂಡಿ ಗೊಬ್ಬರದ ಜತೆಯಲ್ಲಿ ಮಿಶ್ರಮಾಡಿ ಹಾಕಿದರೆ ಪ್ರಯೋಜನಕಾರಿಯಾಗಬಹುದು ಎಂದು ಈ ಮೂಲಕ ಸೂಚಿಸೋಣಾಗಿದೆ.

ಕಟಪಾಡಿ:—ಕುಂದಾಪುರ ತಾಲೂಕು ಬೋರ್ಡ ಮೆಂಬರರೂ ಇಲ್ಲಿಯ ಶಾಲೆಯ ಮನೇಜರರೂ ಆದ ಜಮೀನುದಾರ ಪಾಂಗಾಳ ಶ್ರೀನಿವಾಸ ನ್ಯಾಕರವರ ಉದಾರಾಶ್ರಯದಿಂದ ದೀನರ ಉದ್ಧರಣೆ ಬಗ್ಗೆ ಇಲ್ಲಿ ಒಂದು ಪಂಚಮರ ಶಾಲೆಯು ತೆರೆಯಲ್ಪಡುವದು. ಈ ಬಗ್ಗೆ ಬೇಕಾದ ಕಟ್ಟೋಣವು ಸಿದ್ಧವಾಗುವದಲ್ಲದೆ ದೀನರಾದ ಪಂಚಮರು ಪರಮ ಉಲ್ಲಾಸದಿಂದ ಶಾಲೆಯ ಕೆಲಸವನ್ನು ಶ್ರದ್ಧಾಭಕ್ತಿಯಿಂದ ಮಾಡುತ್ತಿರುವರು. ಕಟ್ಟೋಣದ ಕೆಲಸದ ಖರ್ಚಿನ ಬಗ್ಗೆ ಪಂಚಮರು ಒಟ್ಟುಕೂಡಿ ಮನೆಮನೆಗೆ ಹೋಗಿ ಸಹಾಯ ದ್ರವ್ಯವನ್ನು ಶೇಖರಿಸುತ್ತಿರುವರು. ಸುಮಾರು ೪೦ ಮಂದಿ ವಿದ್ಯಾರ್ಥಿಗಳು ಶಾಲೆಗೆ ಸೇರುವವರು ಇರುವರೆಂತ ಅಂದಾಜಾಗಿದೆ. ಉಪಾಧ್ಯಾಯ ಕೆಲಸಕ್ಕೆ ಕಾಪಿಯಿಂದ ಒಬ್ಬ ಪಂಚಮ ಜಾತಿಯ ಉಪಾಧ್ಯಾಯನನ್ನು ಆರಿಸಿಯದೆ. ಈ ಎಲ್ಲಾ ವಿಷಯದಲ್ಲಿ ಇಲ್ಲಿಯ ಗರ್ಲ್ಸ್ ಸ್ಕೂಲ್ ಮಾಸ್ತರ ಕೆ. ಬಿ. ಕಾಮತರವರು ಬೇಕಾದ ಸಲಹೆಗಳನ್ನು ಸದಾ ಮಾನ್ಯ ನಾಯ್ಕರವರ ಆಶ್ರಯದಿಂದ ಕೊಡುತ್ತಿರುವದು ತುಂಬಾ ಶ್ಲಾಘನೀಯವಾಗಿದೆ.

ಇಲ್ಲಿಯ ಸುಮಾರು ೩೦ ಜನ ಪಂಚಮರಿಗೆ ನಿವಾಸಕ್ಕೆ ಸ್ಟೆಂಡಿಂಗ್ ಆರ್ಡರ್ ದರಖಾಸ್ತು ರೂಲು ಪ್ರಕಾರ ½ ಎಕ್ರೆ ದರದಲ್ಲಿ ಸರಕಾರಿ ಪುಂಜ ಸ್ಥಳವನ್ನು ಕಾಪು ಡಿವಿಜನ್ ರೆವಿನ್ಯೂ ಇನ್ಸ್‌ಪೆಕ್ಟರವರ ಹುಕುಂ ಪ್ರಕಾರ ಪಿಡಗುಡ್ಡೆ ಗ್ರಾಮದ ಸರ್ವೆ ನಂಬ್ರ ೩೫-೩೬ನೇ ಸರಕಾರಿ ಪುಂಜ ಸ್ಥಳದಿಂದ ನೆರೆಗ್ರಾಮವಾದ ಮೂಡಬೆಟ್ಟು ಗ್ರಾಮದ ಶ್ಯಾನುಭೋಗರಿಂದ ಅಳತೆ ಮಾಡಿಸಿಯೂ, ಸ್ವತಹ ಸ್ಥಳ ನೋಡಿಯೂ ಈ ಸ್ಥಳವು ಯಾರೊಬ್ಬರ ಕುಮ್ಕಿಗೆ ಒಳಪಡದೆ ನಿವಾಸಕ್ಕೆ ಬಹಳ ಯೋಗ್ಯವಾದ್ದೆಂತ ಅಭಿಪ್ರಾಯ ಪಟ್ಟಿರುವರು. ಸ್ಥಳಗೋಸ್ಕರ ಸುಮಾರು ೩ ವರ್ಷಗಳಿಂದ ಆಗಾಗ್ಗೆ ಅರ್ಜಿ ವಗೈರೆ ಕೊಟ್ಟು ಬಹಳ ಶ್ರಮಪಟ್ಟ ದೀನರಾದ ಪಂಚಮರು ಈಗ ತಾಲೂಕು ತಹಸೀಲದಾರರವರ ಸನ್ನಿಧಾನದ ತೀರ್ಪನ್ನು ಎದುರು ನೋಡುತ್ತಿರುವರು.

ಜೀನಸು ಧಾರಣೆ.

(ರಖಂ).

ಮುಷ್ಠಿ ಅಕ್ಕಿ ಹೊಸ್ತು	5—8—0	ರಿಂದ	5—13—0
ಗುಡ್ಡ ,, ,,	5—2—0	,,	5—7—0
ಮುಸ್ತಿ ,, ,,	6—6—0	,,	6—0—0
ಹೊಸ ರಾಶಿ ,,	4—11—0	,,	4—12—0
ಅಮ್ಮಲ್ ಬೆಳ್ತಿಗೆ ,,	5—14—0	,,	6—4—0
ಗುಡ್ಡ ಬೆಳ್ತಿಗೆ ,,	6—8—0	,,	5—12—0
ರಂಗೂನು ಬೆಳ್ತಿಗೆ ಗೋಣಿ ೧ರ	9—10—0	,,	9—12—0
ಗೋಧಿ ಗೋಣಿ ೧ರ	11—12—0	,,	12—8—0
ತುರುಳಿ ಗೋಣಿ ೧ರ		,,	6—0—0
ಕಡಲೆ ಗೋಣಿ ೧ರ ಬೊಂಬೈ	9—12—0	,,	10—8—0
ತೊಗರಿ ಗೋಣಿ ೧ರ	11—0—0	,,	15—8—0
ತೊಗರಿ ಬೇಳೆ ಗೋಣಿ ೧ರ	12—8—0	,,	15—8—0
ಉದ್ದು ಗೋಣಿ ೧ರ	10—8—0	,,	11—4—0
ಊರುಬೆಲ್ಲ ಖಂಡಿ ೧ರ	37—0—0	,,	38—0—0
ಉಪ್ಪು ಗೋಣಿ ೧ರ		,,	4—10—0
ಕೊಬ್ಬರಿ ಖಂಡಿ ೧ರ	95—0—0		105—8—0
ಕೊಬ್ಬರಿ ಹಿಂಡಿ ಖಂಡಿ ೧ರ		,,	21—0—0
ಎಳ್ಳಿಂಡಿ ಖಂಡಿ ೧ರ ಬೊಂಬೈ	25—0—0	,,	31—0—0
ಕೊಬ್ಬರಿ ಎಣ್ಣೆ ಮುಡಿ ೧ರ	6—12—0	,,	7—0—0
ಎಳ್ಳೆಣ್ಣೆ ಮುಡಿ ೧ರ (ಕುಡಿತಕ್ಕೆ)		,,	4—8—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6—0—0	,,	6—11—0
ಮೋರಿಸ್ ಸಕ್ಕರೆ ಮುಡಿ ೧ರ		,,	5—4—0
ಕಾಫಿ ಖಂಡಿ ೧ರ	225—0—0		235—0—0
ಹೊಸಬೀಗೋಟು ಖಂಡಿ ೧ರ	82—0—0	,,	85—0—0
ಹೊಸ ಗೇರುಬೀಜ ಮುಡಿ ೧ರ	1—12—0	,,	2—0—0
ಕಬ್ಬಿಣ ಖಂಡಿ ೧ರ		,,	75—0—0
ಕಾಂಬ್ರ ತಗಡು ಮುಡಿ ೧ರ	26—0—0	,,	27—0—0
ಕಾಂಬ್ರ ಪಾತ್ರೆಗಳು ಮುಡಿ ೧ರ		,,	32—0—0
[illegible]		,,	24—0—0
ಪಚ್ಚೆ ಹೆಸರು ಮುಡಿ ೧ರ	5—1—0	,,	5—2—0
ಕಾಳುಮೆಣಸು ಖಂಡಿಗೆ		,,	260—0—0

ಸಿದ್ಧೌಷಧ !] [ಪರೀಕ್ಷಿಸಿ ನೋಡಿರಿ !!

ಇಕ್ಲಿಪ್ಸ್ ಡ್ರೊಪ್ಸ್!

ಇಕ್ಲಿಪ್ಸ್‌ಡ್ರೊಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆಕಸಾರಿಕೆಗಳಿಗೆ ಕೈ ಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಆಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ. ಸೀಸೆ 1ಕ್ಕೆ ಕ್ರಯ ರೂ. 0—6—0. ವಿ. ಪಿ. ಬೇರೆ.

"ಸಮಯಕ್ಕೆ ಒದಗಿದವನೇ ಮಿತ್ರ"ನೆಂಬುದು

ನಮ್ಮ

ಇಕ್ಲಿಪ್ಸ್ ಬಾವರ್

ಪ್ರಯೋಗಿಸಿ ನೋಡಿದವರೆಲ್ಲರಿಗೂ ಖಾತ್ರಿಯಾಗಿದೆ. ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುಣ್ಣು, ತುರಿಕಜ್ಜಿ, ಮೂಲವ್ಯಾದಿ, ಬೆಂಕಿಯಬೊಕ್ಕೆ, ಪೊಡವೆ, ಚೇಳು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

☞ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಟೊರಕಟ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಬಿ. ನರಸಿಂಗರಾವ್, ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು,

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ: ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,

Avenue Road, ವೇದಪಾಠಶಾಲಾ,

BANGALORE CITY. [illegible]

S. NAGAPPA NAYAK, K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ,

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನೂರು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂದಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗಜ್ಜ ಅದ್ದಿಗೆ ಇನಾಮಾಗಿ ಕಳುಹುತ್ತೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು !!

೧೬ ಮೊಳ!!

ಗೋವರ್‌ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಣ್ಣಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದು ವರಿಗೂ ಯಾರಲ್ಲಿಯೂ ಬರಲಿಲ್ಲ. ನವರಾತ್ರಿ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಆಂಡ್ ಕಂಪೆನಿ,

3 ಇರುಳಪ್ಪನ ಬೀದಿ, ಮದರಾಸು.

100 ರೂಪಾಯಿಗಳ ಬಹುಮಾನ.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ತ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ಮೇಲ್ಕಂಡ ಬಹುಮಾನಕ್ಕೆ ಬಾಧ್ಯರಾಗಿರುತ್ತಾರೆ.

ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ವಾಣಿ ಅಂಡ್ ಕಂಪೆನಿ;

ಸಾಹುಕಾರಪೇಟೆ, ಮದರಾಸು.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು ಬರುವುದು, ಉಳುಕು ಉರಿ, ಶಿರೋಧಾರ ಇವೇ ಮೊದಲಾದವುಗಳ "ಮೇಲೆ" ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾಗುತ್ತದೆ. ಏಜಂಟರು ಬೇಕಾಗಿರುತ್ತಾರೆ.

ಇದೀಗ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— Someshwar & Sons,

Fergusson Road, BOMBAY.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡೊಕ್ಟರುಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಕೋವುಗಳಲ್ಲಿ ದೊರಕುವದು.

STANY BROTHERS

Sole Agents

C. M. C's. Toothache

Specific, Mangalore.

ಸಬ್ ಏಜಂಟರು ಬೇಕಾಗಿವೆ.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ

ಕಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0-14-0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1-10-0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಷನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,

3 [illegible] ಬೀದಿ, ಮದರಾಸು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಕಾಮಿನೀ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿತವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕ್ರೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣವನ್ನು ಕೊಡುವದು. ಬಾಟಿಗೆ ೨-೮-೦.

೩. ಪಂಚಶೇಖರ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷ ಇವುಗಳ ಬಂಜೆತನವನ್ನು ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಜ್ವರದಿಂದಾದ ಪ್ಲೀಹ ಗನ್ನೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದನ್ನೇ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲಿಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲಿಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ.— ಚಳಿಜ್ವರ, ಪರಿಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲಿಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಸ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಅಶ್ವಗಂಧೀ ಪಾಕ. ಸ್ವಪ್ನಸ್ಖಲನ, ಮೂತ್ರಘಾತ, ವಾತಪಿತ್ತ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮೃಗಾರಿ ಬಾಮ್ ತಲೆ ನೋವು. ಸೊಂಟನೋವು, ಉಳುಕು, ಬೀಗು, ಎದೆ ನೋವು ಮುಂತಾದ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುರುಕಜ್ಜಿ ತುಂಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿತವಾಗಿದೆ. ಡಬ್ಬಿಗೆ ೪ ಆಣೆ.

೧೩ ಸಪ್ತಶೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲಿಗೆ ೧ ರೂ.

೧೪. ಬ್ರಾಹ್ಮಿ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ರವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ನಾಲಿಗೆಗೆ ಪಟುತ್ವ ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಕ್ತೃತ್ವ ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ೧೦ ತೊಲಿಗೆ ೨ ರೂ. ಆದರೆ ವಿದ್ಯಾರ್ಥಿಗಳಿಗೆ ಅತ್ಯುತ್ತಮವು.

ಪ್ರತಿ ವೀಳ್ಯದ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ಪ್ರಮೋಷನ ಕನ್ನಡದ ದಲಾ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸುಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists* Vepery Post, MADARS.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜೆ. ಎ. ಡ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲಪಿತು. ಇದು ಕೂಡ ತರಿಸಿದ್ದು 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾಕ್ಸ್‌ಟಾಡಿನ ವಿಶವಲ್‌ನಿಂದ ಮ. ಜೆ. ರಸ್ಕಿಣಾರು ಬರೆಯುತ್ತಾರೆ:—ಒಂದು ವರುಷದ ಲಾಗಾಯತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೊನಿಕ್ಸ್‌ಗಳನ್ನೂ ತೆಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತೆಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:— **The Malariana Company,**
Kunkanady S. C.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟಿದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 609/1916.

ಸುಬ್ಬಣ್ಣ ಮಧ್ಯಸ್ಥ ... ವಾದಿ.

ಶಂಕರ ಉಪಾಧ್ಯ—ನಾಲ್ಕೂರು ರಾಮ ಉಪಾಧ್ಯನ ಮಗ—ತೊಂಭತ್ತು ಮಾಗಣೆ ಹೊಗಬಳ್ಳಿ ಗ್ರಾಮದ ಊಳಮುಂಡಿನಲ್ಲಿ ಇವನ ಅಣ್ಣ ಶ್ರೀನಿವಾಸ ಉಪಾಧ್ಯನ ಮನೆಯಲ್ಲಿರುವವ. ಪ್ರತಿವಾದಿ

ವಾದಿಯು ಡಿಮಾಂಡ್ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 136—11—0 ಬರಮಾಡಿಕೊಳ್ಳಲಿಕ್ಕೆ ಪ್ರತಿವಾದಿ ಮೇಲೆ ಮಾಡಿದ ಮಜ್ಕೂರು ವ್ಯಾಜ್ಯ 16—2—1917ಕ್ಕೆ ಅಖೈರ ತನಿಖೆ ವ ತೀರ್ಪಿಗೆ ಇಟ್ಟಿರುವದರಿಂದ ಪ್ರತಿವಾದಿಯು ತಕ್ರೀರು ಉದಾಹರಣೆ ಇದ್ದರೆ ಆ ದಿವಸ ಹಗಲು 10 ಘಂಟೆ ಒಳಗೆ ಜ್ಯಾಹೀರು ಮಾಡತಕ್ಕದ್ದೆಂದು ಈ ಮೂಲಕ ತಿಳಿಸೋಣಾಗಿಯದೆ.

ತಾ. 7—1—1917. } ಪ. ವೆಂಕಟರಮಣಯ್ಯ, ವಾದಿ ಕಡೆ ವಕೀಲ,

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್‌ಗಳು, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂಬ ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟು, ಸ್ವತ್ತುಗಳ ವರಭಾರೆ ಆಕ್ಟು, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟು, ಸ್ಟಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟು, ಹಿಂದೂ ಲಾ, ದೊಡ್ಡಿ ಆಕ್ಟು, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟು, ರೆವಿನ್ಯು ಕೋಡ್, ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತಾವೇಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳು ಒಟ್ಟಿಗೆ ತರಿಸಿಕೊಂಡರೆ ಬೆಲೆ 15 ರೂ. ಮಾತ್ರ.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟ್ರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು, ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮ್ ಇರುವದು. ಇದ. ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ಬಂದರೆ ನಾವುಗಳೇ ಹೊಣೆಯೆಂದರಿಂದ ಪ್ರಯೋಜನವಿಲ್ಲ. ಬಂದೀಸ್ತು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಕಾಮಾಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮಣಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಖುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
8. ಅರುಣಾಚಲ ರೋಡ್, ಮದರಾಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
	1—0—0
ಆಯಮಾ ಹೇರ್ ಆಯಿಲ್ "	0—[illegible]—0
ಮಹಾರಾಣೀ ಹೇರಾಯಿಲ್ "	1—0—0
ಕಾಮಿನಿಯಾ ಹೇರಾಯಿಲ್ "	

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಆವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—	0— 6—0
ಉನ್ಮಾದಿನಿ	0— 8—0
ಅಹವಿಸು ಹುಡುಗಿ (ದ್ವಿತೀಯ ಮುದ್ರಣ)	0—10—0
ಅಮೃತ ಪುಳಿನ "	0— 6—0
ಇಂದಿರಾ, ಕೃ. ಮು.	
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	0—10—0
[illegible] ಡಿಟೆಕ್ಟಿವ್ ನಾವಿಲ್	0— 4—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—12—0
ಪ್ರಫುಲ್ಲ " "	0— 1—6
ಅಂಬಾಲಿಕೆ (ಹೊಸ ನಾವಿಲ್)	0— 1—0
ಕುಸುಮ "	0— 2—0
ರಾಧಾನಾಥ "	0— 5—0
ಸುಭದ್ರೆ "	0— 1—0
ಚಂದ್ರಹಾಸ (ಹೊಸ ಕಥೆ)	0— 2—0
ಧ್ರುವ "	0—12—0
ಪಾಠಶಾಲಾ ಶಿಕ್ಷಣ (School Discipline)	0—14—0
ಪುಷ್ಪರಚನ (Flower Making)	1— 0—0
ಕನ್ನಡ ಅಕ್ಷರ ಮಂಜರಿ	1— 4—0
ಸಂಗೀತ ಸಮಾಚಾರ	1— 4—0
ಮಾತೃನಂದಿನಿ (ಕ್ರೀಡಾ ವಿಷಯಗಳು)	1— 2—0
ಚಿತ್ರಮ "	0—10—0
ಚಂದ್ರವದನ	
[illegible] 18×28	0—12—0

K. B. RELE & Cos.,—BOMBAY.

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಮು

ಎಷ್ಟೋ ಹಳತು; ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಸ್ಥಿಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅಥರಿಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ)ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಬೇಕಾದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕ್ಕೊಳ್ಳುವವರಿಗೆ ಧರಪುರ ಕಮಿಷನ್.

ಕೆ. ಬಿ. ರೇಳೆ ಸನ್ನ ಕಂಪೆನಿ.

ಗಿರಗಾಂವ ನಂ. ೪ ಮುಂಬಯಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷೆ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿರಿ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಅರೇಬಿಯನ್ನೈಟ್ಸ್ ಕಥೆ.

ಗ,೦೦೧ ರಾತ್ರೆ ಕಥೆಗಳು. ಸಂಪೂರ್ಣ ಗ್ರಂಥ. ಗ,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರ ಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲವಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಲ್ಲಾಸವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭ ಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸರ್ವರಿಗೂ ಉಪಯೋಗವಾಗಿರುವ ಗಂಡಿತ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರದೇ ಮೇಲೆ ಹೇಳಿದ ವಿಷಯಗಳೆಲ್ಲಾ ಖಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದವಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ ನಾವೆಲ್ ರೋಮಾನ್ಸ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಕ್ರಯದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಆರ್. ಮಾರ್ಟಿನ್ನರ ಮಾತ್ರೆಗಳು

ನಂ. ೨.

ಡಮಿಯಾನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ವಿಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು; ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣೆಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ನರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿವು ಹೋಗುವ್ವದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ವಾಚುಗಳನ್ನು ತರಿಸುವವರಿಗೆ

ಒಳ್ಳೇ ಸಂದರ್ಭ!

ತಮಗೆ ಅತ್ಯುತ್ತಮವಾದ ವಾಚುಗಳು ಯಾವ ತರಹದ್ದು ಬೇಕಾಗಿದ್ದರೂ ನಮಗೆ ಬರೆಯಿರಿ!

ನಂಬ್ರ 1. ಮೆಟಲ್ ಕೇಸ್.—ವಿದ್ಯಾರ್ಥಿಗಳಿಗೆ ಅತೀ ಉಪಯೋಗಕರವಾದ್ದು. ರೂ. 3—0—0. ಫೆನ್ಸಿ ಡಾಯಲ್ ರೂ. 3—8—0. 3 ವರ್ಷಗಳ ಗ್ಯಾರಂಟಿ.

ನಂಬ್ರ 2. ಮೆಟಲ್ ಅಥವಾ ಗನ್‌ಮೆಟಲ್ ಕೇಸ್.—ಸರಿಯಾದ ಸಮಯವನ್ನು ತೋರಿಸುತ್ತದೆ. ರೂ. 4—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 3. ಅತ್ಯುತ್ತಮವಾದ ನಿಕ್ಕಲ್ ಸಿಲ್ವರ್ ಕೇಸ್.—ಜುವೆಲ್, ಲೀವರ್ ಗಿಲ್ಟ ಮೆಸ್ಸಿನು ಹೆಚ್ಚು ಕ್ರಯಬಾಳುವವಾಚುಗಳಿಗಿಂತಲೂ ಉತ್ತಮ ತರದ್ದು. ಪೆಟ್ಟಿಗೆ, ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ನಂಬ್ರ 4.—ವಾರಕ್ಕೊಂದಾವರ್ತಿ ಕೀ ಕೊಡುವವಂಥಾದ್ದು ನಿಕ್ಕಲ್ ಸಿಲ್ವರ್‌ಕೇಸ್, ರೂ. 7. ಸಿಲ್ವರ್ ಕೇಸ್ ರೂ. 9—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 5.—ರಿಸ್ಟ ವಾಚು ನಿಕ್ಕಲ್ ಸಿಲ್ವರ್ ಕೇಸ್ ರೂ. 5. ಸಿಲ್ವರ್ ಕೇಸ್ ಸ್ಟ್ರೇಪ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ಮೇಲ್ಕಂಡ ವಾಚುಗಳಲ್ಲದೆ ವೆಸ್ಟ್ ಎಂಡ್ ವಾಚ್ ಕಂಪೆನಿ, ರಾಸ್ಕೋಪ್ ಪೇಟೆಂಟ್ ಮುಂತಾದ ಪ್ರಖ್ಯಾತವಲ್ಲ ಕಂಪೆನಿಗಳ ಎಲ್ಲಾ ತರಹದ ಚಿಕ್ಕ ವ ದೊಡ್ಡ ಸೈಜಿನ ವಾಚುಗಳನ್ನು ಚಿಲ್ಲರೆಯಾಗಿಯೂ ರಖಂ ಆಗಿಯೂ ಮಾರಾಟಕ್ಕಿರುತ್ತದೆ.

ವಿಳಾಸ:— **N. GOPALJEE,**
Watch maker.
JOOMA MASJID SHEIK MEMON STREET,
BOMBAY 2.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4.

ಪೋಸ್ಟೇಜ್ ಪ್ರತ್ಯೇಕ.

೫ ವರುಷಗಳು ಗ್ಯಾರಂಟಿ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೦೬ ಮುಸ್ಸೊರೂನಲ್ಲಿ ಚಿನ್ನದ ಮೆಡಲ್ ಹೊಂದಿಕೊಟ್ಟ ಪ್ರಸಿದ್ಧವಾದ ಅಮೃತ ಸಂಜೀವಿನಿಗುಳಿಗೆ, 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ 12 ಆಣೆ ಮಾತ್ರ. ಪೋಸ್ಟುಚಾರ್ಜು 4 ಆಣೆ

ಈ ಸುಂದರವಾದ ವಾಚ್ ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ಯಾಚಾಗಿಯೂ ಇಂಜಿನ್‌ಸ್ಟಾಂಪು ಹಾಕಿಯೂ ಇರುವದು.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇರಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಹಿಂಡಿಸುವದು, ಪುತ್ರಸಂತಾನ ಉಂಟಾಗುವದು. ನಿಸ್ತ್ರೆಯ, ಲೈ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೋ ದಿಲ್-ಚಮಾನ್.

(ರಿಜಿಸ್ಟರ್ಡ್)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೋ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0 — 4 — 0 ಬೇರೆ.

ಪ್ರಾಮುಖ್ಯ ಏಜಂಟರು:—

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 P inces Street, BOMBAY

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಗಳನ್ನೂ ಹುಚ್ಚು ನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಗಜ್ಜಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಸಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟಾನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಸೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸು, ಬಲವೂ, ದೀರ್ಘಾಯುಷ್ಯವೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಷದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಷ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಯೂನಿಯನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಪೆಟ್ಟಿ ೧ಕ್ಕೆ ೩-೦-೦. ದೊಡ್ಡ ಪೆಟ್ಟಿ ಉತ್ತಮತರಹ ೧ಕ್ಕೆ ರೂ. ೪—೦—೦.

ಕಾಬುಲ ಹಿಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದ್ವಿಯಂ ರೂಪ್ಯಾ ೧ಕ್ಕೆ ೮ ತೊಲೆ, ತ್ರಿಯಂ ರೂಪ್ಯಾ ಒಂದಕ್ಕೆ ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೇಶ್ಮೆ ಸಾಮಾನುಗಳ, ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪೆನಿ,
ಚೌಕಂಬಾ, ಕಾಶಿ.

SIROMANI NARAYANA CHARYA & CO,
Choukhambay,
BENARES CITY.

ಶ್ರೀಮತ್ **ಕಲ್ಯಾಣ** ಬಂಧುಗಳೇ!

ಈ ಕಡೆ ನೋಡಿರಿ:

ಕಲ್ಯಾಣಕಾರಕವೆಂಬ ಜಿನಭಿಷಗ್ಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಿನ ವಿಳಾಸಧಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 696

ಚಂದಾನಿರ್ಣಯ:— ವರ್ಷ 1 ಕ್ಕೆ ರೂ. 1—8—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪರದೇಶಕ್ಕೆ ಹಾಸಲು ಸೇರಿ ರೂಪಾಯಿ 2—6—0.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೯ನೇ ಜನವರಿ ಶುಕ್ರವಾರ ೧೯೧೭. | ಸಂಚಿಕೆ ೩.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

ESTABLISHED JULY 1906.

Authorised Capital Rs. ...	300,000—0—0
Issued Capital ...	225,000—0—0
Subscribed Capital ...	225,000—0—0
Paid up Capital ...	200,000—0—0
Deposits	336,227—9—4
Reserve Fund ...	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	225,000—0—0
ಆಗತ ಮೂಲ ಧನವು „	200,000—0—0
ಠೇವಣಾತಿಯಾಗಿ ಕೊಡೋಣಾದ ನೊಬಲಗುಗಳು	336,227—9—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಛಾಪ ಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಬಹುದು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,
Mangalore, 1st December 1916.

P. Gopal Naik,
Secretary.

ಶಾರದಾ ಛಾಪಖಾನೆಯ
1917ನೇ
ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು—ಸ್ಟಿಫ್ ಕವರ್ ಬೈಂಡು	0—8—0
ಚಿಕ್ಕ ಸೈಜು ಕೆಲಿಕೊ ಬೈಂಡು	0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕಾವ್ಯಗಳು.

ಇದರಡಿಯಲ್ಲಿ ನಮೂದಿಸಿರುವ ಮಹಾಕಾವ್ಯಗಳಿರುವ ಪ್ರತಿಯೊಂದು ಶ್ಲೋಕಕ್ಕೂ ಪದಚ್ಛೇದ, ಪ್ರತಿಪದಾರ್ಥ, ತಾತ್ಪರ್ಯ, ಶಬ್ದರೂಪ, ಆಕಾಂಕ್ಷೆ, ಧಾತ್ವರ್ಥ ವಿಶೇಷಾಂಶಗಳು ವಿಶದವಾಗಿ ಬರೆದಿವೆ. ಸಂಸ್ಕೃತ ಭಾಷೆಯು ಪರಿಚಯವಾಗಬೇಕೆಂದಿರುವ ಕನ್ನಡಿಗರಿಗೆ ಈ ಪುಸ್ತಕಗಳು ಅವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು...	3—12—0
ಮೇಘಸಂದೇಶ ಪೂರ್ತ..................	2— 0—0
ಕುಮಾರಸಂಭವ 1, 2ನೇ ಸರ್ಗ.........	1— 4—0
ಕಿರಾತಾರ್ಜುನೀಯ ಪ್ರಥಮ ಸರ್ಗ.........	0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಅನೇಕ ಪ್ರಕರಣಗಳನ್ನು ಒಳಗೊಂಡಿದೆ. ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೩೦೦. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೩—೪—೦ ಹಾಸಲು ೬ ಆಣೆ.

ವಿಳಾಸ:—ಕೆ. ಎನ್. ರಾವ್ ಬ್ರದರ್ಸ್,
[illegible]

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! — ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಶೈವ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಗಳೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹತ್ತು ಪ್ರತಿ ಕೊಂಡುಕೊಳ್ಳುವವರಿಗೆ ಒಂದು ಕಮಿಷನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ,
ಉಡುಪಿ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡವಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಅದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಮುಂಬೈ ಲೈಫ್ ಇಷ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮ। ಲಲ್ಲುಬಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ಜೀ ಆರ್ ಜೋಶಿ ರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮ। ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿ ಮಾಡಿಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಸೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವರಿಗೆ ಕ್ಲೈಮು ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೆತ್ತ ಬಗ್ಯೆ ಈ ಮೂಲಕ ನಿಮ್ಮನ್ನ ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ದಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಒರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಬಿಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ಮದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ರಾಯುಗಳಲ್ಲಿ ಪೂರ್ಣಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ಬಿ. ಎಸ್. ಅಪ್ಪಾಜಿರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋದು, ನೆಗಡಿಯಿಂದ ಮೂಗು ಸುರಿಯೋದು ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ,

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹ, ಜಿಲ್ಲಾ ಮುಝಫರಪುರ, ಬರಿಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಜೂಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಯೂರೋಪದ ಮಹಾ ಯುದ್ಧ.

ಅರ್ಟ್ಯಾಸಿನ ಕೆಂಮ್ಮಾಡಲು ದಿಕ್ಕಿನಲ್ಲಿ ಇಂಗ್ಲಿಷ ಮತ್ತು ಸ್ಕೋಚ್ಚರ ಸೇನಿಕರು ಶತ್ರುಸೇನಿಕರ ಮೇಲೆ ಆಕಸ್ಮಿಕ್ಕಾಗಿ ಬಿದ್ದು ಜರ್ಮನ ಸೇನಾ ನೆಲೆಯ ೩ನೇ ಸಾಲಿನ ವರೆಗೆ ಮುಂದರಿದಿರುತ್ತಾರೆ. ಹುಲ್ಲಚ್ ಎಂಬಲ್ಲಿ ಬ್ರಿಟಿಷರು ಜರ್ಮನರ ಕಂದಕಗಳನ್ನು ಪ್ರವೇಶಿಸಿರುವರು. ಎಂಕ್ರೆನದಿಯ ಎರಡು ದಡಗಳಲ್ಲಿಯೂ ಮಿತ್ರರು ಅತೀ ರೋಷಾವೇಶದಿಂದ ತೋಫುಗಳನ್ನು ಹಾರಿಸುತ್ತಿದ್ದಾರೆ. ವಿಮೋಂಟಿ ಹೆಮಲ್ ಎಂಬಲ್ಲಿ ಬ್ರಿಟಿಷರು ೧೪೦ ಸೇನಿಕರನ್ನು ಸೆರೆಹಿಡಿದಿರುವರು. ಬ್ರಿಟಿಷರು ಅರ್ಮೆಂಟಿಯರ್‍ಸಿನ ಎದುರುಗಡೆಯಲ್ಲಿರುವ ಕಂದಕಗಳನ್ನು ನುಗ್ಗಿ ಬಹಳ ಭೂಮಿಯನ್ನು ಕೊಂಡಿರುತ್ತಾರೆ.

ಬಾಲ್ಕಾನ್.

ರುಶ್ಯಾ—ರುಮೇನಿಯ ಸೇನಿಕರು ಬ್ರಾಯಿಲ್ಲಾದಿಂದ ಹಿಂದೆ ಸರಿದುದರಿಂದ ಶತ್ರುಗಳು ಈಗ ಸೆರೆತಿನ ವರೆಗೆ ಮುಂದರಿದು ಈ ನದಿಯ ದಕ್ಷಿಣ ದಡವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಮೋಲ್ಡಾವಿಯನ್ ಕಣಿವೆಯ ಬಳಿ ಜರ್ಮನರೂ ಆಸ್ಟ್ರಿಯನರೂ ಹಲ್ಲೆಮಾಡಿ ಮುಂದರಿಯುತ್ತಿದ್ದಾರೆ.

ರುಶ್ಯನರು ಪ್ರಕಟಿಸಿದ ವಾರ್ತೆಯಿಂದ ರುಶ್ಯನರು ಈಗ ಬಿಬಿಟ್ ಸರೋವರದ ಪಶ್ಚಿಮದಲ್ಲಿರುವ ಕಂದಕಗಳನ್ನು ಹಿಡಿದಿರುವರು. ಜನವರಿ ತಾ. ೨೦ರಿಂದ ೮೦೦ ಶತ್ರುಸೇನಿಕರು ರುಶ್ಯನರ ಸೆರೆಬಿದ್ದಿರುವರು. ರುಶ್ಯನರ ಸೇನಿಕರು ವಿವರಿಸಲಸಾಧ್ಯವಾದಷ್ಟು ಧೈರ್ಯಸಾಹಸಗಳನ್ನು ತೋರಿಸುತ್ತಲಿದ್ದಾರೆ. ಕೊಪ್ರಫೋದ ಬಳಿ ಶತ್ರುಗಳ ಸೇನಿಕರು ಹಿಮ್ಮೆಟ್ಟಿರುವರು ಎಂಬದಾಗಿ ತಿಳಿದು ಬರುತ್ತದೆ. ಬಿಬಿಟ್ ಸರೋವರದ ದಕ್ಷಿಣದಲ್ಲಿ ಇನ್ನೂ ಕಾಳಗ ನಡೆಯುತ್ತಿದೆ. ಸ್ಲಿಟಿಜ್ ನದಿಯ ಉತ್ತರದಲ್ಲಿ ಶತ್ರುಗಳು ಎರಡು ದಿನ್ನೆಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಶತ್ರುಗಳು ಮೋಕ್ಸಾನಿಯದ ಉತ್ತರದಲ್ಲಿ ಪುಟ್ನಾನದಿಯನ್ನು ದಾಟಿರುತ್ತಾರೆ. ಆದರೆ ರುಶ್ಯನರು ಅವರ ಮೇಲೆ ಹಿಂತಿರುಗಿ ಬಿದ್ದು ಅವರನ್ನು ಹಿಂದಕ್ಕಟ್ಟಿರುವರು

ಪೂರ್ವ ರಣರಂಗ.

ರಿಗ್ಗಾದ ದಕ್ಷಿಣದಲ್ಲಿ ರುಶ್ಯನರು ೧೦೦೦ ಸೇನಿಕರನ್ನೂ ಬಹಳ ಆಹಾರಸಾಮಗ್ರಿಗಳನ್ನೂ ಯುದ್ಧಸಾಮಗ್ರಿಗಳನ್ನೂ ಹಿಡಿದಿರುತ್ತಾರೆ. ರಿಗ್ಗಾದ ಪಶ್ಚಿಮದಲ್ಲಿ ಕಾಳಗವು ನಡೆಯುತ್ತಿದೆ. ರುಶ್ಯನರು ಟಿರುಲು ಜವುಗುಭೂಮಿ ಮತ್ತು ಆ ನದಿಯ ಮಧ್ಯೆ ಇದ್ದ ಶತ್ರುಗಳ ನೆಲೆಯನ್ನು ಗೆದ್ದುಕೊಂಡಿರುತ್ತಾರೆ. ಜನವರಿ ತಾ. ೧೨ರಿಂದ ಶತ್ರುಗಳ ೨೧ ಭಾರವಾದ ಫಿರಂಗಿಗಳೂ, ೧೧ ಹಗುರವಾದ ಫಿರಂಗಿಗಳೂ ರುಶ್ಯನರ ಕೈಸೇರಿರುವವು.

ಡ್ವೀನ ನದಿಯ ಮಧ್ಯೆ ಇದ್ದ ಗ್ಲಾಡನ್ ದ್ವೀಪಗಳು ರುಶ್ಯನರ ಸ್ವಾಧೀನವಾಗಿರುವವು. ಈ ದ್ವೀಪಗಳು ರಿಗ್ಗಾಕ್ಕೆ ಸುಮಾರು ೧೦೦ ಮೈಲು ದೂರದಲ್ಲಿದೆ.

ಗ್ರೀಸ್.

ಮಿತ್ರರಾಜ್ಯಗಳವರು ಗ್ರೀಕರಿಗೆ ಕೊಟ್ಟ ಕಡೆಯ ಪತ್ರವನ್ನು ಗ್ರೀಕ ಸರಕಾರದವರು ಅಂಗೀಕರಿಸಿರುತ್ತಾರೆ.

ಮೆಸಪೊಟಾಮಿಯ.

ತೀಗ್ರಿಸಿನಲ್ಲಿ ಹಿಂದೀ ಸೇನಿಕರು ೧೦೦೦ ಗಜ ಕಂದಕಗಳನ್ನು ಗೆದ್ದುಕೊಂಡಿರುವರು ಎಂಬ ವಾರ್ತೆ ಬಂದಿರುತ್ತದೆ. ೧೬೨ ಶತ್ರುಸೇನಿಕರು ನಮ್ಮವರ ಸೆರೆಬಿದ್ದಿರುವರು.

ಕಟ್ ಎಂಬ ಸ್ಥಳಕ್ಕೆ ಬಡಗು ಮೂಡಲಲ್ಲಿರುವ ಶತ್ರುಗಳ ಹೆಚ್ಚುಕಡಿಮೆ ಎಲ್ಲಾ ಕಂದಕಗಳು ಬ್ರಿಟಿಷ ಸೇನಿಕರ ಸ್ವಾಧೀನವಾಗಿದೆ. ಕೆಲವು ಕಂದಕಗಳಲ್ಲಿ ಒಟ್ಟಿಗೆ ೩೦೦ ಶತ್ರುಸೇನಿಕರ ಹೆಣಗಳು ಬಿದ್ದಿದ್ದವು. ಮಹಮುದ್ ಅಬ್ದುಲ್ಲಹಸ್ಸಾನ್ ಎಂಬಲ್ಲಿ ಬ್ರಿಟಿಷರು ತುರ್ಕರ ನೆಲೆಗಳನ್ನು ಸ್ವಾಧೀನಮಾಡಿಕೊಂಡಿದ್ದಾರೆ. ಬ್ರಿಟಿಷರು ಸ್ವಾಧೀನಮಾಡಿಕೊಂಡ ಕಂದಕಗಳ ಉತ್ತರದಲ್ಲಿರುವ ಸುಲ್ತಾ ಎಂಬಲ್ಲಿ ತಮ್ಮ ನೆಲೆಗಳನ್ನು ಮಾಡಿಕೊಂಡಿರುವರು. ಇಲ್ಲಿ ತುರ್ಕರು ಬ್ರಿಟಿಷ ನೆಲೆಯ ಮೇಲೆ ಬಿದ್ದು ಒಂದಂಶವನ್ನು ಸ್ವಾಧೀನಮಾಡಿಕೊಂಡರು. ಆದರೆ ನಮ್ಮ ಸೇನಿಕರು ಪುನಃ ತುರ್ಕರ ಮೇಲೆ ಬಿದ್ದು ಅವರನ್ನು ಹಿಂದಕ್ಕೆ ಓಡಿಸಿರುತ್ತಾರೆ. ೧೫೫ ಸೇನಿಕರೂ ಏಳು ಆಫೀಸರರೂ ನಮ್ಮವರ ಸೆರೆಬಿದ್ದಿರುತ್ತಾರೆ.

ಈಜಿಪ್ಟ.

ಎಲ್ ಎರಿಸಿನ ಬಡಗು ಮೂಡಲಿನಲ್ಲಿರುವ ರಾಫ ಎಂಬಲ್ಲಿ ತುರ್ಕರು ಬಲಕಾಯಿಸಿಕೊಂಡಿದ್ದ ಕಂದಕಗಳ ಮೇಲೆ ನಮ್ಮವರ ಸೇನಿಕರು ಬಿದ್ದು ದಿನವೆಲ್ಲಾ ಕಾದಾಡಿ ೧೬೦೦ ತುರ್ಕಿ ಸೇನಿಕರನ್ನೂ ೪ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ಅದಲ್ಲದೆ ಗಾಯ ಒಡೆದ ಮತ್ತು ಮಡಿದು ಹೋದ ೬೦೦ ಶತ್ರು ಸೇನಿಕರು ನಮ್ಮವರಿಗೆ ದೊರೆತಿರುತ್ತಾರೆ.

ಸಂಧಿ ಪ್ರಸ್ತಾಪ.

ಜರ್ಮನರ ಸಂಧಿಪ್ರಸ್ತಾಪಕ್ಕೆ ಮಿತ್ರರಾಜ್ಯಗಳವರು ಕಿವಿಗೊಡದ್ದರಿಂದ ಜರ್ಮನರು ತಟಸ್ಥರಾಜ್ಯಗಳವರಿಗೆ ಒಂದು ಪತ್ರವನ್ನು ಕಳುಹಿಸಿಕೊಟ್ಟು ಈ ಮೂಲಕ ತಾವು ನಿರಪರಾಧಿಗಳೆಂದು ತೋರಿಸ ಪ್ರಾರಂಭಿಸಿದ್ದಾರೆ. ಜರ್ಮನಿಯು ತನ್ನ ಅಸ್ತಿತ್ವವನ್ನು [illegible] ಯುದ್ಧ ಮಾಡ ಪ್ರಾರಂಭಿಸಿಯದೆ. ಈ ಉದ್ದೇಶವು ಈಗ ನೆರವೇರಿರುತ್ತದೆಂಬುದು ಈ ಪತ್ರದಲ್ಲಿ ವಿವರಿಸಲಾಗಿದೆ. ಮಿತ್ರರು ಮೊದಲಾಗಿ ಹೊರಪಡಿಸಿದ ತಮ್ಮ ಉದ್ದೇಶವನ್ನು ಬಿಟ್ಟು ಈಗಲೀಗ ಪ್ರದೇಶಗಳನ್ನು ಗೆದ್ದುಕೊಳ್ಳಬೇಕೆಂಬ ಆಶೆಯುಳ್ಳವರಾಗಿದ್ದಾರೆಂಬದಾಗಿಯೂ ಅವರು ಜರ್ಮನರ ಸಂಧಿಪ್ರಸ್ತಾಪವನ್ನು ಪರೀಕ್ಷಿಸಿ ನೋಡಲಿಲ್ಲವಾಗಿಯೂ ದಕ್ಷಿಣ ಆಫ್ರೀಕ, ಗ್ರೀಸ್, ಐರ್ಲಾಂಡ್ ಮೊದಲಾದ ಪ್ರದೇಶಗಳಿಗೆ ಮಿತ್ರರು ಬಹಳ ಅನ್ಯಾಯ ಮಾಡಿದ್ದಾರಾಗಿಯೂ ಬೆಲ್ಜಿಯಮಿಗೆ ಆದ ಅವಸ್ಥೆಗೆ ಫ್ರೆಂಚರೂ ಬ್ರಿಟಿಷರೂ ಕಾರಣರೆಂತಲೂ ಜರ್ಮನರು ತಮ್ಮ ಈ ಪತ್ರದಲ್ಲಿ ತೋರಿಸಿರುತ್ತಾರೆ.

ಅಮೇರಿಕದ ಪ್ರೆಸಿಡೆಂಟರಾದ ವಿಲ್ಸನರು ಮಿತ್ರರಾಜ್ಯಗಳಿಗೆ ಕಳುಹಿಸಿಕೊಟ್ಟ ಪತ್ರಕ್ಕೆ ಮಿತ್ರರಾಜ್ಯಗಳವರು ಸ್ನೇಹಪೂರ್ವಕವಾದ ಉತ್ತರ ಕೊಟ್ಟು ಕಳುಹಿಸಿರುತ್ತಾರೆ. ಜರ್ಮನರು ಬೆಲ್ಜಿಯಮನ್ನು [illegible] ಯುದ್ಧಕಾಲದಲ್ಲಿ ತೋರಿಸಿದ ವಿಧವಿಧದ ಅನ್ಯಾಯಗಳಿಂದ ಜರ್ಮನಿಯು ಸಭ್ಯ ರಾಷ್ಟ್ರಗಳಲ್ಲಿ ತನ್ನ ಮಾನ ಕೊಡುವದಿಲ್ಲವೆಂದೂ [illegible] ಮಹತ್ವಕ್ಕೆ ತುಚ್ಛಭಾವವನ್ನು ತೋರಿಸಿಯದೆಂದೂ [illegible] ಮತ್ತು ಮೊಂಟಿನೆಗ್ರೋವನ್ನು ಜರ್ಮನಿಯು [illegible] ಅವರವರ ಸ್ವಾಧೀನಕ್ಕೆ ಮುಂದಕ್ಕೆ [illegible] ಮಾಡುವದಿಲ್ಲವೆಂಬದಕ್ಕೆ ತಕ್ಕ ಭರವಸೆಕೊಡುವ ವಿನಾ ಸಂಧಿಯಾಗುವ ಉಪಾಯವಿಲ್ಲವೆಂತ ತಿಳಿಯಪಡಿಸಿರುತ್ತಾರೆ.

ಜಲಾಂತರ್ಗಾಮಿ ನಾವೆಗಳು.

ತಾ. ೯ರಲ್ಲು ಬ್ರಿಟಿಷರ "ಲೆಸ್ಪಿಯಾನ್" ಫ್ರೆಂಚರ "ಅಲ್ಬಾತ್ರೋಸ್ ಕೆರಿಯರ್" ಜಪಾನಿಯರ "ಜಿಂತೋಮಾರು" ನೋರ್ವೆಯರ "ಟೋಗೆಲ್ಸ್" "ಮಾರ್ಕ ಲೇಂಡ್" "ರಾಷೋರ್" ಮತ್ತು "ಹಾನ್ಸ" ಎಂಬ ಹಡಗಗಳೂ ತಾ. ೧೧ರಲ್ಲು ಬ್ರಿಟಿಷರ "ಕೋರ್ನವಾಲಿಸ್" ಎಂಬ ಯುದ್ಧಹಡಗವೂ ಮೆಡಿಟರೇನಿಯನ್ ಸಮುದ್ರದಲ್ಲಿ ಜಲಾಂತರ್ಗಾಮಿ ನಾವೆಗಳಿಂದ ಮುಳುಗಿಸಲ್ಪಟ್ಟವೆ. ನಂತರ ಬಂದ ವಾರ್ತೆಯಿಂದ ಬ್ರಿಟಿಷರ "ಲ್ರೈನ್‌ಫೀಲ್ಡ್" "ಬೆನೆಸ್" "ಎಂಡೊವಸ್" ಸ್ವೀಡನಿನವರ "ಫೆರ್ನೆಬೋ" ಎಂಬ ಹಡಗಗಳು ಶತ್ರುಗಳ ಜಲಾಂತರ್ಗಾಮಿ ನಾವೆಗಳಿಗೆ ತುತ್ತಾಗಿವೆಂತ ತಿಳಿದು ಬರುತ್ತದೆ.

ತಾ. ೧೧ರಲ್ಲು ಬ್ರಿಟಿಷರ "ಹಡ್‌ವರ್ತ" "ಕೆಲ್‌ವಿಂಡೆಲ್" ಹಡಗಗಳೂ ತಾ. ೧೩ರಲ್ಲು ಬ್ರಿಟಿಷರ "ಎಕ್ಸಲೆಂಡ್" ಡೆನ್‌ಮಾರ್ಕಿನವರ "ಟೆಗ್‌ಬರ್ಗ" ಹಡಗಗಳೂ ಶತ್ರುಗಳ ಜಲಾಂತರ್ಗಾಮಿ ನಾವೆಗಳಿಂದ ಮುಳುಗಿಸಲ್ಪಟ್ಟವೆ.

ವಿದೇಶ ವೃತ್ತಾಂತ.

ರುಶ್ಯಾ ದೇಶದ ಪ್ರಧಾನ ಮಂತ್ರಿಯಾದ ಎಮ್. ಟ್ರೆಪೊಫ್‌ರವರೂ ವಿದ್ಯಾಸಂಬಂಧವಾದ ಮಂತ್ರಿಯಾಗಿರುವ ಎಮ್. ಇಗ್ನಾಟಿಫ್‌ರವರೂ ರಾಜಿನಾಮೆ ಕೊಟ್ಟಿರುತ್ತಾರೆ. ಪ್ರಿನ್ಸ್‌ಗೆಲಿಟ್ ಜೈನ್‌ವರು ಪ್ರಧಾನ ಮಂತ್ರಿಯಾಗಿಯೂ ಎಮ್. ಕಲ್ಟಚಿಟಿಯವರು ವಿದ್ಯಾಭ್ಯಾಸ ಸಂಬಂಧವಾದ ಮಂತ್ರಿಯಾಗಿಯೂ ನೇಮಿಸಲ್ಪಟ್ಟಿರುವರು. ಈ ಬದಲಾವಣೆಯು ಫಕ್ಕನೇ ಆದುದರಿಂದ ಇದಕ್ಕೆ ತಕ್ಕ ಕಾರಣವು ಗೊತ್ತಾಗಲಿಲ್ಲ.

ಈಜಿಪ್ತ ದೇಶದಿಂದ ಲಂಡನಿಗೆ ೭ ಮಿಲಿಯ ಮೊಟ್ಟೆಗಳು ಬಂದಿವೆ. ಒಂದು ಮೊಟ್ಟೆಯು ಒಂದೂವರೆ ಆಣೆ ಪ್ರಕಾರ ಮಾರಾಟವಾಗುತ್ತಿದೆ. ಈ ತಿಂಗಳಲ್ಲಿ ಅಮೇರಿಕದಿಂದಲೂ ಲಂಡನಿಗೆ ಬಹಳ ಮೊಟ್ಟೆಗಳು ಬಂದಿರುವವು.

ಕಳೆದ ದಶಂಬರ ತಿಂಗಳೊಂದರಲ್ಲೇ ಜರ್ಮನ ಸೇನೆಯಲ್ಲಿ ೮೬,೫೯೧ ಮಂದಿ ಪ್ರಾಣಾಪಾಯ ಹೊಂದಿರುವರು. ಈ ಪೈಕಿ ೧೫,೧೬೦ ಮಂದಿ ಹತರಾಗಿರುವರು ಎಂತ ಪ್ರಕಟವಾಗಿದೆ.

ಜರ್ಮನರು ೩ ತಿಂಗಳೊಳಗೆ ಯುದ್ಧವನ್ನು ಮುಗಿಸಬೇಕೆಂಬ ಅಪೇಕ್ಷೆಯಿಂದ ಸ್ವಿಜರ್‌ಲೇಂಡಿನ ಮೂಲಕ ಫ್ರಾನ್ಸನ್ನು ನುಗ್ಗಿ ಘೋರಕಾಳಗ ಮಾಡಬೇಕೆಂದಿದ್ದಾರೆಂತ "ಡೈಲಿನ್ಯೂಸ್" ಪತ್ರಿಕೆಯ ಬಾತ್ಮೀದಾರರು ಬರೆದಿರುವರು. ಸ್ವಿಜರ್‌ಲೇಂಡನ್ನು ನುಗ್ಗಿ ಫ್ರಾನ್ಸಿನ ಮೇಲೆ ಬೀಳುವ ಆಲೋಚನೆಯು ತಮಗಿಲ್ಲವೆಂದು ಜರ್ಮನಿಯು ಹೇಳುತ್ತಿರುವದಾದರೂ ಜರ್ಮನರ ವರ್ತನೆಗಳಿಂದ ಸ್ವಿಜರ್‌ಲೇಂಡಿನಲ್ಲಿ ಈ ವಿಷಯದಲ್ಲಿ ಸಂದೇಹ ಉಂಟಾಗಿರುವದು.

ಹೊಲ್ಲಾಂಡು ದೇಶವು ಈ ವರ್ಷದಲ್ಲಿ ಯುದ್ಧಕ್ಕೆ ಎಳೆಯಲ್ಪಡುವ ಸಂಭವವಿದೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಆಸ್ಟ್ರೀಯದ ಈಗಿನ ಚಕ್ರವರ್ತಿಯವರು ಜರ್ಮನ್ ಸಂಬಳ ಪಡೆದು ಆಸ್ಟ್ರೀಯ ದೇಶದಲ್ಲಿದ್ದ ೧೦೦ ಆಫೀಸರರನ್ನು ಕೆಲಸದಿಂದ ತೆಗೆದುಹಾಕಿರುವರು ಎಂತ ವಾರ್ತೆ ಬಂದಿದೆ.

ಉತ್ತರ ಹಿಂದೂಸ್ಥಾನ.

ಪಂಜಾಬಿನ ಸುಶಿಕ್ಷಿತರಲ್ಲಿ ಸೇನೆಗೆ ಸೇರಿಕೊಂಡು ಸಾಮ್ರಾಜ್ಯದ ಬಗ್ಗೆ ಹೋರಾಡಬೇಕೆಂಬ ಮನಸ್ಸು ಈಗೀಗ ಹೆಚ್ಚಾಗುತ್ತಾ ಬಂದಿದೆ. ಈ ವಿಷಯ ವರ್ತಮಾನ ಪತ್ರಿಕೆಗಳಲ್ಲಿಯೂ ಇತರ ಕಡೆಗಳಲ್ಲಿಯೂ ಚರ್ಚೆಗಳು ನಡೆಯುತ್ತಲೇ ಇದ್ದುದರಿಂದ ಪಂಜಾಬು ಸರಕಾರದವರು ಇಂಥಾ ಕುತೂಹಲ ಉಳ್ಳವರನ್ನು ಸೇನೆಗೆ ಸೇರಿಸಿಕೊಳ್ಳುವ ಏರ್ಪಾಡನ್ನು ಮಾಡುವದು ವಿಹಿತವೆಂದು ನಿರ್ಣಯಿಸಿ ಈ ಸಂಬಂಧ ಸೇನೆಗೆ ಸೇರಿಕೊಳ್ಳುವ ಸುಶಿಕ್ಷಿತರ ಅರ್ಜಿಗಳನ್ನು ಫೆಬ್ರುವರಿ ತಿಂಗಳ ಅಂತ್ಯದ ಒಳಗೆ ಕಳುಹಿಸಿಕೊಡಬೇಕೆಂದು ಅಪ್ಪಣೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಲೆಪ್ಟನೆಂಟ್ ಗವರ್ನರರು ಪ್ರಕಟಿಸಿದ ಪತ್ರದಿಂದ ಪಂಜಾಬಿನಿಂದ ಈ ಮೊದಲೇ ೧೨೦,೦೦೦ ಮಂದಿ ಸೇನೆಗೆ ಸೇರಿಕೊಂಡಿದ್ದಾರೆ, ಸಾಮ್ರಾಜ್ಯಕ್ಕಾಗಿ ಕಾದಾಡುತ್ತಿರುವ ಹಿಂದೀಸೇನಿಕರ ಅರ್ಧಾಂಶ ಸಂಖ್ಯೆಯು ಪಂಜಾಬಿನವರದು. ರಾವಲ್ಪಿಂಡಿ ಡಿವಿಜನಿನ ಸೆಕಂಡರಿ ಶಾಲೆಗಳಿಂದ ಕಳೆದ ವರ್ಷ ಮಾರ್ಚ ತಿಂಗಳಾಂತ್ಯದ ವರೆಗೆ ೧೦೮೦ ಮಂದಿ ಸೇನೆಗೆ ಸೇರಿಕೊಂಡಿರುವರು, ಈಗ ಮೆಟ್ರಿಕ್ಯುಲೇಶನ್ ಮತ್ತು ಯೂನಿವರ್ಸಿಟಿ ಪರೀಕ್ಷೆಗೆ ಓದುತ್ತಿರುವ ವಿದ್ಯಾರ್ಥಿಗಳ ಒಂದು ಸೇನಾಸಂಗಡವನ್ನು ಸ್ಥಾಪಿಸಬೇಕು ಎಂಬದಾಗಿ ಸೂಚಿಸಿರುವರು.

ಬಂಗಾಳದಲ್ಲಿ ಶಾಲೆಗಳ ಸಂಖ್ಯೆಯು ೧೯೧೬ನೇ ಇಸವಿಯಲ್ಲಿ ವಿಶೇಷವಾಗಿ ಹೆಚ್ಚಿರುತ್ತದೆ. ಶಾಲೆಗಳ ಸಂಖ್ಯೆಯು ಎರಡು ಸಾವಿರಕ್ಕೆ ಮಿಕ್ಕಿ ಈಗ ಒಟ್ಟು ೪೭,೭೭೦ ಶಾಲೆಗಳು ಇವೆ. ವಿದ್ಯಾರ್ಥಿಗಳ ಸಂಖ್ಯೆಯು [illegible] ಮತ್ತು ವಿದ್ಯಾರ್ಥಿನಿಗಳ ಸಂಖ್ಯೆಯು [illegible] ಬಾಲಕಿಯರ ಸಂಖ್ಯೆಯು ೩೦,೦೦೦ಕ್ಕೆ ಹೆಚ್ಚಿದೆ. ಇಂಡಿಯನ್ ಎಡ್ಯುಕೇಶನಲ್ ಸರ್ವಿಸಿನಿಂದ ೪ ಮಂದಿ ಆಫೀಸರರು ಹಿಂದೀ ಸೇನೆಗೆ ಸೇರಿಕೊಂಡಿದ್ದಾರೆ. ಈ ಪೈಕಿ ಇಬ್ಬರು ಶತ್ರುಗಳ ಸೆರೆಬಿದ್ದಿರುವರು. ವರ್ಷಾರಂಭದಲ್ಲಿ ಇ. ಎ. ಸರ್ವಿಸಿನ ಎಲ್ಲಾ ಜೂನಿಯರ್ ಮೆಂಬರರು ಸೇನೆಗೆ ಬರಿಸಿಕೊಂಡದ್ದರಿಂದ ೨ ಕಾಲೇಜುಗಳನ್ನು ಮುಚ್ಚಿಬಿಡಬೇಕಾಗಿ ಬಂದರೂ ಕಾಲೇಜು ವಿದ್ಯಾರ್ಥಿಗಳ ಸಂಖ್ಯೆಯು ೧೯೫೦೦ರಿಂದ ೧೬,೬೨೬ಕ್ಕೆ ಹೆಚ್ಚಿದೆ. ಎಲಿಮೆಂಟರಿ ಶಾಲೆಗಳಲ್ಲಿ ೧೧,೬೪,೧೦೪ ಮಂದಿ ಓದುತ್ತಿದ್ದಾರೆ. ಮಹಮ್ಮದೀ ವಿದ್ಯಾರ್ಥಿಗಳ ಸಂಖ್ಯೆಯು ೮೦೩೫೬ ರಿಂದ ೮೩೪೩೬ಕ್ಕೆ ಹೆಚ್ಚಿದೆ. ಈಗ ಬಂಗಾಳದಲ್ಲಿ ೫ ಮಹಮ್ಮದೀ ಹುಡುಗರ ಶಾಲೆಗೆ ಒಂದು ಮಹಮ್ಮದೀ ಹುಡುಗಿಯರ ಶಾಲೆಯಂತೆ ಇದೆ.

ವೈಸರಾಯಿ ಪ್ರಭು ಪತ್ನಿಯವರು ಒಂದು ಪತ್ರಿಕೆಗೆ ಬರೆದ ಒಂದು ಲೇಖನದಲ್ಲಿ—ಯುದ್ಧರಂಗದಲ್ಲಿ ಹೋರಾಡುತ್ತಿರುವ ಸೈನಿಕರ ಬಗ್ಗೆ ಸಹಾಯ್ಯಮಾಡುತ್ತಿರುವ ರೆಡ್‌ಕ್ರಾಸ್ ಸಂಘದ ದೊಡ್ಡ ದೊಡ್ಡ ಶಾಖೆಗಳು ಈ ಹಿಂದೂಸ್ಥಾನದಲ್ಲಿ ೫೬, ಸಣ್ಣವು ೩೧೦ ಬೇರೆ ಬೇರೆ ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟಿರುವವು. ಇವುಗಳ ಫಂಡುಗಳಿಂದ ೩೦ ಲಕ್ಷ ರೂಪಾಯಿ ಬೆಲೆಬಾಳುವ ಸೊತ್ತುಗಳು ಸೈನಿಕರ ಸೌಕರ್ಯಕ್ಕಾಗಿ ಕಳುಹಿಸಲ್ಪಟ್ಟಿರುತ್ತದೆ. ತಿಂಗಳೊಂದಕ್ಕೆ ೧॥ ಲಕ್ಷ ರೂಪಾಯಿ ಬೆಲೆಬಾಳುವ ವಸ್ತುಗಳು ಹೀಗೆ ಕಳುಹಿಸೋಣಾಗುತ್ತದೆ. ಸೇನಿಕರ ಕ್ಷೇಮಕ್ಕಾಗಿ ಭರತಖಂಡದ ಸ್ತ್ರೀಯರು ಪಡುವ ಶ್ರಮವು ಇಂಗ್ಲಂಡಿನ ಸ್ತ್ರೀಯರು ಪಡುತ್ತಿರುವ ಶ್ರಮಕ್ಕೆ ಕಡಿಮೆಯಾಗಿಲ್ಲವೆಂತ ಹೇಳಿರುತ್ತಾರೆ.

ಜರ್ಮನಿ ದೇಶದ ನೀಲಿ ಬಣ್ಣವು ಬರುವದು ನಿಂತುಹೋದ ಬಳಿಕ ನಮ್ಮ ದೇಶದ ನೀಲಿಯ ವ್ಯವಸಾಯವೂ ವ್ಯಾಪಾರವೂ ಈಗ ತಲೆಯೆತ್ತಿಕೊಂಡಿವೆ. ಪರದೇಶಗಳಿಗೂ ನಮ್ಮ ದೇಶದ ನೀಲಿಯು ಈಗ ಹೋಗುತ್ತಲಿದೆ. ಈ ದೇಶದೊಳಗೆಲ್ಲಾ ಕಳೆದ ವರ್ಷದೊಳಗೆ ೩೫,೩೧೦೦ ಎಕ್ಕರೆ ಭೂಮಿಯಲ್ಲಿ ಇದರ ಬೆಳೆ ಮಾಡಲ್ಪಟ್ಟು ೫೯,೧೦೦ ಹಂಡ್ರೆಡ್‌ವೇಟ್ ನೀಲಿ ಉತ್ಪನ್ನವಾಗಿದೆ. ಈ ವರ್ಷ ೭,೫೬,೪೦೦ ಎಕ್ಕರೆಯಲ್ಲಿ ನೀಲಿಯ ಬೆಳೆ ಮಾಡಲ್ಪಟ್ಟು ೧,೯೯,೫೦೦ ಹಂಡ್ರೆಡ್‌ವೇಟಿನ ನೀಲಿ ಉತ್ಪನ್ನವಾಗಿದೆ. ಕಳೆದ ವರ್ಷ ಕೆಲವು ತಿಂಗಳಲ್ಲಿ ನೀಲಿಯ ಬೆಲೆಯು ಹಂಡ್ರೆಡ್‌ವೇಟಿಗೆ ರೂ. ೪೦೦—೫೦೦ರ ವರೆಗೆ ಇದ್ದಿತು. ಕಳೆದ ನವಂಬರ ತಿಂಗಳಲ್ಲಿ ರೂ. ೫೭೦ರ ವರೆಗಿದ್ದಿತ್ತು. ದಶಂಬರ ತಿಂಗಳಲ್ಲಿ ರೂ. ೧೦೦೦ಕ್ಕೆ ಏರಿದ್ದಿತು.

ಹಿಂದೂಸ್ಥಾನದಲ್ಲಿ ಪೋರ್ಚುಗೀಸರಿಗೆ ಸೇರಿರುವ ದೇಶಭಾಗದ ಪ್ರಜೆಗಳಿಗೆ ಇಷ್ಟರಲ್ಲೇ ಸ್ವಪರಿಪಾಲನವನ್ನು ಕೊಡುವ ಏರ್ಪಾಟು ನಡೆಯುತ್ತಿದೆ. ಅಲ್ಲಿಯ ಗವರ್ನರ್ ಜನರಲರವರು ಈ ಸಂಬಂಧವಾದ ಒಂದು ನಿಬಂಧನೆಯ ಮಸೂದೆಯನ್ನು ಹೊರಡಿಸಿದ್ದಾರೆ.

ಹಿಂದೂಸ್ಥಾನದ ಪ್ರೆಸ್ ಆಕ್ಟಿನ ಸಂಬಂಧವಾಗಿ ವೈಸರಾಯ ಪ್ರಭುಗಳವರಿಗೆ ಭೇಟಿಕೊಡತಕ್ಕ ಪ್ರತಿನಿಧಿ ಮಂಡಲಿಯವರು ಇದೇ ಬರುವ ಮಾರ್ಚ ತಿಂಗಳಲ್ಲಿ ವೈಸರಾಯರಿಗೆ ಭೇಟಿಕೊಡತಕ್ಕವರಿದ್ದಾರೆಂತ ತಿಳಿದುಬರುತ್ತದೆ.

ಕಳೆದ ವರ್ಷ ಹೊಸ ವರ್ಷದ ಬಹುಮಾನವಾಗಿ ಮುಂಬಾಯಿಯ ಸೇಟ್ ನರೋತ್ತಮ ಮೊರಾರ್ಜಿ ಗೋಕುಲದಾಸರವರಿಗೆ ಸರಕಾರದವರು ಬಿರುದು ಕೊಡಲಿಕ್ಕಿದ್ದಾಗ ಅವರು ಅಂಥಾ ಬಿರುದಿಗೆ ತಾನು ಅರ್ಹನಲ್ಲವೆಂತ ಹೇಳಿ ಸ್ವೀಕರಿಸಲಿಲ್ಲ. ಈ ವರ್ಷ ಡಾಕ್ಟರ್ ಭಾಜೇಕಾರರಿಗೆ ರಾವ್ ಬಹದ್ದೂರ್ ಬಿರುದು ಸಿಕ್ಕಿದಾಗ ಅವರು ಅದು ತನಗೆ ಬೇಡವೆಂದರು ಎಂತ ಮುಂಬಾಯಿಯ "ಮೆಸೆಜ್" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಸಾರಿಯ ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದ ಬಹುಮಾನಪಟ್ಟ ಪಂಡಿತ ಜಗತ್ ನಾರಾಯಣರವರಿಗೆ ರಾಯ ಬಹದ್ದೂರು ಎಂಬ ಬಿರುದು ಸಿಕ್ಕಲಿಕ್ಕಿತು. ಆದರೆ ಅವರು ತನಗೆ ಅದು ಬೇಡವೆಂದರು ಎಂತ ಅಲ್ಲಹಾಬಾದಿನ "ಅಭ್ಯುದಯ" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ರಾಜಕೀಯೋದ್ಯೋಗ ಕಮಿಷನಿನ ವರದಿಯು ಆಯಾ ಸ್ಥಳಕ ಸರಕಾರಗಳವರಿಗೆ ಬಂದು ತಲಪಿರುವದೆಂದೂ ಇಂಡಿಯಾ ಸರಕಾರದ ಹುಕುಂ ಸಿಕ್ಕಿದಾಕ್ಷಣ ಈ ವರದಿಯು ಪ್ರಕಟವಾಗುವದೆಂದೂ ತಿಳಿದುಬಂದಿದೆ.

ಸಿಂಧ ಪ್ರಾಂತ್ಯದಲ್ಲಿ ದವಸಧಾನ್ಯಗಳ ಬೆಲೆಯು ವಿಶೇಷ ಜಡವಾಗಿರುವದರಿಂದ ಬಡವರ ಜೀವನ ಸಾಗುವದೆ [illegible] ಕರವಾಗಿ ಬಂದಿದೆ. ಆದುದರಿಂದ ದವಸಧಾನ್ಯಗಳ [illegible] ಯನ್ನು ಏರ್ಪಡಿಸಬೇಕೆಂತ ಸಿಂಧಿನ ಮಹಮ್ಮದೀ [illegible] ತವನ ಪ್ರತಿನಿಧಿಯವರು ಸರಕಾರಕ್ಕೆ [illegible].

ಅನುಕ್ರಮಣಿಕೆ.

	ಪಾನು.
ಅಗ್ರಲೇಖ—ಸ್ವರಾಜ್ಯ ಅರ್ಥಾತ್ ಪ್ರಾತಿನಿಧಿಕ ರಾಜ್ಯಪದ್ಧತಿ	೪
ಸ್ಫುಟಲೇಖ:—	
೧ ಹಿಂದೀ ಶಾಸ್ತ್ರ ಪರಿಷತ್ತು	,,
೨ ಕಲ್ಕತ್ತೆಯ ಪದವಿಧಾನವು	೪—೫
೩ ಬ್ರಾಹ್ಮಣರೂ ಬ್ರಾಹ್ಮಣೇತರರೂ	೫
೪ ಫೋರೆಸ್ಟ್ ಪಂಚಾಯತು.	೫
ವರ್ತಮಾನ ಸಂಗ್ರಹ—	
ಸ್ಥಳಿಕ—ಮಂಗಳೂರು	೫
ಯೂರೋಪದ ಮಹಾಯುದ್ಧ	೬
ವಿದೇಶವೃತ್ತಾಂತ	,,
ಉತ್ತರಹಿಂದೂಸ್ಥಾನ	,,
ದಕ್ಷಿಣ ಹಿಂದೂಸ್ಥಾನ	೭
ಪತ್ರವ್ಯವಹಾರ ಮತ್ತು ಬಾತಮಿಗಳು—	
೧ ಬಂಟರೂ ಕೃಷಿಯೂ	,,
೨ ಬೇಡಿಕ್ಕದ ಬೋರ್ಡು ಶಾಲೆ	,,
೩ ಮುಂಬಾಯಿ.	,,

ಸ್ವದೇಶಾಭಿಮಾನಿ.

ಶಕ ೧೮೩೮ ಪೌಷ ಬ. ೧೧ ಶುಕ್ರವಾರ.

ಸ್ವರಾಜ್ಯ ಅರ್ಥಾತ್ ಪ್ರಾತಿನಿಧಿಕ ರಾಜ್ಯಪದ್ಧತಿ.

ಹಬ್ಬ ಹೋದರೂ ಅದರ ಹಾಡು ಹಿಂದುಳಿಯುವಂತೆ ಇಲ್ಲವೆ ಭಾರತೀಯ ಯುದ್ಧ ಮುಗಿದರೂ ಭಾರತವು ಇನ್ನೂ ಇರುವಂತೆ ರಾಷ್ಟ್ರೀಯ ಸಭೆಯ ಮೊನ್ನೆಯ ಅಧಿವೇಶನವು ಆಗಿ ಹೋದರೂ ಅದರ ವೃತ್ತಾಂತವು ಇನ್ನೂ ಮುಗಿಯಲಿಲ್ಲ. ಹಿಂದುಸ್ಥಾನದೊಳಗಿನ ಪ್ರಮುಖ ದೇಶಿ ಪತ್ರಗಳಲ್ಲಿಯೂ ಇಂಗ್ಲಿಷ್ ಪತ್ರಿಕೆಗಳಲ್ಲಿಯೂ ಈಗ ಮೂರು ನಾಲ್ಕು ವಾರಗಳಿಂದ ಚರ್ಚೆಯು ನಡೆಯುತ್ತಕೊಂಡೇ ಇದೆ. ಇದು ಒಂದು ತರದ ಸಜೀವತ್ವದ ಲಕ್ಷಣವು. ಈ ಚರ್ಚೆಯಲ್ಲಿ ಬೇರೆ ಯಾವ ಸಂಗತಿಗಳಿಗಿಂತಲೂ ರಾಷ್ಟ್ರೀಯ ಸಭೆಯಲ್ಲಿ ಪಾಸಾದ ಸ್ವರಾಜ್ಯದ ಠರಾವು ಮತ್ತು ರಾಷ್ಟ್ರೀಯ ಸಭೆ ಹಾಗು ಮೊಸ್ಲೆಮ್ ಲೀಗ್ ಈ ಜೋಡು ಸಂಸ್ಥೆಗಳು ತಯಾರಿಸಿದ ಸ್ವರಾಜ್ಯದ ಯೋಜನೆ ಈ ಎರಡೆ ಸಂಗತಿಗಳ ಬಗ್ಗೆ ಸುಶಿಕ್ಷಿತರಲ್ಲಿ ತುಂಬಾ ಚರ್ಚೆ ನಡೆದಿದೆ. ಸುಶಿಕ್ಷಿತರ ಈ ಚರ್ಚೆಯಲ್ಲಿ ಸಾಧಾರಣವಾಗಿ ಎಲ್ಲ ಅರ್ಧ ಸುಶಿಕ್ಷಿತರೂ, ಅಶಿಕ್ಷಿತರೂ ಸೇರಿ "ಹಿಂದೀ ದೇಶಕ್ಕೆ ಸ್ವರಾಜ್ಯವು ಈಗ ಅಗತ್ಯವಾದುದು" ಈ ಮಾತನ್ನು ಪ್ರಧಾನವಾಗಿ ಉಚ್ಚರಿಸುತ್ತಿದ್ದಾರೆ. ಇದು ಸುಚಿಹ್ನವೇ ಹೌದು. ಆದರೆ ಸ್ವರಾಜ್ಯದ ಪ್ರತಿಧ್ವನಿಯನ್ನು ಮಾಡುವ ಪ್ರತಿ ಒಬ್ಬನಿಗೆ "ಸ್ವರಾಜ್ಯವೆಂದರೇನೆ"ಂದು ಕೇಳಿದರೆ ಅದಕ್ಕೆ ಸಮರ್ಪಕ ಅಥವಾ ಅಪೇಕ್ಷಣೀಯವಾದ ಉತ್ತರವನ್ನು ಅವನು ಕೊಡಬಲ್ಲನೆಂದು ಮಾತ್ರ ತಿಳಿಯಕೂಡದು. ಮತ್ತು ಹೀಗೆ ಪ್ರತಿ ಒಬ್ಬನಿಗೆ ಅದರ ಸ್ವರೂಪ ವಿವೇಚನೆಯು ತಿಳಿಯದಿರುವುದು ಒಂದು ದೊಡ್ಡ ಆಶ್ಚರ್ಯವೂ ಅಲ್ಲ. ಇಂಗ್ಲಿಷ್ ಪತ್ರಿಕೆಗಳನ್ನು ಓದುವ ಎಲ್ಲ ಮಹನೀಯರಿಗೆ "ಸ್ವರಾಜ್ಯ"ದ ನಿಜವಾದ ಸ್ವರೂಪವು ತಿಳಿದಿದೆಂದು ನೆನಸುವುದೂ ಶುದ್ಧ ಭ್ರಾಂತಿಯೆ! ಎಂದ ಮೇಲೆ ಬರೆ ಕನ್ನಡಿಗರಿಗೆ ಅದರ ವಿವರಣೆಯು ಅಗಮ್ಯವಾಗಿದ್ದಲ್ಲಿ ಅದು ಅಸ್ವಾಭಾವಿಕವಲ್ಲ. ಆದುದರಿಂದ, ಈ ಮೊದಲು ಈ ಪ್ರಶ್ನೆಯ ಕುರಿತು ನಾವು ಎಷ್ಟೋ ಸಾರಿ ಬರೆದಿದ್ದರೂ ಅದೇ ವಿಷಯವಾಗಿ ತಿರಿಗಿ ಒಮ್ಮೆ ಬರೆಯಬೇಕೆಂದು ಆಲೋಚಿಸಿದ್ದೇವೆ.

ನಾವು ಹಿಂದೀ ಸ್ವರಾಜ್ಯವನ್ನು ಕೇಳುವಾಗ ಸ್ವರಾಜ್ಯವೆಂದರೇನು? ಹಿಂದುಸ್ಥಾನದ ಪಟ್ಟದ ಮೇಲೆ ಸುರೇಂದ್ರನಾಥ ಬಾನರ್ಜಿ ಅಥವಾ ಬಾಲಗಂಗಾಧರ ತಿಲಕ ಇಲ್ಲವೆ ಮಝರುಲ್‌ಹಕ್ ಇವರನ್ನು ಕುಳ್ಳಿರಿಸಬೇಕೊ? ಅಥವಾ ಬರೋಡಾ, ಮೈಸೂರ, ನಿಜಾಮ, ಹೈದರಾಬಾದ ಮೊದಲಾದ ಸಂಸ್ಥಾನಾಧಿಪತಿಗಳಲ್ಲಾರಾದರೂ ಒಬ್ಬನನ್ನು ಹಿಂದುಸ್ಥಾನದ ಪಟ್ಟಗಟ್ಟಬೇಕೊ? ಇಲ್ಲವೆ ವಿಕ್ಟೋರಿಯಾ ಮಹಾರಾಜ್ಞಿಯವರು ಹಿಂದುಸ್ಥಾನದ ಚಕ್ರವರ್ತಿನಿಯವರಾಗಿದ್ದಂತೆ ಈಗ ಎನಿ ಬಿಝಾಂಟರನ್ನು ಹಿಂದುಸ್ಥಾನದ ಹೋಮರೂಲಿಗಾಗಿ ಹೋರಾಡುತ್ತಿದ್ದ ಕಾರಣ—ಚಕ್ರವರ್ತಿನಿಯಾಗಿ ಮಾಡಬೇಕೊ? ಏನು ಮಾಡಬೇಕು? ತಾತ್ಪರ್ಯ ಸ್ವರಾಜ್ಯವೆಂಬುದರ ಅರ್ಥವೇನು? ಈ ಪ್ರಶ್ನೆಯನ್ನು ಮೊದಲು ಚನ್ನಾಗಿ ತಿಳಿದುಕೊಳ್ಳಬೇಕು. ಈಗಿನ ಸ್ವರಾಜ್ಯದಲ್ಲಿ ಮೇಲೆ ಹೇಳಿದ ಯಾವ ಅನರ್ಥಕ್ಕೂ ಎಡೆಯಿಲ್ಲ. ಹಿಂದೀ ಜನರು ಕೇಳುವ ಸ್ವರಾಜ್ಯವು ಪ್ರಾತಿನಿಧಿಕ ರಾಜ್ಯ ಪದ್ಧತಿಯು. ಬೇರೆಯಾವುದಲ್ಲ. ಈ ಪ್ರಾತಿನಿಧಿಕ ರಾಜ್ಯ ಪದ್ಧತಿಯ ತತ್ವವು ಮೊದಲು ಹೇಗೆ [illegible] ಅಸ್ತಿತ್ವದಲ್ಲಿ ಬಂತು; ಅದರಿಂದ ಪ್ರಜಾಹಿತವು, ದೇಶಾಭಿವೃದ್ಧಿಯು ಮತ್ತು ದೇಶ ಸಂರಕ್ಷಣೆಯು ಆಗುತ್ತಿರುವುದರಿಂದ ಈಗ ಸುಧಾರಿಸಿದ ಎಲ್ಲ ರಾಷ್ಟ್ರಗಳಲ್ಲಿ ಈ ಪ್ರಾತಿನಿಧಿಕ ತತ್ವವೆ ಹೇಗೆ ಸರ್ವಮಾನ್ಯವಾಗಿದೆಂದು ಮುಂತಾದ ಐತಿಹಾಸಿಕ ಸಮಾಲೋಚನೆಯು ಬಹು ರಮಣೀಯವಾಗಿರುವುದು. ಆದುದರಿಂದ ಈ ಬಗ್ಗೆ ಹೆಚ್ಚು ವಿಸ್ತಾರ ಮಾಡದೆ ಕೆಳಗೆ ನಾಲ್ಕು ಮಾತುಗಳನ್ನು ಬರಿಯುತ್ತೇವೆ.

ವೇದಕಾಲದಲ್ಲಿ ರಾಜನೆಂಬುದೊಂದು ವಿಶಿಷ್ಟ ವ್ಯಕ್ತಿಯಿದ್ದರೂ ಅವನು ಜನರ ಸಮ್ಮತಿಗೆ ಪಾತ್ರನಾದವನಿರಬೇಕಿತ್ತು. ಆ ಅರಸನನ್ನು ಪ್ರಜೆಗಳು ಆರಿಸಿಕೊಡುತ್ತಿದ್ದರು. ಈ ತತ್ವವು ರಾಮಾಯಣದಲ್ಲಿ ಕೂಡ ಸ್ಪಷ್ಟವಾಗಿ ಕಂಡುಬರುತ್ತದೆ. ದಶರಥನು ರಾಮನನ್ನು ಪಟ್ಟಗಟ್ಟಲು ನಿಶ್ಚಯಿಸಬೇಕಾದರೆ ಮೊದಲು ಮಂತ್ರಿ ಮಂಡಲದ ಮತ್ತು ನಾಗರಿಕರ ಸಭೆಯನ್ನು ಸೇರಿಸಿ ಈ ಪ್ರಶ್ನೆಯನ್ನು ಆ ಸಭೆಯ ಮುಂದಿಟ್ಟು ಅದರ ಸಮ್ಮತಿಯಿಂದ ರಾಮನ ರಾಜ್ಯಾಭಿಷೇಕವನ್ನು ನಿಶ್ಚಯಿಸಿದ್ದಾನೆಂಬುದು ವಾಲ್ಮೀಕಿ ರಾಮಾಯಣದಿಂದ ತಿಳಿದು ಬರುತ್ತದೆ. ಪ್ರಾತಿನಿಧಿಕ ತತ್ವದ ಹಳೆಕಾಲದ ಈ ಅಸ್ಪಷ್ಟ ಪ್ರತಿಬಿಂಬವನ್ನು ನೋಡುವುದು ಅಷ್ಟೊಂದು ಶ್ರೇಯಸ್ಕರವಲ್ಲ. ಐತಿಹಾಸಿಕ ವಿವೇಚನೆಯಲ್ಲಿ ಅವನ್ನು ಸುಸ್ಪಷ್ಟಕಾಲದ ಸಂಗತಿಗಳ ಇರುವುದು ಒಳ್ಳೇದು. ಆದುದರಿಂದ ಪಾಶ್ಚಾತ್ಯ ದೇಶದೊಳಗಿನ ಪ್ರಾಚೀನ ರಾಷ್ಟ್ರಗಳಲ್ಲಿ ಈ ತತ್ವವು ಎಂದಿನಿಂದ ರೂಢವಾಯಿತೆಂಬುದನ್ನು ನೋಡೋಣ. ಪ್ರಾಚೀನ ಗ್ರೀಸ ದೇಶದಲ್ಲಿ City States ಎಂಬ ನಗರ ರಾಜ್ಯಗಳು ಇರುತ್ತಿದ್ದವು. ಈ ರಾಜ್ಯದಲ್ಲಿ ಪ್ರತಿ ಒಬ್ಬ ಪ್ರಾಯಸ್ಥನಿಗೆ ರಾಜ್ಯವ್ಯವಸ್ಥೆಯಲ್ಲಿ ಮತಕೊಡುವುದು ಹಕ್ಕಿತ್ತು. ಆದರೆ ರಾಜ್ಯದ ವಿಸ್ತಾರವು ಹೇಗೆ ಹೇಗೆ ಹೆಚ್ಚುತ್ತ ಹೋಗುವುದೊ ಹಾಗೆ ಹಾಗೆ ವ್ಯಕ್ತಿಶಃ ಮತಕೊಡುವ ಅಧಿಕಾರವನ್ನು ಉಪಯೋಗಿಸುವುದು ಅಸಾಧ್ಯವಾಗಿ ಪ್ರತಿನಿಧಿಗಳನ್ನು ಆರಿಸುವ ತತ್ವವು ಜಾರಿಯಲ್ಲಿ ಬರುವುದು. ಇದರಿಂದ ಪ್ರತಿನಿಧಿ ಸತ್ತಾತ್ಮಕ ರಾಜ್ಯಗಳು ಅಸ್ತಿತ್ವದಲ್ಲಿ ಬರುವವು. "ರಾಜ್ಯ ವ್ಯವಸ್ಥೆಯ ಪ್ರತಿ ಒಂದು ಸಂಗತಿಯಲ್ಲಿ ನಾನೆ ಹೋಗಿ ನನ್ನ ಮತವನ್ನು ಕೊಡುವುದು ನನಗೆ ಸಾಧ್ಯವಿಲ್ಲ, ಆದರೆ ಅಧಿಕಾರವು ನನ್ನ ಕೈಯಲ್ಲಿ ಇರಬೇಕಾದುದು. ಆದುದರಿಂದ ರಾಜ್ಯಕಾರಭಾರದ ಪ್ರಶ್ನೆಗಳ ಯೋಗ್ಯ ವಿಚಾರವನ್ನು ಮಾಡಿ, ನಾನು ಸ್ವತಃ ಹಾಜರಿದ್ದು ಮತಕೊಡುವಂತೆಯೆ ಇವನು ಮತ ಕೊಡುವನೆಂಬುದಾಗಿ ಯಾರ ವಿಷಯದಲ್ಲಿ ನನಗೆ ಭರವಸೆಯಿದೆಯೊ ಅಂಥವನಿಗೆ ನನ್ನ ಪ್ರತಿನಿಧಿಯಾಗಿ ಕಳುಹಿಸುವೆನು." ಹೀಗೆಂದು ಹೇಳುವ ಆವಶ್ಯಕತೆಯು ಯಾವಾಗ ಹುಟ್ಟಿಕೊಂಡಿತೊ ಆಗ "ಪ್ರತಿನಿಧಿ ಮಂಡಳ"ವು ನಿರ್ಮಾಣವಾಯಿತೆನ್ನಬಹುದು.

ಇನ್ನೊಂದು ಸಂಗತಿಯು. ಮನೆಯ ಕಾರಭಾರವೇನು, ರಾಜ್ಯದ ಕಾರಭಾರವೇನು, ಹಣವಿಲ್ಲದೆ ಯಾವುದು ಮುಂದುವರಿಯದು. ಅರಸನಿಗೆ, ಕಾರಭಾರವನ್ನು ನಡಿಸಬೇಕಾದರೆ ಪ್ರಜೆಗಳಿಂದ ಕಂದಾಯ ರೂಪವಾಗಿ ದ್ರವ್ಯನಿಧಿಯನ್ನು ಪಡಕೊಳ್ಳಬೇಕಾಗುವುದು. ತಮ್ಮ ರಾಜ್ಯದ ಶಾಸನ ಕ್ರಮವು ಸುವ್ಯವಸ್ಥಿತ ಮತ್ತು ನಿಪುಲವಾಗಿ ನಡೆಯಬೇಕಾದರೆ ಆ ಶಾಸನ ಕ್ರಮಕ್ಕೆ ಆವಶ್ಯವಾದ ದ್ರವ್ಯನಿಧಿಯನ್ನು ತಾವು ಸಂಗ್ರಹಿಸಿ ಕೊಡಬೇಕೆಂದು ಪ್ರಜೆಗಳು ತಿಳಿದೇ ಇರುವರು. ಆದರೆ ಇದೇ ಸಂದರ್ಭದಲ್ಲಿ ತಾವು ಸಂಗ್ರಹಿಸಿ ಕೊಡುವ ದ್ರವ್ಯನಿಧಿಯಿಂದ ನಡೆಯುವ ರಾಜ್ಯ ಪದ್ಧತಿಯು ತಮಗೆ ಅನುಕೂಲ ಮತ್ತು ಹಿತಾವಹವಾಗಿರಬೇಕೆಂದು ಪ್ರಜೆಗಳು ಬಯಸುವುದು ತೀರಾ ಸ್ವಾಭಾವಿಕವಾಗಿಯೇ ಇರುವುದು. ಈ ವಿಚಾರ ಸರಣಿಗನುಸಾರವಾಗಿಯೆ ಈಗಿನ ಪಾಶ್ಚಾತ್ಯ ರಾಜನೀತಿಯಲ್ಲಿ "No taxation with-out representation" ಎಂದರೆ "ಇಲ್ಲವೊ ಪ್ರತಿನಿಧಿ, ಇಲ್ಲ ನಿಧಿ" ಎಂಬ ಸೂತ್ರಕ್ಕೆ ಪ್ರಾಮಾಣ್ಯ ಬಂದಿದೆ. ರಾಜ್ಯ ಕಾರಭಾರಕ್ಕೆ ಬೇಕಾದ ಕರಭಾರವನ್ನು ನಾವು ಕೊಡುವೆವು; ಆದರೆ ಅದನ್ನು ನಮ್ಮ ಮತವಿಲ್ಲದೆ ಉಪಯೋಗಿಸ ಕೂಡದು, ನಮ್ಮ ಪ್ರತಿನಿಧಿಗಳ ಏಕಮತದಿಂದ ಇಲ್ಲವೆ ಬಹುಮತದಿಂದ ರಾಜ್ಯ ಕಾರಭಾರವು ನಡೆಯಬೇಕು. ಇದೇ ಪ್ರಜೆಗಳ ಆಕಾಂಕ್ಷೆಯು. ಈ ಆಕಾಂಕ್ಷೆಗೆ ಎಲ್ಲಿ ಸಂಪೂರ್ಣವಾಗಿ ಎಡೆಯಿರುವುದೋ ಅಲ್ಲಿ ಪ್ರಾತಿನಿಧಿಕ ರಾಜ್ಯಶಾಸನವು—ಸ್ವರಾಜ್ಯವು—ಅಬಾಧಿತವಾಗಿ ನಡೆದಿದೆನ್ನಬಹುದು. ಸಾರಾಂಶ, "ನಿಧಿಗೆ ಪ್ರತಿನಿಧಿ" ಎಂಬೀ ರಾಜ್ಯನೀತಿಯ ಸೂತ್ರವು ಪ್ರಚಾರಕ್ಕೆ ಬಂದಂದಿನಿಂದ ರಾಜನೀತಿಯ ಶಾಸ್ತ್ರಕ್ಕೆ ಒಂದು ಹೊಸ ಜೀವ ನವು ಬಂತು. ಆದರೆ ಮಧ್ಯದ ಕೆಲವು ಸಮಯದ ವರೆಗೆ ಈ ಉಜ್ವಲ ತತ್ವವು ಪ್ರಬಲ ರಾಷ್ಟ್ರಗಳಿಂದಲೂ, ಧಾರ್ಮಿಕ ಅತ್ಯಾಚಾರಗಳಿಂದಲೂ ಮೂಲೆಗೊತ್ತಲ್ಪಟ್ಟಿತು. ಕೆಂಬಹುದಾ ಕೈಯಲ್ಪಟ್ಟಿತು. ಪುನಃ ಫ್ರಾನ್ಸಿನ ಸುಪ್ರಸಿದ್ಧ ರಾಜ್ಯಕ್ರಾಂತಿಯಾದಂದಿನಿಂದ ಇದೇ ತತ್ವವು ಜಗತ್ತಿನೊಳಗಿನ ಎಲ್ಲ ಸುಧಾರಿಸಿದ ರಾಷ್ಟ್ರಗಳಲ್ಲಿ ಸರ್ವಮಾನ್ಯವಾಗಿ ನಡೆದಿದೆ. ಇರಲಿ, ಪ್ರಾತಿನಿಧಿಕ ರಾಜ್ಯಪದ್ಧತಿಯ [illegible] ಕ್ಷಿಸಿದರೆ ಈಗ ಹಿಂದೀ ಮುಖಂಡರು ಕೇಳುತ್ತಿರುವ ಸ್ವರಾಜ್ಯವು ಯಾವುದು, ಎಂತಹದು ಮೊದಲಾದ ಪ್ರಶ್ನೆಗಳಿಗೆ ತಿರಿಗಿ ಉತ್ತರ ಕೊಡಬೇಕಾದ ಆವಶ್ಯಕತೆ ತೋರುವುದಿಲ್ಲ, ಇರಲಿ.

ಪ್ರಾತಿನಿಧಿಕ ರಾಜ್ಯಪದ್ಧತಿಯಲ್ಲಿ ತಿಲಕರು ಅಥವಾ ಬೆನರ್ಜಿಯವರು ಅರಸರಾಗಿ ಬ್ರಾಹ್ಮಣೇತರರನ್ನು ಅವರು ದಣಿಸುವರೆಂದು ಯಾರೂ ಭಯಪಡಬೇಕಾದ ಅಗತ್ಯವಿಲ್ಲ. ಬ್ರಾಹ್ಮಣರ ಮತ್ತು ಬ್ರಾಹ್ಮಣೇತರರ ಹಾಗೂ ಬೇರೆ ಹಿಂದಿಗಳ ಪ್ರತಿನಿಧಿಗಳು ಆ ಮಂಡಲಗಳಲ್ಲಿದ್ದು ಎಲ್ಲರ ಹಿತಕ್ಕೆ ಬೇಕಾದ ಕಾರಭಾರಗಳನ್ನು ಬ್ರಿಟಿಷ್ ಸರಕಾರದ ಕೈಕೆಳಗೆ ನಡೆಯಿಸಿಕೊಂಡು ಹೋಗುವುದೆ ನಮ್ಮ ಹಿಂದೀ ಸ್ವರಾಜ್ಯವು. ಈ ತತ್ವವನ್ನು ಅನುಸರಿಸಿ—ಮೊದಲು ೧೯ ಕೌನ್ಸಿಲರುಗಳು ತಯಾರಿಸಿದಂತೆಯೆ ಸ್ವರಾಜ್ಯದ ಒಂದು ಹೊಸ ಯೋಜನೆಯನ್ನು ಹಿಂದು ಮುಸಲ್ಮಾನರು ಕೂಡಿ ಜೋಡುಸಭೆಗಳಲ್ಲಿ ತಯಾರಿಸಿರುವರು. ಅದರ ಮುಖ್ಯ ಸ್ವರೂಪವನ್ನು ವಾಚಕರ ಅವಗಾಹನೆಗಾಗಿ ಬರುವಸಾರಿ ತೋರಿಸೇವು.

ಸ್ಫುಟ ವಿಚಾರಗಳು.

೧. ಈ ತಿಂಗಳ ಪತ್ರನೆಯ ತಾರೀಕಿನ ದಿವಸ ಬೆಂಗಳೂರ ಪಟ್ಟಣದಲ್ಲಿ "Indian Science Congress" ಎಂದರೆ ಭಾರತೀಯ ಶಾಸ್ತ್ರ ಪರಿಷತ್ತಿನ ನಾಲ್ಕನೆಯ ಅಧಿವೇಶನವು ಜರಗಿತು. ಈ ಪರಿಷತ್ತಿಗೆ ಹಿಂದುಸ್ಥಾನದೊಳಗಿನ ಸಾಮಾನ್ಯವಾಗಿ ಎಲ್ಲ ಭಾಗಗಳಿಂದ ಶಾಸ್ತ್ರಜ್ಞರು (scientific men) ಬಂದಿದ್ದರು. ಪರಿಷತ್ತನ್ನು ಪ್ರಾರಂಭಿಸುವಾಗ ಮೈಸೂರ ಮಹಾರಾಜರು ಸುವಿಚಾರ ಪರಿಪ್ಲುತವಾದ ಒಂದು ಚಿಕ್ಕ ಭಾಷಣವನ್ನು ಕೊಟ್ಟರು. ಮೊದಲು ಅವರು ತಮ್ಮ ಭಾಷಣದಲ್ಲಿ ಟಾಟಾ ಇವರ ಸಂಶೋಧಕ ಸಂಸ್ಥೆಯು ಇಲ್ಲಿ ನೆಲೆಗೊಂಡಿರುವುದರಿಂದಲೂ, ಇದಕ್ಕೆ ಸಮೀಪವಾಗಿ ಕೋಲಾರದ ಚಿನ್ನದ ಖಣಿಗಳೂ, ಶಿಂವನ ಸಮುದ್ರದ ವಿದ್ಯುಚ್ಛಕ್ತಿ ಪ್ರಯೋಗವೂ, ಕನ್ನಂಬಾಡಿಯ ಜಲಾಶಯವೂ ಇದ್ದು ಇವುಗಳಲ್ಲಿ ವ್ಯಾವಹಾರಿಕ ರೀತಿಯಿಂದ ಆಧುನಿಕ ಶಾಸ್ತ್ರಗಳ ಪ್ರಯೋಗವು ನಡೆಯುತ್ತಿದ್ದುದರಿಂದಲೂ ಈ ಕೂತ್ತಿ ಸಂಘ ಪರಿಷತ್ತುಗಳಿಗೆ ಈ ಬೆಂಗಳೂರು ಹೇಗೆ ಯೋಗ್ಯವಾದ ಸ್ಥಾನವಾಗಿದೆಂಬುದನ್ನು ವಿವರಿಸಿ ಮುಂದೆ ಶಾಸ್ತ್ರೀಯ ಶೋಧಗಳ ಮಹತ್ವವನ್ನು ವರ್ಣಿಸಿದರು. "ಮಹಾ ಯುದ್ಧವು ಸುರುವಾದಂದಿನಿಂದ ಆಧುನಿಕ ಶಾಸ್ತ್ರಗಳ ಮತ್ತು ವ್ಯಾಪಾರದ ಅಭಿವೃದ್ಧಿಗಾಗಿಯೂ, ಆರ್ಥಿಕ ಕಾರ್ಯಕ್ಷಮತೆಗಾಗಿಯೂ ಮಾಡಲ್ಪಡುವ ಪ್ರಯತ್ನಗಳು ಹಿಂದುಸ್ಥಾನದ ಸದ್ಯಃ ಸ್ಥಿತಿಯ ಮೇಲೆ ಪರಿಣಮಿಸದೆ ಇರವು. ಇಂಡಿಯಾ ಸರಕಾರದವರು ಈಚೆಗೆ ನೇಮಿಸಿರುವ ಔದ್ಯೋಗಿಕ ಕಮಿಶನವಾದರೂ ನಿಸ್ಸಂದೇಹವಾಗಿ ಒಂದು ಸಹಾಯಕವೇ ಸರಿ. ಆದರೆ ಹಿಂದುಸ್ಥಾನದೊಳಗಿನ ಶಾಸ್ತ್ರೀಯ ಶಿಕ್ಷಣವು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದ್ದು ಜನ ಸಂಖ್ಯೆಯ ಮಾನದಿಂದ ಔದ್ಯೋಗಿಕ ಕಾರ್ಯಗಳು ಬಹು ಉದಾಸೀನ ಸ್ಥಿತಿಗೆ ಪಾತ್ರವಾಗಿವೆ. ಹಿಂದುಸ್ಥಾನದ ಜನ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಿರುವಾಗ ಬರೆ ದೊರೆಗಳು ಜೀನಸುಗಳ ಉತ್ಪತ್ತಿಯಿಂದಲೆ ಅವರ ನಿರ್ವಾಹವಾಗುವಂತಿಲ್ಲ.........." ಈ ಪ್ರಕಾರ ಮಹಾರಾಜರು ಅಭಿಪ್ರಾಯಪಟ್ಟು ಇಂಗ್ಲಂಡಿನಲ್ಲಿರುವಂತೆ ಇಲ್ಲಿಯೂ ಒಂದು ಎಡ್ವೈಜರಿ ಬೋರ್ಡನ್ನು ಸ್ಥಾಪಿಸಬಹುದೆಂಬುದಾಗಿ ಹೇಳಿ ರಸಾಯನಶಾಸ್ತ್ರದ ವಿಸ್ತಾರವು ಬರೆ ತಾತ್ವಿಕವಾಗಿದ್ದರೆ ಸಾಲದು, ಅದು ಕಾರ್ಯರೂಪಗೊಳ್ಳುವಂತಿದ್ದು ದೇಶದ ಸಾಂಪತ್ತಿಕ ಮೊದಲಾದ ಸುಸ್ಥಿತಿಗೆ ಕಾರಣವಾಗುವಂತಿರಬೇಕೆಂಬುದಾಗಿ ಅಪ್ಪಣೆ ಕೊಡಿಸಿದರು. ಮೈಸೂರ ಮಹಾರಾಜರ ಈ ಸದುಪದೇಶವು ನಿಜವಾಗಿ ಮನನೀಯವಾಗಿದೆ. ಸ್ವತಃ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಈ ಆಧುನಿಕ ಶಾಸ್ತ್ರಗಳ ಸಾಹಾಯ್ಯದಿಂದ ತಮ್ಮ ಜನತೆಯ ಅನುಕೂಲತೆಯನ್ನೂ, ಹಿತವನ್ನೂ ಸಾಧಿಸಿದ್ದಾರೆಂಬುದಕ್ಕೆ ಅನೇಕ ದೃಷ್ಟಾಂತಗಳಿರುವಾಗ ಅಂತಹರು ಈ ತರದ ಉಪದೇಶಗಳನ್ನು ಕೊಡಲಿಕ್ಕೆ ಸರ್ವಥಾ ಯೋಗ್ಯರಾಗಿದ್ದಾರೆ. ಆದರೆ ಆ ಉಪದೇಶವನ್ನು ಸಫಲಗೊಳಿಸುವುದು ಇಂಥ ಪರಿಷತ್ತುಗಳ ಮತ್ತು ಈ ವಿಷಯದಲ್ಲಿ ಸಹಾಯ್ಯ ಮಾಡುವುದು ನಮ್ಮ ಸರಕಾರದ ಕರ್ತವ್ಯವಾಗಿದೆ; ಆ ಕರ್ತವ್ಯವು ಯಶಸ್ವಿಯಾದರೆ ಸರಿ.

೨. ಶಾಸ್ತ್ರೀಯ ಅಥವಾ ಔದ್ಯೋಗಿಕ ಶಿಕ್ಷಣದ ಅಭಿವೃದ್ಧಿಗೆ ಸರಕಾರವು ಸಾಹಾಯ್ಯ ಮಾಡಬೇಕೆಂಬುದು ನಿಜವು. ಆದರೆ ಈ ಸುಪ್ರಸಂಗವು ಬಹಳ ಸಮೀಪದಲ್ಲಿಯೆ ಇದೆಂದು ಹೇಳಲು ಮಾತ್ರ ಸಾಧ್ಯವಿಲ್ಲ. ಕಲಕತ್ತಾ ಯುನಿವರ್ಸಿಟಿಯ ಪದವಿದಾನ ಸಮಾರಂಭದಲ್ಲಿ ವೈಸ ಚಾನ್ಸಲರುಗಳಾದ ಮಾನ್ಯ ಸರ್ವಾಧಿಕಾರಿಗಳು "ಇಂಥ ಸುಪ್ರಸಂಗವು ಯಾಕೆ ದೂರ ದೂರದಲ್ಲಿ ಹೋಗಬೇಕು?" ಎಂಬುದಾಗಿಯೆ ಪ್ರಶ್ನೆ ಮಾಡಿದ್ದಾರೆ. ಕಲಕತ್ತಾ ವಿಶ್ವವಿದ್ಯಾಲಯದ ಸಮಾರಂಭದ ಚಾನ್ಸಲರುಗಳಾದ ಲೊರ್ಡ್ ಚೆಮ್ಸಫೋರ್ಡ ದೊರೆಗಳ ಕೈಯಿಂದ ನೆರವೇರಿತು. [illegible] ಕಲಕತ್ತಾ ಯುನಿವರ್ಸಿಟಿಯನ್ನು [illegible]

ಯುನಿವರ್ಸಿಟಿಯಂತೆ ಸುಧಾರಿಸುವ ವಿಷಯದಲ್ಲಿ ಸರಕಾರವು ಒಂದು ಕಮಿಷನ್ ನೇಮಿಸುವುದುಂಟೆಂದು ಹೇಳಿ, ರೀತಿಯಂತೆ ತರುಣ ವಿದ್ಯಾರ್ಥಿಗಳಿಗೆ ತಮ್ಮ ಶೀಲವನ್ನು ಸುಧಾರಿಸಿಕೊಳ್ಳಲಿಕ್ಕೂ ಉತ್ತಮ ನಾಗರಿಕರಾಗಲಿಕ್ಕೂ ಉಪದೇಶಿಸಿದರು. ಪರೀಕ್ಷೆಯಾದ ಕೂಡಲೆ ವಿದ್ಯಾರ್ಥಿಗಳು ವಕೀಲುತನದ ಅಥವಾ 'ಕಾರಕೂನ' ಕೆಲಸದ ಕಡೆಗೆಯೆ ಓಡುವರು, ಇದಕ್ಕೆ ಮುಖ್ಯ ಕಾರಣವು—ಸ್ವಾವಲಂಬನದ ಮಾರ್ಗವನ್ನು ಅನುಸರಿಸಲು ಅನೇಕ ತೊಂದರೆಗಳಿರುವವು; ಕೈಗಾರಿಕೆಗಳು ಇರಬೇಕಾದಷ್ಟು ಅನುಕೂಲವಿಲ್ಲ—ಇದೇಯಾಗಿದೆ. ಕೈಗಾರಿಕೆಯ ವಿಷಯದಲ್ಲಿ ತರುಣ ವಿದ್ಯಾರ್ಥಿಗಳಿಗೆ ಆದಷ್ಟು ಅನುಕೂಲತೆಗಳನ್ನು ನಾನು ಒದಗಿಸಿಕೊಟ್ಟೇನೆಂದು ವೈಸರಾಯರು ಆಶ್ವಾಸನೆಯನ್ನು ಕೊಟ್ಟರು. ವೈಸ ಚಾನ್ಸಲರುಗಳಾದರೂ ವಿಲಾಯತಿಯೊಳಗಿನ ಹಿಂದೀ ವಿದ್ಯಾರ್ಥಿಗಳ ಕಮಿಟಿಗೆ ಅಲ್ಲಿಯ ಶಿಕ್ಷಣವನ್ನು ಹಿಂದೀ ವಿದ್ಯಾರ್ಥಿಗಳ ಸೆರಗಿನಲ್ಲಿ ಬೀಳುವಂತೆ ಮಾಡುವುದು ಅಸಾಧ್ಯವಾಯಿತೆಂದು ಮೊದಲು ಪ್ರಸ್ತಾಪಿಸಿ ಇಲ್ಲಿಯ ಎಂದರೆ ಹಿಂದುಸ್ಥಾನದೊಳಗೆಯೆ ಕೈಗಾರಿಕೆಯ ಹೊಸ ಕಾರಖಾನೆಗಳನ್ನು ಹೊರಡಿಸದೆ ಇಲ್ಲಿಯವರಿಗೆ ಆ ಶಿಕ್ಷಣವು ಸಿಗಲಾರದು, ಅಂತಹ ಸಂಸ್ಥೆಗಳನ್ನು ಸ್ಥಾಪಿಸಲು ಕಾಲಹರಣವನ್ನು ಮಾಡುವುದು ಯಾಕೆ?" ಎಂದು ಮೇಲೆ ಹೇಳಿದಂತೆ ಕೇಳಿರುವರು.

೩. ಹಿಂದೀ ಹೋಮರೂಲಿನ ಪ್ರಶ್ನೆಯು ರಾಜಕಾರಣದ ರಂಗಸ್ಥಲದಲ್ಲಿ ಬಂದಂದಿನಿಂದ ಅನೇಕ ದೇಖಾವೆಗಳು ಗೋಚರಕ್ಕೆ ಬರಹತ್ತಿವೆ. ಇವುಗಳಲ್ಲಿ ಮೊದಲನೆಯದು ಸರಕಾರದ ವಕ್ರದೃಷ್ಟಿಯಾಗಿತ್ತು. ಆದರೆ ಈ ದೇಖಾವೆಯು ಬಹಳ ಸಮಯ ನಟಿಸಲಿಲ್ಲ. ಸ್ವರಾಜ್ಯದ ಧ್ಯೇಯವಾಗಲಿ ತತ್ ಪ್ರಾಪ್ತ್ಯರ್ಥ ಅವಲಂಬಿಸಲ್ಪಡುವ ಉಪಾಯಗಳಾಗಲಿ ಕೊನ್‌ಸ್ಟಿಟ್ಯೂಶನಲ್ ಎಂದರೆ ಸನದಶೀರಾಗಿ ಇರುವುದು ಸರಕಾರಕ್ಕೆ ಕಂಡು ಬಂದುದರಿಂದ ಅವರ ದೃಷ್ಟಿಯು ಬೇಗನೆ ನಿರ್ಮಲವಾಯಿತು; ಆದರೂ ಕೆಲ ಕೆಲವು ಅಧಿಕಾರಿಗಳ ಮನಃಶುದ್ಧಿಯು ಆಗಿರಲಿಲ್ಲ. ವೈಸರಾಯರಂಥ ಮಹಾ ಅಧಿಕಾರಿಗಳ ಮತ್ತು ಹೈಕೋರ್ಟಿನಂಥ ವರಿಷ್ಟ ನ್ಯಾಯಾಸನದ ತೀವ್ರ ಅಂಜನದಿಂದ ಈ ಎರಡನೆಯ ದೇಖಾವೆಯು ಕೊಂಚ ಅನುಕೂಲ ಸ್ಥಿತಿಗೆ ಬರುವಷ್ಟರೊಳಗೆ ಎಂಗ್ಲೋ ಇಂಡಿಯನ್ನರ ಔದರಶೂಲವು ಅತ್ಯಾವಸ್ಥೆಗೆ ಬಂದು ಬಿಟ್ಟಿತು. ಹಿಂದು, ಮುಸಲಮಾನ, ಬಿರುಸ ಸಪ್ಪೆ ಮುಂತಾದ ಹಿಂದೀ ರಾಷ್ಟ್ರದ ಸ್ವಾಭಾವಿಕ ಮತ್ತು ಕೃತ್ರಿಮ ತಂತಗಳು ತಂತಮ್ಮೊಳಗಿನ ಭೇದಗಳನ್ನು ಮರೆತು ಬಿಟ್ಟು, ಮುರಿದುಕೊಂಡು, ಒಟ್ಟಿಗೆ ಸೇರಿ, ಎಲ್ಲರು ಐಕಮತ್ಯದಿಂದ ಹಿಂದೀ ಹೋಮರೂಲಿನ ತುತೂರಿಯನ್ನು ಊದಿ ನಡಿಸುವ ಈ ವಿಜಯೋತ್ಸವದ ಸಂಭ್ರಮದಲ್ಲಿ ಉದರ ವ್ಯಾಧಿಯಿಂದ ಹೊರಳಾಡುತ್ತಿರುವ ಎಂಗ್ಲೋ ಇಂಡಿಯನ್ನರ ಅವಸ್ವರವು ಕುಗ್ಗಿಯೆ ಹೋಯಿತು. ಆದರೂ ಹಿಂದೀ ಸ್ವರಾಜ್ಯದ ಚಂದ್ರಮಂಡಲದ ಮೇಲೆ ಈಗ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಎಂಬದೊಂದು ಮೋಡದ ತೆರೆಯು ಹೊಸದಾಗಿ ಬಂದಿರುವುದು. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ತಾವು ಭಿನ್ನ ಭಿನ್ನರೆಂದು ತಿಳಿದುಕೊಳ್ಳುವುದು ಆಗತ್ಯವಿಲ್ಲ. ಇವರು ವಿರಾಟ್ ಪುರುಷನ ಒಂದೇ ಶರೀರದಿಂದ ಹುಟ್ಟಿದವರೆಂಬುದಾಗಿ ಸ್ವತಃ ವೇದವೇ ಹೇಳುತ್ತಿರುವಾಗ ಇವರು ಮಧ್ಯದಲ್ಲಿ ಗೋಡೆಯನ್ನು ಹಾಕುವುದು ಯಾಕೆ? ಬ್ರಾಹ್ಮಣರು ಬ್ರಾಹ್ಮಣೇತರರನ್ನು ಬಿಟ್ಟು ಬಿಡುವರು, ಮೆಟ್ಟುವರು ಎಂಬುದಾಗಿ ಈಗ ಯಾರೂ ತಿಳಿದುಕೊಳ್ಳಬೇಕಾದುದಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯವಾಗಿ ಮಾಡಬೇಕೆಂದು ಮೊದಲಿನಿಂದ ಹಟ ಹಿಡಿಯುವವರು ಬ್ರಾಹ್ಮಣರೊ ಬೇರೆಯೊ? ನಿರಕ್ಷರತ್ವದ ಪ್ರಮಾಣವು ಬ್ರಾಹ್ಮಣರಲ್ಲಿ ಹೆಚ್ಚಿರುವುದೊ ಬ್ರಾಹ್ಮಣೇತರಲ್ಲಿಯೊ? ಈ ಸುಧಾರಣೆಯು ಯಾರಿಗಾಗಿ ಬೇಕಾಗಿದೆಂತಾಯಿತು? ಆದರೆ ಅದನ್ನು ಸೂಚಿಸಿದವರು ಮೊದಲು ಬ್ರಾಹ್ಮಣರೆ ಅಲ್ಲದೆ ಬೇರೆಯವರಲ್ಲ. ಹೀಗಿರುವಾಗ ಪಿ. ತ್ಯಾಗರಾಜ ಚೆಟ್ಟಿಯಂಥ ಸುಪ್ರಬುದ್ಧರು—ಎರಡು ವರುಷಗಳ ಹಿಂದೆ ಮದ್ರಾಸಿನಲ್ಲಿ ಔದ್ಯೋಗಿಕ ಪರಿಷತ್ತು ನೆರೆದಾಗ "[illegible] ಸ್ವರಾಜ್ಯ"ವನ್ನು ಕೇಳಿದಂಥ ಸುಪ್ರಬುದ್ಧರ ನಿಶಾನಿಯಲ್ಲಿ ಈ ಭೇದವು ಹುಟ್ಟುವುದು ಬಹು ಶೋಚನೀಯವಾಗಿದೆ. ಆದರೆ ಮಾನ್ಯ ಪಿಳ್ಳೆಯಂಥವರ ಉಪದೇಶದಿಂದಲೂ ಮತ್ತು ಬೆಂಗಳೂರ-ಒಕ್ಕಲಿಗರ ಸಂಘದ ಜನೆರಲ್ ಸೇಕ್ರೆಟರಿಗಳಂಥವರ ಅಂಜನೆಯಿಂದಲೂ ಈ ನವೀನ ದೇಖಾವೆಯು ಬೇಗನೆ ಪರದೆಯೊಳಗೆ ಹೋದೀತೆಂಬ ಭರವಸೆ ಇದೆ. ಬ್ರಾಹ್ಮಣೇತರರು ಅನುಯಾಯಿಗಳಾಗಿ ಬರುವಂತೆ ಬ್ರಾಹ್ಮಣರು ಸಹ ತಮ್ಮ ಏಕದೇಶಿ ಮತ್ತು ಸಂಕುಚಿತವಾದ ದೃಷ್ಟಿಯನ್ನು ಬಿಟ್ಟುಬಿಡುವುದು ಅಗತ್ಯವು. ಈಗ ಗೋಖಲೆಯವರ ನಿಶಾನಿಯಾಗಲಿ ತ್ಯಾಗರಾಜರ ಚೆಟ್ಟಿಯರ ನಿಶಾನಿಯಾಗಲಿ ನಮಗೆ ಬೇಡ. ನಮಗೆ ಹಿಂದೀ ಸ್ವರಾಜ್ಯದ ನಿಶಾನಿಯೆ ಅವಶ್ಯವು.

೪. ನಮ್ಮ ಮದ್ರಾಸ ಸಂಸ್ಥಾನದೊಳಗಿನ ಫೋರೆಸ್ಟ ಪಂಚಾಯತದ ಕೆಲವು ವಿವರಗಳು ಈಚೆಗೆ ಪ್ರಸಿದ್ಧವಾಗಿವೆ. ಅವುಗಳನ್ನು ನಿರೀಕ್ಷಿಸಿದ್ದಲ್ಲಿ ೧೯೧೬ನೆಯ ಜೂನ ವರೆಗಿನ ಒಂದು ವರ್ಷದಲ್ಲಿ ನಮ್ಮ ಸಂಸ್ಥಾನದೊಳಗೆ [illegible] ಫೋರೆಸ್ಟ ಪಂಚಾಯತ [illegible] ಸಂಸ್ಥೆಗಳು [illegible] ತೃಪ್ತಿಕರ ಕೆಲಸ ಮಾಡಿವೆಂದು ಗೊತ್ತಾಗುತ್ತದೆ. ಈ ಪಂಚಾಯತುಗಳ ಕೈಯಲ್ಲಿ ಕಾಡುಗುಡ್ಡಗಳ ಮತ್ತು ಜಮೀನಿನ ವಿಷಯವಾಗಿ ಹಲವು ತರದ ಕೆಲಸಗಳು ಒಪ್ಪಿಸಿರುತ್ತವೆ. ಬೆಳೆಯು ಇಲ್ಲವೆ ಬೇರೆ ಉಪಯುಕ್ತವಾದ ಹುಲ್ಲು ಮುಂತಾದ ವನಸ್ಪತಿಯ ಬೆಳವಣಿಗೆ ಅಪಾಯಕರವಾದ ಮುಳ್ಳಿನ ಗಿಡಗಳನ್ನು ತೆಗೆಸಿ ಹಾಕಿ ಅಲ್ಲಿ ಮೇಲಿನಂತಹ ಸಸ್ಯಾದಿಗಳನ್ನು ಸಾಗುವಳಿ ಮಾಡುವುದೂ, ಮರಗಳನ್ನೂ, ಮೇವನ್ನೂ ವೃದ್ಧಿಪಡಿಸುವುದೂ, ಕಾಡಿನ ಸಂರಕ್ಷಣೆ, ಕಾಡುಸೊಪ್ಪಿನಿಂದ ಗೊಬ್ಬರದ ವಿಲೆವಾರಿ ಮುಂತಾದ ಎಷ್ಟೊ ಸಂಗತಿಗಳೂ ಸುಧಾರಣೆಗಳೂ ಈ ಪಂಚಾಯತಗಳ ಪರಿಮುಖವಾಗ ನಡೆಯತಕ್ಕವು. ಈ ಕೆಲಸಗಳು ಇಂಥವೆ ಎಂದು ಕಟ್ಟಿದ್ದಿಲ್ಲ. ಅಲ್ಲಲ್ಲಿಯ ಸ್ಥಾನಿಕ ಆವಶ್ಯಕತೆ, ಕೊರತೆ ಮತ್ತು ಪುರೋವೃದ್ಧಿ ಇವುಗಳ ಮೇಲೆ ಆದರಿಸಿಕೊಂಡು ಈ ಸಂಸ್ಥೆಗಳ ಕೆಲಸವು ನಿರ್ಣಯಿಸಬೇಕಾದುದು. ಇಂಥ ಸಂಸ್ಥೆಗಳು ಈ ಸಂಸ್ಥಾನದ ಬೇರೆ ಭಾಗಗಳಲ್ಲಿದ್ದರೂ ನಮ್ಮ ಜಿಲ್ಲೆಯಲ್ಲಿ ಇಷ್ಟರವರೆಗೆ ಬೇಕಾದ ಎಲ್ಲ ಕಡೆಗಳಲ್ಲಿಯೂ ಇಲ್ಲ. ಆ ವಿಷಯದಲ್ಲಿ ಜನರು ಸರಕಾರಕ್ಕೆ ಮನವಿಮಾಡಿಕೊಂಡಲ್ಲಿ ಇಂಥಸಂಸ್ಥೆಗಳನ್ನು ಇಲ್ಲಿಯೂ ಸರಕಾರವು ಸ್ಥಾಪಿಸೀತೆಂದು ತೋರುತ್ತದೆ. ಈಗ ಕೆಲವು ಕಡೆಗಳಲ್ಲಿ ಈ ಫೋರೆಸ್ಟ ಪಂಚಾಯತ ಸಂಘಗಳಿಂದ ವಿಶೇಷ ಹಿತವಾಗಲಿಲ್ಲೆಂದು ಕೆಲವು ಕಲೆಕ್ಟರು ತಮ್ಮ ರಿಪೋರ್ಟಿನಲ್ಲಿ [illegible]ಗುಟ್ಟುತ್ತಾರೆ. ಆದರೆ ಅಷ್ಟರಿಂದಲೆ ಇಂತಹ ಸಂಸ್ಥೆಗಳ ಅನುಪಯುಕ್ತತೆಯು ಸಿದ್ಧವಾಗುವುದಿಲ್ಲ. ಆದುದರಿಂದ ಬೇರೆ ಎಷ್ಟೊ ಜಿಲ್ಲೆಗಳಲ್ಲಿದ್ದಂತೆ ನಮ್ಮ ಜಿಲ್ಲೆಯಲ್ಲಿಯೂ ಫೋರೆಸ್ಟ ಪಂಚಾಯತಗಳನ್ನು ಮತ್ತಷ್ಟು ಹೆಚ್ಚಾಗಿ ಸ್ಥಾಪಿಸಬಹುದಾಗಿ ನಮ್ಮ ಸೂಚನೆಯಿದೆ.

ಸ್ಥಳಿಕ — ಮಂಗಳೂರು.

ಜಾತ್ರೆ ಇಯನಗಳ ಕಾಲ ಕಿರಿಕಿರಿ ತಿರುಗಣೆಯಾಟಗಳ ಪದ್ಧತಿಯು ನಮ್ಮ ಪ್ರಾಂತ್ಯದಲ್ಲಿ ಹೆಚ್ಚಾಗಿದೆ. ಇಂಥಾ ಕಿರಿಕಿರಿಯಾಟಗಳಿಂದ ಹುಡುಗರಿಗೆ ಕೆಟ್ಟನ ಕೇಡು ಸಂಭವಿಸೀತೆಂದು ಹೇಳಕೂಡದು. ಪರಂತು, ರಾತ್ರಿಕಾಲವೂ ಈ ತಿರುಗಣೆಯಾಟವನ್ನು ನಡಿಸಿದರೆ ವಿಧವಿಧದ ಅವಗಡಗಳು ಸಂಭವಿಸುತ್ತವೆ ಎಂಬುದು ಈಚೀಚೆಗೆ ನಮಗೆ ತಿಳಿದು ಬಂದದೆ. ದೃಷ್ಟಾಂತಕ್ಕಾಗಿ ಮೊನ್ನೆ ಆದಿತ್ಯವಾರ ಕದ್ರಿ ಜಾತ್ರೆಯ ರಾತ್ರಿ ಈ ಕಿರಿಕಿರಿಯಾಟವಾಡುತ್ತಿರುವಾಗ ತೊಟ್ಟಿಲಲ್ಲಿ ಕುಳಿತಿದ್ದ ಒಬ್ಬ ಮೊಗೇರವನ ತಲೆಗೆ ಕಟ್ಟಿದ್ದ ಉದ್ದವಾದ ರುಮಾಲಿನ ಒಂದು ತುದಿಯು ಈ ತಿರುಗಣೆಗೆ ಸಿಕ್ಕಿ ಸದರಿ ಮೊಗೇರವನ ಕುತ್ತಿಗೆಯೆ ಬಿಗಿದು ಹೋಗಿ ಶ್ವಾಸ ಕಟ್ಟಿ ಅವನು ಸಾಯುವ ಗಂಡಾಂತರದಲ್ಲಿದ್ದನು. ಪೋಲೀಸಿನವರು ಕೂಡಲೇ ಈ ಆಟವನ್ನು ನಿಲ್ಲಿಸಿ ಮೋಹಂಡ ಸ್ಥಿತಿಯಲ್ಲಿದ್ದ ಈ ಮೊಗೇರವನನ್ನು ಆಸ್ಪತ್ರೆಗೆ ವೈದರು. ಈಗ ಅವನು ಆಸ್ಪತ್ರೆಯಲ್ಲಿ ಶೈತೋಪಚಾರ ಹೊಂದುತ್ತಿದ್ದಾನೆ.

ಮೆಸರ್ಸ್ ಸುಜೀರ ನಾಗಪ್ಪನಾಯಕ ಮತ್ತು ಕೆ. ಅಪ್ಪಯ್ಯ ಶ್ಯಾನುಭಾಗರ ಜವಳಿ ಅಂಗಡಿಯ ಬೀಗ ಮುರಿದು ವಸ್ತ್ರಗಳನ್ನು ಕಳವು ಮಾಡಿ ಶಿಕ್ಷೆ ಹೊಂದಿದ ಅಪರಾಧಿಗಳು ಅಪೀಲು ಮಾಡಿಕೊಂಡದ್ದರಿಂದ ಈ ಪೈಕಿ ಇಬ್ಬರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ. ಜಾಮೀನಿನ ಮೇಲೆ ಬಿಡಲ್ಪಟ್ಟಿದ್ದವರ ಪೈಕಿ ಮೂಸೆ ಬ್ಯಾರಿ ಎಂಬವನು ತಾ. ೧೪ನೇ ರಾತ್ರಿ ಅತನ ಮನೆಯಲ್ಲಿ ಮಲಗಿರುವಾಗ ಕಾದ್ರಿ ಮತ್ತು ಸೀದ್ಯಬ್ಬ ಎಂಬ ಇಬ್ಬರು ಅವನಿಗೆ ಚೆನ್ನಾಗಿ ಹೊಡೆದು ಗಾಯಪಡಿಸಿದ್ದರಿಂದ ಸದರಿ ಮೂಸೆ ಬ್ಯಾರಿಯು ಈಗ ಆಸ್ಪತ್ರೆಯಲ್ಲಿ ನೋವಂಡ ಸ್ಥಿತಿಯಲ್ಲಿರುವನೆಂತ ಕೇಳುತ್ತೇವೆ.

ಕುದ್ರೋಳಿ ಹಂಚು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಪೂವಪ್ಪ ಎಂಬ ಹುಡುಗನ ಕೈಯು ಅಕಸ್ಮತ್ತಾಗಿ ಒಂದು ಯಂತ್ರದೊಳಗೆ ಬಿದ್ದು ತುಂಡಾಗಿ ಹೋದ್ದರಿಂದ ಆಸ್ಪತ್ರೆಯಲ್ಲಿ ಸದರಿ ಪೂವಪ್ಪನ ಕೈಯನ್ನು ಕತ್ತರಿಸಿ ತೆಗೆದಿರುವರೆಂತ ತಿಳಿಯುತ್ತೇವೆ.

ಮಂಗಳೂರು ಟೌನ್ ಪೋಲೀಸ್ ಸ್ಟೇಶನ್ ಸಬ್ ಇನ್ಸ್‌ಪೆಕ್ಟರಾಗಿರುವ ಮೆ| ಚೆಮ್ನಾಡರವರು ಪುತ್ತೂರು ಸರ್ಕಲಿನ ಆಕ್ಟಿಂಗ್ ಸರ್ಕಲ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಜಿಲ್ಲಾ ಕಲೆಕ್ಟರ ದೊರೆಗಳವರು ಜನವರಿ ತಾ. ೨೦ ಮಂಗಳೂರು—ಮುಲ್ಕಿ; ತಾ. ೨೧-೨೨ ಮುಲ್ಕಿ ತಾ. ೨೪ ಬೆಳ್ಮಣ್ಣು ತಾ. ೨೫-೨೭ ಬೆಳ್ಮಣ್ಣು, ತಾ. ೨೮-೨೯ ಮುಲ್ಕಿ, ತಾ. ೩೦ ಮೂಡಬಿದ್ರೆ, ತಾ. ೩೧, ಮೂಡಬಿದ್ರೆ, ಫೆಬ್ರವರಿ ತಾ. ೧ ಕಾರ್ಕಳ, ತಾ. ೨-೩ ಕಾರ್ಕಳ; ತಾ. ೪ ಮಾರ್ಣೆ, ತಾ. ೫-೬ ಮಾರ್ಣೆ, ತಾ. ೭-೮ ಹೆಬ್ರಿ ತಾ. ೯ ಕಾರ್ಕಳ, ತಾ. ೧೦-೧೩ ಕಾರ್ಕಳ, ತಾ. ೧೪ ಮೂಡಬಿದ್ರೆ, ತಾ. ೧೫-೧೮ ಮೂಡಬಿದ್ರೆ ತಾ. ೨೦ ಗುರುಪುರ. ಈ ರೀತಿ ಸರ್ಕೀಟು ಬೆಳಸಿ ತಾ. ೨೧ನೇ ಬೆಳಿಗ್ಗೆ ಮಂಗಳೂರಿಗೆ ಹಿಂತಿರುಗುವರು.

ಮದ್ರಾಸ್ ಆಸ್ಪತ್ರೆಹಣದ ಫಂಡಿಗೆ ಕಳೆದ ದಶಂಬರ ತಿಂಗಳಲ್ಲಿ ರಾ| ರಾವ್ ಬಹದ್ದೂರ್ ಎನ್. ಸುಬ್ಬರಾವ್ ರೂ. ೫; ರಾ| ಕೆ. ಪಿ. ರಾಮರಾವ್ ರೂ. ೩; ರಾ| ಎ. ಶ್ರೀನಿವಾಸಶೆಟ್ಟಿ ರೂ. [illegible] ಮೊ| ಎಮ್. ನಾರಾಯಣ ರೂ. ೫; ರಾ| ಆರ್. ರಾಮರಾವ್ ರೂ. ೧; ರಾ| ಎಲ್. ರಾಮರಾವ್ ರೂ. ೧; ರಾ| ಗೋಳ್ಗರಕೇರಿ ಕೃಷ್ಣರಾವ್ ರೂ. ೧—ರಾ| ಕಾರ್ನಾಡ ಸದಾಶಿವರಾವ್ ರೂ. ೧; ರಾ| ಎಸ್. ರಘುನಾಥಯ್ಯ ರೂ. ೧; ರಾ| ಎಸ್. ಜಿ. ಸುವರ್ಣ ರೂ. ೧; ಮಂತಿಗೆ ಕೊಟ್ಟಿರುವರು.

ಮುಲ್ಕಿ ಪ್ರಾಂತ್ಯದಲ್ಲಿ ಹಿಂದರೆ ಕಳವುಮಾಡಿ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟ ಪ್ರಖ್ಯಾತ ಕೆ. ಡಿ. ಮುಂಡಪ್ಪ ಕೋಟ್ಯಾರಿಗೆ ಸೆಶನ್ಸ್ ಜಡ್ಜರು ೪ ವರ್ಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಗಣಪತಿ ಸೆಕೆಂಡರಿ ಶಾಲೆ ಮಂಗಳೂರು—ವಿದ್ಯಾರ್ಥಿಗಳು ಈ ಶಾಲೆಗೆ ಬರುವ ಸಮಯವನ್ನು ಇದೇ ಬರುವ ಫೆಬ್ರವರಿ ತಿಂಗಳ ತಾ. ೧ರಿಂದ ಶಾಲಾಧಿಕಾರಿಗಳು ಬದಲಾಯಿಸಿರುವರು. ಶಾಲೆಯು ಪ್ರಾಥಕಾಲ ಘಂಟೆ ೭-೩೦ಕ್ಕೆ ಪ್ರಾರಂಭವಾಗಿ ೧೦ಕ್ಕೆ ಮುಗಿಯುವದು. ಮಧ್ಯಾಹ್ನದಲ್ಲಿ ಗಂಟೆ ೩ಕ್ಕೆ ಪ್ರಾರಂಭವಾಗಿ ೫ಕ್ಕೆ ಮುಗಿಯುವದು. ಈ ಕ್ರಮವು ಶಾಲೆಯ ಶಿಖಿಕಾಲದ ರಜೆಯು ಪ್ರಾರಂಭವಾಗುವ ತನಕ ಜಾರಿಯಲ್ಲಿರುವದಾಗಿ ತಿಳಿಯುತ್ತೇವೆ. ಆರೋಗ್ಯ ಶಾಸ್ತ್ರಜ್ಞರ ಅಭಿಪ್ರಾಯದ ಮೇರೆಗೆ ಶಾಲಾ ಮಕ್ಕಳ ಹಿತಾರ್ಥವಾಗಿ ಈ ಕ್ರಮವು ಏರ್ಪಡಿಸೋಣಾಗಿರುವದೆಂದೂ ಮಕ್ಕಳ ಹೆತ್ತವರು ಈ ಕ್ರಮದ ಜಾರಿಯನ್ನು ನಡಿಸುವದರಲ್ಲಿ ಶಾಲಾಧಿಕಾರಿಗಳಿಗೆ ತಕ್ಕ ಸಹಕಾರವನ್ನು ಕೊಡಬೇಕೆಂತಲೂ, ಶಾಲಾಧಿಕಾರಿಗಳು ವಿಜ್ಞಾಪಿಸಿಕೊಂಡಿರುತ್ತಾರೆ. ಪ್ರಾತಃಕಾಲ ಸುಮಾರು ೧೦ ಗಂಟೆಯಿಂದ ಮಧ್ಯಾಹ್ನ ೩ ಗಂಟೆಯ ತನಕದ ಬಿಸಿಲನ್ನು ತಾಳಿಕೊಂಡು ಮಾಡುವ ಎಂಥಾ ಕೆಲಸಗಳನ್ನಾದರೂ ತ್ಯಜಿಸುವದು ಉತ್ತಮವೆಂತ ಹಿಂದೂ ಶಾಸ್ತ್ರ ವಚನವಿರುವದು. ಏಕೆಂದರೆ ಈ ಕಾಲದ ಬಿಸಿಲು ಆಯುಷ್ಯ ಕಾಲವನ್ನು ಕ್ಷಯಿಸುವುದು. ಅಲ್ಲದೆ ಇಂಥಾ ಬಿಸಿಲು ಸಮಯದಲ್ಲಿ ಮಕ್ಕಳು ಊಟ ಮಾಡಿದ ಒಡನೆಯೇ ಒಂದು ಕ್ಷಣವಾದರೂ ತಡೆಯದೆ ಶಾಲೆಗೆ ಓಡುವಂಥಾದ್ದು ಮಕ್ಕಳ ಜೀರ್ಣಶಕ್ತಿಗೂ ಒಳ್ಳೇದಲ್ಲ. ೧೦ ಗಂಟೆ ಸಮಯವು ಪಾಶ್ಚಾತ್ಯರಿಗೆ ಅನುಕೂಲವಾದದ್ದು. ಅಲ್ಲಿ ಸೂರ್ಯೋದಯವು ಇಲ್ಲಿಯಂತೆ ಗಂಟೆ ೬ಕ್ಕೆ ಆಗುವದಿಲ್ಲ. ಅದ್ದರಿಂದ ಅವರು ತಮ್ಮ ಕೆಲಸಗಳನ್ನು ೧೦ ಗಂಟೆಯಿಂದ ಪ್ರಾರಂಭಿಸುವರು. ಅವರ ದಿನ ನಿತ್ಯದ ಅಧ್ಯಾಸಗಳು ಸಹ ಅವರ ಹುಟ್ಟು-ದೇಶದ ಸೂರ್ಯೋದಯಕ್ಕೆ ಅನುಸಾರವಾಗಿರುವವು ಬಿಸಿಲು ತಾಪವು ಅಲ್ಲಿ ೧೦ ಗಂಟೆ ಸಮಯಕ್ಕೆ ಇಲ್ಲಿಯಂತೆ ಇರದು. ಪಾಶ್ಚಾತ್ಯರ ದೆಸೆಯಿಂದ ೧೦ ಗಂಟೆಯ ರೂಢಿಯು ನಮ್ಮಲ್ಲಿ ಸಹ ಹಿಡಿಯಿತು. ಈ ರೂಢಿಯಿಂದ ಪ್ರಾತಃಕಾಲ ಓದುವ ಅಭ್ಯಾಸವು ಈ ಪ್ರಾಂತ್ಯಗಳಲ್ಲಿ ಕಡಿಮೆಯಾಗುತ್ತ ಬಂದಿದೆ. ಶಾಲಾ ಅಭ್ಯಾಸಕ್ಕೆ ಬೆಳಿಗ್ಗಿನ ಸಮಯವೇ ಬಹಳ ಉಪಯುಕ್ತವಾಗಿರುವುದರಿಂದ ಗಣಪತಿ ಸೆಕೆಂಡರಿ ಶಾಲೆಯವರು ಮಾತ್ರವಲ್ಲ ಇತರ ಖಾಸಗಿ ಶಾಲೆಗಳು ಸಹ ಈ ಕ್ರಮವನ್ನು ಜ್ಯಾರಿಗೆ ತಂದರೆ ಸರಕಾರಿ ಶಾಲೆಗಳಲ್ಲಿ ಇದೇ ಕ್ರಮವು ಕ್ರಮೇಣ ಜ್ಯಾರಿಗೆ ಬರುವುದು. ಮತ್ತು ಇಂಥಾ ಕ್ರಮದಿಂದ ಹೆತ್ತವರ ಗೃಹಕೃತ್ಯಕ್ಕೆ ಸಹ ಉಪಕಾರವಾಗುವದು.

ಬಂಟ್ವಾಳದಲ್ಲಿ ಡಾಕ್ಟರರಾಗಿದ್ದ ರಾ| ಅಣ್ಣಪ್ಪಕಾಮತರವರನ್ನು ಕಾರ್ಕಳಕ್ಕೆ ವರ್ಗಾಯಿಸ ಕೂಡದೆಂತ ಜಿಲ್ಲಾ ಸರ್ಜನರಿಗೂ ಕಲೆಕ್ಟರ ದೊರೆಗಳವರಿಗೂ ಅಲ್ಲಿಯ ಜನರು ಮನವಿಮಾಡಿಕೊಂಡ ವಿಷಯವನ್ನು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೆವಷ್ಟೆ. ಬಂಟ್ವಾಳದವರೇ ಈ ಡಾಕ್ಟರರನ್ನು ಅಲ್ಲಿ ಇನ್ನುಮುಂದಕ್ಕೆ ಇರಿಸುವದು ಅಪೇಕ್ಷಣೀಯವಲ್ಲವೆಂತ ಮತ್ತೊಂದು ಅರ್ಜಿಯನ್ನು ಅಧಿಕಾರಿಗಳಿಗೆ ಬರಕೊಂಡಿದ್ದರು. ಒಂದು ಜಿಲ್ಲೆಯಲ್ಲಿಯೇ ಒಂದು ಊರಿನಿಂದ ಇನ್ನೊಂದು ಊರಿಗೆ ಆಗುವ ವರ್ಗಗಳ ಸಂದರ್ಭಗಳಲ್ಲಿ ಇಷ್ಟೆಲ್ಲ ಗುಲ್ಲು ಅಗತ್ಯವಾದುದ್ದಲ್ಲ. ಪ್ರವೀಣರಾದ ಡಾಕ್ಟರರ ಹಸ್ತಗುಣವು ಕಾರ್ಕಳದವರಿಗೂ ಸಿಕ್ಕಲೆಂತ ಕಲೆಕ್ಟರ ದೊರೆಗಳವರು ಜಿಲ್ಲಾ ಸರ್ಜನರವರ ಹುಕುಮನ್ನು ಡಾಕ್ಟರ ಅಣ್ಣಪ್ಪಕಾಮತರವರು ಅನುಸರಿಸಿ ನಡಿಯುವದು ವಿಹಿತವೆಂತ ಸೂಚಿಸಿರುವರಾಗಿ ತಿಳಿಯುತ್ತೇವೆ.

ವೆ| ಎಸ್. ಎಲ್. ಮಥಾಯಸರವರು ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಪ್ಲೇಗು ಮರಣವಿದ್ದಿಲ್ಲ.

ಸ್ವೀಕಾರ:—ಉಡುಪಿ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದ ರಾ. ಪಾವಂಜೆ ಗುರುರಾಯರು ಕಳುಹಿಸಿದ ಪಿಂಗಲ ಸಂವತ್ಸರದ ಪಂಚಾಂಗವು. ಇದರ ಬೆಲೆ ಆಣೆ ೨. ಮಂಗಳೂರು ಬಾಲನ್ ಮಾರ್ಕೆಟಿನ ರಾ. ಸಿ. ರಘುನಾಥ ಕಾಮತರು ಕಳುಹಿಸಿದ 1917ನೇ ಇಸವಿಯ ಮಹಾರಾಜ ಮತ್ತು ಮಹಾರಾಣಿಯವರ ನಕ್ಷೆ ಇರುವ ಕ್ಯಾಲೆಂಡರ್. ಇದನ್ನು ಅಪೇಕ್ಷಿಸುವವರು ಒಂದಾಣೆ ಸ್ಟಾಂಪನ್ನು ಅವರಿಗೆ ಕಳುಹಿಸುವದು.

ಏಲಂ! ಏಲಂ!!

ಅಪೂರ್ವ ಸಂದರ್ಭ!

ಬಂದು ನೋಡಿರಿ! ಬಂದು ಕೊಳ್ಳಿರಿ!!

ರಥೋತ್ಸವದ ಬಗ್ಗೆ ಉಡುಪುಗಳನ್ನು ಮಾಡಿಸಬೇಕೆಂದಿರುವವರಿಗೆ ಇದಕ್ಕಿಂತ ಒಳ್ಳೇ ಸಂದರ್ಭವಿರದು. ಇದೇ ತಿಂಗಳ ತಾ. ೨೧ರಿಂದ ೨೮ರ ವರೆಗೆ ವಿಧ ವಿಧದ ಸೀರೆಗಳು ಕೋಟಿಂಗ್, ಫೇನ್ಸಿ, ಸಿಲ್ಕ್ ವಗೈರೆ ವಸ್ತ್ರಗಳು ಏಲಂ ಮಾಡೋಣಾಗುವವು.

ಶರ್ತ—ನಗದು.

ನರಸಿಂಹ ಲಕ್ಷ್ಮಣಸಾಲ,
ರಥಬೀದಿ, ಮಂಗಳೂರು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿರುವ ಬಹುಮಾನಪಟ್ಟ ಸರ್ ಶಿವಸ್ವಾಮಿ ಅಯ್ಯರರ ಕೆಲಸದ ಅವಧಿಯು ಇದೇ ಬರುವ ಫೆಬ್ರವರಿ ತಿಂಗಳಾಂತ್ಯಕ್ಕೆ ಮುಗಿಯುವದರಿಂದ ಬಹುಮಾನಪಟ್ಟ ದಿವಾನ್ ಬಹದ್ದೂರ್ ಪಿ. ರಾಜಗೋಪಾಲ ಚಾರ್ಯರರವರು ಮದ್ರಾಸ್ ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ. ಸರ್ ಶಿವಸ್ವಾಮಿ ಅಯ್ಯರರ ಬದಲಿಗೆ ಬಂಗಾಳದಿಂದ ಸರ್ ಶಮ್ ಶ್‌ಲ್ ಹುದ್ದಾರವರು ನೇಮಿಸಲ್ಪಡುವರೆಂಬ ಸುದ್ದಿ ಇದ್ದುದರಿಂದ ಮದ್ರಾಸ್ ಸಂಸ್ಥಾನದಲ್ಲೆಲ್ಲಾ ಈ ವಿಷಯ ವಿಶೇಷ ಚಳವಳ ಉಂಟಾಗಿತ್ತು. ಮದ್ರಾಸಿನ ಆಯಾ ಪತ್ರಿಕೆಗಳು ಈ ವರ್ತಮಾನದ ಮೇಲೆ ಟೀಕೆಗಳನ್ನು ಮಾಡಿ, ಮದ್ರಾಸ್ ಸಂಸ್ಥಾನದಲ್ಲಿ ಈ ನೇಮಕಕ್ಕೆ ಯೋಗ್ಯರಾದ ಗೃಹಸ್ಥರಿರುತ್ತಾ ಬಂಗಾಳದಿಂದ ಒಬ್ಬರನ್ನು ತರುವದು ಸರಿಯಲ್ಲವೆಂಬದಾಗಿಯೂ ಮದ್ರಾಸಿನವರಲ್ಲಿ ಮ॥ ರಾ॥ ರಾಜಗೋಪಾಲ ಚಾರ್ಯರ್ ಇಲ್ಲವೆ ಮೆ॥ ಜಸ್ಟಿಸ್ ಅಬ್ದುಲ್ಲ ರಹಿಮ್‌ರವರಲ್ಲಿ ಒಬ್ಬರನ್ನು ಈ ಕೆಲಸಕ್ಕೆ ನೇಮಿಸುವದು ಹಿತವೆಂದೂ ಸೂಚಿಸಿದ್ದವು. ಈಗತಾನೇ ಮ॥ ರಾ॥ ರಾಜಗೋಪಾಲಚಾರ್ಯರನ್ನು ಈ ಪದವಿಗೆ ನೇಮಿಸಿದ್ದರಿಂದ ಮದ್ರಾಸ್ ಸಂಸ್ಥಾನದಲ್ಲೆಲ್ಲಾ ಈ ನೇಮಕದಿಂದ ಸಂತೃಪ್ತಿ ಉಂಟಾಗಿದೆ. ಬಹುಮಾನಪಟ್ಟ ರಾ॥ ದಿವಾನ್ ಬಹದ್ದೂರ್ ರಾಜಗೋಪಾಲ ಚಾರ್ಯರರವರು ವಿಶೇಷ ಅನುಭವವುಳ್ಳವರು. ೩೦ ವರ್ಷಗಳಿಂದ ಸರಕಾರದ ಆಯಾ ಹುದ್ದೆಗಳನ್ನು ನೋಡಿ ಸರಕಾರದ ಮತ್ತು ಪ್ರಜಾಜನರ ಪ್ರೀತಿಮನ್ನಣೆಯನ್ನು ಪಡೆದಿದ್ದರು. ಕಲೆಕ್ಟರಿ, ಡಿಸ್ಟ್ರಿಕ್ಟ್ ಜಡ್ಜ ಕೆಲಸಗಳನ್ನು ನೋಡಿದ್ದರು. ಎರಡು ದೇಶೀಯ ರಾಜ್ಯಗಳಲ್ಲಿ ದಿವಾನರಾಗಿದ್ದರು. ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರಾಗಿದ್ದರು. ಹೋಮ್ ಡಿಪಾರ್ಟಮೆಂಟಿನಲ್ಲಿ ಸರಕಾರದ ಸೆಕ್ರೆಟರಿಯಾಗಿದ್ದರು. ಹೀಗೆ ಇವರು ೩೦ ವರ್ಷಗಳ ಕಾಲ ಮಾಡಿದ ಈ ಎಲ್ಲಾ ಕೆಲಸಗಳಲ್ಲಿ ಅತಿ ನೈಪುಣ್ಯತೆಯನ್ನು ಪಡೆದು ಪ್ರಜಾಜನಸಾಮಾನ್ಯರ ಸ್ಥಿತಿಗತಿಗಳನ್ನು ಚನ್ನಾಗಿ ತಿಳಿದವರಾಗಿದ್ದಾರೆ. ಇಂಗ್ಲಾಂಡ್, ಸ್ಕೋಟ್‌ಲಾಂಡ್ ಮೊದಲಾದ ಸೀಮೆಗಳನ್ನೂ ಸಂದರ್ಶಿಸಿ ಮುಖ್ಯವಾಗಿ ಸ್ಕೂಲುಗಳ ಶಿಕ್ಷಣ ಕ್ರಮದ ಮಾಹಿತಿಯನ್ನೂ ಪಡೆದು ಬಂದಿರುತ್ತಾರೆ. ಹಿಂದೀ ರಾಜಕೀಯೋದ್ಯೋಗ ಸಭೆಯ ಮುಂದೆ ಸಾಕ್ಷ್ಯ ಹೇಳಿ ಹಿಂದೀಗಳಿಗೆ ರಾಜಕೀಯೋದ್ಯೋಗಗಳಲ್ಲಿರುವ ಹಕ್ಕು ಬಾಧ್ಯತೆಗಳನ್ನು ಈ ಕಮಿಷನಿನವರಿಗೆ ಚೆನ್ನಾಗಿ ತಿಳಿಯ ಹೇಳಿದ್ದಾರೆ. ಈ ಕಮಿಷನಿನವರು ಮಾನ್ಯ ಚಾರ್ಯರವರ ಸಾಕ್ಷವನ್ನು ಕೇಳಿ ಇವರು ವಿಶೇಷ ಕಾರ್ಯಧುರಂಧರರು ಮತ್ತು ಗೂಢ ಪರಿಜ್ಞಾನವುಳ್ಳವರು ಎಂಬ ಅಭಿಪ್ರಾಯಪಟ್ಟಿರುತ್ತಾರೆ.

ಪತ್ರವ್ಯವಹಾರ.

ಬಂಟರೂ, ಕೃಷಿಯೂ.

ಅಯ್ಯಾ ಸ್ವಜಾತಿ ಬಂಧುಗಳೇ,

ಕಳೆದ ಜನವರಿ ತಾ. ೧೮ರಲ್ಲಿ ಕಾಸರಗೋಡಿನಲ್ಲಿ ನೆರೆದ ಬಂಟರ ಯಾನೆ ನಾಡವರ ಮಹಾ ಸಭೆಯ ಮುಂದಿಡಬೇಕೆಂದಿದ್ದ ಈ ಸಣ್ಣ ಪತ್ರವನ್ನು ಸ್ವದೇಶಾಭಿಮಾನಿ ಪತ್ರಕರ್ತರ ಸಹಾಯದಿಂದ ನಿಮ್ಮೆಲ್ಲರ ಪರಿಯಾಲೋಚನೆ ಬಗ್ಗೆ ಬರೆಯುತ್ತಿರುವೆನು.

ಕೃಷಿಯು ಮನುಷ್ಯ ವರ್ಗದ ಅನಾದಿ ಕಸಬಾಗಿರುವದು. ಈ ಕಸಬಿನ ತರುವಾಯ ಬೇರೆ ಎಲ್ಲಾ ಕಸಬುಗಳು ಮನುಷ್ಯ ವರ್ಗದಲ್ಲಿ ಮೊಳೆತಿರಬೇಕು. ನಮ್ಮ ಹಿಂದೂಸ್ಥಾನದ ಜನಸಂಖ್ಯೆಯಲ್ಲಿ ನೂರರಲ್ಲಿ ಎಂಭತ್ತು ಜನರಿಗಿಂತಲೂ ಹೆಚ್ಚಿನವರು ತಮ್ಮ ಜೀವನವನ್ನು ಕೃಷಿಯ ಮೇಲೂ ಇಲ್ಲವೆ ಅದಕ್ಕೆ ಸಂಬಂಧಪಟ್ಟ ಬೇರೆ ಕಸಬುಗಳ ಮೇಲೂ ನಡಿಸುತ್ತಿರುವರು. ಕೃಷಿಯು ನಮ್ಮ ಜಾತಿಯವರ ಹುಟ್ಟು ಕಸಬಾಗಿರುವದು, ಅಂದರೆ ನೂರರಲ್ಲಿ ೯೯ ಜನರು ಕೃಷಿಯ ಮೇಲೆಯೆ ಆದರಿಸಬೇಕಾಗುವದು. ನಮ್ಮ ಜಾತಿಯವರ ಐಶ್ವರ್ಯವೂ, ನಮ್ಮ ಘನತೆಯೂ, ನಮ್ಮ ಸ್ವಾತಂತ್ರ್ಯವೂ, ನಮ್ಮ ಸುಖಜೀವನವೂ, ನಮ್ಮ ಕಾಯಪುಷ್ಟಿಯೂ ಕೃಷಿಯಿಂದಲೇ ಹೊರಪಟ್ಟಿರುವವು. ಐಶ್ವರ್ಯವೆಂದರೇನು, ಘನತೆಯೆಂದರೇನು, ಇದು ಕೃಷಿಯಿಂದ ಹ್ಯಾಗೆ ಹೊರಪಡುವದೆಂಬುವದು ನಿಮಗೆ ಗೊತ್ತಿದ್ದ ಸಂಗತಿಯು. ಕೃಷಿಯಿಂದ ಸ್ವಾತಂತ್ರ್ಯವು ಬರುವದೆಂದರೇನು? ಕೃಷಿಯಿಂದ ಜೀವನೋಪಾಯ ಮಾಡಬಹುದೆಂಬ ಒಂದು ತರದ ಧೈರ್ಯವು ಮನಸ್ಸಿನಲ್ಲಿ ತಲೆದೋರುವದು. ನಾವು ಮಾತಾಡುವಾಗ ಹೇಳುವದೇನಂದರೆ, ನನ್ನಿಂದ ಏನೂ ಆಗದಿದ್ದರೂ ಎರಡು ಮುಡಿ ಗದ್ದೆ ಸಾಗುವಳಿ ಮಾಡಿ ಜೀವನ ತೆಗೆದೇನು ಎಂಬ ಧೈರ್ಯದ ಮಾತನ್ನು ಆಡುವದು. ನಮ್ಮವರು ಬೇರೆಯವರಲ್ಲಿ ಕೆಲಸಕ್ಕಿದ್ದು ಜೀವನೋಪಾಯ ಮಾಡುವದು ಕಡಿಮೆ. ನಮ್ಮವರಲ್ಲಿ ಬೇಡಿ ತಿನ್ನುವವರು ಬಹು ಕಡಿಮೆ. ಈ ನನ್ನ ಮಾತನ್ನು ಕೇಳುತ್ತಲೆ ನಿಮ್ಮ ಮನಸ್ಸಿನಲ್ಲಿ “ನಮ್ಮ ಜಾತಿಯಲ್ಲಿ ಬೇಡಿ ತಿನ್ನುವವರು ಕಡಿಮೆಯಾದರೂ ತಿರುಗಾಡಿ ತಿನ್ನುವವರು ಇತ್ತಿತ್ತ ಹೆಚ್ಚಾಗುತ್ತಿದ್ದಾರೆಂಬ,” ಅಭಿಪ್ರಾಯವು ಹುಟ್ಟಬಹುದು. ಇದು ಬಹು ಬೇಕಾದ ಸಂಗತಿಯು, ಇದಕ್ಕೆ ಅನೇಕ ಕಾರಣಗಳಿರುವವು. ಅವುಗಳನ್ನು ಪರಿಶೋಧಿಸಿ ಜಾತಿಯಲ್ಲಿ ಹುಟ್ಟುವ ಇಂಥಾ ಕೆಡುಕುಗಳನ್ನು ನಿವಾರಿಸಲಿಕ್ಕೆ ಪ್ರಯತ್ನಿಸುವದು ನಮ್ಮ ಸಂಘದ ಉದ್ದೇಶವಾಗಿರುವದು. ಆ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪಿಸುವದಿಲ್ಲ. ಒಬ್ಬ ಮನುಷ್ಯನು ಬೇಡುವದೆಂದರೆ, ಅವನು ತನ್ನ ಎಲ್ಲಾ ಸ್ವಾತಂತ್ರ್ಯವನ್ನು ಕಳಕೊಂಡನೆಂಬ ಅರ್ಥ. ಬೇಡುವದೆಂದರೆ ನಮ್ಮ ಜಾತಿಯವರಿಗೆ ಬಹು ಅವಮಾನದ ಕೆಲಸ. ನಮ್ಮ ಜಾತಿಯವರೊಬ್ಬನು ಬೇಡುವದಾದರೆ ಅವನ ಕುತ್ತಿಗೆಗೆ ಒಂದು ಸಣ್ಣ ಮರದ ನೇಗಲನ್ನು ಹಾಕಿ ಬೇಡಬೇಕೆಂಬ ಹಿರಿಯರ ಮಾತಿದೆ. ಈ ಕ್ರಮದಲ್ಲಿ ಒಂದು ವಿಶೇಷವಾದ ಸೂಚನೆ ಇದೆ. “ಕೈಯಿಂದ ನೇಗಲನ್ನು ಹಿಡಿದು ಭೂಮಿಯನ್ನು ಉತ್ತು ಉದರಪೋಷಣೆಯನ್ನು ಮಾಡುವ ಸ್ವಾಧೀನತೆಯನ್ನು ಕಳಕೊಂಡಿರುವೆನು. ಹಣೆಯ ಬೆವರಿನಿಂದಲೂ ಕೈಯ್ಯ ಕಷ್ಟದಿಂದಲೂ ನಾನು ಜೀವಿಸಲಾರೆ, ಇದರ ಕಾರಣದಿಂದ ಉಂಟಾದ ನಾಚಿಕೆಯೂ, ದುಃಖವೂ ನೇಗಲು ಭೂಮಿಯನ್ನು ಯಾವ ತರದಲ್ಲಿ ಸೀಳುವದೋ ಅದೇ ತರದಲ್ಲಿ ನನ್ನ ಎದೆಯನ್ನು ಸೀಳುವದು” ಎಂಬ ಸೂಚನೆಯಾಗಿದೆ.

ಕೃಷಿಯು ಮನುಷ್ಯನಲ್ಲಿ ಸುಗುಣಗಳನ್ನು ಹ್ಯಾಗೆ ಅಂಕುರಿಸುವದೆಂಬುವದನ್ನು ನೀವು ಕೇಳಬಹುದು. ಕೃಷಿಯಲ್ಲಿ ನಿರತನಾದ ಮನುಷ್ಯನಿಗೆ ಮತ್ತು ದುರ್ಗುಣಗಳಿಗೆ ಆಸ್ಪದವಿಲ್ಲ. ಒಂದು ವೇಳೆಗೆ ದುರ್ನಡತೆಗಳು ಕಂಡುಬಂದರೂ ಇವುಗಳು ಕೃಷಿ ಕೆಲಸವು ಇಲ್ಲದ ಸಮಯದಲ್ಲಿ ಮೊಳೆತವುಗಳಾಗಿರಬೇಕು. ಕೃಷಿಯು ಕೃಷಿಗಾರನ ಇಡೀ ಕುಟುಂಬಕ್ಕೆ ಉದ್ಯೋಗವನ್ನುಂಟುಮಾಡುವದು. ಹೆಂಗಸರು, ಮಕ್ಕಳು, ಯೌವನಸ್ಥರು, ಮುದುಕರು, ಎಲ್ಲವರೂ ತಮ್ಮ ತಮ್ಮ ಶಕ್ತ್ಯಾನುಸಾರ ಕೃಷಿಯಲ್ಲಿ ಕೆಲಸ ನೋಡಿಕೊಳ್ಳುತ್ತಿರಬಹುದು. ಕುಟುಂಬದ ಮೆಂಬರರು ನಿರುದ್ಯೋಗಿಗಳಾಗಿರಲಿಕ್ಕೆ ಆಸ್ಪದ ಕೊಡುವದಿಲ್ಲ. ಹೀಗಿರುತ್ತಲೆ ಇತ್ತಿತ್ತ ಕೆಲವು ಕುಟುಂಬಗಳಲ್ಲಿ ಮನೆ ಸಾಗುವಳಿಯನ್ನು ಅಲಕ್ಷಿಸಿ ಬಿಡುತ್ತಾ ಬರುವದು ಬಹು ದುಃಖಕರವಾದದ್ದು. ಇದರಿಂದ ಜಾತಿಯ ಗೌರವಕ್ಕೂ, ಕುಟುಂಬದ ಅಭಿವೃದ್ಧಿಗೂ ಕೆಡುಕು ಬರುವದು. ಇಂಥಾ ಸಂಗತಿಯು ಹೆಚ್ಚುತ್ತಾ ಹೋದ ಹಾಗೆಯೆ ಬಂಟರ ಜಾತಿಯ ಐಶ್ವರ್ಯವು ಇಳಿದು ಹೋಗುವದು, ಗೌರವವು ಕುಗ್ಗಿ ಹೋಗುವದು, ಸ್ವಾತಂತ್ರ್ಯವು ಅಳಿದು ಹೋಗುವದು, ದುರ್ನಡತೆಯು ಹೆಚ್ಚಾಗುವದು, ಕಾಯಪುಷ್ಟಿಯು ಕಡಿಮೆಯಾಗುವದು. ಕೃಷಿ ಮಾಡದ ಬಂಟನು ಬಂಟನಲ್ಲ, ಅವನು ಬರೇ ವರ್ಗದಾರನು. ಹಿರಿಯರ ಕಾಲದಲ್ಲಿ ಮನೆ ಸಾಗುವಳಿ ಬಿಟ್ಟರೆ ಕಿರಿಯರ ಕಾಲದಲ್ಲಿ ಮನೆ ಮಾರಿ ಹೋಗುವದು. ಇದು ನಿಜ ನಿಜ, ಮನೆ ಕೃಷಿಯಿಂದ ಒಬ್ಬನು ದ್ರವ್ಯವನ್ನು ಹೆಚ್ಚಾಗಿ ಸಂಪಾದಿಸದೆ ಇದ್ದರೂ, ಅವನು ದ್ರವ್ಯವನ್ನು ಕಳಕೊಳ್ಳಲಿಕ್ಕಿಲ್ಲ. ನಮ್ಮವರಲ್ಲಿ ಮನೆ ಸಾಗುವಳಿ ಇಲ್ಲದ ಕುಟುಂಬದ ಮೆಂಬರರೆಲ್ಲರೂ ನಿರುದ್ಯೋಗಿಗಳು. ಒಂದು ಕುಟುಂಬದಲ್ಲಿ ನಿರುದ್ಯೋಗಿಗಳು ಹೆಚ್ಚಾದ ಹಾಗೆಲ್ಲ ದುರ್ನಡತೆಗಳು, ದುರ್ವ್ಯಾಜ್ಯಗಳು ಹೆಚ್ಚಾಗಿ ಕುಟುಂಬಕ್ಕೆ ಹಾನಿಬರುವದು. ಆದುದರಿಂದ ನಾವೆಲ್ಲ ಮನೆ ಸಾಗುವಳಿಯ ಮೇಲೆ ಹೆಚ್ಚಾದ ಶ್ರದ್ಧೆ ಇಡಬೇಕಾದದ್ದೆ.

ಸಾಧಾರಣ ಎಂಟು ಹತ್ತು ವರ್ಷಗಳಿಂದೀಚೆಗೆ ನಮ್ಮ ಜಾತಿಯ ಹುಡುಗರು ಕೂಡಾ ಮಂಗಳೂರಿಗೆ ವಿದ್ಯಾಭ್ಯಾಸವನ್ನು ಪಡೆಯಲಿಕ್ಕೆ ಹೋಗುವದು ಸ್ವಲ್ಪ ಮಟ್ಟಿಗೆ ಹೆಚ್ಚುತ್ತಿದೆಯೆಂದು ಹೇಳಬೇಕಾದದ್ದೆ. ಹೀಗೆ ವಿದ್ಯಾಭ್ಯಾಸವನ್ನು ಪಡೆಯಲಿಕ್ಕೆ ಹೋದ ಹುಡುಗರ ಪೈಕಿ ಎಷ್ಟು ಜನರು ತಮ್ಮ ವಿದ್ಯೆಯ ಬಲುಮೆಯಿಂದ ಉದ್ಯೋಗವನ್ನು ಸಂಪಾದಿಸಿ ತಮ್ಮ ಉದರ ಪೋಷಣೆಯನ್ನು ನಡಿಸಿಕೊಂಡು ಬರುವರು. ಮತ್ತು ಎಷ್ಟು ಜನರು ತಮ್ಮ ಹಳ್ಳಿಗಳಿಗೆ ಹಿಂತಿರುಗಿ ತಮ್ಮ ಹುಟ್ಟು ಕಸಬಾದ ಕೃಷಿಯನ್ನು ಕೈಕೊಂಡು ತಮ್ಮ ಕಾಲಕ್ಷೇಪವನ್ನು ಮಾಡುತ್ತಿರುವರು, ಮತ್ತು ಎಷ್ಟು ಜನರು ಇವೆರಡೂ ಇಲ್ಲದೆ ಕಾಲಕ್ಷೇಪವಾಗದ್ದಕೊಂಡು ತಮ್ಮ ಹಿರಿಯರು ಸಂಪಾದಿಸಿದ್ದ ದ್ರವ್ಯವನ್ನು ವೆಚ್ಚಮಾಡುತ್ತಿರುವರೆಂಬುವದು ನೋಡಿಕೊಳ್ಳತಕ್ಕದ್ದಾದ ಸಂಗತಿಯು. ಒಂದು ಸಂಗತಿಯು ಸಿದ್ಧಾಂತವಾದದ್ದು, ಅದೇನಂದರೆ ವಿದ್ಯಾಭ್ಯಾಸವನ್ನು ಪಡೆಯಲಿಕ್ಕೆ ಹೋದ ನಮ್ಮ ಹುಡುಗರ ಪೈಕಿ ಹೆಚ್ಚಿನವರು ತಮ್ಮ ಊರು ಹಳ್ಳಿಗಳಿಗೆ ಹಿಂತಿರುಗಿ ತಮ್ಮ ಕಸಬನ್ನು ಕೈಕೊಂಡು ಜೀವನೋಪಾಯ ಮಾಡಿಕೊಂಡಿರಬೇಕಾಗುವದು. ಈ ನನ್ನ ಮಾತಿನಿಂದ ಹೆತ್ತವರು ನಿರಾಶಾವಂತರಾಗಿ ತಮ್ಮ ಕಿರಿಯರ ವಿದ್ಯೆಯನ್ನು ಅಲಕ್ಷಿಸಬಾರದು. ಸರಕಾರಿ ಉದ್ಯೋಗವನ್ನು ಇಲ್ಲವೆ ವಕೀಲ ವೃತ್ತಿಯನ್ನು ಪಡೆಯಲಿಕ್ಕೆ ಮಾತ್ರ ವಿದ್ಯೆಯನ್ನು ಹೊಂದುವದೆಂದು ನೆನಸ ಕೂಡದು. ಸಮಯ ಹೋದ ಹಾಗೆಲ್ಲ ನೇಗಲು ಲೇಖನಿಗಿಂತ ಹೆಚ್ಚಿಗೆ ಉತ್ಪತ್ತಿಯನ್ನುಂಟುಮಾಡುವದು, ಅಂದರೆ ಕೃಷಿಯು ಸರಕಾರಿ ಉದ್ಯೋಗಕ್ಕಿಂತ ಹೆಚ್ಚಿಗೆ ಲಾಭಕರವಾದದ್ದು. ಇಪ್ಪತ್ತು ವರುಷಗಳ ಮೊದಲು ಬಿ. ಎ. ಪಾಸಾದವರಿಗೆ ನೂರಿನ್ನೂರು ರೂಪಾಯಿ ಸಂಬಳ ದೊರೆಯುತ್ತಿತ್ತು. ಆದರೆ ಈಗ ಇಪ್ಪತ್ತೈದು ರೂಪಾಯಿ ದೊರೆಯುವದು ಕಷ್ಟ. ಇನ್ನು ಹತ್ತು ವರುಷಗಳಲ್ಲಿ ಹದಿನೈದು ರೂಪಾಯಿ ದೊರೆಯುವದೂ ಕೂಡಾ ಕಷ್ಟ. ಹತ್ತಿಪ್ಪತ್ತು ವರುಷಗಳ ಮುಂಚೆ ಅಕ್ಕಿಗೆ ಮುಡಿಗೆ ಎರಡು ಮೂರು ರೂಪಾಯಿ ಬೆಲೆ ಇತ್ತು, ಈಗ ಆರೇಳು ರೂಪಾಯಿ ಬೆಲೆಯಾಗಿರುತ್ತದೆ. ಇನ್ನು ಹತ್ತು ವರುಷಗಳಲ್ಲಿ ಮುಡಿಗೆ ಹತ್ತು ರೂಪಾಯಿ ಬೆಲೆಯಾಗುವದೆಂಬುವದು ನಿಜ. ವಿದ್ಯೆಯ ಬೆಲೆಯು ಬೀಳುತ್ತಿದೆ, ಧಾನ್ಯಗಳ ಬೆಲೆಯು ಏರುತ್ತಿದೆ. ಸರಕಾರಿ ಉದ್ಯೋಗಸ್ಥರು ಮತ್ತು ವಕೀಲರು ಪಟ್ಟಣವಾಸಿಗಳಾಗಿರಬೇಕು. ಪಟ್ಟಣದಲ್ಲಿ ಕೂಡದಕ್ಕೂ ನಿಂತದಕ್ಕೂ ಹಣ ವೆಚ್ಚಮಾಡಬೇಕು, ಅರುವ ದಂಟಿನಿಂದ ಐವತ್ತರ ರೂಪಾಯಿ ವರೇಗೆ ಬೆಲೆ ಕೊಟ್ಟುಕೊಂಡು ಕೊಳ್ಳಬೇಕು. ಕಮ್ಮಿ ಸಂಬಳದ ದೊಡ್ಡ ಸಂಸಾರದ ಪಟ್ಟಣವಾಸಿಯಾದ ಸರಕಾರಿ ಉದ್ಯೋಗಸ್ಥರ ಇಲ್ಲವೆ ವಕೀಲರ ಕಷ್ಟವನ್ನು ಹೇಳ ತೀರದು. ಆದ್ದರಿಂದ ಕೃಷಿಯೇ ಲೇಸು, ಲೇಸು ಈ ನನ್ನ ಮಾತುಗಳಿಂದ ಸರಕಾರಿ ಹುದ್ದೆಯನ್ನೂ ವಕೀಲ ಮೊದಲಾದ ಪ್ರವೃತ್ತಿಯನ್ನೂ ನಮ್ಮವರು ಅಪೇಕ್ಷಿಸುವದು ಯುಕ್ತವಲ್ಲ ಎಂಬ ಅರ್ಥವಾಗುವದಿಲ್ಲ. ಅದಷ್ಟು ಜನರು ಈ ಉದ್ಯೋಗಗಳನ್ನು ಪಡೆದು ಬೇರೆ ಬೇರೆ ಕಸಬಿನಲ್ಲಿರಬೇಕು. ನಾವು ವರ್ಗದಾರರಾಗಿರುವ ಕಾರಣ ನಮ್ಮವರು ರೆವಿನ್ಯೂ ಮುಂತಾದ ಡಿಪಾರ್ಟಮೆಂಟಿನಲ್ಲಿದ್ದು ನಮ್ಮ ಸಂಕಷ್ಟಗಳನ್ನು ಸರಕಾರದ ಮುಂದಿಡುವ ಅವಶ್ಯ ಬೀಳುವದು. ಅದಲ್ಲದೆ ನಾವು ಆಸ್ತಿವಂತರಾದ ಕಾರಣ ಅನೇಕ ವ್ಯಾಜ್ಯಸಾಜ್ಯಗಳು ಹುಟ್ಟುವವು, ಹೀಗಿರುತ್ತಲೆ ವಕೀಲರ ಸಹಾಯದಿಂದ ಅವುಗಳನ್ನು ತಿದ್ದುಪಡಿ ಮಾಡಿಕೊಳ್ಳುವ ಅವಶ್ಯ ಬೀಳುವದು. ಮತ್ತು ಇವರೆಲ್ಲ ಜಾತಿಯ ಅಭಿವೃದ್ಧಿಯ ಶಿರಸ್ಸು, ಜಾತಿಯ ಗೌರವದ ಮುಖ್ಯಸ್ಥಾನ. ಒಂದು ಜಾತಿಯ ಅಭಿವೃದ್ಧಿಯನ್ನು ಆ ಜಾತಿಯವರು ತಮ್ಮ ಪರಿಶ್ರಮದಿಂದ ಪಡೆದಿರುವ ಪದವಿಯು ಸೂಚಿಸುವದು. ಆದುದರಿಂದ ಅದಷ್ಟು ಜನರು ಸರಕಾರಿ, ವಕೀಲ ಪ್ರವೃತ್ತಿ ಮೊದಲಾದ ಹುದ್ದೆಗಳನ್ನು ಪಡೆಯುವದು ಅವಶ್ಯ.

ಕೆ. ಟಿ. ಆಳ್ವ.
ಮುಂದರಿಯುವದು.

ಜೇನು ತುಪ್ಪವು ಸಿಹಿಮೂತ್ರ ರೋಗಿಗಳಿಗೆ ಒಳ್ಳೇದು. ಜೇನು ಸಿಹಿಮೂತ್ರ ರೋಗಿಗಳ ಮೂತ್ರದಲ್ಲಿ ಸಕ್ಕರೆಯನ್ನು ವೃದ್ಧಿಸುವದಿಲ್ಲವೆಂಬದಾಗಿ ಒಬ್ಬ ರುಶ್ಯಾ ಡಾಕ್ಟರರು ಕಂಡುಕೊಂಡಿರುತ್ತಾರೆ. ಮೂತ್ರರೋಗಿಗಳ ಆಹಾರಕ್ಕೆ ಸಕ್ಕರೆಯ ಬದಲಿಗೆ ಜೇನನ್ನು ಪ್ರಯೋಗಿಸಿದ್ದರಿಂದ ಹಲವು ಮೂತ್ರ ರೋಗಿಗಳ ಮೂತ್ರದಲ್ಲಿ ಸಕ್ಕರೆಯು ಕಡಿಮೆಯಾಗುತ್ತಾ ಬಂದದೆಂದೂ ಅದೇ ವೈದ್ಯರು ಪರಿಶೋಧಿಸಿ ತಿಳಕೊಂಡಿರುವರು.

ಯುದ್ಧ ಕಾಲ ಒಂದು ಪ್ರದೇಶಕ್ಕೆ ಮುತ್ತಿಗೆ ಬಿದ್ದು ಅಲ್ಲಿಯ ಆಹಾರ ಪದಾರ್ಥಗಳೆಲ್ಲಾ ಮುಗಿದು ಹೋದರೆ ಸೇನೆಯೂ ಅಲ್ಲಿರುವ ಪ್ರಜಾಜನರೂ ಬರೇ ನೀರು ಕುಡಿದು ೩೦ ದಿವಸಗಳವರೆಗೆ ಜೀವಿಸ[illegible] ಬಹುದು. ೩೦ ದಿವಸಗಳನಂತರ [illegible] ಆಹಾರ ದೊರೆಯದ[illegible] ಅವರು ಕ್ರಸ ಎಂದನಂತರ [illegible]

ಬೇಡದ್ಕದ ಬೋರ್ಡು ಶಾಲೆ.

ಅಯ್ಯಾ ಪತ್ರಿಕರ್ತರೇ,

“ದೇವರು ಕೊಟ್ಟರೂ ಪೂಜಾರಿ ಬಿಡ” ಎಂಬೀ ಮಾತು ಬೇಡದ್ಕ ಗ್ರಾಮದಲ್ಲಿ ಸ್ಥಾಪಿತವಾಗಿರುವ ಬೋರ್ಡು ಎಲಿಮೆಂಟರಿ ಶಾಲೆಯ ವಿಷಯದಲ್ಲಿ ಯುಕ್ತವಾಗಿ ತೋರುವುದು. ಒಂದಕ್ಕಿಂತ ಹೆಚ್ಚು ಶಾಲೆಗಳಿರಬಹುದಾದಷ್ಟು ವಿಸ್ತೀರ್ಣತೆಯೂ ಜನಸಂಖ್ಯೆಯೂ ಉಳ್ಳ ಈ ದೊಡ್ಡ ಗ್ರಾಮದಲ್ಲಿ ದೈವವಶಾತ್ ಒಂದು ಶಾಲೆಯಿರುವುದನ್ನು ಕೂಡ ವಿದ್ಯಾ ಇಲಾಖೆಯವರು ತೆಗೆದು ಬಿಡುವುದರಲ್ಲಿ ಉದ್ಯುಕ್ತರಾಗಿದ್ದಾರೆಂದು ಕಿಂವದಂತಿಯಿದೆ. ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾದುದರಿಂದಲೂ ಅಲ್ಲಿಗೆ ಹೋದ ಉಪಾಧ್ಯಾಯರೆಲ್ಲರೂ ಆದಷ್ಟು ಬೇಗನೆ ಅಲ್ಲಿಂದ ಜಾಂಬಿಡುವುದರಿಂದಲೂ ಈ ಶಾಲೆಯನ್ನು ತೆಗೆದೇ ಬಿಡಬೇಕಂತೆ. ವಿದ್ಯಾ ಇಲಾಖೆಯವರ ಈ ಕ್ರಮವು ಇಲಿಗಳ ಕಾಟವನ್ನು ನಿಲ್ಲಿಸುವುದಕ್ಕಾಗಿ ಮನೆಗೇನೇ ಬೆಂಕಿಹಚ್ಚಿ ಕಾಲುಮೇಲೆ ಕಾಲಿಟ್ಟು ಕುಳಿತುಕೊಂಡ “ಪೆದ್ದಭಟ್ಟನ” ಸಾಹಸವಂತಾಗುವುದು. ಮಕ್ಕಳು ಕಡಿಮೆಯಾದ, ಗ್ರಾಮದ ಒಂದು ಮೂಲೆಯಾದ ಕುಂಡಂಕೊಳಿಯೆಂಬಲ್ಲಿ ಶಾಲೆಯನ್ನು ಸ್ಥಾಪಿಸಿ “ಕತ್ತರಿಗನ್ನಡ”ವನ್ನು ಕಲಿಸಲಾರಂಭಿಸಿದರೆ ಉಪಾಧ್ಯಾಯರಿಗೆ ಉತ್ಸಾಹ ಕುಂದುವುದರಲ್ಲಿಯೂ ಬೆಂಚುಗಳು ಖಾಲಿಯಾಗುವುದರಲ್ಲಿಯೂ ಏನಾಶ್ಚರ್ಯ? ಈ ಶಾಲೆಯ ಉನ್ಮೂಲನಾಶನದಲ್ಲಿ ವಿನಿಯೋಗಿಸುವ ಬುದ್ಧಿಚಾತುರ್ಯವನ್ನು ವಿದ್ಯಾ ಇಲಾಖೆಯವರು ಸರಿಯಾಗಿ ಉಪಯೋಗಿಸಿದರೆ ಅದರ ಈಗಿನ ಅಧೋಗತಿಯ ಕಾರಣಗಳನ್ನು ಕಂಡುಹಿಡಿಯುವುದು ಪ್ರಯಾಸವಲ್ಲ. ಗ್ರಾಮದ ಮಧ್ಯಸ್ಥಳವೂ ತುಂಬಾ ಜನರೂ ಇರುವ ಬೇಡದ್ಕ ಎಂಬ ಪ್ರದೇಶದಲ್ಲಿ ಈ ಶಾಲೆಯನ್ನು ಇರಿಸಿದರೆ ಸುತ್ತುಮುತ್ತಲಿಂದ ಮಕ್ಕಳು ಬಂದು ಸೇರುವರೆಂಬುವದಕ್ಕೆ ಸಂದೇಹವಿಲ್ಲ. ಶಾಲೆಯಲ್ಲಿ ಮಲಯಾಳವನ್ನು ಕಲಿಸತೊಡಗಿದರೆ ಗ್ರಾಮಸ್ಥರು ಬೋರ್ಡಿನವರ ಉದ್ದೇಶ ಸಾಧ್ಯಕ್ಕೆ ಅತ್ಯಂತ ಸಹಕಾರಿಗಳಾಗುವರು. ಶಾಲೆಯ ಕಟ್ಟೋಣ ಮುಂತಾದವುಗಳಿಗೆ ಬೇಕಾದ ಏರ್ಪಾಡುಗಳನ್ನು ಮಾಡುವುದಕ್ಕೆ ಗ್ರಾಮಸ್ಥರು ಸಿದ್ಧರಾಗಿರುತ್ತಾರೆ. ಈ ವಿಷಯವನ್ನು ನಮ್ಮ ದಯಾಳುವಾದ ತಾಲೂಕು ಬೋರ್ಡು ಪ್ರೆಸಿಡೆಂಟರವರು ಪರಾಂಬರಿಸಿ ಜನಹಿತವನ್ನು ಒದಗಿಸಿಕೊಡುವರೆಂದು ಪೂರ್ಣವಾಗಿ ನಂಬುತ್ತೇನೆ.

“ಹಳ್ಳಿಯವ.”

ಮುಂಬಯಿ:—ಮೊಗೇರ ವ್ಯವಸ್ಥಾಪಕ ಮಂಡಳಿಯ ೧೪ನೇ ವಾರ್ಷಿಕ ಸಭೆಯು ಕಳೆದ ದಶಂಬರ ತಾ. ೨೫ರಲ್ಲಿ ಕರೆಯಲ್ಪಟ್ಟು ಮೆಂಬರರ ಸಂಖ್ಯೆಯು ಸಾಕಷ್ಟು ಕೂಡದ್ದರಿಂದ ಅಂದಿನ ಯಾವದೊಂದು ಕಾರ್ಯವನ್ನು ನಡಿಸುವರೆ ನಿರುಪಾಯರಾಗಿ ಮುಂದರಿಸಿದ್ದಾಗಿದೆಂತಲೂ ಇನ್ನು ಈ ಸಭೆಯು ಇದೇ ಬರುವ ಎಪ್ರೀಲ್-ಮೇ ತಿಂಗಳ ಮಧ್ಯದಲ್ಲಿ ಕೂಡಲಿಕ್ಕಿದೆ ಎಂತಲೂ ಕೇಳುತ್ತೇನೆ. ಮಂಡಳಿಯ ರಾತ್ರಿ ಧರ್ಮದ ಶಾಲೆ ಎಂತೂ ಮುಚ್ಚಲ್ಪಟ್ಟಿರುತ್ತದೆ. ವರ್ಷಕ್ಕೊವ್ಮ್ಮೆ ಕೂಡುವ ಈ ಸಭೆಯು ಬರಿದಾದ ಮೇಲೆ ಮಂಡಲಿಯ ಸ್ಥಿತಿಯನ್ನು ಬೇರೆ ಹೇಳಬೇಕೆಂತಿಲ್ಲ. ಆದರೂ ಇನ್ನು ಕೂಡಲಿಕ್ಕಿರುವ ಮುಂದಿನ ಸಭೆಗೆ ಮಂಡಳಿಯ ಹಿತಾಹಿತರಾದ ಮೆಂಬರರೂ, ಸ್ವಜಾತಿ ಗೃಹಸ್ಥರೆಲ್ಲರೂ ಈಗಿನ ಉದಾಸೀನ ಭಾವವನ್ನು ಬಿಟ್ಟು ಐಕ್ಯಮತದಿಂದ ಕೂಡಿ ಮಂಡಳಿಯ ಕುಂತಾದ ಯೋಗ್ಯ ವ್ಯವಸ್ಥೆಯನ್ನು ಸ್ಥಿರಪಡಿಸುವರಾಗಿ ಕೋರುತ್ತೇನೆ.

ಜೇನಸು ಧಾರಣೆ.

(ರಖಂ).

ಮುಸ್ಕಿ ಅಕ್ಕಿ ಹೊಸ್ತು	5—6—0	ರಿಂದ	5—13—0
ಗುಡ್ಡು ,, ,,	5—2—0	,,	5—7—0
ಹೊಸ ರಾಶಿ ,,	4—12—0	,,	4—14—0
ಅವ್ವಲ್ ಬೆಳ್ತಿಗೆ ,,	5—12—0	,,	6—0—0
ಗುಡು ಬೆಳ್ತಿಗೆ ,,	5—4—0	,,	5—6—0
ರಂಗೂನು ಬೆಳ್ತಿಗೆ ಗೋಣಿ ೧ರ	10—0—0	,,	10—4—0
ಗೋದಿ ಗೋಣಿ ೧ರ	11—12—0	,,	12—8—0
ಹುರುಳಿ ಗೋಣಿ ೧ರ		,,	6—2—0
ಕಡಲೆ ಗೋಣಿ ೧ರ ಬೊಂಬ್ಬೈ	9—12—0	,,	10—8—0
ತೊಗರಿ ಗೋಣಿ ೧ರ			11—0—0
ತೊಗರಿ ಬೇಳೆ ಗೋಣಿ ೧ರ.	12—8—0	,,	15—8—0
ಉದ್ದು ಗೋಣಿ ೧ರ	10—8—0	,,	11—4—0
ಊರುಬೆಲ್ಲ ಖಂಡಿ ೧ರ	37—0—0	,,	38—0—0
ಉಪ್ಪು ಗೋಣಿ ೧ರ		,,	4—12—0
ಕೊಬ್ರಿ ಖಂಡಿ ೧ರ	85—0—0	,,	90—0—0
ಕೊಬ್ರಿಹಿಂಡಿ ಖಂಡಿ ೧ರ		,,	31—8—0
ಎಳ್ಳಿಂಡಿ ಖಂಡಿ ೧ರ ಬೊಂಬ್ಬೈ	25—0—0	,,	32—8—0
ಕೊಬ್ರಿ ಎಣ್ಣೆ ಮುಡಿ ೧ರ	6—6—0	,,	7—0—0
ಎಳ್ಳೆಣ್ಣೆ ಮುಡಿ ೧ರ (ಪುರಾಣಿನ)		,,	4—4—0
ಹಿಪ್ಪೆ ಎಣ್ಣೆ ಕಟ್ಟಿಗೆ ೧ರ	6—10—0	,,	7—5—0
ಮೋರಿಸ್ ಸಕ್ಕರೆ ಮುಡಿ ೧ರ		,,	5—5—0
ಶಾಫಿ ಖಂಡಿ ೧ರ	225—0—0		235—0—0
ಹೊಸಬೇಳೆಗೋಟು ಖಂಡಿ೧ರ	78—0—0	,,	80—0—0
ಹೊಸ ಗೇರುಬೀಜ ಮುಡಿ ೧ರ	1—12—0	,,	2—0—0
[illegible] ಖಂಡಿ ೧ರ.		,,	75—0—0
ಕಾಂಟ್ರ [illegible] ಮುಡಿ ೧ರ	20—0—0	,,	29—8—0
ಕಾಂಟ್ರ [illegible] ಮುಡಿ ೧ರ		,,	32—0—0
[illegible] ೧ರ		,,	24—0—0
[illegible] ೧ರ	5—0—0	,,	5—1—0
[illegible]			240—2—0

ಸಿದ್ಧೌಷಧ!] [ಪರೀಕ್ಷಿಸಿ ನೋಡಿರಿ!!

ಇಕ್ಲಿಪ್ಸ್ ಡ್ರೊಪ್ಸ್!

ಇಕ್ಲಿಪ್ಸ್‌ಡ್ರೊಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ, ಅಸಾಮಾನ್ಯ ಕಾಯಿಲೆಕಸಾರಿಕೆಗಳಿಗೆ ಕೈ ಕಂಡ ಔಷಧವಾಗಿದೆ. ಇದರ ಅತಿಸಾಮರ್ಥ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುದ್ದು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವವು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯಾ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ. ಸೀಸೆ 1ಕ್ಕೆ ಕ್ರಯ ರೂ. 0—6—0. ವಿ. ಪಿ. ಬೇರೆ.

"ಸಮಯಕ್ಕೆ ಒದಗಿದವನೇ ಮಿತ್ರ"ನೆಂಬುದು

ನಮ್ಮ

ಇಕ್ಲಿಪ್ಸ್ ಬಾಮ್

ಪ್ರಯೋಗಿಸಿ ನೋಡಿದವರೆಲ್ಲರಿಗೂ ಖಾತ್ರಿಯಾಗಿದೆ. ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುಣ್ಣು, ತುರಿಕಜ್ಜಿ, ಮೂಲವ್ಯಾಧಿ, ಬೆಂಕಿಯಬೊಕ್ಕೆ, ಮೊಡವೆ, ಜೇಣು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1ಕ್ಕೆ 0—8—0. ವಿ.ಪಿ. ಬೇರೆ 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

☞ ಕಾಜಾ ಯೂಕಲಿಪ್ಟಸ್ ತೈಲ 5 ಆಣೆ; ಟೂರಕಟ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗ್‌ಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಬಿ. ನರಸಿಂಗರಾವ್, ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ದ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನದೋಷ ಆಗುವದಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಪುಷ್ಟಿಗೊಳಿಸುವದು.

ಒಳ್ಳೆ ಸ್ಥಿತಿಯಲ್ಲಿ ಇಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುವು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೩ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಧ್ಯಾತ್ಮಿಕಮಂಜರೀ,—ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,

Avenue Road, ವೇದಶಾಸ್ತ್ರಶಾಲಾ,

BANGALORE CITY. …

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜೆಜುದ್ದೀನ್ ರಸ್ತೆಯ ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಿಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಿಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೩ ಮೊಳ!!

ಗೋವರ್ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಲ್ಲಿನಲ್ಲಿ ಗೋವರ್ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಬಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವವು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,

3 ಇರುಳಪ್ಪನ ಬೀದಿ, ಮದರಾಸು.

100 ರೂಪಾಯಿಗಳ ಬಹುಮಾನ.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ

ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ನೂರ್ಲಂದ ಬಹುಮಾನಕ್ಕೆ ಬಾಧ್ಯರಾಗಿರುತ್ತಾರೆ.

ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ನಾಚಿ ಅಂಡ್ ಕಂಪೆನಿ,

ಸಾಹುಕಾರಪೇಟೆ, ಮದರಾಸು.

ದಿವ್ಯಾಂಜನ. Divyanjan. (Regd.)

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು, ಬಾತು ಬರುವುದು, ಉಳುಕು ಉರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇದೇ ದಕ್ಷಿಣಕನ್ನಡ ಜಿಲ್ಲೆಯ ಸೋಲ್‌ಏಜಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— Someshwar & Sons,

Fergusson Road, BOMBAY.

ಹಲ್ಲುನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡಾಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣವಾಗುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾ 1—4—0

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಕಂಪನಿಗಳಟ್ಟ ಕೋವುಗಳಲ್ಲ ದೊರಕುವದು.

STANY BROTHERS
Sole Agents
C. M. C's, Toothache
Specific, Mangalore.

ಸಬ್ ಏಜಂಟರು ಬೇಕಾಗಿವೆ.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಸಾಯರ್ ಕೇಶನಾಶಿನಿ

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ದೇಹದಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನು

ಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡವಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0. ಟಪ್ಪಾಲ್ ಹಾಸಲು ಬೇರೆ ಬೀಳುವದು, ವ್ಯಾಪಾರಸ್ಥರಿಗೆ ಜಾಸ್ತಿ ಕ್ರಯಕ್ಕೆ ತೆಗೆದುಕೊಂಡರೆ ಸ್ಪೆಶಲ್ ಕಮಿಷನ್ ಕೊಡುತ್ತೇವೆ.

ವಿಳಾಸ:— …ರತ್ನಂ ಕಂಪೆನಿ,

3 ಇರುಳಪ್ಪನ ಬೀದಿ, …

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಣ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣಕೊಡುವದು. ಬಾಟಿಗೆ ೨-೮-೦.

೩. ಬಂಜೆಯರಿಗೆ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಇವುಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೬ ರೂ.

೪. ಸೂರಣಾದಿ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಎಂಥಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ[illegible]. ತಿಂಗಳ ಔಷಧಕ್ಕೆ ಅಂಚು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೧ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವಿಲ್ಲದಂತೆ ಸುಖ ವಿರೇಚಕವು. [illegible] ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸರ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗೂರ್ಲುಬ್ಬಸ, ಕಫ, ಕ್ಷಯಗಳ ಮೇಲೆ [illegible]. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರಕೃಚ್ಛ್ರ, ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ಕುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸಪ್ತಕ್ಷೀರಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಹ್ಮಿ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುದ್ಧಿ ಕುಂದು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಸುವದು. ವಾಣಿಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ಧೊಡ್ಡ ಕ್ಯಾಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ಪತ್ರವ್ಯವಹಾರ ಕನ್ನಡ ವಾ ಇಂಗ್ಲಿಷಿನಿಂದಲೂ ನಡೆಯುವದು.

ವಿಳಾಸ:—ಎಸ್. ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು ಮದರಾಸು

S. M. Nath & Co., *Ayurvedic Chemists*
Vepery Post, MADARS.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲನಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜಿ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಒದಗಿ [illegible]. ಇದು ಕೂಡ ತಂಸಿದ್ದ 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕೆಂತಿಲ್ಲ. ಎಲ್ಲ ಕಡೆಯಲ್ಲಿ ನನ್ನ ಸರ್ವರ [illegible] ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾರ್ಕ್ಕಳದಿಂದ ವಿಠಲನಿಂದ ಮ. ಬಿ. ರಘುರಾಯರು ಬರೆಯುತ್ತಾರೆ:—ಒಂದು ವರುಷದ ಆಗಾಗಿ ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೋನಿಕ್ಕುಗಳನ್ನೂ ತಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿ.

ವಿಳಾಸ:— The Malariana Company,
Kankanady S. C.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟಿದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co.,
Mangalore.

ನೋಟೀಸು.

ಉಪ್ಪಿನಕುದುರೆ ರಾಮಚಂದ್ರ ಶ್ಯಾನಭಾಗನು ಸರ್ವ ಜನರಿಗೆ ತಿಳಿಸುವದೇನಂದರೆ—

ನನಗೆ ಕೊಯ್ಯೂರು ರುಕ್ಮಯ್ಯಾಚಾರಿ ರೂಪಾಯಿ 24ಕ್ಕೆ ಬರಕೊಟ್ಟ ಡಿಮಾಂಡ್ ನೋಟು 1, ಲೋರೆನ್ಸ್ ಕೊನ್ನನು ರೂಪಾಯಿ 18ಕ್ಕೆ ಬರಕೊಟ್ಟ ಡಿಮಾಂಡ್ ನೋಟು 1, ಎರಡು ವಕಾಲತು ಫೋರ್ಮಿಗೆ ನನ್ನ ದಸ್ಕತು ಹಾಕಿ 2 ಫುಲ್ಸ್‌ಕೇಪ್ ಕಾಗದಕ್ಕೆ ಸಹಾ ನನ್ನ ದಸ್ಕತು ಹಾಕಿ ಪುತ್ತೂರು ವಕೀಲ್ ಎಚ್. ಗಣಪತಿರಾಯರವರಿಗೆ ನನ್ನ ಬರಹ ಕಾಗದ ಸಮೇತ ಲಕೋಟೆ ಒಳಗೆ ಹಾಕಿ ವಕ್ಕಿನ ಪತ್ರಾ ಮುದ್ರಾ ರವಾನಿಸಿದ್ದೆ. ಆದರೆ ಸದರಿಯವನು ಆಮಲುಕೋರನಾಗಿಯೂ ಏನೊ ಕಾರಣದಿಂದ ಉಪ್ಪಿನಂಗಡಿಯಿಂದ ಉಪ್ಪಿನಂಗಡಿಗೆ ಹೋಗುವ ತನ್ಮಧ್ಯೆ ವಿಸಾದಿ ಹೋಗಿದೆ. ಪೂರ್ಣ ಬರಹ ಗೊತ್ತಿರುವವನಾದ ನನ್ನ ಬರಹದ ದಸ್ಕತಿನ ಕಾಗದಗಳು ನೋಟುಗಳು ಆಗಲಿ ಯಾರಿಗಾದರೂ ಸಿಕ್ಕಿದರೆ ನನಗೆ ತಂದುಕೊಟ್ಟಲ್ಲಿ ಅವರಿಗೆ ರೂಪಾಯಿ ಐದು ಇನಾಮಾಗಿ ನಾನು ಕೊಡುವದಕೆ ಕಬೂಲು ಇದ್ದೇನೆ.

ಉಪ್ಪಿನಕುದುರೆ ರಾಮಚಂದ್ರ ಶ್ಯಾನಭಾಗ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ವರ್ಗಾವಣೆ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಶ್ಯಾನುಭೋಗ ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟ್ ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಬೆಲೆ 15 ರೂ. ಮಾತ್ರ.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್ಮೆಂಟ್ ಮಾಡಿರುವುದು. ಮತ್ತು ಧಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಬಂಗಾರದ ಉಂಗುರ 1, ಒಟ್ಟು 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಅರುಣ್ಣನ ಬೀದಿ, ಮದರಾಸ್.

ಯಂ ಯಸ್. ರಾವ್. ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಷಾ ಹೇರ್ ಆಯಿಲ್ „	1—0—0
ಮಹಾರಾಣೀ ಹೇರಾಯಿಲ್ „	0—12—0
ಕಾಮಿನಿಯಾ ಹೇರಾಯಿಲ್ „	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಫೇನ „	0—10—0
ಇಂದಿರಾ ದ್ವಿ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್‌ಸ್ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರಫುಲ್ಲೆ „ „	0—12—0
ಅಂಬಾಲಿಕೆ (ಹೊಸ ನಾವಿಲ್)	0—1—6
ಕುಸುಮ „	0—1—0
ರಾಧಾನಾಥ „	0—2—0
ಸುಭದ್ರೆ „	0—6—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ	0—2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1—0—0
„ ಸಂಗೀತ ಸಮುಚ್ಚಯ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ „	1—2—0
ಚಂದ್ರವದನಾ „	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"×28" ಕ್ಕೆ	0—1—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ **ಸ್ಥಾಪನೆ 1888.**

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹುಟವಾರಿ ಗಜಕರ್ಣವು ಈ ಮುಲಾಮಿನ ಹಿಂದೆ ೨ಚು ಸಾರಿ ಹಚ್ಚೋಣದಿಂದಲೇ ಭಕ್ಷ್ಯ ವಾಗುತ್ತವೆ. ೩೦-೩೫ ವರ್ಷಗಳ ಹಳತ, ಕ್ಷಿಮನೆ ಮಾಡಿ ಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೬ ಬಾಟ್ಲಿಗಳ ವರೆಗೆ ೫ಾಕ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ಧಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಚಿಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈ ಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ್ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—

ಭಂಡಾರಕಾರ ಬ್ರದರ್ಸ್,

ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್, ಮದ್ರಾಸು.

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ರಾತ್ರೆ ಕಥೆಗಳು. ಸಂಪೂರ್ಣ ಗ್ರಂಥ. ೧,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರ ಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಛಪ್ಪಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನುಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯ ಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭ ಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸರ್ವರಿಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ. ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕ್ರಯಕ್ಕೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. ೪. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಪಾಸಸ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಬೆಲೆಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— **ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,**

ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಆರ್. ಮಾರ್ಟಿನ್ಸರ ಮಾತ್ರೆಗಳು

ನಂ. ೩.

ದಮಿಯಾನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧೆ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಕ್ಷವನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,

ನಂಬ್ರ ಡಿ. ಫ್ರೆಯರ್ ರೋಡ್,

ಮುಂಬಯಿ.

R. D. Kately & Co.

No. D. Frere Road,

Near Wright & Co. Fort Bombay.

ವಾಚುಗಳನ್ನು ತರಿಸುವವರಿಗೆ

ಒಳ್ಳೇ ಸಂದರ್ಭ!

ತಮಗೆ ಅತ್ಯುತ್ತಮವಾದ ವಾಚುಗಳು ಯಾವ ತರಹದ್ದು ಬೇಕಾಗಿದ್ದರೂ ನಮಗೆ ಬರೆಯಿರಿ!

ನಂಬ್ರ 1. ಮೆಟಲ್ ಕೇಸ್.—ವಿದ್ಯಾರ್ಥಿಗಳಿಗೆ ಅತೀ ಉಪಯೋಗಕರವಾದ್ದು. ರೂ. 3—0—0. ಫೆನ್ಸಿ ಡಾಯಲ್ ರೂ. 3—8—0. 3 ವರ್ಷಗಳ ಗ್ಯಾರಂಟಿ.

ನಂಬ್ರ 2. ಮೆಟಲ್ ಅಥವಾ ಗನ್‌ಮೆಟಲ್ ಕೇಸ್.—ಸರಿಯಾದ ಸಮಯವನ್ನು ತೋರಿಸುತ್ತದೆ. ರೂ. 4—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 3. ಅತ್ಯುತ್ತಮವಾದ ನಿಕ್ಕಲ್ ಸಿಲ್ವರ್ ಕೇಸ್.—ಜುವೆಲ್, ಲೀವರ್ ಗಿಲ್ಟ ಮೆಸ್ಸಿನು ಹೆಚ್ಚು ಕ್ರಯಬಾಳುವ ವಾಚುಗಳಿಗಿಂತಲೂ ಉತ್ತಮ ತರದ್ದು. ಪೆಟ್ಟಿಗೆ, ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ನಂಬ್ರ 4.—ವಾರಕ್ಕೊಂದಾವರ್ತಿ ಕೀ ಕೊಡುವಂಥಾದ್ದು ನಿಕ್ಕಲ್ ಸಿಲ್ವರ್‌ಕೇಸ್ ರೂ. 7. ಸಿಲ್ವರ್ ಕೇಸ್ ರೂ. 9—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 5.—ರಿಸ್ಟ ವಾಚು ನಿಕ್ಕಲ್ ಸಿಲ್ವರ್ ಕೇಸ್ ರೂ. 5. ಸಿಲ್ವರ್ ಕೇಸ್ ಸ್ಟ್ರೇಪ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ಮೇಲ್ಕಂಡ ವಾಚುಗಳಲ್ಲದೆ ವೆಸ್ಟ್ ಎಂಡ್ ವಾಚ್ ಕಂಪೆನಿ, ರಾಸ್ಕೋಪ್ ಪೇಟೆಂಟ್ ಮುಂತಾದ ಪ್ರಖ್ಯಾತಪಟ್ಟ ಕಂಪೆನಿಗಳ ಎಲ್ಲಾ ತರಹದ ಚಿಕ್ಕ ವ ದೊಡ್ಡ ಸೈಜಿನ ವಾಚುಗಳನ್ನು ಚಿಲ್ಲರೆಯಾಗಿಯೂ ರಖಂ ಆಗಿಯೂ ಮಾರಾಟಮಾಡುತ್ತದೆ.

ವಿಳಾಸ:— **N. GOPALJEE,**

Watch maker.

JOOMA MASJID SHEIK MEMON STREET,

BOMBAY 2.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4.

ಪೋಸ್ಟೇಜ್ ಪ್ರತ್ಯೇಕ.

೫ ವರುಷಗಳು ಗ್ಯಾರಂಟಿ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೧೬ ಸುಸ್ಸೆಗೂನಲ್ಲಿ ಚಿನ್ನದ ಮೆಡಲ್ ಹೊಂದಿಕೊಟ್ಟ ಪ್ರಸಿದ್ಧವಾದ ಅಮೃತ ಸಂಜೀವಿನಿಗುಳಿಗೆ. 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ 12 ಆಣೆ ಮಾತ್ರ. ಪೋಸ್ಟುಚಾರ್ಜು 4 ಆಣೆ

ಈ ಸುಂದರವಾದ ವಾಚ್ ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ಯಾಜಾಗಿಯೂ ಇಂಜಿನ್‌ಸ್ಟಾಂಪು ಹಾಕಿಯೂ ಇರುವದು.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು ಸ್ವಪ್ನಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು. ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಬಹಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ಪ್ಲೇಗನು, ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೮೫ ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತಿ ವಿಳಾಸ:— "ಪಂಡಿಟ್" ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಛರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀತಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೬ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದುಯಂ ರೂಪಾಯಿ ೧ಕ್ಕೆ ೮ ತೊಲೆ, ಶೀಯಂ ರೂಪಾಯಿ ಒಂದಕ್ಕೆ ೧೦. ತೊಲೆ, ಚಾರಂ ರೂಪಾಯಿ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Choukhambay,
BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು. **S. P. RAJA & Co.,**
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 408

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ ಮಂಗಳೂರು, ತಾರೀಕು ೨೬ನೇ ಜನವರಿ ಶುಕ್ರವಾರ ೧೯೧೭. ಸಂಚಿಕೆ ೪.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

ESTABLISHED JULY 1906.

Authorised Capital Rs	...	300,000—0—0
Issued Capital	...	225,000—0—0
Subscribed Capital ...	...	225,000—0—0
Paid up Capital ...	...	200,000—0—0
Deposits ...	...	336,227—9—4
Reserve Fund ...	...	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,

Mangalore, 1st December 1916.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

ನಿಯಮಿತ ಮೂಲ ಧನವು ರೂಪಾಯಿ		300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		336,227—9—4
ರಕ್ಷಿತ ಧನವು	... ...	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಶೇಕಡಾ 25ಕ್ಕೆ ಸಂಬಂಧವಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ವಸೂಲ್ಯಗಳೆಂದು ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಧನ್ಯಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಶೇಕಡಾ 1ರ ದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವುವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮೊದಲು ಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು. ಶೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವುವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಬಹುದಾಗಿದೆ. ಈ ಠೇವಣಾತಿಗಳಿಗೆ ಶೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಶಾರದಾ ಛಾಪಖಾನೆಯ
1917ನೇ
ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಲಿಪ್ ಕವರ್ ಬೈಂಡು 0—8—0
ಚಿಕ್ಕ ಸೈಜು ಕೆಲಿಕೊ ಬೈಂಡು 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

FOOT BALLS. (BEST QUALITY).

ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಾಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸಹಾಯಾರ್ಥವಾಗಿ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ, ಉಡುಪಿ. | ಪಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ-ಇಂಗ್ಲಿಷ್, ಇಂಗ್ಲಿಷ್-ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು. ಈ ವಾರವೇ ತರಿಸಿಕೊಂಡರೆ ರೂ. 1—11—0. ಅಂಚೆಯು ಮಾಫ್.

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
[illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ,

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮ॥ ಲಲ್ಲುಭಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಪ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮ॥ ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿ ಮಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಆ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿರುವದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣ, ಜ್ವರ, ಕೆಮ್ಮು, ಕೈಕಾಲುಗಳು ಸಿಂಡುರೋಗ, ನೆಗಡಿಯಿಂದ ಮೂಗು ಸುರಿಯೋದು ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯು ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಖಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಂ, ಜಿಲ್ಲಾ ಮುರ್ಶಿದಾಬಾದ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:— ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂತೆ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸಮಾನ ಗುಣಕಾರಕ ಔಷಧವು ಮತ್ತಾವದೂ ಇಲ್ಲೆಂಬದನ್ನು ಖಾತ್ರಿಯಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಅಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟೆರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗ್ಮೋರ್ ನಂ. 2, ಮದ್ರಾಸು ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ವಿಷಮಶೀತ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟೆರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಯೂರೋಪದ ಮಹಾ ಯುದ್ಧ.

ಪಶ್ಚಿಮ ರಣರಂಗದಲ್ಲಿ ಫ್ರೆಂಚರೂ ಬ್ರಿಟಿಷರೂ ಮುಂದೆ ಮುಂದೆ ನುಗ್ಗಿಹೋಗಿ ಜಯಪ್ರದರಾಗುತ್ತಿದ್ದಾರೆ. ಫ್ರೆಂಚರು ಕ್ಲೆರಿ, ಲಿಸ್ ಎಸ್ಪೆಜಸ್ ಮೊದಲಾದ ಪ್ರಾಂತ್ಯಗಳಲ್ಲಿ ಶತ್ರುಗಳ ಮೇಲೆ ಬಿದ್ದು ಅವರ ಕೆಲವು ಸೇನಾ ನೆಲೆಗಳನ್ನು ದಾಟಿ ಮುಂದರಿಸಿರುತ್ತಾರೆ. ಬ್ರಿಟಿಷರು ಲೆನ್ಸಿನ ನೆರೆಹೊರೆಯಲ್ಲಿ ದಾಳಿಮಾಡಿ ಕೆಲವು ಗ್ರಾಮಗಳನ್ನು ಗೆದ್ದುಕೊಂಡಿರುತ್ತಾರೆ. ಮ್ಯೂಸಿನ ದಿಕ್ಕಿಗಳಲ್ಲಿ ಶತ್ರುಗಳು ಮೂರು ಸಾರಿ ಫಿರಂಗಿಸುಟ್ಟು ಹಲ್ಲೆಮಾಡಿದರು. ಆದರೆ ನಷ್ಟಪಟ್ಟು ಹಿಮ್ಮೆಟ್ಟಿದರು.

ಪೂರ್ವ ರಣರಂಗ.

ರುಶ್ಯನರಿಗೆ ಮತ್ತು ರುಮೇನಿಯನರಿಗೆ ಬೆಂಬಲ ಸೇನೆಯು ಬಂದು ಕೂಡಿರುವದರಿಂದ ಸೆರೆತ್ ಕ್ಯಾನನ ಬಳಿ ಯುದ್ಧಕ್ಕೆ ನಿಂತಿರುತ್ತಾರೆ. ಬ್ರ್ಯಾಯಿಲ ಮತ್ತು ಗಲಾಟ್ಸ ಮಧ್ಯೆ ಕಠಿಣಕಾಳಗವು ನಡೆಯುತ್ತಿದೆ. ಶತ್ರುಗಳು ಫೈಲೋಯದ ಬಳಿ ರುಮೇನಿಯನರ ಮೇಲೆ ಬಿದ್ದಿರುವರು. ಜರ್ಮನರು ವಡೆನ ಎಂಬ ಗ್ರಾಮವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಸೆರೆತಿನಲ್ಲಿ ರುಶ್ಯಾ ಮತ್ತು ರುಮೇನಿಯನರ ಸ್ವಾಧೀನವಿದ್ದ ಸ್ಥಳಗಳಲ್ಲಿ ಇದು ಕಡೆಯದು. ಆದರೆ ಮೊಲ್ಡಾವಿಯನ್ ಭಿನ್ನ ಸ್ಥಳಗಳಲ್ಲಿ ರುಮೇನಿಯನರಿಗೆ ಕೆಲವು ಜಯಗಳು ಆಗುತ್ತಲಿವೆ. ಗಲಾಟ್ಸ ಪ್ರಾಂತ್ಯವು ವಡೆನ ಗ್ರಾಮಕ್ಕೆ ೭ ಮೈಲುಗಳ ಪಶ್ಚಿಮದಲ್ಲಿದೆ. ಆದರೆ ಶತ್ರುಗಳು ಈ ಸ್ಥಳವನ್ನು ಸುಗ್ಗಬೇಕಾದರೆ ಡನ್ಯೂಬು ಮತ್ತು ಸೆರೆತ್ ನದಿಯನ್ನು ದಾಟಬೇಕಾಗಿದೆ. ಈ ಪ್ರಾಂತ್ಯವು ಜವಗು ಪ್ರದೇಶವಾಗಿದ್ದು ಯುದ್ಧಮಾಡಲು ಕಷ್ಟಸಾಧ್ಯವಾದ ಪ್ರಾಂತ್ಯವಾಗಿದೆ. ಜರ್ಮನರ ಜನರಲ್ ಮೆಕೆನ್‌ಸನರು ೫೦ ಮೈಲುಗಳ ವಿಸ್ತೀರ್ಣದಲ್ಲಿ ತನ್ನ ದೊಡ್ಡ ಸೇನೆಯನ್ನು ಒಟ್ಟುಹಾಕಿರುವರಾದರೂ ಇನ್ನೂ ರುಶ್ಯನರ ಪ್ರಾಮುಖ್ಯ ಸೇನಾನೆಲೆಯ ಮೇಲೆ ಬೀಳಲು ಅವರಿಗೆ ಸಾಧ್ಯವಾಗಲಿಲ್ಲ.

ಗ್ರೀಸ್.

ಮಿತ್ರರಾಜ್ಯಗಳವರು ಕೊಟ್ಟ ಪತ್ರಕ್ಕೆ ಗ್ರೀಕ ಸರಕಾರದವರು ಒಪ್ಪಿಕೊಂಡು ಸೆರೆಯಲ್ಲಿಟ್ಟಿದ್ದ ವೆಂಜೆಲಿಸ್ಟ ಪಕ್ಷದವರನ್ನು ಬಿಡಿಸಿರುತ್ತಾರೆ.

ಜಲಾಂತರ್ಗಾಮಿ ನಾವೆಗಳು.

"ಬ್ರೂಕ್‌ವುಡ್" (ಬ್ರಿಟಿಷ), "ಗ್ರಾಫ್‌ಜೆಲ್ಡ್" (ನೋರ್ವೆ) "ನೊರ್ಮ" (ಸ್ವೀಡನ್) ಹಡಗಗಳೂ ಬ್ರಿಟಿಷರ "ಪ್ರಮಿಟಸ್," "ಪಾಡ್‌ಸ್ಟೊಡ್ ಶಯರ್" "ಬೆಂನಿತ್" "ನೆಶ್ವಿಹಾಲ್" "ಮಾಂಟ್‌ಟೆಂಪಲ್" "ಕಿಂಗ್ ಜೋರ್ಜ" "ವಾಲ್ಪಯರ್" "ಜೋರ್ಜಿಕ್" ಹಡಗಗಳೂ ಫ್ರೆಂಚರ "ನಾಂಟಿಸ್" ಮತ್ತು "ಎಸ್ಮೆರಿಸ್" ಜಪಾನರ "ಪಡ್ಸನ್ ಮಾರ್" ಹಡಗಗಳೂ ಮುಳುಗಿಸಲ್ಪಟ್ಟಿವೆ. ಈ ೧೯ರಲ್ಲಿ ಬ್ರಿಟಿಷರ "ಮೆಂಟಿಸ್ಟರ್" "ಇನ್‌ವೆಂಟರ್" "ವಾರ್ಟಿ" "ಗಾರ್ ಫೀಲ್ಡ" "ಬಿಟೆನ್ ಕ್ರೋಗ್" ಡೆನ್‌ಮಾರ್ಕನವರ "ಒಮ್‌ಸ್ಕ" ಸ್ಪೈನಿಯರ "ಮೆನುವೆಲ್" ಹಡಗಗಳು ಮುಳುಗಿಸಲ್ಪಟ್ಟಿವೆ.

ಸಂಧಿ ಪ್ರಸ್ತಾಪ.

ಬೆಲ್ಜಿಯಂ ಸರಕಾರದವರು ಅಮೇರಿಕಾದ ಅಧ್ಯಕ್ಷರಿಗೆ ಹೀಗೆ ಬರೆದಿದ್ದಾರೆ:— ಯುದ್ಧಮಾಡುತ್ತಿರುವ ರಾಷ್ಟ್ರಗಳವರ ಉದ್ದೇಶವೆಲ್ಲಾ ಒಂದೇ ಎಂದು ನೀವು ತಿಳಿದುಕೊಳ್ಳುವಂತಿದೆ. ಅದು ಸರಿಯಲ್ಲವೆಂಬುದಕ್ಕೆ ಬೆಲ್ಜಿಯಮೇ ಉದಾಹರಣೆಯಾಗಿದೆ. ಪರದೇಶಗಳನ್ನು ಜಯಿಸಬೇಕೆಂಬ ಇಚ್ಛೆಯು ಬೆಲ್ಜಿಯಮಿನವರಿಗೆ ಯಾವಾಗಲೂ ಇಲ್ಲ. ಜರ್ಮನರು ಈಗ ಬೆಲ್ಜಿಯಂ ಪ್ರಜೆಗಳಿಗೆ ಪಡಿಸುತ್ತಿರುವ ಬಾಧೆಗಳನ್ನು ನೋಡಿದರೆ ಮುಂದೆ ಇಂಥಾ ರಾಷ್ಟ್ರಗಳ ಗೌರವವನ್ನು ಜರ್ಮನರು ಉಳಿಯಗೊಡಿಸುವರೆಂದು ಹೇಳುವದಕ್ಕೆ ಆಧಾರವಿಲ್ಲ. ಅವರು ಈಗಲೂ ಸಣ್ಣ ರಾಷ್ಟ್ರಗಳನ್ನು ನಾಶ್ನು ಮಾಡುವದನ್ನು ಬಿಟ್ಟಿಲ್ಲ. ಯುದ್ಧಾನಂತರದಲ್ಲಿ ಚಿಕ್ಕ ಚಿಕ್ಕ ರಾಷ್ಟ್ರಗಳಿಗೆ ಭಂಗ ಬಾರದಂತೆಯೂ ಚಿಕ್ಕ ರಾಷ್ಟ್ರಗಳ ಪ್ರಜೆಯನ್ನು ದೊಡ್ಡ ರಾಷ್ಟ್ರಗಳವರು ಹಿಂಸೆಪಡಿಸದಂತೆಯೂ ಮಾಡುವದಕ್ಕೆ ತಕ್ಕ ನಿಬಂಧನೆಗಳನ್ನು ಏರ್ಪಡಿಸುತ್ತಿರುವದರಲ್ಲಿ ಅಮೇರಿಕಾ ಸಂಯುಕ್ತ ರಾಷ್ಟ್ರಗಳವರು ಸಹಾಯಕಾರಿಗಳಾಗಿರುವದೆಂಬವನ್ನು ಕೇಳುವದಕ್ಕೆ ಬೆಲ್ಜಿಯಮಿನವರು ಬಹಳ ಸಂತೋಷಿಸುತ್ತಾರೆ. ಬಲಾತ್ಕಾರದಿಂದ ಯುದ್ಧಕ್ಕೆ ಸೆಳೆಯಲ್ಪಟ್ಟ ಕಾರಣ ನಾವು ಸ್ವರಕ್ಷಣಾರ್ಥವಾಗಿ ಯುದ್ಧಕ್ಕೆ ನಿಲ್ಲಬೇಕಾಯಿತು. ಅಮಾನುಷವಾದ ಬೆಲ್ಜಿಯಂ ಪ್ರಜಾಹಿಂಸೆಯು ಅತಿ ಶೀಘ್ರವಾಗಿ ತೊಲಗಿಹೋಗಬೇಕೆಂದು ಅವರು ಆತ್ಯಾತುರದಿಂದ ಕೋರುತ್ತಿರುವರು. ಆದರೆ ಇದುವರೆಗೆ ಶತ್ರುಗಳು ಉಂಟುಮಾಡಿರುವ ನಷ್ಟಗಳಿಗೆ ಪರಿಹಾರವನ್ನು ಕೊಡುವದಕ್ಕೂ ಮುಂದೆ ಯಾವಾಗಲೂ ಹೀಗೆ ಸ್ವತಂತ್ರಕ್ಕೆ ಭಂಗತರುವಂಥಾ ಕೆಲಸವನ್ನು ಮಾಡದೆ ಇರುವದಕ್ಕೂ ಜರ್ಮನರು ತಕ್ಕ ಹೊಣೆಯನ್ನು ಕೊಡದಿದ್ದರೆ ಬೆಲ್ಜಿಯಮಿನವರು ಸಂಧಿಗೆ ಎಂದೂ ಒಪ್ಪುವದಿಲ್ಲ" ಎಂದು ತಿಳಿಯಪಡಿಸಿದ್ದಾರೆ.

ಜರ್ಮನ ಕೈಸರರು ಮಿತ್ರಮಂಡಲಿಯವರ ಉತ್ತರಗಳನ್ನು ನೋಡಿ ಕಿಡಿಕಿಡಿಯಾಗಿ ಮುಖ್ಯ ಮಂತ್ರಿಯವರಿಗೆ ಒಂದು ಆಜ್ಞೆಯನ್ನು ಬರದಿರುತ್ತಾರೆ. "ಶತ್ರುರಾಷ್ಟ್ರಗಳವರಿಗೆ ಸಂಧಿ ಎಂಬ ಪದವನ್ನುಚ್ಚರಿಸುವದಕ್ಕೂ ನೈತಿಕ ಧೈರ್ಯವಿರುವದಿಲ್ಲ. ಆದುದರಿಂದ ಅವರು ಅಸತ್ಯ ಕಲ್ಪನೆಗಳಿಂದ ಪ್ರಜೆಗಳನ್ನು ಯುದ್ಧಾಭಿನಿವೇಶ ಬದ್ಧರನ್ನಾಗಿ ಮಾಡುತ್ತಿದ್ದಾರೆ. ಮನಸ್ಸಾಕ್ಷಿಯನ್ನು ಗುರುತಿಸಬಲ್ಲ, ತಾನು ಸರ್ವಕರ್ತನಾದ ದೇವರಿಗೆ ಉತ್ತರವಾದಿಯೆಂದು ತಿಳಿಯಬಲ್ಲ, ಸ್ವದೇಶದ ಮತ್ತು ಶತ್ರುದೇಶದ ಪ್ರಜೆಗಳವೇಲೆಲ್ಲಾ ಕನಿಕರ ಉಳ್ಳ, ತನ್ನ ಉದ್ದಿಷ್ಟಕಾರ್ಯ ನಿರ್ವಾಹಕದಲ್ಲಿ ಪರರು ಎಷ್ಟು ಅಸತ್ಯ ಕಲ್ಪನೆಗಳನ್ನು ಮಾಡಿದರೂ ಅದನ್ನು ಸರಕುಮಾಡದಿರುವ, ಪ್ರಪಂಚವನ್ನು ಬಾಧೆಯಿಂದ ತೊಲಗಿಸುವದಕ್ಕೆ ಗಾಢವಾದ ಮನಶ್ಶಕ್ತಿಯುಳ್ಳ ಒಬ್ಬನನ್ನು ಕಂಡುಕೊಳ್ಳಬೇಕಾದ ಅವಶ್ಯಕತೆಯು ಜಗತ್ತಿಗೆ ಉಂಟಾಗಿದೆ. ದೇವರ ಮೇಲೆ ಭಾರವಿಟ್ಟು ನಾನು ಅದಕ್ಕಾಗಿ ಪ್ರಾರ್ಥಿಸುತ್ತೇನೆ. ಈ ಪದ್ಧತಿಯನ್ನನುಸರಿಸಿ ಲೇಖನಗಳನ್ನು ಬರೆದು ನನ್ನ ಬಳಿಗೆ ಕಳುಹಿಸಿಕೊಡು ಮತ್ತು ಆಲಸ್ಯಮಾಡದೆ ಕೂಡಲೇ ತಕ್ಕ ಸನ್ನಾಹಗಳನ್ನು ಮಾಡು ಎಂಬದಾಗಿ ಬರದಿರುತ್ತಾರೆ.

ವಿದೇಶ ವೃತ್ತಾಂತ.

ಜಪಾನಿಯರ "ಟಿಸ್ಕುಬ" ಎಂಬ ಯುದ್ಧ ಹಡಗದಲ್ಲಿ ಸಿಡಿತ ಉಂಟಾಗಿ ಅದು ೨೦ ನಿಮಿಷದೊಳಗೆ ಮುಳುಗಿ ಹೋಗಿರುತ್ತದೆ. ಸುಮಾರು ೨೦೦ ಮಂದಿ ಸತ್ತುಹೋದರು. ಸಿಡಿತ ಉಂಟಾದ ಕಾರಣವು ಗೊತ್ತಾಗಲಿಲ್ಲ.

ಬ್ರಿಟಿಷ ಸರಕಾರದವರು ಪುನಃ ಒಂದು ದೊಡ್ಡ ಸಾಲವನ್ನು ತೆಗೆಯುವದರಲ್ಲಿದ್ದಾರೆ. ಎಲ್ಲಾ ಕಡೆಗಳಿಂದಲೂ ಬೇಂಕುಗಳೂ ಮುನ್ಸಿಪಾಲಿಟಿಗಳೂ ಈ ಬಗ್ಗೆ ಸಾಲಕೊಡಲು ಉಪಕ್ರಮಿಸಿರುತ್ತಾರೆ.

ಜರ್ಮನ್ ಮಂತ್ರಿ ಸಭೆಯಲ್ಲಿ ಪ್ರೆಸಿಡೆಂಟರು—ಈ ಹೊಸ ವರ್ಷದಲ್ಲಿ ಸಂಧಾನವಾಗುವದು. ನಮ್ಮ ಪ್ರಾಮುಖ್ಯ ಮುಂದಾಳುಗಳೂ ಪ್ರತಾಪವುಳ್ಳ ಸೇನೆಯೂ, ಧೈರ್ಯಶಾಲಿಯಾದ ಜಲಯಾನಗಳೂ ಮಿತ್ರರಾಷ್ಟ್ರಗಳು ಕೇಳಿಕೊಂಡ ಮಟ್ಟುಮೀರಿದ ಮತ್ತು ಅಸಂಗತವಾದ ಶರ್ತಗಳಿಗೆ ತಕ್ಕ ಉತ್ತರವನ್ನು ಕೊಡದೆ ಇರಲಾರವು ಎಂದು ಹೇಳಿರುವರು. ಜರ್ಮನ್ ಕೋಶಾಧಿಕಾರಿಗಳು ಹೀಗೆಂದು ಹೇಳಿರುವರು—ಶತ್ರುಗಳು ಜರ್ಮನಿಯನ್ನು ನಾಶಮಾಡಿ ಬಿಡುತ್ತೇವೆಂತ ಹೇಳಿರುವರಾದರೂ ಇದು ಯುದ್ಧಕಾಲದ ಕಡೆಯ ಜಮಾ ವೆಚ್ಚಗಳ ಅಂದಾಜು ಪಟ್ಟಿಯಾಗಿದ್ದೆ. ವ್ಯಾಪಾರವು ನಿಲ್ಲಿಸಲ್ಪಟ್ಟಿದ್ದರಿಂದ ಕಷ್ಟವು ಬಂದಿರುವದಾದರೂ ಯಾರಾದರೂ ಈ ವರೆಗೆ ಹೊಟ್ಟೆಗಿಲ್ಲದೆ ಬಳಲಿರುವದಿಲ್ಲ. ವ್ಯಾಪಾರಸಾಹಾರಗಳು ನಡೆಯದ ಹಾಗೆ ಮಾಡಿ ಜರ್ಮನಿಯನ್ನು ಗೆಲ್ಲುತ್ತೇವೆಂದು ಶತ್ರುಗಳು ನಂಬಿದ್ದರೆ ಅದು ಅವರ ತಪ್ಪು ಅಭಿಪ್ರಾಯವಾಗಿದೆ. ಜರ್ಮನಿಯು ಇನ್ನು ಮತ್ತೂ ಕಷ್ಟತರವಾದ ತಿಂಗಳುಗಳನ್ನು ದಾಟಲಿಕ್ಕಿದೆ. ಭೀಕರ ಕದನಗಳನ್ನು ಮಾಡಿ ವಿಶೇಷ ರಕ್ತ ಚೆಲ್ಲುವ ಕಾಲವು ಅದಕ್ಕೆ ಇದೆ. ಆದರೆ ಕಡೆಗೆ ಜಯವು ಜರ್ಮನಿಗೆ ಆಗುವದೆಂತ ಎಲ್ಲರೂ ನಂಬಬೇಕು ಎಂತ ಹೇಳಿರುವನು.

ಬೆಲ್ಜಿಯಮಿನಿಂದ ಜರ್ಮನಿಗೆ ಕೊಂಡುಹೋದ ಬೆಲ್ಜಿಯಮ್ ಜನರನ್ನು ಅಲ್ಲಿ ಚೆನ್ನಾಗಿ ಗೇಯಿಸಿ, ಸಾಯಲಿಕ್ಕೆ ಹತ್ತಿರವಾಗುವಾಗ ಪುನಃ ಅವರನ್ನು ಬೆಲ್ಜಿಯಮಿಗೆ ಹಿಂದೆ ಕಳುಹಿಸಿರುವರು. ಹೀಗೆ ಹಿಂದೆ ಬಂದ ಜನರಲ್ಲಿ ಶೇಕಡಾ ೭೫ರಂತೆ ಸತ್ತಿರುವರು.

ಲಂಡನಿನ ಬದ್ಯಬಾಜಿನಲ್ಲಿದ್ದ ಮದ್ದುಗುಂಡುಗಳನ್ನು ಮಾಡುವ ಕಾರ್ಖಾನೆಯೊಂದರಲ್ಲಿ ಸಿಡಿತ ಉಂಟಾಗಿ ದೊಡ್ಡ ಅಪಾಯ ಸಂಭವಿಸಿರುವದು. ಕಾರ್ಖಾನೆಯಲ್ಲಿದ್ದ ಎಲ್ಲಾ ಸಿಡಿಮದ್ದುಗಳು ಸಿಡಿದುಹೋಗಿರುತ್ತದೆ. ಇದಕ್ಕೆ ಸಮೀಪವಿದ್ದ ಕಾರ್ಖಾನೆಗಳಲ್ಲಿಯೂ ಬೆಂಕಿ ಉಂಟಾಗಿರುವದು. ಈ ಕಾರ್ಖಾನೆಯ ಆಜುಬಾಜಿನಲ್ಲಿದ್ದ ಮೂರು ಸಾಲು ಮನೆಗಳು ಕೆಡವಲ್ಪಟ್ಟಿರುವವು. ಕಾರ್ಖಾನೆಯ ಕೆಲಸಗಾರರಲ್ಲಿ ೫೦—೬೦ ಮಂದಿ ಸತ್ತಿರುವರು. ೧೦೦—೨೦೦ ಮಂದಿಗೆ ಗಾಯಗಳಾಗಿವೆ. ಸತ್ತವರ ಪೂರ್ಣ ಸಂಖ್ಯೆಯು ಎಷ್ಟೆಂಬದು ಇನ್ನೂ ತಿಳಿಯಲಿಲ್ಲ. ೧೭ ಮೈಲುಗಳ ದೂರಕ್ಕೆ ಸಿಡಿತದ ಶಬ್ದವು ಕೇಳಿರುವದು.

ಉತ್ತರ ಹಿಂದೂಸ್ಥಾನ.

ಫಿಜಿ ಮೊದಲಾದ ದ್ವೀಪಗಳಿಗೆ ಹಿಂದೀಗಳು ಕೆಲಸದ ಬಗ್ಗೆ ಹೋಗಿ ಅಲ್ಲಿಯ ತೋಟಗಾರರಿಂದ ಪಡುತ್ತಿರುವ ಕಷ್ಟಗಳನ್ನು ಪ್ರಜಾ ಮುಂದಾಳುಗಳು ಆಗ್ಗಾಗ್ಗೆ ಹಿಂದೂಸ್ಥಾನ ಸರಕಾರದ ಚಿತ್ತಕ್ಕೆ ತಂದು ಕಡೆಗೆ ೧೯೧೬ನೇ ಇಸವಿಯಲ್ಲಿ ಈ ಸಂಬಂಧ ಶ್ರೇಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ತಂದ ಮಸೂದೆಯು ಇಂಡಿಯಾ ಸರಕಾರದವರಿಂದ ಅಂಗೀಕರಿಸೋಣಾಗಿತ್ತು. ಈ ಮಸೂದೆಯು ಸರಕಾರದವರಿಂದ ಅಂಗೀಕರಿಸೋಣಾಗಿ ಒಂದು ವರುಷ ದಾಟಿಹೋದರೂ ಈ ಪದ್ಧತಿಯನ್ನು ನಿಲ್ಲಿಸುವ ಆಜ್ಞೆಯು ಸರಕಾರದವರಿಂದ ಇನ್ನೂ ಆಗಲಿಲ್ಲ. ತನ್ಮಧ್ಯೆ ಫಿಜಿ ತೋಟಗಾರರು ಹಿಂದೂಸ್ಥಾನದ ಕೆಲಸಗಾರರನ್ನು ಈ ದ್ವೀಪಗಳಿಗೆ ಕಳುಹಿಸುವ ಪದ್ಧತಿಯನ್ನು ಮನ್ನಾಮಾಡದ ಹಾಗೆ, ಪ್ರಯತ್ನಿಸಿರುವರೆಂದೂ ಇನ್ನೂ ೫ ವರ್ಷಗಳ ವರೆಗೆ ಈ ಪದ್ಧತಿಯು ಮನ್ನಾ ಆಗುವ ಹಾಗೆ ಇಲ್ಲವೆಂಬದಾಗಿ ಲಂಡನಿನಿಂದ ಫಿಜಿದ್ವೀಪದ ತೋಟಗಾರರಿಗೆ ತಕ್ಕ ಭರವಸೆ ಸಿಕ್ಕಿರುವದೆಂದೂ ಈಗ ತಾನೇ ಬೋಲಾಪುರದಿಂದ ಮಿ| ಅಂಡ್ರೂಸರವರು ಬರೆದಿರುವರು. ಹಿಂದೂಸ್ಥಾನದಿಂದ ಫಿಜಿದ್ವೀಪಗಳಿಗೆ ಕೆಲಸಗಾರರು ೩ ಗಂಡಸರಿಗೆ ೧ ಹೆಂಗಸಿನಂತೆ ಈಗಲೂ ಕಳುಹಿಸಲ್ಪಡುತ್ತಿದ್ದಾರೆ. ಕಳೆದ ವಾರ ಇಂಥಾ ಗಂಡಸರೂ ಹೆಂಗಸರೂ ತುಂಬಿದ ಒಂದು ಹಡಗವು ಫಿಜಿದ್ವೀಪಕ್ಕೆ ಮುಟ್ಟಿರುವದೆಂತ ಮಿ| ಅಂಡ್ರೂಸರವರಿಗೆ ವಾರ್ತೆ ಸಿಕ್ಕಿರುವದರಿಂದ ಇಂಥಾ ಅಮಾನುಷ ಪದ್ಧತಿಯನ್ನು ಬೇಗನೇ ನಿಲ್ಲಿಸುವ ಚಳವಳವು ಹಿಂದೂಸ್ಥಾನದಲ್ಲಿ ನಡೆಯಬೇಕೆಂತ ಫಿಜಿದ್ವೀಪಗಳನ್ನು ಸಂದರ್ಶಿಸಿ ಅಲ್ಲಿರುವ ಹಿಂದೂಸ್ಥಾನದ ಕೂಲಿಯಾಳುಗಳಿಗೆ ಆಗುವ ದುರವಸ್ಥೆಯನ್ನು ಚೆನ್ನಾಗಿ ಪರಿಶೋಧಿಸಿದ ಮಿ| ಅಂಡ್ರೂಸರವರು ವಿಜ್ಞಾಪಿಸಿಕೊಂಡಿರುತ್ತಾರೆ.

ಮುರ್ಶಿದಾಬಾದಿನ ನವಾಬರವರು ಮುರ್ಶಿದಾಬಾದಿನ ತನ್ನ ಪ್ರಖ್ಯಾತ ಅರಮನೆಯನ್ನು ಯುದ್ಧದಲ್ಲಿ ಗಾಯಪಡೆದ ಸೈನಿಕರ ಉಪಯೋಗಾರ್ಥವಾಗಿ ಬಿಟ್ಟುಕೊಟ್ಟಿರುತ್ತಾರೆ.

ಅಹಮ್ಮದಾಬಾದಿನಲ್ಲಿ ನಡೆದ ಮುಂಬಾಯಿ ಪ್ರಾಂತಿಕ ಸಭೆಯ ಹಂದರದಲ್ಲಿ ಸಿ. ಐ. ಡಿ. ಇಲಾಖೆಯವರಿಂದ ಕಳುಹಿಸೋಣಾದ ೩ ರಿಪೋರ್ಟರರುಗಳಿಗೆ ತಕ್ಕ ಸ್ಥಳವನ್ನು ಏರ್ಪಡಿಸಿ ಕೊಡಬೇಕೆಂಬದಾಗಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಕೊಟ್ಟ ಹುಕುಂ ನ್ಯಾಯವಲ್ಲವೆಂಬ ಸಬಬಿನ ಮೇಲೆ ಪ್ರಾಂತಿಕ ಸಭೆಯ ಸೆಕ್ರೆಟರಿಗಳು ಮುಂಬಾಯಿ ಹೈಕೋರ್ಟಿನಲ್ಲಿ ಮನವಿಯನ್ನು ಮಾಡಿಕೊಂಡಿದ್ದರು. ಜಸ್ಟಿಸ್ ಬೆಚಿಲರ್ ಮತ್ತು ಷಾಹರವರು ಈ ದಾವೆಯು ಹೈಕೋರ್ಟಿನ ಅಧಿಕಾರದ ವ್ಯಾಪ್ತಿಯಲ್ಲಿ ತಮಗೆ ಪ್ರವೇಶವಾಗುವದಕ್ಕಾಗುವದಿಲ್ಲ ಎಂಬದಾಗಿ ಅಭಿಪ್ರಾಯವಿಟ್ಟು ಈ ಮನವಿಯನ್ನು ತಳ್ಳಿಹಾಕಿರುತ್ತಾರೆ.

ಮುಂಬಾಯಿ ಸಂಸ್ಥಾನಕ್ಕೆ ಸೇರಿದ ಕರ್ಕಿಯಲ್ಲಿ ತಾ. ೧೮ರಲ್ಲು ಸರ್ಜೆಂಟ್ ರಿಚರ್ಡ್‌ಸನ್ ಹಿಲ್ ಮತ್ತು ಇವರ ೧೧ ವರ್ಷದ ಮಗಳಿಗೆ ಲೆಪ್ಟಿನೆಂಟ ಮೆಕ್‌ವಿಲಿಯಂ ಎಂಬವನು ಗುಂಡು ಹೊಡೆದಿರುವನು. ಸರ್ಜೆಂಟ್ ಹಿಲ್ಲನು ಮೆಸಪೊಟಾಮಿಯಕ್ಕೆ ಹೋಗಲಿಕ್ಕಿದ್ದನು. ಹೋಗುವ ಮೊದಲು ತನ್ನ ಹೆಂಡತಿ ಮತ್ತು ಮಕ್ಕಳು ಎಲ್ಲಿದ್ದಾರೆಂಬುದನ್ನು ವಿಚಾರಿಸುವರೆ ಫಕ್ಕನೆ ಕರ್ಕಿಗೆ ಬಂದನು. ಕರ್ಕಿಯಲ್ಲಿ ಬಂದಾಗ ಅವನ ಹೆಂಡತಿಯು ಲೆಪ್ಟಿನೆಂಟ ಮೆಕ್‌ವಿಲಿಯಮನೊಡನೆ ಕರ್ಕಿಯ ರಿಕ್ರಿಯೇಶನ್ ಕ್ಲಬ್ಬಿನಲ್ಲಿದ್ದಾಳೆಂಬದಾಗಿ ತಿಳಿದು ಬಂದುದರಿಂದ ಅಲ್ಲಿಗೆ ಹೋಗಿ ಲೆಪ್ಟಿನೆಂಟ ಮೆಕ್‌ವಿಲಿಯಂನೊಡನೆ ಮಾತನ್ನಾಡಿ ತನ್ನ ಹೆಂಡತಿಯನ್ನು ಹಿಂದೆ ಕರಕೊಂಡು ಹೋಗಲಿಕ್ಕಿದ್ದನು. ಆದರೆ ರಾತ್ರಿಕಾಲ ಈ ಪ್ರಸ್ತಾಪದಲ್ಲಿ ಏನೋ ಮಾತಿಗೆ ಮಾತು ನಡೆದ್ದರಿಂದ ಲೆಪ್ಟಿನೆಂಟ ವಿಲಿಯಮನು ಸಿಟ್ಟಾಗಿ ಕೋಣೆಯೊಳಗೆ ಹೋಗಿ ರಿವೋಲ್ವರ್ ತೆಗೆದು ಗುಂಡು ಹಾರಿಸಿದನು. ಈ ಗುಂಡು ಸರ್ಜೆಂಟ್ ಹಾಲನಿಗೂ ಅವನ ಚಿಕ್ಕ ಮಗಳಿಗೂ ಬಿತ್ತು. ಇಬ್ಬರೂ ಆಸ್ಪತ್ರಿಗೆ ಸಾಗಿಸಲ್ಪಟ್ಟರು. ಲೆಪ್ಟಿನೆಂಟ ಮೆಕ್‌ವಿಲಿಯಮನನ್ನು ಪೋಲೀಸಿನವರು ಕೈದುಮಾಡಿರುತ್ತಾರೆ.

ಮಾಜಿ ತಾಯಿ ಮಹಾರಾಜಿಯ ದತ್ತ ಪುತ್ರ ಶ್ರಿ ಜಗನ್ನಾಥ ಪಂಡಿತರವರಿಗೆ ಸರಕಾರದ ಸ್ವಾಧೀನವಿದ್ದ ಆಸ್ತಿಯನ್ನು ಇನ್ನೂ ಬಿಟ್ಟುಕೊಡಲಿಲ್ಲವಾದುದರಿಂದ ಶ್ರೀ ಜಗನ್ನಾಥ ಪಂಡಿತರವರು ಪೂನೆಯ ಕೋರ್ಟಿನಲ್ಲಿ ಸ್ಟೇಟ್ ಸೆಕ್ರಟರಿಯವರ ಮೇಲೆ ದಾವೆ ತಂದಿದ್ದರು. ಆದರೆ ಇದೇ ತಾ. ೧೮ರಲ್ಲು ಪೂನೆಯ ಕಲೆಕ್ಟರವರು ಶ್ರೀ ಜಗನ್ನಾಥ ಪಂಡಿತರವರಿಗೆ ಆಸ್ತಿಯನ್ನು ಸ್ವಾಧೀನ ತಕೊಳ್ಳಬಹುದೆಂದು ತಿಳಿಸಿರುತ್ತಾರೆ. ಆದುದರಿಂದ ಆ ದಾವೆಯು ಹಿಂತೆಗೆಯಲ್ಪಡುವ ಹಾಗಿದೆ.

ನಾಗಪುರದಲ್ಲಿ ವಿಠೋಬ ಮತ್ತು ಇತರ ಎಂಟು ಮಂದಿ ಕೂಡಿ ಗೋಮು ಎಂಬವನನ್ನು ಜೀವಿತನಾಗಿರುವಾಗಲೇ ಹೂಣಿಟ್ಟರು ಎಂಬದಾಗಿ ಅಪಾದಿಸಲ್ಪಟ್ಟಿದ್ದರು. ಲಾವಣ್ಯ ಎಂಬವನೊಬ್ಬನು ವಾಂತಿಭೇದಿಯಿಂದ ಸತ್ತುಹೋದನು. ಈ ಒಂಭತ್ತು ಅಪಾದಿತರೂ ಗೋಮನೂ ಆ ಶವವನ್ನು ಹೊತ್ತುಕೊಂಡು ಸ್ಮಶಾನಕ್ಕೆ ಹೋಗಿದ್ದರು. ಆದರೆ ಗೋಮನು ಮಂತ್ರತಂತ್ರಗಳಿಂದ ರೋಗಗಳನ್ನು ಗುಣಮಾಡುವವನೆಂದೂ ಈ ವಾಂತಿಭೇದಿಯು ಬರುವಹಾಗೆ ಇವನೇ ಮಾಡಿದುದೆಂದೂ ಅವರೊಳಗೆ ಮೂಢನಂಬಿಕೆ ಇದ್ದುದರಿಂದ ಆ ಒಂಭತ್ತು ಅಪಾದಿತರು ಶವದೊಡನೆ ಈ ಗೋಮುನನ್ನೂ ಕುಣಿಗೆ ಹಾಕಿ ಜೀವಿತನಾಗಿಯೇ ಸಮಾಧಿ ಮಾಡಿದರು. ನಾಗಪುರದ ಸೆಶನ್ಸ್ ಜಡ್ಜರು ಈ ಮೊಕದ್ದಮೆಯನ್ನು ತನಿಕಿ ನಡಿಸಿ ೯ ಜನರಿಗೂ ಮರಣ ಶಿಕ್ಷೆಯನ್ನು ವಿಧಿಸಿದರು. ಈ ತೀರ್ಮಾನದ ಮೇಲೆ ಅಪಾದಿತರು ಅಪೀಲುಮಾಡಿಕೊಂಡಿದ್ದಾರೆ.

ಜನವರಿ ತಾ. ೧೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ೧೧,೫೫೧ ಮಂದಿ ಪ್ಲೇಗ ಬೇನೆಗೆ ತುತ್ತಾಗಿರುತ್ತಾರೆ. ಈ ಪೈಕಿ ಮುಂಬಾಯಿ ಮತ್ತು ಸಿಂಧಿನಲ್ಲಿ ೪೩೦೩, ಮದ್ರಾಸ್ ೫೩೪; ಬಿಹಾರ್ ಮತ್ತು ಒರಿಸ್ಸ ೪೪೬; ಸಂಯುಕ್ತ ಸಂಸ್ಥಾನ ೧೬೮೦; ಪಂಜಾಬು ೨೫; ಬರ್ಮ ೧೨೯; ಮಧ್ಯ ಸಂಸ್ಥಾನ ೧೦೬೭; ಮೈಸೂರು ೩೩೭; ಹೈದರಾಬಾದ್ ೨೪೭; ಮಧ್ಯ ಹಿಂದೂಸ್ಥಾನ ೧[illegible]; ರಾಜಪುತಾನ ೧೫; ವಾಯುವ್ಯ ಸರಹದ್ದು ೧ ಮರಣಗಳಾಗಿರುವವು.

ಸಾಮ್ರಾಜ್ಯ ಯುದ್ಧಪರಿಷತ್ತಿಗೆ ಹಿಂದೂಸ್ಥಾನದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟ ಸ್ಟೇಟ್ ಸೆಕ್ರೆಟರಿಯವರಿಗೆ ಬೇಕಾದ ಸಲಹೆಗಳನ್ನು ಕೊಡುವರೆ ಹಿಂದೂಸ್ಥಾನದಿಂದ ಸರ್. ಎಸ್. ಪಿ. ಸಿನ್ಹರವರು, ಬಿಕಾನಿರಿನ ಮಹಾರಾಜರು ಮತ್ತು ಸರ್. ಜೇಮ್ಸ್ ಮೆಸ್ಟನರು ಆರಿಸಲ್ಪಟ್ಟಿರುತ್ತಾರೆಂತ ಈಗ ತಾನೇ ಪ್ರಕಟವಾಗಿದೆ. ಸರ್. ಪಿ. ಸಿನ್ಹ ರವರು ಸಮರ್ಥರಾದ ವಕೀಲರು, ವ್ಯಾಸರಾಯ ಕಾರ್ಯನಿರ್ವಾಹಕ ಸಭೆಯಲ್ಲಿ ಮೆಂಬರರಾಗಿದ್ದವರು, ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದವರಾದ್ದರಿಂದ ಇವರನ್ನು ಆರಿಸಿದ್ದರಿಂದ ಹಿಂದೀ ಜನಸಾಮಾನ್ಯರಲ್ಲಿ ತೃಪ್ತಿಯುಂಟಾಗಿದೆ. ಬಿಕಾನಿರ್ ಮಹಾರಾಜರು ರಜಪುತಾನದ ಕುಲೀನರು. ೧೯೧೫ನೇ ಇಸವಿಯಲ್ಲಿ ಹಿಂದೂಸ್ಥಾನದ ಸೇನೆಯೊಂದಿಗೆ ರಣರಂಗಕ್ಕೆ ಹೋಗಿದ್ದವರು. ಹಿಂದೂಸ್ಥಾನದ ದೇಶೀಯ ರಾಜ್ಯಗಳ ಪರವಾಗಿ ಆರಿಸಲ್ಪಟ್ಟಿದ್ದಾರೆ. ಇವರು ಹಿಂದೀಗಳನ್ನು ಸೇನೆಯಲ್ಲಿ ಸೇರಿಸಿಕೊಳ್ಳು, ಪದವಿ ಮೊದಲಾದ ಬದಲಾವಣೆಗಳನ್ನು ಸೂಚಿಸುವ ಸಂದರ್ಭದಲ್ಲಿ ಸರ್. ಸಿನ್ಹರಿಗೆ ಬೇಕಾದ ಸಹಾಯ್ಯವನ್ನು ಮಾಡುವರು ಎಂಬ ನಂಬಿಕೆಯು ತುಂಬಾ ಇದೆ. ಸರ್. ಜೇಮ್ಸ್ ಮೆಸ್ಟನರನ್ನು ಆರಿಸಿದ ವಿಷಯದಲ್ಲಿ ಮಾತ್ರ ಹಿಂದೂಸ್ಥಾನದಲ್ಲಿ ತೃಪ್ತಿ ಉಂಟಾಗಲಿಲ್ಲ. ಸರ್. ಮೆಸ್ಟನರು ಹಿಂದೀಗಳ ಆಕಾಂಕ್ಷೆಯ ಕಡೆಗೆ ಸಮದೃಷ್ಟಿಯುಳ್ಳವರಲ್ಲ. ಯುನೈಟೆಡ್ ಪ್ರೊವಿನ್ಸಿನ ರಾಜ್ಯಭಾರವನ್ನು ನಡಿಸುವ ಇವರು ಯುನೈಟೆಡ್ ಪ್ರೊವಿನ್ಸಿನ ಜನರ ಪ್ರೀತಿ ಮನ್ನಣೆಗೆ ಪಾತ್ರರಾಗಿರುವದಿಲ್ಲ. ಅಷ್ಟೇ ಅಲ್ಲ, ಹಿಂದೂಸ್ಥಾನದ ಮೇಲೆ ವಸಾಹತಿಗಳ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸುವ ಕರ್ಟಿಸರ ಅನುಮೋದಕರು. ಆದುದರಿಂದ ಇವರ ನೇಮಕವು ಸರಿಯಲ್ಲವೆಂಬದಾಗಿ ಹಿಂದೂಸ್ಥಾನದ ಪತ್ರಿ...

ಅನುಕ್ರಮಣಿಕೆ.

	ಪಾನು.
ಅಗ್ರಲೇಖ — ಭಾವಿ ಸ್ವರಾಜ್ಯದ ಯೋಜನೆ	೬
ಸ್ಫುಟಲೇಖ:—	
೧ ಮಿ। ಕರ್ಟಿಸರ ಉಪದ್ವ್ಯಾಪ	„
೨ ರೈಲು ಚಲಾವಣೆಯ ಸಂಕೋಚ.	„
೩ ದಿ. ಬಹದ್ದೂರ್ ರಾಮಚಂದ್ರ ರಾಯರು	„
೪ ಕೃಷಿಯ ಅಭಿವೃದ್ಧಿ	„
೫ ಮಂಗಳೂರ ಬಂದರ	೫
ವರ್ತಮಾನ ಸಂಗ್ರಹ—	
ಸ್ಥಳಿಕ — ಮಂಗಳೂರು	„
ಯುರೋಪದ ಮಹಾಯುದ್ಧ	೩
ವಿದೇಶವೃತ್ತಾಂತ	„
ಉತ್ತರಹಿಂದೂಸ್ಥಾನ	„
ಪತ್ರವ್ಯವಹಾರ ಮತ್ತು ಬಾತಮಿಗಳು—	೭

ಸ್ವದೇಶಾಭಿಮಾನಿ.

ಶಕ ೧೮೩೯ ಮಾಘ. ಶು. ೩ ಶುಕ್ರವಾರ.

ಭಾವಿ ಸ್ವರಾಜ್ಯದ ಯೋಜನೆ.

ಗತಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ ಈಹೊತ್ತು ರಾಷ್ಟ್ರೀಯ ಸಭೆ ಮತ್ತು ಮುಸ್‌ಲಿಮ್-ಲೀಗಿನವರು ಒಟ್ಟು ಸೇರಿ ಸ್ವರಾಜ್ಯದ ಯಾವ ಯೋಜನೆಯನ್ನು ತಯಾರಿಸಿರುವರೋ ಅದನ್ನು ವಾಚಕರಿಗೆ ತಿಳಿಸುವುದು ನಮ್ಮ ಕರ್ತವ್ಯವು. ಆ ಯೋಜನೆಯು ಬಹು ದೊಡ್ಡದಿಲ್ಲವಾದರೂ ಅದನ್ನೆ ಅಕ್ಷರಶಃ ವಾಚಕರ ಮುಂದಿಡುವುದೆಂದರೆ ಅದು ಸ್ವಲ್ಪ ಉದ್ದವೆ ಆದೀತು. ಆದುದರಿಂದ ಅದರ ಮುಖ್ಯಾಂಶವನ್ನು ಮಾತ್ರ ಕೆಳಗೆ ಕೊಡುತ್ತೇವೆ.

(೧) ವರಿಷ್ಠ ಮತ್ತು (೨) ಪ್ರಾಂತಿಕ ಕೌನ್ಸಿಲುಗಳು, (೩) ವರಿಷ್ಠ, ಹಾಗೂ (೪) ಪ್ರಾಂತಿಕ ಸರಕಾರಗಳು, (೫) ಸೆಕ್ರೆಟರಿ ಆಫ್ ಸ್ಟೇಟ್-ಇನ್-ಕೌನ್ಸಿಲ್ (೬) ಸೈನ್ಯ ಮತ್ತು ರಾಜಕಾರಣದ ಇತರ ಬಾಬುಗಳು ಇಷ್ಟು ಸಂಗತಿಗಳು ಆ ಯೋಜನೆಯಲ್ಲಿ ನಮೂದಿಸಲ್ಪಟ್ಟಿವೆ. ಇವುಗಳ ವಿವರಣೆಯೇನೆಂದರೆ, ಪ್ರಾಂತಿಕ ಕೌನ್ಸಿಲುಗಳಲ್ಲಿ ೪/೫ ಲೋಕನಿಯುಕ್ತ ಸಭಾಸದರೂ ೧/೫ ಸರಕಾರ ನಿಯುಕ್ತರೂ ಇರಬೇಕು. ವರಿಷ್ಠ ಕೌನ್ಸಿಲಿನಲ್ಲಿ ೧೫೦ ಸಭಾಸದರು. ಇವರಲ್ಲಿ ೪/೫ ಲೋಕನಿಯುಕ್ತರಿರಬೇಕು. ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರನ್ನು ಚುನಾಯಿಸಿಕೊಡುವ ಅಧಿಕಾರವನ್ನು ಈಗಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಿಂದ ಹೆಚ್ಚಿನ ಜನರಿಗೆ ಕೊಡಬೇಕು. ಅಲ್ಪಸಂಖ್ಯೆಯ ಜನರ ಹಿತರಕ್ಷಣೆಗಾಗಿ ಸಾಕಷ್ಟು ಲೋಕನಿಯುಕ್ತ ಪ್ರತಿನಿಧಿಗಳನ್ನು ಹಚ್ಚಿ ತೆಕ್ಕೊಳ್ಳುವಂತೆ ವ್ಯವಸ್ಥೆಯನ್ನು ಮಾಡಬೇಕು. ಮುಸಲಮಾನರ ಮತದಾರಸಂಘವನ್ನು ಬೇರೆಮಾಡಿ ಅವರಿಂದಲೆ ಅವರ ಪ್ರತಿನಿಧಿಗಳನ್ನು ಚುನಾಯಿಸಿ ಕೊಡಬೇಕು. ಆದರೆ ಅನಂತರ ಅವರು ಬೇರೆಯವರ ಚುನಾವಣೆಯಲ್ಲಿ ತಿರಿಗಿ ಸೇರಕೂಡದು. ಪ್ರಾಂತಿಕ ರಾಜ್ಯವ್ಯವಸ್ಥೆಯ ಮುಖ್ಯಾಧಿಕಾರಿಯು ಆ ಕೌನ್ಸಿಲುಗಳ ಅಧ್ಯಕ್ಷನಾಗಿರಕೂಡದು. ವರಿಷ್ಠ ಕೌನ್ಸಿಲಿನ ಅಧ್ಯಕ್ಷನು ಕೌನ್ಸಿಲಿನ ಸಭಾಸದರಿಂದಲೆ ಚುನಾಯಿಸಲ್ಪಟ್ಟವನಿರಬೇಕು. ಕೌನ್ಸಿಲುಗಳಲ್ಲಿ ಮೂಲಪ್ರಶ್ನೆಯನ್ನು ಕೇಳುವವನಿಗೆ "ಪುರವಣಿ"ಯ ಪ್ರಶ್ನೆಯನ್ನು ಕೇಳುವ ಹಕ್ಕಿದ್ದಂತೆ ಬೇರೆ ಸಭಾಸದರಿಗೂ ಈ ಹಕ್ಕು ಇರಬೇಕು. ಕೌನ್ಸಿಲುಗಳ ರಚನೆಯ ಬಗ್ಗೆ ಇಷ್ಟು ಸಂಗತಿಗಳನ್ನು ಹೇಳಿ ಮುಂದೆ ಆ ಯೋಜನೆಯಲ್ಲಿ ಹಣದ ಉತ್ಪತ್ತಿಯ ಕುರಿತು ವಿವರಿಸುವಾಗ—ಬಂದರದ ಆಯಾತ ನಿರ್ಗತ ಮಾಲುಗಳ ಜಕಾತು, ತಾರಾಯಂತ್ರ, ಪೋಸ್ಟು, ಉಪ್ಪು, ಅಫೀಮು, ರೈಲು ಮುಂತಾದವುಗಳ ಉತ್ಪತ್ತಿ ಹಾಗು ಸಂಸ್ಥಾನಿಕರ ಕಪ್ಪ ಇವುಗಳಲ್ಲದೆ ಬೇರೆ ಇಲಾಖೆಗಳ ಉತ್ಪತ್ತಿಯು ಪ್ರಾಂತಿಕ ಸರಕಾರದ ಕಡೆಗಿರಬೇಕೆಂದು ತೋರಿಸಿದೆ. ಪ್ರಾಂತಿಕ ಸರಕಾರದ ಮತ್ತು ವರಿಷ್ಠ ಸರಕಾರದೆಂಬುದಾಗಿ ವಸೂಲಿನ ಯಾವ ಎರಡು ವಿಧಗಳಿರುವವೋ ಅವುಗಳನ್ನು ನಿಲ್ಲಿಸಿ ಒಂದೆ ಪ್ರಕಾರಗಳನ್ನಿಟ್ಟುಕೊಳ್ಳಬೇಕು: ಮತ್ತು ವರಿಷ್ಠ ಸರಕಾರಕ್ಕೆ ಪ್ರಾಂತಿಕ ಸರಕಾರವು ತನ್ನ ಉತ್ಪತ್ತಿಯೊಳಗಿನ ಕೆಲವು ಭಾಗವನ್ನು ಕೊಡಬಹುದು. ತಂತಮ್ಮ ಪ್ರಾಂತಗಳೊಳಗಿನ ಕಾರಭಾರವು—ಸಾಲ ತೆಕ್ಕೊಳ್ಳುವುದು, ಕರವನ್ನು ಹೆಚ್ಚು ಕಡಿಮೆ ಮಾಡುವುದು, ಜಮಾ ಖರ್ಚಿನ ಅಂದಾಜು ಪತ್ರಕವನ್ನು ಮಂಜೂರಾಯತು ಮಾಡುವುದು ಮುಂತಾದ ಕಾರಭಾರವು— ಆಯಾ ಪ್ರಾಂತಿಕ ಸರಕಾರದ ಸ್ವಾಧೀನದಲ್ಲಿಯೆ ಇರಬೇಕು. ಸಭಾಸದರ ಮುದ್ದತು ೫ ವರ್ಷಗಳದ್ದಿರಬೇಕು.

ಪ್ರಾಂತಿಕ ರಾಜ್ಯವ್ಯವಸ್ಥೆಯ ಅಧಿಪತಿಯು ಗವರ್ನರನಾಗಿರಬೇಕು. ಐ. ಸಿ. ಎಸಿನ ಅಥವಾ ಬೇರೆ ಯಾವುದಾದರೂ ಕಾಯಮ್ ಕೆಲಸದಲ್ಲಿ ಇದ್ದವನಿಗೆ ಗವರ್ನರಿಯ ಕೆಲಸವನ್ನು ಕೊಡಕೂಡದು. ಗವರ್ನರನಿಗೊಂದು ಕಾರ್ಯಕಾರಿ ಕೌನ್ಸಿಲಿರಬೇಕು. ಇದರ ಮೆಂಬರರು ಇಂಡಿಯನ್ ಸಿವಿಲ್ ಸರ್ವಿಸಿನವರು ಇರಬಾರದು. ಈ ಕೌನ್ಸಿಲಿನಲ್ಲಿಯ ಅರ್ಧದಷ್ಟು ಸಭಾಸದರು ಪ್ರಾಂತಿಕ ಕಾ. ಕೌನ್ಸಿಲಿನವರೇ—ಹಿಂದಿಗಳೇ—ಆಗಿರಬೇಕು. ಇವರ ಮುದ್ದತು ೫ ವರ್ಷದ್ದಿರಬೇಕು. ಹಿಂದೂಸ್ಥಾನದ ಅಧಿಪತಿಯು ಗವರ್ನರ-ಜನರಲನಾಗಿರಬೇಕು. ಇವನ ಕಾರ್ಯಕಾರಿ ಕೌನ್ಸಿಲಿನ ವ್ಯವಸ್ಥೆಯು ಸಾಮಾನ್ಯವಾಗಿ ಪ್ರಾಂತಿಕ ಕೌನ್ಸಿಲಿನಂತೆಯೆ ಸರಿ. ಸ್ಟೇಟ ಸೆಕ್ರೆಟರಿಯ ಕೌನ್ಸಿಲನ್ನು ಮುರಿದು ಹಾಕಬೇಕು. ಅವನಿಗೆ ಸಂಬಳವು ಬ್ರಿಟಿಷ್ ಖಜಾನೆಯಿಂದ ಸಿಗಬೇಕು. ಸ್ವತಂತ್ರ ವಸಾಹತಿನ ಸೆಕ್ರೆಟರಿಯ ಕೈಯಲ್ಲಿ ಯಾವ ತರದ ಕೆಲಸವು ಮತ್ತು ಅಧಿಕಾರವು ಒಪ್ಪಿಸಿರುವುದೊ ಅಷ್ಟೆ ಅಧಿಕಾರವು ಹಿಂದೂಸ್ಥಾನದ ಸೆಕ್ರೆಟರಿಗೆ (ಹಿಂದೂಸ್ಥಾನದ ಮೇಲೆ) ಇರಬೇಕು. ಸೈನ್ಯ ಮತ್ತು ನೌಕಾಸೈನ್ಯಗಳ ವರಿಷ್ಠ ಸ್ಥಾನಗಳು ಹಿಂದಿಜನರ ಕೈಯಲ್ಲಿರಬೇಕು.

ಇವು ಜೋಡು ಸಭೆಯವರು ತಯಾರಿಸಿದ ಭಾವಿ ಸ್ವರಾಜ್ಯದ ಮುಖ್ಯ ಸೂತ್ರಗಳು. ಈ ಸೂತ್ರಗಳನ್ನು ಪರ್ಯಾಲೋಚಿಸಿದ್ದಲ್ಲಿ ಹಿಂದು, ಮುಸಲಮಾನ, ಕ್ರೈಸ್ತ, ಪಾರ್ಸಿ, ಯಹೂದಿ, ಬ್ರಾಹ್ಮಣ, ಅಬ್ರಾಹ್ಮಣ ಮುಂತಾದ ಜಾತಿ ಮತಗಳ ಉಚ್ಚ ನೀಚತ್ವಕ್ಕಾಗಲಿ, ವೈಷಮ್ಯಕ್ಕಾಗಲಿ ಎಡೆ ಕೊಡದೆ ಸಮದೃಷ್ಟಿಯಿಂದ ಪ್ರಾತಿನಿಧಿಕ ತತ್ವದ ಪುರಸ್ಕಾರವನ್ನು ಮಾಡಿದ್ದಾಗಿ ಕಂಡು ಬಂದೀತು. ಸ್ವರಾಜ್ಯವೆಂದರೆ ಬೇರೆ ಏನೂ ಅಲ್ಲ, ನಾವು ಹಿಂದಿನ ಸಂಚಿಕೆಯಲ್ಲಿ ಹೇಳಿದ್ದಂತೆ ಒರೆ ಪ್ರಾತಿನಿಧಿಕ ಸತ್ತೆಯಾಗಿದೆ. ಇದನ್ನು ನಮ್ಮ ದಯಾಳು ಸರಕಾರವು ಪುರೈಸುವುದರಲ್ಲಿ ಹಿಂದೆ ಮುಂದೆ ನೋಡಿದರೆ ನಮ್ಮ ಹಿಂದೀ ರಾಷ್ಟ್ರದ ಭಾಗ್ಯವು ಬಹು ದೂರದಲ್ಲಿ ಇದೆಂದು ಹೇಳಬೇಕಾಗುತ್ತದೆ. ವರಿಷ್ಠ ನ್ಯಾಯವಿಧಾಯಕ ಕೌನ್ಸಿಲಿನ ೧೯ ಮೆಂಬರು ಕೇಳಿದ ಆ ಸುಧಾರಣೆಗಳಾಗಲಿ, ಈಗಿನ ಈ ಸಭೆಯ ಸುಧಾರಣೆಗಳಾಗಲಿ ಬ್ರಿಟಿಷ್ ಸತ್ತೆಯ ಮೂಲತತ್ವಕ್ಕೆ ಬಾಧಕಗಳಾಗಿಲ್ಲಾದುದರಿಂದ ಇವು ನಿರಾಕ್ಷೇಪವಾಗಿವೆಂದು ಹೇಳಲು ನಮಗೆ ಯಾವ ಸಂಕೋಚವು ತೋರುವುದಿಲ್ಲ.

ಸ್ಫುಟ ವಿಚಾರಗಳು.

೧. ಮಿ. ಲಿಯೊನಲ ಕರ್ಟಿಸ್ ಎಂಬ ಒಬ್ಬ ವಸಾಹತದ ಗೃಹಸ್ಥರ ಹೆಸರನ್ನೂ ಅವರ ಕಾರಸ್ಥಾನವನ್ನೂ ಕನ್ನಡಿಗರು ತಿಳಿದುಕೊಳ್ಳುವುದು ಆಗತ್ಯವಾಗಿದೆ. ಇವರು ಪ್ರಾರಂಭಿಸಿದ ಗುಪ್ತಕಾರಸ್ಥಾನದ ಮಥಿತಾರ್ಥವನ್ನು ಹೇಳುವುದಕ್ಕಿಂತ ಮುಂಚೆ ಒಂದು ಸಂಗತಿಯನ್ನು ವಾಚಕರಿಗೆ ತಿಳಿಸುವುದು ಅನುಚಿತವು. ನಮ್ಮ ಹಿಂದುಸ್ಥಾನದ ರಾಜ್ಯಕ್ಕೆ ಇಂಗ್ಲಂಡವು ಧನಿಯು. ವಸಾಹತಗಳು ತಂತಮ್ಮ ಅಂತರ್ಗತ ಕಾರಭಾರದ ಮಟ್ಟಿಗೆ ಸ್ವತಂತ್ರವಾಗಿದ್ದರೂ ಅವು ಇಂಗ್ಲಂಡದ ಕೈಕೆಳಗಿರುವವು. ಆದುದರಿಂದ ಹಿಂದುಸ್ಥಾನದ ರಾಜ್ಯವ್ಯವಸ್ಥೆಯಲ್ಲಿ ಪ್ರತ್ಯಕ್ಷವಾಗಿ ತಲೆಹಾಕುವುದು ಸಾಧ್ಯವಿಲ್ಲ, ನಮ್ಮ ಕಾರಭಾರವನ್ನು ನಡೆಯಿಸಬೇಕಾದುದು ಒಂದೆ ಇಂಗ್ಲಂಡವು. ಹೀಗಿರುವಲ್ಲಿ ಮೇಲ್ಕಂಡ ಕರ್ಟಿಸರು ಒಂದು ಹೊಸ ಪ್ರಶ್ನೆಯನ್ನು ಉಪಸ್ಥಿತ ಮಾಡಿ ಹಿಂದೀ ರಾಷ್ಟ್ರವನ್ನು ಭಯದಲ್ಲಿ ಮುಳುಗಿಸಿದ್ದಾರೆ. ಯುದ್ಧಾಂತ್ಯದಲ್ಲಿ ಬ್ರಿಟಿಷ್ ಸಾಮ್ರಾಜ್ಯದೊಳಗಿನ ವಸಾಹತಗಳಿಗೆ ಯಾವ ಯಾವ ಹೆಚ್ಚಿನ ಅಧಿಕಾರವೂ, ಕಾರಭಾರವೂ ಬೇಕಾದವ್ವುಗಳು ಎಂಬುದನ್ನು ಆಲೋಚಿಸಿ ನಿರ್ಣಯಿಸುವುದಕ್ಕಾಗಿ "ರೌಂಡ ಟೇಬಲ್" ಎಂಬ ಹೆಸರಿನಿಂದ ಒಂದು ಚಳವಳವನ್ನು ಹೊರಡಿಸಿ ವಸಾಹತದವರು ಒಂದು ಸಂಸ್ಥೆಯನ್ನು ಸ್ಥಾಪಿಸಿರುವರು. ಆ ಸಂಸ್ಥೆಯ ಸೆಕ್ರೆಟರಿಗಳಾಗಿ ಮಿ. ಕರ್ಟಿಸರು ಹಿಂದುಸ್ಥಾನಕ್ಕೆ ಬಂದಿರುವರು. ಇವರು ಇಲ್ಲಿ ಒಂದು ಗುಪ್ತ ಪತ್ರಕವನ್ನು ತಯಾರಿಸಿದ್ದಾರೆ. ಅದರ ಆಶಯವೇನೆಂದರೆ, "ಹಿಂದುಸ್ಥಾನಕ್ಕೆ ಸದ್ಯಃ ಸ್ವರಾಜ್ಯವನ್ನು ಕೊಡುವುದು ಆಗತ್ಯವಿಲ್ಲ, ಅದಕ್ಕೆ ಸ್ವಾತಂತ್ರ್ಯವಂತೂ ಕೊಡದೆ ಕೂಡದು. ಇಂಗ್ಲಂಡವು ಇಷ್ಟರವರೆಗೆ ಈ ದೇಶದ ಮೇಲೆ ತನ್ನ ಆಧಿಪತ್ಯವನ್ನು ನಡೆಯಿಸುತ್ತಿದೆ, ಆದರೆ ಇನ್ನು ಮುಂದೆ ವಸಾಹತಗಳ ಕಾರಭಾರವು ಈ ದೇಶದ ಮೇಲೆ ನಡೆಯಬೇಕು." ಕರ್ಟಿಸರ ಈ ಮಥಿತಾರ್ಥವನ್ನು ನೋಡಿ ಪ್ರತಿ ಒಬ್ಬ ಹಿಂದೀ ರಾಷ್ಟ್ರಭಕ್ತನಿಗೆ ಉದ್ವೇಗವುಂಟಾಗದೆ ಇರದು. ವಸಾಹತದ ಇಂಥ ಉಪದ್ವ್ಯಾಪಿ ಗೃಹಸ್ಥರಿಗೆ ಮೆಸ್ಟನ ದೊರೆಗಳಂಥ ಇಲ್ಲಿಯ ದೊಡ್ಡ ದೊಡ್ಡ ಅಧಿಕಾರಿಗಳು ಅನುಮೋದಕರೂ ಸಹಾಯಕರೂ ಆದದ್ದು ನೋಡಿಯಂತೂ ಆ ಉದ್ವೇಗವು ಇನ್ನೂ ದ್ವಿಗುಣಿತವಾಗುವುದು. ವಸಾಹತದ ಬಿಳಿ ಮುಖದವರೂ ಇನ್ನಷ್ಟು ಬಿಗಿದು ಹಿಡಿಯುವ ಹಿಂದೀ ರಾಷ್ಟ್ರದ ಬಂಧನೆಯು ನಮ್ಮ ಸಾಮ್ರಾಜ್ಯ ಸರಕಾರಕ್ಕೆ ಇಷ್ಟವೊ ಹೇಗೆ? ಹಿಂದೀ ಜನರು ಇಂಗ್ಲಂಡದ ಕಾರಭಾರವೇ ಹೆಚ್ಚಾದುದರಿಂದ ಅದನ್ನೆ ಸಂಕೋಚಿಸಲು ಕೇಳಿಕೊಳ್ಳುತ್ತಿರುವಾಗ ಕೇವಲ ಪರಕೀಯರು ಮತ್ತು ಹೊರಗಿನ ಈ ಉಪದ್ವ್ಯಾಪಿಗಳು ನಮ್ಮ ಬಂಧನದ ಹಗ್ಗವನ್ನು ಇನ್ನು ಎಳೆಯಲು ಯತ್ನಿಸುತ್ತಾರಲ್ಲ, ಇದರ ಅರ್ಥವೇನು?

೨. ಪ್ರಕೃತ ಹಿಂದುಸ್ಥಾನದಲ್ಲಿ ರೈಲಗಾಡಿಗಳನ್ನು ಕಡಿಮೆ ಮಾಡುತ್ತಿದ್ದಾರೆ, ಮೊದಲಿನಷ್ಟು ಸಾಮಾನುಗಳ ಅಥವಾ ಪ್ರಯಾಣಿಕರ ಗಾಡಿಗಳು ಈಗ ಬಿಡೋಣಾಗುವದಿಲ್ಲ. ಇದರ ಕಾರಣವೇನೆಂಬುದಾಗಿ ಮದ್ರಾಸಿನ "ಸ್ವದೇಶಮಿತ್ರನ್" ಎಂಬ ಪತ್ರಿಕೆಯ ಎಡಿಟರರು ಸೌಥ್ ಇಂಡಿಯನ್ ರೈಲ್ವೆಯ ಡಿರೆಕ್ಟರರಾಗಿರುವ ಮಿ. ಪ್ರೆಸ್ಟನ್ ಎಂಬವರಲ್ಲಿ ಕೇಳಿದ್ದರು. ಆಗ ಅವರು ಹೇಳಿದ್ದೇನೆಂದರೆ, ಇಂಗ್ಲಂಡದೊಳಗಿನ ಎಲ್ಲ ಕಾರಖಾನೆಯವರು ರಣಸಾಹಿತ್ಯಗಳನ್ನು ಪುರೈಸುವುದರಲ್ಲಿ ತೊಡಗಿರುವುದರಿಂದ ಅಲ್ಲಿಂದ ಹೊಸ ಇಂಜನುಗಳಾಗಲಿ ಬೇರೆ ಸಾಮಾನುಗಳಾಗಲಿ ಇಲ್ಲಿ ಬರುವುದಿಲ್ಲ, ಜಪಾನ ಹಾಗು ಅಮೇರಿಕಾ ಈ ದೇಶಗಳಾದರೂ ಮೊದಲೆ ಯುದ್ಧ ಸಾಹಿತ್ಯಗಳ ಪುರವಣೆಯ ಬಗ್ಗೆ ಕಟ್ಟುಪಾಡು ಮಾಡಿರುವ ಕಾರಣ ತಿರಿಗಿ ಅಲ್ಲಿಂದ ಈ ಸಾಮಾನುಗಳನ್ನು ಇಲ್ಲಿಗೆ ತರಿಸಿಕೊಳ್ಳುವುದು ತುಂಬಾ ಖರ್ಚಿನದಾಗಿದೆ. ಅಲ್ಲದೆ ಇಂಗ್ಲಂಡವು ಯುದ್ಧಭೂಮಿಯಲ್ಲಿ ಸೈನ್ಯದ ಸೌಕರ್ಯಕ್ಕಾಗಿ ಸುಮಾರು ೩೦೦೦ ಮೈಲಷ್ಟು ರೈಲಿನ ಲಾಯಿನನ್ನು ಹಚ್ಚಿಸಿರುವುದರಿಂದ ಆ ಲಾಯಿನಿಗಾಗಿ ಅಮೇರಿಕೆಯಿಂದ ೧೦೦೦ ಇಂಜನುಗಳನ್ನು ಕೊಂಡುಕೊಳ್ಳುವದೆಂತ ಮಾಡಿದೆ. ಇದೆಲ್ಲ ಮುಗಿದ ಹೊರತು ಹಿಂದುಸ್ಥಾನದ ರೈಲಿಗೆ ಸಹಾಯ್ಯ ಮಾಡಲಾಗದು. ಇನ್ನೊಂದಡಚಣೆಯಾವುದೆಂದರೆ ಮೆಸಪೊಟಾಮಿಯಾ ಎಂಬ ಕಡೆಯಲ್ಲಿ ಕಟ್ಟುವ ರೈಲಿಗಾಗಿ ಇಲ್ಲಿಂದಲೆ ಇಂಜನು, ರೂಳು ಮತ್ತು ಬೇರೆ ಸಾಮಾನುಗಳನ್ನು ಕಳುಹಿಸಬೇಕಾಗಿದೆ. ಇಂಥ ಸ್ಥಿತಿಯಲ್ಲಿ ಈಗಿರುವ ಸಾಮಾನುಗಳಿಂದಲೆ ಯುದ್ಧ ಸಮಾಪ್ತಿಯ ತನಕ ನಿರ್ವಾಹ ಮಾಡುವುದು, ಸಮಯವನ್ನು ದೂಡಿಕೊಂಡು ಹೋಗುವುದು ಅವಶ್ಯವಾಗಿದೆ. ಯುದ್ಧವು ಒಂದು ವರ್ಷದೊಳಗೊ, ಮೂರೊ, ಐದೊ, ಎಷ್ಟು ವರ್ಷದೊಳಗೆ ಮುಗಿದೀತೆಂದು ಯಾರು ಹೇಳುವರು? ಆದುದರಿಂದ ಇಲ್ಲಿ ಇದ್ದ ಸಾಮಾನುಗಳು ಆದಷ್ಟು ದೀರ್ಘಕಾಲದ ವರೆಗೆ ಉಪಯೋಗಿಸುವಂತೆ ಏರ್ಪಾಡಿಸುವುದೆಂದರೆ ಅವುಗಳ ಚಲಾವಣೆಯನ್ನು ಆದಷ್ಟು ಕಡಿಮೆ ಮಾಡುವುದೆ ಸರಿ. ಈ ದೃಷ್ಟಿಯಿಂದ ಪ್ರಯಾಣಿಕರ ಮತ್ತು ಸಾಮಾನುಗಳ ಗಾಡಿಗಳನ್ನು ಕಡಿಮೆ ಮಾಡಬೇಕಾಗಿ ಬಂದಿದೆ. ಇಂಜಿನಿನ ಸಂರಕ್ಷಿತತೆ ಮತ್ತು ಇದ್ದಲ್ಲಿಯ ಸಂಕೋಚ ಈ ಎರಡು ಕೆಲಸಗಳಿಗಾಗಿ ರೈಲಿನ ವೇಗವನ್ನು ಕೂಡ ಸ್ವಲ್ಪ ಕಡಿಮೆ ಮಾಡಬೇಕಾಗಿದೆ. ಗಾಡಿಗಳು ಕಡಿಮೆಯಾದ ಮೇಲೆ ಇದ್ದ ಗಾಡಿಗಳಲ್ಲಿ ಹೋಗಿ ಬರುವ ಪ್ರಯಾಣಿಕರ ಸಮ್ಮರ್ದವು ಹೆಚ್ಚಾಗುವುದು ಸಹಜವಿದ್ದ ಕಾರಣ ಇದಾಗದಂತೆ ದರಗಳನ್ನು ಹೆಚ್ಚಿಸಬೇಕಾಗಿದೆ." ಡಿರೆಕ್ಟರರ ಮೇಲಿನ ಎಲ್ಲ ಉಪಪತ್ತಿಯು ಸಮರ್ಪಕವೆ. ಆದರೆ ದರವನ್ನು ಹೆಚ್ಚಿಸಿದ್ದಕ್ಕೆ ಅವರು ಕೊಟ್ಟ ಕಾರಣವು ಅಷ್ಟು ಸಮರ್ಥನೀಯವಲ್ಲ, ಬಹು ವಿಚಿತ್ರವಾಗಿದೆ. ಕಾರಣವಿಲ್ಲದೆ ನಿರುದ್ಯೋಗಿಗಳಾಗಿ ದೂರದ ಪ್ರಯಾಣ ಮಾಡುವ ಜನರು ಈ ಬಡ ಹಿಂದುಸ್ಥಾನದಲ್ಲಿ ಯಾರೂ ಇರಲಿಕ್ಕಿಲ್ಲ. ಅಂಥವರ ಮೇಲೆ ಈ ನೆವನಗಳಿಂದ ಬಹಳ ಚಾರ್ಜನ್ನು ಹೇರುವುದು ನಿರ್ದಯತನದ ಕೆಲಸವು. ರೈಲಿನ ಅಧಿಕಾರಿಗಳು ಈ ಬಗ್ಗೆ ಪುನರ್ವಿಮರ್ಶೆಯನ್ನು ಮಾಡ್ಯಾರೆಂದು ಭರವಸೆವಿಡುತ್ತೇವೆ.

೩. ದಿವಾನ ಬಹದೂರ ರಾಜಗೋಪಾಲಾಚಾರ್ಯರ ಖಾಲಿಯಾಗುವ ಸ್ಥಾನಕ್ಕೆ ನೆಲ್ಲೂರಿನ ಕಲೆಕ್ಟರುಗಳಾಗಿದ್ದ ದಿ. ಬ. ಆರ್. ರಾಮಚಂದ್ರರಾಯರ ನೇಮಕವಾದೀತೆಂದು ವಾರ್ತೆಯಿದೆ. ಈ ಶುಭವಾರ್ತೆಯು ಸತ್ಯವಾದುದಾದರೆ ನಮಗೆ ಸಂತೋಷವೆ. ಇವರು ನಮ್ಮ ಜಿಲ್ಲೆಗೆ ಮಿ. ಅಜೀಜುದ್ದಿನ್ ಕಲೆಕ್ಟರುಗಳ ಕಾಲದಲ್ಲಿ ದಯಮಾಡಿಸಿದ್ದರು. ಆಗಲೆ ಇವರ ಯೋಗ್ಯತೆ ಮತ್ತು ಸ್ವತಂತ್ರವಿಚಾರಗಳು ಇಲ್ಲಿಯ ಎಲ್ಲರ ಪ್ರತೀತಿಗೆ ಬಂದಿವೆ. ಇವರಿಗೆ ಕಲೆಕ್ಟರಿಯ ಸ್ಥಾನದ ಹಾಗು ಫಾರೆಸ್ಟ, ಇರಿಗೇಶನ್ ಮೊದಲಾದ ಖಾತೆಗಳ ಅನುಭವವು ಚನ್ನಾಗಿರುವುದರಿಂದ ಸದರಿ ನೇಮಕಕ್ಕೆ ಅವರೆ ಅರ್ಹರೆಂಬುದು ಯಾರೂ ಒಪ್ಪಿಕೊಳ್ಳತಕ್ಕದೆ. ಇದರಿಂದ "ಮಾನ್ಯಾನ್ ಮಾನಯ" ಎಂಬ ಸುಭಾಷಿತೋಕ್ತಿಯು ಸಾರ್ಥಕವಾಗುವುದು.

೪. ಕಳೆದ ಶುಕ್ರವಾರ ಮದ್ರಾಸಿನ ಸೆನೆಟ ಸಭಾ ಸ್ಥಾನದಲ್ಲಿ, ಇಲಾಖಾ-ಪ್ರಭುಗಳಾದ ಲೊ. ಪೆಂಟಲಂಡ ದೊರೆಗಳ ಅಧ್ಯಕ್ಷತೆಯಲ್ಲಿ ವ್ಯವಸಾಯದ ಅಭಿವೃದ್ಧಿಯ ಕುರಿತು ಮಿ. ಜೇಮ್ಸ ಮೆಕೆಸನ್ ಐ. ಸಿ. ಎಸ್. ಇವರು ಒಂದು ಉಪನ್ಯಾಸವನ್ನು ಕೊಟ್ಟರು. ಕೃಷಿಯ ಅಭಿವೃದ್ಧಿಗೆ ಅನೇಕ ಸೂಚನೆಗಳನ್ನು ಕೊಟ್ಟು, ಉಪನ್ಯಾಸಕರು ಒಟ್ಟಾರೆ ಅಭಿಪ್ರಾಯಪಟ್ಟದ್ದೇನೆಂದರೆ—ಕೃಷಿಕ ವರ್ಗದಲ್ಲಿ ಓದು, ಬರಹ ಮತ್ತು ಲೆಕ್ಕ ಇಷ್ಟು ಸಾಮಾನ್ಯ ಶಿಕ್ಷಣವು ಉಂಟಾಗುವ ತನಕ ಆ ವರ್ಗದ ಊರ್ಜಿತ ಸ್ಥಿತಿಯಾಗಲಿ ವ್ಯವಸಾಯದ ಅಭಿವೃದ್ಧಿಯಾಗಲಿ ಅಷ್ಟು ಬೇಗನೆ ಆದೀತೆಂದು ನೆನೆಸಕೂಡದು. ಆದರೆ ಅಧ್ಯಕ್ಷರು ಈ ಮಾತಿನ ಮೇಲೆ ವಿಶೇಷ ಭಾರವಿಟ್ಟಂತೆ ತೋರಲಿಲ್ಲ. ಕೃಷಿಕರಿಗೆ ಅವರ ವ್ಯವಸಾಯಕ್ಕೆ ಬೇಕಾದ ಕೃಷಿ ಜ್ಞಾನವು ಸಾಕಷ್ಟು ಇರುವುದೆಂಬುದನ್ನೆ ಅತಿಶಯೋಕ್ತಿಯಿಂದ ವರ್ಣಿಸಿದರು. ವ್ಯವಸಾಯದ ಶಾಸ್ತ್ರೀಯ ಜ್ಞಾನದಿಂದ ಸ್ಕಾಟಲಂಡದಲ್ಲಿ ಕೃಷಿಯು ೫೦-೬೦ ವರ್ಷಗಳೊಳಗಾಗಿ ಬಹು ಉನ್ನತ ಸ್ಥಿತಿಗೆ ಬಂದಿದೆಂಬುದಾಗಿಯೂ ಲಾರ್ಡ ದೊರೆಗಳು ಅಭಿಪ್ರಾಯಪಟ್ಟರು. ಸ್ಕಾಟಲಂಡದಲ್ಲಿ ಕೃಷಿಯು ಅಭಿವೃದ್ಧಿಗೆ ಬರಬೇಕಾದರೆ ಅಲ್ಲಿಯವರಿಗೆ ಕೃಷಿಯ ಮೂಲಜ್ಞಾನವೂ ಸರಕಾರದ ಕಡೆಯಿಂದ ದ್ರವ್ಯಸಹಾಯ್ಯವೂ ಲಭಿಸಿದ್ದವು. ಇದೇ ತರದ [illegible] ವ್ಯವಸಾಯದ ಅನುಭವವನ್ನು ದಿ. ಬ. ರಾಜಗೋಪಾಲಾಚಾರ್ಯರು ಹೇಳಿದರು. ಇಂಥ ಸಹಾಯ್ಯವು [illegible] ಲಭಿಸಿದ್ದಾದರೆ ನಮ್ಮ ವ್ಯವಸಾಯದ ಸ್ಥಿತಿಯು ಒಳ್ಳೇದಾದೀತು.

೫. ಮಂಗಳೂರು ಬಂದರಿನ ಸ್ಥಿತಿ ವಿಷಯ ಹಿಂದಿನ ಸಂಚಿಕೆಯೊಂದರಲ್ಲಿ ಪ್ರಸ್ತಾಪಿಸುವಾಗ ವ್ಯಾಪಾರಸ್ಥರು ಕೂಡಿ ತಮ್ಮದೊಂದು ಸಂಘವನ್ನು ಸ್ಥಾಪಿಸುವರಲ್ಲಿದ್ದಾರೆ ಮತ್ತು ಈ ಚಳವಳದ ಗತಿಯನ್ನು ಕುರಿತು ಇನ್ನೊಮ್ಮೆ ಪ್ರಸ್ತಾಪಿಸುವೆವು ಎಂದು ಹೇಳಿದೆವು. ಈ ಚಳವಳವು ಇಷ್ಟರ ತನಕ ಕಾರ್ಯರೂಪುಗೊಳ್ಳದೆ ಇದ್ದರೂ ಬಂದರದ ಅಧಮ ಸ್ಥಿತಿಯು ಸಾವುಕಾರರ ಗೋಚರಕ್ಕೆ ಬಂದಿರುವದನ್ನು ಕಂಡು ಸಂತೋಷಪಡಬೇಕಾಗಿದೆ. ಬಂದರಿನ ಇಕ್ಕಟ್ಟು, ಅನಾರೋಗ್ಯ ಸ್ಥಿತಿ, ನಷ್ಟ, ಕಷ್ಟ, ಅನಾನುಕೂಲತೆಗಳು ಇವೆಲ್ಲವನ್ನು ತಿಳಕೊಂಡು ಒಂದರದ ಎಲ್ಲಾ ಪ್ರಮುಖ ಸಾವುಕಾರರೂ ಯುರೋಪಿಯನ್ ಸಾವುಕಾರರೂ ಸಹ ಕೂಡಿಕೊಂಡು ಇಲ್ಲಿಯ ಪೋರ್ಟ ಆಫೀಸರರ ಮುಖಾಂತರ ದಕ್ಕೆ ಫೀಸಿನ ಕಮಿಟಿಯ ಪ್ರೆಸಿಡೆಂಟರೂ ಜಿಲ್ಲಾ ಕಲೆಕ್ಟರ ದೊರೆಗಳೂ ಆಗಿರುವ ಮಿ| ಲಾಯೋನಲ್ ವ್ಯಾಬರ್ಟ ದೊರೆಗಳವರಿಗೆ ಒಂದು ಅರ್ಜಿಯನ್ನು ಬರಕೊಂಡಿರುವರು. ಅರ್ಜಿಯಲ್ಲಿ ಕಾಣಿಸಿರುವ ಸಂಬುಗಳು ನಿಜವಾದವುಗಳು ಮತ್ತು ಇವುಗಳ ನಿವೃತ್ತಿಯು ಕೂಡಲೆ ಆಗಬೇಕಾದದ್ದೆಂಬುದಾಗಿ ಪೋರ್ಟ ಆಫೀಸರರ ಅಭಿಪ್ರಾಯವಿದೆ. ಕಲೆಕ್ಟರ ದೊರೆಗಳೂ ಸಹ ಇದನ್ನು ತಿಳಕೊಂಡು ಸಾವುಕಾರರನ್ನು ದಕ್ಕೆ ಫೀಸಿನ ಕಮ್ಮಿಟಿ ಮೀಟಿಂಗಿನ ಸಮಯ ಕರೆ ಕಳುಹಿಸಿ ಅವರ ಹಾಲಹವಾಲಗಳನ್ನು ಮುಖತಃ ವಿಚಾರಿಸಿ ತಿಳಕೊಂಡಿರುವರಲ್ಲದೆ ಮೀಟಿಂಗ್ ನಂತರ ಮಿ| ಮೋರ್ಗನ್ ದೊರೆಗಳು, ಪೋರ್ಟ ಆಫೀಸರರು ಮತ್ತು ಮುನ್ಸಿಪಲ್ ಚೇಯರ್ಮೇನರು ಇವರ ಸಂಗಡ ಅರ್ಜಿಯಲ್ಲಿ ಕಾಣಿಸಿದ ವಿವರಗಳನ್ನು ಸ್ವತಹ ನೋಡಿಕೊಂಡು ಬಂದಿರುವರು. ನಿವೃತ್ತಿ ಹೇಗೆ ಕಲ್ಪಿಸಿಕೊಡಬಹುದೆಂಬ ವಿಷಯವನ್ನು ಪರ್ಯಾಲೋಚಿಸುವರೆ ಮುನ್ಸಿಪಲ್ ಚೇಯರ್ಮೇನ್, ಪೋರ್ಟ ಆಫೀಸರರು, ಮಿ| ರಾ| ರಾ| ಪುರುಷೋತ್ತಮ ನಾಸ್ವಿ ಸೇಟ್, ಉಳ್ಳಾಲ ಸಾಂತಯ್ಯ ಶೆಣೈ, ರಾವ್ ಬಹದ್ದೂರ್ ಎಸ್. ಸುಬ್ಬರಾವ್ ಇವರ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿರುವದು. ಈ ಕಮ್ಮಿಟಿಯವರನ್ನು ಸಾಧ್ಯವಾದಷ್ಟು ಬೇಗ ಬರಮಾಡಿಕೊಂಡು ಪೋರ್ಟ ಆಫೀಸರರು ಸಾವುಕಾರರ ಸಂಕಷ್ಟ ನಿವಾರಣೆಯಲ್ಲಿ ತಕ್ಕಷ್ಟು ಪರಿಶ್ರಮ ತಕ್ಕೊಳ್ಳುವರೆಂಬುದಾಗಿ ಕೋರುತ್ತೇವೆ. ಅರ್ಜಿಯ ಮುಖ್ಯ ಸಾರಾಂಶವನ್ನು ಈ ಸಲ ತಿಳಿಸಿ ಇದರ ಟೀಕೆಯನ್ನು ಇನ್ನೊಮ್ಮೆ ಮಾಡುವೆವು. ಅರ್ಜಿಯ ಸಾರಾಂಶವೇನೆಂದರೆ.—ಕಸ್ಟಮ್ಸ್ ಆಫೀಸಿನ ವಳು ದಕ್ಕೆಗೆ ಗೋಡೆಗಳನ್ನು ಹಾಕಿಸಿದ ನಂತರ ನದಿದೋಣಿಗಳಿಂದ ಸರಕುಗಳನ್ನು ವಯ್ಯಲಿಕ್ಕೂ ಸರಕುಗಳನ್ನು ದೋಣಿಗಳಿಗೆ ಹಾಕಿಸಲಿಕ್ಕೂ ಇರುವಂಥ ಅನುಕೂಲತೆಗಳು ಬಹಳಮಟ್ಟಿಗೆ ಈಗ ಇರವು. ಅಮದುರಫ್ತಿಗೆ ಸರಿಯಾದ ದೊಡ್ಡ ಮಾರ್ಗಗಳು ಈ ಪಾರ್ಶ್ವದಲ್ಲಿ ನದಿಗೆ ತಾಗ ಇಲ್ಲದಿರುವದರಿಂದ ಈ ಗೋಡೆಗಳಿಂದ ಸರಿಯಾದ ವಾಹನಸಂಚಾರಕ್ಕೆ ತಡೆಯುಂಟಾಗಿರುವದಲ್ಲದೆ, ಸರಕುಗಳನ್ನು ಒಯ್ಯುವ ಖರ್ಚೂ ಸಮಯವೂ ನಿರರ್ಥಕವಾಗಿ ಹೆಚ್ಚಿರುವವು. ದೋಣಿಗಳಲ್ಲಿ ಬರುವಂಥ, ದೋಣಿಯಲ್ಲಿ ತುಂಬಿಸುವಂಥ ಕಾಫಿ, ಬೀಜ, ಮುಂತಾದ ಜೀನಸುಗಳನ್ನು ಸುತ್ತಿಸುತ್ತಿ ಕೊಂಡು ತುಂಬಿಸಬೇಕಾಗುತ್ತದೆ. ಸಾವುಕಾರರ ಬಗ್ಗೆ ಸರಕುಗಳನ್ನು ತುಂಬಿಕೊಂಡು ಬರುವಂಥ ದೋಣಿಗಳು ನದಿಯಲ್ಲಿ ನೀರು ಇಲ್ಲದ್ದರಿಂದ ದಕ್ಕೆಗೆ ತಾಗಿ ನಿಲ್ಲಲು ಉಪಾಯವಿರದು. ಆದ್ದರಿಂದ ದೋಣಿಗಳನ್ನು ಬಹಳ ದೂರದಲ್ಲಿ ನಿಲ್ಲಿಸಿಕೊಂಡು ಬಹಳ ಶ್ರಮದಿಂದ ಸರಕುಗಳನ್ನು ಇಳಿಸಬೇಕಾಗುತ್ತದೆ. ನದಿಯ ನೀರು ಸರಿಯಾಗಿ ಇಲ್ಲದೆ ಅಲ್ಲಲ್ಲಿ ಕೊಳತು ಹೋಗಿ ಕೆಟ್ಟ ವಾಸನೆಯ ಕೆಸರು, ಇದರಲ್ಲಿ ಮುನ್ಸಿಪಲ್ ಚರಂಡಿಗಳಿಂದ ಬಂದು ಬೀಳುವ ಕೊಳೆಯ ನೀರು—ಇದರಲ್ಲಿ ನಡಕೊಂಡು ಹೋಗುವ ಯಾತನೆಯು ನರಕಯಾತನೆಯಾಗಿದೆ. ಮತ್ತು ಈ ದುರ್ವಾಸನೆ ತುಂಬಿದ ಗಾಳಿಯು ದಕ್ಕೆಯಲ್ಲಿಯೂ ಬಂದರದಲ್ಲಿಯೂ ಸುಳಿದಾಡುವದರಿಂದ ಈ ಮೂಲಕ ಉಂಟಾಗುವ ಆರೋಗ್ಯ ಹಾನಿಯು ಅಷ್ಟಿಷ್ಟೆಂತ ಹೇಳಿ ತೀರದು. ವ್ಯಾಪಾರವು ಹೆಚ್ಚುತ್ತಾ ಬರುವಂತೆ ಈ ಬಂದರಲ್ಲಿ ವಯ್ಯೋಣದ ಅನುಕೂಲತೆಗಳು ಸಹ ಹೆಚ್ಚಿರವು. ಇದರ ಬದಲಾಗಿ ಸ್ಥಳದ ಇಕ್ಕಟ್ಟು ಮತ್ತಷ್ಟು ಹೆಚ್ಚುತ್ತಾ ಬಂದಿರುವದು. ಜೀನಸುಗಳನ್ನು ಒಣಗಿಸಲಿಕ್ಕೆ ಅಥವಾ ಪ್ಲೇಗು ರೋಗದ ಸೋಂಕಿರುವಾಗ ಅವುಗಳನ್ನು ಸೂರ್ಯನ ಬಿಸಿಲಿನಲ್ಲಿ ಹಾಕಲಿಕ್ಕೆ ಬಂಡಸಾಲೆಗಳ ಮುಂಭಾಗದಲ್ಲಿ ಇರಬೇಕಾದ ಅಂಗಳಗಳು ಅನೇಕ ಬಂಡಸಾಲೆಗಳಿಗೆ ಇರುವದಿಲ್ಲ. ಕೆಲವಕ್ಕೆ ಇರುವಂಥವುಗಳು ಮುನ್ಸಿಪಾಲಿಟಿಯವರು ಪ್ರಕೃತ ತಯ್ಯಾರು ಮಾಡಿಸುತ್ತಿರುವ ಸನಿಟರಿ ರಸ್ತೆಗೆ ಕೂಡಿ ಹೋಗುವವು. ನಂತರದ ಇಕ್ಕಟ್ಟು ಮತ್ತಷ್ಟು ಹೆಚ್ಚಲು ಕಾರಣವಿದೆ. ಪ್ಲೇಗು ಬಂದರ ಪ್ರಾಂತ್ಯಗಳಲ್ಲಿ ಪ್ರಥಮ ಪ್ರಾರಂಭವಾಗಿ ಇತರ ಕಡೆಗಳಲ್ಲಿ ಹಬ್ಬಿದ್ದರಿಂದ ಇಂಥಾ ಪ್ರಾಂತ್ಯಗಳಲ್ಲಿ ಸ್ಥಳದ ಇಕ್ಕಟ್ಟನ್ನು ಹೆಚ್ಚಿಸಿದರೆ ಪಟ್ಟಣಕ್ಕೆಲ್ಲ ಇದರಿಂದ ಹಾನಿಯುಂಟಾಗುವ ಸಂಭವವಿದೆ. ಬಂದರದ ದಕ್ಷಿಣ ಪಾರ್ಶ್ವದಲ್ಲಿರುವಂಥಾ ರಸ್ತೆಯು ಸಾಕಷ್ಟು ಅಗಲವಿಲ್ಲದೆ ಇರುವಂಥಾದ್ದಾದ ಕಾರಣ ಭಂಡಸಾಲೆಗಳ ಸಮೀಪದಲ್ಲಿ ಗಾಡಿಗಳನ್ನು ನಿಲ್ಲಿಸಿ ಸರಕುಗಳನ್ನು ತುಂಬಿಸುರುವಾಗ ತಲೆ ಹೊರೆಗಳನ್ನು ಸಹ ಅತ್ತಿತ್ತ ತಕ್ಕೊಂಡು ಹೋಗಲು ಅಸಾಧ್ಯವಾಗಿ ವಿಶೇಷ ಗಲಾಟೆಯೂ ನಷ್ಟವೂ ಈ ಮೂಲಕ ಉಂಟಾಗುತ್ತದೆ. ಬಂದರದಲ್ಲಿ ಪ್ರಕೃತ ಸಾಮಾನುಗಳನ್ನು ವಯ್ಯಲು ಇರುವಂಥ ಪೋರ್ಟ ಟ್ರಕ್ಕು ಗಾಡಿಗಳ ಪ್ರಯೋಜನವು ಕಸ್ಟಮ್ಸ್ ಆಫೀಸಿನ ಉತ್ತರದಲ್ಲಿರುವವರಿಗೆ ದೊರಕುತ್ತದಲ್ಲದೆ ದಕ್ಷಿಣದಲ್ಲಿರುವ ಮತ್ತು ದಕ್ಕೆ ಫೀಸು ಮುನ್ಸಿಪಲ್ ಕರಿಗೆ ಇತ್ಯಾದಿಗಳನ್ನು ಧಾರಾಳವಾಗಿ ತೆರುವಂಥ ಭಂಡಸಾಲೆಗಳಿಗೆ ಯಾವ ಪ್ರಯೋಜನವಾದರೂ ಇರದು. ಈ ಸಂಗತಿಗಳನ್ನು ಸ್ವತಹ ಬಂದು ನೋಡಿಕೊಂಡು ಅಗತ್ಯವಿರುವ ನಿವೃತ್ತಿಯನ್ನು ಕಲ್ಪಿಸಿಕೊಡಬೇಕೆಂತ ಜಿಲ್ಲಾ ಕಲೆಕ್ಟರ ದೊರೆಗಳನ್ನು ಈ ಅರ್ಜಿಯಲ್ಲಿ ಕೇಳಿಕೊಂಡಿರುವರು.

ಮಂಗಳೂರು.

ಮಂಗಳೂರಿನಲ್ಲಿ ಸರಕಾರದ ಆಫೀಸರರ ಮತ್ತು ನೌಕರರ ಬಗ್ಗೆ ಒಂದು ಕ್ಕೊಅಪರೇಟಿವ್ ಕ್ರೆಡಿಟ್ ಸೊಸೈಟಿಯನ್ನು ಸ್ಥಾಪಿಸುವ ಏರ್ಪಾಡು ನಡಿಯುತ್ತಿರುವದು. ಈ ಬಗ್ಗೆ ಇದೇ ತಿಂಗಳ ತಾ. ೧೬ ಮತ್ತು ೧೭ರಲ್ಲಿ ಇಲ್ಲಿಯ ಕಲೆಕ್ಟರ ದೊರೆಗಳವರ ಆಫೀಸಿನಲ್ಲಿ ಮೊದಲನೆಯ ದಿನ ಜಿಲ್ಲಾ ಜಡ್ಜರವರ ಅಧ್ಯಕ್ಷತೆಯಲ್ಲಿಯೂ ಎರಡನೆಯ ದಿನ ಜಿಲ್ಲಾ ಕಲೆಕ್ಟರರವರ ಅಧ್ಯಕ್ಷತೆಯಲ್ಲಿಯೂ ಎಲ್ಲಾ ಆಫೀಸರರ ಸಭೆಯು ಕೂಡಿತ್ತು. ದಿವಾನ್ ಬಹದ್ದೂರ್ ಸ್ವಾಮಿ ಕಣ್ಣುಪಿಳ್ಳೆಯವರೂ ಮತ್ತು ಮಿ| ರಾ| ರಾ| ಮೊಳಹಳ್ಳಿ ಶಿವರಾಯರೂ ಈ ಪರಸ್ಪರ ಸಹಾಯಕ ಬೇಂಕು ಸರಕಾರದ ನೌಕರರ ಬಗ್ಗೆ ಏಕೆ ಅಗತ್ಯವೆಂತ ವಿವರಿಸಿದರು. ಲಿಮಿಟೆಡ್ ಅಂದರೆ ಮಿತ ಜವಾಬ್ದಾರಿಯ ಸಂಘವನ್ನು ಸ್ಥಾಪಿಸಬೇಕೆಂತ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿರುವದು. ಲೋಕಲ್ ಫಂಡ, ಮತ್ತು ಮುನ್ಸಿಪಲ್ ನೌಕರರು ಈ ಬ್ಯಾಂಕಿಗೆ ಮೆಂಬರರಾಗಿ ಸೇರಬಹುದಾಗಿದೆ. ಸಭೆಯಲ್ಲಿ ಎಲ್ಲಾ ಆಫೀಸುಗಳ ಪ್ರತಿನಿಧಿಗಳುಳ್ಳ ಒಂದು ಕಮಿಟಿಯು ನೇಮಿಸಲ್ಪಟ್ಟಿರುವದು. ಜಿಲ್ಲಾ ಕಲೆಕ್ಟರರ ದೊರೆಗಳವರು ಬ್ಯಾಂಕಿನ ಅಧ್ಯಕ್ಷರಾಗಲು ಸಮ್ಮತಿಸಿರುವರು. ಜಿಲ್ಲಾ ಕೋರ್ಟಿನ ಶಿರಸ್ತೆದಾರರಾದ ಮಿ| ರಾ| ರಾ| ಸಿ. ಎನ್. ಭಂಡಾರಕಾರರವರು ಕಾರ್ಯದರ್ಶಿಗಳಾಗಲು ಸಮ್ಮತಿಸಿರುವರು.

ಜಾನುವಾರುಗಳ ಒಂದು ಅಂಟುರೋಗವು ಈ ಪಟ್ಟಣದಲ್ಲಿ ಸಹ ತಲೆದೋರಿಯದೆಂಬುದಾಗಿ ತಿಳಿಯುತ್ತೇವೆ. ಸಾಸೆ ಮಂಗಳೂರು ಪ್ರಾಂತ್ಯದಲ್ಲಿ ಈ ರೋಗಕ್ಕೆ ದನಕರುಗಳು ವಿಶೇಷವಾಗಿ ಬಲಿಬಿದ್ದಿರುವವು. ಇಲ್ಲಿ ಈ ರೋಗವು ಪ್ರಾರಂಭವಾಗಿದೆ ಮಾತ್ರ. ಆದರೆ ರೋಗದಲ್ಲಿ ಸತ್ತುಹೋದ ಜಾನುವಾರುಗಳನ್ನು ದೂರಕ್ಕೆ ತಕ್ಕೊಂಡು ಹೋಗಿ ಹುಗಿಯದೆ ಇವುಗಳನ್ನು ತೋಟಗಳು ದಾರಿಯಲ್ಲಿ ಜಾನುವಾರುಗಳು ಅತ್ತಿತ್ತ ಹೋಗುತ್ತಿರುವ ಪ್ರಾಂತ್ಯದಲ್ಲಿ ಕೆಲವು ತಾಸುಗಳ ವರೆಗೆ ಇರಿಸುವದರಿಂದ ಈ ಅಂಟುರೋಗವು ಇನ್ನಷ್ಟು ಉಲ್ಬಣವಾಗುವ ಸಂಭವಗಳಿವೆ. ಇಷ್ಟೇ ಅಲ್ಲ. ಹುಗಿಯುವ ಬದಲಿಗೆ ತೋಟಿಗಳು ಇವುಗಳನ್ನು ಮಾಪಿಳ್ಳೆಯವರಿಗೆ ಮಾರಾಟ ಮಾಡಿ ಅವುಗಳ ಚರ್ಮ ಮತ್ತು ಕೊಂಬುಗಳನ್ನು ಬಹಿರಂಗವಾದ ಪೆಂಟಲಂತ ಪೇಟೆಯ ಮೈದಾನಿನಲ್ಲಿ ಸತ್ತುಬಿದ್ದ ಜಾನುವಾರುಗಳಿಂದ ತೆಗಿಯುವದಲ್ಲದೆ ಉಳಿದ ಎಲುಬು ಇತ್ಯಾದಿಗಳನ್ನು ಆ ಮೈದಾನಿನಲ್ಲಿ ದಿಕ್ಕಾಪಾಲು ಬಿಸಾಡುತ್ತಿರುವರು. ಈ ಮೂಲಕ ಅಂಟುರೋಗವು ಪ್ರಸರಿಸುವದು ಮಾತ್ರವಲ್ಲ, ಅಲ್ಲಲ್ಲಿ ಕೊಳತು ಬಿದ್ದ ಎಲುಬುಗಳನ್ನು ನಾಯಿಗಳು ತಿಂದು ನಾಯಿಗಳಿಗೆ ಹುಚ್ಚು ಹಿಡಿಯುವ ರೋಗವು ಸಹ ಪ್ರಾಪ್ತವಾಗುವದು. ಸೆನಿಟರಿ ಇಲಾಖೆಯವರಿಗೆ ಈ ಸಮಾಚಾರವು ಯಾವಾಗ ಗೋಚರಕ್ಕೆ ಬರುವದೋ ತಿಳಿಯದು. ಮುನ್ಸಿಪಲ್ ಚೇಯರ್ಮೇನರು ಈ ವಿಷಯ ಅಗತ್ಯವಿರುವ ಏರ್ಪಾಡನ್ನು ಕೂಡಲೇ ನಡಿಸುವದು ಅಗತ್ಯವಾಗಿದೆ. ವೆಟರ್ನರಿ ಅಥವಾ ಪಶುವೈದ್ಯ ಇಲಾಖೆಯವರು ಈ ಅಂಟು ಜಾಡ್ಯವು ಯಾವ ಸ್ವಭಾವದೆಂಬುದನ್ನು ತಿಳಕೊಂಡು, ಇದಕ್ಕೆ ಅಗತ್ಯವಿರುವ ಚಿಕಿತ್ಸೆ ಅನುಭವವನ್ನೂ ರೋಗದ ಸೋಂಕಿಗೆ ಹೇಗೆ ತಡೆಕಟ್ಟಬಹುದೆಂಬುದನ್ನೂ ಜನರಿಗೆ ಹೇಳಿಕೊಡುವಂತೆ ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರಾದ ಜಿಲ್ಲಾ ಕಲೆಕ್ಟರ ದೊರೆಗಳವರು ಪಶುವೈದ್ಯರನ್ನು ಎಚ್ಚರಿಸುವರಾಗಿ ಕೋರುತ್ತೇವೆ.

ಈ ತಿಂಗಳ ತಾ. ೩೦ರಲ್ಲಿ ಈ ತಿಂಗಳ ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯು ಕೂಡಿತ್ತು. ಹಿಂದೆ ಕೆಲವು ಸಾರಿ ಪ್ರಸ್ತಾಪಿಸಲ್ಪಟ್ಟ ವಾರ್ಡುಗಳ ವಿಭಜನೆ ಮತ್ತು ಅವುಗಳಿಗೆ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಣಯಿಸುವ ವಿಷಯದ ಕೆಲವಂಶವು ಸರಕಾರದವರಿಂದ ಕೌನ್ಸಿಲಿನ ಪರ್ಯಾಲೋಚನೆ ಬಗ್ಗೆ ತಿರಿಗೊಮ್ಮೆ ಕಳುಹಿಸೋಣಾಗಿರುವದು. ಕೊಡಿಯಾಲ ಬೈಲ್ ವಾರ್ಡನ್ನು ಎರಡು ವಾರ್ಡುಗಳಾಗಿ ಮಾಡುವದು ಉಚಿತ ವಿದಕ್ಕೆ ೩ ಜನ ಪ್ರತಿನಿಧಿಗಳು ಸಾಕಾಗನೆ ಇದ್ದರೆ ಇನ್ನೊಬ್ಬ ಪ್ರತಿನಿಧಿಯನ್ನು ಹೆಚ್ಚಾಗಿ ಆರಿಸುವ ಹಕ್ಕನ್ನು ಕೊಡುವೆವೆಂತ ಸರಕಾರದವರ ಸೂಚನೆಯು ಇರುವದು. ಮುನ್ಸಿಪಲ್ ಕೌನ್ಸಿಲಿನವರು ಈ ಬಗ್ಗೆ ತಮ್ಮ ಪೈಕಿ ಒಂದು ಕಮ್ಮಿಟಿಯನ್ನು ಏರ್ಪಡಿಸಿರುತ್ತಾರೆ.

ಮಂಗಳೂರಿನ ವ್ಯಾಪಾರ ವ್ಯವಹಾರಗಳು ನಡಿಯುವ ಸ್ಥಳವೂ ಇನ್‌ಕಮ್ ಟೇಕ್ಸ್ ಮುನ್ಸಿಪಲ್ ಟೇಕ್ಸ್ ಮೊದಲಾದವುಗಳ ರೂಪದಲ್ಲಿ ತೆರಿಗೆಯ ಅಧಿಕಾಂಶ ಉತ್ಪತ್ತಿಯ ಮೂಲವೂ ಆಗಿರುವ ಗೋಳಿಕಟ್ಟೆಯ ವಾರ್ಡಿನ ದುರ್ದಸೆಯು ಎಂದೂ ಸರಿದು ಹೋಗುವಂತೆ ತೋರುವದಿಲ್ಲ. ಮೂರು ಜನ ಕೌನ್ಸಿಲರರನ್ನು ಆರಿಸುವ ಇದರ ಅಧಿಕಾರವು ಹೋಗಿ ಇನ್ನು ಎರಡೇ ಜನ ಪ್ರತಿನಿಧಿಗಳನ್ನು ಇದು ಆರಿಸುವ ಸಂಭವವು ಬೇಗನೆ ಪ್ರಾಪ್ತವಾಗುವದು. ರಸ್ತೆಗಳು ಈ ವಾರ್ಡಿನಲ್ಲಿ ಎಷ್ಟು ನಾದುರುಸ್ತಿ ಸ್ಥಿತಿಯಲ್ಲಿದ್ದರೂ ಕಸವನ್ನು ಗುಡಿಸುವ ಮುನ್ಸಿಪಲ್ ನೌಕರರ ಸುಳಿವು ಇಲ್ಲಿ ಕಾಣದೆ ಇದ್ದರೂ ಚರಂಡಿಗಳಲ್ಲಿ ಕೆಸರು ನೀರು ಅಲ್ಲಲ್ಲಿ ಕೊಳೆಯುತ್ತಿದೆಯಾದರೂ ಈ ವಾರ್ಡಿನ ವಿಷಯ ಮಾತೆತ್ತಿದರೂ ಕೇಳುವವರು ಇರರು. ಇಷ್ಟೇ ಅಲ್ಲ; ಪೋಲೀಸಿನವರಿಗೆ ಸಹ ಈ ವಾರ್ಡು ಅಂದರೆ ಸ್ವಲ್ಪ ದೂರ. ಸಾಮಾನುಗಳ ವಯ್ಯೋಣವನ್ನು ಕ್ರಮಪಡಿಸಿ ವ್ಯಾಪಾರಸ್ಥರಿಗೂ ಈ ವಾರ್ಡಿಗೆ ದಿನಪ್ರತಿ ಬರುವ ಸಾವಿರಾರು ಜನರಿಗೂ ತಮ್ಮಿಂದ ನೋಡಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಲು ಈ ವಾರ್ಡಿನಲ್ಲಿ ಪೋಲೀಸಿನವರು ಸಹ ಇಲ್ಲ. ಈ ಯೋಗವು ಈ ವಾರ್ಡನ್ನು ಎಂದು ಬಿಟ್ಟು ಹೋಗುವದೋ ತಿಳಿಯದು.

ಈ ತಿಂಗಳ ತಾ. ೨೮ನೇ ಆದಿತ್ಯವಾರ ಬೆಳಿಗ್ಗೆ ಮುಲ್ಕಿಯಲ್ಲಿ ಅಲ್ಲಿಯ ಯುನಿಯನ್ ಕ್ಲಬ್ಬಿನ ಬಗ್ಗೆ ಕಟ್ಟಿಸೋಣಾಗುವ ಡಾಕ್ಟರ್ ಬೋಳ ಶಾಮರಾವ್ ಮಂದಿರದ ಶಂಕು ಸ್ಥಾಪನೆಯು ಜಿಲ್ಲಾ ಕಲೆಕ್ಟರ ದೊರೆಗಳವರು ನಡಿಸುವರಾಗಿ ತಿಳಿಯುತ್ತೇವೆ. ತಾಲೂಕು ಬೋರ್ಡ ಮೆಂಬರರಾಗಿರುವ ಮಿ| ರಾ| ರಾ| ಬೋಳ ಮಾಧವರಾವ್‌ರವರು ತನ್ನ ಅಗ್ರಜರಾಗಿದ್ದ ಸ್ವರ್ಗಸ್ಥ ಡಾಕ್ಟರ್ ಶಾಮರಾವ್‌ರವರ ಸ್ಮರಣಾರ್ಥವಾಗಿ ಈ ಮಂದಿರವನ್ನು ಮುಲ್ಕಿ ಯುನಿಯನ್ ಕ್ಲಬ್ಬಿಗೆ ಧರ್ಮಾರ್ಥವಾಗಿ ಕಟ್ಟಿಸಿಕೊಡುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ.

ಈ ಸಂಚಿಕೆಯು ಅಚ್ಚಾಗುತ್ತಿರುವಾಗ ಇಲ್ಲಿಯ ವೆಟರ್ನರಿ ಡಾಕ್ಟರರು ನಮಗೆ ಈ ರೀತಿ ತಿಳಿಸಿರುವರು:—ರ್‍ಯಾಂಡರ್ ಪೆಸ್ಟ್ ಎಂಬ ಜಾನುವಾರುಗಳ ದೊಡ್ಡ ರೋಗ ಅಥವಾ ಮೈಲಿಗೆಯು ಈ ಪಟ್ಟಣದಲ್ಲಿ ತಲೆದೋರಿರುವದು. ರೋಗದ ಸೋಂಕಿನ ನಿವಾರಣೆಯು ಜಾನುವಾರುಗಳಿಗೆ ದಾಕುಹಾಕಿಸಿಯೇ ಆಗಬೇಕಾಗಿರುವದರಿಂದ ಮದ್ರಾಸಿಗೆ ದಾಕುಹಾಕುವ ಸಿರವಿನ ಬಗ್ಗೆ ತಂತಿಕೊಟ್ಟಿರುವದು. ದಾಕು ಸಕಾಲದಲ್ಲಿಯೇ ಹಾಕಿಸೋಣಾಗುವಂತೆ ಇಲ್ಲಿಯ ಮುನ್ಸಿಪಲ್ ಚೇಯರ್ಮೇನ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರ ಸಹಕಾರವು ಬೇಗನೆ ದೊರಕುವದು ಅಗತ್ಯವೆಂತ ಇವರು ಸೂಚಿಸಿರುವರು.

ಮಂಗಳೂರಲ್ಲಿ ಸ್ಥಾಪಿಸೋಣಾದ ಹೋಮರೂಲು ಲೀಗ್ ಶಾಖೆಯ ಪ್ರಥಮ ಮೀಟಿಂಗ್ ಇದೇ ತಿಂಗಳ ತಾ. ೨೮ನೇ ಆದಿತ್ಯವಾರ ಬೆಳಿಗ್ಗೆ ೯-೩೦ ಗಂಟೆಗೆ ರಥಬೀದಿಯಲ್ಲಿರುವ ಮಿ| ರಾ| ಕಾರ್ಕಳ ಸದಾಶಿವರಾಯರ ಆಫೀಸಿನ ಮೇಲಿನ ಉಪ್ಪರಿಗೆಯಲ್ಲಿ ಜರಗುವದು. ಎಲ್ಲರಿಗೂ ಸುಸ್ವಾಗತವಿದೆ ಎಂತ ತಿಳಿಯುತ್ತೇವೆ.

ಸೌಥ್ ಇಂಡಿಯನ್ ರೈಲ್ವೇ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾಗಿರುವ ಮಿ| ನೆವಿಲ್ ಪ್ರಿಸ್ಟ್ಲಿ ದೊರೆಗಳವರು ಹಿಂದೂಸ್ಥಾನವನ್ನು ಸಂದರ್ಶಿಸುತ್ತಿರುವರೆಂದೂ ಬಹುಶ್ಯಾ ಇದೇ ಬರುವ ಫೆಬ್ರವರಿ ತಾ. ೮ರಲ್ಲು ಮಂಗಳೂರಿಗೆ ಚಿತ್ತೈಸುವರೆಂದೂ ತಿಳಿಯುತ್ತೇವೆ.

ಬಲ್ಮಠದಲ್ಲಿ ಈಚೀಚೆಗೆ ಕೆಲವು ಜಗಳಿ ಕಳವುಗಳು ಆಗ ಪ್ರಾರಂಭಿಸಿ ಕೆಲವರ ಕೊಡಪಾನಗಳೂ, ಶೀರೆಗಳೂ, ಇತರ ಚಿಲ್ಲರೆ ಸಾಮಾನುಗಳೂ ಕಾಣೆಯಾಗುತ್ತಿದ್ದವು. ಕಳ್ಳರ ಸುಳಿವೇ ಸಿಕ್ಕಲಿಲ್ಲ. ಪರಂತು, ಇದೇ ತಾ. ೧೭ರಲ್ಲು ಮೆಸರ್ಸ್ ಪೆರ್ಲ್ ಎಂಡ್ ಸನ್ಸರ ಮನೆಯಿಂದ ಸುಮಾರು ೧೦ ರೂಪಾಯಿ ಕ್ರಯ ಬಾಳುವ ಒಂದು ತಾಂಬ್ರದ ಕೊಡಪಾನವು ಕಳವಾಯಿತು. ತಾ. ೧೮ನೇ ರಾತ್ರಿ ೧॥ ಗಂಟೆಗೆ ನೇಯುವ ಕೆಲಸದ ಮೊಘೂಸಲ ಪೋನ್ಸಸಂಬವನನ್ನು ನಂಬ್ರ ೫೦ನೇ ಹೆಡ್ ಕನಸ್ಟೇಬಲರು ಕಲೆಕ್ಟರ ದೊರೆಗಳವರ ಗೇಟಿನ ಬಳಿ ಕಳವಾದ ಕೊಡ ಸಹಿತ ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಕೆ. ಡಿ. ಅತ್ತಾವರ ಮಂಜಪ್ಪ ಕೊಟ್ಯಾರಿ ಎಂಬವನ ಪರಿಚರ್ಯವು ಈ ಪಟ್ಟಣದಲ್ಲಿ ಇಲ್ಲದವರು ಬಹಳ ಕಡಿಮೆ. ಈತನಿಗೆ ಈ ಮೊದಲು ಏಳು ಸಾರಿ ಒಟ್ಟಿಗೆ ೧೦-೨೦ ವರ್ಷಗಳ ಶಿಕ್ಷೆಯಾಗಿತ್ತು. ಕಡೆಗೆ ೭ನೇ ಸಾರಿ ೭ ವರ್ಷಗಳ ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿ ಬಂದವನು ಪಳನೀರಿನ ಮಿ| ಪಿ. ಮಿನೇಜಸರ ಮನೆಯಿಂದ ಒಂದು ಹುಂಜವನ್ನು ಕಳವು ಮಾಡಿ, ಬಲ್ಮಠ ಶಾಂತಿ ದೇವಾಲಯದಲ್ಲಿ ಅಡಗಿ ಕೂತಿದ್ದನು. ಇವನನ್ನು ಪೋಲಿಸಿನವರು ಕೈದುಮಾಡಿ ವಿಚಾರಣೆಗೆ ಗುರಿಮಾಡಿದ್ದಲ್ಲಿ ಮೇಜಿಸ್ಟ್ರೇಟರು ಅವನನ್ನು ಸೆಶ್ಯನ್ಸಿಗೆ-ಕಮಿಟ್ ಮಾಡಿದರು. ಕಳೆದ ವಾರ ಸೆಶ್ಯನ್ಸ್ ಜಡ್ಜರು ಕೆ. ಡಿ. ಕೊಟ್ಯಾರಿಗೆ ಹುಂಜ ಕದ್ದ ತಪ್ಪಿನ ಮೇಲೆ ೬ ತಿಂಗಳ ಸಜಾ ವಿಧಿಸಿದರು.

ಫೆಬ್ರವರಿ ತಾ. ೧ರಿಂದ ಸೌತ್ ಇಂಡಿಯನ್ ರೈಲ್ವೇ ಕಂಪೆನಿಯ ಮೈಲ್ ಬಂಡಿಗಳಲ್ಲಿ ಪ್ರಯಾಣಿಕರ ದರವು ೧ನೇ ತರಗತಿಯವರಿಗೆ ಮೈಲಿಗೆ ೬ಪೈ, ೨ನೇ ತರಗತಿಯವರಿಗೆ ೬ಪೈ, ೩ನೇ ತರಗತಿಯವರಿಗೆ ೧ಪೈ ಪ್ರಕಾರ ಮೊದಲಿನ ದರಗಳಲ್ಲಿ ಹೆಚ್ಚಿಸೋಣಾಗುವದು. ಇತರ ಗೂಡ್ಸು ಟ್ರೇನು ಬಂಡಿಗಳಲ್ಲಿ ೩ನೇ ತರಗತಿ ಪ್ರಯಾಣಿಕರ ದರವು ಮೈಲಿಗೆ ೨-೨॥ ಪೈಗಳಂತೆ ಹೆಚ್ಚಿಸೋಣಾಗುವದು. ಟ್ರೇನು ಬಂಡಿಗಳು ಬರುವ ಮತ್ತು ತಲಪುವ ಸಮಯವೂ ಬದಲಾಗುವದು.

ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ಇದೇ ತಾ. ೨೫ರಿಂದ ತಾ. ೩೧ನೇ ವರೆಗೆ ಗೂಡ್ಸು ಮೂಲಕ ಇಲ್ಲಿಂದ ಸಾಮಾನುಗಳನ್ನು ಪರವೂರುಗಳಿಗೆ ಕಳುಹಿಸಿಕೊಡುವದಿಲ್ಲವೆಂತ ಪ್ರಕಟಿಸಿದ್ದರಿಂದ ವ್ಯಾಪಾರಸ್ಥರಿಗೆ ವಿಶೇಷ ನಷ್ಟಕಷ್ಟಗಳಿಗೆ ಕಾರಣವಾಗಿದೆ.

ಮಂಗಳೂರಲ್ಲಿ ನಡೆದ ಯುದ್ಧ ಫಂಡಿನ ವಿಹಾರದ ಲೆಕ್ಕಪತ್ರವು ಈಗತಾನೇ ಪ್ರಕಟವಾಗಿರುವದು. ಈ ವಿಹಾರದಿಂದ ಹುಟ್ಟಿ ಬಂದ ನೆಟ್ ಮುನಾಫೆಯು ರೂ: ೧೧,೦೦೭—೭—೧೧ ಆಗಿರುತ್ತದೆ. ಈ ಪೈಕಿ ಯುದ್ಧ ಫಂಡಿನ ಮದ್ರಾಸ್ ಹೆಂಗಸರ ಶಾಖೆಗೆ ರೂ. ೩೦೦೦, ಬೆಲ್ಜಿಯಮ್ ಸಹಾಯಕ ಫಂಡಿಗೆ ರೂ. ೫೦೦, ಬೆಲ್ಜಿಯನ್ ಮಕ್ಕಳ ಸಹಾಯಕ ಫಂಡಿಗೆ ರೂ. ೧೫೦೦, ಕುರುಡರಾದ ಸೇನಿಕರ ಫಂಡಿಗೆ ರೂ. ೧೫೦೦, ಮದ್ರಾಸ್ ಆಸ್ಪತ್ರೆ ಹಡಗ ಫಂಡಿಗೆ ರೂ. ೧೦೦೦, ರೋಬರ್ಟ್ಸ್ ಫೃಡರಿಕ್ ಮೆಮೋರಿಯಲ್ ಬಗ್ಗೆ ರೂ. ೧೫೦೦, ಸೈನ್ಯ ಯುವಾನ ಸಹಾಯಕ್ಕೆ ರೂ. ೫೦೦, ಮಂಗಳೂರಿನ ಹೆಂಗಸರ ಫಂಡಿಗೆ ರೂ. ೧೫೦೦, ಈ ಪ್ರಕಾರ ಹಂಚಿಕೊಡೋಣಾಗಿರುತ್ತದೆ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಎರಡು ಪ್ಲೇಗು ಮರಣಗಳಿದ್ದವು.

ಪತ್ರವ್ಯವಹಾರ.

ಬಂಟರೂ, ಕೃಷಿಯೂ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು).

ಈಗ ಪಟ್ಟಣಗಳಲ್ಲಿ ದೊರೆಯುವ ವಿದ್ಯೆಯಿಂದ ಕೃಷಿ ಜಾತಿಯವರಿಗೆ ಹೆಚ್ಚಿನ ಪ್ರಯೋಜನವು ದೊರೆಯುವದೋ ಎಂಬದೊಂದು ಸಂಶಯವು. ಈಗ ಮಂಗಳೂರಿಗೆ ವಿದ್ಯಾಭ್ಯಾಸಕ್ಕೆ ಹೋಗುವ ನಮ್ಮ ಹುಡುಗರ ಪೈಕಿ ಹೆಚ್ಚಿನವರು ಅಂದರೆ ನೂರರಲ್ಲಿ ೯೦ ಮಂದಿಗಿಂತಲೂ, ಹೆಚ್ಚಿನವರು ಸಾಧಾರಣ ಸ್ಕೂಲ್ ಫೈನಲ್ ಕ್ಲಾಸಿನ ವರೆಗೆ ಕಲಿತು ಹಿಂತಿರುಗಿ ತಮ್ಮ ಹಳ್ಳಿಗಳಿಗೆ ಬಂದು ತಮ್ಮ ಉದರ ಪೋಷಣೆಯನ್ನು ಮಾಡಬೇಕಾಗುವದು. ಇಂಥವರು ತಮ್ಮ ಹಳ್ಳಿಗಳಿಗೆ ಹಿಂತಿರುಗಿದೊಡನೆ ನೇಗಲುಗಳನ್ನು ಹಿಡಿದು ಕೃಷಿಗೆ ಕೈ ಹಾಕುವರೋ ಇಲ್ಲವೆ ಕಾಲಕ್ಷೇಪವಾಗಿದ್ದುಕೊಂಡು ಪಟ್ಟಣದ ಸೊಬಗನ್ನೂ, ಸೌಕರ್ಯವನ್ನೂ ಹಾರೈಸುತ್ತಿರುವರೋ ಎಂಬದನ್ನು ಪರಿಶೋಧಿಸಬೇಕಾದದ್ದೆ. ಹುಡುಗರು ಹಿಂತಿರುಗಿ ಹಳ್ಳಿಗಳಿಗೆ ಹೋಗುವಾಗ್ಗೆ ಸಾಧಾರಣ ಇಪ್ಪತ್ತು, ಇಪ್ಪತ್ತನಾಲ್ಕು ವರುಷ ಪ್ರಾಯದವರಾಗುವರು. ಕೃಷಿ ಕೆಲಸದ ಯಾವದೊಂದು ಮಾಹಿತಿ ಇಲ್ಲದೆ ಒಡನೆ ಕೃಷಿಗೆ ಕೈಹಾಕಲಿಕ್ಕೆ ಇವರಿಗೆ ಕಷ್ಟವಾಗುವದು. ಯಾವಾಗ ಒಬ್ಬನಿಗೆ ಒಂದು ಕೆಲಸದ ಅನುಭವವು ಇಲ್ಲವೋ ಆವನಿಗೆ ಆ ಕೆಲಸದ ಕಡೆಗೆ ಅಸಡ್ಡೆಯುಂಟಾಗುವದು. ಮಂಗಳೂರಿಗೆ ಹೋಗಿ ಲೇಖಣಿ ಹಿಡಿದ ಹಸ್ತವು ಹಳ್ಳಿಗೆ ಬಂದು ನೇಗಲು ಹಿಡಿಯುವದೋ ಎಂಬ ಒಂದು ತರದ ಡಾಂಭಿಕತ್ವವು ಹುಡುಗರಲ್ಲಿ ಅನೇಕ ವೇಳೆ ತಲೆದೋರಬಹುದು. ಇದು ಬಹು ತಪ್ಪು ಗ್ರಹಿಕೆ. ವಿದ್ಯೆ ಎಂದರೇನು? ವಿದ್ಯಾಭ್ಯಾಸದ ಉದ್ದೇಶವೇನು? ವಿದ್ಯೆಯು ಒಬ್ಬ ಮನುಷ್ಯನಿಗೆ ಅವನ ಜೀವನದ ಹೋರಾಟದಲ್ಲಿ ಸಹಾಯ ಮಾಡತಕ್ಕ ಒಂದು ತರದ ಬುದ್ಧಿ ಶಕ್ತಿಯು. ಸಮಯ ಹೋಗುತ್ತಲೆ ಕಾಯ ಕಷ್ಟದ ಬಲುಮೆಯಿಂದ ಜೀವನದ ಹೋರಾಟವನ್ನು ಕೈಸುವ ಸಂದರ್ಭಗಳು ಕಮ್ಮಿಯಾಗುವವು. ನಮ್ಮಲ್ಲಿ ಹೆಚ್ಚಿನವರಿಗೆ ದೊರೆಯುವ ವಿದ್ಯಾಭ್ಯಾಸದ ಉದ್ದೇಶವೇನಾಗಬೇಕೆಂದರೆ ನಮಗೆ ಲಭಿಸುವ ವಿದ್ಯೆಯ ಬಲುಮೆಯಿಂದ ನಾವು ನಮ್ಮ ಹುಟ್ಟು ಕಸಬನ್ನು ವರ್ಧಿಸಿ ನಮ್ಮ ಹಿರಿಯರು ಅವರ ಕಷ್ಟದಿಂದ ಪಡೆದ ಉತ್ಪತ್ತಿಗಿಂತ ಇಮ್ಮಡಿ ಉತ್ಪತ್ತಿಯನ್ನು ನಾವು ಭೂಮಿಯಿಂದ ಪಡೆಯಲು ಪ್ರಯತ್ನಿಸಬೇಕು. ಹೀಗಿರದೆ ಮಂಗಳೂರಿಗೆ ಹೋಗಿ ವಿದ್ಯೆ ಪಡೆದು ಹಳ್ಳಿಯಲ್ಲಿ ತಮ್ಮ ಹೆತ್ತವರು ಮಾಡುವ ತಮ್ಮ ಹುಟ್ಟು ಕಸಬಾದ ಕೃಷಿಯ ಮೇಲೆ ಅಸಂತುಷ್ಟಿಗೊಳಿಸುವ ವಿದ್ಯೆಯು ನಮಗೆ ಎಂದಿಗೂ ಬೇಡ. ಆದುದರಿಂದ ಕಾಲಕ್ರಮೇಣ ನಮ್ಮ ಮಂಗಳೂರಿನಲ್ಲಿರುವ ವಿದ್ಯಾರ್ಥಿ ಭವನದಲ್ಲಿ ಒಂದು ಕೃಷಿ ಶಾಖೆಯನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೆ ವಾರದಲ್ಲಿ ಕೆಲವು ತಾಸುಗಳ ವರೆಗೆ ಕೃಷಿಯ ಮೂಲ ತತ್ವಗಳನ್ನು ಹೇಳಿ ಕೊಟ್ಟು, ಕೃಷಿಯ ಕೆಲಸಗಳಲ್ಲಿ ಅವರನ್ನು ತಿದ್ದುವದು ಅವಶ್ಯ. ಈ ವಿಷಯಕ್ಕೆ ಜಾತಿಯ ಹಿತಚಿಂತಕರು ಲಕ್ಷ್ಯ ಕೊಟ್ಟು ಅದಕ್ಕೆ ಬೇಕಾದ ಧನ ಸಹಾಯ ಮಾಡುವದು ಅವರ ಕರ್ತವ್ಯವಾಗಿರುವದು. ಬಿ. ಎ. ಮೊದಲಾದ ಪರೀಕ್ಷೆಗಳನ್ನು ಪಾಸಾಗಲಿಕ್ಕೆ ಯೋಗ್ಯರಾದವರು ಮುಂದರಿಯಲಿ, ಮಧ್ಯಮ ವಿದ್ಯೆಯಿಂದ ಹಿಂತಿರುಗುವವರು ಒಂದು ಕಸಬಿನ ಪರಿಜ್ಞಾನವನ್ನು ಪಡೆಯಲಿ.

ಕೃಷಿಯು ಬಹು ಸುಲಭದ ಕಸಬು, ಅದನ್ನು ಮಾಡಲಿಕ್ಕೆ ಹೆಚ್ಚಿಗೆ ಬುದ್ಧಿ ಶಕ್ತಿಯು ಅವಶ್ಯವಿಲ್ಲ, ಅದು ಯಾವ ಕಸಬಿಗೂ ಆಗದ ಹೆಡ್ಡನಿಗೆ ಹೇಳಿದ ಕಸಬೆಂದು ಸರ್ವಸಾಧಾರಣ ಜನರು ಅಭಿಪ್ರಾಯಪಡುತ್ತಾರೆ. ಕೃಷಿ ಶಾಸ್ತ್ರವೆಂಬ ಶಾಸ್ತ್ರವು ಇಲ್ಲ, ಅದಕ್ಕೆ ನಿಯಮವು ಇಲ್ಲ. ಗದ್ದೆಗಳಲ್ಲಿ ಕೋಣಗಳನ್ನು ಓಡಿಸಿ, ಬೀಜ ಬಿತ್ತಿದರೆ ಪೈರಾಗುತ್ತದೆ, ಅದನ್ನು ಕೊಯ್ದು ಮನೆಗೆ ತಂದರೆ ಸಾಕು. ಇದೇ ಕೃಷಿಯ ಸೂತ್ರಗಳೆಂದು ಅಭಿಪ್ರಾಯಪಡುವದು ಬಹು ತಪ್ಪು ತರದ ಗ್ರಹಿಕೆ. ಒಬ್ಬ ಮನುಷ್ಯನು ಕೃಷಿಯಲ್ಲಿ ಜಯಶೀಲನಾಗಬೇಕಾದರೆ ಅವನು ಹೆಚ್ಚಿನ ಬುದ್ಧಿ ಶಕ್ತಿಯನ್ನು ಉಪಯೋಗಿಸಬೇಕಾಗುವದು. ಪೈರಿಗೆ ಇರುವಷ್ಟು ಕಂಟಕ ಬೇರೆ ಯಾವದಕ್ಕೂ ಇಲ್ಲ. ಈ ಕಂಟಕಗಳನ್ನು ಪರಿಹರಿಸಲಿಕ್ಕೆ ಹೆಚ್ಚಿನ ಬುದ್ಧಿ ಶಕ್ತಿಯು ಅವಶ್ಯ. ಇದಕ್ಕಿಂತ ಗೌರವದ ಮತ್ತು ಪ್ರಯೋಜನಯುಕ್ತವಾದ ಕಸಬು ಬೇರೆ ಯಾವದೂ ಇಲ್ಲ. ಯೂರೋಪ, ಅಮೇರಿಕ ಮೊದಲಾದ ದೇಶಗಳಲ್ಲಿ ಅರಸರುಗಳೂ, ದೊಡ್ಡ ದೊಡ್ಡ ಮನೆತನದವರೂ ಕೃಷಿಯಲ್ಲಿ ವರ್ತಿಸಿಕೊಂಡಿರುವರು. ಅವರು ಅದು ಹೀನ ವೃತ್ತಿಯೆಂದು ನೆನಸುವದಿಲ್ಲ. ಅದು ಗೌರವದ ಪ್ರವೃತ್ತಿಯೆಂದ ನೆನಸುವರು. ಒಬ್ಬ ರಾಜನಿಗೆ ತನ್ನ ಪ್ರಜೆಗಳಿಂದ ದೊರೆಯುವ ಕಂದಾಯಗಳಲ್ಲಿ ಭೂಕಂದಾಯವೇ ವಿಶೇಷವಾದದ್ದು. ಈ ಕಂದಾಯದಿಂದಲೇ ರಾಜನು ಸೇನೆಯನ್ನು ಪೋಷಿಸುವನು, ತನ್ನ ಕೈಕೆಳಗೆ ಇರುವ ಎಲ್ಲಾ ಉದ್ಯೋಗಸ್ಥರಿಗೆ ಸಂಬಳವನ್ನೀಯುವನು. ಇಂಥಾ ಕಂದಾಯವನ್ನು ಒದಗಿಸಿ ಕೊಡುವ ರೈತನು ರಾಜನ ಮನ್ನಣೆಗೆ ಯೋಗ್ಯನಾದವನು.

ಕೃಷಿ ಶಾಸ್ತ್ರವು, ವೈದ್ಯಶಾಸ್ತ್ರ, ಶಿಲ್ಪಶಾಸ್ತ್ರ ಮೊದಲಾದ ಶಾಸ್ತ್ರಗಳಂತೆಯೆ ಒಂದು ವಿಶೇಷವಾದ ಶಾಸ್ತ್ರವಾಗಿರುತ್ತದೆ. ಅದು ಬರೇ ವಾಮೂಲ್ ಪ್ರಕಾರ ಮಾಡುವ ಒಂದು ತರದ ಕೆಲಸವೆಂತ ನೆನಸಕೂಡದು; ಕೃಷಿ ಶಾಸ್ತ್ರ, ವನಸ್ಪತಿ ಶಾಸ್ತ್ರ, ಭೂರಸಾಯನ ಶಾಸ್ತ್ರ, ಪಶುವೈದ್ಯ ಶಾಸ್ತ್ರ, ಕ್ರಿಮಿ ಶಾಸ್ತ್ರ, ಶಿಲ್ಪಶಾಸ್ತ್ರ ಮೊದಲಾದ ಅನೇಕ ಶಾಸ್ತ್ರಗಳಿಂದ ಕೂಡಿರುವ ಒಂದು ಶಾಸ್ತ್ರವಾಗಿರುವದು.

ವನಸ್ಪತಿ ಶಾಸ್ತ್ರದಿಂದ ರೈತನಿಗೆ ಏನು ಪ್ರಯೋಜನ? ಸಸ್ಯಾದಿಗಳಿಗೆ ಮನುಷ್ಯರಂತೆಯೆ ಹಸಿವು ಬಾಯಾರಿಕೆಗಳಿರುವವು. ಯಾವ ರೈತನು ತನ್ನವನ್ನು ಪ್ರೀತಿಯಿಂದ ನೋಡಿಕೊಂಡಿದ್ದು ಲಾಲನೆ ಪಾಲನೆ ಮಾಡುವನೋ ಅಂಥವನಿಗೆ ಅವುಗಳು ತಕ್ಕ ಫಲವನ್ನು ಕೊಡುವವು. ರೈತನು ತನ್ನ ಪೈರುಗಳಿಗೆ ಬೇಕಾದ ಆಹಾರವನ್ನೂ, ನೀರನ್ನೂ ಕೊಟ್ಟು ಅವುಗಳನ್ನು ನೋಡಿಕೊಂಡಿದ್ದರೆ, ರೈತನನ್ನು ನೋಡುತ್ತಲೆ ಪೈರು ನಗ್ಗಾಡುವದು. ಆಹಾರವನ್ನು ಕೊಡದಿದ್ದರೆ ತಲೆಯನ್ನು ಬಗ್ಗಿಸಿ ತೂಗುತ್ತಿರುವವು. ಸಸ್ಯಾದಿಗಳಲ್ಲಿ ಕೂಡಾ ಜಾತಿಭೇದವಿರುವದು. ಅವುಗಳಿಗೆ ಕೂಡಾ ಅಂಗಾಂಗಗಳಿರುವವು. ಅವುಗಳಿಗೆ ಮನುಷ್ಯರಂತೆಯೆ ರೋಗ ಕಂಟಕಗಳಿರುವವು. ಈ ರೋಗ ಕಂಟಕಗಳನ್ನು ತಿಳಿದು ಅವುಗಳಿಗೆ ಬೇಕಾದ ಚಿಕಿತ್ಸೆಗಳನ್ನು ಅರಿತುಕೊಳ್ಳುವದು ರೈತನಿಗೆ ಬೇಕಾದ ಸಂಗತಿಯು. ಮಣ್ಣಿನ ತತ್ವವನ್ನು ಮಣ್ಣಿನಲ್ಲಿರುವ ಬೇರೆ ಬೇರೆ ಪದಾರ್ಥಗಳನ್ನು ಮತ್ತು ಇವುಗಳು ಸಸ್ಯಾದಿಗಳಿಗೆ ಹ್ಯಾಗೆ ದೊರಕುತ್ತದೆಂಬದನ್ನು ಕೃಷಿ ಭೂರಸಾಯನ ಶಾಸ್ತ್ರವು ರೈತನಿಗೆ ತಿಳಿಸುವದು. ಮತ್ತು ಭೂಮಿಗೆ ಗೊಬ್ಬರವನ್ನು ಹಾಕುವದರ ಉದ್ದೇಶವೇನು, ಯಾವ ಯಾವ ಪೈರುಗಳಿಗೆ ಯಾವ ಯಾವ ತರದ ಗೊಬ್ಬರವು ಅವಶ್ಯವೆಂಬದನ್ನು ಕೃಷಿ ರಸಾಯನ ಶಾಸ್ತ್ರವು ತಿಳಿಯಪಡಿಸುವದು. ಪಶು ವೈದ್ಯ ಶಾಸ್ತ್ರವು ಸಾಧಾರಣ ಜಾನುವಾರುಗಳಿಗೆ ಬರುವ ರೋಗಗಳ ಕಾರಣಗಳನ್ನು ಅವುಗಳ ಚಿಕಿತ್ಸೆಯನ್ನು ತಿಳಿಯಪಡಿಸುವದು. ಇದೇ ಮೊದಲಾದ ಶಾಸ್ತ್ರಗಳ ಜ್ಞಾನವು ರೈತರಿಗೆ ಅವಶ್ಯವಾದದ್ದು. ಯೂರೋಪ, ಅಮೇರಿಕ, ಜಪಾನ ಮೊದಲಾದ ರಾಜ್ಯಗಳಲ್ಲಿ ವಿದ್ವಾಂಸರು ಈ ಜ್ಞಾನಗಳನ್ನು ಪಡೆದು ತಮ್ಮ ರಾಜ್ಯಗಳ ಉತ್ಪತ್ತಿಯನ್ನು ಮುಂಚಿಗಿಂತಲೂ ಇಮ್ಮಡಿಯಾಗಿ ಮಾಡಿರುವರು. ಜಿಲ್ಲೆಯ ಜನಸಂಖ್ಯೆಯು ಏರುತ್ತಿದೆ. ಸಾಧಾರಣ ೫೦ ವರ್ಷಗಳಿಂದೀಚೆಗೆ ನಮ್ಮವರ ಸಂಖ್ಯೆಯು ಶೇಕಡಾ ೨೫ರಂತೆ ಏರಿರುತ್ತದೆ. ಐವತ್ತು ವರುಷಗಳ ಮೊದಲು ನಮ್ಮವರ ಸಂಖ್ಯೆಯು ಒಂದು ಲಕ್ಷಕ್ಕಿಂತ ಕಮ್ಮಿಯಾಗಿತ್ತು, ಆದರೆ ಈಗಲಾದರೂ ಒಂದೂ ಕಾಲು ಲಕ್ಷಕ್ಕಿಂತಲೂ ಹೆಚ್ಚಿರುತ್ತದೆ. ಆದರೆ ಕೃಷಿಯ ವಿಸ್ತೀರ್ಣವು ಜನಸಂಖ್ಯೆ ಹೆಚ್ಚಾದ ಹಾಗೆಲ್ಲ ವಿಸ್ತರಿಸಲಿಲ್ಲ ಮತ್ತು ಹೀಗೆ ವಿಸ್ತರಿಸಲಿಕ್ಕೂ ಸಾಧ್ಯವಿಲ್ಲ. ಆದುದರಿಂದ ಕಾಯಕಷ್ಟದ ಬಲುಮೆಯಿಂದಲೂ, ಬುದ್ಧಿ ಶಕ್ತಿಯ ಬಲುಮೆಯಿಂದಲೂ ಭೂಮಿಯ ಉತ್ಪತ್ತಿಯನ್ನು ಹೆಚ್ಚಿಸಬೇಕು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಭತ್ತದ ಸಾಗುವಳಿಯು, ಮತ್ತು ಬಂಟರೆಂದರೆ ಭತ್ತದ ಸಾಗುವಳಿಗಾರರು. ವಿಶೇಷವಾಗಿ ಮಳೆ ಬರುವ ಈ ಜಿಲ್ಲೆಯಲ್ಲಿ ಭತ್ತದ ಸಾಗುವಳಿಯಷ್ಟು ಸುಲಭ ಸಾಗುವಳಿಯು ಬೇರೆ ಯಾವದೂ ಇಲ್ಲ. ಬೇರೆ ಯಾವ ಪೈರಿನ ಸಾಗುವಳಿಗೆ ಕೈಹಾಕಲಿಕ್ಕೂ ನಮ್ಮವರಿಗೆ ಮನಸ್ಸಿಲ್ಲ. ಭತ್ತದ ಕೃಷಿಯಲ್ಲಿ ಒಂದು ಎಕ್ರೆಗೆ ಸಾಧಾರಣ ನೂರು ರೂಪಾಯಿಗಳು ದೊರೆಯಬಹುದು, ಆದರೆ ಕಬ್ಬಿನ ಸಾಗುವಳಿ ಮಾಡಿದರೆ ಎಕ್ರೆಗೆ ೫೦೦ ವೊ ೬೦೦ ರೂಪಾಯಿ ದೊರೆಯುವದಕ್ಕೆ ಅಡ್ಡಿ ಇಲ್ಲ. ಒಳ್ಳೆ ಪೈರಾದರೆ ಎಕ್ರೆಗೆ ಸಾವಿರ ರೂಪಾಯಿ ಕೂಡಾ ದೊರೆಯುವದು. ಹತ್ತು ಎಕ್ರೆಗಳಲ್ಲಿ ಭತ್ತದ ಸಾಗುವಳಿ ಮಾಡುವದೂ ಸಮ, ಒಂದು ಎಕ್ರೆಯಲ್ಲಿ ಕಬ್ಬಿನ ಸಾಗುವಳಿ ಮಾಡುವದೂ ಸಮ. ಕಬ್ಬಿನ ಸಾಗುವಳಿಗೆ ಸ್ವಲ್ಪ ವಿಶೇಷ ಶ್ರಮ ಉಂಟೆಂಬುವದು ನಿಜ. ಕಷ್ಟವಿಲ್ಲದೆ, ಇಷ್ಟ ದೊರೆಯದು. ನಮ್ಮವರೂ ಕೂಡಾ ಬೇರೆ ಬೇರೆ ತರದ ಆಧಿಕ್ಯವುಳ್ಳ ಪೈರುಗಳನ್ನು ಬೆಳೆಯಿಸಿ ಅದರ ಅನುಭವ ಮಾಡಿಕೊಳ್ಳತಕ್ಕದ್ದು. ನಮ್ಮವರು ಹತ್ತು ಮುಡಿ ಗದ್ದೆ ಸಾಗುವಳಿ ಮಾಡಿ ಪಡೆಯುವಷ್ಟು ಆಧಿಕ್ಯವನ್ನು ಕ್ರೈಸ್ತರು ಒಂದು ಮುಡಿ ಗದ್ದೆಯಲ್ಲಿ ಹೊಂದುವರು. ಆದುದರಿಂದ ನಮ್ಮವರು ಕೂಡಾ ಸಮಯಕ್ಕೆ ತಕ್ಕದ್ದಾದ ಪೈರುಗಳನ್ನು ಬೆಳೆಯಿಸಿ ಹೆಚ್ಚಾದ ಆಧಿಕ್ಯವನ್ನು ಪಡೆಯಲು ಪ್ರಯತ್ನಿಸಬೇಕು.

ಕೆ. ಟಿ. ಆಳ್ವ.

ಬಾತಮಿಗಳು.

ಕಾಪು:—ಸ್ನಾನಕ್ಕೆಂದು ಕೆರೆಗೆ ಹೋದ ಬಾಂಗಾಳ ಪಕೀರರ ಮಗಳು ಮತ್ತು ಮೊಮ್ಮಗಳು ನೀರಿನಲ್ಲಿ ಮುಳುಗಿ ಮೃತವಾಗಿ ಹೋದ ವಾರ್ತೆಯು ಬಹಳ ವಿಷಾದಕರವಾಗಿದೆ.

ಕಾಪು ಜಾತ್ರೆ ಸಮೀಪಿಸುತ್ತಾ ಬಂತು. ಈ ಜಾತ್ರೆಯ ಕಾಲ ನಿವಾಸಿಕರು ಜುಗಾರಾಟಕ್ಕೆ ಇಂಬುಕೊಡದಂತೆ ನೋಡಿಕೊಳ್ಳುವದು ವಿಹಿತ.

ಪಡುಬಿದ್ರೆಯಲ್ಲಿ ಸದ್ಯ ಒಂದು ತಂತಿ ಆಫೀಸು ಆಗುವದು ಎಂದು ವಾರ್ತೆ ಇದೆ. ಈ ಸಂಪರ್ಕ ಪಡುಬಿದ್ರೆ ಸಂತೆಕಟ್ಟೆಯಲ್ಲಿಯೇ ಸಬ್ ಆಫೀಸನ್ನು ತೆರವಲ್ಲಿ ಯಮರ್ಮಾಳ ನಿವಾಸಿಕರಿಗೂ ಎಷ್ಟೋ ಉಪಕಾರವೆನ್ನಬಹುದು.

ಬೋರ್ಡಿನವರಿಂದ ಚಲೋದಾಗಿ ಕಟ್ಟಿಸಲ್ಪಟ್ಟ ಹಂಗಾರಕಟ್ಟೆ ಶಾಲೆಯ ಪ್ರವೇಶ ಮಹೋತ್ಸವವು ತಾ. ೧೫—೧—೧೭ನೇ ಮಧ್ಯಾಹ್ನ ಮ॥ ರಾ॥ ಉಡ್ಪಿರೇಂಜು ಶಾಲೆಗಳ ಸುಪ್ರವೈಜರವರಾದ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಆಗುವದಾಯಿತು. ಆಟ್ಟಣವು ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟಿತು. ಆ ದಿನ ೧೨೪ ವಿದ್ಯಾರ್ಥಿಗಳು ಹಾಜರಿದ್ದರು. ಕಾರ್ಣನ ಬೋರ್ಡ ಶಾಲಾ ವಿದ್ಯಾರ್ಥಿಗಳು, ಮಾಸ್ತರರು ಮೆರವಣಿಗೆಯಿಂದ ಒಳಪ್ರವೇಶಿಸಿದರು. ಊರ ಮಹನೀಯರೂ ಸರಕಾರಿ ಉದ್ಯೋಗಸ್ಥರೂ ನೆರೆದು ಬಂದಿದ್ದರು. ದೇವತಾ ಪ್ರಾರ್ಥನೆಯನ್ನು ಕಾರ್ಕಡ ಶಾಲಾ ಬಾಲಕರು ಸೊಗಸಾಗಿ ಹಾಡಿದರು. ಸದರಿ ಶಾಲಾ ಹೆಡ್‌ಮಾಸ್ತರರು ಶಾಲಾ ರಿಪೋರ್ಟನ್ನು ಓದಿದ ನಂತರ ಅಧ್ಯಕ್ಷರೂ ಊರವರೂ ಉಪಾಧ್ಯಾಯರುಗಳೂ ಈ ಶಾಲೆ ಆಗುವಂತೆ ತಮ್ಮ ತಮ್ಮ ಮನಃಪೂರ್ವಕ ಪ್ರಯತ್ನಿಸಿದ ಮ॥ ರಾ॥ ಉಳ್ಳಾಲ ಮಂಗೇಶರಾಯರನ್ನು ನೆನಪು ಮಾಡಿ ಸಭೆಯವರಿಗೂ ಬೋರ್ಡಿನವರಿಗೂ ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಮರ್ಪಿಸಿ ರಾಜಗೀತವನ್ನು ಹಾಡಿ ನೆರೆದ ಸಭಿಕರು ಹೆಡ್ ಮಾಸ್ತರರಿಂದ ಸರ್ವ ವಿಧದಲ್ಲಿ ಸತ್ಕೃತರಾಗಿ ಸಭೆಯನ್ನು ಕೊನೆಗಾಣಿಸಿದರು.

ಪುತ್ತೂರು:—ಉಪ್ಪಿನಂಗಡಿ ತಾಲೂಕಿನ ೧೯೧೬ನೇ ಸಾಲಿಯ ಜಮಾಬಂದಿಯು ಇದೇ ೧೯೧೭ನೇ ಇಸವಿ ಪೆಬ್ರವರಿ ತಾ. ೧೦ರಿಂದ ೧೪ರ ವರೆಗೆ ವಿಟ್ಲ; ೧೬ ರಿಂದ ೨೦ರ ವರೆಗೆ ಸುಳ್ಯ; ತಾ. ೨೪ರಿಂದ ೨೮ರ ವರೆಗೆ ಪುತ್ತೂರು; ಮಾರ್ಚ ೩ರಿಂದ ೬ರ ವರೆಗೆ ಗೋಳಿತಟ್ಟು; ತಾ. ೮ ರಿಂದ ೧೩ರ ವರೆಗೆ ಬೆಳ್ತಂಗಡಿ; ಈ ಮೊಕಾಂಗಳ ಮೇರೆಗೆ ಪುತ್ತೂರು ಡಿವಿಜನಲ ಆಫೀಸರರಿಂದ ನಡಿಸೋಣಾಗುವದೆಂತಲೂ ಹಾಲಹವಾಲೆಗಳನ್ನು ಹೇಳಿಕೊಳ್ಳಲಿಕ್ಕೆ ಜಮಾಬಂದಿಯು ಮುಖ್ಯ ಸಮಯವೆಂದು ರೈತರಿಗೆ ಗ್ರಾಮ ಉದ್ಯೋಗಸ್ಥರು ತಿಳಿಸತಕ್ಕದೆಂದು ಪ್ರಕಟಿಸಿರುವರು.

ಉಪ್ಪಿನಂಗಡಿ ತಾಲೂಕಿನ ಮುಡಪಾಡಿ ಗ್ರಾಮದ ಗೋಲ್ಯಾಡಿ ಕೃಷ್ಣಪ್ಪ ಗೌಡರು ತನ್ನ ಖಾನೆಪಟ್ಟೆಗೆ ಸೇರಿದ ಸರ್ವೆ ನಂಬ್ರಕ್ಕೆ ಒಳಪಟ್ಟು ತೀರ್ವೆ ತರುವ ಸ್ಥಳವನ್ನು ಸದರಿ ಗ್ರಾಮದ ತಮ್ಮಣ್ಣ ಗೌಡಗೆ ದರಖಾಸ್ತಿಗೆ ಕೊಟ್ಟು ಉಭಯತರಿಂದ ಒಂದೇ ಸ್ಥಳಕ್ಕೆ ಇಮ್ಮಡಿ ತೀರ್ವೆ ವಸೂಲು ಮಾಡುವದು ಕಾನೂನಿಗೆ ವಿರೋಧವಾದ್ದೆಂಬದಾಗಿ ಸದರಿ ಕೃಷ್ಣಪ್ಪ ಗೌಡನು ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಬರಕೊಂಡ ಅರ್ಜಿ ಕುರಿತು ಇಲ್ಲಿಯ ತಾಲೂಕು ಆಫೀಸಿನಲ್ಲಿ ತನಿಕೆ ನಡಿಯುತ್ತಿರುವದು. ಇದೊಂದು ಆಶ್ಚರ್ಯಕರವಾದ ಸಂಗತಿಯಾಗಿರುವದು.

ಕಂಬಳೆ:—ಈ ಮೊದಲು ಇಲ್ಲಿಯ ಜುಮ್ಮಾ ಮಸೀದಿಯ ಎದುರು ರಸ್ತೆಯಲ್ಲಿ ಇಬ್ಬರನ್ನು ಕೊಚ್ಚಿ ಕೊಂದ ನಾಗರ ಹಾವು ರೈಲ್ವೇ ಪ್ಲ್ಯಾಂಟ್ ಮೇನ್ ದ್ವಾರಪ್ಪಯೇ ನಂಬಿಯಾರ ಎಂಬವನನ್ನು ಕೆಲವು ದಿವಸಗಳ ಹಿಂದೆ ರಾತ್ರಿ ಅದೇ ಸ್ಥಳದಲ್ಲಿ ಕಚ್ಚಿತು. ಕೂಡಲೇ ಆತಗೆ ಔಷಧಿ ಕೊಟ್ಟು ಮರುದಿನ ಆತನ ಸ್ವಂತ ಊರಾದ ಕಣ್ಣನ್ನೂರು ಸಮೀಪ ಎಡಕ್ಕಾಡು ಎಂಬಲ್ಲಿಗೆ ಕಳುಹಿಸಲ್ಪಟ್ಟ... ಈಗ ಕೂಡ ನಿಶ್ಯಕ್ತನಾಗಿರುವದಾಗಿ ವರ್ತಮಾನವಿದೆ. ಈ ಹಾವಿನ ಸಂಚಾರವು ರಾತ್ರಿಕಾಲದಲ್ಲದ್ದರಿಂದ ಜನರ ಭೀತಿಯು ಅತ್ಯಧಿಕ.

ಮುಲ್ಕಿ:—ದಿಸ್ಟ್ರಿಕ್ಟ ಕಲೆಕ್ಟರ ದೊರೆಗಳು ಈ ಮುಲ್ಕಿ ಮೊಕ್ಕಾಂ ಮಾಗಿ ತಾ. ೨ರಲ್ಲಿ ಬಪ್ಪ ನಾಡಿನ... ದಿಂದ ಬಿದಿಗಳನ್ನು ತೋರಣಗಳಿಂದಲೂ ವಗೈರೆ ಶೃಂಗಾರ ಮಾಡಿ ದೊರೆಗಳ ಆಗಮನ ನಿರೀಕ್ಷಿಸಿ ಬಂದ. ಕೂಡಲೆ ದೊರೆಗಳಿಗೂ ಪತ್ನಿಗಳಿಗೂ ಹೂಮಾಲೆಗಳನ್ನು ಹಾಕಿ, ಗನಾರ್ಳಗಳನ್ನು ಹೊಡಿಸಿ ಮರ್ಯಾದೆಯಿಂದ ಬಂಗ್ಲೆಗೆ ಸ್ವಾಗತ ಮಾಡೋಣಾಯಿತು. ದೊರೆಗಳು ಪತ್ನಿಗಳು ಸಹ ದಿನಾಲು ಸಂಜೆಗೆ ಸಮುದ್ರ ಸ್ನಾನಕ್ಕೆ ದಯಮಾಡುವರು. ಹಿಂದು ಶಾಸ್ತ್ರದಲ್ಲಿ ಸಮುದ್ರ ಸ್ನಾನವನ್ನು ಮತ ಸಂಬಂಧವಾಗಿ ಮಾಡಬೇಕೆಂದೂ ಪುಣ್ಯಪ್ರದವೆಂದೂ ಮಾಡಿಟ್ಟರೂ ಅದರ ಪ್ರಯೋಜನವನ್ನು ಈಗಿನ ಕಾಲದಲ್ಲಿ ಯುರೋಪಿಯನ್ ಜನರು ಅನುಭೋಗಿಸುತ್ತಾರೆ. ಇಷ್ಟು ವರೆಗೆ ಹೇಸಿಗೆ ಇದ್ದ ಮಾರ್ಗಗಳೆಲ್ಲಾ ಮಂಗಳೂರ ಮುನಿಸಿಪಾಲಿಟಿ ಮಾರ್ಗಗಳಿಗಿಂತ ಒಳ್ಳೆದಾಗಿ ಮಾಡೋಣಾಗಿವೆ, ರಾಜಾ ಪ್ರತ್ಯಕ್ಷದೈವತಾ ಎಂಬದು ನಿಜವೇ. ಮುಲ್ಕಿಯಲ್ಲಿ ಮ॥ ರಾ॥ ತಾಲೂಕು ಬೋರ್ಡು ಮೆಂಬರ ಬೋಳ ಮಾಧವರಾಯರು ನೂತನವಾಗಿ ತಮ್ಮ ಖರ್ಚಿನಿಂದ ಯೂನಿಯನ್ ಕ್ಲಬ್ ನಡಿಯುವ ಕಟ್ಟಡಕ್ಕೆ ಕಟ್ಟುವ ಕಟ್ಟೋಣದ ಮೂಲೆಕಲ್ಲನ್ನು ದೊರೆಗಳು ತಾ. ೨೪ಕ್ಕೆ ಸ್ವಹಸ್ತಾಕ್ಷರವಾಗಿ ಸಂತೋಷಪಟ್ಟಿದ್ದಾರೆ. ಇಂಥಾ ಉದಾರ ಬುದ್ಧಿಯುಳ್ಳ ಮಾಧವರಾವ್ ಸಹೋದರರಿಗೆ ದೇವರು ಒಳ್ಳೇದು ಪಾಲಿಸಲಿ. ರೈತರ ಹತ್ತರ ಇಷ್ಟು ಸಲಿಗೆಯುಳ್ಳ ದೊರೆಗಳು ಈ ಜಿಲ್ಲೆಗೆ ಬಂದದ್ದು ಇಲ್ಲ. ಈ ಸಮಯ ಎಲ್ಲಾ ಏರ್ಪಾಡುಗಳನ್ನು ಮಾಡಿದ ಹೊಸ ಮುಲ್ಕಿ ಡಿವಿಜನ್ ಡಿ. ತಹಶೀಲದಾರರ ಮತ್ತು ರೆವಿನ್ಯು ಇನ್ಸ್‌ಪೆಕ್ಟರರ ಸಾಹಸವನ್ನು ಹೊಗಳಬೇಕಾಗಿದೆ.

ಹವ್ಯಕ ದ್ರಾವಿಡ ವಿದ್ಯಾವರ್ಧಕ ಸಭಾ.

ಕಳೆದ ದಶಂಬರ ತಾ. ೨೮ರಲ್ಲು ಪೋಳ್ಯದಲ್ಲಿ ಹವ್ಯಕ ದ್ರಾವಿಡ ಬ್ರಾಹ್ಮಣರ ವಿದ್ಯಾವರ್ಧಕ ಸಭೆಯ ದ್ವಿತೀಯ ವಾರ್ಷಿಕ ವರ್ಧಂತಿ ನೆರವೇರತ್ತೆಂದು ಮೊದಲೊಮ್ಮೆ ಸೂಚಿಸೋಣಾಗಿತ್ತು. ಮತ್ತು ಅಂದೆ ನಿಶ್ಚಯಿಸಿದ ಪ್ರಕಾರ ಆ ಸಭೆಯು ಇದೇ ಜನವರಿ ೨ನೇ ಶಾರೀಕಿನ ದಿವಸ ವಿಟ್ಲದ ಶ್ರೀಮದನಂತೇಶ್ವರನ ದೇವಸ್ಥಾನದಲ್ಲಿ ಜರಗಿತು, ಮ॥ ರಾ॥ ಸೇಡಿಯಾಪು ಜನಾರ್ದನ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿದ ಆ ಹವ್ಯಕ ವಿದ್ಯಾವರ್ಧಕ ಸಭೆಯನ್ನು ಸಂಘವನ್ನಾಗಿ ಮಾರ್ಪಡಿಸಿ ರಿಜಿಸ್ಟ್ರಿ ಮಾಡಿಸುವುದಾಗಿ ನಿರ್ಣಯವಾಯಿತು. ಮತ್ತು ಆ ಬಗ್ಗೆ ಅಧ್ಯಕ್ಷರಾಗಿದ್ದ ಮ॥ ರಾ॥ ಜನಾರ್ದನ ಬಟ್ಟರು ೭೫ ರೂಪಾಯಿಗಳ ಮೂಲಗೇಣಿ ಸ್ಥಳವನ್ನೂ, ಮ॥ ರಾ॥ ಪಂಜಿಗದ್ದೆ ತಿಮ್ಮಣ್ಣ ಬಟ್ಟರು ೧೦೦೦ ರೂಪಾಯಿ, ಮ॥ ರಾ॥ ಕರುಗಲ್ಲು ತಿಮ್ಮಣ್ಣ ಭಟ್ಟರು ರೂ ೫೦೦, ಮ॥ ರಾ॥ ದಕ್ಕಲ ವೆಂಕಟ್ರಮಣ ಭಟ್ಟರು ರೂ. ೫೦೦, ಮ॥ ರಾ॥ ನೆಕ್ರಾಜೆ ಶಂಕರನಾರಾಯಣ ಭಟ್ಟರು ೫೦೦ ರೂಪಾಯಿಗಳನ್ನೂ ವಾಗ್ದಾನ ಮಾಡಿದಲ್ಲದೆ ಇನ್ನು ಕೆಲವರು ವಾಗ್ದಾನ ಮಾಡಿದ್ದು ಸೇರಿ ಒಟ್ಟಿಗೆ ೫೦೦೦ ರೂಪಾಯಿಗಳು ಕೂಡಿದವು ಮತ್ತು ಇದಕ್ಕಾಗಿ ಪಂಜದಲ್ಲಿಯೂ, ಪೆರ್ಡಾಲದಲ್ಲಿಯೂ ಒಂದೊಂದು ಸಭೆಗಳನ್ನು ಮಾಡಿ ಕಾರ್ಯವನ್ನು ನೆರವೇರಿಸಬೇಕಾಗಿ ನಿಶ್ಚಯವಾಗಿದೆ.

ಪ್ರೇಕ್ಷಕ.

ಬಡ ವಿದ್ಯಾರ್ಥಿಗಳ ಸಹಾಯ ಫಂಡು.

ಕಳೆದ ನವೆಂಬರ ೩ಾ ೨೮ರ ನಂತರ ಈ ವರೆಗೆ ವಾಗ್ದಾನ ಮಾಡಿದವರ ಯಾ ವಸೂಲು ಕೊಟ್ಟವರ ಹೆಸರು ಮತ್ತು ಮೊಬಲಗು:—

ಮೊಬಲಗು ವರ್ಷಾವಧಿ. ರಾ॥ ಮುಲ್ಕಿ ಬಪ್ಪನಾಡು ಗುತ್ತು ಸಂಕಪ್ಪ ಶೆಟ್ರು ರೂ. ೨೫; ರಾ॥ ಕೊಡ್ಲ ಮೊಗೇರು ಸಂಜೀವ ಶೆಟ್ರುಗಳು ರೂ. ೨೫; ರಾ॥ ಬಾರ್ಕೂರ ನಾಗಣ್ಣ ಹೆಗ್ಗಡೇರು ರೂ ೯—೧೨—೦; ರಾ॥ ಕಳದಾರು ಗುತ್ತು ಅಪ್ಪಯ್ಯ ಶೆಟ್ರು ರೂ. ೬; ರಾ॥ ಶ್ರೀ ಕೃಷ್ಣ ವ್ಯಾಪಾರ ಸಂಘ ಕುಂದಾಪುರ ರೂ ೧೦; ರಾ॥ ಬಿ. ರಾಮಣ್ಣ ಶೆಟ್ಟಿ ಮತ್ತು ಕಂಪೆನಿ. ಹಂಚ, ಕಾರ್ಖಾನೆ ಮಾಲಕರ ರೂ. ೨೫; ರಾ॥ ಎಡ್ಮೆಮ್ಮಾಡಿ ಸುಬ್ಬಯ ಬಂಟರು ರೂ. ೧೨; ರಾ॥ ಮೂಲ್ಕಿ ದೂಮ ಶೆಟ್ರು ರೂ. ೪; ರಾ॥ ತಲಪಾಡಿ ಸುಬ್ಬ ಮಾರ್ಲರು ರೂ. ೫; ರಾ॥ ಬಸರೂರು ಮಹಲಿಂಗ ಶೆಟ್ರು ರೂ. ೧೨; ರಾ॥ ಅಜಲಾಡಿ ರಾಮಣ್ಣ ರೈಗಳು ರೂ ೬; ರಾ॥ ವಕೀಲ ನಂಜಪ್ಪ ಶೆಟ್ರು ಕಾರ್ಕಳ ರೂ. ೧೦; ಡಾಕ್ಟರ್ ಎಚ್. ವೆಂಕಪ್ಪ ಅಜಿಲರು ರೂ. ೧೫; ರಾ॥ ಮುಲ್ಕಿ ಮುದ್ದಣ್ಣ ಶೆಟ್ರು ಮತ್ತು ತಮ್ಮಂದಿಯರು ರೂ. ೧೦.

(ಮುಂದರಿಯುವದು).

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ, ಮಂಗಳೂರು
ತಾ. 23-1-1917.

ಮುಲ್ಕಿ ರಾಮಣ್ಣ ಶೆಟ್ರು.
ಕಾರ್ಯದರ್ಶಿ.

ಸಹಕಾರ.

೧೯೧೬ನೇ—೧೭ನೇ ವರ್ಷದ ೫ನೇ ಸರ್ಕ್ಯುಲಾರು.

ವ್ಯವಸಾಯದಲ್ಲಿ ಬರೇ ಸಸ್ಯಸಂಬಂಧವಾದ ಮತ್ತು ಜಂತುಸಂಬಂಧವಾದ ಗೊಬ್ಬರಗಳನ್ನು ಜಮೀನಿಗೆ ಹಾಕಿ ದೊರೆಯುವ ಫಸಲಿಗಿಂತ ಬೆಂಬಲಕ್ಕೆ ರಾಸಾಯನಿಕ ಗೊಬ್ಬರಗಳನ್ನೂ ಹದಗೆಡಿಸದೆ ಉಪಯೋಗಿಸುವುದರಿಂದ ಸಿಕ್ಕುವ ಉತ್ಪತ್ತಿಯು ಮತ್ತಷ್ಟು ಜಾಸ್ತಿಯಾಗುವದೆಂದು ಕೃಷಿಶಾಸ್ತ್ರಜ್ಞರು ಕಂಠೋಕ್ತವಾಗಿ ಹೇಳಿರುವರು. ರಸಾಯನ ಶಾಸ್ತ್ರಕ್ಕನುಸಾರವಾಗಿ ತಯ್ಯಾರಿಸಲ್ಪಡುವ ಗೊಬ್ಬರಗಳ ತಿಳಿವು ನಮ್ಮ ಜಿಲ್ಲೆಯ ರೈತರಿಗನೇಕರಿಗೆ ಇರಲಾರದು. ನೈಟ್ರೇಟ್ ಒಫ್ ಸೋಡಾ ಎಂಬ ಚಿಲ್ಲಿದೇಶದ ರಸಾಯನಿಕ ಸೌಳುಗೊಬ್ಬರದ ವಿಷಯವನ್ನು ಕಲ್ಕತ್ತೆಯ ನಂಬ್ರ ೧ನೇ ರೋಯಲ್ ಎಕ್ಸಚೇಂಜ ಪ್ಲೇಸ್ ಎಂಬಲ್ಲಿರುವ ಚಿಲಿಯನ್ ನೈಟ್ರೇಟ್ ಸಂಘದವರು ನಮ್ಮ ಲಕ್ಷ್ಯಕ್ಕೆ ತಂದು ಕೆಲವು ಕೃಷಿಲೇಖನಗಳನ್ನು ಕಳುಹಿಸಿರುವರು. ಈ ಚಿಲ್ಲಿಯ ಸೌಳುಗೊಬ್ಬರವು ಸಸ್ಯಾಹಾರಕ್ಕೆ ಅಗತ್ಯವಿರುವ ಶೇಕಡಾ ೧೫ರಿಂದ ೧೬ರ ವರೇಗಿನಷ್ಟು ನೈಟ್ರೊಜನ್ ಎಂಬ ಸಾರಜನಕ ವಾಯುವಿನಿಂದ ಕೂಡಿದ್ದು, ಮಣ್ಣಿನಲ್ಲಿ ಪೊಟ್ಯಾಶ್ ಎಂಬ ಕ್ಷಾರದ ಉಪ್ಪನ್ನು ಬಿಡುಗಡೆ ಮಾಡಿ ಸಸ್ಯಾಹಾರವಾಗಿ ಒದಗಿಸುವ ಕಾರಣ ಯುರೋಪ, ಅಮೇರಿಕ, ಜಾಪಾನು, ಐಜಿಪ್ತ ಮೊದಲಾದ ದೇಶಗಳಲ್ಲಿ ಈ ಸೌಳುಗೊಬ್ಬರವು ಹೆಚ್ಚಿನ ಪ್ರಚಾರದಲ್ಲಿದೆ ಎಂಬುದು ಸದರೀ ನೈಟ್ರೇಟ್ ಸಂಘದವರ ಲೇಖನಗಳಿಂದ ಕಂಡುಬರುತ್ತಿದೆ. ಹಿಂದೂಸ್ಥಾನದಲ್ಲಿಯೂ ಕೂಡಾ ಹಲವು ವ್ಯವಸಾಯ ಕ್ಷೇತ್ರಗಳಲ್ಲಿ ಈ ಸೌಳನ್ನು ಊರುಗೊಬ್ಬರಗಳ ಜತೆಯಲ್ಲಿ ವಿವಿಧ ಬೆಳೆಗಳಿಗೆ ಪರೀಕ್ಷಾರ್ಥವಾಗಿ ಉಪಯೋಗಿಸಿ ಶೋಧನೆ ನಡಿಸಿ ಕಂಡುಹಿಡಿದ ಫಲಾಫಲಗಳು ನೈಟ್ರೇಟ್ ಸಂಘದವರ ಲೇಖನಗಳಿಂದ ವ್ಯಕ್ತವಾಗುವುದನ್ನು ಅಲೋಚಿಸಿದರೆ ನಮ್ಮ ಜಿಲ್ಲೆಯ ಕೃಷಿಕರೂ ಈ ಸೌಳಿನ ಯೋಗ್ಯತೆಯನ್ನು ಪರೀಕ್ಷಿಸಲಿಕ್ಕೆ ಹಿಂಜರಿಯರು. ಈ ಪ್ರಸ್ತಾಪಕ್ಕೂ ಸಹಕಾರ ಸಂಘಗಳಿಗೂ ಇರುವ ಸಂಬಂಧವನ್ನು ಕುರಿತು ಒಂದೆರಡು ಮಾತುಗಳು ಇನ್ನೊಂದು ಸರ್ಕ್ಯುಲರಲ್ಲಿ ಹೇಳಲ್ಪಡುವವು.

ಡೆಪ್ಯುಟಿ ರಿಜಿಸ್ಟ್ರಾರರ ಆಫೀಸ್, ಕೋಆಪರೇಟಿವ್ ಸೊಸೈಟೀಸ್, ಉಡುಪಿ.
ತಾ. 7-1-1917.

ಮಂ॥ ಅನಂತರಾವ್,
ಕಾರ್ಯದರ್ಶಿ.

ಸಿದ್ಧೌಷಧ [] [ಪರೀಕ್ಷಿಸಿ ನೋಡಿರಿ!!

ಇಕ್ಲಿಪ್ಸ್ ಡ್ರೊಪ್ಸ್!

ಇಕ್ಲಿಪ್ಸ್‌ಡ್ರೊಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ, ಎಲ್ಲಾ ಸಾಮಾನ್ಯ ಕಾಯಿಲೆಕಸಾರಿಕೆಗಳಿಗೆ ಕೈ ಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡ, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಶ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವವು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ. ಸೀಸೆ 1ಕ್ಕೆ ಆಣೆ 6. ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4-8-0.

"ಸಮಯಕ್ಕೆ ಒದಗಿದವನೇ ಮಿತ್ರ"ನೆಂಬುದು

ನಮ್ಮ

ಇಕ್ಲಿಪ್ಸ್ ಬಾಮ್

ಪ್ರಯೋಗಿಸಿ ನೋಡಿದವರೆಲ್ಲರಿಗೂ ಖಾತ್ರಿಯಾಗಿದೆ. ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುಣ್ಣು, ತುರಿಕಜ್ಜಿ, ಮೂಲವ್ಯಾಧಿ, ಚೇಳಿಯಬೊಕ್ಕೆ, ನೊಡಿಪೆ, ಜೇಣು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತಿದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

ಕ್ರಿಸ್ಟಾಲ್ ಕಾಜಾ ಯುಕಲಿಪ್ಟಸ್ ತೈಲ 5 ಆಣೆ; ಟೂರಕಟ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಬಿ. ನರಸಿಂಗರಾವ್, ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ದ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕಟ್ಟಿಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು



ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು 1 ಡಬ್ಬಾದಿಂದ 8 ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ 1ಕ್ಕೆ ರೂ. 1. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,

Avenue Road, ವೇದಪಾಠಶಾಲಾ,

BANGALORE CITY.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜೀಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್‌ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದು ವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂತು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,

3 ಇರುಳಪ್ಪನ ಬೀದಿ, ಮದರಾಸು.

---

100 ರೂಪಾಯಿಗಳ ಬಹುಮಾನ.

ಇವಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ.

ಸರ್ಪ ಚೇಳುಗಳ ವಿಷಧ್ವಂಸಿನಿ.

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗದಂತೆ ಹಾರಿ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ಮೇಲ್ಕಂಡ ಬಹುಮಾನಕ್ಕೆ ಬಾಧ್ಯರಾಗಿರುತ್ತಾರೆ.

ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣ್ಣ ಅಂಡ್ ಕಂಪನಿ,

ಸಾಹುಕಾರಪೇಟೆ, ಮದರಾಸು.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.

ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದಗಾಯ, ತುರಿಕಜ್ಜಿ, ಕೈಕಾಲು, ಬಾತು ಬರುವುದು, ಉಳುಕು ಕುರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಖಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ 1 ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇವೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್‌ಏಜಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**

Fergusson Road, BOMBAY.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಕೋಠಿಗಳಲ್ಲಿ ದೊರಕುವದು.	STANY BROTHERS Sole Agents C. M. O's, Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶ ಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರನೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0-14-0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1-10-0.

ಟಪ್ಪಾಲ್‌ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಷನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪನಿ,

3 ಇರುಳಪ್ಪನ ಬೀದಿ, ಮದರಾಸು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾಭರಣ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹ್ಯಾಳ್ಳು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟಿಗೆ ೨-೮-೦.

೩. ಪಂಚಕೇರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಗಳನ್ನೂ ಖಂಡಿತವಾಗಿ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಎಲ್ಲಾ ತರಹದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಅಗಸ್ತ್ಯೋಕ್ತ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನ ದಷ್ಟೇ ಸೊಗಸಾದ ಹುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ಡಬಿಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಹತ್ತುಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪ ದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಡಬಿಗೆ ೪ ಆಣೆ.

೧೩. ಸಪ್ತಾಮೃತಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಿಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ತಿಳುಹುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡದ ದಲ್ಲಿ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಯಿಸಬಹುದು.

ಪತ್ರ ವಿಳಾಸ:— ಬಿ. ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists* Vepery Post, MADARS.

ನೋಟೀಸು.

ಉಜ್ರೆಕುಡಿಗೆ ರಾಮಚಂದ್ರ ಶ್ಯಾನಭಾಗನು ಸರ್ವ ಜನರಿಗೆ ತಿಳಿಸುವದೇನಂದರೆ—

ನನಗೆ ಕೊಯ್ಯೂರು ರುಕ್ಮಯ್ಯಾಚಾರಿ ರೂಪಾಯಿ 24ಕ್ಕೆ ಬರಕೊಟ್ಟ ಡಿಮಾಂಡ್ ನೋಟ 1, ಲೋರೆನ್ಸ್ ಕೊಸ್ತಸ ರೂಪಾಯಿ 18ಕ್ಕೆ ಬರಕೊಟ್ಟ ಡಿಮಾಂಡ್ ನೋಟ 1, ಎರಡು ವಕಾಲತು ಫೋರ್ಮಿಗೆ ನನ್ನ ದಸ್ಕತು ಹಾಕಿ 2 ಫುಲ್ಸ್‌ಕೇಪ್ ಕಾಗದಕ್ಕೆ ಸಹಾ ನನ್ನ ದಸ್ಕತ. ಹಾಕಿ ಪುತ್ತೂರು ವಕೀಲ್ ಎಚ್. ಗಣಪತಿರಾಯರವರಿಗೆ ನನ್ನ ಬರಹ ಕಾಗದ ಸಮೇತ ಲಿಫಾಫೆ ಒಳಗೆ ಹಾಕಿ ವಕ್ಲಿನ ವಶಾ ಮುದ್ದಾ ರವಾನಿಸಿದ್ದೆ. ಆದರೆ ಸದರಿಯವನು ಅಮಲುಕೋರನಾಗಿಯೂ ಏನೊ ಕಾರಣ ದಿಂದ ಉಜ್ರೆಯಿಂದ ಉಪ್ಪಿನಂಗಡಿಗೆ ಹೋಗುವ ತನ್ನಧ್ಯ ಬಿದ್ದು ಹೋಗಿದೆ. ಪೂರ್ಣ ಬರಹ ಗೊತ್ತಿರುವವನಾದ ನನ್ನ ಬರಹದ ದಸ್ಕತಿನ ಕಾಗದಗಳು ನೋಟುಗಳು ಆಗಲಿ ಯಾರಿಗಾದರೂ ಸಿಕ್ಕಿದರೆ ನನಗೆ ತಂದುಕೊಟ್ಟಲ್ಲಿ ಅವರಿಗೆ ರೂಪಾಯಿ ಐದು ಇನಾಮಾಗಿ ನಾನು ಕೊಡುವರೆ ಕಬೂಲು ಇದ್ದೇನೆ.

ಉಜ್ರೆಕುಡಿಗೆ ರಾಮಚಂದ್ರ ಶ್ಯಾನಭಾಗ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೀನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಶ್ಯಾನುಭೋಗ ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಮ್. ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ ಬೆಲೆ 15 ರೂ. ಮಾತ್ರ.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಚಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಲ್ಲು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲೆ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗಜ್ಜಿ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗೆಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೋ.,
3. ಇರುಳಪ್ಪನ ಬೀದಿ, ಮದರಾಸ್.

MALARIANA.

"ಮಲೆರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವೆರೆಂಡ್ ಜೆ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೆರಿಯಾನಾ ನನಗೆ ಬಂದು ತಲಿಪಿತು. ಇದು ಕೂಡ ತರಿಸಿದ್ದ 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ.]

ಕಾರ್ಕ್ಯಾವಾಡಿನ ವಿಶವಲ್‌ನಿಂದ ಮ. ಜೆ. ಡಿಸೋಜಾರು ಬರೆಯುತ್ತಾರೆ:—ಒಂದು ವರುಷದ ಲಾಗಾಯಿತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೋನಿಕ್‌ಗಳನ್ನೂ ತಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೆರಿಯಾನಾ ತಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:— The Malariana Company,
Kankanady S. C.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co.,
Mangalore.

ಯಮ್. ಯಸ್. ರಾವ್ ಕಂಪೆನಿ,

ಬುಕ್‌ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಿಮಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ್ತ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಲಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರತಿಜ್ಞೆ ,, ,,	0—12—0
ಅಂಬಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಣಕೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಭ್ಯಾಸ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"×28"ಕ್ಕೆ	0—1—0

K. B. RELE & Cos.,—BOMBAY.

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಮು.

ಎಷ್ಟೋ ಹಳತ, ಕರಿ ಮತ್ತು ಪಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಕಮ್ಮಿ ಆಗುತ್ತದೆ. ೩೦–೩೫ ವರ್ಷಗಳ ಹಳತ, ಕೈಮುಸೆ ಮಾಡಿ ಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ಕಮ್ಮಿಯಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಗುಳ್ಳೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈ ಕಾಲುಗಳುರಿಯೋಣ, ಕೈಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧–೪–೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

THE CANARA BANK, LIMITED., MANGALORE.

NOTICE.

Is hereby given that under Sec. 37 of the Indian Companies Act No. VII of 1913 the Directors have resolved that the Register of Members be closed from Monday, the 29th instant to Sunday, the 18th February '17 (both days inclusive).

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ನೋಟೀಸು.

ಕಂಪೆನಿ ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಬ್ಯಾಂಕಿನ ಪಾಲುಮ್ಹಾಲೀಕರ ರಿಜಿಸ್ತ್ರಿಯು(Register of Members) ಇದೇ ಜನವರಿ ತಾರೀಕು 29ನೇ ಲಾಗಾಯಿತು ಬರುವ ಫೆಬ್ರವರಿ ತಾರೀಕು 18ನೇ ಆದಿತ್ಯವಾರದ ವರೇಗೆ ಶೇರುಗಳ ವಹಿವಾಟು ನಡಿಸದಂತೆ ಮುಚ್ಚಲ್ಪಡಬಹುದಾಗಿ (closed) ಡೈರೆಕ್ಟರರುಗಳು ನಿರ್ಣಯಿಸಿರುತ್ತಾರೆ ಎಂಬದನ್ನು ಈ ಮೂಲಕ ತಿಳಿಸೋಣಾಗುತ್ತದೆ.

(By order)

ಬ್ಯಾಂಕಿನ ಆಫೀಸು, ಮಂಗಳೂರು, 25ನೇ ಜನವರಿ 1917 } P. GOPAL NAIK, ಸೆಕ್ರೆಟರಿ.

ROYAL DENTIFRICE.

(ರೋಯಲ್ ದಂತಮಂಜನ).

ಗ್ರಾಹಕರೇ, ತಾವುಗಳು ಅನೇಕ ತರದ ದಂತಮಂಜನಗಳು ಉಪಯೋಗಿಸಿಯೂ, ತರಿಸಿಯೂ, ಕೇಳಿಯೂ ಇರಬಹುದು. ಆದರೆ ಮೇಲ್ಕಾಣಿಸಿದ ರೋಯಲ್ ದಂತಮಂಜನದಲ್ಲಿರುವಷ್ಟು ಚಮತ್ಕೃತಿಯ ಗುಣಗಳನ್ನು ಕೇಳಿರಲಾರಿರಿ. ಇದರ ಗುಣಾಂಶಗಳನ್ನು ಇದರಡಿ ಸೂಚಿಸಿದ್ದಕ್ಕೆ ಯಾವ ತರದ ವ್ಯತ್ಯಾಸವು ಕಂಡುಬಾರದೆ ಗುಣಾಂಶವನ್ನು ಕೊಡುವದು. ಇದು ಕ್ರಯದಲ್ಲಿಯೂ ಭಾರೀ ಸುಲಭವಿದೆ. ಇದನ್ನು ಒಮ್ಮೆಗೆ ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣಾಂಶವು ಕಂಡುಬರುವದು. ಇದರ ಗುಣಾಂಶಗಳು ಯಾವ ಯಾವವೆಂದರೆ—ಹಲ್ಲಿನ ಎಡೆಗಳಿಂದ ಕೀವು ಯಾ ರಕ್ತ ಬರುವಂಥಾದ್ದು, ಹಲ್ಲನ್ನು ಹುಳ ತಿನ್ನುವಿಕೆ, ಬಾಯಿಂದ ವಸಡು ನೀರು ಬರುವಿಕೆ, ಬಾಯಿಯ ದುರ್ಗಂಧ, ದವಡೆ ಊದುವಿಕೆ, ಚಿಕ್ಕ ಪ್ರಾಯದಲ್ಲಿ ಹಲ್ಲು ಅಲ್ಲಾಡುವಿಕೆ, ಇವುಗಳೆಲ್ಲಾ ಉಪಯೋಗಿಸಿದ ದಿನಗಳಿಂದಲೇ ಗುಣ ಕಂಡು ಬಂದು, ಹಲ್ಲು ಮುಕ್ತಿಸಂತಾಗುವದು.

ಡಬ್ಬಿ 1ರ ಕ್ರಯ 0—1—6, ಡಜನ್ 1ರ ಕ್ರಯ ರೂ. 1.

ಸೂಚನೆ—ಪರಸ್ಥಳದವರಿಗೆ 6 ಡಬ್ಬಿಗಳಿಗಿಂತ ಕಡಮೆ ವಿ. ಪಿ.ಯಿಂದ ರವಾನಿಸಲಾರೆವು.

ಏಜಂಟರು ಬೇಕು.

ದಕ್ಷಿಣ ಹಿಂದೂಸ್ಥಾನದ ಏಜಂಟರು—

ದಿ ಉಲನ್ ಮಾರ್ಟ್,

ಮಂಗಳೂರು, ದ. ಕ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—

ಭಂಡಾರಕಾರ ಬ್ರದರ್ಸ್,

ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷೆ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್, ಮದ್ರಾಸು.

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ರಾತ್ರೆ ಕಥೆಗಳು. ಸಂಪೂರ್ಣ ಗ್ರಂಥ. ೧,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರ ಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲವಿದ್ದವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳಕೊಂಡು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಲ್ಲಾಸವನ್ನು ಉಂಟುಮಾಡುವದು. 7. ಕಥಾಂತರದಲ್ಲಿ ಚಿತ್ರಕಥಾಚತುರತ್ವಾದಿಗಳಿಂದ ಸುಲಭ ಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವದು. 8 ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವದು. 9. ಸರ್ವಸ್ತ್ರೀಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರಕ್ಕೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭವಾಗಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಕಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ್ಯಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,

ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ವಾಚುಗಳನ್ನು ತರಿಸುವವರಿಗೆ

ಒಳ್ಳೇ ಸಂದರ್ಭ!

ತಮಗೆ ಅತ್ಯುತ್ತಮವಾದ ವಾಚುಗಳು ಯಾವ ತರಹದ್ದು ಬೇಕಾಗಿದ್ದರೂ ನಮಗೆ ಬರೆಯಿರಿ!

ನಂಬ್ರ 1. ಮೆಟಲ್ ಕೇಸ್.—ವಿದ್ಯಾರ್ಥಿಗಳಿಗೆ ಅತೀ ಉಪಯೋಗಕರವಾದ್ದು. ರೂ. 3—0—0. ಫೆನ್ಸಿ ಡಾಯಲ್ ರೂ. 3—8—0. 3 ವರ್ಷಗಳ ಗ್ಯಾರಂಟಿ.

ನಂಬ್ರ 2. ಮೆಟಲ್ ಅಥವಾ ಗನ್‌ಮೆಟಲ್ ಕೇಸ್.—ಸರಿಯಾದ ಸಮಯವನ್ನು ತೋರಿಸುತ್ತದೆ. ರೂ. 4—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 3. ಅತ್ಯುತ್ತಮವಾದ ನಿಕ್ಕಲ್ ಸಿಲ್ವರ್ ಕೇಸ್.—ಜುವೆಲ್, ಲೀವರ್ ಗಿಲ್ಟ ಮೆಸ್ಸಿನು ಹೆಚ್ಚು ಕ್ರಯಬಾಳುವ ವಾಚುಗಳಿಗಿಂತಲೂ ಉತ್ತಮ ತರದ್ದು. ಪೆಟ್ಟಿಗೆ, ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ನಂಬ್ರ 4.—ವಾರಕ್ಕೊಂದಾವರ್ತಿ ಕೀ ಕೊಡುವಂಥಾದ್ದು ನಿಕ್ಕಲ್ ಸಿಲ್ವರ್‌ಕೇಸ್ ರೂ. 7. ಸಿಲ್ವರ್ ಕೇಸ್ ರೂ. 9—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 5.—ರಿಸ್ಟ ವಾಚು ನಿಕ್ಕಲ್ ಸಿಲ್ವರ್ ಕೇಸ್ ರೂ. 5. ಸಿಲ್ವರ್ ಕೇಸ್ ಸ್ಟ್ರೇಪ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ಮೇಲ್ಕಂಡ ವಾಚುಗಳಲ್ಲದೆ ವೆಸ್ಟ್ ಎಂಡ್ ವಾಚ್ ಕಂಪೆನಿ, ರಾಸ್ಕೋಪ್ ಪೇಟೆಂಟ್ ಮುಂತಾದ ಪ್ರಖ್ಯಾತಪಟ್ಟ ಕಂಪೆನಿಗಳ ಎಲ್ಲಾ ತರಹದ ಚಿಕ್ಕ ವ ದೊಡ್ಡ ಸೈಜಿನ ವಾಚುಗಳನ್ನು ಚಿಲ್ಲರೆಯಾಗಿಯೂ ರಖಂ ಆಗಿಯೂ ಮಾರಾಟಕ್ಕಿರುತ್ತದೆ.

ವಿಳಾಸ:— N. GOPALJEE,

Watch maker

JOOMA MASJID SHEIK MEMON ಬೆಂಗಳೂರು ಸಿಟಿ.

ರೈಲ್ವೆ ರೆಗ್ಯುಲೇಟರ್ ವಾಚ್,

ಕ್ರಯ 12 ಸಾಮಾನುಗಳ ಸಮೇತ ರೂ. 4.
ಪೋಸ್ಟೇಜ್ ಪ್ರತ್ಯೇಕ.

೫ ವರುಷಗಳು ಗ್ಯಾರಂಟಿ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೦೬ ಸುಸ್ಮೈಗೂನಲ್ಲಿ ಚಿನ್ನದ ಮೆಡಲ್ ಹೊಂದಿ ಪ್ರಸಿದ್ಧವಾದ ಅಮೃತ ಸಂಜೀವಿನಿಗುಳಿಗೆ. 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ. 12 ಆಣೆ ಮಾತ್ರ. ಪೋಸ್ಟುಚಾರ್ಜು 4 ಆಣೆ

ಈ ಸುಂದರವಾದ ವಾಚ್ ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ಯಾಚಾಗಿಯೂ ಇಂಜನ್‌ಸ್ಟಾಂಪು ಹಾಕಿಯೂ ಇರುವದು.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯರಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಹಿಂಡಿಸುವದು, ಪುತ್ರಸಂತಾನ ಉಂಟಾಗುವದು ನಿಶ್ಚಯವು. ಸ್ವಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ. ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೨ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೋ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೫ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—14—0. ½ ಔನ್ಸ್ ಟ್ಯೂಬ್ 2—0—0 ಒಟ್ಟೋ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ, ಹುಚ್ಚು ನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಛರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಸೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್ಸ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರುಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ನವೀನ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಪೆಟ್ಟಿ ೧ಕ್ಕೆ ೨-೦-೦. ದೊಡ್ಡ ಪೆಟ್ಟಿ ಉತ್ತಮತರದ ೧ಕ್ಕೆ ೩—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದ್ವಿಯಂ ರೂಪಾಯಿ ೧ಕ್ಕೆ ೮ ತೊಲೆ, ತೃಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಚಾರ್ಯ,
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Choukhambay,
BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಿನ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada-Press, Mangalore

Registered No. M. 468

ಚಂದಾದಾರಿಕೆಯು:— ವರ್ಷ 1ಕ್ಕೆ ರೂ. 1—8—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಅಂಚೆ ಹಾಸಲು ಸಹಿತ ರೂಪಾಯಿ 2—8—0

ಪುಸ್ತಕ ೧೧ | ಮಂಗಳೂರು, ತಾರೀಕು ೨ನೇ ಫೆಬ್ರುವರಿ ಶುಕ್ರವಾರ ೧೯೧೭. | ಸಂಚಿಕೆ ೫.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital	200,000—0—0	ಆಗತ ಮೂಲ ಧನವು ,,	200,000—0—0
Deposits	336,227—9—4	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	336,227—9—4
Reserve Fund	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/-25% of the net profits are added annually to the Reserve Fund. Rs. 18,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/-and above in multiples of Rs. 5/- received for 3, 6, 12 and 24 months @ 4 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2¼% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಧರ್ಮಾ ಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರ ದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2¼ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,
Mangalore, 1st December 1916.

P. Gopal Naik,
Secretary.

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮೀಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ,
ಉಡುಪಿ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಶಾರದಾ ಛಾಪಖಾನೆಯ
1917ನೇ
ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೋ ಕವರು.

ದೊಡ್ಡ ಸೈಜು ಸ್ಲಿಪ್ ಕವರ್ ಬೈಂಡು	0—8—0
ಚಿಕ್ಕ ಸೈಜು ಕೆಲಿಕೊ ಬೈಂಡು	0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Foot Balls. (BEST QUALITY).
ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ-ಇಂಗ್ಲಿಷ್, ಇಂಗ್ಲಿಷ್-ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವುದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು.

ಈ ವಾರವೇ ತರಿಸಿಕೊಂಡರೆ ರೂ. 1—11—0. ಪೋಸ್ಟೇಜು ಮಾಫಿ.

ವಿಳಾಸ:—ಹೆಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾವಂಥ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ದಿಯದಿಶ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುವದನ್ನು ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಶಾಂತವಾಗಿ ಗುಣಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟುಕಟ್ಟಳೆಯ ದೋಷ [illegible] ಬಂಜೆತನವನ್ನು ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ [illegible] ಅತ್ಯುತ್ತಮವು. [illegible] ರಾತಲಿಗೆ ೨ ರೂ.

೫. ಪೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ [illegible] ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ[illegible]ವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆ[illegible] ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ [illegible]ಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. [illegible] ೩ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. [illegible] ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಕ್ಷಯ, ಕಫ, [illegible] ರಾಮಬಾಣವು. ರಾತಲಿಗೆ ೨ ರೂ.

೧೦. ಕಾಲ್ಯಾಣೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುಷ್ಕರ್ಮಗಳ ಮೂಲಕವಾದ ನಿಸ್ತ್ರಾಣ [illegible] ಮುಂತಾದವುಗಳನ್ನು, [illegible] ಶಕ್ತಿ, [illegible] ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುಂಡರಿ ಬಾವ್ (?) ತಲೆ ನೋವು, ಎದೆ ನೋವು, ಸೊಂಟ ನೋವು, ಕಾಳರ, ಬೀಗು, ವಾತ ಬಾಧೆಗಳನ್ನು ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕೇಸರಿ ಕೇಸರಿ ಮುಲಾಮು. ಮುಳುಕಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. [illegible]ದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸುವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ರವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕ್ಯಾಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರಿಗೆ ರೋಗನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ಪತ್ರವ್ಯವಹಾರವು ಕನ್ನಡ, [illegible] ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಎಸ್. ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು ಮದರಾಸು

S. M. Nath & Co., *Ayurvedic Chemists*
Vepery Post, MADARS.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನು, ಅವುಗಳ ಪರಿಣಾಮಗಳನ್ನು ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜಿ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲುಪಿತು. ಇದು ಕೂಡ ತರಿಸಿದ್ದು 32 ಬಾಟ್ಲಿಗಳು. ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಸ್ತುತಿಯ ಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾಕ್ಕಾವಾಡಿನ ವಿಠವಲ್‌ನಿಂದ ಮ. ಜಿ. ರಸ್ಕಿನ್‌ರು ಬರೆಯುತ್ತಾರೆ:—ಒಂದು ವರುಷದ ಲಾಗಾಯತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೊನಿಕ್‌ಗಳನ್ನೂ ತೆಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತೆಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿ.

ವಿಳಾಸ:— The Malariana Company,
Kankanady S. C.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co.,
Mangalore

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ಸವಿಸವಿದು ಸೇವಿಸುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕ್ಷಯರೋಗಗಳು ಕಿರಿಯ ರೋಗ, ನೆಗಡಿಯಿಂದ ಮೂಗು ಸುರಿಯೋದು ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ್, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಂವ, ಜಿಲ್ಹಾ ಮುಝಫರಪುರ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟ್ ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಕಲುಗಳಿಂದ ಹೋಲಿಸುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3, ಅರುಳಪ್ಪನ ಬೀದಿ, ಮದರಾಸ್.

ಯಂ ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರ್ರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0-12—0
ಕಾಮಿನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ ೪ ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು ೬ ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ ೮ ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0— 6—0
ಅಪರಿಚಿತ ಹುಡುಗಿ (ದ್ವಿತೀಯ ಮುದ್ರಣ)	0— 8—0
ಅಮೃತ ಪುಳಿನ ,,	0—10—0
ಇಂದಿರಾ ದ್ವಿ. ಮು.	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0— 4—0
ಪ್ರತುಲ್ಲೆ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0— 1—6
ಕುಸುಮ ,,	0— 1—0
ರಾಧಾನಾಥ ,,	0— 2—0
ಸುಭದ್ರೆ ,,	0— 5—0
ಚಂದ್ರಹಾಸ (ಹೊಸ ಕಥೆ)	0— 1—0
ಧ್ರುವ ,,	0— 2—0
ಮಕ್ಕಳ ಶಿಕ್ಷಾವಿಕೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1— 0—0
,, ಸಂಗೀತ ಸಮಯಸಾರ	1— 4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1— 4—0
ವಿಕ್ರಮ ,,	1— 2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"x28"ಕ್ಕೆ	0— 1—0

ಯೂರೋಪದ ಮಹಾ ಯುದ್ಧ

ಒಂದು ಕಡೆಯಲ್ಲಿ ಅಮೇರಿಕದ ಪ್ರೆಸಿಡೆಂಟ್ ವಿಲ್ಸನರು ಮುಂದೆ ಆಗಲಿಕ್ಕಿರುವಂಥಾ ಸಂಧಿಯ ವಿಷಯ ತನ್ನ ಮನೋದೃಷ್ಟಿಯನ್ನು ಇಟ್ಟಿರುವರು, ಮತ್ತೊಂದು ಕಡೆಯಲ್ಲಿ ಯುದ್ಧಕ್ಕೆ ಸೇರಿದ ರಾಜ್ಯಗಳೆಲ್ಲಾ ಬರುವ ವಸಂತ ಕಾಲದಲ್ಲಿ ಕಂಡಕಂಡಾದ ಯುದ್ಧವನ್ನು ಮಾಡಬೇಕೆಂಬ ಮನಸ್ಸಿನಿಂದ ತಕ್ಕ ಯುದ್ಧ ಸನ್ನಾಹವನ್ನು ಮಾಡುತ್ತಿದ್ದಾರೆ. ಹೀಗೆ ಈ ಬರುವ ವಸಂತ ಕಾಲದಲ್ಲಿ ಫ್ರಾನ್ಸಿನ ಪೂರ್ವ-ಲೊರೈನ್, ಅಲ್ಸೆಸ್ ಪ್ರಾಂತ್ಯದಲ್ಲಿ ಕಠಿಣ ಕಾಳಗಗಳು ನಡೆಯಲಿಕ್ಕಿವೆ.

ಪಶ್ಚಿಮ ರಣರಂಗ.

ಶತ್ರುಗಳು ಅರ್ರ್ಯಾಸಿನ ಉತ್ತರ ಮತ್ತು ಫ್ಲೂಗೆಸ್ಟೆಟ್ ಅಂಚ್ಯದ ಈಶಾನ್ಯದಲ್ಲಿ ದಾಳಿ ಮಾಡಿರುವರು. ಆದರೆ ಪ್ರಯೋಜನ ಹೊಂದಲಿಲ್ಲ. ಬ್ರಿಟಿಷ ಸೈನಿಕರು ಜರ್ಮನರ ಸೇನೆಯ ಮೇಲೆ ಬಿದ್ದು ಕೆಲವು ಮಂದಿಯನ್ನು ಸೆರೆ ಹಿಡಿದಿರುತ್ತಾರೆ. ಅರ್ರ್ಯಾಸಿನ ಎದುರುಗಡೆಯಲ್ಲಿ ಬ್ರಿಟಿಷರ ತೋಪುಗಳು ಹಾರಿಸಿದ ತೋಪುಗಳಿಂದ ಶತ್ರುಗಳ ನೆಲೆಯಲ್ಲಿ ಒಂದು ಭಯಂಕರವಾದ ಸಿಡಿತ ಉಂಟಾಗಿರುವದು. ಲ್ಯೂಸ್ ಮತ್ತು ವಿನೆಯ ಮಧ್ಯೆ ತೋಪುಕಾಳಗಗಳು ತೀಕ್ಷ್ಣತೆಯಿಂದ ನಡೆಯುತ್ತಿದೆ. ನ್ಯೂವಿಲ್ಲೆ ಸೈಂಟ್ ವಾಸ್ಟನ ಈಶಾನ್ಯದಲ್ಲಿ ಬ್ರಿಟಿಷರು ಶತ್ರು ಸೇನೆಯ ಮೇಲೆ ದಾಳಿ ಮಾಡಿ ಕೆಲವು ಸೈನಿಕರನ್ನು ಸೆರೆಹಿಡಿದಿರುವರು. ಲೂಸಿನ ವಾಯುವ್ಯ ದಿಕ್ಕಿನಲ್ಲಿ ದಾಳಿಮಾಡಿದ ಶತ್ರುಗಳನ್ನು ಬ್ರಿಟಿಷರು ಹಿಂದಕ್ಕಟ್ಟಿರುವರು.

ಬಾಲ್ಕಾನ್.

ಸೆರೆತಿನಲ್ಲಿ ಜರ್ಮನರ ಜನರಲ್ ಮೆಕೆನ್‌ಸನರು ದೃಢ ಸಂಕಲ್ಪದಿಂದ ಕಾಳಗ ಮಾಡಿ ರುಮೇನಿಯಾನರ ನೆಲೆಯನ್ನು ಭೇದಿಸಿರುವರು. ಆದರೆ ಇನ್ನೂ ಜರ್ಮನರು ಸೆರೆತ್ ನದಿಯನ್ನು ದಾಟಿ ಹೋಗಲಿಲ್ಲ. ಜರ್ಮನರು ವಿಶೇಷವಾದ ತೋಪು ಸನ್ನಾಹವನ್ನು ಮಾಡಿಕೊಂಡು ತಿರುಲು ಡವುಗು ಫುನವಿ ಮತ್ತು ಸೆರೆತ್ ನದಿಯ ಮಧ್ಯೆ ಹಲ್ಲೆಮಾಡಿ ರುಶ್ಯನರ ಸೈನಿಕರನ್ನು ಒಂದೂವರೆ ಮೈಲು ಹಿಂದಕ್ಕಟ್ಟಿರುವರು. ರುಶ್ಯನರು ಡೆನ್ಯುಬ ನದಿಯ ಶಾಖೆಯಾಗಿರುವ ಜೋರ್ಜಗ್ರೀಫ್ ನದಿಯ ಬಳಿ ಫಕ್ಯನೀ ಬಲ್ಗೇರಿಯಾನರ ಮೇಲೆ ಬಿದ್ದು ೩೩೭ ಮಂದಿಯನ್ನು ಸೆರೆಹಿಡಿದಿರುವರು.

ಯುದ್ಧ ಹಡಗಗಳು.

ಜರ್ಮನರ ಡಿಸ್ಟ್ರೋಯರ್ಸ್ ಎಂಬ ಯುದ್ಧನಾವೆಗಳು ಜಾಬ್ರುಗ್ಗೆ ರೇವನ್ನು ಬಿಟ್ಟು ಹೊರಡುತ್ತಿರುವಾಗ ಬ್ರಿಟಿಷರ ಸ್ಕ್ವ್ಯಾಡ್ರನ್ ನಾವೆಗಳು ಅವುಗಳ ಮೇಲೆ ಗುಂಡು ಹಾರಿಸಿದ್ದರಿಂದ ಜರ್ಮನರ V೬೯ ಡಿಸ್ಟ್ರೋಯರ್ ನಾವೆಯ ೩ ಅಧಿಕಾರರೂ ಕಮಾಂಡರನೂ ಸತ್ತು ಹೋದರು. ಬ್ರಿಟಿಷರ ಮತ್ತೊಂದು ಗುಂಡಿನಿಂದ ಆ ಯುದ್ಧನಾವೆಯಲ್ಲಿ ತೂತು ಬಿತ್ತು. ಈಗ ಈ ಡಿಸ್ಟ್ರೋಯರ್ ನಾವೆಯು ಯುಮುಯ್ಡೆನ್ ಬಂದರದಲ್ಲಿ ಬಿದ್ದುಕೊಂಡಿದೆ. ಡಚ್ಚರ ದೋಣಿಗಳು ಈ ಹಡಗದಲ್ಲಿ ಗಾಯ ಒಡೆದಿದ್ದ ೧೦ ಮಂದಿ ನಾವಿಕರನ್ನು ದಡ ಸೇರಿಸಿರುವರು. ಬ್ರಿಟಿಷರು ಉತ್ತರ ಕಡೆಗೆ ಹೋಗುತ್ತಿದ್ದ ಮತ್ತೊಂದು ಟೋರ್ಪಿಡೋ ದೋಣಿಯನ್ನು ಮುಳುಗಿಸಿರುವರು. V೬೯ ಡಿಸ್ಟ್ರೋಯರ್ ನಾವೆಯಲ್ಲಿ ೮ ಮಂದಿ ಸತ್ತಿರುವರು, ೧೩೫ ನಾವಿಕರಲ್ಲಿ ೮ ಮಂದಿ ಮಾತ್ರ ಬದುಕಿರುವರು. ನಾವಿಕರಲ್ಲಿ ಕೆಲವರು ಸಮುದ್ರಕ್ಕೆ ಹಾರಿ ಮುಳುಗಿ ಸತ್ತರು. ಹಡಗದ ಕಮಾಂಡರನ ೩ ಕಾಲುಗಳಿಗೂ ಗುಂಡು ತಗಲಿದೆ.

ಜರ್ಮನರ ಒಂದು ಸಣ್ಣ ಯುದ್ಧ ಹಡಗವು ಇಂಗ್ಲಂಡಿನ ಸಫೊಕ್ ಕರಾವಳಿಯ ಮೇಲೆ ಕೆಲವು ಗುಂಡುಗಳನ್ನು ಹಾರಿಸಿ ಹೋಗಿರುವದು. ಯಾರಿಗೂ ಪ್ರಾಣಾಪಾಯಗಳು ಸಂಭವಿಸಲಿಲ್ಲ, ಹೆಚ್ಚಿನ ನಷ್ಟವೂ ಸಂಭವಿಸಲಿಲ್ಲ. ರಾತ್ರಿಕಾಲ ೧೧-೧೨ ಗಂಟೆಯ ಮಧ್ಯೆ ಈ ನಾವೆಯು ಈ ಕರಾವಳಿಯಲ್ಲಿ ಕಾಣಿಸಿಕೊಂಡು ೩ ನಿಮಿಷದೊಳಗೆ ಓಡಿಹೋಗಿರುವದು.

ಮೆಸಪಟೋಮಿಯಾ.

ಟೈಗ್ರಿಸ್ ನದಿಯ ಬಲಗಡೆಯಲ್ಲಿ ನಮ್ಮ ಸೈನಿಕರು ಘೋರ ಕಾಳಗ ಮಾಡಿ ೧೧,೦೦೦ ಗಜ ಕಂದಕಗಳನ್ನು ಹಿಡಿದಿರುವದಲ್ಲದೆ ಕಂದಕಗಳ ೨ನೇ ಸಾಲುಗಳಲ್ಲಿ ಕೆಲವನ್ನು ಗೆದ್ದುಕೊಂಡಿರುತ್ತಾರೆ. ನಮ್ಮವರ ಸೇನೆಯಲ್ಲಿ ಅತ್ಯಲ್ಪ ನಷ್ಟ ಮಾತ್ರವಾಗಿರುವದು. ಹಾಯಿ ನದಿಯ ಪೂರ್ವ ದಿಕ್ಕಿನಲ್ಲಿ ತುರ್ಕರು ನಾಲ್ಕಾವರ್ತಿ ಹಲ್ಲೆಮಾಡಿದರು. ೧ನೇ ಮತ್ತು ೩ನೇ ಸಾರಿ ಮೇಲ್ಬಾಯಿದಾಗ ನಮ್ಮವರ ತೋಪುಗಳು ಅವರನ್ನು ಅಟ್ಟಿಬಿಟ್ಟವು. ೨ನೇ ಮತ್ತು ೪ನೇ ಸಾರಿ ಮಾತ್ರ ಅವರಿಗೆ ಸ್ವಲ್ಪ ಮಾತ್ರ ಜಯವಾಗಿದೆ. ಆದರೆ ನಮ್ಮವರು ತಿರಿಗಿ ಅವರ ಮೇಲೆ ಬಿದ್ದು ಅವರ ಕೈಯಿಂದ ಎಲ್ಲಾ ಸ್ಥಳಗಳನ್ನು ಗೆದ್ದುಕೊಂಡರು. ದಿನವೆಲ್ಲಾ ತುರ್ಕರಿಗೆ ಆದ ನಷ್ಟವು ಬಹಳವಾಗಿರುವದು. ೯೦ ಶತ್ರುಸೈನಿಕರು ಸೆರೆಬಿದ್ದಿರುವರು. ಶತ್ರುಗಳ ೫೮೦ ಮಂದಿಯ ಶವವನ್ನು ನಮ್ಮವರೂ ೫೦೦ ಶವಗಳನ್ನು ತುರ್ಕರೂ ಹೂಣಿಟ್ಟಿರುವರು.

ರುಶ್ಯಾರಣರಂಗ.

ರುಶ್ಯನರು ಭೀಕರವಾಗಿ ತೋಪುಗಳನ್ನು ಹಾರಿಸಿದ ನಂತರ ಜರ್ಮನರು ಕ್ಲಾಸ್‌ಸೀಮಿನ ಪಶ್ಚಿಮ ಕಡೆಗೆ ಹಿಂದೆ ಸರಿದಿರುವರು. ಜರ್ಮನರಿಗೆ ವಿಶೇಷ ನಷ್ಟವಾಗಿರುವದು. ರಿಗ್ಗಾದ ಪಶ್ಚಿಮ ದಿಕ್ಕಿನಲ್ಲಿ ಮೇಲ್ಬಾಯಿದ ಜರ್ಮನರು ಎರಡಾವರ್ತಿ ಹಿಮ್ಮೆಟ್ಟಿರುವರು.

ಸಂಧಿ ಪ್ರಸ್ತಾಪ.

ಅಮೇರಿಕದ ಡಾಕ್ಟರ್ ವಿಲ್ಸನರು ಸಂಧಿ ವಿಷಯವನ್ನು ಕುರಿತು ಸೆನೆಟ್ ಸಭೆಯಲ್ಲಿ ಒಂದು ಭಾಷಣವನ್ನು ಮಾಡುವಾಗ ಹೀಗೆ ಹೇಳಿದರು. "ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಮಾಡಲ್ಪಡುತ್ತಿರುವ ಪ್ರಯತ್ನಗಳು ಚೆನ್ನಾಗಿ ನಡೆಯುತ್ತಿವೆ. ಆದರೆ ಶಾಶ್ವತವಾದ ಸಂಧಿಯು ಜರಗಬೇಕು. ಈ ಫಲಸಿದ್ಧಿಯಾಗಬೇಕಾದರೆ ಈಗಿನ ಯುದ್ಧದಲ್ಲಿ ಸಂಪೂರ್ಣ ವಿಜಯವಾದ ಮೇಲೆ ಎಂಬ ಮಾತನ್ನು ಪೂರ್ಣವಾಗಿ ಹೊಡೆದು ಹಾಕಬೇಕು. ವಿಜಯ ಎಂಬ ಮಾತನ್ನು ಉಪಯೋಗಿಸಿದರೆ ಪರಾಜಿತರಾದವರನ್ನು ಸಂಧಿ ಮಾಡಿಕೊಳ್ಳುವದಕ್ಕೆ ನಿರ್ಬಂಧಪಡಿಸಿದಂತಾಗುವದು. ಆದರಿಂದ ಅತೃಪ್ತಿ ಉಂಟಾಗದೆ ಇರದು. ಅಂಥಾ ಅತೃಪ್ತಿ ಪ್ರಸಂಗ ಹೊಂದಿದವರು ಯಾವಾಗಲೂ ಕೋಪಿಷ್ಟರಾಗುವರು. ಆದುದರಿಂದ ಸಮತ್ವದಿಂದಾದ [illegible] ಸಂಧಿಯೇ ಶಾಶ್ವತವಾಗುವದು. [illegible] ಸಂಯುಕ್ತವಾಗಿಯೂ ಸ್ವತಂತ್ರವಾಗಿಯೂ [illegible] ಆಗಿಯೂ ಇರಬೇಕು. ಸಮುದ್ರ ಸಂಚಾರ [illegible] ಎಲ್ಲರಿಗೂ ಅವಕಾಶ ಉಂಟಾಗಿಯೇ ತೀರಬೇಕು. ಇದಕ್ಕಾಗಿ ಯುದ್ಧದ ಹಡಗವನ್ನು ಕಡಿಮೆ ಮಾಡುವದು ಅತ್ಯವಶ್ಯಕವು, ಇದು ಬಹಳ ಕಷ್ಟವಾದ ವಿಷಯವು. ಶಾಶ್ವತ ಶಾಂತಿಯನ್ನು ಎಲ್ಲರೂ ಕೋರುವದಾದರೆ ಎಲ್ಲಾ ರಾಷ್ಟ್ರಗಳವರೂ ಯಾವ ದೇಶವೇ ಆಗಲೀ ಮತ್ತೊಂದು ದೇಶವನ್ನು ಧ್ವಂಸ ಮಾಡಿ ತಾನು ಅಭಿವೃದ್ಧಿಗೊಳ್ಳಬೇಕೆಂದು ಪ್ರಯತ್ನಿಸಕೂಡದು. ಚಿಕ್ಕ ದೊಡ್ಡ ದೇಶಗಳೆಲ್ಲಾ ಪ್ರತ್ಯೇಕವಾಗಿಯೂ ನಿರ್ಭಯವಾಗಿಯೂ ತಡೆಯಿಲ್ಲದೆಯೂ ಅಭಿವೃದ್ಧಿಗೊಳ್ಳುವದಕ್ಕೆ ಅವಕಾಶವು ದೊರೆಯಬೇಕು ಎಂಬ ಮನೋಸಿದ್ಧಾಂತವನ್ನು ಅವಲಂಬಿಸಬೇಕು. ನಮ್ಮ ಶತ್ರುಗಳನ್ನು ಹತಮಾಡಬೇಕೆಂಬದು ನಮ್ಮ ಉದ್ದೇಶವಲ್ಲವೆಂದು ಈಗ ಎರಡು ರಾಜ್ಯಪಕ್ಷದ ರಾಜನೀತಿಜ್ಞರೂ ನುಡಿದಿರುವರು. ಆದರೆ ಇದರ ಒಳಗಣ ಅರ್ಥವು ಎಲ್ಲರಿಗೂ ವಿಶದವಾಗದೆ ಹೋಗಬಹುದು. ವಿಜಯ ರಹಿತವಾದ ಸಂಧಿಯು ಆಗಬೇಕು. (Peace without victory) ಎಂಬದೇ ಇದರ ಅರ್ಥವೆಂದು ನಾನು ಭಾವಿಸುತ್ತೇನೆ. ಮುಂದೆ ಯುದ್ಧವು ನಡೆಯದಂತೆ ಆಗಬೇಕಾದರೆ ಅಮೇರಿಕಾದವರ ಸಂಬಂಧವಿಲ್ಲದೆ ಆಗುವ ಸಂಧಿಯು ಸಮಗ್ರವಾಗಲಾರದು. ಕಾಗದದ ಮೇಲೆ ಬರವಣಿಗೆ ಮಾಡಿಟ್ಟ ಕೂಡಲೇ ಸಂಧಿಯು ದೃಢಪಟ್ಟಂತಾಗುವದಿಲ್ಲ. ಈಗಣ ಯುದ್ಧದಲ್ಲಿ ಸೇರಿರುವ ದೇಶಗಳ ಮತ್ತು ಇನ್ನೆಂಥಾ ದೇಶದವರೂ ಇದಿರಿಸಿನಿಲ್ಲಲಾರದಷ್ಟು ಹೆಚ್ಚಾದ ಶಕ್ತಿಯುಳ್ಳವರ ಶಕ್ತಿಯನ್ನು ಕೂಡಾ ಮೀರಿದ ಮಹಾ ಪ್ರಪಂಚ ಮಾನವ ಶಕ್ತಿಯು ಏರ್ಪಟ್ಟು, ಅದು ಸಂಧಿ ನಿಬಂಧನೆಯನ್ನು ಭದ್ರವಾಗಿಯೂ ಶಾಶ್ವತವಾಗಿಯೂ ಇರುವಂತೆ ಮಾಡಬೇಕು. ಅಂಥಾ ಸಂಧಿಯೇ ಅಪೇಕ್ಷಣೀಯವು" ಎಂದು ಹೇಳಿರುವರು. ಡಾಕ್ಟರ್ ವಿಲ್ಸನರ ಈ ಮಾತುಗಳು ಎರಡು ಪಕ್ಷದವರಿಗೂ ಪಕ್ಷಪಾತದ ಮಾತೆಂದು ಊಹಿಸಲು ಕಾರಣ ಕೊಟ್ಟಿದೆ. ಡಾಕ್ಟರ್ ವಿಲ್ಸನರು ಜರ್ಮನರ ಪಕ್ಷವನ್ನು ವಹಿಸಿ ಹೀಗೆ ಮಾತಾಡಿದರೆಂದು, ಕೆಲವು ಪತ್ರಿಕೆಗಳೂ, ನಿಷ್ಪಕ್ಷವಾದ ಮಾತೆಂದು ಕೆಲವು ಪತ್ರಿಕೆಗಳೂ ಇದರ ಮೇಲೆ ಟೀಕೆ ಮಾಡುತ್ತಿವೆ.

ಜಲಾಂತರ್ಗಾಮಿ ನಾವೆಗಳು.

ರುಶ್ಯನರ ಜಲಾಂತರ್ಗಾಮಿ ನಾವೆಗಳು ಬೋಸ್ಪರಸಿನಲ್ಲಿ ಶತ್ರುಗಳ ೪ ಹಡಗಗಳನ್ನು ಮುಳುಗಿಸಿರುವವು. ೩ ಹಡಗಗಳನ್ನು ದಡಕ್ಕೆ ಅಟ್ಟಿರುವವು ಎಂಬ ವಾರ್ತೆ ಬಂದದೆ.

ಜನವರಿ ತಾ. ೨೨ ಬ್ರಿಟಿಷರ "ನೈಲ್‌ಸಿ" "ಕೋರ್ಟೋ" ಸ್ಪ್ಯಾನಿಯರ್ "ಮರಾಸಿಬು" ನೋರ್ವೇಯರ "ಎಸ್ ಪರ್ಪಲ್" "ಎಸ್ಟ್" ಮತ್ತು "ಮಾರಿಯೆಟ್ಟ ಜಿಯೋರ್ಜಿನೊ" ಬ್ರಿಟಿಷರ ಸ್ಕ್ಯಾನರ್ "ಲಿಲಿಯಾನ್" ಹಡಗಗಳೂ ತಾ. ೨೩ರಲ್ಲಿ ಬ್ರಿಟಿಷರ "ಪೋರ್ಟೋ ನಶಲ್ಲಸ್" "ಮಾಟನ್" "ಟೊಪ್ಸ್‌ಫ್ರೂಡ್" "ಮೊಹಲ್ಲ ಫೀಲ್ಡ್" ಬರೊನ್ ಹೆಂಪ್ಟಿಲ್" "ಕಾರ್ಲೈಲ್" "ಲಂಕ್ಲಾರ್" ಡಪಾನಿಯರ "ಕೆಸಾಗಮಾರು" ನೋರ್ವೇಯರ ಜೊಟನ್ಜಲ್" ಸ್ವೀಡೊನವರ "ಕಾವು" ಹಡಗಗಳೂ ತಾ. ೨೫ರಲ್ಲಿ ಬ್ರಿಟಿಷರ "ನಕ್ಸೆನ್" ಡಚ್ಚರ "ಸಲ್ಲಾಂಡ್" ಮತ್ತು "ಜೆಟ್ಸ್ಟಾ ಹಡಗಗಳೂ ಮುಳುಗಿಸಲ್ಪಟ್ಟವೆ.

ವಿದೇಶ ವೃತ್ತಾಂತ.

ಜರ್ಮನರು ಸ್ವಿಸ್ ಸರಹದ್ದಿನ ಒಳಗೆ ಸೇನೆಯನ್ನು ತಂದೊಡ್ಡಿರುವದರಲ್ಲಿ ಅವರಿಗೆ ೩ ಉದ್ದೇಶಗಳಿರುವವು. ಒಂದು ಬೆಲ್ಫೋರ್ಟನ ಮಾರ್ಗವಾಗಿ ನುಗ್ಗಿ ಹೋಗಿ ಕದನ ಮಾಡಿ ಮಿತ್ರ ಸೇನೆಯನ್ನು ಮುಂದರಿಯದ ಹಾಗೆ ಮಾಡಬೇಕೆಂಬದು. ಮತ್ತೊಂದು ಆಸ್ಟ್ರೀಯದ ಮೇಲೆ ಇರುವ ಇಟಲಿಯಾನರ ಒತ್ತಾಯವನ್ನು ಕಡಿಮೆ ಮಾಡುವದೆ ಈ ಮಾರ್ಗವಾಗಿ ಇಟಲಿಯಾನರ ಮೇಲೆ ನುಗ್ಗಿಹೋಗಿ ಕದನ ಮಾಡಬೇಕೆಂಬದು. ಮೂರನೇದು ಸ್ವಿಜರ್‌ಲೇಂಡಿನೊಳಗೆ ನುಗ್ಗಿಹೋಗಿ ಫ್ರೆಂಚರ ಬಲಕಡೆಯ ಸೇನೆಯ ಬಲವನ್ನು ಮುರಿಯಬೇಕೆಂಬದು ಎಂತ ಪೋಯನಿಯರ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಲಂಡನಿನ ಮದ್ದು ಗುಂಡಿನ ಕಾರ್ಖಾನೆಯಲ್ಲಿ ಉಂಟಾದ ಸಿಡಿತದಲ್ಲಿ ೪೭ ಮಂದಿಯ ಶವಗಳು ಸಿಕ್ಕಿರುವವು. ೨೪ ಮಂದಿ ಆಸ್ಪತ್ರೆಯಲ್ಲಿ ಸತ್ತಿರುವರು. ೧೨೦ ಮಂದಿಗೆ ಮರಣಕರವಾದ ಗಾಯಗಳಾಗಿರುವವು. ಸಾವಿರ ಮಂದಿ ಮನೆಮಾರು ಇಲ್ಲದೆ ನಿರ್ಗತಿಕರಾಗಿರುವರು. ಉಂಟಾದ ಅರ್ಥ ನಷ್ಟವು ೨ ಮಿಲಿಯ ಪವನುಗಳಾದ್ದಗಬಹುದು ಎಂತ ಅಂದಾಜಾಗಿಯದೆ.

ಜರ್ಮನರಿಗೆ ರುಮೇನಿಯದಲ್ಲಿ ೧,೧೦೦,೦೦೦ ಟನ್ ಗೋಧಿ, ೧,೦೦೦,೯೦೦ ಟನ್ ಜೋಳ ಸಿಕ್ಕಿರುವದು ಎಂತ ಒಬ್ಬ ಬಾತ್ಮೀದಾರನು ಬರದಿರುವನು.

ಅಮೇರಿಕದಲ್ಲಿ ಮಿತ್ರರಾಜ್ಯಗಳವರಿಗೆ ತಯಾರಿಸುತ್ತಿದ್ದ ಮದ್ದುಗುಂಡುಗಳ ಕಾರ್ಖಾನೆಯನ್ನು ಹಾರಿಸಿಬಿಡಬೇಕೆಂದು ಒಳ ಸಂಚು ನಡಿಸಿದ್ದರಾಗಿ ಅಪಾದಿಸಲ್ಪಟ್ಟ ಜರ್ಮನ ಕೌನ್ಸಲ್ ಜನರಲ್, ವೈಸ್ ಕೌನ್ಸಲ್ ಮತ್ತೊಬ್ಬ ಲೆಫ್ಟನೆಂಟನಿಗೆ ಎರೆಡೆರಡು ವರ್ಷಗಳ ಸಜೆಯೂ ಹತ್ತತ್ತು ಸಾವಿರ ಡಾಲರುಗಳ ಜುಲುಮಾನೆಯೂ ವಿಧಿಸೋಣಾಗಿರುವದು.

ಇಂಗ್ಲಂಡಿನ ಯುದ್ಧ ಮಂತ್ರಿ ಸಭೆಯವರು ೧೮ ವರ್ಷ ವಯಸ್ಸಿನ ಹುಡುಗರನ್ನು ಸೇನೆಗೆ ಸೇರಿಸಿಕೊಂಡು ಅವರಿಗೆ ೧೯ ವರ್ಷ ವಯಸ್ಸು ಆಗುವವರೆಗೆ ಅವರನ್ನೆಲ್ಲಾ ಸೀಮೆಯ ಸಂರಕ್ಷಣಾ ಬಗ್ಗೆ ತರ್ಬೇತು ಮಾಡಬೇಕೆಂತ ಯುದ್ಧ ಸೆಕ್ರೆಟರಿಯಾದ ಡರ್ಬಿ ಪ್ರಭುಗಳವರಿಗೆ ತಿಳಿಸಿರುತ್ತಾರೆ.

ಬರುವ ಜೂನ ತಿಂಗಳ ಮಧ್ಯಕಾಲದಿಂದ ಆಗೊಸ್ತು ... ಎಂತ ಹಂಗೇರಿಯದ ಅಫೀಸಿಯಲ್ ವರದಿಯಿಂದ ತಿಳಿದುಬರುತ್ತದೆ.

ಫ್ರಾನ್ಸಿನಲ್ಲಿ ಜರ್ಮನರು ಗೆದ್ದುಕೊಂಡ ಪ್ರದೇಶದಿಂದ ೩೦,೦೦೦ ಮಕ್ಕಳನ್ನು ಜರ್ಮನಿಗೆ ಕಳುಹಿಸಿಕೊಡಲಿಕ್ಕಿದ್ದಾರೆಂಬ ವಾರ್ತೆ ಇದೆ.

ಹೆಂಗಸರನ್ನು ವಕೀಲ ವೃತ್ತಿಗೆ ಸೇರಿಸಿಕೊಳ್ಳಬೇಕೆಂಬದಾಗಿ ಲಂಡನ್ ವಕೀಲರ ಎಸೋಸಿಯೇಶನಿನ ಮುಂದೆ ಬಂದ ಸೂಚನೆಯನ್ನು ಸದರಿ ಎಸೋಸಿಯೇಶನಿನವರು ತೆಗೆದುಹಾಕಿರುತ್ತಾರೆ.

ಯುದ್ಧ ಪ್ರಾರಂಭವಾದಂದಿನಿಂದ ಕೆನಡಾ ದೇಶದಲ್ಲಿ ಸೇನೆಗೆ ೩೮೭,೦೦೦ ಮಂದಿ ಸೇರಿಕೊಂಡಿದ್ದಾರೆ.

ಟರ್ಕಿಗೆ ಸೇರಿದ ಲೆಬನೋನ್ ಮತ್ತು ಸಿರಿಯಾ ಪ್ರಾಂತ್ಯದಲ್ಲಿ ಆಹಾರಕ್ಕಿಲ್ಲದೆ ನೂರುಸಾವಿರ ಮಂದಿ ಸತ್ತುಹೋಗಿರುವರು ಎಂಬ ವಾರ್ತೆ ಬಂದದೆ.

ಜರ್ಮನರು ಸ್ವಿಸ್ ಸರಹದ್ದಿನಲ್ಲಿ ೪೦,೦೦೦-೭೦,೦೦೦ ಸೈನಿಕರನ್ನು ಒಟ್ಟುಗೂಡಿಸಿರುವರು ಎಂಬ ವಾರ್ತೆ ಇದೆ.

ಸ್ಪೈನ್ ದೇಶದಲ್ಲಿ ಅನರ್ಕಿಸ್ಟರ ಗೊಂದಲವು ಎದ್ದಿದೆ. ಗ್ರೆನಡಾ ರೈಲ್ವೇಯ ಬಳಿ ಸ್ಪಾನ್ ದೇಶದ ಅಲ್ಫಾನ್ಸೊ ಅರಸರು ಹಾದು ಹೋಗಲಿಕ್ಕಿದ್ದ ಅಗ್ಗಾಡಿಯ ಮುಂದುಗಡೆಯಲ್ಲಿ ಸೀಸದ ಒಂದು ಗಟ್ಟಿಯು ಇಡಲ್ಪಟ್ಟಿತ್ತು. ಆದರೆ ಅಗ್ಗಾಡಿಯು ಆ ದಾರಿಯಲ್ಲಿ ಹಾದು ಹೋಗುವ ಮೊದಲೇ ಈ ವಿಷಯವು ತಿಳಿದುಬಂದದರಿಂದ ಅರಸರು ಅಪಾಯವಿಲ್ಲದೆ ಹಾದು ಹೋದರು.

ಆಸ್ಟ್ರೀಯದ ವಿಯಾನ್ನ, ಪ್ರೇಗು, ಎಲ್ಬುಟ್ಜು, ಬ್ರನ್ಸ್‌ಕ್ರಿಕ್ಸ್ ಮತ್ತು ಟ್ರಿಸ್ಟೆ ಪಟ್ಟಣಗಳಲ್ಲಿ ಜನರಿಗೆ ೫ ದಿವಸಗಳಿಂದ ಆಹಾರಕ್ಕೆ ರೊಟ್ಟಿ ಇಲ್ಲವೆಂಬ ವಾರ್ತೆ ಬಂದದೆ.

ವಸಾಹತಿಗಳ ಸೆಕ್ರೆಟರಿಯಾಗಿರುವ ಮಿ। ವಾಲ್ಟರ್ ಲೊಂಗರವರ ಮಗ ಬ್ರಿಗೇಡರ್ ಜನರಲ್ ಲೊಂಗರವರು ಯುದ್ಧದಲ್ಲಿ ಮಡಿದು ಹೋದರು. ಬ್ರಿಗೇಡರ್ ಜನರಲ್ ಲೊಂಗರವರು ಆಫ್ರೀಕದಲ್ಲಿ ನಡೆದ ಯುದ್ಧ ಕಾಲ ಅತಿ ಸಾಹಸ ಕೃತ್ಯಗಳನ್ನು ತೋರಿಸಿದ್ದರು. ಕಿಂಬರ್ಲೆಯಲ್ಲಿ ನಡೆದ ಯುದ್ಧದಲ್ಲಿ ಅವರಿಗೆ ಮರಣಾಂತಿಕ ಗಾಯಗಳಾಗಿದ್ದವು. ಆದರೂ ಬದುಕಿಕೊಂಡರು. ನಂತರ ಹಿಂದೂಸ್ಥಾನದ ಸರ್ವ ಸೇನಾಧಿಪತಿಯಾದ ಸರ್ ಓ. ಮೂರುಗ್ರೇಯವರ ಎ. ಡಿ. ಕ್ಯಾಂಪರಾಗಿದ್ದರು. ಯುದ್ಧ ಪ್ರಾರಂಭವಾದ ನಂತರ ತಿರಿಗಿ ತನ್ನ ರೆಜಿಮೆಂಟಿಗೆ ಸೇರಿಕೊಂಡು ಫ್ರಾನ್ಸಿನಲ್ಲಿ ಕೆಲವು ಶೂರ ಕೃತ್ಯಗಳನ್ನು ನಡಿಸಿ ಖ್ಯಾತಿಹೊಂದಿದ್ದರು.

ಸಹಕಾರ.

೧೯೧೬-೧೭ನೇ ವರ್ಷದ ೭ನೇ ಸರ್ಕಿಲರು.

ಸ್ಟೇಟ್ ಓಫ್ ಸೋಡಾ ಎಂಬ ಹಿಂದಿನ ಸರ್ಕಿಲಾರಿನಲ್ಲಿ ಹೇಳೋಣಾದ ಸಾಲ್ಟಿನ ಕುರಿತು ಅಗತ್ಯವಿದ್ದ ತಿಳುವಳಿಕೆಯನ್ನು ಲೇಖನಗಳ ರೂಪವಾಗಿ ದಿಗುಸ್ತ ದೇಶದಲ್ಲಿ ಅಲ್ಲಿಯ ಸಹಕಾರ ಸಂಘಗಳ ಮೂಲಕ ರೈತರ ಕೈಗೆ ದೊರೆಯುವಂತೆ ಮಾಡಿದ್ದಲ್ಲಿ ಅಲ್ಲಿಯ ಕೃಷಿಕ್ರಮಗಳು ಬಹಳ ಮಟ್ಟಿಗೆ ಸಿದ್ಧಿಯವೆಂದು ತಿಳಿದು ಬರುತ್ತದೆ. ಈ ಜಿಲ್ಲೆಯ ಸಹಕಾರ ಸಂಘದವರಾಗಲಿ ಅಥವಾ ಸಂಘಗಳ ಮೆಂಬರರಾಗಲಿ ಕಲ್ಪಿತ್ತಿಯ ಸ್ಟೇಟ್ ಸಂಘದವರಿಗೆ ಸಾಗುಮಾಡುವ ಜವಿನಿನ ಮಣ್ಣನ್ನು ನಮೂನೆಗೆ ರವಾನಿಸಿದ್ದಲ್ಲಿ ಸ್ಟೇಟ್ ಸಂಘದವರು ಮುಫತ್ತಾಗಿ ಆ ಮಾದರಿಯನ್ನು ಶೋಧಿಸಿ, ಆ ಮಣ್ಣನ್ನು ಸುಧಾರಿಸುವ ಸ್ಟೇಟ್ ಓಫ್ ಸೋಡಾ ಮುಂತಾದ ಇತರ ಗೊಬ್ಬರಗಳನ್ನು ಸೂಚಿಸುವರು; ಬೆಳೆಗಳ ವಿಷಯ ಬೇರೆ ಬೇರೆ ಭಾಷೆಗಳಲ್ಲಿ ಅಚ್ಚು ಹಾಕಿಸಿರುವ ಲೇಖನಗಳನ್ನು ಉಚಿತವಾಗಿ ಒದಗಿಸುವರು. ಯಾವುದೊಂದು ಸಹಕಾರ ಸಂಘದವರು ಈ ಸಾಲ್ಟ ಗೊಬ್ಬರವನ್ನು ಸಂಗ್ರಹಿಸಿಟ್ಟು ಸ್ಥಳೀಯ ರೈತರಿಗೆ ಮಾರಾಟ ಮಾಡುವದಕ್ಕೆ ಇಚ್ಛಿಸುವದಾದರೆ, ಅಂತಹ ಸಂಘವು ಇರುವ ಊರಿಗೆ ಬಸ್ತಿಯಲ್ಲಿರುವ ಗೊಬ್ಬರದಂಗಡಿಗಳಿಗೂ ಸಹಕಾರ ಸಂಘಕ್ಕೂ [illegible] ಮಾಡಿ, ತಕ್ಕ ವಾಯಿದೆಯೊಳಗೆ ಕ್ರಯ ಸಲ್ಲಿಸುವ ಶರ್ತಿನಲ್ಲಿ ಸಹಕಾರ ಸಂಘದವರಿಗೆ ಗೊಬ್ಬರವು ಸಿಗ ಸಿಕ್ಕುವ ಹಾಗೆ ಕೂಡಾ ಸ್ಟೇಟ್ ಸಂಘದವರು ಏರ್ಪಾಡು ಮಾಡುವರು.

ಆದುದರಿಂದ ನಮ್ಮ ಜಿಲ್ಲೆಯಲ್ಲಿ ಸ್ವತಃ ವ್ಯವಸಾಯಗಾರರಾಗಿರುವ ಅಥವಾ ಕೃಷಿಯಲ್ಲಿ ಆಸಕ್ತಿಯುಳ್ಳ ಮೆಂಬರರು ಈ ರೀತಿಯ [illegible] ಪ್ರಯೋಜನವನ್ನು ಹೊಂದುವದಕ್ಕೆ ಮುಂದೆ ಬರುವರೆಂದು ನಾನು ನಂಬುತ್ತೇನೆ.

ಡಿಸ್ಟ್ರಿಕ್ಟ್ ಕೋ-ಓಪರೇಟಿವ್ ಆಫೀಸ್, ... ರೋಡ್, ... ತಾ. 14-1-1917. } ಮಾ. ಅನಂತರಾವ್, ... ರಿಜಿಸ್ಟ್ರಾರ್.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬೆಳ್ಳಿಯ ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುತ್ತಿರುವ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲಾ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಇತ್ಯಾದಿ ಸಂಬಂಧಗಳನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ... ಅತ್ಯುತ್ತಮವು. ಪ್ರಸಿದ್ಧವಾಗಿದೆ. ರಾತಲಿಗೆ ೨ ರೂ.

೫. ಪೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ... ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಬಟ್ಟಿ ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯಿತೀ ಮಂಜನ ದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ಡಬ್ಬಿಗೆ ೩ ಆಣೆ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಮಲೇರಿಯಾ ಜ್ವರ ಮುಂತಾದ ಎಲ್ಲಾ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯ ... ರಾತಲಿಗೆ ೨ ರೂ.

೧೦. ಅಶ್ವಗಂಧೀ ಪಾಕ. ಸ್ತ್ರೀ ಪುರುಷರ ... ಧಾತುಪುಷ್ಟಿ ... ಮೂಲಕವಾಗಿ ... ಆರೋಗ್ಯ ... ತೇಜಸ್ಸು, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸಂಧಿ ನೋವು, ಉಳುಕು, ಬೀಗು, ವಾತ ಬಾಧೆಗಳನ್ನು ತಕ್ಷಣ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ತುರಿ, ಕಜ್ಜಿ ... ಚರ್ಮವ್ಯಾಧಿಗಳನ್ನು ಒಂದೆರಡು ಲೇಪ ನದೊಳಗಾಗಿ ಗೆಲ್ಲುವದು. ... ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸಪ್ತೀರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ರಪಾಪ ... ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ... ಕಂಠಸ್ವರವನ್ನು ಮಧುರವಾಗಿರಿಸುವ ... ಅತ್ಯುತ್ತಮವು. ೧೦ ತೊಲೆಗೆ ೨ ರೂ. ...

ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ... ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ... ನೋಡಿರಿ. ರೋಗದ ಲಕ್ಷಣಗಳನ್ನು ಬರೆದು ... ಉಚಿತವಾಗಿ ... ಮಾಡುವೆವು. ... ಸತ್ಯವ್ಯವಹಾರ ನಡೆಯಿಸುವೆವು.

ನಮ್ಮ ವಿಳಾಸ:—ಎಸ್. ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು ಮದರಾಸು

S. M. Nath & Co., *Ayurvedic Chemists*
Vepery Post, MADARS.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೇರಿಯಾಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ಗಾಂಡಿ ಗುರುಗಳಾದ ರೆವರೆಂಡ್ ಜಿ. ಎ. ಡಿಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ಸೇರಿತು. ಇದು ಕೂಡ ತರಿಸಿದ್ದು 22 ಬಾಟ್ಲಿಗಳು. ಅದನ್ನು ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯ ಬೇಕೆಂದಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾಕ್ಕಾಡಾದ ವಿಶನಲ್‌ನಿಂದ ಮ. ಜಿ. ರಸ್ಕಿನಾರು ಬರೆಯುತ್ತಾರೆ:—ಒಂದು ವರುಷದ ಲಾಗಾಯ್ತು ಮಲೇರಿಯಾದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೊನಿಕ್ಸ್‌ಗಳನ್ನೂ ತಕ್ಕೊಂಡಲ್ಲಿ ಗುಣವನ್ನು ಕಾಣದೆ, ನಿಮ್ಮ ಮಲೇರಿಯಾನಾ ತಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿ.

ವಿಳಾಸ:— **The Malariana Company,**
Kankanady S. C.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟಿದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಿನ್ನುತ್ತವೆ. ಇದರಿಂದ ಅಜೀರ್ಣ, ಜ್ವರ, ಕೆಮ್ಮು, ಶೀತಕಾಲಗಳು ಕಿಂಯಾರೋಗ, ನೆಗಡಿಯಿಂದ ಮೂರು ಸುರಿಯೋದು ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಖಾ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಂ, ಜಿಲ್ಲಾ ಮುಝಫರಪುರ, ಬರೆಯುವದೇನಂದರೆ:—ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ: ಸಣ್ಣ ಹುಡುಗರ ರೋಗಗಳಿಗೆ ಇಂಥ ಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅವಕ್ಕೆ ಸಂಭಾಧ ಗುಣಕಾರಕ ಔಷಧವು ಮತ್ತಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ವಿಜಂಟರು:— ಊಲನ್ ಮಾರ್ಟಿನ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಮದರಾಸ್ ಮೇಲ್ ವಾಚ್.

6 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ತರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟು ಮಾಡಿರುವದು. ಮತ್ತು ಚೌಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ತರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮಣಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಕಿ 1. 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3, ಇರುಳಪ್ಪನ ಬೀದಿ, ಮದರಾಸ್.

ಯಂ ಯಸ್. ರಾವ್ ಕಂಪೆನಿ,

ಬುಕ್‌ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಾಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು ೯ ಆಣೆ ಪ್ರತ್ಯೇಕ. ಮತ್ತ ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅನಾಥ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕ್ವ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರಫುಲ್ಲೆ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಾವಿಧಿ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಭ್ಯಾಸ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"x28"ಕ್ಕೆ	0—1—0

ಯೂರೋಪದ ಮಹಾ ಯುದ್ಧ.

ಒಂದು ಕಡೆಯಲ್ಲಿ ಅಮೇರಿಕದ ಪ್ರೆಸಿಡೆಂಟ ವಿಲ್ಸನರು ಮುಂದೆ ಆಗಲಿಕ್ಕಿರುವಂಥಾ ಸಂಧಿಯ ವಿಷಯ ಕಣ್ಣಿ ಮನೋದೃಷ್ಟಿಯನ್ನು ಇಟ್ಟಿರುವರು, ಮತ್ತೊಂದು ಕಡೆಯಲ್ಲಿ ಯುದ್ಧಕ್ಕೆ ಸೇರಿದ ರಾಜ್ಯಗಳೆಲ್ಲಾ ಬರುವ ವಸಂತ ಕಾಲದಲ್ಲಿ ಕಂಡಕಂಡಾದ ಯುದ್ಧವನ್ನು ಮಾಡಬೇಕೆಂಬ ಮನಸ್ಸಿನಿಂದ ತಕ್ಕ ಯುದ್ಧ ಸನ್ನಾಹವನ್ನು ಮಾಡುತ್ತಿದ್ದಾರೆ. ಹೀಗೆ ಈ ಬರುವ ವಸಂತ ಕಾಲದಲ್ಲಿ ಫ್ರಾನ್ಸಿನ ಫೋರ್ತ್-ಲೋರೈನ್, ಅಲ್ಸೆಸ್ ಪ್ರಾಂತ್ಯದಲ್ಲಿ ಕಠಿಣ ಕಾಳಗಗಳು ನಡಿಯಲಿಕ್ಕಿವೆ.

ಪಶ್ಚಿಮ ರಣರಂಗ.

ಶತ್ರುಗಳು ಅರ್‍ರಾಸಿನ ಉತ್ತರ ಮತ್ತು ಪ್ಲೊಗೆಸ್ಟೆಟ್ ಅರಣ್ಯದ ಈಶಾನ್ಯದಲ್ಲಿ ದಾಳಿ ಮಾಡಿರುವರು. ಆದರೆ ಪ್ರಯೋಜನ ಹೊಂದಲಿಲ್ಲ. ಬ್ರಿಟಿಷ ಸೇನಿಕರು ಜರ್ಮನರ ಸೇನೆಯ ಮೇಲೆ ಬಿದ್ದು ಕೆಲವು ಮಂದಿಯನ್ನು ಸೆರೆ ಹಿಡಿದಿರುತ್ತಾರೆ. ಅರ್‍ರಾಸಿನ ಎದುರಿಗೆಯಲ್ಲಿ ಬ್ರಿಟಿಷರ ತೋಪುಗಳು ಹಾರಿಸಿದ ತೋಪುಗಳಿಂದ ಶತ್ರುಗಳ ನೆಲೆಯಲ್ಲಿ ಒಂದು ಭಯಂಕರವಾದ ಸಿಡಿತ ಉಂಟಾಗಿರುವದು. ಲ್ಯೂಸ್ ಮತ್ತು ರನೆಯ ಮಧ್ಯೆ ತೋಪುಕಾಳಗಗಳು ತೀಕ್ಷ್ಣತೆಯಿಂದ ನಡೆಯುತ್ತಿದೆ. ನ್ಯೂವಿಲ್ಲಿ ಸೈಂಟ್ ವಾಸ್ಟಿನ ಈಶಾನ್ಯದಲ್ಲಿ ಬ್ರಿಟಿಷರು ಶತ್ರು ಸೇನೆಯ ಮೇಲೆ ದಾಳಿ ಮಾಡಿ ಹಲವು ಸೇನಿಕರನ್ನು ಸೆರೆಹಿಡಿದಿರುವರು. ಲೂಸಿನ ವಾಯವ್ಯ ದಿಕ್ಕಿನಲ್ಲಿ ದಾಳಿಮಾಡಿದ ಶತ್ರುಗಳನ್ನು ಬ್ರಿಟಿಷರು ಹಿಂದಕ್ಕಟ್ಟಿರುವರು.

ಬಾಲ್ಕಾನ್.

ಸೆರೆತಿನಲ್ಲಿ ಜರ್ಮನರ ಜನರಲ್ ಮೆಕೆನ್‌ಸನರು ದೃಢ ಸಂಕಲ್ಪದಿಂದ ಕಾಳಗ ಮಾಡಿ ರುಮೇನಿಯಾನರ ನೆಲೆಯನ್ನು ಭೇದಿಸಿರುವರು. ಆದರೆ ಇನ್ನೂ ಜರ್ಮನರು ಸೆರೆತ್ ನದಿಯನ್ನು ದಾಟಿ ಹೋಗಲಿಲ್ಲ. ಜರ್ಮನರು ವಿಶೇಷವಾದ ತೋಪು ಸನ್ನಾಹವನ್ನು ಮಾಡಿಕೊಂಡು ತಿರುಲು ಜವುಗು ಭೂಮಿ ಮತ್ತು ಸೆರೆತ್ ನದಿಯ ಮಧ್ಯೆ ಹಲ್ಲೆಮಾಡಿ ರುಶ್ಯನರ ಸೇನಿಕರನ್ನು ಒಂದೂವರೆ ಮೈಲು ಹಿಂದಕ್ಕಟ್ಟಿರುವರು. ರುಶ್ಯನರು ಡೆನ್ಯೂಬು ನದಿಯ ಶಾಖೆಯಾಗಿರುವ ಜೋರ್ಜಗ್ರೀಫ್ ನದಿಯ ಬಳಿ ಫಕ್ರನೇ ಬಲ್ಗೇರಿಯಾನರ ಮೇಲೆ ಬಿದ್ದು ೩೩೭ ಮಂದಿಯನ್ನು ಸೆರೆಹಿಡಿದಿರುವರು.

ಯುದ್ಧ ಹಡಗಗಳು.

ಜರ್ಮನರ ಡಿಸ್ಟ್ರೋಯರ್ಸ್ ಎಂಬ ಯುದ್ಧನಾವೆಗಳು ಜೀಬುಗ್ರೇವನ್ನು ಬಿಟ್ಟು ಹೊರಡುತ್ತಿರುವಾಗ ಬ್ರಿಟಿಷರ ಸ್ಕ್ಯಾಡ್ರನ್ ನಾವೆಗಳು ಅವುಗಳ ಮೇಲೆ ಗುಂಡು ಹಾರಿಸಿದ್ದರಿಂದ ಜರ್ಮನರ V೬೯ ಡಿಸ್ಟ್ರೋಯರ್ ನಾವೆಯ ೩ ಅಧಿಕಾರರೂ ಕಮಾಂಡರನೂ ಸತ್ತು ಹೋದರು. ಬ್ರಿಟಿಷರ ಮತ್ತೊಂದು ಗುಂಡಿನಿಂದ ಆ ಯುದ್ಧನಾವೆಯಲ್ಲಿ ತೂತು ಬಿತ್ತು. ಈಗ ಈ ಡಿಸ್ಟ್ರೋಯರ್ ನಾವೆಯು ಯುಮಯ್ಡನ್ ಬಂದರದಲ್ಲಿ ಬಿದ್ದುಕೊಂಡಿದೆ. ಡಚ್ಚರ ದೋಣಿಗಳು ಈ ಹಡಗದಲ್ಲಿ ಗಾಯ ಒಡೆದಿದ್ದ ೧೦ ಮಂದಿ ನಾವಿಕರನ್ನು ದಡೆ ಸೇರಿಸಿರುವರು. ಬ್ರಿಟಿಷರು ಉತ್ತರ ದಡಕ್ಕೆ ಹೋಗುತ್ತಿದ್ದ ಮತ್ತೊಂದು ಟೊರ್ಪೆಡೋ ದೋಣಿಯನ್ನು ಮುಣುಗಿಸಿರುವರು. V೬೯ ಡಿಸ್ಟ್ರೋಯರ್ ನಾವೆಯಲ್ಲಿ ೮ ಮಂದಿ ಸತ್ತಿರುವರು, ೧೩೫ ನಾವಿಕರಲ್ಲಿ ೮ ಮಂದಿ ಮಾತ್ರ ಬದುಕಿರುವರು. ನಾವಿಕರಲ್ಲಿ ಕೆಲವರು ಸಮುದ್ರಕ್ಕೆ ಹಾರಿ ಮುಣುಗಿ ಸತ್ತರು. ಹಡಗದ ಕಮಾಂಡರನ ೩ ಕಾಲುಗಳಿಗೂ ಗುಂಡು ತಗಲಿದೆ.

ಜರ್ಮನರ ಒಂದು ಸಣ್ಣ ಯುದ್ಧ ಹಡಗವು ಇಂಗ್ಲಾಂಡಿನ ಸಫಕ್ ಕರಾವಳಿಯ ಮೇಲೆ ಕೆಲವು ಗುಂಡುಗಳನ್ನು ಹಾರಿಸಿ ಹೋಗಿರುವದು. ಯಾರಿಗೂ ಪ್ರಾಣಾಪಾಯಗಳು ಸಂಭವಿಸಲಿಲ್ಲ, ಹೆಚ್ಚಿನ ನಷ್ಟವೂ ಸಂಭವಿಸಲಿಲ್ಲ. ರಾತ್ರಿಕಾಲ ೧೧-೧೨ ಗಂಟೆಯ ಮಧ್ಯೆ ಈ ನಾವೆಯು ಈ ಕರಾವಳಿಯಲ್ಲಿ ಕಾಣಿಸಿಕೊಂಡು ೩ ನಿಮಿಷದೊಳಗೆ ಓಡಿಹೋಗಿರುವದು.

ಮೆಸಪಟೋಮಿಯ.

ಟೀಗ್ರಿಸ್ ನದಿಯ ಬಲಗಡೆಯಲ್ಲಿ ನಮ್ಮ ಸೇನಿಕರು ಭೀಕರ ಕಾಳಗ ಮಾಡಿ ೧೧,೦೦೦ ಗಜ ಕಂದಕಗಳನ್ನು ಹಿಡಿದಿರುವದಲ್ಲದೆ ಕಂದಕಗಳ ೨ನೇ ಸಾಲುಗಳಲ್ಲಿ ಕೆಲವನ್ನು ಗೆದ್ದುಕೊಂಡಿರುತ್ತಾರೆ. ನಮ್ಮವರ ಸೇನೆಯಲ್ಲಿ ಅತ್ಯಲ್ಪ ನಷ್ಟ ಮಾತ್ರವಾಗಿರುವದು. ಹಾಯಿ ನದಿಯ ಪೂರ್ವ ದಿಕ್ಕಿನಲ್ಲಿ ತುರ್ಕರು ನಾಲ್ಕಾವರ್ತಿ ಹಲ್ಲೆಮಾಡಿದರು. ೧ನೇ ಮತ್ತು ೩ನೇ ಸಾರಿ ಮೇಲ್ಬಾಯಿದಾಗ ನಮ್ಮವರ ತೋಪುಗಳು ಅವರನ್ನು ಅಟ್ಟಿಬಿಟ್ಟವು. ೨ನೇ ಮತ್ತು ೪ನೇ ಸಾರಿ ಮಾತ್ರ ಅವರಿಗೆ ಸ್ವಲ್ಪ ಮಾತ್ರ ಜಯವಾಗಿದೆ. ಆದರೆ ನಮ್ಮವರು ತಿರಿಗಿ ಅವರ ಮೇಲೆ ಬಿದ್ದು ಅವರ ಕೈಸೇರಿದ ಎಲ್ಲಾ ಸ್ಥಳಗಳನ್ನು ಗೆದ್ದುಕೊಂಡರು. ದಿನವೆಲ್ಲಾ ತುರ್ಕರಿಗೆ ಆದ ನಷ್ಟವು ಬಹಳವಾಗಿರುವದು. ೭೦ ಶತ್ರುಸೇನಿಕರು ಸೆರೆಬಿದ್ದಿರುವರು. ಶತ್ರುಗಳ ೫೮೦ ಮಂದಿಯ ಶವವನ್ನು ನಮ್ಮವರೂ ೫೦೦ ಶವಗಳನ್ನು ತುರ್ಕರೂ ಹೂಣಿಟ್ಟಿರುವರು.

ರುಶ್ಯಾರಣರಂಗ.

ರುಶ್ಯನರು ಭೀಕರವಾಗಿ ತೋಪುಗಳನ್ನು ಹಾರಿಸಿದ ನಂತರ ಜರ್ಮನರು [illegible] ಪಶ್ಚಿಮ ಕಡೆಗೆ ಹಿಂದೆ ಸರಿದಿರುವರು. ಜರ್ಮನರಿಗೆ ವಿಶೇಷ ನಷ್ಟವಾಗಿರುವದು. ರಿಗ್ಗಾದ ಪಶ್ಚಿಮ ದಿಕ್ಕಿನಲ್ಲಿ ಮೇಲ್ಬಾಯಿದ ಜರ್ಮನರು ಏರಡಾವರ್ತಿ ಹಿಮ್ಮೆಟ್ಟಿರುವರು.

ಸಂಧಿ ಪ್ರಸ್ತಾಪ.

ಅಮೇರಿಕದ ಡಾಕ್ಟರ್ ವಿಲ್ಸನರು ಸಂಧಿ ವಿಷಯವನ್ನು ಕುರಿತು ಸೆನೆಟ್ ಸಭೆಯಲ್ಲಿ ಒಂದು ಭಾಷಣವನ್ನು ಮಾಡುವಾಗ ಹೀಗೆ ಹೇಳಿದರು. "ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಮಾಡಲ್ಪಡುತ್ತಿರುವ ಪ್ರಯತ್ನಗಳು ಚೆನ್ನಾಗಿ ಜರಗುತ್ತಲಿವೆ. ಆದರೆ ಶಾಶ್ವತವಾದ ಸಂಧಿಯು ಆಗಬೇಕು. ಈ ಫಲಸಿದ್ಧಿಯಾಗಬೇಕಾದರೆ ಈಗಿನ ಯುದ್ಧದಲ್ಲಿ ಸಂಪೂರ್ಣ ವಿಜಯವಾದ ಮೇಲೆ ಎಂಬ ಮಾತನ್ನು ಪೂರ್ಣವಾಗ ಹೊಡೆದು ಹಾಕಬೇಕು. ವಿಜಯ ಎಂಬ ಮಾತನ್ನು ಉಪಯೋಗಿಸಿದರೆ ವಿಜಿತರಾದವರನ್ನು ಸಂಧಿ ಮಾಡಿಕೊಳ್ಳುವದಕ್ಕೆ ನಿರ್ಬಂಧಪಡಿಸಿದಂತಾಗುವದು. ಆದರಿಂದ ಅಗ್ರಹ ಉಂಟಾಗದೆ ಇರದು. ಅಂಥಾ ಅಗ್ರಹದ ಪ್ರಸಂಗ ಶಾಂತಿಗೆ ಯಾವಾಗಲೂ ಭಂಗಕರವಾಗುವದು. [illegible] ಸಮತ್ವರೂಪವಾದ ಅರ್ಹತೆಯಿಂದ ಉಂಟಾದ ಸಂಧಿಯೇ ಸಂತೃಪ್ತಿ[illegible]ವದು. [illegible] ಒಂದು ದೇಶವು ಸಂಯುಕ್ತವಾಗಿಯೂ ಸ್ವತಂತ್ರವಾಗಿಯೂ ಸ್ವತಂತ್ರವಾಗಿಯೂ ಇರಬೇಕು. ಸಮುದ್ರ ಸಂಚಾರ [illegible] ಅರಬೇಕು. ಸ್ಥಿತಿಯೊಂದು ದೊಡ್ಡ ದೇಶಕ್ಕೆ ಸಮುದ್ರ ಸಂಚಾರಕ್ಕೆ [illegible]

ಅವಕಾಶ ಉಂಟಾಗಿಯೇ ತೀರಬೇಕು. ಇದಕ್ಕಾಗಿ ಯುದ್ಧದ ಹಡಗವನ್ನು ಕಡಿಮೆ ಮಾಡುವದು ಅತ್ಯವಶ್ಯಕವು. ಇದು ಬಹಳ ಕಷ್ಟವಾದ ವಿಷಯವು. ಶಾಶ್ವತ ಶಾಂತಿಯನ್ನು ಎಲ್ಲರೂ ಕೋರುವದಾದರೆ ಎಲ್ಲಾ ರಾಜ್ಯಗಳವರೂ ಯಾವ ದೇಶವೇ ಆಗಲೀ ಮತ್ತೊಂದು ದೇಶವನ್ನು ಧ್ವಂಸ ಮಾಡಿ ತಾನು ಅಭಿವೃದ್ಧಿಗೊಳ್ಳಬೇಕೆಂದು ಪ್ರಯತ್ನಿಸಕೂಡದು. ಚಿಕ್ಕ ದೊಡ್ಡ ದೇಶಗಳೆಲ್ಲಾ ಪ್ರತ್ಯೇಕವಾಗಿಯೂ ನಿರ್ಭಯವಾಗಿಯೂ ತಡೆಯಿಲ್ಲದೆಯೂ ಅಭಿವೃದ್ಧಿಗೊಳ್ಳುವದಕ್ಕೆ ಅವಕಾಶವು ಏರ್ಪಡಿಸಬೇಕು" ಎಂಬ ಮನೋಸಿದ್ಧಾಂತವನ್ನು ಅವಲಂಬಿಸಬೇಕು. ನಮ್ಮ ಶತ್ರುಗಳನ್ನು ಹತಮಾಡಬೇಕೆಂಬದು ನಮ್ಮ ಉದ್ದೇಶವಲ್ಲವೆಂದು ಈಗ ಎರಡು ರಾಜ್ಯಪಕ್ಷದ ರಾಜನೀತಿಜ್ಞರೂ ನುಡಿದಿರುವರು. ಆದರೆ ಇದರ ಒಳಗಣ ಅರ್ಥವು ಎಲ್ಲರಿಗೂ ವಿಷದವಾಗದೆ ಹೋಗಬಹುದು. ವಿಜಯ ರಹಿತವಾದ ಸಂಧಿಯು ಆಗಬೇಕು (Peace without victory) ಎಂಬದೇ ಇದರ ಅರ್ಥವೆಂದು ನಾವು ಭಾವಿಸುತ್ತೇವೆ. ಮುಂದೆ ಯುದ್ಧವು ನಡೆಯದಂತೆ ಆಗಬೇಕಾದರೆ ಅಮೇರಿಕದವರ ಸಂಬಂಧವಿಲ್ಲದೆ ಆಗುವ ಸಂಧಿಯು ಸಮಗ್ರವಾಗಲಾರದು. ಕಾಗದದ ಮೇಲೆ ಬರವಣಿಗೆ ಮಾಡಿಟ್ಟ ಕೂಡಲೇ ಸಂಧಿಯು ದೃಢಪಟ್ಟಂತಾಗುವದಿಲ್ಲ. ಈಗಣ ಯುದ್ಧದಲ್ಲಿ ಸೇರಿರುವ ದೇಶಗಳ ಮತ್ತು ಇನ್ನಂಥಾ ದೇಶದವರೂ ಇದಿರಿಸಿ ನಿಲ್ಲಲಾರದನ್ನು ಹೆಚ್ಚಾದ ಶಕ್ತಿಯುಳ್ಳವರ ಶಕ್ತಿಯನ್ನು ಕೂಡಾ ಮೀರಿದ ಮಹಾ ಪ್ರಸಂಡ ಮಾನವ ಶಕ್ತಿಯು ಏರ್ಪಟ್ಟು, ಅದು ಸಂಧಿ ನಿಬಂಧನೆಯನ್ನು ಭದ್ರವಾಗಿಯೂ ಶಾಶ್ವತವಾಗಿಯೂ ಇರುವಂತೆ ಮಾಡಬೇಕು. ಅಂಥಾ ಸಂಧಿಯೇ ಅಪೇಕ್ಷಣೀಯವು" ಎಂದು ಹೇಳಿರುವರು. ಡಾಕ್ಟರ್ ವಿಲ್ಸನರ ಈ ಮಾತುಗಳು ಎರಡು ಪಕ್ಷದವರಿಗೂ ಪಕ್ಷಪಾತದ ಮಾತೆಂದು ಊಹಿಸಲು ಕಾರಣಕೊಟ್ಟಿದೆ. ಡಾಕ್ಟರ್ ವಿಲ್ಸನರು ಜರ್ಮನರ ಪಕ್ಷವನ್ನು ವಹಿಸಿ ಹೀಗೆ ಮಾತಾಡಿದರೆಂದು ಕೆಲವು ಪತ್ರಿಕೆಗಳೂ, ನಿಷ್ಪಕ್ಷವಾದ ಮಾತೆಂದು ಕೆಲವು ಪತ್ರಿಕೆಗಳೂ ಇದರ ಮೇಲೆ ಟೀಕೆ ಮಾಡುತ್ತಿವೆ.

ಜಲಾಂತರ್ಗಾಮಿ ನಾವೆಗಳು.

ರುಶ್ಯನರ ಜಲಾಂತರ್ಗಾಮಿ ನಾವೆಗಳು ಬೋಸ್ಫರಸಿನಲ್ಲಿ ಶತ್ರುಗಳ ೪ ಹಡಗಗಳನ್ನು ಮುಣುಗಿಸಿರುವವು, ೩ ಹಡಗಗಳನ್ನು ದಡಕ್ಕೆ ಅಟ್ಟಿರುವವು ಎಂಬ ವಾರ್ತೆ ಬಂದದೆ.

ಜನವರಿ ತಾ. ೨೨ ಬ್ರಿಟಿಷರ "ಸೈಲೆಸಿ" "ಕೋರ್ಟರ್" ಸ್ಕ್ವಾಯರ್ "ಡರಾಟಿಬು" ನೋರ್ವೆಯರ "ಎಸ್ ಘರಾಂಕ್" "ಎಸ್ಟ್" ಮತ್ತು "ಮರಿಯೆಟ್ಟಿ ಜಿಯೋರ್ಜಮೊ" ಬ್ರಿಟಿಷರ ಸ್ಟೀಮರ್ "ಲಿಲಿಯಾನ್" ಹಡಗಗಳೂ ತಾ. ೨೩ರಲ್ಲಿ ಬ್ರಿಟಿಷರ "ಫೋರ್ಟ ನಿಕಲ್ಸನ್" "ಮಾಟಿಸ್" "ಟೊವ್‌ಸ್ಟ್ರೂಡ್" "ಮೊಹಕ್ ಫೀಲ್ಡ್" ಬೆರೊನ್ ಹೆಂಪ್ಹಿಲ್" ಕಾರ್ಲೈಲ್" "ಲಂಕ್ಯಾಸ್ಟರ್ ಜಪಾನಿಯರ "ಕೆಸಾಗಮಾರು" ನೋರ್ವೇಯರ ಜೊಟೆನ್ಸ್ ಡಲ್" ಸ್ವೀಡನವರ "ಕಾವ" ಹಡಗಗಳೂ ತಾ. ೨೫ರಲ್ಲಿ ಬ್ರಿಟಿಷರ "ನಿಕ್ಸೆನ್" ಡಚ್ಚರ "ಸಲ್ಯಾಂಡ್" ಮತ್ತು "ಜೆಟ್ಟಾ ಹಡಗಗಳೂ ಮುಣುಗಿಸಲ್ಪಟ್ಟಿವೆ.

ವಿದೇಶ ವೃತ್ತಾಂತ.

ಜರ್ಮನರು ಸ್ವಿಸ್ ಸರಹದ್ದಿನ ಒಳಿ ಸೇನೆಯನ್ನು ತಂದೊಡ್ಡಿರುವದರಲ್ಲಿ ಅವರಿಗೆ ೩ ಉದ್ದೇಶಗಳಿರುವವು. ಒಂದು ಬೆಲ್ಪೊರ್ಟಿನ ಮಾರ್ಗವಾಗಿ ನುಗ್ಗಿ ಹೋಗಿ ಕದನ ಮಾಡಿ ಮಿತ್ರ ಸೇನೆಯನ್ನು ಮುಂದರಿಯದ ಹಾಗೆ ಮಾಡಬೇಕೆಂಬದು. ಮತ್ತೊಂದು ಆಸ್ಟ್ರಿಯದ ಮೇಲೆ ಇರುವ ಇಟಲಿಯಾನರ ಒತ್ತಾಟವನ್ನು ಕಡಿಮೆ ಮಾಡುವರೆ ಈ ಮಾರ್ಗವಾಗಿ ಇಟಲಿಯಾನರ ಮೇಲೆ ನುಗ್ಗಿಹೋಗಿ ಕದನ ಮಾಡಬೇಕೆಂಬದು. ಮೂರನೇದು ಸ್ವಿಜರ್ಲೇಂಡಿನೊಳಗೆ ನುಗ್ಗಿಹೋಗಿ ಫ್ರೆಂಚರ ಬಲಕಡೆಯ ಸೇನೆಯ ಬಲವನ್ನು ಮುರಿಯಬೇಕೆಂಬದು ಎಂತ ಪೊಯನ್ನಿಯರ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಲಂಡನಿನ ಮದ್ದು ಗುಂಡಿನ ಕಾರ್ಖಾನೆಯಲ್ಲಿ ಉಂಟಾದ ಸಿಡಿತದಲ್ಲಿ ೪೭ ಮಂದಿಯ ಶವಗಳು ಸಿಕ್ಕಿರುವವು. ೨೪ ಮಂದಿ ಆಸ್ಪತ್ರಿಯಲ್ಲಿ ಸತ್ತಿರುವರು. ೧೫೦ ಮಂದಿಗೆ ಮರಣಕರವಾದ ಗಾಯಗಳಾಗಿರುವವು. ಸಾವಿರ ಮಂದಿ ಮನೆಮಾರು ಇಲ್ಲದೆ ನಿರ್ಗತಿಕರಾಗಿರುವರು. ಉಂಟಾದ ಅರ್ಥ ನಷ್ಟವು ೨ ಮಿಲಿಯ ಪವನುಗಳಾದ್ದಾಗಬಹುದು ಎಂತ ಅಂದಾಜಾಗಿಯದೆ.

ಜರ್ಮನರಿಗೆ ರುಮೇನಿಯದಲ್ಲಿ ೧,೧೦೦,೦೦೦ ಟನ್ ಗೋಧಿ, ೧,೦೦೦,೯೦೦ ಟನ್ ಜೋಳ ಸಿಕ್ಕಿರುವದು ಎಂತ ಒಬ್ಬ ಬಾತ್ಮೀದಾರನು ಬರದಿರುವರು.

ಅಮೇರಿಕದಲ್ಲಿ ಮಿತ್ರರಾಜ್ಯಗಳವರಿಗೆ ತಯಾರಿಸುತ್ತಿದ್ದ ಮದ್ದುಗುಂಡುಗಳ ಕಾರ್ಖಾನೆಯನ್ನು ಹಾರಿಸಿಬಿಡಬೇಕೆಂದು ಒಳ ಸಂಚು ನಡಿಸಿದ್ದರಾಗಿ ಅಪಾದಿಸಲ್ಪಟ್ಟ, ಜರ್ಮನ ಕೌನ್ಸಲ್ ಜನರಲ್, ವೈಸ್ ಕೌನ್ಸಲ್ ಮತ್ತೊಬ್ಬ ಲೆಪ್ಟನೆಂಟನಿಗೆ ಎರಡೆರಡು ವರ್ಷಗಳ ಸಜೆಯೂ ಹತ್ತತ್ತು ಸಾವಿರ ಡಾಲರುಗಳ ಜುಲುಮಾನೆಯೂ ವಿಧಿಸೋಣಾಗಿರುವದು.

ಇಂಗ್ಲಾಂಡಿನ ಯುದ್ಧ ಮಂತ್ರಿ ಸಭೆಯವರು ೧೮ ವರ್ಷ ವಯಸ್ಸಿನ ಹುಡುಗರನ್ನು ಸೇನೆಗೆ ಸೇರಿಸಿಕೊಂಡು ಅವರಿಗೆ ೧೯ ವರ್ಷ ವಯಸ್ಸು ಆಗುವವರೆಗೆ ಅವರನ್ನೆಲ್ಲಾ ಶಿಕ್ಷಣೆಯ ಸಂರಕ್ಷಣಾ ಬಗ್ಗೆ ತರ್ಬೀತು ಮಾಡಬೇಕೆಂತ ಯುದ್ಧ ಸಿಕ್ರೆಟರಿಯಾದ ಡರ್ಬಿ ಪ್ರಭುಗಳವರಿಗೆ ತಿಳಿಸಿರುತ್ತಾರೆ.

ಬರುವ ಜೂನ್ ತಿಂಗಳ ಮಧ್ಯಕಾಲದಿಂದ ಆಗೋಸ್ಟ ತಿಂಗಳ ವರೆಗೆ ಹಂಗೇರಿಗೆ ಆಹಾರವಿಲ್ಲದ ಕಾಲವು ಬರುವದು ಎಂತ ಹಂಗೇರಿಯದ ಆಫೀಸಿಯಲ್ ವರದಿಯಿಂದ ತಿಳಿದುಬರುತ್ತದೆ.

ಫ್ರಾನ್ಸಿನಲ್ಲಿ ಜರ್ಮನರು ಗೆದ್ದುಕೊಂಡ ಪ್ರದೇಶದಿಂದ ೩೦,೦೦೦ ಮಕ್ಕಳನ್ನು ಜರ್ಮನಿಗೆ ಕಳುಹಿಸಕೊಡಲಿಕ್ಕಿದ್ದಾರೆಂಬ ವಾರ್ತೆ ಇದೆ.

ಹೆಂಗಸರನ್ನು ವಕೀಲ ವೃತ್ತಿಗೆ ಸೇರಿಸಕೊಳ್ಳಬೇಕೆಂಬದಾಗಿ ಲಂಡನ್ ವಕೀಲರ ಏಸೋಸಿಯೇಶನಿನ ಮುಂದೆ ಬಂದ ಸೂಚನೆಯನ್ನು ಸದರಿ ಏಸೋಸಿಯೇಶನಿನವರು ತೆಗೆದುಹಾಕಿರುತ್ತಾರೆ.

ಯುದ್ಧ ಪ್ರಾರಂಭವಾದಂದಿನಿಂದ ಕೆನಡಾ ದೇಶದಲ್ಲಿ ಸೇನೆಗೆ ೩೮೭,೦೦೦ ಮಂದಿ ಸೇರಿಕೊಂಡಿದ್ದಾರೆ.

ಟರ್ಕಿಗೆ ಸೇರಿದ ಲೆಬನೋನ್ ಮತ್ತು ಸಿರಿಯಾ ಪ್ರಾಂತ್ಯದಲ್ಲಿ ಆಹಾರಕ್ಕಿಲ್ಲದೆ ನೂರುಸಾವಿರ ಮಂದಿ ಸತ್ತುಹೋಗಿರುವರು ಎಂಬ ವಾರ್ತೆ ಬಂದದೆ.

ಜರ್ಮನರು ಸ್ವಿಸ್ ಸರಹದ್ದಿನಲ್ಲಿ ೪೦,೦೦೦-೭೦,೦೦೦ ಸೇನಿಕರನ್ನು ಒಟ್ಟುಕೂಡಿಸಿರುವರು ಎಂಬ ವಾರ್ತೆ ಇದೆ.

ಸ್ಪೈನ್ ದೇಶದಲ್ಲಿ ಅನರ್ಕಿಸ್ಟರ ಗೊಂದಲವು ಎದ್ದಿದೆ. ಗ್ರೆನಡಾ ರೈಲ್ವೇಯ ಬಳಿ ಸ್ಪಾನ್ ದೇಶದ ಅಲ್ಫಾನ್ಸೊ ಅರಸರು ಹಾದು ಹೋಗಲಿಕ್ಕಿದ್ದ ಅಗ್ಗಾಡಿಯ ಮುಂದುಗಡೆಯಲ್ಲಿ ಸೀಸದ ಒಂದು ಗಟ್ಟಿಯು ಇಡಲ್ಪಟ್ಟಿತ್ತು. ಆದರೆ ಅಗ್ಗಾಡಿಯು ಆ ದಾರಿಯಲ್ಲಿ ಹಾದು ಹೋಗುವ ಮೊದಲೇ ಈ ವಿಷಯವು ತಿಳಿದುಬಂದದರಿಂದ ಅರಸರು ಅಪಾಯವಿಲ್ಲದೆ ಹಾದು ಹೋದರು.

ಆಸ್ಟ್ರಿಯದ ವಿಯಾನ್ನ, ಪ್ರೇಗು, ಎಲ್ಬುಟ್ಟ್ಸ, ಬ್ರನ್ ಕ್ರೌಕ್ಸ್ ಮತ್ತು ಟ್ರಿಸ್ಟ್ ಪಟ್ಟಣಗಳಲ್ಲಿ ಜನರಿಗೆ ೫ ದಿವಸಗಳಿಂದ ಆಹಾರಕ್ಕೆ ರೊಟ್ಟಿ ಇಲ್ಲವೆಂಬ ವಾರ್ತೆ ಬಂದದೆ.

ವಸಾಹತಿಗಳ ಸೆಕ್ರೆಟರಿಯಾಗಿರುವ ಮಿ| ವಾಲ್ಟರ್ ಲೊಂಗರವರ ಮಗ ಬ್ರಿಗೇಡರ್ ಜನರಲ್ ಲೊಂಗರವರು ಯುದ್ಧದಲ್ಲಿ ಮಡಿದು ಹೋದರು. ಬ್ರಿಗೇಡರ್ ಜನರಲ್ ಲೊಂಗರವರು ಆಫ್ರೀಕದಲ್ಲಿ ನಡೆದ ಯುದ್ಧ ಕಾಲ ಅತಿ ಸಾಹಸ ಕೃತ್ಯಗಳನ್ನು ತೋರಿಸಿದ್ದರು. ಕಿಂಬರ್ಲಿಯಲ್ಲಿ ನಡೆದ ಯುದ್ಧದಲ್ಲಿ ಅವರಿಗೆ ಮರಣಾಂತಿಕ ಗಾಯಗಳಾಗಿದ್ದವು. ಆದರೂ ಬದುಕಿಕೊಂಡರು. ನಂತರ ಹಿಂದೂಸ್ಥಾನದ ಸರ್ವ ಸೇನಾಧಿಪತಿಯಾದ ಸರ್ ಒ. ಮೂರುಗ್ರೇಯವರ ಎ. ಡಿ. ಕ್ಯಾಂಪರಾಗಿದ್ದರು. ಯುದ್ಧ ಪ್ರಾರಂಭವಾದ ನಂತರ ತಿರಿಗಿ ತನ್ನ ರೆಜಿಮೆಂಟಿಗೆ ಸೇರಿಕೊಂಡು ಫ್ರಾನ್ಸಿನಲ್ಲಿ ಹಲವು ಶೂರ ಕೃತ್ಯಗಳನ್ನು ನಡಿಸಿ ಖ್ಯಾತಿಹೊಂದಿದ್ದರು.

ಸಹಕಾರ.

೧೯೧೬-೧೭ನೇ ವರ್ಷದ ೬ನೇ [illegible]ಲಾರು.

'ಸ್ಟೆಟ್ರೀಟ್ ಒಫ್ ಸೋಡಾ ಎಂಬ ಹಿಂದಿನ ಸರ್ಕ್ಯುಲಾರಿನಲ್ಲಿ ಹೇಳೋಣಾದ ಸೌಳುಪ್ಪಿನ ಕುರಿತು ಅಗತ್ಯವಿದ್ದ ತಿಳುವಳಿಕೆಯನ್ನು ಲೇಖನಗಳ ರೂಪವಾಗಿ ಐಗುಪ್ತ ದೇಶದಲ್ಲಿ ಅಲ್ಲಿಯ ಸಹಕಾರ ಸಂಘಗಳ ಮೂಲಕ ರೈತರ ಕೈಗೆ ದೊರೆಯುವಂತೆ ಮಾಡಿದ್ದಲ್ಲಿ ಅಲ್ಲಿಯ ಕೃಷಿಕ್ರಮಗಳು ಬಹಳ ಮಟ್ಟಿಗೆ ತಿದ್ದಿಯವೆಂದು ತಿಳಿದು ಬರುತ್ತದೆ. ಈ ಜಿಲ್ಲೆಯ ಸಹಕಾರ ಸಂಘದವರಾಗಲಿ ಅಥವಾ ಸಂಘಗಳ ಮೆಂಬರರಾಗಲಿ ಕಲ್ಕತ್ತೆಯ ಸ್ಟೆಟ್ರೀಟ್ ಸಂಘದವರಿಗೆ ಸಾಗುಮಾಡುವ ಜಮೀನಿನ ಮಣ್ಣನ್ನು ನಮೂನೆಗೆ ರವಾನಿಸಿದ್ದಲ್ಲಿ ಸ್ಟೆಟ್ರೀಟ್ ಸಂಘದವರು ಮುಫತ್ತಾಗಿ ಆ ಮಾದರಿಯನ್ನು ಶೋಧಿಸಿ, ಆ ಮಣ್ಣನ್ನು ಸುಧಾರಿಸುವ ಸ್ಟೆಟ್ರೀಟ್ ಒಫ್ ಸೋಡಾ ಮುಂತಾದ ಇತರ ಗೊಬ್ಬರಗಳನ್ನು ಸೂಚಿಸುವರು; [illegible] ಬೇರೆ ಬೇರೆ ಭಾಷೆಗಳಲ್ಲಿ ಅಚ್ಚು ಹಾಕಿಸಿರುವ ಲೇಖನಗಳನ್ನು ಉಚಿತವಾಗಿ ಒದಗಿಸುವರು. ಯಾವುದೊಂದು ಸಹಕಾರ ಸಂಘದವರು ಈ ಸಾಳು ಗೊಬ್ಬರವನ್ನು ಸಂಗ್ರಹಿಸಿಟ್ಟು ಸ್ಥಳೀಯ ರೈತರಿಗೆ ವ್ಯಾಪಾರ ಮಾಡುವದಕ್ಕೆ ಇಚ್ಛಿಸುವದಾದರೆ, ಅಂತಹ ಸಂಘವು ಇರುವ ಊರಿಗೆ ಹತ್ತಿರದಲ್ಲಿರುವ ಗೊಬ್ಬರದಂಗಡಿಗಳಿಗೂ ಸಹಕಾರ ಸಂಘಕ್ಕೂ ಪಂಚಾಯಿತಿ ಮಾಡಿಸಿ, ತಕ್ಕ ವಾಯಿದೆಯೊಳಗೆ ಕ್ರಯ ಸಲಾಯಿಸುವ ಶರ್ತದಲ್ಲಿ ಸಹಕಾರ ಸಂಘದವರಿಗೆ ಗೊಬ್ಬರವು ಕಡ ಸಿಕ್ಕುವ ಹಾಗೆ ಕೂಡಾ ಸ್ಟೆಟ್ರೀಟ್ ಸಂಘದವರು ಏರ್ಪಾಡು ಮಾಡುವರು.

ಆದುದರಿಂದ ನಮ್ಮ ಜಿಲ್ಲೆಯಲ್ಲಿ ಸ್ವತಃ ಕೃಷಿಕರಾಗಿರುವ ಅಥವಾ ಕೃಷಿಯಲ್ಲಿ ಆಸಕ್ತಿಯುಳ್ಳ ಮಹಾಶಯರು ಈ ರೀತಿಯ ಅನುಕೂಲತೆಯ ಪ್ರಯೋಜನವನ್ನು ಹೊಂದುವದಕ್ಕೆ ಮುಂದೆ ಬರುವರೆಂದು ನಾನು ನಂಬುತ್ತೇನೆ.

ಡಿಪ್ಯುಟಿ ರಿಜಿಸ್ಟ್ರಾರ್ ಆಫೀಸು. [illegible]
[illegible], ಉಡುಪಿ
[illegible] ತಾ. ೧೪-೧-೧೯೧೭.

ಮು. ಅನಂತರಾವ್,
[illegible].

ಅನುಕ್ರಮಣಿಕೆ.

	ಪಾನು.
ಅಗ್ರಲೇಖ—ಪಬ್ಲಿಕ್ ಸರ್ವಿಸ್ ಕಮಿಷನ್	೨
ಸ್ಫುಟಲೇಖ:—	
೧ ಪಂಜಾಬಿನ ಡಬಲ್ ಕಂಪೆನಿ	"
೨ ಗೈಮು ಕರಾರಿನ ಪದ್ಧತಿ	"
೩ ಡೈರೆಕ್ಟರರ ಸಭೆ	"
ವರ್ತಮಾನ ಸಂಗ್ರಹ—	
ಸ್ಥಳಿಕ—ಮಂಗಳೂರು	೪—೫
ಕಾವ್ಯ	೫
ಯೂರೋಪದ ಮಹಾಯುದ್ಧ	೩
ವಿದೇಶವೃತ್ತಾಂತ	"
ಉತ್ತರಹಿಂದೂಸ್ಥಾನ	೬
ವರ್ಣಾಶ್ರಮ ಧರ್ಮಸಭೆ	"

ಸ್ವದೇಶಾಭಿಮಾನಿ.

ಶಕ ೧೮೩೮ ಮಾಘ ಶು. ೧೧ ಶುಕ್ರವಾರ.

ಪಬ್ಲಿಕ್ ಸರ್ವಿಸ್ ಕಮಿಷನ್.

ರಾಜನೀತಿಯು ಸ್ವರೂಪವನ್ನಾಗಲಿ ಇಲ್ಲವೆ ತತ್ವವನ್ನಾಗಲಿ ಅಗಮ್ಯವಾಗಿದೆ. ಅದು ಇಂಥದ್ದೆ ಎಂದು ನಿಷ್ಕರ್ಷಿಸುವುದು ಅಸಾಧ್ಯವು. ಬೇರೆ ಶಾಸ್ತ್ರಗಳಿಗಿರುವಂತೆ ರಾಜನೀತಿಗೂ ಕೆಲವು ಸೂತ್ರಗಳೂ, ಆ ಸೂತ್ರಗಳಿಗೆ ಭಾಷ್ಯಗಳೂ, ಸಂಬಂಧನೆಗಳೂ, ಇರುವವು. ಸಾಮಾನ್ಯ ರಾಜನೀತಿಯ ಸ್ವರೂಪವು ಹೇಗಿದ್ದರೂ ನಮ್ಮ ಬ್ರಿಟಿಷ್ ರಾಜನೀತಿಯ ಸ್ವರೂಪವು ಅತಿ ಅಗಾಧವಿದೆ. ಅದನ್ನು ನಿರ್ಣಯಿಸುವುದು, ಎಂಥ ರಾಜನೀತಿ ಕುಶಲನೆ ಆಗಲಿ, ಎಂಥ ಕಾಯಿದೆ ಪಂಡಿತನೆ ಆಗಲಿ, ಬಲವೊಗಳನ್ನಿಟ್ಟು ನೋಡುವ ಎಂಥ ಭವಿಷ್ಯವಾದಿಯೆ ಆಗಲಿ ಅವನಿಗೆ ಮೀರಿದ್ದೆ ಸರಿ.

ಈ ನಮ್ಮ ಮೇಲಿನ ಮಾತುಗಳಿಗೆ ಮೊನ್ನೆ ಪ್ರಸಿದ್ಧವಾದ ಪಬ್ಲಿಕ್ ಸರ್ವಿಸ್ ಕಮಿಷನಿನ ರಿಪೋರ್ಟು ಬಲವತ್ತಾದ ಸಾಕ್ಷಿಯೆಂದೆನ್ನಲು ಯಾವ ಅಡ್ಡಿಯೂ ಇಲ್ಲ. ಈ ರಿಪೋರ್ಟನ್ನು ಎಷ್ಟೊ ಅಂಧಭಕ್ತಿಯಿಂದ ನಿರೀಕ್ಷಿಸುವವರಿಗಾದರೂ ನಿರಾಶೆಯು ಕತ್ತಲೆಯು ಬಡಿಯದೆ ಇರದೆಂದು ನಾವು ಭಾವಿಸುತ್ತೇವೆ. ನಮ್ಮ ಭಾವನೆಯನ್ನಾಗಲಿ, ಟೀಕೆಯನ್ನಾಗಲಿ ಕೊಡುವುದರ ಮೊದಲು ರಿಪೋರ್ಟಿನ ಸಾರಾಂಶವನ್ನು ಮೊದಲಾಗಿ ಹೇಳಿದರೆ ಅದರ ನಿಸ್ಸಾರತ್ವದ ಕುರಿತು ವಾಚಕರಿಗೂ ನಮಗೂ ಏಕವಾಕ್ಯತೆಯಾದೀತೆಂದು ತೋರುತ್ತದೆ. ಈ ಪ. ಸ. ಕಮಿಷನು ನಾಲ್ಕು ವರ್ಷಗಳ ಹಿಂದೆ ಕುಳಿತು ಮಾಡಿದ ಮಹತ್ಕಾರ್ಯವನ್ನು ಪರೀಕ್ಷಿಸುವಾಗ, ಆ ಕಮಿಷನಿನ ಮುಂದೆ ಯಾವ ಪ್ರಶ್ನೆಗಳು ಉದ್ದಿಷ್ಟವಾಗಿದ್ದವೆಂಬುದನ್ನು ಪ್ರಥಮತಃ ನೋಡೋಣ. ೧. ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ಅಥವಾ ಪ್ರೊವಿನ್ಸಿಯಲ್ ಸರ್ವಿಸಿನಲ್ಲಿ ಎಷ್ಟು ಹಿಂದೀ ಜಾಗೆಗಳನ್ನು ಮಾಡಬಹುದು, ಅವರ ತರಬೇತಿನ ಮತ್ತು ಉಮೇದುವಾರಿಯ ಕ್ರಮವು ಯಾವುದಿರಬೇಕು, ೨. ಸರ್ವಿಸು, ಸಂಬಳ, ರಜೆ, ಪೆನ್ಶನು—ಇವುಗಳ ಶರ್ತಗಳಾವವು, ೩. ನಾನ್ ಯುರೋಪಿಯನರ ನೇಮಕದ ವಿಷಯದಲ್ಲಿ ಇನ್ನೂ ವಾಡಿಕೆಯಲ್ಲಿ ಮೇಲಿನಂಥ ಅಡ್ಡಿಗಳು ಹೇಗಿರುತ್ತವೆ ಮತ್ತು ಈ ಸರ್ವಿಸಿನಲ್ಲಿ ವರಿಷ್ಠ ಮತ್ತು ಪ್ರಾಂತಿಕವೆಂದು ವಿಭಾಗವು ಹೇಗೆ ಮಾಡಲ್ಪಡುತ್ತದೆ? ಈ ಮೂರು ವಿಷಯಗಳಲ್ಲದೆ ರಾಷ್ಟ್ರೀಯ ಸಭೆಯು ಈಗ ಮೂವತ್ತು ವರುಷಗಳಿಂದ ಜಗಿಯುತ್ತಿದ್ದ ಇಂಗ್ಲಂಡಿನಲ್ಲಿಯೂ, ಹಿಂದುಸ್ಥಾನದಲ್ಲಿಯೂ ಆಗಬೇಕಾದ ಐ. ಸಿ. ಎಸ್. ಪರೀಕ್ಷೆಯ ರೊಟ್ಟಿಯೂ ಈ ಕಮಿಶನಿನ ಮುಂದೆ ವಿಚಾರಾರ್ಥವಾಗಿತ್ತು; ಬೇರೆ ಬೇರೆ ಖಾತೆಗಳಲ್ಲಿ ವರಿಷ್ಠ ಮತ್ತು ಪ್ರಾಂತಿಕವೆಂಬ ಎರಡು ವಿಭಾಗಗಳನ್ನು ಕಲ್ಪಿಸುವುದು ಯುಕ್ತವಲ್ಲ, ದಂಡಾಧಿಕಾರ ಮತ್ತು ನ್ಯಾಯಾಧಿಕಾರಗಳನ್ನು ಪೂರ್ಣವಾಗಿ ಪ್ರತ್ಯೇಕಿಸುವುದು ನ್ಯಾಯ್ಯವು, ಮೇಲಿನ ಎರಡು ಸರ್ವಿಸುಗಳಲ್ಲಿ ಪುನಃ ವರಿಷ್ಠ ಮತ್ತು ಕನಿಷ್ಠ ಹೀಗೆ ಅಧಿಕಾರಿಗಳ ಭೇದಗಳನ್ನು ಕಲ್ಪಿಸಿ ಅವರ ರಜೆ, ಭರ್ಲೊ ಮುಂತಾದ ವಿಷಯದಲ್ಲಿ ಭಿನ್ನ ಸಂಪ್ರದಾಯಗಳನ್ನು ಹಾಕುವುದು ಸಮವಲ್ಲ, ಈ ಸರ್ವಿಸುಗಳಲ್ಲಿ ಜನರನ್ನು ಭರತಿಮಾಡುವಾಗ ಹಿಂದೀ ಜನರ ಸಂಖ್ಯೆಯನ್ನು ಆದಷ್ಟು ಅಧಿಕಪ್ರಮಾಣದಿಂದಿಡುವುದು ಉಚಿತವು ಇತ್ಯಾದಿ ಕೆಲವು ವಿಷಯಗಳು ಕೂಡ ಈ ಕಮಿಷನಿನ ಆತಿಥ್ಯಕ್ಕೆ ಒಳಪಟ್ಟಿದ್ದವು.

ಈ ಆತಿಥ್ಯದ ಭಾಷೆಯನ್ನೆ ಹಿಡಿದು ಮುಂದರಿಸುವುದಾದರೆ ನಮ್ಮ ಕಮಿಷನಿನಲ್ಲಿ ಮೇಲಿನ ಅತಿಥಿಗಳಿಗೆ ಆದ ಸಂಭಾವನೆಯು ಅಪೂರ್ವವೆ. ಕಮಿಷನಿನ ಈ ಅಪೂರ್ವವಾದ ಆದರಾತಿಥ್ಯವನ್ನು ಕಂಡು ನರಿಯು ಕೊಕ್ಕರೆಯನ್ನು ಔತನಕ್ಕೆ ಆಮಂತ್ರಿಸಿ ಅದಕ್ಕೆ ಅಗಲವಾದ ಒಂದು ಹರಿವಾಣದಲ್ಲಿ ಪಾಯಸವನ್ನು ಬಡಿಸಿದ ಸಂಗತಿಯು ಸಾದೃಶ್ಯಗ್ರಾಹಿಗಳ ಮನಸ್ಸಿಗೆ ಬಾರದೆ ಇರದು. ಇಂಡಿಯನ್ ಸಿವಿಲ್ ಸರ್ವಿಸಿನ ಜಾಗೆಗಳಲ್ಲಿ ಒಂದು ಚತುರ್ಥಾಂಶವು ಹಿಂದೀ ಜನರಿಗಾಗಿ ಕಾದಿಡಲ್ಪಡತಕ್ಕದ್ದು. ಪೋಲಿಸ್ ಮತ್ತು ವಿದ್ಯಾಇಲಾಖೆಗಳಲ್ಲಿ ಹಿಂದಿಗಳು ಕೊನೆಗೆ ಇಂತಿಷ್ಟೆ ಎಂದು ನಿಯತವಾಗಿರಬೇಕು, ಬೇರೆ ಕೆಲವು ಖಾತೆಗಳಲ್ಲಿ ಇಂಪೀರಿಯಲ್ (ವರಿಷ್ಠ) ಸರ್ವಿಸಿನಲ್ಲಿ ಹಿಂದೀ ಜಾಗೆಗಳ ಪ್ರಮಾಣವು ಅರ್ಧದಷ್ಟಿರಬೇಕು. ಇನ್ನು ಬಾಕಿ ಖಾತೆಗಳ ಜಾಗೆಗಳನ್ನು ಕೇವಲ ಹಿಂದೀಗಳಿಗಾಗಿಯೆ ಇಡಬೇಕು; ಆದರೆ ಯೋಗ್ಯ ಶಿಕ್ಷಣ ಮತ್ತು ಉದ್ಯೋಗಗಳ ಅನುಭವ ಈ ಸಾಧನೆಗಳು ಹಿಂದಿಗಳಲ್ಲಿ ಬೇರೂರುವ ತನಕ ಆ ಜಾಗೆಗಳಲ್ಲಿ ಯುರೋಪಿಯನರನ್ನೆ ನೇಮಿಸುವುದು ಕಮಿಷನಿಗೆ ಯುಕ್ತವಾಗಿ ತೋರುತ್ತದೆ! ಎಲ್ಲ ಖಾತೆಗಳಲ್ಲಿ ಸರ್ವಿಸ್ ಎಂದರೆ ನೌಕರಿಯ ಮಹತ್ವ ಅಥವಾ ವೈಶಿಷ್ಟ್ಯದಂತೆ ಪ್ರಾಪ್ತಿಯ ಅಭಿವೃದ್ಧಿಯನ್ನು ಮಾಡಬಹುದೆಂಬದಾಗಿ ಕಮಿಷನು ಶಿಫಾರಸು ಮಾಡಿದೆ. ಇದರಲ್ಲಿಯೂ ವರಿಷ್ಠ ಮತ್ತು ಪ್ರಾಂತಿಕ ಈ ಭಾವಗಳು ಇದ್ದೆ ಇರುವವು! ಇಷ್ಟು ಸಂಗತಿಗಳಲ್ಲಿ ಮಾತ್ರವಲ್ಲ, ರಜೆ, ಫರ್ಲೊ ಹಾಗು ಪೆನ್‍ಷನ್ ಈ ವಿಷಯಗಳಲ್ಲಿ ಔದಾರ್ಯವನ್ನು ವ್ಯಕ್ತಗೊಳಿಸುವಾಗಲೂ ಕಮಿಷನಿನ ಪಂಕ್ತಿ ಪ್ರಪಂಚವು ಸ್ಪಷ್ಟವಾಗಿ ಕಾಣುತ್ತದೆ. ಈ ಕಮಿಷನು ಸೂಚಿಸಿದ ಮೇಲಿನ ಈ ಕೆಲವು ಏರ್ಪಾಡುಗಳನ್ನು ಸಾಧಿಸಲು—ಈಗ ರಾಜ್ಯದ ಆಡಳಿತೆಗಾಗಿ ಹಿಂದುಸ್ಥಾನವು ಎಷ್ಟು ವೆಚ್ಚ ಮಾಡುವುದೊ ಅದಕ್ಕಿಂತ ೫೦ ಲಕ್ಷ ರುಪಾಯಿಗಳು ಹೆಚ್ಚು ಬೇಕಾಗುವವು ಎಂದು ಅದರ ಅಂದಾಜಿದೆ.

ಇದು ಕಮಿಷನ್ ರಿಪೋರ್ಟಿನ ಸ್ವರೂಪವನ್ನು ತಿಳಿದುಕೊಳ್ಳುವವರಿಗೆ ಹೇಳಬಹುದಾದ ಮುಖ್ಯ ತಾತ್ಪರ್ಯವು. ಕಮಿಷನು ಇಲ್ಲಿ ಕೆಲಸಕ್ಕೆ ಸುರುಮಾಡುವಾಗ ತೋರಿಸಿದ ಆಡಂಬರ, ಅದರ ಕೆಲಸದ ವ್ಯಾಪಕತೆ, ಅದರ ಖರ್ಚು ಇವುಗಳನ್ನೆಲ್ಲ ತಕ್ಕಡಿಯ ಒಂದು ಕಡೆಯಲ್ಲಿ ಮತ್ತು ಇದರ ಫಲಿತಾಂಶವನ್ನು ಇನ್ನೊಂದು ಕಡೆಯಲ್ಲಿ ಹಾಕಿ ತೂಕಿಸಿದರೆ ನಿಸ್ಸಾರವಾದ ರಿಪೋರ್ಟನ್ನು ಹೊರಗೆ ಹಾಕಿದ ಈ ಕಮಿಷನಿಗಾಗಿ ಮೊದಲು ಅಧಿಕಾರಿಗಳಾಗಲಿ, ನಮ್ಮ ಜನನಾಯಕರಾಗಲಿ, ಹೊಡಕೊಳ್ಳುತ್ತಿದ್ದದ್ದು ಶುದ್ಧ ಜಲತಾಡನವೇ ಆಗಿದೆ. ಅಲ್ಲದೆ ಬೇರೆ ಯಾವ ಪ್ರಯೋಜನವೂ ಆಗಲಿಲ್ಲ. ಈ ರಿಪೋರ್ಟನ್ನು ಪರಿಶೀಲಿಸಿದವರು—ರಿಪೋರ್ಟಿನ ಸೂಚನೆಗಳನ್ನು ಜಾರಿಗೆ ತರುವುದರಿಂದ ಇಷ್ಟರ ವರೆಗೆ ಇದ್ದ ಹಿಂದೂಸ್ಥಾನವು ಯಾವ ಲಾಭವನ್ನೂ ಪಡೆಯಲಾರದು, ಮೊದಲು ಇದ್ದ ಸ್ಥಿತಿಯಲ್ಲಿಯೆ ಇರುವುದೆಂದು ಅನುಮಾನವಿಲ್ಲದೆ ಹೇಳಬಹುದು. ಇಷ್ಟೇ ಸಂಗತಿಯನ್ನು ಹೇಳಿ ನಿಲ್ಲಿಸಿದ್ದಾದರೆ ನಮ್ಮದಾಗಲಿ ಬೇರೆ ಪ್ರಾಮಾಣಿಕರದಾಗಲಿ ಅಭಿಪ್ರಾಯವನ್ನು ವಂಚಿಸಿದ್ದಂತಾಗುವುದು. ಈ ರಿಪೋರ್ಟಿನ ಜಾರಿಯಿಂದ ಇನ್ನು ಮುಂದೆ ವರ್ಷಕ್ಕೆ ೫೦ ಲಕ್ಷ ರೂಪಾಯಿಗಳ ಹೊರೆಯು ಬಡ ಹಿಂದುಸ್ಥಾನದ ಮೇಲೆ ಬೀಳುವುದರಿಂದ ಗ್ರಾಮ್ಯದ ಮಾತಿನಲ್ಲಿ ಹೇಳುವ ಒಂದು ಬೀಭತ್ಸಗಾದೆಯಂತೆಯಾಗಲಿ ಇಲ್ಲವೆ ಆಮಂತ್ರಿಸಿ ಅನಿಷ್ಟವನ್ನು ಒಳಗೆ ಕೂಕ್ಕಿಸಿದಂತಾಗಲಿ ಹಿಂದೂಸ್ಥಾನಕ್ಕೆ ಈ ಭಾವಿಪ್ರವ್ಯ ಯೋಜನದಿಂದ ಕಷ್ಟವೆ ಒದಗೀತಲ್ಲದೆ ಬೇರೆ ಏನೂ ಇಲ್ಲ. ಆದುದರಿಂದಲೆ ನ್ಯಾ. ಮೂ ಅಬ್ದುಲ ರಹಿಮ (ಈ ಕಮಿಷನರುಗಳಲ್ಲೊಬ್ಬರು) ಇವರು ಈ ರಿಪೋರ್ಟಿನ ಭಾವಿ ಸ್ವರೂಪವನ್ನು ಸ್ಪಷ್ಟ ಶಬ್ದಗಳಿಂದ ನಿಷೇಧಿಸಿದಲ್ಲದೆ ರಿಪೋರ್ಟಿಗೆ ತಮ್ಮ ಸಹಿ ಕೂಡ ಹಾಕಲಿಲ್ಲ. ಅವರು ಈ ವಿಷಯದಲ್ಲಿ ವ್ಯಕ್ತಪಡಿಸಿದ ತಮ್ಮ ಅಭಿಪ್ರಾಯವನ್ನೂ ರಿಪೋರ್ಟಿನ ಬೇರೆ ಬೇರೆ ಕೊರತೆಗಳನ್ನೂ ಮುಂದಿನ ಸಂಚಿಕೆಯಲ್ಲಿ ಕೊಡುವೆವು ಆಗಲೆ ಇನ್ನು ಕೆಲವು ಹೇಳಬೇಕಾದ ಮಾತುಗಳನ್ನು ವಾಚಕರಿಗೆ ಸಾದರಪಡಿಸುವೆವು.

ಸ್ಫುಟ ವಿಚಾರಗಳು.

೧. ಪ್ರಕೃತ ನಡೆಯುತ್ತಿರುವ ಮಹಾ ಯುದ್ಧದಲ್ಲಿ ಹಿಂದೀ ಸುಶಿಕ್ಷಿತರು ಶರೀರ ದ್ವಾರಾ ಸಾಮ್ರಾಜ್ಯಕ್ಕೆ ಮದತು ಮಾಡುತ್ತಿದ್ದಾರೆಂಬುದು ಈಚೆಯ ಒಂದು ದೃಷ್ಟಾಂತದಿಂದ ಸ್ಪಷ್ಟವಾಗಿದೆ. ಬಂಗಾಲದ ಡಬಲ್ ಕಂಪೆನಿಯಲ್ಲಿ ಸುಶಿಕ್ಷಿತರಾದ ಅನೇಕ ಬಂಗಾಲಿ ಯುವಕರು ಸೇರಿದ್ದಾರೆ. ಇಡಿ ಹಿಂದೀ ಸೈನ್ಯದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಸೈನ್ಯವು ಪಂಜಾಬಿ ಜನರದೆ ಇದ್ದು ಯುದ್ಧ ಸುರುವಾದಂದಿನಿಂದ ಒಂದು ಲಕ್ಷ ಸೈನಿಕರ ಭರತಿಯು ಪಂಜಾಬದಲ್ಲಿಯೆ ಆಯಿತು. ಈ ಪಂಜಾಬಿಗಳಲ್ಲಿಯಾದರೂ ಸುಶಿಕ್ಷಿತರೆ ಅನೇಕರಿರುವರು. ರಾವಳಪಿಂಡಿಯೊಳಗಿನ ಸೆಕೆಂಡರಿ ಶಾಲೆಗಳಿಂದಲೆ ಒಂದು ಸಾವಿರ ರಿಕ್ರೂಟು ತಯಾರಾಗಿದೆ. ಈ ಸಂಗತಿಗಳನ್ನೆಲ್ಲ ತಿಳಿದು ಪಂಜಾಬ ಸರಕಾರವು ಅಲ್ಲಿಯ ಅಂಡರ ಗ್ರೇಜುಏಟ್‍ರ ಒಂದು ಡಬಲ್ ಕಂಪೆನಿಯನ್ನು ತಯಾರಿಸುವ ನಿಶ್ಚಯ ಮಾಡಿದೆ. ಈ ಬಗ್ಗೆ ಪಂಜಾಬ ಸರಕಾರವನ್ನು ಅಭಿನಂದಿಸದೆ ಯಾರೂ ಇರಲಾರರು. ಹಿಂದೀ ಸುಶಿಕ್ಷಿತರು ಅಸಂತುಷ್ಟರಾಗಿಯೂ ಅರಾಜಕರಾಗಿಯೂ ಇರುತ್ತಾರೆಂದು ದೊಡ್ಡ ದೊಡ್ಡ ಎಂಗ್ಲೊ ಇಂಡಿಯನ್ ಉದ್ಯೋಗಸ್ಥರ ಅಭಿಪ್ರಾಯವಿರುತ್ತಿತ್ತು. ಆದರೆ ಪಂಜಾಬ ಸರಕಾರವು ಮೇಲಿನಂಥ ಉದಾಹರಣೆಯನ್ನು ಹಾಕಿಕೊಟ್ಟು ಸುಶಿಕ್ಷಿತರ ಮೇಲಿನ ವೃಥಾ ಆರೋಪಣೆಯನ್ನು ತೆಗೆದು ಹಾಕಿದೆಂದು ಹೇಳಬಹುದು.

೨. ಗೈಮು ಕರಾರಿನ ಕೂಲಿಗಳ ಪದ್ಧತಿಯು ಸುಧಾರಿಸಿದ ರಾಷ್ಟ್ರಗಳಲ್ಲಿ ಬಹು ಲಾಂಛನಾಸ್ಪದವಾದ ಸಂಗತಿಯು. ಈ ಗುಲಾಮತನವನ್ನು ನಿಲ್ಲಿಸಬೇಕೆಂಬುದಾಗಿ ಲೊರ್ಡ್ ಹಾರ್ಡಿಂಜ ದೊರೆಗಳ ಕಾಲದಲ್ಲಿ ಚಳವಳವು ನಡೆದು ಈ ಅಮಾನುಷ ಪದ್ಧತಿಯನ್ನು ನಿಲ್ಲಿಸುವ ಬಗ್ಗೆ ವೈಸರಾಯರು ಸ್ಟೇಟ್ ಸೆಕ್ರೆಟರಿಗಳಿಗೆ ಸ್ಪಷ್ಟವಾಗಿ ತಿಳಿಸಿದರು. ಆದರೆ ಕೇಳಲು ಮತ್ತು ನೆನೆಸಲು ವಿಷಾದವಾಗುವುದೇನಂದರೆ, ಈ ಪದ್ಧತಿಯನ್ನು ಕನಿಷ್ಟಪಕ್ಷಕ್ಕೆ ಐದು ವರ್ಷಗಳ ತನಕವಾದರೂ ನಿಲ್ಲಿಸಲಾಗದೆಂದು ಫಿಜಿ ದ್ವೀಪದೊಳಗಿನ ಬಿಳಿ ಜನರಿಗೆ ತಿಳಿಸಲಾಗಿದೆ. ಈ ಐದು ವರ್ಷಗಳ ಭರವಸೆಯನ್ನು ಯಾರು ಕೊಟ್ಟಿರುವರೊ ಗೊತ್ತಾಗದು. ಆದರೂ ಈ ಸಂಗತಿಯು ನಿಜವಾದುದು ಎಂದು ಕಲಕತ್ತೆಯ ರೆ| ಎಂಡ್ರೂಸರಿಗೆ ಗೊತ್ತಾಗಿದೆ. ಅವರು ಈ ಅಶುಭ ವಾರ್ತೆಯನ್ನು ತಮ್ಮ ನಿಷೇಧದೊಡನೆ ಪ್ರಕಟಿಸಿದ್ದಾರೆ. ಈ ವಿಷಯದ ಕುರಿತು ಅಲಹಾಬಾದಿನಲ್ಲಿ ಒಂದು ನಿಷೇಧ ಪ್ರದರ್ಶಕ ಸಭೆಯು ಜರಗಿ ಅದರಲ್ಲಿ ಮಿ| ಪೊಲಾಕ, ಶ್ರೀಮತಿ ಸರೋಜಿನಿ ನಾಯುಡು ಮುಂತಾದವರ ನಿಷೇಧಪರಭಾಷಣಗಳಾದವು. ರೆ. ಎಂಡ್ರೂಸರ ಪ್ರಕೃತಿಯು ಅಸ್ವಸ್ಥವಿದ್ದ ಕಾರಣ ಆ ಸಭೆಯಲ್ಲಿ ಅವರ ಭಾಷಣವನ್ನು ಮಿ. ಪೊಲಾಕರು ಓದಿ ತೋರಿಸಿದರು. ಎಂಡ್ರೂಸರು ಫಿಜಿ ದ್ವೀಪಕ್ಕೆ ಹೋಗಿ ಅಲ್ಲಿಯ ಕೂಲಿಗಳ ಸ್ಥಿತಿಯನ್ನು ಕಣ್ಣಾರೆ ಕಂಡು ಬಂದವರಾದುದರಿಂದ ಅವರು ವರ್ಣಿಸಿದ ಕೂಲಿಗಳ ನಿಕೃಷ್ಟ ಸ್ಥಿತಿಯು-ಅಧಃಪತನವು ಅತಿಶಯೋಕ್ತಿಯದಲ್ಲ, ಅನುಭವಪೂರ್ಣವಾದುದು. ಅಲಹಾಬಾದಿನ ಸಭೆಯು ಸರಕಾರದ ಮೇಲಿನ ಉದ್ದೇಶವನ್ನು ನಿಷೇಧಿಸಿದಂತೆಯೆ ಬೇರೆ ಕಡೆಗಳಲ್ಲಿಯೂ ಇಂಥ ಸಭೆಗಳು ಜರಗಿ ತಮ್ಮ ನಿಷೇಧಗಳನ್ನು ವ್ಯಕ್ತಗೊಳಿಸುವುದು ಯುಕ್ತವಲ್ಲವೆ?

೩. ಜನವರಿ ತಾ. ೨೨—೨೩ ದಿವಸ ಕಲಕತ್ತೆಯಲ್ಲಿ ಬಹುಮಾನಪಟ್ಟ ಶಂಕರನ್ ನಾಯರರ ಅಧ್ಯಕ್ಷತೆಯಲ್ಲಿ ಹಿಂದೂಸ್ಥಾನದೊಳಗಿನ ವಿದ್ಯಾ ಇಲಾಖೆಯ ಡೈರೆಕ್ಟರುಗಳ ಒಂದು ಪರಿಷತ್ತು ಜರಗಿತು. ಈ ಪರಿಷತ್ತಿನಿಂದ ನಿಷ್ಪನ್ನವಾದುದೇನಿಲ್ಲದಿದ್ದರೂ ಅದರ ಉದ್ದೇಶವೇನಿತ್ತೆಂದರೆ ಪ್ರಾಥಮಿಕ ಶಿಕ್ಷಣ, ಮಧ್ಯಮ ಶಿಕ್ಷಣ ಹಾಗು ಸ್ತ್ರೀಶಿಕ್ಷಣ ಇತ್ಯಾದಿ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಎಲ್ಲ ಡೈರೆಕ್ಟರುಗಳು ಏಕತ್ರ ಸೇರಿದ್ದರು. ಈ ಪರಿಷತ್ತನ್ನು ಪ್ರಾರಂಭಿಸುವ ಬಹುಮಾನವು ವೈಸರಾಯರಿಗೆ ಇತ್ತು. ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ವಿದ್ಯಾವಿಷಯಕವಾದ ಹಲವು ಮಹತ್ವದ ಪ್ರಶ್ನೆಗಳನ್ನು ತಕ್ಕೊಂಡು ಸಹಾನುಭೂತಿಯಿಂದಲೆ ಚರ್ಚಿಸಿದರು. ಬರೆ ಅಧಿಕಾರಿಗಳ ಕೇಂದ್ರದೊಳಗೆ ವಿದ್ಯೆಯು ಸಿಕ್ಕಿಹೋಗುವುದು ಪ್ರಶಸ್ತವಲ್ಲ, ಜನರಲ್ಲಿ ವಿದ್ಯಾವಿಷಯವಾಗಿ ಸಹಕಾರಿತ್ವ, ಆದರ, ಅಭಿರುಚಿಗಳುಂಟಾಗಿ ಸಾರ್ವಜನಿಕ ಉತ್ಸಾಹವುಂಟಾಗುವುದು ಅಗತ್ಯವಿದೆಂದು ಅವರು ಅಭಿಪ್ರಾಯಪಟ್ಟಿದ್ದಲ್ಲದೆ ಈ ಪರಿಷತ್ತು ಸೇರಿದ್ದು ಮೊದಲಿನ ಸ್ವಾಭಾವಿಕವಾದ ಧೋರಣವನ್ನು ಪುನರಾವರ್ತಿಸುವುದಕ್ಕಾಗಿ ಅಲ್ಲ, ವಿದ್ಯಾವಿಷಯದಲ್ಲಿ ಬಹು ಮಹತ್ವದ ಪ್ರಶ್ನೆಗಳನ್ನು ಹುಡುಕಿ ಅವುಗಳನ್ನು ಸಾಧಿಸಲು ತತ್ಪರತೆಯ ಸಾಹಾಯ್ಯವನ್ನು ಹೊಂದುವುದಕ್ಕಾಗಿ ಎಂದು ಮುಂತಾದ ವಿಷಯಗಳನ್ನು ಹೇಳಿದರು. ಕೊನೆಗೆ ಹೇಳಿದ "ವಿದ್ಯಾದಾನದಲ್ಲಿ ನಿರತರಾದವರಿಗೆ ಹೆಚ್ಚಿನ ಸಂಬಳ, ಪೆನ್ಶನ್ ಮುಂತಾದ ವ್ಯವಸ್ಥೆಯನ್ನು ಮಾಡುವುದು ಅಗತ್ಯ" ವೆಂಬೀ ಮಾತನ್ನು ವಿದ್ಯಾ ಇಲಾಖೆಯವರು ಮನನ ಮಾಡುವ ಹಾಗಿದೆ. ಇರಲಿ. ಮುಂದಿನ ಪರಿಷತ್ ಕಾರ್ಯದಲ್ಲಿ ಪ್ರಾಥಮಿಕ ಶಿಕ್ಷಣ, ದೇಶೀಭಾಷೆಯ ಪ್ರಾಧಾನ್ಯ ಮೊದಲಾದ ವಿಷಯಗಳು ಬಂದವು. ಪ್ರಾಥಮಿಕ ಶಿಕ್ಷಣವು ಮುಖ್ಯವಾದ ಹಕ್ಕೆಂದು ಸಾಧಾರಣ ಎಲ್ಲ ಡೈರೆಕ್ಟರುಗಳು ಅನುಮೋದಿಸಿದರು. ದೇಶೀಭಾಷೆಯ ವಿಷಯದಲ್ಲಿ ಒಂದೆರಡು ಅಪವಾದಿತ ಸಂಗತಿಗಳನ್ನು ಬಿಟ್ಟರೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಅಪೇಕ್ಷೆಯೆ ಕಂಡುಬರುವುದು. ಪ್ರಾಥಮಿಕ ಶಾಲೆಗಳನ್ನು ಹೆಚ್ಚಿಸುವ ವಿಷಯ ಮತ್ತು "ಫೀಸು"ಗಳನ್ನು ಹೆಚ್ಚಿಸುವ ಸಂಗತಿಗಳು ಚರ್ಚೆಗೆ ಬಂದು ಫೀಸಿನ ವಿಷಯದಲ್ಲಿ ಬಂಗಾಲದ ಡೈರೆಕ್ಟರನೊಬ್ಬನಲ್ಲದೆ ಬೇರೆಯವರು ಫೀಸು ಹೆಚ್ಚಿಸುವುದು ಯೋಗ್ಯವಲ್ಲೆಂದು ಸ್ಪಷ್ಟವಾಗಿ ಹೇಳಿದರು.

ಮಂಗಳೂರು

ಇದೇ ಕಳೆದ ಜನವರಿ ತಾ. ೩೦ರಲ್ಲು ಇಲ್ಲಿಯ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗು ಡಿಸ್ಟ್ರಿಕ್ಟ ಬೋರ್ಡ ವೈಸ್‍ಪ್ರೆಸಿಡೆಂಟರಾದ ಮ|| ರಾ|| ರಾವ್ ಬಹದ್ದೂರ್ ಎನ್. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ [illegible] ಈ ಸಭೆಯಲ್ಲಿ ಡಿಸ್ಟ್ರಿಕ್ಟ ಬೋರ್ಡಿನ ವರಿಂದ [illegible]

ಸಭಿಕರ ಸಮ್ಮತಿಯನ್ನು ಹೊಂದಿರುತ್ತದೆ. ಉಡ್ಪಿ ಕರಾವಳಿ ರಸ್ತೆಯಲ್ಲಿ ೩೫/೮ ಮೈಲುಕಲ್ಲಿನ ಬಳಿ ಸುರಂಗಮಾರ್ಗವನ್ನು ಕಟ್ಟಿಸುವರೆ ರೂ. ೮೦೦; ೩೧/೭ ಮೈಲುಕಲ್ಲಿನ ಬಳಿ ಸುರಂಗರಸ್ತೆಯನ್ನು ಪುನಃ ಕಟ್ಟಿಸುವರೆ ರೂ. ೨೪೫೫; ಕಾರ್ಕಳ ಪೇಟೆಯ ರಸ್ತೆಯ ದುರುಸ್ತಿ ಬಗ್ಗೆ ರೂ. ೨೦೦೦; ಆಗುಂಬೆ ಘಟ್ಟದ ರಸ್ತೆ ದುರುಸ್ತಿ ಬಗ್ಗೆ ರೂ. ೪೮೫; ಬಂಟ್ವಾಳ ಮತ್ತು ಪಾಣೆಮಂಗಳೂರಿನ ಮಧ್ಯೆ ಕಂಚಿಕಾರು ಕುದ್ರು ತೋಡಿಗೆ ಸಂಕಹಾಕಿಸುವರೆ ರೂ. ೨೫೦೦; ಮತ್ತು ಇನ್ನು ಕೆಲವು ಚಿಲ್ಲರೆ ಕಾಮಗಾರಿಗಳ ಬಗ್ಗೆ ಕೆಲವು ನೂರು ರೂಪಾಯಿಗಳು ಸೆಂಕ್ಷನ್ ಆಗಿರುತ್ತದೆ.

ಸಬ್ ಅಸಿಸ್ಟೆಂಟ್ ಸರ್ಜನರಿಗೆ ಇಂಡಿಯಾ ಸರಕಾರದವರಿಂದ ಸೆಂಕ್ಷನ್ ಆದ ಸಂಬಳದ ದರವು ಇದೇ ಬರುವ ಮಾರ್ಚ ತಿಂಗಳಾರಂಭದಿಂದ ಇಲ್ಲಿಯ ಲೋಕಲ್‌ಫಂಡ್ ಆಸ್ಪತ್ರೆಯ ಸಬ್ ಅಸಿಸ್ಟೆಂಟ್ ಸರ್ಜನರಿಗೂ ಲಗಾವಾಗುವಂತೆ ಏರ್ಪಾಡು ಮಾಡಬೇಕೆಂಬದಾಗಿ ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ನಿರ್ಣಯವಾಗಿರುತ್ತದೆ.

ಉಡುಪಿ ತಾಲೂಕು ಬೋರ್ಡು ಪ್ರೆಸಿಡೆಂಟರ ಸೂಚನೆಯ ಪ್ರಕಾರ ಎರ್ಮಾಳ ಬೋರ್ಡು ಶಾಲೆಯ ಕಟ್ಟಡದ ಬಗ್ಗೆ ರೂ. ೨೪೮೦; ಕಾಪು ಬೋರ್ಡು ಶಾಲೆಯ ಕಟ್ಟಡದ ಬಗ್ಗೆ ರೂ. ೨೪೩೦ ಬೋರ್ಡು ಸಭೆಯಲ್ಲಿ ಸೆಂಕ್ಷನ್ ಆಗಿರುತ್ತದೆ.

ಕಾಸರಗೋಡು ತಾಲೂಕಿನ ಚಂದ್ರಗಿರಿ ಮತ್ತು ಚಿಪ್ಪಾರಂಬ ನದಿಗಳ ಮಧ್ಯೆ ಕೆಲವು ವರ್ಷಗಳಿಂದ ದುರುಸ್ತಿ ಮಾಡದೆ ಹಾಳುಬಿಟ್ಟ ರಸ್ತೆಯು ಕಳ್ನಾಡು ಗ್ರಾಮದವರಿಗೆ ಅತೀ ಪ್ರಯೋಜನಕಾರಿಯಾಗಿರುವದರಿಂದ ತಿರಿಗಿ ಆ ರಸ್ತೆಯನ್ನು ಊರ್ಜಿತಪಡಿಸಬೇಕೆಂತ ಬೋರ್ಡು ಸಭೆಯಲ್ಲಿ ನಿರ್ಣಯವಾಗಿರುತ್ತದೆ.

ಮದ್ರಾಸ್ ಆಸ್ಪತ್ರೆ ಹಡಗ ಫಂಡಿಗೆ ಇದೇ ಜನವರಿ ತಿಂಗಳಲ್ಲಿ ಮ| ರಾ| ರಾವ್ ಬಹದ್ದೂರ ಎನ್. ಸುಬ್ಬರಾವ್ ರೂ. ೫; ಮ| ರಾ| ಟಿ. ಭವಾನಿರಾವ್ ರೂ. ೩; ರಾ| ಸತಾನಂದ ಬೊಳ್ಕ ಪಟ್ಟಣ ರೂ. ೩; ಮ| ರಾ| ಕೆ. ಪಿ ರಾಮರಾವ್ ರೂ. ೨; ಮ| ರಾ| ಎ. ಶ್ರೀನಿವಾಸ ಪೈ ರೂ. ೨; ಮ| ಎನ್. ನೌರೋಜಿ ರೂ. ೨; ಮ| ಜಿ. ಎಲ್. ಸಾಲ್ಡಾಂಞ ರೂ. ೧; ಮ| ರಾ| ಎಸ್. ರಘುನಾಥಯ್ಯ ರೂ. ೧; ಮ| ರಾ| ಎಲ್. ರಾಮರಾವ್ ರೂ. ೧; ರಾವ್ ಬಹದ್ದೂರ್ ಆರ್. ರಾಮರಾವ್ ರೂ. ೧; ಮ| ರಾ| ಕಾರ್ನಾಡ ಸದಾಶಿವ ರಾವ್ ರೂ. ೧; ಮ| ರಾ| ಎನ್. ಸುವರ್ಣ ರೂ. ೧; ಮ| ರಾ| ಗೊಲ್ಲರಕೇರಿ ಕೃಷ್ಣರಾವ್ ರೂ. ೧; ಈ ಪ್ರಕಾರ ವಂತಿಗೆಕೊಟ್ಟಿರುವರು.

ಇಲ್ಲಿಯ ಬಾಸೆಲ್ ಮಿಶ್ಯನಿನ ಬ್ರಾಹ್ಮಣ ಗರ್ಲ್ಸ್ ಸ್ಕೂಲಿನ ವಠಾರದಲ್ಲಿ ತಾ. ೩೦ರಲ್ಲು ಪ್ಲೇಗು ಸೋಂಕಿದ್ದ ಇಲಿ ಸತ್ತು ಬಿದ್ದುದರಿಂದ ಈ ಶಾಲೆಯನ್ನು ೧೦ ದಿವಸಗಳ ವರೆಗೆ ಮುಚ್ಚಿರುತ್ತಾರೆ.

ಮುನ್ಸಿಪಾಲಿಟಿಯ ವೆಬಸ್ಟರ್ ಮಾರ್ಕೆಟಿನಲ್ಲಿ ಪುನಃ ಇಲಿ ಸತ್ತುಬಿದ್ದುದರಿಂದಲೂ ಮಾರ್ಕೆಟಿನ ಒಬ್ಬಿಬ್ಬರು ಪ್ಲೇಗ ಬೇನೆಗೆ ತುತ್ತಾದುದರಿಂದಲೂ ಇಂದಿನಿಂದ ಮಾರ್ಕೆಟನ್ನು ಲ್ಯಾನ್ಸ್‌ಡೌನಿಗೆ ವೈಯ್ದಿರುತ್ತಾರೆ.

ಹಿಂದೀ ಔದ್ಯೋಗಿಕ ಕಮಿಷನಿನವರು ಇದೇ ತಾ. ೧೮ರಲ್ಲಿ ಕಲಿಕೋಟೆಗೆ ಚಿತ್ತೈಸಿ ಅಲ್ಲಿ ಎರಡು ದಿವಸಗಳ ಪರಿಯಂತರ ಇದ್ದುಕೊಂಡು ಸರ್. ಫ್ರೆಡಿಕ್ ನಿಕಲ್ಸನ್ ಕೆ. ಸಿ. ಐ. ಇ. ಮೊದಲಾದ ೧೦ ಮಂದಿಯ ಸಾಕ್ಷ್ಯಗಳನ್ನು ವಿಚಾರಿಸಿದ ನಂತರ ಸದರಿ ಕಮಿಷನಿನವರು ಮಂಗಳೂರನ್ನು ಸಂದರ್ಶಿಸುವರು ಎಂತ ವರ್ತಮಾನವಿದೆ.

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಕಳೆದ ದಶೆಂಬರ ತಿಂಗಳಲ್ಲಿ ೩೩೭೪ ಜನನ, ೨೮೧೯ ಮರಣಗಳಾಗಿರುವವು. ಈ ಪೈಕಿ ಜನನ—ಕುಂದಾಪುರ ತಾಲೂಕು ಗಂಡು ೩೨೫; ಹೆಣ್ಣು ೧೯೧=೬೧೭; ಉಡ್ಪಿ ತಾಲೂಕು ಗಂಡು ೨೭೮, ಹೆಣ್ಣು ೨೬೫=೫೪೩. ಉಡ್ಪಿ ಪಟ್ಟಣ ಗಂಡು ೧೮, ಹೆಣ್ಣು ೧೭=೩೫. ಕಾರ್ಕಳ ತಾಲೂಕು ಗಂಡು ೧೪೯, ಹೆಣ್ಣು ೧೫೫=೩೦೪. ಉಪ್ಪಿನಂಗಡಿ ತಾಲೂಕು ಗಂಡು ೩೫೩, ಹೆಣ್ಣು ೨೫೪=೫೦೭ ಕಾಸರ

ಗೋಡು ತಾಲೂಕು ಗಂಡು ೩೦೨, ಹೆಣ್ಣು ೫೩೫=೬೬೭. ಕಾಸರಗೋಡು ಪಟ್ಟಣ ಗಂಡು ೧೪, ಹೆಣ್ಣು ೧೭=೩೦. ಮಂಗಳೂರು ತಾಲೂಕು ಗಂಡು ೩೪೪, ಹೆಣ್ಣು ೩೩೩=೬೭೭. ಮುಲ್ಕಿ ಪಟ್ಟಣ ಗಂಡು ೬, ಹೆಣ್ಣು ೧೧=೧೭. ಮಂಗಳೂರು ಮುನ್ಸಿಪಾಲಿಟಿ ಗಂಡು ೬೦, ಹೆಣ್ಣು ೬೮=೧೨೮. ಜುಮುಲಾ ಗಂಡು ೧೬೮೮, ಹೆಣ್ಣು ೧೬೮೬=೩೩೭೪.

ಜಿಲ್ಲೆಯ ಆಯಾ ತಾಲೂಕುಗಳ ಮರಣ ಸಂಖ್ಯೆ—ಕುಂದಾಪುರ ಗಂಡು ೧೭೦, ಹೆಣ್ಣು ೧೮೨=೩೫೨; ಉಡುಪಿ ಗಂಡು ೨೩೧, ಹೆಣ್ಣು ೨೨೮=೪೫೯; ಉಡುಪಿ ಪಟ್ಟಣ ಗಂಡು ೧೧, ಹೆಣ್ಣು ೬=೧೭; ಕಾರ್ಕಳ ಗಂಡು ೧೫೫, ಹೆಣ್ಣು ೧೮೨=೩೩೭; ಉಪ್ಪಿನಂಗಡಿ ಗಂಡು ೨೬೫, ಹೆಣ್ಣು ೨೨೭=೪೯೨; ಕಾಸರಗೋಡು ಗಂಡು ೨೯೧, ಹೆಣ್ಣು ೩೧೨=೬೦೩; ಕಾಸರಗೋಡು ಪಟ್ಟಣ ಗಂಡು ೮, ಹೆಣ್ಣು ೫=೧೩; ಮಂಗಳೂರು ತಾಲೂಕು ಗಂಡು ೨೪೫, ಹೆಣ್ಣು ೨೧೮=೪೬೩, ಮುಲ್ಕಿ ಪಟ್ಟಣ ಗಂಡು ೩, ಹೆಣ್ಣು ೪=೭. ಜುಮುಲಾ ಮರಣ ಗಂಡು ೧೪೩೯; ಹೆಣ್ಣು ೧೩೭೭=೨೮೧೬.

ನಾಳೆ ಇದೇ ತಾ. ೩ನೇ ಶನಿವಾರ ೫-೩೦ ಗಂಟೆಗೆ ಇಲ್ಲಿ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಜಿಲ್ಲಾ ಜಡ್ಜರಾಗಿರುವ ರಾವ್ ಬಹದ್ದೂರ್ ಶ್ರೀ ಕೃಷ್ಣಸ್ವಾಮಿರಾವ್ ಬಿ. ಎ. ಬಿ. ಎಲ್‌ರವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ಭ್ರಾತೃ ಸಂಘದವರ ನಾಲ್ಕನೇ ವಾರ್ಷಿಕೋತ್ಸವ ನಡೆಯುವದು.

ರೈಲ್ವೆ ಗಾಡಿಗಳ ಅದಲುಬದಲಾವಣೆಯ ಪ್ರಕಾರ ಇದೇ ಫೆಬ್ರುವರಿ ತಾ. ೧ರಿಂದ ಮಂಗಳೂರಿಂದ ಮೈಲ್ ಒಂದಿಯು ಬೆಳಗ್ಗೆ ಘಂಟೆ ೬ಕ್ಕೂ, ಮಿಕ್ಸೆಡ್ ಟ್ರೇನು ಬೆಳಿಗ್ಗೆ ೬-೨೫ಕ್ಕೂ ಪೆಸೆಂಜರರ ಟ್ರೇನು ಸಾಯಂಕಾಲ ಗಂಟೆ ೫-೨೫ಕ್ಕೂ ಬಿಡೋಣಾಗುವದು. ಮದ್ರಾಸಿನಿಂದ ಬರುವ ಮೇಲು ಟ್ರೇನು ಸಾಯಂಕಾಲ ಘಂಟೆ ೬-೩೫ಕ್ಕೆ ಮಂಗಳೂರಿಗೆ ತಲ್ಪುವದು. ಮಿಕ್ಸೆಡ್ ಟ್ರೇನು ಸಾಯಂಕಾಲ ಗಂಟೆ ೮-೩೫ಕ್ಕೆ ಬಂದು ತಲ್ಪುವದು.

ಕಳೆದ ತಿಂಗಳ ತಾ ೧೦ನೇ ರಾತ್ರಿ ನಡೆದ ವೈದ್ಯರನೇಮದ ದಿನ ಜಡ್ಕ್ಯ ಡ್ರೈವರ್ ಕೊರಗನಿಗೆ ಚೂರಿ ಹಾಕಿ ತಲೆತಪ್ಪಿಸಿಕೊಂಡಿದ್ದ ಕೆ. ಡಿ. ನಾರಾಯಣನು ಮಂಜಲಪೈಲಿನಲ್ಲಿ ರಾತ್ರಿ ಕಾಲ ಮುಸುಕು ಹಾಕಿಕೊಂಡು ಹೋಗುತ್ತಿರುವಾಗ ಹೆಕ್ಕರೇಜು ಆಫೀಸರರಾದ ಮ| ರಾ| ಎಚ್. ರಾಮಕೃಷ್ಣಯ್ಯನವರು ಅನುಮಾನದ ಮೇಲೆ ಅವನನ್ನು ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಸ್ವದೇಶಾಭಿಮಾನಿಯು ಜನ್ಮವೆತ್ತಿದ ಸ್ವಲ್ಪ ಕಾಲದಲ್ಲಿಯೇ ಈ ಜಿಲ್ಲೆಯ ಶ್ರೀಮಂತ ಸಾವುಕಾರರಾದ ಮಂಜೇಶ್ವರದ ನರ್ಸಯ್ಯ ಶ್ಯಾನುಭಾಗರಲ್ಲಿ ಪ್ರಾಪ್ತವಾದ ಪುತ್ರ ಸಂತತಿಯ ಶುಭವರ್ತಮಾನವನ್ನು ಸಮಸ್ತರಿಗೂ ಸಂತೋಷದಿಂದ ತಿಳಿಯಪಡಿಸಿದೆವು. ಅಂದು ರಾಜೇಶ್ರೀ ಶ್ಯಾನುಭಾಗರವರು ಇಲ್ಲಿಯ ಕೆನರಾ ಹೈಸ್ಕೂಲಿಗೆ ರೂಪಾಯಿ ಒಂದು ಸಾವಿರವನ್ನು ದಾನವಾಗಿ ಕೊಟ್ಟಿದ್ದರು. ಚಿರಂಜೀವಿಗೆ ನಿನ್ನೆ ದಿನ ಮಂಜೇಶ್ವರದಲ್ಲಿ ಬೆಳಿಗ್ಗೆ ಗಂಟೆ ೯-೩೦ರ ಸುಮುಹೂರ್ತದಲ್ಲಿ ಬ್ರಹ್ಮೋಪದೇಶವು ಕೊಡೋಣಾಯಿತು. ಈ ವೇಳೆ ಶ್ಯಾನುಭಾಗರವರು ರೂ. ೫೦,೦೦೦ದ ಒಂದು ಧರ್ಮ ಫಂಡನ್ನು ಏರ್ಪಡಿಸುವ ತಮ್ಮ ಸದ್ದುದ್ದೇಶವನ್ನು ನಿನ್ನೆ ದಿನ ಕೂಡಿದ ಸಭೆಯಲ್ಲಿ ವ್ಯಕ್ತಗೊಳಿಸಿರುವರೆಂತಲೂ ರೂ. ೫೦೦ನ್ನು ಯುದ್ಧಫಂಡಿನ ಸಹಾಯಾರ್ಥವಾಗಿ ಕೊಟ್ಟಿರುವರೆಂತಲೂ ತಿಳಿಯುತ್ತೇವೆ. ಬ್ರಹ್ಮೋಪದೇಶವನ್ನು ಹೊಂದಿದ ವಟುವು ತಾನು ಜನ್ಮವೆತ್ತಿದ ಸ್ಥಾನಕ್ಕೆ ತಕ್ಕಂಥಾ ವಿದ್ಯಾಭ್ಯಾಸವನ್ನು ಪಡದು, ಸತ್ಸಂಗ, ಸದ್ವರ್ತನೆಗಳ ಮೂಲಕ ತನ್ನ ಸ್ವಜಾತಿ ಮತ್ತು ಸ್ವದೇಶಕ್ಕೆ ಖ್ಯಾತಿಯನ್ನು ತರುವಂತೆ ಯಶೋವಂತನಾಗಿಯೂ ದೀರ್ಘಾಯುವಾಗಿಯೂ ಬಾಳಲೆಂದು ಈ ಮೂಲಕ ಹೃತ್ಪೂರ್ವಕವಾಗಿ ಅಪೇಕ್ಷಿಸುತ್ತೇವೆ.

ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಕಳೆದ ಸೋಮವಾರ ಎಂದಿನಂತೆ ವಿಶೇಷ ವಿಜೃಂಭಣೆಯಿಂದ ನೆರವೇರಿತು. ಬ್ರಾಹ್ಮಣ ಸಮಾರಾಧನೆಗೂ ಉತ್ಸವಕ್ಕೂ ನೆರೆದು ಬಂದ ಸ್ಥಳ ಪರಸ್ಥಳದವರ ಸತ್ಕಾರವನ್ನು ಕಳೆದ ವರ್ಷದಂತೆ ಈ ಸಲವೂ ಕೆನರಾ ಹೊಸ್ಟೆಲಿನ ವಿದ್ಯಾರ್ಥಿಗಳಲ್ಲಿ ಹಲವರು ಕೈಕೊಂಡಿದ್ದರು. ಸಮಾರಾಧನೆಗಳಿಗೆ ಬರುವಂಥ ಭಜಕರ ಸಂಖ್ಯೆಯು ಕ್ರಮವಾಗಿ ಏರುತ್ತ ಬರುತ್ತದೆ. ರಥೋತ್ಸವದ ದಿನ ಹೆಚ್ಚುಕಡಿಮೆ ೧೫,೦೦೦ ಜನರು ಭೋಜನದ ಬಗ್ಗೆ ನೆರೆದು ಬಂದಿದ್ದರು. ಸ್ತ್ರೀಯರ ಸಂಖ್ಯೆಯು ಬಹಳ ವಿಶೇಷವಾಗಿತ್ತು. ಇಷ್ಟು ಜೊತೆ ಸಮೂಹವು ಊಟಕ್ಕೆ ದೇವಸ್ಥಾನದ ವಠಾರದಲ್ಲಿಯೇ ಕೂತುಕೊಳ್ಳುವಷ್ಟು ಸ್ಥಳವು ಇಲ್ಲದೆ ಇರುವದರಿಂದ ದೇವಸ್ಥಾನದ ಸಮೀಪವಿರುವ ಮನೆಗಳಲ್ಲಿ ಸಹ ಜನರು ತುಂಬಿದ್ದರು. ಊಟಕ್ಕೆ ಜನರು ಹೆಚ್ಚಿದಂತೆ ದೇವಸ್ಥಾನದ ಆಡಳಿತ ಮೊಕ್ತೇಸರರಿಗೆ ಈ ದೊಡ್ಡ ವಿನಿಯೋಗಗಳಲ್ಲಿ ಬೇಕಾದ ಸಹಕಾರವನ್ನು ಕೊಡುವ ಭಜಕರ ಸಂಖ್ಯೆಯು ತಗ್ಗುತ್ತ ಬಂದಿದೆ. ಈ ನ್ಯೂನತೆಯನ್ನು ಭಜಕರು ಪರಿಗ್ರಹಿಸಿ ಇಂಥಾ ಸಂದರ್ಭಗಳಲ್ಲಿ ಯಾದರೂ ದೇವಸ್ಥಾನದ ಮೊಕ್ತೇಸರರಿಗೆ ಬೇಕಾದ ಸಹಾಯ ಮಾಡುವುದು ಅಗತ್ಯವಾಗಿದೆ.

ಮೆಸ್ಸರ್ಸ್ ಪೆರ್ಲ್ ಎಂಡ್ ಸನ್ಸರಲ್ಲಿ ಕೊಡಪಾನ ಕದ್ದ ನೇಯುವ ಕೆಲಸದ ಮುತೂಸಲ ಸೋನ್ಸನಿಗೆ ತಾ. ೩೦ರಲ್ಲು ಒಂದು ತಿಂಗಳ ಕಠಿಣ ಸಜಾ ವಿಧಿಸೋಣಾಯಿತು.

ಬೋಳಾರದ ಎ. ಜಿ. ಲಕ್ಷ್ಮಿದರ ಮನ್ನೆದ ಕಾರ್ಖಾನೆಯಿಂದ [illegible] ಮಾಡಿದ ಕೃಷ್ಣಪ್ಪನಿಗೆ ೬ ತಿಂಗಳ ಸಜಾ ವಿಧಿಸೋಣಾಗಿದೆ.

ಮಂಗಳೂರಲ್ಲಿ ಸ್ಥಾಪಿಸೋಣಾದ ಹೋಮ್‌ರೂಲು ಲೀಗ್ ಶಾಖೆಯ ಪ್ರಥಮ ಸಭೆಯು ಕಳೆದ ತಾ| ೨೮ನೇ ಆದಿತ್ಯವಾರ ಮ| ರಾ| ಕಾರ್ಕಳ ಸದಾಶಿವರಾಯರ ಆಫೀಸಿನ ಮಾಳಿಗೆಯ ಮೇಲೆ ಕೂಡಿಬಂತು. ಸಭೆಯಲ್ಲಿ ವಕೀಲ ಮ| ರಾ| ಎಮ್. ಮಾಧವರಾಯರು ಹೋಮ್‌ರೂಲು ಲೀಗಿನ ಅವಶ್ಯಕತೆಯನ್ನು ಕಾಲೋಚಿತ ಮಾತುಗಳಿಂದ ವಿವರಿಸಿದರು. ನಂತರ ಮ| ರಾ| ಟಿ. ವಿ. ಸುಬ್ರಮಣ್ಯಯ್ಯರರವರು ಗಿರ್ಮಿಟ್ ಕರಾರಿನ ಪದ್ಧತಿಯಿಂದ ಹಿಂದೀ ಭೃತ್ಯರುಗಳು ಫಿಜಿ ಮೊದಲಾದ ದ್ವೀಪಗಳಲ್ಲಿ ಪಡುತ್ತಿರುವ ಕಷ್ಟಗಳನ್ನು ವಿವರಿಸಿ ಹೇಳಿ ಈ ಪದ್ಧತಿಯನ್ನು ಕೂಡಲೇ ನಿಲ್ಲಿಸಿ ಬಿಡುವ ಹಾಗೆ ಇಂಡಿಯಾ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ಸೂಚನೆಯನ್ನು ತಂದರು. ವಕೀಲ ಮ| ರಾ| ಎಮ್. ಮಾಧವರಾಯರು ಈ ಸೂಚನೆಯನ್ನು ಅನುಮೋದಿಸಿದರು. ಅನಂತರ ಮ| ತ್ಯಾಗರಾಜ ಚೆಟ್ಟಿಯವರ ಬ್ರಾಹ್ಮಣರು, ಬ್ರಾಹ್ಮಣೇತರರು ಎಂಬ ಭೇದವನ್ನು ಮಾಡುವ ನಿಶಾನಿಯನ್ನು ಖಂಡಿಸುವ ಸೂಚನೆಯನ್ನು ಮ| ರಾ| ಅತ್ತಾವರ ಬಾಲಕೃಷ್ಣ ಸೆಟ್ಟರು ಸಭೆಯ ಮುಂದೆ ತಂದರು. ಮ| ರಾ| ನಾಯರರು ಈ ಸೂಚನೆಯನ್ನು ಅನುಮೋದಿಸಿದರು. ಸಭೆಯಲ್ಲಿ ಇನ್ನು ಕೆಲವು ವಿಚಾರಗಳು ನಡದು ಕಡೆಗೆ ಸಭೆಯ ಕೆಲಸವು ಮುಗಿಯಿತು.

ಬೋಳಾರ ಮಾರಿಗುಡಿಯ ಚಿನ್ನಾಭರಣಗಳನ್ನು ಅಪಹರಿಸಿದರೆಂಬದಾಗಿ ಆಪಾದಿಸಲ್ಪಟ್ಟ ಸದರಿ ಗುಡಿಯ ಪಾತ್ರಿ ವೆಂಕಟ್ರಮಣನಿಗೆ ಡೆಪ್ಯುಟಿ ಕಲೆಕ್ಟರರು ನಿನ್ನೆಯ ದಿನ ೯ ತಿಂಗಳ ಕಠಿಣ ಸಜಾ ೨೦೦ ರೂಪಾಯಿ ಜುಲ್ಮಾನೆ, ಪಾತ್ರಿಯ ದೊಡ್ಡ ತಂದೆ ರಾಮರ್ಸನಿಗೆ ೩ ತಿಂಗಳ ಕಠಿಣ ಸಜಾ ೨೦೦ ರೂಪಾಯಿ ಜುಲ್ಮಾನೆ ವಿಧಿಸಿರುವರು. ಜುಲುಮಾನೆ ಕೊಡ ತಪ್ಪಿದರೆ ಆಪಾದಿತರು ಮೂರು ಮೂರು ತಿಂಗಳ ಹೆಚ್ಚಿಗೆ ಸಜಾ ಅನುಭವಿಸಬೇಕಾಗುವದು.

ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿರುವ ಮಂಗಳೂರ ಬಂದರಿನವರ ಅರ್ಜಿಯ ವಿಷಯ ಟೀಕೆಯನ್ನು ಈ ಸರ್ತಿ ಮಾಡಲು ಅನನುಕೂಲವಾದರೂ ಕಳೆದ ತಿಂಗಳ ತಾ. ೨೮ನೇ ರವಿವಾರ ಬೆಳಗ್ಗೆ ೧೦ ಗಂಟೆಗೆ ಸಾವುಕಾರರು ಸಭೆ ಕೂಡಿದ ವೃತ್ತಾಂತವನ್ನು ಸಂಕ್ಷೇಪವಾಗಿ ವಾಚಕರಿಗೆ ತಿಳಿಯ ಹೇಳುವದು ಈ ಸಂಚಿಕೆಯಲ್ಲಿಯೇ ಅಗತ್ಯವಾಗಿದೆ. ಅಡಿಕೆ ವ್ಯಾಪಾರದ ಗಲಾಟೆ, ಇದರಿಂದ ಅಡಿಕೆಯನ್ನು ಈ ಬಂದರಕ್ಕೆ ತರುವ ಗಿರಾಕಿಗಳಿಗೂ ಅದನ್ನು ಪಡಕೊಂಡು ಸ್ಟೀಮರಿಗೆ ಹತ್ತಿಸಿಕೊಡುವ ಸಾವುಕಾರರಿಗೂ ಉಂಟಾಗುವ ಅಡಚಣೆ ನಷ್ಟಗಳ ನಿವಾರಣೆಯ ಕುರಿತು ಪರ್ಯಾಲೋಚಿಸುವದು ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಪ್ರತಿವಾರ ಮಂಗಳವಾರದೊಳಗಾಗಿಯೇ ಅಡಿಕೆ ತೂಕ ವಗೈರೆಗಳನ್ನು ತೀರಿಸಿಕೊಳ್ಳಬೇಕೆಂದು ಅಡಿಕೆ ಸಾವುಕಾರರೆಲ್ಲರೂ ನಿರ್ಣಯಿಸಿಕೊಂಡಿರುತ್ತಾರೆ. ಮಂಗಳವಾರದನಂತರ ಆ ವಾರದ ಸ್ಟೀಮರು ಹೊರಟುಹೋಗುವ ತನಕ ಅಡಿಕೆ ತೂಕ ವಗೈರೆಗಳನ್ನು ಮಾಡಕೂಡದೆಂತ ಸಹ ನಿರ್ಣಯಿಸಲ್ಪಟ್ಟಿರುವದು. ಇದೇ ಸಭೆಯಲ್ಲಿ ಸಾವುಕಾರರ ಬಗ್ಗೆ ಪ್ರತ್ಯೇಕ ಒಂದು ಕ್ಲಬ್ಬನ್ನು ಏರ್ಪಡಿಸುವದು ಅಗತ್ಯವೆಂಬ ಸೂಚನೆಯು ಮಂಜೂರಾಗಿ ಸುಮಾರು ರೂ. ೬೭೦ ಸಭೆಯಲ್ಲಿಯೇ ಚಂದಾವೆತ್ತಿರುವರು. ಇಲ್ಲಿಯ ಸಾವುಕಾರರಿಂದ ಸಭೆ, ಕ್ಲಬ್ಬು ಮುಂತಾದ ಕಾರ್ಯಭಾರಗಳು ನಿರ್ವಹಿಸಲು ಆಗಲಿಕ್ಕಿಲ್ಲವೆಂಬೀ ಭಾವನೆಯಿಂದ ಸಾವುಕಾರರು ಕೈಕೊಂಡಿರುವ ಈ ಸತ್ಪ್ರಯತ್ನಗಳಿಗೆ ವಿಘ್ನವನ್ನು ತಂದೊಡ್ಡದೆ ಇವರು ಹೆಚ್ಚಿನ ಉತ್ಸಾಹದಿಂದ ಪ್ರಾರಂಭಿಸಿರುವ ಈ ಕಾರ್ಯಗಳಿಗೆ ತಕ್ಕುದಾದ ಸಹಕಾರವು ಕೊಡೋಣಾದೀತೆಂಬದಾಗಿ ಭರವಸಪಡುತ್ತೇವೆ.

ಕಳೆದವಾರ ಮುನಿಸಿಪಾಲಿಟಿಯಲ್ಲಿ ೧ ಪ್ಲೇಗು ಮರಣವಿತ್ತು.

ಸ್ವೀಕಾರ. ಹೃದಯ ಪ್ರಿಯ:—ಸಂಸ್ಕೃತ ವೈದ್ಯಕ ಮಾಸಿಕ ಪತ್ರಿಕೆ. ಇದರ ಪ್ರಥಮ ಸಂಪುಟವು ನಮ್ಮ ಕೈಸೇರಿದೆ. ಈ ಸಂಸ್ಕೃತ ಗ್ರಂಥವು ನಾಗರಾಕ್ಷರದಿಂದ ಸುವಾಚ್ಯವಾಗಿ ಮುದ್ರಿಸಲ್ಪಟ್ಟಿರುವದು. ಕೇರಳ ದೇಶದಲ್ಲಿ ವೈದ್ಯಕ ಮತ್ತು ಜ್ಯೋತಿಷ ಈ ಎರಡು ಶಾಸ್ತ್ರಗಳು ಬೇರೆ ಕಡೆಗಳಲ್ಲಿಗಿಂತ ಹೆಚ್ಚು ಪ್ರಚಾರವುಳ್ಳವುಗಳಾದುದರಿಂದ ಈ ನೂತನ ವೈದ್ಯಕ ಗ್ರಂಥವು ಪ್ರಾಚೀನ ಆರ್ಷಮತಕ್ಕೂ ಅಲ್ಲಿಯ ಪಾರಂಪರಿಣ ಅನುಭವಕ್ಕೂ ಬಿಟ್ಟಿಲ್ಲವೆಂದು ಅನ್ನಬಹುದು. ವೈದ್ಯಶಾಸ್ತ್ರದ ಯಾವ ಅನುಭವವೂ ಇಲ್ಲದೆ ಕಿಂಬಹುನಾ ವೈದ್ಯಕವು ಯಾತರೊಡನೆ ತಿನ್ನಬೇಕೆಂಬುದು ಕೂಡ ಗೊತ್ತಿಲ್ಲದೆ ಕೇವಲ ನಾಮಧಾರಿ ವೈದ್ಯರಾದವರನೇಕರು ನಮ್ಮ ಪ್ರಾಂತದಲ್ಲಿರುವರು. ಅವರು ಕೊಂಚ ಸಂಸ್ಕೃತವನ್ನು ಅಭ್ಯಾಸಮಾಡಿ "ಹೃದಯಪ್ರಿಯ" ದಂಥಾ ಗ್ರಂಥಗಳನ್ನು ಸಂಗ್ರಹಿಸಿ ವೈದ್ಯಕದ ಸ್ವಲ್ಪ ಸ್ವಲ್ಪ ಜ್ಞಾನವನ್ನು ಸಂಪಾದಿಸುವುದು ಅವರಿಗೆ ಮಾತ್ರವಲ್ಲ, ಅವರ ರೋಗಿಗಳಿಗೂ ಕೂಡ ಹಿತಾವಹವಾಗಿದೆ. ಈ ಪುಸ್ತಕದ

ವಿಳಾಸವು:— ಟಿ. ನೀಲಕಂಠ ಶರ್ಮಾ,
ಬಾಸ್ಕರ್ ಶರ್ಮ ಮೆಮೋರಿಯಲ್ ಮೆಡಿಕಲ್ ಹಾಲ್,
[illegible]

ಬುದ್ಧಿಯ ಮಾತು:—ದಾವಣಗೆರೆಯ ರಾ| [illegible] ಹರ್ಡೇಕರ್‌ರವರಿಂದ ರಚಿಸಲ್ಪಟ್ಟ ಈ ಚಿಕ್ಕ ಪುಸ್ತಕದಲ್ಲಿ ತರುಣರಿಗೆ ಉಪಯುಕ್ತವಾದ ವಿಧವಿಧದ ಬುದ್ಧಿಯ ಮಾತುಗಳನ್ನು ವಿವರಿಸಿರುತ್ತದೆ. ಪುಸ್ತಕದ ಭಾಷೆಯು ಸುಲಭವಾಗಿದೆ.

ಮಂಗಳೂರಿನ ಮೆಸರ್ಸ್ ಪಿ. ಎಮ್. [illegible] ಸೋದರರು ನಮಗೆ [illegible] ವಾದ ಕೆಲೆಂಡರನ್ನು ಉಪಕಾರದಿಂದ ಸ್ವೀಕರಿಸುತ್ತೇವೆ.

ಮುಲ್ಕಿ:—ಇಲ್ಲಿಯ ಯೂನಿಯನ್ ಕ್ಲಬ್ಬಿನ ಬಗ್ಗೆ ಬೋಳಾರ ಸಹೋದರರು ಕಟ್ಟಿಸುವ ಡಾಕ್ಟರ್ ಶ್ಯಾಮರಾವ ಮೆಮೋರಿಯಲ್ ಹೋಲ್ ಎಂಬ ಕಟ್ಟೋಣದ ಶಂಕುಸ್ಥಾಪನೆಯು ಮೊನ್ನೆ ಆದಿತ್ಯವಾರ ಶ್ಯಾಮ ಘಂಟೆ ೪ಕ್ಕೆ ಹಜರತ್ ಜಿಲ್ಲಾ ಕಲೆಕ್ಟರ ದೊರೆಗಳವರಿಂದ ಮಾಡಲ್ಪಟ್ಟಿತು. ಪ್ರಾರಂಭದಲ್ಲಿ ರಾ| ಬೋಳಾರ ನಾಗೇಶರಾಯರು ಲೇಟ ಡಾಕ್ಟರ ಶ್ಯಾಮರಾಯರ ಸಂಕ್ಷಿಪ್ತವಾದ ಜೀವನ ಚರಿತ್ರೆಯನ್ನು ಹೇಳಿ ಅವರ ಜ್ಞಾಪಕಾಗಿ ಕಟ್ಟಿಸುವ ಈ ಕಟ್ಟೋಣದ ಶಂಕುಸ್ಥಾಪನೆಯನ್ನು ಮಾಡಲು ದೊರೆಗಳವರಿಗೆ ವಿನಂತಿಸಿದರು. ಅನಂತರ ಕಲೆಕ್ಟರ ದೊರೆಗಳು ಕ್ಲಬ್ಬಿಗೆ ಉತ್ತರೋತ್ತರ ಅಭಿವೃದ್ಧಿಯನ್ನೂ ಬೋಳಾರ ಸಹೋದರರಿಗೆ ಶ್ರೇಯಸ್ಸನ್ನೂ ಚಿಂತಿಸಿ ಉಪದೇಶಪರವಾದ ಚಿಕ್ಕ ಭಾಷಣವನ್ನು ಮಾಡಿ ಸದರಿ ಕಟ್ಟೋಣದ ಶಂಕುಸ್ಥಾಪನೆಯನ್ನು ಪೂರೈಸಿದರು. ತರುವಾಯ ಕ್ಲಬ್ಬಿನ ಪ್ರೆಸಿಡೆಂಟರಾದ ರಾ| ಡಾಕ್ಟರ್ ರಾಮರಾಯರವರು ಕ್ಲಬ್ಬಿನ ಪೂರ್ವ ಚರಿತ್ರೆಯ ಕುರಿತು ಪ್ರಸ್ತಾಪಿಸಿ ಬೋಳಾರ ಸಹೋದರರ ಔದಾರ್ಯವನ್ನು ಪ್ರಶಂಸಿಸಿ ಈ ಸಮಾರಂಭಕ್ಕೆ ಅಧ್ಯಕ್ಷರಾಗಿ ದಯಮಾಡಿಸಿದ ಬಗ್ಗೆ ಕಲೆಕ್ಟರ ದೊರೆಗಳವರಿಗೂ ಸಭಿಕರಿಗೂ ಅಭಿನಂದನವನ್ನರ್ಪಿಸಿದರು. ಬಳಿಕ ತಾಂಬೂಲ ಶರ್ಕರಾದಿಗಳನ್ನು ಹಂಚಿ ಸಮಾರಂಭವು ಸಮಾಪ್ತಿಯಾಯಿತು. ಕ್ಲಬ್ಬಿನಂಥಹ ಸಾರ್ವಜನಿಕ ಹಿತದ ಸಂಸ್ಥೆಗೆ ಬೋಳಾರ ಸಹೋದರರು ತಮ್ಮ ಉದಾರ ಹಸ್ತದಿಂದ ಮಾಡಿದ ಈ ಸಹಾಯವನ್ನು ಆದರ್ಶವಾಗಿಟ್ಟುಕೊಂಡು ಸಮೀಪದ [illegible] ವಿದ್ಯಾರಂಭರೂ ಈ ಕ್ಲಬ್ಬಿನ [illegible] ಈ ದಿನಾವಳಿಯಲ್ಲಿರುವ "[illegible]" ಎಂಬ [illegible] ಭಂಡಾರಕ್ಕೆ ತಮ್ಮ ಉದಾರ ಮನಸ್ಸಿನಿಂದ ಸಹಾಯಮಾಡುವರೆಂದು ಹಾರೈಸುತ್ತೇವೆ.

ಉತ್ತರ ಹಿಂದೂಸ್ಥಾನ.

ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿಗನುಸಾರವಾಗಿ ಕಲ್ಕತ್ತೆಯಲ್ಲಿ ಕೈದು ಮಾಡಲ್ಪಟ್ಟ ನರೇಂದ್ರನಾಥ ರೋಯಿಯನ್ನು ಪೋಲಿಸಿನವರು ಆಗ್ಗಾಡಿಯಲ್ಲಿ ಕಲ್ಕತ್ತೆಯಿಂದ ಸಾಂತಹಾರಕ್ಕೆ ಕೊಂಡು ಹೋಗುತ್ತಿರುವಾಗ ನರೇಂದ್ರನಾಥನು ಓಡುತ್ತಿರುವ ಆಗ್ಗಾಡಿಯಿಂದ ಕೆಳಗೆ ಹಾರಿ ತಪ್ಪಿಸಿಕೊಂಡಿರುವನು ಎಂಬ ವಾರ್ತೆ ಬಂದದೆ.

ಬಂಗಾಳ ದೇಶದ ಬೀರ್‌ಬಾಹುಂ ಎಂಬ ಊರಿನಲ್ಲಿ ಅಲ್ಲಿಯ ಪೋಲಿಸಿನವರು ಒಬ್ಬ ಬಂಗಾಳಿ ಹೆಂಗಸಿನ ಮನೆ ಜಪ್ತಿ ಮಾಡಿದ್ದಲ್ಲಿ ಆಕೆಯ ನೆಲದಲ್ಲಿ ಬಚ್ಚಿಟ್ಟಿದ್ದ ೭ ಪಿಸ್ತೂಲುಗಳೂ ೧,೧೦೦ ತೋಟೆಗಳೂ ಸಿಕ್ಕಿದ್ದವು. ಕೂಡಲೇ ಆ ಹೆಂಗಸನ್ನೂ ಆಕೆಯ ಸಂಬಂಧಿಯಾದ ಯೌವನಸ್ಥನೊಬ್ಬನನ್ನೂ ಪೋಲೀಸಿನವರು ಹಿಡಿದು ವಿಚಾರಣೆಗೆ ಗುರಿ ಮಾಡಿರುತ್ತಾರೆ.

ಸಯಾಂ ದೇಶದಲ್ಲಿ ಹಿಂದೀಗಳಿಗೆ ಈಗ ಕೂಲಿ ಕೆಲಸ ದೊರೆಯುವದಿಲ್ಲವೆಂದೂ ಇನ್ನು ಮುಂದೆ ಆ ದೇಶಕ್ಕೆ ನಮ್ಮ ಜನರು ಹೋಗುವದು ಪ್ರಯೋಜನವಿಲ್ಲವೆಂತಲೂ ಒಂದುವೇಳೆ ಹೋದರೆ ತೊಂದರೆಪಡಬೇಕಾಗುವದೆಂತಲೂ ಇಂಡಿಯಾ ಸರಕಾರದವರು ಪ್ರಕಟಿಸಿರುವರು.

ಢಕ್ಕಾದಲ್ಲಿಯ ಕಾಲೇಜು ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚುವ ಸಮಾರಂಭದಲ್ಲಿ ಬಂಗಾಳ ಗವರ್ನರರಾಗಿರುವ ಕಾರ್ಮಿಖಯೇಲ್ ಪ್ರಭುಗಳು ಅಧ್ಯಕ್ಷರಾಗಿದ್ದು ಭಾಷಣದಲ್ಲಿ ಬಹುಭಾಗ ರಾಜಕೀಯ ಸಂಬಂಧವಾಗಿ ಮಾತನಾಡಿ ಬಂಗಾಳದ ಜನರಲ್ಲಿ ಹಲವರನ್ನು ಇಂಟರ್ನ್ ಮಾಡಿದುದರ ಕಾರಣವನ್ನು ವಿವರಿಸಿರುತ್ತಾರೆ. ಸರಕಾರದವರು ಅವರಿವರನ್ನು ಇಂಟರ್ನ್ ಮಾಡಿದುದಕ್ಕೆ ರಾಜದ್ರೋಹ ಪಿತೂರಿ ಮಂಡಲಿಗಳಲ್ಲಿ ಸೇರಿದವರು, ಇಂಥಾ ಮಂಡಲಿಗಳಲ್ಲಿದ್ದುಕೊಂಡು ಕೊಲೆ, ದರೋಡೆ ಮೊದಲಾದ ತಕ್ಸೀರುಗಳನ್ನು ನಡಿಸಿ ಸರಕಾರಕ್ಕೆ ವಿರೋಧ ಭಾವದಿಂದಿದ್ದವರು, ಅಥವಾ ಕೊಲೆ ಇತ್ಯಾದಿಗಳನ್ನು ನಡಿಸಿದವರಿಗೆ ಸಾಹಾಯ್ಯ ಮಾಡಿದವರು, ಇಂಥಾ ಕೊಲೆಗಾರರ ದರೋಡೆಗಾರರ ಆಯುಧ ಇತ್ಯಾದಿಗಳನ್ನು ಅಡಗಿಸಿ ಇಟ್ಟಂಥವರು ಕೊಟ್ಟ ಸಮಾಚಾರಗಳೇ ಕಾರಣವಾಗಿದೆ. ಸರಕಾರದವರು ಇಂಥವರ ಮಾತುಗಳನ್ನು ಪೂರ್ಣವಾಗಿ ನಂಬಿದ್ದಾರೆ. ಇಂಥವರ ಮಾತನ್ನು ನಂಬಿ ಕೆಲವು ಸ್ಥಳಗಳನ್ನು ಜಪ್ತಿ ಮಾಡಿದ್ದಲ್ಲಿ ೫೦ ಸ್ಥಳಗಳಿಗಿಂತಲೂ ಹೆಚ್ಚು ಕಡೆಗಳಲ್ಲಿ ಮದ್ದುಗುಂಡುಗಳು ಸಿಕ್ಕಿದ್ದರಿಂದ ಸರಕಾರದವರು ಇಂಥವರ ಮಾತನ್ನು ನಂಬಿದ್ದು ನ್ಯಾಯವೇ ಆಗಿದೆ. ಸರಕಾರದವರು ಕಟ್ಟಳೆ ನಡಿಸಿದ ಜನಗಳಲ್ಲಿ ಅರ್ಧಗಿಂತಲೂ ಹೆಚ್ಚಿನ ಮಂದಿ ಅವರ ಜತೆಗಾರರಿಂದಲೇ ಸರಕಾರದ ಗೋಚರಕ್ಕೆ ಬಂದವರು ಎಂಬದಾಗಿ ಕಾರ್ಮಿಖಯೇಲ್ ಪ್ರಭುಗಳು ಹೇಳಿರುವರು.

ಸಂಯುಕ್ತ ಸಂಸ್ಥಾನ ಸರಕಾರದ ನ್ಯಾಯವಿಧಾಯಕ ಸಭೆಯಲ್ಲಿ ಬಹುಮಾನಪಟ್ಟ ಮಿ॥ ಮೋತಿಲಾಲ ನೇರುವರು "ರೌಂಡ್ ಟೇಬಲ್" ಚಳವಳದ ವಿಷಯ ಕೆಲವು ಪ್ರಶ್ನೆಗಳನ್ನು ಹಾಕಬೇಕೆಂದಿದ್ದಾರೆ. ಮಿ॥ ಕರ್ಟಿಸರ ಗುಪ್ತ ಪತ್ರಕದಲ್ಲಿ ಲೇಖಕನು ಲೆಪ್ಟನೆಂಟ ಗವರ್ನರರು ಮತ್ತು ಬಹುಮಾನಪಟ್ಟ ಮಿ॥ ಹೆರಿಸರು ಈ ಲೇಖನವನ್ನು ಪರಿಶೀಲಿಸಿದ್ದಾರೆಂದು ಹೇಳಿರುವದು ನಿಜವೋ, ಹೌದಾದರೆ ಅದು ಇಬ್ಬರ ಜೋಡು ಆಲೋಚನೆಗಳನ್ನು ವೇದ್ಯಮಾಡಿಸುತ್ತದೋ, ಈ ಲೇಖನವು ಸರಕಾರದ ಛಾಪಖಾನೆಯಲ್ಲಿ ಛಾಪೆಯಾಗಿರುತ್ತದೋ, ಛಾಪೆಯಾಗಿದ್ದರೆ ಆ ಪತ್ರಕ್ಕೆ ಎಷ್ಟು ಖರ್ಚು ತಕ್ಕೊಂಡದೆ? ಖಾಸಗಿ ಜನರ ರಾಜಕೀಯವಾದ ಅಭಿಪ್ರಾಯಗಳನ್ನು ಸರಕಾರದ ಛಾಪಖಾನೆಯವರಿಗೆ ಅಚ್ಚು ಹಾಕಲು ನಿರ್ಬಂಧವಿಲ್ಲವೋ? ಇಲ್ಲವಾದರೆ ಅದಕ್ಕೆ ಯಾವ ಶರ್ತವಿದೆ? ಮಿ॥ ಕರ್ಟಿಸರು ಈ ಸಂಸ್ಥಾನದ ಯಾವ ಜಿಲ್ಲೆಗಳನ್ನು ಮಾನ್ಯ ಹೆರಿಸರೊಡನೆ ವ ಇತರ ಆಫೀಸರೊಡನೆ ಸಂದರ್ಶಿಸಿದ್ದಾರೆ, "ರೌಂಡ್ ಟೇಬಲ್" ಚಳವಳಕ್ಕೆ ಸಂಸ್ಥಾನದ ಸರಕಾರದವರು ಯಾವ ರೀತಿಯಲ್ಲಾದರೂ ಸಹಾಯ ಮಾಡಿರುತ್ತಾರೋ? ಈ ಸಂಸ್ಥಾನದ ಯಾವ ಆಫೀಸರನಾದರೂ "ರೌಂಡು ಟೇಬಲ್" ಚಳವಳದ ಮೆಂಬರನಾಗಿರುವನೋ? ಲೆಪ್ಟನೆಂಟ ಗವರ್ನರರ ಖಾಸಗಿ ಸೆಕ್ರೆಟರಿಯವರು ಮತ್ತು ಮಿ॥ ಹೆರಿಸರು ಈ "ರೌಂಡ್ ಟೇಬಲ್" ಸಂಸ್ಥೆಯಲ್ಲಿ ಹಿಂದೂಸ್ಥಾನದ ಬಗ್ಗೆ ಪ್ರತಿನಿಧಿಗಳಾಗಿರುವರೋ? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳುವರು.

ವಿದ್ಯಾಭ್ಯಾಸದ ಕಡೆಗೆ ಈಗಲೀಗ ಹಿಂದೂಸ್ಥಾನದ ಜನಸಾಮಾನ್ಯರು ಕೂಡಾ ಹೇಗೆ ಮಹತ್ವವನ್ನು ಕೊಡುತ್ತಿದ್ದಾರೆಂಬದು ಈಚೆಗೆ ಮುಂಬಾಯಿಯ ಕೆಲಸಗಾರರ ಒಂದು ಸಭೆಯಲ್ಲಿ ಆದ ನಿರ್ಣಯದಿಂದ ಖಚಿತವಾಗುತ್ತದೆ. ಮುಂಬಾಯಿ ಪಟ್ಟಣದ ಉತ್ತರ ಪ್ರಾಂತ್ಯದಲ್ಲಿ ವಾಸಿಸುವ ಕೆಲಸಗಾರರಾದ ಜನರ ಮಕ್ಕಳಲ್ಲಿ ೬-೧೦ ವರ್ಷದ ವರೆಗಿನವರಿಗೆ ಪ್ರೈಮರಿ ವಿದ್ಯಾಭ್ಯಾಸವು ದೊರಕುವಂತೆ ಮುಂಬಾಯಿ ಮುನ್ಸಿಪಾಲಿಟಿಯವರು ಏರ್ಪಾಡು ಮಾಡಬೇಕು, ಸಂದರ್ಭ ಬಿದ್ದರೆ ಇಂಥಾ ವಿದ್ಯಾಭ್ಯಾಸವು ಖಡ್ಡಾಯವಾಗಿ ಮಾಡುವಂತೆ ಎತ್ತುಗಡೆ ಮಾಡಬೇಕು ಎಂಬದಾಗಿ ಕೆಲಸಗಾರರ ಈ ಸಭೆಯಲ್ಲಿ ನಿರ್ಣಯವಾಗಿರುತ್ತದೆ.

ರೆವರೆಂಡ ಆಂಡ್ರೂಸರವರು ಫಿಜಿ ದ್ವೀಪದಲ್ಲಿರುವ ಹಿಂದೀಗಳ ದುರವಸ್ಥೆಯನ್ನು ಸೂಚಿಸಿ ಹಿಂದೀ ಭಾಷೆಯ ಒಂದು ಪತ್ರಿಯನ್ನು ಅಲ್ಲಹಾಬಾದಿನಲ್ಲಿ ಹಂಚಿಸಿದ್ದಾರೆ. ಅದರ ಸಾರಾಂಶವು ಈ ರೀತಿಯಾಗಿರುವದು:- "ತಾಯಿಗಳೇ, ಫಿಜಿಯಲ್ಲಿರುವ ನಿಮ್ಮ ಸಹೋದರಿಯರ ದುಸ್ಥಿತಿಯನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರು ತಮ್ಮ ದುಃಖಗಳಲ್ಲಿ ಸಾಹಾಯ್ಯ ಸಿಕ್ಕಬೇಕೆಂಬ ಅಪೇಕ್ಷೆಯಿಂದ ಆ ದೂರ ಪ್ರದೇಶದಲ್ಲಿ ನನ್ನ ಬಳಿಗೆ ಪ್ರತಿದಿನಾಲೂ ಕಣ್ಣೀರು ಸುರಿಸುತ್ತಾ ಬಂದಿದ್ದಾರೆ. ಕೋಟಿ ಮತ್ತು ದುರ್ಗುಣಗಳ ಮಧ್ಯೆ ವಾಸಿಸುವ ತಮ್ಮ ಸ್ವಂತ ಚಿಕ್ಕಮಕ್ಕಳನ್ನು ಅವರು ನನ್ನ ಬಳಿಗೆ ತಂದಿದ್ದಾರೆ. ನಾವು ಇದಕ್ಕೆ ವಿರೋಧವಾಗಿ ತಕ್ಕ ಚಳವಳ ನಡಿಸದಿದ್ದರೆ ನಮ್ಮ ಜನರ ಈ ಕಷ್ಟವೂ ನಾಚಿಕೆಗೇಡು ಕೃತ್ಯಗಳೂ ಸರಾಗವಾಗಿ ನಡಿಯುವದು ಮತ್ತು ಅವರಲ್ಲಿಯೇ ಹೊಸ ಸಂತತಿಯು ಜನಿಸುವದು. ಪವಿತ್ರವಾದ ನಮ್ಮ ಮಾತೃಭೂಮಿಯ ಮತ್ತು ನಿರ್ದೋಷಿಗಳಾದ ಈ ಮಕ್ಕಳ ಹೆಸರಲ್ಲಿಯೂ ನಿಮ್ಮ ಸಹೋದರಿಯರ ಕಣ್ಣೀರಿನ ಕಡೆಗೆ ನೋಡಿಯೂ ಪ್ರಪಂಚದಿಂದ ಈ ಅನಿಷ್ಟವು ಹೋಗುವಂತೆ ದೇವರಿಗೆ ಮೊರೆಯಿಡಿರಿ.

ಪ್ಲೇಗು ಬೇಸಾಯಿ ಮುಂಬಾಯಿ, ಸಿಂಧ್, ಸಂಯುಕ್ತ ಸಂಸ್ಥಾನ, ಮಧ್ಯ ಸಂಸ್ಥಾನಗಳು ಮತ್ತು ಹೈದರಾಬಾದಿನಲ್ಲಿ ಉಲ್ಬಣ ಸ್ಥಿತಿಯಲ್ಲಿದೆ. ಜನವರಿ ತಾ. ೨೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೧,೯೪೭ ಮಂದಿ ಪ್ಲೇಗ ಬೇನೆಗೆ ತುತ್ತಾಗಿರುವರು. ಈ ಪೈಕಿ ಮುಂಬಾಯಿ ಮತ್ತು ಸಿಂಧ್ ೪೫೦೭; ಮದ್ರಾಸ್ ೭೩; ಬಂಗಾಳ ೨; ಬಿಹಾರ್ ಮತ್ತು ಒರಿಸ್ಸ ೫೯೩; ಸಂಯುಕ್ತಸಂಸ್ಥಾನ ೨೦೩೩; ಪಂಜಾಬು ೩೭; ಬರ್ಮ ೧೫೪; ಮಧ್ಯಸಂಸ್ಥಾನ ೧೦೯೧; ಮೈಸೂರು ಸಂಸ್ಥಾನ ೬೫೯; ಹೈದರಾಬಾದ್ ೩೬೭೧; ಮಧ್ಯಹಿಂದೂಸ್ಥಾನ ೬೧೫; ಮತ್ತು ರಾಜಪುತಾನ ೧೭ ಮರಣಗಳಾಗಿರುವವು.

ತಾ. ೨೯ರಲ್ಲು ಸಂಯುಕ್ತ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಲೆಪ್ಟನೆಂಟ-ಗವರ್ನರಾದ ಸರ್. ಮೆಸ್ಟನರು "ರೌಂಡ್ ಟೇಬಲ್" ಚಳವಳದಲ್ಲಿ ಸರಕಾರಿ ಆಫೀಸರರು ಸೇರಕೂಡದೆಂತ ಇಂಡಿಯಾ ಸರಕಾರದವರು ಅಭಿಪ್ರಾಯಪಟ್ಟಿರುತ್ತಾರೆ, ತನ್ನ ಅಭಿಪ್ರಾಯವು ಅದೇ ಎಂಬದಾಗಿ ಹೇಳಿರುವರು. ಬಹುಮಾನಪಟ್ಟ ಮಿ॥ ಹೆರಿಸರವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಮೈಸೂರು ಮಹಾರಾಜರವರು ಯುದ್ಧದ ಬಗ್ಗೆ ಪುನಃ ೧೦ ಲಕ್ಷ ರೂಪಾಯಿಗಳನ್ನು ದಾನ ಮಾಡಿರುತ್ತಾರೆ.

ವರ್ಣಾಶ್ರಮ ಧರ್ಮ ಸಭೆ.

ಗೆಯ್ಮೆಕರಾರಿನ ಪದ್ಧತಿಯನ್ನು ೫ ವರ್ಷಗಳ ವರೆಗೆ ನಿಲ್ಲಿಸುವ ಹಾಗಿಲ್ಲವೆಂದು ಫಿಜಿ ಸರಕಾರದವರಿಗೆ ತಕ್ಕ ಭರವಸೆ ಸಿಕ್ಕಿದೆ ಎಂಬದಾಗಿ ಮಿ| ಅಂಡ್ರ್ಯೂಸರು ಪ್ರಕಟಿಸಿದ ವಾರ್ತೆಯ ಸತ್ಯವೆಂಬುದು ಕಳೆದ ಮಾರ್ಚ ತಿಂಗಳಲ್ಲಿ ವಸಾಹತಿಗಳ ಸೆಕ್ರೆಟರಿಯಾಗಿದ್ದ ಮಿ| ಬೊನರ್ ಲಾರವರು ಫಿಜಿ ಸರಕಾರಕ್ಕೆ ಬರದ ಪತ್ರದಿಂದ ಗೊತ್ತಾಗುತ್ತದೆ. ಆ ಪತ್ರದ ಸಾರಾಂಶವು ಈ ರೀತಿಯದು. "ಗೆಯ್ಮೆಕರಾರಿನ ಪದ್ಧತಿಯ ಬದಲು ಇತರ ಯಾವ ಪದ್ಧತಿಯನ್ನು ರೂಢಿಗೆ ತರಬಹುದೆಂಬದಾಗಿ ಆಲೋಚಿಸುವ ಬಗ್ಗೆ ಒಂದು ಇಂಟರ್‌ಡಿಪಾರ್ಟಮೆಂಟಲ್ ಕಮಿಟಿಯನ್ನು ರೂಪಿಸಬೇಕೆಂಬ ಸಲಹೆಗೆ ನಾನು ಒಪ್ಪುತ್ತೇನೆ. ತನ್ಮಧ್ಯೆ ಈಗಲಿರುವ ಗೆಯ್ಮೆಕರಾರು ಪದ್ಧತಿಯು ೫ ವರ್ಷಗಳ ಕಾಲ ಮುಂದರಿಯಲಿ, ಮತ್ತು ಈ ಕಾಲವು ದಾಟುವಾಗ ಅಂತ್ಯವಾಗಲಿ".

ದಕ್ಷಿಣ ಹಿಂದೂಸ್ಥಾನ.

ಇದೇ ತಾ. ೨ರಲ್ಲು ಮದ್ರಾಸಿನ ಗೋಖಲೆಹೋಲಿನಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಲಿಕ್ಕಿದ್ದಿತು. ಈ ಸಭೆಯಲ್ಲಿ ಮಿ| ಬಿ. ಪಿ. ವಾಡ್ಯರವರು ಒಂದು ಉಪನ್ಯಾಸವನ್ನು ಮಾಡಲಿಕ್ಕಿದ್ದರು. ಮಿಸೆಸ್ ಅನ್ನಿಬೆಸೆಂಟರು ಈ ಸಭೆಯ ಅಧ್ಯಕ್ಷರಾಗಲಿಕ್ಕಿದ್ದರು. ಆದರೆ ಆ ದಿನವೇ ಮದ್ರಾಸ್ ಸರಕಾರದವರು ಮಿ| ವಾಡ್ಯರವರಿಗೆ ಒಂದು ನೋಟೀಸು ಕಳುಹಿಸಿಕೊಟ್ಟರು. ಈ ನೋಟೀಸಿನಲ್ಲಿ "ಈ ದಿನ ಮದ್ರಾಸ್ ಪಟ್ಟಣದಲ್ಲಿ ಕೂಡುವ ಒಂದು ಸಭೆಯಲ್ಲಿ ನೀವು ಹೋಗಿ ಭಾಷಣ ಕೊಡಲಿಕ್ಕಿರುವದು ಸರಕಾರದವರ ತಿಳುವಳಿಕೆಗೆ ಬಂದಿದೆ. ಆದರೆ ನೀವು ಅಂಥಾ ಸಭೆಗೆ ಹೋಗುವದು ವ ಅಂಥಾ ಸಭೆಯಲ್ಲಿ ಪಾಲು ತಕ್ಕೊಳ್ಳುವದು ಲೋಕಹಿತಕ್ಕೆ ಹಾನಿಯನ್ನು ತರುವದೆಂತ ಗವರ್ನರ ಕೌನ್ಸಿಲ್ ಸಭೆಯವರು ಅಭಿಪ್ರಾಯಪಡುವದರಿಂದ ೧೯೧೫ನೇ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ರೂಲು ೩ರ ಆಧಾರದ ಮೇಲೆ ಅಂಥ ಸಭೆಗೆ ನೀವು ಹಾಜರಾಗಕೂಡದೆಂತ ಸರಕಾರದವರು ಆಜ್ಞಾಪಿಸಿರುತ್ತಾರೆ" ಎಂಬದಾಗಿ ಸೂಚಿಸಲಾಗಿತ್ತು. ಅಷ್ಟೇ ಅಲ್ಲ, ಮದ್ರಾಸಿನಲ್ಲಿರುವ ಯಾವ ವರ್ತಮಾನಪತ್ರವಾದರೂ ಮಿ| ವಾಡ್ಯರವರ ಭಾಷಣವನ್ನು ಪ್ರಕಟಿಸಕೂಡದೆಂತ ಪ್ರತಿ ಒಂದು ವರ್ತಮಾನ ಪತ್ರಿಕೆಗಳಿಗೆ ಸರಕಾರದವರು ಇದೇ ವಿಧಾನದ ಆಜ್ಞೆಯನ್ನು ಕಳುಹಿಸಿಕೊಟ್ಟಿದ್ದರು. ಮಿಸೆಸ್ ಅನ್ನಿಬೆಸೆಂಟರವರಿಗೂ ಸರಕಾರದವರು ಮಿ| ವಾಡ್ಯರಿಗೆ ಕಳುಹಿಸಿಕೊಟ್ಟ ವಿಧಾನದ ನೋಟೀಸನ್ನು ಕಳುಹಿಸಿಕೊಟ್ಟು ಇಂಥಾ ಸಭೆಯಲ್ಲಿ ಅಧ್ಯಕ್ಷರಾಗಕೂಡದೆಂತ ಅವರಿಗೆ ಆಜ್ಞಾಪಿಸಿರುತ್ತಾರೆ. ಅದಲ್ಲದೆ ಪೋಲಿಸ್ ಕಮಿಷನರು ಗೋಖಲೆ ಹೋಲನ್ನು ಆ ದಿನ ಮುಚ್ಚಿಬಿಟ್ಟು ಆ ದಿನ ಅಲ್ಲಿ ಸಭೆ ಕೂಡದ ಹಾಗೆ ಮನ್ನಾ ಮಾಡಿಯದೆಂಬ ನೋಟೀಸನ್ನು ಹಚ್ಚಿಸಿ ಪೋಲೀಸಿನವರ ಕಾವಲನ್ನು ಇಟ್ಟಿದ್ದರು. ಹೀಗೆ ಆ ದಿನ ಗೋಖಲೆ ಹೋಲಿನಲ್ಲಿ ಯಾವ ಮೀಟಿಂಗೂ ನಡೆಯಲಿಲ್ಲ.

ಮೈಸೂರು ಸಂಸ್ಥಾನದ ಪೂರ್ವ ಸರಹದ್ದಿನಲ್ಲಿ ಮದ್ರಾಸ್ ಅಧಿಪತ್ಯದ ಕೊನೆ ತಾಲೂಕಿನಲ್ಲಿರುವ ಊರುಗಳಿಗೆ ಮೈಸೂರು ದೇಶದಲ್ಲಿಂದ ಪ್ಲೇಗುಸೋಂಕುಳ್ಳ ಜನರೂ ಸಾಮಗ್ರಿಗಳೂ ಪದೇ ಪದೇ ಹೋಗುತ್ತಿರುವದರಿಂದ ಮದ್ರಾಸ್ ಅಧಿಪತ್ಯದಲ್ಲಿ ಪ್ಲೇಗು ಪ್ರಸರಿಸಲು ಅವಕಾಶವಾಗಿರುತ್ತದೆ. ಆದಕಾರಣ ಕಠಿಣವಾದ ಕೆಲವು ನಿರ್ಬಂಧಗಳನ್ನೇರ್ಪಡಿಸಬೇಕೆಂದು ಕೆಲವು ಜಿಲ್ಲಾ ಕಲೆಕ್ಟರುಗಳು ಮದ್ರಾಸ್ ಗವರ್ನಮೆಂಟಿಗೆ ಬರಕೊಂಡಿದ್ದರು. ಅದರ ಮೇಲೆ ಸರಕಾರದವರು "ಪ್ಲೇಗು ಸೋಂಕುಳ್ಳ ಪ್ರದೇಶಗಳಿಂದ ಮದ್ರಾಸ್ ಎಲ್ಲೆಕಟ್ಟಿನೊಳಗೆ ಪ್ರವೇಶಿಸುವವರ ಬಟ್ಟೆಗಳನ್ನು ಬಿಸಿಲಲ್ಲಿ ಚೆನ್ನಾಗಿ ಒಣಗಿಸಬೇಕು, ೫ ದಿವಸಗಳವರೆಗೆ ಅವರು ಗ್ರಾಮದೊಳಗೆ ಪ್ರವೇಶಿಸದೆ ಹೊರಗಿರುವಂತೆ ಮಾಡಬೇಕು. ಆ ಅವಧಿಯೊಳಗಾಗಿ ಊರಿನೊಳಗೆ ಹೋಗಬೇಕೆನ್ನುವವರ ಬಟ್ಟೆಗಳನ್ನು ಬಿಸಿನೀರಲ್ಲಿ ಒಂದು ಗಂಟೆಯವರೆಗೆ ಅದ್ದಿ ಬಿಸಿಲಲ್ಲಿ ಚೆನ್ನಾಗಿ ಒಣಗಿಸಿ ಕಳುಹಿಸಬಹುದು. ಸೋಂಕಿನ ಪ್ರದೇಶಗಳಿಂದ ಬರುವ ಸಾಮಾನುಗಳನ್ನು ಅದರೊಳಗೆ ಇಲಿ ಮೊದಲಾದವುಗಳು ಇದೆಯೋ ಇಲ್ಲವೋ ಎಂಬದನ್ನು ಪರೀಕ್ಷಿಸಿ, ಅಂಥಾ ಪ್ರಾಣಿಗಳಿದ್ದರೆ ನಾಶಪಡಿಸಬೇಕು, ಅದಕ್ಕಾಗಿ ಸಾಮಗ್ರಿಗಳು ತುಂಬಿದ ಚೀಲ ಮೊದಲಾದವುಗಳನ್ನು ಬಿಚ್ಚಿ ಒಡೆದು ತೋರಿಸಬೇಕಾದುದಿಲ್ಲ. ಅಂಥ ಚೀಲಗಳನ್ನು ಒಂದೊಂದು ಪಕ್ಕಕ್ಕೆ ಎರಡೆರಡು ಗಂಟೆಯಂತೆ ಬಿಸಿಲ ಕಡೆ ತಿರುಗಿಸಿ ಕಾದ ಮಳಲಿನ ಮೇಲೆ ಹಗಲುಹೊತ್ತು ಹಾಕಿದ್ದು ಬಳಿಕ ಒಳಗೆ ಸಾಗಿಸಬಹುದು" ಎಂತ ಅಪ್ಪಣೆಮಾಡಿರುತ್ತಾರೆ.

ಮೈಸೂರು ಸರಕಾರದ ಅರ್ಥಸಾಧಕ ಸಭೆಯವರಿಂದ ಪ್ರಕಟವಾಗುತ್ತಿದ್ದ "ಅರ್ಥಸಾಧಕ ಪತ್ರಿಕೆ" ಎಂಬ ಮಾಸಪತ್ರಿಕೆಯನ್ನು ಇದೇ ತಿಂಗಳಿಂದ ವಾರಪತ್ರಿಕೆಯಾಗಿ ಮಾರ್ಪಡಿಸಲು ಮೈಸೂರು ಸರಕಾರದವರು ಏರ್ಪಾಡು ಮಾಡಿರುವರು.

ಮದರಾಸಿನಲ್ಲಿ ಎ. ರಾಜನಾಥಮುದಲಿ ಎಂಬವನು ತನ್ನನ್ನು ತಾನೇ ಪಬ್ಲಿಕ್ ವರ್ಕ್ಸ ಇಲಾಖೆಯ ಓವರ್ಸಿಯರನೆಂದು ಹೇಳಿಸಿಕೊಂಡು ಈ ಸಂಬಂಧ ಆಯಾ ಕಂಟ್ರಾಕ್ಟರುಗಳಿಂದ ಆಯಾ ಕೆಲಸಗಳ ಬಗ್ಗೆ ಟೆಂಡರುಗಳನ್ನೂ ಠೇವಣಿಗಳನ್ನೂ ತೆಗೆದುಕೊಂಡು ಸುಮಾರು ೨೨,೦೦೦ ರೂಪಾಯಿ ಚಿಲ್ಲರೆ ಹಣವನ್ನು ಸುಲಿಗೆಮಾಡಿದ್ದನು. ಕಡೆಗೆ ಈ ವಿಷಯವು ಹೊರಬಿದ್ದು ಸದರಿ ಮುದಲಿಯಾರನ ಮೇಲೆ ಮದ್ರಾಸಿನ ಪೋಲಿಸ್ ಕೋರ್ಟಿನ ಮೇಜಿಸ್ಟ್ರೇಟರಾಗಿರುವ ಮ, ರಾ. ಪಿ. ನಾರಾಯಣಮೆನೋನರಲ್ಲಿ ವಿಚಾರಣೆ ನಡೆಯಿತು. ಮೇಜಿಸ್ಟ್ರೇಟರು ಅಪರಾಧಿಗೆ ಒಟ್ಟಿಗೆ ೨೪ ತಿಂಗಳ ಸಜೆಯನ್ನೂ ರೂ. ೯೫೦ ಜುಲುಮಾನೆಯನ್ನೂ ವಿಧಿಸಿದರು. ಜುಲುಮಾನೆ ಕೊಡತಪ್ಪಿದರೆ ಅಪರಾಧಿಯು ಹೆಚ್ಚಿಗೆ ೪ ವರ್ಷ ೧೫ ದಿವಸಗಳ ಸಜೆ ಅನುಭವಿಸಬೇಕಾಗುವದು.

ಪುರಾತನ ಕಾಲದ ಶಿಲ್ಪ ಕೆಲಸಗಳು ಮದ್ರಾಸ್ ಸಂಸ್ಥಾನದ [illegible] ಗಳಲ್ಲಿ ಅಲ್ಲಲ್ಲಿ ಬಿದ್ದು ಗ್ರಾಮಸ್ಥರಿಂದ ಕೆಲವು ವೇಳೆ [illegible] ಗಳ ಬಗ್ಗೆ ಉಪಯೋಗಿಸಲ್ಪಡುತ್ತದೆಂಬುದು ಸರಕಾರದವರ ತಿಳುವಳಿಕೆಗೆ [illegible] ದರಿಂದ ಸರಕಾರದವರು ಅಂಥಾ ಶಿಲ್ಪ ಕೆಲಸಗಳನ್ನು [illegible] ವರು. [illegible] ಅಂಥಾ ಶಿಲ್ಪ ಕೆಲಸಗಳು [illegible] ಸುವ ಬಗ್ಗೆ [illegible] ಆಫೀಸರರು ಆಯಾ [illegible]

ಅನುಕ್ರಮಣಿಕೆ.

	ಪಾನು
ಅಗ್ರಲೇಖ—ಪಬ್ಲಿಕ್ ಸರ್ವಿಸ್ ಕಮಿಷನ್	೧
ಸ್ಫುಟವಿಚಾರ:—	
೧. ಸಾಮ್ರಾಜ್ಯ ಪರಿಷತ್ತಿಗೆ ಹಿಂದೂಸ್ಥಾನದ ಪ್ರತಿನಿಧಿಗಳು	,,
೨. ಅವರ ಅಧಿಕಾರ	,,
೩. ಅಪ್ಪಣೆ ಕೆಲಸ	,,
೪. ಮೈಸೂರು ಕೈಗಾರಿಕೆಯ ಅಭಿವೃದ್ಧಿ	,,
೫. ಗೇಣಿ ಕರಾರು ಪದ್ಧತಿ	೧-೫
೬. ಜಿಲ್ಲಾ ವಿಭಜನೆ	,,
೭. ಮಂಗಳೂರು ಬಂದರು	,,
ಸ್ಥಳಿಕ—ಮಂಗಳೂರು	,,
ವರ್ತಮಾನ ಸಂಗ್ರಹ	೪
ಬಾತಮಿ ಮತ್ತು ಪತ್ರವ್ಯವಹಾರ	೬

ಸ್ವದೇಶಾಭಿಮಾನಿ.

ಶಕ ೧೮೩೮ ಮಾಘ ಬ. ೨ ಶುಕ್ರವಾರ.

ಪಬ್ಲಿಕ್ ಸರ್ವಿಸ್ ಕಮಿಷನು.

(ಜಸ್ಟಿಸ್ ಅಬುದುಲ್ ರಹಿಮರ ಸೂಚನೆಗಳು.

ಪಬ್ಲಿಕ ಸರ್ವಿಸ ಕಮಿಷನಿನ ರಿಪೋರ್ಟು ಯಾವ ತರದ್ದೆಂಬುದನ್ನು ನಾವು ಹಿಂದಿನ ಸಂಚಿಕೆಯಲ್ಲಿ ಆದಷ್ಟು ಸಂಕ್ಷೇಪದಿಂದ ತೋರಿಸಿದ್ದೇವೆ. ಅದನ್ನು ತೋರಿಸುವಾಗ ಅದರ ದೋಷಾವಿಷ್ಕರಣದ ಬಗ್ಗೆ ನಾವು ಹೆಚ್ಚಿನ ಟೀಕೆಯನ್ನು ಮಾಡುವ ಧೈರ್ಯವನ್ನು ವ್ಯಕ್ತಪಡಿಸಲಿಲ್ಲೆಂಬುದು ನಿಜ. ಆದರೆ ಹಿಂದೂಸ್ಥಾನದೊಳಗಿನ ಸಾಮಾನ್ಯವಾಗಿ ಎಲ್ಲ ಸುಶಿಕ್ಷಿತ ಲೋಕಮತವು ಈ ರಿಪೋರ್ಟು ಹೊರಗೆ ಬಿದ್ದಂದಿನಿಂದ ಬೇಸತ್ತು ಹೋಗಿದೆ. ಯುದ್ಧದಂಥ ಇಕ್ಕಟ್ಟಿನ ಸಮಯದಲ್ಲಿ ಇಂಥ ರಿಪೋರ್ಟನ್ನು ಸರಕಾರವು ಪ್ರಸಿದ್ಧಿಸಿದ್ದು ಒಳ್ಳೇದಲ್ಲ, ಎಂಬುದಾಗಿ ರಾಜನಿಷ್ಠವಾದ ಈ ಹಿಂದೀ ದೇಶವು ಏಕಸ್ವರದಿಂದ ಹೇಳಹತ್ತಿದೆ. ಈ ರಿಪೋರ್ಟಿನ ಸ್ವರೂಪವು ನಾವು ಕಳೆದಸಾರಿ ಹೇಳಿದಂತೆ ಹಿಂದೂಸ್ಥಾನಕ್ಕೆ ಅಷ್ಟೊಂದು ಗುಣದ್ದಲ್ಲದಿದ್ದರೂ ಈ ಕಮಿಷನರುಗಳಲ್ಲಿ ಒಬ್ಬರಾದ ನ್ಯಾ. ಮೂ. ಅಬದುಲ್ ರಹಿಮ್ ಇವರ ಕೆಲವು ಸೂಚನೆಗಳು ನಿಜವಾಗಿ ವಿಚಾರಣೀಯ ಮತ್ತು ಉಪಯುಕ್ತವಾಗಿವೆ. ಅವನ್ನು ಕೆಳಗೆ ಕೊಡುತ್ತೇವೆ.

೧. ೧೮೩೩ನೆಯ ಇಸವಿಯ ಚಾರ್ಟರ ಎಕ್ಟ ಹಾಗು ೧೮೫೮ನೆಯ ಇಸವಿಯ ರಾಣೀ ಸರಕಾರದ ಜಾಹಿರನಾಮೆ ಇವುಗಳಲ್ಲಿ ಹೇಳಿದ ಪಾತ್ರತೆಯು ಜನರಲ್ಲಿ ಕಂಡುಬಂದರೆ ಆಗ ಅವರಿಗೆ ಯಾವ ಪಂಕ್ತಿ ಪ್ರಪಂಚವಿಲ್ಲದೆ ಸರಕಾರಿ ಜಾಗೆಗಳನ್ನು ಕೊಡಬೇಕು. ಹಾಗೆ ಕೊಡಲು ಈಗ ಇರುವ ಅಡ್ಡಿಗಳನ್ನು ತೆಗೆದು ಹಾಕಬೇಕು. (೨) ಬಂಗಾಲದ ನೌಕಾಸೈನ್ಯದಲ್ಲಿ ಸೇರಲು ಹಾಗು ಇಂಗ್ಲಂಡದೊಳಗಿನ ಪೋಲಿಸ ಖಾತೆಯಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಹಿಂದೀ ಜನರಿಗೆ ಇರುವ ಪ್ರತಿಬಂಧವನ್ನು ತೆಗೆದುಹಾಕಬೇಕು. (೩) ಪ್ರಾಂತಿಕ ಸರ್ವಿಸಿನಂಥ ಯಾವ ಮೇಲು ತರಗತಿಯ ಸ್ಥಾನಗಳು ಹಿಂದೂಸ್ಥಾನದಿಂದಲೆ ತುಂಬಿ ಹೋಗುತ್ತವೊ ಅವರು ಕಡಿಮೆಪಕ್ಷಕ್ಕೆ ಬಿ. ಎ. ಪರೀಕ್ಷೆಯನ್ನು ಪಾಸಾದವರಿರಬೇಕು. ಎಂಗ್ಲೊ ಇಂಡಿಯನ್ ಹಾಗು ಯುರೋಪಿಯನರ ಸೌಕರ್ಯಕ್ಕಾಗಿ ಬಿ. ಎ. ಗಿಂತ ಕೆಳಗಿನ ತರಗತಿಯವರಿಗೆ ಯಾವ ಪ್ರವೇಶವಿಟ್ಟಿರುವುದೊ ಅದನ್ನಿಡಬಾರದು. (೪) ಇಲ್ಲಿಯ ಸುರಾಜ್ಯ ವ್ಯವಸ್ಥೆಯ ಜವಾಬದಾರಿಯು ಬ್ರಿಟಿಷ್ ಜನರ ಮೇಲೆ ಹೊಂದಿಕೊಂಡಿದೆಂದು ಅಥವಾ ಬ್ರಿಟಿಷ್ ರಾಜನೀತಿಯ ಧೋರಣವನ್ನು ಕಾಪಾಡುವ ದೆಸೆಯಿಂದ ಇಂಡಿಯನ್ ಸಿ. ಸರ್ವಿಸ್, ಪೋಲೀಸ್, ಶಿಕ್ಷಣ, ವೈದ್ಯಕ, ರೈಲ್ವೆ ಸರ್ವೆ ಇತ್ಯಾದಿ ಖಾತೆಯೊಳಗಿನ ಜಾಗೆಗಳು ವಿಲಾಯತಿಯಿಂದ ನೇಮಿಸಲ್ಪಡಬೇಕೆಂಬ ಮತವು ನನಗೆ ಸಮ್ಮತವಲ್ಲ, ಹಿಂದೂಸ್ಥಾನದ ಅಧಿಕಾರಿಗಳನ್ನು ಹಿಂದೂಸ್ಥಾನದಿಂದಲೆ ತೆಕೊಳ್ಳಬೇಕು. (೫) ಮೇಲಿನ ದೃಷ್ಟಿಯಿಂದ ಹಿಂದೂಸ್ಥಾನದೊಳಗಿನ ಸರಕಾರಿ ಖಾತೆಗಳನ್ನು ಎರಡು ವಿಭಾಗ ಮಾಡಿ ಮೊದಲನೆಯದರಲ್ಲಿ ಸಿವಿಲ್ ಸರ್ವಿಸಿನ ದಂಡಾಧಿಕಾರಸ್ಥರ ಮತ್ತು ವರಿಷ್ಠ ಸರಕಾರದ ಪೋಲಿಸರ ಸಮಾವೇಶವಾಗತಕ್ಕದ್ದು; ಮತ್ತು ಈ ಜಾಗೆಗಳನ್ನು ಇಂಗ್ಲಂಡ ಹಾಗು ಹಿಂದೂಸ್ಥಾನ ಈ ಎರಡು ದೇಶಗಳಿಂದ ಭರಾಯಿಸಿಕೊಳ್ಳಬೇಕು. ಎರಡನೆಯ ವರ್ಗದಲ್ಲಿ ಬೇರೆ ಎಲ್ಲ ಖಾತೆಗಳು ಬರುತ್ತವಾದ್ದರಿಂದ ಅವುಗಳನ್ನು ಇಲ್ಲಿಯ ನೌಕರರಿಂದಲೆ ಭರಾಯಿಸಬೇಕು. (೬) ಲೆ. ಗವರ್ನರುಗಳು, ಚೀಫ ಕಮಿಶನರುಗಳು, ಕಾರ್ಯಕಾರಿ ಕೌನ್ಸಿಲಿನ ಸಭಾಸದರು, ಹೈಕೋರ್ಟ ಜಡ್ಜರುಗಳು, ಪ್ರೊಫೆಸರುಗಳು ಇಂಥ ಹುದ್ದೆದಾರರ ನೇಮಕವು ಆಯಾ ಖಾತೆಗಳೊಳಗಿನ ಕೆಳಗಿನ ಅಧಿಕಾರಿಗಳಿಂದಲೆ ಆಗತಕ್ಕದ್ದೆಂಬ ನಿರ್ಬಂಧವಿರಕೂಡದು. (೭) ಮೇಲಿನ ತರಗತಿಯಲ್ಲಿ ಹೊಸ ಉತ್ಸಾಹವುಳ್ಳವರನ್ನು ತಕ್ಕೊಳ್ಳುವ ಏರ್ಪಾಡನ್ನು ಮಾಡುವುದು ಅವಶ್ಯವು. ಈ ವಿಷಯದಲ್ಲಿ ಪೋಸ್ಟು ಮತ್ತು ತಂತಿ ಈ ಖಾತೆಗಳಿಗಾಗಿಯೆ ಬೇರೊಂದು ವಿಧದ ಏರ್ಪಾಡು ಅವಶ್ಯವಿಲ್ಲ. (೮) ಬೇಸಾಯ, ಶಾಲಿಹೋತ್ರ, ಎಂದರೆ ವೆಟರ್ನರಿ, ಪ್ರೊಫೆಸ್ಸರ [illegible] ವಿಷಯಗಳ ಶಿಕ್ಷಣವು ಹಿಂದೂಸ್ಥಾನದಲ್ಲಿಯೆ ಸಿಗುವಂತೆ ವ್ಯವಸ್ಥೆಯಾಗುವ ತನಕ ಈ ವಿಷಯಗಳನ್ನು ಪರದೇಶದಲ್ಲಿ ಹೋಗಿ ಕಲಿಯಲು ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯನ್ನು ಕೊಡಬೇಕು; ಮತ್ತು ಇಂಥ ವಿದ್ಯಾರ್ಥಿಗಳು ಪೂರ್ಣ ತರಬೇತು ಹೊಂದಿಬಂದ ಮೇಲೆ ಅವರನ್ನು ತಕ್ಕ ಜಾಗೆಗಳಿಗೆ ನೇಮಿಸಬೇಕು. (೯) ಐ. ಸಿ. ಎಸಿನ ಪರೀಕ್ಷೆಯು ವಿಲಾಯತಿಯಲ್ಲಿ ಆಗುವಾಗಲೆ ಇಲ್ಲಿಯೂ ಆಗಬೇಕು. ಪ್ರಾಂತಿಕ ಸರ್ವಿಸಿನ ದಂಡಾಧಿಕಾರಿ, ಸರ್ವೆ ಡಿಪಾರ್ಟಮೆಂಟ್ ಉತ್ತರ ಹಿಂದೂಸ್ಥಾನದೊಳಗಿನ ಉಪ್ಪು-ಖಾತೆ ಇವುಗಳನ್ನು ಸ್ವತಂತ್ರ ಪರೀಕ್ಷೆಯ ಸ್ಪರ್ಧೆಯ ಮೇಲಿಂದಲೆ ಕೊಡಬೇಕಾದುದು. ಯಾವ ಪ್ರಾಂತಿಕ ಖಾತೆಗಳಲ್ಲಿ ಉದ್ಯೋಗಸ್ಥರ ಸಂಬಂಧವು ಸಾಮಾನ್ಯವಾಗಿ ಜನರೊಡನೆ ಬರುವುದೋ ಮತ್ತು ಎಲ್ಲಿ ವಿಶ್ವವಿದ್ಯಾಲಯದ ಪರೀಕ್ಷೆಯಿಂದಲೆ ನಿರ್ವಾಹವಾಗುವಹಾಗಿದೆಯೊ ಅಂಥ ಜಾಗೆಗಳನ್ನು ಆಯಾ ಪ್ರಾಂತದೊಳಗಿನವರಿಗೆ ಕೊಡಬೇಕು. (೧೦) ಈಗ ಉಮೇದುವಾರರ ನೇಮಕವು ವರಿಷ್ಠ ಅಧಿಕಾರಸ್ಥನ ಕೈಯಲ್ಲಿರುವುದು. ಈ ಪದ್ಧತಿಯನ್ನು ನಿಲ್ಲಿಸಿ ಆ ಉಮೇದುವಾರರ ನೇಮಕಕ್ಕೆ ಒಂದು ಕಮಿಟಿಯನ್ನು ಏರ್ಪಡಿಸಬೇಕು. ಆ ಕಮಿಟಿಯಲ್ಲಿ ಹಿಂದೀ ಗೃಹಸ್ಥರ ಸಂಖ್ಯೆಯು ಹೆಚ್ಚಿರಬೇಕು. (೧೧) ಇಂಗ್ಲಂಡದಲ್ಲಿ ಚುನಾಯಿಸಿದ ಸಿವಿಲಿಯನರಿಗೆ ಉಮೇದುವಾರಿಗೆ ಮೂರು ವರ್ಷ ಅವಧಿಯು ಕೊಟ್ಟಿರುವರು; ಅದನ್ನು ಎರಡು ವರ್ಷದ್ದಾಗಿ ಏರ್ಪಡಿಸಬಹುದು. ಹಿಂದೂಸ್ಥಾನದಲ್ಲಿ ಪಾಸಾದ ಸಿವಿಲ್ ಸರ್ವೆಂಟರು ಇಂಗ್ಲಂಡದಲ್ಲಿ ಹೋಗಿ ಎರಡೆ ವರ್ಷ ಉಮೇದ್ವಾರಿಕೆಯದ ಶಿಕ್ಷಣವನ್ನು ಹೊಂದಬೇಕು.

ಜಸ್ಟಿಸ ಅಬದುಲ್ ರಹಿಮರು ಮೇಲಿನ ಈ ೧೧ ಸೂಚನೆಗಳನ್ನು ಮಾಡಿ ಆ ಸೂಚನಾ ಪತ್ರವನ್ನು ರಿಪೋರ್ಟಿಗೆ ಜೋಡಿಸಿರುವರು, ಅಷ್ಟೆ ಅಲ್ಲದೆ ಬೇರೆ ವಿಲಾಯತಿ ದೊರೆಗಳು ತಯಾರಿಸಿರುವ ರಿಪೋರ್ಟಿನ ಮೇಲೆ ಇವರು ತಮ್ಮ ರುಜು ಹಾಕಲಿಲ್ಲ. ದಿವಂಗತ ಗೋಖಲೆಯವರು ಒಬ್ಬರು ಕಮಿಶನರುಗಳಾಗಿದ್ದರು. ಈ ರಿಪೋರ್ಟು ಹೊರಗೆ ಬೀಳುವಷ್ಟರೊಳಗೆ ಅವರು ಮೃತಪಟ್ಟ ಕಾರಣ ಅವರ ಸಹಿಯನ್ನಾಗಲಿ ಕಡಿಮೆ ಪಕ್ಷಕ್ಕೆ ಅವರ ಅಸಮ್ಮತಿಯನ್ನಾಗಲಿ ಪಡೆದುಕೊಳ್ಳುವ ಭಾಗ್ಯವು ಈ ರಿಪೋರ್ಟಿಗಿರಲಿಲ್ಲ! ಆದರೂ ಕಳೆದ ಸಂಚಿಕೆಯಲ್ಲಿ ತೋರಿಸಿದ ಈ ರಿಪೋರ್ಟಿನ ಅನುತ್ಸಾಹದ ಸ್ವರೂಪವು ಮಾನ್ಯ ಗೋಖಲೆಯವರಿಗೂ ಸಮ್ಮತಿರಲಿಲ್ಲೆಂದು ಜ. ರಹಿಮರು ತಮ್ಮ ಸೂಚನಾ ಪತ್ರಕದಲ್ಲಿ ಹೇಳಿರುತ್ತಾರೆ, ಮಾತ್ರವಲ್ಲ; ಅವರ ಮತವು ಸಹ ನ್ಯಾ. ಮೂ. ರಹಿಮರ ಮತದಂತೆಯೆ ಇತ್ತೆಂದು ನ್ಯಾಯಮೂರ್ತಿಗಳು ಪ್ರಸಿದ್ಧ ಮಾಡಿದ್ದಾರೆ. ಹೇಗೂ ಇರಲಿ. ಇದೊಂದು ಸಂಗತಿಯು ನಿರ್ವಿವಾದವು:—ಹಿಂದೂಸ್ಥಾನಕ್ಕೆ ಈಗ ಸಣ್ಣ ಹುಡುಗರಿಗೆ ಕೊಡುವಂತೆ ಬಿಸ್ಕುಟಿನ ತುಂಡುಗಳಿಂದ ಅಥವಾ ಪೆಪ್ಪರಮಿಂಟಿನ ಚೂರುಗಳಿಂದ ಸಮಾಧಾನವಾಗುವಹಾಗಿಲ್ಲ. ಹಿಂದೂಸ್ಥಾನದಲ್ಲಿ ಸ್ವರಾಜ್ಯದ ಪಾತ್ರತೆಯು ಬೇಗ ಬೇಗನೆ ಬರುವಂತೆ ರಾಜ್ಯಕಾರಭಾರದ ಬಾಗಿಲನ್ನು ಆದಷ್ಟು ವಿಸ್ತಾರವಾಗಿ ತೆರೆದು ಕೊಡಬೇಕಾಗಿದೆ. ಅದನ್ನು ತೆರೆಯುವಾಗ ನಮ್ಮ ದಯಾಳು ಸರಕಾರವು ರಿಪೋರ್ಟಿನಲ್ಲಿ ಸೂಚಿಸಿದಂತೆ ೫೦ ಲಕ್ಷದ ಹೊಸ ವಾರ್ಷಿಕ ಹೊರೆಯನ್ನು ಇವರ ತಲೆಯಮೇಲಿಟ್ಟರೆ ಅದನ್ನು ಜ. ರಹಿಮರು ಹೇಳುವಂತೆ ಹಿಂದೂಸ್ಥಾನದಿಂದ ಸಹಿಸಲು ಸಾಧ್ಯವಿಲ್ಲ. ಹಿಂದೂಸ್ಥಾನವನ್ನು ಆಳುವದಕ್ಕಾಗಿ ಯೋಗ್ಯದ್ರವ್ಯವನ್ನು ವಸೂಲಮಾಡುವುದು ರಾಜ್ಯಕರ್ತರ ಕರ್ತವ್ಯವು. ಈ ವಿಷಯದಲ್ಲಿ ಯಾವ ಬಿರುಸು ಟೀಕಾಕಾರನಾದರೂ ವಾದಿಸನು. ಆದರೆ ಪಾತ್ರತೆಯ ಅಧಿಕಾರಗಳನ್ನು ಕೊಡುವಾಗಲೂ ಹೆಚ್ಚಿನ ಖರ್ಚು ಈ ಬಡ ಹಿಂದೂಸ್ಥಾನದ ಮೇಲೆ ತಂದುಹಾಕುವುದೆಂದರೆ ಆಕಳಿಗೆ ಬಂಡಿಸಾಲೆಯ ಎಮ್. ಎ. ಪರೀಕ್ಷೆಯಲ್ಲಿ ಪಾಸಾದವರು ಒಂದೇ ಆಕತೆಯಿಂದ ಕೊಡುವಾಗಲೂ ತೆಕೊಳ್ಳುವಾಗಲೂ ತಮ್ಮ ಲಾಭವನ್ನೆ ಮಾಡುವ ನಿಪುಣತ್ವದ ಹೋಲಿಕೆಯನ್ನು ತೋರಿಸಬೇಕಾಗುತ್ತದೆ. ಆದರೂ ನಾವು ಕೊನೆಗೆ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸ್ವಾತಂತ್ರ್ಯಪ್ರಿಯ ಮತ್ತು ಉದಾರವಾದ ಸರಕಾರವು ಈ ಅನುತ್ಸಾಹದ ರಿಪೋರ್ಟಿನ ಮೇಲೆ ಧಾರವಿಡದೆ ಜ. ರಹಿಮರು ಸೂಚಿಸಿರುವ ಸುಧಾರಣೆಗಳನ್ನು ಕೈಕೊಂಡು ಇಲ್ಲಿಯ ಪ್ರಜಾಭಿವೃದ್ಧಿಯನ್ನು ಸಾಧಿಸಬೇಕು. ರಾಜಭಕ್ತನಾದ ಒಬ್ಬ ದೇಶಭಕ್ತನು ಇದಕ್ಕಿಂತ ಹೆಚ್ಚೇನು ಅಪೇಕ್ಷಿಸುವನು?

ಸ್ಫುಟವಿಚಾರಗಳು.

೧. ವಾರ್ ಕೆಬಿನೆಟ್ ಎಂದರೆ ಸಾಮ್ರಾಜ್ಯ ಯುದ್ಧಮಂಡಲದಲ್ಲಿ ಹಿಂದುಸ್ಥಾನದ ಕಡೆಯಿಂದ ಬಿಕಾನಿರದ ಮಹಾರಾಜಾ ಸರ್ ಗಂಗಾಜಿ, ಸರ್ ಸತ್ಯೇಂದ್ರ ಪ್ರಸನ್ನ ಸಿಂಹ ಮತ್ತು ಸರ್ ಜೇಮ್ಸ್ ಮೆಸ್ಟನ್ ಈ ತ್ರಿಮೂರ್ತಿಗಳನ್ನು ಆರಿಸಿದ್ದಾರೆಂಬ ಸಂಗತಿಯನ್ನು ನಾವು ಹಿಂದೆಯೆ ವರ್ತಮಾನ ಸಂಗ್ರಹದಲ್ಲಿ ತಿಳಿಸಿದ್ದೇವೆ. ಸರ್ ಗಂಗಾಜಿ ಇವರು ಸಂಸ್ಥಾನಿಕರ ಕಡೆಯಿಂದ ಪ್ರತಿನಿಧಿಗಳಾಗಿ ಹೋಗುವುದರಿಂದ ಬ್ರಿಟಿಷ್ ಹಿಂದುಸ್ಥಾನದ ಕುರಿತು ಅವರ ಮತವು ಹೇಗೆ, ಯಾವ ತರದ್ದು ಮೊದಲಾದ ವಿಷಯವನ್ನು ವಿಚಾರಿಸುವ ಅಗತ್ಯವಿಲ್ಲ. ಸಂಸ್ಥಾನಿಕರಲ್ಲಿ ಶ್ರೀಮಂತ ಸಯಾಜಿ ಮಹಾರಾಜರು (ಬರೋಡಾ) ಇವರು ಯೋಗ್ಯರಿದ್ದರು; ಈಗ ಪ್ರತಿನಿಧಿತ್ವೇನ ಹೋಗುವವರಾದರೂ ಯೋಗ್ಯರೆ, ಅವರ ವಿಷಯದಲ್ಲಿ ಹೆಚ್ಚಾಗಿ ಯಾರ ಆಕ್ಷೇಪ ಇರಬಾರದು. ಎರಡನೆಯವರಾದ ಸರ್ ಸತ್ಯೇಂದ್ರಪ್ರಸನ್ನ ಸಿಂಹರು ಕಾರ್ಯದಕ್ಷರೆಂಬ ಸಂಗತಿಯು ಈಗ ಎಲ್ಲರಿಗೆ ತಿಳಿದ ವಿಷಯವು. ಆದರೆ ಯಾರ ಮತ್ತು ಯಾವ ಕಾರ್ಯದಕ್ಷರೆಂಬುವದರಲ್ಲಿ ಅನುಮಾನವಿದೆ. ಅಲ್ಲದೆ, ಮುಂಬಯಿಯ ರಾಷ್ಟ್ರೀಯ ಸಭೆಗೆ ಅಧ್ಯಕ್ಷರಾದಾಗಲೂ ಅದಕ್ಕಿಂತ ಮುಂಚೆ ಪ್ರೆಸ್ ಎಕ್ಟ ಮಂಜೂರಾಗುವಾಗಲೂ ಅವರ ರಾಜಕೀಯ ವಿಚಾರಗಳು ಸರ್ವ ವೇದ್ಯವಾಗಿಯೆ ಇದ್ದವು. ಆದುದರಿಂದ ಇವರಿಗಿಂತಲೂ ಬೇರೆ ಯಾರಾದರೂ ಲೋಕಪಕ್ಷದ ಮುಖಂಡರನ್ನೆ ಆರಿಸಿದ್ದಾದರೆ ಇನ್ನೂ ಒಳ್ಳೇದಿತ್ತು. ಮೂರನೆಯವರು ಸರ್ ಮೆಸ್ಟನ್ ದೊರೆಗಳು. ಇವರನ್ನು ಯಾವ ತತ್ವದಿಂದ ಆರಿಸಿ ತೆಗೆದಿದ್ದಾರೆಂಬುದು ಗೊತ್ತಾಗುವುದಿಲ್ಲ! ಒಂದು ವೇಳೆ ವಸಾಹತದ 'ಕರ್ಟಿಸ್ ಎಂಡ್ ಕೊ'ದಲ್ಲಿ ಇವರೊಬ್ಬರು ಸಹಕಾರಿಗಳಾಗಿದ್ದುದಕ್ಕೆ ಇದೊಂದು ಇನಾಮು ಆಗಿದ್ದರೆ ಈ ಚುನಾವಣೆಗೆ ಪ್ರಜೆಗಳ ಸಮ್ಮತಿ ಇಲ್ಲೆಂತಲೆ ಹೇಳಬೇಕು. ಅಂತು ಈ ಮೂರು 'ಸರ'ಗಳು ಹಿಂದುಸ್ಥಾನದ ಕಡೆಯಿಂದ ಸಾಮ್ರಾಜ್ಯದ ಯುದ್ಧಮಂಡಲದಲ್ಲಿ ವಿರಾಜಮಾನವಾಗುವವು. ಇದಾದರೂ ಒಂದು ಭಾಗ್ಯವೆ.

೨. ಆದರೆ ಈ ಭಾಗ್ಯದ ಎಷ್ಟು ಭಾಗವು ಹಿಂದುಸ್ಥಾನದ ಸೆರಗಿನಲ್ಲಿ ಬೀಳುತ್ತದೆ, ಇದು ಮಾತ್ರ ವಿಚಾರಣೀಯವೆ. ಮೊದಲು ಲೋರ್ಡ ಹಾರ್ಡಿಂಜರ ಕಾಲದಲ್ಲಿ ಮಾನ್ಯ ಶಫಿ ಇವರು ಹಿಂದುಸ್ಥಾನದ ಕಡೆಯಿಂದ ಪ್ರತಿನಿಧಿಗಳನ್ನು ಲೋಕಮತದಿಂದ ಆರಿಸಬೇಕೆಂಬುದಾಗಿ ಒಂದು ಠರಾವನ್ನು ತಂದಾಗ 'ಇಲ್ಲಿಂದ ಪ್ರತಿನಿಧಿಗಳನ್ನು ಕಳುಹಿಸೋಣಾದೀತೆಂ'ದು ಸಾಮಾನ್ಯವಾಗಿ ಒಂದು ಆಶ್ವಾಸನೆ ಸಿಕ್ಕಿತು. ಆದರೆ ಈಗ ಲೋಕಮತದಿಂದ ಚುನಾಯಿಸಿದವರಲ್ಲ, ಸರಕಾರನಿಯುಕ್ತರಾದ ಈ ಇಬ್ಬರು ಪ್ರತಿನಿಧಿಗಳಿಗೆ ಯುದ್ಧ ಮಂಡಲದಲ್ಲಿ ಕುಳಿತು ಚರ್ಚಿಸುವ ಅಧಿಕಾರವಿಲ್ಲ. ಇವರು ಸ್ಟೇಟ ಸೆಕ್ರೆಟರಿಗಳ ಎಡಬಲದಲ್ಲಿ ಅಲಂಕರಿಸಿ ಅವರಿಗೆ ಖಾಸಗಿಯಾಗಿ ತಮ್ಮ ಮತಗಳನ್ನು ತಿಳಿಸಬಹುದು—ಎಂಬುದಾಗಿ ಏರ್ಪಡಿಸಿರುವುದನ್ನು ನೋಡಿದರೆ ಹಿಂದೂಸ್ಥಾನದ ಸೆರಗಿನಲ್ಲಿ ಈ ಪ್ರತಿನಿಧಿಗಳ ನೇಮಕದ ಭಾಗ್ಯದಿಂದ ಎಷ್ಟು ಭಾಗವು ಬಿದ್ದೀತೆಂಬುದು ಗೊತ್ತಾಗದು. ವಸಾಹತದವರು ಯುದ್ಧ ಮಂಡಲದಲ್ಲಿ ಕುಳಿತು ತಮ್ಮ ಹಿತಾಹಿತ ಸಂಗತಿಗಳನ್ನು ಚರ್ಚಿಸುವಾಗ ಇಲ್ಲಿಯವರು ಸ್ಟೇಟ ಸೆಕ್ರೆಟರಿಯ ಪರದೆ ಅಥವಾ ಗೋಡೆಯ ಅಡ್ಡ ನಿಂತು ಬರುವುದಾದರೆ ಈ ಪ್ರತಿನಿಧಿಗಳ ವಿಲಾಯತಿಯ ಮಹಾಯಾತ್ರೆಯು ಶಿವರಾತ್ರೆಯ ತಂಗಿಯನ್ನೆ ಪ್ರಸವಿಸೀತೆಂದು ಕೇಳಿ ನಮ್ಮ ವಾಚಕರೆಂದೂ ಬೇಸರಪಡಬಾರದು!

೩. ಸಾಮ್ರಾಜ್ಯ ಯುದ್ಧ ಮಂಡಲದಲ್ಲಿ ಯುದ್ಧವನ್ನು ಇನ್ನು ಮುಂದೆ ವಿಜಯಿಯಾಗುವಂತೆ ನಡೆಯಿಸುವುದು ಹೇಗೆ ಮೊದಲಾದ ಯುದ್ಧ ವಿಷಯಕ ಪ್ರಶ್ನೆಗಳು ಚರ್ಚಿಸಲ್ಪಡುವವು, ಹೊರತು ಸಾಮ್ರಾಜ್ಯದ ಪುನರ್ಘಟನೆಯಂಥ ಮಹತ್ವದ ಪ್ರಶ್ನೆಗೆ ಹೆಚ್ಚಿನ ಸಂದರ್ಭವಿಲ್ಲ ಎಂದ ಮೇಲೆ ಹಿಂದೂಸ್ಥಾನದ ಕಡೆಯಿಂದ ಸರ್. ಮೆಸ್ಟನರಾಗಲಿ ಇನ್ನಾರೆ ಆಗಲಿ ಪ್ರತಿನಿಧಿಗಳಾಗಿ ಹೋಗುವುದರಿಂದ ಹಿಂದೂಸ್ಥಾನಕ್ಕೆ ಬಂದ ಹಾನಿಯೇನೆಂದು ಕೆಲವರು ತಪ್ಪು ತಿಳುವಳಿಕೆಯನ್ನು ಮಾಡಿಕೊಂಡಿರುವರು. ಆದರೆ ಈ ಮಂಡಲದಲ್ಲಿ ಯುದ್ಧವನ್ನು ಹೇಗೆ ನಡೆಯಿಸುವುದೆಂಬ ಪ್ರಶ್ನೆಯನ್ನು ಮಾತ್ರ ವಿಚಾರದಲ್ಲಿ ತೆಕೊಳ್ಳುವರೆಂದಲ್ಲ, ಒಪ್ಪಂದವನ್ನು ಯಾವ ಯಾವ ಶರ್ತಗಳಿಂದ ಮಾಡಬೇಕಾದುದು, ಶಾಂತತೆಯುಂಟಾದ ಮೇಲೆ ಸಾಮ್ರಾಜ್ಯದ ದೃಢತ್ವಕ್ಕಾಗಿ ಯಾವ ಯಾವ ಉಪಾಯಗಳನ್ನು ಅವಲಂಬಿಸತಕ್ಕದ್ದು, ಯುದ್ಧ ಮುಗಿದ ಮೇಲೆ ರಜೆ ಕೊಟ್ಟ ಸೈನಿಕರಿಗೆ ಭೂಮಿಯನ್ನು ಕೊಡುವದು, ಅವರ ವಸಾಹತನ್ನು ಸ್ಥಾಪಿಸುವದು, ಮುಂದಿನ ವ್ಯಾಪಾರದ ಮತ್ತು ಕೈಗಾರಿಕೆಯ ವ್ಯವಸ್ಥೆಯನ್ನು ಮಾಡುವುದು ಮುಂತಾದ ಮಹತ್ವದ ಅನೇಕ ಪ್ರಶ್ನೆಗಳನ್ನು ಕೂಡಾ ಚರ್ಚಿಸುವರು. ಜರ್ಮನಿಯಿಂದ ಜಯಿಸಿಕೊಂಡ ವಸಾಹತಗಳನ್ನು ತಿರುಗಿ ಅದಕ್ಕೆ ಕೊಡುವುದೊ. ಆ ವಿಷಯದಲ್ಲಿ ಬೇರೆ ಏರ್ಪಾಡನ್ನು ಮಾಡುವುದೋ ಈ ಸಂಗತಿಯನ್ನು ನಿಶ್ಚಯಿಸುವುದಕ್ಕಾಗಿ ಸೇನಾಪತಿ ಸ್ಮಟ್ಸ ಎಂಬವರನ್ನು ಪೂರ್ವ ಆಫ್ರಿಕೆಯಿಂದ ಕರೆಯಿಸಿದ್ದಾರೆಂದು ತೋರುತ್ತದೆ. ವಸಾಹತಗಳ ವ್ಯವಸ್ಥೆಯ ಕುರಿತು ಈ ತರದ ಪ್ರಶ್ನೆಗಳು ಬರುವಾಗ ಹಿಂದೂಸ್ಥಾನದ ಕಡೆಯಿಂದ ಮೆಸ್ಟನರಂಥ ವಸಾಹತ ಪ್ರಿಯರು ಪ್ರತಿನಿಧಿ ಮಂಡಲವನ್ನು ಅಲಂಕರಿಸಿ ಹಿಂದೂಸ್ಥಾನದ ಪ್ರತಿನಿಧಿತ್ವ ಮಾಡುವದೆಂದರೆ—ಮೃಚ್ಛಕಟಿಕದೊಳಗಿನ ಮೈತ್ರೇಯನು ಶರ್ವಿಲಕನ ಕೈಯಲ್ಲಿಯೆ ಆಭರಣಗಳನ್ನು ಕೊಟ್ಟ ಹಾಗೆ ಸರಿ! ಆದರೂ ಸ. ಪ್ರ. ಸಿಂಹರು ಮೊನ್ನೆ ಕಲ್ಕತ್ತೆಯ ಭಾಷಣದಲ್ಲಿ ಹೇಳಿದಂತೆ ಅವರಿಂದ ಕೂಡಿದಷ್ಟು ಹಿಂದೀ ರಾಷ್ಟ್ರದ ಹೃದ್ಗತವನ್ನು ಪರಿಷತ್ತಿನಲ್ಲಿ ಇಟ್ಟಾರೆಂದು ಸದ್ಯ ನಂಬಬೇಕಾಗದೆ.

೪. ನಮ್ಮ ಬ್ರಿಟಿಷ್ ಹಿಂದೂಸ್ಥಾನದಲ್ಲಿ ಒಂದೊಂದು ವಿಷಯದಲ್ಲಿ ಒಂದೊಂದು ಕಮಿಷನು ಆಗುತ್ತಿದೆ. ಪಬ್ಲಿಕ್ ಸರ್ವಿಸ್ ಕಮಿಷನಾಯಿತು, ಯುನಿವರ್ಸಿಟಿ ಕಮಿಷನಾಯಿತು, ಬಂಗಾಲ ಕಮಿಷನಾಯಿತು, ಕರನ್ಸೀ ಕಮಿಷನಾಯಿತು, ಎಷ್ಟೋ ಕಮಿಷನುಗಳಾದವು; ಈಗ ಔದ್ಯೋಗಿಕ ಕಮಿಷನು ನಡೆಯುತ್ತಿದೆ. ಒಂದು ಕಮಿಷನನ್ನು ನೇಮಿಸಿ ಅದರಲ್ಲಿ ಆಯಾ ತಜ್ಞರ ಸಾಕ್ಷಿಗಳಾಗಿ, ಆ ಸಾಕ್ಷಿಗಳ ಆಧಾರದಿಂದ ಕಮಿಷನರುಗಳು ಒಂದು ಅಭಿಪ್ರಾಯವನ್ನು ಹೊರಪಡಿಸಿ ಅದರಲ್ಲಿ ಯುಕ್ತವಾದುದಾವುದು, ಅಲ್ಲದ್ದಾವುದು ಈ ವಿಷಯದಲ್ಲಿ ಸರಕಾರವು ಹಿಂದಿನಿಂದ ಆಲೋಚಿಸುತ್ತಿರುವಾಗಲೆ ರಾತ್ರಿಯುದ್ದದು ಬೆಳಗಾಗುತ್ತದೆ! ಎಂದರೆ ಒಂದು ವಿಷಯದಲ್ಲಿ ಸಂಪೂರ್ಣ ತತ್ವವನ್ನು ಹುಡುಕುವ ನಮ್ಮ ಸರಕಾರದ ಪ್ರವೃತ್ತಿಯು ನಿಜವಾಗಿ ಈಗಿನ ಸುಧಾರಿಸಿದ ಆಧ್ಯಾತ್ಮಕ್ಕೆ ಅನುಗುಣವಾಗಿಯೆ ಮತ್ತು ಶ್ಲಾಘ್ಯವಾಗಿಯೆ ಇದೆ ಎನ್ನೋಣ. ಆದರೆ ಕಾಳಿಂತಲದಲ್ಲಿ "ನಾವು ತತ್ವವನ್ನು ಹುಡುಕುವದರಲ್ಲಿಯೆ ಅಡ್ಡೆ [illegible] ಕ್ರಮವನೆ! ನೀನು ಮಾತ್ರ ಬಾಳಿಯ (ಕಳೂಕಲೆಯ) ಆದರ ಪಾನದಿಂದ ಧನ್ಯನಾಗಿದ್ದಿ" ಎಂದು ದುಷ್ಯಂತನು ಹೇಳಿದಂತೆ ಕಮಿಷನುಗಳನ್ನು ನೇಮಿಸುವ ಕೆಲಸದಲ್ಲಿ ತೊಡಗಿದ ನಮ್ಮ ಸರಕಾರಕ್ಕೆ

ಒಂದೊಂದು ವಿಷಯವನ್ನು ಕಾರ್ಯರೂಪಗೊಳಿಸುತ್ತಿರುವ ಮೈಸೂರ—ಬರೋಡಾ ಮುಂತಾದ ಸಂಸ್ಥಾನಗಳು ಹೇಳುವ ಪ್ರಸಂಗವು ಈಚೀಚೆಗೆ ಬರಹತ್ತಿದೆ. ಮೈಸೂರ ಸಂಸ್ಥಾನವು ವಿದ್ಯಾ ವಿಷಯಕ ಸುಧಾರಣೆ ಅಥವಾ ಪ್ರಾತಿನಿಧಿಕ ತತ್ವ ಮುಂತಾದ ವಿಷಯಗಳಲ್ಲಿ ಮುಂದೆ ಮುಂದಕ್ಕೆ ಹೆಜ್ಜೆಯಿಡುವಂತೆ ಔದ್ಯೋಗಿಕ ವಿಷಯದಲ್ಲಿಯೂ ಶ್ಲಾಘನೀಯವಾದ ಪ್ರಯತ್ನಗಳನ್ನು ನಡೆಯಿಸುತ್ತಿದೆ. ಈ ಸಂಸ್ಥಾನದಲ್ಲಿ ಚಂದನದ ಎಣ್ಣೆಯ ಕೈಗಾರಿಕೆಯು ಯಶಸ್ವಿಯಾಗುತ್ತ ಬಂದಂತೆ ಬೇರೆ ಕೈಗಾರಿಕೆಗಳೂ ಪ್ರಗತಿಯನ್ನು ಹೊಂದುತ್ತಿವೆ. ಕಬ್ಬಿನ ರಸವನ್ನು ತೆಗೆಯಲು ಸುಧಾರಿಸಿದ ನಮೂನೆಯ ಯಂತ್ರ, ಅಕ್ಕಿಯನ್ನು ಮಾಡುವ ಯಂತ್ರ, ಹತ್ತಿಯನ್ನು ಶೋಧಿಸುವ ಯಂತ್ರ ಮುಂತಾದ ವ್ಯವಸಾಯಕ್ಕೆ ಸಂಬಂಧಪಟ್ಟ ಸುಧಾರಣೆಗಳು ಮೈಸೂರ ಸಂಸ್ಥಾನದಲ್ಲಿ ಈಗ ಧಾರಾಳವಾಗಿ ನಡೆದಿವೆ. ಈಚೆಗೆ ಗೊತ್ತಾದ ಸಂಗತಿಯೇನೆಂದರೆ, ಮೈಸೂರ ಸರಕಾರವು ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಸಾಹಾಯ್ಯದಿಂದ ಕೆಲವು ಶೋಧಗಳನ್ನು ಹಚ್ಚಿ ಸ್ಥಳಿಕ ಬೀಜಗಳಿಂದಲೆ ಸಾಬೂನನ್ನು ತಯಾರಿಸುವ ಏರ್ಪಾಡನ್ನು ಮಾಡಿದೆ. ಇದರಿಂದ ಒಂದು ವಾರದಲ್ಲಿ ಐದು ಟನ್ ಸಾಬೂನು ತಯಾರಾಗಬಹುದೆಂದು ಅಭಿಪ್ರಾಯಪಡುತ್ತಾರೆ. ಅಲ್ಲದೆ ಪ್ರಾಣಿಗಳ ಕೋಡು, ಎಲುಬು, ಹಸ್ತಿದಂತ, ಹಾಗು ವನಸ್ಪತಿಯ ಫಾಕದಿಂದ ಗುಬ್ಬಿಗಳನ್ನು ತಯಾರಿಸುವ ಕಾರಖಾನೆಗಳನ್ನು ಅಲ್ಲಿ ಏರ್ಪಡಿಸಲಾಗಿದೆ. ಈ ರೀತಿಯಿಂದ ಸಂಸ್ಥಾನವು ತನ್ನ ಪ್ರಜೆಗಳ ಔದ್ಯೋಗಿಕ ಅಭಿವೃದ್ಧಿಯನ್ನು ಕಾರ್ಯರೂಪದಿಂದ ಸಾಧಿಸುವಾಗ ಅದನ್ನಾದರೂ ನಮ್ಮ 'ಮಾಬಾಪ' ಸರಕಾರವು ಅನುಕರಿಸಬಹುದಲ್ಲವೆ?

೩. ಹಿಂದುಸ್ಥಾನದೊಳಗಿನ ಗೆಯ್ಮೆ ಕರಾರಿನ ಕೂಲಿಗಳ ಸ್ಥಿತಿಯು ಫಿಜಿ, ಟ್ರಿನಿಡಾಡ, ಜಮೇಕಿಯಾ ಹಾಗು ಬ್ರಿಟಿಷ್ ವಸಾಹತಗಳಲ್ಲಿ ಅತಿ ಹೀನವಾಗಿ ಹೋಗಿದೆ; ಅವರ ಈ ದುಃಸ್ಥಿತಿಯನ್ನು ಪರಾಂಬರಿಸುವವರು ಯಾರೂ ಇಲ್ಲ ಎಂದು ಮುಂತಾದ ಸಂಗತಿಗಳನ್ನು ರೆ| ಎಂಡ್ರೂ ಇವರು ಹೇಳಲು ಪ್ರಾರಂಭಿಸಿದಂದಿನಿಂದ ಆ ಪ್ರಶ್ನೆಯ ಕಡೆಗೆ ಹಿಂದೀ ಮುಖಂಡರ ಮನಸ್ಸು ಹೆಚ್ಚು ಎಳೆಯ ಹತ್ತಿದೆ. ಕೆಲವು ದಿವಸಗಳ ಹಿಂದೆ ಸಂಯುಕ್ತ ಪ್ರಾಂತದಲ್ಲಿ ಗೆಯ್ಮೆ ಕರಾರಿನ ಕೂಲಿತನವನ್ನು ನಿರ್ಮೂಲಿಸುವುದಕ್ಕಾಗಿ ಒಂದು ಸಂಘವು ಸ್ಥಾಪಿತವಾದಂತೆಯೆ ಮೊನ್ನೆ ನಮ್ಮ ಮದ್ರಾಸಿನಲ್ಲಿಯೂ ಒಂದು ಅದೇ ಮಾದರಿಯ ಸಂಘವನ್ನು ಮದ್ರಪುರದ ಪ್ರಮುಖರು ಸ್ಥಾಪಿಸಿರುವರು. ಕೂಲಿಗಳು ಪರದೇಶದಲ್ಲಿ ಯಾವ ಯಾವ ಅನರ್ಥಗಳಿಗೆ ತುತ್ತಾಗುವರೆಂಬುದನ್ನು ವಿವರಿಸುವುದು ಈಗ ಪ್ರಯೋಜನವಿಲ್ಲಾದರೂ ಬೇರೆ ಕೆಲವು ಸುಧಾರಣೆಗಳು ಇಲ್ಲಿ ಅವಶ್ಯವಾಗಿ ಆಗಬೇಕಾಗಿವೆ. ಹದಿನಾರು ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರನ್ನೆ ಕಂಟ್ರಾಕ್ಟು ಮಾಡಿಕೊಂಡು ಹೋಗುವುದು, ಹದಿನಾರಕ್ಕಿಂತ ಕಡಿಮೆ, ಆದರೆ ಹತ್ತಕ್ಕಿಂತ ಹೆಚ್ಚಿನ ವಯಸ್ಸಿನ ಹುಡುಗರ ವಿಷಯದಲ್ಲಿ ಅವರ ಪಾಲಕರ ಕೂಡ ಕರಾರು ಮಾಡಿ ಅವರನ್ನೆ ಕೊಂಡುಹೋಗುವುದು ಈಗಿನ ಕಾಯಿದೆಗೆ ಸಮ್ಮತವಾಗಿಯೆ ಇದೆ. ಇಂಥ ಕಾಯಿದೆಗಳನ್ನು ತೆಗೆದು ಹಾಕಿ ಈ "ಗುಲಾಮ ವ್ಯಾಪಾರ"ವನ್ನು ನಿರ್ಮೂಲಿಸುವುದು ಮೇಲಿನ ಸಂಘದ ಉದ್ದೇಶವಾಗಿದೆ. ಆ ಉದ್ದೇಶದಿಂದ ಆ ಸಂಘವೂ ಅದಕ್ಕೆ ಸಾಹಾಯ್ಯವಾಗುವಂತೆ ಬೇರೆ ಕಡೆಗಳಲ್ಲಿ ಆಗಬೇಕಾದ ಇಂಥ ಸಂಘಗಳೂ ಕೂಡಿ ಕೆಲಸ ಮಾಡಿ ಶ್ರೇಯಸ್ಸನ್ನು ಪಡೆಯಲೆಂದು ಹಾರೈಸುವೆವು.

೬. ನಮ್ಮ ಜಿಲ್ಲಾ ವಿಭಜನದ ಕುರಿತು ಬಂದ ಒಂದು ಪತ್ರವನ್ನು ಬೇರೆ ಕಡೆಯಲ್ಲಿ ಮುದ್ರಿಸಿರುವೆವು. ಮ| ರಾ| ನಂಬಿಯಾರರ ಪತ್ರದಲ್ಲಿ ಒಂದೆರಡು ಅಡ್ಡಿಗಳು ತೋರಿ ಬರುವವು. ಆದರೆ ಅವು ಅಪರಿಹಾರ್ಯವಾದ ಸಂಗತಿಗಳೇ ಎಂದು ಯಾರೂ ಹೇಳಬಹುದು. ಕಾಸರಗೋಡಿನಲ್ಲಿ ಮಳಿಯಾಳಿಗಳೇ ಇದ್ದಾರೆಂತಲ್ಲ, ಕನ್ನಡಿಗರೂ ಇದ್ದಾರೆ. ಅವರ ಸ್ಥಿತಿಯೇನಾಗಬೇಕಾಯಿತು? ಒಂದು ಜಿಲ್ಲೆಯನ್ನಾಗಲಿ ಪ್ರಾಂತವನ್ನಾಗಲಿ ಸರಿಯಾಗಿ ನೂಲು ಹಿಡಿದು ಅಥವಾ ಬುಕಬ್ಯಾಂಡರುಗಳು ಪುಸ್ತಕಗಳನ್ನು ಯಂತ್ರದಲ್ಲಿ ಹಾಕಿ ಸಮ ಪ್ರಮಾಣದಿಂದ ಕತ್ತರಿಸುವಂತೆ ವಿಂಗಡಿಸುವುದು ಸಾಧ್ಯವಿಲ್ಲ. ಅಲ್ಲಿಯ ಮಳಿಯಾಳಿಗಳಿಗಿದ್ದ ಕಷ್ಟಗಳ ನಾಳೆ ಕನ್ನಡಿಗರಿಗೆ ಬರುವವು. ಒಂದೊಂದು ಭಾಷೆಯ ಅಥವಾ ಸಂಸ್ಕೃತಿಯ ಜನರು ಒಂದೊಂದು ಜಿಲ್ಲೆಯಲ್ಲಿರುವುದು ಉತ್ತಮ. ಆದರೆ ಜನವಸತಿಯು ವ್ಯಾಪಾರ, ರಾಜಕಾರಣ, ಉದ್ಯೋಗ ಮುಂತಾದ ಕಾರಣಗಳಿಂದ ಯಥಾನುಕೂಲ ಅಲ್ಲಲ್ಲಿ ಮೊದಲಿನಿಂದ ಉಂಟಾದುದರಿಂದ ಒಂದು ಜಿಲ್ಲೆಯಲ್ಲಿ ಬೇರೆ ಬೇರೆ ತರದ ಭಾಷೆಯವರೂ ಸಂಸ್ಕೃತಿಯವರೂ ಪ್ರಾಯಶಃ ಎಲ್ಲ ಕಡೆಗಳಲ್ಲಿ ಇದ್ದದು ಕಂಡು ಬರುತ್ತದೆ. ಹೀಗಿರುವಾಗ ಇದ್ದ ಸ್ಥಿತಿಯೆ ಸಮಾಧಾನಕರವಾಗಿದೆ ಅಲ್ಲದೆ ಕೆಲವು ಮಲಯಾಳಿಗಳ ಸೌಕರ್ಯಕ್ಕಾಗಿ ನಮ್ಮ ಜಿಲ್ಲೆಯ "ಎಡಗೈ"ಯನ್ನು ತುಂಡುಮಾಡಿ ಜಿಲ್ಲೆಯ ವ್ಯಾಪಾರದ ಮಹತ್ವವನ್ನು ಕೆಡಿಸುವುದು ಶುದ್ಧ "ಅವ್ಯಾಪಾರೇಷು ವ್ಯಾಪಾರ"ವೆ ಸರಿ. ಕನ್ನಡ ಭಾಷೆಯು ದ್ರಾವಿಡ ಭಾಷೆಯ ಒಂದು ಶಾಖೆಯಾದುದರಿಂದ ಅದೆ ಭಾಷೆಯ ಒಂದು ಶಾಖೆಯಾದ ಮಲಿಯಾಳ ಭಾಷೆಯವರಿಗೆ ಕೊಂಕಣಿ ಭಾಷೆಯವರಿಗಾಗುವಷ್ಟು ಕಷ್ಟಕರ ಅಥವಾ ಅಪರಿಚಿತವಾಗಲಾರದು. ಎಂದ ಮೇಲೆ ಮ| ರಾ| ನಂಬಿಯಾರರ ವಿಧಾನವು ಅಷ್ಟೊಂದು ಸಮರ್ಪಕವಾಗಿ ತೋರುವುದಿಲ್ಲ. ಇರಲಿ, ನಮ್ಮ ಜಿಲ್ಲಾ ವಿಭಜನೆಯ ಕುರಿತು ಹಿಂದೆಯೇ ಕೆಲವು ಸಂಗತಿಗಳನ್ನು ಹೇಳಿದ್ದೇವೆ. ಇನ್ನೂ ಅನೇಕ ಹೇಳುವಹಾಗಿವೆ. ಆದರೆ ಮ| ರಾ| ನಂಬಿಯಾರರು ಬೇರೆ ಮಲಯಾಳಿಗಳ ಸಹಾನುಭೂತಿಯಿಂದ ತಮ್ಮ ಲೋಕಮತವನ್ನು ಸರಕಾರಕ್ಕೆ ತಿಳಿಸಿದ್ದಲ್ಲಿ ಹಾಗು ಅಲ್ಲಿಯ ಕನ್ನಡಿಗರೂ ತಮ್ಮ ಕಷ್ಟನಷ್ಟಗಳನ್ನು ಅರಿಕೆಮಾಡಿಕೊಂಡಲ್ಲಿ ಸರಕಾರವು ಈ ಜಿಲ್ಲೆಯ ಬೇರೆ ವ್ಯಾಪಾರದ ಮಹತ್ವ ಮುಂತಾದ್ದನ್ನು ಆಲೋಚಿಸಿ ಅವ್ಯಾಪಾರೇಷು ವ್ಯಾಪಾರ ಮಾಡದೆ ಲೋಕಮತಕ್ಕೆ ಸಮ್ಮತವಾದ ತೀರ್ಮಾನವನ್ನು ಕೊಟ್ಟೀತೆಂದು ಭರವಸೆ ಇದೆ.

೭. ಕಳೆದ ಎರಡು ಮೂರು ಸಂಚಿಕೆಗಳಿಂದ ಮಂಗಳೂರು ಬಂದರದ ಪ್ರಸ್ತಾಪವು ಸ್ವದೇಶಾಭಿಮಾನಿಯಲ್ಲಿ ಬಿಡಿಕೊಂಡು ಬಂದರದಲ್ಲಿ ಇಷ್ಟೆಲ್ಲಾ ಚಳವಳವು ಒಮ್ಮೆಂದೊಮ್ಮೆಯೆ ಏಳಲು ಕಾರಣವೇನೆಂಬ ಪ್ರಶ್ನೆಯು ವಾಚಕವರ್ಗದಲ್ಲಿ ಹುಟ್ಟಬಹುದು. ಬಂದರದ ಉತ್ತರ ದಿಕ್ಕಿನಲ್ಲಿ ದಕ್ಕೆಯನ್ನು ಕಟ್ಟಿಸಿ ಸಾಮಗ್ರಿಗಳನ್ನು ಅತ್ತಿತ್ತ ಒಯ್ಯಲಿಕ್ಕೆ ರೈಲು ಕಂಬಿಗಳನ್ನು ಹಾಕಿಸಿ ಹಲವು ವರುಷಗಳಾದರೂ ಈ ಸೌಕರ್ಯವನ್ನು ತಮಗೂ ಬರಮಾಡಿಕೊಳ್ಳುವ ಪ್ರಯತ್ನವನ್ನು ಬಂಧರದ ದಕ್ಷಿಣ ಪ್ರಾಂತ್ಯದಲ್ಲಿ ಬಹಳ ವ್ಯಾಪಾರವನ್ನು ನಡಿಸುತ್ತಿರುವ ವ್ಯಾಪಾರಸ್ಥರು ಮಾಡದೆ ಇರಲು ಕಾರಣವೇನು? ಈ ಪ್ರಶ್ನೆಗೆ ಉತ್ತರವನ್ನು ವ್ಯಾಪಾರಸ್ಥರ ಅನುಭವದಿಂದ ಸಂಗ್ರಹಿಸಿ ಹೇಳಲಿಕ್ಕೆ ಹೋದರೆ ಸಾಧಾರಣ ಈ ಅನುಭವವನ್ನು ಎಷ್ಟು ವಿಸ್ತಾರವಾಗಿ ಬರೆದರೂ ತೀರದು. ಚಿಕ್ಕದಾಗಿರುವಂಥ ಉತ್ತರವು ಕೂಡಲೆ ಅವರ ಬಾಯಿಂದ ಹೊರಡದು. ವೈವಾಟವೇ ಹೆಚ್ಚಿಯದೆ, ಇದರ ಕೂಡೆ ನಾನಾ ರಂಗಿನ ಮತ್ತು ನಾಜೂಕು ನಮೂನೆಯ ಲೆಕ್ಕದ ಪುಸ್ತಕಗಳೋ, ಲೆಕ್ಕಪತ್ರಗಳ ಫೋರ್ಮುಗಳೋ ಹೆಚ್ಚಿ ಹೋಗಿಯವೆ ಹೊರತು ವೈವಾಟದೊಂದಿಗೆ ಲಾಭವು ಹೆಚ್ಚಿರದು. ವೈವಾಟವು ಯಾವ ದರದಲ್ಲಿ ಹೆಚ್ಚಿಯದೋ ಅದೇ ದರದಲ್ಲಿ ಮುನಾಫೆಯು ಕಗ್ಗಿರುವುದೆಂದು ಹೇಳಲಿಕ್ಕೆ ಏನೂ ಅಂಜಿಕೆ ಇರದು. ಸಿಬ್ಬಂದಿಯೂ ಲಾಗವಾದ, ಖರ್ಚು ಅಧಿಕವಾಗಿದೆ. ಆದರೆ ಈ ಸಿಬ್ಬಂದಿಯಿಂದ ಯಾವ ಕಾಲದಲ್ಲಿ ಯಾವ ಕೆಲಸವನ್ನು ಮಾಡಿಸಬೇಕೆಂಬ ವಿಷಯದಲ್ಲಿ ಗಲಾಟೆಯೇ ಹೊರತು ವ್ಯವಸ್ಥೆ ಇಲ್ಲ. 'ಕ್ರೆಡಿಟ್' ಎಂಬ ಬರೇ ದಸ್ಕತುಗಳ ಅಥವಾ ಲೆಕ್ಕಪುಸ್ತಕಗಳ ಮೂಲಕ ಸಾಲಗಳನ್ನು ಪಡೆಯುವ ತ್ರಾಣವು ಜರ್ಝರಿತವಾಗಿ ಹೋಗಿದೆ. ಇಂಥಾ ಸಮಯದಲ್ಲಿ ಘೋರ ಯುದ್ಧವು ಪ್ರಾಪ್ತವಾದ್ದರಿಂದ ಎಲ್ಲಾ ಇಕ್ಕಟ್ಟು! ಹಣದ ಅಡಚಣಿ, ಕ್ರೆಡಿಟು ಬಹಳ ಕಡಿಮೆ, ಹಣದ ಚಲಾವಣೆಯು ಮುಂಚಿನಂತೆ ಇಲ್ಲ. ಹೀಗೆಲ್ಲಾ ಆದ ಬಳಿಕ ಲಾಭವು ಎಲ್ಲಿ! ಲಾಭವು ಲೋಪವಾಯಿತು, ವೈವಾಟದ ಕೈಬೇ ಮುರಿಯಿತು, ಎಲ್ಲಿ ಹೋದರೂ ವ್ಯಾಪಾರಸ್ಥರ ನೌಕರರಾಗಿ ಸರಕಾರದಿಂದ ತಲಬು ಹೊಂದುವವರಿಂದ ಸಹ ವ್ಯಾಪಾರಸ್ಥರಿಗೆ ದೊರಕಬೇಕಾದ ಗೌರವವು ಇಲ್ಲ. ಸ್ಟೀಮರು ಕಂಪೆನಿಯವರು ಸಹ ವಿದೇಶಸ್ಥ ವ್ಯಾಪಾರಸ್ಥರ ಸರಕನ್ನು ಪ್ರಥಮ ತುಂಬಿಸಿಕೊಂಡು ಎಂಥಾ ಅಗತ್ಯದ ಭರಾವಣೆಯ ಸಾಮಗ್ರಿಗಳು ದೇಶೀಯ ವ್ಯಾಪಾರಸ್ಥರದಿದ್ದರೂ ಭರಾವಣೆ ಹುಕುಮು ದೇಶೀಯರಿಗೆ ಸಿಕ್ಕುವದು ಬಹಳ ದುರ್ಲಭವಾಗಿ ಬಂದಿದೆ, ಸರಕು ಒಯ್ಯುವ ದೋಣಿಯವರನ್ನು ಆಪೋಷಿಸುವದು ಸಾವುಕಾರರ ಕೈ ಮೀರಿದೆ.—ಈ ದುರ್ಗತಿಯು ಬಂದು ಪ್ರಾಪ್ತವಾದ್ದರಿಂದ ಬಂದರವು ಜಾಗ್ರತಾವಸ್ಥೆಗೆ ಬಂದಿರುವದು—ತಾವೆಲ್ಲ ಒಂದಾಗಬೇಕು—ವೈವಾಟ ಮತ್ತು ಉದ್ಯೋಗಗಳ ಸೌಕರ್ಯವನ್ನು ಹೆಚ್ಚಿಸಿ ಖರ್ಚನ್ನು ತಗ್ಗಿಸಬೇಕು—ಲಾಭವು ಸರಕುಗಳ ಮೌಲ್ಯಗಳನ್ನು ಹೆಚ್ಚಿಸಿ ಮಾರಿಯೇ ಸಂಗ್ರಹಮಾಡುವದಲ್ಲ, ಖರ್ಚನ್ನು ಕಡಿಮೆ ಮಾಡಿಕೊಂಡು ಪಡೆಯಬೇಕಾದ ಲಾಭದ ಅಂಶವು ಬಹಳವಿದೆ ಎಂಬೀ ವಿಚಾರಗಳಿಂದ ಬಂದರವು ಜಾಗ್ರತಾವಸ್ಥೆಗೆ ಬಂದಿದೆ. ಅರ್ಜಿಗಳನ್ನು ಮಾಡುತ್ತಿದ್ದಾರೆ. ಕ್ಲಬ್ಬುಗಳನ್ನು ಸ್ಥಾಪಿಸುತ್ತಿದ್ದಾರೆ. 'ನಾವೆಲ್ಲ' ಅಭಿವೃದ್ಧಿಯನ್ನು ಪಡೆಯಬೇಕು, ಆ ಮೂಲಕ ಬಂದರು ಅಭಿವೃದ್ಧಿಯಾಗಬೇಕೆಂಬ ಉತ್ಸಾಹವು ಮೂಡಿದೆ. ಇಷ್ಟೆಲ್ಲಾ ಚಳವಳವು ಬಂದರದಲ್ಲಿ ತಲೆದೋರಲು ಇರುವ ಕಾರಣಗಳು ವಾಚಕರಿಗೆ ಈಗ ವ್ಯಕ್ತವಾಗಬಹುದು. ಉತ್ಸಾಹವು ಮೂಡಿದೆ. ತಂತಿಯಿಂದ ರಾಗವು ಹೊರಟಿದೆ. ಆದರೆ ತಂತಿಯು ಕವಿಯದ ಹಾಗೆ ರಾಗವನ್ನು ಬಾರಿಸಬೇಕಾದ್ದರಿಂದ ವ್ಯಾಪಾರಸ್ಥರ ಅನುಭವದಿಂದ ಸಂಗ್ರಹಿಸಲ್ಪಟ್ಟ ಮಾತುಗಳನ್ನು ಒಮ್ಮೆಗೇನೇ ತೀರಿಸಿಬಿಡುವದು ಯುಕ್ತವಲ್ಲ. ಆ ಮಾತುಗಳೆಲ್ಲಾ ವಿಶೇಷವಾದವುಗಳಾದ್ದರಿಂದ ಅವುಗಳು ಮುಗಿಯುವ ತನಕ ಪ್ರತಿ ಸಂಚಿಕೆಯಲ್ಲಿಯೂ ಬಂದರದ ಪ್ರಸ್ತಾಪವನ್ನು ಮಾಡಬೇಕೆಂದಿದ್ದೇವೆ.

ಸ್ಥಳಿಕ—ಮಂಗಳೂರು.

ಕಳೆದ ಶನಿವಾರ ಗಣಪತಿ ಸೆಕಂಡರಿ ಶಾಲೆಯಲ್ಲಿ ವಿದ್ಯಾರ್ಥಿ ಧರ್ಮ ಸಂಘದವರ ನಾಲ್ಕನೇ ವಾರ್ಷಿಕೋತ್ಸವು ನೆರವೇರಿತು. ಈ ಸುಪ್ರಸಂಗದಲ್ಲಿ ಅಧ್ಯಕ್ಷರಾಗಲು ಒಪ್ಪಿಕೊಂಡ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರು ದೇಹಾಲಸ್ಯ ಸಂಬಂಧ ಬರಲಿಕ್ಕಾಗುವದಿಲ್ಲವೆಂದು ತಿಳಿಸಿದ್ದರಿಂದ ಡಾ| ವರ್ಗೀಸರು ಈ ದಿನದ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ರಿಪೋರ್ಟು ವಾಚನ, ಸ್ವಸ್ತಿವಾಚನ, ಅಧ್ಯಕ್ಷರ ಭಾಷಣ ಹಾಗೂ ಇಂಗ್ಲಿಷ್ ಡ್ರಾಮಾ ಇವೆಲ್ಲಾ ಆಗ ಸಭೆಯು ಮಸಿಕ್ತಾಯವಾಯಿತು.

ಉಡುಪಿ:—ಕುಂಭಕೋಣದ ದೀಕ್ಷಿತ ವಾಸುದೇವಾಚಾರ್ಯರವರು ಇಲ್ಲಿ ಅನಂತೇಶ್ವರ ದೇವಸ್ಥಾನದಲ್ಲಿ ಪರ್ಯಾಯ ಶ್ರೀ ಸೋದೆ ಶ್ರೀ ಪಾದಂಗಳವರೆ ಮೊದಲಾದ ಶ್ರೀ ಪಾದಂಗಳವರ ಮತ್ತು ಮಹಾಜನಗಳ ಸಹಾಯದಿಂದ "ಜ್ಯೋತಿರಾಪ್ತೋರ್ಯಾಮ" ಎಂಬ ಯಾಗವನ್ನು ಮಾಡುವರೆ, ಈ ತಾ. ೧೦ರಲ್ಲಿ ಆರಂಭಿಸಿರುವರು. ಇದು ತಾ. ೭ಕ್ಕೆ ಅಂತ್ಯವಾಗುವುದು. ಇದು ಕೂಡ ಇಲ್ಲಿ ಈ ಶತಮಾನದಲ್ಲಿ ೪ ಯಾಗಗಳಾದವು. ಇದೇ ಸ್ಥಳದಲ್ಲಿ ಪೂರ್ವದಲ್ಲಿ ರಾಮಭೋಜರಾಯನು ಶ್ರೀ ಪರಶುರಾಮದೇವರನ್ನು ಉದ್ದೇಶಿಸಿ ಯಾಗ ಮಾಡಿರುವನೆಂತ ಇಲ್ಲಿಯ ಸ್ಥಳ ಪುರಾಣದಲ್ಲಿ ತೋರಿಬರುತ್ತದೆ.

ಮೈಸೂರು ಮ| ವರದಾಚಾರ್ಯರವರ ಆರ್. ಬಿ. ನಾಟಕ ಮಂಡಳಿಯವರು ಇಲ್ಲಿ ಕೆಲವು ದಿವಸಗಳಿಂದ ಬಹು ಸೊಗಸಾದ ನಾಟಕಗಳನ್ನಾಡಿ ತೋರಿಸುತ್ತಿರುವರು. ಪ್ರಹ್ಲಾದ ಚರಿತ್ರೆ ಆಡಿದ ದಿವಸ ಬಹು ಮಂದಿ ಟಿಕೇಟು ಸಿಗದೆ ವಾಪಾಸು ಹೋಗಬೇಕಾಯಿತು.

ಈ ತಾ. ೩ರಲ್ಲಿ ಸಾಧಾರಣ ಮಳೆ ಬಂತು. ಈ ಅಕಾಲವೃಷ್ಟಿಯಿಂದ ಅನೇಕ ತರದ ಪೈರುಗಳಿಗೆ ತೊಂದರೆಗಳೂ ಸಂಭವಿಸಿತು.

ಇದೇ ತಾ. ೧೫ರಲ್ಲಿ ದಕ್ಷಿಣ ಕನ್ನಡಾ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಕೂಡಲಿಕ್ಕಿದೆ.

ಇಲ್ಲಿಯ ಗವರ್ನಮೆಂಟ ಸೆಕಂಡರಿ ಟ್ರೈನಿಂಗ್ ಶಾಲೆಯ ಉಮೇದ್ವಾರ ಉಪಾಧ್ಯಾಯರ ಯೂನ್ಯನಿನ ವಾರ್ಷಿಕೋತ್ಸವವು ನಾಳೆಯ ದಿನ ಗಣಪತಿ ಸೆಕಂಡರಿ ಶಾಲೆಯಲ್ಲಿ ಸಾಯಂಕಾಲ ೫-೩೦ ಗಂಟೆಗೆ ಜರಗುವದು. ಈ ಸಂದರ್ಭದಲ್ಲಿ ಸಬ್ ಜಡ್ಜರಾದ ಮ| ರಾ| ಟಿ. ಜಿವಾಜಿ ರಾವ್ ಬಿ. ಎ. ಬಿ. ಎಲ್‌ರವರು ಅಧ್ಯಕ್ಷರಾಗಲು ಒಪ್ಪಿರುವರು.

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವವು ಕಳೆದ ಜನವರಿ ೫ನೇ ಸೋಮವಾರ ವಿಜೃಂಭಣೆಯಿಂದ ನೆರವೇರಿದ ಸಂಗತಿಯನ್ನು ಕಳೆದ ಸಂಚಿಕೆಯಲ್ಲಿ ತಿಳಿಸಿರುವೆವು. ಪರಂತು, ಈ ಜಾತ್ರೆಗೆ ೩-೪ ದಿವಸಗಳ ಹಿಂದೆಯೇ ರಥಬೀದಿಯಲ್ಲಿ ಅಣಿಗೊಳಿಸಲ್ಪಟ್ಟ "ಲಕ್ಕಿದಿಪ್ಪ" ಮತ್ತು ಉಂಗುರ ದಿಸಾಡಿ ಹಣ ಗಳಿಸುವ ಆಟಗಳ ಸಂಭ್ರಮಗಳಿಗೆ ನಿನ್ನೆ ಮಾತ್ರ ಸಮಾಪ್ತಿಯಾದುದು ಮಕ್ಕಳ ಮತ್ತು ಯೌವ್ವನಸ್ಥರ ಶಿಷ್ಟಾಚಾರದೃಷ್ಟಿಯಿಂದ ಆಲೋಚಿಸುವದಾದರೆ ವಿಷಾದಕರವೇ ಸರಿ.

ಬೋಳಾರ ಮುಳಿಹಿತ್ಲಲ್ಲಿ ಜುಗಾರು ಆಡಿದ್ದರಾಗಿ ಅಪಾದಿಸಲ್ಪಟ್ಟ ೧ನೇ ಅಪಾದಿತ ಮಂಜಯ ಬೆಲ್ಚಾಡನಿಗೆ ರೂ. ೨೫; ೨ನೇ ಅಪಾದಿತ ಗುಡ್ಡಪ್ಪ ಪೂಜಾರಿ, ೩ನೇ ಅಪ್ಪು ಬೆಲ್ಚಾಡ, ೪ನೇ ಅಪ್ಪಿ ಬೆಲ್ಚಾಡನಿಗೆ ಹತ್ತತ್ತು ರೂಪಾಯಿಗಳ ಜುಲುಮಾನೆ ವಿಧಿಸಲಾಗಿದೆ.

ಇಂಡಸ್ಟ್ರಿಯಲ್ ಕಮಿಷನಿನ ಮೆಂಬರರು ಕಲಿಕೋಟೆಯಲ್ಲಿ ವಿಚಾರ ತೀರಿಸಿ ಮಂಗಳೂರಿಗೆ ಬರುವವರಾಗಿದ್ದಾರೆಂತ ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೆವಷ್ಟೆ. ಪರಂತು, ಈ ಕಮಿಷನಿನ ಪ್ರೆಸಿಡೆಂಟರಾದ ಮಿ| ಹೊಲ್ಲಾಂಡರನ್ನು ಹಿಂದೂಸ್ಥಾನದಿಂದ ಯುದ್ಧದ ಬಗ್ಗೆ ಆಹಾರಸಾಮಾಗ್ರಿ ಇತ್ಯಾದಿಗಳನ್ನು ಒದಗಿಸುವ ಕೆಲಸದ ಬಗ್ಗೆ ನೇಮಿಸುವ ಅಗತ್ಯವು ಸರಕಾರದವರಿಗೆ ಬಿದ್ದುದರಿಂದ ಈ ಕಮಿಷನಿನವರು ಈ ಸಂಸ್ಥಾನದ ಕೆಲಸವನ್ನು ಅವರ ಪ್ರಥಮ ಕಾಲನಿಯಮ ಪಟ್ಟಿಯ ಮೊದಲೇ ತೀರಿಸಬೇಕಾಗಿ ಬಂದುದರಿಂದ ಕಮಿಷನಿನವರು ಮಂಗಳೂರಿಗೆ ಬರುವ ಹಾಗಿಲ್ಲವೆಂದೂ ಬರುವ ಚಳಿಕಾಲದಲ್ಲಿ ಈ ಕಮಿಷನಿನವರು ಮುಂಬಾಯಿಯಲ್ಲಿ ಪುನಃ ಕೆಲಸ ತೊಡಗುವರೆಂದೂ ತಿಳಿಯುತ್ತೇವೆ.

ಇದೇ ತಾ. ೬ರಲ್ಲಿ ಕೂಡಿದ ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಕೆ. ಸದಾಶಿವ ಭಟ್ಟರವರು ವಿದ್ಯಾಖಾತೆಯ ಎಲ್ಲಾ ಗ್ರೇಡುಗಳ ಸುಪರ್‌ವ್ಯಾಸರರನ್ನು ನೇಮಿಸುವ ಅಧಿಕಾರವನ್ನು ಸರ್ಕಲ್ ಇನ್ಸ್‌ಪೆಕ್ಟರರಿಗೆ ಕೊಡಬೇಕು, ಮತ್ತು ಪ್ರತಿ ಗ್ರೇಡಿನ ನೇಮಕಗಳನ್ನು ಪ್ರತಿ ಡಿಸ್ಟ್ರಿಕ್ಟಿನಲ್ಲಿ ಆಯಾ ಡಿಸ್ಟ್ರಿಕ್ಟಿನ ವಿಸ್ತೀರ್ಣ ಮತ್ತು ಶಾಲೆಗಳ ಸಂಖ್ಯೆಗಳ ಆಧಾರದ ಮೇಲೆ ಹಂಚಿಹಾಕಬೇಕು ಎಂಬ ಮಸೂದೆಯನ್ನು ತಂದು ಈಗಲಿರುವ ವಿಧಾನದಲ್ಲಿರುವ ಸಾಧಕಬಾಧಕಗಳನ್ನು ಸಭೆಯ ಮುಂದಿಟ್ಟರು. ಮಾನ್ಯ ಕೆ. ಆರ್. ಪಿ. ಕೃಷ್ಣರಾವ್‌ರವರು ಈ ಮಸೂದೆಯನ್ನು ಅನುಮೋದಿಸಿದರು. ವಿದ್ಯಾಖಾತೆಯ ಡಿರೆಕ್ಟರರಾದ ಮಾನ್ಯ ಸ್ಟೋನ ದೊರೆಗಳವರು ಈ ಮಸೂದೆಯ ವಿಷಯ ಮಾತನಾಡಿ, ಸುಪರ್‌ವ್ಯಾಸರರು ನೇಮಿಸಲ್ಪಡುವ ಮ ಭತ್ತಿ ಹೊಂದುವ ಏರ್ಪಾಡಿನಲ್ಲಿ ಈ ಮಸೂದೆಯು ಬದಲಾವಣೆಯನ್ನು ಸೂಚಿಸುವಂಥಾದ್ದಾಗಿದೆ. ಮತ್ತೊಂದು ಕಡೆಯಲ್ಲಿ ಈ ಮಸೂದೆಯು ಸುಪರ್‌ವ್ಯಾಸರಿಗಿರುವ ಕೆಲವು ಹಾಲಹವಾಲೆಗಳನ್ನು ತೆಗೆದು ಹಾಕುವ ಉದ್ದಿಷ್ಟಹೇತುವುಳ್ಳದ್ದಾಗಿದೆ. ಹೀಗೆ ಈ ಮಸೂದೆಯನ್ನು ಅಂಗೀಕರಿಸಿದರೆ ಕೆಲವು ಸುಪರ್‌ವ್ಯಾಸರರು ಲಾಭವನ್ನೂ ಕೆಲವರು ನಷ್ಟವನ್ನೂ ಹೊಂದಬಹುದು. ಸುಪರ್‌ವ್ಯಾಸರರಿಗೆ ವಿದ್ಯಾಯೋಗ್ಯತೆಯ ಆಧಾರದ ಮೇಲೆ ಭತ್ತಿ ಸಿಗುತ್ತದೆ. ಈಚೆಗೆ ಕೆಲವು ವರ್ಷಗಳಿಂದ ಈ ಆಫೀಸರರ ತರಗತಿಯಲ್ಲಿ ಕಾರ್ಯದಕ್ಷತೆಯನ್ನು ವೃದ್ಧಿಸಬೇಕೆಂಬ ಅಪೇಕ್ಷೆಯಿಂದ ಎಲ್. ಟಿ.ಗಳನ್ನು ಸುಪರ್‌ವ್ಯಾಸರರಾಗಿ ನೇಮಿಸಲಾಗಿದೆ. ಈ ಪದ್ಧತಿಯು ಸುಪರ್‌ವ್ಯಾಸರರಿಗೆ ಸಾನುಕೂಲವಾಗಿರಲಿಲ್ಲವೆಂಬದಕ್ಕೆ ಸಂದೇಹವಿಲ್ಲ. ಈ ಇಲಾಖೆಯಲ್ಲಿ ವ್ಯವಸ್ಥಾಪನೆಯನ್ನು ಮಾಡುವ ಆಲೋಚನೆಯು ಸರಕಾರದವರಿಗೆ ಇದೆ. ಈ ಸಂದರ್ಭದಲ್ಲಿ ಒಂದುವೇಳೆ ಸುಪರ್‌ವ್ಯಾಸರರ ಗ್ರೇಡೇ ಹೋಗಿ ಮತ್ತೊಂದು ಹೊಸ ಆಫೀಸರರ ವರ್ಗವು ಉಂಟಾಗಬಹುದು. ಸುಪರ್‌ವ್ಯಾಸರರಿಗೆ ಅವರ ಯೋಗ್ಯತೆ ಮತ್ತು ಸರ್ವಿಸಿನ ಮೇಲೆ ಭದ್ರಿಯು ಕೊಡಲಾಗುತ್ತದೆ ಎಂಬದಾಗಿ ಹೇಳಿದರು. ಸುಪರ್‌ವ್ಯಾಸರ ತರಗತಿಯ ವ್ಯವಸ್ಥಾಪನೆಯ ಕಾಲ ಈ ಮಸೂದೆಯ ವಿಷಯ ಡೈರೆಕ್ಟರ ದೊರೆಗಳವರಿಂದ ತಕ್ಕ ನಿಗಾ ಕೊಡಲಾಗುವದೆಂಬ ಅಭಯವನ್ನು ಗವರ್ನರ ಪ್ರಭುಗಳು ಕೊಟ್ಟದ್ದರಿಂದ ಮಾನ್ಯ ಕೆ. ಸದಾಶಿವ ಭಟ್ಟರು ಈ ಮಸೂದೆಯನ್ನು ಹಿಂದೆಗೆದರು. ಮಾನ್ಯ ಸದಾಶಿವ ಭಟ್ಟರು ನಮ್ಮ ಜಿಲ್ಲೆಯ ಮತ್ತು ಮಲಬಾರ್ ಜಿಲ್ಲೆಯ ಸಂಬಂಧವಾಗಿ ಹಾಕಿದ ಪ್ರಶ್ನೆಗಳನ್ನೂ ಅದಕ್ಕೆ ಸಿಕ್ಕಿದ ಉತ್ತರಗಳನ್ನೂ ಬರುವ ಸಂಚಿಕೆಯಲ್ಲಿ ಕೊಡುವೆವು.

ಸ್ವೀಕಾರ.

ಹರಿದಾಸಿ:—ವಂಗ ಭಾಷೆಯಿಂದ ಕೈ| ಕೋಟಿಲಿಂಗಂರವರ ಧರ್ಮ ಪತ್ನಿಯವರಾದ ಶ್ರೀಮತಿ ಲೀಲಾವತಿ ಕೋಟಿಲಿಂಗಂರವರಿಂದ ಆಂಗ್ಲ ಭಾಷೆಗೆ ಭಾಷಾಂತರಿಸಿದ ಈ ಪುಸ್ತಕವನ್ನು ಈಗನಾನೇ "ಮೈಸೂರು ಸ್ಟಾರ್" ಪ್ರಕಾಶಕರು ಕನ್ನಡಕ್ಕೆ ಪರಿವರ್ತಿಸಿರುವರು. ಈ ಗ್ರಂಥವು ಪುರುಷನು ಪೂರ್ಣವಿದ್ವಾಂಸನೂ, ನೀತಿವಂತನೂ, ಗೌರವವುಳ್ಳವನೂ ಆಗಿದ್ದರೂ ಮದ್ಯಪಾನಾಸಕ್ತನಾದಲ್ಲಿ ತಾನು ಕೆಟ್ಟು, ಹೆಂಡತಿ ಮಕ್ಕಳನ್ನೂ ಕೆಡಿಸಿ ಅರ್ಥ ಮಾನಹಾನಿಗಳನ್ನನುಭವಿಸಬೇಕಾಗುತ್ತದೆಂಬದನ್ನು ಸ್ಪಷ್ಟವಾಗಿ ವಿವರಿಸಿ ಕೊಡುತ್ತದೆ. ಸ್ತ್ರೀಪುರುಷರು ಅಗತ್ಯವಾಗಿ ಓದಿ ಕೇಳ್ಬೇಕಾದ ಈ ಗ್ರಂಥಕ್ಕೆ ಕ್ರಯ ಆಣೆ ೬ ಮಾತ್ರ. ರಾ| ವಿಠ್ಠಲಾಚಾರ್ಯ, ಮೈಸೂರು ಇವರಿಗೆ ಬರೆದಲ್ಲಿ ಇದರ ಪ್ರತಿಗಳು ದೊರೆಯುವವು.

ಅಲ್ಲಿಯ ಶಿಲ್ಪಿಗಳು ಇಂಥಾ ಶಿಲ್ಪ ಕೆಲಸಗಳನ್ನು ಸಾಧಾರಿಸುವಹಾಗೆ ಜಿಲ್ಲೆಯ ಬೋರ್ಡು ಇನ್ಸ್‌ಪೆಕ್ಟರರಿಗೂ ತಹಸೀಲುದಾರರಿಗೂ ಆಜ್ಞಾಪಿಸಬೇಕೆಂದು ಮದ್ರಾಸ್ ಸರಕಾರದವರು ಆಜ್ಞೆ ಮಾಡಿರುತ್ತಾರೆ.

ಗಿರ್ಮಿಟರಾಜ್ಯದ ಪದ್ಧತಿಯನ್ನು ಕೂಡಲೇ ನಿಲ್ಲಿಸುವರೆ ಇಂಡಿಯಾ ಸರಕಾರದವರನ್ನು ಕೇಳಿಕೊಳ್ಳುವ ಉದ್ದೇಶದಿಂದ ಇದೇ ತಾ. ೩ರಲ್ಲು ಮದ್ರಾಸಿನ ವೈ. ಎಂ. ಸಿ. ಎಯ ಹಾಲಿನಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿಬಂತು. ಈ ಸಭೆಯಲ್ಲಿ ಮದ್ರಾಸಿನ ರೈಟ್ ರೆವರೆಂಡ್ ಲೋರ್ಡಬಿಷೋಪರವರು ಅಧ್ಯಕ್ಷರಾಗಿದ್ದರು. ಸಭೆಗೆ ಮಿಸೆಸ್ ಅನ್ನಿಬೆಸೆಂಟರು, ಮಾನ್ಯ ಪಂಡಿತ ಮದನಮೋಹನ ಮಾಲವೀಯ, ಮಿ ಸಿ. ಎಫ್. ಆಂಡ್ರ್ಯೂಸರೇ ಮೊದಲಾದ ಸದ್ಗೃಹಸ್ಥರು ಹಾಜರಿದ್ದರು. ಅಧ್ಯಕ್ಷರವರು ಈ ಪದ್ಧತಿಯು ಕೂಲಿಯವರ ಸಾಮಾಜಿಕ ಮತ್ತು ನೈತಿಕಭಾವಗಳನ್ನು ಹಾಳುಮಾಡುವದರಿಂದ ಈ ಪದ್ಧತಿಯನ್ನು ಕೂಡಲೇ ನಿಲ್ಲಿಸಬಿಡುವದರ ಅವಶ್ಯಕತೆಯನ್ನು ವಿವರಿಸಿ ಫಿಜಿದ್ವೀಪದಲ್ಲಿಯ ಹಿಂದೀ ಕೆಲಸಗಾರರ ಸ್ಥಿತಿಗತಿಯನ್ನು ಕಣ್ಣಾರೆ ಕಂಡು ಪರಾಂಬರಿಸಿದ ರೆವರೆಂಡ್ ಅಂಡ್ರೂಸರವರ ಹೆಚ್ಚಿನ ವಿಷಯವನ್ನು ಸಭೆಯಲ್ಲಿ ಹೇಳುವರೆಂದರು. ಅನಂತರ, ರೆವರೆಂಡ್ ಡಿ. ಜಿ. ಎಸ್. ಲೈಕರವರು ಈ ಪದ್ಧತಿಯನ್ನು ಕೂಡಲೇ ನಿಲ್ಲಿಸುವ ಹಾಗೆ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ಮಸೂದೆಯನ್ನು ಸಭೆಯ ಮುಂದೆ ತಂದು ಈ ಪದ್ಧತಿಯಿಂದುಂಟಾಗುವ ದುಷ್ಪರಿಣಾಮಗಳನ್ನು ವಿವರಿಸಿದರು. ಈ ಮಸೂದೆಯು ಸಭಿಕರ ಸರ್ವಮತದಿಂದ ಅಂಗೀಕರಿಸಲಾದನಂತರ ಮಿ ಅಂಡ್ರೂಸರು ಫಿಜಿದ್ವೀಪದ ಕೆಲಸಗಾರರ ಸ್ಥಿತಿಗತಿಗಳನ್ನು ವಿವರಿಸಿದರು. ತಾನು ದಕ್ಷಿಣ ಆಫ್ರಿಕದಲ್ಲಿ ಮತ್ತು ಫಿಜಿದ್ವೀಪದಲ್ಲಿ ಕಣ್ಣಾರೆ ಕಂಡ ವಿಷಯಗಳು ಇನ್ನೂ ತನ್ನ ಹೃದಯವನ್ನು ಭೇದಿಸುತ್ತಿವೆ. ಬಾಯಲ್ಲಿ ಹೇಳಲಾರದಷ್ಟು ಅವಮಾನಕರವಾದ ಈ ಹಿಂದೀ ಕೆಲಸಗಾರರಿರುವ ಸ್ಥಿತಿಯು ಗಂಡಸರಿಗೆ ಆಗುತ್ತಿದ್ದರೆ ಇನ್ನೂ ಸ್ವಲ್ಪ ಕಾಲವಾದರೂ ಅದನ್ನು ಸಹಿಸಬಹುದಿತ್ತು. ಆದರೆ ಈ ಅವಮರ್ಯಾದೆಯು ಸಾಹಾಯ್ಯಹೀನರಾದ ಹೆಂಗಸರ ಮತ್ತು ಮಕ್ಕಳ ಮೇಲೆ ಇರುವದರಿಂದ ಅದನ್ನು ಹೆಚ್ಚು ಕಾಲ ತಾಳಕೂಡದೆಂದು [illegible] ಭಾಷಣವನ್ನು ಪ್ರಾರಂಭಿಸಿ ಅಲ್ಲಿರುವ ಹೆಂಗಸರು ಮಕ್ಕಳಿರುವ [illegible] ಅವಮಾನಕರವಾದ ಸ್ಥಿತಿಯನ್ನು ಉದಾಹರಣವಾಗಿ ವಿವರಿಸಿದರು. ಮಿ. ಅಂಡ್ರೂಸರವರು ಹೇಳಿದ ಒಂದು ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸುವ [illegible] ಫಿಜಿದ್ವೀಪದಲ್ಲಿರುವ ಹೆಂಗಸರ ಕನಿಷ್ಠಾವಸ್ಥೆಯು [illegible] ಫಿಜಿದ್ವೀಪಕ್ಕೆ ೮೦೦ ಗಂಡಸರು, ೩೦೦ ಹೆಂಗಸರು ಒಂದು ಸಲ ಹೋಗುವರು. ಎಲ್ಲರೂ ೨೦-೩೦ ವಯಸ್ಸಿನವರು. ಈ ಸ್ಥಿತಿ ೧೫೦ ಗಂಡಸರಿಗೆ ೧೫೦ ಹೆಂಗಸರ ವಿವಾಹವಾದವರು ಎಂತ ನಾವು ಭಾವಿಸಿ ಈ ವಿವಾಹವಾದ ಸಂಗತಿಯನ್ನು ಒಂದು ಕಡೆಯಲ್ಲಿ ಬಿಟ್ಟರೆ ಉಳಿದ ೬೫೦ ಮಂದಿಗೆ ೧೫೦ ಹೆಂಗಸರೇ ಉಳಿದಂತಾಯಿತು. ಈ ಲೆಕ್ಕದ ಪ್ರಕಾರ ಒಟ್ಟು ಕೂಡಿದ ಗಂಡಸರೂ ಹೆಂಗಸರೂ ಒಂದು ಸಣ್ಣ ಕೋಣೆಗಳಲ್ಲಿ ಒಟ್ಟಾಗಿ ಇರುತ್ತಾರೆ. ಇದರಿಂದ ಕಲಹಗಳೂ, ಜಗಳಗಳೂ, ಬಲಾತ್ಕಾರ ಸ್ತ್ರೀಸಂಗ ಮೊದಲಾದವುಗಳೂ ಅವರೊಳಗೆ ನಡೆಯುತ್ತವೆ. ಕೆಲವು ಸಾರಿ ತೋಟಗಳ ಯಜಮಾನರು ಈ ಹೆಂಗಸಿನೊಡನೆ ಇಷ್ಟು ಗಂಡಸರು ಹೋಗಬಹುದು, ಆ ಹೆಂಗಸಿನೊಡನೆ ಅಷ್ಟಷ್ಟು ಗಂಡಸರು ಹೋಗಬಹುದೆಂಬ ಆಜ್ಞೆಯನ್ನು ನಿರ್ವಾಹವಿಲ್ಲದೆ ಮಾಡಬೇಕಾಗುತ್ತದಂತೆ. ಈ ದುಸ್ಥಿತಿಯು ಹೋಗಿ, ಹೆಂಗಸರ ಪಾತಿವ್ರತ್ಯವು ಉಳಿಯುವಹಾಗೆ ಈ ಪದ್ಧತಿಯನ್ನು ಕೂಡಲೇ ನಿಲ್ಲಿಸುವ ಹಾಗೆ ಪ್ರತಿ ಒಬ್ಬನೂ ಪ್ರಯತ್ನಿಸಬೇಕೆಂತ ಭಾಷಣದಲ್ಲಿ ವಿಜ್ಞಾಪಿಸಿಕೊಂಡರು.

ಬಾತಮಿಗಳು.

ಮುಲ್ಕಿ:— ಇಲ್ಲಿಯ ಆಸ್ಪತ್ರೆಯ ಹೊಸ ಕಟ್ಟೋಣಗಳು ತಯಾರಾಗಿ ಬಹಳ ಸಮಯವಾದರೂ ಇವುಗಳಿಗೆ ಮುಹೂರ್ತವು ಇನ್ನೂ ಆಗಲಿಲ್ಲ. ಯಾವ ಕಾರಣದಿಂದಲೋ ತಿಳಿಯದು. ಹೀಗೆ ಇವುಗಳನ್ನು ಖಾಲಿಬಿಡುವದಕ್ಕಿಂತ [illegible] ಮುಗಿದ ಮೇಲಾದರೂ ಕಟ್ಟಿಸಬಹುದಿತ್ತು. ಈ ಕಟ್ಟೋಣಗಳಿರುವ [illegible] ರಮಿವಾಲಿಯಿಲ್ಲದೆ ಇರುವದರಿಂದ ಅತ್ತಿತ್ತ ತಿರುಗಾಡುವ ಮೃಗಗಳಿಗೆ ವಾಸಸ್ಥಲ [illegible] ಪೋಕರಿ ಸ್ವಭಾವದ ಜನರಿಗೂ ಈ ಕಟ್ಟೋಣಗಳು ಒಳ್ಳೇ [illegible]

ಪರಸ್ಪರ ಸಹಾಯಕ ಸಂಘದ ಚಟುವಟಿಕೆಯು ಇನ್ನೂ [illegible] ಲ್ಲಿಯೇ ನಿಂತುಹೋಗಿಯದೆ ವಿನಹ ಮುಲ್ಕಿಯನ್ನು ಇನ್ನೂ [illegible] ವರಿಲ್ಲ. ಕ್ಲಬ್ಬ ಆಯಿತು, ಕ್ಲಬ್ಬಿನಲ್ಲಿ ವಾದಕಸ್ಪರ್ಧೆ [illegible] ಯುವಕರು ಬಂದು ಕ್ಲಬ್ಬಿನಲ್ಲಿ ಕಳೆಯುತ್ತಿರುವ ಸಮಯದ ಸ್ವಲ್ಪ ಅಂಶವನ್ನಾದರೂ ಪರಸ್ಪರಸಹಾಯ ಸಂಘದಿಂದ ಊರಿಗೆ ಆಗುವ ಒಳ್ಳೇದನ್ನು [illegible] ತಿಳಕೊಳ್ಳುವದರಲ್ಲಿ ಕಳೆಯ ಕೂಡದೋ?

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಇಳಿದುಹೋಗುವ ಮಾರ್ಗದಲ್ಲಿ ಒಂದು ಮೆಟ್ಟು ಕಟ್ಟಿಸೋಣಾಗಿ ಗಾಡಿಗಳ ಇಮದು ರಸ್ತೆಗೆ ಅಡ್ಡವಾಗಿ [illegible] ಕೆಲವು ತಿಂಗಳುಗಳಾದವು. ದೇವಸ್ಥಾನದ ಸುತ್ತುಮುತ್ತಲೂ ಅನೇಕ ಮನೆಗಳೂ ಅಂಗಡಿಗಳೂ ಸಹ ಇವೆ. ಇವುಗಳಿಗೆ ಸಾಮಾನುಗಳನ್ನು ಒಯ್ಯಲಿಕ್ಕೆ ಗಾಡಿ ಹೋಗುವ ಮಾರ್ಗವು ಮುಖ್ಯವಾದದ್ದು ಇರದು. ಬಹಳ ವರುಷಗಳಿಂದ ಈ ಮಾರ್ಗವಾಗಿಯೇ ಗಾಡಿಗಳು ಹೋಗುತ್ತ ಬರುತ್ತ ಇದ್ದವು. ಒಂದುವೇಳೆ ಈ ಮಾರ್ಗವು ಖಾಸಗಿದ್ದು ಎಂತಾದರೂ ಜನರ ಅನುಭವ ರಸ್ತೆಗೆ ಇದು ಅಗತ್ಯವಿದ್ದದ್ದರಿಂದ ಸರಕಾರದವರು ಈ ಮಾರ್ಗವನ್ನು ಸ್ವಾಧೀನಮಾಡಿಕೊಂಡು ಇನ್ನೂ ಅದರಲ್ಲಿರುವ ಆತಂಕವನ್ನು ತೆಗೆದುಬಿಡಲಿಲ್ಲ ಯಾಕೆ ಎಂಬುದು ಊಹಿಸಲಾಗುವದಿಲ್ಲ. ಕಲೆಕ್ಟರ ದೊರೆಗಳು ಇಲ್ಲಿ ಕೆಲವು ದಿವಸಗಳಿಂದ ಇದ್ದರೂ ಇವರಿಗೆ ಜನರ ಈ ಸಂಕಷ್ಟವನ್ನು ಯಾರೂ ತಿಳಿಸಲಿಲ್ಲ. ಎಲ್ಲರೂ ಕ್ಲಬ್ಬಿನ ಗೋಜಿಯಲ್ಲಿಯೋ ಅಥವಾ ಇತರ ಯಾವ ಗಲಾಟೆಯಲ್ಲಿಯೋ ಇದ್ದರೆಂತ ತೋರುವದಿಲ್ಲ. ನವ ಡಿಪ್ಯುಟಿ ತಹಶೀಲ್ದಾರರಾಗಿರುವ ಸುಲ್ತಾನ ಸಾಹೇಬ ಬಹದ್ದೂರರವರು ಮಾರ್ಗಗಳಲ್ಲಿ [illegible] ಇಕ್ಕೆ ಆತಂಕ ಉಂಟಾಗದಂತೆ ಮೇಲ್ವಿಚಾರ ನಡಿಸುವರೆಂಬ ಸಂಗತಿಯು ನಮಗೆ ತಿಳಿದಿರುವದರಿಂದ ಇವರಾದರೂ ದೇವಸ್ಥಾನದ ಮಾರ್ಗದಲ್ಲಿರುವ ಈ ಮೆಟ್ಟನ್ನು ತೆಗಿಸಿ ಹಾಕಿ ಮಾರ್ಗವನ್ನು ಸರಕಾರಿ ಮಾರ್ಗವಾಗಿ ಮಾಡುವ ಏರ್ಪಾಡ ಕೂಡಲೆ ನಡಿಸುವರೆಂಬುದಾಗಿ ನಂಬುತ್ತೇನೆ.

ಪೋಲೀಸಿನವರು ಮಾರ್ಗಗಳಲ್ಲಿ ಗಸ್ತು ತಿರುಗುವರಂತೆ. ಯಾವ ಕಾಲದಲ್ಲಿಯೋ ತಿಳಿಯದು. ಬಹುಶಃ ಯಾರ ಕಣ್ಣಿಗೂ ಗೋಚರವಾಗದಂತೆ ಇವರು ತಿರುಗುತ್ತಿದ್ದಾರೆಂತ ಕಾಣುತ್ತದೆ. ಟ್ರ್ಯಾಕ್ಸಿಗಳಲ್ಲಿ ಮತ್ತು ಮೋಟರ್ ಬಸ್ ಗಾಡಿಗಳಲ್ಲಿ ಇಂತಿಷ್ಟ ಪ್ರಯಾಣಿಕರನ್ನು ಒಯ್ಯಬೇಕು ಎಂತ ಬರಹವಿದೆ. ಇದು ಯಾವುದೋ ಒಂದು ಆಕ್ಟಿನ ಪ್ರಕಾರ ಆಗತಕ್ಕದ್ದೆಂದು ತಿಳಿಯುತ್ತೇನೆ. ಇಷ್ಟು ಬರಹಕ್ಕೆ ಒಂದು ಆಕ್ಟು. ಈ ಲೆಕ್ಕವನ್ನು ಮುಂದಕ್ಕೆ ಗುಣಿಸಿ ಪರಿಶೋಧಿಸಿ ನೋಡಿದ್ದಲ್ಲಿ ಟ್ರ್ಯಾಕ್ಸಿಯ ಗಾಡಿಗಳಲ್ಲಾಗಲಿ ಮೋಟರ್ ಬಸ್ಸುಗಳಲ್ಲಾಗಲಿ ಎಂಥಾ ಗಂಡಾಂತರಗಳು ಉಂಟಾದರೂ ಅವುಗಳನ್ನು ಕಡಮೆ ಮಾಡುವ ಅಥವಾ ಅವುಗಳ ಶೋಧನೆ ನಡಿಸಿ ಜನರಿಗೆ ಉಂಟಾಗುವ ಅಪಾಯ ಅನನುಕೂಲತೆಗಳನ್ನು ತಗ್ಗಿಸುವ ಯಾವ ಆಕ್ಟು ಇರದೆಂದು ಸ್ಪಷ್ಟವಾಗಿ ಕಾಣುತ್ತದೆ. ಪೋಲೀಸಿನವರ ಗಸ್ತು! ಇವರ ಕಣ್ಣಿಗೆ ಇದು [illegible] ಬೀಳದು. ಬಿದ್ದರೂ ಇದಕ್ಕೆ ಆಕ್ಟು ಇಲ್ಲ! ಹಾಡ! ಮುಲ್ಕಿಯಿಂದ [illegible] ಒಂದು ಸ್ಪೆಶಲ್ ಟ್ರ್ಯಾಕ್ಸಿಯು ಹೊರಟಾಯಿತು. [illegible] ದರಗಳ [illegible] ಎಲ್ಲಿಗೆ ಹೋದಾಯಿತು—ಮಂಗಳೂರಿಗೆಂತ. ಪಾವಂಜೆ ಕಡವಿನ [illegible] ಬಂತು—ನಂತರ ಟ್ರ್ಯಾಕ್ಸಿಯು ಇಲ್ಲ ಏನೂ ಇಲ್ಲ. ಪ್ರಯಾಣಿಕರು ಮಂಗ[illegible] [illegible] ಇನ್ನೊಂದು—ಪಾವಂಜೆ ಕಡವು ದಾಟಿ ಟ್ರ್ಯಾಕ್ಸಿಯು ಥಂಡಿಯು ಸ್ವಲ್ಪ ಮುಂದರಿಸಿ ಹೋಗುತ್ತಿದ್ದಾಗ ಗಾಡಿಯು ಬಿದ್ದು ಹಲವರಿಗೆ ಜಖಂ ಆಯಿತು. ಒಬ್ಬಿಬ್ಬ ಜಖಂ ಆದವರನ್ನು ಮೋಟರ್ ಥಂಡಿಯು ಹೆಕ್ಕಿ ಕೊಂಡುಹೋಯಿತು. ತಿಂಗೊಂದು—ಟ್ರ್ಯಾಕ್ಸಿಯು ಥಂಡಿಯು ಮುಲ್ಕಿಯಿಂದ ಪಾವಂಜೆ ಕಡವಿಗೆ ಬಂದು ತಲ್ಪುವಷ್ಟರಲ್ಲಿ ಗಾಡಿಚಕ್ರದ ಕಬ್ಬಿಣದ ಪಟ್ಟಿಗಳು ಬಿದ್ದುಹೋದವು. ಕಡೆಗೊಂದು—ಇದಾದರೋ ಪಾಪ! ಗರಿಬರ ಸುಲಿಗೆ ಎಂತ ಹೇಳಬಹುದು. ಮೋಟಾರ್ ಥಂಡಿಯಲ್ಲಿ ಪ್ರಯಾಣಿಕರ ಚಾರ್ಜ್ ಬೇರೆ; ಲಗ್ಗೇಜು ಫೀಸು ಬೇರೆ. ಮತ್ತು ಈ ಲಗ್ಗೇಜನ್ನು ಒಂದು ಮೋಟಾರಿನಿಂದ ಇನ್ನೊಂದಕ್ಕೆ ಒಯ್ಯುದಕ್ಕೆ ಗರಿಬರ ಸುಲಿಗೆ ಬೇರೆ. ಮತ್ತು ಈ ಸುಲಿಗೆಗೆ ಒಳಗಾಗದಿದ್ದರೆ ಮೋಟಾರಿನ ಸಾರಥಿ ಡ್ರೈವರುಗಳ ವಕ್ರದೃಷ್ಟಿಗೆ ಗುರಿಯಾಗುವದು. ಬೇರೆ—ಕಡವುಗಳಲ್ಲಿ ಗುತ್ತಿಗೆದಾರರ ದೋಣಿಗಳೇ ಬಹಳ ಕಡಮೆ. ಇದ್ದ ದೋಣಿಗಳು—ಇದು ಇನ್ನೊಂದು ಸುಲಿಗೆ. ಹಾಗೂ ಹೀಗೂ ಗಾಡಿಗಳ ದರಗಳನ್ನೆ, ಮೊಬಲಗನ್ನು [illegible] ಸುದ್ದಿನದ ಪರಿಯು [illegible] ಇದ್ದರೆ ಸರಕ್ತವಾಗಿ ಮರ್ಯಾದೆಯಿಂದ [illegible] ವರು ಪ್ರಯಾಣ ಬೆಳೆಸಬಹುದು. ಇನ್ನು ಹೆಚ್ಚು ಬರೆದರೆ ಸಂಪಾದಕನಿಗೆ ಈ ಪತ್ರಿಕೆಯಲ್ಲಿ ಪ್ರಯೋಗ ಮಾಡಲಿಕ್ಕೆ ಟಿಕೇಟು ಉಳಿಯುವದು. ಕಷ್ಟವಾದೀತು. ಆದ್ದರಿಂದ ಸಾಕು. ತಿರುಗೊಮ್ಮೆ ಪೋಲೀಸು ಗಸ್ತು! ಚಕ್ರದೊಡ್ಡ [illegible] ಸರ್ಕಾರು! ಆಕ್ಟು ಬೇಕು. ಹೆಚ್ಚಿನ ವರ್ತಮಾನಗಳನ್ನು ಇನ್ನೊಮ್ಮೆ ಬರೆಯಲೆತ್ನಿಸುವೆನು.

ಕುಂಬಳೆ:— ಪುತ್ತೂರು ಡಿವಿಜನಲ್ ಆಫೀಸರವರು ಇದೇ ತಾ. [illegible]ರಿಂದ [illegible] ವರೆಗೆ ಇಲ್ಲಿ ಜಮಾಬಂದಿ ನಡಿಸಿ ತಾ. [illegible] ಸಂಜೆ ಸವಾರಿ ಪುತ್ತೂರಿಗೆ ತೆರಳಿದರು.

ಈ ತಿಂಗಳ [illegible] ಮಳೆ ಬಂದ ಸ್ಥಿತಿ [illegible] ಬದಲಾವಣೆಯಿಂದ ಈ ಜಿಲ್ಲೆಯ [illegible] ಪ್ರಯಾಣಿಕರಿಗೆ ಹೆಚ್ಚಿನ [illegible] ಪ್ರಯಾಣಕ್ಕೆ ಅನುಕೂಲ [illegible] ಬದಲಾಯಿಸಿ [illegible] ಅಗತ್ಯವಾಗಿದೆ. ಮತ್ತು [illegible] ಅವಶ್ಯ.

ಪುತ್ತೂರು:— ಇದೇ ತಾ. [illegible] ಇಲ್ಲಿ ಕಠಿಣ ಮಳೆಯಿಂದ [illegible] ಹೊಸ ಕಟ್ಟೋಣ ಕಟ್ಟುವದರಿಂದ ಅನೇಕ ತೊಂದರೆ ಉಂಟಾಯಿತು. ಕೆಲವು ಕಟ್ಟೋಣಗಳ ಗೋಡೆಗಳು ಬಿದ್ದುಹೋಗಿ ವಿಶೇಷ ನಷ್ಟವುಂಟಾಯಿತು.

ಇಲ್ಲಿಯ ಮುನ್ಸಿಫ ಕೋರ್ಟಿನ ಹೆಡ್ ಕ್ಲಾರ್ಕ [illegible] ರಂಗರಾವರಿಗೆ [illegible] ಇಲ್ಲಿಗೆ ಮಿ. ಜಿ. ಲೋಬೋ ಹೆಡ್ ಕ್ಲಾರ್ಕರಾಗಿ ಬಂದಿರುವರು.

ಇಲ್ಲಿಯ [illegible] ಹೈಸ್ಕೂಲಿನ ವಿದ್ಯಾರ್ಥಿಗಳಿಗೆ [illegible] ಪುಸ್ತಕಗಳು [illegible] ತೊಂದರೆ ಆಗುತ್ತಿದೆ.

ಪತ್ರವ್ಯವಹಾರ.

ಕಾಸರಗೋಡು ಮಲಯಾಳಿಗಳು.

ಅಯ್ಯಾ ಸಂಪಾದಕರೆ,

ಜಿಲ್ಲೆ ವಿಭಜನೆಯ ವಿಷಯವಾಗಿ ಕೋಟಿಕಲ ಮಮ್ಮುಂಞಿಯವರು ಬರೆದ ಲೇಖನವೂ ತಮ್ಮ ಅಭಿಪ್ರಾಯವೂ [illegible] ನನ್ನ ದೃಷ್ಟಿಗೆ ಬಿದ್ದುದರಿಂದ ಈ ವಿಷಯದಲ್ಲಿ [illegible] ತೋರಿತು. [illegible] ಒಂದಿಗೆ ನನ್ನ ಈ [illegible] ಉದಾರಭಾವದಿಂದ ಕಾವುಗಳ ಒದಬಿಡಬೇಕೆಂದು ನನ್ನ ಪ್ರಾರ್ಥನೆ.

[illegible] ಕಾಸರಗೋಡು [illegible] ಸಭೆ ಸೇರಿದಂತೆ [illegible] ಹೊಸ [illegible] ಕಾಸರಗೋಡು ಮಲಯಾಳಿ [illegible] ಗೊತ್ತು—ಅಂದಾಜಿಗೆ [illegible] ಅವರ ಸಂಖ್ಯೆ [illegible]

[illegible] ಜಿಲ್ಲೆ ವಿಭಜನೆಯು [illegible] ಅಭಿಪ್ರಾಯಪಡುವದಲ್ಲದೆ, [illegible] ಕಾಸರಗೋಡು ಮಲಯಾಳಿಗಳಿಗೆ ಅದರಿಂದುಂಟಾಗತಕ್ಕ ಲಾಭನಷ್ಟಗಳೇನೆಂದೂ ಈಗ ಅವರು ಯಾವುದಾದರೂ ಸಂಕಷ್ಟಗಳನ್ನು ಅನುಭವಿಸುತ್ತಾರೆಯೇ ಎಂದೂ ವಿಚಾರಿಸುವವರು ಯಾರೂ ಇಲ್ಲ. ಜಿಲ್ಲೆಯು ಸಣ್ಣದಾಗಿ ಹೋಗುವುದೇನೋ ನಿಜವೆ. ಆದರೆ ಮಲಯಾಳಿಗಳಾದ ನಾವು ಈ ಜಿಲ್ಲೆಯ ಅಂಗವಾಗಿರತಕ್ಕವರೆಂಬ ವಿಷಯವನ್ನೂ ಈ ಜಿಲ್ಲೆಗಿಂತ ಸಣ್ಣ ಜಿಲ್ಲೆಗಳು ನಮ್ಮ ಸಂಸ್ಥಾನದಲ್ಲಿಯೂ ಇತರ ದೇಶಗಳಲ್ಲಿಯೂ ಇಲ್ಲವೋ ಎಂಬುವದನ್ನೂ ನಾವು ಪರ್ಯಾಲೋಚಿಸಬಹುದು. ಅಥವಾ ಜಿಲ್ಲೆಯ ಮಹತ್ವಕೆಯು ಕಡಿಮೆಯಾಗುವುದೆಂದಿದ್ದರೆ ಕೊಡಗ ಸೀಮೆಯನ್ನು ಇದಕ್ಕೆ ಸೇರಿಸಬೇಕೆಂಬ ಸರಕಾರದ ಆಲೋಚನೆಯು, [illegible] ಇದನ್ನು ಉತ್ತರ ಕನ್ನಡ ಜಿಲ್ಲೆಯ ಭಾಗವಾಗಿ ಸೇರಿಸುವುದು ಯುಕ್ತವೆಂಬ ವಿಷಯದಲ್ಲಿ ಸರಕಾರದ ದೃಷ್ಟಿಯನ್ನಾಕರ್ಷಿಸುವುದರಲ್ಲಾಗಲಿ ದೇಶಾಭಿಮಾನಿಗಳು ಏಕೆ ಪ್ರಯತ್ನಿಸಕೂಡದು. ಕಾಸರಗೋಡು ಮಲಯಾಳಿಗಳಾದ ನಮ್ಮನ್ನು ಮಲಬಾರು ಜಿಲ್ಲೆಗೆ ಸೇರಿಸಿದರೆ ಹೊಸ ಕಟ್ಟೋಣ ಮುಂತಾದವುಗಳಿಗೆ ಹೆಚ್ಚು ಹಣ ಬೇಕಾಗುವುದೆಂಬುದೂ ಸರಿಯೆ. ಸುಮಾರು ೪ ಲಕ್ಷ ರೂಪಾಯಿಗಳ ವರೆಗೆ ತೀರ್ವೆ ಕೊಟ್ಟು ಬರುವ ನಮ್ಮ ಕ್ಷೇಮಕ್ಕಾಗಿ ದಯಾಳುವಾದ ಸರಕಾರವು ಮನಸ್ಸು ಮಾಡಿದರೆ "ಮನಸಿದ್ದಲ್ಲಿ ಮಾರ್ಗವಿದೆ" ಎಂಬ ಮಾತಿಗನುಸಾರವಾಗಿ ಹೊಸ ಕೋರ್ಟುಕಚೇರಿಗಳನ್ನು ಆದಷ್ಟು ಕಡಮೆ ಖರ್ಚಿನಲ್ಲಿ ಸ್ಥಾಪಿಸುವುದು ಅಷ್ಟೊಂದು ಪ್ರಯಾಸದ ಕೆಲಸವಲ್ಲ. ಅಥವಾ ಮಲಬಾರು ಜಿಲ್ಲೆಯನ್ನು ವಿಭಾಗಿಸಿದರೇನೇ ನಮ್ಮನ್ನು ಒಬ್ಬ ಮಲಬಾರ್ ಡಿಸ್ಟ್ರಿಕ್ಟ ಕಲೆಕ್ಟರವರ ಕೈಕೆಳಗಿರಿಸುವುದೂ ಗವರ್ನಮೆಂಟಿಗೆ ಸಾಧ್ಯವೆ. ಮಿತವ್ಯಯ ಮಾಡಬೇಕೆಂದು ಈಗ ಸರಕಾರಕ್ಕೆ ಬುದ್ಧಿ ಹೇಳಿ ಕೊಡುವ ಪ್ರವೀಣರು ಹಿಂದುಸ್ಥಾನದ ರಾಜಧಾನಿಯನ್ನು ಕಲ್ಕತ್ತಾ ಪಟ್ಟಣದಿಂದ ದಿಲ್ಲಿಗೆ ವರ್ಗಾಯಿಸುತ್ತಿದ್ದಾಗ ಎಲ್ಲಿದ್ದರೂ ಕಾಣೆ.

"ಅಶಕ್ತರಿಗಾ ಸಾಹಸವೇಕೆ? [illegible] ಕಷ್ಟವೇನು?" ಎಂದು ವಾಚಕರು ಭಾವಿಸಬಹುದು. ಒಂದೊಂದಾಗಿ ಹೇಳುವೆನು. ದಯವಿಟ್ಟು ಕೇಳಿ. ನಾವು ಮಲಯಾಳಿಗಳು. ನಮ್ಮ ಭಾಷೆಯೂ ಆಚಾರಗಳೂ ಕುಟುಂಬ ಕಟ್ಟಳೆಗಳೂ ಸಾಮುದಾಯಿಕ ಲಕ್ಷಣಗಳೂ ಮಲಬಾರಿನವರೊಂದಿಗೆ ಒಂದೇ ಆಗಿರುವವು. ಸರ್ವ ವಿಷಯಗಳಲ್ಲಿಯೂ ಮಲಯಾಳಿಗಳಾದ ನಮ್ಮನ್ನು ಸುಮಾರು ನೂರು ವರ್ಷಗಳ ಹಿಂದೆ ಈ ಕನ್ನಡ ಜಿಲ್ಲೆಗೆ ಸೇರಿಸಿದಂದಿನಿಂದ [illegible] ಇಲ್ಲದ ಶೋಚನೀಯ ಸ್ಥಿತಿಯಲ್ಲಿರುವೆವು. ಪ್ರತಿ ದೇಶದಲ್ಲಿಯೂ, ಪ್ರತಿ ಜನಾಂಗದಲ್ಲಿಯೂ ವಿದ್ಯಾದಾನವನ್ನು ಮಾತೃಭಾಷೆಯಲ್ಲಿಯೇ ಮುಖ್ಯವಾಗಿ ಮಾಡುವರು. ಹಿಂದೂಸ್ಥಾನದಲ್ಲಿ ಆಂಗ್ಲೇಯ ಭಾಷೆಯು ಪೂಜ್ಯಸ್ಥಾನವನ್ನೂ ಮಾತೃಭಾಷೆಯು ಮಧ್ಯಮಸ್ಥಾನವನ್ನೂ ಹೊಂದಿವೆಯಷ್ಟೆ. ಆದರೆ ಕಾಸರಗೋಡು ಮಲಯಾಳಿಗಳಾದ ನಮ್ಮ ಮಧ್ಯದಲ್ಲಿ ಮಲಯಾಳ ಭಾಷೆಯು ಪೂಜ್ಯಸ್ಥಾನವನ್ನು (೦) ಹೊಂದಿರುವುದು ಆಶ್ಚರ್ಯವಲ್ಲವೆ? ನಾವು ಪ್ರಾಥಮಿಕ ವಿದ್ಯಾಭ್ಯಾಸವನ್ನು ಕನ್ನಡದ ಮುಖಾಂತರವೂ ಪ್ರೌಢ ವಿದ್ಯಾಭ್ಯಾಸವನ್ನು ಆಂಗ್ಲೇಯ ಕನ್ನಡ ಭಾಷೆಗಳ ಮುಖಾಂತರವೂ ಪಡೆಯಬೇಕೆಂದಿರುವದು ನಾವು ಅತಿ ಬುದ್ಧಿಗೇಡಿಗಳಾಗಿರುವುದರಿಂದಲೇ ಆಗಬೇಕು. ಅಕ್ಷರಗಳನ್ನು ಕಲಿಯುವುದು ಪ್ರಯಾಸವಲ್ಲದಿದ್ದರೂ ಹುಟ್ಟಿದಂದಿನಿಂದ ಕೇಳದಂತಹ ಭಾಷೆಯನ್ನು ಕಲಿಯಬೇಕೆಂದರೆ ಮಕ್ಕಳಿಗೆ ಬಲು ಕಷ್ಟವಲ್ಲವೆ? ತಕ್ಕಷ್ಟು ಭಾವನೆಗಳೂ ವಿಷಯ ಜ್ಞಾನವೂ ಇದ್ದರೂ ಹತ್ತು ಹನ್ನೆರಡು ವರ್ಷ ಪ್ರಾಯವಾದ ಹುಡುಗರು ಮೊದಲನೆಯ ತರಗತಿಯಲ್ಲೇ ಸೋತು ಹೋಗಿ ಬಾಯಿ ಗಟ್ಟಿಮಾಡುವುದಕ್ಕಾಗಿಯೇ ಒಂದೆರಡು ವರ್ಷದ "ಸರ್ವೀಸು" ಪಡೆಯಬೇಕಾಗಿರುವುದೆಂಬ ಮಾತು ಉತ್ಪ್ರೇಕ್ಷೆಯಲ್ಲ. ಹೀಗೆ ಆರೇಳು ವರ್ಷ "ಬುಡಗಟ್ಟಿ" ಮಾಡುವಷ್ಟರಲ್ಲಿ ಪ್ರೈಮರಿ ತರಗತಿಯಲ್ಲಿಯೇ ಹುಡುಗರಿಗೆ ಮೀಸೆ ಬಂದಹಾಗೆ ಆಗುವುದು. ಈ ಮಾತಿನ ಯಥಾರ್ಥವನ್ನು ನಂಬದಿರುವವರು ದಯಮಾಡಿ ಕಾಸರಗೋಡು ಸೆಕೆಂಡರಿ ಶಾಲೆಗೊಮ್ಮೆ ಹೋಗಿ ನೋಡಬೇಕೆಂದು ನನ್ನ ಪ್ರಾರ್ಥನೆ. ಇತ್ತಲಾಗಿ ಸ್ಥಾಪಿತವಾದ ಎಲಿಮೆಂಟರಿ ಶಾಲೆಗೆ ಹೋಗುವ ಹುಡುಗರು ಭಾಷೆ ಕಲಿಯುವಷ್ಟರಲ್ಲೇ ಶಾಲೆ ಬಿಡಬೇಕಾದ ಕಾಲವೂ ಪ್ರಾಪ್ತವಾಗುವುದು. ಈ ತರದ ವಿದ್ಯೆಯು ನಿಜವಾದ ವಿದ್ಯೆಯೂ [illegible] ವಿದ್ಯೆಯೂ ನಾಸ್ತಿಯೆ. ಬಾಲಕ ವಿದ್ಯೆಯ ರೀತಿಯು ಹೀಗಾಯಿತು. ಇನ್ನು ಬಾಲಿಕಾ ವಿದ್ಯೆಯೋ? ಜನಾಂಗದ ಅಭ್ಯುದಯಕ್ಕೆ ನಿಜವಾದ ಬುನಾದಿಯು ಸ್ತ್ರೀವಿದ್ಯಾಭಿವೃದ್ಧಿಯೆಂಬುದು ಸರ್ವಸಮ್ಮತವಾದ ಸಂಗತಿ. ಆದರೆ ನಮ್ಮ ಸ್ತ್ರೀಯರು ಮನೆ ಮಡಕೆ ತೊಳೆದು ಮೋಕ್ಷ ಹೊಂದಬೇಕಾಗಿರುವುದು. ವಿದ್ಯಾಭ್ಯಾಸಕ್ಕೆ ಯಾವ ಮಾರ್ಗವೂ ಇಲ್ಲದೆ ಅವರು ಶುದ್ಧ ಪಶುಪ್ರಾಯರಾಗಿಯೇ ಕಾಲ ಕಳೆಯುತ್ತಾರೆ. "ತೃಣಂ ನಖಾದನ್ನಪಿ ಜೀವಮಾನಃ । ತದ್ಭಾಗಧೇಯಂ ಪರಮಂ ಪಶೂನಾಂ ॥" ಎಂಬಂತೆ ಅವರು ಹುಲ್ಲು ತಿನ್ನದಿರುವುದು ಮೃಗಗಳ ಭಾಗ್ಯವೆಂದೆನಿಸಬೇಕು.

ನಮ್ಮಲ್ಲಿ ವಿದ್ಯಾಭಿವೃದ್ಧಿ ಇಲ್ಲದಿರುವುದಕ್ಕೆ ಭಾಷಾ ವೈಪರೀತ್ಯವು ಸರಿಯಾದ ಕಾರಣವಲ್ಲವೆಂದೂ ಈಗ ಜಿಲ್ಲೆಯಲ್ಲಿ ಉನ್ನತ ಸ್ಥಿತಿಗೆ ಬಂದಿರುವ ಸಾರಸ್ವತರೂ ಕೊಂಕಣಸ್ಥರೂ ಕಥೋಲಿಕರೂ ನಮ್ಮಂತೆಯೇ ಅನ್ಯಭಾಷೆಯಾದ ಕನ್ನಡದ ಮುಖಾಂತರವೇ ವಿದ್ಯಾರಂಭವನ್ನು ಮಾಡಬೇಕಾಗಿರುವುದೆಂದೂ ಕೆಲವರು ವಾದಿಸಬಹುದು. ಆದರೆ ನಮ್ಮ ಸ್ಥಿತಿಗೂ ಅವರ ಸ್ಥಿತಿಗೂ ಅಜಗಜಾಂತರವಿರುವುದು. ಅವರು ಪಟ್ಟಣವಾಸಿಗಳು, ನಾವು ಹಳ್ಳಿಯವರು; ಅವರು ಕನ್ನಡ ಭಾಷೆಯ ಸಂಸರ್ಗದಲ್ಲಿರುವವರು, ನಾವು ಹಾಗಲ್ಲ; ಅವರು [illegible] ಅನುಕೂಲ ಪಡೆಯ[illegible] ಈಗ ವಿದ್ಯಾವಂತರೂ ಉದ್ಯೋಗಸ್ಥರೂ ವ್ಯಾಪಾರಾದಿ ಸಂಪನ್ನ ವೃತ್ತಿಯಲ್ಲಿರುವವರು. ನಾವು ಹೆಚ್ಚಾಗಿ ಬೇಸಾಯ ಕಸಬಿನವರು; ಜಿಲ್ಲೆಯ ಮುಖ್ಯ ಪಟ್ಟಣಗಳೂ ಶಾಲೆಗಳೂ ಚಂದ್ರಗಿರಿ ಹೊಳೆಯ ಉತ್ತರದಲ್ಲಿರುವವು. ನಮ್ಮವರಲ್ಲಿ ಹೆಚ್ಚಿನವರ ಸ್ತ್ರೀಯರು ಆ ಹೊಳೆಯನ್ನು ದಾಟಿದರೆ ಜಾತಿ ಹೋಗುವದೆಂಬ ಕಟ್ಟಳೆಯು [illegible] ಯವಾಗಿರುವುದರಿಂದ ಕುಟುಂಬ ಸಮೇತರಾಗಿ ವಿದ್ಯಾಭ್ಯಾಸಂಗಳ್ಕೆ ಅನುಕೂಲತೆಯುಳ್ಳ ಸ್ಥಳದಲ್ಲಿರಲು ಸಾಧ್ಯವಲ್ಲ; ಪೇಟೆಯ ಮಗನು ಗುಮಾಸ್ತನಾಗಿಯೂ ಅವನ ಮಗನು ಮತ್ತೂ ದೊಡ್ಡ ಉದ್ಯೋಗಸ್ಥನಾಗಿಯೂ ಹೀಗೆ ತಲಾಂತರಗಳ ಮುಂದುವರಿಯುವ ಹಾಗೆ ಪ್ರೋತ್ಸಾಹಕ್ಕೆ ತಕ್ಕ ಫಲವನ್ನನುಭವಿಸುವುದಕ್ಕೆ ಜಿಲ್ಲೆಯ ಇತರ ವರ್ಗದವರಿಗೆ ಅನುಕೂಲವಿದೆ, ನಮಗಾದರೂ ಅದಾವುದೂ ಇಲ್ಲ; ಮೇಲೆ ಹೇಳಿದವರಿಗೆ ಸ್ವಂತ ಬರಹವೂ ಇಲ್ಲ, ಅವರ ಭಾಷೆಯನ್ನು ಯಾವ ಶಾಲೆಯಲ್ಲಿಯೂ ಕಲಿಸುವುದು ಇಲ್ಲ, ನಮಗಾದರೋ ಮಲೆಯಾಳ ಬರಹವೂ ಗ್ರಂಥಗಳೂ ಹೇರಳವಾಗಿವೆ. ಮಲಬಾರಿನಲ್ಲಿ ಅನೇಕ ಶಾಲೆಗಳೂ ಇವೆ. ಇಲ್ಲದವರಿಗೆ ಇಲ್ಲದುದರಿಂದಾಯಿತು, ಇದ್ದವರಾದರೂ ಇದ್ದುದನ್ನು ಅನುಭವಿಸಬಾರದೆಂಬುದು ಮಹಾಸಂಕಟವೇ. "ಕೊಡುವದ ಪುಣ್ಯಾತ್ಮರೆಂತೂ ಕೊಡುವುದಿಲ್ಲ, ಈ ಕೊಡುವ ಮುಂಡೆಗೇನಾಯಿತು" ಎಂದು ಒಬ್ಬ ಯಾಚಕನು ಒಬ್ಬ ಧರ್ಮಿಷ್ಠೆಯನ್ನು ಗದರಿಸಿದನಂತೆ. ಇತರರಿಗೆ ಭಾಷೆಯ ಅಭ್ಯಂತರವನ್ನು ಇಲ್ಲದಿರುವ ಸ್ಥಿತಿಗಳೇ ಒದಗಿರುವಲ್ಲಿ ಭಾಗ್ಯಹೀನರಾದ ನಮಗೆ ಆ ಅಭ್ಯಂತರಕ್ಕೆ ಶಕ್ತಿಗೊಡುವ ಸ್ಥಿತಿಗಳೇ ಲಕ್ಷ್ಯಾನುಭವವಾಗಿರುವವು. ಹೀಗಾದುದರಿಂದಲೇ ೧೦೦,೦೦೦ಕ್ಕಿಂತ ಹೆಚ್ಚಿದ ಜನಸಂಖ್ಯೆಯುಳ್ಳ ಕಾಸರಗೋಡು ಮಲಯಾಳಿಗಳಲ್ಲಿ ಬಿ. ಎ. ಕಲಿತವರು ಒಬ್ಬರೂ ಮೆಟ್ರಿಕ್ ಮತ್ತು ಸ್ಕೂಲ್ ಫೈನಲ್ ಪಾಸಾದವರು ಆರೇಳು ಮಂದಿಯೂ ಆಗಿರುವರು. ಸಾಕಲ್ಲವೇ ನಮಗೀಗ ನಿಜವಾಗಿಯೂ ಪರಮಾನಂದವೇ.

ನಮ್ಮ ಕಷ್ಟಸ್ಥಿತಿಯನ್ನು ಕುರಿತು ಇನ್ನೂ ಹೆಚ್ಚು ಹೇಳಲಿಕ್ಕಿರುವುದು. ಮಲಬಾರಿಗೆ ಸೇರಿಸಿದರೆ ನಮಗೆ ಉಂಟಾಗತಕ್ಕ ಗುಣಗಳನ್ನು ಕುರಿತೂ ಕೆಲವು ಮಾತುಗಳನ್ನಾಡಲಿಕ್ಕಿರುವುದು. ಸಂಪಾದಕರೇ, ಅನುಮತಿಯಿದ್ದರೆ ಮುಂದುವರಿಸುವೆನು.

ಎಂ. ಆರ್. ನಂಬ್ಯಾರ್.

ಬೇಸಾಯ ಧಾರಣೆ.

(ರಖಂ).

ಮುಷ್ಟಿ ಅಕ್ಕಿ ಹೊಸ್ತು	5—6—0 ರಿಂದ	5—15—0
ಗುಡ್ಡ „ „	5—2—0 „	5—7—0
ಹೊಸ ರಾತಿ „	4—12—0 „	4—15—0
ಅವ್ವಲ್ ಬೆಳ್ತಿಗೆ „	5—12—0 „	6—0—0
ಗುಡು ಬೆಳ್ತಿಗೆ „	6—4—0 „	5—6—0
ರಂಗೂನು ಬೆಳ್ತಿಗೆ ಗೋಣಿ ೧ರ	10—0—0 „	10—4—0
ಗೋಧಿ ಗೋಣಿ ೧ರ	11—12—0 „	12—8—0
ತುರ್ಬೆ ಗೋಣಿ ೧ರ	„	6—6—0
ಕಡಲೆ ಗೋಣಿ ೧ರ ಬೊಂಬ್ಯ	10—0—0 „	19—8—0
ಕೂಗರ ಗೋಣಿ ೧ರ		11—0—0
ತೊಗರಿ ಬೇಳೆ ಗೋಣಿ ೧ರ	12—8—0 „	15—0—0
ಉದ್ದು ಗೋಣಿ ೧ರ	10—8—0 „	11—4—0
ಉಪಬೆಲ್ಲ ಖಂಡಿ ೧ರ	35—0—0 „	38—0—0
ಉಪ್ಪು ಗೋಣಿ ೧ರ	„	4—12—0
ಮೆಣಸು ಖಂಡಿ ೧ರ	85—0—0 „	90—0—0
ಮೆಣಸಿನಹುಡಿ ಖಂಡಿ ೧ರ	„	20—8—0
ಎಳ್ಳೆಂಡಿ ಖಂಡಿ ೧ರ ಬೊಂಬ್ಯ	25—0—0 „	32—8—0
ಹೊಸ್ತು ಎಣ್ಣೆ ಮುಡಿ ೧ರ	6—6—0 „	7—0—0
ಎಳ್ಳೆಣ್ಣೆ ಮುಡಿ ೧ರ (ಕುರಾಸನ)	„	4—6—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6—11—0 „	7—5—0
ಮೋರಿಸ್ ಸಕ್ಕರೆ ಮುಡಿ ೧ರ	„	5—5—0
ಕಾಫಿ ಖಂಡಿ ೧ರ	325—0—0	335—0—0
ಹೊಸತರಿಗೋಟು ಖಂಡಿ ೧ರ	78—0—0 „	80—0—0
ಹೊಸ ಗೇರುಬೀಜ ಮುಡಿ ೧ರ	1—12—0 „	2—0—0
[illegible] ಖಂಡಿ ೧ರ	„	75—0—0
[illegible] ತಗಡು ಮುಡಿ ೧ರ	29—0—0 „	29—8—0
[illegible] ಮುಡಿ ೧ರ	„	32—0—0
[illegible]	„	24—0—0
[illegible]	5—0—0 „	5—1—0
[illegible]		240—2—0

K. B. RELE & Cos.,—BOMBAY

Estd. 1888 ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣಾ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಸಿಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಶಮ್ನವಾಗುತ್ತವೆ. ೨೦—೨೫ ವರ್ಷಗಳ ಹಳತ, ಸ್ಥಿಮಿನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ದೇಶೀ ಔಷಧ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ಕಳಿಸಿದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರದವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಬಾಯಿಮುಗಳೂ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕೈ ಕಾಲುಗಳುರಿಯೋಣ, (ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಬೇಕಾದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ಕಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತ ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—

ಭಂಡಾರಕಾರ ಬ್ರದರ್ಸ್,

ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷೆ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿ.

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

೪೦ ಮಾತ್ರೆಗಳ ಡಬ್ಬಿ ಕ್ರಯ ರೂ 1—0—0. ಅಂಚೆ ಹಾಸಲು ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

೨೦, ಬೈನಾ ಬಜಾರ ರೋಡ್, ಮದ್ರಾಸು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12. 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಕುಲನ್ ಮಾರ್ಟ್‌ರವರಲ್ಲಿಯೂ ಸಹ ದೊರೆಯುತ್ತೆ.

ದಿ ಕುಲನ್ ಮಾರ್ಟ್, ಸೋಲ್ ಏಜಂಟ್ಸ್, ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,

ಸುಗಂಧಕಾರಿ, ಮೈಸೂರು.

ಸಿದ್ಧೌಷಧ!] [ಪರೀಕ್ಷಿಸಿ ನೋಡಿರಿ!!

ಇಕ್ಲಿಪ್ಸ್‌ಡ್ರಾಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡ, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾಕ್ರಮ ಶೀಸೆಯೊಂದಿಗೆ. ಶೀಸೆ 1ಕ್ಕೆ ಆಣೆ 6. ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 4-8-0.

"ಸಮಯಕ್ಕೆ ಒದಗಿದವನೇ ಮಿತ್ರ"ನೆಂಬುದು ನಮ್ಮ

ಇಕ್ಲಿಪ್ಸ್ ಬಾಮ್

ಪ್ರಯೋಗಿಸಿ ನೋಡಿದವರೆಲ್ಲರಿಗೂ ಖಾತ್ರಿಯಾಗಿದೆ. ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಪೀನಸ, ತಲೆಸಿಡಿತ, ತಲೆನೋವು, ಹುಣ್ಣುಗಳು, ತುರಿಕಜ್ಜಿ, ಮೂಲವ್ಯಾಧಿ, ಬೆಂಕಿಯಬೊಕ್ಕೆ, ಪೊಡವೆ, ಚೇಳು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

ಶ್ರೀ ಹಾಜಾ ಯೂಕಲಿಪ್ಟಸ್ ತೈಲ 5 ಆಣೆ. ಟೂತಬ್ ರೂ. 1-0-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಬಿ. ನರಸಿಂಗರಾವ್, ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್ ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಶೀಘ್ರವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ. ಪುಸ್ತಕವು ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,

Avenue Road, ವೇದಶಾಲಾ,

BANGALORE CITY. [illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪೂರಿತವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥವುಗಳನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಶೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಜಿಹ್ವಾಭಾಗ. ಒಂದೇ ಒಂದು ಶೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಹಾಯವನ್ನು ಬಯಸುವ ತೊಂದರೆಯು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಟೀನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 2೫೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್-ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2. ಬೊಂಬಾಯಿ ಇವರು ಬರೆದಿರುವುದು. ತಮ್ಮ ಶೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿಸಾಲವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಶಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಶೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲ್ಯಾಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮ॥ ಲಲ್ಲುಬಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಅರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮ॥ ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿ ಯಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಸತ್ವರ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಿಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ROYAL DENTIFRICE.

(ರೋಯಲ್ ದಂತಮಂಜನ).

ಗ್ರಾಹಕರೇ, ಈವೂಗಳು ಅನೇಕ ತರದ ದಂತಮಂಜನಗಳು ಉಪಯೋಗಿಸಿಯೂ, ತರಿಸಿಯೂ, ಕೇಳಿಯೂ ಇರಬಹುದು. ಆದರೆ ಮೇಲ್ಕಾಣಿಸಿದ ರೋಯಲ್ ದಂತಮಂಜನದಲ್ಲಿರುವಷ್ಟು ಚಮತ್ಕೃತಿಯ ಗುಣಗಳನ್ನು ಕೇಳಿರಲಾರಿರಿ. ಇದರ ಗುಣಾಂಶಗಳನ್ನು ಇದರಡಿ ಸೂಚಿಸಿದ್ದೇವೆ. ಯಾವ ತರದ ವ್ಯತ್ಯಾಸವು ಕಾಣದಿರದೆ ಗುಣಾಂಶವನ್ನು ಕೊಡುವದು. ಇದು ಕ್ರಯದಲ್ಲಿಯೂ ಭಾರೀ ಸುಲಭವಿದೆ. ಇದನ್ನು ಒಮ್ಮೆಗೆ ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣಾಂಶವು ಕಂಡುಬರುವದು. ಇದರ ಗುಣಾಂಶಗಳು ಯಾವ ಯಾವವೆಂದರೆ—ಹಲ್ಲಿನ ಎಡೆಗಳಿಂದ ಕೀವು ಯಾ ರಕ್ತ ಬರುವಂಥಾದ್ದು, ಹಲ್ಲನ್ನು ಹುಳ ತಿನ್ನುವಿಕೆ, ಬಾಯಿಂದ ವಸಡು ನೀರು ಬರುವಿಕೆ, ಬಾಯಿಯ ದುರ್ಗಂಧ, ದವಡೆ ಊದುವಿಕೆ, ಚಿಕ್ಕ ಪ್ರಾಯದಲ್ಲಿ ಹಲ್ಲು ಅಲ್ಲಾಡುವಿಕೆ, ಇವುಗಳೆಲ್ಲಾ ಉಪಯೋಗಿಸಿದ ದಿನಗಳಿಂದಲೇ ಗುಣ ಕಂಡುಬಂದು, ಹಲ್ಲು ಮುತ್ತಿನಂತಾಗುವದು.

~~ಡಬ್ಬಿ 1ರ ಕ್ರಯ 0—1—6, ಡಜನ್ 1ರ ಕ್ರಯ ರೂ. 1.~~

ಸೂಚನೆ—ಪರಸ್ಥಳದವರಿಗೆ 6 ಡಬ್ಬಿಗಳಿಗಿಂತ ಕಡಮೆ ವಿ. ಪಿ.ಯಿಂದ ರವಾನಿಸಲಾರೆವು.

ಏಜಂಟರು ಬೇಕು.

ದಕ್ಷಿಣ ಹಿಂದುಸ್ಥಾನದ ಏಜಂಟರು—

ದಿ ಯೂನಿಯನ್ ಮಾರ್ಟ್,

ಮಂಗಳೂರು, ದ. ಕ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗವಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ; ದೂಡ್ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಶ್ಯಾನಬೋಗ ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 [illegible] 16 [illegible]

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ.

ಈ ಸಾರ್ಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕೃತ್ಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದಾಗಿರುತ್ತದೆ. ಬಾಟ್ಲಿಗೆ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸ್‌ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾಂಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುತ್ತದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ. ಬಾಟ್ಲಿ 1ಕ್ಕೆ ರೂ. ೦-೧೨-೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಚ್ಚೆ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿಗೆ ರೂ. ೧-೮-೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೇಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಖಳಿಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ ಕ್ರಯ ಡಬ್ಬಿಗೆ ರೂ. 3-0-0.

೨. **ಬಾಣಂತಿ ಮಾತ್ರೆ:**— ಪ್ರಸೂತವಾದ ಬಾಣಾಯಿಕೆ 30 ದಿನಗಳವರೆಗೆ ಉಪಯೋಗಿಸುವದರಿಂದ ಖಾರ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6-0-0.

ಇಲ್ಲಿ ಅನೇಕ ತರಹದ ಮಾತ್ರೆಗಳು, ಲೇಹ್ಯಗಳು, ತೈಲಗಳು, ಆರಿಷ್ಟಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳುರೋಗ ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರಿಪ್ರಸೆಂಟೆಟಿವ್-ಮುಂಬಯಿ.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂತನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ಪತ್ರ ವಿಳಾಸ:—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್ಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ, ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೇವೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್‌ಜಾನ್ ಒಳ್ಳಿ ಶೀರೆ

ರೂಪಾಯಿ ೨-೮-೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಸ್ಲಿನಲ್ಲಿ ಗೋವರ್‌ಜಾನ್ ಒಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ತ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಕೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷ

ಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದೆಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಸ್ವಾಮಿ ಅಂಡ್ ಕಂಪೆನಿ,
ಸಾಹುಕಾರಪೇಟೆ, ಮದರಾಸು.

ದಿವ್ಯಾಂಜನ. Divyanjan. *(Regd.)*

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು ಬರುವುದು, ಉಳುಕು ಉರಿ, ಶಿರೋಧಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇದೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್‌ಏಜಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:—ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**
Fergusson Road, BOMBAY.

ಜಂಟಲ್‌ಮೆನ್ ಫಿಕ್ಸಿಟ್ ಲೀವಾರ್ ವಾಚ್.

10 ಬಹುಮಾನಗಳ ಸಹಿತ ರೂ 3-8-0 ಮಾತ್ರವೇ.
6 ವರುಷ ಖಾತ್ರಿಯಾದ ಗ್ಯಾರಂಟಿ ಸಹಾ.

ಈ ಗಡಿಯಾರವು ಒಳ್ಳೇ ಮಜಬೂತಾಗಿಯೂ ಚಿತ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಗಾಳಿ,



ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ಮತ್ತು ಗಂಟೆ ತೋರಿಸುವ ನಂಬರುಗಳ ಮೇಲೆ ಇಮಿಟೇಷನ್ ಕೆಂಪುಗಳು ಮಡಗಿ ಕಟ್ಟಿದ ಕಟ್ಟಿರುತ್ತೆ. 6 ರತ್ನಗಳು ಉಳ್ಳ ಓಪನ್ ಕೇಸ್ ಕಂಪನ್‌ಸೆಸನ್ ಬಹು ಬಲಿಷ್ಠವಾದ ಲೀವರ್ ಕೆಲಸದಲ್ಲೇ ತಯಾರಾಗಿ ಬಂದು ಇರುತ್ತೆ. ಇದನ್ನು ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ತರಿಸಿ ಪರೀಕ್ಷೆಮಾಡಿದರೆ ತಿಳಿಯುವದು. ಬಹುಮಾನ ವಿವರ—ಸರಪಣಿ 1, ಪೆಟ್ಟಿಗೆ 1, ಕಾರನೇಷನ್ ಕನ್ನಡಿ 1, ಇಂಗ್ಲಿಷು ಚಾಕು 1, ಸೆಂಟ್ ಶೀಷೆ 1, ಪರಟು ಗುಂಡಿ ಸೆಟ್ 1, ಎಲೆಕ್ಟ್ರಿಕ್ ಭಂಗಾರದ ಕೈ ಉಂಗುರ 1, ಸ್ತ್ರೀಯರು ಧರಿಸಿಕೊಳ್ಳುವ ತಲೆ ಹೂವು 1, ಇಮಿಟೇಷನ್ ವಜ್ರದ ಬ್ರೋಚ್‌ಗಳು 2. ಜುಮ್ಲಾ 10 ಸೇರಿ ವಾಚ್ ಕ್ರಯ ರೂ. 3-8-0 ಮಾತ್ರವೇ.

ವಿಳಾಸ:— ಎಂ. ಎಚ್. ಸಿಂಗ್ ಅಂಡ್ ಕೊ.
ನಂಬ್ರು 7, 2ನೆ ನಾರಾಯಣ ಬೀದಿ,
ಮಿಂಟ್ ಬಿಲ್ಡಿಂಗ್, ಮದರಾಸು.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರಿಗೆ ಸೀಮೆಯಿಂದ ತರಿಸಿರುತ್ತೇವೆ.



ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಹಾಗೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್‌ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತಿನ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ ರೂ. 3-12-0.
ಗಡಿಯಾರ 1ಕ್ಕೆ ಕ್ರಯ ರೂಪಾಯಿ 3-0-0.
ಪೇನಾ „ „ 1-0-0.

ವಿಳಾಸ:— ವೈರಂ ಅಂಡ್ ಕೊ.
[illegible] ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4.
ಪೋಸ್ಟೇಜ್ ಪ್ರತ್ಯೇಕ.
೫ ವರುಷಗಳು ಗ್ಯಾರಂಟಿ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೦೬ ಸುಸ್ಮಗೂಸಲ್ಲಿ ಚಿನ್ನದ ಮೆಡಲ್ ಹೊಂದಿಕೊಟ್ಟ ಪ್ರಸಿದ್ಧವಾದ ಅಮೃತ ಸಂಜೀವಿನಿಗುಳಿಗೆ. 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ 12 ಆಣೆ ಮಾತ್ರ, ಪೋಸ್ಟು ಚಾರ್ಜು 4 ಆಣೆ.

ಈ ಸುಂದರವಾದ ವಾಚ್ ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ಯಾಜಾಗಿಯೂ ಇಂಜನ್ ಸ್ಟ್ಯಾಂಪ್ ಹಾಕಿಯೂ ಇರುವದು.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಚಿಕಿತ್ಸಿಸುವದು, ಪುತ್ರಸಂತಾನ ಉಂಟಾಗುವದು. ಸಿದ್ಧಿಯ ಶೂಲ, ನವು, ತಲೆನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು. ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ. ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲ ಬೀದಿ, ಮದರಾಸ್.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಕಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0 — 4 — 0 ಬೇರೆ.

ಪ್ರಾಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೋ.
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.
H. R. MODY & Co.,
10 Princes Street, BOMBAY

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇವಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಲಂಕನಾರಿ ಪೋಸ್ಟು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗು ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸೈಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಒಬ್ಯೂಬೊ ಎಂಬ ಗಡ್ಡೆಯನ್ನೂ, ಹುಣ್ಣು ನಾಯಿ ಕಡತೆಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸೈಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ವಿ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ... ತಯಾರಾದವುಗಳು. ಮಕ್ಕಳ ಆಟಿಗೆಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧-೮-೦. ಮಧ್ಯಮ ತರದ ಸೆಟ್ಟು ೧ಕ್ಕೆ ೩-೦-೦. ದೊಡ್ಡ ಸೆಟ್ಟು ಉತ್ತಮತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದುಯಂ ರೂಪಾಯಿ ೧ಕ್ಕೆ ೮ ತೊಲೆ, ಶೀಯುಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೫ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.
SIROMANI NARAYANA CHARYA & CO.
Choukhambay,
BENARES CITY.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.
ಏಜಂಟರು:—ಡಿ. ಕೂಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir,
POST POLALY, S. C.
ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 466

ಚಂದಾ ನಿರ್ಣಯ:— ವರ್ಷ 1ಕ್ಕೆ ರೂ. 1—8—0.

ಪೋಸ್ಟೇಜ್ ಹಾಸಲು ಸೇರಿ ಮುಂಗಡ 2—5—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವಷ್ಟೆ ಸರಿ.

ಪುಸ್ತಕ ೧೧. ಮಂಗಳೂರು, ತಾರೀಕು ೧೬ನೇ ಫೆಬ್ರವರಿ ಶುಕ್ರವಾರ ೧೯೧೭. ಸಂಚಿಕೆ ೭.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital	200,000—0—0	ಆಗತ ಮೂಲ ಧನವು ,,	200,000—0—0
Deposits	336,227—9—4	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	336,227—9—4
Reserve Fund	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/-25% of the net profits are added annually to the Reserve Fund. Rs. 28,485/- have been invested in Government Paper of the face value of Rs-29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಷೇರ್ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾ ಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last seven years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4⅛%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.,
Mangalore, 1st December 1916.

P. Gopal Naik,
Secretary.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಭೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಟಿಪ್ ಕವರ್ ಬೈಂಡು	0—8—0
ಚಿಕ್ಕ ಸೈಜು ಕೆಲಿಕೊ ಬೈಂಡು	0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿವೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ
ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.
1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.
ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ. ದ. ಕನ್ನಡ.

Foot Balls. (BEST QUALITY).

ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS, ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣಸಾದಿ ಎಲ್ಲ ಭಾಗಗಳಲ್ಲಿಯೂ ಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 46 ತಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮಿಷನ್! ಎಲ್ಲಕ್ಕೂ ಉತ್ತಮವಾದುದು, ತ್ವರೆಮಾಡಿ!

ವಿಳಾಸ:—
ಸದಾನಂದ ಮುದ್ರಾಶಾಲೆ, ಉಡುಪಿ.
ಪಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ-ಇಂಗ್ಲಿಷ್, ಇಂಗ್ಲಿಷ್-ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ [illegible].

ಈ ವಾರವೇ ತರಿಸಿಕೊಂಡರೆ ರೂ. 1—11—0. ಅಂಚೆ ಖರ್ಚು ಸಹಾ.

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
ಅತ್ತಾವರ, ಮಂಗಳೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟುಕೆಯ ದೋಷ ಇವುಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯು ಪೀಡೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ವಿಷಮವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನಕ್ಕಿಂತ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವಿಲ್ಲದಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪಂಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಕ್ಷಯ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಚಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುಂಚರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತಬಾಧೆಗಳನ್ನು ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪ ಹಚ್ಚುವದರೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ಪಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಸೂಚನೆ. ಟಪಾಲಿನ ಖರ್ಚು ಬೇರೆ. ಔಷಧಗಳನ್ನು ವಿಕ್ರಯಿಸಲು ಏಜಂಟರು ಬೇಕಾಗಿದ್ದಾರೆ. ನಮ್ಮ ಪಟ್ಟಿಯನ್ನು ತರಿಸಿ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ಕೃಪೆಯಿಂದ ತಿಳಿಸಬೇಕು. ನಮ್ಮ ಔಷಧಗಳು ಪ್ರಸಿದ್ಧವಾಗಿವೆ.

ಪತ್ರ ವಿಳಾಸ:—ಜಿ. ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

G. M. Nath & Co., *Ayurvedic Chemists*
Vepery Post, MADARS.

ಹಲ್ಲು ನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಆಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಶುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ ರೂಪ್ಯ 1—4—0.
ಅಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಕೋವುಗಳಲ್ಲಿ ದೊರಕುವದು.	STANY BROTHERS Sole Agents M. C. C's. Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ವಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co.,
Mangalore.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ... ಮಾಡಿರುವದು. ಮತ್ತು ಧೂಳಿ ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಬಾಟ್ಲಿಯ ಕ್ರಯ ... ಆಣೆ. ಪೋಸ್ಟು ಖರ್ಚು ... ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಬಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಪು, ಜಲ್ಲಾ ಮುರ್ಷಿದಾಬಾದ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಅತ್ಯಂತ ಉತ್ತಮ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತಾವದೂ ಇಲ್ಲವೆನ್ನು ನಿಶ್ಚಯದಿಂದ ಹೇಳುತ್ತೇನೆ."

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಿಷಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 6 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಅಗತ್ಯವಿಲ್ಲ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಚಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರತುಲ್ಲೆ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—6
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನ (Flower Making)	0—14—0
ಕನ್ನಡ ಅಕ್ಷರ ಮಾಲಿಕೆ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಯ್ಯ)	1—4—0
ವಿಕ್ರಮ ,,	1—2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ನಮೂನೆ, ದೊಡ್ಡ ಸೈಜ್ 18"×28"ಕ್ಕೆ	0—1—0

ಯೂರೋಪದ ಮಹಾ ಯುದ್ಧ.

ಈ ವರ್ಷದ ಯುದ್ಧವು ಇನ್ನು ಸದ್ಯದಲ್ಲೇ ಬಹು ಭೀಕರವಾಗಿಯೂ ತೀಕ್ಷ್ಣವಾಗಿಯೂ ನಡೆಯಲಿಕ್ಕಿದೆಂಬುದಕ್ಕೆ ಅನೇಕ ನಿದರ್ಶನಗಳು ತೋರಹತ್ತಿವೆ. ನೀರಿನ ಮೇಲೂ ಭೂಮಿಯ ಮೇಲೂ ಭೀಕರ ಕಾಳಗಗಳು ನಡಿಯಲಿಕ್ಕಿವೆ. ಏನಿದ್ದರೂ ಈ ವರ್ಷದಂತ್ಯದೊಳಗಾಗಿ ಯುದ್ಧವು ತೀರಬೇಕೆಂದು ಜರ್ಮನರು ಪ್ರತಿಜ್ಞೆ ಮಾಡಿಕೊಂಡಿರುವರು. ಮಿತ್ರರಾದರೋ ಜರ್ಮನರನ್ನು ಸೋಲಿಸಿ ಭೂಲೋಕದ ಮೇಲೆ ಶಾಶ್ವತವಾದ ಶಾಂತಿಯನ್ನು ನೆಲೆಗೊಳಿಸಬೇಕೆಂಬ ಶಪಥ ಮಾಡಿಕೊಂಡಿರುವರು. ಮುಖ್ಯವಾದ ಜಯಾಪಜಯಗಳು ಪಶ್ಚಿಮ ರಣರಂಗದಲ್ಲೇ ಆಗಬೇಕೆಂದು ಉಭಯ ಪಕ್ಷದವರೂ ನಿರ್ಣಯಿಸಿರುವದರಿಂದ ಈ ರಣರಂಗದಲ್ಲಿ ಘೋರಕಾಳಗಗಳು ನಡಿಯಲಿಕ್ಕಿವೆ. ಇತ್ತಕಡೆ ಜರ್ಮನರ ಜಲಯಾನಗಳ ತರ್ಜನೆಗೆ ಸಿಟ್ಟಿಗೊಂಡ ಯುನೈಟೆಡ್ ಸ್ಟೇಟಿನವರು ಜರ್ಮನಿಗೆ ವಿರೋಧವಾಗಿ ಯುದ್ಧಸನ್ನಾಹವನ್ನು ಮಾಡುತ್ತಿದ್ದಾರೆ. ಸಂಸ್ಥಾನದ ಎಲ್ಲಾ ಅಧಿಕಾರಿಗಳು ಸರಕಾರಕ್ಕೆ ಈ ವಿಷಯದಲ್ಲಿ ಸಾಹಾಯ್ಯ ಮಾಡಬೇಕೆಂದೂ ಈ ಸಂಸ್ಥಾನದಲ್ಲಿ ಜರ್ಮನ ಅನುಕೂಲಪಕ್ಷದವರಿಂದ ಗೊಂದಲಗಳು ಉಂಟಾಗದಂತೆ ಮುಂಜಾಗ್ರತೆ ತೆಗೆದುಕೊಳ್ಳಬೇಕೆಂದೂ ಸರಕಾರದವರು ಅವರನ್ನು ಕೇಳಿಕೊಂಡಿರುವರು. ಈ ಪ್ರಾಂತ್ಯದಲ್ಲಿ ಕಡಿಮೆಯೆಂದರೆ ಶತ್ರುರಾಜ್ಯಗಳವರ ೧೦ ಸಾವಿರ ಏಜಂಟರಿರುವರು. ಈ ಪೈಕಿ ೫ ಸಾವಿರ ನ್ಯೂಯಾರ್ಕಿನಲ್ಲೇ ಇರುವರು ಎಂತ ಅಂದಾಜಾಗಿಯದೆ. ಕೆಲವರು ಈಗಲೇ ಅಲ್ಲಲ್ಲಿ ಗೊಂದಲಗಳನ್ನು ನಡಿಸಲು ಪ್ರಾರಂಭಿಸಿದ್ದಾರೆ. ಜಲಯಾನಗಳ ಯುದ್ಧಸಂಬಂಧವಾಗಿ ಜರ್ಮನರು ಕೊಟ್ಟ ಸಂದೇಶಪತ್ರವನ್ನು ೩೪ ತಾಸುಗಳೊಳಗೆ ಬಿದ್ದಲಾಯಿಸಬೇಕೆಂದು ಅಮೇರಿಕಾದವರು ಜರ್ಮನರಿಗೆ ಕೊಟ್ಟ ಪತ್ರವನ್ನು ಜರ್ಮನರು ಲಕ್ಷ್ಯಮಾಡುವಹಾಗೆ ತೋರಿಬರುವದಿಲ್ಲ. ನ್ಯೂಯಾರ್ಕಿನ ಎಸೋಸಿಯೇಟೆಡ್ ಪ್ರೆಸ್ಸಿಗೆ ಬರ್ಲಿನಿನಿಂದ ಬಂದ ಒಂದು ತಂತಿಯಿಂದ ಜರ್ಮನರು ಈ ಜಲಯಾನಗಳ ತರ್ಜನೆಯಲ್ಲಿ ಯಾವ ಬದಲಾವಣೆಯನ್ನು ಮಾಡುವಹಾಗಿಲ್ಲವೆಂತ ತಿಳಿದುಬರುತ್ತದೆ. ಅಮೇರಿಕಾದ ಎಲ್ಲಾ ಸಂಸ್ಥಾನಗಳು ಡಾಕ್ಟರ್ ವಿಲ್ಸನರಿಗೆ ಅನುಕೂಲವಾಗಿರಬೇಕೆಂಬ ನಿರ್ಣಯವನ್ನು ಮಾಡಿಕೊಂಡಿರುವರು. ಮನಿಲ್ಲಾದಲ್ಲಿದ್ದ ಜರ್ಮನರ ನೌಕಾವಳಿಯು ಜರ್ಮನರ ೧೭ ವ್ಯಾಪಾರ ಹಡಗಗಳನ್ನು ಹಿಡಿದಿರುತ್ತಾರೆ.

ಜರ್ಮನರಿಗೆ ವಿರೋಧವಾಗಿ ಅಮೇರಿಕದವರು ಯುದ್ಧತೊಡಗಿದರೆ ಮಿತ್ರರಿಗೆ ಹೇಗೆ ಸಹಾಯ್ಯಮಾಡುವದೆಂಬ ವಿಷಯದಲ್ಲಿ ಡಾ। ವಿಲ್ಸನರು ಅಮೇರಿಕದ ನೌಕಾವಳಿ ಮತ್ತು ಯುದ್ಧ ಸೆಕ್ರೆಟರಿಗಳೊಡನೆ ಚರ್ಚಿಸಿರುವರು. ಹಾಗೂ ಅಮೇರಿಕಾದವರು ಮಿತ್ರರಿಗೆ ಸಾಹಾಯ್ಯವಾಗಿ ಸೇನೆಯನ್ನು ಕಳುಹಿಸಿಕೊಡುವದು ಸದ್ಯ ಅಸಂದರ್ಭವಾಗಿದೆ. ಆದರೆ ನೌಕಾವಳಿಯು ಮಿತ್ರರಾಜ್ಯಗಳವರಿಗೆ ಹೇರಳ ಸಾಹಾಯ್ಯಮಾಡುವದು. ಮುಖ್ಯವಾಗಿ ಅಟ್ಲಾಂಟಿಕ್ ಸಾಗರದ ಉತ್ತರ ಮತ್ತು ದಕ್ಷಿಣದಲ್ಲಿ ಅಮೇರಿಕೆಯ ನೌಕಾವಳಿಯು ಗಸ್ತಿನೋಡುವವು. ಇದರಿಂದ ಈಗ ಅಟ್ಲಾಂಟಿಕ ಸಾಗರದಲ್ಲಿರುವ ಬ್ರಿಟಿಷ ಮತ್ತು ಫ್ರೆಂಚ ಕ್ರೂಝರ್‌ನಾವೆಗಳು ಇತರ ಸಾಗರಗಳಿಗೆ ಹೋಗಲಿಕ್ಕಾಗುವದು.

ಅಮೇರಿಕದ ಬ್ರೆಝಿಲ್ ಸರಕಾರದವರು ಜರ್ಮನರ ಜಲಯಾನಗಳ ವರ್ತನೆಯನ್ನು ಖಂಡಿಸಿರುತ್ತಾರೆ. ಚಿಲ್ಲಿ ಮತ್ತು ಅರ್ಜೆಂಟೈನ್ ಸಂಸ್ಥಾನಗಳವರು ಡಾಕ್ಟರ್ ವಿಲ್ಸನರಿಗೆ ಅನುಕೂಲವಾಗಿರುವರು. ಸ್ಕಾಂಡಿನಾವಿಯ ಸರಕಾರಗಳವರು ಅಮೇರಿಕದವರೊಡನೆ ಕೂಡುವ ಹಾಗೆ ತೋರುವದಿಲ್ಲ. ಈ ರಾಜ್ಯಗಳವರೂ ಹೊಲ್ಲಾಂಡಿನವರೂ ಸ್ಪಾನಿಯಾ ರಾಜ್ಯಗಳವರೂ ತಟಸ್ಥರಾಗಿಯೇ ಇರುವರು.

ಅಮೇರಿಕಾದಲ್ಲಿರುವ ಕೌಂಟ್ ಬರ್ನಸ್ಟೋರ್ಫರೂ ಅಲ್ಲಿರುವ ಜರ್ಮನರೂ ಜರ್ಮನಿಗೆ ಸುರಕ್ಷಿತವಾಗಿ ತಲಪುವರೆಂಬದಕ್ಕೆ ತಕ್ಕ ಭರವಸೆ ಸಿಕ್ಕುವ ವರೆಗೆ ಜರ್ಮನಿಯಲ್ಲಿರುವ ಅಮೇರಿಕೆಯ ರಾಯಭಾರಿ ಗೆರ್ರಾರ್ಡರನ್ನೂ ಇತರ ಅಮೇರಿಕನರನ್ನೂ ಜರ್ಮನರು ಹೊರಡಬಿಡುವದಿಲ್ಲವೆಂತ ಮಿ। ಗೆರ್ರಾರ್ಡರು ತಂತಿಮೂಲಕ ತಿಳಿಸಿರುತ್ತಾರೆ. ಜರ್ಮನಿಯೊಡನೆ ಇರುವ ಮಿತ್ರಭಾವವನ್ನು ಬಿಡಬೇಕೆಂದು ಅಮೇರಿಕದ ಮಂತ್ರಿಸಭೆಯಲ್ಲಿ ನಿರ್ಣಯವಾಗಿರುತ್ತದೆ. ಅಮೇರಿಕದಲ್ಲಿ ಗುಪ್ತವಾಗಿಯೇ ಯುದ್ಧಸನ್ನಾಹಗಳು ಮಾಡಲ್ಪಡುತ್ತಿವೆ. ಸದ್ಯದಲ್ಲೇ ಅಮೇರಿಕಾದವರು ಜರ್ಮನಿಗೆ ವಿರೋಧವಾಗಿ ಯುದ್ಧತೊಡಗುವರೆಂತ ವಾರ್ತೆ ಇದೆ.

ಪಶ್ಚಿಮ ರಣರಂಗ.

ಈ ರಣರಂಗದಲ್ಲಿ ಸಣ್ಣಪುಟ್ಟ ಕದನಗಳು ಪುನಃ ನಡೆಯ ಪ್ರಾರಂಭವಾಗಿವೆ. ಸೊಮ್ಮೆಯ ದಕ್ಷಿಣದಲ್ಲಿರುವ ಚಾರ್ಲ್ಸ್ ಪ್ರಾಂತ್ಯದಲ್ಲಿ ಜರ್ಮನರು ನಷ್ಟಪಟ್ಟು ಹಿಮ್ಮೆಟ್ಟಿರುವರು. ಫ್ರೆಂಚರು ಶತ್ರುಗಳ ನೆಲೆಯ ಮೇಲೆ ಕೆಲವು ಸಾರಿ ದಾಳಿ ಮಾಡಿ, ಯುದ್ಧ ಸಾಮಾಗ್ರಿಗಳನ್ನೂ ಶತ್ರುಸೇನಿಕರನ್ನೂ ಸೆರೆಹಿಡಿದಿರುವರು. ಕಪ್ ಡಿ-ವೈಟ್ಸ್ ಎಂಬಲ್ಲಿ ಶತ್ರುಗಳ ಒಂದು ಯಂತ್ರಚಾಲಿತ ಫಿರಂಗಿಯೂ ೧೬ ಸೇನಿಕರೂ ಫ್ರೆಂಚರ ಸೆರೆಬಿದ್ದಿರುವರು. ಸೊಮ್ಮೆ ರಣರಂಗದಲ್ಲಿ ಮೂರಾವರ್ತಿ ದಾಳಿ ಮಾಡಲು ಯತ್ನಿಸಿದ ಶತ್ರುಗಳನ್ನು ಬ್ರಿಟಿಷರು ಅಟ್ಟಿರುತ್ತಾರೆ. ಮತ್ತೊಂದು ಕಡೆಯಲ್ಲಿ ಬ್ರಿಟಿಷ ಸೇನಿಕರು ಜರ್ಮನ ನೆಲೆಯ ೫೦೦ ಗಜ ಕಂದಕಗಳನ್ನೂ ೭೫ ಶತ್ರುಸೇನಿಕರನ್ನೂ ಸೆರೆಹಿಡಿದಿರುವರು. ಜರ್ಮನರು ೩೦೧ ಎರಡಾವರ್ತಿ ಹಲ್ಲೆ ಮಾಡಿದರು. ಬ್ರಿಟಿಷರು ಶತ್ರು ನೆಲೆಯ ೪ ಕಡೆಗಳಲ್ಲಿ ಒಳ ನುಗ್ಗಿರುವರು. ಶತ್ರುಗಳು ನಾಲ್ಕಾವರ್ತಿ ಹಲ್ಲೆಮಾಡಿ ಜಯ ಹೊಂದಲಿಲ್ಲ. ಬ್ರಿಟಿಷರು ಪುನಃ ೯೩ ಸೇನಿಕರನ್ನು ಸೆರೆಹಿಡಿದರು. ಬ್ರಿಟಿಷರು ಜರ್ಮನರ ೪ ವಾಯುನಾವೆಗಳನ್ನು ನಾಶಪಡಿಸಿರುವರು, ೬ ವಾಯುನಾವೆಗಳನ್ನು ಹಿಂದಕ್ಕಟ್ಟಿರುವರು. ಎಂಕ್ರೆ ನದಿಯ ಎರಡು ದಡಗಳಲ್ಲಿಯೂ ಬ್ರಿಟಿಷರ ಒತ್ತಾಟವು ಹೆಚ್ಚಿದ್ದರಿಂದ ಶತ್ರುಗಳು ಈ ನದಿಯ ದಡವನ್ನು ಬಿಟ್ಟುಹೋಗಿರುತ್ತಾರೆ. ಗ್ರೇಂಡ್‌ಕೋರ್ಟ್ ಎಂಬ ಗ್ರಾಮವು ಈಗ ಪೂರಾ ಬ್ರಿಟಿಷರ ಸ್ವಾಧೀನವಿದೆ. ಕೆಲವು ಶತ್ರುಸೇನಿಕರು ಸೆರೆಬಿದ್ದಿರುವರು. ಕಳೆದ ಕೆಲವು ದಿವಸಗಳಲ್ಲಿ ಶತ್ರುಗಳಿಗೆ ವಿಶೇಷ ನಷ್ಟವಾಗಿದೆ. ವಾಯುನಾವೆಗಳ ಕೆಲವು ಕದನಗಳೂ ನಡೆದಿರುವವು, ಬ್ರಿಟಿಷರು ಜರ್ಮನರ ೪ ವಾಯುನಾವೆಗಳನ್ನು ಅಟ್ಟಿರುವರು. ಬ್ರಿಟಿಷರ ೩ ವಾಯುನಾವೆಗಳು ಕಾಣೆಯಾಗಿರುವವು.

ಕಳೆದ ಬೃಹಸ್ಪತಿವಾರ ಬೆಳಿಗ್ಗೆ ಬ್ರಿಟಿಷರು ಸೈಲಿ-ಸೈಲಿಸಲ್ ಗುಡ್ಡದ ಎತ್ತರವಾದ ಶಿಖರದ ಮೇಲೆ ಹಲ್ಲೆಮಾಡಿ ತಮ್ಮ ಉದ್ದೇಶವನ್ನು ಸಾಧಿಸಿಕೊಂಡಿರುವರು. ೭೮ ಶತ್ರುಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ಅನಂತರ ಗ್ರೇಂಡ್‌ಕೋರ್ಟ್ ಗ್ರಾಮವನ್ನು ಹಿಡಿದು ಎಂಕ್ರೆ ನದಿಯ ಎರಡು ದಡಗಳಲ್ಲಿಯೂ ಮುಂದರಿದರು. ರಾತ್ರಿಕಾಲ ಬೆಲಸ್‌ಕೋರ್ಟ್ ಫಾರ್ಮನ್ನು ಗೆದ್ದುಕೊಂಡರು, ಇಲ್ಲಿ ೮೩ ಶತ್ರುಸೇನಿಕರು ಸೆರೆಬಿದ್ದರು. ಜನವರಿ ತಿಂಗಳಿಂದ ಬ್ರಿಟಿಷರು ಎಂಕ್ರೆಯಲ್ಲಿ ಮುಕ್ಕಾಲು ಮೈಲು ಮುಂದರಿದರು, ಬಾಬಾಸ್ಕಿ ಮತ್ತು ಗ್ರೇಂಡ್‌ಕೋರ್ಟ್ ಗ್ರಾಮಗಳ ನೆರೆಹೊರೆಯಲ್ಲಿ ಎರಡಾವರ್ತಿ ದಾಳಿ ಮಾಡಿದ ಶತ್ರುಗಳನ್ನು ಬ್ರಿಟಿಷರು ಅಟ್ಟಿರುವರು.

ರುಮ್ಯಾರಣರಂಗ.

ಜರ್ಮನರು ಕೊವೆಲ್ ಪ್ರಾಂತ್ಯದಲ್ಲಿ ಕೆಲವು ಕಂದಕಗಳನ್ನು ಅಟ್ಟಿ ಬಲಕಾಯಿಸಿದ್ದಾರೆ ಮತ್ತು ಕೊವೆಲಿನಿಂದ ಪಶ್ಚಿಮಕ್ಕೆ ಎಂಬಲ್ಲಿಗೆ ರಷ್ಯನ್ನರನ್ನು ಅಟ್ಟುತ್ತಿದ್ದಾರೆಂಬ ವಾರ್ತೆ ಇದೆ.

ಜರ್ಮನರ ಎರಡು ಸೇನಾತುಕಡಿಯಗಳು [illegible] ಕಂದಕಗಳ ಮೇಲೆ ಹಲ್ಲೆಮಾಡಿದರು, [illegible] ಗಳನ್ನು ಅಟ್ಟಿಬಿಟ್ಟಿರುವರು, ಇತರ ವಿಶೇಷ ವಾರ್ತೆಗಳು [illegible] ಬಂದಿರುವದಿಲ್ಲ.

ಇಟಲಿ ರಣರಂಗ.

ಗಾರ್ಡ ಎಂಬಲ್ಲಿ ಶತ್ರುಗಳು ರಾತ್ರಿಕಾಲ ಥಟ್ಟನೇ ಇಟಲಿಯಾನರ ಮುಂದಿರುವ ನೆಲೆಗಳ ಮೇಲೆ ಬಿದ್ದರು, ಟ್ರಿಸೆಗ್ನಿಲೊ ಮತ್ತು ಸಾನ್‌ಪೆಲ್ಲೆ ಗ್ರಿಸೋ ತಗ್ಗುಗಳಲ್ಲಿ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಬ್ರೆಂಟ ನದಿಯ ಬಲಗಡೆ ಮತ್ತು ಫ್ರಿಕೊಫೆಲ್ ಪರ್ವತದ ಬಳಿ ಮೇಲ್ಲಾಯಿದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ.

ಮೆಸೊಪೊಟಾಮಿಯ.

ಜನವರಿ ತಾ. ೨೮-೩೧ರಲ್ಲಿ ನಮ್ಮ ಸೇನಿಕರು ಟಿಗ್ರಿಸ್ ನದಿಯ ಬಲಗಡೆಯಲ್ಲಿ ೪೦೦ ಗಜ ಮುಂದರಿದಿರುವರು. ಅದಲ್ಲದೆ ಟಿಗ್ರಿಸ್ ಹಾಯಿ ನದಿಗಳ ಪಶ್ಚಿಮ ದಿಕ್ಕಿನಲ್ಲಿ ೩೦೦-೪೦೦ ಗಜ ಮುಂದರಿದಿರುವರು. ನಮ್ಮವರ ಸೇನೆಯಲ್ಲಿ ನಷ್ಟವು ಅಲ್ಪವಾಗಿರುವದು. ಶತ್ರುಗಳ ಬಹಳ ದವಸ ಧಾನ್ಯಗಳು ನಮ್ಮವರಿಗೆ ದೊರೆತಿರುತ್ತದೆ. ೧೫೦ ಶತ್ರುಸೇನಿಕರು ನಮ್ಮವರ ಸೆರೆಬಿದ್ದಿರುವರು. ನಮ್ಮವರ ಆಕ್ರಮಣೆಯು ಕುಟೆಲ್ ಅಮಾರದ ಪಶ್ಚಿಮದಲ್ಲಿ ಜಯಪ್ರದವಾಗುತ್ತಿದೆ. ತಾ. ೩ರಲ್ಲಿ ನಮ್ಮವರು ಹಾಯಿ ನದಿಯ ಎರಡು ದಡಗಳಲ್ಲಿಯೂ ಶತ್ರುಗಳ ಮೇಲೆ ಬಿದ್ದಿರುವರು. ಪೂರ್ವ ದಡದಲ್ಲಿ ವಿಶೇಷ ತೋಫುಗಳನ್ನು ಹಾರಿಸಿ ನಮ್ಮವರು ತುರ್ಕರ ೩ನೇ ಸೇನಾಸಾಲನ್ನು ಸ್ವಾಧೀನಮಾಡಿಕೊಂಡಿರುವರು. ಶತ್ರುಗಳಲ್ಲಿ ವಿಶೇಷ ಪ್ರಾಣಾಪಾಯ ಸಂಭವಿಸಿರುವದು. ಶತ್ರುಗಳ ನಾಲ್ಕು ಆಫೀಸರರೂ ಇತರ ಸೇನಿಕರೂ ನಮ್ಮವರ ಸೆರೆಬಿದ್ದಿರುವರು. ಕಳೆದ ಶುಕ್ರವಾರ ನಮ್ಮವರ ಆಕ್ರಮಣೆಯು ಕುಟೆಲ್ ಅಮಾರಕ್ಕೆ ೩೫ ಮೈಲು ದೂರದಲ್ಲಿರುವ ಟಿಗ್ರಿಸ್ ನದಿಯ ಬಲಕಡೆಯಲ್ಲಿರುವ ಒಂದು ಸ್ಥಳಕ್ಕೆ ತಲಪಿರುತ್ತದೆ. ಶನಿವಾರ ಹಾಯಿ ಮತ್ತು ಟಿಗ್ರಿಸ್ ನದಿಗಳು ಸಂಗಮವಾಗುವಲ್ಲಿಗೆ ಪಶ್ಚಿಮದಲ್ಲಿ ಕೆಲವು ಕಂದಕಗಳು ನಮ್ಮವರ ಕೈಸೇರಿರುವವು. ಈಗ ಕುಟೆಲ್ ಅಮಾರಕ್ಕೆ ಎದುರುಭಾಗದಲ್ಲಿ ಹಾಯಿ ನದಿಯ ಮುಖವು ನಮ್ಮವರ ಸ್ವಾಧೀನವಿದೆ.

ಜಲಯಾನಗಳ ಯುದ್ಧ.

ಫೆಬ್ರವರಿ ತಾ. ೫ರ ಬ್ರಿಟಿಷರ “ಐಲ್ ಆಫ್ ಮೆನ್” ಮತ್ತು “ಗಾಮ್ಮ” ನೊರ್ವೆಯರ “ಮ್ಯೊಮುಸ್ ಕ್ವೆಮೊಲೆಂಡ್ ಫಸ್ಟ್” ಗ್ರೀಕರ “ಹೆಲಿಸಿಯಾನ್” ಸ್ಪಾನಿಯರ “ಡೂಸ್‌ಡೇ ನೊವೆಂಬ್ರೆ” ಮತ್ತು “ಎಲ್ಡೊಟ್” ಹಡಗಗಳನ್ನು ಜಲಯಾನಗಳು ಮುಳುಗಿಸಿರುತ್ತವೆ. ಅದಲ್ಲದೆ ನೊರ್ವೆಯರ ೧೦, ಸ್ಪಾನಿಯರ ೩, ಬ್ರಿಟಿಷರ ೧ ಟ್ರಾವಲರ್ಸ್ ದೋಣಿಗಳು ಮುಳುಗಿರುತ್ತವೆ. ಫೆಬ್ರವರಿ ತಾ. ೭ರಲ್ಲಿ ಅಮೇರಿಕದ ನ್ಯೂಯಾರ್ಕಿನಿಂದ ಗ್ಲಾಸ್‌ಗೋ ಪಟ್ಟಣಕ್ಕೆ ಬರುತ್ತಿದ್ದ “ಕಲಿಫೋರ್ನಿಯ” ಎಂಬ ಹಡಗವು ಮುಳುಗಿಸಲ್ಪಟ್ಟಿರುತ್ತದೆ. ೧೪ ಪ್ರಯಾಣಿಕರೂ ೨೮ ನಾವಿಕರೂ ಕಾಣೆಯಾಗಿರುವರು. ೮ ಮಂದಿ ಹತರಾಗಿರುವರು, ೩೦ ಮಂದಿಗೆ ಗಾಯವಾಗಿದೆ. “ಕಲಿಫೋರ್ನಿಯ” ಹಡಗವು ೮೬೦೦ ಟನ್ ಭರಾವಣೆದ್ದು, ಈ ಹಡಗದಲ್ಲಿ ೩೩ ಪ್ರಯಾಣಿಕರೂ ೧೭೪ ನಾವಿಕರೂ ಇದ್ದರು. ಜರ್ಮನರು ಎಚ್ಚರಿಕೆ ಕೊಡದೆನೇ ಈ ಹಡಗವನ್ನು ಮುಳುಗಿಸಿದ್ದಾರೆ. ಫೆಬ್ರವರಿ ತಾ. ೮ರಲ್ಲಿ ಬ್ರಿಟಿಷರ ೮ ದೊಡ್ಡ ಹಡಗಗಳು, ೪ ಸಣ್ಣ ದೋಣಿಗಳು, ಸ್ಪಾನಿಯರ ಒಂದು ಹಡಗವು ಮುಳುಗಿಸಲ್ಪಟ್ಟಿರುತ್ತದೆ. ಬೆಲ್ಜಿಯನರ ಸಹಾಯಾರ್ಥವಾಗಿ ಸಾಮಾಗ್ರಿಗಳನ್ನು ಸಾಗಿಸುತ್ತಿದ್ದ ೨ ಹಡಗಗಳೂ ಈ ಜಲಯಾನಗಳಿಗೆ ತುತ್ತಾಗಿವೆ.

ಫೆಬ್ರವರಿ ತಾ. ೯ರಲ್ಲಿ ಬ್ರಿಟಿಷರ ೫ ದೊಡ್ಡ ಹಡಗಗಳೂ, ಸಣ್ಣ ೬ ಹಡಗಗಳೂ, ನೊರ್ವೆಯವರ ಒಂದು ಹಡಗವೂ ತಾ. ೧೦ರಲ್ಲು ಬ್ರಿಟಿಷರ ೩, ನೊರ್ವೆಯವರ ೪, ಸ್ಪಾನಿಯರ ಒಂದು ಹಡಗವೂ ಇನ್ನು ಕೆಲವು ಸಣ್ಣ ದೋಣಿಗಳೂ ಜರ್ಮನರ ಜಲಂತರ್ಗಾಮಿ ಹಡಗಗಳಿಗೆ ತುತ್ತಾಗಿವೆ.

ಈಜಿಪ್ತ.

ಈಜಿಪ್ತಿನಲ್ಲಿ ಸಯ್ಯದ್ ಹಮ್ಮದ್ ಸೆನ್‌ಯುಸಿನರ ಸೇನೆಯನ್ನು ಬ್ರಿಟಿಷರು ಸೋಲಿಸಿ ಅಟ್ಟಿಬಿಟ್ಟಿರುತ್ತಾರೆ. ಬ್ರಿಟಿಷರು ಶಿವ ಮತ್ತು ಮನಾಸಿ ದಾಣಗಳನ್ನು ಹಿಡಿದಿರುವರು.

ವಿದೇಶ ವೃತ್ತಾಂತ.

“ಜರ್ಮನಿಯು ಬದುಕಲಾರದು, ಅದಕ್ಕೆ ಆಹಾರವಿಲ್ಲ, ಜರ್ಮನಿಯು ಆಹಾರವಿಲ್ಲದೆ ಪಡುತ್ತಿರುವ ಕಷ್ಟವು ಅಮೇರಿಕಾದವರಿಗೆ ಇದ್ದಿತೇ ಆದರೆ ಜರ್ಮನಿಯು ಜಲಯಾನಗಳ ಮೂಲಕ ಯುದ್ಧಮಾಡತೊಡಗಿದುದರ ನ್ಯಾಯ್ಯಾನ್ಯಾಯವು ಚೆನ್ನಾಗಿ ಅಮೇರಿಕಕ್ಕೆ ತಿಳಿಯುತ್ತಿತ್ತು” ಎಂತ ಜರ್ಮನಿಯ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಫ್ರಾನ್ಸಿನ ನೌಕಾವಳಿ ಮಂತ್ರಿಯಾಗಿರುವ ಎಡ್ಮಿರಲ್ ಲಾಕ್ಸೆಯವರು, ಜರ್ಮನರ ಜಲಯಾನಗಳ ತೀಕ್ಷ್ಣತೆಯು ಹೆಚ್ಚಾದರೆ ಒಂದೆರಡು ತಿಂಗಳು ಇರುವದು. ನಂತರ ಶತ್ರುಗಳಿಗೆ ಆಗುವ ವಿಪರೀತ ನಷ್ಟದಿಂದ ಈ ಜಲಯಾನಗಳ ಬಾಧೆಯು ಪರಿಹಾರವಾಗುವದು ಎಂದು ಹೇಳಿರುತ್ತಾರೆ.

ಲಂಡನಿನ ಲೇಬರ್ ಮಂತ್ರಿಯಾಗಿರುವ ಮಿ। ಹೊಡ್ಜಯವರು ಮಿತ್ರರಾಜ್ಯಗಳವರ ಈಚೆಗೆ ಕೂಡಿದ ಸಭೆಯಲ್ಲಿ ಯುದ್ಧವನ್ನು ಈ ಬೇಸಿಗೆ ಕಾಲದಂತ್ಯದೊಳಗೆ ತೀರಿಸಬೇಕೆಂಬ ನಿರ್ಣಯವಾಗಿರುವದು ಎಂತ ಹೇಳಿರುವರು.

ಅಮೇರಿಕದ ೨೮ ಸಂಸ್ಥಾನಗಳಲ್ಲಿರುವ ೪ ಮಿಲಿಯ ಜರ್ಮನರ ಪರವಾದ ಪ್ರತಿನಿಧಿಗಳು ಯುನೈಟೆಡ್ ಸ್ಟೇಟಿನವರು ಜರ್ಮನಿಗೆ ವಿರೋಧವಾಗಿ ಯುದ್ಧ ತೊಡಗಿದರೆ ತಾವು ಯುನೈಟೆಡ್ ಸ್ಟೇಟಿಗೆ ರಾಜನಿಷ್ಠೆಯುಳ್ಳವರಾಗಿ ಇರುವೆವೆಂಬ ಭರವಸೆ ಕೊಟ್ಟಿರುವರಲ್ಲದೆ ಜರ್ಮನ-ಅಮೇರಿಕಾನರ ಒಂದು ಸೇನಾಪಾಳೆಯವನ್ನು ತಯಾರಿಸುವೆವೆಂತ ಹೇಳಿರುತ್ತಾರೆ.

ಬಕಾರಿಯ ಪ್ರಧಾನ ಮಂತ್ರಿಯವರು ರಾಜಿನಾಮೆಕೊಟ್ಟಿರುತ್ತಾರೆ. ಟಿಲಾಕ್ ಬೇರವರು ಪ್ರಧಾನಮಂತ್ರಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಅಮೇರಿಕದ ಗೆಯ್ಲರ್ರಾಲು ಮಸೂದೆಗೆ ಕಾನೂನಾಗಿ ಜಾರಿಗೆ ತರಲು ಸಮ್ಮತಿಯು ದೊರಕಿರುತ್ತದೆ. ಈ ಮಸೂದೆಯನ್ನು ಜಾರಿಗೆ ತರುವರೆ ಯುನೈಟೆಡ್ ಸ್ಟೇಟಿನಲ್ಲಿ ೨೦ ವರ್ಷಗಳಿಂದ ೪ ಪ್ರೆಸಿಡೆಂಟರ ಕಾಲದಲ್ಲಿ ಸಾಧನ ನಡಿಯುತ್ತಿತ್ತು.

ಜರ್ಮನರ ಜಲಯಾನಗಳನ್ನು ಆಟೋಪಿಸುವ ವಿಷಯ ತಕ್ಕ ಸಾಧನೆಗಳನ್ನು ಮಾಡುವರೆ ಇಂಗ್ಲಾಂಡಿನಲ್ಲಿ ತಕ್ಕ ವಿದ್ವಾಧಿಕಾರದರು ನೇಮಿಸಲ್ಪಟ್ಟಿರುತ್ತಾರೆ. ಪೂರ್ವ ಆಫ್ರಿಕವು ಸದ್ಯದಲ್ಲೇ ಕೈಸರರ ಕೈಯಿಂದ ತಪ್ಪಿಹೋಗುವದಾಗಿದೆಂತ ಮಿ। ಬೊನರ್ ಲಾರವರು ಹೇಳಿರುವರು.’

ಇದೇ ತಾ. ೭ರಲ್ಲು ಜೋರ್ಜ ಸಾರ್ವಭೌಮರವರು ಪಾರ್ಲಿಮೆಂಟ ಸಭೆಗೆ ಆಗಮಿಸಿ ಸಭಾಕೆಲಸವನ್ನು ಪ್ರಾರಂಭಿಸಿದರು, ಈ ಸಂದರ್ಭದಲ್ಲಿ ಸಾರ್ವಭೌಮರು “ಈ ಮಹಾ ವಿಪತ್ತಿನಕಾಲ ನಮ್ಮ ಸಾಮುದ್ರಿಕಗಳಾಗಿದ್ದ ಡೊಮಿನಿಯನ್ ಮತ್ತು ಹಿಂದೀ ಸಾಮ್ರಾಜ್ಯದ ಪ್ರತಿನಿಧಿಗಳನ್ನು ನಮ್ಮ ಮಂತ್ರಿಗಳೊಡನೆ ಕೂಡಿ ಯುದ್ಧ ಸಂಬಂಧವಾದ ಪ್ರಮುಖವಾದ ವಿಷಯಗಳನ್ನು ಆಲೋಚಿಸುವರೆ ಕರೆಯಿಸಿದ್ದೇನೆ. ಇದರಿಂದ ಸಾಮ್ರಾಜ್ಯದ ಎಲ್ಲಾ [illegible] ಇರುವ ಸಂಬಂಧವು [illegible] ಆಗುವದೆಂತ ನಂಬುತ್ತೇನೆಂತ ಹೇಳಿರುವರು. ಯುರೋಪ, [illegible] ಮೆಸೊಪೊಟಾಮಿಯ, ಮೊದಲಾದ ಸ್ಥಳಗಳಲ್ಲಿ ಸಾಮ್ರಾಜ್ಯದ ಭೂಮಿ

ಮತ್ತು ನೌಕಾಸೇನೆಯು ತೋರಿಸಿದ ಶೌರ್ಯ ಸಾಹಸಗಳನ್ನು ಸಾರ್ವಭೌಮರು ತಮ್ಮ ಭಾಷಣದಲ್ಲಿ ವಿಶೇಷವಾಗಿ ಕೊಂಡಾಡಿರುತ್ತಾರೆ.

ಅಮೇರಿಕದಲ್ಲಿದ್ದ ಜರ್ಮನರ ರಾಯಭಾರಿ ಬರ್ನಸ್ಟೋರ್ಫರು ನ್ಯೂಯಾರ್ಕಿನಿಂದ ಇದೇ ತಾ. ೧೪ರಲ್ಲು ಹೊರಡುವರೆಂತ ಪ್ರಕಟವಾಗಿದೆ. ಜರ್ಮನಿಯಲ್ಲಿರುವ ಅಮೇರಿಕದ ರಾಯಭಾರಿ ಗೆರ್ರಾರ್ಡರವರು ಜರ್ಮನಿಯಲ್ಲಿದ್ದ ಸುಮಾರು ೧೧೫ ಅಮೇರಿಕನರೊಡನೆ ಬರ್ಲಿನ್ ನಗರದಿಂದ ಸ್ವಿಜರ್‌ಲೇಂಡಿಗೆ ಹೊರಟು ಬಂದಿರುವರು. ಸ್ವಿಜರ್‌ಲೇಂಡಿನಿಂದ ಅಮೇರಿಕಕ್ಕೆ ಬರುವರು.

ಹೊಲ್ಲಾಂಡಿನಲ್ಲಿ ಕಲ್ಲಿದ್ದಲಿನ ಕೊರತೆಯುಂಟಾದುದರಿಂದ ೩೦೦ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಕೆಲವು ಕಾರ್ಖಾನೆಗಳು ದಿವಸದಲ್ಲಿ ಸ್ವಲ್ಪ ತಾಸುಗಳ ವರೆಗೆ ಮಾತ್ರ ಕೆಲಸಮಾಡಹತ್ತಿವೆ. ಸಣ್ಣ ಪಟ್ಟಣಗಳ ಹಲವು ಬೀದಿಗಳಲ್ಲಿ ಈಗ ರಾತ್ರಿಕಾಲ ದೀಪ ಹಚ್ಚುವದಿಲ್ಲ.

ಅಮೇರಿಕಾದವರು ಜರ್ಮನಿಗೆ ವಿರೋಧವಾಗಿ ಯುದ್ಧಕ್ಕೆ ಹೊರಟರೆ ನ್ಯೂಯಾರ್ಕಿನಲ್ಲಿರುವ ೧೦,೦೦೦ ಜರ್ಮನರನ್ನು ಬಂಧನೆಯಲ್ಲಿಡುವ ಏರ್ಪಾಡು ಈಗಲೇ ಮಾಡಲ್ಪಟ್ಟಿದೆಂತಲೂ ಒಂದು ಮಿಲಿಯ ಸೇನಿಕರ ಸೇನೆಯು ಸಿದ್ಧವಾಗಿದೆಂದೂ ವಾರ್ತೆ ಇದೆ.

ಅಮೇರಿಕಕ್ಕೆ ವಿರೋಧವಾಗಿ ಮೆಕ್ಸಿಕೋದ ಜನರನ್ನು ಎಬ್ಬಿಸುವ ಉದ್ದೇಶದಿಂದ ೪೦೦ ಜರ್ಮನ ಆಫೀಸರರು ಮೆಕ್ಸಿಕೋ ಪಟ್ಟಣಕ್ಕೆ ಹೋಗಿರುವರೆಂಬ ವಾರ್ತೆ ಇದೆ.

ಯುನೈಟೆಡ್ ಸ್ಟೇಟಿನವರು ಈಚೆಗೆ ಮದ್ದುಗುಂಡುಗಳ ಕಾರ್ಖಾನೆಯಾಗಿ ಏರ್ಪಡಿಸಿದ ಕಾರ್ಖಾನೆಯೊಂದಕ್ಕೆ ಬೆಂಕಿಬಿದ್ದು ಸುಮಾರು ೪೦೦೦ ಪವನುಗಳ ಆರ್ಥನಷ್ಟವಾಗಿರುತ್ತದೆ.

ಯುದ್ಧ ಪ್ರಾರಂಭವಾದಂದಿನಿಂದ ಸ್ಪಾನಿಯರ ೭೯,೬೭೦ ಟನ್ ಭರಾವಣೆಯ ೨,೮೦೦,೦೦೦ ಪವನುಗಳ ಬೆಲೆಬಾಳುವ ಹಡಗಗಳು ಮುಳುಗಿಸಲ್ಪಟ್ಟಿವೆ.

ಉತ್ತರ ಹಿಂದೂಸ್ಥಾನ

ಯುನೈಟೆಡ್ ಪ್ರೊವಿನ್ಸಿನ ಕಾಂಗ್ರೆಸ್ ಕಮಿಟಿಯವರು ಗೆಯ್ಮೆ ಕರಾರಿನ ಪದ್ಧತಿಯನ್ನು ಕೂಡಲೇ ನಿಲ್ಲಿಸುವ ಹಾಗೆ ಇಂಡಿಯಾ ಸರಕಾರದವರನ್ನು ಕೇಳಿಕೊಳ್ಳಬೇಕೆಂತ ನಿರ್ಣಯಿಸಿರುತ್ತಾರೆ.

ಹಿಂದೂಸ್ಥಾನದಲ್ಲಿರುವ ಯೂರೋಪಿಯಾನರಿಗೆ ಇಂಗ್ಲಾಂಡಿನಲ್ಲಿರುವ ಯೂರೋಪಿಯಾನರಂತೆಯೇ ಖಡ್ಡಾಯವಾಗಿ ಸೇನೆಗೆ ಸೇರಿಕೊಳ್ಳುವ ವಿಧಿಯು ಸದ್ಯದಲ್ಲೇ ಆಗುವದು. ಈ ಬಗ್ಗೆ ಹಿಂದೂಸ್ಥಾನದಲ್ಲಿರುವ ಯೂರೋಪಿಯಾನರ ರಿಜಿಸ್ಟ್ರಿ ತಯಾರಾಗುತ್ತಿದೆ.

ಜನವರಿ ತಾ. ೧೮ ವರೆಗೆ ಹಿಂದೂಸ್ಥಾನದ ರಿಟಾಯರ್ಡ ಆದ ಆಫೀಸರರಲ್ಲಿ ೯೧೭ ಮಂದಿ ಸೇನೆಗೆ ಸೇರಿಕೊಂಡಿರುವರು. ೧೨೮ ಮಂದಿಗೆ ಸೇನೆ ಮತ್ತು ನೌಕಾಸೇನೆಯಲ್ಲಿ ಕಮಿಷನ್ ದೊರಕಿರುತ್ತದೆ. ೩೧೨ ಮಂದಿ ಯುದ್ಧ ಆಫೀಸಿನಲ್ಲಿ ಮತ್ತು ಇಂಡಿಯಾ ಆಫೀಸಿನಲ್ಲಿ ಕೆಲಸಕ್ಕಿದ್ದಾರೆ. ೧೮೩ ಆಫೀಸರರು ಯುದ್ಧದ ಬಗ್ಗೆ ಸ್ವಾತಂತ್ರಿಕವಾದ ಕೆಲಸಗಳನ್ನು ಮಾಡುತ್ತಿದ್ದಾರೆ.

ಸಾಮ್ರಾಜ್ಯ ಯುದ್ಧ ಕನ್ಸರೆನ್ಸಿನ ಪ್ರತಿನಿಧಿಯಾಗಿ ನೇಮಿಸಲ್ಪಟ್ಟ ಬಿಕಾನೆರ್ ಮಹಾರಾಜರವರು ಮತ್ತು ಪಾಟಿಯಾಲ ಮಹಾರಾಜರು, ನವಾಬ್ ಸಾಹೇಬ ಮೊದಲಾದವರೊಡನೆ ಇದೇ ತಾ. ೮ರಲ್ಲು ಮುಂಬಾಯಿಗೆ ಬಂದು ತಲಪಿದರು. ದೇಶೀಯ ರಾಜರುಗಳಿಂದ ಇವರ ಬಹುಮಾನಾರ್ಥವಾಗಿ ಮುಂಬಾಯಲ್ಲಿ ಒಂದು ಸನ್ಮಾನವು ಅತಿ ವಿಜೃಂಭಣೆಯಿಂದ ಜರಗಿತು. ಸುಮಾರು ೨೫೦ ಅತಿಥಿಗಳು ಇದ್ದರು. ಮುಂಬಾಯಿ ಗವರ್ನರ ಪ್ರಭುಗಳವರೂ ಅವರ ಪತ್ನಿಯವರೂ ಈ ಉಪಚಾರ ಸಭೆಗೆ ಚಿತ್ತೈಸಿದ್ದರು. ಆಥಿತ್ಯೋಪಚಾರಕ್ಕೆ ಬರಲು ಅಸಾಧ್ಯವಾದ ಇತರ ದೇಶೀಯ ರಾಜರುಗಳಿಂದ ಬಿಕಾನೆರ್ ಮಹಾರಾಜರವರಿಗೆ ತಂತೀ ವರ್ತಮಾನಗಳು ಬಂದಿದ್ದವು. ಜಾಮನಗರದ ಮಹಾರಾಜರವರು ಬಿಕಾನೆರ್ ಮಹಾರಾಜರ ಸನ್ಮಂಗಲ ಪಾಠನೆಯನ್ನು ಮಾಡಿ ಬಿಕಾನೆರ್ ಮಹಾರಾಜರು ತಕ್ಕ ಪ್ರಯೋಜನಗಳನ್ನು ಪಡೆದು ಹಿಂತಿರುಗುವರೆಂದೂ ಮಹಾರಾಜರು ತಮ್ಮಿಂದ ಸಾಧ್ಯವಾದಷ್ಟು ಮಟ್ಟಿಗೆ ಸಾಮ್ರಾಜ್ಯ ಯುದ್ಧಸಭೆಯಲ್ಲಿ ಹಿಂದೂಸ್ಥಾನದವರ ಆಕಾಂಕ್ಷೆಗಳನ್ನು ಮುಂದಿಡುವರೆ ಪ್ರಯತ್ನಿಸುವರೆಂದೂ ಹೇಳಿದರು. ಅನಂತರ ಅಲ್ವಾರಿನ ಮಹಾರಾಜರೇ ಮೊದಲಾದವರ ಭಾಷಣಗಳಾಗಿ ಈ ದಿನದ ಸತ್ಕಾರವು ಅಂತ್ಯವಾಯಿತು.

ಮುಂಬಾಯಲ್ಲಿ ಗೋಖಲೆಯವರ ಸ್ಮಾರಕ ಫಂಡಿನವರು ೨೦,೦೦೦ ರೂಪಾಯಿಗಳ ಖರ್ಚು ಮಾಡಿ ಮಾನ್ಯ ಗೋಖಲೆಯವರ ಒಂದು ಪ್ರತಿಮೆಯನ್ನು ಮಾಡಿಸಬೇಕೆಂತಲೂ ಉಳಿದ ರೂ. ೯೬೭೪ನ್ನು ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯವರಿಗೆ ಕೊಡಬೇಕೆಂತಲೂ ನಿರ್ಣಯಿಸಿರುತ್ತಾರೆ.

ಕಲ್ಕತ್ತೆಯ ಮಿ। ಡಬ್ಲ್ಯು. ಮಾರ್ಲೆ ಎಂಬವರು ಮಿ। ಜೆ. ಎ. ಮೊಮೊನೊಪೊಲಸ್ ಎಂಬ ಒಬ್ಬ ಗ್ರೀಕನನ್ನು ಜರ್ಮನನೆಂದು ಕರೆದ್ದರೆಂತ ಮಾನನಷ್ಟ ಪಿರ್ಯಾದಿ ಆಗಿ ಮಿ। ಡಬ್ಲ್ಯು. ಮಾರ್ಲೆ ಎಂಬವರಿಗೆ ೧೦೦ ರೂಪಾಯಿ ಜುಲುಮಾನೆ ವಿಧಿಸೋಣಾಯಿತು.

ಮುಂಬಾಯಿಯ “ಇಂಪೀರಿಯಲ್ ಸಿಟಿಜನ್‌ಶಿಫ್” ಎಂಬ ಸಂಘದವರು ಸಿಲೋನಿನಲ್ಲಿರುವ ಹಿಂದೀ ಕೆಲಸಗಾರರ ಸ್ಥಿತಿಗತಿಗಳನ್ನು ವಿಚಾರಿಸುವರೆ ಮಿ। ಎಚ್. ಎಸ್. ಪೊಲಕ ಮತ್ತು ಮಿ। ಜೆ. ಎ. ನಾಟೇಸನ ಎಂಬವರನ್ನು ನೇಮಿಸಿರುತ್ತಾರೆ.

ಒರಿಸ್ಸಕ್ಕೆ ಸೇರಿದ ಮಾರಿ ಡಿಸ್ಟ್ರಿಕ್ಟಿನ ಪಾರಿಕುಡ್ ಎಂಬಲ್ಲಿ ಬರಬಿದ್ದು ೧೫೦ ಚದರ ಮೈಲು ವಿಸ್ತೀರ್ಣ ಭೂಮಿಯು ಬಂಜರು ಬಿದ್ದಿರುವದು. ೪೦೦೦ಕ್ಕೆ ಮಿಕ್ಕಿದ ಜನರು ಗಡ್ಡೆಗೆಣಸುಗಳನ್ನೂ ಹುಲ್ಲನ್ನೂ ತಿಂದು ಜೀವಿಸುತ್ತಿದ್ದಾರೆಂಬ ವಾರ್ತೆ ಬಂದದೆ.

ಇಂಗ್ಲಾಂಡಿನಿಂದ ಕಲ್ಕತ್ತೆಗೆ ಬರುತ್ತಿದ್ದ ಸಿಂಧ್ಯದ ಕುದುರೆಗಳಿದ್ದ ಒಂದು ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಮುಳುಗಿಸಿರುತ್ತದೆಂಬ ವಾರ್ತೆ ಬಂದಿದೆ.

ಫೆಬ್ರವರಿ ತಾ. ೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲಿ ೧೯,೭೩೮ ಮಂದಿಗೆ ಪ್ಲೇಗ ಬೇನೆಯು ತೋರಿ ೧೪,೭೩೫ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಿ ಮತ್ತು ಸಿಂಧದಲ್ಲಿ [illegible], ಸಂಯುಕ್ತ ಸಂಸ್ಥಾನ ೪೧೮೪, ಮಧ್ಯಸಂಸ್ಥಾನಗಳು ೧೪೫೯, ಹೈದರಾಬಾದ್ [illegible], [illegible] ಮತ್ತು ಒರಿಸ್ಸ ೯೭೭, ಮದ್ರಾಸ್ ೯೨೪, ಮಧ್ಯಹಿಂದೂಸ್ಥಾನ ೨೬೮, ಮೈಸೂರು ೨೧೯, ಪಂಜಾಬು ೭೭ ಮತ್ತು ರಾಜಪುಟಾನ [illegible] ಮರಣಗಳಾಗಿರುವವು.

ಮಿ। ರಾ। [illegible] ಎಸ್‌ರವರು ಸಂಯುಕ್ತ ಸಂಸ್ಥಾನ [illegible] ಅಂಡರ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿರುತ್ತಾರೆ. [illegible] ದಲ್ಲಿ ಈ ಕೆಲಸಕ್ಕೆ ನೇಮಿಸಲ್ಪಟ್ಟ ಹಿಂದೀಗಳಲ್ಲಿ ಇವರೇ [illegible].

ದೇಶೀಯ ರಾಜರುಗಳು [illegible] ಯುದ್ಧದ ಬಗ್ಗೆ [illegible] ಸಹಾಯ್ಯ ಮಾಡುತ್ತಿದ್ದಾರೆಂತ [illegible]

([illegible])

ಅನುಕ್ರಮಣಿಕೆ.

	ಪುಟ.
ಅಗ್ರಲೇಖ—ದಕ್ಷಿಣ ಕನ್ನಡ	೧
ಸ್ಫುಟವಿಚಾರ:—	
೧ ಹಿಂದುಸ್ಥಾನದ ಶತ್ರುರಾಷ್ಟ್ರಗಳೊಡನೆ ವ್ಯಾಪಾರ	,,
೨ ಕರ್ಟಿಸ್ ಎಂಡ್ ಕೊ.	,,
೩ ವರಿಷ್ಠ ಕೌನ್ಸಿಲಿನಲ್ಲಿ ಗೆಯ್ಮೆಕರಾರಿನ ಪದ್ಧತಿ	,,
೪ ವರಿಷ್ಠ ಕೌನ್ಸಿಲಿನ ಅಧಿವೇಶನಗಳನ್ನು ಹೆಚ್ಚಿಸುವುದು	೫
೫ ಸಿಲೋನ್ ತೋಟಗಳ ಹಿಂದೀ ಕೂಲಿಗಳ ವಿಚಾರ	,,
೬ ಕೂಲಿಯ ಸಣ್ಣ ತಪ್ಪಿಗೆ ದೊಡ್ಡ ಶಿಕ್ಷೆ	,,
ಸ್ಥಳೀಕ—ಮಂಗಳೂರು	,,
ವರ್ತಮಾನ ಸಂಗ್ರಹ	೪
ಟಾಕಬರುಗಳು	೬
ಒನರಬಲ್ ಕೆ. ಎಸ್. ಭಟ್ಟರು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಕೇಳಿದ ಪ್ರಶ್ನೆಗಳು	,,

ಸ್ವದೇಶಾಭಿಮಾನಿ.

ಶಕ ೧೮೩೭ ಮಾಘ ಬ. ೯ ಶುಕ್ರವಾರ.

ದಕ್ಷಿಣ ಕನ್ನಡ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸುಖದುಃಖಗಳ ಕುರಿತು ಯಾರಾದರೂ ನುಡಿಯಹತ್ತಿದರೆ ಅಥವಾ ಬರೆಯಹತ್ತಿದರೆ ಕೈಕೊಂಡ ವಿಷಯವು ಮುಗಿಯಿತು ಎಂದಾಗಲಿಕ್ಕಿಲ್ಲ, ಅಷ್ಟು ಸಂಗತಿಗಳಿರುವವು. ಉದಾಹರಣೆಗೆ ನಮ್ಮ ಜಿಲ್ಲಾ ವಿಭಾಗದ ಸಂಗತಿಯನ್ನೆ ವಿಮರ್ಶಿಸುವದಾದರೆ ಅದರಲ್ಲಿ ಬೇಕಷ್ಟು ಹೇಳುವಹಾಗಿದೆ. ಇದರ ಕುರಿತು ಕಳೆದ ಸ್ಫುಟವಿಚಾರದಲ್ಲಿ ಇನ್ನೂ ಕೆಲವು ಮಾತುಗಳು ಹೇಳಲಿಕ್ಕಿವೆಂದು ಸೂಚಿಸಿರುವಂತೆ ಈ ಹೊತ್ತಿನ ಅಗ್ರಲೇಖದಲ್ಲಿ ನಮ್ಮ ಆಲೋಚನೆಗಳನ್ನು ಇಡಬೇಕೆಂದಿದ್ದೇವೆ. ಮಧ್ಯದಲ್ಲಿ ನಮ್ಮ ಸ್ಫುಟವಿಚಾರದಲ್ಲಿ ಪ್ರಚರ್ಚಿಸಿದ ವಿಚಾರ ಸರಣಿಗೆ ಅದೇ ಲೇಖಕರು ಒಂದು ಪತ್ರವನ್ನು ಬರೆದಿರುವರು. ಆ ಪತ್ರದೊಳಗಿನ ವಿಧಾನಗಳನ್ನು ಕೇವಲ ಸಹಾನುಭೂತಿಯಿಂದಲೆ ಪರಾಂಬರಿಸಬೇಕೆಂದಿದ್ದೇವೆ.

ಜಿಲ್ಲಾ ವಿಭಜನೆಯ ಕುರಿತು ಬರೆಯುವುದಾದರೆ ಮೊದಲು ಒಂದು ಸಂಗತಿಯನ್ನು ವಾಚಕರಿಗೆ ತಿಳಿಸುವುದು ಅಗತ್ಯವಿದೆ:—ದ. ಕ. ಜಿಲ್ಲಾ ವಿಭಜನೆಯ ಪ್ರಶ್ನೆಯು ತತ್ಕಾಲಕ್ಕೆ ಸರಕಾರದ ಮುಂದಿರುವುದಿಲ್ಲೆಂದು ನಾವು ಕೇಳಿರುತ್ತೇವೆ. ಯುದ್ಧದ ಸಮಯದಲ್ಲಿ ಜಿಲ್ಲೆಗಳನ್ನು ವಿಂಗಡಿಸಿ ಅದಕ್ಕೆ ಬೇಕಾದ ಹೆಚ್ಚಿನ ಖರ್ಚುಮಾಡುವಷ್ಟು ಈಗ ನಮ್ಮ ಸರಕಾರಕ್ಕೆ ಅನುಕೂಲತೆಯಿಲ್ಲಾದುದರಿಂದ ಸರಕಾರಿ ಒಫಿಸರುಗಳ ಯೋಜನೆ ಮೇಲೆ ಈ ವಿಷಯದ ಕಾಗದಪತ್ರಗಳು ಇಟ್ಟಿಲ್ಲವಂತೆ! ಇದು ಹಾಗಾದರೆ ನಮ್ಮ ಜಿಲ್ಲೆಯ ತುಂಡನ್ನು ಮಲಬಾರಿಗೆ ಕೊಡುವುದು ಉಚಿತವೆ, ಅಲ್ಲವೆ, ಕೊಡುವುದರಿಂದ ಮಳಿಯಾಳಿಗಳಿಗೆ ಲಾಭವೇನು, ಈ ಜಿಲ್ಲೆಯ ಅಭಿವೃದ್ಧಿಗೆ ಬಾಧಕವೇನು ಮುಂತಾದ ಕಾಲ್ಪನಿಕ ಪ್ರಶ್ನೆಗಳನ್ನು ಎಬ್ಬಿಸಿ ಆ ಬಗ್ಗೆ ಶಾಸ್ತ್ರಾರ್ಥ ನಡೆಯಿಸುತ್ತ ಕೂಡ್ರುವುದು ಕೇವಲ ಅಕಾಂಡ ತಾಂಡವವೆ ಸರಿ! ಮತ್ತು ಇಂಥ ಸಂದರ್ಭದಲ್ಲಿ ಒಬ್ಬರಮೇಲೊಬ್ಬರು ಎಂದರೆ ಕನ್ನಡಿಗರ ಮೇಲೆ ಮಳಿಯಾಳಿಗಳು, ಮಳಿಯಾಳಿಗಳ ಮೇಲೆ ಕನ್ನಡಿಗರು ವೃಥಾ ಮಂತ್ರಪುಷ್ಪಗಳನ್ನು ಚಲ್ಲಿಕೊಳ್ಳುವುದು ಕೂಡ ಅಯುಕ್ತವೆ. ಆದುದರಿಂದ ಬರೆ ಜನರ ಆಶಂಕೆಯಲ್ಲಿರುವ ವಿಭಜನೆಯು ಒಂದುವೇಳೆ ಸಂಭವಿಸಿದರೆ ಅದರಿಂದ ಈ ಜಿಲ್ಲೆಗೆ ನಷ್ಟವೇನೆಂಬುದನ್ನು ಮಾತ್ರ ನಾವು ನಿರೀಕ್ಷಿಸಿದರೆ ಸಾಕಾಗಿದೆ.

ಈ ಜಿಲ್ಲೆಯ ಮಹತ್ವವು ಕಾಡುತ್ಪತ್ತಿ ಮತ್ತು ವ್ಯಾಪಾರ ಈ ಎರಡು ಸಂಗತಿಗಳ ಮೇಲೆ ಹೊಂದಿಕೊಂಡಿದೆ. ದಕ್ಷಿಣ ಭಾಗದ ಕೆಲ ಅಂಶವನ್ನು ಕತ್ತರಿಸಿದರೆ ಇಲ್ಲಿಯ ವ್ಯಾಪಾರದ ದುರವಸ್ಥೆಗೆ ಪಾರವೇ ಇಲ್ಲದಂತಾಗುವುದು. ಒಂದನೆಯದಾಗಿ, ಮೈಸೂರಿನವರು ಜಟಕಳ ಬಂದರಕ್ಕೆ ರೈಲಬಂಡಿಯನ್ನು ಕೊಂಡುಹೋಗಿ ಆ ಮಾರ್ಗವಾಗಿಯೆ ಘಟ್ಟದ ಎಲ್ಲ ವ್ಯಾಪಾರವು ನಡೆಯುತ್ತಿದ್ದರೆ ಅದರಿಂದ ಇಲ್ಲಿಯ ಚಲಾವಣೆಯು ನಿಂತುಹೋಗುವುದು. ಎರಡನೆದಾಗಿ, ದಕ್ಷಿಣ ಭಾಗವು ಮಳಿಯಾಳಕ್ಕೆ ದಕ್ಷಿಣೆಯಾಗಿ ಕೊಟ್ಟರೆ ಇಷ್ಟು ದಿವಸ ಅಲ್ಲಿಗೂ ಇಲ್ಲಿಗೂ ನಡೆಯುತ್ತಿದ್ದ ಅಲ್ಪ ಸ್ವಲ್ಪ ವ್ಯಾಪಾರವು ಸಂಪೂರ್ಣದಲ್ಲಿ ಬಂದು ಹೋಗುವುದು. ಅಲ್ಲದೆ, ಈಗ ನೂರು ವರ್ಷಗಳಿಂದ ಕಾಸರಗೋಡಿನ ಭಾಗವು ಈ ಜಿಲ್ಲೆಗೆ ಸೇರಿರುವುದರಿಂದ ಆ ಭಾಗದಲ್ಲಿ ಈ ಜಿಲ್ಲೆಯೊಳಗಿನ ಬೇರೆ ಬೇರೆ ತಾಲೂಕಗಳೊಳಗಿನವರ ಆಸ್ತಿಪಾಸ್ತಿ, ಕಡಕಟ್ಟು ಮುಂತಾದ್ದಿರುವುದರಿಂದಲೂ, ಅಲ್ಲಿಯವರಿಗೆ ಇದೆ ಜಿಲ್ಲೆಯ ಬೇರೆ ಬೇರೆ ತಾಲೂಕಗಳಲ್ಲಿ ಇದೇ ತರದ ಸಂಬಂಧವಿರುವುದರಿಂದಲೂ ಜನರ ಸಾಮಾನ್ಯ ವ್ಯವಹಾರಕ್ಕೂ ಅಡ್ಡಿ ಬರುವುದು. ಇನ್ನು ಮೂರನೆಯ ವಿಷಯ ಕನ್ನಡ, ತುಳು, ಕೊಂಕಣಿ ಮುಂತಾದ ಬೇರೆ ಭಾಷೆಗಳ ಜನರಿಗೆ ಈ ಅವ್ಯವಸ್ಥೆಯಿಂದ ಬರುವ ತೊಂದರೆಗಳು, ಇದೀಗ ಒಂದು ಶತಮಾನದ ರೂಢಮೂಲವಾದ ಏಕತ್ರಭಾವನೆಯನ್ನು ತಗ್ಗಿಸುವಂತೆ ಮಾಡುವುದು, ಒಂದುವೇಳೆ ಬೇರೆ ಬೇರೆ ಭಾಷೆಗಳ ಅಲ್ಪ ಸ್ವಲ್ಪ ಜನರ ಸಮ್ಮತಿಯಿಂದ ಅವರವರ ಉತ್ಕೃಷ್ಟ ಗುಣಗಳ ವಿನಿಮಯವಾಗಿ ಆ ಮೂಲಕ ಬರುವ ಲಾಭಕ್ಕೆ ಅಂತರಿಸುವುದು ಈ ಎಲ್ಲ ಕಾರಣಗಳನ್ನೂ ಬೇರೆ ಕಾರಣಗಳನ್ನೂ ಎಣಿಸಲು ಹೋದರೆ ಬೆರಳುಗಳ ಸಾಹಾಯ್ಯವು ಸಾಲದು. ಜಿಲ್ಲೆಯನ್ನು ಅದಷ್ಟು ವಿಸ್ತರಿಸುವುದು ಅಸಳತೆಯವರೆಗೆ ಕೊಂಚ ಕಷ್ಟದ್ದಾಗಿರಬಹುದು; ಆದರೆ ಪ್ರಜೆಗಳ ರಾಜಕೀಯ ಮತ್ತು ಸಾಮಾಜಿಕ ಬಂಧನದ ಮೇಲೆ ಅದರಿಂದ ಒಳ್ಳೆಯ ಪರಿಣಾಮವೆ ಉಂಟಾಗುವುದು. ಹಿಂದುಸ್ಥಾನದಲ್ಲಿ ಏಕಾಧಿಪತ್ಯವಿದ್ದದರಿಂದಲೆ ಈಗ ಹಿಮಾಲಯದಿಂದ ಸೇತುವಿನ ವರೆಗೆ ಒಂದೆ ಭಾವನೆಯು ಹರಿದುಕೊಂಡಿರುವುದು. ಈ ಒಂದೆ ದೃಷ್ಟಾಂತದಿಂದ ಜಿಲ್ಲೆಗಳನ್ನು ಅದಷ್ಟು ವಿಸ್ತೃತಪಡಿಸುವುದು ಅಹಿತಕರವಲ್ಲೆಂದು ಚಿಕ್ಕ ಹುಡುಗರೂ ಕೂಡ ಒಪ್ಪಿಕೊಳ್ಳುವ ಹಾಗಿದೆ. ಹೀಗಿರುವಲ್ಲಿ, ಪ್ರತ್ಯುತ, ಜಿಲ್ಲೆಯನ್ನೆ ಸಂಕೋಚಪಡಿಸುವುದೆಂದರೆ ಇದಕ್ಕೆ ಅರ್ಥವೇನು?

ಜಿಲ್ಲೆಯ ವ್ಯಾಪಾರದ ಸಂಗತಿಯನ್ನೆ ಆಲೋಚಿಸಿದರೆ ಸಾಲದು, ಮಳಿಯಾಳಿಗಳ ಕಷ್ಟಗಳಿಗೇನುತ್ತರ? ಎಂಬದೊಂದು ಪ್ರಶ್ನೆಯು ಇಲ್ಲಿ ಬರುವುದು. ಮಳಿಯಾಳಿಗಳಿಗೆ ಮಳಿಯಾಳ ಶಾಲೆಗಳು, ಮಳಿಯಾಳ ದಸ್ತೈವಜುಗಳು, ಮಳಿಯಾಳ ಕಾಗದಪತ್ರಗಳು ಬೇಕೆಂಬುದು ನಿಜ. ಈ ಸಂಗತಿಗಳೊಟ್ಟಿಗೆ ಅವರಿಗೆ "ಮಳಿಯಾಳಿ ವಕೀಲ"ರೂ ಬೇಕೆಂಬುದೂ ನಿಜ. ಆದರೆ ಈ ಕನ್ನಡ ಜಿಲ್ಲೆಯಲ್ಲಿಯೆ ಹಿಂದುಸ್ಥಾನಿ ಶಾಲೆಗಳೂ ಇವೆ. ಹಾಗಿರುವಾಗ ಮಳಿಯಾಳಿಗಳ ಒಹು ಸಂಖ್ಯೆ ಇದ್ದಲ್ಲಿ ಮಳಿಯಾಳ ಶಾಲೆಗಳನ್ನು ಏರ್ಪಡಿಸಿಕೊಳ್ಳಬಹುದು; ಕೋರ್ಟು ಕಚೇರಿಗಳಲ್ಲಿ ಮಳಿಯಾಳ ಲಿಪಿಗೂ, ಭಾಷೆಗೂ ಈ ಮೊದಲೆ ಕಾರ್ಜಿಯಿಟ್ಟಿರುವುದರಿಂದ ಕೋರ್ಟು ಕಚೇರಿಗಳನ್ನೆ ಕುರಿತು ದೇವನಸ್ಸಾಗಿ ಅರಾಧಿಸುವವರಿಗೂ ಹೆಚ್ಚಿನ ತೊಂದರೆಯು ಬರಲಿಕ್ಕಿಲ್ಲ. ಮಳಿಯಾಳಿ ಗ್ರಾಜುಏಟರು ವಕೀಲ ಪರೀಕ್ಷೆಯನ್ನು ಕೊಟ್ಟರೆ ಈ ಅಡ್ಡಿಯೂ ನಿಲ್ಲಲಿಕ್ಕಿಲ್ಲ. ಈ ಅಡ್ಡಿಗಳೂ ಅಷ್ಟೊಂದು ಮಹತ್ವದವುಗಳಲ್ಲ, ಅವುಗಳ ನಿವಾರಣೆಗೂ ಭಗೀರಥ ಪ್ರಯತ್ನವು ಬೇಕಾಗಿಲ್ಲ. ಮಳಿಯಾಳ ಶಾಲೆ ಮಳಿಯಾಳ ಕೋರ್ಟುಕಚೇರಿಗಳಿಗಾಗಿ ಮಾತ್ರ ಚಂದ್ರಗಿರಿ ಹೊಳೆಯ ಆಚೆಯ ಭಾಗವನ್ನು ಮಲಬಾರಿಗೆ ಕೂಡಿಸಬೇಕೆನ್ನುವವರು ಪೂರ್ಣ ಆಲೋಚನೆ ಮಾಡುವುದಿಲ್ಲೆಂದು ಹೇಳಬೇಕಾಗುತ್ತದೆ. ಜಿಲ್ಲೆಯ ಪಶ್ಚಿಮ ಕರಾವಳಿಯು ಸಾಧಾರಣ ಕುಂದಾಪುರದ ವರೆಗೆ ಮಳಿಯಾಳ ಭಾಷೆಯ ಮಾಪಿಳ್ಳೆಯರಿಂದ ತುಂಬಿಕೊಂಡಿದೆ. ಚಂದ್ರಗಿರಿಯು ಮಳಿಯಾಳಿಗಳು ಮಲಬಾರಕ್ಕೆ ಹೋಗುವಾಗ ಇವರ ತಲೆಯ ಮೇಲೆ ಮಾತ್ರ ಕನ್ನಡದ ನೊಗವೇಕೆ? ಮಾಪಿಳ್ಳೆಯರಿಗೂ ಮಳಿಯಾಳ ಶಾಲೆಗಳೂ, ಮಳಿಯಾಳ ಕೋರ್ಟುಕಚೇರಿಗಳೂ ಬೇಕು. ಆಗ್ಯಾತಿ ಜಿಲ್ಲೆಯನ್ನು ಯಾವ ರೀತಿಯಿಂದ ವಿಂಗಡಿಸಬೇಕಾಯಿತು? ಇದೇ ಜಿಲ್ಲೆಯಲ್ಲಿ ಕೊಂಕಣಿ ಭಾಷೆಯ ಜನಸಂಖ್ಯೆಯಾದರೂ ಕಡಿಮೆಯಿಲ್ಲ. ಅವರ ವ್ಯವಸ್ಥೆ ಏನಾಗಬೇಕಾಯಿತು? ನಮ್ಮ ಜಿಲ್ಲೆಯ ಗಡಿಯನ್ನು ಚಂದ್ರಗಿರಿಯ ತೀರದ ಮೇಲಿಡ ಹೋದರೆ ಇಂಥ ಅನವಸ್ಥೆಗಳು ಬರುವವು.

ಈಗ ಭಾಷೆಗನುಕೂಲವಾಗಿ ಪ್ರಾಂತರಚನೆಯನ್ನು ಮಾಡಬೇಕೆಂಬುದು ನಿಜವೆ. ಮತ್ತು ಈ ವಿಷಯದಲ್ಲಿ ನಮ್ಮ ಆಲೋಚನೆಗಳನ್ನು ಮೂರು ನಾಲ್ಕು ತಿಂಗಳ ಹಿಂದೆ ಒಂದು ಅಗ್ರಲೇಖದಲ್ಲಿ ಸಾಕಷ್ಟು ತಿಳಿಯಪಡಿಸಿದ್ದೇವೆ. ಆ ದೃಷ್ಟಿಯಿಂದ ನೋಡುವಾಗ ಮಳಿಯಾಳಿಗಳೆಲ್ಲರೂ ಒಂದು ಪ್ರಾಂತದಲ್ಲಿ, ಕನ್ನಡಿಗರೆಲ್ಲರೂ ಒಂದು ಪ್ರಾಂತದಲ್ಲಿ,—ಈ ಪ್ರಕಾರ ಭಾಷಾನುರೋಧದಿಂದ ಪ್ರಾಂತರಚನೆ ಮಾಡುವುದು ಸರ್ವಸಮ್ಮತವೆ. ಆ ವಿಷಯದಲ್ಲಿ ಯಾರೂ ವಾದಿಸಲಿಕ್ಕಿಲ್ಲ. ಆದರೆ ಈ ಮತವನ್ನು ಆಧಾರಕ್ಕಿಟ್ಟುಕೊಂಡು ಇಲ್ಲಿಂದ ಆಚೆಗೆ ಸೇರುವ ಮಳಿಯಾಳಿಗಳು ಉತ್ತರ ಕನ್ನಡವನ್ನು ಇದಕ್ಕೆ ಸೇರಿಸಬಹುದಲ್ಲಾ ಎಂದು ವಾದಿಸುತ್ತಾರೆ; ಪರಂತು ಉತ್ತರ ಕನ್ನಡವು ಇದಕ್ಕೆ ಸೇರಿಸಲು ಇವರು ಭರವಸೆಯನ್ನು ಕೊಟ್ಟಾರೆ? ಇವರಲ್ಲ; ನಾವಾದರೂ ಕೊಟ್ಟೇವೆಯೆ? ಹೋಗಲಿ, ಸರಕಾರವಾದರೂ ಕೊಟ್ಟೀತೆ? ಇಲ್ಲ. ಎಂದ ಮೇಲೆ ಉತ್ತರ ಕನ್ನಡದ ಆಮಿಷದಿಂದ ಇದ್ದ ಭಾಗವನ್ನು ಬಿಟ್ಟುಬಿಡಲು ಯಾವ ಪ್ರಾಜ್ಞರೂ ಒಪ್ಪಲಿಕ್ಕಿಲ್ಲ. ಮಳಿಯಾಳಿಗಳ ಗುಂಪು ಒತ್ತಟ್ಟಿಗೆ ಮತ್ತು ಕನ್ನಡಿಗರ ಗುಂಪು ಒತ್ತಟ್ಟಿಗೆ ಸೇರಿಸಲು ಸರಕಾರವು ಆಶ್ವಾಸನೆಯನ್ನು ಕೊಡುತ್ತದೆಂದಿದ್ದರೆ ನಾವು ಎಲ್ಲರೂ ಆಗಲಿಕ್ಕಿದ್ದ ಕಿಂಬಹುನಾ ನಾವು ನೆನೆಸಿದ ಈ ವಿಭಜನೆಗೆ ಸಮ್ಮತಿಸುತ್ತೇವೆ. ಆದರೆ ಈ ಸಮಾನ ಭಾಷೆಯ ಜನರ ಏಕೀಕರಣದ ಬೀಗದ ಕೈಯು ಯಾರ ಕೈಯಲ್ಲಿದೆ? ನಮ್ಮ ಕೈಯಲ್ಲಿಯೂ ಇಲ್ಲ, ಆದುದರಿಂದ ತತ್ಕಾಲದ ಕಾರ್ಯಕ್ರಮಕ್ಕೆ ಒಪ್ಪಿಗೆ ಕೊಡುವುದು ದೂರದರ್ಶಿತ್ವದ ಲಕ್ಷಣವಲ್ಲ.

ಆದುದರಿಂದಲೆ ಇದ್ದ "ಸ್ಥಿತಿಯು ಸಮಾಧಾನಕರವೆಂ"ದು ನಾವು ಹಿಂದೆಯೆ ಹೇಳಿದ್ದೇವೆ. ಮಳಿಯಾಳಶಾಲೆ-ರಿಕಾರ್ಡು-ಕೋರ್ಟುಕಚೇರಿಗಳನ್ನು ಮಾಡಿಕೊಳ್ಳುವುದು ಮಳಿಯಾಳಿಗಳ ಕರ್ತವ್ಯ. ಅದಕ್ಕಾಗಿ ಅವರ ಮುಂದಾಳುಗಳು ಪ್ರಯತ್ನಿಸಬೇಕು. ಹೊರತು ಪ್ರಾಂತವನ್ನೆ ವಿಂಗಡಿಸುವ ಆಲೋಚನೆಯು ಪ್ರಶಸ್ತವಲ್ಲ. ಮೈಯಲ್ಲಿ ದೂಷಿತ ಅಂಶವನ್ನೆ ಡಾಕ್ಟರುಗಳು ಒಪರೇಶನ ಮಾಡುವರಲ್ಲದೆ ಇಡೀ ಮೈಯನ್ನೆ ಕತ್ತರಿಸುವುದಿಲ್ಲ. ಮಳಿಯಾಳ ಶಾಲೆಗಳನ್ನು ಸ್ಥಾಪಿಸಿರಿ. ರಿಕಾರ್ಡುಗಳನ್ನು ಮಳಿಯಾಳದಿಂದಲೆ ಆಗುವಂತೆ ಹೋರಾಡಿರಿ. ಉನ್ನತಿಯನ್ನು ಸಾಧಿಸಿಕೊಳ್ಳಿರಿ. "ಇವರು ಕನ್ನಡಿಗರು, ಇವರಿಂದ ನಮಗೆ ತೊಡಕು, ನಾವು ಇವರನ್ನು ಬಿಟ್ಟುಬಿಡುವ" ಹೀಗೆಂದು ನೆನಸಬೇಡಿರಿ. ನಮಗಾದರೂ ಉತ್ತರ ಕನ್ನಡವು ಸಿಗುತ್ತದೆ ಎಂದಿದ್ದರೆ ನಾವು ನಿಮ್ಮ ಭ್ರಾತೃಬಂಧುಗಳನ್ನು ಕೂಡಿ ನಿಮ್ಮ ವಿಯೋಗದುಃಖ ಸಹಿಸಲು ಸಿದ್ಧರಾಗುವೆವು.

ಸ್ಫುಟವಿಚಾರಗಳು.

೧. ಪ್ರಕೃತ ಮಹಾಯುದ್ಧವಾದಂದಿನಿಂದ ಜರ್ಮನಿ, ಆಸ್ಟ್ರಿಯಾ ಮುಂತಾದ ಶತ್ರು ರಾಷ್ಟ್ರಗಳೊಡನೆ ಇದ್ದ ನಮ್ಮ ಬ್ರಿಟಿಷ್ ಸಾಮ್ರಾಜ್ಯದ ವ್ಯಾಪಾರವು ನಿಂತುಹೋಗುವುದು ಸಹಜವೆ, ಮತ್ತು ಅದು ಹಾಗೆ ನಿಂತುಹೋಗಿದೆ. ಇಡಿ ಬ್ರಿಟಿಷ್ ಸಾಮ್ರಾಜ್ಯದ ವ್ಯಾಪಾರವು ಶತ್ರುರಾಷ್ಟ್ರಗಳೊಡನೆ ನಡೆಯುವುದಿಲ್ಲಾಗಿದೆಂದ ಮೇಲೆ ನಮ್ಮ ಹಿಂದುಸ್ಥಾನದ ವ್ಯಾಪಾರವು ಅವುಗಳೊಡನೆ ನಿಂತುಹೋಗಿದೆಂಬುದು ಪುನಃ ಹೇಳಬೇಕಾದ ಅಗತ್ಯವಿಲ್ಲ. ಯುದ್ಧವು ಮುಗಿದನಂತರ ಈಗಿನ ಶತ್ರುದೇಶಗಳಿಗೆ ನಮ್ಮ ಸಾಮ್ರಾಜ್ಯದಲ್ಲಿ ವ್ಯಾಪಾರ ನಡೆಯಿಸಲು ಅವಸರ ಕೊಡಬಾರದೆಂದೂ ಈ ವಿಷಯದಲ್ಲಿ ಒಪ್ಪಂದದ ಶರ್ತಗಳಲ್ಲಿ ತಕ್ಕ ಜಾಗ್ರತೆಯನ್ನು ತಕ್ಕೊಂಡು ಅವರ ಭಾವಿ ವ್ಯಾಪಾರವನ್ನು ನಮ್ಮಲ್ಲಿಂದ ಮನ್ನಾಮಾಡಬೇಕೆಂದೂ ಅನೇಕ ಇಂಗ್ಲಿಷ್ ಲೇಖಕರು ಸೂಚಿಸುತ್ತಿದ್ದಾರೆ. ಇಂಗ್ಲಿಷ್ ಲೇಖಕರ ಈ ಅಭಿಪ್ರಾಯವು ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಗೆ ಸಾಧಕವೊ ಬಾಧಕವೊ ಎಂಬ ಪ್ರಶ್ನೆಯನ್ನು ಕುರಿತು ಆಲೋಚಿಸುವಾಗ ಕಲಕತ್ತೆಯ "ಮೊಡರ್ನ ರಿವ್ಯೂ" ಎಂಬ ಮಾಸಿಕ ಪತ್ರಿಕೆಯ ಈ ಫೆಬ್ರವರಿ ತಿಂಗಳದ ಸಂಚಿಕೆಯಲ್ಲಿ ಸಂಪಾದಕರು ಈ ಹಿಂದುಸ್ಥಾನಕ್ಕೂ ಶತ್ರುರಾಷ್ಟ್ರಗಳಿಗೂ ಯುದ್ಧದ ಮೊದಲು ನಡೆದಿರುವ ಆಮದುರಫ್ತುಗಳ ಒಂದು ಕೋಷ್ಟಕ ಎಂದರೆ ಪಟ್ಟಿ (Table) ಯನ್ನು ಕೊಟ್ಟಿರುವರು.

ಇಲ್ಲಿಗೆ ಜರ್ಮನಿಯಿಂದ ಆಯಾತ.

೧೯೧೧—೧೨	೧೯೧೨—೧೩	೧೯೧೩—೧೪
ರೂ. ೮,೯೫,೩೨,೬೬೦	ರೂ. ೧,೦೩೦,೩೩,೯೯೫	ರೂ. ೧,೨೬೬,೫೭,೯೪೦
ಆಸ್ಟ್ರಿಯಾ ಹಂಗೇರಿಯಿಂದ ಆಯಾತ.		
ರೂ. ೩,೬೫,೬೧,೩೮೫	ರೂ. ೩,೫೩,೬೫,೩೨೦	ರೂ. ೪,೨೯,೦೪,೧೮೫
ಇಲ್ಲಿಂದ ಜರ್ಮನಿಗೆ ಆಯಾತ.		
ರೂ. ೨,೨೫೮,೬೧,೬೮೫	ರೂ. ೨,೪೮೬,೩೩,೧೪೫	ರೂ. ೨,೬೩೫,೫೭,೪೦೦
ಆಸ್ಟ್ರಿಯಾದಿಂದ ಹಂಗೇರಿಗೆ ಆಯಾತ.		
ರೂ. ೬,೫೭,೦೩,೮೬೦	ರೂ. ೬,೨೫,೨೧,೫೨೦	ರೂ. ೯,೯೬,೪೮,೨೯೦

ಈ ಕೋಷ್ಟಕವನ್ನು ಕೊಟ್ಟು ಅವರು ಅಭಿಪ್ರಾಯಪಡುವುದೇನೆಂದರೆ, ೧೯೧೧ರಿಂದ ೧೪ ವರೆಗೆ ೩—೪ ವರ್ಷಗಳಲ್ಲಿ ಇಲ್ಲಿಂದ ಜರ್ಮನಿ, ಆಸ್ಟ್ರಿಯಾ, ಹಂಗೇರಿ ಈ ದೇಶಗಳಿಗೆ ಹೋಗುವ ನಿರ್ಗತ ವ್ಯಾಪಾರವು, ಅಲ್ಲಿಂದ ಬರುವ ಆಯಾತ ವ್ಯಾಪಾರಕ್ಕಿಂತ ಬಹು ದೊಡ್ಡ ಪ್ರಮಾಣದಲ್ಲಿರುವುದರಿಂದ ನಮ್ಮ ದೇಶದ ವ್ಯಾಪಾರ ಸ್ಥಿತಿಗೆ ಇದು ಲಾಭಕರವಾದ ಸಂಗತಿಯು. ಅಲ್ಲದೆ ಈ ಯುದ್ಧವು ಪ್ರಾರಂಭವಾದಂದಿನಿಂದ ಮೊದಲು ಆ ದೇಶಗಳಿಗೆ ಹೋಗುತ್ತಿದ್ದ ಸರಕುಗಳು ಇಲ್ಲಿಯೆ ಹಾಳಾಗಿ ಹೋಗುವವು. ಒಂದು ದೇಶದಿಂದ ಮಾಲು ಹೆಚ್ಚು ರಫ್ತಾಗುತ್ತದೆಂತೆಂದರೆ ಅದು ವ್ಯಾಪಾರದ ಅಭಿವೃದ್ಧಿ ಸ್ಥಿತಿಯಲ್ಲಿದೆನ್ನಬಹುದು. ಈ ದೃಷ್ಟಿಯಿಂದ ಯುದ್ಧಾನಂತರ ಅವುಗಳೊಡನೆ ವ್ಯಾಪಾರದ ಸಂಬಂಧವನ್ನಿಟ್ಟುಕೊಳ್ಳುವುದರಿಂದ ಹಿಂದುಸ್ಥಾನಕ್ಕೆ ಬಾಧಕವೇನಿಲ್ಲೆಂದು "ಮೊಡರ್ನ ರಿವ್ಯೂ" ಕಾರರು ಒತ್ತಿ ಹೇಳಿದ್ದಾರೆ.

೨. 'ಕರ್ಟಿಸ್ ಎಂಡ್ ಕೊ'ದರ "ರೌಂಡ್ ಟೇಬಲ ಗ್ರೂಪಿ"ನ ವಿಷಯದಲ್ಲಿ ನಾವು ಹಿಂದೆ ಎರಡು ಸಾರಿ ವಾಚಕರಿಗೆ ಮುಖ್ಯ ಮುಖ್ಯ ಸಂಗತಿಗಳನ್ನು ತಿಳಿಸಿದ್ದೇವೆ. ಕರ್ಟಿಸರ ಗುಪ್ತ ಪತ್ರಿಕೆಯು ಪ್ರಕಟವಾಗಿ ಹಿಂದುಸ್ಥಾನದೊಳಗಿನ ಸುಶಿಕ್ಷಿತ ಲೋಕಮತದಲ್ಲಿ ಯಾವಾಗ ಕ್ಷೋಭೆಯನ್ನುಂಟುಮಾಡಿತೊ ಎಲ್ಲ ಭಾಗಗಳಿಂದ ಅದರ ತೀವ್ರ ನಿಷೇಧವು ಯಾವಾಗ ಬರಹತ್ತಿತೊ ಅಂದಿನಿಂದ ಕಿಂಬಹುನಾ ಆಗ ವೈಸರಾಯರಿಗೆ ಸಹಾ ಕರ್ಟಿಸರ ಸ್ವಾರ್ಥಮೂಲಕ ಈ ಗುಪ್ತಪ್ರಯತ್ನವು ಮೈಲಿಗೆಯದೆಂಬುದಾಗಿ ಕಂಡುಬಂತು. ಇದು ನಿಜವಾಗಿ ನಮ್ಮ ದೇಶದ ಸುದೈವವೆ ಸರಿ. ಜನರ ಮತದ ಕ್ಷೋಭ ಮತ್ತು ನಿಷೇಧಪ್ರದರ್ಶನ ಇಷ್ಟರಿಂದಲೆ ನಿಲ್ಲದೆ ಕೌನ್ಸಿಲಿನಲ್ಲಿ ಸಹಾ ಈ ವಿಷಯ ಪ್ರಶ್ನಾಸ್ಪದವಾಯಿತು; ವೈಸರಾಯ ಪ್ರಭುಗಳು ಕೂಡಲೆ "ಇದು ರಾಜಕೀಯ ಸ್ವರೂಪದ ಚಳವಳವಾದುದರಿಂದ ಇದರಲ್ಲಿ ಸರಕಾರಿ ನೌಕರರು ಸೇರಿರುವುದು ಶಿಷ್ಟಸಮ್ಮತವಲ್ಲೆಂಬುದಾಗಿ ಹೇಳಿದರು. ಆಗ ಕರ್ಟಿಸರ ಹಿಂದುಸ್ಥಾನದೊಳಗಿನ ಸಾರಥಿಗಳಾದ—ಇಮ ಹೆಚ್ಚಾದರೆ,' ಸಹಾಯಿಗಳಾದ ಮೆಸ್ಟನ್-ಮೊರಿಸ್ ಈ ಜೋಡು ದೊರೆಗಳು ಆ ರೌಂಡ್ ಟೇಬಲನ್ನು ಒದ್ದಿದ್ದಾರಂತೆ. ಮೆಸ್ಟನ್ ಮೊರಿಸರು ಇದು ರಾಜಕೀಯ ಸ್ವರೂಪದ ಚಳವಳವಲ್ಲೆಂದು ತಿಳಿದು ಸೇರುವಷ್ಟು ನಿಜವಾಗಿ ಮತಿಮಂದರಲ್ಲ. ರಾಜಕೀಯ ಸ್ವರೂಪದ ಚಳವಳದಲ್ಲಿ ಸರಕಾರಿ ಉದ್ಯೋಗಸ್ಥನು ಸೇರಕೂಡದು; ರಾಷ್ಟ್ರೀಯ ಸಭೆಯಲ್ಲಿ—ಅದು ಕೊನ್ಸ್ಟಿಟ್ಯೂಶನಲ್ ಆದರೂ—ಯಾವ ಸರಕಾರಿ ನೌಕರನನ್ನೂ ಕೆಲಸ ಮಾಡಲು ನಾವು ಬಿಡುವುದಿಲ್ಲ; ಕಾರಣ, ಅದು ರಾಜಕೀಯ ವಿಷಯವು. ಹಾಗೆಯೆ ಇದು ರಾಜಕೀಯ ವಿಷಯವಾದುದರಿಂದ ಸರಕಾರಿ ನೌಕರರಾದ ನಾವು ಸೇರುವುದು ತಪ್ಪು? ಎಂದು ಮುಂತಾದ ಜ್ಞಾನವು ನಮ್ಮ ಮೆಸ್ಟನ್ ಪ್ರಭೃತಿಯರಿಗೆ ಇದ್ದಿತ್ತೆಂತ ಅಲ್ಲ; ಆದರೂ ತಮಗಿದು ಅಶಕ್ಯವಾದದ್ದೆಂದು ನೆನಸಿ ಅದರಲ್ಲಿ ಅವರು ಸೇರಿದ್ದರೋ ಏನೊ! ಆದರೆ ಈಗ ವೈಸರಾಯರ ಅಂಜನದಿಂದ ಅವರು ಆ "ಗ್ರೂಪಿ"ನಿಂದ ನಿವೃತ್ತರಾಗಿದ್ದಾರೆ. ಈ ಬಗ್ಗೆ ನಾವು ವೈಸರಾಯರನ್ನು ಅಭಿನಂದಿಸುತ್ತೇವೆ.

೩. ಹಿಂದುಸ್ಥಾನದಲ್ಲಿ ಈಗ ಹಿಂದೆರಡು ತಿಂಗಳಲ್ಲಿ ಯಾವುದಾದರೂ ಮಹತ್ವದ ಸಂಗತಿಯು—ಲೋಕಮತದಲ್ಲಿ ಒಂದು ತರದ ಕಲವನ್ನುಂಟುಮಾಡುವ ವಿಷಯವು—ಚರ್ಚೆಯಲ್ಲಿ ಇದ್ದುದಾದರೆ ಅದು ನಿಸ್ಸಂಶಯವಾಗಿ ... ಸರಿ. ... ದಿಂದ ಬಂದ ...

ಪೋಲಾಕರು ತಮ್ಮ ಅನುಭವವನ್ನು ಹೇಳಿ ಇಲ್ಲಿ ಜಾಗ್ರತೆಯನ್ನು ಹುಟ್ಟಿಸಿದಂದಿನಿಂದ ಈ ವಿಷಯವು ಈಗ ಸಾಧಾರಣ ಎಲ್ಲ ಸಾಕ್ಷರ ಬಂಧುಗಳ ತಿಳುವಳಿಕೆಗೆ ಬಂದಿದೆ. ವರಿಷ್ಠ ಕಾಯಿದೆ ಕೌನ್ಸಿಲಿನ ಕಳೆದ ಅಧಿವೇಶನದಲ್ಲಿ ಈ ದಾಸ್ಯಪದ್ಧತಿಯನ್ನು ಹಿಂದುಸ್ಥಾನದಿಂದ ನಿರ್ಮೂಲಿಸಬೇಕೆಂದು ಒಂದು ಠರಾವನ್ನು ತಂದಾಗ ಲೋ. ಚೆಮ್ಸ್‌ಫರ್ಡ್ ದೊರೆಗಳು ಪ್ರದರ್ಶಿಸಿದ ವಿಚಾರಗಳನ್ನು ಕೇಳುವವರಿಗೆ ಈ ವಿಷಯದಲ್ಲಿ ಸದ್ಯಃವಾದರೂ ನಿರಾಶೆಯಾಗದೆ ಇರದು. ಲೋಕಪ್ರಿಯ ವೈಸರಾಯರಾದ ಲೋರ್ಡ ಹರ್ಡಿಂಜ ದೊರೆಗಳು ವಸಾಹತದವರ ಔದ್ಧತ್ಯಕ್ಕೂ, ಅನ್ಯಾಯಕ್ಕೂ, ಸ್ವಾರ್ಥಕ್ಕೂ ಮನಸ್ಸು ಮುರಿದವರಾಗಿ, ಬೇಸತ್ತುಹೋಗಿ, ಸಂತಾಪಗೊಂಡು ಈ ಕೂಲಿಪದ್ಧತಿಯನ್ನು ನಿರ್ಮೂಲಿಸಬೇಕೆಂದು ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಸಿ ಅವರಿಬ್ಬರು ಕೂಡಿ ಅದೇ ತರದ ಅಭಿವಚನವನ್ನು ಕೊಟ್ಟಿದ್ದರು. ಆದರೆ ಮೊನ್ನೆ ಕೌನ್ಸಿಲಿನಲ್ಲಿ ಇದನ್ನು ತೆಗೆದುಹಾಕಬೇಕೆಂದು ಬರದಾಗ ಈಗಿನ ವೈಸರಾಯರು ಲೋರ್ಡ ಹಾರ್ಡಿಂಜರ ಆಶ್ವಾಸನೆಯ ಅರ್ಥವು—ಈಗಲೆ ಈ ಪದ್ಧತಿಯನ್ನು ನಿಲ್ಲಿಸಬೇಕೆಂಬುದಲ್ಲ, ಇದನ್ನು ಕಾಲಕ್ರಮೇಣ ನಿಲ್ಲಿಸುವುದೇ ಅವರ ಉದ್ದೇಶವಾಗಿತ್ತೆಂದು ಹೇಳಿದ್ದಾರೆ. ನಾಮದಾರ ಮಧನಮೋಹನ ಮಾಲವೀಯರು ಸಿಲೋನ ಮತ್ತು ಅದರ ಹತ್ತರದ ವಸಾಹತಿಗಳ ಹೊರತು ಬೇರೆ ವಸಾಹತಿಗಳಿಗೆ ಇಲ್ಲಿಂದ ಕೂಲಿಗಳನ್ನು ಕಳುಹಿಸುವುದನ್ನು ನಿಲ್ಲಿಸಬೇಕೆಂದು ತರಲಿಕ್ಕಿರುವ ಠರಾವನ್ನು ವೈಸರಾಯರು ನಿರಾಕರಿಸಿದ್ದನ್ನು ಆಲೋಚಿಸಿದರೆ ಅದರಿಂದ ತುಂಬಾ ವಿಷಾದವೆ ಉಂಟಾಗುತ್ತದೆ. ನಮ್ಮ ಸರಕಾರವು ವಸಾಹತಗಳಿಗೆ ಹೆದರಿ ಯಾ ಅಥವಾ ಅವುಗಳ ದಾಕ್ಷಿಣ್ಯದಿಂದಲೊ ಮಾನವ ವಂಶಕ್ಕೆನೆ ಲಾಂಛನಾಸ್ಪದವಾದ ಈ ಕಲಂಕವನ್ನು ತೊಳೆಯಲು ತನ್ನಲ್ಲಿರುವ ನೀತಿಧೈರ್ಯವನ್ನು ತೋರಿಸುವುದಿಲ್ಲ. ಆದುದರಿಂದ ಜನರೆ ಈ ವಿಷಯದಲ್ಲಿ ಮುಂದೆ ಬಂದು ಈ ಕೂಲಿಗಳ ಏಜಂಟರಿಗೆ ಇಲ್ಲಿಂದ ಕೂಲಿಗಳು ಸಿಗದಹಾಗೆ ಮಾಡಬೇಕಾಗಿದೆ.

೪. ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಬಂದ ಪ್ರಸ್ತಾಪಗಳಲ್ಲಿ ಆ ಸಭೆಯ ಅಧಿವೇಶನದ ದಿವಸಗಳ ಹೆಚ್ಚಿಸಬೇಕೆಂಬುದೊಂದು ಮಹತ್ವದ್ದಿತ್ತು. ಈ ಸೂಚನೆಯನ್ನು ಕೂಡ ಮೇಲಕಂಡ ಮಾಲವೀಯರೆ ತಂದಿದ್ದರು. ಅದು ಕೂಡ ನಿಷ್ಫಲವೆ ಆಯಿತು. ಮಾನ್ಯ ಮಾಲವೀಯರ ಆಶಯವೇನಿತ್ತೆಂದರೆ—ಡಿಸೆಂಬರ ತಿಂಗಳಿಂದ ಮಾರ್ಚಿನವರೆಗೆ ವಾರಕ್ಕೊಮ್ಮೆ ಕೌನ್ಸಿಲಿನ ಅಧಿವೇಶನವಾಗತಕ್ಕದ್ದು. ಬಾಕಿ ತ್ರೈಮಾಸಿಕಗಳಲ್ಲಿ ಎಂದಿನಂತೆಯೆ ಒಂದೊಂದು ಸಾರಿ ಆಗಬಹುದು. ಮಾನ್ಯ ಶರ್ಮಾ ಇವರು ಇದನ್ನು ಅನುಮೋದಿಸುವಾಗ ೩೫ ಕೋಟಿ ಜನಸಂಖ್ಯೆಯ ಹಾಲಹವಾಲೆಗಳನ್ನೂ ಕಾರ್ಯಪಾರಿಪತ್ಯವನ್ನೂ ಈ ಸಣ್ಣ ಅವಧಿಯಲ್ಲಿ ಪರಾಂಬರಿಸುವುದು ನೆಟ್ಟಗಲ್ಲ, ಇದಕ್ಕಿಂತ (ಈಗಿದ್ದುದಕ್ಕಿಂತ) ಹೆಚ್ಚು ಸಮಯವು ಬೇಕೆಂದು ಸೂಚಿಸಿದರು. ಆದರೆ ಮಿ| ಮೆಲನೆ ಎಂಬವರು "ಈ ರೀತಿಯಿಂದ ಕಾರ್ಯಸಮಯವನ್ನು ಹೆಚ್ಚಿಸಿದರೆ ರಾಜಕಾರಣದ ವಕೀಲರ ಕೈಯಲ್ಲಿ ಈ ಕೌನ್ಸಿಲನ್ನು ಧಾರಾದತ್ತ ಮಾಡಿಕೊಟ್ಟಂತಾಗುವುದೆಂದು ಬಹು ಅದ್ಭುತನದಿಂದ ಹೇಳಿದರು. ಇವರ ಈ ವಿಧಾನಕ್ಕೆ ಪ್ರತ್ಯುತ್ತರ ಕೊಡುವುದೆಂದರೆ ಅದು ನಿರರ್ಥಕ ಕಾಲಕ್ಷೇಪವೆ ಸರಿ. ಕಾರಣ-ವಕೀಲರಾದವರು ತಮ್ಮ ವಕೀಲತನದ ಉದ್ಯೋಗದ ಮೇಲೆ ಕೃಷ್ಣಾರ್ಪಣಮಾಡಿ ಈ ವ್ರತವನ್ನು ಕೈಕೊಂಡಿರುವರು. ಈ ಕೌನ್ಸಿಲು ಅವರ ಕೈಸೇರುವುದರಿಂದ ಅವರ ಬಹುಮತವಾಗಲು ಉಪಾಯವಿಲ್ಲ. ಸರಕಾರಿ ಸಭಾಸದರ ಪ್ರಮಾಣವು ಹೆಚ್ಚಿರುವುದರಿಂದ ಇವರ ಮತಕ್ಕೆ ಅಲ್ಪಸಂಖ್ಯೆಯೆ ಬರುವುದು. ಆದುದರಿಂದ ಅಧಿವೇಶನ ದಿವಸಗಳನ್ನು ಹೆಚ್ಚಿಸುವುದರಿಂದ ಏನೊ ಅನಿಷ್ಟ ಸಂಭವಿಸುವುದೆಂದು ತಿಳಿದುಕೊಳ್ಳುವುದು ಶುದ್ಧ ಭ್ರಮವು.

೫. ಹಿಂದೂಸ್ಥಾನದಿಂದ ಸಿಲೋನಿನಲ್ಲಿರುವ ತೋಟಗಳಿಗೆ ಹೋಗಿ ಕೆಲಸ ಮಾಡುವ ಹಿಂದೀಗಳ ಸ್ಥಿತಿಯು ಅನಿಷ್ಟಾವಸ್ಥೆಯನ್ನು ಹೊಂದಿದೆ. ಈ ಕೂಲಿಗಾರರ ಸ್ಥಿತಿಗತಿಗಳನ್ನು ವಿಚಾರಿಸುವರೆ ಮದ್ರಾಸ್ ಸರಕಾರದವರ ಪರವಾಗಿ ಸೀಲೋನಿಗೆ ಹೋಗಿ ವಿಚಾರ ನಡಿಸಿ ಬಂದ ಸರಕಾರ ಪ್ರತಿನಿಧಿಗಳ ವರದಿಯು ಇನ್ನೂ ಪ್ರಕಟವಾಗಲಿಲ್ಲ. ಒಂದುವೇಳೆ ಪ್ರಕಟವಾದರೂ ಈ ಪ್ರತಿನಿಧಿಗಳು ಅಲ್ಲಿ ಸೀಲೋನಿನ ತೋಟಗಾರರೊಡನೆಯೇ ಕೆಲವು ದಿವಸಗಳ ವರೆಗೆ ಇದ್ದುದರಿಂದ ಹಿಂದೀ ಪ್ರಮುಖ ಮುಂದಾಳುಗಳು ಇವರ ವರದಿಗೆ ಮಹತ್ವ ಕೊಡುವಹಾಗಿಲ್ಲ. ಈ ಕಾರಣದಿಂದ ಮುಂಬಯಿಯ "[illegible]" ಎಂಬ ಸಂಘದವರು ಮಿ| ಪೋಲಾಕರವರನ್ನೂ ಮದ್ರಾಸಿನ ಮಿ| ನಟೇಸನರನ್ನೂ ತಮ್ಮ ಪ್ರತಿನಿಧಿಗಳಾಗಿ ಸೀಲೋನಿಗೆ ಕಳುಹಿಸಬೇಕೆಂದಿದ್ದಾರೆ. ಮಿ| ಪೋಲಾಕರು ದಕ್ಷಿಣ ಆಫ್ರಿಕದ ವಸಾಹತಿಗಳಲ್ಲಿ ಹಿಂದೀ ಕೂಲಿಗಳ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದು ಅವರಿಗಿರುವ ಭಾರವನ್ನು ಹಗುರ ಮಾಡಲು ತನುಮನಧನವನ್ನು ಅರ್ಪಿಸಿದವರು. ತನ್ನ ಅನುಭವದಿಂದ ಈ ವಿಷಯದಲ್ಲಿ ಹಿಂದೀಗಳಲ್ಲಿ ತಕ್ಕ ಜಾಗ್ರತೆಯನ್ನು ಹುಟ್ಟಿಸಿದವರು. ಮಿ| ನಟೇಸನರು ಕೂಡಾ ದಕ್ಷಿಣ ಆಫ್ರಿಕದ ಹಿಂದೀ ಕೆಲಸಗಾರರ ಕಷ್ಟ ನಿವೃತ್ತಿ ಬಗ್ಗೆ ಹಲವು ಸಾಧನೆಗಳನ್ನು ಮಾಡಿದವರು. ಹೀಗೆ ಇವರಿಬ್ಬರು ಸೀಲೋನ್ ದ್ವೀಪಕ್ಕೆ ಹೋಗಿ ಹಿಂದೀ ಕೆಲಸಗಾರರ ಸ್ಥಿತಿಗತಿಗಳನ್ನು ವಿಚಾರಿಸ ಯೋಗ್ಯರೇ ಆದುದರಿಂದ ಇವರನ್ನು ಆರಿಸಿದ್ದರಿಂದ ಹಿಂದುಸ್ಥಾನಕ್ಕೆ [illegible] ಪ್ರಯೋಜನವಾದೀತೆಂದು ಹೇಳಲು [illegible]

೬. ಸೀಲೋನಿನಲ್ಲಿರುವ ಹಿಂದೀ [illegible] ಗುವ ಹಿಂದೀಗಳನ್ನು "ಸೀಲೋನಿಸ್" ಎಂಬ ಸೀಲೋನ್ ದ್ವೀಪದ [illegible] ಪ್ರದರ್ಶಿಸುತ್ತಿದೆ. ಈ ಪತ್ರದಲ್ಲಿ [illegible] ಸರಕಾರದಿಂದ ಅಲ್ಲಿರುವ ಹಿಂದೀ ಕೂಲಿಯಾಳುಗಳ [illegible]

ದೆಂಬುದು ತಿಳಿಯುವದು:—ಕೋಲೊಂಬೊ ಪಟ್ಟಣದ ಸಮೀಪವಿರುವ ಒಂದು ತೋಟದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಕೂಲಿಯು ರಜೆ ಕೇಳದೆ ವ ತಕ್ಕ ಸಬಬು ಇಲ್ಲದೆ ಕೆಲಸಕ್ಕೆ ಬರಲಿಲ್ಲವೆಂತ, ಆದೇ ತೋಟದ ಸುಪರಿಂಟೆಂಡೆಂಟನು ಸದರಿ ಕೂಲಿಯ ಮೇಲೆ ಕಟ್ಲೆ ತಂದನು. "ಆ ಕೂಲಿಯು ತನ್ನ ಸಂಬಂಧಿಕರನ್ನು ನೋಡುವರೆ ಹೋಗಿದ್ದನು, ಹೇಳಿ ಕಳುಹಿಸಿದಾಕ್ಷಣ ಹಿಂದೆ ಬಂದು ಕೆಲಸಕ್ಕೆ ಹಾಜರಾದನು, ಅವನು ಹಿಂದೆ ಬಂದಾಕ್ಷಣ ಅವನನ್ನು ಮರಕ್ಕೆ ಕಟ್ಟಿಹಾಕಿಯದೆ, ನಂತರ ೨ ದಿವಸ ಅವನು ತೋಟದಲ್ಲಿ ಕೆಲಸ ಮಾಡಿದ್ದನು, ೩ನೇ ದಿವಸ ಕೆಲಸ ಮಾಡಿದಾಗ ಅವನಿಗೆ ದಿವಸದ ಅಕ್ಕಿಪಡಿ ಕೊಡಲಿಲ್ಲ, ಈ ಕೂಲಿಯು ತೋಟಕ್ಕೆ ಬಂದಂದಿನಿಂದ ಈ ವರೆಗೆ ಕ್ರಮಪ್ರಕಾರ ಕೆಲಸ ಮಾಡಿದವನು" ಎಂತ ಸುಪರಿಂಟೆಂಡೆಂಟರು ಕಟ್ಲೆಯ ವಿಚಾರಣೆಯ ಕಾಲ ವಾಗ್ಮೂಲ ಕೊಟ್ಟಿರುತ್ತಾನೆ. ಮುದ್ದೆಯಾಳ ಕೂಲಿಯಾದ್ದರೋ,- ತಾನು ರಜೆ ಕೇಳಲು ಸುಪರಿಂಟೆಂಡೆಂಟರಲ್ಲಿ ಹೋದಾಗ ಅವರಿರಲಿಲ್ಲ, ಹೆಡ್ ಮೇಸ್ತ್ರಿಯಲ್ಲಿ ಹೋಗಿ ರಜೆ ಕೇಳಿದೆನು, ಅವನು ರಜೆ ಕೊಡಲಿಲ್ಲ, ತನ್ನ ಹೆಂಡತಿ ಮತ್ತು ಸಹೋದರನನ್ನು ತಾನು ಬಹಳಕಾಲ ನೋಡದೆ ಇದ್ದುದರಿಂದ ಅವರನ್ನು ನೋಡಲೇಬೇಕೆಂಬ ಆಪೇಕ್ಷೆಯುಂಟಾಗಿ ತಾನು ಹೋದೆನು, ಮತ್ತು ಕೂಡಲೇ ಹಿಂದಕ್ಕೆ ಬರಬೇಕೆಂದಿದ್ದೆನು ಎಂತ ವಾದಿಸಿದನು. ಆದರೆ ಮೇಜಿಸ್ಟ್ರೇಟರು ಈ ಸಣ್ಣ ತಪ್ಪಿಗೆ ಕೂಲಿಗೆ ೭ ದಿವಸಗಳ ಕಠಿಣ ಸಜಾವಿಧಿಸಿದರು.

ಸ್ಥಳಿಕ — ಮಂಗಳೂರು.

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೭ ಪ್ಲೇಗು ಮರಣಗಳಿದ್ದವು.

ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯ ಹುಡುಗರು ಶಾಲಾ ಸಾಹಿತ್ಯ, ಪುಸ್ತಕ ಮೊದಲಾದವುಗಳನ್ನು ಠೋಕಾಗಿ ತರಿಸಿ ಹುಡುಗರಿಗೆ ವಿಕ್ರಯ ಮಾಡುವುದಕ್ಕೆ ಒಂದು ಸಹಕಾರ ಸಂಘವನ್ನು ಏರ್ಪಡಿಸಿದ್ದುದು ನಮ್ಮ ವಾಚಕರಿಗೆಲ್ಲರಿಗೂ ಗೊತ್ತಿರಬಹುದು. ಆ ಸಂಘದ ಕಡೆಯಿಂದ ನಾಳೆ ಶನಿವಾರ ದಿವಸ ಸದರೀ ಗಣಪತಿ ಸೆಕೆಂಡರಿ ಶಾಲೆಯ ಹೋಲಿನಲ್ಲಿ ಸಾಯಂಕಾಲ ೫ ಗಂಟೆಗೆ ಒಂದು ಮಹಾಸಭೆಯು ಕರೆಯಲ್ಪಡುತ್ತದೆ. ಆಗ ಸಹಕಾರ ಸಂಘಗಳ ರಿಜಿಸ್ತ್ರಾರರಾದ ದಿವಾನ್ ಬಹದ್ದೂರ ಸ್ವಾಮಿಕಣ್ಣುಪಿಳ್ಳೆಯವರು "ನಗರಗಳಲ್ಲಿನ ಸಹಕಾರ" (Co-operation in urban areas) ಎಂಬುದರ ಕುರಿತು ಒಂದು ಭಾಷಣವನ್ನು ಕೊಡುವರು. ಮ| ರಾ| ರಾ| ಅಮ್ಮೆಂಬಳ ಶ್ರೀನಿವಾಸ ಪೈ ಅವರ್ಗಳವರು ಅಧ್ಯಕ್ಷಸ್ಥಾನವನ್ನು ವಹಿಸುವರೆ ಪ್ರೀತಿಪೂರ್ವಕವಾಗಿ ಒಪ್ಪಿಕೊಂಡಿದ್ದಾರೆ. ಸಭೆಗೆ ಬರಲು ಸರ್ವರಿಗೂ ಈ ಮೂಲಕ ಆಮಂತ್ರಿಸೋಣಾಗುತ್ತದೆ.

ಕಳೆದ ಬ್ರಹಸ್ಪತಿವಾರ ಕ್ರೈಸ್ತ ಯುವಜನ ಸಮಾಜದವರ ವಾರ್ಷಿಕೋತ್ಸವು ವೈ. ಎಮ್. ಸಿ. ಎ. ಮಂದಿರದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಗವರ್ನಮೆಂಟು ಕಾಲೇಜ ಪ್ರಿನ್ಸಿಪಾಲರು ಅಧ್ಯಕ್ಷರಾಗಿದ್ದರು. ಊರ ಮಾನ್ಯ ಗೃಹಸ್ಥ ಗೃಹಸ್ಥರಲ್ಲನೇಕರು ಈ ಸಮಾರಂಭಕ್ಕೆ ಬಂದಿದ್ದರು. ಆ ದಿನವೇ ಯುವಜನ ಸಮಾಜದ ಸೆಕ್ರೆಟರಿಯವರಾದ ಮಿ| ಪೀಟರ್ಸನರು ಕಲ್ಕತ್ತೆಯಿಂದ ಬಂದಿದ್ದು ದೇಶದ ಆಯಾ ಕಡೆಗಳಲ್ಲಿ ವೈ. ಎಂ. ಸಿ. ಯವರಿಂದ ನಡಿಸೋಣಾಗುವ ಕೆಲವು ಮಹತ್ವದ ಕೆಲಸಗಳನ್ನು ವಿವರಿಸಿದರು. ಮಧ್ಯೆ ಮಧ್ಯೆ ಸಮಾಜದವರ ಸಂಗೀತಗಳು ನಡೆದು ಪ್ರೇಕ್ಷಕರನ್ನು ಸಂತೋಷಗೊಳಿಸಿದವು. ಕಡೆಗೆ ಅಧ್ಯಕ್ಷರ ಭಾಷಣ, ಸ್ವಸ್ತಿವಚನ ಹಾಗೂ ಇಂಗ್ಲಿಷ್ ಡ್ರಾಮ ಆಗಿ ಆ ದಿನದ ಉತ್ಸವವು ಮುಕ್ತಾಯವಾಯಿತು.

ಇದೇ ತಾ. ೧೯ರಲ್ಲು ವಿದ್ಯಾರ್ಥಿ ಭ್ರಾತೃಸಂಘದವರು ಗೋಖಲೆಯವರ ಸ್ಮಾರಕ ದಿನವನ್ನು ಆಚರಿಸುವದರಲ್ಲಿದ್ದಾರೆ. ಈ ಸಂದರ್ಭದಲ್ಲಿ ಆ ದಿನ ಸಾಯಂಕಾಲ ಗಣಪತಿ ಸೆಕಂಡರಿಶಾಲೆಯಲ್ಲಿ ಭ್ರಾತೃಸಂಘದವರು ಸಭೆಕೂಡುವರೆಂತಲೂ ಬಹುಶಃ ಮಾನ್ಯ ಕೆ. ಸದಾಶಿವ ಭಟ್ಟರನ್ನು ಈ ಸಭೆಯಲ್ಲಿ ಅಧ್ಯಕ್ಷರನ್ನಾಗಲು ಕೇಳಿಕೊಳ್ಳಬೇಕೆಂತ ಇದ್ದಾರೆಂತಲೂ ತಿಳಿಯುತ್ತೇವೆ.

ಮಂಗಳೂರಲ್ಲಿ ಸ್ಥಾಪಿಸೋಣಾದ ಹೋಮ್‌ರೂಲ್ ಲೀಗ್ ಶಾಖೆಯವರ ಒಂದು ಸಭೆಯು ಇದೇ ತಾ. ೧೧ರಲ್ಲು ಮ| ರಾ| ಕೆ. ಸದಾಶಿವರಾಯರ ಆಫೀಸ್ ಮಾಳಿಗೆಯಲ್ಲಿ ಕೂಡಿ ಈ ಸಭೆಯಲ್ಲಿ ಶಾಖೆಯ ಬಗ್ಗೆ ಕೆಲವು ಕ್ರಮಗಳು ಏರ್ಪಡಿಸೋಣಾಗಿರುವವು:—೧. ಇದೇ ತಾ. ೨೮ರಿಂದ ಪ್ರತಿ ಎರಡು ಆದಿತ್ಯವಾರಕ್ಕೊಂದಾವರ್ತಿ ಬೆಳಗ್ಗೆ ೮-೯ಂಕ್ಕೆ ಈ ಸಂಘದ ಶಾಖೆಯವರ ಸಭೆಯು ಕೂಡಬೇಕು. ಮ. ರಾ. ಕೆ. ಸದಾಶಿವರಾಯರು ತನ್ನ ಕಟ್ಟಡವನ್ನು ಹೋಮ್‌ರೂಲು ಲೀಗ್ ಶಾಖೆಯವರ ಮೀಟಿಂಗಿನ ಬಗ್ಗೆ ಉಪಯೋಗಿಸಲು ಕೊಟ್ಟು ಮಾಡಿದ ಈ ಸಹಾಯವನ್ನು ಈ ಶಾಖೆಯವರು ಕೃತಜ್ಞತೆಯಿಂದ ಸ್ವೀಕರಿಸಿರುವರು. ಅದಲ್ಲದೆ ಈ ಶಾಖೆಯ ಬಗ್ಗೆ ಒಂದು ಸ್ವಂತ ಸ್ಥಳವನ್ನು ಆದಷ್ಟು ಬೇಗ ಒದಗಿಸಿಕೊಳ್ಳಬೇಕೆಂಬದಾಗಿ ಈ ಶಾಖೆಯ ಮೆಂಬರರು ನಿರ್ಣಯಿಸಿರುತ್ತಾರೆ. ೨. ಈ ಶಾಖೆಗೆ ಒಂದು ಸ್ವಂತ ಪುಸ್ತಕ ಭಂಡಾರ (ಲ್ಯಾಬ್ರೆರಿ) ಇರಬೇಕು, ಈ ಶಾಖೆಯ ಮೆಂಬರರನ್ನೂ ಮೆಂಬರರಲ್ಲದ ಇತರ ಸಹಭಾವಿಗಳನ್ನೂ ಈ ಬಗ್ಗೆ ಸಹಾಯ್ಯಮಾಡುವ ಹಾಗೆ ವ ಲ್ಯಾಬ್ರರಿಗೆ ಹಿಂದೀ ರಾಜಕೀಯ, ಹಿಂದೀ ಅರ್ಥ, ಸಾಹಿತ್ಯ [illegible] ಪುಸ್ತಕಗಳನ್ನು ಏರವಾಗಿ [illegible] ಲ್ಯಾಬ್ರೆರಿ [illegible] ಸಂಗ್ರಹಿಸಿಕೊಳ್ಳಬೇಕು ಎಂಬ ನಿರ್ಣಯವಾಗಿರುವದು. ೩. ಲೀ[illegible]

ಗಿನ ವಿದ್ಯಾರ್ಥಿಗಳಲ್ಲಿ [illegible] ವ ಓದುವ ಕ್ಲಾಸುಗಳ ಮೂಲಕವಾಗಿ ತಕ್ಕ ರಾಜಕೀಯ ಶಿಕ್ಷಣ ದೊರಕುವದು. ೪. "ನ್ಯೂ ಇಂಡಿಯಾ"ದ ಎಲ್ಲಾ ರಾಜಕೀಯ ಪಹಿಗಳನ್ನೂ ಹೋಮ್‌ರೂಲು ಸಂಬಂಧವಾದ ಲೇಖಗಳನ್ನೂ ಕೂಡಲೇ ತರಿಸಿಕೊಳ್ಳಬೇಕು ಮತ್ತು ಈ ಸಂಘದ ಟ್ರೆಜರರು ಈ ಶಾಖೆಯ ಪರವಾಗಿ ನ್ಯೂ ಇಂಡಿಯಾ ರಾಜಕೀಯ ಪಹಿಗಳ ವಾರ್ಷಿಕ ಚಂದಾದಾರರಾಗಿರಬೇಕು ಎಂಬ ನಿರ್ಣಯಗಳು ಆಗಿರುತ್ತವೆ.

ನಿನ್ನೆಯ ದಿನ ಸಾಯಂಕಾಲ ೬|| ಗಂಟೆಗೆ ಇಲ್ಲಿಯ ಹೂವಿನ ಮಾರ್ಕೇಟಿನ ಎದುರಿಗೆ ಒಂದು ಜಟ್ಕಾ ಅಪಗಡವು ಸಂಭವಿಸಿರುವದು. ಜಟ್ಕಾ ನಂಬ್ರ ೩೧/೧೩೨ನೇ ಬಂಡಿಯು ೩—೪ ಪ್ರಯಾಣಿಕರೊಡನೆ ಸ್ಟಾರ್ ಲೋಟದಿಂದ ಓಡಿಬರುತ್ತಿರುವಾಗ ಕುದುರೆಯು ಥಕ್ಕನೆ ಬಿದ್ದು ಗಾಡಿಯು ಬಿತ್ತು. ಪ್ರಯಾಣಿಕರಿಗೆ ದೈವವಶಾತ್ ಅಪಾಯ ಸಂಭವಿಸಲಿಲ್ಲ. ಕುದುರೆಯ ಕಾಲುಗಂಟಿಗೆ ಗಾಯವಾಗಿ ನೆತ್ತರು ಸುರಿಯುತ್ತಿತ್ತು. ಇದರಲ್ಲಿ ಒಂದು ಆಶ್ಚರ್ಯವೇನಂದರೆ:—ಕುದುರೆಯು ನಡಿಯಲಾರದಷ್ಟು ಕ್ಷೀಣವಾಗಿ ಹೋಗಿದೆ. ಮೈಯಲ್ಲಿಯೂ ಕಾಲಲ್ಲಿಯೂ ಹಲವು ಹಳೇ ಗಾಯಗಳಿವೆ. ಹಾಗೂ ಗಾಡಿಗೆ ಕಟ್ಟಲು ಈ ಕುದುರೆಯು ಕೇವಲ ಅಯೋಗ್ಯವೆಂದು ಹೇಳಲು ಸಂದೇಹ ತೋರುವದಿಲ್ಲ. ಅದಲ್ಲದೆ ಈ ಸಂಘಟನೆಯು ಹೂಮಾರ್ಕೆಟಿನ ಎದುರಿಗೆ ನಡೆದು ಬಿದ್ದ ಗಾಡಿಯಲ್ಲಿದ್ದ ಪ್ರಯಾಣಿಕರನ್ನು ಮತ್ತೊಂದು ಜಟ್ಕಾದಲ್ಲಿ ಕೂಂದ್ರಿಸಿ, ಕುದುರೆಯ ಕಾಲನ್ನು ಕಟ್ಟಲು ಸುಮಾರು ಅರ್ಧ—ಮುಕ್ಕಾಲು ಗಂಟೆ ಹಿಡಿದರೂ ಯಾವನೊಬ್ಬ ಗಸ್ತಿಪೋಲೀಸಿನವನಾದರೂ ಈ ಸ್ಥಳಕ್ಕೆ ಬರಲಿಲ್ಲ. ವ ಈ ಪ್ರಾಂತದಲ್ಲಿ ಇರಲಿಲ್ಲ. ಹೂವಿನ ಮಾರ್ಕೆಟಿನ ಬಳಿ ಸಾಯಂಕಾಲ ಹೊತ್ತು ನೂರಾರು ಜನರು ಬಂದು ಹೋಗುವ ದಾರಿಯಲ್ಲಿ ಗಸ್ತಿಪೋಲಿಸಿನವರು ಇಲ್ಲದಿರುವದು ಮತ್ತೊಂದು ಆಶ್ಚರ್ಯ.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಮೋಟರ್ ಬಸ್ ಗಾಡಿಯು ಕಳೆದ ವಾರದಲ್ಲಿ ಪಣಂಬೂರು ಸಮೀಪ ಒಂದು ಸಣ್ಣ ಸಂಕದ ಮೇಲಿರುವ ಗೋಡೆಗೆ ತಾಗಿ ಪ್ರಯಾಣಿಕರು ಬಿದ್ದು ಕೆಲವರಿಗೆ ಜಖಂ ಆಗಿದೆಂಬುದಾಗಿ ತಿಳಿಯುತ್ತೇವೆ.

ಇಲ್ಲಿಯ ಅಲೆಕ್ಸಾಂಡ್ರಾ ನಾಟಕ ಕಂಪೆನಿಯವರು ನಾಳೆ ಶನಿವಾರ "ಮಹಾಭಾರತ"ವೆಂಬ ನಾಟಕವನ್ನು ಆಡಿ ತೋರಿಸುವರು. ಭಾರತದ ಇಡೀ ಕಥೆಯನ್ನು ಒಂದೇ ನಾಟಕರೂಪವಾಗಿ ಉರ್ದು ಭಾಷೆಯಲ್ಲಿ ಬಹಳ ಉತ್ತಮ ರೀತಿಯಲ್ಲಿ ರಚಿಸಿ ಈ ಬಗ್ಗೆ ಬೇಕಾದ ಸಿನೆರಿ ಇತ್ಯಾದಿಗಳನ್ನು ಹಲವು ಸಾವಿರ ರೂಪಾಯಿಗಳ ವೆಚ್ಚದಿಂದ ತಯ್ಯಾರಿಸಿರುವುದರಿಂದ ಜನರು ಮುಂಬಯಿ ಅತ ಕಡೆಯಲ್ಲಿ ನೋಡಲು ಸಿಕ್ಕುವಂಥಾ ನಾಟಕದ ಅಪರೂಪ ದೇಖಾವೆಯನ್ನು ಬಂದು ನೋಡಬೇಕಾಗಿ ಈ ಕಂಪೆನಿಯ ಮಾಲಿಕರು ವಿಜ್ಞಾಪಿಸಿಕೊಂಡಿರುತ್ತಾರೆ.

ಕಳೆದ ಆದಿತ್ಯವಾರ ಕೆನರಾ ಬೇಂಕಿನ ಪಾಲುಮಾಲಿಕರ ಸಭೆಯು ಕೂಡಿತ್ತು. ಈ ಬೇಂಕಿನ ಗತವರುಷದ ಲೆಕ್ಕ ವೃತ್ತಾಂತವು ಮಂಜೂರಾತಿಯ ಬಗ್ಗೆ ಸಭೆಯ ಮುಂದೆ ಇಡೋಣಾಗಿತ್ತು. ಈ ಸಲ ಸಹಪಾಲುಮಾಲಿಕರಿಗೆ ಸೇಕಡಾ ೮ರ ದರದ ಬಡ್ಡಿಯಲ್ಲಿ ಲಾಭಾಂಶವು ಕೊಡೋಣಾಗಿದೆ. ರಿಜರ್ವ ಫಂಡು ಅಥವಾ ಕ್ಷೇಮನಿಧಿಯು ಮೊಬಲಗು ರೂ. ೫೦,೦೦೦ ಆಗಿರುವದು. ಸಿಬಂದಿಯವರಿಗೆ ಒಂದು ತಿಂಗಳ ಸಂಬಳವು ಉಚಿತವಾಗಿ ಕೊಡೋಣಾಗಿರುವದು.

ಆಯುರ್ವೇದ ಔಷಧಾಲಯ, ಮಂಗಳೂರು:—ಆಯುರ್ವೇದ ಭೂಷಣಗಳಾದ ಎಮ್. ವಿ. ಶಾಸ್ತ್ರಿಗಳವರ ಆಯುರ್ವೇದ ಔಷಧಾಲಯದ ಗತವರುಷದ ವರದಿಯು ನಮ್ಮ ಕೈಸೇರಿದೆ. ಇದನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ಈ ವರದಿಯನ್ನು ನೋಡುವಾಗ ಶಾಸ್ತ್ರಿಗಳವರ ಈ ಔಷಧಾಲಯವು ದಿನೇ ದಿನೇ ಅಭಿವೃದ್ಧಿ ಸ್ಥಿತಿಯನ್ನು ಹೊಂದುತ್ತಾ ಬರುತ್ತದೆಂಬದು ತೋರಿಬರುತ್ತದೆ. ಅಷ್ಟೇ ಅಲ್ಲ; ಪಟ್ಟಣದ ಜನರು ಕೂಡಾ ಈಗೀಗ ಈ ಔಷಧಾಲಯದ ಮೂಲಕ ಹಿಂದೀ ಪ್ರಾಚೀನ ಶಾಸ್ತ್ರವಾದ ಈ ಆಯುರ್ವೇದದ ಕಡೆಗೆ ಹೆಚ್ಚಿನ ನಂಬಿಕೆಯನ್ನು ತೋರಿಸಿ ಪ್ರೋತ್ಸಾಹ ಕೊಡುತ್ತಿದ್ದಾರೆಂತ ತಿಳಿಯುವದು ಒಂದು ಮಹತ್ವದ ವಿಷಯವಾಗಿದೆ. ಇದಕ್ಕೆ ಶಾಸ್ತ್ರೀಗಳವರ ಆಯುರ್ವೇದ ಚಿಕಿತ್ಸಾಜ್ಞಾನವೂ ವಿಶೇಷ ಅನುಭವವೂ ರೋಗಿಗಳ ಕಡೆಗೆ ಇರುವ ಉದಾರಭಾವವೂ ಮುಖ್ಯ ಕಾರಣವೆಂದು ಹೇಳಲು ಪ್ರತ್ಯವಾಯ ತೋರುವದಿಲ್ಲ. ಈ ಯುದ್ಧಕಾಲದ ಆಯುರ್ವೇದ ಔಷಧಗೃಹಕ್ಕೆ ತರಿಸುವ ಔಷಧಿಗಳಿಗೆ ಕ್ರಯವು ಶೇಕಡಾ ೪೦—೬೫ರಂತೆ ಏರಿದರೂ ಶಾಸ್ತ್ರಿಗಳು ತಮ್ಮ ಔಷಧಿಗಳಿಗೆ ಹಿಂದೆ ಪ್ರಕಟಿಸಿದ ಸೂಚೀ ಮೇರೆಯ ಕ್ರಯವನ್ನೇ ಇಟ್ಟಿರುವರೆಂದು ವರದಿಯಿಂದ ತಿಳಿಯುವದು ಮತ್ತೊಂದು ಮಹತ್ವದ ವಿಷಯವಾಗಿದೆ. ಈ ಘೋರ ಯುದ್ಧಕಾಲ ಯೂರೋಪಿಯ ಔಷಧಿಗಳಿಗೆ ವಿಪರೀತ ಕ್ರಯ ಏರಿರುವ ಕಾಲದಲ್ಲಿ ಶಾಸ್ತ್ರೀಗಳವರು ತನ್ನ ಔಷಧಿಗಳಿಗೆ ಕ್ರಯ ಏರಿಸದೆ ಇದ್ದು ನಮ್ಮ ಪಟ್ಟಣಿಗರು ಪ್ರಾಚೀನ ಕಾಲದ ಆಯುರ್ವೇದದ ಕಡೆಗೆ ಹೆಚ್ಚೆಚ್ಚು ಲಕ್ಷ ಕೊಡುವ ಹಾಗೆ ಮಾಡಿದ್ದು ದೇಶದ ಅಭಿವೃದ್ಧಿ ದೃಷ್ಟಿಯಿಂದ ನೋಡುವದಾದರೆ ಹಿತವೇ ಆಯಿತು. ಪ್ರಾಚೀನ ಹಿಂದೀ ವೈದ್ಯ ಪದ್ಧತಿಗಳನ್ನು ಶಾಸ್ತ್ರೀಯ ರೀತಿಯಿಂದ ನಮ್ಮ ಪಟ್ಟಣಿಗರಲ್ಲಿ ಪ್ರಯೋಗಿಸಿ ಪಟ್ಟಣಿಗರ ಹಿತಸಾಧನೆಯನ್ನು ಹುಡುಕುತ್ತಿರುವ ಶಾಸ್ತ್ರೀಗಳವರ ಈ ಉದ್ಯೋಗವು ದಿನೇ ದಿನೇ ಅಭಿವೃದ್ಧಿಯನ್ನು ಹೊಂದಲೆಂದು ಈ ಮೂಲಕ ಹಾರೈಸುವೆವು.

ಬೇಕು!

ತೀರ್ಥಹಳ್ಳಿ ರೈಲ್ ಬ್ರ್ಯಾಂಚಿಗೆ 50 ಜನ ಕೂಲಿಗಳನ್ನು [illegible] ರುವ ಕಂಟ್ರಾಕ್ಟರು ಬೇಕು. ಕೂಲಿಗಳ [illegible] ಕೆಲಸದ ಸ್ವಭಾವ ಮುಂತಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ತೀರ್ಥಹಳ್ಳಿ, } ದಿ ಮ್ಯಾನೇಜಿಂಗ್ [illegible]
30—1—17. } [illegible]

ಸೇರುತ್ತಾರೆ. ಮೈಸೂರು ಮಹಾರಾಜರು ರೂ. ೧೦ ಲಕ್ಷ; ಕಚ್ ಮಹಾರಾಜರು ತಿಂಗಳಿಗೆ ರೂ. ೪೫,೦೦೦; ರಾಜಪುತಾನದ ರಾಜಕುಮಾರರು ಮತ್ತು ಇತರರು ರೂ. ೪,೨೫,೦೦೦; ಬಿಕಾನೀರ್ ಮಹಾರಾಜರು ರೂ. ೧ ಲಕ್ಷ; ನಾಯಕವಾಡ ಮಹಾರಾಜರು ರೂ. ೧ ಲಕ್ಷ; ಜಿಂಧ್ ಮಹಾರಾಜರು ರೂ. ೧ ಲಕ್ಷ; ಜಯಪುರದ ಮಹಾರಾಜರು ರೂ. ೫೦,೦೦೦; ಇಂದೋರಿನ ಮಹಾರಾಜರು ರೂ. ೫೦,೦೦೦ ವಂತಿಗೆ ಕೊಟ್ಟಿರುವರು.

ಹಿಂದೂಸ್ಥಾನದಲ್ಲಿರುವ ಯುರೋಪಿಯನರೆಲ್ಲರನ್ನು ಸೇನೆಗೆ ಸೇರಿಕೊಳ್ಳುವ ವಿಧಿಯು ಹಿಂದೂಸ್ಥಾನದಲ್ಲಿ ಜಾರಿಗೆ ಬರುವದು. ಈ ವಿಧಿಯ ಪ್ರಕಾರ ಹಿಂದೂಸ್ಥಾನದಲ್ಲಿರುವ ಯುರೋಪಿಯನರಲ್ಲಿ ೧೮—೪೧ ವರ್ಷ ವಯಸ್ಸಿನವರು ಹಿಂದೂಸ್ಥಾನದ ಜನರಲ್ ಮಿಲಿಟರಿ ಸರ್ವಿಸಿಗೂ; ೪೧—೫೦ ವರ್ಷ ವಯಸ್ಸಿನವರು ಲೋಕಲ್ ಮಿಲಿಟರಿ ಸರ್ವಿಸಿಗೂ ೧೬—೧೮ ವರ್ಷ ವಯಸ್ಸಿನೊಳಗಿನವರು ಯುದ್ಧಸಂಬಂಧವಾದ ಶಿಕ್ಷಣ ಹೊಂದುವ ಬಗ್ಗೆಯೂ ಬರಾಯಿಸಿಕೊಳ್ಳಬೇಕಾಗುವದು. ಅದಲ್ಲದೆ ಈ ಯುದ್ಧಕಾಲ ಹಿಂದೀಗೆಯೂ ಸೇನೆಗೆ ಸೇರಿಕೊಳ್ಳುವ ಏರ್ಪಾಡು ಮಾಡಲಾಗುವದು ಎಂತ ವೈಸರಾಯ ಪ್ರಭುಗಳು ಶ್ರೇಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿರುತ್ತಾರೆ.

ಅಫ್‌ಗಾನ್‌ಸ್ಥಾನದ ಅಮೀರರು ಈ ಯುದ್ಧದಲ್ಲಿ ಸೇರುವ ಹಾಗೆ ಜರ್ಮನರಿಂದ ಮಾಡಿದ ಪ್ರಯತ್ನಗಳೆಲ್ಲಾ ನಿರರ್ಥಕವಾಗಿರುವದೆಂತಲೂ ಅವರು ಈ ಸಂಬಂಧವಾದ ಎಲ್ಲಾ ಕೋರಿಕೆಗಳನ್ನು ಗಣನೆಗೆ ತಾರದೆ ತಟಸ್ಥರಾಗಿರುವರೆಂತಲೂ ವೈಸರಾಯ ಪ್ರಭುಗಳವರ ಭಾಷಣದಿಂದ ತಿಳಿದುಬಂದಿರುತ್ತದೆ.

ಗಿರ್ಮಿಟ್ ಕರಾರಿನ ಕೂಲಿಪದ್ಧತಿಯನ್ನು ನಿಲ್ಲಿಸಬೇಕೆಂಬದಾಗಿ ಸರಕಾರದವರನ್ನು ಕೇಳಿಕೊಳ್ಳುವ ಉದ್ದೇಶದಿಂದ ಮುಂಬಾಯಿಯಲ್ಲಿ ಕಳೆದ ಆದಿತ್ಯವಾರ ಒಂದು ಸಾರ್ವಜನಿಕ ಸಭೆಯು ಕೂಡಿಬಂದಿರುತ್ತದೆ. ಈ ಸಭೆಯಲ್ಲಿ ಮಾನ್ಯ ಕೆ. ಗಂಧಿಯವರು ಅಧ್ಯಕ್ಷರಾಗಿದ್ದರು. ಮಾನ್ಯ ತಿಲಕರವರು "ಹಿಂದಿಗಳನ್ನು ಈ ಗಿರ್ಮಿಟ್ ಕರಾರಿನ ಪದ್ಧತಿ ಪ್ರಕಾರ ದೂರದಲ್ಲಿರುವ ವಸಾಹತಿಗಳಿಗೆ ಕಳುಹಿಸುವದು ಕ್ರೂರವಾಗಿದೆ, ಇದು ಗುಲಾಮತನದ ಪದ್ಧತಿಯ ಕಳೆಯುಳ್ಳದ್ದಾಗಿದ್ದು ಅತಿ ದುರಾಚಾರ ಪದ್ಧತಿಯಾಗಿದೆ. ಆದುದರಿಂದ ಬರುವ ಮೇ ತಾ. ೩೧ರ ಒಳಗೆ ಈ ಪದ್ಧತಿಯನ್ನು ತೆಗೆದುಹಾಕಬೇಕೆಂತ ಈ ಸಭೆಯವರು ಅಭಿಪ್ರಾಯಪಡುತ್ತಾರೆ" ಎಂಬ ಸೂಚನೆಯನ್ನು ಸಭೆಯ ಮುಂದೆ ತಂದರು. ಈ ಸೂಚನೆಯು ಸಭಿಕರಿಂದ ಮಂಜೂರಾಯಿತು. ಅನಂತರ ಮಿ। ಪೊಲಾಕರೇ ಮೊದಲಾದವರು ಈ ದುಷ್ಟಪದ್ಧತಿಯ ಅತ್ಯಾಚಾರಗಳನ್ನು ವಿವರಿಸಿದರು.

ಸಾಮ್ರಾಜ್ಯ ಯುದ್ಧ ಕನ್ಫರೆನ್ಸಿಗೆ ಹಿಂದೂಸ್ಥಾನದ ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟ ಬಿಕಾನೀರಿನ ಮಹಾರಾಜರು, ಸರ್. ಪಿ. ಸಿಂಹರವರು, ಸರ್ ಮೆಸ್ಟನರು ಕಳೆದ ಸೋಮವಾರ ಮುಂಬಾಯಿಯಲ್ಲಿ ಸೀಮೆಗೆ ಹಡಗಹತ್ತಿದರು.

ಇನ್ನುಮುಂದೆ ಸೀಮೆಯಿಂದ ಹಿಂದೂಸ್ಥಾನಕ್ಕೆ ಆಹಾರ ಪದಾರ್ಥಗಳನ್ನು ಕಳುಹಿಸುವದಿಲ್ಲವೆಂದೂ ಹಿಂದೂಸ್ಥಾನದವರಿಗೆ ಅವಶ್ಯವಾಗಿ ಬೇಕಾಗಿರುವಂಥಾ ಇನ್ನೆಲ್ಲಿಯೂ ಸಿಕ್ಕದಂಥಾ ಕೆಲವು ಪೇಟೆಂಟ ಔಷಧಿಗಳು ಮತ್ತು ಡಬ್ಬಿಯ ಹಾಲು ಮಾತ್ರ ಹಿಂದೂಸ್ಥಾನಕ್ಕೆ ಬರುವದೆಂದೂ ಈ ಸಂದರ್ಭದಲ್ಲಿ ಹಿಂದೂಸ್ಥಾನಕ್ಕೆ ಅಗತ್ಯವಾದ ಪದಾರ್ಥಗಳು ಯಾವದೆಂಬದನ್ನು ಹಿಂದೂಸ್ಥಾನ ಸರಕಾರದವರು ಬೇಗನೇ ತಿಳಿಸಬೇಕಾಗುವದೆಂದೂ ವಾರ್ತೆ ಇದೆ.

ದಕ್ಷಿಣ ಹಿಂದೂಸ್ಥಾನ.

ಶ್ರೇಷ್ಠ ನ್ಯಾಯವಿಧಾಯಕ ಸಭೆಯಲ್ಲಿ ವೈಸರಾಯ ಪ್ರಭುಗಳು ಕೊಟ್ಟ ಭಾಷಣದಲ್ಲಿ ಗಿರ್ಮಿಟ್ ಕರಾರಿನ ವಿಷಯವಾಗಿ ಮಾತನ್ನಾಡಿದ ಅಂಶವು ಹಿಂದೂಸ್ಥಾನದಲ್ಲೆಲ್ಲಾ ಅಸಂತೃಪ್ತಿಕರವಾಗಿ ಪರಿಣಮಿಸಿಯದೆ. ಆದುದರಿಂದ ಈ ಗಿರ್ಮಿಟ್ ಕರಾರಿನ ಪದ್ಧತಿಯನ್ನು ನಿಲ್ಲಿಸಿ ಬಿಡುವರೆ ಹೆಚ್ಚಿನ ಚಳವಳ ನಡಿಸುವ ಉದ್ದೇಶದಿಂದ ಮದ್ರಾಸಿನಲ್ಲಿ ಪುನಃ ಒಂದು ಸಾರ್ವಜನಿಕ ಸಭೆಯು ಕೂಡುವದಲ್ಲದೆ ಈ ಸಂದರ್ಭದಲ್ಲಿ ಡಾಕ್ಟರ್ ಎಸ್. ಸುಬ್ರಮಹಾಯ್ಯನವರು ಅಧ್ಯಕ್ಷರಾಗಿರುವರು. ಈ ತಿಂಗಳಾಂತ್ಯದಲ್ಲಿ ಮಿ। ಎಚ್. ಎಸ್. ಎಲ್. ಪೊಲಕರವರು ಮದ್ರಾಸಿಗೆ ಬರುವವರಾಗಿರುವದರಿಂದ ಅವರು ಬಂದನಂತರ ಮದ್ರಾಸಿನಲ್ಲಿ ತಿರಿಗೊಂದು ಸಭೆಯು ಕೂಡುವದು.

ಕಳೆದ ಶನಿವಾರ ಮದ್ರಾಸಿನಲ್ಲಿ ರಾಜಕೀಯೋದ್ಯೋಗ ಸಭೆಯವರ ವರದಿಯನ್ನು ನಿಷೇಧಿಸುವ ಉದ್ದೇಶದಿಂದ ಒಂದು ಸಭೆ ಕೂಡಿರುವದು. ಸಭೆಯ ಕೆಲಸಗಳು ಸುಮಾರು ನಾಲ್ಕು ತಾಸುಗಳ ವರೆಗೆ ಜರಗಿ ಈ ವರದಿಯ ದೋಷಾವಿಷ್ಕರಣದ ಬಗ್ಗೆ ಟೀಕೆಗಳೂ ಮಾಡಲ್ಪಟ್ಟು ಅವನ್ನು ನಿಷೇಧಿಸುವ ನಿರ್ಣಯಗಳು ಸಭೆಯವರ ಸಮ್ಮತಿಯನ್ನು ಹೊಂದಿದವು. ಕಮಿಷನರುಗಳಲ್ಲಿ ಒಬ್ಬರಾದ ಮಿ। ಜಸ್ಟಿಸ್ ಅಬ್ದುಲ ರಹಿಮರವರ ವಿಚಾರಯುಕ್ತವಾದ ಸೂಚನೆಗಳನ್ನು ಸ್ವೀಕರಿಸುವ ಮಸೂದೆಗಳೂ ಈ ಸಭೆಯಲ್ಲಿ ಮಂಜೂರಾದವು.

ಬಾತ್ಮಿಗಳು.

ಪುತ್ತೂರು.

ಕಳೆದ ತಿಂಗಳ ತಾ. ೩೧ರಲ್ಲಿ ಶಾಲೆಗಳ ಇನ್ಸ್‌ಪೆಕ್ಟರ್ ದೊರೆಗಳವರು ಇಲ್ಲಿಗೆ ಬಂದು ಇಲ್ಲಿಯ ಸೆಕೆಂಡರಿ ಶಾಲೆ, ಹಾಯರ ಎಲಿಮೆಂಟರಿ ಶಾಲೆ, ಪಂಚಮರ ಶಾಲೆಯ ಸಂದರ್ಶನೆಮಾಡಿ ಹೋಗಿರುವರು.

ಇಲ್ಲಿಯ ಪಂಚಮರ ಶಾಲೆಯಲ್ಲಿ ಜಿಲ್ಲೆಯ ಇತರ ಪಂಚಮರ ಶಾಲೆಗಳಂತೆ ವಿದ್ಯಾರ್ಥಿಗಳಿಗೆ ಬೆಳಗ್ಗೆ ೮ರಿಂದ ೧೨ ಘಂಟೆ ವರೆಗೆ ಕಲಿಸುವರೆ ಸಮಯ ನಿರ್ಣಯಿಸಬೇಕಾಗಿ ಪಂಚಮರ ವಿದ್ಯಾರ್ಥಿಗಳ ಹೆತ್ತವರು ಇಲ್ಲಿಯ ತಾಲೂಕು ಬೋರ್ಡಿನವರಿಗೆ ಮನವಿಮಾಡಿರುವರಂತೆ.

ಇಲ್ಲಿಯ ಡಿಸ್ಟ್ರಿಕ್ಟ ಮುನ್ಸಿಫರಾದ ಮಿ। ರಾ। ರಾ। ಸಿ. ಕೃಷ್ಣರಾವ್‌ರು ಒಂದು ತಿಂಗಳ ರಜೆ ಪಡಕೊಂಡದ್ದರಿಂದ ಅವರ ಬದಲಿಗೆ ಕಾಸರಗೋಡ ಡಿಸ್ಟ್ರಿಕ್ಟ ಮುನ್ಸಿಫರಾಗಿರುವ ಮಿ। ರಾ। ನಾರಾಯಣ ಮನೋಹ ಬಿ. ಎ. ಬಿ. ಎಲ್‌ರವರು ಇದೇ ತಾ. ೧೫ರಲ್ಲಿ ಚಾರ್ಜ ವಹಿಸಿಕೊಂಡಿರುವರು.

[illegible]

ಒನರೆಬಲ್ ಕೆ. ಎಸ್. ಭಟ್ಟರವರು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಕೇಳಿದ ಸವಾಲುಗಳು.

ಒನರೆಬಲ್ ಭಟ್ಟರವರು ವಿದ್ಯಾ ಇಲಾಖೆ, ಫೊರೆಸ್ಟ್ ಮತ್ತು ರೆವಿನ್ಯೂ ಇಲಾಖೆಗಳ ನ್ಯೂನತೆಗಳನ್ನು ಸರಕಾರದ ಮುಂದಿಡಲಿಕ್ಕೆ ತನ್ನ ೩೧ ಸವಾಲುಗಳಲ್ಲಿ ಅರ್ಧಾಂಶಕ್ಕೆ ಮಿಕ್ಕಿದವುಗಳನ್ನು ಪ್ರಯೋಗಿಸಿದರೂ ಸಿವಿಲ್ ಕೋರ್ಟುಗಳು, ಮೇಜಿಸ್ಟ್ರೇಟ ಸಿಬಂದಿ, ಲೋಕಲು ಬೋರ್ಡುಗಳು, ವ್ಯವಸಾಯ ಇಲಾಖೆ, ಸಹಕಾರ ಸಂಘಗಳು ಮುಂತಾದುವುಗಳನ್ನು ಮರೆಯಲಿಲ್ಲವೆಂಬುದು ಬಹಳ ಸಂತೋಷಕರ.

೩. ಮಹಮ್ಮದಿಯರ ಬಾಲಕರಿಗೆ ಮತ್ತು ತಿಲಕ್‌ಗಳ ರಿಜಿಸ್ಟರನ್ನು ಇಡುವಂತೆ ೧೯೦೫ನೆ ಇಸವಿಯ XII "ಖಾಜಿಗಳ ಆಕ್ಟಿ"ನಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಮಾಡಬೇಕಾಗಿ ಸರ್ ಆರ್ಥರ್‌ಲಾಲಿ ಮತ್ತು ಬಹುಮಾನಪಟ್ಟ ಈಗಿನ ಗವರ್ನರವರಿಗೆ ಮನವಿ ಮಾಡಿದ ವಿಷಯದಲ್ಲಿ ಸರಕಾರದವರಿಗೆ ಯಾವುದೊಂದು ಶಬ್ದಾವಲಿಯನ್ನು ಮಾಡುವ ಅಗತ್ಯ ಕಾಣುವುದಿಲ್ಲ ಎಂದು ಉತ್ತರ ಸಿಕ್ಕಿತು. ದಕ್ಷಿಣ ಕನ್ನಡದ ಮುಸಲ್ಮಾನರು ಈ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರಿಗೆ ಮನವಿ ಬರೆಕೊಳ್ಳುವುದು ಯೋಗ್ಯವೆಂದು ಕಾಣುತ್ತದೆ.

೪. ವಿದ್ಯಾ ಇಲಾಖೆಯ ವಿಷಯವಾಗಿ ಕೇಳಿದ ೭ ಸವಾಲುಗಳಲ್ಲಿ ದಕ್ಷಿಣ ಕನ್ನಡದಲ್ಲಿ ಹೆಣ್ಣುಮಕ್ಕಳ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟ್ರೆಸಿಗೆ ಕನ್ನಡ ಭಾಷೆಯ ಪರಿಚಯವಿಲ್ಲವೆಂತಲೂ, ಮಲೆಯಾಳ ಮತ್ತು ಕನ್ನಡವೆರಡೂ ಬಲ್ಲ ಸ್ತ್ರೀಯು ಈ ಕೆಲಸಕ್ಕೆ ಸಿಕ್ಕುವ ವರೆಗೆ ಇವರನ್ನು ಹಂಗಾಮಿಯಾಗಿ ನೇಮಿಸಿರುವರೆಂತಲೂ ಇವರು ಕನ್ನಡವನ್ನು ಓದಲಾರಂಭಿಸಿರುವರೆಂತಲೂ ಉತ್ತರ ದೊರಕಿತು ಆದರೆ ಇನ್ನು ಮುಂದೆ ಈ ಜಿಲ್ಲೆಯ ಭಾಷೆಯನ್ನರಿತವರನ್ನೆ ಇನ್ಸ್‌ಪೆಕ್ಟಿಂಗ್ ಆಫಿಸರ್ರುಗಳಾಗಿ ನೇಮಕ ಮಾಡುವಂತೆ ಡಿರೆಕ್ಟರಿಗೆ ಸೂಚಿಸುವುದಾಗಿ ನಂಬಿಕೆ ಸಿಕ್ಕಿತು.

೫. ೧೯೦೧ನೆ ಇಸವಿಯಿಂದ ನೇಮಕವಾಗಿದ್ದು ಕಾಯಂ ಆಗದೆ ಇರುವ ಸುಪರ್‌ವೈಜರುಗಳನ್ನು ಈಗ ತತ್ಕಾಲ ಕಾಯಂ ಮಾಡಲಿಕ್ಕೆ ಸಾಧ್ಯವಿಲ್ಲವಂತೆ! ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಸಿಬಂದಿಯಲ್ಲಿ ಹಲವು ಬದಲಾವಣೆಗಳು ಆಗಲಿಕ್ಕೆ ಇವೆಯಂತೆ! ಈ ಕಾರಣದಿಂದ ಬದಲಿಯಾಗಿ ಸಹ ಹಂಗಾಮಿ ಬಡ್ತಿಯನ್ನು ಕೊಡಲಿಕ್ಕೆ ಸಾಧ್ಯವಿಲ್ಲವೆಂದು ತಿಳಿಯಿತು. ಈ ಹೊಸ ವಿಲೆವಾರಿ ಬರುವ ಕಾಲವು ಯಾವುದ, ಆ ವರೆಗೆ ನಿರಾಶರಾಗಿ ಈ ಬಡ ಸಿಬಂದಿಯು ಕಾಯಬೇಕಾಯಿತಲ್ಲ ಎಂದು ನಾವು ಅವರಿಗೋಸ್ಕರ ಪಶ್ಚಾತ್ತಾಪ ಪಡುವೆವು.

೬. ಟ್ರೈನಿಂಗ್ ಶಾಲೆಗಳಿಗೆ ಸಂಬಂಧಪಟ್ಟ ಮೊಡೆಲ್ ಸ್ಕೂಲುಗಳಲ್ಲಿ ೧೯೧೧ನೆ ಇಸವಿಯಿಂದ ಹಲವು ಇಸವಿಗಳಲ್ಲಿ ಕೆಲಸ ನೋಡುವವರಿಗೆ ಕಾಯಂ ಆಗದಿರುವ ಕಾರಣವನ್ನು ಕೇಳಿದ್ದಕ್ಕೆ ಸರಕಾರದವರು ಆಗಾಗ ಕಾಯಂ ಮಾಡುತ್ತಲಿದ್ದಾರೆಂದು ತಿಳಿಸುತ್ತಾರೆ. ಹಾಗಾದರೆ ನಮ್ಮ ಜಿಲ್ಲೆಯಲ್ಲಿ ಮಾತ್ರ ಈ ಅನುಕೂಲತೆಯು ಒದಗದಿರುವಂತೆ ಯಾವ ಕಾರಣಭೂತರೆಂದು ಗೊತ್ತಾಗುವುದಿಲ್ಲ. ರೈಲ್ವೆ ಟಿಕೆಟಿನ ದರಗಳು ಹೆಚ್ಚಿದ ಕಾರಣ ಈ ಬಡ ಉಪಾಧ್ಯಾಯರಿಗೆ ತಮ್ಮ ಅಹವಾಲುಗಳನ್ನು ಬಹುಮಾನಪಟ್ಟ ಡಿರೆಕ್ಟರವರ ಮುಂದೆ ಸ್ವತಃ ಇಡುವುದು ಮೊದಲಿನಷ್ಟು ಸುಲಭವಾಗಲಾರದು. ಆದಕಾರಣ ಡಿರೆಕ್ಟರವರೆ ಈ ಕಡೆಗೆ ಲಕ್ಷ್ಯಕೊಟ್ಟರೆ ಆಗಬಹುದು.

೭. ಲೋಕಲ್ ಬೋರ್ಡುಗಳಲ್ಲಿ ಚುನಾವಣೆ ಮೆಂಬರುಗಳ ಮೆಂಬರಿಕೆಯ ವಾಯಿದೆಯು ದಾಟುವ ೩೦ ದಿನಗಳಿಗೆ ಮುಂಚಿತವಾದರೂ ಆ ಕುರಿತು ಸ್ಥಳೀಯ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂತಲೂ ವೈಸ ಪ್ರೆಸಿಡೆಂಟ ಅಥವಾ ಪ್ರೆಸಿಡೆಂಟರಾಗಿದ್ದವರ ಆ ಹುದ್ದೆಯ ಅವಧಿಯು ದಾಟುವ ಮುಂಚೆ ಅವರ ಮೆಂಬರಿಕೆಯ ಕಾಲವು ದಾಟಿದರೆ ಆ ಮೆಂಬರಿಕೆಯ ಚುನಾವಣೆ ಆದನಂತರ ಆ ಹುದ್ದೆಯ ಚುನಾವಣೆ ಆಗಬೇಕೆಂತಲೂ ಒನರೆಬಲ್ ಭಟ್ಟರವರು ಸೂಚಿಸಿದರು. ಅನೇಕಸಲ ಒಂದು ಮೆಂಬರಿಕೆಯ ವಾಯಿದೆಯ ವರ್ತಮಾನವು ಉಮೇದ್ವಾರರಿಗೆ ಗೊತ್ತಾಗದೆ ಸರಿಯಾದ ಪೋಟಾಪೋಟಿಯಾಗುವುದಿಲ್ಲ. ಈ ಬಗ್ಗೆ ಕಚೇರಿಗಳಲ್ಲಿ ಹಚ್ಚುವ ನೋಟೀಸು ಒಂದೊಂದು ಸಲ ಗೈರಹಾಜರಿಯಾಗುವುದೂ ಉಂಟು. ಇದಲ್ಲದೆ ಒಂದು ಸಲ ವೈಸ ಪ್ರೆಸಿಡೆಂಟರಾದವರು ಅವರ ಮೆಂಬರಿಕೆಯ ಅವಧಿ ತೀರಿದ ಕಾರಣ ಪುನಃ ಉಮೇದ್ವಾರರಾಗಿ ನಿಲ್ಲುವ ಮುಂಚೆಯೇ ಈ ವೈಸ್ ಪ್ರೆಸಿಡೆಂಟ ಅಥವಾ ಪ್ರೆಸಿಡೆಂಟರ ಚುನಾವಣೆಯು ಆದ ಸಂದರ್ಭಗಳೂ ಇವೆ. ಸರಕಾರದವರು ಈ ವಿಷಯದಲ್ಲಿ ಈಗ ಇರುವ ಕ್ರಮಗಳು ಸಾಕಷ್ಟು ಬಲವಾಗಿವೆ, ಇನ್ನು ನೂತನ ಬದಲಾವಣೆಗಳು ಬೇಕಿಲ್ಲವೆಂದು ಹೇಳುತ್ತಾರೆ. ಈ ವಿಷಯದಲ್ಲಿ ಬಹಿರಂಗವಾದ ಪ್ರಕಟನೆಗಳು ವರ್ತಮಾನ ಪತ್ರಿಕೆಗಳಲ್ಲಿ ಬರುವಂತೆ ಆಯಾಯ ಸ್ಥಳೀಯ ಬೋರ್ಡಿನವರಾದರೂ ಎಚ್ಚರವಿಡುವುದು ಅಗತ್ಯ.

೮. ಮಲೆಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಸಾವಿರಾರು ಹಳ್ಳಿಗಳಿಗೆ ಬರೆ ಕಾಲುನಡಗೆ ಬೇಕಾದ ಸೇತುವೆಗಳನ್ನು ಸಹ ಕಟ್ಟಿಸದೆ ಇದ್ದ ಕಾರಣ ಮಳೆಗಾಲದಲ್ಲಿ ಪ್ರಯಾಣ ಅಪಾಯಕರವಾಗಿದೆ. ಈ ಲೋಕಲ್ ಬೋರ್ಡ ರಸ್ತೆಗಳು ಈ ಹಳ್ಳಿಗಳನ್ನು ದಾಟಿ ಹೋಗುವುದಿದ್ದರೆ ಮಾತ್ರವೇ ಈ ಸೇತುವೆಗಳ ವಿಷಯವಾಗಿ ಬೋರ್ಡಿನವರು ಕೈಹಾಕುತ್ತಾರೆ. ಉಳಿದ ಹಳ್ಳಿಗಳಿಗೂ ಈ ಸೇತುವೆಗಳನ್ನು ಮಾಡಿಸುವಂತೆ ಬೋರ್ಡಿನವರಿಗೆ ಸೂಚಿಸಬೇಕೆಂದು ಕೇಳಿದ್ದಕ್ಕೆ ಈ ವಿಷಯದಲ್ಲಿ ಬೋರ್ಡಿನವರೆ ಮುಂದರಿಸಬೇಕಾಗಿದೆ ಎಂದು ತಿಳಿದು ಬಂತು. ಇನ್ನು ಆಯಾಯ ಗ್ರಾಮಸ್ಥರು ಈ ವಿಷಯ ದಲ್ಲಿ ತಮ್ಮ ಪ್ರತಿನಿಧಿ ಮೆಂಬರರ ಮೂಲಕ ಈ ಸೇತುವೆಗಳನ್ನು ಕುರಿತು ಬೋರ್ಡಿನವರಿಗೆ ಆಗಾಗ ಮನವಿ ಮಾಡುವುದೇ ಲೇಸು.

೯. ಸರಕಾರಿ ಸಬ್ ಅಸಿಸ್ಟಾಂಟ್ ಸರ್ಜನರಿಗೆ ಸಂಬಳ ಹೆಚ್ಚಿಸಿದ ಪರದಲ್ಲಿಯೇ ಬೋರ್ಡ ಕೈಕೆಳಗಿನ ಸಬ್ ಅಸಿಸ್ಟಾಂಟ ಸರ್ಜನರಿಗೂ ಬೋರ್ಡಿನವರು ಸಂಬಳ ಹೆಚ್ಚಿಸಲಿಕ್ಕೆ ಆಕ್ಷೇಪವಿಲ್ಲವೆಂದು ಗೊತ್ತಾಯಿತು.

೧೦. ಸಿವಿಲು ಕೋರ್ಟುಗಳಲ್ಲಿ ಆಸ್ತಿ ಸ್ವಾಧೀನತೆ ದಾವೆಯನ್ನು ತರುವಾಗ ಕೃಷಿದ ಮೌಲ್ಯವನ್ನು ಎಣಿಸುವುದೇ ಅನೇಕಸಲ ಚರ್ಚಾಸ್ಪದವಾಗುತ್ತದೆ. ಇತ್ತಲ್ಪಿನವರೂ ಕೃಷಿದ ವಾಸ್ತವವಾದ ಬೆಲೆಯನ್ನು ಮರೆಮಾಡುವುದರಿಂದ ನಿಷ್ಕಾರಣವಾಗಿ ವ್ಯಾಜ್ಯಗಳು ಘೋರವಾಗುತ್ತವೆ. ಇದರಲ್ಲಿ ಕಮಿಷನ್ ಮೂಲಕ ಮೌಲ್ಯ ಕಟ್ಟಿಸಿದಾಗ ಹಲವು ಸಲ ಇತ್ತಲ್ಪಿನವರೂ ಈ ಮೌಲ್ಯವನ್ನು ಒಪ್ಪುವುದಿಲ್ಲ. ಇಂಥ ದುರ್ವ್ಯಾಜ್ಯದ ಪೋಟಾಪೋಟಿಯನ್ನು ಅಡಗಿಸಲಿಕ್ಕೂ ಕೋರ್ಟಿನವರಿಗೆ ಅನಾವಶ್ಯಕವಾಗಿ ಆಗುವ ಕಾಲವಿಳಂಬವನ್ನು ಕಡಿಮೆಮಾಡುವುದಕ್ಕೂ ಒನರೆಬಲ್ ಭಟ್ಟರು ಎರಡು ಉಪಾಯಗಳನ್ನು ಸೂಚಿಸಿದರು. (೧) ಕೃಷಿದ ಮೊಬಲಗಿನ ಮೇಲೆ ಕಪ್ಪ ಹೊರಿಸುವುದು. ಇದರಿಂದ ನಿಷ್ಕಾರಣವಾಗಿ ಹೆಚ್ಚಿನ ಬೆಲೆ ಕೇಳುವುದಕ್ಕೆ ಜನರು ಸ್ವಲ್ಪ ಹಿಂಜರಿಯಬಹುದು. ಈ ವಿಷಯದಲ್ಲಿ ಹೈಕೋರ್ಟಿನವರ ಅಭಿಪ್ರಾಯವನ್ನು ಕೇಳುತ್ತೇವೆಂದು ಸರಕಾರದ ಕಡೆಯಿಂದ ಉತ್ತರ ಸಿಕ್ಕಿತು. ಹೈಕೋರ್ಟಿನವರು ಇದನ್ನು ಆದರ ಪೂರ್ವಕವಾಗಿ ಅಂಗೀಕರಿಸಿದರೆ ದುರ್ವ್ಯಾಜ್ಯಗಳ ಜಂಜಾಟವನ್ನು ಹುಟ್ಟಡಗಿಸಿದಂತಾಗುವುದು. (೨) ಯೋಗ್ಯರಾದ ಕಮಿಷನರನ್ನು ಕಾಯಂ ಆಗಿ ನೇಮಿಸುವಷ್ಟು ಹಣ ಮಲೆಬಾರ ಮತ್ತು ದಕ್ಷಿಣ ಕನ್ನಡಗಳಲ್ಲಿ ವಸೂಲಾಗುವುದಾದರೆ ಪರೀಕ್ಷಾರ್ಥವಾಗಿ ಕೆಲವು ಯೋಗ್ಯ ಗೃಹಸ್ಥರನ್ನು ಪ್ರತಿಯೊಂದು ಕೋರ್ಟಿನಲ್ಲಿಯೂ ಕಾಯಂ ನೇಮಿಸುವುದು. ಇದಕ್ಕೆ ಸರಕಾರದವರ ಸಮ್ಮತಿ ಸಿಕ್ಕಲಿಲ್ಲ. ಹಲವು ಸಲ ಹಟವಾದಿಗಳಾದ ವಾದಿ ಪ್ರತಿವಾದಿಗಳು ಕಮಿಷನರುಗಳ ಮೌಲ್ಯ ನಿರ್ಣಯವನ್ನು ಕುರಿತು ಚರ್ಚೆ ತರುವುದೇನೊ ನಿಜ. ಆದರೆ ಕೆಲವು ಸಲ ಕಮಿಷನರುಗಳೂ ದ್ರವ್ಯಾಪೇಕ್ಷೆಯಿಂದ ದಾರಿ ತಪ್ಪಿಹೋಗುವುದೂ ಉಂಟು. ಹೀಗಾಗಿ ಬಡ ಕಕ್ಷಿಗಾರರಿಗೆ ಅನ್ಯಾಯವಾಗುವ ಸಂದರ್ಭಗಳೂ ಇವೆ. ಈ ವಿಷಯದಲ್ಲಿಯೂ ಸರಕಾರದವರು ಹೈಕೋರ್ಟಿನವರ ಅಭಿಪ್ರಾಯವನ್ನು ಕೇಳ ಬಹುದಿತ್ತು.

೧೧. ಸ್ಪೇಷಲ ಸಬ್ ಮೇಜಿಸ್ಟ್ರೇಟರುಗಳು ಬಾರಕೂರಿನ ಅಂಗಡಿಗಳನ್ನು ಜನರ ಚಲಾವಣೆಗೆ ಉಪಯೋಗಿಸುವ ಮೋಟರ್ ಬಸ್ಸು ಮುಂತಾದವುಗಳನ್ನು ಸಂದರ್ಶಿಸಲಿಕ್ಕೂ ಮರಣಕಾಲದ ವಾಗ್ಮೂಲಗಳನ್ನು ಬರೆದುಕೊಳ್ಳಲಿಕ್ಕೂ ತಮ್ಮ ಹೆಡ್ ಕ್ವಾರ್ಟರಿನಿಂದ ೫ ಮೈಲು ದಾಟಿ ದೂರವಿರುವ ಹಳ್ಳಿಗೆ ಹೋದಾಗ ಅವರ ತಲಬಿನ ಇತರ ಹುದ್ದೆದಾರರಂತೆ ಅವರಿಗೆ ಮೈಲಿ ಭತ್ತೆ ಅಥವಾ ನಿಜವಾದ ಖರ್ಚು ಕೊಡುವ ಏರ್ಪಾಡು ಮಾಡಬೇಕಾಗಿ ಕೇಳಿದ್ದಕ್ಕೆ ಸಬ್ ಮೇಜಿಸ್ಟ್ರೇಟರುಗಳಿಗೆ ೫ ಮೈಲಿಗಿಂತ ದೂರವಿರುವ ಹಳ್ಳಿಗೆ ಹೋದಾಗ ದಿನಕ್ಕೆ ೧೨ ಆಣೆ ಭತ್ತೆ ಸಿಕ್ಕುತ್ತದೆಂತಲೂ ಮೈಲಿ ಭತ್ತೆಯಾಗಲೀ ತಗಲಿದ ಖರ್ಚಾಗಲೀ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಸರಕಾರದವರು ಮುಕ್ತಕಂಠರಾಗಿ ಹೇಳಿಬಿಟ್ಟರು. ಆಶ್ಚರ್ಯವಲ್ಲ. ಈ ಹೊಸ ಏರ್ಪಾಡಿನಿಂದ ಸರಕಾರದವರಿಗೆ ವಿಶೇಷ ನಷ್ಟವೂ ಆಗುತ್ತಿದ್ದಿಲ್ಲ. ಮತ್ತು ಸಬ್ ಮೇಜಿಸ್ಟ್ರೇಟರುಗಳಿಗೆ ಅವರ ಹುದ್ದೆಯ ಗೌರವಕ್ಕೆ ಅನುಸಾರವಾಗಿ ಭತ್ತೆಯೂ ಸಿಕ್ಕುತ್ತಿತ್ತು. ಹಲವು ಸಲ ಸರಕಾರದವರು ಅಲ್ಪ ಖರ್ಚಿಗೆ ಕೈಹಿಂತೆಗೆಯುವುದೂ ಅದಕ್ಕೆ ಬದಲಾಗಿ ಮೇಲುವರ್ಗದ ಉದ್ಯೋಗಸ್ಥರ ಬಗ್ಗೆ ಧಾರಾಳ ಬುದ್ಧಿಯಿಂದ ವೆಚ್ಚ ಮಾಡುವುದೂ ವಾಡಿಕೆಯಾಗಿ ಬಿಟ್ಟಿದೆ.

೧೨. ಫೊರೆಸ್ಟ್ ಮತ್ತು ಅಬಕಾರಿ ತಕ್ಸೀರುಗಳಲ್ಲಿ ಜೈಲ್ ಸಜೆ ವಿಧಿಸುವದನ್ನು ತಗ್ಗಿಸಲಿಕ್ಕೆ ಸರಕಾರದವರು ಒಪ್ಪಲಿಲ್ಲ. ಇನ್ನು ಮೆಜಿಸ್ಟ್ರೇಟರಿಗೆ ಈ ವಿಷಯದಲ್ಲಿ ಕೈಹಾಕಲಿಕ್ಕೆ ಸಾಧ್ಯವಿಲ್ಲ.

೧೩. ಪರಸ್ಪರ ಸಹಾಯಕ ಸಂಘಗಳ ಮೂಲಕ ಬಿತ್ತನೆಬೀಜ ಮುಂತಾದ್ದನ್ನು ಹಳ್ಳಿಯ ಜನರಿಗೆ ಒದಗಿಸಿಕೊಡುವ ವಿಷಯದಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರರವರಿಗೂ ಬರೆಯುತ್ತೇವೆಂದು ಎಗ್ರಿಕಲ್ಚರ್ ಇಲಾಖೆಯ ಡಿರೆಕ್ಟರವರಿಗೂ ಬರೆಯುತ್ತೇವೆಂದು ಸರಕಾರದವರು ತಿಳಿಸಿದರು.

೧೪. ತೀರ್ವೆ ಕಳೆದು ವರ್ಷಕ್ಕೆ ೧೯೦ ರೂಪಾಯಿ ಗೇಣಿ ಸಿಕ್ಕುವ ೨೬-೭೩ ಎಕ್ರೆ ವಿಸ್ತೀರ್ಣದ ಬಾಗಾಯತು ಸ್ಥಳ ಸರಕಾರದವರು ಕಾಸರಗೋಡು ತಾಲೂಕಿನ ಕೂಡ್ಲು ಗ್ರಾಮದಲ್ಲಿ ತೆಂಗಿನ ಕೃಷಿ ಕ್ಷೇತ್ರವಾಗಿ ಮಾಡುವ ಉದ್ದೇಶದಿಂದ ಕೊಂಡುಕೊಳ್ಳುವುದಕ್ಕೆ ರೂ. ೧೯,೯೬೭—೪—೧೧ ಖರ್ಚು ಮುಟ್ಟಿತು ಎಂದು ತಿಳಿಯುತ್ತೇವೆ. ಆ ಭಾಗಗಳಲ್ಲಿ ಈ ರೀತಿಯ ಬೆಲೆಯು ಪ್ರಚಾರಕ್ಕೆ ಬಂದರೆ, ಬರುವ ಸೆಟ್ಲಮೆಂಟಿನಲ್ಲಿ ಸರ್ಕಾರಿ ತೀರ್ವೆ ಎಷ್ಟು ಪಾಲಷ್ಟು ಹೆಚ್ಚಬಹುದೆಂದು ಪಕ್ಕನೆ ಹೇಳಲಾರೆವು. ಫೊರೆಸ್ಟ್ ರೆವಿನ್ಯೂ ವಿಷಯವಾದ ೧೦ ಸವಾಲುಗಳ ವಿಮರ್ಶೆಯನ್ನು ಇನ್ನೊಂದು ಸಂಚಿಕೆಯಲ್ಲಿ ಕೊಡುವೆವು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಜಡ್ಜರ ಕೋರ್ಟಿನಲ್ಲಿ.

1916ನೇ ಇಸ್ವಿ ಅಸಾಧಾರಣ ಅರ್ಜಿನಂಬ್ರು 1.

ಎಂಜಿಲಾ ಸಾಲ್ಡಾಂಞ—ಇವಳ ಪವರ್ ಒಫ್ ಎಟೊರ್ನಿ, ಇ. ಎಫ್. ವಾಸ್ ... ... } ಪಿಟಿಷನರ್.

ಎದ್ರು

ಬೊನವೆಂಚರ್ ಸಾಲ್ಡಾಂಞ— ರಿಸ್ಪೋಂಡೆಂಟ್.

1915ನೇ ಇಸವಿ ಫೆಬ್ರವರಿ ತಾ. 15ಲ್ಲು ಮಂಗ್ಳೂರ ಗವರ್ನಮೆಂಟ್ ಪ್ಲೀಡರ್ ಎ. ಜೆ. ಲೋಬರು ಸದ್ರಿ ಬೊನವೆಂಚರ್ ಸಾಲ್ಡಾಂಞರಿಗೆ ಬರಕೊಟ್ಟ ಡಿಮಾಂಡ್ ಪ್ರೋಮಿಸರಿ ನೋಟಿನ ಅಸಲು (ರೂ. 5000) ವ ಅದಕ್ಕೆ ಸದ್ರಿ ತಾರೀಕಿನಿಂದ ತಿರುಗಿ ಪಾವತಿ ವರೇಗೆ ಶೇಕಡಾ ನರ್ಷ 1ಕ್ಕೆ 5ಲ್ಲಿ ಆಗುವ ಬಡ್ತಿ ಕೂಡಾ ಐವಜನ್ನು ವಸೂಲು ಮಾಡುವರೆ ಕಳಗೆ ದಸ್ಕತು ಮಾಡಿದವರನ್ನು ಮೇಲ್ಕಂಡ ಕೋರ್ಟಿನವರು ರಿಸೀವರರಾಗಿ ನೇಮಿಸಿದ್ದರಿಂದ ಎಲ್ಲಾ ಜನರಿಗೆ ತಿಳಿಸುವದೇನಂದರೆ:—ಸದ್ರಿ ನೋಟನ್ನು ಯಾ ಅದರ ಹಕ್ಕು ಸ್ವತಂತ್ರ ಯಾ ಬಾಧ್ಯತೆಯನ್ನು ಸದ್ರಿ ರಿಸ್ಪೋಂಡೆಂಟ ಬೊನವೆಂಚರ್ ಸಾಲ್ಡಾಂಞನಿಂದ ಯಾವ ವಿಧದಿಂದ ಯಾರೂ ಕೊಳ್ಳಕೂಡದು, ಪಡಕೊಂಡರೆ ನಿಷ್ಫಲವಾಗುವದು.

[illegible]

ಮಂಗಳೂರು.
1917ನೇ ಫೆಬ್ರವರಿ ತಾ. [illegible]

[illegible]

ಜಿನಸು ಧಾರಣೆ.

(ರಖಂ).

ಮಸ್ಕತಿ ಅಕ್ಕಿ ಹೊಸ್ತು	5—6—0	ರಿಂದ	5—14—0
ಗುಡ್ಡೆ ,, ,,	5—4—0	,,	5—8—0
ಹೊಸ ರಾಶಿ ,,	4—15—0	,,	5—2—0
ಅವ್ವಲ್ ಬೆಳ್ತಿಗೆ ,,	5—14—0	,,	6—4—0
ಗುಡು ಬೆಳ್ತಿಗೆ ,,	5—6—0	,,	5—8—0
ರಂಗೂನು ಬೆಳ್ತಿಗೆ ಗೋಣಿ ೧ರ	9—14—0	,,	9—12—0
ಗೋದಿ ಗೋಣಿ ೧ರ	11—12—0	,,	12—8—0
ಹುರುಳಿ ಗೋಣಿ ೧ರ	6—8—0	,,	6—9—0
ಕಡಲೆ ಗೋಣಿ ೧ರ ಬೊಂಬಾಯಿ	10—0—0	,,	10—8—0
ತೊಗರಿ ಗೋಣಿ ೧ರ			11—0—0
ತೊಗರಿ ಬೇಳೆ ಗೋಣಿ ೧ರ	12—8—0	,,	15—8—0
ಉದ್ದು ಗೋಣಿ ೧ರ	10—8—0	,,	11—4—0
ಊರುಬೆಲ್ಲ ಖಂಡಿ ೧ರ	32—8—0	,,	35—0—0
ಉಪ್ಪು ಗೋಣಿ ೧ರ		,,	4—12—0
ಕೊಬ್ಬರಿ ಖಂಡಿ ೧ರ	85—0—0	,,	90—0—0
ಕೊಬ್ಬರಿಹಿಂಡಿ ಖಂಡಿ ೧ರ		,,	20—8—0
ಎಳ್ಳಿಂಡಿ ಖಂಡಿ ೧ರ ಬೊಂಬಾಯಿ	25—0—0	,,	32—8—0
[illegible] ಮೂಡೆ ೧ರ	6—6—0	,,	7—0—0
ಎಳ್ಳೆಣ್ಣೆ ಮೂಡೆ ೧ರ (ಕುಡಿಯುವ)		,,	4—6—0
[illegible] ೧ರ	6—11—0	,,	7—6—0
[illegible] ಸಕ್ಕರೆ ಮೂಡೆ ೧ರ		,,	6—6—0
[illegible] ಖಂಡಿ ೧ರ	215—0—0		225—0—0
[illegible]	78—0—0	,,	85—0—0
[illegible] ಮೂಡೆ ೧ರ	2—0—0	,,	2—4—0
[illegible]		,,	76—0—0
[illegible]	29—0—0	,,	30—8—0
[illegible]		,,	32—0—0
[illegible]		,,	24—0—0
[illegible]		,,	[illegible]
[illegible]			240—2—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888,

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆ ೧ಸು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತದೆ. ೨೦—೨೫ ವರ್ಷಗಳ ಹಳತ, ನೈಮುನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೩ಕ್ಕೇ ಆಣೆ.

ವಿಶೇಷ ಸೂಚನೆ—ದೇಶ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡಯೋಣ, ಪ್ರಮೇಹ (ಗರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲ ಕೈಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕೊಳ್ಳುವವರಿಗೆ ಧಂಡ್ರುಂ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ-ಬ್ರದರ್ಸ್,
ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟ್‌ರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರ, ಮೈಸೂರು.

ಸಿದ್ಧೌಷಧ [ಪರೀಕ್ಷಿಸಿ ನೋಡಿರಿ ||

ಇಕ್ಲಿಪ್ಸ್‌ಡ್ರಾಪ್ಸ್ ಎಂಬ ಈ ಔಷಧವು ಜ್ವರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ. ಸೀಸೆ 1ಕ್ಕೆ ಆಣೆ 6. ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4-8-0.

"ಸಮಯಕ್ಕೆ ಒದಗಿದವನೇ ಮಿತ್ರ"ನೆಂಬುದು

ನಮ್ಮ

ಇಕ್ಲಿಪ್ಸ್ ಬಾವ್

ಪ್ರಯೋಗಿಸಿ ನೋಡಿದವರೆಲ್ಲರಿಗೂ ಖಾತ್ರಿಯಾಗಿದೆ. ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಪೀನಸ, ತಲೆಸಿಡಿತ, ತಲೆನೋವು, ಹುರುಕು, ತುರಿಕಜ್ಜಿ, ಮೂಲವ್ಯಾಧಿ, ಬೆಂಕಿಯಬೊಕ್ಕೆ, ಮೊಡವೆ, ಚೇಳು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

ಕ್ರಿಮಿ ನಾಶಕ ಯುಕಲಿಪ್ಟಸ್ ತೈಲ 5 ಆಣೆ; ಟೂತಪೌಡರ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಪಿ. ನರಸಿಂಗರಾವ್,
ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು



ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ, ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ-ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,
Avenue Road, [illegible]
BANGALORE CITY. [illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಪ್ಪಾದ ಛಾಯಾಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು

ಪೂರ್ವಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ್ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾಕು ವಾಸಕ್ಕೂ ವೈದ್ಯರ ಸಮಯವನ್ನು ಕಾಯ ಬೇಕಾಗುವುದಿಲ್ಲ. ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಬೇಧಿ, ಮಲಬದ್ಧ, ಕೆಮ್ಮು, ಗಸಟೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 3—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಟಿಡಿಸ್ಟ್ರಾರ್. ಈ ಟ್ರೇಡ್‌ಮಾರ್ಕ ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. ೨೫೦ ಮಾತ್ರೆಗಳುಳ್ಳ ಉಬ್ಬಿಗೆ ೮ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ ಆಫ್ ಅಮೇರಿಕಾ, ಬಿ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗ್ಮೋರ್ ನಂ. 2. ಮದ್ರಾಸ್ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಹಳ್ಳೆಯ ನೋವು, ಹೊಟ್ಟೆನೋವು, ವಿಷಮಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ವಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲೈಫ್ ಎಸ್ಯುರೆನ್ಸ್ ಕಂ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಭಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೇಮ್‌ರೋಜ್ ಆರ್ ಜೋಶಿ ರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ। ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿ ಮಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಳಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಳ್ಕಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ದಾಖಲೆಗಳನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮಾ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ROYAL DENTIFRICE.

(ರೋಯಲ್ ದಂತಮಂಜನ).

ಗ್ರಾಹಕರೇ, ತಾವುಗಳು ಅನೇಕ ತರದ ದಂತಮಂಜನಗಳು ಉಪಯೋಗಿಸಿಯೂ, ತರಿಸಿಯೂ, ಕೇಳಿಯೂ ಇರಬಹುದು. ಆದರೆ ಮೇಲ್ಕಾಣಿಸಿದ ರೋಯಲ್ ದಂತಮಂಜನದಲ್ಲಿರುವಷ್ಟು ಚಮತ್ಕೃತಿಯ ಗುಣಗಳನ್ನು ಕೇಳಿರಲಾರಿರಿ. ಇದರ ಗುಣಾಂಶಗಳನ್ನು ಇದರಡಿ ಸೂಚಿಸಿದ್ದಕ್ಕೆ ಯಾವ ತರದ ವ್ಯತ್ಯಾಸವು ಕಾಣದಾದರೆ ಗುಣಾಂಕವನ್ನು ಕೊಡುವದು. ಇದು ಕ್ರಯದಲ್ಲಿಯೂ ಭಾರಿ ಸುಲಭವಿದೆ. ಇದನ್ನು ಒಮ್ಮೆಗೆ ಉಪಯೋಗಿಸಿ ನೋಡಿದಲ್ಲಿ ಇದರ ಗುಣಾಂಶವು ಕಂಡುಬರುವದು. ಇದರ ಗುಣಾಂಶಗಳು ಯಾವ ಯಾವವೆಂದರೆ—ಹಲ್ಲಿನ ಎಡೆಗಳಿಂದ ಕೀವು ಯಾ ರಕ್ತ ಬರುವಂಥಾದ್ದು, ಹಲ್ಲನ್ನು ಹುಳ ತಿನ್ನುವಿಕೆ, ಬಾಯಿಂದ ಪಸದು ನೀರು ಬರುವಿಕೆ, ಬಾಯಿಯ ದುರ್ಗಂಧ, ದವಡೆ ಊದುವಿಕೆ, ಚಿಕ್ಕ ಪ್ರಾಯದಲ್ಲಿ ಹಲ್ಲು ಅಲ್ಲಾಡುವಿಕೆ, ಇವುಗಳೆಲ್ಲಾ ಉಪಯೋಗಿಸಿದ ದಿನಗಳಿಂದಲೇ ಗುಣ ಕಂಡು ಬಂದು, ಹಲ್ಲು ಮುತ್ತಿನಂತಾಗುವವು.

ಡಬ್ಬಿ 1ರ ~~ಕ್ರಯ 0—1—6, ಡಜನ್~~ 1ರ ಕ್ರಯ ರೂ. 1.

ಸೂಚನೆ—ಪರಸ್ಥಳದವರಿಗೆ 6 ಡಬ್ಬಿಗಳಿಗಿಂತ ಕಡಮೆ ವಿ. ಪಿ.ಯಿಂದ ರವಾನಿಸಲಾರೆವು.

ಏಜಂಟರು ಬೇಕು.

ದಕ್ಷಿಣ ಹಿಂದೂಸ್ಥಾನದ ಏಜಂಟರು—

ದಿ ಉಲನ್ ಮಾರ್ಟ್,

ಮಂಗಳೂರು, ದ. ಕ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಿಸಲಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಶ್ಯಾ. ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತಾವಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತೆಗೆದುಕೊಂಡರೆ ಬೆಲೆ 15 ರೂ. ಮಾತ್ರ.

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ ೨.

ದವಿಯಾನ ಮತ್ತು ಕಂಪೌಂಡ್ ಫೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಸಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ, ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧-೮-೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧-೦-೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪೆಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧-೮-೦.

ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co Fort Bombay

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಕೆಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3-0-0.

೨. **ಬಾಣಂತಿ ಮಾತ್ರೆ:**— ಪ್ರಸವವಾದ ಲಾಗಾಯತು 30 ದಿವಸಗಳವರಿಗೆ ಉಪಯೋಗಿಸುವದರಿಂದ ಖಾರ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6-0-0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ವಾರ್ಧಕ್ಯ ವಾಯುವಿನಿಂದ ಪೀಡಿತರಾದವರೂ, ಬೀಜ ತೊನ್ನು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ; ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ವಿಳಾಸ:—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟು ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,
K. APPAYA SHENOY, & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅದೆಜುಡ್ಜೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾರ್ಡು, ಬೆಂಗಳೂರು; ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ, ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೋಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.
ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್‌ಜಾನ್ ಬಳ್ಳಿ ಶೀರೆ

ರೂಪಾಯಿ ೨-೮-೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಲ್ಲನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಇದಿಗೋ!
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ದಿವ್ಯಾಂಜನ. Divyanjan. (Regd.)

ಗುಣ ಬಾರದಿದ್ದರೆ ಹಣ ವಾಪಸು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲ, ಚಾಕು ಬರುವುದು, ಉಳುಕು ಉರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಶನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇದೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:—ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**
Fergusson Road, BOMBAY.

ಜಂಟಲ್‌ಮೆನ್ ಫಿಕ್ಸಿಟ್ ಲೀವಾರ್ ವಾಚ್.

10 ಬಹುಮಾನಗಳ ಸಹಿತ ರೂ. 3-8-0 ಮಾತ್ರವೇ.
6 ವರುಷ ಖಾತ್ರಿಯಾದ ಗ್ಯಾರಂಟಿ ಸಹಾ.

ಈ ಗಡಿಯಾರವು ಒಳ್ಳೇ ಮಜಬೂತಾಗಿಯೂ ಚಿತ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ,



ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ಮತ್ತು ಗಂಟೆ ತೋರಿಸುವ ನಂಬರುಗಳ ಮೇಲೆ ಇಮಿಟೇಷನ್ ಕೆಂಪುಗಳು ಮಡಗಿ ಕಟ್ಟಿಡ ಕಟ್ಟಿರುತ್ತೆ. 6 ರತ್ನಗಳು ಉಳ್ಳ ಓಪನ್ ಕೇಸ್ ಕಂಪನ್‌ಸೆಷನ್ ಬಹು ಬಲಿಷ್ಟವಾದ ಲೀವರ್ ಕೆಲಸದಲ್ಲೇ ತಯಾರಾಗಿ ಬಂದು ಇರುತ್ತೆ. ಇದನ್ನು ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ತರಿಸಿ ಪರೀಕ್ಷೆಮಾಡಿದರೆ ತಿಳಿಯುವದು. ಬಹುಮಾನ ವಿವರ - ಪರ್ಸು 1, ಪೆಟ್ಟಿಗೆ 1, ಕಾರನೇಷನ್ ಕನ್ನಡಿ 1, ಇಂಗ್ಲಿಷು ಬಾಚಣಿಗೆ 1, ಸೆಂಟ್ ಸೀಸೆ 1, ಪರಟು ಗುಂಡಿ ಸೆಟ್ 1, ಎಲೆಕ್ಟ್ರಿಕ್ ಭಂಗಾರದ ಕೈ ಉಂಗುರ 1, ಸ್ತ್ರೀಯರು ಧರಿಸಿಕೊಳ್ಳುವ ತಲೆ ಹೂವು 1, ಇಮಿಟೇಷನ್ ವಜ್ರದ ಬ್ರೋಚ್‌ಗಳು 2. ಜುಮ್ಲಾ 10 ಸೇರಿ ವಾಚ್ ಕ್ರಯ ರೂ. 3-8-0 ಮಾತ್ರವೇ.

ವಿಳಾಸ:— ಎಚ್. ಗಣೇಶನ್ ಅಂಡ್ ಕೊ.
ನಂಬ್ರು 7, 2ನೆ ನಾರಾಯಣ ಬೀದಿ,
ಜೋರ್ಜ ಟೌನ್, ಮದರಾಸು.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.



ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರೆಗೆ ಸೀಮೆಯಿಂದ ತರಿಸಿರುತ್ತೇವೆ.



ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್‌ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ, ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ ರೂ. 3-12-0.
ಗಡಿಯಾರ 1ಕ್ಕೆ ಕ್ರಯ ರೂಪಾಯಿ 3-0-0.
ಪೇನಾ ,, ,, 1-0-0.

ವಿಳಾಸ:— ವೈರಂ ಅಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4.

ಪೋಸ್ಟೇಜ್ ಪ್ರತ್ಯೇಕ.

೫ ವರುಷಗಳು ಗ್ಯಾರಂಟಿ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೦೬ ಇಸ್ವಿಯಲ್ಲಿ ಚಿನ್ನದ ಮೆಡಲ್ ಹೊಂದಿಕೊಂಡ ಪ್ರಸಿದ್ಧವಾದ ಅಮೃತ ಸಂಜೀವಿನಿಗುಳಿಗೆ. 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ 12 ಆಣೆಮಾತ್ರ. ಪೋಸ್ಟುಚಾರ್ಜು 4 ಆಣೆ.

ಈ ಸುಂದರವಾದ ವಾಚ್ ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳ ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ವಾಜಾಗಿಯೂ ಇಂಜಿನ್ ಸ್ವಾಂಪ ಹಾಕಿಯೂ ಇರುವದು.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯರ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಹಿಂಡಿಸುವದು, ಪುತ್ರಸಂತಾನ ಉಂಟಾಗುವದ ನಿಶ್ಚಯ. [illegible] ನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ನಿವಾರಿಸುವದು ಇತ್ಯಾದಿ ಗುಣಗಳು ಇದಕ್ಕಿವೆ ಎಂದು ನಿಜವಾಗಿ ಹೇಳುತ್ತೇವೆ. ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154, ಟಂಕಸಾಲೆ ಬೀದಿ, ಮದರಾಸ್.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೋ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೫ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-[illegible] 1 ಡ್ರಾಮ್ ಟ್ಯೂಬ್ ರೂ 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೋ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0—4—0 ಜಾಸ್ತಿ.

ಪ್ರಾಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.

H. R. MODY & Co.,
10 Princes Street, BOMBAY

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳಂಜ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜು ಆಣೆ [illegible] ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜಟೌನ್ ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕಾಸ್ತ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ಪೋಸ್ಟ್ ಚಾರ್ಜು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್;
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ವಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
[illegible], ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವು. ಮಕ್ಕಳ ಆಟಿಗೆಗೆ ಯೋಗ್ಯವಾದಂಥಾ ೩೬ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮತರಹ ೧ಕ್ಕೆ ರೂ. [illegible]

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿಗೆ ೪ ತೊಲೆ, ದ್ವಿಯಂ ರೂಪಾಯಿಗೆ ೮ ತೊಲೆ, ತೃಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿಗೆ ೧೫ ತೊಲೆ.

ಇದಲ್ಲದೆ ಬೇರೆ ರೇಟ್ಸ್ ಸಾಮಾನುಗಳ ಕ್ಯಾಟಲಾಗನ್ನು ಕೇಳಿದವರಿಗೆ ಇನಾಮಾಗಿ ಕಳುಹಿಸಲಾದೀತು. ಪೋಸ್ಟು ಕಾರ್ಡು ಬೇಕು.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಖಾಂಬಾ, ಕಾಶಿ.

SIROMANI NARAYANA CHARYA & CO,
Choukhamba,
BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore.

ಚಂದಾದಾರಿಯು:— ವರ್ಷ 1ಕ್ಕೆ ರೂ. 1—8—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೨೩ನೇ ಫೆಬ್ರುವರಿ ಶುಕ್ರವಾರ ೧೯೧೭. | ಸಂಚಿಕೆ ೮.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟಡ್. ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Authorised Capital Rs ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital	200,000—0—0	ಆಗತ ಮೂಲ ಧನವು ,,	200,000—0—0
Deposits	336,227—9—4	ಠೇವಣಾತಿಯಾಗಿ ಕೊಡೋಣಾದ ಮೊಬಲುಗುಗಳು	336,227—9—4
Reserve Fund	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/-25% of the net profits are added annually to the Reserve Fund. Rs. 18,485/ have been invested in Government Paper of the face value of Rs.29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮಾಲ್ಕರುಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಧನ್ಯತಾ ಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

Dividends of not less than 6% paid during the past years and a bonus of 1% to 2% paid in addition during the last seven years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½%.respectively at the discretion of the managing committee

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾದಾವು.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡೆಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4⅛%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಬಹುದು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.,
Mangalore, 1st December 1916.

P. Gopal Naik,
Secretary.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಟಿಪ್ ಕವರ್ ಬೈಂಡು 0—8—0
ಚಿಕ್ಕ ಸೈಜು ಕೆಲಿಕೊ ಬೈಂಡು 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ
ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.
1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.
ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ., ದ. ಕನ್ನಡ.

Foot Balls. (BEST QUALITY).
ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಸಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ಧಾರಣೆ ಅಧಿಕವಾಗಿದ್ದರೂ ಜನರ ಸೌಕರ್ಯಕ್ಕೋಸ್ಕರ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ, 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ, ಉಡುಪಿ. | ಪಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ—ಇಂಗ್ಲಿಷ್, ಇಂಗ್ಲಿಷ್—ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವುದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು.

ಈ ವಾರದೇ ತರಿಸಿಕೊಂಡರೆ ರೂ. 1—11—0. ಪೋಸ್ಟೇಜು ಮಾಫಿ.

ವಿಳಾಸ:—ಹೆಚ್. ಎನ್. ರಾವ್ ಬ್ರದರ್ಸ್,
[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾಭರಣ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಪಾರಿತೋಷಿಕ ಪಡೆದಿರುವುದಲ್ಲದೆ ಅನೇಕಾನೇಕ ಸರ್ಟಿಫಿಕೇಟುಗಳನ್ನು ಪಡೆದಿದೆ. ಬಾಟ್ಲಿಗೆ ರೂ. ೧-ಬಾಟ್ಲಿಗೆ ೩ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುವಿಕೆ ಕೀವು ಮುಂತಾದುವನ್ನು ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟುವಿಕೆಯ ದೋಷ ಇವುಗಳನ್ನು ಖಂಡಿತವಾಗಿ ತಪ್ಪದೆ ಗುಣಪಡಿಸುವದು. ರಾತಲಿಗೆ ೩ ರೂ.

೪. ಸೂರಣಾದಿ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೩ ರೂ.

೫. ಪೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ವಿಷಮವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮುಂತಾದ ಪಲ್ಲೀ ಹೊಗುವಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿದ್ದಿದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವಿಲ್ಲದಂತೆಯೂ ಬಹು ಸುಖ ವಿರೇಚಕವು. ತೊಲೆಗೆ ೩ ರೂ.

೮. ಮುಕ್ತಾಪಂಚಾಂಕುಶ ಮಾತ್ರೆ. ಚಳಿಜ್ವರ, ವಿಷಮ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೩ ರೂ.

೯. ವಾಸಾವ ಲೇಹ. ಕೆಮ್ಮು, ಗುಳ್ಮ, ಉಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೩ ರೂ.

೧೦. ಅಶ್ವಗಂಧೀ ಪಾಕ. ಧಾತುಪುಷ್ಟಿ, ವೀರ್ಯವೃದ್ಧಿ ಮಾಡುವದು. ...ಗಳ ಮೂಲಕವಾಗಿ ... ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ.

೧೧. ವಾತಪಮುಂತರಿ ಬಾಮ. ತಲೆ ನೋವು, ಎದೆನೋವು, ಸೊಂಟ ನೋವು, ಉಳುಕು, ಬೀಗು, ವಾತಬಾಧೆಗಳಿಗೂ ಕೂಡಲೆ ... ಬಾಟ್ಲಿಗೆ ... ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ಕುರುಗಳು ... ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನಗಳಲ್ಲಿ ಗೆಲ್ಲುವದು. ... ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸರ್ವೇರಾಂಜನ (ಸುರುಮಾ). ಕಣ್ಣು ನೋವು ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದ ... ಬುದ್ಧಿಮಾಂದ್ಯ ಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ... ಸ್ವರವನ್ನು ಮಧುರವಾಗಿರಿಸುವ ... ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೩ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲದೆ ಅಂಚೆಯ ಹಾಸಲು ಬೇರೆಯಿದೆ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿ ಕೇಳಿದವರಿಗೆ ಉಚಿತ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವವರಾದ ... ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists*. Vepery Post, MADRAS.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರುಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು.
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನಕಟ್ಟೆ ಕೋರ್ಪುಗಳಲ್ಲಿ ದೊರಕುವದು.

STANY BROTHERS
Sole Agents
M. C. C's Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,
ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವ ದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡ ನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co., *Mangalore.*

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತನಗೆ ತಾವೇ ಕೇಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಶಿರಿಯಾ ಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲ್ಲಿದವಾಗಿ ಮತ್ತು ಸೊಗಸಾಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಪುರಗಾಹಿ, ಜಿಲ್ಲಾ ಮುಜಫರಪುರ, ಬರಿಯುವದೇನೆಂದರೆ:—ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನೆಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂತೆ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸಂಬಂಧ ಗುಣಕಾರಕ ಔಷಧವು ಮತ್ತಾವದೂ ಇಲ್ಲವೆಂಬವನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಜೂಲಿಯನ್ ಮಾರ್ಟಿನ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ತರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರವುದು ಮತ್ತು ಘಾಳಿ, ಧೂಳು ಸೇರದಂತೆ ಬಂಧಿಸಿದದ್ದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಪದ ಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಸೈವಪ್ಪ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1. ಜುಮಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3 ಇರುಳಪ್ಪನ ವೀದಿ, ಮದರಾಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್‌ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಭರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುವಾಸಿ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಾಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0-12—0
ಕಾಮಿನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—	
ಉನ್ಮಾದಿನಿ .	0— 6—0
ಅದಲು ಬದಲು ಹುಡುಗಿ (ದ್ವಿತೀಯ ಮುದ್ರಣ)	0— 8—0
ಅಮೃತ ಪುಳಿನ ,,	0—10—0
ಇಂದಿರಾ ಕ್ಕ. ಮು. ,,	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್‌ಸ್ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
[illegible]	0— 4—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—12—0
ಪ್ರಫುಲ್ಲ	0— 1—6
ಅಂಬಾಲಿಕೆ (ಹೊಸ ನಾವೆಲ್)	0— 1—0
ಕುಸುಮ ,,	0— 2—0
ರಾಧಾನಾಥ ,,	0— 6—0
ಸುಧಾಕರ ,,	0— 1—0
ಚಂದ್ರಹಾಸ (ಹೊಸ ಕಥೆ)	0— 2—0
ಪ್ರಭಾ	0—12—0
ಶಾಲಾಶಿಕ್ಷಣ (School Discipline)	0—14—0
ಪುಷ್ಪರಚನೆ (Flower Making)	1— 0—0
ಕನ್ನಡ ಅಕ್ಷರ ಮಂಜರಿ	1— 4—0
ಸಂಗೀತ ಸಮಾಚಾರ	1— 4—0
ಪಾತ್ರಚರಿತ್ರೆ (ಶ್ರೀ ಶಂಕರಮಠ)	1— 2—0
ಶಿಕ್ಷಣ ,,	0—10—0
ಚಂದ್ರಶೇಖರ	
ಶ್ರೀಕೃಷ್ಣ ಚಿತ್ರಮಾಲೆ, ಹೊಸ ಮಾದರಿ, ಸೈಜು 18×28 ಕ್ಕೆ	0— 1—0

ಯೂರೋಪದ ಮಹಾ ಯುದ್ಧ.

ಯಾವದಾದರೂ ಒಂದು ಹೊಸ ಕೆಲಸವನ್ನು ತೊಡಗುವಾಗ ಅದು ಪ್ರಥಮದಲ್ಲಿ ಕಾರ್ಯಸಿದ್ಧಿಹೊಂದುವಂತೆ ತೋರುವದು ಸಹಜವೇ. ಜರ್ಮನರ ಜಲಯಾನಗಳ ಹೊಸ ತರ್ಜನೆಯ ಪರಿಣಾಮವೂ ಇದೇ ರೀತಿಯಾಗಿದೆ. ಫೆಬ್ರುವರಿ ತಿಂಗಳ ಪ್ರಥಮದ ಎರಡು ವಾರಗಳಲ್ಲಿ ಈ ಜಲಯಾನಗಳು ತಕ್ಕಷ್ಟು ಹಡಗಗಳನ್ನು ಮುಳುಗಿಸಿದವು. ಹೀಗೆಯೇ ಕೆಲವು ತಿಂಗಳ ವರೆಗೆ ಜಲಯಾನಗಳಿಂದ ಹಡಗ ನಷ್ಟವಾಗುವದಾದರೆ ಬ್ರಿಟಿಷರಿಗೆ ಆಹಾರ ಸಂಗ್ರಹದ ತೊಡಕೂ ಇತರ ಮಿತ್ರರಾಷ್ಟ್ರಗಳ ರಣರಂಗಗಳಿಗೆ ಸೇನಾ ಸೌಕರ್ಯಗಳ ತೊಡಕೂ ಬರಬಹುದು. ಯಾಕಂದರೆ ಮಿತ್ರರಾಷ್ಟ್ರಗಳವರ ಹೆಚ್ಚುಕಡಿಮೆ ಎಲ್ಲಾ ಯುದ್ಧ ಸೌಕರ್ಯಗಳ ಸಾಗುವಿಕೆಯು ಸಮುದ್ರ ಮೂಲಕವೇ ನಡೆಯುತ್ತದೆ. ರುಶ್ಯಾ ಮತ್ತು ರುಮೇನಿಯಕ್ಕೆ ಬ್ರಿಟಿಷರು ಮದ್ದುಗುಂಡುಗಳನ್ನು ಕಳುಹಿಸಿಕೊಡಬೇಕಾಗಿದೆ. ಸಲೋನಿಕದಲ್ಲಿರುವ ಮಿತ್ರ ಸೇನಿಕರ ಸೌಕರ್ಯವು ಸಮುದ್ರ ಮೂಲಕವೇ ಆಗಬೇಕಾಗಿದೆ. ಬ್ರಿಟಿಷರು ಅಮೇರಿಕದಿಂದ ಬರುವ ಆಯಾ ಸಾಹಿತ್ಯಗಳ ಮೇಲೆ ಆದರಿಸಿಕೊಂಡಿರುವರು. ಮತ್ತೊಂದು ಕಡೆಯಲ್ಲಿ ಬ್ರಿಟಿಷರು ಫ್ರಾನ್ಸ್ ಮತ್ತು ಇಟಲಿಗೆ ಈ ಸಮುದ್ರ ಮೂಲಕವೇ ಕಲ್ಲಿದ್ದಲನ್ನು ಒದಗಿಸಬೇಕು. ಇವೆಲ್ಲಾ ಕಾರಣಗಳನ್ನು ನೋಡಿಯೇ ಜರ್ಮನಿಯು ಈ ಜಲಯಾನಗಳ ವರ್ತನೆಯನ್ನು ಅವಲಂಬಿಸಿಯದೆ. ಆದರೆ ಜರ್ಮನರ ಈ ತರ್ಜನೆಯು ಹೇಗೆ ಕೊನೆಗಾಣುವದೆಂಬದನ್ನು ಮಾತ್ರ ನೋಡಲಿಕ್ಕಿದೆ. ಈ ಕೊನೆಯ ಉದ್ದೇಶವನ್ನು ಸಾಧಿಸಿಕೊಳ್ಳುವದಕ್ಕಾಗಿ ಜರ್ಮನಿಯು ಸುಮಾರು ೧೧೦೦ ಜಲಯಾನಗಳನ್ನು ತಯಾರಿಸಿರುವರು ವ ತಯಾರಿಸುತ್ತಿದ್ದಾರೆಂಬ ವಾರ್ತೆ ಇದೆ. ಇದರ ಸತ್ಯಾಸತ್ಯ ಹ್ಯಾಗೂ ಇರಲಿ; ಜರ್ಮನಿಯು ಮಿತ್ರರಾಷ್ಟ್ರಗಳವರನ್ನು ಕೆಲವು ತಿಂಗಳೊಳಗೆ ಬಗ್ಗಿಸಬೇಕೆಂಬ ಉದ್ದಿಷ್ಟಹೇತುಗಳಿಂದ ಈ ಜಲಯಾನಗಳನ್ನು ತಯಾರಿಸಿರುವದೆಂಬದು ನಿಜ. ಆದರೆ ಬ್ರಿಟಿಷರೂ ಸುಮ್ಮನಿಲ್ಲ. ಜರ್ಮನರ ಜಲಯಾನಗಳನ್ನು ದಂಡಿಸುವರೆ ಅವರು ತಕ್ಕ ಕಾರ್ಯಸಾಧನೆಗಳನ್ನು ಮಾಡಿಯೇ ಇರುವರು. ಕಳೆದ ಒಂದು ಪಕ್ಷದಲ್ಲಿ ಜರ್ಮನರಿಗೆ ಆದ ಜಲಯಾನಗಳ ನಷ್ಟವು ವಿಶೇಷವಾಗಿದೆಂಬ ವಾರ್ತೆಯು ಈಗತಾನೇ ಬಂದಿರುವದು. ಬ್ರಿಟಿಷರ ಈ ಪ್ರಯತ್ನವು ಸಫಲಹೊಂದುತ್ತಿದೆಂಬದಕ್ಕೆ ಇದೇ ದೃಷ್ಟಾಂತವಾಗಿದೆ; ಅಷ್ಟೇ ಅಲ್ಲ. ಈ ಜಲಯಾನಗಳಿಂದ ಉಂಟಾಗುತ್ತಿದ್ದ ಹಡಗ ನಷ್ಟವೂ ಈಗ ಕಡಿಮೆಯಾದಂತೆ ತೋರುತ್ತದೆ. ಆದಕಾರಣ ಜರ್ಮನರ ತರ್ಜನೆಗರ್ಜನೆಗಳಿಗೆ ಯಾರೂ ಹೆದರುವ ಹಾಗಿಲ್ಲ.

ಪಶ್ಚಿಮರಣರಂಗ.

ಈ ರಣರಂಗದಲ್ಲಿ ಮಿತ್ರರು ಈ ಬೇಸಿಗೆಕಾಲದಲ್ಲಿ ನುಗ್ಗಿಹೋಗಿ ಕಡಾಕಡಿಯ ಕದನ ಪ್ರಾರಂಭಿಸುವ ಮೊದಲೇ ಜಲಯಾನಗಳಿಂದ ಮಿತ್ರರ ಬಲವನ್ನು ಮುರಿಯಬೇಕೆಂದು ಯೋಚಿಸಿದ ಜರ್ಮನರ ಕಲ್ಪನೆಯು ಈ ರಣರಂಗದಲ್ಲಿ ಫಲದಾಯಕವಾಗುವ ಹಾಗೆ ತೋರುವದಿಲ್ಲ. ಯಾಕಂದರೆ ಬ್ರಿಟಿಷರು ಈಗಲೇ ಈ ರಣರಂಗದಲ್ಲಿ ನುಗ್ಗಿಹೋಗಿ ಹಲವು ಕಡೆಗಳಲ್ಲಿ ಸಣ್ಣಪುಟ್ಟಜಯಗಳನ್ನು ಸುಲಭವಾಗಿ ಅಂದರೆ ಹೆಚ್ಚಿನ ನಷ್ಟಪಡದೆ ಜಯಹೊಂದಿ ಶತ್ರುಗಳು ರಣರಂಗದ ಒಂದಂಶವನ್ನೇ ಬಿಟ್ಟು ಸರಿಯುವ ಹಾಗೆ ಮಾಡಿರುವರು. ಲೂಸ್, ಯ್ಪ್ರೆಸ್, ಬೋಸೆಜ್ ಮೊದಲಾದ ಸ್ಥಳಗಳಲ್ಲಿ ಬ್ರಿಟಿಷರು ಮೇಳ್ಮಾಯದ ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿ ಅವರನ್ನು ಹಿಂದಕ್ಕೆ ಅಟ್ಟಿರುತ್ತಾರೆ. ಎಂಕ್ರೆ ನದಿಯ ಎರಡು ದಡಗಳಲ್ಲಿಯೂ ಬ್ರಿಟಿಷರಿಗೆ ಮಹತ್ವದ ಜಯ ಉಂಟಾಗಿದೆ. ನದಿಯ ದಕ್ಷಿಣ ಕಡೆಯಲ್ಲಿ ಬ್ರಿಟಿಷರು ದಾಳಿ ಮಾಡಿ ಮಿರಾಮೊಂಟು ಮತ್ತು ಪೆಟಿಟ್ ಮಿರಾಮೊಂಟ್ ಗ್ರಾಮಗಳ ಎದುರು ಭಾಗದಲ್ಲಿ ಒಂದೂವರೆ ಮೈಲು ವಿಸ್ತೀರ್ಣದ ಸ್ಥಳವನ್ನು ಸ್ವಾಧೀನಮಾಡಿಕೊಂಡಿರುವರು. ನದಿಯ ಉತ್ತರ ಕಡೆಯಲ್ಲಿಯೂ ಬ್ರಿಟಿಷರಿಗೆ ಒಂದು ಪ್ರಮುಖವಾದ ನೆಲೆಯು ದೊರಕಿರುತ್ತದೆ. ಶತ್ರುಗಳಿಗೆ ವಿಶೇಷ ನಷ್ಟ ಉಂಟಾಗಿರುವದು ೭೬೮ ಮಂದಿ ಶತ್ರುಸೇನಿಕರು ಸೆರೆಬಿದ್ದಿರುವರು. ನ್ಯೂಚಿಪೆಲ್ಲೆಯಲ್ಲಿ ಮತ್ತು ವ್ಹೈಟ್ ಸೈಂಟ್ ಎಂಬಲ್ಲಿ ಬ್ರಿಟಿಷರು ದಾಳಿ ಮಾಡಿ ಜರ್ಮನರ ೨ನೇ ಸೇನಾಸಾಲಿಗೆ ತಲುಪಿರುವರು. ಹೀಗೆ ಬ್ರಿಟಿಷರಿಗೆ ಈ ರಣರಂಗದಲ್ಲಿ ಜಯದ ಮೇಲೆ ಜಯವಾಗುತ್ತಿದೆ.

ಮೆಸೊಪೊಟಾಮಿಯ.

ಪಶ್ಚಿಮ ರಣರಂಗವೇ ಈಗ ಪ್ರಾಮುಖ್ಯ ರಣರಂಗವಾಗಿ ಪರಿಣಮಿಸಿಯದಾದರೂ ರುಶ್ಯಾ, ಇಟಲಿ ರಣರಂಗದಲ್ಲಿಯೂ ತೀಕ್ಷ್ಣತೆಯಿಂದ ಕಾಳಗಗಳು ನಡೆಯುತ್ತಲೇ ಇವೆ. ಆದರೆ ಹೆಚ್ಚಿನ ವರ್ತಮಾನಗಳು ಈ ರಣರಂಗದಿಂದ ಬಂದಿರುವದಿಲ್ಲ. ಹೀಗೆ ಈ ರಣರಂಗಗಳನ್ನು ಬಿಟ್ಟರೆ ಈಗ ಮಹತ್ವವನ್ನು ಕೊಡಬೇಕಾದ ಮತ್ತೊಂದ ರಣರಂಗವು ಮೆಸೊಪೊಟಾಮಿಯವಾಗಿದೆ. ಈ ರಣರಂಗದಲ್ಲಿ ಬ್ರಿಟಿಷರು ನುಗ್ಗಿ ಹೋಗುತ್ತಲಿದ್ದಾರೆ. ೧೯೧೬ನೇ ಇಸವಿಯಲ್ಲಿ ಈ ರಣರಂಗವು ಬ್ರಿಟಿಷರಿಗೆ ಸಾನುಕೂಲವಾಗಿರಲಿಲ್ಲ. ಆ ಸಮಯದಲ್ಲಿ ಕುಟೇಲ್ ಅಮಾರದಲ್ಲಿ ಬ್ರಿಟಿಷರಿಗೆ ಆದ ಅಪಜಯದ ನಂತರ ಬ್ರಿಟಿಷರು ಈಗಿನವರೆಗೆ ಸೇನಾಸೌಕರ್ಯಗಳನ್ನು ಮಾಡಿಕೊಂಡು ಬೇಕಾದ ದಾರಿಗಳನ್ನು ಆದಷ್ಟು ಸ್ಥೈರ್ಯದಲ್ಲಿ ಸಿದ್ಧಮಾಡಿ ಈಗ ಶತ್ರುಗಳ ಮೇಲೆ ಬಿದ್ದು ಕುಟೇಲ್ ಅಮಾರಕ್ಕೆ ಪಶ್ಚಿಮ ಕಡೆಗೆ ತಲಪಿ ಶತ್ರುಗಳ ಹಿಂದಿನ ಭಾಗವನ್ನು ಹೆದರಿಸ ಪ್ರಾರಂಭಿಸಿದ್ದಾರೆ. ಎರಡು ಪಕ್ಷದ ಸೇನೆಗಳಿಗೂ ನದಿಯ ಸಾಹಾಯ್ಯ ಬೇಕಾಗಿದೆ. ಶತ್ರುಗಳು ತಮ್ಮ ಸೇನಾಸೌಕರ್ಯದ ಬಗ್ಗೆ ಈ ನದಿಯ ಮೇಲೆಯೇ ಆದರಿಸಿರುವರು. ಬ್ರಿಟಿಷರು ಕುಟೇಲ್ ಮತ್ತು ಸಿನ್ನಾಯಿತಿನ ಮೇಲಿನ ನದಿಯನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿದ್ದಾರೆ. ಹೀಗೆ ಎರಡು ವಿಷಯಗಳನ್ನು ನೋಡುವದಾದರೆ ಶತ್ರುಗಳು ತಮ್ಮ ಸೇನೆಯನ್ನು ಉಳಿಸಬೇಕಾದರೆ ಹಿಂದೆ ಸರಿಯಬೇಕು. ಇಲ್ಲವೆ ಈಗ ಬ್ರಿಟಿಷರ ಕೈಸೇರಿರುವ ನೆಲೆಗಳನ್ನು ಹಿಂದೆ ಪಡೆಕೊಳ್ಳಲು ಬದ್ಧಕಂಕಣರಾಗಬೇಕು. ಈ ರಣರಂಗದಿಂದ ಕಡೆಗೆ ಬಂದ ವಾರ್ತೆಯಿಂದ ತಿಗ್ರಿಸಿನಲ್ಲಿದ್ದ ಶತ್ರುಗಳು ಬ್ರಿಟಿಷರಿಗೆ ಶರಣಾಗತರಾಗಿರುವರು ಎಂತ ತಿಳಿದು ಬರುತ್ತದೆ. ಬ್ರಿಟಿಷರು ಡೇರ್ಲ್ಲಿ ಬಂದಲ್ಲಿ ಜಯಪ್ರದರಾಗಿ ಶತ್ರುಗಳನ್ನು ಅಲ್ಲಿಂದ ಅಟ್ಟಿಬಿಟ್ಟಿರುತ್ತಾರೆ. ೨೦೦೦ ಶತ್ರುಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ಹಾಯಿಯಿಂದ ತುರ್ಕರು ಹಿಂದೆ ಸರಿದಿರುವರು. ಬ್ರಿಟಿಷರು ೬೦೦೦ ಗಜ ವಿಸ್ತೀರ್ಣದ ಕಂದಕಗಳನ್ನು ಗೆದ್ದುಕೊಂಡಿರುತ್ತಾರೆ. ಈ ಎಲ್ಲಾ ವಾರ್ತೆಗಳನ್ನು ನೋಡುವಾಗ ಬ್ರಿಟಿಷರು ಈ ರಣರಂಗದಲ್ಲಿ ಸಧ್ಯದಲ್ಲೇ ಜಯಪತಾಕೆಯನ್ನು ಹಿಡಿಯುವದರಲ್ಲಿ ಸಂದೇಹವಿಲ್ಲ ಎಂತ ಹೇಳಲಡ್ಡಿಯಾಗದು.

ವಿದೇಶ ವೃತ್ತಾಂತ.

ಜರ್ಮನರಿಗೆ ಈ ವರೆಗೆ ಯುದ್ಧದ ಬಗ್ಗೆ ೩೦೦೦ ಮಿಲಿಯ ಪವನುಗಳ ಖರ್ಚಾಗಿರುತ್ತದೆ.

ಜರ್ಮನರ ಜಲಯಾನಗಳ ವರ್ತನದಿಂದ ಫ್ರಾನ್ಸಿಗೆ ಈ ವರೆಗೆ ಹೆಚ್ಚಿನ ತೊಂದರೆಯಾಗಲಿಲ್ಲ. ಎಲ್ಲಾ ಬಂದರಗಳಿಗೂ ಹಡಗಗಳು ಕ್ರಮವಾಗಿ ಬರುತ್ತವೆ. ತಾ. ೧೫ರಲ್ಲು ೧೨೧ ಹಡಗಗಳು ಫ್ರಾನ್ಸ ಬಂದರಕ್ಕೆ ಬಂದಿರುವವು.

ರಾಜಧಾನಿ ಮತ್ತು [illegible] ಜನರು ಯುದ್ಧದ ಬಗ್ಗೆ ಕೊಟ್ಟ ೮ ಯುದ್ಧಾಂತಿಕ ಕಿರಂಗಿಗಳನ್ನು ತಾ. ೧೯ರಲ್ಲು [illegible] ನೋಡಿ ಸಂತೋಷಪಟ್ಟರು.

ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ [illegible] ಪ್ರಭುಗಳು, ಜರ್ಮನರ ಜಲಯಾನಗಳ ಹಾವಳಿಯು ಪ್ರಾರಂಭವಾಗಿ ೧೫ ದಿವಸಗಳು [illegible]. ಆದರೆ ಅವರ ಹಾವಳಿಯಿಂದ [illegible]

ಗಳು ಹಿಂದೆ ತಮ್ಮ ಕರಾವಳಿಗೆ ಸೇರದಂತೆ ತಕ್ಕ ಉಪಾಯಗಳು ಮಾಡಲ್ಪಟ್ಟವೆಂದು ಹೇಳಿರುತ್ತಾರೆ.

ಯುದ್ಧಕಾಲ ಬ್ರಿಟಿಷರ ೮ ಮಿಲಿಯ ಟನ್ ಭರಾವಣೆಯ ಹಡಗಗಳು ಮುಳುಗಿ ಹೋದವು. ಅದರ ಬದಲಾಗಿ ೬ ಮಿಲಿಯ ಟನ್ ಭರಾವಣೆಯ ಹೊಸ ಹಡಗಗಳು ಮಾಡಲ್ಪಟ್ಟವೆ. ಹೆದರಿಕೊಳ್ಳಲು ಯಾವ ಕಾರಣವೂ ಇಲ್ಲ. ನಾವು ಈ ತನಕ ಈ ಸಂದರ್ಭದಲ್ಲಿ ಒಳ್ಳೇ ಕಾರ್ಯಸಾಧನೆಗಳನ್ನು ಮಾಡಿದ್ದೇವೆ. ಇನ್ನು ನಮಗೆ ವಿಶೇಷ ದುಷ್ಕಾಲವನ್ನು ಎದುರಾಯಿಸಲಿಕ್ಕಿದ್ದರೂ ಮತ್ತಷ್ಟು ಒಳ್ಳೇ ಸಾಧನೆಗಳನ್ನು ಮಾಡಬಲ್ಲೆವು. ಜಲಯಾನಗಳನ್ನು ಬೇಗನೇ ಹುಟ್ಟಡಗಿಸುವ ವಿಚಾರಗಳು ನಡೆಯುತ್ತಲಿವೆ. ಸಮುದ್ರದಿಂದ ಈಗತಾನೇ ಬಂದ ನಾಕಾವಳಿ ಸೇನಿಕರು ಈ ಸಂದರ್ಭದಲ್ಲಿ ಹೊಸ ಹೊಸ ಆಲೋಚನೆಗಳನ್ನು ಸರಕಾರಕ್ಕೆ ಕೊಡುತ್ತಿದ್ದಾರೆ. ೬ ವಾರದೊಳಗೆ ಈ ಜಲಯಾನಗಳ ವರ್ತನೆಯನ್ನು ನಿಲ್ಲಿಸಬಹುದು ಎಂಬದಾಗಿ ಬೆರೆಸ್ ಫೋರ್ಡ್ ಪ್ರಭುಗಳು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ.

ಇಂಗ್ಲಾಂಡಿನ ಯೊರ್ಕಶಯರಿನ ಮದ್ದು ಗುಂಡು ಕಾರ್ಖಾನೆಯಲ್ಲಿ ಸಿಡಿತ ಉಂಟಾಗಿರುವದು. ಎಲ್ಲಾ ಕೆಲಸಗಾರರು ತಪ್ಪಿಸಿಕೊಂಡಿರುವರು. ಸ್ವಲ್ಪ ಅರ್ಥನಷ್ಟ ಮಾತ್ರ ಆಗಿದೆ.

ಜರ್ಮನಿಯ ಹಂಬರ್ಗಿನ ಸಮೀಪದ ಮದ್ದುಗುಂಡ ಕಾರ್ಖಾನೆಯಲ್ಲಿ ಭಯಂಕರ ಸ್ಫೋಟನ ಉಂಟಾಗಿ ೩ ಕಾರ್ಖಾನೆಗಳು ನಾಶವಾಗಿರುವವು, ೬೩ ಮಂದಿ ಹತರಾಗಿರುವರು, ೬೩ ಮಂದಿ ಗಾಯಪಟ್ಟಿರುವರು.

ಉತ್ತರ ಹಿಂದೂಸ್ಥಾನ

ಫೆಬ್ರುವರಿ ತಾ. ೧೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ೧೬,೩೧೪ ಮಂದಿಗೆ ಪ್ಲೇಗ ಬೇನೆಯು ತೋರಿತು ೧೩,೮೩೩ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಮತ್ತು ಸಿಂಧ್ ೪,೧೪೬; ಮದ್ರಾಸ್ ೩೪೩ ಬಿಹಾರ್ ಮತ್ತು ಒರಿಸ್ಸ ೧೦೫೮; ಸಂಯುಕ್ತ ಸಂಸ್ಥಾನ ೩೫೮೩, ಪಂಜಾಬ ೬೦; ಬರ್ಮ ೨೪೬; ಮಧ್ಯಸಂಸ್ಥಾನಗಳ ೧೪೦೮; ಮೈಸೂರು ೨೪೩; ಹೈದರಾಬಾದ್ ೧೪೧೧; ಮಧ್ಯ ಹಿಂದೂಸ್ಥಾನ ೧೦೯; ರಜಪೂತಾನ ೬೦, ಕಾಶ್ಮೀರ [illegible] ಮರಣಗಳಾಗಿರುವವು.

ಲೋಕಮಾನ್ಯ ತಿಲಕರನ್ನು ಪಂಜಾಬು ಸಂಸ್ಥಾನದೊಳಗೆ ಬರಕೂಡದೆಂತ ಪಂಜಾಬು ಸರಕಾರದವರು ಕಟ್ಟುಮಾಡಿದ್ದಾರೆಂಬ ವಾರ್ತೆ ಬಂದಿರುತ್ತದೆ. ತಿಲಕರು ಈ ಸಂಸ್ಥಾನಕ್ಕೆ ಬರುವದರಿಂದ ಲೋಕಹಿತಕ್ಕೆ ಹಾನಿ ಸಂಭವಿಸೀತೆಂದು ಪಂಜಾಬು ಸರಕಾರದವರು ನಂಬಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಸದ್ರಿ ಸರಕಾರದವರು ಈ ಹುಕುಮನ್ನು ಮಾಡಿದ್ದಾಗಿರುತ್ತದೆ. ಮಾನ್ಯ ತಿಲಕರು ಇದೇ ಬಂಗಾಳವನ್ನೂ ಸಂಯುಕ್ತ ಸಂಸ್ಥಾನಗಳನ್ನೂ ಸಂದರ್ಶಿಸಿದ್ದರು. ಆದರೆ ಆ ಸರಕಾರದವರು ತಿಲಕರ ಮೇಲೆ ಯಾವ ದೋಷಾರೋಪಣೆಯನ್ನೂ ಮಾಡಿದ್ದಿಲ್ಲ ಅದಲ್ಲದೆ ತಿಲಕರವರು ಪಂಜಾಬನ್ನು ಸಂದರ್ಶಿಸುವ ಹಾಗೆಯೂ ಇರಲಿಲ್ಲವಂತೆ ಹೀಗಿರುವಾಗ ಪಂಜಾಬು ಸರಕಾರದವರು ಈ ನಿಷೇಧ ಆಜ್ಞೆಯನ್ನು ಯಾಕೆ ಮಾಡಿದರೋ ತಿಳಿಯದು.

ಇದೇಗೆ ಮುಂಬಾಯಿಯ ನಿರಾಶ್ರಿತರು ಒಟ್ಟಿಗೆ ಸೇರಿ ಮುಂಬಾಯಿ ಪಟ್ಟಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಡ್ಡಾಯವಾಗಿಯೂ ಉಚಿತವಾಗಿಯೂ ಕೊಡಿಸಬೇಕೆಂತ ಮುಂಬಾಯಿ ಮುನ್ಸಿಪಾಲಿಟಿಯವರನ್ನು ಕೇಳಿಕೊಂಡಿದ್ದರೆಂದು ತಿಳಿಸಿದ್ದೆವಷ್ಟೆ. ಈಗ ಪುನಃ ಮುಂಬಾಯಿಯ ಗಾಡಿಗಾರರು ಮತ್ತು ಇತರ ಕೆಲಸಗಾರರು ಸಭೆ ಕೂಡಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿಯೂ ಉಚಿತವಾಗಿಯೂ ಮಾಡಬೇಕೆಂಬದಾಗಿ ಮುನ್ಸಿಪಾಲಿಟಿಯವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯ ಮಾಡಿಕೊಂಡಿರುತ್ತಾರೆ. ಅದಲ್ಲದೆ ಪ್ರಾಯಸ್ಥರಿಗೆ ರಾತ್ರಿ ಶಾಲೆಗಳನ್ನು ತೆರೆಯುವ ಏರ್ಪಾಡು ಮಾಡಬೇಕೆಂತಲೂ ಮುನ್ಸಿಪಾಲಿಟಿಯವರನ್ನು ಕೇಳಿಕೊಂಡಿರುತ್ತಾರೆ.

ಹಿಂದೀಗಳನ್ನು ಸೇನೆಗೆ ಸೇರಿಸಿಕೊಳ್ಳುವರೆ ತಕ್ಕ ಏರ್ಪಾಡು ಮಾಡಲ್ಪಡುವದೆಂದು ವೈಸರಾಯಿ ಪ್ರಭುಗಳು ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಹೇಳಿದ್ದಂದಿನಿಂದ ಹಿಂದೂಸ್ಥಾನದಲ್ಲೆಲ್ಲಾ ಈ ವಿಧಾನದಲ್ಲಿ ಸಂತೃಪ್ತಿ ಉಂಟಾಗಿರುವದು. ಮುಂಬಾಯಿ ಸಂಸ್ಥಾನದಲ್ಲಿ ಸಂತೋಷವನ್ನು ಪ್ರದರ್ಶಿಸುವರೆ ಸಾರ್ವಜನಿಕ ಸಭೆಗಳು ಕೂಡುತ್ತಲಿವೆ. ಮುಂಬಾಯಿಯ ಪಟ್ಟಣ ಸಭಾಸದನದಲ್ಲಿ ಈ ಸಂಬಂಧ ಕೂಡಿದ ಒಂದು ಮಹಾ ಸಭೆಯಲ್ಲಿ ಹಿಂದೀಗಳಿಗೆ ಆದ ಸಂತೋಷವನ್ನು ಪ್ರದರ್ಶಿಸುವ ಮತ್ತು ಸೇನೆಗೆ ಸೇರಿಕೊಳ್ಳುವ ಹಿಂದೀಗಳನ್ನು ಪಂಕ್ತಿಭೇದವಿಲ್ಲದೆ ಯುರೋಪಿಯಾನರಂತೆಯೇ ನಡಿಸಬೇಕೆಂಬದಾಗಿ ಸೂಚಿಸುವ ಮಸೂದೆಗಳು ಆಗಿರುವವು. ಅದಲ್ಲದೆ ಇದೇ ಸಭೆಯಲ್ಲಿ ಗೆಯ್ಮೆ ಕರಾರು ಪದ್ಧತಿಯನ್ನು ಯಾವ ಷರ್ತಗಳೂ ಇಲ್ಲದೆ ಕೂಡಲೇ ನಿಲ್ಲಿಸಬೇಕೆಂಬ ಮಸೂದೆಯನ್ನು ಸರ್ ದಿನ್ಶಾ ಪೆಟಿಟರವರು ತಂದಿರುತ್ತಾರೆ.

ಶಾಲಾ ವಿದ್ಯಾರ್ಥಿಗಳು ರಾಜಕೀಯ ಸಂಬಂಧವಾದ ಸಭೆಗಳಿಗೆ ಹೋಗಕೂಡದೆಂಬದಾಗಿ ನಾಗಪುರದ ಚೀಫ್ ಕಮಿಷನರು ಕೊಟ್ಟ ಹುಕುಮನ್ನು ಜಾರಿಗೆ ತರುವದರ ಸಂಬಂಧ ಆಲೋಚಿಸುವರೆ ಅಫೀಸರರು ಮತ್ತು ನೋನ್ ಅಫೀಸರರು ಕೂಡಿದ ಒಂದು ಕಮಿಟಿಯು ನೇಮಕವಾಗಿತ್ತು. ಈ ಕಮಿಟಿಯವರು ತಾ. ೧೩ರಲ್ಲಿ ನಾಗಪುರದ ಪಟ್ಟಣ ಸದನದಲ್ಲಿ ಕೂಡಿ ಬಂದರು. ಶಾಲೆಗಳ ಇನ್ಸ್‌ಪೆಕ್ಟರರಾದ ಮಿ| ಸ್ಪೇಟಿಯವರು ಈ ಸಭೆಯಲ್ಲಿ ಮಾತಾಡುತ್ತಾ ವಿದ್ಯಾರ್ಥಿಗಳ ಶೀಲವನ್ನು ವಿಕಾಸಗೊಳಿಸುವರೆ ಪ್ರಯತ್ನಿಸುವದೇ ಶಾಲೆಗಳ ಪ್ರಾಥಮಿಕ ಉದ್ದೇಶ. ಇದು ಶಾಲೆಯ ನಿಶ್ಚಿತ ಕ್ರಮ (discipline) ದ ಮೇಲೆ ಹೊಂದಿಕೊಂಡಿರುತ್ತದೆ ಎಂದು ಹೇಳಿ ತೋರಿಸಿದರು. ಚೀಫ್ ಕಮಿಷನರು, ಶಾಲೆಯ ಯಾವ ಹುಡುಗನಾದರೂ ಹೆಡ್ ಮಾಸ್ತರರ ಅಪ್ಪಣೆ ಇಲ್ಲದೆ ಮುಂದಕ್ಕೆ ಯಾವ ಸಾರ್ವಜನಿಕ ಸಭೆಗಳಿಗಾದರೂ ಹೋಗದ ಹಾಗೆ ಕಟ್ಟು ಮಾಡಬೇಕು, ಇದಕ್ಕೆ ತಪ್ಪಿ ನಡೆಯುವದೆಂದರೆ ಶಾಲೆಯ ನಿಶ್ಚಿತ ಕ್ರಮಕ್ಕೆ ವಿರೋಧವಾಗಿ ನಡೆದ ದೊಡ್ಡ ತಪ್ಪೆಂದು ಭಾವಿಸಬೇಕು, ಮತ್ತು ಈ ಸಂದರ್ಭದಲ್ಲಿ ಅವಿಧೇಯನಾಗಿ ನಡಿಯುವಂಥವನನ್ನು ಕಂಡು ಹಿಡಿಯುವರೆ ಹೆಡ್ ಮಾಸ್ತರನು ತಕ್ಕ ಪ್ರಯತ್ನಮಾಡಬೇಕೆಂತ ಸಭೆಯಲ್ಲಿ ವಾದಿಸಿದರು. ನೋನ್ ಅಫೀಶಿಯಲ್ ಮೆಂಬರರು ಇಂಥಾ ಯಾವ ಕಟ್ಟನ್ನು ಮಾಡಕೂಡದೆಂತಲೂ ಮುಖ್ಯವಾಗಿ ಶಾಲಾ ಉಪಾಧ್ಯಾಯರನ್ನು ಈ ಸಂದರ್ಭಗಳಲ್ಲಿ ಗೂಢಚಾರರಾಗಿ ನೇಮಿಸಕೂಡದೆಂತಲೂ ವಾದಿಸಿದರು. ಕಡೆಗೆ ಕಮಿಟಿಯವರ ಅಭಿಪ್ರಾಯಗಳನ್ನು ಮೇಲಾಧಿಕಾರಿಗಳಿಗೆ ಬರಕೊಳ್ಳಬೇಕೆಂಬ ನಿರ್ಣಯವಾಗಿ ಸಭೆಯ ಚರ್ಚೆಗಳಿಗೆ ಅಂತ್ಯವಾಯಿತು.

ಸುಕ್ಕೂರಿನ ರೈಲ್ವೆವರ್ಕ್ಸ್ ಶಾಪಿನ ಕೆಲಸಗಾರರ ಹಾಲಹವಾಲೆಗಳಿಗೆ ರೈಲ್ವೇ ಅಧಿಕಾರಿಗಳು ಕಿವಿಗೊಡದ್ದರಿಂದ ಕೆಲಸಗಾರರಲ್ಲಿ ಹೆಚ್ಚಿನವರು ಮುಷ್ಕರ ಹೂಡಿದರು. ಅನಂತರ ಅಧಿಕಾರಿಗಳು ಕೆಲಸಗಾರರು ಹೇಳಿಕೊಂಡ ಕಷ್ಟಗಳನ್ನು ನಿವಾರಣೆ ಮಾಡುವೆವೆಂದು ಹೇಳಿದ್ದರಿಂದ ಕೆಲಸಗಾರರು ಪುನಃ ಕೆಲಸ ತೊಡಗಿದ್ದಾರೆಂಬ ವಾರ್ತೆ ಬಂದಿದೆ.

ಗೋಖಲೆಯವರ ಜಾರ್ಗಕೋಶ್ಯದ ಸಂಬಂಧ ದೇಶದ ಫಳಿಗೆಯನ್ನು ಸಾಧಿಸುವ ಯಾವದಾದರೊಂದು ಕೆಲಸವನ್ನು ಕಾರ್ಯತಃ ಮಾಡುವದು ಉಚಿತವೆಂತ ಮಾನ್ಯ ಗಾಂಧಿಯವರು [illegible] ಅಭಿಪ್ರಾಯಪಟ್ಟಿದ್ದಾರೆ ಮಾಡಿದ್ದರೆ [illegible] ಈ ಸಂದರ್ಭದಲ್ಲಿ ಗೋಖಲೆಯವರ ಭಾಷಣಗಳನ್ನು ಗುಜರಾತಿಗೆ ಭಾಷಾಂತರಿಸಿ ಪ್ರಕಟಿಸುವ ಕಾರ್ಯವನ್ನು ಕೈಕೊಂಡಿರುವರು. ಇತರ [illegible]

ಭಾಷಾಂತರಿಸಿ ಪ್ರಕಟಿಸುವರೆ ವೆಚ್ಚಗೆ ಎತ್ತಿ ಈ ಕಾರ್ಯವನ್ನು ಸಾಧಿಸಬೇಕೆಂತಲೂ ದೇಶದ ಎಲ್ಲಾ ಭಾಗಗಳಲ್ಲಿ ವರ್ಷಕ್ಕೆ ನೂರಾರು ಸಭೆಗಳು ಕೂಡಿ ಈ ವಿಷಯ ಆಲೋಚನೆ ನಡಿಸಬೇಕೆಂತಲೂ ಮಾನ್ಯ ಗಾಂಧಿಯವರು ಜನಸಮುದಾಯವನ್ನು ಕೇಳಿಕೊಂಡಿರುವರು.

ಗೆಯ್ಮೆ ಕರಾರಿನ ಪದ್ಧತಿಯನ್ನು ನಿಲ್ಲಿಸಿ ಬಿಡುವರೆ ಸರಕಾರದವರನ್ನು ಕೇಳಿಕೊಳ್ಳುವ ಉದ್ದೇಶದಿಂದ ನಾಗಪುರದಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿ ಬಂದಿರುತ್ತದೆ. ಈ ಸಭೆಗೆ ಸರ್ ಗಂಗಾಧರ ಚಿಟ್ನಾವಿಸರು ಅಧ್ಯಕ್ಷರಾಗಿದ್ದರು. ಈ ಉದ್ದೇಶಕ್ಕಾಗಿಯೇ ಮಿ| ಪ್ರಾರಾಕರು ನಾಗಪುರಕ್ಕೆ ಬಂದು ಸಭೆಗೆ ಚಿತ್ತೈಸಿ ಹಿಂದೀ ಕೆಲಸಗಾರರು ವಸಾಹತಿಗಳ ತೋಟಗಳಲ್ಲಿ ಪಡೆಯುವ ಕಷ್ಟಗಳನ್ನು ವಿವರಿಸಿದರು. ಕಡೆಗೆ ಸಭೆಯಲ್ಲಿ ಕಣಿಷ್ಟಪಕ್ಷಕ್ಕೆ ಮೇ ತಾ. ೩೧ರೊಳಗಾದರೂ ಈ ಗೆಯ್ಮೆ ಕರಾರು ಕೂಲಿ ಪದ್ಧತಿಯನ್ನು ಸರಕಾರದವರು ನಿಲ್ಲಿಸಿಬಿಡಬೇಕೆಂಬ ನಿರ್ಣಯವು ಆಯಿತು.

ಫಿಜಿ ಮತ್ತು ಇತರ ದ್ವೀಪಗಳಿಗೆ ಹೋಗುವ ಹಿಂದೀ ಕೂಲಿಗಳ ಗೆಯ್ಮೆ ಕರಾರು ಪದ್ಧತಿಯಲ್ಲಿ ಇನ್ನು ಮುಂದಕ್ಕೆ ಯಾವ ಬದಲಾವಣೆಗಳನ್ನು ಮಾಡಬಹುದೆಂಬ ವಿಚಾರಗಳನ್ನು ತಿಳಿಸಬೇಕೆಂತ ಇಂಡಿಯಾ ಸರಕಾರದವರು ಆಯಾ ಸಂಸ್ಥಾನಿಕ ಸರಕಾರಗಳವರನ್ನು ಕಳೆದ ಜೂನ ತಿಂಗಳಲ್ಲಿ ಕೇಳಿಕೊಂಡಿದ್ದರು. ಈಗತಾನೇ ಆಯಾ ಸಂಸ್ಥಾನಿಕ ಸರಕಾರಗಳ ಈ ಸಂಬಂಧವಾದ ಉತ್ತರಗಳು ಇಂಡಿಯಾ ಸರಕಾರಕ್ಕೆ ಬಂದು ತಲಪಿರುತ್ತವೆ. ಸಿಲೋನ್ ಮತ್ತು ಮಲಯಾದ್ವೀಪಕ್ಕೆ ಸರಕಾರದ ಕಡೆಯಿಂದ ಹಿಂದೀ ಕೂಲಿಗಳ ವಿಚಾರ ನಡಿಸುವರೆ ಹೋದ ಪ್ರತಿನಿಧಿಗಳ ವರದಿಯೂ ಈ ತಿಂಗಳಾಂತ್ಯದೊಳಗೆ ಕಳುಹಿಸೋಣಾಗುವದು ಎಂತ ತಿಳಿದು ಬರುತ್ತದೆ.

ಕರಾಚಿಗೆ ಸೇರಿದ ರೋಹಿರಿಯ ಮೇಜಿಸ್ಟ್ರೇಟರಾದ ಮಿ| ದೇವಿಸರು "ಸಿಂಧಿ" ವರ್ತಮಾನ ಪತ್ರಿಕೆಯ ಸಂಪಾದಕರ ಮತ್ತು ಪ್ರಕಾಶಕರ ಮೇಲಿನ ಒಂದು ಮಾನನಷ್ಟ ಮೊಕದಮೆಯಲ್ಲಿ ಕೊಟ್ಟ ತೀರ್ಮಾನವು ವಾರ್ತಾ ಪತ್ರಿಕೆಗಳ ಸಂಪಾದಕರಿಗೆ ಮತ್ತು ಪ್ರಕಾಶಕರಿಗೆ ಅತಿ ಮಹತ್ವವುಳ್ಳದ್ದಾಗಿದೆ. ಸುಕ್ಕೂರಿನ ಮುನ್ಸಿಪಾಲ್ ಕೌನ್ಸಿಲರಾದ ಭೋಜಸಿಂಗರಿಗೆ ಸದರಿ ಮುನ್ಸಿಪಾಲ್ ಕೌನ್ಸಿಲಿನವರು ಒಂದು ಸ್ಥಳವನ್ನು ಮಾರಿದ ವಿಷಯದಲ್ಲಿ "ಸಿಂಧಿ" ಪತ್ರಕಾರರು ಪತ್ರದಲ್ಲಿ ವಾದವಿವಾದಗಳನ್ನು ನಡಿಸಿದ್ದರು. ಈ ಸಬಬಿನ ಮೇಲೆ ಮಿ| ಭೋಜಸಿಂಗರು ಆ ಪತ್ರಿಕಾಕಾರರ ಮೇಲೆ ಮಾನನಷ್ಟ ದಾವೆಯನ್ನು ತಂದಿದ್ದರು. ಮೇಜಿಸ್ಟ್ರೇಟರು ಪ್ರಥಮತಾ ಪತ್ರಿಕಾಕರ್ತರ ಮೇಲೆ ವ್ಯವಹರಣೆ ನಡಿಸುವರೆ ಹುಕುಂ ಮಾಡಿದರು. ನಂತರ ಮೇಜಿಸ್ಟ್ರೇಟರು ವ್ಯವಹರಣೆ ನಡಿಸುವರೆ ಕೊಟ್ಟ ಹುಕುಮನ್ನು ಈ ಕೆಳಗಿನ ಕಾರಣಗಳ ಮೇಲೆ ಬಾಕಿ ಇಟ್ಟಿರುತ್ತಾರೆ—"ಆರೋಪಣೆಯು ಉದಾತ್ತವಾದ್ದದೆಂಬದಕ್ಕೆ ಸಂದೇಹವಿಲ್ಲ. ಆದರೆ ಮತ್ತೊಂದು ದೃಷ್ಟಿಯಿಂದ ಪತ್ರಿಕಾಕಾರನ ಸ್ಥಿತಿ ಮತ್ತು ಜವಾಬ್ದಾರಿಕೆಯು ವಿಲಕ್ಷಣವಾದುದಾಗಿದೆ, ಆದುದರಿಂದ ದುಡುಕುತನದಿಂದ ಆವನನ್ನು ವ್ಯವಹರಣೆಗೆ ಗುರಿಮಾಡಕೂಡದೆಂತಲೂ ಇಂಥಾ ಕ್ರಿಮಿನಲ್ ಆರೋಪಣೆಯಲ್ಲಿ ಆಪಾದಿತನು ಹೊಂದಬಹುದಾದ ಕಷ್ಟನಷ್ಟಗಳ ಮೊದಲೇ ಮೇಜಿಸ್ಟ್ರೇಟರು ಪ್ರಾಥಮಿಕ ವಿಚಾರ ನಡಿಸುವದು ಒಳ್ಳೇದೆಂತ ಆವನು ಕೇಳುವದೂ ನ್ಯಾಯವೇ ಆಗಿರುವದರಿಂದ ನಾನು ಈ ಸಂಬಂಧದಲ್ಲಿ ಸದರಿ ಸ್ಥಳವನ್ನು ನೋಡಿ ಅದರ ಕ್ರಯ ಇತ್ಯಾದಿಗಳ ವಿಷಯ ಮೊದಲೇ ವಿಚಾರ ನಡಿಸಬೇಕೆಂತಲೂ ಈ ಸ್ಥಳದ ಕ್ರಯ ಮತ್ತು ಸದರಿ ಸ್ಥಳದ ಸಂಬಂಧವಾದ ಇತರ ಮುನ್ಸಿಪಾಲ್ ದಾಖಲೆಗಳ ವಿಷಯ ಮುನ್ಸಿಪಾಲಿಟಿಯ ಚೀಫ್ ಆಫೀಸರರ ವಾಗ್ಮೂಲ ತಕ್ಕೊಳ್ಳಬೇಕೆಂತಲೂ ನಿಷ್ಕರ್ಷಿಸಿದ್ದೇನೆ. ಈ ಮುಂಜಾಗ್ರತೆಯು ಪತ್ರಿಕಾಕಾರ ಮತ್ತು ಪ್ರಕಾಶಕನಿಗಿರುವ ವಿಶೇಷವಾದ ಜವಾಬ್ದಾರಿಯ ದೃಷ್ಟಿಯಿಂದ ಹಿತವೆಂದೆಣಿಸುತ್ತೇನೆ."

ಬ್ರಿಟಿಷ ಹಿಂದೂಸ್ಥಾನದಲ್ಲಿ ಕಳೆದ ದಶಂಬರ ತಿಂಗಳೊಂದರಲ್ಲೇ ೧೧,೦೩,೦೦,೦೦೦ ರೂಪಾಯಿಗಳ ಮೂಲಧನದಿಂದ ೨೮ ಜೊಂಯಿಂಟ್ ಸ್ಟೋಕ್ ಕಂಪೆನಿಗಳು ರಿಜಿಸ್ಟ್ರಿ ಮಾಡೋಣಾಗಿದೆ. ಕಳೆದ ಎಪ್ರೀಲಿನಿಂದ ದಶಂಬರ ತಿಂಗಳ ವರೆಗೆ ೯ ತಿಂಗಳಲ್ಲಿ ೧೧೭ ಜೊಂಯಿಂಟ್ ಸ್ಟೋಕ್ ಕಂಪೆನಿಗಳು ೧೦,೬೧,೫೭,೦೦೦ ರೂಪಾಯಿಗಳ ಮೂಲಧನದಿಂದ ರಿಜಿಸ್ಟ್ರಿ ಮಾಡೋಣಾಗಿದೆ.

ಮುಂಬಾಯಿಯಲ್ಲಿ ದವಸಧಾನ್ಯಗಳ ಬೆಲೆಯು ದಿನೇ ದಿನೇ ಏರುತ್ತಿರುವದರಿಂದ ಈ ದವಸ ಧಾನ್ಯಗಳ ಬೆಲೆಯನ್ನು ಅಧೋಪದಲ್ಲಿಡುವರೆ ಒಂದು ಬೋರ್ಡನ್ನು ಸರಕಾರದವರು ನೇಮಿಸಬೇಕು ಇಲ್ಲವೆ ಮುನ್ಸಿಪಾಲಿಟಿಯವರು ತಕ್ಕ ವ್ಯವಸ್ಥೆ ಮಾಡುವ ಹಾಗೆ ಸರಕಾರದವರು ಮುನ್ಸಿಪಾಲಿಟಿಗೆ ಅಧಿಕಾರ ಕೊಡಬೇಕೆಂಬ ಸೂಚನೆಯು ಕಳೆದವಾರ ಮುಂಬಾಯಿ ಕೋರ್ಪೊರೇಶನ್ ಸಭೆಯ ಮುಂದೆ ಬಂತು. ಈ ಸಂಬಂಧವಾದ ವಿವಾದಗಳು ನಡೆದು ದವಸ ಧಾನ್ಯಗಳಿಗೆ ಬೆಲೆ ಏರಲು ಸರಕಾರದವರ ಕಾಯಿದೆ ಕಾನೂನುಗಳಾಗಲೀ ಇಲ್ಲವೆ ದವಸ ಧಾನ್ಯಗಳಿಗೆ ಹೆಚ್ಚಿನ ಗಿರಾಕಿಗಳು ಇರುವದಾಗಲೀ ಕಾರಣವಲ್ಲ; ಮುಂಬಾಯಿಯಲ್ಲಿ ಪ್ರಚಲಿತವಿರುವ "ರಿಂಗ್ಸ್" ಪದ್ಧತಿಯ ವ್ಯಾಪಾರವೇ ಕಾರಣವೆಂದು ಸದಸ್ಯರಲ್ಲಿ ಹಲವರು ವಾದಿಸಿದರು. ಕಡೆಗೆ ಈ ಸಂಬಂಧದಲ್ಲಿ ಸರಕಾರವು ತಲೆ ಹಾಕುವ ಹಾಗೆ ಕೇಳಿಕೊಳ್ಳುವದು ವಿಹಿತವಲ್ಲವೆಂಬ ನಿರ್ಣಯವಾಯಿತು.

ಮಿ| ಬಿಪಿನ್ ಚಂದ್ರಪಾಲರು ಪಂಜಾಬು ಸಂಸ್ಥಾನದೊಳಗೆ ಹೋಗಕೂಡದೆಂತ ಪಂಜಾಬು ಸರಕಾರದವರು ಕಟ್ಟು ಮಾಡಿರುತ್ತಾರೆ. ಪಂಜಾಬು ಸರಕಾರದಿಂದ ಲೋ| ತಿಲಕರಿಗೂ ಮಿ| ಪಾಲರಿಗೂ ಒಂದೇ ದಿನ ಈ ನಿಷೇಧ ನೋಟೀಸುಗಳು ಕೊಡೋಣಾಗಿದೆ.

ದಕ್ಷಿಣ ಹಿಂದೂಸ್ಥಾನ.

ಗೆಯ್ಮೆ ಕರಾರಿನ ಕೂಲಿತನವನ್ನು ನಿರ್ಮೂಲಿಸುವ ಉದ್ದೇಶದಿಂದ ಮದ್ರಾಸಿನಲ್ಲಿ ಮಾಡಿಕೊಂಡ ಸಂಘದವರ ಆಶ್ರಯದಿಂದ ಇದೇ ತಾ. ೧೫ನೇ ಸಾಯಂಕಾಲ ಮದ್ರಾಸಿನ ಗೋಖಲೆ ಹೋಲನಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿ ಬಂತು. ಈ ಸಭೆಯಲ್ಲಿ ಡಾಕ್ಟರ್ ಸರ್. ಸುಬ್ರಮಣ್ಯಯ್ಯರು ಅಧ್ಯಕ್ಷರಾಗಿದ್ದರು. ಪಟ್ಟಣದ ಮಾನ್ಯ ಗೃಹಸ್ಥ ಗೃಹಸ್ಥೆಯರಲ್ಲನೇಕರು ಈ ಸಭೆಗೆ ಚಿತ್ತೈಸಿದ್ದರು. ಡಾ| ಸರ್ ಸುಬ್ರಮಣ್ಯಯ್ಯರು ಈ ಲಂಘನಾಸ್ಪದವಾದ ಗೆಯ್ಮೆ ಕರಾರು ಪದ್ಧತಿಯಿಂದ ನಮ್ಮ ರಾಷ್ಟ್ರಕ್ಕೆ ಉಂಟಾಗಿರುವ ಅವಮಾನವನ್ನು ಸ್ಪಷ್ಟವಾಗಿಯೂ ಗಂಭೀರವಾಗಿಯೂ ವಿವರಿಸಿ ಸರಕಾರದವರು ಇದಕ್ಕೆ ಉತ್ತೇಜನ ಕೊಡುವದು ನ್ಯಾಯವಲ್ಲವೆಂದಾಗಿಯೂ ಈ ಗುಲಾಮ ಪದ್ಧತಿಯನ್ನು ನಿಲ್ಲಿಸುವರೆ ಹಿಂದೀಗಳೆಲ್ಲರೂ ಪ್ರಯತ್ನಿಸುವದು ಅವರ ಕರ್ತವ್ಯವೆಂದೂ ಹೇಳಿದರು. ನಂತರ ದಿವಾನ್ ಬಹದ್ದೂರ್ ಕೇಶವ ಪಿಳ್ಳೆಯವರು,—ಹಿಂದೂಸ್ಥಾನದ ಗೆಯ್ಮೆ ಕರಾರು ಪದ್ಧತಿಯು ಹಿಂದೂ ಕೂಲಿಗಾರರನ್ನು ಅಧಮ ಸ್ಥಿತಿಗೆ ತಂದು, ಅವರ ಪ್ರಾಕೃತಿಕ ಮತ್ತು ನೈತಿಕ ಸ್ವಭಾವವನ್ನು ಅಧೋಗತಿಗೆ ತರುತ್ತಿದೆ. ಇದು ಈ ದೇಶದ ಜನರ ಮಾನಮರ್ಯಾದೆಗೆ ಕಳಂಕವನ್ನು ತರುತ್ತಿದೆಯಾದುದರಿಂದ ಈ ಪದ್ಧತಿಯನ್ನು ಕೂಡಲೇ ಯಾವದೊಂದು ಶರ್ತವಿಲ್ಲದೆ ನಿಲ್ಲಿಸಿಬಿಡಬೇಕೆಂಬ ನಿರ್ಣಯವನ್ನು ಈ ಸಭಿಕರು ಏಕಮತದಿಂದ ಮಾಡಿದ್ದಾರೆಂಬ ಮಸೂದೆಯನ್ನು ಸಭೆಯ ಮುಂದಿಟ್ಟರು. ಮಾನ್ಯ ರಾಮಸ್ವಾಮಿ ಅಯ್ಯರ್, ಮಿ| ನಾಟೇಶನ್, ದಿವಾನ್ ಬಹದ್ದೂರ್ ಪಿ. ಸುಬ್ರಮಣ್ಯಂ, ಮಿ| [illegible] ಶೆಟ್ಟಿ, ಮಿಸೆಸ್ [illegible] ರವರು ಮಸೂದೆಯನ್ನು ಉದಾತ್ತವಾದ ಮಾತುಗಳಿಂದ ಅನುಮೋದಿಸಿ [illegible] ತಂದಿರುವರು. ನಂತರ [illegible] ಗೆಯ್ಮೆ ಕರಾರು ಪದ್ಧತಿಯ [illegible]

ಅನುಕ್ರಮಣಿಕೆ.

ಪಾನು.

ಅಗ್ರಲೇಖ—ವಿದ್ಯಾಭಿವೃದ್ಧಿಗೆ ಮತಸಂಸ್ಥೆಗಳ ಸಹಾಯ. . . . ೪
ಸ್ಫುಟವಿಚಾರಗಳು:—
೧ ಪಿಂಗಳ ಸಂವತ್ಸರದ ಪಂಚಾಂಗಗಳ ಪಿಕಲಾಟ . . . ,,
೨ ತಾಲೂಕು ಬೋರ್ಡುಗಳ ಪ್ರೆಸಿಡೆಂಟರ ನೇಮಕ . . . ,,
೩ ಮೈಸೂರು ಸಂಸ್ಥಾನದ ಮಲೆನಾಡು ಅಭಿವೃದ್ಧಿ. . . . ,,
೪ ವರಿಷ್ಠ ನ್ಯಾಯವಿಧಾಯಕ ಸಭೆಯ ಕೆಲಸಗಳು . . . ೪-೫
ಕ್ಷೇಳ—ಮಂಗಳೂರು . . . ,,
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ. . . . ೫
೨ ವಿದೇಶ ವೃತ್ತಾಂತ . . . ,,
೩ ಉತ್ತರ ಹಿಂದೂಸ್ಥಾನ. . . . ,,
೪ ದಕ್ಷಿಣ ಹಿಂದೂಸ್ಥಾನ. . . . ೫-೬
ಒನರಬಲ್ ಸದಾಶಿವ ಭಟ್ಟರವರ ಸವಾಲುಗಳು . . . ,,
ಮದ್ರಾಸ್ ಸಂಸ್ಥಾನದಲ್ಲಿ ಸಹಕಾರ ಅಭಿವೃದ್ಧಿ . . . ,,
ಮೈಸೂರು ಶ್ರೀಮನ್ಮಹಾರಾಜರವರ ಸರಕಾರಿ ಹುಕುಂ . . . ೬
ಜಾಹಿರುಗಳು:—
ಉಳ್ಳಾಲ . . . ೬
ಆಶೀರ್ವಾದ ವಚನಗಳು . . . ೪

ಸ್ವದೇಶಾಭಿಮಾನಿ.

ಶಕ ೧೮೩೮ ಫಾಲ್ಗುಣ ಶು. ೯ ಶುಕ್ರವಾರ.

ವಿದ್ಯಾಭಿವೃದ್ಧಿಗೆ ಮತಸಂಸ್ಥೆಗಳ ಸಹಾಯ.

ದೇವಸ್ಥಾನಗಳ, ಗುರುಮಠಗಳ ಹಣವು ವಿಶೇಷವಾಗಿ ನಷ್ಟವಾಗುವ ಈ ಪ್ರಾಂತ್ಯದಲ್ಲಿ ವಿದ್ವಾನ್ ವೃದ್ಧ ಮಹನೀಯರಾದ ಸರ್. ಎಸ್. ಸುಬ್ರಮಣ್ಯ ಅಯ್ಯರವರು ನುಡಿದ ಮಾತುಗಳನ್ನು ವಿಚಾರಕ್ಕೆ ತಂದುಕೊಳ್ಳುವದು ಅಗತ್ಯವಾಗಿದೆ. ದೇವ ವಿನಿಯೋಗದ ನಂತರ ಉಳಿಯುವ ದ್ರವ್ಯವನ್ನು ವಿದ್ಯಾಭಿವೃದ್ಧಿ ಬಗ್ಯೆ ಉಪಯೋಗಿಸುವಂಥಾದ್ದು ಅಗತ್ಯ ಮತ್ತು ಯುಕ್ತವಾಗಿರುವದೆಂಬುದನ್ನು ಸುಬ್ರಮಣ್ಯ ಅಯ್ಯರವರು ಬಹಳ ಒತ್ತಿ ಹೇಳಿರುತ್ತಾರೆ. ಮಧುರೆಯಲ್ಲಿ ಮಧುರೆಯ ಕೋಲೇಜಿನ ವಾರ್ಷಿಕ ದಿನಾಚರಣೆಯ ದಿನ ಮಧುರೆಯ ವಿದ್ಯಾರ್ಥಿಗಳಲ್ಲೊಬ್ಬರಾಗಿದ್ದ ಸರ್. ಎಸ್. ಸುಬ್ರಮಣ್ಯ ಅಯ್ಯರವರು ಈ ವಿದ್ಯಾಸಂಸ್ಥೆಗೆ ಸ್ವಸ್ತಿವಚನಗಳನ್ನು ಹೇಳುವ ಕಾರ್ಯವನ್ನು ವಹಿಸಿಕೊಂಡಿದ್ದರು. ವೃದ್ಧಾಪ್ಯದ ದೆಸೆಯಿಂದ ಇವರಿಗೆ ಸ್ವತಹ ಬರಲಿಕ್ಕೆ ಆಗದೆ ಹೋದರೂ ಇವರು ತಮ್ಮ ವಚನಗಳನ್ನು ಬರೆದು ಕಳುಹಿಸಿದ್ದರು. ಸರ್. ಎಸ್. ಸುಬ್ರಮಣ್ಯ ಅಯ್ಯರವರ ಪರಿಚಿತಿಯನ್ನು ನಾವು ವಾಚಕರಿಗೆ ಹೇಳಬೇಕೆಂತಿಲ್ಲ. ಹಿಂದೂ ಶಾಸ್ತ್ರನ್ಯಾಯಗಳ ಪಾಂಡಿತ್ಯವು ಪರಿಪೂರ್ಣವಾಗಿರುವ ಇವರ ಅಭಿಪ್ರಾಯಗಳು ಸರ್ವರಿಂದಲೂ ಮನ್ನಿಸತಕ್ಕದ್ದಾಗಿವೆ. ದಾನ ಧರ್ಮ ಪರೋಪಕಾರಗಳನ್ನು ಕಾಲವನ್ನರಿತು ಮಾಡಬೇಕು. ಅನ್ನಛತ್ರಗಳನ್ನು ಕಟ್ಟಿಸಿ ಹಾಕಿ ಅವುಗಳಲ್ಲಿ ಬಂದಂಥಾ ಅತಿಥಿಗಳನ್ನು ಅನ್ನದಾನಗಳಿಂದ ತೃಪ್ತಿಪಡಿಸುವದು ಈಗಿನ ಕಾಲದಲ್ಲಿ ಬಹಳ ಕಷ್ಟವಾಗಿ ಬಂದಿದೆ. ಅನ್ನದಾನವನ್ನು ಪಡೆಯುವಂಥವರ ಭಾವವು ಸಹ ಮಾರ್ಪಟ್ಟಿರುತ್ತದೆ. ಮನುಷ್ಯನು ಜೀವಿಸುವದು ಉದರಭರಣೆಗೋಸ್ಕರವೆ ಎಂತ ಇಂಥವರು ತಿಳಕೊಳ್ಳುವದರಿಂದ ಬರೆ ಭೋಜನಪ್ರಿಯರಾದಂಥವರನ್ನು ಅನ್ನಛತ್ರಗಳಲ್ಲಿ ಸಾಕುವದರಿಂದ ಕೋಲೆರಾ ಮುಂತಾದ ಸಾಂಕ್ರಾಮಿಕ ರೋಗಗಳಿಗೆ ಆಸ್ಪದ ಉಂಟಾಗುವದಲ್ಲದೆ ಮತ್ತಾವ ಉದ್ದೇಶವೂ ನೆರವೇರದು. ಉದಂಭರಣೆಯು ಸಜೀವರಾಗಿದ್ದು ಜೀವಿತದ ಸಾರ್ಥಕ ಉದ್ದೇಶಗಳನ್ನು ಸಾಧಿಸುವದಕ್ಕಾಗಿದೆಂತ ತಿಳಿಯುವಷ್ಟು ಮತಿಯು ಜನಸಾಮಾನ್ಯರಲ್ಲಿ ನಷ್ಟವಾಗಿ ಹೋಗಿರುವದರಿಂದ ಇಂಥವರ ಏಳಿಗೆಯು ವಿದ್ಯಾಮೂಲಕವೇ ಸಾಧ್ಯವಲ್ಲದೆ ಇತರ ಯಾವ ವಿಧಾನದಿಂದಲೂ ಸಾಧ್ಯವಿರದು. ನಾಟುಕೋಟೆ ಚೆಟ್ಟಿಯವರಷ್ಟು ದ್ರವ್ಯಾನುಕೂಲವಿರುವ ಇತರರು ಈ ದಕ್ಷಿಣ ಪ್ರಾಂತ್ಯದಲ್ಲಿ ವಿರಳರಾಗಿರುವರು. ಈ ಸಮುದಾಯದವರು ಕಳೆದ ೫೦ ಯಾ ೬೦ ವರುಷಗಳಲ್ಲಿ ನಾಲ್ಕಾರು ಕೋಟಿ ರೂಪಾಯಿಗಳನ್ನು ದೇವಸ್ಥಾನ ಇತ್ಯಾದಿ ಕಟ್ಟೋಣಗಳ ಜೀರ್ಣೋದ್ಧಾರಗಳ ಬಗ್ಯೆ ವೆಚ್ಚ ಮಾಡಿರುವರು. ಕಟ್ಟೋಣಗಳ ನಿರ್ಮಾಣದಿಂದ ಮಾತ್ರ ದೇವಸೇವಾತತ್ಪರರಾಗುವುದರಲ್ಲಿ ತೃಪ್ತಿಯನ್ನು ಹೊಂದಿ ಸುಮ್ಮನಿದ್ದರೆ ಇಂಥಾ ಸೇವೆಯು ನಿರರ್ಥಕವಾಗುವುದು. ಆದ್ದರಿಂದ ನಾಟುಕೋಟೆ ಚೆಟ್ಟಿಯವರಂಥಾ ಧನಾಢ್ಯರು ತಮ್ಮ ಉದಾರ ಬುದ್ಧಿಯ ಗತಿಯನ್ನು ತಿದ್ದಿ ವಿದ್ಯಾಸಂಸ್ಥೆಗಳಿಗೂ ತಕ್ಕ ಆಧಾರವನ್ನು ಕೊಡುವದು ಅಗತ್ಯವಾಗಿದೆ. ಪೂರ್ವಕಾಲದಲ್ಲಿ ದೇವಸ್ಥಾನಗಳಿಗೆ ಸೇರಿಕೊಂಡು ವಿದ್ಯಾಶಾಲೆಗಳಿದ್ದವೆಂಬುವುದಕ್ಕೆ ರಾವ್‌ಸಾಹೇಬ ಕೃಷ್ಣಶಾಸ್ತ್ರಿಗಳವರು ಇತ್ತಲಾಗೆ ಕಂಡುಹಿಡಿದ ಪುರಾತನ ಶಾಸನದ ಆಧಾರವನ್ನು ಸರ್ ಸುಬ್ರಮಣ್ಯ ಅಯ್ಯರವರು ಹೇಳಿರುವರು. ವೀರರಾಜೇಂದ್ರದೇವ ಎಂಬ ಚೋಳದೇಶದ ಪುರಾತನ ಅರಸನ ಕಾಲದ ಶಾಸನದಲ್ಲಿ ದೇವಸ್ಥಾನಗಳಲ್ಲಿ ವಿದ್ಯಾಭ್ಯಾಸದ ಬಗ್ಯೆ ಶಾಲೆಗಳೂ ರೋಗಿಗಳ ಚಿಕಿತ್ಸೆ ಬಗ್ಯೆ ಆಸ್ಪತ್ರಿಗಳೂ ಇದ್ದವೆಂಬುದು ಸ್ಪಷ್ಟವಾಗಿ ತೋರಿಬರುವದು. ದೇವಸ್ಥಾನಗಳಲ್ಲಿ ಪೂಜಾ ಉತ್ಸವಗಳು ಮಾತ್ರ ನಡೆಯತಕ್ಕವುಗಳು, ಮತ್ತು ಇವುಗಳ ಹುಟ್ಟನ್ನು ಈ ವಿನಿಯೋಗಗಳ ಬಗ್ಯೆ ಮಾತ್ರ ಉಪಯೋಗಿಸಬೇಕೆಂಬ ಭಾವವು ಅಜ್ಞಾನದಿಂದ ಅನ್ಯಜನಾಂಗದವರ ಆಳುವಿಕೆಯಲ್ಲಿ ರೂಢಿಗೆ ಬಂದದ್ದೇ ಹೊರತು ಇಂಥಾ ಭಾವನೆಗಳು ಸರಿಯಲ್ಲವೆಂತ ಸರ್ ಎಸ್. ಸುಬ್ರಮಣ್ಯ ಅಯ್ಯರವರು ನಿಂದಿತವಾಗಿ ಅಪ್ಪಣೆಕೊಡಿಸಿರುವರು. ಹೀಗಿದ್ದರೂ ನಮ್ಮೀಪ್ರಾಂತಗಳಲ್ಲಿ ದೇವಸ್ಥಾನಗಳಲ್ಲಿ ವಿದ್ಯೆಗೆ ತುಚ್ಛೀಕಾರವೇ ಹೊರತು ಬೇರೇನೂ ಇರದು. ಆಡಳಿತೆಯು ಸರಿಯಿಲ್ಲವೆಂದು ಗುಣುಗುಟ್ಟುವರಲ್ಲದೆ ಸಮರ್ಪಕವಾದ ಆಡಳಿತೆದಾರರನ್ನು ತಯ್ಯಾರಿಸಲು ಬೇಕಾಗಿರುವ ಶಿಕ್ಷಣ ಪ್ರಸರಣೆಯ ಪ್ರಯತ್ನವನ್ನು ಭಜಕ ವರ್ಗದಲ್ಲಿ ನಡಿಸರು. ನಾಟುಕೋಟೆ ಚೆಟ್ಟಿಯವರು ಸಹ ಇತ್ತಲಾಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಲು ತೊಡಗಿದ್ದಾರೆ. ಬಹುಮಾನಪಟ್ಟ ರಾವ್‌ಬಹದ್ದೂರ್ ಅಣ್ಣಾಮಲೆ ಚೆಟ್ಟಿಯವರು ಮಧುರಾ ಕೋಲೇಜಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ ಆ ಪ್ರಾಂತದ ಕೆಲವು ದೇವಸ್ಥಾನಗಳಲ್ಲಿ ಸಂಸ್ಕೃತ ಕೋಲೇಜುಗಳನ್ನೂ ಪ್ರೈಮರಿ ಶಾಲೆಗಳನ್ನೂ ಸ್ಥಾಪಿಸಿ ಇವುಗಳ ಪೋಷಣೆಯನ್ನು ದೇವಸ್ಥಾನದ ಫಂಡುಗಳಿಂದಲೇ ನಡಿಸುತ್ತಿದ್ದಾರೆ. ಈ ಜಿಲ್ಲೆಯಲ್ಲಿಯೂ ಹಲವು ಸಂಪನ್ನ ದೇವಸ್ಥಾನಗಳಿರುವವು. ಇವುಗಳಿಗೆ ಸೇರಿದ ಸಂಪನ್ನ ಭಜಕ ವರ್ಗಗಳೂ ಇರುತ್ತವೆ. ಆಯಾ ಜಾತಿ ಮತಸ್ಥರುಗಳು ಭಜಿಸಿ ಬರುವಂಥಾ ಪ್ರತ್ಯೇಕ ಗುರುಮಠಗಳೂ ದೇವಸ್ಥಾನಗಳೂ ಇರುವವು. ಈ ಮತಸಂಸ್ಥೆಗಳನ್ನು ವಿಂಹಿತಪಡಿಸಿ ಆಯಾ ಜಾತಿಯವರು ತಂತಮ್ಮ ಜಾತಿಯ ಉದ್ಧರಣೆ ಬಗ್ಯೆ ಶಾಲೆಗಳನ್ನೂ ಸಂಘಗಳನ್ನೂ ವಿಂಗಡವಾಗಿ ಸ್ಥಾಪಿಸಿಕೊಂಡು ಜನರ ಆಶ್ರಯವು ಇವುಗಳಿಗೆ ದೊರೆಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಪ್ರಯತ್ನಗಳೂ ಬಹಳ ಕಾಲದಿಂದ ನಡೆಯುತ್ತಿವೆ ಯಾದರೂ ಪ್ರಯತ್ನಕ್ಕೆ ತಕ್ಕ ಫಲವು ಇನ್ನೂ ದೊರೆತಂತೆ ತೋರುವದಿಲ್ಲ. ಇದರ ಬದಲಾಗಿ ಕೆಲವು ಸರ್ತಿ ದೇವಸ್ಥಾನಗಳಿಗೂ ವಿದ್ಯಾಲಯಗಳಿಗೂ ಪರಿವಿರೋಧವು ಉಂಟಾಗುವ ಸಂದರ್ಭಗಳು ತೋರಿದೋರುತ್ತವೆ. ವಿದ್ಯಾಶಾಲೆಗಳು ಹುಟ್ಟಿದಂದಿನಿಂದ ಮತಸಂಸ್ಥೆಗಳ ಮೇಲೆ ಇರಬೇಕಾದಂಥಾ ವಿಶ್ವಾಸವು ಈ ಶಾಲೆಗಳಲ್ಲಿ ತಯ್ಯಾರಾದ ಶಿಕ್ಷಿತ ವರ್ಗದವರಲ್ಲಿ ಕಡಮೆಯಾಗುತ್ತ ಬಂದಿರುವದರಿಂದ ಈಗಿನ ವಿದ್ಯೆಯೆಂದರೆ ದೇವಸ್ಥಾನದ ಪಕ್ಷದವರಲ್ಲಿ ಕೆಲವರು ಅಂಜುವರು. ಹಾಗೂ ಹೀಗೂ ಯಾವುದರಲ್ಲಿಯೂ ಪಕ್ಷಭೇದ, ಸಂಶಯ. ಶಕ್ತಿ ಸಾಮರ್ಥ್ಯಗಳು ಮುಂದಿನ ಅಭಿವೃದ್ಧಿ ಪ್ರಯತ್ನಗಳಲ್ಲಿ ವಿನಿಯೋಗಿಸಲ್ಪಡುವದಕ್ಕಿಂತ ಈ ಭೇದಸಂಶಯಗಳ ನಿವಾರಣೆಯಲ್ಲಿಯೇ ಪೂರ್ತಿಯಾಗುವವು. ಆದ್ದರಿಂದ ದೇವಸ್ಥಾನಗಳು ಒಂದು ಕಡೆ, ಶಾಲೆಗಳು ಇನ್ನೊಂದು ಕಡೆ, ಇವೆರಡೂ ಬೇಡವೆಂತ ಮೊದಲೇ ವೈರಾಗ್ಯವನ್ನು ತಾಳಿಕೊಂಡಿರುವ ಮಠಾಧೀಶರು ಮತ್ತೊಂದು ಕಡೆ. ಈ ವಿಧದ ಸಂಬಂಧವು ಪ್ರಕೃತ ಮತಸಂಸ್ಥೆ ಮತ್ತು ವಿದ್ಯಾಶಾಲೆಗಳೊಳಗೆ ಇರುವದರಿಂದ ಸರ್ ಸುಬ್ರಮಣ್ಯ ಅಯ್ಯರವರ ಮಾತುಗಳು ಇಲ್ಲಿ ಹೇಗೆ ಕೇಳಿ ಬಂದಾವು. "ದೇವಸ್ಥಾನಗಳ ಶಿಲುಕು ಫಂಡನ್ನು ವಿದ್ಯಾಪ್ರಸರಣೆ ಬಗ್ಯೆ ವಿನಿಯೋಗಿಸಿರಿ" ಈ ಮಾತುಗಳು ಕೇಳಿ ಬಂದೊಡನೆ—ಯಾರು ಮತ್ತು ಹೇಗೆ ಎಂಬ ಪ್ರಶ್ನೆಯು ಇಲ್ಲಿ ಉಂಟಾಗುತ್ತದೆ. ಇಲ್ಲಿಯ ವಿದ್ಯಾಸಾಧನಾಕಾರರು ಯಾವ ಆದರ್ಶಗಳನ್ನು ತಮ್ಮ ಮುಂದಿಟ್ಟುಕೊಂಡಿರುತ್ತಾರೆ? ಇಂಥ ಆದರ್ಶಗಳಿಂದ ಪ್ರೇರಿತವಾದ ಶಾಲಾ ಕೋಲೇಜುಗಳಲ್ಲಿ ತಯ್ಯಾರಾಗಿ ಬಂದವರ ಸ್ಥಿತಿಗತಿಯೇನು? ಎಂತ ಇನ್ನೂ ಈ ಪ್ರಶ್ನಾವಳಿಯು ವೃತ್ತಪತ್ರಿಕಾದಿಗಳಲ್ಲಿ ಸಮರ್ಪಕ ಉತ್ತರದಲ್ಲದೆ ದೇವಸ್ಥಾನಗಳ ಸಿಲುಕು ಫಂಡುಗಳನ್ನು ವಿದ್ಯಾಪ್ರಸರಣೆ ಬಗ್ಯೆ ವಿನಿಯೋಗಿಸುವ—ಎಂಬ ಉತ್ತರವು ಸಿಕ್ಕುವದು ಸ್ವಲ್ಪ ಪ್ರಯಾಸವಾಗುತ್ತದೆ. ಇಂಥಾ ಒಳಗಿನ ಗುಟ್ಟನ್ನು ಮರೆಯಲ್ಲಿಟ್ಟುಕೊಂಡು ವೃತ್ತ ಪತ್ರಗಳಲ್ಲಿ ತೋರಿಬರುವಂಥಾ ಮಹನೀಯರ ಮಾತುಗಳನ್ನು ಎತ್ತಿ ಬರೆದು ತಟಸ್ಥರಾಗಿರುವದಕ್ಕಿಂತ ಇನ್ನೊಂದು ಪಕ್ಷದ ಮತವನ್ನು ನಾವು ತಿಳಿದಂತೆ ಈ ಮೂಲಕ ಸೂಚಿಸುತ್ತೇವೆ. ಶಿಕ್ಷಿತ ವರ್ಗದವರು—"ಯಾರು ಮತ್ತು ಹೇಗೆ" ಎಂಬೀ ಪ್ರಶ್ನೆಗೆ ಉತ್ತರವನ್ನು ಸಮರ್ಪಕವಾದ ರೀತಿಯಲ್ಲಿ ಕೊಡಲು ಪ್ರಯತ್ನಿಸಿ ವಿದ್ಯಾಪ್ರಸರಣೆಯ ಬೊಳ್ಳಾದದ್ದಲ್ಲ ಘನವಾದ ಫಲವು ಇದೋ ನೋಡಿರಿ ಎಂತ ತೋರಿಸಿಕೊಡುವ ಮಾರ್ಗದಲ್ಲಿ ತಮ್ಮ ಪ್ರಯತ್ನವನ್ನು ನಡಿಸಿದ್ದಲ್ಲಿ ನಾವು ಮೇಲೆ ಪ್ರಸ್ತಾಪಿಸಿರುವ ಭೇದವೂ ಸಂಶಯವೂ ನಿವಾರಣೆಯಾಗಿ ದೇವಸ್ಥಾನದ ಸಿಲಕು ಫಂಡನ್ನು ಶಿಕ್ಷಣ ಪ್ರಸರಣೆಯಲ್ಲಿ ವಿನಿಯೋಗಿಸಲು ಅಗತ್ಯವುಳ್ಳ 'ಆ 'ಇನ್ನೊಂದು' ಪಕ್ಷದವರ ಸಹಕಾರವು ದೊರಕಬಹುದೆಂಬುದಾಗಿ ಭರವಸೆಪಡುತ್ತೇವೆ.

ಸ್ಫುಟ ವಿಚಾರಗಳು.

೧. ೧೮ನೆಳ ಸಂವತ್ಸರವು ಅಂತ್ಯವಾಗುತ್ತ ಬರುವದರಿಂದ ಪಿಂಗಳ ಸಂವತ್ಸರದ 'ಹಿಂದೂ' ಪಂಚಾಂಗಗಳಲ್ಲಿ ಹಲವು ಪ್ರಕಟವಾಗಿವೆ. ಇವುಗಳು ವೈದೀಕ ವರ್ಗದವರಿಂದಲೇ ಗುಣಿಸಿ ಪರಿಶೋಧಿಸಲ್ಪಡುವಂಥವುಗಳು. ಆದರೂ ಇವರ ಗುಣಾಕಾರಗಳಾಗಲಿ, ಪರಿಶೋಧನೆಗಳಾಗಲಿ ಒಂದೇ ಪ್ರಕಾರವಾಗಿ ಇರದೆ ಇಷ್ಟರತನಕ ಅಂದರೆ ನಳ ಸಂವತ್ಸರದ ತನಕ ವ್ರತ ನಿರ್ಣಯ ಇತ್ಯಾದಿಗಳಲ್ಲಿ ಅಲ್ಪಸ್ವಲ್ಪ ಕಾಲ ವ್ಯತ್ಯಾಸವು ಇತ್ತೇ ಇತ್ತು. ಈ ವ್ಯತ್ಯಾಸಗಳು ಬರುವ ಪಿಂಗಳ ಸಂವತ್ಸರದಲ್ಲಿ ಬಹಳ ವಿಪರೀತ ಸ್ವರೂಪವನ್ನು ತಾಳಿಕೊಂಡಿವೆ. ಪಿಂಗಳ ಸಂವತ್ಸರದ ಅಧಿಕ ಮಾಸವು ಕೆಲವುದರಲ್ಲಿ ಆಶ್ವೀಜದಲ್ಲಿಯೂ ಇನ್ನು ಕೆಲವುದರಲ್ಲಿ ಭಾದ್ರಪದದಲ್ಲಿಯೂ ಬಂದುಬಿಟ್ಟಿರುವುದು. ಪ್ರತಿ ಪಂಚಾಂಗದವರು ತಾವು ಅಡಿದ್ದೇ ಸರಿ, ತಾವು ಬರೆದದ್ದೇ ಬ್ರಹ್ಮಲಿಪಿ ಎಂತ ಹಟ ಹಿಡಿದು ಕಾರಣರಹಿತವಾದ ಒಣ ಮಾತುಗಳ ಟೀಕೆಯನ್ನು ಹೇಳುವರಲ್ಲದೆ ತಮ್ಮ ನಿರ್ಣಯಗಳಿಗೆ ಆಧಾರಂಗಳನ್ನು ಕೊಟ್ಟು ವೈದೀಕರಿಗೆ ಯುಕ್ತವಾದ ವಿದ್ಯಾವಿನಯಗಳಿಂದ ತಂತಮ್ಮ ಸಮಾಧಾನಗಳನ್ನು ಹೇಳುವದರಲ್ಲಿ ಇಲ್ಲ. ಭಾದ್ರಪದ ಆಶ್ವೀಜ ಮಾಸಗಳಲ್ಲಿ ಹಿಂದೂಗಳ ಮುಖ್ಯ ವ್ರತಗಳು ನಡೆಯಲಿಕ್ಕಿರುವದರಿಂದ ಪಿಂಗಳ ಸಂವತ್ಸರದಲ್ಲಿ ಪಂಚಾಂಗಗಳು ಸೂಚಿಸುವ ಈ ಕಾಲ ವ್ಯತ್ಯಾಸದಿಂದ ವ್ರತಾಚರಣೆ ಇತ್ಯಾದಿಗಳಲ್ಲಿ ಪಿಕಲಾಟವೇ ಪ್ರಾಪ್ತಿಸುವದು ನಿಜ. ವೈದೀಕಂ ಶಿರೋಮಣಿಗಳಾಗಿ ಮಠಾಧೀಶರುಗಳು ಇರುವರು. ದೇವಸ್ಥಾನಗಳೇ ಇತ್ಯಾದಿ ಮತಸಂಸ್ಥೆಗಳು ಇರುವವು. ಮಠಾಧೀಶರು ಮತ್ತು ಆಯಾ ದೇವಸ್ಥಾನಗಳ ಅಧಿಕಾರಿಗಳು ಈ ಪಿಕಲಾಟ ಇದ್ದಂತೆಯೇ ಇದ್ದುಕೊಳ್ಳಲೆಂದು ತಟಸ್ಥರಾಗಿರುವದು ಸರಿಯಲ್ಲ. ಆಯಾ ಪಂಚಾಂಗಕರ್ತರುಗಳನ್ನು ಆಮಂತ್ರಿಸಿ ಈ ಬಗ್ಗೆ ಅಗತ್ಯಕಂಡಲ್ಲಿ ಇನ್ನೂ ವಿದ್ವಾಂಸರನ್ನು ಬರಮಾಡಿಸಿಕೊಂಡು ಪಂಚಾಂಗ ಕರ್ತುಗಳ ಗುಣಾಕಾರ ಪರಿಶೋಧನೆ ಇತ್ಯಾದಿಗಳನ್ನು ಸಭೆಗಳಲ್ಲಿ ಮಾಡಿಸಿ ಯಾವದು ಸರಿ, ಯಾವದು ತಪ್ಪು ಎಂಬುವನ್ನು ನಿರ್ಣಯಿಸುವದು ಅಗತ್ಯವಾಗಿದೆ. ಈ ಪಿಕಲಾಟವನ್ನು ಹೀಗೆ ಪರಿಹರಿಸದೆ ಇದ್ದರೆ ವ್ರತಾಚರಣೆಗಳಲ್ಲಿ ಬಹಳ ಅನರ್ಥಕ್ಕೆ ಕಾರಣವಾಗುವದು.

೨. ಮದ್ರಾಸು ಸಂಸ್ಥಾನದಲ್ಲಿ ತಾಲೂಕು ಬೋರ್ಡುಗಳಿಗೆ ಸರಕಾರದ ಅಫೀಸರಲ್ಲದವರನ್ನು ಪ್ರೆಸಿಡೆಂಟರಾಗಿ ನೇಮಿಸುವ ವಿಷಯದಲ್ಲಿ ಸರಕಾರದ ಒಂದು ಹುಕುಂ ಇತ್ತಲಾಗೆ ಪ್ರಕಟಿಸಲ್ಪಟ್ಟಿರುವದು. ಉಪಯುಕ್ತರಾದ ನೋನ್ ಆಫೀಸಿಯಲ್ ಮೆಂಬರರು ಬದಿಗಿರುವ ಸಂದರ್ಭಗಳಲ್ಲಿ ಜಿಲ್ಲಾ ಕಲೆಕ್ಟರುಗಳು ಇಂಥವರನ್ನು ಅಧ್ಯಕ್ಷರನ್ನಾಗಿ ಮಾಡುವ ವಿಷಯವನ್ನು ಸರಕಾರದ ಮುಂದಕ್ಕೆ ತರಬೇಕೆಂತ ಈ ಹುಕುಮಿನಲ್ಲಿ ಸೂಚಿಸಲಾಗಿದೆ. ಇಂಥಾ ಹುಕುಮಿನಿಂದ ಲೋಕಲ್ ಬೋರ್ಡುಗಳಿಗೆ ಪ್ರಜಾನಿಯುಕ್ತತೆಯ ಪ್ರಯೋಜನವು ಹೇಗೆ ಹೆಚ್ಚುವದೆಂಬುದು ಗೊತ್ತಾಗುವುದಿಲ್ಲ. ಲೋಕಲ್ ಬೋರ್ಡುಗಳಿಗೆ ಪ್ರಕೃತ ಸರಕಾರದ ಕಡೆಯಿಂದ ನೇಮಿಸಲ್ಪಡುವ ಮೆಂಬರರುಗಳ ಹೆಸರುಪಟ್ಟಿಯನ್ನು ನೋಡಿದರೆ ಜಿಲ್ಲಾ ಅಫೀಸರುಗಳು ಪ್ರಜಾಜನರ ಯೋಗ್ಯತೆಯನ್ನು ನಿಶ್ಚಯಿಸಿಕೊಳ್ಳುವ ವಿಧಾನವು ಬಹಳ ಚೋದ್ಯಕರವೂ ಅಪರೂಪವೂ ಆಗಿದೆಂತ ಸ್ಪಷ್ಟವಾಗಿ ತಿಳಿಯಬಂದೀತು. ಇಂಥಾ ವಿದ್ಯಮಾನಗಳಲ್ಲಿ ಲೋಕಲ್ ಬೋರ್ಡುಗಳ ಪ್ರೆಸಿಡೆಂಟರನ್ನು ನೇಮಿಸುವ ಇಂಥಾ ವಿಷಯವು ಕಲೆಕ್ಟರ ಕೈಸೇರುವದರಿಂದ ಬೋರ್ಡುಗಳಿಗೆ ಹೆಚ್ಚಿನ ಸ್ವಾತಂತ್ರ ಕೊಟ್ಟಂತೆ ಆಗುವುದಿಲ್ಲ. ಇದರ ಬದಲಾಗಿ ಲೋಕಲ್ ಬೋರ್ಡುಗಳಿಗನೇ ತಮ್ಮ ಅಧ್ಯಕ್ಷರನ್ನು ಆರಿಸುವ ಸ್ವತಂತ್ರವನ್ನು ಕೊಡುವದೇ ಉಚಿತವಾಗಿತ್ತು.

೩. ಮೈಸೂರ ಸಂಸ್ಥಾನದ ಮಲೆನಾಡು ಅಭಿವೃದ್ಧಿ ವಿಷಯ ಶ್ರೀಮನ್ಮಹಾರಾಜರವರ ಸರಕಾರದವರು ಕಳುಹಿಸಿಕೊಟ್ಟ ಹುಕುಮನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ರಕಟಿಸುತ್ತೇವೆ. ಮಲೆನಾಡು ಪ್ರದೇಶಗಳಿಗೆ ಹೊರಗಿನಿಂದ ಬಂದು ಅಲ್ಲಿ ನೆಲೆಯಾಗಿ ನಿಲ್ಲಲು ಇಷ್ಟಪಡುವ ಜನರಿಗೆ ಸಹ ಸೌಕರ್ಯಗಳನ್ನು ಕಲ್ಪಿಸಿ ಕೊಡುವ ಉದ್ದೇಶವು ಮೈಸೂರು ಸರಕಾರದಲ್ಲಿರುವದರಿಂದ ಈ ಜಿಲ್ಲೆಯವರು ಮೈಸೂರು ಸರಕಾರದ ಹುಕುಮಿನ ಪ್ರಯೋಜನವೇನೆಂಬುದಾಗಿ ಪರೀಕ್ಷಿಸಿ ನೋಡಬಹುದು. ಕೃಷಿ ವೃತ್ತಿಯಲ್ಲಿ ಸಾಧಾರಣವಾಗಿ ನಮ್ಮ ಜಿಲ್ಲೆಯವರಿಗೆ ವಿಶೇಷ ಕುತೂಹಲವಿರುವದು. ಈ ಜಿಲ್ಲೆಯ ಅನೇಕ ಬಂಜರು ಗುಡ್ಡೆಗಳನ್ನೂ ಮೈಸೂರು ಸಂಸ್ಥಾನದಲ್ಲಿ ಹಲವು ಕಾಫಿ ತೋಟಗಳನ್ನೂ ಬಹಳ ಅಭಿವೃದ್ಧಿಗೆ ತಂದ ಇಲ್ಲಿಯ ರೋಮನ್ ಕೆಥೋಲಿಕ ಕ್ರೈಸ್ತ ಸಮುದಾಯದವರು ಈ ವಿಷದಲ್ಲಿ ಸಹ ಈ ಜಿಲ್ಲೆಯರಿಗೆ ಮಾರ್ಗದರ್ಶಿಗಳಾಗಬಹುದೆಂಬದಾಗಿ ಕೋರುತ್ತೇವೆ.

೪. ಈ ತಿಂಗಳ ತಾ. ೧೭ರಲ್ಲಿ ನೂತನ ಸಭಾಕಾರ್ಯಗಳನ್ನು ಪ್ರಾರಂಭಿಸಿದ ವರಿಷ್ಠ ನ್ಯಾಯನಿರ್ಮಾಣ ಸಭಾ ವೃತ್ತಾಂತದಲ್ಲಿ ವಿಚಾರಕ್ಕೆ ತಂದುಕೊಳ್ಳತಕ್ಕ ಕೆಲವಂಶಗಳಿರುವವು. ವರಿಷ್ಠ ಸರಕಾರದವರು ಮತ್ತು ಮದ್ರಾಸ್ ಸರಕಾರದವರು ಈ ಸಂಸ್ಥಾನದ ಉತ್ಪತ್ತಿಯ ಅನು

ಬೇಕು!

ತೀರ್ಥಹಳ್ಳಿ ಟೈಲ್ ಫ್ಯಾಕ್ಟರಿಗೆ 50 ಜನ ಕೂಲಿಗಳನ್ನಿಟ್ಟುಕೊಂಡಿರುವ ಕಂಟ್ರಾಕ್ಟರು ಬೇಕು. ಕೂಲಿಗಳ ಸಂಬಳ, ದರ, ಕೆಲಸದ ಸ್ವಭಾವ ಮುಂತಾದ ತಪಸೀಲನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ತೀರ್ಥಹಳ್ಳಿ, 30—1—17. } ದಿ ಮ್ಯಾನೇಜಿಂಗ್ ಡೈರೆಕ್ಟರ್, ಟೈಲ್ ಫ್ಯಾಕ್ಟರಿ, ತೀರ್ಥಹಳ್ಳಿ, ಮೈಸೂರು ಸ್ಟೇಟ್.

ಆಶೀರ್ವಾದ ವಚನಗಳು.

ಸಲಿಮಾತ್ರ ನರಸಿಂಹ ಅಪ್ಪಿರಮಣ್ಣ ಬೊಂಬಾಯ ವೆಂಕಟೇಶ ಕಮ್ಮರಲ್ಲಿ ಕಳದ ಚೈತ್ರ ವ೦ ಪಿಂಗಳ ಕಾರ್ತಿಕ ೧೧ರಲ್ಲು ಶಲಿಮಾರ ಗ್ರಾಮದಲ್ಲಿ ಆದಂಥಾ ಇವರ ಮಗನ ಉಪನಯನದ ಸಮಾರಂಭದ ಸಂದರ್ಭದಲ್ಲಿ ಆಯಾಯ ಊರಿಂದ ಬಂದ ಬ್ರಾಹ್ಮಣರಿಗೆ ತಾರತಮ್ಯಾನುಸಾರವಾಗಿ ರೂಪಾಯಿ ೫-೪-೩-೨-೧ರ ಪ್ರಕಾರ ದಕ್ಷಿಣೆ ವ ಅನ್ಯ ಜಾತಿಯ ಬ್ರಾಹ್ಮಣರಿಗೆ ಸರಾಸರಿ ಒಂದು ರೂಪಾಯಿ ಪ್ರಕಾರ ಲಗ್ನದ ದಿನದಿಂದ ಆರು ದಿವಸದ ವರೆಗೆ ಬಂಧುಬಳಗರಿಗೆ ಉದಾರಹಸ್ತದಿಂದ ದಕ್ಷಿಣೆ ಮತ್ತು ಫಲ ಹಾರವನ್ನು ಕೊಟ್ಟಿರುವರು. ಸರ್ವರಿಗೂ ಊಟೋಪಚಾರಗಳ ಸತ್ಕಾರವು ಸಹ ಬಹಳ ವಿಶೇಷವಾಗಿತ್ತು. ತನ್ನ ಸಂಬಂಧರಲ್ಲಿ ಕೃತ್ಯಪರರನ್ನು ನೋಡದೆ ೧-೨-೩-೪ ಪವನುಗಳ ಉಡುಗೊರೆ ಕೊಟ್ಟು ತೃಪ್ತಿಪಡಿಸಿರುವರು. ಇಂಥವರಿಗೂ ಇವರ ಕುಟುಂಬಕ್ಕೂ [illegible] ಅಭಿವೃದ್ಧಿ [illegible]

ನರಸಿಂಹ ವಾಸುದೇವ ಭಟ್ಟ.

ಭೋಜನದಲ್ಲಿ ಮಾಡಿಕೊಂಡ ಇಷ್ಟಾರ್ಥವು ತೃಪ್ತಿಕರವಾಗಿರದು. ಸಂಸ್ಥಾನದಲ್ಲಿ ನಡೆಯತಕ್ಕ ಕಾರ್ಯಾಭಿವೃದ್ಧಿಗಳಿಗೆ ತಕ್ಕಂತೆ ಸಂಸ್ಥಾನದ ಸರಕಾರದ ಪಾಲಿಗೆ ಬರುವ ಉತ್ಪತ್ತಿಯ ಅಂಶವು ಸಾಲದು. ಈ ವಿಚಾರವು ಇತ್ತೀಚೆಯ ಸಂಸ್ಥಾನಿಕ ನ್ಯಾಯವಿಧಾಯಕ ಸಭೆಯಲ್ಲಿ ತರ್ಲೋಚನಾಗಿತ್ತು. ಇದಕ್ಕೆ ನಿವೃತ್ತಿಯು ಇಂಡಿಯಾ ಸರಕಾರದವರಿಂದ ದೊರಕಬೇಕಾದ್ದರಿಂದ ಮುಂಬಯಿ ಮತ್ತು ಬಂಗಾಳ ಸಂಸ್ಥಾನಗಳಲ್ಲಿ ವಾಡಿಕೆಯಿರುವಂತೆಯೇ ಈ ಸಂಸ್ಥಾನದಲ್ಲಿಯೂ ಅಬ್ಕಾರಿ ಇಲಾಖೆಯಿಂದ ಬರುವ ಉತ್ಪತ್ತಿಯನ್ನು ಮದ್ರಾಸ್ ಸರಕಾರದ ವಿನಿಯೋಗಕ್ಕೇನೆ ಬಿಡಬೇಕೆಂತ ಬಹುಮಾನಪಟ್ಟ ಶರ್ಮರವರು ಒಂದು ನಿರ್ಣಯವನ್ನು ಸಭೆಯ ಮುಂದೆ ತಂದಿದ್ದರು. ಸರಕಾರದ ಸಮ್ಮತಿಯು ಇದಕ್ಕೆ ಇರಲಿಲ್ಲ ಅಂದ ಮೇಲೆ ಸಭೆಯಲ್ಲಿ ಈ ನಿರ್ಣಯವು ಬಿದ್ದುಹೋಯಿತೆಂತ ಪ್ರತ್ಯೇಕವಾಗಿ ಹೇಳಬೇಕೆಂತಿಲ್ಲ. ಮೋಟರ್ ಗಾಡಿಗಳ ಚಲಾವಣೆಗೆ ಬೇಕಾಗಿರುವ ಮೋಟರ್ ಒಯಿಲ್ ಪೆಟ್ರೋಲಿನ ಮೇಲೆ ಗೆಲನ್ ಒಂದಕ್ಕೆ ಆಣೆ ೬ರಂತೆ ಸುಂಕವನ್ನು ವಿಧಿಸಬೇಕೆಂಬ ವಿಧಿಯು ಈ ಸರ್ತಿಯ ಸಭೆಯ ಮಂಜೂರಾತಿಯನ್ನು ಪಡೆದಿದೆ. ಯುದ್ಧಕಾಲದಲ್ಲಿ ರಣರಂಗದಲ್ಲಿ ವಿಶೇಷವಾಗಿ ಬೇಕಾಗಿರುವಂಥ ಈ ಎಣ್ಣೆಯು ಹಿಂದೂಸ್ಥಾನದಲ್ಲಿ ಅನಾವಶ್ಯಕವಾಗಿ ವ್ಯಯವಾಗಿ ಹೋಗದಂತೆ ಈ ಸುಂಕವನ್ನು ವಿಧಿಸಲ್ಪಟ್ಟಿದೆ.

ಸ್ಥಳಿಕ—ಮಂಗಳೂರು.

ಇದೇ ತಿಂಗಳ ತಾರೀಕು ೧೭ನೇ ಶನಿವಾರ ಸಾಯಂಕಾಲ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಜರುಗುವುದೆಂದು ಕಳೆದ ಸಂಚಿಕೆಯಲ್ಲಿ ಹೇಳೋಣಾದ ಮಹಾ ಜನರ ಸಭೆಯು ಕ್ಲುಪ್ತಕಾಲಕ್ಕೆ ಸರಿಯಾಗಿ ಮ॥ ರಾ॥ ರಾ॥ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಕೂಡಿ ಬಂದು, ಸಹಕಾರ ಸಂಘಗಳ ರಿಜಿಸ್ಟ್ರಾರರಾದ ದಿವಾನ ಬಹದ್ದೂರ ಸ್ವಾಮಿಕಣ್ಣುಪಿಳ್ಳೆಯವರು ಸೊಗಸಾದೊಂದು ಭಾಷಣವನ್ನು ಮಾಡಿದರು. ಸಹಕಾರ ಸಂಘಗಳ ನಡವಳಿಕೆಯಲ್ಲಿ ಮುಖ್ಯವಾಗಿರುವ ಸುವ್ಯವಸ್ಥೆ ಮತ್ತು ಕಾಲಕ್ಲುಪ್ತತೆ ಎಂಬೆರಡು ಲಕ್ಷಣಗಳು ಜೀವನಕಲಹದಲ್ಲಿ ಅತ್ಯುಪಯುಕ್ತವಾದುವುಗಳಾದುದರಿಂದ ಅವುಗಳನ್ನು ಬೆಳೆಯಿಸುವುದಕ್ಕೆ ಯೌವನಾವಸ್ಥೆಯೇ ಅತ್ಯಂತ ಯೋಗ್ಯವಾದ ಸಂದರ್ಭವಾಗಿರುತ್ತದೆ, ಮತ್ತು ಆ ಕಾರಣದಿಂದಾದರೂ ವಿದ್ಯಾರ್ಥಿಗಳೆಲ್ಲರೂ ಸಹಕಾರ ಸಂಘಗಳ ಕುರಿತು ತಮ್ಮ ವಿದ್ಯಾರ್ಜನೆಯ ಸಮಯದಲ್ಲೇ ಸಾಕಷ್ಟು ಮಾಹಿತಿಯನ್ನು ಸಂಪಾದಿಸಿಕೊಳ್ಳಬೇಕೆಂಬುದೇ ಅವರ ಭಾಷಣದ ಸಾರಾಂಶವಾಗಿತ್ತು.

ಅದರ ಮರುದಿನ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ದಕ್ಷಿಣ ಕನ್ನಡಾ ಸೆಂಟ್ರಲ್ ಕೊ-ಅಪರೇಟಿವ್ ಬೇಂಕಿನ ಪಾಲುಗಾರರ ಒಂದು ಮಹಾ ಸಭೆ ಸೇರಿತು. ಆ ಸಭೆಯಲ್ಲಿ ಮಂಜೂರಾದ ನಿರ್ಣಯಗಳ ಪೈಕಿ, ಈ ಜಿಲ್ಲೆಯ ಸಹಕಾರ ಸಂಘಗಳ ಮೇಲ್ವಿಚಾರದ ಖರ್ಚಿನ ಬಗ್ಗೆ ವರ್ಷಂಪ್ರತಿ ಸದರಿ ಸಂಘಗಳಿಗೆ ಕೊಟ್ಟ ಸಾಲಗಳ ಮೇಲೆ ವಸೂಲಾದ ಬಡ್ಡಿಯ ಮೂವತ್ತನೇ ಒಂದಂಶದಷ್ಟನ್ನು ಸೆಂಟ್ರಲ್ ಬೇಂಕಿನಿಂದ ವೆಚ್ಚಮಾಡಬೇಕೆಂದು ಒಂದು ನಿರ್ಣಯವಾಯಿತು. ಸದರಿ ಮೇಲ್ವಿಚಾರದ ಬಗ್ಗೆ ಸೆಂಟ್ರಲ್ ಬೇಂಕಿನವರು ಮೊಕ್ರುರು ಮಾಡಿದ ಸುಪರ್ವೈಜರರಿಗೋಸ್ಕರ ಮತ್ತು ಬೇಂಕಿನ ಇತರ ಶಿಬಂದಿಯವರಿಗೋಸ್ಕರ ಅವರವರ ಸಂಬಳದ ಮೇಲೆ ರೂಪಾಯಿ ಒಂದರ ಒಂದಾಣೆಯಷ್ಟನ್ನು ಬೇಂಕಿನಿಂದ ತೆತ್ತು ಒಂದು ಪ್ರೊವಿಡೆಂಟ್ ಫಂಡನ್ನು ಕೂಡಾ ಏರ್ಪಡಿಸಲಾಯಿತು. ಬೇಂಕಿನ ಪಾಲುಗಾರರೊಳಗೊಬ್ಬರೂ ಮಂಗಳೂರು ತಾಲೂಕು ಬೋರ್ಡಿನ ಬಿನ್ ಸರಕಾರಿ ಅಧ್ಯಕ್ಷರೂ ಆಗಿರುವ ಮ॥ ರಾ॥ ರಾ॥ ಸುಜೀರ ರಘುನಾಥಯ್ಯನವರು ಲೋಕಲ್ ಬೋರ್ಡುಗಳಲ್ಲಿನ ಪ್ರೊವಿಡೆಂಟ್ ಫಂಡುಗಳ ಉಪಯುಕ್ತತೆಯನ್ನು ವಿವರಿಸಿದರು. ಅಂತಹ ಪ್ರೊವಿಡೆಂಟ್ ಫಂಡಿಗೆ ಬೇಂಕಿನಿಂದ ರೂಪಾಯಿ ಒಂದಕ್ಕೆ ತಿಂಗಳು ಒಂದರ ¼ ಪೈಯಂತೆ ಬಡ್ಡಿ ಕೂಡಿಸಬೇಕೆಂದೂ ನಿರ್ಣಯವಾಯಿತು. ಇತರ ಕೆಲಸಗಳೊಂದಿಗೆ, ವಾಯಿದೆ ಕಳೆದು ಬಾಕಿ ನಿತ್ತ ಸಾಲಗಳ ವಸೂಲಿಯ ಬಗ್ಗೆ ಸಂಘಗಳು ಕೋರ್ಟುಕಚೇರಿಗಳಿಗೆ ಹೋಗುವುದರ ಬದಲಾಗಿ (arbitration) ಪಂಚಾಯತಿಯಲ್ಲೇ ರಿಜಿಸ್ಟ್ರಾರರ ಯಾ ಅಸಿಸ್ಟೆಂಟ್ ರಿಜಿಸ್ಟ್ರಾರರ ಮುಖಾಂತರ ವಿಲೇವಾರಿ ಮಾಡಿಸಿಕೊಳ್ಳುವುದು ಯೋಗ್ಯವೆಂದು ಸಭಾಧ್ಯಕ್ಷರು ವಿವರಿಸಿ ಹೇಳಿದರು. ತದನಂತರ, ಸಭೆಯಲ್ಲಿ ಹಾಜರಿದ್ದು ಬೇಕಾದ ಅನುಭವವನ್ನು ಹೇಳಿಕೊಟ್ಟುದಕ್ಕೆ ರಿಜಿಸ್ಟ್ರಾರರಿಗೂ, ಕ್ಲಬ್ಬಿನಲ್ಲಿ ಸಭೆ ಸೇರಿಸಗೊಟ್ಟುದಕ್ಕೆ ಕೊಸ್ಮೊಪೊಲಿಟನ್ ಕ್ಲಬ್ಬಿನ ಅಧಿಕಾರಗಳಿಗೂ ಅಭಿವಂದನೆಗಳನ್ನರ್ಪಿಸಿ, ಸಭೆಯು ಮುಕ್ತಾಯವಾಯಿತು.

ಇಲ್ಲಿಯ ಸ್ಟುಡೆಂಟ್ಸ್ ಬ್ರದರ್‌ಹೂಡ್‌ನವರಿಂದ ಇದೇ ತಿಂಗಳ ತಾ. ೧೯ರಲ್ಲು ಗೋಖಲೆ ಸ್ಮಾರಕ ದಿನವು ಬಹಳ ಉತ್ಸಾಹದಿಂದ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಆಚರಿಸಲ್ಪಟ್ಟಿತು. ಗವರ್ನಮೆಂಟ್ ಕೊಲೇಜಿನ ಉಪಾಧ್ಯಾಯರಾದ ಮ॥ ರಾ॥ ಜಗನ್ನಾಥದಾಸ ಎಮ್. ಎ. ರವರು ಆ ದಿನ ಕೂಡಿದ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಸೈಂಟ್ ಎಲೋಸಿಯುಸ್ ಕೊಲೇಜಿನ ವಿದ್ಯಾರ್ಥಿಯಾದ ರಾ॥ ನಾರಾಯಣಬಾಳಿಗರವರು ಗೋಖಲೆಯವರ ಗುಣಾತಿಶಯಗಳನ್ನು ವರ್ಣಿಸಿ ಒಂದು ಉಪನ್ಯಾಸವನ್ನು ಮಾಡಿದಮೇಲೆ ಅಧ್ಯಕ್ಷರು ತಮ್ಮ ರಸವತ್ತಾದ ಭಾಷಣದಿಂದ ಸಭಾ ಕಾರ್ಯಗಳನ್ನು ಪೂರೈಸಗೊಳಿಸಿದರು. ಗೋಖಲೆಯವರ ಸ್ಮರಣಾರ್ಥವಾಗಿ ಒಂದು ಪುಸ್ತಕ ಭಂಡಾರವನ್ನು ಸ್ಥಾಪಿಸಬೇಕೆಂತ ನಿಶ್ಚಯಿಸಲ್ಪಟ್ಟಿದೆ ಎಂಬುದಾಗಿ ತಿಳಿಯುತ್ತೇವೆ.

ಬಂಟವಾಳದಲ್ಲಿ [illegible] ರಾ॥ ಅಣ್ಣಪ್ಪ [illegible] ಮೇಲೆ [illegible] ಮಾಡಿದ [illegible]

ರೆಂತ ಸೆಷನ್‌ಕೋರ್ಟಿನ ೧೮೦ ಪ್ರಕರಣದ ಪ್ರಕಾರ ರಾ॥ ಗುರ್ಜರ ನಾರಾಯಣ ಪ್ರಭು ಮತ್ತು ಮಂಜುನಾಥ ಬಾಳಿಗರವರ ಮೇಲೆ ದಾಖಲಾದ ಫಿರ್ಯಾದು ಈ ಮೊದಲು ಮಂಗಳೂರಲ್ಲಿ ಸಬ್ ಮೇಜಿಸ್ಟ್ರೇಟರಾಗಿದ್ದು ನಂತರ ಬೆಳ್ತಂಗಡಿಗೆ ವರ್ಗಾಯಿಸಲ್ಪಟ್ಟ ಮ॥ ರಾ॥ ರಾ॥ ತಿಮ್ಮಪ್ಪ ಪೂಂಜರವರಿಂದ ತೆಗೆದು ಹಾಕೋಣಾಯಿತೆಂಬುದಾಗಿ ತಿಳಿಯುತ್ತೇವೆ.

ಬೋಳಾರ ಮಾರಿಗುಡಿ ಕಳವಿನ ಮೊಕದ್ದಮೆಯಲ್ಲಿ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರು ಮುದ್ದೆಯಾಲಿಯರಿಗೆ ಕೊಟ್ಟ ತೀರ್ಮಾನದ ಮೇಲೆ ಮುದ್ದೆಯಾಲಿಯರು ಅಪೀಲು ಮಾಡಿಕೊಂಡಲ್ಲಿ ಸೆಶನ್ಸ್ ಜಡ್ಜರು ೨ನೇ ಮುದ್ದೆಯಾಲಿ ಪಾತ್ರಿ ವೆಂಕಟ್ರಮಣಯ್ಯನು ನಿರಪರಾಧಿ ಎಂಬ ಅಭಿಪ್ರಾಯಪಟ್ಟು ಅವನನ್ನು ಖುಲಾಸುಪಡಿಸಿದರು. ೧ನೇ ಮುದ್ದೆಯಾಲೆ ದಾಮರ್ಸನಿಗೆ ಕೆಳ ಕೋರ್ಟಿನ ತೀರ್ಮಾನವನ್ನೇ ಕಾಯಂ ಮಾಡಿರುತ್ತಾರೆ.

ಇದೇ ತಾ. ೧೯ನೇ ಸೋಮವಾರ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಕೂಡಿ ಬಂದಿರುತ್ತದೆ. ಈ ಸಾರಿಯ ಸಭೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ ಇಂಜನಿಯರರಿಂದ ಕಳುಹಿಸೋಣಾದ ಪುರವೃದ್ಧಿ ವರದಿಯೂ ಜಿಲ್ಲೆಯ ಕೆಲವು ಕಾಮಗಾರಿಗಳ ಅಂದರೆ ರಸ್ತೆ ಇತ್ಯಾದಿ ದುರುಸ್ತಿಗಳ ಬಗ್ಗೆ ಕಳುಹಿಸಿದ ಅಂದಾಜುಪಟ್ಟಿಗಳೂ ಬೋರ್ಡು ಮೆಂಬರರ ಸಮ್ಮತಿಯನ್ನು ಹೊಂದಿರುತ್ತವೆ. ಬೆಳ್ತಂಗಡಿ ಸಬ್ ಅಸಿಸ್ಟೆಂಟ ಸರ್ಜನರ ಬಗ್ಗೆ ಬಿಡಾರ ಕಟ್ಟಿಸುವದೆ ಬೋರ್ಡಿನವರಿಂದ ರೂ. ೨೫೦೦ ಸೆಂಕ್ಷನ್ ಆಗಿರುತ್ತದೆ.

ಈ ವರ್ಷ ಮಂಗಳೂರಲ್ಲಿ ಶ್ಯೂಟಿಂಗ್ ಗೆಲರಿ ಎಂಬ ಒಂದು ವಿಧಾನದ ಆಟವು ತಲೆ ಎತ್ತಿದೆ. ಹಿಂದೆ ಎಲ್ಲಾದರೂ ಈ ಆಟಗಳು ಜಾತ್ರೆ ಇತ್ಯಾದಿಗಳ ಕಾಲದಲ್ಲಿ ಒಂದೆರಡು ದಿವಸಗಳು ಜಾರಿಯಲ್ಲಿದ್ದವು. ಈಗಲಾದರೋ ಜಾತ್ರೆಕಾಲದಲ್ಲಿ ಮಾತ್ರವಲ್ಲ; ಎಲ್ಲಾ ಸಮಯಗಳಲ್ಲಿ ಬಹಿರಂಗ ಸ್ಥಳಗಳಲ್ಲಿ ಈ ಆಟಗಳ ಹಂದರಗಳು ಅಣಿಗೊಳಿಸಲ್ಪಟ್ಟಿವೆ. ಲ್ಯಾನಿನ ಮೈದಾನಿನ ಎದುರ್ಗಡೆಯಲ್ಲಿರುವ ಕೆರೆಯ ಬದಿಯಲ್ಲೊಂದು, ವೆಂಕಟ್ರಮಣ ದೇವಸ್ಥಾನದ ಒಳಿಯಲ್ಲೊಂದು. ಯಾವಾಗ ನೋಡಿದರೂ ಹುಡುಗರೂ ಯೌವನಸ್ಥರೂ ಹಣವನ್ನಿಟ್ಟು ಈ ಆಟವನ್ನು ಆಡುತ್ತಿದ್ದಾರೆ. ಈ ಆಟವು ಹುಡುಗರ ಶಿಷ್ಟಾಚಾರ ದೃಷ್ಟಿಯಿಂದ ಒಂದು ವಿಧಾನದ ಜುಗಾರಾಟವೇ ಎಂದು ಹೇಳಲು ಪ್ರತ್ಯವಾಯ ತೋರುವದಿಲ್ಲ. ಉದಾಹರಣೆಗಾಗಿ, ಇದೇ ತಾ. ೧೮ರಲ್ಲು ಶ್ರೀ ವೆಂಕಟ್ರಮಣ ದೇವಸ್ಥಾನದ ಆವರಣದಲ್ಲಿಟ್ಟಿರುವ [illegible] ಆಟದ ಹಂದರದ ಹತ್ತಿರ ೬ ವರ್ಷ ಪ್ರಾಯದ ರಾಮ ಎಂಬ ಹುಡುಗನ ಹತ್ತಿರ ಯಾರೋ ಒಬ್ಬನು ನೀರು ಕುಡಿಯ ಕೇಳಿದನಂತೆ. ಹುಡುಗನು ಮನೆಯ ಒಳಗೆ ಹೋಗಿ ನೀರು ತೆಗೆದು ಹೊರಗೆ ತಂದು ಅವನಿಗೆ ಕೊಟ್ಟಾಗ ಅವನು ಹುಡುಗನ ಕುತ್ತಿಗೆಯಲ್ಲಿದ್ದ ಅರ್ಧ ಪವನು ತೂಗಾಡಿಸಿದ ಚಿನ್ನದ ಗೋಪನ್ನು ಜಾರಿಸಿ ಓಡಿಯೇ ಹೋದನು. ಈ ಅಸಾಮಿಯ ಪತ್ತೆಯೇ ಆಗಲಿಲ್ಲ. ನಂತರ ಪೋಲೀಸರಿಗೆ ವರದಿ ಮಾಡಿದ್ದಲ್ಲಿ ಪೋಲೀಸಿನವರು ಈ ಕಳ್ಳನ ಪತ್ತೆ ಮಾಡುವದರಲ್ಲಿ ಪ್ರಯತ್ನ ತಕ್ಕೊಂಡು ಸದರಿ ಪಟಾರದಲ್ಲಿರುವ ಶ್ಯೂಟಿಂಗ್ ಗೆಲರಿಯ ಬಳಿ ನಿಂತು ಗೆಲರಿಯಲ್ಲಿ ದುಡ್ಡು ಬಿಸಾಡುವ ಸೊಣಗಾರ ನರಸಿಂಹ ಎಂಬ ಹುಡುಗನನ್ನು ಅನುಮಾನದಿಂದ ಹಿಡಿದು ವಿಚಾರಿಸಿದ್ದಲ್ಲಿ ಹಿಂದಿನ ದಿನ ಆ ಹುಡುಗನಿಗೆ ಈ ಗೆಲರಿಯಲ್ಲಿ ೧ ರೂಪಾಯಿ ನಷ್ಟವಾಗಿತ್ತೆಂದೂ ಈ ದಿನ ತಾನೇ ಹೆಚ್ಚಿನ ಹಣ ಸಂಪಾದಿಸುವದೆ ರಾಮನ ಕುತ್ತಿಗೆಯ ಗೋಪನ್ನು ಕಳವು ಮಾಡಿದ್ದನೆಂದೂ ತಿಳಿಯಬಂತು. ಕಳವಾದ ಗೋಪು ಸಹಾ ಈ ನರಸಿಂಹನಲ್ಲಿ ಸಿಕ್ಕಿತು. ಹೀಗೆಯೇ ಇನ್ನೆಷ್ಟು ಮಂದಿ ಮಾಡಿರುವರೋ ತಿಳಿಯದು. ಹಾಗೂ ಪಟ್ಟಣದಲ್ಲಿ ಪ್ರಚಲಿತವಿರುವ ಈ ಗೆಲರಿ ಆಟವನ್ನು ಪೋಲೀಸಿನವರು ಬೇಗನೇ ಮುಕ್ತಾಯಗೊಳಿಸುವರೆಂತ ಹಾರೈಸುತ್ತೇವೆ.

ಕಳೆದ ವರ್ಷ ಇಡೀ ಜಿಲ್ಲೆಯಲ್ಲಿ ೪೫,೪೫೯ ಜನನವಾಗಿರುವದು. ಈ ಪೈಕಿ ೨೩,೧೦೪ ಗಂಡಸರು. ೨೨,೩೫೫ ಹೆಂಗಸರು. ೨೭,೦೧೩ ಮರಣಗಳಾಗಿರುತ್ತವೆ. ಈ ಪೈಕಿ ೧೩,೭೭೦ ಗಂಡಸರು. ೧೩,೨೪೩ ಹೆಂಗಸರು.

ರಾ॥ ಶರಾಫ ಮುಂಡ್ಕೂರ ಮಂಗೇಶಯ್ಯನವರ ಮನೆಯಲ್ಲಿ ಅಡಿಗೆ ಭಟ್ಟನಾಗಿದ್ದ ಬೆಳ್ತಂಗಡಿ ವೆಂಕಟೇಶ ಭಟ್ಟನೆಂಬವನು ತಾ. ೧೭ನೇ ಸಾಯಂಕಾಲ ಹೊತ್ತಿಗೆ ಮನೇ ಯಜಮಾನರು ಸರಾಪಕಟ್ಟೆಗೆ ಹೋಗಿದ್ದ ಕಾಲ ನಗದಿ ರೂ. ೫೦೦ ಇದ್ದ ಚೀಲವೊಂದನ್ನು ಕಳವು ಮಾಡಿ ಪರಾರಿಯಾಗಿರುವನಂತೆ. ಕಳ್ಳನ ಪತ್ತೆಯಾಗಲಿಲ್ಲ.

ಮೋಟರ್ ಬಂಡಿಗಳಿಗೆ ಉಪಯೋಗಿಸುವ ಪೆಟ್ರೋಲುಗಳ ಧಾರಣೆಯು ಬಹಳವಾಗಿ ಏರಿದೆ. ಅಷ್ಟೇ ಅಲ್ಲ; ಇಂಡಿಯಾ ಸರಕಾರವು ಈ ಪೆಟ್ರೋಲಿನ ಮೇಲೆ ಗೆಲನ್ ಒಂದಕ್ಕೆ ತಿರಿಗಿ ೬ ಆಣೆಯ ಹೊಸ ಸುಂಕವನ್ನು ವಿಧಿಸಿದ್ದಾರೆ. ಹೀಗಿದ್ದರೂ ನಮ್ಮ ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿಯವರು ಪ್ರಯಾಣಿಕರ ದರವನ್ನು ಏರಿಸದೆ ಇದ್ದುದು ವ ಚಲಾವಣೆಗಳ ಸರ್ತಿಯನ್ನು ಕಡಿಮೆ ಮಾಡದೆ ಇದ್ದುದು ಆಶ್ಚರ್ಯ. ಯುದ್ಧ ತೀರುವ ವರೆಗೆ ಈ ಸರ್ವಿಸನ್ನು ಸರಾಗವಾಗಿ ನಡಿಸಬೇಕಾದರೆ ಕಂಪೆನಿಯವರು ಮೇಲೆ ಹೇಳಿದ ಎರಡರಲ್ಲಿ ಕನಿಷ್ಠಪಕ್ಷಕ್ಕೆ ಒಂದು ಸೂಚನೆಯನ್ನಾದರೂ ಕೈಕೊಳ್ಳುವದು ಪ್ರಕೃತ ಅವಶ್ಯವಾಗಿದೆ.

ಲೇಂಡ್ ರಿಕಾರ್ಡು ತಹಸೀಲದಾರರಾಗಿರುವ ಮ॥ ರಾ॥ ಎಚ್. ಶಂಕರರಾಯರು ಒಂದು ತಿಂಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವದರಿಂದ ಪುತ್ತೂರಿನ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿರುವ ಮ॥ ರಾ॥ ಕೆ. ಶಿವರಾಯರು ಆ॥ ಲೇಂಡ್ ರಿಕಾರ್ಡು ತಹಸೀಲದಾರರಾಗಿಯೂ ಆ॥ ೨ನೇ ಕಾರಸ್ಪೊಡೆಂಟ ಕ್ಲಾರ್ಕರಾಗಿರುವ ಮ॥ ರಾ॥ ಜಿ. ಮಾಧವರಾಯರು ಪುತ್ತೂರಿನ ಆ॥ ಸಬ್ ಮೇಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಕ್ರೈಸ್ತ ಯುವಜನ ಸಮಾಜ (ವೈ. ಎಂ. ಸಿ. ಎ) ದ ಹೆಸರಿಂದ ಕೆಲವು ಕ್ರೈಸ್ತ ಯುವಕರು ಒಂದು ವಂತಿಗೆ ಪಟ್ಟಿಯನ್ನು ಪಟ್ಟಣದ ಅಯಾ ಗೃಹಸ್ಥರಲ್ಲಿಗೆ ಕೊಂಡುಹೋಗಿ ಸುಮಾರು ೫೦ ರೂಪಾಯಿ ಚಂದ ಎತ್ತಿ ಸದರಿ ಸಮಾಜಕ್ಕೆ ಮೋಸಪಡಿಸಿರುವರಂತೆ. ವೈ. ಎಂ. ಸಿ. ಎರವರಿಂದ ಕಳುಹಿಸೋಣಾಗುವ ವಂತಿಗೆ ಪಟ್ಟಿಗಳಿಗೆ ಡಾಕ್ಟರ್ ವಿ. ವರ್ಗೀಸರವರ ದಸ್ಕತು ಇರುವದರಿಂದ ಅವರ ದಸ್ಕತು ಇಲ್ಲದ ಪಟ್ಟಿಗಳಿಗೆ ಪಟ್ಟಣದ ಗೃಹಸ್ಥರು ವಂತಿಗೆ ಕೊಟ್ಟು ಮೋಸ ಹೋಗಬಾರದಾಗಿ ಸೂಚಿಸುತ್ತೇವೆ.

ಕಳೆದವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೪ ಪ್ಲೇಗು ಮರಣಗಳಿದ್ದವು.

ಮೈಸೂರು ಶ್ರೀಮನ್ಮಹಾರಾಜರವರ ಸರಕಾರಿ ಹುಕುಂ.

ಹುಕುಂ ನಂಬರ್ ೮೨೦೧-೭ ಸ್ಟ್ಯಾ. ೯೯-೧೫-೫, ತಾರೀಕು ೭-೫-೧೯೧೬.

ಮೇಲ್ಕಂಡ ಮೊದಲನೆಯ ಲೇಖನದಲ್ಲಿ ನಮೂದಾದ ಸಲಹೆಗಳು ಮಲೆನಾಡಿನ ಅಭಿವೃದ್ಧಿಗಾಗಿ ಮಾಡಿದ ಏರ್ಪಾಟಿಗೆ ಸಹಕಾರಿಯಾದವುಗಳೆಂದು ಸರ್ಕಾರದವರು ಭಾವಿಸುತ್ತಾರೆಯಾದಕಾರಣ, ಅಲ್ಲಿ ಬಂದು ನೆಲೆಯಾಗಿ ನಿಲ್ಲಲು ಇಷ್ಟಪಡುವ ಜನಗಳಿಗೆ ಈ ಕೆಳಕಂಡ ರಿಯಾಯಿತಿಗಳನ್ನು ತೋರಿಸಲು ಶಿವಮೊಗ್ಗಾ ಡಿಸ್ಟ್ರಿಕ್ಟ ಡಿಪ್ಯುಟಿ ಕಮಿಷನರವರಿಗೆ ಅಧಿಕಾರವನ್ನು ಕೊಟ್ಟಿರುತ್ತಾರೆ.

(೧) ಅಲ್ಲಿ ಬಂದು ನೆಲೆಯಾಗಿ ನಿಲ್ಲತಕ್ಕ ಪ್ರತಿಯೊಂದು ಕುಟುಂಬದವರಿಗೆ ೮ ಎಕರೆಗೆ ಮೀರದ ವಿಸ್ತೀರ್ಣವುಳ್ಳ ಆಕಾರಕಂದ ಬಂಜರು ಜಮೀನನ್ನು ಮುಫತ್ತಾಗಿ ಕೊಟ್ಟು ಮೊದಲಿನ ಮೂರು ವರ್ಷಗಳಿಗೆ ಕಂದಾಯವನ್ನು ಮಾಫುಮಾಡಿ ಆ ಮಾರನೆಯ ಎರಡು ವರ್ಷಗಳಲ್ಲಿ ಅರ್ಧ ಕಂದಾಯವನ್ನು ವಸೂಲುಮಾಡಿ ಆ ಮೇಲೆ ಪೂರ್ತಿಯಾಗಿ ಕಂದಾಯವನ್ನು ವಸೂಲುಮಾಡುವುದು. ಲ್ಯಾಂಡ್ ರೆವಿನ್ಯೂ ನಿಬಂಧನೆಗಳ ೮೪ನೆಯ ನಿಬಂಧನೆಯು ಮೇರೆಗೆ ಈ ವಿಷಯದಲ್ಲಿ ಆವಶ್ಯಕವಾಗಿರುವ ಸರ್ಕಾರದವರ ಮಂಜೂರಾತಿಯು, ಒಂದು ವರ್ಷ ತನಕ ಮೊದಲನೆಯ ಸಾರಿ ಪರಮಾವಧಿ ೫೦೦ ಎಕರೆಗಳ ವಿಸ್ತೀರ್ಣದ ವರೆಗೆ, ಆವಶ್ಯಕವಿಲ್ಲವೆಂದು ಹುಕುಂ ಮಾಡಿ ಇದೆ. (೨) ೧೯೧೬ನೆಯ ಮಾರ್ಚಿ ಗುರ್ತೀ ಮತ್ತು ೬೩೯೪-೯-ಸ್ಟ್ಯಾ. ೧೧೦-೧೫-೩ನೆಯ ನಂಬರಿನ ಸರ್ಕಾರಿ ಹುಕುಮಿನಲ್ಲಿ ವಿಧಿಸಿರುವ ಸ್ಕೇಲಿನ ಮೇರೆಗೆ ಮನೆಕಟ್ಟುವ ಸಾಮಾನುಗಳನ್ನು ಕೊಡುವುದು. (೩) ವ್ಯವಸಾಯಕ್ಕೆ ಬೇಕಾದ ದನಕರುಗಳನ್ನೂ ವ್ಯವಸಾಯದ ಮುಟ್ಟು ವಗೈರೆಗಳನ್ನೂ ಕೊಂಡುಕೊಳ್ಳುವುದಕ್ಕೆ ಸರ್ಕಾರದ ಸಹಾಯವು ಆವಶ್ಯಕವಾದ ಸಂದರ್ಭಗಳಲ್ಲಿ ತಕ್ಕಮಟ್ಟಿಗೆ ಆಸ್ತಿಯುಳ್ಳ ಸ್ಥಳೀಯ ಜನರ ಜಾಮೀನಾದರೆ, ಮೂರನೆಯ ವರ್ಷದಿಂದ ಪ್ರಾರಂಭಮಾಡಿಕೊಂಡು ಹತ್ತು ಸಾಲಿಯಾನಾ ಕಂತುಗಳಲ್ಲಿ ಮೊಬಲಗನ್ನು ವಾಪಸು ಪಾವತಿ ಮಾಡಬೇಕೆಂಬ ಷರತ್ತಿಗೆ ಒಳಪಟ್ಟು, ಸದರಿ ಸಾಮಾನು ವಗೈರೆಗಳನ್ನು ಕೊಂಡುಕೊಳ್ಳುವುದಕ್ಕಾಗಿ ಪ್ರತಿಯೊಂದು ಸಂಸಾರಕ್ಕೆ ೧೦೦ ರೂಪಾಯಿಗೆ ಮೀರದಷ್ಟು ಹಣವನ್ನು ಮುಂಗಡವಾಗಿ ಕೊಡುವುದು.

ಈ ಬಗ್ಗಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರ ವಶದಲ್ಲಿ ೫,೦೦೦ ರೂಪಾಯಿಗಳನ್ನು ಇಡಲಾಗುವುದು; ಈ ವಿಷಯದಲ್ಲಿ ತಕಾವಿ ಸಾಲಗಳಿಗಾಗಿ ಬರುವ ದರಖಾಸ್ತುಗಳ ವಿಲೇವಾರಿಯ ವಿಚಾರದಲ್ಲಿ ರೆವಿನ್ಯೂ ಇಲಾಖೆಯ ಅಸಿಸ್ಟೆಂಟ್ ಕಮಿಷನರಿಗೆ ಕೊಟ್ಟಿರುವ ಅಧಿಕಾರವನ್ನೇ ಮಲೆನಾಡು ಇಂಪ್ರೂವ್‌ಮೆಂಟ್ ಏರ್ಪಾಟಿನ ಸ್ಪೆಷಲ್ ರೆವಿನ್ಯೂ ಆಫೀಸರಿಗೆ ಕೊಟ್ಟಿರುತ್ತದೆ.

ಈ ಮೊಬಲಗನ್ನು ಬೆಂಗಳೂರು ಸಿಟಿಯ ಅಭಿವೃದ್ಧಿಗಾಗಿ ಚಾಲ್ತಿ ಸಾಲಿನ ಬಡ್ಜೆಟ್ಟಿನಲ್ಲಿ ಒದಗಿಸಿರುವ ಒಂದು ಲಕ್ಷ ರೂಪಾಯಿನಿಂದ ಕೊಡುವಂತೆ ಹುಕುಂ ಮಾಡಲಾಗುವುದು.

೨. ಉದ್ದಿಷ್ಟಾರ್ಥವು ನೆರವೇರಬೇಕಾದರೆ ಅನುಸರಿಸಬೇಕಾಗುವ ಏರ್ಪಾಟುಗಳ ಪೈಕಿ ಆಪಾಟ್ಟಾರಾದ ಜಮೀನ್ದಾರರಿಗೆ ಕಮಿಷನ್ ಕೊಟ್ಟು ಅವರ ಮೂಲಕ ವಕ್ಕಲುಗಳು ಬರುವಂತೆ ಮಾಡಬೇಕೆಂತಲೂ ಈ ಕೆಲಸವನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಒಬ್ಬ ಸ್ಪೆಶಲ್ ಆಫೀಸರನ್ನು ನೇಮಕಮಾಡಬೇಕೆಂತಲೂ ಶಿವಮೊಗ್ಗಾ ಡಿಪ್ಯುಟಿ ಕಮಿಷನರವರು ಸಲಹೆ ಕೊಡುತ್ತಾರೆ. ಈ ವಿಚಾರದಲ್ಲಿ ಏನೇನು ಮಾಡಬೇಕೆಂಬ ಬಗ್ಗೆ ನಿಶ್ಚಯವಾದ ಸಲಹೆಗಳನ್ನೂ ಅದಕ್ಕೆ ಖರ್ಚು ಏನು ತಗಲುತ್ತದೆಯೆಂಬುದನ್ನೂ ಕುರಿತು ಕಳುಹಿಸುವರೊಡನೆ ಆಲೋಚಿಸಿ ಆ ಸಂಗತಿಯನ್ನು ಸರಕಾರದವರ ಹುಕುಂ ಬಗ್ಗೆ ಶಿಫಾರಸು ಮಾಡತಕ್ಕದ್ದು.

೩. ಮೇಲ್ಕಂಡ ೧ನೆಯ ಪ್ಯಾರಾದಲ್ಲಿ ಹೇಳಲ್ಪಟ್ಟ ರಿಯಾಯಿತಿಗಳು ಮಲೆನಾಡಿಗೆ ವಕ್ಕಲುಗಳು ಬಂದು ನೆಲೆಯಾಗಿ ನಿಲ್ಲುವ ವಿಚಾರದಲ್ಲಿ ಎಷ್ಟರಮಟ್ಟಿಗೆ ಸಹಕಾರಿಗಳಾಗಿವೆಯೆಂಬ ಅಂಶವನ್ನು ಕುರಿತು ವರ್ಷದ ಅಖೈರಿನಲ್ಲಿ ಡೆಪ್ಯುಟಿ ಕಮಿಷನರ್ ಮತ್ತು ಅಧ್ಯಕ್ಷರು ಸರ್ಕಾರಕ್ಕೆ ರಿಪೋರ್ಟು ಮಾಡತಕ್ಕದ್ದೆಂದು ಕೋರಿ ಇದೆ.

ಡಿ. ಎಂ. ನರಸಿಂಗರಾವ್,
ಸರ್ಕಾರದ ಜನರಲ್ ಇಲಾಖೆಯ ಸೆಕ್ರೆಟರಿ.

ಉಳ್ಳಾಲ:—ಉಳ್ಳಾಲ ಪೆರ್ಮನ್ನೂರು ವಗೈರೆ ಗ್ರಾಮದವರು ಹಲವು ವರ್ಷಗಳಿಂದ ಉಳ್ಳಾಲ ಗ್ರಾಮದ ಪೂರ್ವ ದಿಕ್ಕಿನಲ್ಲಿ ರೈಲ್ವೆಸ್ಟೇಶನ್ ಆಗಬೇಕೆಂದು ಮಾಡುತ್ತಿದ್ದ ದೀರ್ಘಕಾಲದ ಪ್ರಯತ್ನವು ಶ್ರೀ ದೇವರ ಕೃಪೆಯಿಂದ ಸದ್ಯದಲ್ಲಿ ಸಫಲವಾಗುವ ಹಾಗೆ ಕಾಣುವುದು. ಇದೇ ತಿಂಗಳ ತಾ. ೧೨ರಿಂದ ಎರಡನೇ ಹುಕುಂ ಕೊಡುವ ವರೇಗೆ ಬೆಳಗ್ಗೆ ಗಂಟೆ ೯-೧೫ಕ್ಕೆ ಕಣ್ಣನೂರಿನಿಂದ ಮಂಗಳೂರಿಗೆ ಬರುವ ಮತ್ತು ಸಾಯಂಕಾಲ ಗಂಟೆ ೫-೨೫ಕ್ಕೆ ಮಂಗಳೂರಿನಿಂದ ಕಣ್ಣನೂರಿಗೆ ಹೋಗುವ ಪೆಸ್ಸೆಂಜರ್ಸ ಗಾಡಿಗಳನ್ನು ಈಗ ರೈಲ್ವೆ ಹಾಕಿದ ಸುಮಾರು ೧ ಮೈಲು ದಕ್ಷಿಣಕ್ಕೆ ಮೈಲುನಂಬ್ರ ೫೦೬/೨ರ ಬಳಿ ಪರೀಕ್ಷಾರ್ಥವಾಗಿ ನಿಲ್ಲಿಸುತ್ತಾರೆ. ಆದ್ದರಿಂದ ಸರ್ವ ಜನರೂ ಈ ಸಂದರ್ಭವನ್ನು ಹೋಗಗೊಳಿಸದೆ ಅದಷ್ಟು ಉತ್ತೇಜನ ಕೊಟ್ಟು ಕಾಯಂ ಸ್ಟೇಶನ್ ಆಗುವ ಹಾಗೆ ಅದಕ್ಕೆ ಸಂಬಂಧಪಟ್ಟವರು ಪ್ರಯತ್ನಮಾಡುವರಾಗಿ ನಂಬುತ್ತೇವೆ. ಇಂಥಾ ಸಂದರ್ಭವನ್ನು ಕಳಕೊಂಡರೆ ದೇವರು ಕೊಟ್ಟರೂ ಪೂಜಾರಿ ಬಿಡ ಎಂಬ ಗಾದೆಯಂತೆ ಆಗುವುದು. ಪರಂತು, ಈಗ ಸದರಿ ಗಾಡಿಗಳಲ್ಲಿ ಪ್ರಯಾಣ ಮಾಡುವ ಜನರಿಗೆ ಇಟ್ಟಿರುವ ಟಿಕೇಟು ದರವನ್ನು ಆಲೋಚಿಸಿದರೆ ಸದರಿ ದರವು ಅತ್ಯಧಿಕವಾಗಿರುವದರಿಂದ ಅಂದರೆ ೩ ಮೈಲಿಗೆ ೬ ಮೈಲಿನ ದರ ರೂ. ೦—೧—೩ ವಸೂಲು ಮಾಡುವದರಿಂದ ಮತ್ತು ಸೀಸನ್ ಟಿಕೇಟು ಪಡಕೊಳ್ಳುವವರು ೬ ಮೈಲಿಗೆ ೨೪ ಮೈಲಿನ ದರ [illegible] ರಿಂದ ಹೊಸದಾಗಿ ಕೊಟ್ಟ ಈ ದಾನವನ್ನು ಜನರು [illegible] [illegible] ಉದ್ದೇಶವು ರೈಲ್ವೆ ಅಧಿಕಾರಿಗೆ ತಿಳಿಯುವ ಹಾಗೆ [illegible]. ಸದರಿ ರೈಲ್ವೆ ಗಾಡಿಗಳು ಸದರಿ ಉಳ್ಳಾಲದಲ್ಲಿ ನಿಲ್ಲುವ ಹಾಗೆ ಏನು ಪ್ರಯತ್ನಪಟ್ಟು [illegible] ಕಲೆಕ್ಟರ ದೊರೆಗಳವರು ಸದರಿ [illegible] ಟಿಕೇಟು ದರದ [illegible] ಸಹಾ [illegible] ಪ್ರಯತ್ನ ಮಾಡಿದರೆ ಉಪಕಾರವು ಎಂದು [illegible] ನಂಬುವದಲ್ಲದೆ ಅವರು ಈ [illegible] [illegible] ಕೃತಜ್ಞರಾಗಿರುತ್ತೇವೆ.

ಸೇರಿಸುವರೆ ಲಂಡನಿನಲ್ಲಿ ಕೂಡಲಿಕ್ಕಿರುವ ಕನ್ಸರೆನ್ಸಿಗೆ ಹಿಂದೀ ಪ್ರಜಾ ಮುಖಂಡರದ ಅರಿಸಲ್ಪಟ್ಟ ಹಿಂದೀ ಪ್ರತಿನಿಧಿಗಳನ್ನು ಕಳುಹಿಸಬೇಕು, ಮತ್ತು ಈ ಕನ್ಸರೆನ್ಸಿನಿಂದ ಮಾಡಲ್ಪಟ್ಟ ಸೂಚನೆಗಳನ್ನು ಜಾಂಗ್ ತರುವ ಮೊದಲು ಹಿಂದೀ ಜನರ ಅಭಿಪ್ರಾಯಗಳನ್ನು ಕೇಳಿಕೊಳ್ಳಬೇಕೆಂತ ಈ ಕೂಡಿದ ಸಭಿಕರು ಅಭಿಪ್ರಾಯಪಡುತ್ತಾರೆಂಬ ಠರಾವನ್ನು ಸಭೆಯು ಮುಂದಿಟ್ಟರು. ಮಾನ್ಯ ಟಿ. ರಂಗಾಚಾರ್ಯರು, ಮ! ರಾ! ಸತ್ಯಮೂರ್ತಿ, ದಿವಾನ್ ಬಹದ್ದೂರ್, ಕೆ. ಕೃಷ್ಣಸ್ವಾಮಿ ಮೊದಲಾದವರು ಈ ಮಸೂದೆಯನ್ನು ಅನುಮೋದಿಸಿದ ನಂತರ ಈ ಸಭೆಯಲ್ಲಾದ ನಿರ್ಣಯಗಳನ್ನು ಸ್ಟೇಟ್ ಸೆಕ್ರೆಟರಿಗಳಿಗೂ ವೈಸರಾಯಿ ಪ್ರಭುಗಳಿಗೂ ಕಳುಹಿಸಬೇಕೆಂತ ಸಭೆಯಲ್ಲಿ ನಿಶ್ಚಯಿಸಲ್ಪಟ್ಟಿತು.

ಮದ್ರಾಸ್ ಸಂಸ್ಥಾನದ ೧೯೧೫-೧೬ನೇ ಇಸವಿಯ ವಿದ್ಯಾಖಾತೆಯ ವರದಿಯು ಪ್ರಕಟವಾಗಿದೆ. ಈ ವರದಿಯಲ್ಲಿ ತೋರುವ ಪ್ರಕಾರ ಕಳೆದ ವರ್ಷ ಶಾಲೆಗಳ ಸಂಖ್ಯೆಯು ಸೇಕಡಾ ೩.೭ರಂತೆಯೂ ವಿದ್ಯಾರ್ಥಿಗಳ ಸಂಖ್ಯೆಯು ಸೇಕಡಾ ೪.೭ರಂತೆಯೂ ಹೆಚ್ಚಿದೆಂತ ತೋರಿಬರುತ್ತದೆ. ವಿದ್ಯಾ ಖಾತೆಯ ಗ್ರೇಡುಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ನೋಡುವದಾದರೆ ೧೯೧೪-೧೫ನೇ ಇಸವಿಗಿಂತ ಈ ಕಳೆದ ವರ್ಷಗಳಲ್ಲಿ ವಿದ್ಯಾಭ್ಯಾಸದ ಅಭಿವೃದ್ಧಿಯು ಕಡಿಮೆ ಎಂತಲೇ ಹೇಳಬೇಕು. ಉದಾಹರಣೆಗಾಗಿ ೧೯೧೪-೧೫ನೇ ಇಸವಿಯಲ್ಲಿ ಕಾಲೇಜ್ ಶಿಕ್ಷಣವು ಸೇಕಡಾ ೧೫.೦೫ರಂತೆ ಹೆಚ್ಚಾಗಿತ್ತು. ಆದರೆ ಕಳೆದ ವರ್ಷ ಸೇಕಡಾ ೨.೪ ಕಡಿಮೆಯಾಗಿದೆ. ಹೀಗಾಗಲು ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸುವಾಗ ಸಿಂಡಿಕೇಟಿನವರಿಂದ ವಿಧಿಸೋಣಾದ ನಿಯಮಗಳೇ ಕಾರಣವಂತೆ. ಹುಡುಗಿಯರ ಶಾಲೆಗಳು ೧೩೭ರಷ್ಟು, ಶಾಲಾ ಹುಡುಗಿಯರ ಸಂಖ್ಯೆಯು ೧೬,೫೦೦ರಷ್ಟು ಹೆಚ್ಚಿದೆ. ಹೆಚ್ಚಿಗೆ ೪೪ ಹುಡುಗಿಯರ ಶಾಲೆಗಳನ್ನು ತೆರೆಯಲು ಸರಕಾರದವರು ಲೋಕಲ್ ಫಂಡುಗಳಿಗೆ ಸಹಾಯ ಮಾಡಿದ್ದಾರೆ. ಕಾಲೇಜುಗಳ ಬಗ್ಗೆ ಒಟ್ಟು ರೂ. ೧೯.೫ ಲಕ್ಷ ಸರಕಾರಕ್ಕೆ ಖರ್ಚಾಗಿಯದೆ. ೧೯೧೪-೧೫ನೇ ಇಸವಿಯಲ್ಲಿ ೧೯.೩೫ ಲಕ್ಷ ರೂಪಾಯಿ ಮಾತ್ರ ಖರ್ಚಾಗಿತ್ತು. ಈ ಬಗ್ಗೆ ಪ್ರೊವಿನ್ಶಿಯಲ್ ಫಂಡಿನಿಂದ ರೂ. ೭೮.೪೮ ಲಕ್ಷ, ಲೋಕಲ್ ಮತ್ತು ಮುನ್ಸಿಪಾಲ್ ಫಂಡುಗಳಿಂದ ರೂ. ೨೧.೬೮ ಲಕ್ಷ, ಶಾಲಾ ಫೀಸು ಇತ್ಯಾದಿಗಳಿಂದ ೧೬.೪೦ ಲಕ್ಷ ರೂಪಾಯಿಗಳು ಸಿಕ್ಕಿರುತ್ತವೆ.

ಸರ್ಜನ್ ಜನರಲರಾದ ಡಬ್ಲ್ಯು. ಬಿ. ಬೆನರ್ಮ್ಯಾನರು ಸೇಲಮನ್ನು ಸಂದರ್ಶಿಸಿದಾಗ ಸೇಲಮ್ ಲಿಟರರಿ ಸೊಸೈಟಿಯಲ್ಲಿ ಬಾಲವಿವಾಹ ಸಂಬಂಧ ಒಂದು ಭಾಷಣವನ್ನು ಮಾಡಿದರು. ಈ ಸಭೆಗೆ ಸೇಲಮಿನ ನೂರಾರು ಮಂದಿ ಸುಶಿಕ್ಷಿತರು ಕೂಡಿಬಂದಿದ್ದರು. ಮ! ರಾ! ಸಿ. ವಿಜಯರಾಘವಾಚಾರ್ಯರು ಅಧ್ಯಕ್ಷರಾಗಿದ್ದರು. ಭಾಷಣಕರ್ತರು ಪ್ರಾಣಿ ಮತ್ತು ವನಸ್ಪತಿ ವರ್ಗಗಳಲ್ಲಿ ಅಪಕ್ವವಾದ ಹಣ್ಣಿನ ಬೀಜವು ಹೇಗೆ ಕೆಟ್ಟಿದೆಂಬದನ್ನು ವಿವರಿಸಿದರು. ಸೇಲಮಿನ ಪ್ರಖ್ಯಾತ ಮಾವಿನ ತೋಟ ಮಾಲಿಕರೂ ಮೈಸೂರಿನ ದನಗಳ ತಳಿಗಾರರೂ ಆಸ್ಟ್ರೇಲಿಯದ ಕುದುರೆ ತಳಿಪೋಷಕರೂ ಈ ನಿಯಮವನ್ನನುಸಾರವಾಗಿಯೇ ನಡಿಯುತ್ತಾರೆ. ಮೃಗ ಮತ್ತು ವನಸ್ಪತಿಗಳಲ್ಲಿ ಬೀಜಕ್ಕೆ ಪಕ್ವವಾದದ್ದೇ ಬೇಕೆಂಬ ನಿಯಮವಿರುವಾಗ ಮಾನವ ವರ್ಗದಲ್ಲಿ ಈ ನಿಯಮವನ್ನು ಮೀರಿ ನಡೆಯುವದು ಸರಿಯಲ್ಲ ಎಂದು ಹೇಳಿ ಸರ್ಜನ ದೊರೆಗಳು ೧೩-೧೪ ವರ್ಷದ ಬಾಲೆಯರ ಎಲುಬುಗಳ ಚೌಕಟ್ಟು ಹೆರುವಾಗ ಉಂಟಾಗುವ ಬಿಕ್ಕಿಗೆ ಅನುಕೂಲವಾಗಿಲ್ಲ. ಎಲುಬಿನ ಚೌಕಟ್ಟು ಮಾತ್ರವಲ್ಲ; ಇಡೀ ನರಸಂಸ್ಥೆಯೂ ಆ ಪ್ರಾಯದಲ್ಲಿ ಇನ್ನೂ ಬೆಳೆಯುವ ಸ್ಥಿತಿಯಲ್ಲಿದೆ. ಇಂಥಾ ಸ್ಥಿತಿಯಲ್ಲಿರುವ ದೇಹಕ್ಕೆ ಮತ್ತೊಂದು ದೇಹವನ್ನು ೯ ತಿಂಗಳ ವರೆಗೆ ಮತ್ತು ಹುಟ್ಟಿದ ನಂತರ ಕೆಲವು ತಿಂಗಳ ವರೆಗೆ ಸಾಕುವ ಶಕ್ತಿ ಇಲ್ಲ. ಹುಡುಗಿಯು ಋತುಮತಿಯಾದ ಚಿನ್ಹೆಗಳು ಕಂಡಾಕ್ಷಣ ಅವಳು ಪ್ರೌಢೆಯಾದಳೆಂತ ಭಾವಿಸುವದು ಮಹಾ ತಪ್ಪು ಎಂಬಿತ್ಯಾದಿ ಮಾತುಗಳಿಂದ ಬಾಲವಿವಾಹ ಪದ್ಧತಿಯಿಂದುಂಟಾಗುವ ಕೆಡಕುಗಳನ್ನು ತೋರಿಸಿಕೊಟ್ಟು ಹಿಂದೂ ಹುಡುಗಿಯರ ವಿವಾಹ ಪ್ರಾಯವು ೧೬ ಆಗಿರುವದು ಉತ್ತಮವೆಂತ ಹೇಳಿದರು. ಅನಂತರ ಅಧ್ಯಕ್ಷರು ಭಾಷಣಕಾರರ ಮಾತುಗಳನ್ನು ಆದರಿಸಿ ೧೬ ವರ್ಷ ವಯಸ್ಸಿನಲ್ಲಿ ವಿವಾಹ ಮಾಡುವರು ಕೂಡಾ ಎಳೇ ವಯಸ್ಸಾಯಿತು. ೨೧ ವರ್ಷ ಹದವೆಂತ ಹೇಳಿದರು.

ಮೈಸೂರು ದಿವಾನರವರು ಮೈಸೂರಿನ ಭಟ್ಕಳಕ್ಕೆ ರೈಲ್ವೆ ತರುವದರ ಸಂಬಂಧ ಇಂಡಿಯಾ ಸರಕಾರದವರೊಡನೆ ಆಲೋಚನೆ ನಡಿಸುವರೆ ಡಿಲ್ಲಿಗೆ ಹೋಗುವದರಲ್ಲಿದ್ದಾರೆ.

ಸೀಲೋನಿನಲ್ಲಿರುವ ಕೆಲಸಗಾರರ ಕನಿಷ್ಟಸ್ಥಿತಿಯು ಹಿಂದೂಸ್ಥಾನದಲ್ಲಿ ಪ್ರಕಟವಾಗುತ್ತಿರುವದು ಅಲ್ಲಿಯ ತೋಟ ಮ್ಯಾಲೀಕರಿಗೆ ಮೆಚ್ಚಿಗೆಯಾಗಿಲ್ಲವಂತೆ. ಸೀಲೋನಿಗೆ ಹೋಗಿ ಕೆಲಸಗಾರರ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡು ವರ್ತಮಾನ ಪತ್ರಿಕೆಗಳ ಮೂಲಕ ಕೂಲಿಗಳ ಸ್ಥಿತಿಯನ್ನು ಬಹಿರಂಗಪಡಿಸುವ ಲೋಕಹಿತೈಷಿಗಳ ಕಡೆಗೆ ಸೀಲೋನ್ ತೋಟಗಾರರ ಸಂಘದ ಚೇರ್ಮೇನರು ಅತಿ ಉಗ್ರರಾಗಿರುವರು. ಈ ಸಂದರ್ಭದಲ್ಲಿ ತೋಟಗಾರರ ಸಂಘದ ಚೇರ್ಮೇನರಾದ ಮಿ! ಸಿಂಕ್ಲೆರರು, "ಇಂಥಾ ಚಳವಳಗಾರರನ್ನು ಸೀಲೋನಿಗೆ ಬರಬಿಡುವದು, ಅವರನ್ನು ನಮ್ಮ ಮಧ್ಯದಲ್ಲಿ ಇರಬಿಡುವದು, ನಮ್ಮ ಕೆಲಸಗಾರರೊಡನೆ ಅವರನ್ನು ಕಲೆ ಹಾಕಲು ಬಿಡುವದು ಮತ್ತು ಅವರು ಕೆಲಸಗಾರರೊಡನೆ ಮಾತಾಡಿದ ವಿಷಯಗಳನ್ನು ಪತ್ರಗಳಿಗೆ ಬರೆಯುವದು ಕೇವಲ ಅನ್ಯಾಯವಾಗಿದೆ. ಈ ಕೂಲಿಗಳ ಸ್ಥಿತಿಗತಿಗಳ ವಿಚಾರನಡಿಸುವರೆ ಸರಕಾರದವರಿಂದ ಕಳುಹಿಸೋಣಾದ ಮಿ! ಮಾರ್ಜೋರಿಬೇಂಕ ಮತ್ತು ಮಾನ್ಯ ಮಾರಕ್ಕಾಯರರು ಈ ಕೆಲಸಗಾರರ ಸ್ಥಿತಿಗತಿಗಳನ್ನು ಕಂಡು ದಕ್ಷಿಣ ಹಿಂದೂಸ್ಥಾನದಲ್ಲಿ ಈ ವಿಷಯದಲ್ಲಿರುವ ಸುದ್ದಿಯು ಸುಳ್ಳೆಂತ ಅಭಿಪ್ರಾಯಪಟ್ಟಿರುತ್ತಾರೆ" ಎಂತ ಹೇಳಿರುವರು. ಆದರೆ ಇವರ ವರದಿಯು ಇನ್ನೂ ಪ್ರಕಟವಾಗದ್ದರಿಂದ ಈ ವರದಿಯು ಸ್ವರೂಪವು ಹೊರಬಿದ್ದ ನಂತರ ಮಾತ್ರ ಮಿ! ಸಿಂಕ್ಲೇರರ ಈ ಮಾತುಗಳಿಗೆ ಮಹತ್ವವನ್ನು ಕೊಡಬೇಕಾಗಿದೆ.

ಮದ್ರಾಸು ಸಂಸ್ಥಾನದಲ್ಲಿ ಸಹಕಾರದ ಅಭಿವೃದ್ಧಿ.

(1915—1916.)

೧೯೧೬ನೇ ಜೂನ್ ತಾ. ೩೦ಕ್ಕೆ ಅಂತ್ಯವಾಗುವ ಒಂದು ವರ್ಷದಲ್ಲಿ ಸಹಕಾರ ಸಂಘಗಳ ಬೆಳವಣಿಗೆಯ ವರ್ಷಾವಧಿ ರಿಪೋರ್ಟನ್ನು ಪರಿಶೀಲಿಸಿ ಮದ್ರಾಸ ಗವರ್ನಮೆಂಟಿನವರು ಈ ಕೆಳಗಿನ ಮಾತುಗಳಿಂದ ಮುಕ್ತಾಯಗೊಳಿಸಿರುವರು: — "ಗತವರ್ಷದ ರಿಪೋರ್ಟಿನಲ್ಲಿ ತೋರುವ ಮೇರೆಗೆ ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ನಿಜವಾದ ಅಭಿವೃದ್ಧಿಯು ದೃಷ್ಟಾಂತಗಳು ಕಂಡುಬರುವುದು ಸ್ಪಷ್ಟವಾಗುತ್ತದೆ. ಈ ಸಂಸ್ಥಾನದಲ್ಲಿ ಸಹಕಾರವು ಸರಕಾರಿ ನೌಕರರ ಆಶ್ರಯದಿಂದ ಬೆಳೆಯದೆ ಸ್ವಾಭಾವಿಕವಾಗಿಯೇ ಪ್ರಜಾಜನರಲ್ಲಿ ತಲೆದೋರಿದ ಸ್ವಾವಲಂಬನ ಶಕ್ತಿಯಿಂದಲೇ ವೃದ್ಧಿಗೆ ಬಂದಿದೆ. ಈ ವಿಷಯದಲ್ಲಿ ಸಂಸ್ಥಾನದ ಹಲವು ಭಾಗಗಳಲ್ಲಿ ನಿಜವಾದ ವಾತ್ಸಲ್ಯದಿಂದ ಹಲವು ಗೃಹಸ್ಥರು ಕೈಕೊಟ್ಟಿರುವರು. ಸಾಲವನ್ನು ಅದರ ಚಕ್ರೆಯನ್ನೂ ಸ್ವಲ್ಪ ಕಾಲಕ್ಕೆ ಪಾವತಿ ಮಾಡುವಂತೆ ಇನ್ನಷ್ಟು ಪ್ರಯತ್ನ ಬೇಕಾಗಿದೆ. ಈ ವಿಷಯದಲ್ಲಿ ದಕ್ಷಿಣಕನ್ನಡದವರ ಪ್ರಯತ್ನವು ಇತರರಿಗೆ ಆದರ್ಶವಾಗಬೇಕಾಗಿದೆ. ಅಲ್ಲಿ ಸಾಲದ ಮೊಬಲಗಿನಲ್ಲಿ ಬರೇ ಸೇಕಡಾ ೨ರಷ್ಟು ಮಾತ್ರವೇ ವಸೂಲಾಗದೆ ಬಾಕಿ ನಿಂತಿದೆ. ಶಿಕ್ಷಣವು ಮತ್ತು ಮೇಲ್ವಿಚಾರದ ಸಂಸ್ಥೆಗಳು ಹೆಚ್ಚಿದಷ್ಟಕ್ಕೆ ದಕ್ಷಿಣಕನ್ನಡದಂತೆಯೇ ಇತರ ಜಿಲ್ಲೆಗಳೂ ಈ ಕ್ರಿಯೆಯಲ್ಲಿ

೨. ದಕ್ಷಿಣಕನ್ನಡ ಜಿಲ್ಲೆಯವರ ವಿಷಯವಾಗಿ ಶ್ಲಾಘನೆಯ ಮಾತುಗಳು ಇನ್ನೂ ಕೆಲವು ಈ ರಿಪೋರ್ಟಿನಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಕಳೆದ ವರ್ಷದ ರಿಪೋರ್ಟಿನ ಮೇರೆಗೆ ದಕ್ಷಿಣಕನ್ನಡದ ಸಂಘಗಳಲ್ಲಿ ಬ್ರಾಹ್ಮಣರಲ್ಲದವರ ಮತ್ತು ಪಂಚಮರ ಸಂಖ್ಯೆಯು ಬಹಳ ಅಲ್ಪವಾಗಿತ್ತು; ಈಗ ಬ್ರಾಹ್ಮಣರ ಸಂಖ್ಯೆ ೨,೮೫೩; ಬ್ರಾಹ್ಮಣೇತರರ ಸಂಖ್ಯೆ ೩,೫೯೭; ಪಂಚಮರ ೬೩ ಮೆಂಬರರು ಈ ಸಂಘಗಳ ಪ್ರಯೋಜನವನ್ನು ಹೊಂದುತ್ತಲಿದ್ದಾರೆಂದು ತಿಳಿಯುತ್ತದೆ.

೩. ಪುತ್ತೂರ ಸೆಂಟ್ರಲ್ ಬೇಂಕಿನಲ್ಲಿ ಲೇವಾದೇವಿಯ ದಾಮಾಶಾಯವನ್ನು ನೋಡಿದಾಗ ಬೇಂಕಿನ ಸ್ವಂತ ಬಂಡವಾಳವು ಸಾಕಷ್ಟು ಇಲ್ಲವಾದರೂ ಅನೇಕ ಸಂಘಗಳು ಕಂತುಗಳಿಂದ ತಮ್ಮ 'ಶೇರು' (ಪಾಲು)ಗಳ ಹಣವನ್ನು ತೆರುತ್ತಲಿರುವುದರಿಂದ ಕ್ರಮೇಣ ಈ ಬಂಡವಾಳವು ಹೆಚ್ಚಬಹುದು ಎಂದು ರಿಜಿಸ್ಟ್ರಾರರು ಅಭಿಪ್ರಾಯಪಡುತ್ತಾರೆ. ಸಂಘಗಳಿಗೆ ದ್ರವ್ಯಾನುಕೂಲವನ್ನು ಒದಗಿಸಿ ಕೊಡುವುದೇ ಈ ಬೇಂಕಿನ ಉದ್ದೇಶವಾದ ಕಾರಣ ಈ ಜಿಲ್ಲೆಯ ಸಂಘಗಳು ತಮ್ಮ ಕೈಲಾದ ಮಟ್ಟಿಗೆ ತಮ್ಮ ಪಾಲುಗಳ ಹಣವನ್ನು ಹೆಚ್ಚಿಸುವುದು, ಬೇಂಕಿನಲ್ಲಿ ಠೇವಣಾತಿ ಇಡುವವರಿಗೆ ಹೆಚ್ಚಿನ ವಿಶ್ವಾಸವನ್ನು ಹುಟ್ಟಿಸುವುದು. ಇದಲ್ಲದೆ ಈಗ ಬರೆ ೬೨ ಸಂಘಗಳು ಮಾತ್ರವೇ ಇವೆ. ಈ ಸಂಘಗಳ ಸಂಖ್ಯೆಯು ಹೆಚ್ಚಾದಾಗ ಸ್ವಾಭಾವಿಕವಾಗಿ ಬೇಂಕಿನ ಬಂಡವಾಳವು ಹೆಚ್ಚುವುದು.

೪. ಚಂಗಲ್ಪಟ್ಟಿನಷ್ಟು ದೊಡ್ಡ ಜಿಲ್ಲೆಯಲ್ಲಿ ೨೫೫ ಸಂಘಗಳಿದ್ದು ಅವುಗಳಲ್ಲಿ ಬರೆ ೧ ಲಕ್ಷ ರೂಪಾಯಿ. ಬಿಡಿ ಜನಗಳಿಂದ ಠೇವಣಾತಿ ಮಾಡಲ್ಪಟ್ಟಾಗ ನಮ್ಮ ಜಿಲ್ಲೆ ೬೨ ಹಳ್ಳಿ ಸಂಘಗಳಲ್ಲಿ ಸುಮಾರು ೨ ಲಕ್ಷ ರೂಪಾಯಿ ಠೇವಣಾತಿಯಾಗಿದೆ ಎಂದು ಗೊತ್ತಾಗುತ್ತದೆ. ಇದಲ್ಲದೆ ಶಹರಿನ ಸಂಘಗಳ ಪೈಕಿ ಮಂಗಳೂರಿನ ಕೆಥೋಲಿಕ ಸಂಘದಲ್ಲಿ ೨೫೮೦೦೦ ರೂಪಾಯಿಯ ಠೇವಣಾತಿಗಳಿವೆ; ಅಂದರೆ ಮದ್ರಾಸ ಶಹರಿನ ಒಟ್ಟು ಸಂಘಗಳಲ್ಲಿರುವುದಕ್ಕಿಂತಲೂ ಸುಮಾರು ೨೦೦೦ ರೂಪಾಯಿ ಹೆಚ್ಚಾಗಿದೆ.

೫. ಈ ರೀತಿಯಾಗಿ ಸಂಘಗಳ ಸ್ಥಿತಿಯನ್ನು ನೋಡುವಾಗ ನಮ್ಮ ಜಿಲ್ಲೆಯಲ್ಲಿ ಸಂಖ್ಯೆ ಕಡಿಮೆಯಾದರೂ ಇತರ ಜಿಲ್ಲೆಯಲ್ಲಿನ ಸಂಘಗಳಿಗಿಂತಲೂ ವಹಿವಾಟು ಬಹಳ ಮೇಲ್ಮಟ್ಟಿಗೆ ಚನ್ನಾಗಿ ಇದೆ ಎಂದು ಈ ರಿಪೋರ್ಟಿನಿಂದ ಕಂಡುಬರುತ್ತದೆ. ಇದಲ್ಲದೆ ಸಹಕಾರ ಪ್ರಸರಣೆಗೆ ನಮ್ಮ ಜಿಲ್ಲೆಯಲ್ಲಿ ಕಟಿಬದ್ಧರಾದವರಲ್ಲಿ ಮಂಗಳೂರಿನ ಮ! ರಾ! ಮೊಳಹಳ್ಳಿ ಶಿವರಾಯರ ಸಾಹಸವನ್ನು ಸರಕಾರದವರು ಈ ರಿಪೋರ್ಟಿನಲ್ಲಿ ಅನಂತುಚಿತವಾಕ್ಯಗಳಿಂದ ಕೊಂಡಾಡಿರುವರು.

೬. ಇಡೀ ಸಂಸ್ಥಾನದಲ್ಲಿ ವರ್ಷದ ಆದಿಯಲ್ಲಿದ್ದ ೧೬೦೦ ಸಂಘಗಳಲ್ಲಿ ವರ್ಷಾಂತ್ಯದೊಳಗೆ ಅವ್ಯವಸ್ಥೆ, ಮತ್ತು ಕಾರ್ಯಾಭಾವಗಳ ಬದನಿಕೆ ಹಿಡಿದ ಕಾರಣ ೬೩ ಸಂಘಗಳನ್ನು ಕಿತ್ತು ಹಾಕಿದರೂ ನೂತನವಾಗಿ ೨೬೩ ಸಂಘಗಳು ರಿಜಿಸ್ಟ್ರಿಯಾದವು. ಹೀಗೆ ಹೊಸ ವರ್ಷದ ಆರಂಭಕ್ಕೆ ೧೮೦೦ ಸಂಘಗಳು ವಹಿವಾಟು ನಡೆಸುತ್ತಿದ್ದವು.

೭. ವರ್ಷದ ಆದಿಯಲ್ಲಿ ಇದ್ದ ೧೧೮,೭೩೬ ಮೆಂಬರರ ಸಂಖ್ಯೆಯು ೧೩೬,೭೪೭ಕ್ಕೆ ಏರಿತು. ಮುಸಲ್ಮಾನರೂ ಕ್ರೈಸ್ತರೂ ಪಂಚಮರೂ ಹೆಚ್ಚಿನ ಸಂಖ್ಯೆಯಿಂದ ಮೆಂಬರರಾಗಿ ಮುಂದೆ ಬಂದಿರುವರು. ಈ ವಿಷಯದಲ್ಲಿ ಹಲವು ಮುನ್ಸಿಪಾಲಿಟಿಗಳು ತಮ್ಮ ಕೈಕೆಳಗಿನ ಬಡ ನವಕರರಿಗೆ ತುಂಬಾ ಉತ್ತೇಜನ ಕೊಟ್ಟಿರುವುದಾಗಿ ತಿಳಿಯಬರುತ್ತವೆ.

ಸಂಘಗಳ ಬಂಡವಾಳವು ೧೩,೬೮,೬೬೮ರಿಂದ ೧೬,೧೧,೮೩೫ಕ್ಕೆ ವೃದ್ಧಿಯಾಯಿತು. 'ರಿಜರ್ವ ಫಂಡು' ಎಂಬ ಕ್ಷೇಮನಿಧಿಯು ವರ್ಷಾಂತ್ಯದಲ್ಲಿ ರೂ. ೮,೫೦,೬೫೯ಕ್ಕೆ ಬಂದು ನಿಂತಿತು. ಈ ಪೈಕಿ ಹೆಚ್ಚಿನ ಮೊಬಲಗು ಶಹರಗಳಲ್ಲಿ ೨೫ ಸಂಘಗಳ ಮತ್ತು ಸೆಂಟ್ರಲ್ ಬೇಂಕುಗಳ ಹಣವಾಗಿದೆ. ಈ ಎಲ್ಲಾ ಸಂಘಗಳಲ್ಲಿ ಸುಮಾರು ರೂಪಾಯಿ ೧,೩೦,೦೦,೨೯೫ರ ವಹಿವಾಟು ನಡೆದಿದೆ.

೯. ಕೆಲವು ಸಂಘಗಳಲ್ಲಿ ಸಾಲದ ವಾಯಿದೆ ದಾಟಿದ್ದರಿಂದ ಸಾಲಗಾರರ ಮೇಲೆ ವ್ಯಾಜ್ಯ ಮಾಡಬೇಕಾಯಿತು. ಇಂಥ ವ್ಯಾಜ್ಯಗಳ ಸಂಖ್ಯೆಯು ಗತವರ್ಷದಲ್ಲಿ ೧೮೨೩; ಅಂದರೆ ಹಿಂದಿನ ವರ್ಷಗಿಂತಲೂ ೩೭೦ಕ್ಕೆ ಮಿಕ್ಕಿ ಇತ್ತು. ಈ ಸಂಘಗಳು ಸಾಲ ಕೊಡುವ ಕಾಲದಲ್ಲಿ ಸಾಕಷ್ಟು ವಿಚಾರ ಮಾಡದೆ ಇದ್ದ ಕಾರಣ ಈ ಅವಸ್ಥೆಗೆ ಬಂದವು. ಈಗ ನೂತನವಾಗಿ ಜಾರಿಗೆ ಬಂದ ಪಂಚಾಯಿತಿ ಫೈಸಲುಗಳ ಪಿಲಿಪಾಯಿಯನ್ನು ಜಾರಿಗೆ ತಂದರೆ ಕೋರ್ಟು ಖರ್ಚಿನ ನಷ್ಟವೂ ಪ್ರಯಾಸವೂ ಕಡಿಮೆಯಾಗಬಹುದು.

೧೦. ಸಹಕಾರದ ತತ್ವಗಳ ಪ್ರಸಾರವು ಹಳ್ಳಿಹಳ್ಳಿಗಳಲ್ಲಿಯೂ ಇನ್ನಷ್ಟು ಆಗುವಂತೆ ವಿದ್ಯಾ ಇಲಾಖೆಯ ಸಹಾಯವನ್ನು ಯಾವ ರೀತಿಯಲ್ಲಿ ಪಡೆಯಬಹುದು ಎಂಬುದನ್ನು ಕುರಿತು ಸೂಚಿಸಬೇಕಾಗಿ ಗವರ್ನಮೆಂಟಿನವರು ರಜಿಸ್ಟ್ರಾರರ ಅಭಿಪ್ರಾಯವನ್ನು ಕೇಳಿರುವರು. ಜನರಲ್ಲಿ ಭಯಭೀತಿ, ಹುಟ್ಟಿಸದೆ ಹೋಕ್ಕ ಬಳಕೆಯಿಂದ ಇದು ಇಂಥಾ ಇಲಾಖೆಯ. ವಿದ್ಯಾ ಇಲಾಖೆಯೇ ಸರಿ. ಮಕ್ಕಳ ಪಾಠಪುಸ್ತಕಗಳಲ್ಲಿ ಸಹಕಾರದ ಮೂಲ ತತ್ವಗಳನ್ನು ಚರ್ಚಿಸುವ ಪಾಠಗಳನ್ನು ಸೇರಿಸುವುದು ಮಾತ್ರವಲ್ಲದೆ, ವಿದ್ಯಾ ಇಲಾಖೆಯ ಇನ್ಸ್ಪೆಕ್ಟಿಂಗ್ ಆಫೀಸರುಗಳು ತಮ್ಮ ಸರ್ಕೀಟು ಮಾಡುವಾಗ ಉಪಾಧ್ಯಾಯರ ಮೀಟಿಂಗುಗಳಲ್ಲಿ ಈ ವಿಷಯವನ್ನೆತ್ತಿ ಮಾತನಾಡುವುದು, 'ಮೆಜಿಕ್ ಲೆಂಟರ್ನ್' ಪ್ರದರ್ಶನಗಳನ್ನು ಕೊಡುವಾಗ ಆಯಾ ಊರ ಗೃಹಸ್ಥರನ್ನೂ ಆಮಂತ್ರಿಸಿ ಅವರಿಗೆ ಈ ವಿಷಯದಲ್ಲಿ ಬೋಧಿಸುವುದು ಆವಶ್ಯಕ. ಸರಕಾರದವರು ಈ ವಿಷಯದಲ್ಲಿ ವಿದ್ಯಾ ಇಲಾಖೆಯ ಇನ್ಸ್ಪೆಕ್ಟಿಂಗ್ ಆಫೀಸರುಗಳಿಗೆ ಸರ್ಕಲಾರುಗಳನ್ನು ಕೊಡುವುದು ಅಗತ್ಯವಾಗಿದೆ.

ಓನರೆಬಲ್ ಕೆ. ಎಸ್. ಭಟ್ಟರವರ ಸವಾಲುಗಳು.

(ಇದೇ ಫೆಬ್ರವರಿ ೬ನೆ ತಾರೀಕಿನ ನ್ಯಾಯವಿಧಾಯ ಸಭೆಯ ಮೀಟಿಂಗಿನಲ್ಲಿ.)

೧. ರೆವಿನ್ಯೂ ಸಂಬಂಧವಾದ ಸವಾಲುಗಳು ಸುಮಾರು ೧೧ ಇದ್ದುವು. ಈ ಪೈಕಿ ೩ ಫೋರೆಸ್ಟ್ ಇಲಾಖೆಗೂ ೧ ಅಬಕಾರಿ ಇಲಾಖೆಗೂ ಉಳಿದವುಗಳು ರೆವಿನ್ಯೂ ಮತ್ತು ಸೆಟ್ಲ್ಮೆಂಟ ಇಲಾಖೆಗೂ ಸಂಬಂಧಪಟ್ಟವುಗಳು. ಇಲ್ಲಿ ಸೆಟ್ಲ್ಮೆಂಟ ಆಗುವ ಕಾಲದಲ್ಲಿಯೂ ಅದರ ನಂತರ ಆಗಾಗ ದರ್ಖಾಸ್ತು ಕ್ರಮಗಳನ್ನು ತಿದ್ದುಪಡಿ ಮಾಡುವಾಗಲೂ, ಫೋರೆಸ್ಟ ನಿಬಂಧನೆಗಳನ್ನು ಬದಲಾಯಿಸುವಾಗಲೂ ಜನಗಳ ಮನವಿ ಇರಲೇ ಇಲ್ಲ. ಇಲ್ಲಿ ಹಲವು ಜಾತಿಗಳಿದ್ದು ಪರಸ್ಪರ ವೈಷಮ್ಯದಿಂದ ಒಬ್ಬರನ್ನು ಒಬ್ಬರು ನೋಡುವಾಗ ಸರ್ವರ ಪ್ರಯೋಜನಾರ್ಥವಾಗಿ ಎದುರು ಬಂದು ಚರ್ಚಿಸುವವರು ಅತಿ ವಿರಳರಾಗಿದ್ದರು. ಹೀಗಾಗಿ ಜನರ ಅಹವಾಲುಗಳನ್ನು ಸರಕಾರದ ಮುಂದೆ ಇಡಲಿಕ್ಕೆ ಅವಕಾಶ ದೊರೆಯಲೇ ಇಲ್ಲ. ಸರಕಾರದವರೂ ಕೂಡ ಜನರ ಮನವಿಗಳಿಲ್ಲದ ಕಾರಣ ಒಂದು ಬಗೆಯ ಮಾಯೆಯಿಂದ ಮೈಮರೆದಿದ್ದರು. ಅವರನ್ನು ಎಚ್ಚರಿಸಲಿಕ್ಕೆ ಈ ಮೊದಲಿನ ನಮ್ಮ ಜಿಲ್ಲೆಯ ಪ್ರತಿನಿಧಿಗಳು ಸಾಕಷ್ಟು ಪ್ರಯತ್ನಪಟ್ಟಂತೆ ಗೊತ್ತಾಗುವುದಿಲ್ಲ. 1899ನೆ ಇಸವಿಯಲ್ಲಿ ಇಲ್ಲಿಯ ತಾಲೂಕು ಕಚೇರಿಗಳಲ್ಲಿ ಫೋರೆಸ್ಟು ಕ್ಲಾರ್ಕ ಒಬ್ಬೊಬ್ಬರನ್ನು ನೇಮಿಸಿದ್ದರೂ ಆ ಹುದ್ದೆ ಕಾಯಂ ಮಾಡಬೇಕೆಂದಾಗಲಿ ಒಂದು ಕಾಲದಲ್ಲಿ ಅವರಿಗೆ ಕೊಡುತ್ತಿದ್ದ ೧೦ ರೂಪಾಯಿಯ ಸಂಬಳವನ್ನು ಇತರ ಫೋರೆಸ್ಟು ನಿಬಂಧಿಯಲ್ಲಿ ಮಾಡಿದಂತೆ ಏರಿಸಬೇಕೆಂತಲೂ ಯಾವ ಅಧಿಕಾರಿಗಳು [illegible] ಆಶ್ಚರ್ಯ? ಆ ಗುಮಾಸ್ತರು ಫೋರೆಸ್ಟು [illegible] ತಾಲೂಕು ಕಚೇರಿಯ ನವಕರರೂ ಎಂಬ [illegible] ಸರಕಾರದವರಿಗೆ ಸಂದೇಹವಿದ್ದಂತೆ ತೋರುತ್ತದೆ. ಹೇಗೂ ಮಾನ್ಯ ಭಟ್ಟರವರು ಈ ವಿಷಯವನ್ನು ಎತ್ತಿದ್ದರಿಂದ ಬೇಗನೆ ಸಂಬಳ ಏರಿಸುವದಕ್ಕೆಯೂ ಒಂದು ಬಗೆಯ ಅನುಕೂಲತೆಯು ದೊರಕಿತು. ಇದಕ್ಕಾಗಿ ಈ ಬಡ ಗುಮಾಸ್ತೆಯರು ಅವರಿಗೆ ಆಭಾರಿಯಾಗುವರು.

೨. ಹಿಂದಿನ ಸಭೆಯಲ್ಲಿ ಭಟ್ಟರವರು ಹಾಕಿದ ಸವಾಲಿಗೆ ಫೋರೆಸ್ಟು ಇಲಾಖೆಯಲ್ಲಿ ಇಲ್ಲಿ ೧೯೦೫ರ ನಂತರ ಕುತ್ತಿಕಾಣಿಕೆಯ ನಿಬಂಧನೆಗಳಲ್ಲಿ ಬದಲಾವಣೆಗಳು ಆಗಲಿಲ್ಲವೆಂದು ಸರಕಾರದವರು ಬಹಿರಂಗವಾಗಿ ಹೇಳಿದ ಕಾರಣ ೧೯೧೫ನೆ ಜುಲೈ ತಿಂಗಳಲ್ಲಿ ಆದ ಬದಲಾವಣೆಗಳನ್ನು ಭಟ್ಟರವರು ಎದುರಿಗೆ ಇಡಬೇಕಾಯಿತು. ಈ ಬದಲಾವಣೆಗಳು ಸರಕಾರದವರ ಅನುಮತಿಯಿಲ್ಲದೆ ಕಲ್ಲೆಕ್ಟರಿಂದ ಕೊಡೋಣಾದುವೊ ಅಥವಾ ಕೊಟ್ಟ ಸರ್ಕಲಾರು ಸರಕಾರದವರಿಗೆ ಮರವೆಯಾಯಿತೊ ಏನೆಂಬುದು ಗೊತ್ತಾಗುವುದಿಲ್ಲ. ಈ ಸರ್ಕಲಾರಿನ ಮೇರೆಗೆ ಚಿಕ್ಕ ಚಿಕ್ಕ ಗಿಡಗಳಿಗೂ ಕುತ್ತಿಕಾಣಿಕೆ ಕೊಡಬೇಕಾದ್ದರಿಂದ ಸರಕಾರಿ ಸ್ಥಳವನ್ನು ದರಖಾಸ್ತಿಗೆ ಹೊಂದಿದವರು ಸರಕಾರದವರಿಗೆ ಹಿಂದಕ್ಕೆ ಬಿಟ್ಟುಕೊಡುವ ಸಂದರ್ಭಗಳು ಬಂದುವು. ನಂಬ್ರ ೧೫ನೆ ಬೋರ್ಡ ಸ್ಟೇಂಡಿಂಗ್ ಒರ್ಡರಿನಲ್ಲಿ ಸೂಚಿಸುವ ಮೇರೆಗೆ ಸರಕಾರಿ ಸ್ಥಳವನ್ನು ದರಖಾಸ್ತಿಗೆ ಪಡೆಯುವಾಗ ಅದರ ಮೇಲಿದ್ದ ಮರಗಳ ಬಗ್ಗೆ ಕುತ್ತಿಕಾಣಿಕೆ ಕೊಡಬೇಕೆಂದು ಅರ್ಥವಲ್ಲದೆ ಕಿಂಬೆರಳಿನಷ್ಟು ದಪ್ಪ ಬೆಳದಿರುವ ಗಿಡಗಳಿಗೂ ಸೊಪ್ಪಿಗೂ ಕುತ್ತಿಕಾಣಿಕೆ ಕೊಡಬೇಕೆಂಬ ಅರ್ಥವಾಗಲಾರದು. ಇದಲ್ಲದೆ ಫೋರಂಬೋಕ್ ಮಾಡದೆ ಬನ್ ಸರಕಾರಿಯಾಗಿರುವ ಸ್ಥಳಗಳಿಂದ ಇಂಥ ಸೊಪ್ಪುಕಟ್ಟಿಗೆಯನ್ನು ಬೆಲೆ ಕೊಡದೆನೆ ಆಯಾ ಗ್ರಾಮದ ರೈತರು ಉಪಯೋಗಿಸುವುದು ಸಾವಿರಾರು ವರ್ಷಗಳಿಂದ ನಡೆದುಬಂದ ಸಾಂಪ್ರದಾಯ. 'ಕುಮಕಿ' ಕೊಡುವುದೇ ರಿಯಾಯತಿಯಲ್ಲದೆ ಹಕ್ಕಲ್ಲ ಎಂದು ವಾಧಿಸಿದರೂ ಈ ಸೊಪ್ಪುಕಟ್ಟಿಗೆಯ ವಿಷಯವಾಗಿ ಈ ಮೊದಲು ನಿರ್ಬಂಧವಿರಲಿಲ್ಲ. ಈಚೀಚೆಗೆ ಆದ ಈ ನಿರ್ಬಂಧಗಳಿಂದ ಜನರಿಗೆ ಅನಾವಶ್ಯಕವಾಗಿ ಪೀಡಿಸಿದೊಂದೆಯಲ್ಲದೆ ಬೇರೆ ಸರಕಾರಕ್ಕೆ ಲಾಭವಿರದು. ಮೂಗಿನಿಂದ ಉಂಡು ಹೊಟ್ಟೆ ತುಂಬುವ ಪ್ರಯತ್ನಗಳಲ್ಲಿ ಕೆಲವು ನವಕರರು ಬಹಳ ಕೌಶಲ್ಯವನ್ನು ತೋರಿಸಿದ್ದು ಸರಕಾರದವರ ಅವಗಾಹನೆಗೆ ಈಗ ಬಂತೆಂದು ತಿಳಿಯಿತು. ಕಲ್ಲೆಕ್ಟರರ ಮೂಲಕ ಈ ವಿಷಯದಲ್ಲಿ ವಿಚಾರ ನಡೆಸಲಾಗುವುದಂತೆ. ಈಗಲಾದರೂ ಜನಗಳು ತಮ್ಮ ತೊಂದರೆಗಳನ್ನು ಸರಿಯಾಗಿ ಕಲ್ಲೆಕ್ಟರವರ ಮುಂದೆ ಇಡುವರೆಂದು ನಾವು ಭಾವಿಸುತ್ತೇವೆ.

೩. ಫೋರೆಸ್ಟು ರೂಲ್ಸುಗಳನ್ನು ಅತಿಕ್ರಮಿಸಿದ ಕಾರಣ ಸಜೆ ವಿಧಿಸುವ ಬದಲಾಗಿ 'ಕಂಪೌಂಡ' ಮಾಡಿದ್ದರಿಂದ ೧೯೧೦ರಿಂದ ೧೯೧೬ರ ವರೆಗೆ ಸರಕಾರಕ್ಕೆ ವಸೂಲಾದ ಹಣವೆಷ್ಟು ಎಂದು ಕೇಳಿದ್ದಕ್ಕೆ ಆ ವಿಷಯವನ್ನು ಹೇಳಲಿಕ್ಕೆ ತಕ್ಕ ಮಾಹಿತಿಯನ್ನು ಸರಕಾರದವರು ಒದಗಿಸಿಕೊಳ್ಳಲಿಲ್ಲವೆಂದು ತಿಳಿಯಿತು. ಅಬಕಾರಿ ಮತ್ತು ಫೋರೆಸ್ಟು ಸಂಬಂಧವಾದ ತಕ್ಸೀರುಗಳಲ್ಲಿ ಅನೇಕ ಸಲ ಕೋರ್ಟಿನ ಮುಂದೆ ವ್ಯವಹರಣೆ ಮಾಡಿ ಶಿಕ್ಷೆ ಹೊಂದಿದರೆ ಮಾನಗೇಡು ಎಂಬ ಭಾವನೆಯಿಂದ ಅನೇಕರು ಈ ರೀತಿಯಾಗಿ ಅಬಕಾರಿ ಮತ್ತು ಫೋರೆಸ್ಟು ಇಲಾಖೆಯ ಮೇಲಾಫೀಸರರು ನಿರ್ಣಯಿಸುವ ತಪ್ಪು ಕಾಣಿಕೆಯನ್ನು ಕೊಟ್ಟು ವಿಮೋಚನೆ ಹೊಂದುತ್ತಾರೆ. ಇಂಥ ಸಂದರ್ಭಗಳಲ್ಲಿ ಅನೇಕ ಸಲ ಮೊಬಲಗು ಸರಕಾರಕ್ಕೆ ನಿಜವಾಗಿ ಆಗುವ ನಷ್ಟಕ್ಕಿಂತ ಹೆಚ್ಚಾದರೂ ಅಪರಾಧಿಕರು ತೆತ್ತು ಸುಮ್ಮನಿರುತ್ತಾರೆ. ಕೆಲ ವೇಳೆ ಗೈರಮಾಹಿತಿಯಿಂದ ಈ ತಕ್ಸೀರಿಗೆ ಒಳಗಾಗುತ್ತಾರೆ.

೪. ಕಾಸರಗೋಡು ತಾಲೂಕಿನಲ್ಲಿ ಖಾಲಿ ಬಂಜರು ಸ್ಥಳಗಳಲ್ಲಿ ಕರಿಮೆಣಸು ಬಳ್ಳಿಯನ್ನು ನೆಟ್ಟೊಡನೆ ಆ ಸ್ಥಳಕ್ಕೆ ಬಾಗಾಯತಿನ ದರಗಳಲ್ಲಿ ಕಂದಾಯವನ್ನು ಹೊರಿಸುತ್ತಾರೆ. ಫಲ ಬರಲಿಕ್ಕೆ ತೊಡಗದಿದ್ದರೆ ಈ ಸ್ಥಳಗಳನ್ನು ಬಾಗಾಯತು ಎಂದು ಎಣಿಸಬಾರದಾಗಿ ಸೆಟ್ಲ್ಮೆಂಟು ಕಾಲದಲ್ಲಿ ನಿರ್ಣಯವಿತ್ತೊ, ಈಗ ಕುಮರಿಗಳಲ್ಲಿ ಕರಿಮೆಣಸಿನ ಬಳ್ಳಿ ನಟ್ಟಲ್ಲಿಲ್ಲ ಬಾಗಾಯತು ದರಗಳನ್ನು ಹೊರಿಸಿದೆಯೊ ಎಂಬ ಪ್ರಶ್ನೆಗಳಿಗೆ "ಎರಡೂ ಹೌದು" ಎಂದು ಉತ್ತರ ಸಿಕ್ಕಿತು. ಇದು ಸಮರ್ಪಕವಾದ ಉತ್ತರವಲ್ಲವೆಂದು ಚರ್ಚಿಸಿದ್ದಕ್ಕೆ ಪುನಃ ಅದೇ ಪ್ರಶ್ನೆಯನ್ನು ಮುಂದಿನ ಮೀಟಿಂಗುಗಳಲ್ಲಿ ಮಾಡಬಹುದಾಗಿ ಅಪ್ಪಣೆಸಿಕ್ಕಿತು. ಹೇಗಿದ್ದರೂ ಫಲ ಬಂತೊ ಇಲ್ಲವೊ ಎಂದು ನಿರ್ಣಯಿಸದೆ ಆ ಸ್ಥಳಗಳಿಗೆ ಹೆಚ್ಚಿನ ಕಂದಾಯವನ್ನು ಹೊರಿಸಿದ್ದು ಸರಿಯಲ್ಲ.

೫. ಹಳೇ ರೆವಿನ್ಯೂ ಲೆಕ್ಕಗಳು, ವರ್ಗಗಳ ಚಿಟ್ಟಿಗಳು, ಮೂಲಪಟ್ಟಿಗಳು, ಸೆಟ್ಲ್ಮೆಂಟು ರಿಜಿಸ್ಟರುಗಳು ಮುಂತಾದುವುಗಳ ಮಂಜೂರು ನಕಲುಗಳನ್ನು ಕೇಳಿದರೆ ಈ ಜಿಲ್ಲೆಯ ರೆವಿನ್ಯೂ ಇಲಾಖೆಯವರು ಇಲ್ಲದ ಸಲ್ಲದ ಅಡ್ಡಿಗಳನ್ನು ಹೇಳುತ್ತಾರೆ. ಈ ನಕಲುಗಳು ಸಿಕ್ಕದಿದ್ದರೆ ಅನೇಕ ಸಲ ಬಹಳ ಪೂರ್ವದ ವರ್ಗಗಳಲ್ಲಿ ಜನರ ಹಕ್ಕುಸ್ಥಾಪನೆ ಮಾಡಲಿಕ್ಕೆ ಬೇಕಾದ ದಾಖಲೆಗಳೇ ಇರುವುದಿಲ್ಲ. ಕಡೆಗೆ ವರ್ಗದಾರನು ಪೂರ್ವಕಾಲದಿಂದ ಕೀರ್ತ ತೆತ್ತು ಬಂದರೂ ಸ್ಥಳವು ಸರಕಾರಕ್ಕೆ ಸೇರುವ ಸಂದರ್ಭ ಬಂದೊದಗುತ್ತದೆ. ಇದಕ್ಕೆ ಮಾಡುವ ಸಿವಿಲ್ ವ್ಯಾಜ್ಯಗಳಿಗೆ ತಕ್ಕ ದಾಖಲೆಗಳನ್ನು ಕೊಡುವುದಕ್ಕೆ ಅಧಿಕಾರಿಗಳು ಹಿಂಜರಿಯುವುದು ನ್ಯಾಯವಲ್ಲ. ಈ ವಿಷಯದಲ್ಲಿ ಅನ್ಯಾಯ ಹೊಂದಿದವರು ಸರಕಾರದವರಿಗೆ ಈ ವರೆಗೆ ಮನವಿ ಮಾಡಿದ್ದಿಲ್ಲವೆಂತಲೂ ಕೊಟ್ಟ ಹುಕುಮಿನ ಮೇಲೆ ಆಯಾ ಅಧಿಕಾರಿಯ ಮೇಲಧಿಕಾರಿಗಳಿಗೆ ಅಪೀಲ್ ಮಾಡಬಹುದಿತ್ತು ಎಂತ ಜವಾಬು ಸಿಕ್ಕಿತು.

ಜೀನಸು ಧಾರಣೆ.

(ರೂಂ).

ಮಸ್ಕತಿ ಅಕ್ಕಿ ಹೊಸ್ತು	5— 6—0	ರಿಂದ	6—13—0
ಗುಡ್ಡು „ „	5— 2—0	„	5— 8—0
ಹೊಸ ರಾಶಿ „	4—14—0	„	5— 1—0
ಅವ್ವಲ್ ಬೆಳ್ತಿಗೆ „	5—14—0	„	6— 2—0
ಗುಡು ಬೆಳ್ತಿಗೆ „	5— 6—0	„	5— 8—0
ರಂಗೂನು ಬೆಳ್ತಿಗೆ ಗೋಣಿ ೧ರ	9—14—0	„	[illegible]—12—0
ಗೋಧಿ ಗೋಣಿ ೧ರ	11—12—0	„	12— 8—0
ಹುರುಳಿ ಗೋಣಿ ೧ರ	6— 8—0	„	6— 9—0
ಕಡಲೆ ಗೋಣಿ ೧ರ ಬೊಂಬ್ಳ	10— 0—0	„	10— 8—0
ತೊಗರಿ ಗೋಣಿ ೧ರ			11— 0—0
ತೊಗರಿ ಬೇಳೆ ಗೋಣಿ ೧ರ	12— 8—0	„	15— 8—0
ಉದ್ದು ಗೋಣಿ ೧ರ	10— 8—0	„	11— 4—0
ಊರುಬೆಲ್ಲ ಖಂಡಿ ೧ರ	27— 8—0	„	35— 0—0
ಉಪ್ಪು ಗೋಣಿ ೧ರ		„	4—15—0
ಕೊಬ್ರಿ ಖಂಡಿ ೧ರ	85—0—0	„	90— 0—0
ಕೊಬ್ರಿಹಿಂಡಿ ಖಂಡಿ ೧ರ		„	20— 8—0
ಎಳ್ಳಿಂಡಿ ಖಂಡಿ ೧ರ ಬೊಂಬ್ಳ	27— 8—0	„	35— 0—0
ಕೊಬ್ರಿ ಎಣ್ಣೆ ಮುಡಿ ೧ರ	6— 6—0	„	7— 0—0
ಎಳ್ಳೆಣ್ಣೆ ಮುಡಿ ೧ರ (ಕುರಾಸಣ)		„	4— 6—0
[illegible] ಎಣ್ಣೆ ಪೆಟ್ಟಿಗೆ ೧ರ	6—11—0	„	7— 5—0
ಮೋರಿಸ್ ಸಕ್ಕರೆ ಮುಡಿ ೧ರ		„	5— 5—0
[illegible] ಖಂಡಿ ೧ರ	190—0—0		225—0—0
[illegible] ಖಂಡಿ ೧ರ	78— 0—0	„	85— 0—0
ಗೇರುಬೀಜ ಮುಡಿ ೧ರ	2—0—0	„	2— 4—0
[illegible] ಖಂಡಿ ೧ರ		„	75— 0—0
[illegible] ಮುಡಿ ೧ರ	[illegible]— 0—0	„	29— 8—0
[illegible] ಮುಡಿ ೧ರ		„	32— 0—0
[illegible]		„	24— 0—0
[illegible] ಮುಡಿ ೧ರ		„	5— 3—0
[illegible]			240—2—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ಕಡ್ಡು, ತುರಿಸಬು, ಇವುಗಳ ಮೇಲೆ ಮಲಾಮು.

ಎಷ್ಟೋ ಹಳೆತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಾಮಿನ ಒಂದೇ ಸಾರಿ ಹಚ್ಚೋಣದಿಂದಲೇ ಶಮವಾಗುತ್ತವೆ. ೨೦-೨೫ ವರ್ಷಗಳ ಹಳೆತ, ಸ್ತ್ಯಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೩ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ಶಮವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಹಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲ ಕೈಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿ.

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನ ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ಉಪಕಾರವಾದದ್ದು. ಶೀಸೆ 1ಕ್ಕೆ 6 ಆಣೆ.

ಸರಕಾರದ ನಂಬಿಕೆಯ ವಿಷಯದಲ್ಲಿ ನಮ್ಮದೊಂದು ಚಿಕ್ಕದಾದ ಆಕ್ಷೇಪವೇನೆಂದರೆ, ಸರಕಾರವು ಇನ್ನೂ ಪಂಕ್ತಿ ಪ್ರಚಾರಕ್ಕೆ ರಜೆಕೊಡುವ ಆಲೋಚನೆ ಇದ್ದಂತೆ ಕಾಣುವುದಿಲ್ಲ. ಸ್ವಯಂ ಸೈನಿಕತ್ವದ ಹಕ್ಕನ್ನು ಕೊಟ್ಟಮೇಲೆ ಇದರಲ್ಲಿ ಯುರೋಪಿಯನ್, ಯುರೇಶಿಯನ್ ಮತ್ತು ಹಿಂದೀ ಮೊದಲಾದ ಭೇದಗಳನ್ನು ಮಾಡಿ ಅವರವರ ಅಧಿಕಾರಗಳಲ್ಲಿ ವ್ಯತ್ಯಾಸವನ್ನು ಕಲ್ಪಿಸುವುದು ಒಳ್ಳೇದಲ್ಲ, ಪ್ರಶಸ್ತವಲ್ಲ, ಹಿತಾವಹವೂ ಅಲ್ಲ. ಈ ಬಗ್ಗೆ ನಾವು ಸರಕಾರಕ್ಕೆ ಹೆಚ್ಚೇನು ಹೇಳಬೇಕಾದದಿಲ್ಲ. ಜನರಿಗೆ ಮಾತ್ರ ಈ ಸಂದರ್ಭದಲ್ಲಿ ಒಂದೆರಡು ಸೂಚನೆಗಳನ್ನು ಹೇಳಬೇಕಾಗಿದೆ. ಸರಕಾರವು ಸಾಶಂಕವಾಗಿರಲಿ ಇಲ್ಲವೆ ನಿಃಶಂಕವಾಗಿರಲಿ, ಜನರಿಗೆ ಉದಾರ ಬುದ್ಧಿಯಿಂದ ಕೊಟ್ಟ ಈ ಅಧಿಕಾರದಾನದ ಪ್ರಯೋಜನೆಯನ್ನು ಪಡಕೊಳ್ಳಲು ಜನರು ಈಗ ಮುಂದೆಬರಬೇಕಾಗಿದೆ. ಸೈನ್ಯದಲ್ಲಿ ಸ್ವಯಂ ಸೇವಕರಾಗಿ ಸೇರಿಕೊಂಡು ನಂಬಿಕೆಯಿಂದ ಕೆಲಸಮಾಡಿ ಸರಕಾರದ ನಂಬಿಕೆಯನ್ನು ಪಡಕೊಂಡು ಮೇಲುಮೇಲಿನ ಅಧಿಕಾರಗಳನ್ನು ಸಂಪಾದಿಸಬೇಕು. ಈಗ ನಮ್ಮ ಜನರು ಯಾವ ಕಾರಣದಿಂದಲೂ ಹಿಂದುಳಿಯದೆ ಈ ಸ್ವಯಂ ಸೇನಿಕತ್ವದ ಲಾಭವನ್ನು ಹೊಂದಬೇಕು. ಸಾಮ್ರಾಜ್ಯ ಸರಕಾರಕ್ಕೆ ಸಹಾಯ್ಯಮಾಡಬೇಕು. ಸರಕಾರವು ಮಾಡಿರುವ ಈ ಪೌರುಷ ದಾನದಿಂದ ಹಿಂದೂಸ್ಥಾನದ ಉನ್ನತಿಯಾಗುವಂತೆ ಸಾಮ್ರಾಜ್ಯದ ದೃಢತ್ವವೂ ಸಾಧ್ಯವಾಗುವುದು. ಆರು ತಿಂಗಳೊಳಗೆ ಈ ಅನುಕೂಲ ಸಂದರ್ಭದ ಲಾಭವನ್ನು ನಮ್ಮ ಜನರು ಪಡಕೊಳ್ಳಲು ಹಿಂಜರಿದು ಸೈನ್ಯದ ಯೋಗ್ಯ ಭರತಿಯಾಗದಿದ್ದರೆ ಸರಕಾರಕ್ಕೆ ಖಡ್ಡಾಯದ ಪದ್ಧತಿಯಿಂದ ಸೈನ್ಯದಲ್ಲಿ ಭರತಿಮಾಡುವುದಕ್ಕಾಗಿ ಕಾಯಿದೆ ಮಾಡಬೇಕಾಗಿ ಬಂದೀತು. ಇಂಥ ಪ್ರಸಂಗವನ್ನು ನಮ್ಮ ಜನರು ತಂದುಕೊಳ್ಳಲಾರರು, ಈಗಿನ ಸಂದರ್ಭವನ್ನೆ ಉಪಯೋಗಿಸಿಕೊಂಡಾರೆಂದು ಭರವಸೆ ಪಡುತ್ತೇವೆ.

ಬಂಟರ ಯಾನೆ ನಾಡವರ ಸಂಘ.

ಮ। ರಾ। ಮುಲ್ಕಿ ರಾಮಕೃಷ್ಣ ಪೂಂಜರು, ಮ। ರಾ। ಕೊಡಿಯಾಲಗುತ್ತು ರಾಮಯ ಹೆಗ್ಗಡೇರು ಮತ್ತು ಸಂಘದ ಕೋಶಾಧಿಕಾರಿ ಈ ವಾರದಲ್ಲಿ ಮುಂಡ್ಕೂರು ಮತ್ತು ಮುಲ್ಕಿಯಲ್ಲಿ ಸಂಘಕ್ಕೆ ವಸೂಲುಮಾಡಿದ ವಂತಿಗೆ ವಿವರ:— ಮ। ರಾ। ಮುಂಡ್ಕೂರು ನಡಿಗುತ್ತು ದಾಸುಶೆಟ್ಟಿ (ವರ್ಷಂಪ್ರತಿ ರೂ. ೧೦ ಕೊಡುವರೆ ವಾಗ್ದಾನ ಮಾಡಿ ಈ ವರ್ಷದ ಬಗ್ಗೆ ಕೊಟ್ಟದ್ದು) ರೂ. ೧೦; ದೊಡ್ಡಮನೆ ತಿಮ್ಮಯ ಶೆಟ್ಟಿ (೨ನೇ ಕಂತು) ರೂ. ೨೫; ಸಾಂತ್ಯಾರ್ ಗುತ್ತು ಮುತ್ತಯ ಶೆಟ್ಟಿ (೧ನೇ ಕಂತು) ರೂ. ೫; ಉಳಿಪಾಡಿ ಹೊಸಮನೆ ಗುಡ್ಡಶೆಟ್ಟಿ ರೂ. ೧೦; ಮುತ್ತಬೆಟ್ಟು ಸೋಮಯ ಬಲ್ಲಾಳರು ರೂ. ೮; ಆಯಿಕಳ ಹಿರಿಮನೆ ಬೊಗ್ಗಯ ಶೆಟ್ಟಿ ರೂ. ೧೦; ಇನ್ನ ಬಗ್ಗರಗುತ್ತು ಕೊರಗಶೆಟ್ಟಿ ರೂ. ೪; ಕೇಮಾರು ಸರ್ಪುಶೆಟ್ಟಿ ರೂ. ೨೫; ಮುಲ್ಕಿ ಹೊಸಮನೆ ತಿಂಮಹೆಗ್ಗಡೇರು ರೂ. ೧೫; ಬಪ್ಪನಾಡಗುತ್ತು ಬಿರ್ಮುಶೆಟ್ಟಿ ರೂ. ೧೦ ಹೊಸಮನೆ ಬಿರ್ಮುಶೆಟ್ಟಿ (೨ನೇ ಕಂತು) ರೂ. ೧೫; ದಾಸುಶೆಟ್ಟಿ ರೂ. ೧೦; ಒಟ್ಟು ಜುಮಲಾ ರೂಪಾಯಿ ೧೪೪—೦—೦ ಆಗಿರುತ್ತದೆ.

ತಾ. 22-2-17. ಅತ್ತಾವರ ಬಾಲಕೃಷ್ಣ ಶೆಟ್ಟಿ,

ಕೋಶಾಧಿಕಾರಿ.

ಸ್ಫುಟವಿಚಾರಗಳು.

೧. ಇಲ್ಲಿಯ ಮುನ್ಸಿಪಲ್ ಕೌನ್ಸಿಲಿನ ಮೆಂಬರರು ಸಭೆಗೆ ಬರುವ ರೀತಿ, ವಿಷಯಗಳನ್ನು ಚರ್ಚಿಸಿ [illegible] ಮತ್ತು ಪುರಜನರ ಕ್ಷೇಮಾಭಿವೃದ್ಧಿಯ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಈ ಕೌನ್ಸಿಲ್ ಮೆಂಬರರು ತಮ್ಮನ್ನು ಆರಿಸಿರುವ ಜನರ ಬಗ್ಗೆ ನಡಿಸುವ ಕಾರ್ಯಭಾರಗಳ ವೃತ್ತಾಂತವು ಪಟ್ಟಣಿಗರಿಗೆ ಯಾವ ತರದಲ್ಲಿಯೂ ತಿಳಿದುಬ್ಬಾರದ ರೀತಿಯಲ್ಲಿ ನಡಿಸಲ್ಪಡಲಾಗುತ್ತವೆಂದು ಅನ್ನುಭವಹಾಗಿದೆ. ಜಿಲ್ಲಾ ಗಜೇಟಿನಲ್ಲಿ ವೃತ್ತಾಂತಗಳು ಸಭೆಕೂಡಿದ ಒಂದೆರಡು ತಿಂಗಳುಗಳು ಅಥವಾ ಕೆಲವು ಸಾರಿ ಎರಡು ಯಾ ಮೂರು ತಿಂಗಳುಗಳ ನಂತರ ಗಜೇಟಿನ ಗರ್ಭದಲ್ಲಿಯೇ ನಿಂತು ಆ ರೀತಿ ಪ್ರಕಟಣಾ ರೂಪವನ್ನು ಹೊಂದುವದರಿಂದ ಮುನ್ಸಿಪಲ್ ಸಭೆಗಳ ಏನೊಂದು ವಿಷಯವೂ ಜನರಿಗೆ ತಿಳಿಯುವದಿಲ್ಲ. ಇಷ್ಟೇ ಅಲ್ಲ, ಕೌನ್ಸಿಲ ಮಂದಿರವು ಸಹ ಹಿಂದೂ ದೇವಾಲಯಗಳ ಗರ್ಭಗೃಹದಂತೆ ಇದ್ದು ಪಟ್ಟಣಿಗರು ಮೂರು ಕೋಣೆಗಳ ಅಂತರದಲ್ಲಿ ನಿಂತುಕೊಂಡು ಚೇಯರ್ಮೇನ ದೇವರಿಗೆ ಕೈಮುಗಿದು ನಿಲ್ಲಬೇಕೇ ಹೊರತು ಮತ್ಯಾವ ಗತ್ಯಂತರವಾದರೂ ಮಂಗಳೂರು ಮುನ್ಸಿಪಲ್ ಆಫೀಸಿನಲ್ಲಿ ಪುರಜನರಿಗಿರದೆ ಇರುವದರಿಂದ ಇಲ್ಲಿಯ ಮುನ್ಸಿಪಲ್ ಸಭಾ ಮಂದಿರವು ಒಂದು ಗುಪ್ತ ಗೃಹವೇ ಆಗಿದೆ. ಪ್ರಜಾ ಪ್ರತಿನಿಧಿಗಳ ಈ ಸಭಾ ಮಂದಿರಕ್ಕೆ ಪ್ರಜಾ ಜನರಿಗೆ ಪ್ರವೇಶನ್ನುಂಟುಮಾಡುವ ವಿಷಯದಲ್ಲಿ ಕೆಲವು ಸಮಯದ ಹಿಂದೆ ಜನರ ಅಪೇಕ್ಷೆಯು ಸ್ವದೇಶಾಭಿಮಾನಿಯಲ್ಲಿ ಸೂಚಿಸೋಣಾಗಿತ್ತು. ಆದರೆ ಈ ತನಕ ಕೌನ್ಸಿಲಿನ ದೃಷ್ಟಿಯು ಈ ಅಪೇಕ್ಷೆ ಕಡೆಗೆ ತಿರುಗಿರದು. ಕೆಲವು ವರುಷಗಳ ಹಿಂದ ಕೌನ್ಸಿಲರರ ಸಭೆಯು ಮುನ್ಸಿಪಲ್ ಆಫೀಸಿನ ಮಾಳಿಗೆಯ ಹೊರಗಿನ ಕೋಣೆಯಲ್ಲಿ ಕೂಡುತ್ತಿದ್ದದ್ದರಿಂದ ಪ್ರಕೃತ ಜನರಿಗಿರುವಂಥಾ ಅನನುಕೂಲತೆಯು ಅಂದು ಇದ್ದಿಲ್ಲವೆಂಬುದಾಗಿ ತಿಳಿಯುತ್ತೇವೆ. ಕಳೆದ ಸಾರಿ ಮುನ್ಸಿಪಲ್ ಕೌನ್ಸಿಲರರು ಸಭೆಕೂಡಿ ನಡಿಸಿದ ವೃತ್ತಾಂತವನ್ನು ತಿಳಿದ್ದರಿಂದ ಮುನ್ಸಿಪಲ್ ಆಫೀಸಿನ ಈ ಗರ್ಭಗೃಹದ ಪ್ರಸ್ತಾಪವನ್ನು ಇಂದು ಎತ್ತಿ ಬರೆಯಬೇಕಾಯಿತು. ಪುರಜನರ ದೃಷ್ಟಿ ಕೌನ್ಸಿಲರ ಮೇಲೆಯೂ ಕೌನ್ಸಿಲರರ ದೃಷ್ಟಿಯು ಮುನ್ಸಿಪಲ ವಿಷಯಗಳ ಮೇಲೂ ಈ ಕಾರಣ ಮುನ್ಸಿಪಲ್ ಆಫೀಸು ಸಿಬಂದಿಯ ಮೇಲೆ ಕೌನ್ಸಿಲಿನ ದೃಷ್ಟಿಯೂ ತಕ್ಕರೀತಿಯಲ್ಲಿಲ್ಲದ್ದರಿಂದ ಕೌನ್ಸಿಲಿನಲ್ಲಿ ವೃಥಾ ಕಾಲಹರಣಕ್ಕೂ ಇನ್ನು ಇತರ ಅನರ್ಥಗಳಿಗೂ ಎಡೆ ದೊರಕುತ್ತದೆ. ಕೌನ್ಸಿಲಿನ ಸಭೆಯು ನಡೆಯುತ್ತಿರುವ ವೇಳೆಯಲ್ಲಿ ಸಭೆಯ ಮುಂದೆ ಬರುವ ಸರಕಾರಿ ಹುಕುಮುಗಳನ್ನು ಮತ್ತು ಮುನ್ಸಿಪಲ್ ಆಕ್ಟು ನಿಬಂಧನೆಗಳನ್ನೇ ಸಂದರ್ಭಾನುಸಾರ ತೋರಿಸಿ ಕೊಡುವದು ಮಾತ್ರವಲ್ಲ; ಇಂಥಿಂಥಾದ್ದಕ್ಕೆ ಇದೇ ಅರ್ಥವಾಗಿರಬೇಕೆಂಬ ತಮ್ಮ ಮನೋಗತ ನಿರ್ಣಯಗಳನ್ನು ಸಭೆಯ ತಲೆಯ ಮೇಲೆ ಹಾರಿಸಿ ಬಿಡುವ ಪ್ರಯತ್ನಗಳನ್ನು ಎಡೆ ದೊರಕಿದಂತೆ ನಡಿಸಿ ಬಿಡುವದರಲ್ಲಿ ಆಫೀಸು ಸಿಬಂದಿಯವರು ಅಂಜರೆಂಬುವುದೂ ಒಂದೊಂದು ಸಲ ಪರದೆಯ ಮುಂಭಾಗದಲ್ಲಿದ್ದವರಿಗೆ ಸಹ ವ್ಯಕ್ತವಾಗುತ್ತದೆ. ಇಂಥಾ ಪ್ರಯತ್ನಗಳ ದೆಸೆಯಿಂದ ಗರ್ಭಗೃಹದ ಒಳಗಿದ್ದು ಅರ್ಚಕರ ಕೈವಶವಿರುವ ದೇವ ಉಪದೇವರುಗಳ ಸ್ಥಿತಿಯು ಚೇಯರ್ಮೇನ್ ಮತ್ತು ಕೌನ್ಸಿಲರರುಗಳಿಗೆ ಪ್ರಾಪ್ತವಾಗುವ ಪಕ್ಷದಲ್ಲಿ ಅದರಲ್ಲೇನೂ ಸೋಜಿಗವಿರದು. ಯಾವುದೋ ಒಂದಾನೊಂದು ಸಂವತ್ಸರದಲ್ಲಿ ಕೌನ್ಸಿಲಿನ ಸಭೆಯ ಮುಂದೆ ಇಡೋಣಾಗುವ "ಎಜೆಂಡಾ" ಅಥವಾ ಕಾರ್ಯಕ್ರಮಗಳ ಪಟ್ಟಿಯು ಯಾವ ವಿಧಾನದಲ್ಲಿ ತಯ್ಯಾರಿಸಲ್ಪಡುತ್ತಿತ್ತೊ ಇಂದು ಸಹ ಆ ಪಟ್ಟಿಗೆ ಎಳ್ಳಷ್ಟಾದರೂ ವ್ಯತ್ಯಾಸ ಇರದಂತೆ ವಿಷಯ ಸೂಚಿಯು ತಯ್ಯಾರಿಸಲ್ಪಡುತ್ತದೆ. ವೃತ್ತಿ ತೆಂಗೆಯ ಅಪೇಲುಗಳು, ಕಟ್ಟೋಣಗಳ ಲೈಸನ್ಸ್ ಅರ್ಜಿಗಳು, ಮುನ್ಸಿಪಲ್ ಭಂಡಾರದಿಂದ ನೂರಾರು ಅಥವಾ ಸಾವಿರಾರು ರೂಪಾಯಿಗಳ ಖರ್ಚು ತಗಲುವ ಕಾಮಗಾರಿಗಳ ಅಂದಾಜು ಪಟ್ಟಿಗಳು ಇವೆಲ್ಲವೂ ಯಾವಾಗಲೂ ಸೂಚೀ ಪತ್ರದ ಅಡಿತಳದಲ್ಲಿ ವಿರಮಿಸಿಕೊಂಡಿರುವವು. ಇವುಗಳು ಲಘು ವಿಷಯಗಳಲ್ಲ, ವಿಶೇಷತ್ವವನ್ನು ತುಂಬಿಕೊಂಡಿದ್ದು ಭಾರವಾದವುಗಳಾದ್ದರಿಂದ ಇವುಗಳು ಎಂದೆಂದಿಗೂ ಅಡಿತಳದಲ್ಲಿಯೇ ಇರುವುದು ಸಹಜವಾಗಿದೆ! ಆದರೆ ಸೂಚೀಪತ್ರದ ಈ ಅಡಿತಳಕ್ಕೆ ಬರುವಷ್ಟರಲ್ಲಿ ಮೊದಲೇ ತಂತಮ್ಮ ಖಾಸಗಿ ಕೆಲಸಗಳಲ್ಲಿ ಬೇಸತ್ತು ಸಭೆಗೆ ಬರುವಂಥಾ ಕೌನ್ಸಿಲರ್ ಮಹನೀಯರುಗಳು ಇನ್ನೂ ಬಸವಳಿದು ಬೆಂಡಾಗಿ ಹೋಗಿ ತಂತಮ್ಮ ಆಸನಗಳಿಂದ ಎದ್ದು ನಿಲ್ಲುವಷ್ಟು ದೀರ್ಘ ಕಾಲದೊಳಗೆ ಇವೆಲ್ಲವನ್ನೂ ಅಂದರೆ ಈ ವಿಶೇಷವಾದ ವಿಷಯಗಳನ್ನು ವಿಶೇಷ ಆಯಾಸವಿಲ್ಲದೆ 'ವಡಿಚಾ' ಮಾಡಿ ಬಿಡುವದೂ ಉಂಟು. ಒಂದು ವೇಳೆ ಇದು ಪೂರ್ಣ ಸಾಧ್ಯವಾಗಿ ಹೋಗದೆ ಇದ್ದರೆ ಸಾಯಂಕಾಲ ೫ ಗಂಟೆಗೆ ಬಂದು, ಸಭೆಯು ಮುಗಿಯುವ ತನಕ ಕೌನ್ಸಿಲಿನ ಪ್ರಸನ್ನತೆಯನ್ನು ಯೋಚಿಸಿಕೊಂಡು ಕಾದು ನಿಂತ ಅರ್ಜಿದಾರರಿಗೆ ಇನ್ನೊಮ್ಮೆ ಸಭಾದರ್ಶನವನ್ನು ಮಾಡಿಕೊಳ್ಳುವ ಪುಣ್ಯಪ್ರಾಪ್ತಿಯು ಲಭಿಸುವದೂ ಉಂಟು. ಸೂಚೀಪತ್ರದ ಅಡಿತಳದಲ್ಲಿರುವ ವಿಷಯಗಳ ಇತ್ಯರ್ಥ ಕಾಲದಲ್ಲಿ ಕೌನ್ಸಿಲಿನ ಚಿತ್ರಪ್ರದರ್ಶನವನ್ನು ಹೇಗಾದರೂ ಪುರಜನರು ಬಂದು ನೋಡುವದು ಅಗತ್ಯ. ವಿಷಯಗಳ ಇತ್ಯರ್ಥ ಕಾಲವನ್ನು ತಿಳಿದಂತಾಯಿತು. ವಿಷಯಗಳು ಸಭೆಯ ಮುಂದೆ ಇಡೋಣಾಗುವ ಮೊದಲು ಇವು ಆಫೀಸು ಸಿಬಂದಿಯಿಂದ ಹೇಗೆ ತಯ್ಯಾರಿಸೋಣಾಗುವವು? ಇದು ಯಾರಿಂದಲೂ ತಿಳಿಯಲಾಗದ ವಿಷಯ. ಒಂದುವೇಳೆ ತಿಳಿದುಬಂದರೂ ಆಫೀಸು ಸಿಬಂದಿಯು ಕೌನ್ಸಿಲಿನ ಕಾರ್ಯನಿರ್ವಾಹಕ ಆಫೀಸರರುಗಳೆಂಬ ಪರದೆಯ ಹಿಂದುಗಡೆಯಲ್ಲಿ ಈ ತಯ್ಯಾರಿಯನ್ನು ನಡಿಸುವದರಿಂದ ಪರದೆಯೊಳಗಿನ ವಿಷಯಗಳನ್ನು ಪ್ರಸ್ತಾಪಿಸುವದು ಯುಕ್ತವಲ್ಲ. ಆದಾಗ್ಯೂ ಪರದೆಯು ಎತ್ತಿ ಇದರಿ ಒಂದೊಂದು ಸಲ ಒಳಗಿನ ವಿಷಯಗಳು ಪ್ರತ್ಯಕ್ಷವಾದರೆ ಪರದೆಯು [illegible] ಗಳಿಯಾಗಿ ಮತ್ತೆ ಕೆಳಕ್ಕೆ ಇಳಿದಿರುವದು ಯುಕ್ತವಾಗಿದೆ.

೩. ಮಂಗಳೂರಲ್ಲಿ ಕಳೆದ ವಾರದಲ್ಲಿ ಪ್ಲೇಗಿನಿಂದ ಮೃತವಾದವರ ಸಂಖ್ಯೆಯು ಅಧಿಕವಾಗಿರುವದು. ಕುದ್ರೋಳಿ ಬಸವನಗುಡಿ ಪ್ರಾಂತ್ಯಗಳಲ್ಲಿ ಈ ರೋಗದ ಸೋಂಕು ಬಹಳವಾಗಿರುವದು. ಬಡ ಜನರು ನಿಲ್ಲಲು ಸ್ಥಳಾಶ್ರಯವಿಲ್ಲದೆ ಪಣಂಬೂರು ಅತ್ತಕಡೆಗೆ ಸಹ ಹೋಗಿ ಅಲ್ಲಿಂದ ಪಟ್ಟಣಕ್ಕೆ ವೃತ್ತಿ ಬಗ್ಗೆ ಬರುತ್ತಿದ್ದಾರೆ. ಸೀತಾಳೆ ಸಿಡುಬು ಚಿಕ್ಕಮ್ಮ ಈ ರೋಗಗಳ ಸೋಂಕು ಸಹ ಪಟ್ಟಣದಲ್ಲಿರುವದರಿಂದ ಪಟ್ಟಣದ ಆರೋಗ್ಯವು ಬಹಳ ಕೆಟ್ಟಿರುವದು. ಜ್ವರವು ಪ್ರಾರಂಭವಾದೊಡನೆ ಎಂಥಾ ಸ್ವಭಾವದ ಜ್ವರವೆಂಬುದನ್ನು ತಿಳಿಯಲಾರದೆ ಜನರು ಬಹಳ ಯೋಚನೆಗೆ ಗುರಿಯಾಗುತ್ತಿರುವರು. ಪ್ಲೇಗು ಇಲ್ಲಿಗೆ ಬಂದು ಹಲವು ವರುಷಗಳಾದರೂ ಅದು ಮಂಗಳೂರನ್ನು ಬಿಟ್ಟು ಹೋಗುವದರಲ್ಲಿಲ್ಲ. ಮಲಬಾರು ಪ್ರಾಂತ್ಯಗಳಲ್ಲಿ ಈ ರೋಗವು ಒಂದೆರಡು ಸಲ ತಲೆದೋರುವಷ್ಟರಲ್ಲಿಯೇ ಅದನ್ನು ಆ ಪ್ರಾಂತ್ಯಗಳಲ್ಲಿ ನಿಲ್ಲಿಸಿ ಬಿಡಲು ಸಾಧ್ಯವಾಯಿತು. ಪಶ್ಚಿಮ ಕರಾವಳಿಯ ಪಟ್ಟಣಗಳಲ್ಲಿ ಮಂಗಳೂರು ಆರೋಗ್ಯ ವಿಷಯಗಳಲ್ಲಿ ಕನಿಷ್ಠ ತರಗತಿದ್ದಲ್ಲವಾದರೂ ಈ ದುರ್ಗತಿಯು ಈ ಪಟ್ಟಣವನ್ನು ಬಿಟ್ಟುಹೋಗದೆ ಇರಲು ಕಾರಣವೇನೆಂಬುದನ್ನು ವಿಚಾರಿಸಿ ತಿಳಕೊಳ್ಳುವುದು ಅಗತ್ಯವಾಗಿದೆ. ಪ್ರಕೃತ ಯಾವ್ಯಾವ ವಾರ್ಡುಗಳಲ್ಲಿ ಎಂಥೆಂಥಾ ವೃತ್ತಿಯವರಿಗೆ ಇದರ ಸೋಂಕು ತಗಲುವದು ಎಂಬೀ ವಿವರಗಳನ್ನು ಚೆನ್ನಾಗಿ ತಿಳಕೊಂಡು ಈ ವಿದ್ಯಮಾನಗಳಲ್ಲಿ ಮಲಬಾರಿನವರು ಏನು ಮಾಡಿದರು, ಆ ಸಾಧನೆಗಳನ್ನು ಇಲ್ಲಿ ಹೇಗೆ ನಡೆಸಬಹುದೆಂಬುದನ್ನು ವಿಚಾರಿಸಬಹುದು. ಪಟ್ಟಣದಲ್ಲಿ ಬಹಳ ಕಾಲದಿಂದ ನಿರಂತರವಾಗಿರುವಂಥಾ ವಿಷಮಜ್ವರ, ಪ್ಲೇಗು, ಇತ್ಯಾದಿಗಳ ನಿವಾರಣೆ ಬಗ್ಗೆ ಕಾರ್ಯಪಟುಗಳಾದ ಕೆಲವು ಪ್ರಜಾ ಹಿತಕಾಂಕ್ಷಿಗಳ ಒಂದು ಕಮ್ಮಿಟಿಯು ಮುನ್ಸಿಪಾಲಿಟಿಯಲ್ಲಿ ರಚಿಸಬಹುದು. ಮಲಬಾರ ಪ್ರಾಂತ್ಯದ ಮತ್ತು ಇಲ್ಲಿಯ ಹವಾ, ವಿದ್ಯಮಾನಗಳ ಬಹಳ ದೀರ್ಘಕಾಲದ ಅನುಭವವುಳ್ಳಂಥಾ ರಾವ್‌ಸಾಹೇಬ ಡಾಕ್ಟರ್ ವರ್ಗೀಸರವರು ಮುನ್ಸಿಪಲ್ ಚೇರ್ಮನ್‌ರಾಗಿರುವರು. ಇವರ ಆಡಳಿತೆಯ ಕಾಲದಲ್ಲಿ ಇಂಥಾದೊಂದು ಕಮ್ಮಿಟಿಯನ್ನು ಏರ್ಪಡಿಸಿ ಆರೋಗ್ಯರಕ್ಷಣೆಯ ಸಾಧನೆಯು ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಅನುಕೂಲವಾದರೆ ಡಾಕ್ಟರ ವರ್ಗೀಸರ ಉಪಕಾರವನ್ನು ಜನರು ಆಗಿಂದಾಗ್ಯೆ ಸ್ಮರಣೆಗೆ ತಂದುಕೊಳ್ಳುವಂತೆ ಮಾರ್ಗವಾಗುವದು.

೩. ಮಂಗಳೂರು ಅರಸಿಕೆರೆ ರೈಲ್ವೆಯನ್ನು ಹಾಕಿಸುವ ವಿಷಯ ಈ ಜಿಲ್ಲಾ ಜನರ ಮಹಾ ಸಭೆಯೊಂದು ನಾಳೆದಿನ ಕೂಡುವದೆಂಬುವ ವಿಷಯವನ್ನು ವಾಚಕರು ಈ ಸಂಚಿಕೆಯ ಮಂಗಳೂರು ಸಮಾಚಾರದಿಂದ ತಿಳಕೊಳ್ಳಬಹುದು. ಅರಸಿಕೆರೆ ಮಂಗಳೂರು ರೈಲ್ವೆಯು ಈ ಜಿಲ್ಲೆಗೆ ಹೇಗೆ ಅನುಕೂಲವೂ ಅಗತ್ಯವೂ ಎಂಬುವ ವಿಷಯವನ್ನು ಆಗಿಂದಾಗ್ಯೆ ಪ್ರಸ್ತಾಪಿಸಿರುತ್ತೇವೆ. ಇಂಥಾ ಅಗತ್ಯವಾದ ವಿಷಯದಲ್ಲಿ ಜಿಲ್ಲಾ ಜನರ ಅಭಿಪ್ರಾಯವನ್ನು ಪುಷ್ಟೀಕರಿಸಿ ಸಂಸ್ಥಾನಿಕ ಮತ್ತು ವರಿಷ್ಠ ಸರಕಾರಗಳ ಮುಂದಿಡಲು ಸಭೆ ಕೂಡುವಂಥಾದ್ದು ಇದರ ಮೊದಲೇ ಅಗತ್ಯವಾಗಿತ್ತು. ಮೈಸೂರು ದಿವಾನರವರು ಭಟಕಳ ಬಂದರದ ಪ್ರಸ್ತಾಪವನ್ನು ವರಿಷ್ಠ ಸರಕಾರದವರೊಡನೆ ಮಾಡಲು ಡಿಲ್ಲಿಗೆ ತೆರಳಿದರೆಂಬುವ ವಾರ್ತೆಯು ಇಲ್ಲಿ ಗೊತ್ತಾದನಂತರವಾದರೂ ನಾವು ಸುಮ್ಮನಿರುವದು ಉಚಿತವಲ್ಲ. ಸಭೆಯು ಕೂಡುವದು ನಿಜ. ಆದರೆ ಈ ಸಭೆಯಲ್ಲಿ ಮಂಗಳೂರು ಅರಸಿಕೆರೆ ರೈಲ್ವೆ ಅಲ್ಲದಿದ್ದರೆ ಮತ್ಯಾವದೊಂದು ಹಾದಿಯನ್ನಾದರೂ ಸೂಚಿಸುವೆವೆಂತ, ಮೈಸೂರು ಅರಸಿಕೆರೆ ರೈಲ್ವೆ ವಿಷಯದಲ್ಲಿಯೇ ಭಿನ್ನಾಭಿಪ್ರಾಯದಿಂದ ಜನತೆಯ ಅಭಿಪ್ರಾಯ ಪುಷ್ಟಿಯನ್ನು ಕೆಡಿಸದೆ ಇದೇ ರೈಲ್ವೆಯು ನಮಗೆ ಬೇಕಾಗಿರುವಂಥಾದ್ದೆಂಬುದನ್ನು ಏಕಕಂಠದಿಂದ ಸೂಚಿಸುವದು ಅಗತ್ಯವಾಗಿರುವದು.

೪. ಕಳೆದ ಬುಧವಾರ ಕೂಡಿದ ವರಿಷ್ಠ ನ್ಯಾಯನಿರ್ಮಾಣ ಸಭೆಯಲ್ಲಿ ತರಲ್ಪಟ್ಟ ಡಿಫೆನ್ಸ್ ಒಫ್ ಇಂಡಿಯಾ ಬಿಲ್—ಇದರ ಮೂಲಕ ಹಿಂದೀ ಜನರಿಗೆ ಕೊಡೋಣಾಗುವ ಪೌರುಷ ದಾನದ ವಿಷಯವನ್ನು ಅಗ್ರಲೇಖದಲ್ಲಿ ವಾಚಕರಿಗೆ ತಿಳಿಯ ಹೇಳಿರುತ್ತೇವೆ. ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಜಾರಿಯ ವಿಷಯದ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಬಹುಮಾನಪಟ್ಟ ದಾಧಾಬಾಯಿಯವರು ಒಂದು ನಿರ್ಣಯವನ್ನು ಇದೇ ಸಭೆಯ ಮುಂದೆ ತಂದಿದ್ದರು. ಈ ಆಕ್ಟು ಜಾರಿಗೆ ಬಂದನಂತರ ಹಲವು ಹಿಂದೀ ಪ್ರಜಾಜನರಿಗೆ ಬಂಧನವೂ ಕೆಲವರಿಗೆ ಇಂತಿಂಥಾ ಸಂಸ್ಥಾನಗಳಿಗೆ ಹೋಗಕೂಡದೆಂಬ ಸರಕಾರದ ಆಜ್ಞೆಯೂ ಆದದ್ದು ವಾಚಕರಿಗೆ ಗೊತ್ತಿರಬಹುದು. ತಿಲಕರಿಗೂ ಪಾಲರಿಗೂ ಪಂಜಾಬು ಡಿಲ್ಲಿ ಪ್ರಾಂತ್ಯಗಳಿಗೆ ಹೋಗದಂತೆ ಈ ಆಕ್ಟು ಮೂಲಕವೇ ಆಜ್ಞೆಯಾಗಿರುವದು. ಪ್ರಜಾ ಸ್ವತಂತ್ರಕ್ಕೆ ಈ ರೀತಿ ತೊಡಕುಗಳನ್ನುಂಟು ಮಾಡುವದುಚಿತವಲ್ಲವೆಂಬ ಜನತೆಯ ಅಭಿಪ್ರಾಯಗಳು ಆಯಾ ಪ್ರಾಂತ್ಯಗಳಲ್ಲಿ ಮಹಾಸಭೆಗಳು ಕೂಡಿ ಸರಕಾರದವರಿಗೆ ಸೂಚಿಸೋಣಾಗುತ್ತಿವೆ. ಇಂಥಾ ಅಭಿಪ್ರಾಯಗಳಿಗನುಸಾರವಾಗಿ ನಾಮದಾರ್ ದಾಧಾಭಾಯಿಯವರು ಈ ಆಕ್ಟಿನ ಜಾರಿಯಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದರು. ಈ ಆಕ್ಟು ಪ್ರಕಾರ ಅಪಾದಿತರಿಗೆ ಅವರ ಮೇಲೆ ಹೊರಿಸೋಣಾಗುವ ತಪ್ಪುಗಳು ಯಾವವೆಂಬದನ್ನು ತಿಳಿಸುವದು, ವಕೀಲರ ಸಹಾಯದಿಂದ ಅಪಾದಿತನು ತನ್ನ ಹೇಳಿಕೆಯನ್ನು ಕೊಡುವದು ಮತ್ತು ಈ ವಿಚಾರಣೆಗೆ ಸಂಬಂಧಪಟ್ಟ ರಿಕಾರ್ಡನ್ನು ಒಂದು ಎಡ್ವ್ಯಾಜರಿ ಕಮ್ಮಿಟಿಯ ಮುಂದಿರಿಸಿ ಅವರ ಅಭಿಪ್ರಾಯವನ್ನು ಪಡಕೊಂಡ ನಂತರ ಆಕ್ಟಿನ ಜ್ಯಾರಿ ನಡಿಸುವದು ಎಂದಿತ್ಯಾದಿ ಸೂಚನೆಗಳು ದಾಧಾಭಾಯಿವರಿಂದ ಮಾಡೋಣಾಗಿದ್ದವು. ದಾಧಾಭಾಯಿಯವರ ಈ ಸೂಚನೆಯು ಪ್ರಜಾಕಡೆಯ ಹಲವು ಮೆಂಬರರಿಂದ ಆದರಿಸಲ್ಪಟ್ಟರೂ ಸರಕಾರದ ಅಂಗೀಕಾರವು ಇದಕ್ಕೆ ದೊರಕದೇ ಹೋಯಿತು.

೫. ಗವ್ನೆ ಕರಾರಿನ ಪದ್ಧತಿಯಿಂದ ಹಿಂದೀಜನರು ಪರಪ್ರಾಂತ್ಯಗಳಿಗೆ ಹೋಗಿ ಒಳಪಡುವ ಸಂಕಷ್ಟಗಳ ನಿವಾರಣೆಯ ಚಳವಳವನ್ನು ನೋಡಿಕೊಂಡು ಇಲ್ಲಿಯ ಕೆಲಸಗಾರರ ವಿಷಯ ಕೆಲವು ಸೂಚನೆಗಳನ್ನು ಒಬ್ಬ ಮಾನ್ಯ ಬಾತ್ಮೀದಾರರು ನಮ್ಮ ಕಡೆ ಬರೆದು ಕಳುಹಿಸಿದವರು. ಮೈಸೂರು ಸಂಸ್ಥಾನದ ಮಲೆಪ್ರಾಂತ್ಯಗಳಲ್ಲಿರುವ ಕಾಫಿ ತೋಟಗಳಿಗೂ ಮಲನಾಡು ಉತ್ತರದೆಯಲ್ಲಿರುವ ಕಬ್ಬಿನ ತೋಟಗಳಿಗೂ ಈ ಜಿಲ್ಲೆಯಿಂದ ಕೂಲಿಗೆ ಹೋಗುವವರು ಬಹಳವಾಗಿ ಆಗುತ್ತಿರುವದು. ನಿರಾಶ್ರಿತರಾದ ಹೊಲೆಯರೂ ಆಳಿಯಕಟ್ಟಿನ ಆಚರಣೆಯಿಂದ ಕುಟುಂಬದ ಮನೆಯಲ್ಲಿ ಕೂಳು ದೊರಕದೆ ನಿರ್ಗತಿಕ ಸ್ಥಿತಿಯ ಇತರರೂ ಘಟ್ಟದಮೇಲಿನ ಈ ಕೂಲಿವೃತ್ತಿಯನ್ನು ಅವಲಂಬಿಸುತ್ತಿದ್ದಾರೆ. ಇವರಲ್ಲಿ ಬಹಳ ಪಕ್ಷದವರು ಅಕ್ಷರಶೂನ್ಯರು. ಲೆಕ್ಕವನ್ನು ಸರಿಯಾಗಿ ತಿಳಿಯದೆ ಇದ್ದವರು. ಇಂಥವರಿಗೆ ಅಲ್ಪಸ್ವಲ್ಪ ಮುಂಗಡವನ್ನು ಕೊಟ್ಟು ಕೂಲಿ ಸರಬರಾಯಿಗಾರರು ಇವರನ್ನು ಘಟ್ಟಕ್ಕೆ ಕಳುಹಿಸುತ್ತಿದ್ದಾರೆ. ಹೀಗೆ ಜನರನ್ನು ಘಟ್ಟ ಕಳುಹಿಸುವಂಥವರಿಗೆ ತೋಟದ ಸಾಹುಕಾರರಿಂದ ಮುಂಗಡವಾಗಿಯೂ ದಲಾಲಿಯ ರೂಪದಲ್ಲಿಯೂ ಬಹಳ ಹಣ ದೊರಕುತ್ತಿರುವದಾದರೂ ದಲಾಲಿಗಳ ಮೂಲಕ ಅಥವಾ ಇವರ ಮುತಾಲಿಕರ ದೆಸೆಯಿಂದ ಈ ಕೂಲಿಯವರಿಗೆ ಅವರ ಸಂಬಳವು ಸರಿಯಾಗಿ ದೊರಕುವದಿಲ್ಲವೆಂಬುದು ಈ ಬಾತ್ಮೀಪತ್ರದ ಮುಖ್ಯ ಸಾರಾಂಶವಾಗಿದೆ. ಇಂಥಾ ನಿರಾಶ್ರಿತ ಜನರಿಗೆ ಸಹಾಯ ಮಾಡುವ ಏರ್ಪಾಡು ಅಗತ್ಯವೆಂತ ಸೂಚಿಸೋಣಾಗಿರುವದು. ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘದವರು ಈ ಕೂಲಿಜನರ ಕ್ಷೇಮಾಭಿವೃದ್ಧಿಯ ವಿಚಾರವನ್ನು ಕೈಕೊಳ್ಳಬಹುದೆಂಬುದಾಗಿ ನಮಗೆ ತೋರುವದು.

ಸ್ಥಳಿಕ—ಮಂಗಳೂರು.

ಇಲ್ಲಿಯ ಮುನ್ಸಿಪಲ್ ವಾರ್ಡುಗಳ ವಿಭಜನೆ ಮತ್ತು ವಾರ್ಡುಗಳಿಗೆ ಮೆಂಬರುಗಳನ್ನು ಪ್ರತ್ಯೇಕಿಸುವ ವಿಷಯವು ಇತ್ತೀಚೆಗೆ ಮುನ್ಸಿಪಲ್ ಕೌನ್ಸಿಲರರ ಸಭೆಯ ಮುಂದೆ ಬಂದಿತ್ತು. ಕೊಡಿಯಾಲಬೈಲು ವಾರ್ಡನ್ನು ಎರಡಾಗಿ ಮಾಡುವ ಮತ್ತು ಹೀಗೆ ವಿಭಜಿಸಲ್ಪಟ್ಟ ವಾರ್ಡುಗಳಿಗೆ ಎರಡೆರಡು ಜನ ಮೆಂಬರುಗಳನ್ನು ಆರಿಸುವ ಸರಕಾರದ ಸೂಚನೆಯು ಕೌನ್ಸಿಲಿನವರಿಂದ ಅಂಗೀಕರಿಸಲ್ಪಟ್ಟಿರುವದು. ಮಿಶನ್ ಶಾಲೆಯ ಬಳಿಯಿಂದ ಕುಳೂರಿಗೆ ಹೋಗುವ ರಸ್ತೆಯು ಹೀಗೆ ವಿಭಜಿಸಲ್ಪಡುವ ವಾರ್ಡುಗಳ ಗಡಿಯಾಗಿರುವದು. ಈ ರಸ್ತೆಯ ಪಶ್ಚಿಮಕ್ಕೆ ಇರುವಂಥಾದ್ದು, ಒಂದು ವಾರ್ಡು ಪೂರ್ವಕ್ಕೆ ಇರುವಂಥಾದ್ದು ಮತ್ತೊಂದು ವಾರ್ಡು.

ಮೊಟರ್ ಸ್ಯಾಕಲ್ ಮತ್ತು ಗಾಡಿಗಳು ಉಪಯೋಗಿಸುವಂಥಾ ಕೊಂಬುಗಳನ್ನು ಇತರ ಸಾಮಾನ್ಯ ಗಾಡಿ ಮುಂತಾದವುಗಳು ಉಪಯೋಗಿಸಕೂಡದೆಂಬ ನಿಯಮವನ್ನು ಮುನ್ಸಿಪಲ್ ಕೌನ್ಸಿಲಿನವರು ಜಾರಿಗೆ ತರಲು ನಿಶ್ಚಯಿಸಿರುವರು.

ಮಂಗಳೂರು ಗೌಡ ಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಡಿಯುತ್ತಿರುವ ಸಂಸ್ಕೃತ ಪಾಠಶಾಲೆಯನ್ನು ಮುಚ್ಚುವ ವಿಷಯ ಒಬ್ಬ ಬಾತ್ಮೀದಾರರು ಈ ರೀತಿ ಬರೆದಿರುವರು. ಶಿಕ್ಷಣ ವೃತ್ತಿಯಲ್ಲಿಯೇ ತೃಪ್ತಿಪಡದೆ ಇರುವಂಥಾ ಉಪಾಧ್ಯಾಯರು ಶಾಲೆಯನ್ನು ನಡಿಸುವದರಿಂದ ಹುಡುಗರ ಸಂಖ್ಯೆಯು ಇಳಿದು ಬಂದಿದೆ. ಯೋಗ್ಯ ಉಪಾಧ್ಯಾಯರನ್ನು ನೇಮಿಸಿ ಶಾಲೆಯನ್ನು ಮುಂದುವರಿಸುವ ತನಕ ಇದನ್ನು ಮುಚ್ಚಿಬಿಟ್ಟು ಶಾಲೆಯ ಅಭ್ಯುದಯದ ಪ್ರಯತ್ನಗಳನ್ನು ಕೂಡಲೆ ಕೈಕೊಳ್ಳಬೇಕೆಂದು ಸೂಚಿಸಿರುತ್ತಾರೆ.

ಇದೇ ಕಳೆದ ಜನವರಿ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೭೪೬ ಜನನ, ೩೨೮೪ ಮರಣಗಳಾಗಿರುವವು. ಈ ಪೈಕಿ ಜನನ ಕುಂದಾಪುರ ತಾಲೂಕು ಗಂಡು ೨೩೬ ಹೆಣ್ಣು ೧೮೯=೪೨೫; ಉಡ್ಪಿ ಗಂಡು ೩೦೫; ಹೆಣ್ಣು ೩೪೬=೬೫೧; ಉಡ್ಪಿ ಪಟ್ಟಣ ಗಂಡು ೧೫, ಹೆಣ್ಣು ೫=೨೦; ಮಂಗಳೂರು ಗಂಡು ೩೩೪ ಹೆಣ್ಣು ೩೪೨; ಮುಲ್ಕಿ ಗಂಡು ೧೫, ಹೆಣ್ಣು ೧೨=೨೭; ಕಾರ್ಕಳ ಗಂಡು ೨೩೮ ಹೆಣ್ಣು ೧೮೨=೪೨೦; ಉಪ್ಪಿನಂಗಡಿ ಗಂಡು ೩೩೨ ಹೆಣ್ಣು ೨೮೩=೬೧೫; ಕಾಸರಗೋಡು ಗಂಡು ೩೭೦, ಹೆಣ್ಣು ೩೫೫=೭೨೫; ಕಾಸರಗೋಡು ಪಟ್ಟಣ ಗಂಡು ೧೩, ಹೆಣ್ಣು ೧೦=೨೩; ಮುನ್ಸಿಪಾಲಿಟಿ ಗಂಡು ೮೫, ಹೆಣ್ಣು ೫೮=೧೪೩; ಜುಮ್ಲಾ ಗಂಡು ೧೯೨೩, ಹೆಣ್ಣು ೧೮೨೩=೩೭೪೬. ಜಿಲ್ಲೆಯ ಆಯಾ ತಾಲೂಕುಗಳ ಮರಣ ಸಂಖ್ಯೆ—ಕುಂದಾಪುರ ಗಂಡು ೨೧೮, ಹೆಣ್ಣು ೨೧೫=೪೩೩; ಉಡ್ಪಿ ಗಂಡು ೨೩೫, ಹೆಣ್ಣು ೨೬೬=೫೦೧; ಉಡ್ಪಿ ಪಟ್ಟಣ ಗಂಡು ೬, ಹೆಣ್ಣು ೯=೧೫; ಮಂಗಳೂರು ಗಂಡು ೨೪೧, ಹೆಣ್ಣು ೧೯೨=೪೩೩; ಮುಲ್ಕಿ ಗಂಡು ೮, ಹೆಣ್ಣು ೯=೧೭; ಕಾರ್ಕಳ ಗಂಡು ೧೮೦, ಹೆಣ್ಣು ೧೯೧=೩೭೧; ಉಪ್ಪಿನಂಗಡಿ ಗಂಡು ೨೯೩, ಹೆಣ್ಣು ೨೫೬=೫೪೯; ಕಾಸರಗೋಡು ಗಂಡು ೪೨೪, ಹೆಣ್ಣು ೪೨೧=೮೪೫; ಕಾಸರಗೋಡು ಪಟ್ಟಣ ಗಂಡು ೮, ಹೆಣ್ಣು ೧೦=೧೮; ಮುನ್ಸಿಪಾಲಿಟಿ ಗಂಡು ೬೦, ಹೆಣ್ಣು ೪೭=೧೦೭; ಜುಮ್ಲಾ ಮರಣ ಸಂಖ್ಯೆ ಗಂಡು ೧೭೭೪, ಹೆಣ್ಣು ೧೫೧೦=೩೨೮೪.

ಫೆಬ್ರುವರಿ ತಿಂಗಳಲ್ಲಿ ಮದ್ರಾಸ್ ಆಸ್ಪತ್ರಿ ಹಡಗ ಫಂಡಿಗೆ ಮ| ರಾ| ರಾವ್ ಬಹದ್ದೂರ್ ಎನ್. ಸುಬ್ಬರಾವ್ ರೂ. ೫; ಮ| ರಾ| ಟಿ. ಭವಾನಿ ರಾವ್ ರೂ. ೩; ಮ| ರಾ| ಕೆ. ಪಿ. ರಾಮರಾವ್ ರೂ. ೨; ಮ| ರಾ| ಎ. ಶ್ರೀನಿವಾಸ ಪೈ ರೂ. ೨; ಮೆ| ಎಮ್. ನೌರೋಜಿ ರೂ. ೨; ರಾವ್ ಬಹದ್ದೂರ್ ಆರ್. ರಾಮರಾವ್ ರೂ. ೧; ರಾ| ಗೊಲ್ಲರಕೇರಿ ಕೃಷ್ಣರಾವ್ ರೂ. ೧; ಮ| ರಾ| ಎಲ್. ರಾಮರಾವ್ ರೂ. ೧; ಮ| ರಾ| ಕಾರ್ನಾಡ ಸದಾಶಿವ ರಾವ್ ರೂ. ೧; ಮೆ| ಎಲ್. ಸಲ್ಡಾಂಞ ರೂ. ೧; ಮ| ರಾ| ಎಸ್. ರಘುನಾಥಯ್ಯ ರೂ. ೧; ಈ ರೀತಿ ವಂತಿಗೆ ಕೊಟ್ಟಿರುವರು.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಪ್ಲೇಗ ಸೋಂಕಿನ ಇಲಿಗಳು ಅಲ್ಲಲ್ಲಿ ಬೀಳಹತ್ತಿ ಪ್ಲೇಗು ಸೋಂಕು ಹೆಚ್ಚಿದಂತೆ ತೋರುತ್ತಿದೆ. ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೯ ಪ್ಲೇಗು ಮರಣಗಳಾಗಿರುವವು.

ಜಿಲ್ಲಾ ಕಲೆಕ್ಟರ ದೊರೆಗಳವರು ಇದೇ ತಾ. ೭-೮ ಮುಲ್ಕಿ, ತಾ. ೯-೧೦-೧೧ ಉಡ್ಪಿ; ತಾ. ೧೨ ಕುಂದಾಪುರ; ತಾ. ೧೩-೧೪ ಕುಂದಾಪುರ; ತಾ. ೧೫ ಉಡ್ಪಿ. ತಾ. ೨೦-೨೧ ಉಡ್ಪಿ; ತಾ. ೨೨ ಮಂಗಳೂರು ತಾ. ೨೩ ಮಂಜೇಶ್ವರ; ತಾ. ೨೭-೨೮-೨೯ ಮಂಜೇಶ್ವರ ಈ ರೀತಿ ಸರ್ಕೀಟು ಬೆಳಸುವರು.

ಇದೇ ತಾ. ೩ನೇ ಶನಿವಾರ ಸಾಯಂಕಾಲ ೫-೩೦ ಗಂಟೆಗೆ ಗವರ್ನಮೆಂಟ ಕಾಲೇಜಿಯಲ್ಲಿ ಮಂಗಳೂರು—ಅರಸಿಕೆರೆ ರೈಲ್ವೆ ಸಂಬಂಧ ಆಲೋಚನೆ ನಡಿಸುವ ಉದ್ದೇಶದಿಂದ ಜಿಲ್ಲಾ ಜನರ ಒಂದು ಸಭೆಯು ಕೂಡಲಿಕ್ಕಿದೆ. ಮೆ| ಎಚ್. ಆರ್. ಮೋರ್ಗನ್ ದೊರೆಗಳವರು ಈ ಸಭೆಯ ಅಧ್ಯಕ್ಷರಾಗಿರುವರು. ಜಿಲ್ಲಾ ಕಲೆಕ್ಟರ ದೊರೆಗಳವರೂ ಈ ಸಭೆಗೆ ಚಿತ್ತೈಸುವರು.

ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ಮದ್ವಿಶ್ವಜ್ಞ ತೀರ್ಥ ಶ್ರೀ ಶ್ರೀ ಪಾದಂಗಳವರು ಕಳೆದ ವೈಶಾಖ ಮಾಸದಲ್ಲಿ ಕಾಶೀಯಾತ್ರಾ ಮಾಡಿಕೊಂಡು ಶ್ರೀ ಕ್ಷೇತ್ರ ಕಾಶಿಯಿಂದ ಹೊರಟು ನಾಗಪುರ ಮಾರ್ಗೇಣ ಹೈದರಾಬಾದಿಗೆ ಬಂದು ಅಲ್ಲಿ ಕೆಲವು ದಿನ ಇದ್ದು ಈಗ ಶಿವರಾತ್ರಿ ಮಹೋತ್ಸವಕ್ಕೆ ಆತ್ಮಕೂರು ಸಂಸ್ಥಾನಕ್ಕೆ ಬಂದಿರುತ್ತಾರೆ. ಇಲ್ಲಿಂದ ವನಪರ್ತಿ ಗದ್ವಾಲಿ ಈ ರಾಜಧಾನಿಗಳಿಗೆ ಬಂದು ಬರುವ ಶ್ರೀ ರಾಮನವಮಿ ಮಹೋತ್ಸವನ್ನು ಬಳ್ಳಾರಿ ಜಿಲ್ಲಾ ಆದ್ವಾನಿಯಲ್ಲಿ ಮಾಡಬೇಕೆಂದು ನಿಶ್ಚಯಮಾಡಿರುತ್ತಾರೆಂತ ಒಬ್ಬ ಬಾತ್ಮೀದಾರರು ತಿಳಿಸಿರುವರು.

ನೋಟೀಸು.

ನಳ ಸಂ|ರದ ಫಾಲ್ಗುಣ ಶು. ೧೫ ತಾ. ೮—೩—೧೭ರ ಲ್ಯಾಗಾಯಿತು ಬಹುಳ ೩ ತಾ. ೧೧-೩-೧೭ರ ಪರ್ಯಂತರ ಶ್ರೀಮದನಂತಾಸನ ದೇವರ ಸನ್ನಿಧಿಯಲ್ಲಿ ನಡಿಸುವದಾಗಿ ನಿರ್ಣಯಿಸಿದ್ದ ಶ್ರೀಮನ್ಮಧ್ವಸಿದ್ಧಾಂತ ಸಂವರ್ಧಿನೀ ಸಭೆಯನ್ನು ಕೆಲವು ಅನಾನುಕೂಲತೆಗಳಿಂದ ಇದೇ ಚೈತ್ರ ಬ. ೧ ತಾ. ೮-೪-೧೭ ಲಾಗಾಯಿತು ೪ ತಾ. ೧೧-೪-೧೭ರ ಪರ್ಯಂತರ ನಡಿಸೋಣಾಗುತ್ತದೆ. ಆದುದರಿಂದ ಈ ಸಭೆಗೆ ಸಂಬಂಧಪಟ್ಟ ಮಹಾಜನರುಗಳು ಸದರಿ ಸಮಯದಲ್ಲಿ ಹಾಜರಿದ್ದು ಸ್ವಕರ್ತವ್ಯಗಳನ್ನು ನೆರವೇರಿಸಬೇಕಾಗಿ ಸಾದರದಿಂದ ಅಪೇಕ್ಷಿಸುವೆ.

ತಾ. 28—2—17. ಉಡುಪಿ. | ಸಭಾ ಕಾರ್ಯದರ್ಶಿ. [illegible]

ಪ್ರಕಟಣೆ.

ಬರುವ "ಪಿಂಗಳ ಸಂವತ್ಸರದ" ನಮ್ಮ ಪಂಚಾಂಗದಲ್ಲಿ "ಕೃಷ್ಣ ಜನ್ಮಾಷ್ಟಮಿ"ಯು ಅಗೋಸ್ತು ತಾರೀಕು ೯ನೇ ಗುರುವಾರಕ್ಕೆ ಬರೆಯಬೇಕಾದದ್ದು ಲೇಖಕ ಪ್ರಮಾದದಿಂದ ಮರುದಿನ ಶುಕ್ರವಾರಕ್ಕೆ ಬಿದ್ದಿವೆ. ಆ ದಿನ ಮಧ್ಯರಾತ್ರಿಗೆ ಅಷ್ಟಮಿ ಇಲ್ಲದ್ದರಿಂದ, ನಮ್ಮ ಪಂಚಾಂಗ ಗ್ರಾಹಕರೆಲ್ಲರೂ, ಜನ್ಮಾಷ್ಟಮಿ, ವ್ರತವನ್ನು ಗುರುವಾರವೇ ಆಚರಿಸಬೇಕಾಗಿ ವಿಜ್ಞಾಪಿಸುತ್ತೇನೆ.

ಇಂತು ಪಂಚಾಂಗದ ಕರ್ತೃ,

[illegible] ಸುಬ್ಬಣ್ಣ ಶಾಸ್ತ್ರಿ.

ಉಡುಪಿ—ಇದೇ ಕಳೆದ ಮಾಘ ಮಾಸದಲ್ಲಿ ಜರಗಲಿಕ್ಕಿದ್ದ ಇಲ್ಲಿಯ ಶ್ರೀಮನ್ಮಧ್ವ ಸಿದ್ಧಾಂತ ಸಂವರ್ಧಿನೀ ಸಭೆಯನ್ನು ಕೆಲವು ಅನನುಕೂಲತೆಗಳಿಂದ ಬರುವ ಚೈತ್ರ ಬ| ೧ ರಿಂದ ೪ ಪರ್ಯಂತರ ನಡಿಸುವದೆಂದು [illegible] ಬರುತ್ತದೆ. ಮೈಸೂರಿನ ಮ| ವರದಾಚಾರ್ಯರವರ [illegible] ನಲ್ಲಿ ಶ್ರೀ ಕೃಷ್ಣಮಠದ ವಸಂತ ಮಹಾಲಿನಲ್ಲಿ [illegible] ಶ್ರೀ ಪಾದಂಗಳವರ ಬಗ್ಗೆ ಮೂರು ಪಾಠಗಳನ್ನು [illegible] ಅವರಿಗೆ ಶ್ರೀ ಪಾದಂಗಳವರೆಲ್ಲರು ಸೇರಿ [illegible] ಕೊಟ್ಟರಾಗಿ ತಿಳಿದುಬರುತ್ತದೆ.

ಇಲ್ಲಿಯ ಸಂಸ್ಕೃತ [illegible] ತಿಂಗಳ ಸಂಬಳ [illegible]

[illegible]

[illegible] ೯೫; ಬರ್ಮಾ ೨೮೪; ಮಧ್ಯ ಸಂಸ್ಥಾನಗಳು ೧೭೯೪; [illegible] ಹೈದರಾಬಾದ್ ೧೪೬೩; ಮಧ್ಯಹಿಂದೂಸ್ಥಾನ ೨೭೧; ರಾಜ [illegible] ಮರಣಗಳಾಗಿರುವವು.

ಈ ತಿಂಗಳ ಮತ್ತು ಮ. ಪಾಲರಿಗೆ ಪಂಜಾಬು ಸರಕಾರದವರು ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಕೊಟ್ಟ ಆಜ್ಞೆಯನ್ನು ನಿಷೇಧಿಸುವರೆ ತಾ. [illegible] ಮುಂಬಾಯಿಯಲ್ಲಿ ಸಾರ್ವಜನಿಕ ಸಭೆಯು ಕೂಡಿ ಬಂದಿರುತ್ತದೆ. "[illegible] ಕ್ರಾನಿಕಲ್" ಪತ್ರಿಕೆಯ ಸಂಪಾದಕರಾದ ಮಿ। ಬಿ. ಜಿ. ಹಾರ್ನಿಮ್ಯಾನರು ಈ ಸಭೆಯ ಅಧ್ಯಕ್ಷರಾಗಿದ್ದರು. ಬಹುಮಾನಪಟ್ಟ ಮಿ। ಮನಮೋಹನದಾಸ ರಾಮ್ಜಿಯವರ ಸೂಚನೆಯ ಪ್ರಕಾರ ಕೆಲವು ಸಂಸ್ಥಾನಿಕ ಸರಕಾರಗಳು ಹಿಂದೀ ಮುಂದಾಳುಗಳ ವಿಷಯದಲ್ಲಿ ಕೈಕೊಂಡ ಈ ಕಾರ್ಯಗಳು ಪ್ರಜಾಜನರ ಸ್ವಾತಂತ್ರ್ಯಕ್ಕೆ ಕೊರತೆಯನ್ನು ತರುವಂಥಾದ್ದಾದರಿಂದ ಸಂಸ್ಥಾನಿಕ ಸರಕಾರದವರ ಈ ವರ್ತನೆಯನ್ನು ಕೂಡಿದ ಸಭಿಕರು ಏಕಮತದಿಂದ ಖಂಡಿಸುತ್ತಾರೆಂಬ ನಿರ್ಣಯವು ಆಗಿರುತ್ತದೆ. ಸಭೆಯಲ್ಲಿ ಮಿ। ಜಿನ್ನಾ, ಮಿಸೆಸ್ ಸರೋಜಿನಿನಾಯ್ಡು ಮೊದಲಾದವರು ಸಂಸ್ಥಾನಿಕ ಸರಕಾರಗಳ ಈ ವರ್ತನೆಯನ್ನು ಖಂಡಿಸುವ ಭಾಷಣಗಳನ್ನು ಕೊಟ್ಟಿರುತ್ತಾರೆ.

ಪಂಜಾಬು ಸರಕಾರದವರು ಮಾನ್ಯ ತಿಲಕರವರಿಗೆ ಕೊಟ್ಟ ಹುಕುಮಿನ ನಂತರ ಮಾನ್ಯ ತಿಲಕರು ಲೆಫ್ಟಿನೆಂಟ ಗವರ್ನರಿಗೆ ತಂತೀ ಮೂಲಕ "ನಿಮ್ಮ ಹುಕುಂ ಆಶ್ಚರ್ಯವನ್ನು ಹುಟ್ಟಿಸುತ್ತದೆ. ನಾನು ಪಂಜಾಬಿಗೆ ಬರಬೇಕೆಂದು ಆಲೋಚಿಸಿದ್ದೆ ಇಲ್ಲ; ಅಥವಾ ನನಗೆ ಪಂಜಾಬಿನಿಂದ ಯಾರಾದರೂ ಆಮಂತ್ರಿಸಿದ್ದೂ ಇಲ್ಲ. ಆದುದರಿಂದ ನಾನು ಪಂಜಾಬಿಗೆ ಬಂದು ಲೋಕಹಿತಕ್ಕೆ ಹಾನಿಯನ್ನು ತರುವೆನೆಂಬ ತಿಳಿವ ಸುದ್ದಿಯು ಪೂರ್ಣ ಸುಳ್ಳಾಗಿದೆ. ತಕ್ಕ ನಿವಾರಣೆಯನ್ನು ಮಾಡಿಕೊಳ್ಳುವ ಹಾಗೆ ನಿಮ್ಮ ಸರಕಾರಕ್ಕೆ ದೊರಕಿದ ಈ ಸಂಬಂಧವಾದ ಆ ಸುದ್ದಿಯನ್ನು ದಯಮಾಡಿ ಪ್ರಮಾಣಿಸಿ ಕೊಡಿರಿ." ಎಂತ ತಿಳಿಸಿರುವರು. ಉತ್ತರ ಬಂದಿಲ್ಲ.

ಡಿಲ್ಲಿ ಸಂಸ್ಥಾನಕ್ಕೆ ಹೋಗಕೂಡದೆಂಬ ನಿಷೇಧ ಆಜ್ಞೆಯು ಇದೇ ತಾ. ೨೩ರಲ್ಲು ಲೊ। ತಿಲಕರವರಿಗೆ ಡಿಲ್ಲಿಯ ಚೀಫ್ ಕಮಿಷನರಿಂದ ಬಂದಿರುತ್ತದೆ. ಲೊ। ತಿಲಕರು ಡಿಲ್ಲಿಗೆ ಹೋಗಬೇಕೆಂತ ಇದ್ದಿಲ್ಲವೆಂತಲೂ ಯಾ ಅಲ್ಲಿಂದ ಅವರಿಗೆ ಆಮಂತ್ರಣವಾಗಲಿಲ್ಲವೆಂತಲೂ ತಿಳಿದು ಬರುತ್ತದೆ.

ಮುಂಬಾಯಿಯ ಕೆಲಸಗಾರರ ವರ್ಗದವರಲ್ಲಿ ಸುಮಾರು ೧೩೦೦ ಮಂದಿಯ ಸಭೆ ಕೂಡಿ ಶಿಮ್ಗಾ ಉತ್ಸವದ ಸಮಯ ೩ ದಿವಸಗಳ ವರೆಗೆ ಮದ್ಯದಂಗಡಿಗಳನ್ನು ಮುಚ್ಚಿಬಿಡಬೇಕೆಂಬದಾಗಿ ಮುಂಬಾಯಿ ಸರಕಾರದವರಿಗೆ ಮನವಿಮಾಡಿಕೊಂಡರು. ಈ ಪ್ರಕಾರ ಮುಂಬಾಯಿ ಸರಕಾರದವರು ಈ ಉತ್ಸವಕಾಲ ೩ ದಿವಸಗಳ ವರೆಗೆ ಮುಂಬಾಯಿ ಪಟ್ಟಣದಲ್ಲಿ ಮದ್ಯ ಮಾರಕೂಡದೆಂತ ಕಟ್ಟು ಮಾಡಿರುತ್ತಾರೆ. ಈ ಉತ್ಸವದಕಾಲ ಮದ್ಯಪಾನವು ವಿಶೇಷವಾಗಿ ನಡೆಯುವದೂ ಅಭ್ಯಾಸವಿದ್ದುದರಿಂದ ಕೂಡಾ ಈ ಅಭ್ಯಾಸವನ್ನು ಪ್ರಾರಂಭಿಸುವದೂ ಮುಂಬಾಯಿಯ ಪದ್ಧತಿಯಂತೆ [illegible]

ಇದೇ ತಾ. ೨೧ರಲ್ಲು ಡಿಲ್ಲಿಯಲ್ಲಿ ಕೂಡಿದ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಫೋರ್ಸ್ ಎಂಬ ವಿಧಿಯು ಜಾರಿಗೆ ಬಂದಿರುತ್ತದೆ. ಈ ವಿಧಿಯ ಪ್ರಕಾರ ೧೮-೪೧; ೪೧-೫೦; ೧೬-೧೮ ವರ್ಷ ವಯಸ್ಸಿನ ಯೂರೋಪಿಯಾನರೆಲ್ಲರೂ ಸೇನೆಗೆ ಸೇರಿಕೊಳ್ಳಬೇಕಾಗುವದು. ಕೆಲವು ಸಂದರ್ಭಗಳಲ್ಲಿ ಮಾತ್ರ ವಿನಾಯಿತಿ ಇದೆ. ಅದಲ್ಲದೆ ಈ ವಿಧಿಯಲ್ಲಿ ಹಿಂದೀಗಳಿಗೂ ಸ್ವಯಂ ಸೇವಕತ್ವದ ಹಕ್ಕು ಕೊಡೋಣಾಗಿರುತ್ತದೆ.

ಹಿಂದೀಗಳಿಗೆ ಸೇನೆಯಲ್ಲಿ ಸೇರಿಕೊಳ್ಳುವ ಅನುಕೂಲ ಮಾಡಲ್ಪಟ್ಟದ್ದರಿಂದ ಹಿಂದೂಸ್ಥಾನದ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಸೇನೆಗೆ ಸೇರಿಕೊಳ್ಳುವ ಹಾಗೆ ಹಿಂದೀ ಜನಗಳನ್ನು ಪ್ರೋತ್ಸಾಹಿಸುವ ಸಭೆಗಳು ಹಿಂದೀ ಮುಂದಾಳುಗಳಿಂದ ನಡೆಸೋಣಾಗುತ್ತಿವೆ. ಹೀಗೆ ಪೂನೆಯಲ್ಲಿ ಕೂಡಿದ ಒಂದು ಸಭೆಯಲ್ಲಿ ಲೊ। ತಿಲಕರವರು "ನೀವು ನಿಮ್ಮ ಸ್ವದೇಶವನ್ನು ಕಾಪಾಡುವದಕ್ಕಾಗಿ ಮುಂದೆ ಬರುವದಿಲ್ಲವಾದರೆ ನಾನು ಈ ಹೋಮ್‌ರೂಲು ಚಲವಳವನ್ನು ಬಿಟ್ಟುಬಿಡುತ್ತೇನೆ. ನಿಮಗೆ ಹೋಮ್‌ರೂಲು ಬೇಕಾಗಿದ್ದರೆ ನಿಮ್ಮ ಸ್ವದೇಶವನ್ನು ಕಾಪಾಡಿಕೊಳ್ಳಲು ಸಿದ್ಧರಾಗಿರಬೇಕು. ನನ್ನ ವಯಸ್ಸಲ್ಲದಿದ್ದರೆ ನಾನು ಮೊದಲಾಗಿ ಸೇನೆಗೆ ಸೇರಿಕೊಳ್ಳುತ್ತಿದ್ದೆನು. ಸ್ವದೇಶವನ್ನು ಕಾಪಾಡುವ ಸಂದರ್ಭದಲ್ಲಿ ನಿಮ್ಮ ಬಗ್ಗೆ ಯೂರೋಪಿಯಾನರ ಅಥವಾ ವಸಾಹತುಗಳ ಕಾದಾಡುವದಾದರೆ ಅಲ್ಲದಂಥಾದ್ದು ನಿಮ್ಮಿಂದಾದೀತೆಂದು ಸಕಾರಣವಾಗಿ ಹೇಳಲಾರಿರಿ. ಸೇನೆಗೆ ಸೇರಿಕೊಳ್ಳಬಹುದೆಂದು ಸರಕಾರದಿಂದ ಕೊಡೋಣಾದ ಈ ಸಂದರ್ಭದ ಪ್ರಯೋಜನವನ್ನು ಹೊಂದಲಿಕ್ಕೆ ಮನಸ್ಸುಳ್ಳವರಾಗಿದ್ದೀರೆಂಬುದನ್ನು ನೀವು ನಿಮ್ಮ ಕಾರ್ಯದಿಂದ ತೋರಿಸಿಕೊಡಿರಿ. ಹೀಗೆ ಮಾಡಿದರೆ ಸೇನೆಯಲ್ಲಿ ಅಧಿಕಾರಸ್ಥಾನ ಕೊಡಬೇಕೆಂದು ಕೇಳುವ ನಿಮ್ಮ ಹಕ್ಕಿಗೆ ಎರಡನ್ನು ಮೊಹತ್ತ ಉಂಟಾಗುವದು" ಎಂದು ಹೇಳಿರುತ್ತಾರೆ.

ಹಿಂದೀ ಸೇನಾ ಸಂಬಂಧವಾಗಿರುವ ವಿಧಿಯ ಪ್ರಕಾರ ಈ ಹೊಸ ಸೇನೆಯಲ್ಲಿ ಸೇರಿದ ಹಿಂದೀಗಳು ತಕ್ಕ ಯೋಗ್ಯತೆಯನ್ನು ಪಡೆದ ಕೂಡಲೇ ಸೇನೆಯಲ್ಲಿ ಅಧಿಕಾರಸ್ಥಾನಕ್ಕೆ ಅರ್ಹರಾಗುವತೆಂತ ಮೈಸರಾಯ ಪ್ರಭುಗಳು ಸ್ಟೇಟ ಸೆಕ್ರಟರಿಗಳವರಿಗೆ ತಿಳಿಸಿರುವರು ಎಂಬದಾಗಿ ಸ್ಟೇಟ ಸೆಕ್ರಟರಿಯವರು ಕಾಮನ್ಸ್ ಸಭೆಯಲ್ಲಿ ಹೇಳಿರುತ್ತಾರೆ.

ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಹಿಂದೀ ಸ್ವಯಂ ಸೇವಕತ್ವದ ರಿವಾಜು ಜಾರಿಗೆ ಬಂದದರಿಂದ ಈ ಬಗ್ಗೆ ಸರಕಾರದವರಿಗೆ ಕೃತಜ್ಞತೆಯನ್ನು ಪ್ರದರ್ಶಿಸುವರೆ ಬಂಗಾಳ ಹೋಮ್‌ರೂಲು ಲೀಗಿನಲ್ಲಿ ಒಂದು ಸಭೆಯು ಕೂಡಿ ಬಂದಿರುವದು. ಈ ಸೇನೆಗೆ ಸೇರುವ ಹಿಂದೀಗಳ ಸಂಬಳ ಮತ್ತು ಅಧಿಕಾರವು ಎಂಗ್ಲೊ ಇಂಡಿಯಾನರಂತೆಯೇ ಇರುವಂತೆ ಸರಕಾರದವರು ನೋಡಿಕೊಳ್ಳಬೇಕೆಂಬ ನಿರ್ಣಯವು ಈ ಸಭೆಯಲ್ಲಿ ಆಗಿರುತ್ತದೆ. [illegible] ಪಾಲರವರು ಸರಕಾರದವರಿಂದ [illegible] ತ್ವಾದ ಸಂದರ್ಭವನ್ನು ಕಳಕೊಳ್ಳದ ಹಾಗೆ ಪ್ರತಿ ಒಬ್ಬನು ಪ್ರಯತ್ನಿಸಬೇಕೆಂದೂ ಸೇನೆಗೆ ಬರಸಿಕೊಂಡ ಹಿಂದೀಗಳಿಗೂ ಆಂಗ್ಲೊ ಇಂಡಿಯಾನರಿಗೂ ಸಂಬಳ ಮೊದಲಾದ ವಿಷಯಗಳಲ್ಲಿ ಭೇದವಿಲ್ಲದಂತೆ ಮಾಡುವರೆ ವರಿಷ್ಠ ನ್ಯಾಯವಿಧಾಯಕ ಸಭೆಯ ಪ್ರಜಾಪ್ರತಿನಿಧಿಗಳು ತುಂಬಾ ಪ್ರಯತ್ನಿಸುವರೆಂಬ ದೃಢಸಂಕಲ್ಪವು ತನಗಿದೆಂದೂ ಈ ಸಭೆಯಲ್ಲಿ ಹೇಳಿರುತ್ತಾರೆ.

ಗೆಯ್ಮೆ ಕರಾರು ಕೂಲಿ ಪದ್ಧತಿಯನ್ನು ನಿಷೇಧಿಸುವ ಉದ್ದೇಶದಿಂದ ಮುಂಬಾಯಿಯ ಹೆಂಗಸರದೊಂದು ಮಹಾ ಸಭೆಯು ಮುಂಬಾಯಲ್ಲಿ ಕೂಡಿ ಬಂದಿರುವದು. ಈ ವರೆಗೆ ರಾಜಕೀಯ ವಿಷಯಗಳಲ್ಲಿ ಸೇರದೆ ಇದ್ದ ಕುಟುಂಬಗಳ ಹಿಂದೀ ಹೆಂಗಸರು ಈ ಸಭೆಯಲ್ಲಿ ಪಾಲು ತಕ್ಕೊಂಡದ್ದು ಈ ಸಭೆಯ ಒಂದು ವಿಶೇಷ ಸಂಗತಿಯಾಗಿತ್ತು. ಲೇಡಿ ವಿಟಲ್‌ದಾಸ್ ಠಕರ್ಸೆ, ಲೇಡಿ ಅಲ್ಲಾಯ ಫಿರೋಜಶಾ ಮೇಹ್ತಾ, ಲೇಡಿ ಎಮ್. ಡಿ. ಟಾಟಾ ಮೊದಲಾದ ಮುಂಬಾಯಿಯ ಪ್ರಮುಖ ಹೆಂಗಸರು ಈ ಸಭೆಯಲ್ಲಿ ಸೇರಿದ್ದರು. ಗೆಯ್ಮೆ ಕರಾರು ಪದ್ಧತಿಯಿಂದ ಹೆಂಗಸರ ಪಾತಿವ್ರತ್ಯಕ್ಕೆ ಭಂಗ ಉಂಟಾಗಿರುವದರಿಂದ ಇಂಥಾ ಪದ್ಧತಿಯನ್ನು ಮೇ ತಾ. [illegible] [illegible] ನಿಲ್ಲಿಸುವ ಹಾಗೆ ವೈಸರಾಯ ಪ್ರಭುಗಳನ್ನು ಕೇಳಿಕೊಳ್ಳಬೇಕು ಎಂಬ [illegible] ಈ ಸಭೆಯಲ್ಲಿ ಆಗಿರುವದು. ಈ ಸಭೆಯ ಪರವಾಗಿ ನಾಲ್ಕು ಹೆಂಗಸರು ವೈಸರಾಯ ಪ್ರಭು [illegible] ಈ ವಿಷಯದಲ್ಲಿ ಹಿಂದೀ ಹೆಂಗಸರ [illegible]ಗಳನ್ನು ಅವರಿಗೆ ತಿಳಿಸಿ, ಈ ಕಟ್ಟು ಪದ್ಧತಿಯನ್ನು ನಿಲ್ಲಿಸುವರೆ [illegible] ಈ ಸಭೆಯಲ್ಲಿ [illegible]

[illegible] ಲೇಡಿ ಫಿರೋಜಶಾ ಮೇಹ್ತಾರವರು ಈ ಸಭೆಯ ಅಧ್ಯಕ್ಷರಾಗಿದ್ದರು. ವೈಸರಾಯ್ ಪ್ರಭು ಪತ್ನಿಯವರಿಗೆ ಭೇಟಿಕೊಡುವರೆ ಮಿಸೆಸ್ ಸರೋಜಿನಿ ನಾಯ್ಡು, ಮಿಸೆಸ್ ಜೆ. ಬಿ. ಪೆಟಿಟ್, ದಿಲ್ವಾರ್ ಬೇಗಮ್ ಸಾಹೇಬ ಮತ್ತು ಮಿಸೆಸ್ ತಿರೂರರವರು ಆರಿಸಲ್ಪಟ್ಟಿರುತ್ತಾರೆ.

ಹಿಂದೂಸ್ಥಾನದಲ್ಲಿ ಭತ್ತಸಾಗುವಳಿಯು ವಿಸ್ತೀರ್ಣವು ೧೯೧೬-೧೭ರಲ್ಲಿ ಸೇಕಡಾ ೨ರಂತೆಯೂ ಸಾಗುವಳಿಯಿಂದ ಹುಟ್ಟಿ ಬಂದ ಭತ್ತವು ಸೇಕಡಾ ೪ರಂತೆಯೂ ಏರಿರುತ್ತದೆ. ೧೯೧೫-೧೬ರಲ್ಲಿ ೩೪,೦೬೮,೦೦೦ ಟನ್ ಅಕ್ಕಿಯು ಉತ್ಪತ್ತಿಯಾಗಿದೆ. ೧೯೧೫-೧೬ರಲ್ಲಿ ೩೨,೮೨೪,೦೦೦ ಟನ್‌ಗಳ ಅಕ್ಕಿಯು ಉತ್ಪತ್ತಿಯಾಗಿತ್ತು. ಹಿಂದೂಸ್ಥಾನದಲ್ಲಿ ಇಷ್ಟು ಅಕ್ಕಿಯ ಉತ್ಪತ್ತಿಯು ಹಿಂದೆ ಯಾವ ಕಾಲದಲ್ಲಿಯೂ ಆಗಿರಲಿಲ್ಲ.

ಇದೇ ಕಳದ ಫೆಬ್ರವರಿ ತಾ. ೨೪ರಲ್ಲು ಪೂನೆಯಲ್ಲಿ ಸಕಲ ಭಾರತೀಯ ಆಯುರ್ವೇದಿಕ್ ಕನ್ಫರೆನ್ಸ್ ಕೂಡಿ ಬಂದಿರುತ್ತದೆ. ಈ ಸಭೆಗೆ ಸುಮಾರು ೩೫೦ ಹಿಂದೀ ಪಂಡಿತರೂ ದೇಶದ ಆಯಾ ಭಾಗಗಳಿಂದ ಹಲವು ಮಂದಿ ಡಾಕ್ತರರೂ ಬಂದಿದ್ದರು. ಆಯುರ್ವೇದಾನುಸಾರವಾಗಿ ವೈದ್ಯಪ್ರಯೋಗಮಾಡಿ ಖ್ಯಾತಿ ಪಡೆದಿರುವ ವಿರೂಪಾಕ್ಷ ಮಠದ ಶ್ರೀ ಶಂಕರಾಚಾರ್ಯ ಸ್ವಾಮಿಗಳವರೂ ಈ ಸಭೆಗೆ ಬಂದಿದ್ದರು. ಆಯುರ್ವೇದ ಪ್ರದರ್ಶನವೂ ಒಂದು ಕಡೆಯಲ್ಲಿ ಏರ್ಪಡಿಸೋಣಾಗಿತ್ತು. ಪಂಡಿತ ಗೋಪಾಲಾಚಾರ್ಯರವರು ಈ ಪ್ರದರ್ಶನದಲ್ಲಿ ಇಟ್ಟಂಥಾ ಔಷಧಗಳ ಪ್ರಯೋಗವನ್ನು ಸಭೆಯಲ್ಲಿ ವಿವರಿಸಿ, ಹಿಂದೀ ವೈದ್ಯ ಪದ್ಧತಿಯ ಮಹತ್ವವನ್ನು ತೋರಿಸಿಕೊಟ್ಟು ಈ ಪದ್ಧತಿಯನ್ನು ಊರ್ಜಿತ ಮಾಡುವರೆ ಹಿಂದೀ ದೇಶಿ ರಾಜರುಗಳು ಈ ಕಡೆಗೆ ಸಹಾನುಭೂತಿಯುಳ್ಳವರಾಗಬೇಕೆಂದು ವಿಜ್ಞಾಪಿಸಿಕೊಂಡರು. ಈ ಸಭೆಯ ಅಧ್ಯಕ್ಷರಾಗಿದ್ದ ಕೊಚ್ಚಿಯ ಮಹಾರಾಜರಾದ ಶ್ರೀ ರಾಮವರ್ಮ ಜಿ. ಸಿ. ಎಸ್. ಐ. ಸಿ. ಐ. ಇವರು ಸಂಸ್ಕೃತ ಭಾಷೆಯಲ್ಲಿ ಬರೆದ ತನ್ನ ಭಾಷಣವನ್ನು ಓದಿ ಹೇಳಿದರು. ಅಧ್ಯಕ್ಷರು ಪ್ರಾಚೀನ ವೈದ್ಯ ಪದ್ಧತಿಯ ಈಗಿನ ನಿಕೃಷ್ಟ ಸ್ಥಿತಿಯನ್ನು ತನ್ನ ಭಾಷಣದಲ್ಲಿ ವಿವರಿಸಿ ಅದನ್ನು ಉದ್ಧರಿಸುವ ಕೆಲವು ಉಪಾಯಗಳನ್ನು ತೋರಿಸಿಕೊಟ್ಟರು. ೧. ದೇಶಿ ಭಾಷೆಗಳಲ್ಲಿ ಯಾ ಸಂಸ್ಕೃತದಲ್ಲಿ ಬರೆದ ವೈದ್ಯ ವಿದ್ಯೆಯ ಪುಸ್ತಕಗಳ ಶೋಧನೆಯನ್ನು ಒಂದೇ ಕಡೆಯಲ್ಲಿ ಕೇಂದ್ರೀಕರಿಸಬೇಕು. ೨. ಇಂಥಾ ಪುಸ್ತಕಗಳ ಅಭಿಪ್ರಾಯಗಳು ಒಂದಕ್ಕೊಂದು ಸರಿಬೀಳದಿದ್ದರೆ ವಿದ್ವಾನ್ ವೈದ್ಯರಿಂದ ಈ ಅಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಬೇಕು. ೩. ಹಿಂದೀ ಮತ್ತು ಪಾಶ್ಚಿಮಾತ್ಯ ವೈದ್ಯವನ್ನು ಒಂದಕ್ಕೊಂದು ಸರಿಹೋಲಿಸಿ ಸರಿ ತೋಧಿಸಿಕೊಳ್ಳುವಂಥಾ ಶಿಕ್ಷಣವು ದೊರಕುವಂತೆ ಉತ್ತೇಜನ ಕೊಡಬೇಕು. ೪. ಆಯುರ್ವೇದ ಶಿಕ್ಷಣವು ದೊರೆಯುವಂಥಾ ಒಂದು ಶಾಲೆಯನ್ನು ಎಲ್ಲರಿಗೂ ಅನುಕೂಲವಾಗುವ ಸ್ಥಳದಲ್ಲಿ ತೆರೆಯಬೇಕು. ಈ ಶಾಲೆಗೆ ಒಂದು ಪುಸ್ತಕ ಭಂಡಾರವಿರಬೇಕು. ಎಂಬಿಕ್ಯಾದಿ ಸೂಚನೆಗಳಿಂದ ಅಧ್ಯಕ್ಷರು ತನ್ನ ಭಾಷಣವನ್ನು ಮುಗಿಸಿರುವರು.

ದಕ್ಷಿಣ ಹಿಂದೂಸ್ಥಾನ.

ಮೈಸೂರು ಸರಕಾರದವರು ಗ್ರಾಮಾಂತರಗಳಲ್ಲಿರುವ ಜನರಿಗೆ ವೈದ್ಯ ಸಹಾಯವು ಚೆನ್ನಾಗಿ ದೊರೆಯಬೇಕೆಂಬ ಉದ್ದೇಶದಿಂದ ಒಂದು ಹೊಸ ಹುಕುಮನ್ನು ಮಾಡಿರುವರು. ಔಷಧ ಪೆಟ್ಟಿಗೆಯನ್ನು ತೆಗೆದುಕೊಂಡು ಸರಕಾರಿ ಕೆಲಸದ ಮೇಲೆ ಸಂಚಾರ ಮಾಡುವ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರುಗಳು, ಸಾಧ್ಯವಾದ ಮಟ್ಟಿಗೂ ಹಳ್ಳಿಗಳ ಮಾರ್ಗವಾಗಿಯೇ ಹೋಗಿ, ಜನಗಳಿಗೆ ವೈದ್ಯ ಸಹಾಯವು ಬೇಕಾಗಿರುವ ಕಡೆ ತಕ್ಕ ಔಷಧಗಳನ್ನು ಕೊಟ್ಟು ಸಹಾಯ್ಯ ಮಾಡಬಹುದು. ಅಂತಹ ಸಂದರ್ಭಗಳಲ್ಲೆಲ್ಲಾ ಗ್ರಾಮದ ಪಟೇಲರಿಗೆ ಮುಂಚಿತವಾಗಿಯೇ ತಿಳಿಸಿ ಗ್ರಾಮಸ್ಥರಿಗೆ ಸಮಾಚಾರ ಕೊಡಿಸಬೇಕು. ಸೀನಿಯರ್ ಸರ್ಜನರು ಈ ವಿಚಾರದಲ್ಲಿ ಡಿ. ಮೆಡಿಕಲ್ ಮತ್ತು ಸೆನಿಟರಿ ಆಫೀಸರುಗಳಿಗೆ ಬೇಕಾದ ವಿಷಯವನ್ನು ತಿಳಿಸಿ ಔಷಧ ಪೆಟ್ಟಿಗೆಗಳು ಇಲ್ಲದವರಿಗೆ ತರಿಸಿಕೊಡಬೇಕೆಂದು ಈ ಹುಕುಮಿನಲ್ಲಿ ಸೂಚಿಸೋಣಾಗಿದೆ.

ಮೈಸೂರು ಸೆಕ್ರೆಟರಿಯಟ್ಟಿನಲ್ಲಿ ತಕ್ಕ ಏರ್ಪಾಡುಗಳು ಇಲ್ಲದೇ ಇದ್ದದರಿಂದಲೂ ನಿಡುಬ ಹಾಕುವದಕ್ಕೂ ಜನರ ಮುಂದಾಗಳ ಲೆಕ್ಕವನ್ನು ಕಡ್ಡಾಯವಾಗಿ ಬರಿಸುವದಕ್ಕೂ ತಕ್ಕ ಏರ್ಪಾಡುಗಳು ಇಲ್ಲದೆ ಇದ್ದುದರಿಂದಲೂ ಸರಕಾರದವರು ಈ ಇಲಾಖೆಯನ್ನು ಪರೀಕ್ಷಿಸಿ ಒಬ್ಬ ಸೆನಿಟರಿ ಕಮಿಷನರನ್ನು ಈ ಕೆಲಸಕ್ಕಾಗಿಯೇ ನೇಮಕ ಮಾಡಿರುತ್ತಾರೆ. ಇವರ ಸಂಬಳ ರೂ. ೧೦೦೦. ಇವರು ಸೀನಿಯರ್ ಸರ್ಜನರ ಅಧೀನದಲ್ಲಿರಬೇಕಾಗಿಲ್ಲ. ಇವರಿಗೆ ಇಬ್ಬರು ಅಸಿಸ್ಟೆಂಟರನ್ನು ಕೊಡುವರು.

ಮೈಸೂರ ದಿವಾನರವರು ಮೈಸೂರು ಬಟ್ಲರ್ ಪೈಲ್ಟ್ ಪ್ಲಾನು ಕರೆಯುವ ಸಂಬಂಧ ತಕ್ಕ ರಕಗಳ ಇತ್ಯರ್ಥ ಮಾಡುವರೆ ಡಿಲ್ಲಿಗೆ ಹೋಗಿರುತ್ತಾರೆ. ಈ ಸಂಬಂಧ ಮೈಸೂರಲ್ಲಿ ವಿಧವಿಧದ ವರ್ತಮಾನಗಳು ಹಬ್ಬಿವೆ. ಕೆಲವರು, ದಿವಾನರವರು ಬಟ್ಲರವನ್ನು ಪೂರಾ ೩ ಕೋಟಿ ರೂಪಾಯಿಗೂ ಅಲ್ಲಿಂದ ಮೈಸೂರು ಸರಹದ್ದಿಗೆ ಹೋಗುವ ಸ್ಥಳದ ಸಣ್ಣ ತುಂಡನ್ನು ಒಂದು ಕೋಟಿ ರೂಪಾಯಿಗೂ ಕೊಂಡುಕೊಳ್ಳುವರೆಂಬದಾಗಿಯೂ ಹೇಳುತ್ತಿರುವರು. ಈ ಪ್ಲಾನನ್ನು ಕರೆಯುವದಾದರೆ ೩೦ಗಿ ಒಂದು ಕೋಟಿ ರೂಪಾಯಿಗಳ ವೆಚ್ಚವು ತಗಲಬಹುದು. ಹೀಗೆ ಮೈಸೂರು ಸರಕಾರದವರು ೪ ಕೋಟಿ ರೂಪಾಯಿಗಳನ್ನು ಈ ಬಗ್ಗೆ ವೆಚ್ಚಮಾಡಲಿದ್ದಾರೆಂತ ಒಂದು ವಾರ್ತೆಯು ಎದ್ದಿದೆ. ಮೈಸೂರು ಸರಕಾರದವರ ಆಮಂತ್ರಣದಿಂದ ಈ ಪ್ಲಾನಿನ ಪರಿಶೋಧನೆ ನಡಿಸಿದ ಮದ್ರಾಸಿನ ಸರ್ ಫ್ರಾನ್ಸಿಸ್ ಸ್ಪಿಂಗ್‌ರವರು ಈ ಬಟ್ಲರ ಪ್ಲಾನ್ ಕರೆಯುವ ಆಲೋಚನೆಯನ್ನು ಖಂಡಿಸಿ, ಇದರ [illegible] ಸರಕಾರದವರು ಇಷ್ಟು ದ್ರವ್ಯವನ್ನು ಈ ಬಗ್ಗೆ ಉಪಯೋಗಿಸರು ಎಂತ ಮತ್ತೊಂದು ಸುದ್ದಿ ಇದೆ.

ನೋಟೀಸು.

ಪದವು ಗ್ರಾಮದಲ್ಲಿರುವ ಸುಬ್ರಾಯ ಶ್ಯಾನಭಾಗರ ಮಗ ಮಾಧವ ಶ್ಯಾನಭಾಗನು ಎಲ್ಲ ಜನರಿಗೆ ತಿಳಿಯಪಡಿಸುವದ್ದೇನೆಂದರೆ:— ಇದೇ ಇಸವಿ ಜನವರಿ ತಾ. ೩ರಲ್ಲು ನಾನು ಮುಂಡುಕೂರು ಲಕ್ಷ್ಮಣ ಕುಡುವರಿಗೆ ರೂ. ೭೦೦ರ ಡಿಮಾಂಡ ಪ್ರೊಮಿಶರಿ ನೋಟು ನನ್ನಿಂದ ಮೋಸದಿಂದ ಪಡಕೊಂಡು ಅದರ ಹಣ ರಿಜಿಸ್ತ್ರಾರರ ಮುಂದೆ ಕೊಟ್ಟ ಹಾಗೆ ಮಾಡಿ ಸದರಿ ಕುಡುವ ವ ಅವರ ಮದ್ದತ್‌ಗಾರ ಅಮ್ಮೆಂಬಳ ಕೊಗ್ಗಣ್ಣ ಯಾನೆ ಅನಂತ ಕಮ್ತಿ ಸಹ ಕೂಡಲೆ ಹಣ ಮೋಸದಿಂದ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ನೋಟು ಪೂರ್ಣ ಅಸಿಂಧುವಾಗಿರುತ್ತದೆ. ಅದನ್ನು ಯಾರಾದರೂ ಸದರಿ ಕುಡುನಿಂದ ಖರೀದಿ ತೆಗೆದುಕೊಳ್ಳ ಕೂಡದಾಗಿ ಮುಂದಾಗಿ ಎಚ್ಚರಿಸಿದ್ದೇನೆ.

ತಾ. 26ನೇ ಫೆಬ್ರವರಿ 1917. ಪದವು ಮಾಧವ ಶ್ಯಾನಭಾಗ.

"ರಿಂಗ್ಸ್" ವಿಧಾನದ ವ್ಯಾಪಾರ ಪದ್ಧತಿಯು ಮುಂಬಾಯಲ್ಲಿರುವದರಿಂದ ಅಲ್ಲಿ ದವಸಧಾನ್ಯಗಳ ಬೆಲೆಯು ಬಹಳವಾಗಿ ಏರಿದೆಂದು ಕಳದ ಸಂಚಿಕೆಯಲ್ಲಿ ತಿಳಿಸಿದ್ದೆವು. ಆದರೆ ಈ ಪದ್ಧತಿಯು ಮುಂಬಾಯಿಯಲ್ಲಿ ಮಾತ್ರವಲ್ಲ, ಬರ್ಮಾದಲ್ಲಿಯೂ ಪ್ರಚಾರವಾಗಿರುವದರಿಂದ ಅಲ್ಲಿ ಅಕ್ಕಿ ಭತ್ತಗಳಿಗೆ ಸರಕಾರದವರು ನಿಯಮಿತ ಬೆಲೆಯನ್ನು ಇಡಿಸಬೇಕೆಂಬದಾಗಿ ಅಲ್ಲಿಯ ವರ್ತಮಾನಪತ್ರಿಕೆಗಳು ಹೇಳ ಹತ್ತಿವೆ. ಯೂರೋಪದೇಶಗಳಿಗೆ ಅಕ್ಕಿ ಭತ್ತಗಳನ್ನು ಸಾಗಿಸಿ ಹೆಚ್ಚಿನ ಲಾಭವನ್ನು ದೊರಕಿಸಿಕೊಳ್ಳಬಹುದೆಂಬ ಆಶೆಯಿಂದ ಕೆಲವು ದಲಾಳಿಗಳು ವ ಯೂರೋಪಿಯಾನ ಕಾರ್ಖಾನೆ ಮಾಲಿಕರು ಬೇಸಾಯಗಾರರಿಗೆ ಮುಂಗಡ ಹಣಕೊಟ್ಟು ಮೊದಲೇ ಎಲ್ಲಾ ಅಕ್ಕಿ ಭತ್ತಗಳನ್ನು ಕಂಟ್ರಾಕ್ಟಿಗೆ ಪಡಕೊಂಡು ತಮ್ಮ ಸ್ವಾಧೀನಮಾಡಿಕೊಳ್ಳುವರು. ಫೆಬ್ರವರಿ ತಿಂಗಳ ಮಧ್ಯಕಾಲದೊಳಗೆ ಬರ್ಮಾದಲ್ಲಿಯ ಎಲ್ಲಾ ಭತ್ತವು ಇಂಥಾ ದಲಾಳಿಗಳ ಕೈಸೇರುತ್ತವೆ. ಅನಂತರ ಅವರು ಹೇಳಿದ ಕ್ರಯಕೊಟ್ಟು ಕೊಂಡುಕೊಳ್ಳಬೇಕಾದ್ದರಿಂದ ಅಲ್ಲಿ ಭತ್ತಕ್ಕೆ ವಿಶೇಷ ಕ್ರಯ ಏರಿರುವದು ಎಂತ ಬರ್ಮಾದೇಶದ ಪತ್ರಿಕೆಗಳಿಂದ ತಿಳಿದುಬರುತ್ತದೆ.

ಸೀಲೋನ್ ದ್ವೀಪದ ತೋಟಗಳಲ್ಲಿ ಮಕ್ಕಳ ಮರಣ ಸಂಖ್ಯೆಯು ವಿಶೇಷವಾಗಿರುವದು. ಅಲ್ಲಿ ಸಾವಿರಕ್ಕೆ ಕಡಿಮೆಯೆಂದರೆ, ೧೮೩ರಿಂದ ೪೫೯ ಮಂದಿ ಮಕ್ಕಳಂತೆ ಸಾಯುತ್ತಾರೆ. ಸರಾಸರಿ ಮಕ್ಕಳ ಮರಣ ಸಂಖ್ಯೆ ೧೦೦೦ಕ್ಕೆ ೨೫೬. ವಸಾಹತದಲ್ಲಿಯ ಮಕ್ಕಳ ಮರಣ ಸಂಖ್ಯೆ ಸರಾಸರಿ ೧೦೦೦ಕ್ಕೆ ೧೯೪. ಆದರೆ ಪಟ್ಟಣದ ವಿಶೇಷ ಜನಸಂಖ್ಯೆ ವಾಯುಸಂಚಾರಕ್ಕೆ ಎಡೆ ಇಲ್ಲದಿರುವದು ಮೊದಲಾದ ಕಾರಣಗಳು ಪಟ್ಟಣದಲ್ಲಿ ಮರಣ ಸಂಖ್ಯೆಯು ಹೆಚ್ಚುದುದಕ್ಕೆ ಕಾರಣವಾಗಿರಬಹುದು. ಆದರೆ ತೋಟಗಳಲ್ಲಿ ಈ ಕಾರಣಗಳಿರವು. ತೋಟಗಳ ಅನಾರೋಗ್ಯ ಸ್ಥಿತಿ ಮತ್ತು ಆರಿಣ ವಿಧಾನದ ಕೆಲಸಗಳೇ ತೋಟಗಳಲ್ಲಿ ಮಕ್ಕಳ ಮರಣ ಸಂಖ್ಯೆಯು ಸೇಕಡಾ ೩೦ರಂತೆ ಇರಲಿಕ್ಕೆ ಕಾರಣವಾಗಿದೆ.

ಬಿಬ್ಲಿಲ್ಯಾನಿನ "ಪೂರ್ಟ್ ಸ್ವರ್" ಹಡಗವು ಮುಳುಗಿ ಹೋದ ವಾರ್ತೆಯಿಂದ ಮದ್ರಾಸ್ ಪಟ್ಟಣದಲ್ಲಿ ಗಾಬರಿಗೆ ಆಸ್ಪದ ಕೊಡುವಂಥಾ ಅಲ್ಲಸಲ್ಲದ ವರ್ತಮಾನಗಳು ಹಬ್ಬಿಕೊಂಡವೆ ಎಂಬದು ಸರಕಾರದ ತಿಳುವಳಿಕೆಗೆ ಬಂದದ್ದರಿಂದ ಮದ್ರಾಸ್ ಸರಕಾರದವರು ಈ ಪೂರ್ಟ್ ಸ್ವರ್ ಹಡಗವು ಹಡಗದೊಳಗೆನೇ ಉಂಟಾದ ಸಿಡಿತದಿಂದ ಮುಳುಗಿ ಹೋಗಿದೆಂತಲೂ ಸರಕಾರದವರ ತಿಳುವಳಿಕೆ ಮಟ್ಟಿಗೆ ಬಂಗಾಳ ಆಖಾತದಲ್ಲಿ ಶತ್ರುಗಳ ಹಡಗವು ಇದೆ ಎಂತ ಭಾವಿಸಲು ಯಾವ ಕಾರಣವಿಲ್ಲವೆಂತಲೂ ಸೇನಾಸನ್ನಾಹಗಳನ್ನು ಪೂರಾ ಮುಂಜಾಗರೂಕತೆಯ ದೃಷ್ಟಿಯಿಂದ ಮಾಡಿರುವದರಿಂದ ಜನರು ಯಾವ ತರದ ಗಾಬರಿಪಡುವ ಅವಶ್ಯವಿಲ್ಲವೆಂತಲೂ ಪ್ರಕಟಿಸಿರುತ್ತಾರೆ.

"ನ್ಯೂ ಇಂಡಿಯಾ" ಪತ್ರಿಕೆಯಿಂದ ಸರಕಾರದವರು ತಕ್ಕೊಂಡ ಭದ್ರತೆಯ ಹಣವನ್ನು ಸರಕಾರಕ್ಕೆ ಸೇರಿಸಿಕೊಂಡದ್ದರಿಂದ ಮಿಸೆಸ್ ಅನ್ನಿಬಿಸೆಂಟರು ಮದ್ರಾಸ್ ಹೈಕೋರ್ಟಿನಲ್ಲಿ ಮಾಡಿಕೊಂಡ ದಾವೆಯ ತೀರ್ಮಾನದ ಮೇಲೆ ಪ್ರಿವಿಕೌನ್ಸಿಲಿಗೆ ಅಪೀಲು ಮಾಡಲು ಹುಕುಂ ಕೊಡಬೇಕಾಗಿ ಮಿಸೆಸ್ ಅನ್ನಿಬಿಸೆಂಟರು ಮದ್ರಾಸ್ ಹೈಕೋರ್ಟಿನವರನ್ನು ಕೇಳಿಕೊಂಡಿರುತ್ತಾರೆ. ಈ ಸಂಬಂಧ ಹೈಕೋರ್ಟಿನವರು ಮದ್ರಾಸ್ ಸರಕಾರಕ್ಕೆ ನೋಟೀಸು ಕೊಟ್ಟನಂತರ ಮಿಸೆಸ್ ಅನ್ನಿಬಿಸೆಂಟರ ಈ ಮನವಿಯ ಇತ್ಯರ್ಥವಾಗುವದು.

ಮದ್ರಾಸ್ ಗವರ್ನರ ಪ್ರಭುಗಳು ತಾ. ೨೪ರಲ್ಲು ವಿಜಯನಗರವನ್ನು ಸಂದರ್ಶಿಸಿ ವಾಲ್ಟಯರಿನಲ್ಲಿ ವಾಡವಾನಿನ ರಾಣಿ ಸಾಹೇಬರಿಗೆ ಕೈಸರ್-ಇ-ಹಿಂದ್ ಪದಕವನ್ನು ಕೊಡುವ ಸಮಾರಂಭವನ್ನು ನಡಿಸಿದರು. ಈ ಸಂದರ್ಭದಲ್ಲಿ ರಾಣಿಯವರು ಯುದ್ಧಫಂಡಿಗೆ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿರುವದಲ್ಲದೆ ತನ್ನ ಒಕ್ಕಲುಗಳ ಬಾಕಿಯಾದ ೨೦,೦೦೦ ರೂಪಾಯಿಗಳ ಕಂದಾಯವನ್ನು ಈ ಸಮಾರಂಭದ ಜ್ಞಾಪಕಾರ್ಥವಾಗಿ ಬಿಟ್ಟುಬಿಡುತ್ತೇನೆಂಬ ವಾಗ್ದಾನ ಮಾಡಿರುವರು. ಅಲ್ಲಿಂದ ಗವರ್ನರ ಪ್ರಭುಗಳು ಬೆಂಗಳೂರಿಗೆ ಚಿತ್ತೈಸಿರುವರು.

ಮದ್ರಾಸ್ ಸರಕಾರದ ಕಾರ್ಯನಿರ್ವಾಹಕ ಮೆಂಬರರಾಗಿದ್ದ ಸರ್. ಪಿ. ಎಸ್. ಶಿವಸ್ವಾಮಿ ಅಯ್ಯರ್ ಕೆ. ಸಿ. ಎಸ್. ಐ. ಸಿ. ಐ. ಇವರ ಕೆಲಸದ ಅವಧಿಯು ಇದೇ ಕಳದ ಫೆಬ್ರವರಿ ೨೮ಕ್ಕೆ ಮುಗಿದಿರುವದರಿಂದ ಈ ಹುದ್ದೆಗೆ ಮಾನ್ಯ ದಿವಾನ್ ಬಹದ್ದೂರ್ ಪಿ. ರಾಜಗೋಪಾಲ ಆಚಾರ್ಯರು ನೇಮಿಸಲ್ಪಟ್ಟಿರುತ್ತಾರೆ.

ಜಿನಸು ಧಾರಣೆ.

(ರಖಂ)

ಮಸ್ಸಿಕಿ ಅಕ್ಕಿ ಹೊಸ್ತು	5— 6—0	ರಿಂದ	6—13—0
ಗುಡ್ಡು ,, ,, ...	5— 2—0	,,	5— 8—0
ಹೊಸ ರಾಶಿ ,, ...	4—12—0	,,	5— 1—0
ಅವ್ವಲ್ ಬೆಳ್ತಿಗೆ ,, ...	5—14—0	,,	6— 2—0
ಕುಡು ಬೆಳ್ತಿಗೆ ,, ...	5— 6—0	,,	8— 8—0
ರಂಗೂನು ಬೆಳ್ತಿಗೆ ಗೋಣಿಗಿರ . .	9—14—0	,,	9—12—0
ಗೋದಿ ಗೋಣಿ ಗಿರ . . .	11—12—0	,,	12— 8—0
ಹುರುಳಿ ಗೋಣಿ ಗಿರ	6— 8—0	,,	6— 9—0
ಕಡಲೆ ಗೋಣಿ ಗಿರ ಬೊಂಬ್ಲಿ . .	10— 0—0	,,	10— 8—0
ಕೊಗರಿ ಗೋಣಿ ಗಿರ			11— 0—0
ತೊಗರಿ ಬೇಳೆ ಗೋಣಿ ಗಿರ . .	12— 8—0	,,	15— 8—0
ಉದ್ದು ಗೋಣಿ ಗಿರ	10— 8—0	,,	11— 4—0
[illegible] ಖಂಡಿ ಗಿರ	27— 8—0	,,	35— 0—0
ಉಪ್ಪು ಗೋಣಿ ಗಿರ	5—0—0	,,	5— 2—0
ಕೊಬ್ರಿ ಖಂಡಿ ಗಿರ	85—0—0	,,	90— 0—0
ಕೊಬ್ರಿಹಿಂಡಿ ಖಂಡಿ ಗಿರ		,,	20— 8—0
ಎಳ್ಳಿಂಡಿ ಖಂಡಿ ಗಿರ ಬೊಂಬ್ಲಿ . .	27— 8—0	,,	35— 0—0
ಕೊಬ್ರಿ ಎಣ್ಣೆ ಮುಡಿ ಗಿರ . . .	6— 6—0	,,	7— 0—0
ಎಳ್ಳೆಣ್ಣೆ ಮುಡಿ ಗಿರ(ಕುಂಭಾಸನ) . .		,,	4— 8—0
ಹರಳು ಎಣ್ಣೆ ಕಟ್ಟಿಗೆ ಗಿರ . .	6—11—0	,,	7— 5—0
ಮೋರಿಸ್ ಸಕ್ಕರೆ ಮುಡಿ ಗಿರ . .		,,	5— 8—0
ಕಾಫಿ ಖಂಡಿ ಗಿರ . . .	185—0—0	,,	200—0—0
ಹೊಸಹೊಗೆಸೊಪ್ಪು ಖಂಡಿಗಿರ . .	78— 0—0	,,	85— 0—0
ಗೇರುಬೀಜ ಮುಡಿ ಗಿರ . .	2—0—0	,,	2— 4—0
[illegible] ಖಂಡಿ ಗಿರ . .		,,	75— 0—0
[illegible] ಮುಡಿ ಗಿರ . .	29— 0—0	,,	29— 8—0
[illegible] ಮುಡಿ ಗಿರ . .		,,	32— 0—0
[illegible] ಗಿರ . .		,,	24— 0—0
[illegible] ಮುಡಿ ಗಿರ . .		,,	5— 3—0
[illegible]			240—2—0

K. B. RELE & Cos.,—BOMBAY

Estd. 1888.		ಕೆ. ಬಿ. ರೇಳೆ/ಕಂಪೆನಿಕೃತ		ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಇಷ್ಟ ವಾಗುತ್ತವೆ. ೨೦—೨೫ ವರ್ಷಗಳ ಹಳತ, ಹ್ಯಾಮನೆ ಮಾಡಿ ಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ಇಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ)ಯಿಂದ ಮೈಮೇಲೆ ಉಬ್ಬುವ ಚಿಟ್ಟೆಗಳೂ, ಬಡುಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಾಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಎಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಉಚಿತವು!		ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಥೆ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರ, ಮೈಸೂರು.

ಇಕ್ಲಿಪ್ಸ ಟಿಕ್ಚರ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ

"ದೇವಾನುಮೋದಿತ ಔಷಧ"

ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ನೂತನದ ಅಪ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ.
ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ನಮ್ಮ

ಇಕ್ಲಿಪ್ಸ್ ಬಾಮ್

ಪ್ರಯೋಗಿಸಿ ನೋಡಿದವರೆಲ್ಲರಿಗೂ ಖಾತ್ರಿಯಾಗಿದೆ. ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಜೀಗು, ತಲೆಸಿಡಿತ, ತಲೆನೋವು, ಹುರುಕು, ತುರಿಕಜ್ಜಿ, ಮೂಲವ್ಯಾದಿ, ಬೆಂಕಿಯ ಬೊಕ್ಕೆ, ಮೊಡವೆ, ಜೇಣು, ಜಾದರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕಂಡಿಗೆ 1ಕ್ಕೆ 0—8—0. ವಿ.ಪಿ. ಬೇರೆ. 1 ಡಜನ್ ಕಂಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

☞ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಟಾನಿಕಲ್ ರೂ. 1-8-0; ಗಜಕರ್ಣದ ಮುಲಾಮು 8 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು,
ಮಂಗಳೂರು.

ಏಜಂಟರು:— ಬಿ. ನರಸಿಂಗರಾವ್,
ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ,
(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ದ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ

ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನಮ್ಮಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ [illegible] ಸ್ವಲ್ಪವೇ ಇರುವದರಿಂದ ಬೇಗ [illegible] ಬೆಲೆ [illegible] ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,		[illegible]
Avenue Road,		[illegible]
BANGALORE CITY.		[illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಸೌಖ್ಯವನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಣ್ಣದ ಭಾವಚಿತ್ರಗಳಿಂದ ಮನೋಹರವಾಗು ವರೆತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಅದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರೆಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥವುಗಳನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಹಾಯವನ್ನು ಕಾಯ ಬೇಕಾಗಿರುವುದು ತಪ್ಪುತ್ತದೆ.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಟೀಸಿ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 200 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಫಿಜಿಸ್ಟ್, ಎಗಿಯುರಿವೇಸ್ ನಂ. 2, ಟೊಂಟ್ಸಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆ ಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲೈಫ್ ಎಸ್ಯೂರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಭಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಪ್ರೇಮ್‌ರೋಜ್ ಆರ್ ಜೋಶಿ ರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಏಕ್ಚುವೆರಿ:—ಮೆ। ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿ ಮಾಡಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ಕ್ಷಣ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೇಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೇಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

॥ ಚೌಪದಿ ॥

ಪಲಬುಗ್ಗೆಯಿಂದೊಸರಿ ಕಾಲುವೆಗಳಾಗಿ ।
ಸಲಿಹರಿಯುತೊಂದಾಗಿ ನದಿಯಾಗಿ ಸಾಗಿ ॥
ಕಡಲಕಡೆಗುಕ್ಕಿ ಸೂಸುವ ನೀರಜೊನಲು ।
ಮಡಗುವೊಲು ದಂಡೆಯಲಿ ಬಂಗಾರಮುಗಿಲು ॥ ೧ ॥

ಪಲದಾಣದಿಂದ ಪಲಬಗೆಯೊಡವೆಗಳನು ।
ನೆಲಿಯಿಸುತ್ತೊದಗಿಸುವೆಪೋರ್ಟದನಯನು ॥
ಬರಿಸ ಪರಿಶೀಲಿಸುವುದೆಮ್ಮ ಮೊಗೆಯನು ।
ಮರುಗಲಾರಿರಿ ಇಲ್ಲಿಸಂದ ಗಳಿಗೆಯನು ॥ ೨ ॥

ಕಿರಿದು ಲಾಭಂ ಗೀರುವೆವು ಪಿರಿದು ಹೇಮಂ ।
ನೆರೆಗಿ ರಾಶಿಯಾರ ತಣಿಸುವುದೆಮ್ಮನೇಮಂ ॥
ಒಂದು ಸಲ ಕಂಡವರು ನಮ್ಮಂಗಡಿಯನು ।
ಮುಂದಡಿಯನಿಕ್ಕರೈದಲು ಬೇರೆಡೆಯನು ॥ ೩ ॥

ಕಂಡಿರೇ ಮೊನ್ನೆಕಾಣೇ ಬಂದ ಸಿರಿಯಂ ।
ಕೊಂಡುಕೊಳ್ಳಿರಿ ನೋಡಿ ಬೇಕಾದ ಪರಿಯಂ ॥
ನವವರ್ಷವುದಿಸಿತೆಲ್ಲರ ನಿಮ್ಮನಾತಂ ।
ಭವಸಂಕಟದೊಡೆಯ ರಕ್ಷಿಸುಗೆ ರಘುನಾಥಂ ॥ ೪ ॥

ದಿ ಉಲನ್ ಮಾರ್ಟ್,

ಮಂಗಳೂರು, ದ. ಕ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು. ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟು, ಸ್ವತ್ತುಗಳ ಪರಭಾರೆ ಆಕ್ಟು, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟು, ಸ್ಟಾಂಪು, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟು, ಹಿಂದೂ ಲಾ, ದೂರ್ಬೀನ್ ಆಕ್ಟು, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟು, ರೆವಿನ್ಯು ಕೋಡ್, ಶ್ಯಾನಭೋಗರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತಾವೇಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. [illegible] 1—12—0.

ಎಂ. ಯಸ್. ನಂಜಪ್ಪನವರು,

[illegible], ಮೈಸೂರು.

11 [illegible] 15 [illegible]

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ ೨.

ಡಮಿಯಾನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಸಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯವಶ್ಯಕಾರಿ, ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತೊಲಗುವಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳಿದಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ:**— ಪ್ರಸವವಾದ ಆಗಾಯಿತು 30 ದಿನಗಳವರೆಗೆ ಉಪಯೋಗಿಸುವದರಿಂದ ವಾತ, ಶೀತ, ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 0—0—0.

ಇಲ್ಲಿ ಅನೇಕತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಆಸ್ವಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳು ತೊನ್ನು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌಂಸಿಲರ್ ಮತ್ತು ರೆಪ್ರಸೆಂಟಿಟಿವ್ ಮೆಂಬರು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮುಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿ ಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬತ್ತೂರು, ಸೇಲಂ, ಮಧುರಾ, ಕೊಸ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಿಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅದ್ದಿಗೆ ಇನಾಮಾಗಿ ಕಳುಹುತ್ತೆ.
ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಣ್ಣಿನಲ್ಲಿ ಗೋವರ್ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಜಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರೆಗೂ ಯಾವಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾವಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಜಂಟಲ್‌ಮೆನ್ಸ್ ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರೆಗೆ ಸೀಮೆಯಿಂದ ತರಿಸಿರುತ್ತೇವೆ.



ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕೆಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ ರೂ. 3—12—0.
ಗಡಿಯಾರ 1ಕ್ಕೆ ಕ್ರಯ ರೂಪಾಯಿ 3—0—0.
ಪೇನಾ ,, ,, 1—0—0.

ವಿಳಾಸ:— ವೈರಂ ಅಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಕೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷ

ಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಜಂಟಲ್‌ಮೆನ್ ಫಿಕ್ಸೆಟ್ ಲೀವಾರ್ ವಾಚ್.
10 ಬಹುಮಾನಗಳ ಸಹಿತ ರೂ. 3-8-0 ಮಾತ್ರವೇ.
6 ವರುಷ ಖಾತ್ರಿಯಾದ ಗ್ಯಾರಂಟಿ ಸಹಾ.

ಈ ಗಡಿಯಾರವು ಒಳ್ಳೇ ಮಜಬೂತಾಗಿಯೂ ಚಿತ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ,

ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ಮತ್ತು ಗಂಟೆ ತೋರಿಸುವ ನಂಬರುಗಳ ಮೇಲೆ ಇಮಿಟೇಷನ್ ಕೆಂಪುಗಳು ಮಡಗಿ ಕಟ್ಟಿದ ಕಟ್ಟಿರುತ್ತೆ. 6 ರತ್ನಗಳು ಉಳ್ಳ ಓಪನ್ ಕೇಸ್ ಕಂಪನ್‌ಸೇಷನ್ ಬಹು ಬಲಿಷ್ಠವಾದ ಲೀವರ್ ಕೆಲಸದಲ್ಲೇ ತಯಾರಾಗಿ ಬಂದು ಇರುತ್ತೆ. ಇದನ್ನು ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ತರಿಸಿ ಪರೀಕ್ಷೆಮಾಡಿದರೆ ತಿಳಿಯುವದು. ಬಹುಮಾನ ವಿವರ—ಸರಪಳಿ 1, ಪೆಟ್ಟಿಗೆ 1, ಕಾರನೇಷನ್ ಕನ್ನಡಿ 1, ಇಂಗಿಷು ಬಾಚಣಿಗೆ 1, ಸೆಂಟ್ ಸೀಸೆ 1, ಸರಟು ಗುಂಡಿ ಸೆಟ್ 1, ಎಲೆಕ್ಟ್ರಿಕ್ ಭಂಗಾರದ ಕೈ ಉಂಗುರ 1, ಸ್ತ್ರೀಯರು ಧರಿಸಿಕೊಳ್ಳುವ ತಲೆ ಹೂವು 1, ಇಮಿಟೇಷನ್ ವಜ್ರದ ಬ್ರೋಚ್‌ಗಳು 2. ಜುಮ್ಲಾ 10 ಸೀ ವಾಚ್ ಕ್ರಯ ರೂ. 3—8—0 ಮಾತ್ರವೇ.

ವಿಳಾಸ:— ಎಚ್. ಗಣೇಶನ್ ಅಂಡ್ ಕೊ.
ನಂಬ್ರು 7, 2ನೆ ನಾರಾಯಣ ಬೀದಿ,
ಜೋರ್ಜ ಟೌನ್, ಮದರಾಸ.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.

ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು, ಒಡೆವುದು, [illegible], ಉರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಪ್ಪಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ಪತ್ರ ಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇತೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜೆಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:—ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ಕಳುಹಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಲ್ಲಿ ಬರೆಯತಕ್ಕದ್ದು.

ಇಂತಿ ಮಾಲಕರು:— Someshwar & Sons.
Fergusson Road, BOMBAY.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ. ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ¼ ಔನ್ಸ್ ಟ್ಯೂಬ್ 2—0—0. ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.
H. R. MODY & Co.,
10 Princes Street, BOMBAY

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಸ್. ಪಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ.
ಜಾರ್ಜ್‌ಟೌನ್ ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ವಿಶಿಷ್ಟವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಅರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇವಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್ಸ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.
ಏಜಂಟರು:—ಡಿ. ಊಲನ್ ಮಾರ್ಟ್,
ಮಾಗದ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವು. ಮಕ್ಕಳ ಆಟಿಗೆಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಪೆಟ್ಟಿಗೆ ೧ಕ್ಕೆ ೩-೦-೦. ದೊಡ್ಡ ಪೆಟ್ಟಿಗೆ ಉತ್ತಮತರದ್ದು ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದುಯಂ ರೂಪ್ಯಾ ೧ಕ್ಕೆ ೮ ತೊಲೆ, ತ್ರೀಯಂ ರೂಪ್ಯಾ ಒಂದಕ್ಕೆ ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ದೇಶಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು. ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಖಾಂಬಾ, ಕಾಶಿ.
SIROMANI NARAYANA CHARYA & CO,
Choukhambay,
BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಧಿವಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು. **S. P. RAJA & Co.,**
Kalyanakaraka Bishagmandir.
POST POLALY, S. C.
ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. [illegible]

ಚಂದಾನಿರ್ಣಯ:— ವರ್ಷ 1ಕ್ಕೆ ರೂ. 1—8—0

[illegible] 2—8—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೇ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೯ನೇ ಮಾರ್ಚಿ ಶುಕ್ರವಾರ ೧೯೧೭. | ಸಂಚಿಕೆ ೯.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital ...	200,000—0—0	ಆಗತ ಮೂಲ ಧನವು ,,	200,000—0—0
Deposits	336,227—9—4	ಠೇವಣಾತಿಯಾಗಿ ಕೊಡೋಣಾದ ಹೊಣೆಗಳು	336,227—9—4
Reserve Fund ...	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ ~~2½% per annum~~ at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅛%.

Loans granted on proper securities and pledges.

Canara Bank Ltd.,

Mangalore, 1st. December 1916.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಕ್ಕ ಮೌಲ್ಯಗಳಿಂದ ಶೇಖಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾ ಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರ ದ 2ರ ವರೆಗಿನ 'ಬೋನಸ್' ಎಂಬ ಲಾಭೋತ್ತೇಜಕವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡೆಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಬಹುದಾಗಿದೆ. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಟಿಫ್ ಕವರ್ ಬೈಂಡು 0—8—0
ಚಿಕ್ಕ ಸೈಜು ಕೆಲಿಕೊ ಬೈಂಡು 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ! ಬೇಗನೆ ಬರಕೊಳ್ಳಿರಿ !!

ತುಳು ಭಾಷೆಯಿಂದ ರಚಿಸಲ್ಪಟ್ಟ
ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.

1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ. ದ. ಕನ್ನಡ.

Foot Balls. (BEST QUALITY).

ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ !!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ದಾಮೋದರೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಶೋಭಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೊಡುವವರ ಸೌಕರ್ಯಕ್ಕೋಸ್ಕರ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ಕ್ಕೆ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ಕರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ, ಉಡುಪಿ.
ಪಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ-ಇಂಗ್ಲಿಷ್, ಇಂಗ್ಲಿಷ್-ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವುದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು.

ಈ ವಾರವೇ ತರಿಸಿಕೊಂಡರೆ ರೂ. 1—11—0 [illegible] ಮಾತ್ರ.

ವಿಳಾಸ:—ಹೆಚ್. ಎನ್. ರಾವ್ ಬ್ರದರ್ಸ್,
[illegible] ಬೆಂಗಳೂರು [illegible].

ಜಂಟಲ್‌ಮೆನ್ ಫಿಕ್ಸಿಟ್ ಲೀವಾರ್ ವಾಚ್.

10 ಬಹುಮಾನಗಳ ಸಹಿತ ರೂ. 3-8-0 ಮಾತ್ರವೇ.

6 ವರುಷ ಖಾತ್ರಿಯಾದ ಗ್ಯಾರಂಟಿ ಸಹಾ.

ಈ ಸಣ್ಣಯಾರವು ಒಳ್ಳೇ ಮಜಬೂತಾಗಿಯೂ ಚಿತ್ರಗಳಲ್ಲಿ ಕೆಂಪು ಕಲ್ಲುಳ್ಳ ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ಮತ್ತು ಗಂಟೆ ತೋರಿಸುವ ನಂಬರುಗಳ ಮೇಲೆ ಇಮಿಟೇಷನ್ ಕೆಂಪುಗಳು ಮಡಗಿ ಕಟ್ಟಿತ ಕಟ್ಟಿರುತ್ತೆ. 6 ರತ್ನಗಳು ಉಳ್ಳ ಓಪನ್ ಕೇಸ್ ಕಂಪನ್‌ಸೇಷನ್ ಬಹು ಬಲಿಷ್ಟವಾದ ಲೀವರ್ ಕೆಲಸದಲ್ಲಿ ತಯಾರಾಗಿ ಬಂದು ಇರುತ್ತೆ. ಇದನ್ನು ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ತರಿಸಿ ಪರೀಕ್ಷೆಮಾಡಿದರೆ ತಿಳಿಯುವದು. ಬಹುಮಾನ ವಿವರ — ಸರಪಣಿ 1, ಪೆಟ್ಟಿಗೆ 1, ಕಾರನೇಷನ್ ಕನ್ನಡಿ 1, ಇಂಗ್ಲಿಷು ಬಾಚಣಿಗೆ 1, ಸೆಂಟ್ ಸೀಸೆ 1, ಪರಟೂ-ಗುಂಡಿ ಸೆಟ್ 1, ಎಲೆಕ್ಟ್ರಿಕ್ ಭಂಗಾರದ ಕೈ ಉಂಗುರ 1, ಸ್ತ್ರೀಯರು ಧರಿಸಿಕೊಳ್ಳುವ ತಲೆ ಹೂವು 1, ಇಮಿಟೇಷನ್ ವಜ್ರದ ಬ್ರೋಚ್‌ಗಳು 2. ಒಟ್ಟು 10 ಸಂ. ವಾಚ್ ಕ್ರಯ ರೂ. 3 – 8 – 0 ಮಾತ್ರವೇ.



ವಿಳಾಸ: — ಎಚ್. ಗಣೇಶನ್ ಅಂಡ್ ಕೊ.

ನಂಬ್ರ 7, 2ನೆ ನಾರಾಯಣ ಬೀದಿ,

ಜೋರ್ಜ ಟೌನ್, ಮದರಾಸು.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಬಜ್ಜೆ, [illegible] ಗಾಯ, ತುರಿಕಜ್ಜಿ, ಕೈಕಾಲು ಬಾತ, [illegible], [illegible], ಶಿರೋಧಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಸೆಂಪಲ್ ೧ ಡಬ್ಬಿಗೆ ಖರ್ಚು ಟಪ್ಪಾಲು ಹಾಸಲು ಪ್ರತ್ಯೇಕ. ಸೇರಿ ಒಂಬಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಒಳ್ಳೆಯ ಕಮಿಷನ್ ದೊರಕಲಾರದೀತು. ಏಜಂಟರು ಬೇಕಾಗಿದ್ದಾರೆ.

ಇವೇ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು: —

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

[illegible] ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. [illegible] ಹಣವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಉಪಯೋಗಿಸಿ ಬರೆಯತಕ್ಕದ್ದು.

ಇಂತಿ ಮಾಲೀಕರು: — **Someshwar & Sons.**

Fergusson Road, BOMBAY.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟುಕು ಕೈವಸ್ತ್ರದಲ್ಲಿ ಹಾಗಿಸಿದ್ದರೆ ಆದರೆರ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0 – 4 – 0 ಬೇರೆ.

ಪ್ರಾಮುಖ್ಯ ಏಜಂಟರು: —

ಎಚ್. ಆರ್. ಮೋಡಿ ಎಂಡ್ ಕೋ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,

10 Princes Street, BOMBAY

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳಿಯ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಪಿ.

ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,

55 ಆಚಾರಪ್ಪನ ಬೀದಿ,

ಜಾರ್ಜಟೌನ್ ಮದರಾಸ್.

ತಂತೀ ವಿಳಾಸ: — "ಪಂಡಿಟ್" ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಛರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇವಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ: — ಟಿ. ಬಾಬುರಾವ್ ಎಂಡ್ ಸನ್,

ವೈದ್ಯರು, ಕರ್ರಿ, ಮಂಗಳೂರು.

ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲ ಚಾರ್ಜು 0—4—0.

Dr. Navaratna & Sons,

Kalbadevi Road, BOMBAY.

ಏಜಂಟರು: — ಡಿ. ಊಲನ್ ಮಾರ್ಟ್,

ಮೂರ್ತಿ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.



ಈ [illegible] ಒಳ್ಳೆ [illegible] ಕಂಚಿನಿಂದ ತಯಾರಾದ [illegible] ಮಕ್ಕಳು ಆಟಕ್ಕೆ ಉಪಯೋಗವಾಗುವಂಥಾ ೩೨ ಸಾಮಾನು [illegible] ಪೆಟ್ಟಿಗೆ ೧ಕ್ಕೆ ೧–೮–೦. ಮಧ್ಯಮ ತರದ ಪೆಟ್ಟಿ ೧ಕ್ಕೆ ೩-೦-೦. ದೊಡ್ಡ ಪೆಟ್ಟಿ ಉತ್ತಮತರದ ೧ಕ್ಕೆ ರೂ. ४—೦—೦.

ಕಾಬುಲಿ ಇಂಗು.

ಉತ್ತಮ ತರದ ರೂಪಾಯಿಗೆ ४ ತೊಲೆ, ದ್ವಿತೀಯಂ ರೂಪಾಯಿಗೆ ಆ ತೊಲೆ, ತೃತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚತುರ್ಥಂ ರೂಪಾಯಿಗೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ: —

ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ,

ಚೌಕಾಂಬಾ, ಕಾಶಿ.

SIROMANI NARAYANA CHARYA & CO,

Choukhambay,

BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು. **S. P. RAJA & Co.,**

Kalyanakaraka Bishagmandir,

POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ,

ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 496

ಚಂದಾನಿರ್ಣಯ:— ವರ್ಷ 1ಕ್ಕೆ ರೂ. 1—8—0

ಟಪ್ಪಾಲ್ ಹಾಸಲು ಸೇರಿ ರೂಪಾಯಿ 2—5—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೯ನೇ ಮಾರ್ಚಿ ಶುಕ್ರವಾರ ೧೯೧೭. | ಸಂಚಿಕೆ ೯.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

೧೯೦೬ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital	200,000—0—0	ಆಗತ ಮೂಲ ಧನವು ,,	200,000—0—0
Deposits	336,227—9—4	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	336,227—9—4
Reserve Fund	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮಾಲ್ಕರಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ. 29,300ರ ಭದ್ರತಾ ಪತ್ರಗಳಲ್ಲಿ ಠೇವಣಿ ಮಾಡಲ್ಪಟ್ಟಿರುವುದು

Dividends of not less than 6% paid during the past years and a bonus of 1% to 2% paid in addition during the last seven years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಂಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರ ದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳದ ದಾವು.

Short-notice Deposits requiring one weeks notice of withdrawal after one month received @ 4½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ವರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಲಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.,

Mangalore, 1st December 1916.

P. Gopal Naik,

Secretary.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಟಿಫ್ ಕವರ್ ಬೈಂಡು 0—8—0
ಚಿಕ್ಕ ಸೈಜು ಕೆಲಿಕೊ ಬೈಂಡು 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿವೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ
ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.

1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕನ್ನಡ.

Foot Balls. (BEST QUALITY).

ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS: ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ-ಇಂಗ್ಲಿಷ್, ಇಂಗ್ಲಿಷ್-ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು.

ಈ ದಾರವೇ ತರಿಸಿಕೊಂಡರೆ ರೂ. 1—11—0. [illegible]

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,

[illegible]

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಶಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿದ್ದರೂ ಕೂಡ ಜನರ ಸೌಕರ್ಯಕ್ಕೋಸ್ಕರ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ;—

ಸದಾನಂದ ಮುದ್ರಾಶಾಲೆ,
ಉಡುಪಿ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿತವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ, ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣಕೊಡುವದು. ಬಾಟಿಗೆ ೩-೮-೦.

೩. ಪಂಚಶೀರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಇತ್ಯಾದಿ ಖಂಡಿತವಾಗಿ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪ್ರಾಶಸ್ತ್ಯವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ವಿಲಕ್ಷಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತಿ ಮಂಜನಕ್ಕಿಂತ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವಿಲ್ಲದಂತೆ ಸುಮಾರಾದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಋತಾಜರಾಂಕುಶ ಮಾತ್ರೆ. ಚಳಿಜ್ವರ, ಪಂಸೆಯ, ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೩ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮರೋಗ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಳು ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿತವಾಗಿದೆ. ಡಬಿಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದ ಮುಂತಾದ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ಸ್ವರಕ್ಕೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿ ಬೇಕಾದರೆ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲೀಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:— ಬಿ. ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,* Vepery Post, MADARS.

ಹಲ್ಲು ನೋವುಗಳಿಗೆ ಖಾತ್ರಿಯಾದ ಔಷಧಿ.

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡಾಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನಕಟ್ಟೆ ಕೋಪ್ರಗಳಲ್ಲಿ ದೊರಕುವದು.	STANY BROTHERS Sole Agents M. C. C's, Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು,

ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co., *Mangalore.*

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು, ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ.

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ.

೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆವೆಚ್ಚ ಸೇರಿ ವರ್ಷಕ್ಕೆ ೩ ರೂ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—

ಅರ್ಥಸಾಧಕ ಪತ್ರಿಕಾ ಸಂಪಾದಕರು,

"ರಿಂಗ್‌ವುಡ್," ಬೆಂಗಳೂರು.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕಲ್ಲುಗಳಿವೆ ಗಿಲ್ಟು ಮಾಡಿದ ಪೇಟೆಂಟ್ ಮಾಡಿರುವದು. ಮತ್ತು ಘಳಿಗೆ, ಸೋಮಕಾಂತವಂತೆ ಹಿಂಭಾಗದಲ್ಲಿ ಗ್ಲಾಸ್ ಜೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಪೀನಪಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮಣಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಬಂಗಾರದ ಉಂಗುರ 1, ಜುಮುಕಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,

8. ಇರುಳಪ್ಪನ ಬೀದಿ, ಮದರಾಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಶೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು ೬ ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಅಣೆ ೮ ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಲಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರತಾಪ ,, ,,	0—12—0
ಅಂಜಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಾವಿಧಿ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಆಹ್ನಿಕ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ 18×28"ಕ್ಕೆ	0—1—0

ಯೂರೋಪದ ಮಹಾ ಯುದ್ಧ.

ಕಳೆದವಾರ ಯುದ್ಧಮಂಡಲದಲ್ಲಿ ಎರಡು ಮಹತ್ವದ ವಿಷಯಗಳು ನಡೆದಿರುವವು. ಈ ಪೈಕಿ ಒಂದು ಬ್ರಿಟಿಷ ಜನರಲ್ ಮೋಡೆಯವರಿಗೆ ಮೆಸಪೊಟಾಮಿಯದಲ್ಲಿ ಅಪಾರವಾದ ಕಷ್ಟವಿದ್ದರೂ ಅವರು ಈ ಕಳೆದ ೪ ತಿಂಗಳಲ್ಲಿ ಮಾಡಿದ ಸಾಧನೆಗಳಿಂದ ಶತ್ರುಗಳನ್ನು ಸೋಲಿಸಿ ಅವರನ್ನು ಬಗ್ದಾದ್ ಕಡೆಗೆ ಓಡಿಸಿದ್ದಾಗಿರುತ್ತದೆ. ಇಲ್ಲಿ ನಮ್ಮ ಸೇನಿಕರು ಕುಟಿಗೆ ಪೂರ್ವದಲ್ಲಿ ಟಿಗ್ರಿಸಿನ ದೀಡಾದಲ್ಲಿಷ್ಟ ಶತ್ರುಗಳನ್ನು ಓಡಿಸಿದನಂತರ ಬ್ರಿಟಿಷರು ಸಿನ್ನಾಯತ್ ನೆಲೆಗಳ ಮೇಲೆ ಹಲ್ಲೆಮಾಡಿದರು. ಆದರೆ ಇಲ್ಲಿ ಗೆದ್ದುಕೊಂಡ ನೆಲೆಗಳನ್ನು ಬಿಟ್ಟುಬಿಡಬೇಕಾಗಿ ಬಂದಿತು. ಇಲ್ಲಿ ಶತ್ರುಗಳ ಹೆಜ್ಜೆ ಮುರಿಯಬೇಕಾದರೆ ಶತ್ರುಗಳ ಹಿಂಭಾಗದಿಂದ ಸುತ್ತಲೂ ಹಲ್ಲೆಮಾಡುವ ಉಪಾಯವೇ ಒಳ್ಳೇದೆಂಬದು ಬ್ರಿಟಿಷರಿಗೆ ಖಾತ್ರಿಯಾಗಿ ಬ್ರಿಟಿಷರು ಶುಮ್ರಾನಿನ ಬಲದಡದಲ್ಲಿ ದಾಳಿಮಾಡಲು ಉಪಕ್ರಮಿಸಿದರು. ಅನಂತರ ನದಿಯನ್ನು ದಾಟಲು ಪ್ರಯತ್ನಿಸಿ ಇದರಲ್ಲಿಯೂ ಕಾರ್ಯಸಾಧಿಸಿಕೊಂಡರು. ಹೀಗೆ ತುರ್ಕರು ಕುಟೆಲ್ ಅಮಾರವನ್ನು ಬಿಟ್ಟು ಹಿಂದೆ ಸರಿಯುವ ಅವಶ್ಯಕತೆಯು ಬಿತ್ತು. ಸುಮಾರು ೫೦೦೦ಕ್ಕೆ ಮಿಕ್ಕಿದ ಶತ್ರುಸೇನಿಕರು ಇಲ್ಲಿ ಹಿಂದೆ ಸರಿಯುವಾಗ ಬ್ರಿಟಿಷರ ಸೆರೆ ಬಿದ್ದಿರುವರು. ಶತ್ರುಗಳ ಸೇನೆಯ ಮೂರನೇ ಒಂದಂಶವು ಇಲ್ಲಿ ಪ್ರಾಣಾಪಾಯ ಹೊಂದಿರಬಹುದು, ಹಾಗೂ ಅಪಾರ ಶತ್ರುಸೇನೆಯು ವಿಸ್ತೀರ್ಣವಾದ ರಣಾಂಗಣದಲ್ಲಿ ಚೆದರಿ ಹೋಗಿರುವದು, ಶತ್ರುಗಳು ಕುಟೆಲ್ ಅಮಾರವನ್ನು ಪೂರಾ ಬಿಟ್ಟುಹೋಗುವದರೊಳಗೆ ಹಿಂದೆ ಜನರಲ್ ಟೌನ್ಸೆಂಡರನ್ನು ಅಪಜಯಪಡಿಸಿದ ತುರ್ಕರ ಸೇನೆಯ ಒಂದಂಶವಾದರೂ ಬಗ್ದಾದಿಗೆ ಸೇರುತ್ತದೋ ಏನೋ ಎಂಬ ಅನುಮಾನವಿದೆ. ಶತ್ರುಗಳಿಗೆ ಇಲ್ಲಿ ಆದ ಅಪಜಯದಿಂದ ಬ್ರಿಟಿಷರಿಗೆ ಬಗ್ದಾದಿನ ಮೇಲೆ ಮುಂದರಿಯಲು ಮಾರ್ಗತೆರೆದಂತಾಯಿತು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಈ ಜಯವು ಮಹತ್ವದ್ದಾಗಿದೆ ಎಂದು ಹೇಳಲು ಸಂದೇಹವಿಲ್ಲ. ಈ ರಣಾಂಗಣವನ್ನು ಬಿಟ್ಟು ಪಶ್ಚಿಮ ರಣಾಂಗಣದ ಕಡೆಗೆ ದೃಷ್ಟಿಸುವದಾದರೆ ಈ ರಣಾಂಗಣದಲ್ಲಿಯೂ ಬ್ರಿಟಿಷರಿಗೆ ಕಳೆದವಾರ ಕೆಲವು ವಿಶೇಷ ಜಯಗಳಾಗಿರುವವು. ಈ ರಣಾಂಗಣದಲ್ಲಿ ಜರ್ಮನರು ಛಳಿ ಕಾಲದಲ್ಲಿ ಬಲಕಾಯಿಸಿಕೊಂಡಿದ್ದ ಕೆಲವು ನೆಲೆಗಳನ್ನು ಬಿಟ್ಟು ಹಿಂದೆ ಸರಿದಿರುವರು. ಸುಮಾರು ೧೩ ಮೈಲು ರಣಾಂಗಣದ ವಿಸ್ತೀರ್ಣದಲ್ಲಿ ೨-೪ ಮೈಲು ಹಿಂದೆ ಸರಿದಿರುತ್ತಾರೆ. ಅದಲ್ಲದೆ ಗುಮ್ಮೆಕೋರ್ಟು ಸೆರ್ರೆ ಮತ್ತು ಪುಸಾಕ್ಸ ಎಂಬಲ್ಲಿಂದ ಬಲವತ್ತಾದ ಕೋಟೆಕೊತ್ತಲುಗಳನ್ನೂ ಹಲವು ಗ್ರಾಮಗಳನ್ನೂ ಬಿಟ್ಟು ಹೋಗಿರುತ್ತಾರೆ. ಬ್ರಿಟಿಷರ ಗ್ಯಾಸ್ ಶೆಲ್ಲುಗಳ ತೀಕ್ಷ್ಣತೆಯೇ ಜರ್ಮನರು ಹೀಗೆ ಹಿಂದೆ ಸರಿಯಲು ಕಾರಣವೆಂತ ತಿಳಿದುಬಂದದೆ.

ಪಶ್ಚಿಮ ರಣಾಂಗ.

ಜರ್ಮನರು ಗುಮ್ಮೆಕೋರ್ಟು ಮತ್ತು ಟ್ರಾನ್ಸ್‌ಲೋಯಿ ಮಧ್ಯೆ ಇರುವ ಸ್ಥಾನಗಳನ್ನೆಲ್ಲಾ ಬಿಟ್ಟು ಹೋಗುತ್ತಿದ್ದಾರೆ. ಬ್ರಿಟಿಷರು ಎಲ್ಲೆಲ್ಲಿಯೂ ಶತ್ರುಗಳಿಗೆ ಸಮೀಪವಾಗಿದ್ದು ಯುದ್ಧಮಾಡುತ್ತಿದ್ದಾರೆ. ಜರ್ಮನರು ಬಹುಶಃ ಅರ್‍ರಾಸ್ ಕೆಂಬ್ರಾಯ ಲೈನಿಗೆ ಸರಿಯುತ್ತಿದ್ದಾರೆ. ಬ್ರಿಟಿಷರು ಬಿಬಾಕ್ಕರ್ ಎಂಬ ಸ್ಥಳವನ್ನು ಹಿಡಿದು ಲಿಗ್ನಿ ಎಂಬ ಸ್ಥಳವನ್ನು ಸೇರಿರುತ್ತಾರೆ. ಬ್ರಿಟಿಷರು ಗುಮ್ಮೆಕೋರ್ಟು, ಥಿಲ್ಲೋಯಿ ಮತ್ತು ಪುಸಿಕ್ಸ ಬಿಮಂಟ್ ಗ್ರಾಮಗಳನ್ನು ಹಿಡಿದಿರುವರು. ಬ್ರಿಟಿಷರು ಫೆಬ್ರುವರಿ ತಿಂಗಳೊಂದರಲ್ಲಿ ಶತ್ರುಗಳ ೨೧೪೪ ಸೇನಿಕರನ್ನೂ ೪೬ ಆಫೀಸರರನ್ನೂ ಸೆರೆಹಿಡಿದಿರುತ್ತಾರೆ. ವಿ.ರಮೊಂಟಿನ ಉತ್ತರದಲ್ಲಿ ಬ್ರಿಟಿಷರು ೬೦೦ ಗಜ ಮುಂದರಿದಿರುತ್ತಾರೆ. ಸಾಸಿಜನ ದಕ್ಷಿಣದಲ್ಲಿ ಬ್ರಿಟಿಷರು ವಿಪಗ್ನಾಸನ್ನು ಬಿಟ್ಟು ಶತ್ರುಗಳಲ್ಲಿ ವಿಶೇಷ ನಷ್ಟವನ್ನುಂಟುಮಾಡಿರುವರು. ಎಂಕ್ರೆಯ ಎರಡು ದಡವನ್ನು ಪ್ರಯತ್ನೆಯಿಂದ್ದಬಿಟ್ಟುಹೋಗಿ ಮತ್ತೊಂದು ಬಲವತ್ತಾದ ಸ್ಥಳವನ್ನು ಸೇರುವವು ಎಂತಲೂ ಬ್ರಿಟಿಷರಿಗೆ ನಮ್ಮ ಚಲನೆ ಗೊತ್ತಿಲ್ಲವೆಂತಲೂ ಜರ್ಮನರು ಪ್ರಕಟಿಸಿರುತ್ತಾರೆ.

ಮೆಸೊಪಟಾಮಿಯ.

ಶತ್ರುಗಳು ಕುಟೆಲ್ ಅಮಾರದಿಂದ ಬಗ್ದಾದ್ ಕಡೆಗೆ ಓಡುತ್ತಿದ್ದಾರೆ. ಫೆಬ್ರುವರಿ ತಾ. ೨೪ರಿಂದ ೨೫೦೦ಕ್ಕೆ ಮಿಕ್ಕಿದ ಶತ್ರುಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ಡಿಸೆಂಬರ ತಾ. ೧೪ರಿಂದ ಬ್ರಿಟಿಷರ ಸೆರೆಬಿದ್ದ ಶತ್ರುಗಳ ಸಂಖ್ಯೆ ೫೦೦೦ಕ್ಕೂ ಹೆಚ್ಚಾದ ಮತ್ತು ಗಾಯಪೊಡೆದ ಶತ್ರುಗಳ ಸಂಖ್ಯೆಯು ೨೦ ಸಾವಿರಕ್ಕೂ ಮಿಕ್ಕಿದೆ.

ವಿದೇಶ ವೃತ್ತಾಂತ.

ಯುದ್ಧದಲ್ಲಿ ಜಯ ಹೊಂದುವದಕ್ಕೆ ಕೈಗಾರಿಕೆ ಕಾರ್ಖಾನೆಗಳನ್ನು ಮುಚ್ಚುವ ಅವಶ್ಯತೆ ಬಿದ್ದರೆ ಕೈಗಾರಿಕೆ ಕಾರ್ಖಾನೆಗಳನ್ನು ಮುಚ್ಚಬಿಡುವರೆಯೂ ಬ್ರಿಟಿಷ ಸರಕಾರದವರು ಸಿದ್ಧವಿದ್ದಾರೆ. ಹಿಂದೆ ಎಂದೂ ಇಲ್ಲದ ಕಂಟಕ ಸ್ಥಿತಿಯು ದೇಶಕ್ಕಿದೆ. ಅನಾವಶ್ಯಕವಾದ ವ್ಯಾಪಾರಸಾವಾರಗಳನ್ನು ಮಾಡಿಕೊಂಡಿರುವ ೪॥ ಮಿಲಿಯಜನರು ದೇಶದಲ್ಲಿದ್ದಾರೆ, ಇವರನ್ನು ಸೇನೆಗೆ ಸೇರಿಸುವ ಏರ್ಪಾಡು ಮಾಡಲ್ಪಡುವದು ಎಂಬದಾಗಿ ಮಿ॥ ಹೆಂಡರ್‍ಸನರು ಸಂಡರ್‍ಲೇಂಡಿನಲ್ಲಿ ಹೇಳಿರುತ್ತಾರೆ.

ಅಮೇರಿಕದ ವ್ಯಾಪಾರ ಹಡಗಗಳಲ್ಲಿ ಆಯುಧಗಳನ್ನು ಇಡುವ ವಿಧಿಯು ಅಮೇರಿಕದಲ್ಲಿ ಜಾರಿಗೆ ಬಂದದೆ.

ಅಮೇರಿಕದಲ್ಲಿದ್ದ ಜರ್ಮನ ರಾಯಭಾರಿ ಬೆರ್ನ್‌ಸ್ಟೊರ್ಫರು "ಪ್ರೆಡರಿಕ್ ಎಯಿಟ್" ಎಂಬ ಹಡಗದಲ್ಲಿ ಜರ್ಮನಿಗೆ ಪ್ರಯಾಣ ಮಾಡಿರುತ್ತಾರೆ.

ಇಂಗ್ಲಾಂಡಿನಲ್ಲಿ ಕಾಗದದ ಬೆಲೆಯು ಬಹಳವಾಗಿ ಏರಿರುವದರಿಂದ "ಡೈಲಿ ಮೈಲ್" ಪತ್ರಿಕೆಯ ಬೆಲೆಯು ೧ ಆಣೆಗೂ "ಒಬ್‌ಸರ್ವರ್" ಎಂಬ ಪತ್ರಿಕೆಯ ಬೆಲೆಯು ೨ ಆಣೆಗೂ ಏರಿರುತ್ತದೆ.

ಹೆಂಗಸರಿಗೆ ವಕೀಲವೃತ್ತಿ ನಡಿಸುವ ಹಕ್ಕು ಕೊಡುವ ವಿಧಿಯು ಬ್ರಿಟಿಷ [illegible]

ವಕೀಲ ವೃತ್ತಿಗೆ ಅರ್ಹರಾದ ಹೆಂಗಸರು ಹಲವು ದೇಶಗಳಲ್ಲಿ ಇದ್ದಾರೆ. ಕೆಲವು ದೇಶಗಳಲ್ಲಿ ಇಂಥಾ ಹೆಂಗಸರಿಗೆ ಇನ್ನೂ ವ್ಯವಹರಿಸುವ ಹಕ್ಕು ಕೊಡೋಣಾಗಲಿಲ್ಲ. ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ೨೦,೦೦೦ ಹೆಂಗಸರು ಅಟರ್ನಿ-ಎಟ್-ಲಾರಾಗಿ ವ್ಯವಹರಿಸುತ್ತಿದ್ದಾರೆ. ಆಸ್ಟ್ರೇಲಿಯದಲ್ಲಿ ಒಬ್ಬ ಹೆಂಗಸು ಜಡ್ಜರ ಎಡ್ವೊಕೇಟಾಗಿದ್ದಾಳೆ. ನೊರ್ವೆಯಲ್ಲಿ ಒಬ್ಬ ಹೆಂಗಸು ಜಡ್ಜ ಕೆಲಸ ನೋಡುತ್ತಿರುವಳು. ಸ್ವೀಡನಿನಲ್ಲಿ ಹೆಂಗಸರಿಗೆ ಜಡ್ಜ ಕೆಲಸ ನೋಡುವ ಸ್ವಾತಂತ್ರ್ಯ ಕೊಡೋಣಾಗಲಿಲ್ಲ, ಆದರೆ ಬಹಳ ಮಂದಿ ಬ್ಯಾರಿಸ್ಟರರಾಗಿದ್ದಾರೆ. ಫ್ರಾನ್ಸ್, ಸ್ವಿಟ್ಜರ್‍ಲೇಂಡ್, ರುಶ್ಯಾ, ಹೊಲ್ಲಾಂಡ್, ಪೊರ್ಟುಗಲ್, ಅರ್ಜೆಂಟಿನ, ಜಪಾನ್, ಈಜಿಪ್ತ್, ಕೆನಡಾ ಮತ್ತು ನ್ಯೂಜಿಲೇಂಡಿನಲ್ಲಿಯೂ ಹೆಂಗಸರು ವಕೀಲ ವೃತ್ತಿ ನಡಿಸಬಹುದಾಗಿದೆ.

ಬ್ರಿಟಿಷ ಸರಕಾರದವರು ಇನ್ನು ಮುಂದಕ್ಕೆ [illegible] ತುತ್ತಾದ ಹಡಗಗಳ ಹೆಸರನ್ನು ಪ್ರಕಟಿಸುವದಿಲ್ಲ. ವಾರಕ್ಕೊಂದಾವರ್ತಿ ಮಾತ್ರ ಮುಳುಗಿ ಹೋದ ಹಡಗಗಳ ಸಂಖ್ಯೆಯನ್ನು ಕೊಡುವವರಾಗಿದ್ದಾರೆ. ಫ್ರೆಂಚ ಸರಕಾರದವರೂ ಇನ್ನು ಮುಂದಕ್ಕೆ ಹೀಗೆಯೇ ಮಾಡುವರು.

ಯುದ್ಧ ಸಾಮಗ್ರಿ ಸಭೆಗೆ ಹಿಂದೂಸ್ಥಾನದಿಂದ ಪ್ರತಿನಿಧಿಗಳಾಗಿ ಹೋಗಲು [illegible]

ಮಾರ್ಚ ತಾ. ೧ರಲ್ಲು ಬ್ರಿಟಿಷರ ಒಂದು ಡಿಸ್ಟ್ರೋಯರ್ ನಾವೆಯು ಉತ್ತರ ಕಡಲಲ್ಲಿ ಮುಳುಗಿಹೋಗಿರುತ್ತದೆ. ಇದು ಬಹುಶಃ ಸಿಡಿಮದ್ದಿನ ಗಣಿಗೆ ತಗಲಿ ಮುಳುಗಿರಬೇಕು.

ಪೂರ್ವ ಆಫ್ರೀಕದಲ್ಲಿ ಜರ್ಮನರೊಡನೆ ಯುದ್ಧಸಾಧನೆಗಳನ್ನು ಮಾಡಿ ಜರ್ಮನರನ್ನು ಸೋಲಿಸಿದ ಜನರಲ್ ಸ್ಮಟ್ಸರಿಗೆ ಪ್ರಿವಿ ಕೌನ್ಸಿಲರ್ ಎಂಬ ಬಹುಮಾನ ಕೊಡೋಣಾಗಿದೆ.

ಉತ್ತರ ಹಿಂದೂಸ್ಥಾನ

ಇದೇ ತಾ ೧ರಲ್ಲು ಡಿಲ್ಲಿಯಲ್ಲಿ ಕೂಡಿದ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಕೋಶಾಧ್ಯಕ್ಷರಾದ ಸರ್ ವಿಲಿಯಂ ಮೇಯರರು ೧೯೧೭-೧೮ನೇ ಇಸವಿಯ ಆದಾಯ ವೆಚ್ಚಗಳ ಅಂದಾಜು ಪಟ್ಟಿಯನ್ನು ಸಭೆಯ ಮುಂದೆ ಇಟ್ಟಿರುತ್ತಾರೆ. ಈ ವರ್ಷದ ಅಂದಾಜು ಪಟ್ಟಿಯಲ್ಲಿ ಪ್ರಾಮುಖ್ಯವಾದ ಹಲವು ವಿಷಯಗಳು ಇರುವವು. ೧೯೧೬ನೇ ೧೭ನೇ ಇಸವಿಯಲ್ಲಿ ಆದಾಯ ತೆರಿಗೆಯು ರೂಪಾಯಿಗೆ ೪ ಪೈಯಿಂದ ೧ ಆಣೆಯ ವರೆಗೆ ಮಾತ್ರ ಇತ್ತು. ರೂ. ೨೫,೦೦೦ಕ್ಕೆ ಮಿಕ್ಕಿದ ಆದಾಯವುಳ್ಳವರಿಗೆ ಮಾತ್ರ ರೂಪಾಯಿಗೆ ೧ ಆಣೆಯ ಆದಾಯ ತೆರಿಗೆಯು ವಿಧಿಸೋಣಾಗಿತ್ತು. ಆದರೆ ಈಗ ಕೋಶಾಧ್ಯಕ್ಷರು "ಇನ್‌ಕಮ್ ಟೇಕ್ಸ"ನಲ್ಲಿ "ಸುಪರ್ ಟೇಕ್ಸ" ಎಂಬ ಒಂದು ಹೊಸ ತೆರಿಗೆಯನ್ನು ಮಾಡಿರುತ್ತಾರೆ. ಈ ಹೊಸ ದರದ ಪ್ರಕಾರ ರೂ. ೫೦,೦೦೦ ಮತ್ತು ೧ ಲಕ್ಷ ರೂಪಾಯಿಯ ಆದಾಯವುಳ್ಳವರು ಹಿಂದಿನಂತೆಯೇ ರೂಪಾಯಿಗೆ ೧ ಆಣೆಯಂತೆ ಆದಾಯ ತೆರಿಗೆ ಕೊಡಬೇಕಾಗಿರುವದಾದರೂ ರೂ. ೧ ಲಕ್ಷ ಮತ್ತು ೧॥ ಲಕ್ಷದ ಆದಾಯವಿರುವವರು ರೂ. ೫೦,೦೦೦ಕ್ಕೆ ಮಿಕ್ಕಿದ ಪ್ರತಿ ಒಂದು ರೂಪಾಯಿಗೆ ೧॥ ಆಣೆಯಂತೆಯೂ ರೂ. ೧॥-೨ ಲಕ್ಷದ ಆದಾಯವುಳ್ಳವರು ೫೦,೦೦೦ಕ್ಕೆ ಮಿಕ್ಕಿದ ಪ್ರತಿ ಒಂದು ರೂಪಾಯಿಗೆ ೨ ಆಣೆಯಂತೆಯೂ ರೂ. ೨॥-೩ ಲಕ್ಷ ಆದಾಯವುಳ್ಳವರು ಮಿಕ್ಕಿದ ರೂ. ೧ಕ್ಕೆ ೨॥ ಆಣೆಯಂತೆಯೂ ರೂ. ೩॥ ಲಕ್ಷಕ್ಕಿಂತ ಹೆಚ್ಚಿನ ಆದಾಯವುಳ್ಳವರು ಮಿಕ್ಕಿದ ರೂಪಾಯಿಗೆ ೪ ಆಣೆಯಂತೆಯೂ ಇನ್‌ಕಮ್ ಟೇಕ್ಸ ಕೊಡಬೇಕಾಗುವದು. ಈ ದರವು ಈಗ ರೂಢಿಯಲ್ಲಿರುವ ೧ ಆಣೆಯ ಇನ್‌ಕಮ್ ಟೇಕ್ಸಿಗೆ ಕೂಡಿಕೆಯಾಗುವದರಿಂದ ೩॥ ಲಕ್ಷ ಆದಾಯವುಳ್ಳ ಒಬ್ಬನು ರೂಪಾಯಿಗೆ ೪ ಆಣೆಯಂತೆ ಇನ್‌ಕಮ್ ಟೇಕ್ಸ ಕೊಡಬೇಕಾಗುವದು. (ಪೌಂಡಿಗೆ ೫ ಶಿಲಿಂಗ್‌ನಂತಾಗುವದು.) ಆದರೆ ಮೊದಲಿನ ಪ್ರತಿ ಒಂದು ಅರ್ಧ ಲಕ್ಷದ ವರೆಗೆ ರೂಪಾಯಿಗೆ ೧ ಆಣೆಯು ಇರುವದರಿಂದ ೩॥ ಲಕ್ಷ ಆದಾಯವಿರುವ ಒಬ್ಬನಿಗೆ ಮೊದಲಿನ ೧ ಲಕ್ಷಕ್ಕೆ ರೂಪಾಯಿಗೆ ೧ ಆಣೆಯಂತೆಯೂ ಉಳಿದ ಲಕ್ಷಕ್ಕೆ ರೂಪಾಯಿಗೆ ೪ ಆಣೆಯ ದರವೂ ಬೀಳುವದು. ಈ ದರವು ಇಂಗ್ಲಾಂಡಿನಲ್ಲಿ ಒಬ್ಬ ಶ್ರೀಮಂತನು ಕೊಡುವ ದರಕ್ಕಿಂತಲೂ ಕಡಿಮೆ. ಎಂದೂ ಅಲ್ಲಿ ಸಾಧಾರಣ ತೆರಿಗೆಯು ಪೌಂಡಿಗೆ ೫ ಶಿಲಿಂಗನಂತೆ ಇದೆ ಎಂದೂ ಈ ಹೊಸ ತೆರಿಗೆಯ ಪ್ರಕಾರ ಇಲ್ಲಿ ಹೆಚ್ಚಾದದ್ದು ಪೌಂಡಿಗೆ ೪॥ ಶಿಲಿಂಗಿಗೆ ಮಿಕ್ಕುವದಿಲ್ಲವೆಂದೂ ಕೋಶಾಧ್ಯಕ್ಷರು ಹೇಳಿರುತ್ತಾರೆ. ಹೀಗೆ ಈ ಸುಪರ್ ಟೇಕ್ಸನ್ನು ವಿಧಿಸಿದ್ದರಿಂದ ರೂಢಿಯಲ್ಲಿರುವ ಇನ್‌ಕಮ್ ಟೇಕ್ಸನ್ನು ತಿದ್ದುಪಡಿ ಮಾಡುವ ವಿಧಿಯೂ ವರಿಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ಬಂದಿರುತ್ತದೆ. ಸುಪರ್ ಟೇಕ್ಸನ್ನು ವಿಧಿಸುವದರಿಂದ ಹೆಚ್ಚಿಗೆ ೧,೪೫೦,೦೦೦ ಪವನುಗಳ ಉತ್ಪತ್ತಿಯಾಗುವದೆಂದು ಕೋಶಾಧ್ಯಕ್ಷರು ಅಂದಾಜು ಮಾಡಿರುತ್ತಾರೆ. ಪರಬಂದರುಗಳಿಗೆ ಹಿಂದೂಸ್ಥಾನದಿಂದ ಕಳುಹಿಸುವ ಸಣಬು ನಾರಿನ ಮೇಲಿನ ತೆರಿಗೆಯನ್ನು ದುಬಾರಿ ಮಾಡಿರುತ್ತಾರೆ. ಹೀಗೆ ಈ ತೆರಿಗೆಯು ಎರಡಷ್ಟಾದ್ದರಿಂದ ೫೦೦,೦೦೦ ಪವನುಗಳ ಹೆಚ್ಚಿನ ಉತ್ಪತ್ತಿಯಾಗುವದು. ಈ ದರವು ಹೆಚ್ಚಾಗಿ ಕಂಡರೂ ಈಗಿನ ಸೋರಿ, ಮತ್ತು ಎಕ್ಸ್‌ಚೇಂಜ್ ಸಂಬಂಧವಾಗಿರುವ ಕಷ್ಟಗಳನ್ನೂ ಪರಬಂದರುಗಳಿಗೆ ಕಳುಹಿಸುವ ಸಾಮಾನುಗಳ ಮೇಲೆ ಈಚೆಗೆ ಆದ ನಿಬಂಧನೆಯನ್ನೂ ನೋಡುವದಾದರೆ ಈ ದರವು ಹೆಚ್ಚಲ್ಲ ಎಂದು ಕೋಶಾಧ್ಯಕ್ಷರು ಹೇಳಿರುತ್ತಾರೆ. ಆದರೆ ಯುದ್ಧ ಆಫೀಸ ಕಂಟ್ರಾಕ್ಟಿನ ಮೇಲೆ ಕಳುಹಿಸೋಣಾಗುವ ಸಣಬಿಗೆ ಹಿಂದಿನಂತೆಯೇ ಈ ತೆರಿಗೆಯು ಲಗುವಾಗುವದಿಲ್ಲ. ಪರಪ್ರಾಂತದಿಂದ ಈ ದೇಶಕ್ಕೆ ಬರುವ ಹತ್ತಿನೂಲು ವಸ್ತ್ರಗಳಿಗೆ ಇರುವ ಸುಂಕವು ಸೇಕಡಾ ೩॥ಯಿಂದ ೭॥ ಹೆಚ್ಚಿಸೋಣಾಗಿದೆ. ಇದರಿಂದ ೧,೦೨೦,೦೦೦ ಪವನುಗಳ ಹೆಚ್ಚಿಗೆ ಆದಾಯವು ಹುಟ್ಟಬರಬಹುದೆಂಬ ಅಂದಾಜಾಗಿಯದೆ. ಆದರೆ ಹತ್ತಿಯ ಮೇಲಿರುವ ಕರವು ಎಂದಿನಂತೆಯೇ ಸೇಕಡಾ ೩॥ಯಂತೆಯೇ ಇರುವದು. ಆದಾಯ ವೆಚ್ಚಗಳ ಅಂದಾಜು ಪಟ್ಟಿಯಲ್ಲಿ ತೋರುವ ಮತ್ತೊಂದು ಹೊಸ ತೆರಿಗೆಯು ರೈಲ್ವೇಯಲ್ಲಿ ಕೊಂಡುಹೋಗುವ ಕಲ್ಲಿದ್ದಲು, ಕೋಕ್, ಮತ್ತು ಕಟ್ಟಿಗೆಯ ಮೇಲೆ ಮಣಕ್ಕೆ ೧ ಪೈಯಂತೆಯೂ ಇತರ ವಸ್ತುಗಳ ಮೇಲೆ ಮಣಕ್ಕೆ ೨ ಪೈಯಂತೆಯೂ ವಿಧಿಸಲ್ಪಟ್ಟಿ ಆಗಿದೆ. ಈ ತೆರಿಗೆಯಿಂದ ೫೦೦,೦೦೦ ಪವನುಗಳ ಆದಾಯವು ಹುಟ್ಟಬಹುದೆಂದು ಅಂದಾಜಾಗಿಯದೆ. ಈ ಎಲ್ಲಾ ಹೊಸ ತೆರಿಗೆಯನ್ನು ತರುವಂಥಾ ವಿಧಿಗಳೂ ವರಿಷ್ಠ ನ್ಯಾಯವಿಧಾಯಕ ಸಭೆಯು ಮುಂದೆ ಬಂದು ಮಂಜೂರಾತಿಯನ್ನು ಹೊಂದಿರುತ್ತದೆ. ಈ ಹೊಸ ತೆರಿಗೆಗಳಿಂದ ಒಟ್ಟಿಗೆ ೪॥ ಮಿಲಿಯ ಪವನುಗಳ ಉತ್ಪತ್ತಿಯಾಗುವದೆಂದು ಅಂದಾಜಾಗಿಯದೆ ಹಿಂದೂಸ್ಥಾನದ ಸಿದ್ಧಾಯದಿಂದ ೧೦೦ ಮಿಲಿಯ ಪವನುಗಳನ್ನು ಯುದ್ಧದ ಖರ್ಚು ಬಗ್ಗೆ ಸಾಮ್ರಾಜ್ಯ ಸರಕಾರಕ್ಕೆ ಕೊಡುವದೆಂತ ಅಂದಾಜುಪಟ್ಟಿಯಲ್ಲಿ ಸೂಚಿಸೋಣಾಗಿದೆ. ಹಿಂದೂಸ್ಥಾನದಲ್ಲಿ ಸೇನೆಯ ಖರ್ಚು ಈ ವರ್ಷ ೩೩ ಮಿಲಿಯ ಪವನುಗಳಾಗುವದೆಂತ ಅಂದಾಜಾಗಿಯದೆ. ಪ್ರೈಮರಿ ಮತ್ತು ಸೆಕಂಡರಿ ಶಾಲೆಗಳ ಉಪಾಧ್ಯಾಯರ ಸಂಬಳಗಳನ್ನು ಹೆಚ್ಚಿಸುವರೆಯೂ ಅವರ ತರ್ಬೇತು ಬಗ್ಗೆ ವೆಚ್ಚಮಾಡುವರೆಯೂ ಈ ಸಾರಿಯ ಅಂದಾಜು ಪಟ್ಟಿಯಲ್ಲಿ ೨೦೦,೦೦೦ ಪವನುಗಳು ಸ್ಪೆಶಲ್ ರಿಕರಿಂಗ್ ಗ್ರೇಂಟಾಗಿ ಪ್ರತ್ಯೇಕಿಸಿಡೋಣಾಗಿದೆ. ಈ ಸಾರಿಯ ಅಂದಾಜು ವೆಚ್ಚಗಳ ಪಟ್ಟಿಯಲ್ಲಿ ಕೋಶಾಧ್ಯಕ್ಷರು ಯುದ್ಧ ಸಂಬಂಧವಾದ ಸಾಲದ ಏರ್ಪಾಡುಗಳನ್ನು ಸೂಚಿಸಿರುತ್ತಾರೆ. ಹೀಗೆ ಹುಟ್ಟಿ ಬಂದ ಸಾಲವು ಹಿಂದೂಸ್ಥಾನದ ಪರವಾಗಿ ಸಾಮ್ರಾಜ್ಯ ಸರಕಾರಕ್ಕೆ ಕೊಡೋಣಾಗುವದು. ೧೯೧೬ನೇ ಇಸವಿಯಲ್ಲಿ ಸರಕಾರಕ್ಕೆ ೬೪-೮೦೪ ಮಿಲಿಯ ಪವನುಗಳ ಆದಾಯವು ಕಂದಾಯದ ಮೂಲಕ ಹುಟ್ಟಿ ಬಂದು ೫೯-೦೬೪ ಮಿಲಿಯ ಪವನುಗಳ ಖರ್ಚಾಗಿರುತ್ತದೆ. ೫-೭ ಮಿಲಿಯ ಪವನುಗಳ ಶಿಲುಕು ಬಾಕಿ ಉಳಿದಿರುತ್ತದೆ. ಆದರೆ ೧೯೧೭-೧೮ನೇ ಇಸವಿಯಲ್ಲಿ ೬೪-೨೧೪ ಮಿಲಿಯ ಪವನುಗಳ ಹುಟ್ಟು; ೬೦-೪೪೪ ಮಿಲಿಯ ಪವನುಗಳ ಖರ್ಚು ಆಗಿ ೨-೭೮೦ ಮಿಲಿಯ ಪವನುಗಳ ಶಿಲುಕು ಬಾಕಿ ಉಳಿಯುವದು ಎಂತ ಅಂದಾಜಾಗಿಯದೆ.

ಮಾನ್ಯ ಶರ್ಮಾರವರು ವರಿಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ಪ್ರಾಥಮಿಕ ವಿದ್ಯಾಭ್ಯಾಸ ಸಂಬಂಧವಾದ ಒಂದು ಠರಾವನ್ನು ತಂದಿದ್ದರು. ಇನ್ನು ಮುಂದಕ್ಕೆ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವರೆ ವರಿಷ್ಠ ಸರಕಾರದ ಕಂದಾಯವು ಉಪಯೋಗಿಸಲ್ಪಡಬೇಕು ಮತ್ತು ೧೫ ವರ್ಷಗಳ ಅವಧಿಯೊಳಗೆ ಪ್ರಾಥಮಿಕ ವಿದ್ಯಾಭ್ಯಾಸವು ಬ್ರಿಟಿಷ ಹಿಂದೂಸ್ಥಾನದಲ್ಲೆಲ್ಲಾ ಕಡ್ಡಾಯವಾಗಿಯೂ ಉಚಿತವಾಗಿಯೂ ದೊರೆಯುವಂತೆ ಏರ್ಪಾಡು ಮಾಡಬೇಕೆಂಬದು ಮಾನ್ಯ ಶರ್ಮಾರವರ ಠರಾವಿನ ಮುಖ್ಯ ತಾತ್ಪರ್ಯವಾಗಿತ್ತು. ವಿದ್ಯಾಖಾತೆಯ ಸರಕಾರದ ಮೆಂಬರರಾಗಿರುವ ಸರ್ ಶಂಕರನ್ ನಾಯರರು ಈ ಠರಾವನ್ನು ವಿರೋಧಿಸಿದರು. ಪ್ರಜಾ ಪ್ರತಿನಿಧಿ ಮೆಂಬರರಲ್ಲಿ ಕೆಲವರು ಈ ಠರಾವನ್ನು ಅನುಮೋದಿಸಿ ಮಾತಾಡಿದರು. [illegible]

ತಾ. ೧ರಲ್ಲು ಕೂಡಿದಂಥ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಕೋಶಾಧ್ಯಕ್ಷರಾದ ಸರ್ ವಿಲಿಯಂ ಮೇಯರರು ೧೯೧೭ನೇ ಇಸವಿಯ ಇಂಡಿಯನ್ ಟೆಂಫ್ ಆಕ್ಟನ್ನೂ ೧೯೧೮ನೇ ಇಸವಿಯ ಇನ್‌ಕಮ್ ಟೇಕ್ಸ ಆಕ್ಟನ್ನೂ, ಇನ್‌ಕಮ್ ಟೇಕ್ಸನ ಮೇಲೆ ವಿಧಿಸುವ ಹೆಚ್ಚಿನ ತೆರಿಗೆಯ ೧೯೧೬ನೇ ಇಸವಿಯ ಆಕ್ಟನ್ನೂ ತಿದ್ದುಪಡಿ ಮಾಡುವ ಠರಾವನ್ನು ತಂದರು. ಈ ಠರಾವುಗಳ ವಿಷಯವಾದ ವಾದ ಪ್ರತಿವಾದಗಳು ಆಗಿ ಈ ಠರಾವುಗಳು ಸೆಲೆಕ್ಟ ಕಮಿಟಿಯವರ ಅಭಿಪ್ರಾಯ ಬಗ್ಗೆ ಇಡೋಣಾಗಿದೆ.

ಅನ್ನಿಬಿಸೆಂಟರವರು ಸಂಯುಕ್ತ ಸಂಸ್ಥಾನಕ್ಕೆ ಮತ್ತು ಮುಂಬಾಯಿ ಸಂಸ್ಥಾನಕ್ಕೆ ಹೋಗಕೂಡದಾಗಿ ಆ ಸಂಸ್ಥಾನಗಳ ಸರಕಾರಗಳವರು ನಿಷೇಧ ಆಜ್ಞೆಯನ್ನು ಕೊಡುವ ಮೊದಲು ಇಂಡಿಯಾ ಸರಕಾರದವರೊಡನೆ ಈ ವಿಷಯ ಆಲೋಚನೆ ನಡಿಸಿರುವರೋ? ಅನ್ನಿಬಿಸೆಂಟರ ಯಾವದೊಂದು ಸಾರ್ವಜನಿಕ ವ ಖಾಸಗಿ ಭಾಷಣಗಳ ಅಥವಾ ಇವರ ಯಾವದಾದರೂ ಲೇಖನ ಆಧಾರದ ಮೇಲೆ ಈ ಸಂಸ್ಥಾನಗಳ ಸರಕಾರಗಳವರು ಈ ನಿಷೇಧ ಆಜ್ಞೆಯನ್ನು ಹೊರಡಿಸಿದ್ದೋ? ಈ ಸಂಸ್ಥಾನಗಳ ಸರಕಾರದವರ ಈ ಆಜ್ಞೆಯ ನಂತರ ಅವರು ಲಕ್ನೋ ಕಲ್ಕತ್ತಾ ಮತ್ತು ಇತರ ಸ್ಥಳಗಳನ್ನು ಸಂದರ್ಶಿಸಿ ರಾಜಕೀಯ ವ ಇತರ ಭಾಷಣಗಳನ್ನು ಮಾಡಿದ್ದು ಸರಕಾರದವರ ತಿಳುವಳಿಕೆಗೆ ಬಂದದೋ? ಇಂಥಾ ಭಾಷಣಗಳ ಮೇಲೆ ಯಾವ ಅಪವಾದವಾದರೂ ಬಂದಿರುತ್ತದೋ? ಅವರ ಮೇಲೆ ಉಂಟಾದ ಈ ನಿಷೇಧ ಆಜ್ಞೆಯನ್ನು ಹಿಂದೆಗೆಯುವರೆ ಇಂಡಿಯಾ ಸರಕಾರದವರು ಸ್ಥಳಿಕ ಸರಕಾರಗಳಿಗೆ ಆಜ್ಞಾಪಿಸಲಾಗದೋ ಎಂಬಿತ್ಯಾದಿ ಪ್ರಶ್ನೆಗಳನ್ನು ಮಾನ್ಯ ಕೆ. ಕೆ. ಚಂದಾ (ಅಸ್ಸಾಮು)ರವರು ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಹಾಕಿದ್ದರು. ಸಂಸ್ಥಾನಿಕ ಸರಕಾರದವರ ಈ ಆಜ್ಞೆಯು ಇಂಡಿಯಾ ಸರಕಾರದವರ ಅನುಮತಿಯಿಂದಾಗಿಯದೆಂದೂ, ಈ ಆಜ್ಞೆಗಳನ್ನು ಹಿಂದೆಗೆಯಲು ಇಂಡಿಯಾ ಸರಕಾರದವರು ಸ್ಥಳಿಕ ಸರಕಾರಗಳವರಿಗೆ ಸೂಚಿಸುವ ಹಾಗಿಲ್ಲವೆಂದೂ ಮಿಸೆಸ್ ಬಿಸೆಂಟರು ಬಂಗಾಳ ಅಧಿಪತ್ಯವನ್ನು ಮತ್ತು ಸಂಯುಕ್ತ ಸಂಸ್ಥಾನಗಳನ್ನು ಸಂದರ್ಶಿಸಿದ್ದಾಗ ಮಾಡಿದ ಭಾಷಣಗಳ ಮೇಲೆ ಅಲ್ಲಿಯ ಸರಕಾರಗಳವರು ಈ ವರೆಗೆ ಅಪವಾದವನ್ನು ತರಲಿಲ್ಲವೆಂದೂ ಸರಕಾರದ ಪರವಾಗಿ ಸರ್. ಆರ್. ಕ್ರೆಡೊಕರವರು ಉತ್ತರ ಕೊಟ್ಟಿರುತ್ತಾರೆ.

ಕಲ್ಕತ್ತೆಯಲ್ಲಿ ಮೊನ್ನೆ ತಾನೇ ಜರಗಿದ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಇಂಗ್ಲಿಷ್ ಪ್ರಶ್ನಪತ್ರಗಳು ಹೊರಪಟ್ಟಿರುತ್ತವೆ ಎಂಬ ವರ್ತಮಾನ ಬಂದಿದೆ. ಆದರೆ ಈ ಪ್ರಶ್ನಪತ್ರಗಳು ಹ್ಯಾಗೆ ಹೊರಪಟ್ಟವೆಂಬದು ತಿಳಿಯಲಿಲ್ಲ. ಯುನಿವರ್ಸಿಟಿ ಸಿಂಡಿಕೇಟ್ ಸಭೆಯವರು ಈ ವಿಷಯ ತಕ್ಕ ತನಿಖೆನಡಿಸುತ್ತಿದ್ದಾರೆ. ತನ್ಮಧ್ಯೆ ಗಣಿತ ಪರೀಕ್ಷೆಯ ಪ್ರಶ್ನಪತ್ರಗಳೂ ಹೊರಬಿದ್ದವೆ ಎಂತ ವಾರ್ತೆ ಇದೆ.

ಹಿಂದೀಗಳಿಗೆ ಸ್ವಯಂ ಸೇನಿಕತ್ವದ ಹಕ್ಕು ಕೊಡೋಣಾದ್ದರಿಂದ ಈ ಸೇನೆಗೆ ಹಿಂದೀ ಯುವಕರು ಸೇರಿಕೊಳ್ಳುವ ಹಾಗೆ ಅವರನ್ನು ಪ್ರೋತ್ಸಾಹಗೊಳಿಸುವ ಉದ್ದೇಶದಿಂದ ಮುಂಬಾಯಿಯ ಹೋಮ್‌ರೂಲು ಲೀಗಿನ ಕಾರ್ಯೆಯಲ್ಲಿ ತಾ. ೪ರಲ್ಲು ಒಂದು ಮಹಾ ಸಭೆಯು ಕೂಡಿ ಬಂದಿದ್ದಿತು. ಲೋ. ಬಾಲಗಂಗಾಧರ ತಿಲಕರವರು ಈ ಸಭೆಯ ಅಧ್ಯಕ್ಷರಾಗಿದ್ದು ಹಿಂದೀ ಯುವಕರು ಈ ಸೇನೆಗೆ ಸೇರಿಕೊಳ್ಳಬಹುದಾಗಿರುವ ಅವಶ್ಯಕತೆಯನ್ನು ಸಕಾರಣವಾಗಿ ವಿವರಿಸಿರುತ್ತಾರೆ. ಸೇನೆಯಲ್ಲಿ ಹಿಂದೀಗಳಿಗೆ ಅಧಿಕಾರ ಪದವಿಯು ಸಿಕ್ಕುತ್ತದೋ ಇಲ್ಲವೊ ಎಂಬದಕ್ಕೆ ತಕ್ಕ ಆಧಾರವು ಈ ವರೆಗೆ ಇಲ್ಲವಾದ್ದರಿಂದ ಹಿಂದೀ ಯುವಕರು ಮಾನಗುಂದದೆ ತಮ್ಮ ದೇಶದ ಬಗ್ಗಾಗಿ ಸೇನೆಗೆ ಸೇರಿಕೊಳ್ಳಬೇಕು ಎಂಬದಾಗಿ ತಿಲಕರು ಯುವಕರನ್ನು ವಿಜ್ಞಾಪಿಸಿಕೊಂಡಿರುತ್ತಾರೆ. ಮಿ॥ ಬೆಪ್‌ಟಿಸ್ಟರವರು ಈ ಸಭೆಯಲ್ಲಿ ಮಾತಾಡಿ ಹಿಂದೂಸ್ಥಾನದ ಯುವಕರು ಈಗ ಪರೀಕ್ಷೆಗೆ ನಿಂತಂತಿದ್ದಾರೆ. ಅವರು ಈ ಪರೀಕ್ಷೆಯಲ್ಲಿ ಜಯಪ್ರದರಾದರೆ ಅವರು ಮಹತ್ವದ ದೇಶಸೇವೆಯನ್ನು ಮಾಡಿದಂತಾಗುವದು, ಅವರು ಇದರಲ್ಲಿ ಜಯಪ್ರದರಾಗದಿದ್ದರೆ ಹಿಂದೂಸ್ಥಾನದ ಮುಂದಿನ ಪೀಳಿಗೆಯವರು ಲಾಂಛನಾಸ್ಪದವಾದ ಮತ್ತು ಮಾನಭಂಗದ ಕೊಡಂಟಿಯನ್ನು ಜಗಿಯುತ್ತಿರಬೇಕಾಗುವದು ಎಂದು ಹೇಳಿರುತ್ತಾರೆ. ಸಭೆಯಲ್ಲಿ ಮಿಸೆಸ್ ಸರೋಜಿನಿ ಮತ್ತು ಮಿ॥ ಹೊರ್ನಿಮ್ಯಾನ ಮೊದಲಾದವರು ಪ್ರೋತ್ಸಾಹ ಪರವಾದ ಭಾಷಣಗಳನ್ನು ಕೊಡುತ್ತಿರುವಾಗಲೇ ೫೦೦ ಮಹರಾಷ್ಟ್ರ ಯುವಕರು ತಮ್ಮ ಹೆಸರನ್ನು ಸೇನೆಗೆ ಬರಾಯಿಸಿರುವರು. ಹೋಮ್‌ರೂಲು ಲೀಗಿನ ಸುಮಾರು ೧೨೦ ಮೆಂಬರರೂ ತಮ್ಮ ಹೆಸರನ್ನು ಕೊಟ್ಟಿರುವರು. ಈ ಪೈಕಿ ಬಾಲಗಂಗಾಧರ ತಿಲಕರ ಮತ್ತು ಮಿ॥ ರಾ॥ ಮದನಮೋಹನದಾಸ ರಾವ್ಜಿಯವರ ಮಕ್ಕಳು ಮೊದಲಾಗಿ ತಮ್ಮ ಹೆಸರು ಕೊಟ್ಟಿರುವರು.

ಫೆಬ್ರುವರಿ ತಾ. ೨೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೪೧೫೦ ಮಂದಿಗೆ ಪ್ಲೇಗಬೇನೆಯು ಸೋಂಕಿ ೧೯೯೧೦ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಿ ಮತ್ತು ಸಿಂಧಿನಲ್ಲಿ ೫೩೫೧; ಮದ್ರಾಸ್ ೬೫೪; ಬಂಗಾಳ ೪; ಬಿಹಾರ್ ಮತ್ತು ಒರಿಸ್ಸ ೧೫೮೯; ಸಂಯುಕ್ತ ಸಂಸ್ಥಾನ ೪೪೯೧; ಪಂಜಾಬು ೮೮; ಬರ್ಮ ೨೩೬; ಮಧ್ಯಸಂಸ್ಥಾನ ೨೯೬; ಕೊಡಗು ೪; ಮೈಸೂರು ೪೨೫; ಹೈದರಾಬಾದ್ ೧೫೧೨; ಮಧ್ಯಹಿಂದೂಸ್ಥಾನ ೪೨೪; ರಜಪುತಾನ ೧೪೫; ಕಾಶ್ಮೀರ ೬ ಮರಣಗಳಾಗಿರುವವು.

೧೯೧೪ನೇ ಇಸವಿಯಲ್ಲಿ ಫಿಜಿ ದ್ವೀಪದಲ್ಲಿ ೬೦,೦೦೦ ಹಿಂದೀಗಳೂ ೯೦,೦೦೦ ಫಿಜಿದ್ವೀಪವಾಸಿಗಳೂ ಇದ್ದರು. ಆದರೆ ಅದೇ ವರ್ಷ ೪೫೦೦ ಹೊಸ ಹಿಂದೀಗಳನ್ನು ಅಲ್ಲಿಗೆ ಕೈದಿರುತ್ತಾರೆ. ೧೯೧೪—೧೫ನೇ ಇಸವಿಯಲ್ಲಿ ಗಿರ್ಮಿಟ ಕರಾರು ಪ್ರಕಾರ ೪೫೦೦ಕ್ಕೆ ಕಡಿಮೆಯಾಗದಷ್ಟು ಹಿಂದೀ ಕೂಲಿಗಳು ಫಿಜಿದ್ವೀಪಕ್ಕೆ ಹೋಗಿರುತ್ತಾರೆ ಎಂತ ಗಿರ್ಮಿಟದಾರು ಪದ್ಧತಿಯನ್ನು ನಿರೋಧಿಸುವರೆ ಮುಂಬಾಯಿಯಲ್ಲಿ ಕೂಡಿದ ಹೆಂಗಸರ ಸಭೆಯಲ್ಲಿ ಲೇಡಿ ಟಾಟರವರು ಮಾಡಿದ ಭಾಷಣದಿಂದ ತಿಳಿದುಬಂದಿರುತ್ತದೆ.

ಬ್ರಿಟಿಷ ಕೋರ್ಟುಗಳಲ್ಲಿ ಹಿಂದೆ ಎಂದು ಸಂಭವಿಸದ ಒಂದು ವಿಶೇಷ ಸಂಗತಿಯು ಮುಂಬಾಯಿ ಹೈಕೋರ್ಟಿನಲ್ಲಿ ಮೊನ್ನೆತಾನೇ ನಡೆಯಿತು. ಮುಂಬಾಯಿಯ ಕೆಲವು ಹಿಂದೂಗಳು ೧೯೮೦ ಮತ್ತು ೧೫೦೨ ತೊಲೆ ಬೆಳ್ಳಿಯ ಸಂಬಂಧ ತಂದಿದ್ದ ಒಂದು ದಾವೆಯು ಮುಂಬಾಯಿ ಹೈಕೋರ್ಟಿನಲ್ಲಿ ಕೆಲವು ಸಮಯದಿಂದ ವಿಚಾರಣೆಯಾಗುತ್ತಿತ್ತು. ಎರಡು ಕಡೆಗಳಿಂದ ೭ ವಕೀಲರು ವ್ಯವಹರಿಸುತ್ತಿದ್ದರು. ಅದೇ ಫೆಬ್ರುವರಿ ತಾ ೨೭ರಲ್ಲು ಈ ದಾವೆಯಲ್ಲಿ ಪುನಃ ವಿಚಾರಣೆ ಪ್ರಾರಂಭವಾಗ ವಾದಿಯು ಈ ದಾವೆಯಲ್ಲಿ ಸಂಬಂಧಪಟ್ಟ ಬೆಳ್ಳಿಯು ಯುದ್ಧ ಫಂಡಿಗೆ ಕೊಡೋಣಾಗುವದು ಎಂದು ಹೇಳಿದನು. ವಕೀಲರು ತಮ್ಮ [illegible] ತಾನು ಈ ಬೆಳ್ಳಿಯನ್ನು ಯುದ್ಧ ಫಂಡಿಗೆ ಕೊಡುವನೆಂದು ಪ್ರತಿವಾದಿಯು [illegible] ಕಡೆಗೆ ವಕೀಲರೂ ವಾದಿ ಪ್ರತಿವಾದಿಯರ ಹೇಳಿಕೆಗೆ ಒಪ್ಪಿಕೊಂಡ [illegible] ಮತ್ತು ಈ ದಾವೆಯಲ್ಲಿ ವ್ಯವಹರಿಸುತ್ತಿದ್ದ ವಕೀಲರ [illegible] ಬೆಳ್ಳಿಯು ಯುದ್ಧಫಂಡಿಗೆ ಕೊಡೋಣಾಯಿತು.

ಮುಸಲ್ಮಾನರ ವಿಶ್ವವಿದ್ಯಾ [illegible] ಲಕ್ಷ ರೂಪಾಯಿಗಳನ್ನು [illegible] ಸರ್ [illegible]

ಹಿಂದೀಗಳಿಗೆ [illegible]

ಅನುಕ್ರಮಣಿಕೆ.

ಪಾನು

ಅಗ್ರಲೇಖ:—
ಮಂಗಳೂರು-ಹಾಸನ್ ರೈಲ್ವೆ, ಮೈಸೂರು ದರಬಾರಿನ ದುರಾಗ್ರಹ . . ೪

ಸ್ಫುಟವಿಚಾರಗಳು:—
೧ ಕಾಗದದ ಧಾರಣೆ. . . . ,,
೨ 1916-17ನೇ ಇಸವಿಯ ಇಂಡಿಯಾ ಸರಕಾರದ ಆದಾಯ ವೆಚ್ಚಗಳ ಅಂದಾಜು ಪಟ್ಟಿ . . . ೪-೫
೩ ಅಸ್ಪ್ರಶ್ಯರಕೊರಳಿಯ ನಿವಾರಣೋಪಾಯ . . . ,,
೪ ಸ್ಥಳಿಕ — ಮಂಗಳೂರು . . . ,,

ವರ್ತಮಾನ ಸಂಗ್ರಹಗಳು:—
೧ ಯುರೋಪದ ಮಹಾಯುದ್ಧ . . . ೫
೨ ವಿದೇಶ ವೃತ್ತಾಂತ . . . ,,
೩ ಉತ್ತರ ಹಿಂದೂಸ್ಥಾನ . . . ೫-೬
೪ ದಕ್ಷಿಣ ಹಿಂದೂಸ್ಥಾನ . . . ೬

ಪತ್ರವ್ಯವಹಾರ ಮತ್ತು ಬಾತಮಿಗಳು.
ಕರ್ನಾಟಕ ಸಾಹಿತ್ಯ ಪರಿಷತ್ತು. . . . ೬
ಇನ್ನ ಗ್ರಾಮಸ್ಥರ ಹಾಲಹವಾಲಿ . . . ೫

ಸ್ವದೇಶಾಭಿಮಾನಿ.

ಶಕ ೧೮೩೮ ಫಾಲ್ಗುಣ ಬ. ೧ ಶುಕ್ರವಾರ.

ಮಂಗಳೂರು-ಹಾಸನ್ ರೈಲ್ವೆ.

ಮೈಸೂರು ದರಬಾರಿನ ದುರಾಗ್ರಹ.

ಕಳೆದ ಶನಿವಾರ ದಿನ ಇಲ್ಲಿಯ ಗವರ್ನಮೆಂಟ ಕೊಲೇಜಿನಲ್ಲಿ ಜಿಲ್ಲಾ ಜನರ ಸಭೆಯು ಕೂಡಿತು. ಜಿಲ್ಲೆಯ ಪ್ರಮುಖ ಸಾವುಕಾರರೂ ವಕೀಲರುಗಳೂ ರೈತರೂ ವರ್ಗದಾರರೂ ಕೂಡಿದ್ದರು. ಜಿಲ್ಲಾ ಕಲೆಕ್ಟರ ದೊರೆಗಳವರೂ ಸರಕಾರದ ಇತರ ದೊಡ್ಡ ಹುದ್ದೇದಾರರೂ ಜಿಲ್ಲೆಯಲ್ಲಿರುವ ಯುರೋಪಿಯ ಜನರ ಪ್ರತಿನಿಧಿಗಳೂ ಹಾಜರಿದ್ದರು. ಬಹಳ ವಿಶೇಷವಾದ ಸಭೆ. ಸಭಾಕಾರ್ಯಗಳೂ ಬಹಳ ವಿಶೇಷವಾದವುಗಳೇ ಆಗಿದ್ದವು. ಮಂಗಳೂರಿನ ಮಂಗಳಕರವಾದ ಸ್ಥಿತಿಗೆ ತಡೆಕಟ್ಟಿ ಅಂಥಾ ಸ್ಥಿತಿಯನ್ನೇ ಕೊನೆಗಾಣಿಸುವ ಮೈಸೂರು ದರಬಾರಿನವರ ಮಂಗಳ ಪದದ ಹಾಡು ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಕೇಳಿಸಿತು. ಮೈಸೂರು ದರಬಾರಿನ ಇದೇನು ವರ್ತನೆ? ಇಷ್ಟೇನು ದುರಾಗ್ರಹ? ದೇಶೀಯ ಸಂಸ್ಥಾನ, ನಮ್ಮ ಸಂಸ್ಥಾನಿಕರು, ನಮ್ಮ ಸಂಸ್ಥಾನದ ಅಧಿಪತ್ಯಕ್ಕೆ ಸೇರಿದವರು, ಬಹುಕಾಲದಿಂದ ನಮ್ಮ ಬೆಂಬಲದವರು— ಹೀಗಿದ್ದರೂ ಬಹಳ ಪೂರ್ವಕಾಲದದಿಂದ ಇರುವಂಥಾ ನಮ್ಮ ಸಂಬಂಧವನ್ನು ಕಡಿದುಬಿಡುವರೋ—ಜಿಲ್ಲೆಯಲ್ಲಿ ತುಂಬಿದ ಈ ಭಾವವು ಮೊನ್ನೆ ಶನಿವಾರ ದಿನ ಕೂಡಿದ ಸಭೆಯಲ್ಲಿ ಪೂರ್ಣವಾಗಿತ್ತು.

ಮೈಸೂರು ದರಬಾರಿನ ಮಂತ್ರಿಗಳಾದ ಸರ್ ವಿಶ್ವೇಶ್ವರರಾಯರು ಮುಂಬಯಿ ಸರಕಾರದ ರೈಲ್ವೆ ಸೆಕ್ರೆಟರಿಯವರೊಡನೆ ಡಿಲ್ಲಿಗೆ ಹೋಟು ಹೋಗಿರುವರು, ಮಂಗಳೂರು ಹಾಸನ್ ರೈಲ್ವೆ ಪ್ರಸ್ತಾಪವನ್ನು ಇದ್ದ ಸ್ಥಿತಿಯಲ್ಲಿಯೇ ಬಿಟ್ಟು ಬಿಟ್ಟು ಮುಂಬಯಿ ಸರಕಾರದವರಿಂದ ಭಟ್ಕಳ ಬಂದರವನ್ನು ಪಡದು ಆ ಮಾರ್ಗವಾಗಿ ಮೈಸೂರು ರೈಲ್ವೆಯನ್ನು ಪಶ್ಚಿಮ ಕರಾವಳಿಗೆ ತಂದಿಳಿಸುವ ಏರ್ಪಾಡನ್ನು ಕೊನೆಗಾಣಿಸಲು ಡಿಲ್ಲಿಗೆ ಹೋಗಿರುವರು—ಎಂಬೀ ವರ್ತಮಾನವು ಇಲ್ಲಿ ಗೊತ್ತಾಗುತ್ತಲೇ ಬಹುಮಾನಪಟ್ಟ ಸದಾಶಿವ ಭಟ್ಟರೂ ಡಿಸ್ಟ್ರಿಕ್ಟ ರೈಲ್ವೆಯ ಕಮಿಟಿಯ ಪರವಾಗಿ ರಾವ್ ಬಹದ್ದೂರ್ ಎನ್. ಸುಬ್ಬರಾವರವರೂ ಇಂಡಿಯಾ ಸರಕಾರಕ್ಕೆ ಡಿಲ್ಲಿಗೂ ಮದ್ರಾಸ್ ಸರಕಾರದವರಿಗೂ ಈ ಜಿಲ್ಲಾ ಜನರ ಈ ವಿಷಯದಲ್ಲಿ ವಿಜ್ಞಾಪನೆಯನ್ನು ಕೇಳುವ ಮೊದಲು ತಮ್ಮ ಅಭಿಪ್ರಾಯವನ್ನು ಕೊಡಬಾರದೆಂತ ತಂತೀಮೂಲಕ ತಿಳಿಸಿರುತ್ತಾರೆ. ಮದ್ರಾಸ್ ಗವರ್ನರರವರು ಈ ಜಿಲ್ಲೆಯವರ ಅಭಿಪ್ರಾಯವನ್ನು ಕೇಳಿಕೊಂಡು ಈ ವಿಷಯ ಪರ್ಯಾಲೋಚಿಸುವೆವು ಎಂಬೀ ಭರವಸೆಯನ್ನು ಸಭೆ ಕೂಡುವ ಮೊದಲೇ ಮ॥ ರಾ॥ ಎನ್. ಸುಬ್ಬರಾವ್‌ರವರಿಗೆ ತಿಳಿಸಿರುವರು. ಇಂಥಾ ಭರವಸದ ವಚನಗಳನ್ನು ಇಂಡಿಯಾ ಸರಕಾರದವರಿಂದ ನಿರೀಕ್ಷಿಸುತ್ತಿರುವೆವು. ಸಭಾಧ್ಯಕ್ಷರಾಗಲು ಸಮ್ಮತಿಸಿದ ಮ॥ ಮೊರ್ಗನ್ ದೊರೆಗಳವರಿಗೆ ದೇಹಾಲಸ್ಯದ ಕಾರಣ ಸಭೆಗೆ ಬರಲು ಅನನುಕೂಲವಾದ್ದರಿಂದ ಮಾಜಿ ಡಿಸ್ಟ್ರಿಕ್ಟ ಜಡ್ಜರಾಗಿದ್ದ ದಿವಾನ್ ಬಹದ್ದೂರ್ ಮ॥ ರಾ॥ ರಾ॥ ಮುಂಡಪ್ಪ ಬಂಗೇರರವರ ಅಧ್ಯಕ್ಷತೆಯಲ್ಲಿ ಸಭಾಕಾರ್ಯಗಳು ನಡಿಸೋಣಾದವು. ಸ್ವರ್ಗಸ್ಥ ದಿವಾನ್ ಬಹದ್ದೂರ್ ಎನ್. ಶಿವರಾವ್ ಮತ್ತು ರಾವ್ ಸಾಹೇಬ ಬ್ರಿಟೊ ಮೊದಲಾದ ಗೃಹಸ್ಥರುಗಳು ಈ ರೈಲ್ವೆಯನ್ನು ಹಾಕಿಸುವ ವಿಷಯ ಪ್ರಾರಂಭ ಪ್ರಯತ್ನಗಳನ್ನು ನಡಿಸಿದರು. ಸುಮಾರು ೩೦ ಯಾ ೩೫ ವರುಷಗಳು ದಾಟಿದವು. ಮೈಸೂರು ಸಂಸ್ಥಾನಕ್ಕೂ ಪಶ್ಚಿಮ ಕರಾವಳಿಗೂ ಮಂಗಳೂರು ಅರಸಿಕೆರೆ ರೈಲ್ವೆ ಹಾದಿಯೇ ಅನುಕೂಲವಾದದ್ದು ಎಂತ ಸರ್ವರೂ ತಿಳಿದರು. ರೈಲ್ವೆಯನ್ನು ಹಾಕಿಸಿದರೆ ಮೈಸೂರು ಸಂಸ್ಥಾನಕ್ಕೂ ಮಂಗಳೂರಿಗೂ ನಡಿಯುವ ವ್ಯಾಪಾರದಿಂದ ಈ ರೈಲ್ವೆಯು ಲಾಭಕರವಾಗುವದೆಂತ ನಿರ್ಣಯಿಸಲ್ಪಟ್ಟಿತು. ಇಷ್ಟೇ ಅಲ್ಲ. ಈ ಹಾದಿಯನ್ನು ೧॥ ಲಕ್ಷ ರೂಪಾಯಿಗಳ ಖರ್ಚಿನಿಂದ ಸರ್ವೆ ಮಾಡಿಸಿದರು. ಮೈಸೂರು ದರಬಾರರವರೂ ಈ ಏರ್ಪಾಡಿಗೆನೇ ಅನುಕೂಲವಾಗಿರುವರೆಂತ ತಿಳಿಯಲಾಯಿತು. ಇಷ್ಟೆಲ್ಲ ಸಮಾಚಾರಗಳು ನಿಶ್ಚಯವಾದನಂತರ ಮೈಸೂರು ದರಬಾರಿನ ದಿವಾನ್ ಸಾಹೇಬರ ಸವಾರಿಯು ಇಲ್ಲಿಗೆ ಚಿತ್ತೈಸಿತು. ಅಂದೂ ದರಬಾರದವರು ಇದಕ್ಕೆ ಪ್ರತಿಕೂಲವಾಗಿರುವರೆಂಬುದು ತಿಳಿದು ಬರಲಿಲ್ಲ. ಇಷ್ಟೆಲ್ಲ ಖಂಡಿತವಾದ ಮೇಲೆ ಈ ಜಿಲ್ಲಾ ಜನರು ಇನ್ನೊಂದು ಹೆಜ್ಜೆ ಮುಂದುವರಿದರು. ಡಿಸ್ಟ್ರಿಕ್ಟ ಬೋರ್ಡ ಮೂಲಕ ರೈಲ್ವೆ ಸೆಸ್ಸನ್ನು ತ್ವರಿತವಾಗಿಯೇ ವಿಧಿಸಿಕೊಂಡರು, ಈಗಲೂ ಆ ಸೆಸ್ಸನ್ನು ತೆರುತ್ತಿದ್ದಾರೆ. ಮಂಗಳೂರು ಅರಸಿಕೆರೆ ರೈಲ್ವೆಯು ಇನ್ನು ಸದ್ಯದಲ್ಲಿಯೇ ನಿಶ್ಚಯವಾಗಿ ಬರುವದೆಂತ ಜನರೆಲ್ಲರೂ ಹಾರೈಸುತ್ತಿದ್ದಾಗ ನಮ್ಮೆಲ್ಲರ ಸಾಧನೆಯು ನೀರಿನಲ್ಲಿ ಮಾಡಿದ ಹೋಮದೋಪವಾಗಿ ಹೋಗುವಂತೆ ಪ್ರಕೃತ ದಿಲ್ಲಿಯವರೆಗೂ ಬೀರುತ್ತಿರುವ ದಿವಾನ್ ಸಾಹೇಬರವರ ಇಂದ್ರಜಾಲವನ್ನು ಕೇಳಿಕೊಂಡು ಇಲ್ಲಿ ಸರ್ವರೂ ಬೆರಗಾಗುತ್ತಿದ್ದಾರೆ. ಮೈಸೂರು ಸಂಸ್ಥಾನದಿಂದ ಪಶ್ಚಿಮ ಕರಾವಳಿಗೆ ರೈಲ್ವೆ ಸಂಬಂಧವು ಈ ಜಿಲ್ಲೆಯ ದ್ವಾರಾ ಏಕೆ ಆಗಬೇಕೆಂಬುದನ್ನು ಸ್ವದೇಶಾಭಿಮಾನಿಯಲ್ಲಿ ಸಂದರ್ಭಾನುಸಾರ ತಿಳಿಯ ಹೇಳಿರುತ್ತೇವೆ. ಬಹುಕಾಲದಿಂದ ಮೈಸೂರಿಗೂ ಈ ಕರಾವಳಿಗೂ ವ್ಯಾಪಾರದ ಹಾದಿಯು ಈ ಜಿಲ್ಲೆಯ ಮೂಲಕವೇ ಆಗಿರುವದು. ಈ ಜಿಲ್ಲಾ ಜನರು ಅನೇಕ ಸಹಸ್ರ ರೂಪಾಯಿಗಳನ್ನು ವೆಚ್ಚಮಾಡಿ ಮೈಸೂರು ಸಂಸ್ಥಾನದ ಮಲೆ ಪ್ರದೇಶಗಳಲ್ಲಿ ಕಾಫಿ ತೋಟ ಇತ್ಯಾದಿಗಳನ್ನು ಮಾಡಿಕೊಂಡು ಆ ಪ್ರಾಂತ್ಯಗಳನ್ನು ಫಲವತ್ತು ಪ್ರದೇಶಗಳನ್ನಾಗಿ ಮಾಡುತ್ತಿದ್ದಾರೆ. ಈ ಜಿಲ್ಲೆಯ ಕೂಲಿಯವರ ಪರಿಶ್ರಮದಿಂದ ಸಂಸ್ಥಾನದ ಹಲವು ಪ್ರಾಂತ್ಯಗಳು ಅಭಿವೃದ್ಧಿ ಸ್ಥಿತಿಗೆ ಬಂದಿವೆ. ಮೈಸೂರು ಸಂಸ್ಥಾನದ ಈ ವ್ಯಾಪಾರಕ್ಕೆ ಲಕ್ಷಾವಧಿ ಹಣವನ್ನು ಖರ್ಚ ಮಾಡಿಕೊಂಡು ಈ ಜಿಲ್ಲೆಯ ಸಾವುಕಾರರು ಹಲವು ಬಗೆಯ ಅನುಕೂಲತೆಗಳನ್ನು ಕಲ್ಪಿಸಿಕೊಂಡಿರುವರು. ಈ ರೈಲ್ವೆಯು ಬರುವಂಥಾ ಹಾದಿಯು ಭಟ್ಕಳ ರೈಲ್ವೆ ಹಾದಿಯಂತೆ ನಿರ್ಜನ ಪ್ರದೇಶವಲ್ಲ. ರೈಲ್ವೆಗೆ ಬೇಕಾದಷ್ಟು ಧರಾವಣೆಯನ್ನು ತುಂಬಿಸಿಕೊಡುವ ಫಲವತ್ತು ಪ್ರದೇಶಗಳಿಂದ ಕೂಡಿದ್ದಾಗಿದೆ. ಮೈಸೂರು ಸಂಸ್ಥಾನದಲ್ಲಿ ತುಂಬಿರುವ ವೈಷ್ಣವರಿಗೂ ಇತರರಿಗೂ ಪರಿಶುದ್ಧ ಯಾತ್ರಾಸ್ಥಳವಾಗಿ ಸಹಸ್ರ ಸಂಖ್ಯೆಯಲ್ಲಿ ಯಾತ್ರಿಕರನ್ನು ಆಕ್ಷಿಸುವ ಬರಮಾಡಿಕೊಳ್ಳುವಂಥಾ ಶ್ರೀ ಕೃಷ್ಣಸ್ವಾಮಿ ಕ್ಷೇತ್ರವು ಸಹ ಈ ಜಿಲ್ಲೆಯಲ್ಲಿಯೇ ಇರುತ್ತಾ ದಿವಾನ್ ಸಾಹೇಬರವರ ಈ ನವೀನ ಸಾಧನೆಗೆ ಯಾವ ಬಲವಾದ ಕಾರಣಗಳಿರುವವೆಂದು ತಿಳಿಯುವಂಥಾದ್ದು ಬಲು ಕಷ್ಟವೇ ಆಗಿರುವದು. ಮಂಗಳೂರು ಬಂದರವು ವರುಷದಲ್ಲಿ ಏರೆ ೧೬ ವಾರಗಳ ಕಾಲದಲ್ಲಿ ಹಡಗುಗಳಿಗೆ ಬಂದು ತಂಗಲು ಯೋಗ್ಯ ಸ್ಥಳವಲ್ಲವೆಂಬ ಅಲ್ಪ ಕಾರಣವನ್ನು ಪರ್ವತದಂತೆ ದೊಡ್ಡದಾಗಿ ಮಾಡಿಕೊಂಡು ಮೊದಲೇ ನಿಶ್ಚಿತವಾದ ಮಂಗಳೂರು ಹಾಸನ್ ರೈಲ್ವೆ ಹಾದಿಗೆ ಈಗ ವಿಘ್ನ ಪ್ರಯತ್ನಗಳನ್ನು ನಡಿಸಿ ವಿಶ್ವೇಶ್ವರರಾಯರು ವಿಘ್ನಗಳನ್ನು ತಂದೊಡ್ಡವದು ಎಂದೂ ಸರಿಯಲ್ಲ. ಮಂಗಳೂರು ಬಂದರಿನ ಪರಿಚಿತಿಯು ಮೈಸೂರು ದರಬಾರಿಗೆ ವಿಶ್ವೇಶ್ವರರಾಯರು ದಿವಾನಗಿರಿಯ ಮೊದಲಿನಿಂದಲೇ ಚನ್ನಾಗಿ ಗೊತ್ತಿದ್ದು ಈ ರೈಲ್ವೆ ಹಾದಿಗೆ ಬೇಕಾದ ತಯಾರಿಯು ನಡಿಯುವಂಥಾ ಕಳೆದ ೨೦ ಯಾ ೩೦ ವರುಷಗಳ ಕಾಲಗಳಲ್ಲಿ ಸುಮ್ಮನಿದ್ದು ಈಗ ಮಾತ್ರ ಈ ಕಾರಣವನ್ನು ತಂದೊಡ್ಡುವದು ಯಾರಿಗೂ ಯುಕ್ತವಲ್ಲವೆಂದ ಬಳಿಕ ಸಂಸ್ಥಾನದ ದರಬಾರಿನವರಿಗೆ ಅದು ಪ್ರಶಸ್ತವೇ? ಭಟ್ಕಳ ಬಂದರು ಹೆಚ್ಚಿನ ವಿಸ್ತೀರ್ಣವುಳ್ಳದ್ದು ಅಲ್ಲ. ಮಂಗಳೂರಿನಂತೆ ವ್ಯಾಪಾರಕ್ಕೆ ಅನುಕೂಲವಾದದ್ದು ರೈಲ್ವೆ ಹಾದಿಗೆ ಪಕ್ವವಾದದ್ದು ಅಲ್ಲ. ಇಲ್ಲಿ ನಾಲ್ಕಾರು ಕೋಟಿ ರೂಪಾಯಿಗಳ ಖರ್ಚ ಮಾಡಿ ರೇವನ್ನು ಮಾಡಿಕೊಂಡು ನಿರ್ಜನ ಮತ್ತು ಬಂಜರು ಪ್ರದೇಶಗಳ ಮಧ್ಯದಿಂದ ಭಟ್ಕಳ ರೈಲ್ವೆ ಹಾಕಿಸುವದರಿಂದ ಈ ರೈಲ್ವೆಯು ಹಾಸನ್ ಮಂಗಳೂರು ರೈಲ್ವೆಯಷ್ಟು ಲಾಭಕರವೂ ಆಗದು. ಹೀಗಿರುತ್ತಾ ಮಂಗಳೂರು ಹಾಸನ್ ರೈಲ್ವೆಯ ಮಾತನ್ನು ಅಲ್ಲಿಯೇ ಬಿಟ್ಟುಬಿಟ್ಟು ಈ ನೂತನ ರೈಲ್ವೆಯನ್ನು ಮೈಸೂರು ಸಂಸ್ಥಾನದವರಿಗೆ ಹಾಕಿಸುವದರಲ್ಲಿ ಹಟವೇನು? ಮೈಸೂರು ಸಂಪನ್ನ ಸಂಸ್ಥಾನ ಆದುದು ಸಂಪನ್ನತೆಯಿಂದಲೇ ಈಗಿನ ಕಾಲದಲ್ಲಿ ಸರ್ವ ಕಾರ್ಯಗಳೂ ಕೈಗೂಡುವದು ನಿಜ. ಆದರೆ ಈ ಸಂಪನ್ನತೆಯಿಂದ ಬಹಳ ದೀರ್ಘಕಾಲದ ಸಂಬಂಧಗಳನ್ನು ಕಡಿಮುಬಿಡುವದು ಸಂಸ್ಥಾನದ ದರಬಾರಿಗೆ ಬೇಕಾದ ಸಾಧನವಲ್ಲವೆಂತ ನಮ್ಮ ದೀನಭಾವದ ಸೂಚನೆಯಾಗಿದೆ. ಮೈಸೂರು ಸಂಸ್ಥಾನದ ಮಲೆನಾಡು ಪ್ರದೇಶಗಳ ಅಭಿವೃದ್ಧಿ, ಮೈಸೂರು ವಿಶ್ವವಿದ್ಯಾಪೀಠ, ಅಲ್ಲಿ ಕೈಗಾರಿಕೆಗಳ ಸ್ಥಾಪನೆಯ ಪ್ರಯತ್ನಗಳು ಇವೇ ಮೊದಲಾದ ದರಬಾರಿನವರು ಕೈಕೊಂಡ ಹಲವು ನೂತನ ಏರ್ಪಾಡುಗಳನ್ನು ಸಂಸ್ಥಾನದ ಪೂರ್ವ ಸ್ನೇಹಿತರೂ ದೀರ್ಘ ಕಾಲದ ಬಾಂಧವರೂ ಆದ ಈ ಜಿಲ್ಲೆಯವರು ಮನಸ್ಸಿನೆಯೆ ನೋಡಿಕೊಂಡಾದರೂ ತುಷ್ಟಿಪಡುವೆವೆಂತ ಹಾರೈಸಿಕೊಂಡಿರುವಾಗ ಮೈಸೂರು ಸಂಸ್ಥಾನದವರ ಈ ತಿರಸ್ಕಾರವನ್ನು ನೋಡಿಕೊಂಡು ತುಂಬಾ ವ್ಯಸನಪಡುವೆವಾದರೂ ಇನ್ನೂ ನಿರಾಶರಾಗಿರೆವು. ಮೊನ್ನೆ ಕೂಡಿದ ಸಭೆಯಲ್ಲಿ ಜಿಲ್ಲಾ ಜನರು ತಮ್ಮ ಹಾಲಹವಾಲುಗಳನ್ನು ವ್ಯಾಪಾರ ಪ್ರಭುಗಳಿಗೂ ಮದ್ರಾಸ್ ಸರಕಾರದವರಿಗೂ ಮೈಸೂರು ದರಬಾರಿಗೂ ತಾವು ಮಾಡಿದ ನಿರ್ಣಯಗಳ ಮೂಲಕ ಸೂಚಿಸಬೇಕೆಂತ ನಿರ್ಣಯಿಸಿರುವರು. ಈ ನಿರ್ಣಯಗಳು ಮೈಸೂರು ಸರಕಾರದವರಿಂದ ಸರಿ[illegible] ಮನ್ನಿಸಲ್ಪಟ್ಟು ತಮ್ಮನ್ನು ನಂಬಿರುವ ದಕ್ಷಿಣಕನ್ನಡಾ ಜಿಲ್ಲೆಯ ಪರವಾಗಿ ತಮ್ಮ ಕರ್ತವ್ಯವೇನೆಂಬುದನ್ನು ತಿಳಿದು ಹಾಸನ್ ಮಂಗಳೂರು ರೈಲ್ವೆಯನ್ನು ಹಾಕಿಸುವ ಕಾರ್ಯವನ್ನು ಪ್ರತಮಥಾ ನೆರವೇರಿಸಿಕೊಡುವದರಲ್ಲಿ ಭಾಗಿಗಳಾಗುವರೆಂದು ಕೋರುತ್ತೇವೆ.

ಸ್ಫುಟವಿಚಾರಗಳು.

೧. ಇಂಗ್ಲಾಂಡಿನಲ್ಲಿ ವರ್ತಮಾನ ಪತ್ರಿಕೆಗಳ ಗಾತ್ರವನ್ನು ಬಲವಂತದಿಂದ ಕಡಿಮೆ ಮಾಡಿಸಬೇಕೆಂದು ಬ್ರಿಟಿಷ ಸರಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಇಂಗ್ಲಾಂಡಿನಲ್ಲಿ ಪ್ರತಿ ಒಂದಕ್ಕೆ ಅರ್ಧಾಣೆಯಂತೆ ಮಾರುತ್ತಿದ್ದ ಪತ್ರಿಕೆಗಳ ಖರೀದಿಯು ಈಗ ದುಬಾರಿಯಾಗಿದೆ. ಇಂಗ್ಲಾಂಡ್ ದೇಶಕ್ಕೆ ಇನ್ನು ಮೇಲೆ ಛಾಪೆ ಆದ ಪುಸ್ತಕ, ದಿನಚರ್ಯ ಪತ್ರಿಕೆ, ವಾರಪತ್ರಿಕೆ, ಮಾಸಿಕ ಪತ್ರಿಕೆ ಮೊದಲಾದವುಗಳನ್ನು ಒಂದೊಂದು ಪ್ರತಿಗೆ ಹೆಚ್ಚಾಗಿ ತರಿಸಕೂಡದೆಂತ ವಿಧಾಯಕವಾಗಿರುವದು. ಇಂಗ್ಲಾಂಡಿನಲ್ಲಿ ಈ ವಿಧಾಯಕಗಳುಂಟಾಗಲು ಕಾಗದದ ಖರೀದಿಯು ವಿಶೇಷವಾಗಿ ಏರಿದ್ದೇ ಎಂದು ಹೇಳಲು ಪ್ರತ್ಯವಾಯ ತೋರುವದಿಲ್ಲ. ಕಾಗದದ ಖರೀದಿಯು ಇಂಗ್ಲಾಂಡಿನಲ್ಲಿ ಹೀಗೆ ಏರಿರುವ ಕಾಲದಲ್ಲಿ ಹಿಂದೂಸ್ಥಾನದಲ್ಲಿ ಕಾಗದ ತಯಾರಿಯನ್ನು ಮಾಡಿ ಹಿಂದೂಸ್ಥಾನದ ಸಂಪತ್ತನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಮತ್ತೊಂದು ವಿಧದಿಂದ ಹಿಂದೂಸ್ಥಾನದಲ್ಲಿ ಕಾಗದಕ್ಕೆ ಉಂಟಾಗಿರುವ ಕೊರತೆಯನ್ನು ತಪ್ಪಿಸಿಕೊಳ್ಳಬಹುದಾಗಿದೆ. ಹೀಗೆ ಮಾಡಲು ಹಿಂದೂಸ್ಥಾನದಲ್ಲಿ ಹಲವು ವಿಧದ ಅನುಕೂಲಗಳಿರುವವು. ಹಿಂದೂಸ್ಥಾನದಲ್ಲಿ ಹತ್ತಿಯು ಧಾರಾಳವಾಗಿ ಬೆಳೆಯುತ್ತಿದೆ. ಈಗ ಸೆಂಟ್ರಲ್ ಪ್ರೊವಿನ್ಸಿಗೆ ಸೇರಿದ ನಾಗಪುರದಲ್ಲಿ ವ್ಯವಸಾಯ ಶಾಸ್ತ್ರ ಶೋಧಕ ಸಂಘದಲ್ಲಿರುವ ರಸಾಯನ ಶಾಸ್ತ್ರಜ್ಞರು ಹತ್ತಿಕಡ್ಡಿಯಿಂದ ಕಾಗದಗಳನ್ನು ಮಾಡುವ ಉಪಾಯಗಳನ್ನು ಕಂಡುಕೊಂಡಿರುತ್ತಾರೆ. ಇದರಿಂದ ಬಂಗಾಳ ಮತ್ತು ಬರ್ಮಾ ಸರಕಾರಗಳವರಿಗೂ ತಮ್ಮ ಸೀಮೆಯಲ್ಲಿ ಈ ಹತ್ತೀಕಡ್ಡಿಯಿಂಧ ಕಾಗದಗಳನ್ನು ತಯ್ಯಾರಿಸಬೇಕೆಂಬ ಆಶೆ ಉಂಟಾಗಿರುವದು. ಹೀಗೆ ಸರಕಾರದವರ ಈ ಪ್ರಯತ್ನಗಳು ಕಾರ್ಯರೂಪುಗೊಂಡು ಉತ್ತಮ ಮಾದರಿಯ ಕಾಗದಗಳು ಹಿಂದೂಸ್ಥಾನದಲ್ಲಿಯೇ ತಯ್ಯಾರಾಗುವದಾದರೆ ಈ ಯುದ್ಧದಿಂದ ಹಿಂದೂಸ್ಥಾನಕ್ಕೆ ಬಂದಿರುವ ಕಾಗದದ ತುಟ್ಟಿಯು ಕಡಿಮೆಯಾಗಬಹುದು.

೨. ವರಿಷ್ಠ ಸರಕಾರದವರ ಮುಂದಿನ ವರುಷದ ಆದಾಯ ವ್ಯಯಗಳ ಪಟ್ಟಿಯು ಪ್ರಕಟವಾಗಿದೆ. ಯುದ್ಧಕಾಲ ಸಾಮ್ರಾಜ್ಯ ಸರಕಾರದವರಿಗೂ ಆ ಮೂಲಕ ಇಂಡಿಯಾ ಸರಕಾರದವರಿಗೂ ವಿಶೇಷವಾದ ಅಡಚಣೆಯ ಕಾಲವಾದ್ದರಿಂದ ಆದಾಯವನ್ನು ಹೆಚ್ಚಿಸುವರೆ ಏನೇನು ಏರ್ಪಾಡುಗಳಾಗುವವು ಮತ್ತು ಯಾವ್ಯಾವ ನವೀನ ತೆರಿಗೆಗಳು ವಿಧಿಸೋಣಾಗುವವು ಎಂಬ ಯೋಚನೆಯು ಇತ್ತು. ಜಮೀನುಗಳ ಮೇಲೆಯೂ ಉಪ್ಪಿನ ಮೇಲೆಯೂ ತೆರಿಗೆಗಳು ವಿಧಿಸೋಣಾಗಲಿಲ್ಲ ಎಂಬುದನ್ನು ತಿಳಿದು ಸರ್ವರೂ ತೃಪ್ತಿಪಡದೆ ಇರಲಾರರು. ಹಿಂದೀ ಜನಪದದ ಮೇಲೆ ಕೃಪಾದೃಷ್ಟಿಯನ್ನಿಟ್ಟು ಖಜಾನಾ ಮಂತ್ರಿಗಳಾದ ಬಹುಮಾನಪಟ್ಟ ಸರ್ ವಿಲಿಯಮ್ ಮೇಯರರವರು ನವೀನ ಆದಾಯಗಳನ್ನು ಬರಮಾಡಿಕೊಳ್ಳುವ ಹಂಚಿಕೆಗಳನ್ನು ಮಾಡಿರುತ್ತಾರೆ. ರೂಪಾಯಿ ೫೦,೦೦೦ ಮಿಕ್ಕಿದ ಆದಾಯದ ಮೊಬಲಗುಗಳ ಮೇಲೆ ಆದಾಯ ತೆರಿಗೆಯಲ್ಲದೆ ಸುಪರ್ ಟೆಕ್ಸ್ ಎಂಬ ನವೀನ ತೆರಿಗೆ, ರೈಲ್ವೆ ಗೂಡ್ಸ್ ಟ್ರೇನುಗಳಲ್ಲಿ ಹೋಗುವ ಸಾಮಗ್ರಿಗಳ ಮೇಲೆ ಮಯೋಜನದ ಫೀಸು ಅಲ್ಲದೆ ಇನ್ನೂ ಸರ್ ಚಾರ್ಜ ಎಂಬುವ ಹೆಚ್ಚಿನ ಫೀಸು, ರಫ್ತಾಗಿ ಹೋಗುವ ಸೆಣಬಿನ ನಾರಿನ ಮೇಲಣ ಸುಂಕವನ್ನು ದ್ವಿಗುಣ ಮಾಡುವದು, ಪರದೇಶಗಳಿಂದ ಈ ದೇಶಕ್ಕೆ ಬರುವಂಥ ವಸ್ತ್ರದ ಮೇಲೆ ಇರುವಂಥ ತೆರಿಗೆಯನ್ನು ಸೇಕಡಾ ೩॥ರಿಂದ ೭॥ಗೆ ಹೆಚ್ಚಿಸುವದು—ಈ ವಿಧಾನಗಳ ಮೂಲಕ ಆದಾಯಗಳನ್ನು ಹೆಚ್ಚಿಸಲು ನಿಶ್ಚಯಿಸಲ್ಪಟ್ಟಿರುತ್ತದೆ. ಪರದೇಶಗಳಿಂದ ಬರುವ ವಸ್ತ್ರದ ಮೇಲೆ ತೆರಿಗೆಯನ್ನು ಹೊರಿಸಿ ಇಲ್ಲಿಯ ವಸ್ತ್ರದ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂತ ಹಿಂದೀ ಪ್ರಜೆಗಳು ಬಹಳ ವರುಷಗಳಿಂದ ಸರಕಾರದವರನ್ನು ವಿಜ್ಞಾಪಿಸಿಕೊಳ್ಳುತ್ತಿದ್ದರು. ಮತ್ತು ಇಲ್ಲಿರುವ ಹತ್ತಿಯ ಎಕ್ಸೈಯಿಜ್ ಡ್ಯೂಟಿ ಎಂಬ ಸುಂಕವನ್ನು ತೆಗೆದುಹಾಕಬೇಕೆಂದು ಪದೇ ಪದೇ ವಿಜ್ಞಾಪಿಸಿಕೊಳ್ಳುತ್ತಿದ್ದರು. ಈ ಸುಂಕವನ್ನು ಈಗಿನ ಅಡಚಣೆಯ ಕಾಲದಲ್ಲಿ ವಜಾ ಮಾಡುವದು ಅನುಚಿತವೆಂದು ತೋರಿಬಂದರೂ ಪರದೇಶಗಳಿಂದ ಬರುವ ವಸ್ತ್ರದ ಮೇಲೆ ತೆರಿಗೆಯನ್ನು ಹಾಕಿದ್ದರಿಂದ ಬಹಳ ಕಾಲದಿಂದ ಇದ್ದ ಜನಪದದ ಕಾಂಕ್ಷೆಯನ್ನು ಸಲ್ಲಿಸಿ ಕೊಟ್ಟಂತಾಯಿತು. ಖರ್ಚಿನ ಬಾಬುಗಳಲ್ಲಿ ವಿಶೇಷವಾದವುಗಳು ಯಾವವು? ೧೦೦ ಮಿಲಿಯ ಪವನುಗಳ ಉಚಿತ ದ್ರವ್ಯಸಹಾಯವನ್ನು ಇಂಡಿಯಾ ಸರಕಾರದವರ ಉತ್ಪತ್ತಿಯಿಂದ ಸಾಮ್ರಾಜ್ಯ ಸರಕಾರದವರಿಗೆ ಕೊಡುವದು, ಸೇನೆಯ ಖರ್ಚನ್ನು ೨೨ ಮಿಲಿಯ ಪವನುಗಳಿಗೆ ಹೆಚ್ಚಿಸುವದು; ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಉಪಾಧ್ಯಾಯರ ತರಬೇತಿ ಬಗ್ಗೆ ಮತ್ತು ಸಂಬಳಗಳ ಬಡ್ತಿ ಬಗ್ಗೆ ಪ್ರತಿ ವರುಷದಲ್ಲಿಯೂ ೩೦೦,೦೦೦ ಪವನುಗಳ ಗ್ರೇಂಟನ್ನು ಕೊಡುವದು, ಈ ರೀತಿ ಖರ್ಚಿನ ಬಾಬುಗಳು ಮುಂದಿನ ವರುಷದ ಬಜೆಟಿನಲ್ಲಿ ವಿಶೇಷವಾದವುಗಳಾಗಿವೆ. ಸಾಮ್ರಾಜ್ಯ ಸರಕಾರದವರಿಗೆ ಯುದ್ಧದ ಬಗ್ಗೆ ಹಿಂದೂಸ್ಥಾನದ ಸರಕಾರವು ಕೊಟ್ಟ ಸಹಾಯವು ಬಹಳ ಕಡಮೆಯಾಗಿದೆಂಬ [illegible] ದ್ರವ್ಯ ನ್ಯಾಯದ ವಿಷಯದಲ್ಲಿ ಹಿಂದು ಮುಂದು ಆಲೋಚಿಸದೆ ಇಲ್ಲಿಯ ಸ್ಥಿತಿಗಳನ್ನು [illegible] ಕೆಲವು ಆಂಗ್ಲಪತ್ರಿಕೆಗಳ [illegible]

ಮೇಯುರರವರು ಸಮರ್ಪಕವಾದ ಉತ್ತರಗಳನ್ನು ಕೊಟ್ಟಿರುತ್ತಾರೆ. ಮತ್ತು ಮುಂದಿನ ವರುಷದ ಬಜೇಟಿನಲ್ಲಿ ಸಾಮ್ರಾಜ್ಯ ಸರಕಾರದ ಸಹಾಯದಬಗ್ಗೆ ಮಾಡಿರುವ ಏರ್ಪಾಡುಗಳನ್ನು ವಿವರಿಸಿ ಹೇಳಿರುತ್ತಾರೆ. ಸಾಮ್ರಾಜ್ಯದ ಸರಕಾರದವರ ಸಹಾಯದ ಬಗ್ಗೆ ಅನಿಯಮಿತ ಸಂಖ್ಯೆಯ "ಸ್ಪೆಶ್ಯಲ್ ವೋರ್ ಲೋನ್" ಎಂಬ ಹಣ ಸಾಲಪಡಕೊಳ್ಳುವ ಹುಂಚಿಕೆಯನ್ನು ಇಂಡಿಯಾ ಸರಕಾರದವರು ಏರ್ಪಡಿಸಿರುತ್ತಾರೆ. ಈ ಹುಂಚಿಕೆಯ ವಿವರವು ಇನ್ನು ಸದ್ಯದಲ್ಲಿ ಈ ಪತ್ರದ ಪ್ರಕಟಣೆಗಳ ಭಾಗದಲ್ಲಿ ಪ್ರಕಟಿಸಲ್ಪಡುವದು. ಇದರ ಮೂಲಕ ಎಲ್ಲಾ ವಿದ್ಯಮಾನಗಳ ಪ್ರಜಾವರ್ಗಕ್ಕೆ ಸಾಮ್ರಾಜ್ಯಸರಕಾರದವರಿಗೆ ತಮ್ಮ ಇಚ್ಛಾನುಸಾರ ಸಹಾಯ ಮಾಡಲು ಸಂದರ್ಭವು ದೊರಕುವದು. ಸಾಮ್ರಾಜ್ಯ ಸರಕಾರಕ್ಕೆ ಸಹಾಯವು ಇಷ್ಟೆ ಅಲ್ಲ. ಸಾಮ್ರಾಜ್ಯದ ಸರಕಾರದ ಬಗ್ಗೆ ಹಿಂದೂಸ್ಥಾನದ ಹೊರಗೆ ಕಾದಾಡುತ್ತಿರುವ ಹಿಂದೂಸ್ಥಾನದ ಸೇನಾ ಖರ್ಚನ್ನು ಹಿಂದೂಸ್ಥಾನದ ಸರಕಾರವೇ ವಹಿಸಿಕೊಂಡಿರುವದು, ಈ ಯುದ್ಧದ ಕಾರಣ ಹಿಂದೂಸ್ಥಾನದಲ್ಲಿ ಸೇನಾ ಖರ್ಚನ್ನು ಪ್ರತಿ ವರುಷದಲ್ಲಿ ಹೆಚ್ಚಿಸಿಯೂ ಯುದ್ಧದ ಸಲುವಾಗಿ ಪರ್ಷಿಯದಲ್ಲಿ ನಡಿಯುತ್ತಿರುವ ಖರ್ಚಿಗೆ ಒಂದು ಮಿಲಿಯ ಪವನುಗಳಿಗೆ ಮಿಕ್ಕಿದ ಮೊಬಲಗನ್ನು ಕೊಡುವ ಮೂಲಕವೂ. ಹಿಂದೂಸ್ಥಾನದ ಪರವಾಗಿ ಸಾಲವನ್ನು ಅಂಗ್ಲಾಳದಲ್ಲಿ ಸಂಗ್ರಹಿಸದೆಯೂ ಇನ್ನೂ ಹಲವು ವಿಧಾನಗಳಲ್ಲಿ ಮಿಲಿಯ ಸಂಖ್ಯೆಗಳಲ್ಲಿ ಯುದ್ಧಕ್ಕೆ ಹಣ ಸಹಾಯಮಾಡುವ ವಿವರವನ್ನು ಸರ್ ವಿಲಿಯಮರವರು ಹೇಳಿರುತ್ತಾರೆ. ಇಷ್ಟೆಲ್ಲ ಸಹಾಯವನ್ನು ಯಾವ್ಯಾವ ಮೂಲಗಳಿಂದ ಒದಗಿಸಿಕೊಡಲು ಸರಕಾರದವರು ಯೋಚಿಸಿರುವರೆಂಬುದನ್ನು ಇನ್ನೊಮ್ಮೆ ವಾಚಕರಿಗೆ ವಿವರವಾಗಿ ಹೇಳುವದು ಅಗತ್ಯವಾಗಿದೆ.

೩. ಈ ಸಂಸ್ಥಾನದಲ್ಲಿ ಪ್ರಜಾಜನರಿಗೆ ಆಗತ್ಯವಿರುವಷ್ಟು ಆಸ್ಪತ್ರಿಗಳು ಇಲ್ಲದ ಕೊರತೆಯನ್ನೂ ಈ ಬಗ್ಗೆ ನಿವಾರಣೋಪಾಯವನ್ನೂ ಸೂಚಿಸಿ ಸರಕಾರದವರು ತಮ್ಮ ಹುಕುಮನ್ನು ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕಳುಹಿಸಿಕೊಟ್ಟಿರುತ್ತಾರೆ. ೧೯೧೫ನೇ ವರುಷಾಂತ್ಯದಲ್ಲಿ ಸಂಸ್ಥಾನದಲ್ಲಿ ಒಟ್ಟಿಗೆ ೬೯೭ ಆಸ್ಪತ್ರಿಗಳು ಇದ್ದವು. ಅಂದರೆ ೬೦,೦೦೦ ಜನರಿಗೆ ಅಥವಾ ೬೦೦ ಚದರ ಮೈಲಿಗೆ ಒಂದು ಆಸ್ಪತ್ರೆಯಂತೆ ಇರುವದು. ಬಹಳ ಸ್ವಲ್ಪವಾಗಿರುವ ಈ ಆಸ್ಪತ್ರೆಗಳಿಂದ ಹಳ್ಳಿಗಳಲ್ಲಿರುವ ಜನರಿಗೆ ಸಹಾಯವು ದೊರಕುವದು ಅಸಾಧ್ಯ. ಆಸ್ಪತ್ರೆಗಳನ್ನು ನವೀನವಾಗಿ ಸ್ಥಾಪಿಸುವದೆಂದರೆ ಅದಕ್ಕೆ ಬೇಕಾದ ಕಟ್ಟೋಣ ವಗೈರೆಗಳನ್ನು ಸಂಗ್ರಹಿಸುವದು ಬೇಗನೆ ಸಾಧ್ಯವಲ್ಲ. ಆದ್ದರಿಂದ ಸರ್ಕೀಟು ಆಸ್ಪತ್ರೆಗಳನ್ನು ರಚಿಸುವ ಸೂಚನೆಯನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಮಾಡಿರುವರು. ಬೇಕಾದ ಔಷಧ ಮತ್ತು ಶಸ್ತ್ರಗಳ ಸಂಗ್ರಹದೊಡನೆ ಹಳ್ಳೀ ಹಳ್ಳಿಗೆ ಹೋಗಿ ಜನರ ಸಂಕಷ್ಟಗಳನ್ನು ತಿಳಕೊಂಡು ಬೇಕಾದ ಉಪಶಮನವನ್ನು ಈ ಮೂಲಕ ಕೊಡಲು ಸಾಧ್ಯವಾಗುವದೆಂದು ಸರಕಾರದವರ ಸೂಚನೆ ಇದೆ. ಈ ಏರ್ಪಾಡು ಹಿಂದೂಸ್ಥಾನದ ಇತರ ಕಡೆಗಳಲ್ಲಿ ಫಲಕಾರಿಯಾಗಿ ಪರಿಣಮಿಸಿರುವದು. ಈ ಏರ್ಪಾಡನ್ನು ಕೈಕೊಳ್ಳುವಂಥಾ ಆಸ್ಪತ್ರೆಯವರಿಗೆ ಬೇಕಾದ ಸಿಬಂದಿಯ ಅರ್ಧಾಂಶ ಖರ್ಚನ್ನು ಪ್ರೊವಿನ್ಸಿಯಲ್ ಫಂಡುಗಳಿಂದ ಸಾಧ್ಯವಾದ ರೀತಿಯಲ್ಲಿ ಕೊಡಬಹುದೆಂತ ಈ ಹುಕುಮಿನಲ್ಲಿ ಸೂಚಿಸೋಣಾಗಿರುವದು. ಈ ಜಿಲ್ಲೆಯ ಆಯಾ ಕಡೆಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಆಯಾ ಆಸ್ಪತ್ರೆಗಳ ಡಾಕ್ಟರುಗಳಿಗೆ ಹೋಗುವ ಸಂದರ್ಭವಿದ್ದರೆ ಆಸ್ಪತ್ರೆಗಳಿಗೆ ಕೆಲವು ದಿವಸಗಳ ತನಕ ಬಾಗಿಲು ಮುಚ್ಚಿಬಿಡುವ ವಾಡಿಕೆಯು ಇರುವಂಥಾ ಈ ಜಿಲ್ಲೆಯಲ್ಲಿ ಸರಕಾರದವರ ಈ ಹುಕುಮಿನ ಪ್ರಯೋಜನವನ್ನು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರು ಹೇಗೆ ಹೊಂದುವರೆಂಬುವದನ್ನು ನೋಡಬೇಕಿದೆ.

ಸ್ಥಳಿಕ—ಮಂಗಳೂರು.

ಪೆಂಟ್‌ಲೇಂಡ್ ಪೇಟೆಯಲ್ಲಿ ದಕ್ಷಿಣ ಭಾಗದ ಉಳಿದ ಅಂಶದಲ್ಲಿ ಮಾರ್ಗ ಇತ್ಯಾದಿಗಳನ್ನು ಹಾಕಿಸಿ ಮನೆಗಳನ್ನು ಕಟ್ಟಿಸಲು ಸ್ಥಳಗಳನ್ನು ಒದಗಿಸಿಕೊಡುವ ವಿಷಯ ರೂ. ೭೫೦೦ರದ ಅಂದಾಜನ್ನು ಸೆಂಕ್ಷನ್ ಮಾಡಿ ಬಂದ ಸರಕಾರದ ಹುಕುಮು ಇದೇ ತಿಂಗಳ ತಾ. ೮ರಲ್ಲಿ ಕೂಡಿದ ಇಲ್ಲಿಯ ಮುನ್ಸಿಪಲ್ ಸಭೆಯ ಮುಂದೆ ಪರ್ಯಾಲೋಚನೆ ಬಗ್ಗೆ ಇಡೋಣಾಗಿತ್ತು. ಈ ಹುಕುಮಿನ ಪ್ರಕಾರ ಈಗ ಪೆಂಟಲೇಂಡ್ ಪೇಟೆಯಲ್ಲಿ ಹಾಕಿಸೋಣಾಗಿರುವ ತೋಟಗಳ ಸಣ್ಣ ಮಾರ್ಗಗಳು ಇನ್ನು ಉಳಿದ ಅಂಶಗಳಲ್ಲಿ ಇರವು. ಮೊದಲೇ ಮುನ್ಸಿಪಲ್ ಕೊಳೆ ಹುಗಿಯಲ್ಪಟ್ಟಂಥಾ ಈ ಸ್ಥಳದ ಪಕ್ಕದಲ್ಲಿ ಶವಗಳನ್ನು ಹೂಳುವ ಸ್ಮಶಾನವೂ ಸಹ ಹತ್ತಿರವಿರುವದರಿಂದ ಕೊಳೆಯು ಜನರಿಗೆ ಬಾಧಕವಿಲ್ಲದ ರೀತಿ ಹರಿದು ಹೋಗುವಂತೆ ಚರಂಡಿಗಳೂ ಮತ್ತು ತೋಟಮಾರ್ಗಗಳೂ ಉತ್ತರ ಪಾರ್ಶ್ವದಲ್ಲಿ ಇರಗೊಳಿಸಿದಂತೆ ದಕ್ಷಿಣ ಪಾರ್ಶ್ವದಲ್ಲಿಯೂ ಸಹಾ ಹಾಕಿಸುವದು ಅಗತ್ಯವೆಂದು ಸರಕಾರದವರಿಗೆ ತಿರಿಗೊಮ್ಮೆ ಸೂಚಿಸಿ ಈ ತಿದ್ದುಪಡಿ ಬಗ್ಗೆ ಅವರಅನುಮತಿಯು ಪಡೆಯಲ್ಲು ಬರಕೊಳ್ಳುವದು ಯುಕ್ತವೆಂತ ಕೌನ್ಸಿಲಿನಲ್ಲಿ ನಿಶ್ಚಯಿಸೋಣಾಗಿರುತ್ತದೆ.

ಬೋಳಾರ ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡುವ ಮುನ್ಸಿಪಲ್ ಕೌನ್ಸಿಲಿನವರ ಸೂಚನೆಯು ಸರಕಾರದವರಿಂದ ಅಂಗೀಕರಿಸೋಣಾಗಲಿಲ್ಲ. ಕಂಕನಾಡಿ ಖಾಸಗಿ ಶಾಲೆಯನ್ನು ಅದರ ಮಾಲಿಕರಿಂದ ಮುನ್ಸಿಪಾಲಿಟಿಯವರು ತಮ್ಮ ಸ್ವಂತ ಹಕ್ಕಿನಿಂದ ಪಡೆಯುವ ವಿಷಯ ಸರಕಾರದವರ ಆಕ್ಷೇಪವು ಇರದು. ಆದರೆ ಈ ಶಾಲೆಯನ್ನು ಇತರ ಖಾಸಗಿ ಜನರು ತಕ್ಕೊಂಡು ನಡಿಸುವ ಸಂಭವಗಳು ತೋರಿಬಂದದ್ದರಿಂದ ಈ ವಿಷಯದ ಪರ್ಯಾಲೋಚನೆಯನ್ನು ಕೌನ್ಸಿಲಿನವರು ಹಾಕಿ ಇಟ್ಟಿರುವರು.

ಗೌಡಸಾರಸ್ವತ ಬ್ರಾಹ್ಮಣರ ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನಗಳ ಆಡಳಿತೆದಾರ ವ ಭಜಕವರ್ಗದವರಿಗೂ ಮತ್ತು ಈ ಜಾತಿಯ ಇಲ್ಲಿಯ ಸಂಪನ್ನರಿಗೂ ಇದೇ ಜಾತಿಯ ಬಡವನ ಸೂಚನೆಯೊಂದು ನಮ್ಮ ಬಳಿ ಬಂದಿದೆ. ಪ್ರತಿ ವರುಷದಲ್ಲಿಯೂ ಈ ಪಟ್ಟಣದಲ್ಲಿ ವಿಶೇಷವಾಗಿ ಪ್ಲೇಗು ಬೇನೆಗೆ ತುತ್ತಾಗುವಂಥವರು ಈ ಜಾತಿಯವರು. ಇವರು ನಡಿಸುವಂಥ ವ್ಯಾಪಾರವೃತ್ತಿ, ಇವರು ಉಳಕೊಳ್ಳುವಂಥಾ ಸೋಂಕು ತುಂಬಿದ ವಠಾರಗಳು, ವ್ಯಾಪಾರ ವೃತ್ತಿಯನ್ನು ನಡಿಸುವಾಗ ಇವರಲ್ಲಿ ಯಾವದಾದರೊಂದು ಆರೋಗ್ಯಕರವಾದ ವ್ಯವಸ್ಥೆಯಿಲ್ಲದೆ ಹಗಲು ರಾತ್ರಿಗಳ ಭೇದವಿಲ್ಲದೆ ಇವರು ವ್ಯರ್ಥಮಾಡುವಕಥಾ ಸಮಯ, ಬಹಳ ಭಯಂಕರವಾದ ಬಡ ಸ್ಥಿತಿಯ ಜನರು ಇವರಲ್ಲಿ ಸಹಾಯಹೀನರಾಗಿರುವಂಥಾದ್ದು, ಈ ಕಾರಣಗಳಿಂದ ಪ್ಲೇಗಿಗೆ ಈ ಜಾತಿಯವರೇ ಹೆಚ್ಚಾಗಿ ತುತ್ತಾಗುತ್ತಿದ್ದಾರೆ. ಹೀಗಾದರೂ ಜಾತಿಯ ಮುಖಂಡರ ದೃಷ್ಟಿಯು ಇನ್ನು ತಮ್ಮ ದೀನ ಬಾಂಧವರ ಕಡೆಗೆ ತಿರುಗದೆ ಇದ್ದದ್ದನ್ನು ನೋಡಿ ಈ ಬಡವನು ಬಹಳ ವ್ಯಸನವನ್ನು ಸೂಚಿಸಿರುವನು. ಕೆನರಾ ಹೈಸ್ಕೂಲನ್ನು ಸ್ಥಾಪಿಸಿದೆವು, ಬೇಂಕನ್ನು ನಡಿಸುತ್ತಿರುವೆವು, ದೊಡ್ಡ ದೊಡ್ಡ ತುಂಬಿದ ಭಂಡಾರಗಳ ದೇವಸ್ಥಾನಗಳು ನಮಗಿವೆ ಎಂತ ಕೆಲವರು ಹಿಗ್ಗಬಹುದು. ಆದರೆ ಈ ಶಾಲೆಯಲ್ಲಿ ಕೊಡೋಣಾಗುವ ಸೆಕೆಂಡರಿ ವಿದ್ಯಾಭ್ಯಾಸ, ಬೇಂಕಿನಿಂದ ದೊರಕಬಹುದಾದ ಸಹಾಯ ದೇವಸ್ಥಾನಗಳ ಆಡಳಿತೆ ವಿಚಾರ ಇವೆಲ್ಲವುಗಳಿಂದ ಜಾತಿಯ ಸಂಪನ್ನರು ಮತ್ತಷ್ಟು ಸಂಪತ್ತನ್ನು ಕಟ್ಟಿಕೊಳ್ಳುವ ಸಾಧನೆಗಳಿಗೆ ಅನುಕೂಲವಾಗುವದಲ್ಲದೆ ಜಾತಿಯಲ್ಲಿ ಹೊಟ್ಟೆತುಂಬ ಕೂಳಿಲ್ಲದ ಜನರಿಗೆ ಅಥವಾ ವೃತ್ತಿಶಿಕ್ಷಣವಿಲ್ಲದೆ ನಾನಾ ದುರವಸ್ಥೆಗಳಲ್ಲಿ ನರಳುವಂಥವರಿಗೆ ಗೌಡಸಾರಸ್ವತರ ಪ್ರಖ್ಯಾತಪಟ್ಟ ಈ ಸಂಸ್ಥೆಗಳಿಂದ ಇಷ್ಟರ ತನಕ ಯಾವುದಾದರೊಂದು ದೊಡ್ಡ ಉಪಕಾರವು ಆಗಲಿಲ್ಲವೆಂತ ಹೇಳಿ ಜಾತಿಯ ಬಡವರಿಗೆ ಆಗತ್ಯವಿರುವ ಹಲವು ಏರ್ಪಾಡುಗಳನ್ನು ಈ ಬಾತ್ಮೀದಾರರು ಸೂಚಿಸಿರುತ್ತಾರೆ. ಈ ಬಾತ್ಮೀಪತ್ರವು ಬಹಳ ವಿಸ್ತಾರವಾಗಿರುವದರಿಂದಲೂ ಅನೇಕ ಖಾಸಗಿ ವಿಷಯಗಳಿಂದ ಕೂಡಿರುವದರಿಂದಲೂ ಅದನ್ನು ಪ್ರಕಟಿಸಲು ಆಗದೆ ಅದರಲ್ಲಿ ಮುಖ್ಯವಿರುವ ಅಭಿಪ್ರಾಯವನ್ನು ಮಾತ್ರ ಗೌಡ ಸಾರಸ್ವತ ಬ್ರಾಹ್ಮಣ ವೃಂದಕ್ಕೆ ಈ ಮೂಲಕ ಸೂಚಿಸಿರುತ್ತೇವೆ. ಪ್ಲೇಗಿನ ಬಾಧೆಯನ್ನು ಆದಷ್ಟು ನಿಲ್ಲಿಸಲು ಈ ಜಾತಿಯವರು ಸರಕಾರದವರಿಂದ ಪಟ್ಟಣದ ವಿಸ್ತಾರಕ್ಕೆಂತ ವಿಂಗಡಿಸಲ್ಪಟ್ಟಿರುವ ಸ್ಥಳಗಳ ಕೆಲವಂಶವನ್ನು ಪಡದು ಪರಸ್ಪರ ಸಹಾಯಕ ಸಂಘಗಳ ಸೂತ್ರದ ಮೇಲೆ ಸಂಪನ್ನರಿಗೆ ಚಿಕ್ಕಾಸಾದರೂ ನಷ್ಟವಾಗದ ರೀತಿಯಲ್ಲಿ ಆರೋಗ್ಯಕರವಾದ ಮನೆಗಳನ್ನು ಕಟ್ಟಿಸುವ ಏರ್ಪಾಡನ್ನು ಕೈಕೊಳ್ಳಬಹುದೆಂಬುದು ಈ ಬಾತ್ಮೀದಾರರು ಬರಕೊಂಡ ಹಲವು ಏರ್ಪಾಡುಗಳಲ್ಲಿ ಮುಖ್ಯವಾದದ್ದಾಗಿರುವದು.

ಮದ್ರಾಸು ಯುದ್ಧಫಂಡಿನ ಸ್ಟಾಂಪು,—ಈ ಮೂಲಕ ಯುದ್ಧಫಂಡಿಗೆ ದ್ರವ್ಯಸಹಾಯವನ್ನು ಹೇಗೆ ಮಾಡಬಹುದೆಂಬ ಸೂಚನೆಗಳುಳ್ಳ ಮದ್ರಾಸು ಯುದ್ಧಫಂಡಿನ ಒಂದು ಸರ್ಕಲಾರನ್ನು ಕಲೆಕ್ಟರ ದೊರೆಗಳವರು ಈ ಪತ್ರ ಮೂಲಕ ಜನರಿಗೆ ತಿಳಿಸುವಂತೆ ನಮ್ಮ ಬಳಿ ಕಳುಹಿಸಿಕೊಟ್ಟಿರುವರು. ಮದ್ರಾಸು ಯುದ್ಧಫಂಡಿನ ಸ್ಟಾಂಪು—ಅಂಚೆ ಚೀಟಿನಂತೆಯೇ ಇದು ತಯ್ಯಾರಿಸಲ್ಪಡುವದು. 'ಮದ್ರಾಸು' ಯುದ್ಧಫಂಡಿನ ಹೆಸರಿನ ಚಿತ್ರ ಇತ್ಯಾದಿಗಳಿಂದ ಕೂಡಿ ಇದರ ನಕ್ಷೆಯು ಮದ್ರಾಸಿನ ಕಲಾಶಾಲೆಯ ಸುಪರಿಂಟೆಂಡೆಂಟರಾದ ಮಿ. ಡಬ್ಲ್ಯು. ಎಸ್. ಹೆಡವೆ ಯವರಿಂದ ತಯ್ಯಾರಿಸಲ್ಪಟ್ಟಿರುವದು. ಹೈದರಾಬಾದಿನ ನಿಜಾಮ ಸರಕಾರದವರು ಇದನ್ನು ತಮ್ಮ ಟಂಕಸಾಲೆಯಲ್ಲಿ ಧರ್ಮಾರ್ಥವಾಗಿ ಮುದ್ರಿಸುತ್ತಿದ್ದಾರೆ. ಇದನ್ನು ಜನರು ತಮ್ಮ ಕಾಗದ ಪತ್ರಗಳಿಗೆ ಅಂಟಿಸುವದರಿಂದ ತಾವು ಯುದ್ಧ ಫಂಡಿಗೆ ಸಹಾಯ ಮಾಡುತ್ತೇವೆಂಬದನ್ನು ಸೂಚಿಸಬಹುದು. ಮುಂಬಯಿಯಲ್ಲಿ ಇಂಥಾ ಸ್ಟಾಂಪಿನ ಮೂಲಕ ಒಂದು ಲಕ್ಷಕ್ಕೆ ಮಿಕ್ಕಿದ ಮೊಬಲಗನ್ನು ಸಂಗ್ರಹಿಸಿರುವರು. ಸರ್ವರಿಗೂ ಇದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿರುವದು. ಚೀಟುಗಳು ಪ್ರಕೃತ ತಯ್ಯಾರಾಗುತ್ತವೆ ೬೨ ಚೀಟುಗಳುಳ್ಳ ಪುಸ್ತಕ ರೂಪದಲ್ಲಿ ಇವುಗಳು ಮಾರೋಣಾಗುವವು. ಆಯಾ ಸ್ಥಳಿಕ ಯುದ್ಧಫಂಡಿನ ಲೇಡಿಸ್ 'ಡಿಪೋಗಳ' ಸೆಕ್ರಿಟರಿಗಳ ಕೂಡೆ ಇವುಗಳು ಕ್ರಯಕ್ಕೆ ದೊರಕುವವು. ಚೀಟುಗಳು ತಯ್ಯಾರಾದೊಡನೆ ಸರ್ವರಿಗೂ ತಿಳಿಸೋಣಾಗುವದು. ಅಂಚೆ ಚೀಟಿನ ಬದಲಿಗೆ ಈ ಚೀಟನ್ನು ಉಪಯೋಗಿಸಬಹುದೆಂಬ ತಪ್ಪು ಅಭಿಪ್ರಾಯವನ್ನು ಯಾರೂ ಮಾಡಕೂಡದೆಂಬುದಾಗಿ ಈ ಸರ್ಕಲಾರಿನಲ್ಲಿ ಸೂಚಿಸೋಣಾಗಿದೆ.

ಇದೇ ತಾ. ೧೦ರಿಂದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ಮಂಗಳೂರಿಂದ ಮುಲ್ಕಿಗೆ ಸ್ಪೆಶ್ಯಲ್ ಮೋಟರ್ ಸರ್ವಿಸ್ ತೆರೆಯುವರೆಂತಲೂ ಮಂಗಳೂರಿಂದ ಬೆಳಗ್ಗೆ ೧೦ ಗಂಟೆಗೆ ಸ್ಪೆಶ್ಯಲ್-ಬಸ್ ಬಿಡೋಣಾಗಿ ಮುಲ್ಕಿಯಿಂದ ಮಂಗಳೂರಿಗೆ ಮಧ್ಯಾಹ್ನ ೨. ಗಂಟೆಗೆ ಬಸ್ ಹೊರಡುವದೆಂತಲೂ ತಿಳಿಯುತ್ತೇವೆ. ಪೆಟ್ರೋಲಿಗೆ ದರವು ಹೆಚ್ಚಿದ ಕಾರಣ ದರಗಳನ್ನು ಈ ಮೊದಲು ಇದ್ದ ದರಗಳಿಗಿನೇ ಹೆಚ್ಚಿಸುವರು.

ಮ| ರಾ| ಅನಂತನ್ ನಾಯರರು ಪ್ರಿವಿಲೆಜ್ ರಜೆ ತಕ್ಕೊಂಡಿರುವದರಿಂದ ಆಕ್ಟಿಂಗ್ IV ಗ್ರೇಡ್ ತಹಸೀಲಧಾರರಾದ ಮ| ರಾ| ವಿ. ಎಸ್. ಕೃಷ್ಣರಾಯರು ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿಯೂ ಆಕ್ಟಿಂಗ್ V ಗ್ರೇಡ್ ತಹಸೀಲದಾರರಾಗಿರುವ ಮ| ಮರಿಯಪ್ಪ ನ್ಯಾಕರವರು ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿಯೂ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾದ ಮ| ರಾ| ಎಸ್. ಬಾಬುರಾಯರು ಆಕ್ಟಿಂಗ್ V ಗ್ರೇಡ್ ತಹಸೀಲದಾರರಾಗಿಯೂ ಕುಂದಾಪುರ ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿರುವ ಮ| ರಾ| ಪಿ. ಮಹಾಬಲೇಶ್ವರಯ್ಯನವರು ಆಕ್ಟಿಂಗ್ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುವರು.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೮ ಪ್ಲೇಗು ಮರಣಗಳಿದ್ದವು.

ಇನ್ನ ಗ್ರಾಮಸ್ಥರ ಹಾಲಹವಾಲೆ.

ಮಂಗಳೂರು ತಾಲೂಕು ಮುಲ್ಕಿ ಡಿವಿಜನಿಗೆ ಸೇರಿದ ಇನ್ನ ಗ್ರಾಮಸ್ಥರ ಮಕ್ಕಳಿಗೆ ಶಾಲೆಗೆ ಹೋಗಬರುವ ಮತ್ತು ಇತರ ನೂರಾರು ಪ್ರಯಾಣಸ್ಥರ ಉಪಯೋಗದ ಬಗ್ಗೆ, ಮುಲ್ಕಿ ನದಿಗೆ ಕೂಡುವ ಪಾಸ್ಪಟ್ಟ ಎಂಬ ಉಪನದಿಗೆ ಸುಮಾರು ಇನ್ನೂರು ರೂಪಾಯಿ ತಗಲುವ ಒಂದು ಕಾಲುದಾರಿ ಸಂಕವನ್ನು ಹಾಕಿಸಬೇಕಾಗಿ ತಾ. ೧೫—೩—೧೫ರಲ್ಲಿ ಶಾಲೆಗಳ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರಾದ ಮ| ರಾ| ಪಂಜಮಂಗೇಶರಾಯರು ಇನ್ನಕ್ಕೆ ಬಂದಾಗ ಸದರಿ ಸ್ಥಳವನ್ನು ತೋರಿಸಿ ಪ್ರಾರ್ಥಿಸಿದ್ದಕ್ಕೆ ತಾನು ಆದಷ್ಟು ಪ್ರಯತ್ನಪಡುವೆನೆಂದು ಅಭಯವಿತ್ತ ಪ್ರಕಾರ ಅದೇ ದಿವಸ ಅವರ ಆಫೀಸ್ ಮೂಲಕ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರರಾದ ಮ| ರಾ| ರಘುನಾಥಯ್ಯನವರಿಗೆ ಒಂದು ಅರ್ಜಿಯನ್ನು ಅರ್ಪಿಸಿದೆವು.

ಸದರಿ ಇನ್ಸ್‌ಪೆಕ್ಟರವರು ತನ್ನ ಶಿಫಾರಸನ್ನು ಬರೆದು ಆಗಲೇ ಪ್ರೆಸಿಡೆಂಟರವರಿಗೆ ಕಳುಹಿಸಿದ್ದರು. ಪ್ರೆಸಿಡೆಂಟರವರು ಇತ್ತಕಡೆಯ ಮೆಂಬರರಾದ ಮ| ರಾ| ಕೇಸುಶೆಟ್ರಿಗೂ ಮ| ರಾ| ಭವಾನಿರಾಯರಿಗೂ ತನಿಖೆ ಬಗ್ಗೆ ಅರ್ಜಿಯನ್ನು ಕೂಡಲೇ ಕಳುಹಿಸಿದ್ದರು. ತಾ. ೬—೬—೧೫ರಲ್ಲಿ ಡಿಸ್ಟ್ರಿಕ್ಟ್ ಬೋರ್ಡು ತಾಲೂಕು ಬೋರ್ಡು ಮೆಂಬರರಾದ ಮ| ರಾ| ಕೇಸುಶೆಟ್ರವರು ಸದರಿ ಸ್ಥಳಕ್ಕೆ ಬಂದು ಗ್ರಾಮಸ್ಥರನ್ನೊಡಗೂಡಿ ತನಿಖೆ ಮಾಡಿ ತಕ್ಕ ಅಭಯವನ್ನಿತ್ತು ಹೋಗಿದ್ದರು. ಸುಮಾರು ಎರಡು ಮೂರು ಮಳೆಗಾಲ ದಾಟಿದರೂ ಯಾವದೊಂದು ಹುಕುಂ ಇದ್ದಿಲ್ಲ.

ಪುನಃ ತಾ. ೧೧—೯—೧೬ರಲ್ಲಿ ಗ್ರಾಮಸ್ಥರ ಪ್ರತಿನಿಧಿಯವರೊಬ್ಬರು ಸದರಿ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರಿಗೇನೇ ಇನ್ನೊಂದು ಹೊಸ ಅರ್ಜಿಯನ್ನು ಕಳುಹಿಸಿದ್ದಕ್ಕೆ ಅದಕ್ಕವರು ಸೀದಾ ಪ್ರೆಸಿಡೆಂಟರವರಿಗೇನೇ ಬರೆಯಿರಿ ಎಂದು ಹುಕುಮನ್ನು ಕೊಟ್ಟಿದ್ದರು. ಹಾಗೆಯೇ ಕಳೆದ ಒಕ್ಟೋಬರ ತಿಂಗಳಲ್ಲಿ ಸೀದಾ ಪ್ರೆಸಿಡೆಂಟರವರಿಗೇನೇ ರವಾನಿಸಿದ ನಂತರ ಹೊಸ ಮೆಂಬರರಾದ ಮ| ರಾ| ಬೋಳ ಮಾಧವರಾಯರ ಕೈಯಲ್ಲಿ ಸದರಿ ಅರ್ಜಿಯು ಪುನಃ ತನಿಖೆ ಬಗ್ಗೆ ಬಂದದೆಂದು ವರ್ತಮಾನ ಕೇಳುತ್ತೇವೆ. ಇವರ ಹತ್ತರ ಗ್ರಾಮದ ಪ್ರತಿನಿಧಿಗಳಾದ ಒಬ್ಬರು ಪ್ರಸ್ತಾಪಿಸಿದ್ದಕ್ಕೆ ತಾನು ಮಾರ್ಚ ತಿಂಗಳಿಗೇನೇ ಸದರಿ ಸ್ಥಳಕ್ಕೆ ಬಂದು ತನಿಖೆಮಾಡಿ ಹೊಸ ಬಜೆಟ್ಟಿಗೆ ಇಟ್ಟು ಈ ವರ್ಷ ಆದಷ್ಟು ಪ್ರಯತ್ನಮಾಡಿ ನೆರವೇರಿಸಿಕೊಡುವೆನೆಂಬ ಅಭಯವನ್ನು ಹೇಳಿರುತ್ತಾರಂತೆ. ಸದರಿ ಮೆಂಬರರಿಗೆ ಇಲ್ಲಿ ಅನೇಕ ಆಸ್ತಿಗಳು ಇವೆ. ಗ್ರಾಮದ ಪರಿಚಿತಿ ಈ ಮೊದಲೇ ಚೆನ್ನಾಗಿ ಗೊತ್ತಿರುತ್ತದೆ. ಬಹುಶಃ ಇವರು ನೆರವೇರಿಸಿಕೊಡುವರೆಂಬ ನಿರೀಕ್ಷೆಯಲ್ಲಿದ್ದೇವೆ.

ಈ ವರ್ಷದ ಜಮಾಬಂದಿ ಸಮಯದಲ್ಲಿ ಮಿ॥ ಕಲೆಕ್ಟರ್ ದೊರೆಗಳವರು ಸರ್ಕೀಟು ಇಲ್ಲಿಗೆ ಬೆಳಸುವರೆಂಬ ವರ್ತಮಾನ ಕೇಳಿ ಸಂತೋಷಪಟ್ಟೆವು. ಅಗ್ಗೆ ಈ ಸ್ಥಳವನ್ನು ತೋರಿಸಿ ಹಾಲಹವಾಲೆಯನ್ನು ಹೇಳಬೇಕೆಂದಿದ್ದೆವು. ನಮ್ಮ ದುರಾದೃಷ್ಟದಿಂದ ದೊರೆಗಳು ಬರಲೇ ಇಲ್ಲ.

ಮುಖ್ಯವಾಗಿ ಈ ಸಂಬಂಧ ಕಳೆದ ತಿಂಗಳಲ್ಲಿ ಬಹುಮಾನಪಟ್ಟ ಕೆ. ಸದಾಶಿವ ಭಟ್ಟರವರು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಿದ ಕ್ರಮಕ್ಕೆ ಅನುಸಾರವಾಗಿ ಮ| ರಾ| ಮಾಧವರಾಯರೂ ತಾಲೂಕು ಬೋರ್ಡಿನವರೂ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನವರೂ ಸದರಿ ಸಾಂಕುವನ್ನು ನೆರವೇರಿಸಿಕೊಟ್ಟು ಹತ್ತು ಮೂವತ್ತು ಶಾಲಾ ಮಕ್ಕಳನ್ನೂ ನೂರಾರು ಪ್ರಯಾಣಿಕರನ್ನೂ ಬಹುಮಾನಪಟ್ಟ ಸದರಿ ಭಟ್ಟರವರನ್ನೂ ಸಂತೋಷಿಸಬೇಕಾಗಿ ತಮ್ಮ ಪತ್ರಮೂಲಕ ಪ್ರಾರ್ಥಿಸುತ್ತೇವೆ.

ಇನ್ನ ಗ್ರಾಮಸ್ಥರಲ್ಲೊಬ್ಬ.

ನೋಟೀಸು.

ದಕ್ಷಿಣ ಕನ್ನಡಾ ಒಫಿಸಿಯಲ್ ರಿಸೀವರರ ಕೋರ್ಟಿನಲ್ಲಿ.

I. P. $\frac{40}{1916}$ (ಡಿಸ್ಟ್ರಿಕ್ಟ್ ಕೋರ್ಟ I. P. $\frac{1}{16}$)

ಉಳ್ಳಾಲ ಅಪ್ಪಕಿಣಿ—ಅರ್ಜಿದಾರ.

ಎದ್ರು

ಮಂಜೇಶ್ವರ ಅರ್ಜಪ್ಪಮಲ್ಯ—ರೆಸ್ಪಾಂಡೆಂಟ್.

ಸದರಿ ದಿವಾಳಿ ಅರ್ಜಿಯಲ್ಲಿ ರೆಸ್ಪಾಂಡೆಂಟರ ಬಾಬ್ತು ಕೆಳಗೆ ನಮೂದಿಸಿದ ಇನ್ಸೂರ್ ಪೋಲಿಸಿಯನ್ನು ಕೆಳಗಣ ಶರ್ತಕ್ಕೆ ಒಳಪಟ್ಟು ಆಫಿಸಿಯಲ್ ರಿಸೀವರರು ಕದ್ರಿ ರಸ್ತೆಯಲ್ಲಿರುವ ಅವರ ಆಫೀಸಿನಲ್ಲಿ 1917ನೇ ಇಸವಿ ಮಾರ್ಚ ತಿಂಗಳ ತಾರೀಕು 15ನೇ ಮಧ್ಯಾಹ್ನ ನಂತರ 2 ಘಂಟೆಗೆ ಬಹಿರಂಗವಾಗಿ ಏಲಂ ಮಾಡುವರು ಎಂತ ಈ ಮೂಲಕ ಪ್ರಕಟಿಸೋಣವಾಗುತ್ತದೆ.

ಶರ್ತ:—ದರಖಾಸ್ತುದಾರನ ಹೆಸರಲ್ಲಿ ಮೂರು ಮಾರು ಕಾಯಂ ಆದ ಕೂಡಲೆ ದರಖಾಸ್ತಿನ ಐವಜು ಕೂಡಲೆ ಕೊಡುವದಲ್ಲದೆ, ನಂತರ ಕ್ರಯಚೀಟು ವಗೈರೆ ಖರ್ಚು ಕ್ರಯಗಾರನೇ ಸಹಿಸಿಕೊಳ್ಳತಕ್ಕದ್ದು.

ಪೋಲಿಸಿಯ ವಿವರ.

ರೆಸ್ಪಾಂಡೆಂಟ್ ಮಂಜೇಶ್ವರ ಅರ್ಜಪ್ಪ ಮಲ್ಯನು ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಸ್ಯೂರೆನ್ಸ್ ಕಂಪನಿ ಲಿಮಿಟೆಡ್ ಈ ಕಂಪೆನಿಯಲ್ಲಿ ರೂಪಾಯಿ 3000ಕ್ಕೆ ಪಡದ ನಂಬ್ರ $\frac{[illegible]}{1\text{-}11\text{-}[illegible]}$ ನೆ ಪ್ಲ್ಯಾನ್ ಪೋಲಿಸಿ. ಸದರಿ ಪೋಲಿಸಿ ಬಾಬತು ವರುಷ 1ರ 2 ಕಂತುಗಳಿಂದ ಪ್ರತಿ ಕಂತಿಗೆ ರೂಪಾಯಿ 46—2—0ರಂತೆ ಕೊಡತಕ್ಕ ಪ್ರೀಮಿಯಂ ಆಖೈರ ಕಂತಿನ ವರೇಗೆ ಅಂದರೆ 29—9—16ನೆ ವರೇಗಿನದ್ದು ಸಂದಾಯವಾಗಿಯದೆ. ಪೋಲಿಸಿನ ತಾರೀಕಿನ ಲಾಗಾಯತು ಸದರಿ ಕಂತಿನಿಗೆ ಸಂದ ಅಂದಾಜು ರೂಪಾಯಿ 2167—2—0. ಇದರ ಅಂದಾಜು ಮೌಲ್ಯ ರೂಪಾಯಿ 3000. ಈ ಪೋಲಿಸಿಯ ಬಾಬತು ಲೋನ್ [illegible] ಕೂಡಾ ಏಲಂ ಕರಿಯಲಿಕ್ಕೆ ರೂಪಾಯಿ 500.

ಮಂಗಳೂರು,
ತಾ. 3ನೆ ಮಾರ್ಚ 1917.

B. M. [illegible]
O[illegible]

ಅಧ್ಯಕ್ಷರಾಗಿದ್ದು ಸುಶಿಕ್ಷಿತ ಯುವಕರು ಸರಕಾರದವರಿಂದ ಕೊಡೋಣಾದ ಈ ಒಳ್ಳೇ ಸಂದರ್ಭವನ್ನು ಕಳಕೊಳ್ಳದ ಹಾಗೆ ಕೂಡಿದ ಸಭಿಕರನ್ನು ಪ್ರಬೋಧಿಸಿ ಹಾಗೇ ಸೇನೆಗೆ ಬರಿಸಿಕೊಂಡಿರುತ್ತಾರೆ. ಇವರು ನ್ಯಾಯವಿಧಾಯಕ ಸಭೆಯ ಮೆಂಬರರೂ ಪ್ರಖ್ಯಾತ ಬಂಧ್ಯರರೂ ಆಗಿರುತ್ತಾರೆ.

ಹಿಂದೂಸ್ಥಾನದಲ್ಲಿ ವರ್ಷ ೧೯೧೬ ೭೫,೦೦೦ ಟನ್‌ಗಳ ಕಾಗದ ಖರ್ಚಾಗುತ್ತದೆಂದು ಗೊತ್ತಾಗಿದೆ. ಇದರಲ್ಲಿ ೨೫,೦೦೦ ಟನ್‌ಗಳಷ್ಟು ಕಾಗದವು ಹಿಂದೂಸ್ಥಾನದಲ್ಲಿಯೇ ತಯಾರಾಗುವದು.

ಮುಂಬಾಯಿ ಹೈಕೋರ್ಟಿನಲ್ಲಿ ಕಕ್ಷಿಗಾರರು ದಾವೆಗೆ ಸಂಬಂಧಪಟ್ಟ ಹಣವನ್ನು ಯುದ್ಧಫಂಡಿಗೆ ಕೊಟ್ಟುಬಿಟ್ಟ ಮೇಲುಪಂಕ್ತಿಯನ್ನು ಕಲ್ಕತ್ತೆಯ ಸ್ಮಾಲ್‌ಕಾಸ್ ಕೋರ್ಟಿನ ಒಂದು ದಾವೆಯ ಕಕ್ಷಿಗಾರರೂ ಅನುಸರಿಸಿರುವರು. ಕಲ್ಕತ್ತೆಯ ಇಬ್ಬರು ಪ್ರಖ್ಯಾತ ಬಂಗಾಲಿಗಳಿಗೆ ರೂ. ೧೫೦೦ ಕ್ರಯಬಾರುವ ಕಲ್ಲಿದ್ದಲಿನ ಸಂಬಂಧ ಒಂದು ವಾಗ್ವಾದವಿತ್ತು. ಕೋರ್ಟಿನವರ ಸೂಚನೆಯ ಪ್ರಕಾರ ವಾದಿ ಪ್ರತಿವಾದಿಯರು ಈ ಹಣದಲ್ಲಿ ೩೦೦ ರೂಪಾಯಿ ವಿನಹಾ ಉಳಿದ ಹಣವನ್ನು ಯುದ್ಧಫಂಡಿಗೆ ಕೊಟ್ಟುಬಿಟ್ಟಿರುತ್ತಾರೆ.

ಕಳೆದ ವಾರ ಕೂಡಿಬಂದ ಸಂಯುಕ್ತ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಸಿ. ವೈ. ಚಿಂತಾಮಣಿಯವರು ಒಂದು ಮಸೂದೆಯನ್ನು ತಂದಿದ್ದರು. ಬ್ರಾಹ್ಮಣ, ಕಾಯಸ್ಥ ಮತ್ತು ಬನಿಯ ಜಾತಿಯವರನ್ನು ಪೋಲಿಸ್ ಫೌಜಿನ ಹಿಂದಾನೊಂದು ಶಾಖೆಗೆ ಕಡಿಮೆ ಪ್ರಮಾಣದಲ್ಲಿ ಸೇರಿಸಬೇಕೆಂದು ಪೋಲಿಸ್ ನಿಬಂಧನೆಯಲ್ಲಿರುವ ಕ್ರಮವನ್ನು ರದ್ದುಪಡಿಸಬೇಕೆಂಬುದೇ ಮಾನ್ಯ ಚಿಂತಾಮಣಿಯವರ ಮಸೂದೆಯ ಮುಖ್ಯ ತಾತ್ಪರ್ಯವಾಗಿತ್ತು. ಪೋಲಿಸ್ ಇನ್ಸ್‌ಪೆಕ್ಟರ್ ಜನರಲರಾದ ಮಾನ್ಯ ಮೊರಿಸರು ಈ ಮಸೂದೆಗೆ ಉತ್ತರವಾಗಿ "ಹಿಂದೂಸ್ಥಾನದಲ್ಲಿ ಜಾತಿಭೇದವು ಅಳಿದುಹೋಗುವದು ಪ್ರಯಾಸಕರ. ಬ್ರಾಹ್ಮಣರ ಮೇಲೆ ಪೋಲಿಸ್ ಖಾತೆಯಲ್ಲಿ ಮಿತಿಯನ್ನಿಟ್ಟಿರುವದಕ್ಕೆ ಅವರು ಕೆಟ್ಟ ಅಧಿಕಾರಿಗಳಾಗಿ ವರ್ತಿಸಿದ್ದೇ ಕಾರಣವಾಗಿದೆ. ಸೇನೆಯಲ್ಲಿದ್ದ ಬ್ರಾಹ್ಮಣರಿಂದ ಇದೇ ನಿಷಿದ್ಧಸ್ಥಿತಿಯು ಮುಂದಿಟ್ಟಾಗಿದೆ. ಬ್ರಾಹ್ಮಣರ ವಿಷಯವಾಗಿರುವ ಇದೇ ನಿಷಿದ್ಧಸ್ಥಿತಿಯನ್ನು ಪೋಲಿಸ್ ಫೌಜಿಗೂ ತಗಲಿಸಿಯದೆ" ಎಂದು ಹೇಳಿದರು. ಬ್ರಾಹ್ಮಣರನ್ನು ಈ ಖಾತೆಗೆ ಸೇರಿಸಿಕೊಳ್ಳುವ ಮಿತಿಯನ್ನಿಟ್ಟಿರುವದಕ್ಕೆ ಅವರು ಹೇಳಿರುವ ಮತ್ತೊಂದು ಕಾರಣವೇನೆಂದರೆ — "ಅವರು ಉತ್ತಮ ಕುಲದವರು. ಇತರ ವರ್ಣದವರು ಅವರಿಗೆ ಒಂದು ಹಿರಿದ ಮರ್ಯಾದೆಯಿಂದ ಕಾಣುವರು. ಇದು ಪೋಲಿಸ್ ಫೌಜಿನ ಸ್ಥಿತಿಗತಿಗೆ ಪ್ರತಿಬಂಧಕವಾಗಿದೆ" ಈ ಸಂಬಂಧದಲ್ಲಿ ಜುಡಿಶಿಯಲ್ ಸೆಕ್ರೆಟರಿಯಾಗಿರುವ ಮಾನ್ಯ ಒಡೊನೆಲ್ಲರವರು, ಈ ನಿಬಂಧನೆಗಳು ಇಚ್ಛಾನುಸಾರವಾಗಿ ಮಾಡಲ್ಪಟ್ಟಿರುವಂಥವುಗಳಲ್ಲ. ಅವು ಅನುಭವದಿಂದ ಸಂಗ್ರಹಿಸಲ್ಪಟ್ಟವುಗಳು ಎಂದು ಹೇಳಿರುವರು. ಮಾನ್ಯ ಮೊರಿಸರು ಕಡೆಗೆ ಈ ನಿಬಂಧನೆಯಲ್ಲಿ ಬ್ರಾಹ್ಮಣರಿಗೆ ಇಟ್ಟಿರುವ ಮಿತಿಯನ್ನು ತೆಗೆದು ಹಾಕಬಹುದು. ಆದರೆ ಈ ವಿಷಯ ಗುಟ್ಟಿನಿಂದಲೇ ಅಪ್ಪಣೆಕೊಡೋಣಾಗುವದು ಎಂತ ಹೇಳಿರುವರು. ಮಾನ್ಯ ಚಿಂತಾಮಣಿಯವರ ಈ ಮಸೂದೆಯನ್ನು ಪ್ರಜಾಪ್ರತಿನಿಧಿ ಮೆಂಬರರಲ್ಲಿ ಕೆಲವರು ಅನುಮೋದಿಸಿದರೂ ಕಡೆಗೆ ಬಹುಮತ ಸಿಕ್ಕದ್ದರಿಂದ ಈ ಮಸೂದೆಯು ಬಿದ್ದುಹೋಯಿತು.

ಇದೇ ತಾ. ೫ರಲ್ಲು ಕಲ್ಕತ್ತೆಯ ಪಟ್ಟಣ ಸಭಾಸದನದಲ್ಲಿ ಒಂದು ಮಹಾಸಭೆ ಕೂಡಿ ಬಂದಿದ್ದಿತು. ಈ ಸಭೆಗೆ ಬಾಬು ಸುರೇಂದ್ರನಾಥ ಬೆನರ್ಜಿಯವರು ಅಧ್ಯಕ್ಷರಾಗಿದ್ದು ಯುದ್ಧದನಂತರ ಉಂಟಾಗುವ ಸಾಮ್ರಾಜ್ಯರಚನೆಯಲ್ಲಿ ಹಿಂದೂಸ್ಥಾನಕ್ಕೆ ಸೆಲ್ಫ್ ಗವರ್ನಮೆಂಟನ್ನು ಕೊಡುವ ಏರ್ಪಾಡು ಮಾಡುವದು ಮತ್ತು ಹಿಂದೀ ಯುವಕರು ಸೇನೆಗೆ ಸೇರಿಕೊಳ್ಳುವ ವಿಷಯದಲ್ಲಿ ಚರ್ಚೆ ಮಾಡಿದರು. ಈ ಸಭೆಯಲ್ಲಿ ಸುಮಾರು ೭೦೦೦ ಮಂದಿ ಹಾಜರಿದ್ದರು. ಹಿಂದೂಸ್ಥಾನಕ್ಕೆ ವಾಸ್ತವರೂಪದ ಸ್ವರಾಜ್ಯವನ್ನು ಕೊಡುವಂಥಾ ಕಾಲವು ಈಗ ತಾನೇ ಬಂದದೆ ಮತ್ತು ಸುಶಿಕ್ಷಿತ ಹಿಂದೂಸ್ಥಾನದ ಆಕಾಂಕ್ಷೆಯು ಇದರಿಂದ ತೃಪ್ತಿಯಾಗುವದೆಂತ ಅಧ್ಯಕ್ಷರು ಹೇಳಿರುವರಲ್ಲದೆ ಲಕ್ನೋದಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ಹಿಂದೂ ಮುಸಲ್ಮಾನರು ಏಕತ್ರ ಕೂಡಿ ತಯಾರಿಸಿದ ಭಾವಿಸ್ವರಾಜ್ಯದ ಯೋಜನೆಯನ್ನು ಕಾರ್ಯರೂಪಗೊಳಿಸಬೇಕೆಂದು ಹಿಂದೂಸ್ಥಾನವು ಏಕಕಂಠದಿಂದ ಕೇಳುತ್ತದೆ. ಇಂಥಾ ಸ್ವರಾಜ್ಯ ಯೋಜನೆಯು ಭಾಷಾಪ್ರತಿಜ್ಞೆಯು ಕಣ್ಣಮುಂದೆ ಬಂದ ನಿಂತ ದೇಶದಲ್ಲಿ ನಾವು ಈಗ ಇದ್ದೇವೆ ಮತ್ತು ಹಿಂದೂಸ್ಥಾನವು ಪರಾಧೀನತ್ವದಿಂದ ಮುಕ್ತಳಾಗಿ ಅದಕ್ಕೆ ಸೆಲ್ಫ್ ಗವರ್ನಿಂಗ್ ಡೊಮಿನಿಯನ್‌ಗಳಂತೆಯೇ ಸಾಮ್ರಾಜ್ಯದಲ್ಲಿ ಸಮಾನ ಬಾಧ್ಯತೆಯು ಕೊಡೋಣಾಗುವದೆಂಬ ಭರವಸವು ತನಗೆ ತುಂಬಾ ಇದೆ ಎಂತ ಅಧ್ಯಕ್ಷರು ಭಾಷಣದಲ್ಲಿ ಹೇಳಿರುವರು. ಕೊನೆಗೆ ಅಧ್ಯಕ್ಷರು, — ಹಿಂದೀ ಸ್ವಯಂ ಸೇನೆಯಲ್ಲಿ ಸೇರಿಕೊಳ್ಳುವರೆ ಸಾವಿರಾರು ಯುವಕರು ಮುಂದೆ ಬಂದು, ತಮ್ಮ ಸ್ವದೇಶವನ್ನು ಕಾಪಾಡಿಕೊಳ್ಳಲಿಕ್ಕಾಗುವ ಹಾಗೆ ರಾಜ್ಯಕಾರಭಾರವನ್ನು ಮಾಡಿಕೊಳ್ಳುವ ಮೊದಲೇ ಈ ಸೇನೆಯಲ್ಲಿ ತರ್ಬೇತು ಹೊಂದಬೇಕೆಂಬದಾಗಿ ಯುವಕರ ಮನ ಕರಗುವಂತೆ ವಿಜ್ಞಾಪಿಸಿಕೊಂಡಿರುತ್ತಾರೆ. ಅನಂತರ ಸಭೆಯಲ್ಲಿ ಲಕ್ನೋ ನಗರದಲ್ಲಿ ಕೂಡಿದ ಕಳೆದ ರಾಷ್ಟ್ರೀಯ ಸಭೆಯ ಸ್ವರಾಜ್ಯ ಯೋಜನೆಗಳು ಆಗಲಿಕ್ಕಿರುವಂಥಾ ಸಾಮ್ರಾಜ್ಯ ರಚನೆಯ ಕಾಲದಲ್ಲಿ ಕಾರ್ಯರೂಪಗೊಳ್ಳಬೇಕು, ಯುದ್ಧದನಂತರ ಸಾಮ್ರಾಜ್ಯ ವ್ಯವಸ್ಥೆ ಸಂಬಂಧ ಕೂಡಲಿಕ್ಕಿರುವ ಸಭೆಯಲ್ಲಿ ಹಿಂದೀ ಪ್ರಜಾ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು, ಸೇನೆಗೆ ಸೇರಿಕೊಳ್ಳುವಂಥಾ ಹಿಂದೀಗಳಿಗೆ ವಂಶ ಪ್ರಪಂಚವನ್ನು ಮಾಡದೆ ಯೂರೋಪಿಯನರಂತೆಯೇ ಸಮಾನ ಸಂಬಳ, ಅಧಿಕಾರಗಳನ್ನು ಕೊಡುವಂತೆ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ಠರಾವುಗಳು ಪಾಸಾಗಿರುವವು.

ಪಂಜಾಬಿನಲ್ಲಿ ೧೯೧೫-೧೬ನೇ ಇಸವಿಗಳಲ್ಲಿ ದೈನಿಕ ಪತ್ರಗಳು ೨೪; ವಾರಪತ್ರಗಳು ೮೦; ಮಾಸಿಕ ಪತ್ರಿಕೆಗಳು ೧೪೧ ಇದ್ದವು. ಈ ಒಂದು ವರ್ಷದವಧಿಯಲ್ಲಿ ರಾಜಕೀಯ ದೃಷ್ಟಿಯಿಂದ ವಿರುದ್ಧವಾದ ಲೇಖನಗಳನ್ನು ಪ್ರಕಟಿಸಿದವೆಂಬ ಸಬಬಿನ ಮೇಲೆ ಪಂಜಾಬು ಸರಕಾರದವರು ೧೮ ಪತ್ರಗಳನ್ನು ಎಚ್ಚರಿಸಿರುತ್ತಾರೆ. ಪತ್ರಿಕೆಗಳಲ್ಲಿ ಪ್ರಕಟಿಸಿದ ಲೇಖನಗಳೂ ಪ್ರಕಟನೆಗಳೂ ಆಕ್ಷೇಪಕರವಾದುವೆಂಬೀ ಸಬಬುಗಳ ಮೇಲೆ ೧೭ ಪತ್ರಗಳನ್ನು ಗದರಿಸಿರುತ್ತಾರೆ. ಇಂಡಿಯನ್ ಪಿನಲ್ ಕೋಡಿನ ೨೪೩ನೇ ಸೆಕ್ಷನಿನ ಮೇಲೆ ೧೪ ವರ್ತಮಾನ ಪತ್ರಗಳ ಮೇಲೆಯೂ ೩ ಪ್ರೆಸುಗಳ ಮೇಲೆಯೂ ದಾವೆ ನಡಿಸಿರುತ್ತಾರೆ. ಒಂದು ವರ್ತಮಾನ ಪತ್ರಿಕೆಯ ಮೇಲೆ ಮೂರಾವರ್ತಿ ದಾವೆ ನಡಿಸೋಣಾಗಿರುವದು.

ಸೂರತಿನ "ಜೈನ ವಿಜಯ" ಪ್ರೆಸಿನ ಮ್ಯಾನೇಜರಿಂದ ಸ್ಥಳೀಕ ಸರಕಾರದವರು ೫೦೦ ರೂಪಾಯಿಯನ್ನು ಜಾಮೀನು ತಕ್ಕೊಂಡು ಕೆಲವು ಸಮಯದನಂತರ ಅದನ್ನು ಸರಕಾರಕ್ಕೆ ಸೇರಿಸಿಕೊಂಡು ಪುನಃ ೧೫೦೦ ರೂಪಾಯಿ ಜಾಮೀನು ಕೇಳಿದ್ದರಿಂದ ಸದರಿ ಮ್ಯಾನೇಜರು ಈ ಸಂಬಂಧ ಮುಂಬಾಯಿ ಹೈಕೋರ್ಟಿನಲ್ಲಿ ಮನವಿ ಮಾಡಿಕೊಂಡಿದ್ದರು. ಹೈಕೋರ್ಟಿನಲ್ಲಿ ಈ ಮನವಿಯ ವಿಚಾರ ನಡೆದು ಮನವಿಯು ಅಲ್ಲಗಳೆಯಲ್ಪಟ್ಟಿತು.

ಮುಂಬಾಯಿಯಲ್ಲಿ ಹೋಮ್‌ರೂಲು ಲೀಗಿನ ಮೆಂಬರರ ಪ್ರೋತ್ಸಾಹದಿಂದ ಈ ವರೆಗೆ ೫೦೦ ಮಂದಿ ಯುವಕರು ಸೇನೆಗೆ ಬರಿಸಿಕೊಂಡಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಸಂಸ್ಥಾನದಲ್ಲಿರುವ ಅಂಗಹೀನರಾದ ಮಕ್ಕಳ ಶಿಕ್ಷಣಕ್ಕೆ [illegible] ಅಭಿವೃದ್ಧಿಗೊಳಿಸಬೇಕೆಂಬದಾಗಿ [illegible] ಸರಕಾರದವರು ಕಳೆದ ಜುಲಾಯಿ ತಿಂಗಳಲ್ಲಿ ಕೆಲವು ಸೂಚನೆಗಳನ್ನು ಮದ್ರಾಸ್ ಸರಕಾರದವರು ಈಗತಾನೇ ಜಾರಿಗೆ ತರುವ ಹಾಗಿದ್ದಾರೆ. ಕಳೆದ ಖಾನೆಸುಮಾರಿ ಲೆಕ್ಕದ ಪ್ರಕಾರ ಈ ಸಂಸ್ಥಾನದಲ್ಲಿ ೩೩,೧೯೩ ಕುರುಡು ಮತ್ತು ೩೩,೪೯೦ ಮೂಗ ಮಕ್ಕಳಿದ್ದರು. ಈ ಪೈಕಿ ಶಾಲೆಗೆ ಹೋಗತಕ್ಕ ಮಕ್ಕಳ ಸಂಖ್ಯೆ ಶೇಕಡಾ ೧೫ ಎಂತ ಲೆಕ್ಕಿಸಿದರೆ ಹೆಚ್ಚು ಕಡಿಮೆ ೫೦೦೦ ಕುರುಡರೂ, ೫೦೦೦ ಕಿವುಡರೂ ಶಾಲೆಯಲ್ಲಿರಬೇಕಿತ್ತು, ಆದರೆ ಈಗ ಶಾಲೆಗಳಲ್ಲಿರುವ ಕುರುಡರ ಸಂಖ್ಯೆ ೧೪೭, ಕಿವುಡರ ಸಂಖ್ಯೆ ೧೧೮ ಮಾತ್ರವಾಗಿದೆ. ಅಂಗಹೀನರ ಶಿಕ್ಷಣ ಸಂಬಂಧ ಶಾಲೆಯ ಪುಸ್ತಕಗಳಲ್ಲಿ ಕೆಲವು ಪಾಠಗಳನ್ನು ಸೇರಿಸಿ ಜನಸಾಮಾನ್ಯರ ದೃಷ್ಟಿಯನ್ನು ಅಂಗಹೀನರ ಶಿಕ್ಷಣ ಕಡೆಗೆ ಎಳೆಯುವದು ಸಾಧ್ಯವೆಂದು ಡೈರೆಕ್ಟರವರು ಸೂಚಿಸಿರುವರು. ಡೈರೆಕ್ಟರ ಈ ಸೂಚನೆಯನ್ನು ಸರಕಾರದವರು ಒಪ್ಪಿರುತ್ತಾರಲ್ಲದೆ, ನಿರ್ಗತಿಕರಿಗೆ ದಯೆಯನ್ನು ತೋರಿಸುವ ವಿಷಯವಾಗಿ ಶಾಲೆಗಳಲ್ಲಿ ಭಾಷಣಗಳನ್ನು ಕೊಡುವದರಿಂದ ಮತ್ತು ಅಂಗಹೀನರು ತಯಾರಿಸಿದ ವಸ್ತುಗಳನ್ನು ಶಿಕ್ಷಣ ವ ಇತರ ಪ್ರದರ್ಶನಗಳಲ್ಲಿ ಪ್ರದರ್ಶಿಸುವ ಏರ್ಪಾಡು ಮಾಡುವದರಿಂದ ಈ ಉದ್ದೇಶವನ್ನು ಮತ್ತಷ್ಟು ಫಲದಾಯಕವಾಗಿ ಸಾಧಿಸಿಕೊಳ್ಳಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಕುರುಡರಿಗೆ ಪಾಠ ಹೇಳಿಕೊಡುವ ಬ್ರೈಲ್ ಪದ್ಧತಿಯನ್ನೂ ಈ ಸಿದ್ಧಾಂತಗನುಸಾರವಾದ ಪಾಠ ಪುಸ್ತಕಗಳನ್ನೂ ದೇಶಭಾಷೆಯಲ್ಲಿ ತಯಾರಿಸುವ ಬಗ್ಗೆ ಸರಕಾರದವರು ೧೯೧೪ನೇ ಇಸವಿಯಲ್ಲಿ ಮಂಜೂರು ಮಾಡಿದ ಹಣಕ್ಕೆ ಕೂಡಿಸಿ ಈಚೆಗೆ ಪುನಃ ರೂ. ೩೦೦೦ವನ್ನು ಕೊಡುವರೆ ಮಂಜೂರು ಮಾಡಿರುತ್ತಾರೆ. ತಮಿಳ ಮತ್ತು ಮಲೆಯಾಳ ಭಾಷೆಯಲ್ಲಿ ಬ್ರೈಲ್ ಪದ್ಧತಿಯ ಅಕ್ಷರಗಳು ತಯಾರಿಸಲ್ಪಟ್ಟು ಪಾಲಂಕೋಟೆಯ ಸಿ. ಎಮ್. ಎಸ್ ಕುರುಡರ ಶಾಲೆಯಲ್ಲಿ ಉಪಯೋಗಿಸಲ್ಪಡುತ್ತಿದೆ. ಅಂಗಹೀನರ ಶಾಲೆಗಳಲ್ಲಿ ಕೆಲವು ಕಾಲದ ವರೆಗೆ ಇದ್ದ ಒಬ್ಬ ಅಂಗಹೀನನು ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಸಮರ್ಥನಾಗುವನೆಂಬ ಆಧಾರದ ಮೇಲೆ ಇಂಥವನು ಶಾಲೆ ಬಿಟ್ಟ ನಂತರ ಅವನಿಗೆ ಯಾವದಾದರೊಂದು ಕೆಲಸಗಳನ್ನು ಕೊಡುವ ಏರ್ಪಾಡು ಮಾಡುವದು ಒಳ್ಳೇದೆಂತ ಡೈರೆಕ್ಟರರೂ ಸರಕಾರದವರೂ ಆಲೋಚಿಸಿರುತ್ತಾರೆ. ಸಂಸ್ಥಾನದಲ್ಲಿ ಈಗ ಸದ್ಯ ಕುರುಡರ ಬಗ್ಗೆ ೪ ಶಾಲೆಗಳೂ ಕಿವುಡರ ಬಗ್ಗೆ ೨ ಶಾಲೆಗಳೂ ಇರುವವು. ಇಂಥಾ ಶಾಲೆಗಳಿಗೆ ತಮ್ಮ ಅಂಗಹೀನರಾದ ಮಕ್ಕಳನ್ನು ಕಳುಹಿಸ ಮನಸ್ಸಿಲ್ಲದ ಹೆತ್ತವರು ಮಕ್ಕಳನ್ನು ಶಾಲೆಗೆ ಕಳುಹಿಸುವ ಹಾಗೆ ರೆವಿನ್ಯೂ ಮತ್ತು ವೈದ್ಯ ಆಫೀಸರರೂ ಸಂದರ್ಭ ಬಿದ್ದರೆ ಪೋಲಿಸ್ ಆಫೀಸರರೂ ಪ್ರೋತ್ಸಾಹಿಸಬಹುದೆಂದು ಡೈರೆಕ್ಟರರು ಸರಕಾರಕ್ಕೆ ಸೂಚಿಸಿದರು. ಆದರೆ ಸರಕಾರದವರು ರೆವಿನ್ಯೂ ಮತ್ತು ಮೆಡಿಕಲ್ ಆಫೀಸರರು ಈ ವಿಷಯದಲ್ಲಿ ಕೈಹಾಕಿದರೆ ಪ್ರಯೋಜನ ಬರಬಹುದೆಂದೂ ಪೋಲಿಸ್ ಆಫೀಸರರನ್ನು ಈ ಸಂದರ್ಭದಲ್ಲಿ ಕೈಹಾಕಬಿಡುವದು ತಪ್ಪೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಇಂಥಾ ಶಾಲೆಗೆ ಸೇರುವ ಮಕ್ಕಳಿಗೆ ಪ್ರಯಾಣದ ಖರ್ಚನ್ನು ಕೊಡಬೇಕೆಂಬ ಡೈರೆಕ್ಟರ ಸೂಚನೆಗೆ ಸರಕಾರದವರು ಕೇವಲ ಬಡವರ ಮಕ್ಕಳಿಗೆ ಮಾತ್ರ ಇಂಥಾ ಖರ್ಚನ್ನು ಕೊಡಬಹುದೆಂಬದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಲೋಕಲ್ ಫಂಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ಇಂಥಾ ಶಾಲೆಗಳನ್ನು ತೆರೆಯುವರೆ ಸಹಾಯ ಮಾಡುವದರಿಂದ ಅಂಗಹೀನರ ಶಾಲೆಗಳು ಹೆಚ್ಚಾಗಬಹುದೆಂದು ಸರಕಾರದವರ ಅಭಿಪ್ರಾಯ. ಅಂಗಹೀನರ ಶಾಲೆಗಳಲ್ಲಿ ಕಲಿಸುವ ಬಗ್ಗೆ ತರ್ಬೇತಾಗುವ ಉಮೇದ್ವಾರನಿಗೆ ರೂ. ೧೫ ವೇತನ ಕೊಡಬೇಕೆಂದೂ ಅವನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ನಂತರ ಇಂಥಾ ಪ್ರತಿ ಉಪಾಧ್ಯಾಯನಿಗೆ ರೂ. ೧೦೦ ಬಹುಮಾನವಾಗಿ ಕೊಡಬೇಕೆಂದೂ ಡೈರೆಕ್ಟರರು ಸೂಚಿಸಿರುವರು. ಡೈರೆಕ್ಟರ ಈ ಸೂಚನೆಗಳನ್ನೆಲ್ಲಾ ಸರಕಾರದವರು ಅಂಗೀಕರಿಸಿ ಡೈರೆಕ್ಟರವರಿಂದ ಈ ಸಂಬಂಧದಲ್ಲಿ ಕಾಲಂಕುಶವಾದ ಸೂಚನೆಗಳನ್ನು ಕೇಳುತ್ತಾರೆ.

ಸಂಸ್ಥಾನದ ಮ್ಯುನಿಸಿಪಾಲಿಟಿಗಳ ಸೆನಿಟರಿ ಇನ್ಸ್‌ಪೆಕ್ಟರರಿಗೆ ಆಯಾ ಮ್ಯುನಿಸಿಪಾಲಿಟಿಯ ಜನಸಂಖ್ಯೆಯ ಮೇಲೆ ಆಧರಿಸಿ ರೂ. ೩೦ರಿಂದ ೮೦ರ ವರೆಗೆ ಸಂಬಳ ಕೊಡಬಹುದೆಂಬ ಸಂಬಳದ ದರವನ್ನು ಮದ್ರಾಸ್ ಸರಕಾರದವರು ೫ ವರ್ಷಗಳ ಹಿಂದೆ ಮಾಡಿದ್ದರು. ಆದರೆ ಈ ಏರ್ಪಾಡು ಸರಿಯಾಗಿ ಪರಿಣಮಿಸದ್ದರಿಂದ ಈಗ ಆಯಾ ಮ್ಯುನಿಸಿಪಾಲಿಟಿಗಳಿಂದ ಈ ಸಂಬಂಧದಲ್ಲಿ ಬಂದ ಸೂಚನೆಗಳನ್ನು ಸರಕಾರದವರು ಮಾನ್ಯ ಮಾಡಿ ಸೆನಿಟರಿಗಳ ಸಂಬಳದ ದರವು ಸರ್ಗಿಸಿದ ಪ್ರಕಾರವಾಗಿರಬೇಕೆಂದು ಹುಕುಂ ಮಾಡಿರುತ್ತಾರೆ. ೨೫,೦೦೦ ದ ಮೇಲಿನ ಜನಸಂಖ್ಯೆ ಇರುವ ಎಲ್ಲಾ ಮ್ಯುನಿಸಿಪಾಲಿಟಿಗಳಲ್ಲಿ ಸೆನಿಟರಿ ಇನ್ಸ್‌ಪೆಕ್ಟರರಿಗೆ ಕೆಲಸಕ್ಕೆ ಸೇರುವಾಗ ಸಿಕ್ಕುವ ಸಂಬಳ ರೂ. ೨೫. ಮತ್ತು ವರ್ಷ ೧ಕ್ಕೆ ರೂ. ೧ರಂತೆ ೫ ವರ್ಷದ ವರೆಗೆ ಸಂಬಳವು ಏರುವದು. ಅನಂತರ ರೂ. ೪೦ ಸಂಬಳ ಆಗುವ ತನಕ ವರ್ಷಕ್ಕೆ ೨ರಂತೆ ಏರುವದು. ಜನಸಂಖ್ಯೆಯು ೨೫,೦೦೦ಕ್ಕೆ ಕಡಿಮೆ ಇರುವ ಮ್ಯುನಿಸಿಪಾಲಿಟಿಗಳಲ್ಲಿ ಪ್ರಥಮ ಸಂಬಳವು ೨೫ ಮತ್ತು ೧೫ ವರ್ಷದ ವರೆಗೆ ವರ್ಷಕ್ಕೆ ರೂ. ೧ರಂತೆ ಏರುವದು, ಅನಂತರ ರೂ. ೬೦ರ ವರೆಗೆ ವರ್ಷಕ್ಕೆ ೨ರಂತೆ ಏರುವಂತೆ ಏರ್ಪಾಡು ಮಾಡಿರುತ್ತಾರೆ.

ಗಿರ್ಮಿಟ್ ಕೂಲಿಪದ್ಧತಿಯನ್ನು ನಿಷೇಧಿಸುವ ಮದ್ರಾಸಿನ ಸಂಘದವರ ಇನ್ನೊಂದು ಸಭೆಯು ಇದೇ ತಾ. ೪ನೇ ಸಾಯಂಕಾಲ ಗೋಖಲೆ ಸಭಾಸದನದಲ್ಲಿ ಕೂಡಿಬಂದಿತ್ತು. ಈ ಸಭೆಗೆ ಮದ್ರಾಸಿನ ಹಿಂದೀ ಪ್ರಮುಖ ಮುಖಂಡರುಗಳಲ್ಲದೆ ಮಿ. ಸಿ. ಎಸ್. ಆಂಡ್ರೂಸರೂ, ಮಿ| ಪೋಲಕರೂ ಬಂದಿದ್ದರು. ಸಭೆಯಲ್ಲಿ ಮಿ| ಪೋಲಕರು ಅಧ್ಯಕ್ಷರಾಗಿದ್ದ ಟ್ರಿನಿದಾದ್, ಬ್ರಿಟಿಷ ಗಿಯಾನ್ನ ಫಿಜಿ ಮೊದಲಾದ ದ್ವೀಪಗಳಿಗೆ ಈ ಗಿರ್ಮಿಟ್ ಪದ್ಧತಿಯ ಪ್ರಕಾರ ಹೋಗುವ ಕೂಲಿಗಳಿಗಿರುವ ತೊಂದರೆಗಳನ್ನು ವಿವರಿಸಿ ಈ ಪದ್ಧತಿಯನ್ನು ಸರಕಾರದವರು ಇನ್ನೂ ೫ ವರ್ಷಗಳ ವರೆಗೆ ನಿಲ್ಲಿಸುವದಿಲ್ಲ ಎಂಬ ವರ್ತಮಾನದ ಮೇಲೆ ಹಿಂದೂಸ್ಥಾನದಲ್ಲಿ ಉಂಟಾದ ಚಳವಳಿಯಿಂದ ಈಗ ಈ ಪದ್ಧತಿಯನ್ನು ಬೇಗನೇ ನಿಲ್ಲಿಸುವ ಉಪಾಯವನ್ನು ಸರಕಾರದವರು ಹುಡುಕುತ್ತಿದ್ದಾರೆಂಬದಕ್ಕೆ ಅನುಮಾನವಿಲ್ಲವೆಂತ ಹೇಳಿರುತ್ತಾರೆ. ಅದಲ್ಲದೆ ಈ ಸಂಬಂಧ ಲಂಡನಿನಲ್ಲಿ ಕೂಡುವ ಕಾನ್ಫರೆನ್ಸಿನಲ್ಲಿ ಯಾವ ಅಭಿಪ್ರಾಯವು ಹೊರಬಿದ್ದರೂ ಮೇ ತಾ. ೩೧ರ ನಂತರ ಹಿಂದೂಸ್ಥಾನದವರು ಈ ಪದ್ಧತಿಯು ಮತ್ತೂ ಪ್ರಚಾರದಲ್ಲಿರುವದನ್ನು ಸಹಿಸಲಾರರು, ಆದ್ದರಿಂದ ಆ ತಾರೀಖಿನಂತರ ಈ ಪದ್ಧತಿಯು ಇರದಂತೆ ಮಾಡುವರೆ ಈಗಲೇ ಪ್ರಯತ್ನಿಸುವದು ಹಿಂದೂಸ್ಥಾನದವರ ಕರ್ತವ್ಯವೆಂಬದನ್ನು ಚೆನ್ನಾಗಿ ವಿವರಿಸಿರುತ್ತಾರೆ. ಅನಂತರ ಮಿ| ರಾ| ಬಿ. ವಿ. ವೆಂಕಟರಾವ ಅಯ್ಯರರು ಲಂಡನಿನಲ್ಲಿ ಈ ಸಂಬಂಧ ಕೂಡುವ ಕಾನ್ಫರೆನ್ಸಿನವರು ಇದೇ ಬರುವ ಮೇ ತಾ. ೩೧ರ ಒಳಗೆ ತಮ್ಮ ವರದಿಯನ್ನು ಪ್ರಕಟಿಸಲಿ, ಪ್ರಕಟಿಸದಿರಲಿ, ಹ್ಯಾಗೂ ಮೇ ತಾ. ೩೧ರ ನಂತರ ಗಿರ್ಮಿಟ್‌ದಾರು ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು, ಲಂಡನಿನಲ್ಲಿ ಕೂಡುವ ಕಾನ್ಫರೆನ್ಸಿನಲ್ಲಿ ಹಿಂದೀ ಪ್ರಜಾ ಮುಖಂಡರು ಇರುವ ಏರ್ಪಾಡು ಮಾಡುವರೆ ವೈಸರಾಯ ಪ್ರಭುಗಳವರನ್ನು ಕೇಳಿಕೊಳ್ಳಬೇಕು, ಸದರಿ ಕಾನ್ಫರೆನ್ಸಿನವರು ಈ ಸಂಬಂಧ ಮಾಡುವ ಯಾವ ಹಂಚಿಕೆಯನ್ನಾದರೂ ಅಂಗೀಕರಿಸುವ ಮೊದಲು ಈ ಹಂಚಿಕೆಯನ್ನು ಹಿಂದೀ ಜನರ ಮುಂದೆ ಇಟ್ಟು ಅವರ ಅಭಿಪ್ರಾಯಗಳನ್ನು ಕೇಳಿಕೊಳ್ಳಬೇಕು, ತನ್ನಿಮಿತ್ತ ಗಿರ್ಮಿಟ್‌ದಾರು ಪದ್ಧತಿ ಪ್ರಕಾರ ಯಾರಾದರೂ ಆ ದ್ವೀಪಗಳಿಗೆ ಹೋಗುವದಾದರೆ ಹೆಂಡತಿ ಗಂಡ ಕೂಡಿರುವ ಕುಟುಂಬವನ್ನೇ ಕಳುಹಿಸಬೇಕಲ್ಲದೆ ಈಗ ಕಳುಹಿಸುವಂತೆ ಏಕಾಂಗಿಗಳನ್ನು ಹೋಗಲು ಬಿಡಬಾರದು ಎಂಬದಾಗಿ ಕೂಡಿದ ಸಭೆಯವರು ಅಭಿಪ್ರಾಯ ಪಡುತ್ತಾರೆ ಎಂಬ ಸೂಚನೆಗಳನ್ನು ಸಭೆಯ ಮುಂದೆ ತಂದರು. ಮಿ| ರಾ| ಕರುಣಾಕರ ಮೆನನರು, ಮಿ| ರಾ| ದಿವಾನ್ ಬಹದ್ದೂರ್ ಗೋವಿಂದ ರಾಘವ ಅಯ್ಯಂಗಾರರು, ಡಾಕ್ಟರ್ ಮುತ್ತುಲಕ್ಷ್ಮಿ ಅಮ್ಮಳರವರು ಈ ಮಸೂದೆಗಳನ್ನು ಅನುಮೋದಿಸಿದರು. ಅನಂತರ ಡಾಕ್ಟರ್ ಮುತ್ತುಲಕ್ಷ್ಮೀ ಅಮ್ಮಳರವರು "ಇದೇ ತಾ. ೩೧ರ ಒಳಗೆ ಗಿರ್ಮಿಟ್‌ದಾರು ಪದ್ಧತಿಯನ್ನು ನಿಲ್ಲಿಸಬೇಕೆಂಬ ವಿಷಯದಲ್ಲಿ ವೈಸರಾಯ ಪ್ರಭುಪತ್ನಿಯವರಿಗೆ ಭೇಟಿಕೊಡುವರೆ ಮುಂಬಾಯಿಯಲ್ಲಿ ನೇಮಿಸೋಣಾದ ಹೆಂಗಸರ ಪ್ರತಿನಿಧಿ ಮಂಡಲಿಗೆ ಮದ್ರಾಸಿನಿಂದ ಮಿಸೆಸ್ ಶ್ರೀನಿವಾಸ ಶಾಸ್ತ್ರಿ, ಮಿಸೆಸ್ ರಂಗಸ್ವಾಮಿ ಐಯ್ಯಂಗಾರ್‌ರವರು ಸೇರಬೇಕೆಂಬ ಸೂಚನೆಯನ್ನು ಸಭೆಯ ಮುಂದೆ ತಂದರು. ಈ ಸೂಚನೆಯು ಅನುಮೋದಿಸಲ್ಪಟ್ಟು ಪಾಸಾಯಿತು. ಕೊನೆಗೆ ಸಭೆಯಲ್ಲಾದ ನಿರ್ಣಯಗಳನ್ನು ವೈಸರಾಯರಿಗೆ ತಂತಿ ಮೂಲಕ ಕಳುಹಿಸಿಕೊಡಬೇಕೆಂಬ ಠರಾವು ಪಾಸಾಗಿ ಸಭೆಯ ಕೆಲಸಗಳು ಮುಗಿದವು.

ಒಬ್ಬನು ತನ್ನ ಆತ್ಮವನ್ನು ಸೌಖ್ಯದಲ್ಲಿಯೂ ಸಮಾಧಾನ ಸ್ಥಿತಿಯಲ್ಲಿಯೂ ಇಡುವದೇ ವಿದ್ಯೆಯ ಫಲವಾಗಿದೆ, ಅಂಥವನು ಎಲ್ಲರ ಗಣನೆಗೂ ಬರುವನು, ಎಲ್ಲರಿಂದಲೂ ಸನ್ಮಾನಿಸಲ್ಪಡುವನು, ಪ್ರತಿ ಒಬ್ಬರನ್ನೂ ಸಂತೋಷಗೊಳಿಸುವನು, ಈ ಪ್ರಪಂಚವನ್ನೇ ಶುದ್ಧ ಮಾಡುವನು. ಯಾವಾಗಲೂ ಎಲ್ಲರೂ ಒಬ್ಬರನ್ನೊಬ್ಬರು ಅವಮಾನ ಪಡಿಸಬಾರದು. ನಾಳೆಗೆ ಒಳ್ಳೆಯದಾಗಿದ್ದರೆ ಊರು ಒಳ್ಳೆಯದಾಗಿರುವದು ಎಂಬದಾಗಿ [illegible] ಹೇಳಿರುವರು.

ಪತ್ರವ್ಯವಹಾರ.

ಕರ್ನಾಟಕ ಸಾಹಿತ್ಯ ಪರಿಷತ್ತು.

ಸ್ವಾಮಿ,

ಕಳೆದ ೧೯೧೫ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಏರ್ಪಟ್ಟುದೂ, ಕಳೆದ ಮೇ ತಿಂಗಳಲ್ಲಿ ಅದರ ಪ್ರಥಮ ವಾರ್ಷಿಕೋತ್ಸವವೂ, ಕನ್ನಡಿಗರ ಸಮ್ಮೇಳನವೂ ನಡೆದುದೂ ಸರ್ವರಿಗೂ ತಿಳಿದೆ ಇರುವುದಲ್ಲವೇ? ಅದೇ ಕ್ರಮವನ್ನನುಸರಿಸಿ ಈ ವರ್ಷವೂ ಮೇ ತಿಂಗಳಲ್ಲಿ ಸಮ್ಮೇಳನವು ನಡೆಯತಕ್ಕುದಾಗಿದ್ದರೆ ನಿಬಂಧನೆಗಳ ಮೇರೆಗೆ ಇಷ್ಟರಲ್ಲಿಯೇ ಅದರ ವಿಷಯವಾಗಿ ಸರ್ವರಿಗೂ ತಿಳಿಯಪಡಿಸಬೇಕಾಗಿದ್ದಿತು. ಆದರೆ ಆ ಸಂಬಂಧವಾದ ಯಾವ ಸಮಾಚಾರವೂ ಇದುವರೆಗೆ ತಿಳಿಯಬರಲಿಲ್ಲವಾದ ಕಾರಣ ಈ ವರ್ಷ ಸಮ್ಮೇಳನವು ನಡೆಯುವುದೋ ಇಲ್ಲವೋ ಖಂಡಿತವಾಗಿ ಈಗಲೇ ಹೇಳಬರುವಂತಿಲ್ಲ. ಇದರ ಮಧ್ಯೆ ಮೈಸೂರು ಮಧುರವಾಣಿಯ ಸಂಪಾದಕರು ಸಾಹಿತ್ಯ ಪರಿಷತ್ತಿನ ಉತ್ತರಾಭ್ಯುದಯಕಾಂಕ್ಷಿಗಳಾಗಿ ಪರಿಷತ್ತಿನ ಮತ್ತು ಸಮ್ಮೇಳನದ ಕ್ರಮಗಳಲ್ಲಿ ಈಗ ಇರುವ ನ್ಯೂನತೆಗಳನ್ನು ಹೊಂದಿಸಿ, ತಕ್ಕ ಸೂಚನೆಗಳನ್ನು ಕೊಟ್ಟು ಒಂದು ಚಿಕ್ಕ ಪುಸ್ತಕವನ್ನು ಬರೆಯಿಸಿ ಪ್ರಕಾಶಗೊಳಿಸಿರುವರು. ಈ ಪುಸ್ತಕದಲ್ಲಿ (೧) ಸಾಹಿತ್ಯ ಸಮ್ಮೇಳನದ ಉದ್ದೇಶಗಳೊಳಗೆ ಗಾನ, ಚಿತ್ರಲೇಖನ, ನಾಟಕಾದಿಗಳ ಉನ್ನತಿಯನ್ನೂ ಸೇರಿಸುವುದು; (೨) ಪ್ರಥಮ ದ್ವಿತೀಯ ವರ್ಗಗಳ ಸದಸ್ಯರ ವಾರ್ಷಿಕ ವರ್ಗಣಿಯನ್ನು ಕ್ರಮವಾಗಿ ೬ ಮತ್ತು ೩ ರೂಪಾಯಿಗೆ ಇಳಿಸುವುದು ಮತ್ತು ಅವರು ಆಜೀವ ಸದಸ್ಯರಾಗಲು ಕೆಲ ಕೆಲವು ವಿಶೇಷ ಅನುಕೂಲತೆಗಳನ್ನು ಕೊಟ್ಟು ಆಜೀವ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಿಸುವುದು; (೩) ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷರನ್ನೂ ಪರಿಷತ್ತಿನ ಸಭಾಪತಿಯವರನ್ನೂ ಪ್ರತ್ಯೇಕಪ್ರತ್ಯೇಕವಾಗಿ ಇಟ್ಟುಕೊಳ್ಳುವುದು; (೪) ಕಾರ್ಯನಿರ್ವಾಹಕ ಮಂಡಲಿಯ ಚುನಾವಣೆಯ ಕ್ರಮದಲ್ಲಿ ಬದಲಾವಣೆ ಮಾಡುವುದು; (೫) ನವರಾತ್ರಿಯ ರಜಾದಲ್ಲಿ ನಡೆಯಬೇಕಾದ ಅರ್ಧ ವಾರ್ಷಿಕ ಸಭೆಯನ್ನು ಡಿಸೆಂಬರು ಅಂತ್ಯಕ್ಕೆ ಇಟ್ಟುಕೊಳ್ಳುವುದು; (೬) ಪರಿಷತ್ತಿನ ಸದಸ್ಯರಲ್ಲಿ ವಿದ್ಯಾರ್ಥಿ ಚಂದಾದಾರ (Student Subscribers) ರೆಂಬ ಹೊಸ ವರ್ಗವನ್ನು ಏರ್ಪಡಿಸುವುದು; (೭) ಕನ್ನಡ ಗ್ರಂಥಗಳ ಮಾರಾಟವನ್ನು ಸುಲಭಪಡಿಸುವುದಕ್ಕಾಗಿ, ಪರಿಷತ್ತಿನವರು ಒಂದು "ಡಿಪೋ" ಇಟ್ಟುಕೊಳ್ಳುವುದು — ಇವೇ ಮುಂತಾದ ಇನ್ನೆಷ್ಟೋ ಸೂಚನೆಗಳೂ ಇತರ ಸಂಘಗಳನ್ನು ಜೋಡಿಸಿಕೊಳ್ಳುವ ವಿಷಯದಲ್ಲಿ ಸುಲಭವಾದ ಮಸುವಿದಾ ಕ್ರಮಗಳೂ, ಸಾಹಿತ್ಯ ಸಮ್ಮೇಳನಗಳನ್ನು ಹೇಗೆ ನಡಯಿಸಬೇಕೆಂಬ ಕುರಿತು ವಿವರವಾದ ವಿವೇಚನೆಯೂ ಉತ್ತಮವಾಗಿ ಕೊಡಲ್ಪಟ್ಟಿದೆ. ಭಾಷಾಭಿಮಾನಿಗಳೆಲ್ಲರೂ ಈ ಕಡೆಗೆ ಗಮನಕೊಟ್ಟು, ಲೇಖಕರ ಉದ್ದೇಶವನ್ನು ನೆರವೇರಿಸುವುದು ಅತ್ಯಗತ್ಯವು. ಪುಸ್ತಕವನ್ನು ಆಮೂಲಾಗ್ರವಾಗಿ ಓದಿಯಲ್ಲದೆ ಈ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಬರುವಂತಿಲ್ಲವಾದುದರಿಂದ ಮೇಲ್ಕಂಡ ಮೈಸೂರು ಮಧುರವಾಣಿಯ ಸಂಪಾದಕರು ಅರ್ಥಿಗರು ಸ್ಟಾಂಪು ಕಳುಹಿಸಿ ಕೇಳುವ ಎಲ್ಲರಿಗೂ ಇದರ ಒಂದೊಂದು ಪ್ರತಿಯನ್ನು ಉಚಿತವಾಗಿ ಕಳುಹಿಸಲು ಸಿದ್ಧರಾಗಿರುವರು. ಕನ್ನಡಿಗರೆಲ್ಲರೂ ಈ ಸುಸಂದರ್ಭವನ್ನು ಹೋಗಗೊಡಲಾಗದೆಂದು ಪ್ರಾರ್ಥಿಸುವೆನು.

A. V. R.

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ ಹೊಸ್ತು	5-8-0 ರಿಂದ	5-14-0
ಗುಡ್ಡು ,, ,,	5-4-0 ,,	5-10-0
ಹೊಸ ರಾಶಿ ,,	5-0-0 ,,	5-4-0
ಆಷ್ಪಲ್ ಬೆಳ್ತಿಗೆ ,,	5-14-0 ,,	6-4-0
ಸುಡು ಬೆಳ್ತಿಗೆ ,,	5-6-0 ,,	5-8-0
ರಂಗೂನು ಬೆಳ್ತಿಗೆ ಗೋಣಿ ೧ಕೆ	9-14-0 ,,	9-12-0
ಗೋದಿ ಗೋಣಿ ೧ರ	11-12-0 ,,	12-8-0
ತುರುಳಿ ಗೋಣಿ ೧ರ	6-6-0 ,,	6-8-0
ಕಡಲೆ ಗೋಣಿ ೧ರ ಬೊಂಬ್ಯೆ	10-0-0 ,,	10-8-0
ತೊಗರಿ ಗೋಣಿ ೧ರ		11-0-0
ತೊಗರಿ ಬೇಳೆ ಗೋಣಿ ೧ರ	12-8-0 ,,	15-8-0
ಉದ್ದು ಗೋಣಿ ೧ರ	10-8-0 ,,	11-4-0
ಊರುಬೆಲ್ಲ ಖಂಡಿ ೧ರ	30-0-0 ,,	35-0-0
ಉಪ್ಪು ಗೋಣಿ ೧ರ	4-14-0 ,,	5-2-0
ಕೊಬ್ರಿ ಖಂಡಿ ೧ರ	85-0-0 ,,	90-0-0
ಕೊಬ್ರಿಹಿಂಡಿ ಖಂಡಿ ೧ರ	19-8-0 ,,	20-0-0
ಎಳ್ಳಿಂಡಿ ಖಂಡಿ ೧ರ ಬೊಂಬ್ಯೆ	27-8-0 ,,	35-6-0
ಕೊಬ್ರಿ ಎಣ್ಣೆ ಮುಡಿ ೧ರ	6-8-0 ,,	7-0-0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	,,	4-8-0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6-11-0 ,,	7-5-0
ಮೋರಿಸ್ ಸಕ್ಕರೆ ಮುಡಿ ೧ರ	5-8-0 ,,	5-10-0
ಕಾಫಿ ಖಂಡಿ ೧ರ	185-0-0 ,,	215-0-0
ಹೊಸಅಡಿಗೋಟು ಖಂಡಿ ೧ರ	78-0-0 ,,	85-0-0
ಗೇರುಬೀಜ ಮುಡಿ ೧ರ	2-0-0 ,,	2-4-0
[illegible] ಖಂಡಿ ೧ರ	,,	75-0-0
[illegible] ಮುಡಿ ೧ರ	29-0-0 ,,	30-8-0
[illegible] ಮುಡಿ ೧ರ	,,	32-0-0
[illegible]	,,	24-0-0
[illegible]	,,	5-4-0
[illegible]		240-2-0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ಗಜ್ಜು, ತದ್ದು, ತುರಿಕೆ, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೩೦ ವರ್ಷಗಳ ಹಳತ, ಸ್ಥಿಮಿತ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೬ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಿಯ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈ ಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜವ್ವಾದಿ. ಹೆಂಗಸರು ತಿಲಕವಿಡುವವರಿಗೆ ಅತಿ ಉಪಯೋಗವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಇಕ್ಲಿಪ್ಸ್ ಡ್ರಾಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಮರ್ಥ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಳಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ಸೀವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಸ್ವಸ್ಥಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ.
ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ಇಕ್ಲಿಪ್ಸ್ ಬಾಮ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗ, ತಲೆಸಿಡಿತ, ತಲೆನೋವು, ಹುಳುಕು, ಕುರಿಕಜ್ಜಿ, ಮೂಲವ್ಯಾಧಿ, ಬೆಂಕಿಯುಬೊಕ್ಕೆ, ಮೊಡವೆ, ಜೇಣು, ಜಾಡರಹುಳ, ಜೇನುಹುಳುಗಳ ಕಡಿತೆ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

ಸ್ವಾಮಿ ಕಾಜಾ ಯ ಕಲಿಪ್ಸನ್ ತೈಲ 5 ಆಣೆ; ಟೂತಕಬ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ
(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯು ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,
Avenue Road, ವೇದಶಾಲಾ,
BANGALORE CITY. ಬೆಂಗಳೂರು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯಾ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾಕು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0

ಪ್ರತಿ 26 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 280 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇಸ್ ನಂ. 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಬಿಟ್ಟುಬರುವ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು, ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ॥ ಲಲ್ಲುಭಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ.ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ:—ಮೆ॥ ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಮಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

॥ ಚೌಪದಿ ॥

ಪಲಬುಗ್ಗೆಯಿಂದೊಸರಿ ಕಾಲುವೆಗಳಾಗಿ ।
ಸಲೆಹರಿಯುತೊಂದಾಗಿ ನದಿಯಾಗಿ ಸಾಗಿ ॥
ಕಡಲಕಡೆಗುಕ್ಕಿ ಸೂಸುವ ನೀರದೊನಲು ।
ಮಡಗುವೊಲು ಪಂಡೆಯಲಿ ಬಂಗಾರಮಣಲು ॥ ೧ ॥

ಪಲದಾಣದಿಂದ ಪಲಬಗೆಯೊಡವೆಗಳನು ।
ನೆಲೆಯುತ್ತೊದಗಿಸುವಪೋರ್ಟಡವೆಯನು ॥
ಬರುತ ಪರಿಶೀಲಿಸುವುದತ್ಯ ಮೂಳೆಗೆಯನು ।
ಮರುಗಲಾರಿಂ ಇಲ್ಲಿ ಸಂದ ಗಳಿಗೆಯನು ॥ ೨ ॥

ಕಿರಿದು ಲಾಭಂ ಗೀರುವೆವು ಪಿರಿದು ಕ್ಷೇಮಂ ।
ನೆರೆಗಿ ರಾಶಿಯರ ತಳಿಸುವುದೆಮ್ಮನೇಮಂ ॥
ಒಂದು ಸಲ ಕಂಡವರು ನಮ್ಮಂಗಡಿಯನು ।
ಮುಂದಡಿಯನಿಕ್ಕರ್ಪದಲು ಬೇರೆಡೆಯನು ॥ ೩ ॥

ಕಂಡಿರೇ ಮೊನ್ನೆಕಾಣೇ ಬಂದ್ಸ ಸಿರಿಯಂ ।
ಕೊಂಡುಕೊಳ್ಳಿ ನೋಡಿ ಬೆಳಗದ ಪರಿಯಂ ॥
ನವವರ್ಷವುದಿಸಿತಲ್ಲಾ ನಿಮ್ಮನಾತಂ ।
ಭವಸಂಕಟಯೊಡೆಯ ರಕ್ಷಿಸುಗೆ ರಘುನಾಥಂ ॥ ೪ ॥

ದಿ ಉಲನ್ ಮಾರ್ಟ್,

ಮಂಗಳೂರು, ದ. ಕ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟು, ಸ್ವತ್ತುಗಳ ಪರಭಾರೆ ಆಕ್ಟು, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟು, ಸ್ಟಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟು, ಹಿಂದೂ ಲಾ, ದೊಡ್ಡಿ ಆಕ್ಟು, ಬ್ರೀಚ್ ಆಫ್ ಕಂಟ್ರಾಕ್ಟು, ಮಕ್ಕಳ ಮದುವೆ ಆಕ್ಟು, ರೆವಿನ್ಯು ಕೋಡ್, ಗ್ರಾ. ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತ್ಯವೇಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿ ರತಕ್ಕದ್ದು, ಅವಶ್ಯವಾದದ್ದು.

ಬೆ. 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಬೆಲೆ 16 ರೂ. ಮಾತ್ರ.

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ.

ಈ ಸಾರ್ಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ದೇಹದೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಕಿಸಾರ, ಕೆವಿನ್ನು ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವನ್ನು ಎಂದರೆ ಪಾದರಸ ತುಂಬಿದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯವಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ೧ಕ್ಕೆ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾರಿಜ್ವರ, ಸನ್ನಿವಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಕ್ಷುಮಾರಾಗಿದೆ. ಬಾಟ್ಲಿ 1ಕ್ಕೆ ರೂ. ೦-೧೨-೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಬ್ಬಿ ಹೊಯ್ಯಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ೧ಕ್ಕೆ ರೂ. ೧-೮-೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

- ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ**:—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನು, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ**:— ಪ್ರಸುತವಾದ ಲಾಗಾಯತು 30 ದಿನಗಳವರೆಗೆ ಉಪಯೋಗಿಸುವದರಿಂದ ಖಾರ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರತರದ ಮಾತ್ರೆಗಳು, ಲೇಹ್ಯಗಳು, ತೈಲಗಳು, ಆಸವಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೇನೆ ತೊಡನ್ನು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್. ಎಲ್. ಸಿ. ಡಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ. ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜೆಜ್ಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್‌ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಲ್ಲಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು, ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಪೇಟೆಯಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಜಂಟಲ್‌ಮೆನ್ಸ್ ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರಿಗೆ ಸೀಮೆಯಿಂದ ತರಿಸಿರುತ್ತೇವೆ.



ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ	ರೂ.	3—12—0.
ಗಡಿಯಾರ 1ಕ್ಕೆ ಕ್ರಯ	ರೂಪಾಯಿ	3—0—0.
ಪೇನಾ	,, ,,	1—0—0.

ವಿಳಾಸ:— ವೈರಂ ಅಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ ೭ ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪನಿ,
ಗಿರಗಾಂವ, ಮುಂಬಯಿ.

ಎಲ್ಲರೂ ತರಿಸಿ ಕೊಳ್ಳಿ.—

ಜಂಟಲ್‌ಮೆನ್ ಫಿಕ್ಸೆಟ್ ಲೀವ್ಹರ್ ಕೆಂಪು ಮತ್ತು ಫಾಳ, 10 ಬಹುಮಾನಗಳ ಸಹಿತ ಗಡಿಯಾರ. ಮುಂತೆ ಹಿಂಭಾಗದಲ್ಲಿ ಗ್ಲಾಸ್ 6 ವರುಷ ಹಾಮೀ ಇರುವದು. ಕಾಲವನ್ನು

ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ಮತ್ತು ಗಂಟೆ ತೋರಿಸುವ ನಂಬರುಗಳ ಮೇಲೆ ಇಮಿಟೇಷನ್ ಕೆಂಪುಗಳು ಮುದ್ದಾಗಿ ಕಟ್ಟಿದೆ ಕಟ್ಟಿರುತ್ತೆ. 6 ರತ್ನಗಳು ಉಳ್ಳ ಓಪನ್ ಕೇಸ್ ಕಾಂಪನ್‌ಸೇಷನ್ ಬಹು ಬಲಿಷ್ಠವಾದ ಲೀವರ್ ಕೆಲಸದಲ್ಲೇ ತಯಾರಾಗಿ ಬಂದು ಇರುತ್ತೆ. ಇದನ್ನು ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ತರಿಸಿ ಪರೀಕ್ಷೆಮಾಡಿದರೆ ತಿಳಿಯುವದು. ಬಹುಮಾನ ವಿವರ— ಸರಪಣಿ 1, ಪೆಟ್ಟಿಗೆ 1, ಕಾರನೇಷನ್ ಕನ್ನಡಿ 1, ಇಂಗ್ಲಿಷು ಚಾಕುನಗೆ 1, ಸೇಟ್ ಸೀಪೆ 1, ಷರಟು ಗುಂಡಿ ಸೆಟ್ 1, ಎಲೆಕ್ಟ್ರಿಕ್ ಭಂಗಾರದ ಕೈ ಉಂಗುರ 1, ಸ್ತ್ರೀಯರು ಧರಿಸಿಕೊಳ್ಳುವ ತಲೆ ಹೂವು 1, ಇಮಿಟೇಷನ್ ವಜ್ರದ ಬ್ರೋಚ್‌ಗಳು 2. ಜುಮ್ಲಾ 10 ಸೇರಿ ವಾಚ್ ಕ್ರಯ ರೂ. 3—8—0 ಮಾತ್ರವೇ.

ವಿಳಾಸ:— ಎಚ್. ಗಣೇಶನ್ ಅಂಡ್ ಕೊ.
ನಂಬ್ರು 7, 2ನೆ ನಾರಾಯಣ ಬೀದಿ,
ಜೋರ್ಜ ಟೌನ್, ಮದರಾಸು.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು, ಬಾವು, ಉಳುಕು, ಊತ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮಲಾಮು ಆಗಿರುತ್ತದೆ. ಕ್ರಯ ಡಬ್ಬಿ 1ಕ್ಕೆ ಆಣೆ 8. ಟಪಾಲು ಹಾಸಲು ಪ್ರತ್ಯೇಕ. ಸಂಪಲ್ ೧ ಡಬ್ಬಿಗೆ ಖರ್ಚ ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇದೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:—
ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:—ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಲ್ಲಿ ಬರೆಯತಕ್ಕದ್ದು.

ಇಂತಿ ಮಾಲಕರು:— Someshwar & Sons,
Fergusson Road, BOMBAY.

ಪ್ಲೇಗನ್ನು ನಿರ್ಮೂಲವಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಯು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳಿಂದ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗನ್ನೆಯನ್ನೂ ಹುಣ್ಣನ್ನೂ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಯು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎಂ. ಎಸ್. ಎ. ಎಮ್. ಪಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜಟೌನ್ ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಬೇಕಾದಂಥಾ ಈ ಸಾಮಾನುಗಳು ಪಟ್ಟಿ 1ಕ್ಕೆ ೧—೮—೦. ಇದಕ್ಕಿಂತ ಚಿಕ್ಕ ಪೆಟ್ಟಿಗೆ ಒಂದು ದೊಡ್ಡ ಪೆಟ್ಟಿ ಉತ್ತಮ ತರಹ ಗಳಿಗೆ ರೂ. ೪—೦—೦.

ಕಾಬುಲಿ ಇಂಗು.

ಉತ್ಕೃಷ್ಟ ತರಹ ರೂಪಾಯಿಗೆ ೬ ತೊಲೆ, ದ್ವಿಯಂ ರೂಪಾಯಿಗೆ ೮ ತೊಲೆ, ತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿಗೆ ೧೫ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾಗುವುದು. ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.
SIROMANI NARAYANA CHARYA & CO,
Choukhambay,
BENARES CITY.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ ಆರು ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0—8—0. 1 ಡ್ರಾಮ್ ಟ್ಯೂಬ್ ರೂ. 0—12—0. ¼ ಔನ್ಸ್ ಟ್ಯೂಬ್ 2—0—0. ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.
H. R. MODY & Co.,
10 Princes Street, BOMBAY.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಕೂಡಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚಳಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀವಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸು, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಶಂಕರನಾಥ ಪ್ರೋಪ್ರ.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ಕೃಷ್ಟವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ. ಬಹಳ ಅಗ್ಗ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.
ಏಜಂಟರು:—ಡಿ. ಊಲನ್ ಮಾರ್ಟ್,
ನಾಥವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಶ್ರೀಮತ್ ಕಲ್ಯಾಣ ಸಂಘಕ್ಕೆ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.
ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 498

ಸಂದಾನೆಹಣ:— ವರ್ಷ 1ಕ್ಕೆ ರೂ. 1—8—0.

ಟಪ್ಪಾಲ್ ಹಾಸಲು ಸೇರಿ ರೂಪಾಯಿ 2—5—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೬ನೇ ಮಾರ್ಚ ಶುಕ್ರವಾರ ೧೯೧೭. | ಸಂಚಿಕೆ ೧೧.

ಕೋರಾ ಮತ್ತು ಶೀತ ಸಿಡುಬು ಯಾ ಕೋಪ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡೆಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವಂತ ತೋರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದನೇ ಆಗುವಂಥಾದ್ದು ಬಹುವಕ್ಕ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವು ಅಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಾಬಾಧೆಯಿಂತಾಕ್ಷಣವೇ ತಲೆದೋರವು. ಕೋರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೋಟಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕೋರಾ ನಂತರ ಹಿಂಬಾಲಿಸಿದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥದ್ದೆ. ಆದ್ದರಿಂದ ಈ ರೋಗಗಳು ತಗ್ಗಿದಾಗ ಹೆಚ್ಚಿನ ಜಾಗ್ರತೆಯು ಉಪಶಮನವು ಅಗತ್ಯವಾಗಿರುವದು.

ಹೊಮಿಯೊಪಥಿಕ್ ಮತ್ತು ಟಿಸ್ಯು ಔಷಧಿಗಳು.

ಇವುಗಳ ಮೂಲಕ ಈ ಉಪಶಮನವು ಬಹಳ ಸುಲಭದಲ್ಲಿ ಮಾಡಲು ಸಾಧ್ಯವಾಗುವದು. ಈ ಎರಡು ರೋಗಗಳು ಪ್ರಾಪ್ತವಾದ ಕಾಲದಲ್ಲಿ ಈ ಔಷಧಿಗಳಲ್ಲಿ ಯಾವ್ಯಾವದನ್ನು ಹೇಗೇಗೆ ತಕ್ಕೊಳ್ಳುವುದು ಇದರ ಅನುಪಾನವೇನೆಂಬುದನ್ನು ಸೂಚಿಸುವ ಅನುಪಾನ ಪತ್ರಗಳೂ ಈ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

'ಕೋಟಲೆ'ಯ ಕಲೆಗಳು ಬೇಗನೆ ವಾಸಿಯಾಗುವಂಥಾ ಮುಲಾಮು ತಯ್ಯಾರಿರುವದು.

ಕ್ರಯ ಕರಡಿಗೆ 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕೇಧ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡೆಯುವದು ಯುಕ್ತವೆಂದ ಮೇಲ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು

ಇತರರಿಂದ ಏಕೆ ಪಡೆಯಬೇಕು?

ಬಾಟ್ಲಿ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು ಏನೆಂಬುದನ್ನೇ ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್‌ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ

ಗಜಕರ್ಣದ ಮುಲಾಮು.

ಡಬ್ಬಿ 1ಕ್ಕೆ ಆಣೆ. 6.

ಮಕ್ಕಳ ಏಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಶಿಯೇಶನ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಮೂಲ ಅರ್ಜಿ ನಂಬ್ರ 9/1917

ಶ್ರೀರಾಮ ಕುಪ್ಪಯ್ಯ ಶೆಟ್ಟಿ—ಬಾಲಿಪ್ಪ ಶೆಟ್ಟಿ ಮಗ—1ನೆ ಶಿರೂರು ಗ್ರಾಮಸ್ಥ. | ಅರ್ಜಿದಾರ.

ಎದುರು

1. ನರಸಿಂಹ ಜಾನೆ ಮಾಸಾಬ—ಅಮೀನ ಸಾಬನ ವಿಧವೆ.
2. ಹಸನ ಸಾಬಾ ಮಾಸ್ತರ | ಹಸನ ಸಾಬನ ಮಕ್ಕಳು, ಇವರ ಗಾರ್ಡಿಯನ್ ತಂದೆ ಮಾವನ ಹಸನ ಸಾಬಾ
3. ಅಬ್ದುಲ್ ಸಾಬಾ ಮಾಸ್ತರ
4. ಮಾವನ ಹಸನ ಸಾಬಾ—ಹುಸೇನ ಸಾಬನ ಸಾಕುಮಗ.

ಕಿರೀಮಂಜೇಶ್ವರ ಗ್ರಾಮಸ್ಥರು | ಪ್ರತಿ

ಸನ್ 1915ನೇ ಇಸವಿ ಜನವರಿ ತಾ. 23ರಲ್ಲಿ ಮೃತಪಟ್ಟ ಮಾವನ ಅಮೀನ ಸಾಬನು ವಾದಿಯಾಗಿ ಪ್ರತಿವಾದಿಯು ಮಾಸಾಬಾ ಕುಪ್ಪಯ್ಯ ಶೆಟ್ಟಿ ಇವರ ಮೇಲೆ ಈ ಕೋರ್ಟು ಕ್ರಮ ನಂಬ್ರ 617/1912ನೇ ಕಡದ ಡಿಕ್ರಿ ಸಾಲ ವಸೂಲು ಕುರಿತು ತನಗೆ ಸಕ್ಸೆಶನ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ಅರ್ಜಿದಾರ ಕುಪ್ಪಯ್ಯ ಶೆಟ್ಟಿಯು ಕೋರ್ಟಿಗೆ ಮನವಿಮಾಡಿಕೊಂಡಿದ್ದಾನೆ. ಇದಕ್ಕೆ ಆಕ್ಷೇಪ ಹೇಳುವವರು ಸ್ವತಃ ಯಾ ವಕೀಲರ ಮುಖಾಂತರ ಅರ್ಜಿ ತನಕೆಗೆ ಇಟ್ಟ ಇದೇ ಮಾರ್ಚ ತಾ. 23ನೆ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು.

ಕುಂದಾಪುರ, 1ನೇ ಮಾರ್ಚ 1917. | ಬಿ. ಸುಬ್ರಾವ್. ವಕೀಲ. ಅರ್ಜಿ ವಕೀಲ ತಾ ಗಣೇಶರಾವ್.

ಒಳ್ಳೆ ಗೊಬ್ಬರ! | ಅವ್ವಲ್ ಈಡು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮೆಕ್ಕೆದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ನೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅನಕ್ಕವಲ್ಲ; ಮೀನುಗೊಬ್ಬರದಂತೆ ನಾತ ಬಡಿಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ನಾತ ಇಲ್ಲ! ಉಪಯೋಗ ಸುಲಭ!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ನೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಟಿಫ್ ಕವರ್ ಬೈಂಡು 0—8—0
ಚಿಕ್ಕ ಸೈಜು ಕೆಲಿಕೊ ಬೈಂಡು 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿವೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ

ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.

1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ. ದ. ಕನ್ನಡ.

Foot Balls. (BEST QUALITY).

ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ-ಇಂಗ್ಲಿಷ್, ಇಂಗ್ಲಿಷ್-ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು.

ಈ ವಾರವೇ ತರಿಸಿಕೊಂಡರೆ ರೂ. 1—11—0 ಅಂಚೆ ಖರ್ಚು ಮಾಫಿ.

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
[illegible]

ಅನುಭವಸಿದ್ಧವಾದ ವನೌಷಧಗಳು.

೧. ಅತಂಕನಿಗ್ರಹ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಕವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲುಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣಕೊಡುವದು. ಬಾಟಿಗೆ ೨-೮-೦.

೩. ಪಂಚಶೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯು ದೋಷ ಗಳನ್ನೂ ಖಂಡಿತವಾಗಿ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯು ಮೇಲೆ ಅತ್ಯುತ್ತಮವು. ಶಾಶ್ವತವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಬಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಬಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನ ಪಟ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲಿಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲಿಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲಿಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಕ್ಷಯ, ಗುಲ್ಮ, ಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ಬಲತೆಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುಂಜಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪ ಗಳೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿತವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲಿಗೆ ೧ ರೂ.

೧೪. ಬ್ರಹ್ಮಿ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮೂಕತ್ವ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವನ್ನಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲಿಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು ಪತ್ರವ್ಯವಹಾರ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists,*
Vepery Post, MADARS.

ಹಲ್ಲು ನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸ್ಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್ ಕಟ್ಟೆ, ಕೊಡಿಗಳಲ್ಲಿ ದೊರಕುವದು.

STANY BROTHERS
Sole Agents
M. C. C's, Toothache
Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತೆ ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co.,
Mangalore.

ಯಮ್. ಯಸ್. ರಾವ್ ಕಂಪೆನಿ,
ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುವಾಸಿ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ವಾಸಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ ೪ ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರಕಟ್ಟಿ ,, ,,	0—12—0
ಅಂಬಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿದ್ಧುಶಿ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಭ್ಯಾಸ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"×28" ಕ್ಕೆ	0—1—0

ಅಪೂರ್ವ ಸಮಯ! ತ್ವರೆಮಾಡಿ!!

—ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಮುಖ್ಯೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸಂಸ್ಥಾನದ ಅರ್ಥಸಾಧಕಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ.

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ.

೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆವೆಚ್ಚ ಸೇರಿ ವರ್ಷಕ್ಕೆ ೩ ರೂ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—

ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್ ವುಡ್," ಬೆಂಗಳೂರು.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡಿ. ಪದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್ ಮೆಂಟ್ ಮಾಡಿರುವುದು. ಮತ್ತು ಘಾಳಿ, ಮೊಳೆ ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲು 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಥಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
8. ಇರುಳಪ್ಪನ ಬೀದಿ, ಮದರಾಸ್.

ಯೂರೋಪದ ಮಹಾ ಯುದ್ಧ.

ಕಳೆದವಾರ ರಣರಂಗಗಳಿಂದ ವಿಶೇಷ ವರ್ತಮಾನಗಳು ಬಂದಿರುವದಿಲ್ಲ. ಫ್ರಾನ್ಸ ರಣರಂಗದಲ್ಲಿ ಬ್ರಿಟಿಷರು ಮುಂದೆ ಮುಂದೆ ನುಗ್ಗಿ ಹೋಗಿರುವದಾದರೂ ಕಳೆದವಾರ ಅಷ್ಟು ತೀಕ್ಷ್ಣವಾದ ಕದನಗಳು ನಡೆದಿರುವದಿಲ್ಲ. ವರ್ಡನ್ ರಣರಂಗದಲ್ಲಿ ಫ್ರೆಂಚರ ಬತ್ತೇರಿಗಳು ಶತ್ರುಗಳ ಸೇನಾಪಾಳೆಯಗಳಿಗೆ ಗುಂಡು ಹಾರಿಸಿರುವವು. ಕ್ಯಾಸ್, ಐವೆ ಮೊದಲಾದ ಸ್ಥಳಗಳಲ್ಲಿ ತೋಪುಕಾಳಗಗಳು ಅತಿ ತೀಕ್ಷ್ಣತೆಯಿಂದ ನಡೆಯುತ್ತಿವೆ. ಎಂಕ್ರೆ ಕಣಿವೆಯ ಎರಡು ಪಕ್ಕಗಳಲ್ಲಿಯೂ ಬ್ರಿಟಿಷರು ಸ್ವಲ್ಪ ಮುಂದೆ ನುಗ್ಗಿ ಹೋಗಿರುತ್ತಾರೆ. ಬಿಯಾಕೆಸಿನಲ್ಲಿ ಬ್ರಿಟಿಷರು ಶತ್ರುಗಳ ಕಂದಕಗಳನ್ನು ನುಗ್ಗಿ ಕೆಲವು ಸೈನಿಕರನ್ನು ಸೆರೆಹಿಡಿದಿರುವರು. ಫೆಬ್ರುವರಿ ತಾ. ೧೫ರಿಂದ ಶತ್ರುಗಳು ಬಲಕಾಯಿಸಿಕೊಂಡಿದ್ದ ಬಟ್ಸ್-ಡಿ-ಮೆಸ್ನಿಲ್ ಮತ್ತು ವೈಸನ್ ಡಿ-ಚಂಪೇನ ಮಧ್ಯೆ ಇರುವ ಸ್ಥಳಗಳಲ್ಲಿ ಹೆಚ್ಚಿನಾಂಶವನ್ನು ಫ್ರೆಂಚರು ಪುನಃ ಸ್ವಾಧೀನ ಮಾಡಿಕೊಂಡಿರುತ್ತಾರೆ. ೧೦೦ ಶತ್ರುಸೈನಿಕರು ಫ್ರೆಂಚರ ಸೆರೆಬಿದ್ದಿರುವರು. ಮ್ಯೂಸ್ ನದಿಯ ಎಡಗಡೆಯಲ್ಲಿ ಫ್ರೆಂಚರ ಫಿರಂಗಿಗಳು ಗುಡ್ಡ ೩೦೪ ಮತ್ತು ಎವಕೋರ್ಟ ಅರಣ್ಯದ ಮಧ್ಯೆ ಇರುವ ಜರ್ಮನರ ಯುದ್ಧ ಸಾಧನೆಯ ಕೆಲಸಗಳನ್ನು ಒಡೆದು ಹಾಕಿರುವವು.

ಕಡೆಗೆ ಬಂದ ವಾರ್ತೆಯಿಂದ ಬ್ರಿಟಿಷರು ಫ್ರಾನ್ಸ ರಣರಂಗದಲ್ಲಿ ಐರ್ಲ್ಸ ಗ್ರಾಮವನ್ನು ಸ್ವಾಧೀನಮಾಡಿಕೊಂಡಿರುವರೆಂತ ತಿಳಿದು ಬರುತ್ತದೆ. ಇಲ್ಲಿ ಬ್ರಿಟಿಷರು ೩ ಮೈಲು ವಿಸ್ತೀರ್ಣದ ರಣರಂಗದಲ್ಲಿ ಮುಂದರಿದಿರುತ್ತಾರೆ. ನೂರಕ್ಕೆ ಮಿಕ್ಕಿದ ಶತ್ರುಸೈನಿಕರು ಸೆರೆಬಿದ್ದಿರುತ್ತಾರೆ. ಕಂದಕಗಳನ್ನು ಒಡೆಯುವ ೪ ಫಿರಂಗಿಗಳೂ ೧೫ ಯಂತ್ರಚಾಲಿತ ಫಿರಂಗಿಗಳೂ ಬ್ರಿಟಿಷರಿಗೆ ದೊರೆತಿರುತ್ತವೆ. ಫ್ರೆಂಚರಿಗೂ ಶತ್ರುಗಳಿಗೂ ಶಂಪೇನೆಯಲ್ಲಿ ಭೀಕರ ಕಾಳಗ ನಡೆದಿರುವದು. ಫ್ರೆಂಚರು ಈ ಪ್ರಾಂತ್ಯದಲ್ಲಿ ಡಿಶಂಪೆನೆ ಫುತ್ತು ಬಟ್ಸಿಡು ಮೆಸಿನಲ್ ಎಂಬಲ್ಲಿ ಶತ್ರುಗಳ ನೆಲೆಗಳನ್ನು ಹಿಡಿದಿರುತ್ತಾರೆ. ೧೩೬ ಶತ್ರುಸೈನಿಕರೂ ೩ ಆಫೀಸರರೂ ಫ್ರೆಂಚರ ಸೆರೆಬಿದ್ದಿರುತ್ತಾರೆ. ರೋಯಿ ಎಂಬಲ್ಲಿಯೂ ಫ್ರೆಂಚರು ಜರ್ಮನರ ಕಂದಕಗಳನ್ನು ನುಗ್ಗಿ ಅವನ್ನು ಒಡೆದುಹಾಕಿರುತ್ತಾರೆ. ಶತ್ರುಗಳು ಫ್ರೆಂಚರ ಮೇಲೆ ನುಗ್ಗಿಹೋಗಿ ಆ ಪ್ರಾಂತ್ಯಗಳನ್ನು ಪುನಃ ಪಡೆಯಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಈ ಪ್ರಾಂತ್ಯದಲ್ಲಿ ೧೭೦ ಮಂದಿ ಶತ್ರುಸೈನಿಕರು ಬ್ರಿಟಿಷರ ಸೆರೆಬಿದ್ದಿರುತ್ತಾರೆ.

ಪೂರ್ವ ರಣರಂಗ.

ರುಶ್ಯನರು ಸರಹದ್ದಿನಲ್ಲೆಲ್ಲಾ ವಿಶೇಷ ಸೇನೆಯನ್ನೂ ಯುದ್ಧಸಾಮಗ್ರಿಗಳನ್ನೂ ಒಟ್ಟು ಹಾಕಿರುವರು. ಈ ಸರಹದ್ದಿನಲ್ಲಿ ಸದ್ಯದಲ್ಲಿ ಕಠಿಣ ಕದನಗಳು ನಡಿಯಲಿಕ್ಕಿವೆಂತ ತಿಳಿದುಬಂದದೆ.

ಈಜಿಪ್ಟ್.

ಶಿಲ್ಲಾಲಿಗೆ ಪಶ್ಚಿಮದಲ್ಲಿರುವ ಶೇಖ್‌ನರ್ಪ ಎಂಬಲ್ಲಿಯ ಬಲವಾದ ನೆಲೆಯನ್ನು ಶತ್ರುಗಳು ಬಿಟ್ಟುಹೋಗಿರುವರು. ಇಲ್ಲಿ ಶತ್ರುಗಳು ೩ ತಿಂಗಳುಗಳಿಂದ ಬಲಕಾಯಿಸಿಕೊಳ್ಳುವ ಕೆಲಸದಲ್ಲಿದ್ದರು. ತಾ. ೬ರಲ್ಲು ಬ್ರಿಟಿಷರ ವಾಯುನಾವೆಗಳು ಒಂದು ಟನ್ ಸಿಡಿಮದ್ದುಗಳನ್ನು ಶತ್ರುಗಳ ಸೈನಿಕರಿದ್ದ ಟ್ರೇನು ಬಂಡಿಗಳ ಮೇಲೆ ಬಿಸಾಡಿರುವವು.

ಮೆಸೊಪಟೇಮಿಯ.

ಇತರ ರಣರಂಗಗಳಲ್ಲಿ ಈಗ ವಿಶೇಷ ಲಕ್ಷ್ಯಕೊಡತಕ್ಕ ಸಂಗತಿಗಳು ಇಲ್ಲವಾದರೂ ಮೆಸೊಪಟೇಮಿಯ ರಣರಂಗದಲ್ಲಿ ವಿಶೇಷ ಸಂಗತಿಗಳು ನಡಿಯುತ್ತಲೇ ಇವೆ. ಈ ರಣರಂಗದಲ್ಲಿ ಒಂದುಸಾರಿ ಬ್ರಿಟಿಷರ ಕೈತಪ್ಪಿಹೋದ ಕ್ಯುಟ್‌ಲ್ ಅಮಾರವು ಬ್ರಿಟಿಷರಿಗೆ ಪುನಃ ಸ್ವಾಧೀನವಾಯಿತು. ಕುಟೇಲ ಅಮಾರವು ಟೈಗ್ರಿಸ್ ನದಿಯ ಮೇಲೆ ಬಗ್ದಾದಿಗೆ ಹೋಗುವ ದಾರಿಯಲ್ಲಿದೆ. ಕುಟೇಲ್ ಅಮಾರವು ಬ್ರಿಟಿಷರ ಸ್ವಾಧೀನವಾದ ನಂತರ ಬ್ರಿಟಿಷರು ಅಲ್ಲಿಯೇ ನಿಲ್ಲದೆ ಅವರ ಮುಖ್ಯ ಗುರಿಯಾಗಿರುವ ಬಗ್ದಾದಿನ ಕಡೆಗೆ ಮುಂದೆ ಸಾಗುತ್ತಿದ್ದಾರೆ. ಮುಂದೆ ಸಾಗಿ ಹೋಗುವದು ಸುಲಭವಾದ ಕೆಲಸವಲ್ಲ. ಯಾಕೆಂದರೆ ಈ ಪ್ರಾಂತ್ಯದಲ್ಲಿ ನೆನಸದಗಳಿಗೆಯಲ್ಲಿ ಬಿರುಗಾಳಿಗಳೂ ಮರುಭೂಮಿಯ ತುಫಾನುಗಳೂ ಏಳುತ್ತವೇ ಇವೆ. ಕುಡಿಯಲಿಕ್ಕೆ ನೀರು ಕೂಡಾ ಸಿಕ್ಕುವದು ಕಷ್ಟವಾಗುತ್ತದೆ. ಆದರೂ ಬ್ರಿಟಿಷರು ಇವನ್ನೆಲ್ಲಾ ಲಕ್ಷ್ಯಮಾಡದೆ ತಾ. ೫ರಲ್ಲಿ ಲಾಜ್ಜ ಎಂಬಲ್ಲಿಗೆ ತಲಪಿರುವರು. ಇಲ್ಲಿ ತುರ್ಕರು ಎದುರಾಯಿಸಿದರೂ ಕಡೆಗೆ ಫಲಹೊಂದದೆ ಈ ಸ್ಥಳವನ್ನೇ ಬಿಟ್ಟು ಹೋದರು. ಲಾಜ್ಜಿಯ ನಂತರ ಸಿಕ್ಕುವ ಮುಖ್ಯ ಪಟ್ಟಣ ಸಟಿಸ್‌ಫೋನು. ತಾ. ೬ರಲ್ಲಿ ಬ್ರಿಟಿಷರು ಸಟಿಸ್‌ಫೋನನ್ನು ಸೇರಿರುತ್ತಾರೆ. ಶತ್ರುಗಳು ರಾತ್ರಿಕಾಲ ಈ ಪಟ್ಟಣವನ್ನು ಬಿಟ್ಟುಹೋಗಿದ್ದರು. ೩೩ ಶತ್ರುಸೈನಿಕರು ಬ್ರಿಟಿಷರ ಸೆರೆಬಿದ್ದಿರುವರು. ಈಗ ಬ್ರಿಟಿಷರು ಬಗ್ದಾದಿನ ದಕ್ಷಿಣ ದಿಕ್ಕಿಗೆ ೬ ಮೈಲು ದೂರದಲ್ಲಿದ್ದಾರೆಂದು ತಿಳಿಯುವ ಮಾತ್ರದಿಂದ ಬ್ರಿಟಿಷರು ಇನ್ನು ಬಗ್ದಾದಿಗೆ ಬೇಗನೆ ತಲಪುವರೆಂತ ಧಾರಾಳವಾಗಿ ಹೇಳಬಹುದಾಗಿದೆ. ಕಡೆಗೆ ಬಂದ ವಾರ್ತೆಯಿಂದ ಬಗ್ದಾದ್ ಕೇಲ ಆದಿತ್ಯವಾರ ಬ್ರಿಟಿಷರ ಸ್ವಾಧೀನವಾಯಿತೆಂತ ತಿಳಿಯಬರುತ್ತದೆ.

ವಿದೇಶ ವೃತ್ತಾಂತ.

ಒಂದು ಮಂಗನ ಘಾತಕತನವು "ಡೈಲಿ ಮೈಲ್" ಪತ್ರಿಕೆಯಲ್ಲಿ ಪ್ರಕಟವಾದ ಒಂದು ವಾರ್ತೆಯಿಂದ ಹೊರ ಬಿದ್ದದೆ. ಮಲಯಾದ್ವೀಪದ ರಬ್ಬರ್ ತೋಟಗಳಲ್ಲಿ ಮಂಗನ ಆಟವನ್ನು ಆಡಿಸಿ ಒಂದು ಗುಡಿಸಲಲ್ಲಿ ಉಳಕೊಂಡಿದ್ದ ಒಬ್ಬ ಆಟಗಾರನ ಮೇಲೆ ಮಲಯಾ ದ್ವೀಪವಾಸಿಯೊಬ್ಬನು ಬಿದ್ದುಕೊಂದು ಸುಲಿಗೆಮಾಡಿ ಅವನ ಶವವನ್ನು ಹುಗಿದು ಬಿಟ್ಟನು. ತನ್ನ ಯಜಮಾನನನ್ನು ಕೊಲ್ಲುವಾಗ ಅಡಗಿ ಕುಳಿತಿದ್ದ ಮಂಗವು ಘಾತುಕನು ಹೋದನಂತರ ಹೊರಬಂದು ಅದೇ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಯೂರೋಪಿಯನನ ಮುಂದೆ ಬಂದು ಅವನ ಕಾಲಿನ ಇಜಾರನ್ನು ಎಳೆಯಿತು. ಅವನು ಮಂಗನಿಗೆ ಒದೆದು ಓಡಿಸ ಪ್ರಯತ್ನಿಸಿದನು. ಆದರೆ ಮಂಗವು ಓಡಿಹೋಗದೆ ಪುನಃ ಪುನಃ ಹಾಗೆಯೇ ಮಾಡಿ ಯಾವದೋ ಒಂದು ಸ್ಥಳವನ್ನು ಅವನಿಗೆ ತೋರಿಸುವಂತೆ ನಟಿಸಿದ್ದರಿಂದ ಆ ಯೂರೋಪಿಯನನು ಮಂಗನನ್ನು ಹಿಂಬಾಲಿಸಿ ಹೋದನು. ಕಟ್ಟಕಡೆಗೆ ಆ ಮಂಗವು ತನ್ನ ಯಜಮಾನನನ್ನು ಹುಗಿದಿಟ್ಟ ಸ್ಥಳಕ್ಕೆ ಹೋಗಿ ಮಣ್ಣನ್ನು ಕಾಲುಗಳಿಂದ ಪರಚಿ ತೆಗೆಯ ಪ್ರಾರಂಭಿಸಿತು. ಆ ಮನುಷ್ಯನು ಈ ವಿಷಯವನ್ನು ಪೋಲೀಸಿಗೆ ತಿಳಿಸಿದ್ದಲ್ಲಿ ಪೋಲೀಸರು ಬಂದು ಕುಣಿಯ ಮಣ್ಣನ್ನೆಲ್ಲಾ ತೆಗೆದು ನೋಡಲು ಹೆಣವು ದೊರೆಕಿತು. ಅನಂತರ ಪೋಲೀಸರು ಅನುಮಾನದ ಮೇಲೆ ಒಬ್ಬ ಮಲಯಿಯನ್ನು ಹಿಡಿದು ತಂದು ಇತರ ಕೆಲವು ಮಂದಿಯೊಡನೆ ಆ ಮಲಯಿಯನ್ನು ನಿಲ್ಲಿಸಿ ಆ ಮಂಗನನ್ನು ಮುಂದೆ ತಂದಲ್ಲಿ ಮಂಗವು ಬಹಳ ಸಿಟ್ಟಿನಿಂದ ಆ ಘಾತುಕ ಮಲಯಿಯ ಮೇಲೆ ಹಾರಿತು. ಪೋಲೀಸರು ಹಾಗೂ ಬಹಳ ಕಷ್ಟದಿಂದ ಆ ಘಾತುಕನಿಗೆ ಮಂಗನಿಂದ ವಿಶೇಷ ಕೇಡು ಆಗದ ಹಾಗೆ ಮಾಡಿದರು. ಹೀಗೆ ಘಾತುಕನ ಪತ್ತೆಯಾಯಿತು.

ಈ ವರ್ಷ ಹಿಂದೂಸ್ಥಾನದ [illegible]

ಬರುವ ಸಾಹಾಯ್ಯವನ್ನು ಉದೇಶಿಸಿಕೊಳ್ಳುವಂತೆ ಹೀಗೆ ಮಾಡಬೇಕಾಯಿತೆಂತಲೂ ಹೇಳಿರುತ್ತಾರೆ.

ಕಳೆದ ವಾರದಲ್ಲಿ ಬ್ರಿಟಿಷ ದ್ವೀಪಗಳ ಬಂದರಗಳಿಗೆ ೨೨೮೦ ಹಡಗಗಳು ಸುರಕ್ಷಿತವಾಗಿ ಬಂದು ತಲಪಿರುವವು. ೨೪೭೭ ಹಡಗಗಳು ಈ ಬಂದರಗಳಿಂದ ಪ್ರಯಾಣ ಹೊರಟಿರುವವು. ೧೬೦೦ ಟನ್‌ಗಳು ವ ಅವಕ್ಕೆ ಮಿಕ್ಕಿದ ಭರಾವಹೆಯ ೧೪ ಹಡಗಗಳೂ, ೧೬೦೦ ಟನ್ ಭರಾವಹೆಗೆ ಕಡಿಮೆಯ ೯ ಹಡಗಗಳೂ ಮೀನುಗಾರರ ೩ ಹಡಗಗಳೂ ಕಳೆದವಾರ ಜರ್ಮನರ ಜಲಾಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ. ಜಲಾಂತರ್ಗಾಮಿ ನಾವೆಗಳು ಮೇಲ್ಬಾಯಿದ ೧೨ ಹಡಗಗಳು ತಪ್ಪಿಸಿಕೊಂಡಿರುವವು. ಮಾರ್ಚ ತಾ. ೪ಕ್ಕೆ ಅಂತ್ಯವಾಗುವ ವಾರದಲ್ಲಿ ಫ್ರೆಂಚ್ ಬಂದರಗಳಿಗೆ ೮೫೯ ವ್ಯಾಪಾರ ಹಡಗಗಳು ತಲಪಿರುವವು. ಫ್ರೆಂಚರ ೧೬ ಮೀನುದೋಣಿಗಳು ಮುಳುಗಿಸಲ್ಪಟ್ಟಿರುವವು. ೧೬೦೦ ಟನ್ ಭರಾವಹೆಗೆ ಮಿಕ್ಕಿದ ಒಂದು ಹಡಗ ಮಾತ್ರ ಜಲಯಾನಕ್ಕೆ ತುತ್ತಾಗಿದೆ.

ಜರ್ಮನರು ಬೆಲ್ಜಿಯಮಿನ ಎಲ್ಲಾ ಕೈಗಾರಿಕೆ ಕಾರ್ಖಾನೆಗಳನ್ನು ಮುಚ್ಚಿಬಿಟ್ಟು ಅಲ್ಲಿಯ ಪ್ರಜಾಜನರಿಗೆ ವೃತ್ತಿ ಇಲ್ಲದಂತೆ ಮಾಡಿರುವರಾಗಿ ತಿಳಿದುಬಂದದೆ.

ಫ್ರೆಂಚರ "ಕೆಸೆನ್ನೆ" ಎಂಬ ಡಿಸ್ಟ್ರೋಯರ್ ಯುದ್ಧನಾವೆಯು ಮೆಡಿಟರೇನಿಯನ್ ಕಡಲಲ್ಲಿ ಶತ್ರುಗಳ ಜಲಯಾನಕ್ಕೆ ತುತ್ತಾಗಿ ೧೦೦ ಮಂದಿ ನಾಶವಾದರು. ೨ ಆಫೀಸರರೂ ೩೨ ಸೈನಿಕರೂ ಬದುಕಿಕೊಂಡರು.

ಗ್ರೀಸ್ ದೇಶಕ್ಕೆ ಅಮೇರಿಕದಿಂದ ಆಹಾರ ಕೊಂಡುಬರುತ್ತಿದ್ದ ಗ್ರೀಕರ ಒಂದು ಹಡಗವನ್ನು ಜರ್ಮನರ ಜಲಯಾನವು ಮುಳುಗಿಸಿರುತ್ತದೆ. ಈ ಹಡಗದಲ್ಲಿ ೫೦೦ ಟನ್ ಆಹಾರ ಪದಾರ್ಥಗಳು ಇದ್ದವು. ಈ ಆಹಾರ ಪದಾರ್ಥಗಳೆಲ್ಲಾ ಮುಳುಗಿ ಹೋದ್ದರಿಂದ ಗ್ರೀಕ ಜನರು ಹೊಟ್ಟೆಗಿಲ್ಲದೆ ಬಳಲುವಕಾಲ ಬಂದದೆಂತ ಅಥೆನ್ಸಿನ 'ಟ್ರಿಬ್ಯೂನ್' ಪತ್ರಿಕೆಯು ಹೇಳುತ್ತದೆ.

ಈಗಿನ ಯುದ್ಧದಲ್ಲಿ ಪ್ರಯೋಗಿಸಲ್ಪಡುವ ಅಂತರಿಕ್ಷ ನಾವೆಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದ ಜೆಪಲಿನ್ ನಾವೆಗಳನ್ನು ನಿರ್ಮಿಸಿದ ಕೌಂಟ್ ಜೆಪಲಿನ್ ಎಂಬವರು ಹೃದ್ರೋಗದಿಂದ ಚಾರ್ಲೊಟೆನ್‌ಬರ್ಗನಲ್ಲಿ ಕಾಲವಾದರು. ಇವರ ಮರಣದಿಂದ ಇಡೀ ಜರ್ಮನ ಮಾತೃಭೂಮಿಯು ಪ್ರಾಮುಖ್ಯ ಪುರುಷನಾಗಿರುವ ಒಬ್ಬ ವ್ಯಕ್ತಿಯನ್ನು ಗತಿಸಿಹೋದಂತಾಯಿತೆಂದೂ ಇದಕ್ಕಾಗಿ ಜರ್ಮನಿಯವರೆಲ್ಲರೂ ತನ್ನೊಡನೆ ವಿಷಾದಪಡುತ್ತಿದ್ದಾರೆಂಬದಾಗಿಯೂ ಸೂಚಿಸುವ ಪತ್ರವನ್ನು ಕೈಸರು ಮೃತರ ಪತ್ನಿಯವರಿಗೆ ಕಳುಹಿಸಿಕೊಟ್ಟಿರುತ್ತಾರೆ.

ಹೋಮ್‌ರೂಲು ಕೇಳುವ ಐರ್ಲಾಂಡಿನ ಒಂದು ಅಂಶಕ್ಕೆ ಸ್ವರಾಜ್ಯವು ಕೊಡಲ್ಪಡುವದೆಂಬದಾಗಿ ಬ್ರಿಟಿಷ ಪ್ರಧಾನ ಮಂತ್ರಿಯವರಾದ ಲೋಯ್ಡರವರು ಮಂತ್ರಿಸಭೆಯಲ್ಲಿ ಹೇಳುತ್ತಾರೆ.

ಮೈಸೂರಿನ ಪ್ರಭುಗಳ ಮಗ ಲೆಫ್ಟಿನೆಂಟ ಎಫ್. ಐ. ಟಿಪಿಗ್‌ರವರಿಗೆ ರಣರಂಗದಲ್ಲಿ ಗಾಯವಾಗಿಯದೆ.

ಬ್ರಿಟಿಷ ಸರಕಾರದವರ ಯುದ್ಧದ ಖರ್ಚು ೪ ಅರ್ಬುದ ಪವನುಗಳಾಗಬಹುದೆಂದು ಅಂದಾಜಾಗಿದೆ. ಎಂದರೆ ನಿಮಿಷ ಒಂದಕ್ಕೆ ೩೦೦೦ ಪವನ ವೆಚ್ಚವಾದ ಹಾಗಾಯಿತು.

ಈಗ ಯುದ್ಧಮಾಡುತ್ತಿರುವ ಉಭಯ ಪಕ್ಷದವರಿಗೂ ವೆಚ್ಚವಾಗುತ್ತಿರುವ ರೀತಿಯಲ್ಲಿ ಕರಕಾಲದವರೆಗೂ ನಡೆದುದಾದರೆ ೨೭೦,೦೦೦,೦೦೦,೦೦೦ ರೂಪಾಯಿಗಳು ವೆಚ್ಚವಾದಂತಾಗುವದು ಎಂತ ಅಂದಾಜಾಗಿದೆ.

ಹಂಗೇರಿಯದ ಆಹಾರ ಪದಾರ್ಥಗಳ ಕಂಟ್ರೋಲರು ಒಂದು ರಾತ್ಲ ಬೆಣ್ಣೆಗೆ ರೂ. ೭ ೧೪-೦ ಬೆಲೆಯನ್ನು ನಿರ್ಣಯಮಾಡಿರುತ್ತಾರೆ.

ಶತ್ರುಗಳ ಜಲಯಾನಗಳನ್ನು ನಾಶಮಾಡುವ ಸಾಧನೆಗಳನ್ನು ಮಾಡುವ ಬಗ್ಗೆ ಹೈದರಾಬಾದಿನ ನೈಜಾಮರವರು ಸಾರ್ವಭೌಮ ಸರಕಾರಕ್ಕೆ ೧೦೦ ಸಾವಿರ ಪವನುಗಳನ್ನು ಕೊಟ್ಟಿರುತ್ತಾರೆ.

ನ್ಯೂಯೋರ್ಕಿನ ಪೋಲೀಸಿನವರು ಫ್ರಿಟ್ಜ್ ಕೊಲ್ಬ ಎಂಬವನನ್ನು ಕೈದು ಮಾಡಿರುತ್ತಾರೆ. ಇವನು ದಾಕ್ಟರ್ ವಿಲ್ಸನರನ್ನೂ ನ್ಯೂಯೋರ್ಕ ಬಂದರವನ್ನೂ ಸಿಡಿಮದ್ದಿನಿಂದ ಹಾರಿಸಲು ಪಿತೂರಿ ನಡಿಸಿದ ಮಂಡಲಿಯವನು ಎಂತ ಆರೋಪ ಮಾಡಿರುತ್ತಾರೆ. ಅವನ ಕೋಣೆಯಲ್ಲಿ ೨ ಬೊಂಬುಗಳು ದೊರಕಿರುತ್ತವೆ. ಕೊಲ್ಬನ ಆರೋಪದ ಪ್ರಕಾರ ಇತರ ಇಬ್ಬರನ್ನೂ ಪೋಲೀಸಿನವರು ಕೈದು ಮಾಡಿರುತ್ತಾರೆ.

ಮೆಸೊಪಟೇಮಿಯದಲ್ಲಿ ಈಗ ಬ್ರಿಟಿಷ ಜನರಲರಾಗಿರುವ ಮೇಜರ್ ಜನರಲ್ ಮೋಡಿಯವರು ಈಚೆಗೆ ಮೆಸಪೊಟೇಮಿಯದಲ್ಲಿ ಮಾಡಿದ ಕೆಲಸಗಳಿಂದ ಅವರಿಗೆ ಲೆಫ್ಟಿನೆಂಟ ಜನರಲ್ ಹುದ್ದೆಗೆ ಬಡ್ತಿ ಆಗಿರುತ್ತದೆ.

ಸಾಮ್ರಾಜ್ಯ ಯುದ್ಧ ಸಭೆಯು ಲಂಡನಿನಲ್ಲಿ ಸದ್ಯದಲ್ಲೇ ಕೂಡಲಿಕ್ಕಿದೆ ಎಂಬದಾಗಿ ಮಿ। ಬೊನರ್‌ಲಾರವರು ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಸಂಯುಕ್ತ ಸಂಸ್ಥಾನಗಳ ಲೆಫ್ಟಿನೆಂಟ ಗವರ್ನರರಾಗಿರುವ ಸರ್ ಜೇಮ್ಸ್ ಮೆಸ್ಟನರ ಕೆಲಸದವಧಿಯು ಬರುವ ನವಂಬರ ತಿಂಗಳ ವರೆಗೆ ಹೆಚ್ಚಿಸೋಣಾಗಿರುವದು. ಈ ಅವಧಿಯನಂತರ ಬರ್ಮಾದಲ್ಲಿ ಲೆಫ್ಟಿನೆಂಟ ಗವರ್ನರರಾಗಿರುವ ಬಹುಮಾನಪಟ್ಟ ಸರ್ ಹಾರ್ಕೋರ್ಟ ಬಟ್ಲರವರು ಸಂಯುಕ್ತ ಸಂಸ್ಥಾನಗಳ ಲೆಫ್ಟಿನೆಂಟ ಗವರ್ನರರಾಗಿ ನೇಮಿಸಲ್ಪಟ್ಟಿರುತ್ತಾರೆ. ಮೈಸೂರಿನ ಪ್ರಭುಗಳ ಕಾರ್ಯನಿರ್ವಾಹಕ ಸಭೆಯಲ್ಲಿ ಮೆಂಬರರಾಗಿರುವ ಬಹುಮಾನಪಟ್ಟ ಸರ್. ರೆಗಿನಾಲ್ಡ್ ಕ್ರೆಡೋಕ್ ಕೆ. ಸಿ. ಎಸ್. ಐರವರು ಬರ್ಮಾದ ಲೆಫ್ಟಿನೆಂಟ ಗವರ್ನರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಗಿರ್ಮಿಟರಾರು ಕೂಲಿಪದ್ಧತಿಯನ್ನು ನಿಷೇಧಿಸುವ ಉದ್ದೇಶದಿಂದ ವಿದುಷಿಗಳ ಒಂದು ಸಭೆಯು ಕಲ್ಕತ್ತೆಯ ರಾಮಮೋಹನ ಲೈಬ್ರೆರಿಯಲ್ಲಿ ಇದೇ ತಾ. ೯ರಲ್ಲು ಕೂಡಿ ಬಂದಿರುತ್ತದೆ. ಈ ಸಭೆಯಲ್ಲಿ ಲೇಡಿ ಬೋಸರವರು ಅಧ್ಯಕ್ಷರಾಗಿದ್ದರು. ಲೇಡಿ ಬೋಸರವರು ತನ್ನ ಭಾಷಣದಲ್ಲಿ ಈ ಪದ್ಧತಿಯನ್ನು ಇನ್ನುಮುಂದಕ್ಕೆ ತಾಳಿಕೊಳ್ಳುವದು ಹಿಂದೂಸ್ಥಾನದ ಹೆಂಗಸರಿಗೆ ಅಸಾಧ್ಯವಾಗಿದೆಂಬ ವಿಷಯವನ್ನು ಒತ್ತಿ ಹೇಳಿರುತ್ತಾರೆ. ಕೊನೆಗೆ ಸಭೆಯಲ್ಲಿ ಈ ಗಿರ್ಮಿಟರಾರು ಕೂಲಿಪದ್ಧತಿಯನ್ನು ಕೂಡಲೇ ನಿಲ್ಲಿಸಬೇಕೆಂಬ ನಿರ್ಣಯಗಳಾಗಿರುವವು.

ಅಲ್ಲಹಾಬಾದಿನ ಕಾಲೇಜು ವಿದ್ಯಾರ್ಥಿಗಳಲ್ಲಿ ಪ್ರತಿ ಒಬ್ಬನು ಕಾಲೇಜಿಗೆ ಸಂಬಂಧಪಟ್ಟ ಅಥವಾ ಯುನಿವರ್ಸಿಟಿಯವರಿಂದ ಮಂಜೂರಾತಿಯನ್ನು ಪಡೆದ ಹಾಸ್ಟೆಲುಗಳಲ್ಲಿ ವ ಹತ್ತರ ಮನೆಗಳಲ್ಲಿ [illegible] ಹಾಸ್ಟೆಲುಗಳಲ್ಲಿ [illegible] ಮಾತ್ರ [illegible]

ಬಾದಿನ ಡಿರೆಕ್ಟರರವರು ಯುನಿವರ್ಸಿಟಿ ಸೆನೆಟ್ [illegible] ಸೂಚನೆಗಳಿಗೆ ಸೆನೆಟ್ ಸಭೆಯವರು ತಮ್ಮ ಸಮ್ಮತಿಯನ್ನು ಕೊಟ್ಟಿರುತ್ತಾರೆ.

ಇಂಡಿಯಾ ಸರಕಾರದವರ "ವಾರ್‌ಲೋನ್"ಗೆ ಸಾಲಕೊಡುತ್ತೇವೆಂತ ವಾಗ್ದಾನ ಮಾಡಿದವರಲ್ಲಿ ಈವರೆಗೆ ಹೆಚ್ಚಿನ ಸಾಲಕೊಡುವ ವಾಗ್ದಾನ ಮಾಡಿದವರು ಕಲ್ಕತ್ತ ಮತ್ತು ಮುಂಬಾಯಿಯ ಪ್ರಖ್ಯಾತ ಮಾರ್‍ವಾರಿ ಸಾಹುಕಾರರಾಗಿರುವ ರಾಯಸ್ಥಹಪಚಂದ ಹುಕುಂಚಂದ ಬಹದ್ದೂರರವರು. ಇವರು ೯೦ ಲಕ್ಷ ರೂಪಾಯಿಗೆ ಕಡ್ಡಿಯಾಗದ ಮೊಬಲಗನ್ನು ಸಾಲವಾಗಿ ಕೊಡುವೆನೆಂತ ವಾಗ್ದಾನ ಮಾಡಿರುವರು.

ಬೆಳ್ಗಾಮಿನಲ್ಲಿ ಸ್ಥಾಪಿಸಲಾದ ಕರ್ನಾಟಕ ಹೋಮ್‌ರೂಲು ಲೀಗಿನ ಸಭೆಯಲ್ಲಿ ಹೋಮ್‌ರೂಲು ಮತ್ತು ಡಿಫೆನ್ಸ ಅಫ್ ಇಂಡಿಯಾ ಫೋರ್ಸ ವಿಧಿಯ ಸಂಬಂಧವಾಗಿ ಭಾಷಣಗಳನ್ನು ಕೊಡುವ ಉದ್ದೇಶದಿಂದ ಮಿ। ರಾ। ಖಾಡಿಲಕರರವರು ಧಾರವಾಡದಿಂದ ಬೆಳ್ಗಾಮಿಗೆ ಹೋದರು. ಮೆ। ರಾ। ಖಾಡಿಲಕರರವರು ಬೆಳ್ಗಾಮಿನ ರೈಲ್ವೆ ನಿಲ್ದಾಣದಲ್ಲಿ ಇಳಿಯುತ್ತಲೇ ಪೋಲಿಸ ಅಕ್ಟಿನ ಮೇರೆಗೆ ಮಿ। ರಾ। ಖಾಡಿಲಕರರವರು ಭಾಷಣವನ್ನು ಕೊಡಕೂಡದೆಂಬ ನೋಟೀಸನ್ನು ಪೋಲೀಸಿನವರು ಅವರಿಗೆ ಜ್ಯಾರಿಮಾಡಿದರು. ಅನಂತರ ಹಾಗೂ ಈ ಸಭೆಯಲ್ಲಿ ಮಿ। ರಾ। ಗಂಗಾಧರಾವ್ ದೇಶಪಾಂಡೆಯವರು ಭಾಷಣಮಾಡಿದರು.

ಗಿರ್ಮಿಟರಾರು ಕೂಲಿಪದ್ಧತಿಯನ್ನು ನಿಲ್ಲಿಸಬೇಕೆಂಬ ಸಾರ್ವಜನಿಕ ಮತವನ್ನು ಸೂಚಿಸುವ ಸಭೆಯು ತಾ. ೬ರಲ್ಲು ಕಲ್ಕತ್ತೆಯ ಟವ್ನ ಸಭಾಸದನದಲ್ಲಿ ಕೂಡಿಬಂದಿರುತ್ತದೆ. ಈ ಸಭೆಗೆ ಕಾಸಿಂಬಜಾರಿನ ಮಹಾರಾಜರು ಅಧ್ಯಕ್ಷರಾಗಿದ್ದರು. ಬಾಬು ಸುರೇಂದ್ರನಾಥ ಬೆನರ್ಜಿಯವರು ಗಿರ್ಮಿಟರಾರು ಕೂಲಿಪದ್ಧತಿಯನ್ನು ಯಾವದೊಂದು ಶರ್ತಗಳಿಲ್ಲದೆ ತಾ. ೩೧ನೇ ಮಾರ್ಚಿಯೊಳಗೆ ನಿಲ್ಲಿಸಬೇಕೆಂಬ ಸೂಚನೆಯನ್ನು ಈ ಸಭೆಯ ಮುಂದೆ ತಂದರು. ಮಾನ್ಯ ಗಾಂಧಿಯವರು ಈ ಸೂಚನೆಯನ್ನು ಅನುಮೋದಿಸಿದರು. ನಂತರ ಸಿ. ಎಫ್ ಆಂಡ್ರ್ಯೂಸರವರು ವಸಾಹತಿಗಳಿಗೆ ಹೋಗುವ ಕೂಲಿಗಳ ಸಂಬಂಧವಾಗಿ ಆಲೋಚನೆ ನಡಿಸುವರೆ ಲಂಡನಿನಲ್ಲಿ ಕೂಡಲಿಕ್ಕಿರುವ ಸಭೆಗೆ ಹಿಂದೂಸ್ಥಾನದ ಪ್ರಜಾ ಪ್ರತಿನಿಧಿಗಳನ್ನು ಕಳುಹಿಸಬೇಕು ಮತ್ತು ಈ ಸಭೆಯಲ್ಲಾದ ನಿರ್ಣಯಗಳನ್ನು ಹಿಂದೀ ಜನರ ಮುಂದೆ ಇಟ್ಟು ವಾದ ಪ್ರತಿವಾದಗಳನ್ನು ನಡಿಸುವ ಮೊದಲು ಇಂಡಿಯಾ ಸರಕಾರದವರು ಕಾಯಮಾಗಿ ಈ ಸಂಬಂಧದಲ್ಲಿ ಏರ್ಪಾಡನ್ನು ಮಾಡಬಾರದೆಂಬ ಸೂಚನೆಯನ್ನು ಸಭೆಯ ಮುಂದೆ ತಂದರು. ಈ ಸೂಚನೆಯೂ ಸಭೆಯಲ್ಲಿ ಪಾಸಾಯಿತು. ಅದಲ್ಲದೆ ಮಾರ್ಚ ತಾ. ೩೧ರ ಮಧ್ಯಕಾಲ ಈ ಪದ್ಧತಿಯ ಪ್ರಕಾರ ಯಾವ ಹೆಂಗಸನ್ನಾದರೂ ಮಕ್ಕಳನ್ನಾದರೂ ಹಿಂದೂಸ್ಥಾನದಿಂದ ಹೋಗಲು ಬಿಡಬಾರದೆಂಬ ಸೂಚನೆಯೂ ಈ ಸಭೆಯಲ್ಲಿ ಸರ್ವಸಮ್ಮತಿಯನ್ನು ಹೊಂದಿರುತ್ತದೆ.

ಯುದ್ಧದ ಬಗ್ಗೆ ಇಂಡಿಯಾ ಸರಕಾರದವರು ಹಿಂದೂಸ್ಥಾನದಲ್ಲಿ ಕೇಳಿಕೊಳ್ಳುವ "ಸ್ಪೆಶ್ಯಲ್ ವಾರ್ ಲೋನ್" ಸಾಲದ ಸಂಬಂಧ ಹಿಂದೂಸ್ಥಾನದ ಪ್ರಾಮುಖ್ಯ ನಗರಗಳಲ್ಲೆಲ್ಲಾ ಸಾರ್ವಜನಿಕ ಸಭೆಗಳು ಕೂಡಿ ಈ ಸಾಲವನ್ನು ಆದಷ್ಟು ಮಟ್ಟಿಗೆ ಒದಗಿಸಿಕೊಡಬೇಕೆಂಬ ಆಲೋಚನೆಗಳು ನಡೆದಿರುವವು.

ಇಂಡಿಯಾ ಸರಕಾರದವರಿಗೆ ಸಿಮ್ಲಾಕ್ಕೆ ಹೋಗಿ ಉಳಕೊಳ್ಳುವ ಬಗ್ಗೆ ೧೯೧೪—೧೫ನೇ ಇಸವಿಯಲ್ಲಿ ರೂ. ೩,೦೫,೮೫೭ ಖರ್ಚಾಗಿರುವದು. ೧೯೧೨-೧೩ನೇ ಇಸವಿಯಿಂದ ಈ ಖರ್ಚ ಕ್ರಮೇಣ ವಿಪರೀತ ಬಂದಿರುವದು. ೧೯೧೨-೧೩ನೇ ಇಸವಿಯಲ್ಲಿ ಈ ಬಗ್ಗೆ ರೂ. ೨,೩೭,೩೬೫ ಮಾತ್ರ ಖರ್ಚಾಗಿರುವದು. ಖರ್ಚಾಗುವ ಈ ಹಣದ ಹೆಚ್ಚಿನಾಂಶವು ಪ್ರಯಾಣದ ಎಲ್ಲೊವೆನ್ಸ್ ಬಗ್ಗೆ ಹೋಗುತ್ತದೆ. ೧೯೧೨—೧೩ನೇ ಇಸವಿಯಲ್ಲಿ ಈ ಎಲ್ಲೊವೆನ್ಸ್ ಬಗ್ಗೆ ರೂ. ೧,೬೭,೨೫೮ ಖರ್ಚಾಗಿತ್ತು. ೧೪—೧೫ನೇ ಇಸವಿಯಲ್ಲಿ ಈ ಎಲ್ಲೊವೆನ್ಸ್ ರೂ. ೨,೩೪,೮೮೯ಕ್ಕೆ ಏರುತ್ತದೆ. ಇತರ ಖರ್ಚು ಅಡಿಗೆಯ ಕಟ್ಟಿಗೆ ಬಗ್ಗೆ ಕೊಡೋಣಾಗುತ್ತದೆ. ೧೯೧೨ನೇ ಇಸವಿಗಿಂತ ೧೯೧೪—೧೫ನೇ ಇಸವಿಗಳಲ್ಲಿ ಈ ಬಗ್ಗೆ ಕೊಡೋಣಾದ ರೂಪಾಯಿಯು ಸುಮಾರು ೭೦೦೦ಕ್ಕೆ ಏರುತ್ತದೆ. ಪ್ರಜಾ ಜನರ ಹಿತದೃಷ್ಟಿಯಿಂದ ಈ ವೆಚ್ಚವು ವ್ಯರ್ಥವಾದುದೆಂದು ಹಿಂದೂಸ್ಥಾನದಲ್ಲೆಲ್ಲಾ ಮಾತು ಎದ್ದದೆ.

ಹಿಂದೂಸ್ಥಾನದಲ್ಲಿ ಮೇಹ ಮೊದಲಾದ ಸುಖಸಂಕಟಗಳು ಹೆಚ್ಚಾಗುತ್ತಾ ಬರುವದರಿಂದ ಇದರ ನಿವಾರಣೋಪಾಯದ ಬಗ್ಗೆ ತಕ್ಕ ಉಪಾಯಗಳನ್ನು ಆಲೋಚಿಸುವ ಉದ್ದೇಶದಿಂದ ಮುಂಬಾಯಿಯಲ್ಲಿ ಇದೇ ತಾ. ೭ರಲ್ಲು ಒಂದು ವೈದ್ಯಕ ಸಭೆಯು ಕೂಡಿರುವದು. ಈ ಸಭೆಯಲ್ಲಿ ಬಹುಮಾನಪಟ್ಟ ಜೀ ಎಸ್. ಕೆರ್ಟಿಸರವರು ಅಧ್ಯಕ್ಷರಾಗಿದ್ದು ಈ ಕನ್ಫರೆನ್ಸಿನಲ್ಲಿ ನಡೆಯತಕ್ಕ ವಿಷಯಗಳಲ್ಲಿ ಸರಕಾರದವರು ಅನುರಕ್ತರಾಗಿರುವರೆಂಬವನ್ನು ತೋರಿಸುವದೂ ದೇಶದೊಳಗಿಂದ ಈ ಮಹಾಮಾರಿಯನ್ನು ~~ಹೋಗಲಾಡಿಸುವರೆ ವೈದ್ಯಾಧಿಕಾರದರು ತಿಳಕೊಳ್ಳುವ ವ ಸೂಚಿಸುವ~~ ವಿಷಯಗಳನ್ನು ಆದಷ್ಟು ಮಟ್ಟಿಗೆ ಸಂಗ್ರಹಿಸಿ ಸರಕಾರದ ಮುಂದಿಡುವದೂ ತನ್ನ ಪ್ರಾಮುಖ್ಯ ಉದ್ದೇಶವೆಂದು ಹೇಳಿದರು. ಬಹುಮಾನಪಟ್ಟ ಸರ್ಜನ್ ಜನರಲರು ಈ ಸುಖಸಂಕಟಗಳಿಂದ ಉಂಟಾಗುವ ಅನಾಹುತಗಳನ್ನು ಚೆನ್ನಾಗಿ ವಿವರಿಸಿದರು. ಮುಂಬಾಯಿಯ ಹೆಲ್ತ ಆಫೀಸರರಾದ ಡಾಕ್ಟರ್ ಟರ್ನರರವರು ಈ ಕನ್ಫರೆನ್ಸನ್ನು ಕರೆಯಿಸಿದುದಕ್ಕೆ ಇದ್ದ ಉದ್ದೇಶವನ್ನು ವಿವರಿಸಿ, ಮುಂಬಾಯಿ ವೈದ್ಯರಿಂದ ಈ ಸಂಬಂಧದಲ್ಲಿ ತಕ್ಕ ಆಲೋಚನೆಗಳನ್ನು ಪಡಕೊಂಡು ಅವಶ್ಯವೆಂತಾದರೆ ಇಂತಹ ರೋಗಿಗಳಿಗೆ ಧರ್ಮಾರ್ಥವಾಗಿ ಉಪಚರಿಸುವರೆ ಸರಕಾರದ ಸಹಾಯ್ಯವನ್ನು ಪಡೆಯುವದೂ ಜನಸಾಮಾನ್ಯರ ಸಹಾನುಭೂತಿಯನ್ನು ಈ ಕಡೆಗೆ ಎಳೆಯುವದೂ ಈ ಕನ್ಫರೆನ್ಸಿನ ಪ್ರಾಮುಖ್ಯ ಉದ್ದೇಶವೆಂದು ಹೇಳಿ ಕನ್ಫರೆನ್ಸಿನ ಮುಂದೆ ತನ್ನ ಕೆಲವು ಆಲೋಚನೆಗಳನ್ನು ಇಟ್ಟರು. ಒಂದು ಆಸ್ಪತ್ರೆಯನ್ನು ತೆರೆದು ಧರ್ಮಾರ್ಥವಾಗಿ ರೋಗಿಗಳಿಗೆ ಉಪಚಾರ ಮಾಡುವದು ಮತ್ತು ಈ ಆಸ್ಪತ್ರೆಯಲ್ಲಿ ೧೦ [illegible] ರೋಗಿಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡುವದು, ಈ ಸುಖಸಂಕಟಗಳಿಂದುಂಟಾಗುವ ಕೆಡಕನ್ನು, ಅದಕ್ಕೆ ಬೇಗನೇ ಉಪಚಾರಮಾಡಿಕೊಳ್ಳುವದರ ಅವಶ್ಯಕತೆಯನ್ನು ಜನಸಾಮಾನ್ಯರಿಗೆ ತಿಳಿಯ ಹೇಳುವ ಏರ್ಪಾಡು ಮಾಡುವದು, ಇಂತಹ ರೋಗಿಗಳನ್ನು ಉಪಚರಿಸುವರೆ ದೊಡ್ಡ ದೊಡ್ಡ ಜನರಲ್ ಆಸ್ಪತ್ರೆಗಳಿಗೆ ಸಂದರ್ಭ ಉಂಟೋ ಎಂತ ತಿಳಕೊಳ್ಳುವದು, ಮೊದಲಾದ ಕೆಲವು ಸೂಚನೆಗಳನ್ನು ಡಾಕ್ಟರ್ ಟರ್ನರರವರು ಸಭೆಯ ಮುಂದೆ ಇಟ್ಟರು. ಬಳಿಕ ಈ ಸುಖಸಂಕಟದ ಸಂಬಂಧವಾಗಿ ಪ್ರಾಮುಖ್ಯ ವೈದ್ಯರು ಕೆಲವು ಉಪನ್ಯಾಸಗಳನ್ನು ಓದಿದರು. ಕೊನೆಗೆ ಡಾಕ್ಟರ್ ಟರ್ನರರ ಸೂಚನೆಗಳನ್ನು ಜಾರಿಗೆ ತರುವ ಎತ್ನಗಳ ಮಾಡುವರೆ ಒಂದು ಸಂಘವು ಏರ್ಪಟ್ಟಿತು.

ಶಿಕ್ಷಣ ವೃತ್ತಿಯನ್ನು ವಹಿಸುವಂಥವರಿಗೆ ಉಪಯೋಗುವ ಒಂದು ಮಹಾ [illegible] ಕ್ರಿಶ್ಚಿಯನ ಕಲ್ಕತ್ತೆಯ [illegible] ಕಾಲೇಜಿನಲ್ಲಿ ನಿರ್ಮಾಣವಾದ ಒಂದು [illegible] ಉದ್ಘಾಟಿತವಾಗಿರುವದು. ಈ [illegible] ಉಪಾಧ್ಯಾಯರಾಗಿದ್ದ ಮಿ। [illegible] ಎಂಬವರು [illegible] ಗೆ ೧೫೦೦೦ ರೂಪಾಯಿಗೆ [illegible] [illegible]

ಅನುಕ್ರಮಣಿಕೆ.

ಅಗ್ರಲೇಖ:—	ಪಾನು.
ಭಾರತ ಸಂರಕ್ಷಕ ಸೈನ್ಯ	೪
ಸ್ಫುಟವಿಚಾರಗಳು:—	
೧—೨ ಹಿಂದೂಸ್ಥಾನದ ಜಮಾ ಖರ್ಚು	೪-೫
೩ ಪ್ರೆಸ್ ಡೆಪ್ಯುಟೇಶನ್	,,
೪ ಶಿಕ್ಷಣಕ್ಕೆ ಸರಕಾರದ ಸಾಹಾಯ್ಯ	,,
೫ ಮುನ್ಸಿಪಲ್ ವ್ಯವಸ್ಥೆ ಮತ್ತು ಪಟ್ಟಣದಲ್ಲಿಯ ಪ್ಲೇಗು ಹಾವಳಿ	೫
ಶ್ಲೋಕ — ಮಂಗಳೂರು	,,
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೩
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದೂಸ್ಥಾನ	೩-೬
ಪತ್ರವ್ಯವಹಾರ ಮತ್ತು ಬಾತಮಿಗಳು.	
ಕನ್ನಡಿಗರ ಮೂರನೇ ಸಮ್ಮೇಳನ	೬
ಉಪಾಧ್ಯಾಯರ ಕೆಪಿಟೇಶನ್ ಎಲೊವೆನ್ಸ್	,,
ಕುಂಬಳೆ	೪

ಸ್ವದೇಶಾಭಿಮಾನಿ.

ಶಕ ೧೮೩೯ ಫಾಲ್ಗುಣ ಶು. ೮ ಶುಕ್ರವಾರ.

ಭಾರತ ಸಂರಕ್ಷಕ ಸೈನ್ಯ.

ನಾವು ಎರಡು ವಾರದ ಹಿಂದೆ ಬ್ರಿಟಿಷ ಸರಕಾರವು ಹಿಂದೀ ಜನರಿಗೆ ಸೈನ್ಯದಲ್ಲಿ ಪ್ರವೇಶವನ್ನು ಕೊಟ್ಟು ಒಂದು ತರದಿಂದ ಅವರ ಪೌರುಷದಲ್ಲಿ ಭಾಲನೆಯನ್ನು ಮಾಡ್ಡಿಸುವ ಸಂದರ್ಭವನ್ನು ಒದಗಿಸಿದೆಂದು ಅಗ್ರಲೇಖದಲ್ಲಿ ಸೂಚಿಸಿರುವೆವಷ್ಟೆ. ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಈ ಬಿಲ್ಲನ್ನು ತಂದು ಕಮಾಂಡರ-ಇನ್-ಚೀಫರು ತಮ್ಮ ಅಭಿಪ್ರಾಯವನ್ನು ವಿಶದಪಡಿಸಿದಾಗ ಹಿಂದೀ ಸಭಾಸದರು ತಂತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದರು. ಈ ಪ್ರಸಂಗದ ಕಮಾಂಡರ-ಇನ್-ಚೀಫರ ಧೋರಣವನ್ನೂ ಹಿಂದೀ ಸಭಾಸದರ ಅಭಿಪ್ರಾಯಗಳನ್ನೂ ಏಕೀಕರಿಸಿ ಅವುಗಳ ಒಂದೆ ಒಂದು ಇತ್ಯರ್ಥವನ್ನು ಹೊರಪಡಿಸುವುದಾದಲ್ಲಿ ಪಾಸಾದ ಈ ಹೊಸ ಕಾಯಿದೆಯಿಂದ ಹಿಂದೀ ಜನರ ಸಂಗಿನಲ್ಲಿ ಯಾವ ಮತ್ತು ಎಷ್ಟು ಲಾಭವು ಬಿದ್ದಿದೆ ಎಂದರೆ ಈ ಕಾಯಿದೆಯ ಸ್ವಭಸ್ವರೂಪವೇನೆಂಬುದನ್ನು ತಿಳಿಗೊಮ್ಮೆ ವಾಚಕರಿಗೆ ತಿಳಿಯಪಡಿಸುವುದು ಯುಕ್ತವೆಂದು ಕಂಡದ್ದರಿಂದ ಆ ಬಗ್ಗೆ ಈ ಹೊತ್ತು ಎರಡು ಮಾತುಗಳನ್ನು ಒರೆಯಲಾಲೋಚಿಸಿದ್ದೇವೆ.

ಕಳೆದ ತಿಂಗಳ ೨೦ನೆಯ ತಾರೀಕಿನಲ್ಲಿ ಪಾಸಾದ ಈ ಕಾಯಿದೆಯ ಸ್ವರೂಪವನ್ನು ತಿಳಿಯಹೇಳುವಾಗ ಮೊದಲಾಗಿ ಹೇಳತಕ್ಕ ಸಂಗತಿಯು ಇದಾಗಿದೆ: ಈ ಕಾಯಿದೆಯು ವಾಲಂಟಿಯರ ಅಥವಾ ಸ್ವಯಂ ಸೈನಿಕರವಲ್ಲ, ಸ್ವಯಂ ಸೈನಿಕತ್ವವೆಂದರೆ ವರ್ಷದಲ್ಲಿ ಕೆಲ ಸಮಯ ಯುದ್ಧ ಶಿಕ್ಷಣವನ್ನು ಪಡೆದು ಸರಕಾರಕ್ಕೆ ಅಗತ್ಯವಿರುವಾಗ ಯುದ್ಧದ ಕೆಲಸದ ಮೇಲೆ ಹೋಗುವುದು. ಈ ಶಿಕ್ಷಣವನ್ನು ತಕೊಳ್ಳುದಾಗಲಿ, ಯುದ್ಧಕಾಲವಲ್ಲದಾಗಾಗಲಿ ಈ ಸ್ವಯಂ ಸೈನಿಕರಿಗೆ ತಮ್ಮ ಸ್ವಂತ ಕೆಲಸಮಾಡಲು ಎಡೆಯಿರುವುದರಿಂದ ಸ್ವಯಂ ಸೈನಿಕತ್ವದ ಹಕ್ಕು ರಾಷ್ಟ್ರದೊಳಗಿನ ಸಾಧಾರಣ ಎಲ್ಲ ಜನತೆಯ ಉಪಭೋಗಿಸಬಹುದಾಗಿದೆ. ಆದರೆ ಪ್ರಸ್ತುತ ಕಾಯಿದೆಯು ಈ ತರದ್ದಲ್ಲ. ೧೯೧೭ರಲ್ಲಿ ಈ ನಮೂನೆಯ ಒಂದು ಕಾಯಿದೆಯು ಪಾಸಾಗಿದೆ; ಅದರ ಪ್ರಕಾರ ಹಿಂದುಗಳಿಗೆ ಮತ್ತು ಮುಸಲಮಾನರಿಗೆ ಸ್ವಯಂ ಸೈನಿಕತ್ವದ ಹಕ್ಕು ಇರಲಿಲ್ಲ. ಮೊನ್ನೆಯ ಕಾಯಿದೆಯಿಂದಲೂ ಅದು ಪ್ರಾಪ್ತವಾಗಲಿಲ್ಲ. ಹಿಂದೂಸ್ಥಾನದ ಸೈನ್ಯದಲ್ಲಿ ಇರುವ ಹಿಂದೀ ಜನರಿಗೆ ಕರ್ನಲ್, ಕೆಪ್ಟನ್ ಮುಂತಾದ ಹುದ್ದೆಗಳನ್ನು ಕೊಡಕೂಡದೆಂಬುದಾಗಿ ೧೯೧೧ನೆಯ ಇಸವಿಯಲ್ಲಿ ಇನ್ನೊಂದು ಕಾಯಿದೆಯು ಮಾಡಲ್ಪಟ್ಟಿದೆ. ಎಂದರೆ ಆ ಅಧಿಕಾರಗಳನ್ನು ಈ ಜನರಿಗೆ ಕೊಡಕೂಡದೆಂದು ಸ್ಪಷ್ಟವಾಗಿ ೧೯೧೧ನೆ ಇಸವಿಯ ಕಾಯಿದೆಯು ಮಾಡಲ್ಪಡದೆ ಇದ್ದರೂ ಅದರ ರಚನೆಯು ಮಾತ್ರ ಮೇಲಿನಂತಿದೆ. ಇದು ಖಂಡಿತ. ಆ ಕಾಯಿದೆಯಂತೆ ಹಿಂದೀ ಜವಾನನಿಗೆ ಹೆಚ್ಚೆಂದರೆ ಮೆಜರ-ಸುಭೆದಾರ ಪದವಿಗಳನ್ನು ಹೊಂದುವಷ್ಟು ಎಡೆಯಿದೆ, ಅಲ್ಲದೆ ಕರ್ನಲ್ ಆಗುವ ಆಶೆಯು ಅವನಿಗಿಲ್ಲ. ಮತ್ತು ಈ ಕರ್ನಲತನವು ಬಾರದೆ ಸ್ವತಂತ್ರ ರೀತಿಯಿಂದ ಸೇನಾನಾಯಕತ್ವವನ್ನು ಹೊಂದುವುದು ಅಸಾಧ್ಯವು. ಮೇಲಿನ ಕಾಯಿದೆಯ ಸ್ಥಿತಿಯು ಹೀಗಿದೆ. ಇದರಲ್ಲಿ ಕಂಡುಬರುವ ಕುಂದುಕೊರತೆಗಳು ಮೊನ್ನೆಯ ಕಾಯಿದೆಯಿಂದ ಪರಿಮಾರ್ಜಿಸಲ್ಪಟ್ಟಿವೆಂದು ಯಾರಾದರೂ ತಿಳಿದಿದ್ದರೆ ಅದು ಅವರ ಭ್ರಾಂತಿಯೆ ಸರಿ. ಈಗಿನ ಭಾರತ ಸಂರಕ್ಷಕ ಸೈನ್ಯದ ಮಸೂದೆಯು ಪಾಸಾಗುವಾಗ ನಾಮಾ| ಶರ್ಮಾ ಇವರು ಮೇಲಿನ ಕೊರತೆಗಳನ್ನು ತಳ್ಳಿಹಾಕುವಂತೆ ಕೆಲವು ಉಪಸೂಚನೆಗಳನ್ನು ತಂದರು. ಆದರೆ ಕಮಾಂಡರ-ಇನ್-ಚೀಫರ ದುರಾಗ್ರಹ ಮತ್ತು ಅದೂರದರ್ಶಿತ್ವದಿಂದ ಅವು ನಿರರ್ಥಕವಾದವು! ನಿಜವಾಗಿ ನೋಡಿದರೆ ಸೈನ್ಯದಲ್ಲಿರುವ ಕಪ್ಪು ಜನರಿಗೆ ಈ ಹಕ್ಕನ್ನು ಕೊಡುವುದು ಸರಕಾರದ ಕರ್ತವ್ಯವು. ಹಿಂದೀ ಸುಶಿಕ್ಷಿತರ ಮೇಲೆ ಯೋಗ್ಯ ವಿಶ್ವಾಸವನ್ನಿಡದೆಯೊ ಕಾರಣಾಂತರದಿಂದಲೊ ಸರಕಾರವು ಈ ಹಕ್ಕನ್ನು ಈ ಜನರಿಂದ ಬಚ್ಚಿಡಲು ಪ್ರಯತ್ನಿಸುವುದು ಸರಕಾರದ ಔದಾರ್ಯಕ್ಕೆ ಅಶ್ಲಾಘ್ಯವಾದುದಾದರೂ ಹಿಂದೀಜನರ ದುರ್ದೈವವೆ ಸರಿ.

ಸೈನ್ಯದಲ್ಲಿ ಅಶಿಕ್ಷಿತರ ಭರತಿಯು ಆಗುವ ತನಕ ಮೇಲಿನಂಥ ಅಧಿಕಾರಗಳನ್ನು ಅವರಿಗೆ ಕೊಡುವುದು ಇದೊಂದು ದೃಷ್ಟಿಯಿಂದ ಕ್ಷಮ್ಯವಾಗಿಯೆ ಇದ್ದೀತೆನ್ನೋಣ. ಕಾರಣ—ಮೆಜರ ಸುಭೆದಾರ ಈ ಕೆಲಸಗಳಿಂದಲೆ ಅಜ್ಞಾನಿಗಳ ತೃಪ್ತಿಯು ಆಗುವಹಾಗಿತ್ತು ಮತ್ತು ಹಾಗಾಗುತ್ತದೆಂತಲೂ ಗ್ರಹಿಸೋಣ. ಪರಂತು ಈಗ ಸೈನ್ಯದಲ್ಲಿ ಸರಕಾರಕ್ಕೆ ಸುಶಿಕ್ಷಿತರ ಸಂಖ್ಯೆಯು ಬೇಕಾಗಿರುವಾಗ ಆ ಸುಶಿಕ್ಷಿತರಿಗೆ ಅವರ ಆಕಾಂಕ್ಷೆಗಳು ಪೂರ್ಣವಾಗುವಂತೆ ಮೇಲುತರದ ಅಧಿಕಾರಗಳನ್ನು ಕೊಡುವುದು ಸರಕಾರದ ಕರ್ತವ್ಯವಲ್ಲವೆ? ಸುಶಿಕ್ಷಿತನಾದವನು ಸೈನ್ಯದಲ್ಲಿ ಸೇರಿ ಬರೆ ಸಿಪಾಯಿಯ ಕೆಲಸದಿಂದಲೆ ತೃಪ್ತನಾಗಿ ತನ್ನ ಎಲ್ಲ ಆಯುಷ್ಯವನ್ನು ಅದರಲ್ಲೆ ಕಳೆದಾನೆಂದು ನೆನೆಸುವುದು ತೀರ ಅಸಂಬದ್ಧವು. ಸರಕಾರಕ್ಕಾದರೂ ಇದು ಗೊತ್ತಿಲ್ಲವೆಂದಿಲ್ಲ. ಮತ್ತು ಆದುದರಿಂದಲೆ ಲೋಡ್ ಚೆಮ್ಸ್‌ಫರ್ಡರು ಹಿಂದೀ ಜನರಿಗೆ ೧೯೧೧ನೆಯ ಕಾಯಿದೆಯಂತೆ ಜಮಾದಾರಿಯ ಅಥವಾ ಸುಭೆದಾರಿಯ ಜಾಗೆಗಳನ್ನು ಕೊಡ್ತೇವೆಂದು ಸ್ಟೇಟ್ ಸೆಕ್ರೆಟರಿಗಳಿಗೆ ತಂತಿಮೂಲಕವಾಗಿ ತಿಳಿಸಿರುತ್ತಾರೆ. (ವಸ್ತುತಃ ಈ ಅಭಿವಚನವು ಶಾಬ್ದಿಕವಾದರೂ ಅದು ಬೇಗನೆ ಕಾರ್ಯರೂಪದಲ್ಲಿ ಪರಿಣಮಿಸಲೆಂದು ಆಶಾವಾದಿಗಳು ಪ್ರಾರ್ಥಿಸುತ್ತಾರೆ.

ಇರಲಿ. ಮೊನ್ನೆ ಪಾಸಾದ ಕಾಯಿದೆಯು ಸ್ವಯಂ ಸೈನಿಕತ್ವಕ್ಕೆ ಸಂಬಂಧಪಟ್ಟದ್ದಲ್ಲವೆಂದು ನಾವು ಮೇಲೆಯೆ ಹೇಳಿದ್ದೇವೆ. ಈ ಕಾಯಿದೆಯ ಸ್ವರೂಪವನ್ನು ಕಮಾಂಡರ-ಇನ್-ಚೀಫರ ಶಬ್ದಗಳಿಂದ ಹೇಳುವದಾದರೆ, ಭಾರತಸಂರಕ್ಷಕ ಸೈನ್ಯದ ಈ ಕಾಯಿದೆಯು ಕಾಯಮಿನದಲ್ಲ, ತಾತ್ಕಾಲಿಕ ಕಾರಣಗಳಿಗಾಗಿದೆ. ಎಂದರೆ ಸದ್ಯಃ ಇಲ್ಲಿಯ ಕಾಯಮಿನ ಹಿಂದೀ ಮತ್ತು ಆಂಗ್ಲ ಸಿಪಾಯಿಗಳನ್ನು ದೇಶದ ಹೊರಗೆ ಮಹಾ ಯುದ್ಧದಲ್ಲಿ ಕಳುಹಿಸಿಕೊಡುವುದು ಅಗತ್ಯವಿರುವುದರಿಂದ ಯುದ್ಧವು ಮುಗಿದು ಆರು ತಿಂಗಳು ದಾಟುವ ತನಕ ಎಂದರೆ ಸಾಧಾರಣ ಎರಡು ವರ್ಷಗಳ ವರೆಗೆ ದೇಶದಲ್ಲಿಯೆ ನಿಂತು ದೇಶದ ರಕ್ಷಣೆಯನ್ನು ಮಾಡುವುದು ಯುಕ್ತವಾಗಿದೆ. ಮತ್ತು ಇದಕ್ಕಾಗಿಯೆ ಈ ಹೊಸ ಕಾಯಿದೆಯ ಯೋಜನೆಯು ಒಂದಿರುವುದು. ಸಾಮ್ರಾಜ್ಯದ ಮೇಲೆ ಒದಗಿರುವ ಪ್ರಸಂಗವನ್ನು ಮನಸ್ಸಿನಲ್ಲಿ ತಂದು ಸುಶಿಕ್ಷಿತರು ಯಾವ ಅಟ್ಟಿಗಳನ್ನು ಹೇಳದೆ ಸ್ವಸಂತೋಷದಿಂದ ಸೈನ್ಯದಲ್ಲಿ ಸೇರಬೇಕೆಂಬುದಾಗಿ ಕಮಾಂಡರ್-ಇನ್-ಚೀಫರ ಆಶಯವಿದೆ. ಸೈನ್ಯದಲ್ಲಿ ಹೊಸದಾಗಿ ಸೇರುವ ಈ ಜನರನ್ನು ಮೊದಲಿನ ಕಪ್ಪು ಜನರ ಸೈನ್ಯದಂತೆಯೆ ನಡಿಸುವರು. ಈ ವರ್ಷ ಎರಡು ವರ್ಷಗಳ ಮುದ್ದತಿನಲ್ಲಿ ಇವರು ಸೈನ್ಯದಲ್ಲಿಯೆ ಇರಬೇಕಾದುದು. ಆದರೂ ಅವರನ್ನು ಹಿಂದೂಸ್ಥಾನದಿಂದ ಹೊರಗೆ ಕೊಂಡುಹೋಗದೆ ಇಲ್ಲಿಯೆ ಉಪಯೋಗಿಸತಕ್ಕದ್ದೆಂದು ಕಾಯಿದೆಯಲ್ಲಿ ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಿದೆ. ಸಾರಾಂಶ ಈ ಭಾರತ ಸಂರಕ್ಷಕ ಸೈನ್ಯವು ಪೋಲಿಸಿಯರ ಪದ್ಧತಿಯದಲ್ಲಾಗಿ ಬೇರೆ ಮಾದರಿಯ ಹಾಗು ತಾತ್ಕಾಲಿಕ ಉಪಯೋಗದ್ದಾಗಿವೆ. ಈ ಕಾಯಿದೆಯಂತೆ ಸೈನ್ಯದಲ್ಲಿ ಸೇರುವವರನ್ನು ಹಿಂದೂಸ್ಥಾನ ಬಿಟ್ಟು ಹೊರಗೆ ಕೊಂಡುಹೋಗಲಿಕ್ಕಿಲ್ಲವೆಂದು ಒತ್ತಿ ಆಶ್ವಾಸನೆಯನ್ನು ಕೊಟ್ಟಿರುವರು. ಕಮಾಂಡರ-ಇನ್-ಚೀಫರು ಪಲಟಣ ಹಕ್ಕಿನ ಸಂಬಂಧದಿಂದ ಹಿಂದುಗಳ ಆಕಾಂಕ್ಷೆಗಳನ್ನು ಪೂರ್ಣವಾಗಿ ಮರೆದುಬಿಡಲಿಲ್ಲವೆಂಬುದನ್ನು ಇಲ್ಲಿ ಸೂಚಿಸಲು ನಾವು ಸಂತೋಷಪಡುತ್ತೇವೆ. "ಹಿಂದೀ ಜನರಿಗೆ ಬೇಕಾದ ಸೈನ್ಯಾಧಿಕಾರಗಳ ಕಾಯಂ ಸ್ವಭಾವದವಾದುದರಿಂದ ಈ ತಾತ್ಕಾಲಿಕ ನಿರ್ವಾಹಕ್ಕೆಂದು ನಡೆದ ಪರ್ಯಾಪ್ತಿಯಲ್ಲಿ ಅವುಗಳನ್ನು ಆಲೋಚನೆಯಲ್ಲಿ ತೆಕೊಳ್ಳುವುದು ಅಷ್ಟೊಂದು ಪ್ರಶಸ್ತವಲ್ಲ. ಯುದ್ಧವು ಮುಗಿಯಲಿ, ಸರ್ವತ್ರ ಶಾಂತತೆಯುಂಟಾಗಲಿ, ಮನಸ್ಸು ಸ್ವಸ್ಥವಾಗಲಿ, ಆಗ ನಿಮ್ಮ ಹಿಂದೀ ಜನರಿಗೆ ಬೇಕಾದ ಹಕ್ಕುಗಳನ್ನು ಕೊಡುವಂತೆ ವಿಚಾರ ಮಾಡೋಣ." ಈ ಪ್ರಕಾರ ಕ. ಇ. ಚೀಫರು ಹಿಂದೂಸ್ಥಾನಕ್ಕೆ ಧೈರ್ಯವನ್ನು ಕೊಟ್ಟಿರುತ್ತಾರೆ.

ಕುಂಬಳೆ:— ಇಲ್ಲಿಯ ಸಾವಕಾರ ಮ| ರಾ| ದೇವಪ್ಪ ಪಾಮನ ಶೆಣ್ಯಾರವರು ಮುಂಬಾಯಿಯ ಮಾದರಿಯಲ್ಲಿ ಕಟ್ಟಿಸಿದ ಮೂರು ಅಂತಸ್ತಿನ ಅಂಗಡಿ ಕಟ್ಟೋಣದ ಪ್ರವೇಶ ಸಮಾರಂಭವು ಇದೇ ತಾ. ೨೪ರಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಇದಕ್ಕಾಗಿ ಪರಸ್ಥಳಗಳಿಂದ ಬಂದವರಿಗೆ ವ ಊರವರಿಗೆ ಆಯಾಯ ಮತಕ್ಕನುಸಾರವಾಗಿ ಫಲಹಾರ ಊಟಉಪಚಾರಗಳು ಯೋಗ್ಯರೀತಿಯಿಂದ ಮಾಡಿಸಿ ಬಡವರಿಗೆ ಅಕ್ಕಿ ವಗೈರೆ ಹಂಚಿಸಲ್ಪಟ್ಟಿತು. ರಾತ್ರಿ ಸುಶ್ರಾವ್ಯವಾದ ಗಾಯನ ಕಸರತ್ತುಗಳಾದ ನಂತರ ಸಾವಕಾರ ಮ| ರಾ| ಎಮ್. ಗೋವಿಂದ ಪೈ. ಬಿ. ಎ. ಆರ್ಯರವರು ಭಾರತಮಾತೆಯ ಪುತ್ರರಾದ ನಮಗೆ ಒಕ್ಕಟ್ಟಿನಿಂದ ಅನೇಕ ತರದ ಸುಖಸಂಪತ್ತುಗಳು ಒದಗುವವೆಂಬ ಚೆಲೋ ಭಾಷಣ ಮಾಡಿದ ನಂತರ ಪನ್ನೀರು ಫಲತಾಂಬೂಲಾದಿಗಳಿಂದ ಸಭಾವಿಸರ್ಜನೆಯಾಯಿತು.

ಇದೇ ಬರುವ ಎಪ್ರಿಲ್ ತಿಂಗಳ ಶುರುವಿನಿಂದ ಮಿಕ್ಸೆಡ್ ವ ಪಾಸೆಂಜರ್ ರೈಲುಗಾಡಿಗಳ ಸಮಯವನ್ನು ಮೊದಲಿನಂತೆ ಸರಿಪಡಿಸುವರಾಗಿಯೂ ಮೈಲುಗಾಡಿಯ ಸಮಯವು ಈಗಿನಂತೆ ಊರ್ಜಿತವಿಡುವದಾಗಿಯೂ ವರ್ತಮಾನವಿದೆ.

ತಾ. ೧೬ನೇ ಸಾಯಂಕಾಲ ಮದ್ರಾಸಿನಿಂದ ಬರುವ ಮೈಲು ಗಾಡಿಯು ಇಲ್ಲಿಗೆ ತಲ್ಪುತ್ತಲೇ ಇಂಜಿನ್ ಗಾಡಿಯು ಹಾಳಾದ್ದರಿಂದ ತಂಕರಾಗಿನಿಂದ ಬರುವ ಮಿಕ್ಸೆಡ್ ಟ್ರೈನಿನ ಇಂಜಿನ್ ತಾಗಿಸಿ ಅದರ ಪ್ರಯಾಣಿಕರನ್ನು ಸಹ ಹತ್ತಿಸಿ ರಾತ್ರಿ ಘಂಟೆ ೮ಕ್ಕೆ ಮೈಲು ಗಾಡಿಯು ಇಲ್ಲಿಂದ ಬಿಟ್ಟಿರುತ್ತದೆ.

ಮಂಗ್ರೂಲ್ ಬೋರ್ಡ ಮಾಪಿಳ್ಳಾ ಶಾಲೆಯು ಇದೇ ತಾ. ೧೩ರಿಂದ ಮೊಖಪಾಗಿ ಅದೇ ದಿವಸ ಕೋಳಿಯ ಅಟ ಪಕ್ಕದ ಗ್ರಾಮದಲ್ಲಿ ಇರುವುದಾಗಿ [illegible] ಎಂಬ ಕೇಳುತ್ತೇವೆ.

ಈ ಗಂಭೀರವಾದ ಅಭಿವಚನದ ಅರ್ಥವನ್ನು ನಿರ್ಣಯಿಸುತ್ತ ಕೂಡ್ರುವುದು ನಮ್ಮ ಕೆಲಸವಲ್ಲ. ಬರುವ ಭಾವಿಕಾಲವೆ ಮತ್ತು ಕ. ಇ. ಚೀಫರು ಭಾವಿಸಿರುವ ಸ್ವಸ್ಥಚಿತ್ತತೆಯು ಪರಿಸ್ಥಿತಿಯೆ ಇದನ್ನು ನಿರ್ಣಯಿಸುವಹಾಗಿದೆ. ನಾವು ಈ ಸಂದರ್ಭದಲ್ಲಿ ದೇಶಬಂಧುಗಳಿಗೆ ಹೇಳತಕ್ಕ ಮಾತು ಇಷ್ಟೆ. ಏನೆಂದರೆ ದೇಶದೊಳಗಿನ ಸುಶಿಕ್ಷಿತರು ಈ ಭಾರತ ಸಂರಕ್ಷಕ ಸೈನ್ಯದಲ್ಲಿ ಸೇರಿಕೊಂಡು ಸಾಮ್ರಾಜ್ಯ ಸರಕಾರಕ್ಕೆ ಸಾಹಾಯ್ಯವನ್ನು ಮಾಡಿ ಸ್ವದೇಶ ರಕ್ಷಣೆಯನ್ನು ಮಾಡಿರಿ. ತಮ್ಮ ಸ್ವಂತ ದೇಶದ ರಕ್ಷಣೆ ಮಾಡಲು ಹಿಂಜರಿಯುವವರು, ಅಸಮರ್ಥರಾದವರು ಹೋಮರೂಲ್, ಸ್ವರಾಜ್ಯ, ರಾಜ್ಯಸುಧಾರಣೆ, ಸುಶಾಸನಕ್ರಮ ಮುಂತಾದ ರಮಣೀಯ ಧ್ಯೇಯಗಳನ್ನು ಕಟ್ಟಿಕೊಂಡು ವೃಥಾ ಒದ್ದಾಡುವುದೇಕೆ? ರಾಜ್ಯಕರ್ತರ ಆಕಾಂಕ್ಷೆಯ ಮೇರೆಗೆ ಮೊದಲು ಅವರನ್ನು ಸಾಹಾಯ್ಯ ಮಾಡಿರಿ, ತಮ್ಮ ಯೋಗ್ಯತೆ ಎಷ್ಟಿದೆ, ಸಾಮರ್ಥ್ಯವೆಷ್ಟಿದೆ ಇದನ್ನು ತೋರಿಸಿ ಅವರನ್ನು ಪ್ರಸನ್ನಪಡಿಸಿರಿ. ಇಂಥ ಸಮಯವು ಇನ್ನು ಬರಲಾರದು. ಸರಕಾರವು ತಾನಾಗಿ ಕೊಡಲುಬಂದ ಈಗಿನ ಸಂದರ್ಭದ ಪ್ರಯೋಜನೆಯನ್ನು ನಾವು ಪಡಕೊಳ್ಳದಿದ್ದರೆ ನಿಜವಾಗಿ ನಾವು ಹತಭಾಗಿಗಳೆ. ಆದುದರಿಂದ ನಮ್ಮ ದೇಶಬಂಧುಗಳಿಗೆ ಭಾರತ ಸಂರಕ್ಷಕ ಸೈನ್ಯದ ಯೋಗ್ಯ ಪ್ರಯೋಜನೆಯನ್ನು ಪಡೆದುಕೊಳ್ಳಲು ಪುನಃ ಹೇಳಿ ಈ ಅಗ್ರಲೇಖನವನ್ನು ಇಲ್ಲಿಗೆ ಮುಗಿಸುತ್ತೇವೆ.

ಸ್ಫುಟವಿಚಾರಗಳು.

೧. ಹಿಂದುಸ್ಥಾನದ ಬರುವ ವರ್ಷದ ಜಮಾ ಖರ್ಚಿನ ವಿವರಣೆಯನ್ನು ಕಳೆದ ಸಂಚಿಕೆಯಲ್ಲಿ ತಕ್ಕಮಟ್ಟಿಗೆ ವಿಸ್ತೃತವಾಗಿ ನಾವು ಕೊಟ್ಟಿದ್ದೆವಷ್ಟೆ. ಅದೆ ವಿಷಯವಾಗಿ ಈ ಹೊತ್ತಿನ ಸಂಚಿಕೆಯಲ್ಲಿ ಒಂದೆರಡು ವಿಶೇಷ ಸಂಗತಿಗಳನ್ನು ತೋರಿಸಲಿದ್ದೇವೆ. ಕಾಯಮಿನ ಕಂದಾಯದಿಂದ ಬರುವ ಉತ್ಪನ್ನವು ನಿತ್ಯದ ಖರ್ಚಿಗೆ ತಕ್ಕಷ್ಟೆ ಇರಬೇಕು, ಮತ್ತು ವಿಶೇಷ ಸಂದರ್ಭದ್ದಾಗಲಿ ಇಲ್ಲವೆ ಆಕಸ್ಮಿಕ ಖರ್ಚಿನದಾಗಲಿ ವ್ಯವಸ್ಥೆಯು ಸಾಲತೆಗೆದು ಅದರಿಂದಲೆ ನಿರ್ವಹಿಸಬೇಕೆಂಬುದಾಗಿ ಅರ್ಥಶಾಸ್ತ್ರಜ್ಞರ ಒಂದು ಸಿದ್ಧಾಂತವಿದೆ. ಪರಂತು ಈ ತತ್ತ್ವವು ಹಿಂದುಸ್ಥಾನದ ಜಮಾ-ಖರ್ಚಿನಲ್ಲಿ ಆದರಿಸಲ್ಪಡುವುದಿಲ್ಲ. ಇದು ಖೇದದ ಮಾತಾಗಿದೆ. ವಾರ್ಷಿಕ ಉತ್ಪನ್ನವನ್ನು ಆವಶ್ಯಕತೆಗಿಂತ ಹೆಚ್ಚಿಟ್ಟುಕೊಳ್ಳುವುದು ಮತ್ತು ವರ್ಷಾಂತ್ಯದಲ್ಲಿ ಮಿತಿಮೀರಿ ಶಿಲ್ಲಕು ಉಳಿಯಿತೆಂದಾದ ಮೇಲೆ ಅದರ ವಿನಿಯೋಗವನ್ನು ಸೈನ್ಯ, ಪೋಲಿಸ ಮುಂತಾದ ಇದೆ ತರದ ಇಲಾಖೆಗಳಲ್ಲಿ ಮಾಡುವುದು ಇಲ್ಲವೆ ರೈಲು, ಕಾಲುವೆ ಮೊದಲಾದ ಯಾವ ಕಾಮಗಾರಿಕೆಗಳು ಸಾಲದಿಂದ ಮಾಡುವುದು ಉಚಿತವಾಗಿವೆಯೊ ಅಂಥ ಕೆಲಸಗಳನ್ನು ಸಹ ಶಿಲ್ಲಕು ಉಳಿದ ನಿಧಿಯಿಂದಲೆ ಮಾಡುವುದು—ಈ ತರದ ಅಯೋಗ್ಯವಾದ ಜಮಾ ಖರ್ಚಿನ ಪದ್ಧತಿಯು ನಮ್ಮ ಹಿಂದುಸ್ಥಾನದಲ್ಲಿ ಈಗ ಎಷ್ಟೊ ವರ್ಷಗಳಿಂದ ನಡೆದು ಬಂದುದರಿಂದ ಅದು ಈಗ ಇಲ್ಲಿಯದೊಂದು ಸಂಪ್ರದಾಯವೆ ಆಗಿದೆ. ಇದರಿಂದ ಪ್ರತಿವರ್ಷ ಉಳಿಯುವ ದ್ರವ್ಯನಿಧಿಯು ಇಂಥ ಕೆಲಸಗಳಲ್ಲಿ ಅಡಗಿಹೋಗಿದೆ! ಈ ವರ್ಷವಂತು ಈ ಶಿಲ್ಲಕು ೧೦-೧೫ ಕೋಟಿ ರೂ. ಉಳಿದುದರಿಂದ ಮುಂದಿನ ವರ್ಷದ ಅಂದಾಜುಪತ್ರಕದಲ್ಲಿ ರೈಲು, ಕಾಲುವೆ ಮತ್ತು ಡಿಲ್ಲಿ ನಗರ ರಚನೆ ಈ ಕಾರ್ಯಗಳಲ್ಲಿ ಆ ಶಿಲ್ಲಕು ವಿನಿಯೋಗಿಸಲ್ಪಡುವದೆಂತೂ ಸಿದ್ಧಪ್ರಾಯವಷ್ಟೆ, ಅಲ್ಲದೆ ಹಿಂದುಸ್ಥಾನದ ಮೇಲೆ ಹೊರಿಸಲಿಕ್ಕಿದ್ದ ಹೊಸ ಸಾಲದ ಪಟ್ಟಿಯೂ ಈ ಶಿಲ್ಲಕಿನಿಂದಲೆ ನಿರ್ವಹಿಸಲ್ಪಟ್ಟಿರಬೇಕಾಗಿದೆ! ಇದು ಬಹಳ ಶೋಚನೀಯವು. ಒಟ್ಟಾರೆ, ಮೇಲೆ ಹೇಳಿದಂತೆ ಆವಶ್ಯಕತೆಗಿಂತ ಹೆಚ್ಚಿನ ಕರವನ್ನು ಹೊರಿಸಿ ಮತ್ತು ಖಜಾನೆಯಲ್ಲಿ ಶಿಲ್ಲಕು ಇರುವಾಗ ಹೆಚ್ಚಿಸಿದ ಕರಗಳನ್ನು ಕಡಿಮೆ ಮಾಡದೆ ಆ ಶಿಲ್ಲಕನ್ನು, ಸಾಲದಿಂದ ನಿರ್ವಹಿಸತಕ್ಕ ಕೆಲಸಗಳಲ್ಲಿ ಉಪಯೋಗಿಸುವುದು ಅರ್ಥಶಾಸ್ತ್ರರೀತ್ಯಾ ಬಹು ದೊಡ್ಡ ದೋಷವೆ ಸರಿ. ಇಂಥ ಸ್ಪಷ್ಟ ದೋಷಗಳನ್ನು ಕೂಡ ನಮ್ಮ ಕೋಶಮಂತ್ರಿಗಳಾದ ಸರ ವಿ. ಮೆಯರರಾದರೂ ಮಾಡದೆ ಇರಲಿಲ್ಲ.

೨. ಆದರೆ ಬಹ್ವಂಶದಲ್ಲಿ ಉದಾರವಾದಿಗಳಾದ ಮೇಯರ ದೊರೆಗಳು ಎಲ್ಲ ಸಂಗತಿಗಳಲ್ಲಿ ಈ ಬ್ಯುರೊಕ್ರಸಿ ಪದ್ಧತಿಯನ್ನೆ ಅವಲಂಬಿಸಿದ್ದಾರೆಂದು ಹೇಳುವುದೂ ಶುದ್ಧ ತಪ್ಪಾಗಿದೆ. ಈ ನಮ್ಮ ವಿಧಾನದ ಒಂದೆರಡು ದೃಷ್ಟಾಂತಗಳನ್ನು ಹಿಂದಿನ ಸಂಚಿಕೆಯಲ್ಲಿ ಕೊಟ್ಟಿದ್ದೇವೆ. ಅವರ ಉದಾರವಾದಿತ್ವದ ಮತ್ತು ಜನಹಿತದ ಇನ್ನೊಂದು ಮಾತು ಯಾವುದೆಂದರೆ, ಈ ಮಹಾ ಯುದ್ಧದಲ್ಲಿ ಹಿಂದುಸ್ಥಾನವು ತನ್ನ ಸ್ಥಿತಿಗತಿಗೆ ತಕ್ಕಂತೆ ಸಾಮ್ರಾಜ್ಯಕ್ಕೆ ಸಾಹಾಯ್ಯ ಮಾಡಲಿಲ್ಲವೆಂದು ಆಕ್ಷೇಪಿಸುವವರಿಗೆ ಅವರು ಬಹು ಸಮರ್ಪಕವಾಗಿ ಉತ್ತರವನ್ನು ಕೊಟ್ಟಿರುವರು. ಐದು ವರ್ಷದ ಹಿಂದೆ ಈ ದೇಶದಲ್ಲಿ ಸೈನ್ಯದ ಖರ್ಚು ಎನಿತ್ತೊ ಅದೆ ಒಂದು ತಲೆ ಭಾರವಾಗಿತ್ತು. ಈ ತಲೆ ಭಾರವಾದ ೩೦ ಕೋಟಿಯ ಹೊರೆಯು ದೊಡ್ಡದಾಗುತ್ತಾಗುತ್ತ ಈಗ ೪೫ ಕೋಟಿಯಾಗಿದೆ. ಅಲ್ಲದೆ ಪ್ರತ್ಯಕ್ಷ ಯುದ್ಧದಲ್ಲಿ ಹೋಗಿರುವ ಹಿಂದೀ ಸೈನ್ಯದ ಖರ್ಚಿನಲ್ಲಿ ಎಷ್ಟು ಭಾಗವು ಇಂಗ್ಲಂಡದಿಂದ ಬರುವುದು ನ್ಯಾಯ್ಯವಾಗಿದೆಯೊ ಆ ದ್ರವ್ಯವೂ, ಹಿಂದುಸ್ಥಾನದಿಂದ ರಣಭೂಮಿಯ ಮೇಲೆ ಕಳುಹಿಸಲ್ಪಟ್ಟ ರಣಸಾಹಿತ್ಯ ಮುಂತಾದ ಎಲ್ಲ ವಿಷಯಗಳ ಕುರಿತು ಆಗುವ ಹತ್ತುಕಡಿಮೆ ೨೫ ಕೋಟಿ ರೂಪಾಯಿಗಳು ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ಬರಬೇಕಾಗಿವೆ, ಆ ರಕಮನ್ನು ಹಿಂದುಸ್ಥಾನವು ಇನ್ನು ಪಡಕೊಳ್ಳಲಿಲ್ಲ, ಮಾತ್ರವಲ್ಲ, ಇಲ್ಲಿಯ ಸರಕಾರವಿಯುದಲೂ, ನನ್ನ

ಮಾನ ಶಿಲ್ಲ ಕಿನಿಂದಲೂ ಕೂಡಿ ಸಾಧಾರಣವಾಗಿ ೪೮ ಕೋಟಿ ನಿಧಿಯು ವಿಲಾಯತಿಗೆ ಕಳುಹಿಸಲ್ಪಟ್ಟಿದೆ. ಇವುಗಳನ್ನು ಈ ಹೊತ್ತು ಇಂಗ್ಲಂಡವು ಉಪಯೋಗಿಸಬಹುದಾಗಿದೆ. ಈ ಪ್ರಕಾರ ಆಧಾರಪೂರ್ವಕ ಅಂಕೆಗಳನ್ನು ಕೊಟ್ಟು ವಿಲ್ಯಮ್ ಮೆಯರರು ಆಕ್ಷೇಪಕರಿಗೆ ಕೇಳುತ್ತಾರೆ:— "ಹಿಂದುಸ್ಥಾನದಲ್ಲಿ ಯುದ್ಧದ ಸಲುವಾಗಿ ಹೊಸ ಸಾಲವನ್ನು ಏರ್ಪಡಿಸಲಿಲ್ಲವೆಂದು ನಮ್ಮ ಮೇಲೆ ಆರೋಪಿಸುತ್ತಾರೆ, ಆದರೆ ಸಾಲ ತೆಗೆಯುವುದರಿಂದಲಾದರೂ ಇಷ್ಟು ದೊಡ್ಡ ನಿಧಿಯನ್ನು—ಸಹಾಯ್ಯವನ್ನು ಮಾಡುವುದು ಈ ದೇಶಕ್ಕೆ ಸಾಧ್ಯವಿತ್ತೆ?" ಬಹುಮಾನಪಟ್ಟ ಸರ್ ವಿಲ್ಯಮ ಮೆಯರರನ್ನು ಅವರ ಈ ಸ್ಪಷ್ಟೋಕ್ತಿಗಾಗಿ ನಾವು ಅಭಿನಂದಿಸುತ್ತೇವೆ.

೩. ಪ್ರೆಸ್ ಎಕ್ಟಿನ ಪರಿಣಾಮವು ಈ ದೇಶದ ಮುದ್ರಣದ ಮೇಲೆ ಅಹಿತಕರವಾಗುತ್ತ ಬಂದದರಿಂದ ಪ್ರೆಸ್ ಎಸೋಸಿಯೇಶನಿನ ಒಂದು ಡೆಪ್ಯುಟೇಶನು ವೈಸರಾಯರ ಭೇಟಿಗೆ ಕೆಲವು ದಿವಸಗಳ ಹಿಂದೆ ಹೋಗಿತ್ತು. ಈ ಡೆಪ್ಯುಟೇಶನಿನಲ್ಲಿ ಮಿ| ಬಿ. ಜಿ. ಹೊರ್ನಿಮನ್ (ಅಧ್ಯಕ್ಷರು) ಬಹುಮಾನಪಟ್ಟ ಪಂಡಿತ ಮಾಲವೀಯರು, ಲೀಡರ ಪತ್ರಿಕೆಯ ಸಂಪಾದಕರಾದ ಮಿ. ಚಿಂತಾಮಣಿ, ಮಿ. ಸಿಂಹ, ಟ್ರಿಬ್ಯೂನ ಪತ್ರದ ಸಂಪಾದಕರು ಮೊದಲಾದ ಸದ್ಗೃಹಸ್ಥರು ಮೆಂಬರುಗಳಾಗಿದ್ದರು. ಈ ಡೆಪ್ಯುಟೇಶನಿಗೆ ವೈಸರಾಯರು ಯಾವ ಸಮಾಧಾನವನ್ನು ಕೊಟ್ಟಿರುವರೆಂಬುದನ್ನು ನಾವು ವಾಚಕರಿಗೆ ತಿಳಿಸಬೇಕಾದುದಿಲ್ಲೆಂದು ತೋರುತ್ತದೆ. ವೈಸರಾಯರ ಉತ್ತರವು ಎಂಗ್ಲೊ ಇಂಡಿಯನ್ ಸಹಾನುಭೂತಿ, ಎಂಗ್ಲೊ ಇಂಡಿಯನ್ ಧೋರಣ, ಮತ್ತು ಎಂಗ್ಲೊ ಇಂಡಿಯನ್ ಕ್ಲೃಪ್ತಿ ಇವುಗಳಿಂದ ಅಲಂಕೃತವಾಗಿತ್ತೆಂದು ಹೇಳಿದರೆ ಇದರಿಂದಲೆ ಈ ಡೆಪ್ಯುಟೇಶನಿನ ಶ್ರಮವು ಮತ್ತು ವೈಸರಾಯರಂಥ ಮಹಾ ಪುರುಷರ ದರ್ಶನವು ನಿರರ್ಥಕವಾದವೆಂಬುದನ್ನು ವಾಚಕ ವರ್ಗವೆ ಊಹಿಸಬಹುದಾಗಿದೆ. ಆದರೂ ವೈಸರಾಯರ ಭಾಷಣವು ಬಹು ದೊಡ್ಡದಾಗಿತ್ತು, ಹೈಕೋರ್ಟ ಜಡ್ಜರುಗಳ ಅಭಿಪ್ರಾಯಗಳ ಮೇಲೆ ಬೇಕಷ್ಟು ಕಾರಹುಳಿ ಹಾಕಲ್ಪಟ್ಟಿತ್ತು, ದೇಶದೊಳಗಿನ ಶುದ್ಧ ಮತ್ತು ನಮ್ರವಾದ ಲೋಕಮತದ ಮೇಲೆ ಯಥೇಚ್ಛ ಪುಷ್ಪಾಂಜಲಿಯೂ ಗೆರೆದಿತ್ತು, ಬ್ಯುರೊಕ್ರಸಿಯ ಸಂಪೂರ್ಣ ಆವೇಶವು ಮೂರ್ತಿಮತ್ತಾಗಿ ಅಲ್ಲಲ್ಲಿ ತೋರುತಿತ್ತು. ಇರಲಿ. ಪ್ರಸ್ತುತ ಡೆಪ್ಯುಟೇಶನಿಗೆ ಯಾವ ತರದ ಉತ್ತರವು ದೊರಕೀತೆಂಬುದನ್ನು ಕೊಂಚ ಪೂರ್ವಸಂಪ್ರದಾಯವನ್ನರಿತವನು ಮೊದಲೆ ನಿರ್ಣಯಿಸಬಹುದು. ಅವನ ಮಟ್ಟಿಗೆ, ಕನಿಷ್ಟಪಕ್ಷಕ್ಕೆ ನಮ್ಮ ಮಟ್ಟಿಗಾದರೂ ಇದು ಅನಪೇಕ್ಷಿತ ಉತ್ತರವಲ್ಲ. ಹಿಂದುಸ್ಥಾನದಲ್ಲಿ ಪ್ರಸಾರವನ್ನು ಹೊಂದುವ ಘಾತುಕವಾದ ದುರ್ಮತಗಳ ನಿರ್ಮೂಲನೆಗಾಗಿ ಈ ಪ್ರೆಸ್ ಎಕ್ಟಿನ ಅಸ್ತ್ರವು ಯಾವಾಗಲೂ, ಕಡೆಪಕ್ಷದಲ್ಲಿ ಸದ್ಯಃಕಾಲದಲ್ಲಿಯಾದರೂ ಸಿದ್ಧವಾಗಿಯೆ ಇರಬೇಕೆಂದು ಯಾರಿಗೆ ತೋರುವುದೊ ಆ ನಮ್ಮ ಚೆಮ್ಸಫರ್ಡ ಪ್ರಭುಗಳವರಿಗೆ ಡೆಪ್ಯುಟೇಶನಿನ ವಿಜ್ಞಾಪನೆಯಲ್ಲಿ ಸೂಚಿಸಿರುವಾಗಲೂ, ಎಂಗ್ಲೊ ಇಂಡಿಯನ್ನರ ದುರ್ಮತಗಳ ಪ್ರತಿಬಂಧಕ್ಕೆ ಸರಕಾರವು ಈ ಅಸ್ತ್ರವನ್ನು ಉಪಯೋಗಿಸುವುದಿಲ್ಲೆಂಬ ಮಾತಿಗೆ ಪ್ರತ್ಯುತ್ತರ ಕೊಡುವುದು ಮರೆತು ಹೋಯಿತು! ಬ್ಯುರೊಕ್ರಸಿಯ ಸಂಪೂರ್ಣ ಆವೇಶ ಬಂದವರಿಗೆ ಅಂಥಾ ಪ್ರತ್ಯುತ್ತರಕ್ಕೆ ಎಡೆ ಎಲ್ಲಿ?

೪. ಈ ತಿಂಗಳ ೧೨ನೆಯ ತಾರೀಕಿನ ದಿವಸ ವರಿಷ್ಠ ಕೌನ್ಸಿಲಿನಲ್ಲಿ ಜಮಾ ಖರ್ಚಿನ ವಿಷಯವಾಗಿ ಚರ್ಚೆಯು ನಡೆಯಿತು. ಈ ಸಂಧರ್ಭದಲ್ಲಿ ಶಿಕ್ಷಣದ ಕುರಿತು ನಡೆದ ಚರ್ಚೆಯು ವಿಶೇಷ ಮಹತ್ವದ್ದಾಗಿತ್ತು. ಶಿಕ್ಷಣ ಮಂತ್ರಿಗಳಾದ ಸರ್ ಶಂಕರನ್ ನಾಯರರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ—೧೯೧೬-೧೭ರಲ್ಲಿ ಶಿಕ್ಷಣದ ಬಗ್ಗೆ ಖರ್ಚು ಮಾಡಿದ ರಕಮಿಗಿಂತ ನಡೆಯುವ ವರ್ಷದಲ್ಲಿ ೧೨ ಲಕ್ಷ ರೂ. ಹೆಚ್ಚು ಖರ್ಚು ಮಾಡಲ್ಪಟ್ಟಿದೆ. ಮತ್ತು ೧೯೧೭-೧೮ರಲ್ಲಂತೂ, ಯುದ್ಧಕಾಲದಲ್ಲಿ ಸಹ ಸರಕಾರವು ಮೂವತ್ತು ಲಕ್ಷ ರೂಪಾಯಿಯ ವಾರ್ಷಿಕ ಗ್ರಾಂಟು ಕೊಡಲು ಇಚ್ಛಿಸಿರುವುದರಿಂದ ಹೆಚ್ಚಿನ ಹಣವನ್ನು ಖರ್ಚು ಮಾಡಲಿದೆ. ಸರ ಸಾಹೇಬರ ಮತದಿಂದ ನಮ್ಮ ಸರಕಾರವು ಶಿಕ್ಷಣ ಪ್ರಿಯವೆಂದು ಹೇಳಬೇಕಾಗುತ್ತದೆ. ಈ ಯುದ್ಧಕಾಲದಲ್ಲಿ ವಿದ್ಯಾ ವಿಷಯವಾಗಿ ಇಷ್ಟು ದ್ರವ್ಯವನ್ನು ಖರ್ಚು ಮಾಡುವುದು, ಅವರ ದೃಷ್ಟಿಯಿಂದ, ಆಶ್ಚರ್ಯಕರವಾದ ನಿದರ್ಶನವೆ ಸರಿ. ಪ್ರಾಥಮಿಕ ಮತ್ತು ಮಧ್ಯಮ ವಿದ್ಯಾಭ್ಯಾಸದ ವಿಷಯದಲ್ಲಿ, ಅವೆರಡು ಬಹು ಅಸಮಾಧಾನಕರ ಸ್ಥಿತಿಯಲ್ಲಿರುವುದರಿಂದ ಈ ರಕಮನ್ನು ಉಪಯೋಗಿಸುವುದು ಹಿತಾವಹವಾಗಬಹುದೆಂದೂ ಇಲ್ಲವೆ ಮನಸ್ಸಿರುವವರಿಗೆ ಸ್ತ್ರೀ ಶಿಕ್ಷಣದ ವಿಷಯದಲ್ಲಿ ಉಪಯೋಗಿಸಲು ಅಡ್ಡಿಲ್ಲೆಂದೂ ಅಥವಾ ಶಿಕ್ಷಕರ ಟ್ರೈನಿಂಗಿಗಾಗಿಯೂ ಇದನ್ನು ಉಪಯೋಗಿಸುವುದು ತಪ್ಪಲ್ಲೆಂದೂ ಸರ್ ಸಾಹೇಬರು ಅಭಿಪ್ರಾಯಪಟ್ಟಿರುವರು. ಶಿಕ್ಷಣದ ವಿಷಯದಲ್ಲಿ ಆದ ಕೌನ್ಸಿಲಿನೊಳಗೆ ಇನ್ನೂ ಕೆಲವು ಮಹತ್ವದ ಚರ್ಚೆಗಳು ಸಭಾಸದರಲ್ಲಿ ನಡೆದವು. ಅವುಗಳನ್ನು ಬರುವ ಸಂಚಿಕೆಯಲ್ಲಿ ವಿಸ್ತಾರದಿಂದ ಪ್ರಸ್ತಾಪಿಸುವೆವು.

೫. ಪ್ಲೇಗುರೋಗದ ಹಾವಳಿಯು ಹೇಗೆ ಹೆಚ್ಚುತ್ತಿರುವುದೆಂಬುವುದನ್ನು ಪ್ರತಿ ವಾರದಲ್ಲಿಯೂ ಈ ರೋಗಕ್ಕೆ ಬಲಿಬೀಳುವ ಪಟ್ಟಣಿಗರ ಸಂಖ್ಯೆಯನ್ನು ನೋಡಿಕೊಂಡು ವಾಚಕರು ತಿಳಕೊಳ್ಳಬಹುದು. ಈ ರೋಗವು ಇಂಥಿಂಥಾ ಕಾಲದಲ್ಲಿಯೇ ಉಲ್ಬಣವಾಗುವದು, ಇಂಥಿಂಥಾ ವಿದ್ಯಮಾನಗಳಿಂದಲೇ ವಿಶೇಷವಾಗುವದು ಮೊದಲಾದ್ದನ್ನು ನಿರ್ಧರಿಸುವದು ಕಷ್ಟ. ಮಂಗಳೂರಿನಲ್ಲಿ ಇದೇನೂ ತಿಳಿಯುವದೇ ಅಸಾಧ್ಯವಾಗಿದೆ. ರೋಗದ ಸ್ವಭಾವವು ಹೀಗಿದ್ದರೂ ಈ ರೋಗದ [illegible] ಯು ಆಗುವದು ಕಷ್ಟವೆಂದು ಅದು ಉಲ್ಬಣವಾದಾಗ ಅಧಿಕಾರ[illegible]ದಿಂದ ಸುಮ್ಮನಿರುವದು ಯುಕ್ತವಲ್ಲವೆಂತ ತಿಳಿದು ಸರಕಾರದವರೂ ಲೋಕಲ್ ಬೋರ್ಡಿನವರೂ ಇದರ ನಿವಾರಣೋಪಾಯದ ಬಗ್ಯೆ ವಿಶೇಷ ಹಣವನ್ನು ಖರ್ಚುಮಾಡುತ್ತಿರುತ್ತಾರೆ. ಆದ್ದರಿಂದ ನಮ್ಮ ಮುನ್ಸಿಪಾಲಿಟಿಯಲ್ಲಿ ಸೆನಿಟರಿ ಸಿಬಂದಿ ಮಾತ್ರವಲ್ಲ, ಪ್ಲೇಗು ಸಿಬಂದಿಯು ಸಹ ಇರುವದು. ಆದರೆ ಇಲ್ಲಿ ಮಾತ್ರ ಸಿಬಂದಿಯ ಕಾರ್ಯನಿರ್ವಾಹವು ಈಗಿನ ಸಂಕಷ್ಟದ ಸಮಯಕ್ಕೆ ತಕ್ಕಂತೆ ಇರದು. ರೋಗದ ಸೋಂಕುಳ್ಳ ಪಟಾರಗಳನ್ನು ಸಕಾಲದಲ್ಲಿ ಸ್ವಚ್ಛಗೊಳಿಸುವದು, ಸೋಂಕು ತಗಲಿದ ಜನರು ಪ್ರತ್ಯೇಕ ಇರುವಂತೆ ಏರ್ಪಡಿಸುವದು, ರೋಗ ತಗಲಿದ ನಿರ್ಗತಿಕರನ್ನು ಚಿಕಿತ್ಸೆ ಬಗ್ಯೆ ಪ್ಲೇಗು ಆಸ್ಪತ್ರೆಗಳಿಗೆ ವಯ್ಯುವದು—ಇದೆಲ್ಲ ಕಾರ್ಯನಿರ್ವಾಹವು ನಡೆಯುತ್ತಿದೆಯಾದರೂ ಸಕಾಲದಲ್ಲಿ ಇದು ನಡೆಯುವದಿಲ್ಲ. ಮತ್ತೊಂದು ವಿಷಾದಕರ ವಿಷಯವೇನೆಂದರೆ—ಇಷ್ಟು ವರುಷಗಳಿಂದ ಜನರು ಈ ಸಂಕಷ್ಟವನ್ನು ಅನುಭವಿಸುತ್ತಿರುವರಾದರೂ ಇನ್ನೂ ರೋಗದ ಸೋಂಕು ನಿವಾರಣೆಯ ವಿಷಯದಲ್ಲಿ ಅಜಾಗ್ರತೆಯನ್ನೇ ತೋರಿಸುತ್ತಿದ್ದಾರೆ. ಹಲವು ಕಡೆಗಳಲ್ಲಿ ಪ್ಲೇಗಿನ ದಾಕು ಹಾಕಿಸಿಕೊಳ್ಳುವದರಿಂದ ಪ್ಲೇಗು ತಮ್ಮಡೆಯಾದ ವಿಷಯವನ್ನು ಪ್ರತ್ಯಕ್ಷ ತಿಳಕೊಂಡಿರುವರಾದರೂ ಇನ್ನೂ ಇದರ ಪ್ರಯೋಜನವನ್ನು ಹೊಂದಲು ಜನರು ಮುಂದುವರಿದು ಬರುವದಿಲ್ಲ. ಪ್ರಜಾ ಮುಂದಾಳುಗಳ ಲಕ್ಷ್ಯವೂ ಈ ಕಡೆಗೆ ಇರುವದೇ ಇಲ್ಲ. ಏನೋ ಪ್ಲೇಗಿನಷ್ಟೆ ಭಯಂಕರವಾದ ಕ್ಷುತ್ಕ್ಷಾಮವು ಪಟ್ಟಣವನ್ನೆಲ್ಲಾ ಆವರಿಸಿಕೊಂಡಿದೆ. ಪ್ಲೇಗಿನ ಈಗಿನ ಸಿಬಂದಿಯು ಸಾಲದು, ಪ್ರಕೃತ ವಿಶೇಷ ಕೆಲಸವಿಲ್ಲದೆ ಇರುವ ಮುನ್ಸಿಪಲ್ ಸೆನಿಟರಿ ಅಸಿಸ್ಟಾಂಟರನ್ನು ಪ್ಲೇಗು ಕೆಲಸದ ಬಗ್ಯೆ ನೇಮಿಸಬಹುದೆಂಬ ಸೂಚನೆಗಳು ಇತರರಲ್ಲಿ ಹುಟ್ಟಿಸಿದರೂ ಮುನ್ಸಿಪಲ್ ಕಾರ್ಯನಿರ್ವಾಹಕ ಆಫೀಸರರಿಗೆ ಇಂಥಾ ಸೂಚನೆಗಳೂ ತೋರದೆ ಇವೆ. ಸಿಬಂದಿ ಸಾಲದೆಯೋ ಅಥವಾ ಇತರ ಅನುಕೂಲತೆಗಳು ಇಲ್ಲದೆಯೋ ಪ್ಲೇಗು ತಗಲಿದ ನಿರ್ಗತಿಕರನ್ನು ಗಾಡಿಯಲ್ಲಿ ಸತ್ತ ನಾಯಿಗಳಂತೆ ತುಂಬಿಸಿ ತಕ್ಕೊಂಡು ಹೋಗುವಂಥಾದ್ದನ್ನು ನಾವೇ ಪ್ರತ್ಯಕ್ಷ ನೋಡಿದೆವು. ಒಂದೆತ್ತಿನ ಗಾಡಿ, ಇದಕ್ಕೆ ಮಾಡಿನ ಆಶ್ರಯವೂ ಇಲ್ಲ, ಇಬ್ಬರು ಅಥವಾ ಮೂವರು ರೋಗಿಗಳು ಒಂದೇ ಗಾಡಿಯಲ್ಲಿ. ಮನಸ್ಸಾಕ್ಷಿಯ ಸಮಾಧಾನದ ಬಗ್ಯೆ ಅಥವಾ ಬೆಳಿಗ್ಗಿನ ೧೦ ಗಂಟೆಯ ಬಿಸಿಲಿನ ತಾಪದಲ್ಲಿ ಈ ರೋಗಿಗಳು ನರಳುತ್ತಿದ್ದಾರೆಂಬುದನ್ನು ಸೂಚಿಸಲು ಎಂಬಂತೆ ಹಲವು ರಂಧ್ರಗಳುಳ್ಳ ಎರಡು ಮೊಳ ಉದ್ದದ ವಸ್ತ್ರದ ಚಿಂದಿಯು ಈ ಗಾಡಿಯ ಕಂಭಗಳಲ್ಲಿ ನೇತಾಡುತ್ತಿತ್ತು. ನೂರಾರು ಜನರು, ಶಾಲಾ ಮಕ್ಕಳು ಹೋಗುತ್ತಿರುವ ಸಮಯ. ವಾಚಕರೇ ಈಗ ಈ ನೋಟವು ಏನೆಂತ ಊಹಿಸಿ ತಿಳಕೊಳ್ಳಬಹುದು! ರೋಗಿಗಳನ್ನು ವಯ್ಯುವ ಮಂಚಗಳು ಮತ್ತು ಈ ಬಗ್ಯೆ ತಯ್ಯಾರಿಸಿದ ಗಾಡಿಗಳು ಮತ್ತು ಕೂಲಿಗಳೂ ಸಹ ಇರುತ್ತಾ ಮಂಗಳೂರಿನ ದುರ್ಭಾಗ್ಯದ ಈ ದೇಖಾವೆಯನ್ನು ಏಕೆ ಈ ರೀತಿ ತೋರ್ಪಡಿಸಿದರೆಂಬುದು ನಮ್ಮಿಂದ ತಿಳಕೊಳ್ಳಲು ಅಸಾಧ್ಯವಾದ ವಿಷಯವಾಗಿದೆ. ಮೊದಲು ಅಂದರೆ ಈಗಿನ ಮುನ್ಸಿಪಲ್ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಪದವಿಯನ್ನೇರುವ ಮೊದಲು, ಪ್ಲೇಗು ಈ ರೀತಿಯಲ್ಲಿಯೇ ಉಲ್ಬಣವಾದಾಗ ಇಂಥಾ ನೋಟವನ್ನು ನೋಡುವ ಸಂದರ್ಭಗಳು ಬಂದೊದಗಿದ್ದಿಲ್ಲ. ಇಂಥಾ ಸಮಯದಲ್ಲಿ ಜಿಲ್ಲಾ ಕಲೆಕ್ಟರ ದೊರೆಗಳವರೇ ಪಟ್ಟಣ ಸಂಚಾರವನ್ನು ಮಾಡಿಕೊಂಡು ಪಟ್ಟಣದ ಸ್ಥಿತಿಯನ್ನು ಕಣ್ಣಾರೆ ನೋಡಿಕೊಳ್ಳುತ್ತಿದ್ದರು. ಹೆಡ್ ಕ್ವಾರ್ಟರ್ಸ್ ಡೆಪ್ಯುಟಿ ಕಲೆಕ್ಟರರೂ ಟೌನ್ ಸಬ್ ಮೆಜಿಸ್ಟ್ರೇಟರೂ ತಮ್ಮ ಮೇಲಾಧಿಕಾರಿಯ ವರ್ತನೆಯನ್ನನುಸರಿಸುತ್ತಿದ್ದರು. ಮುನ್ಸಿಪಲ್ ಚೆಯರ್ಮೆನ್ ಮತ್ತು ಸೆಕ್ರೆಟರಿಗಳು ಅಂಥಾ ಸಮಯದಲ್ಲಿ ಪಟ್ಟಣ ಸಂಚಾರವನ್ನು ಬಹಳ ವಿಶೇಷವಾಗಿ ಮಾಡುತ್ತಿದ್ದರು. ಸೆನಿಟರಿ ಸಿಬಂದಿಯೂ ಪುರಜನರೂ ಸಹ ಜಾಗ್ರತಾವಸ್ಥೆಯಲ್ಲಿ ಇದ್ದರು. ಈಗಿನ ವಿದ್ಯಮಾನಗಳಾದರೂ ವಿಪರ್ಯಸ್ತವೆ. ಪ್ಲೇಗು ಆಫೀಸರರ ಕೆಲಸವು ಜಿಲ್ಲಾ ಕಲೆಕ್ಟರರಿಂದ, ಹೆಡ್ ಕ್ವಾರ್ಟರ್ಸ್ ಡೆಪ್ಯುಟಿ ಕಲೆಕ್ಟರರಿಂದ, ಟೌನ್ ಸಬ್ ಮೆಜಿಸ್ಟ್ರೇಟರಿಂದ, ಜಿಲ್ಲೆಯ ಸೆನಿಟರಿ ಆಫೀಸರರಿಗೆ ಬಂದುಬಿಟ್ಟಿತು. ಜಿಲ್ಲೆಯ ವೈದ್ಯ ಇಲಾಖೆಯ ಮೇಲ್ವಿಚಾರ ಈ ಪ್ಲೇಗಿನ ಕೆಲಸ ಇವೆರಡೂ ಸಾಲದೆಂದು ಮುನ್ಸಿಪಲ್ ಚೆಯರ್ಮೆನ್ ಕೆಲಸವೂ ಈ ಜಿಲ್ಲಾ ಸೆನಿಟರಿ ಆಫೀಸರರೇ ವಹಿಸಿಕೊಂಡರು. ಇವರ ಸರ್ಕೀಟು, ಇವರಿಂದಾಗುವ ರೋಗಿಗಳ ಆರೈಕೆ ಇನ್ನೂ ನೂರಾರು ಕೆಲಸಗಳ ಬಗ್ಯೆ ಆಗಿಂದಾಗ್ಯೆ ಇವರು ಪಟ್ಟಣವನ್ನು ಬಿಟ್ಟುಹೋಗಲೇ ಬೇಕಾದುವರಿಂದ ಮುನ್ಸಿಪಾಲಿಟಿಯ ಆಡಳಿತೆಯ ಕಡಿವಾಣವನ್ನು ವೈಸ್-ಚೇಯರ್ಮೇನರಿಗೆ ಬಿಟ್ಟುಕೊಡುವ ಸಂದರ್ಭಗಳು ಬಂದೊದಗುತ್ತವೆ. ಇಂಥಾ ಸಂದರ್ಭಗಳು ಬಂದೊದಗುವದರಿಂದ! ಮೇಲ್ವಿಚಾರದ ಕಡಿವಾಣವು ಹಸ್ತಭೇದದಿಂದ ಸಡಿಲಾಗಿ ಇಂಥಾ ಕಾಲಗಳು ಕೆಳಗಿನ ಸಿಬಂದಿಯವರಿಗೆ ವಿರಾಮಕಾಲಗಳಾಗಿ ಪರಿಣಮಿಸಿ ಮೇಲೆ ವಿವರಿಸಿದಂಥಾ ವಿದ್ಯಮಾನಗಳು ತಲದೋರಲು ಕಾರಣವಾಗುವದೆಂತ ನಮ್ಮ ಗ್ರಹಿಕೆಗೆ ತೋರಿಬರುವದು. ಇಷ್ಟೇ ಅಲ್ಲ; ಆಫೀಸಿಯಲ್ ಆಗಿರುವ ಚೇಯರ್ಮೇನರಿಗೆ ಜನರ ಸಹಕಾರವು ದೊರಕುವದು ಸ್ವಲ್ಪ ಕಷ್ಟವೇ. ಇಂಥಾ ಅಡಚಣೆಗಳು ಮುನ್ಸಿಪಾಲಿಟಿಯಲ್ಲಿ ಬಂದು ಬೀಳಕೂಡದೆಂಬುವ ಕಾಂಕ್ಷೆಯಿಂದ ರಾವ್ ಸಾಹೇಬ ಡಾಕ್ಟರ್ ವರ್ಗೀಸರನ್ನು ಮುನ್ಸಿಪಲ್ ಚೇಯರ್ಮೇನರಾಗಿ ಆರಿಸುವದು ಹಿತವಲ್ಲವೆಂತ ಪಟ್ಟಣಕಾತರಿಗೆ ಸೂಚಿಸಿದೆವು. ಸೂಚನೆಯು ವ್ಯರ್ಥವಾಯಿತು. ಈಗ ಮಾಡಿದ್ದುಣ್ಣೋ ಮಹಾರಾಯರೇ, ಎಂತ ಹೇಳಲೇ ಬೇಕಾಯಿತು.

ಶ್ರೀ ಜ್ಞಾನೋದಯ ಸಮಾಜದವರ ವಿಜ್ಞಾಪನೆ.

ನಾವು ನಿರ್ಮಿಸುತ್ತಿರುವ ಜ್ಞಾನೋದಯ ಮಂದಿರದ ಕಾರ್ಯವು ಇನ್ನೂ ಪೂರ್ಣವಾಗಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. ಇದರೊಳಗೆ ಬರಗಾಲವೂ, ಯುದ್ಧ ಸಂಕಷ್ಟವೂ, ಇವುಗಳ ಜೊತೆಗೆ ವಿಘ್ನಸಂತೋಷಗಳ ಎಡೆತಡೆಯೂ ನಮ್ಮ ತೀವ್ರ ಕಾರ್ಯಸಾಧನೆಗೆ ಆತಂಕಗೊಳಿಸಲ್ಪಟ್ಟವು. ಆದರೂ ಶ್ರೀ ದೇವರ ದಯೆಯಿಂದ ಮಂದಿರದ ಅರೆವಾಸಿಗಿಂತಲೂ ಹೆಚ್ಚು ಕೆಲಸವು ಇಷ್ಟರಲ್ಲಿ ಪೂರೈಸಿರುತ್ತೇವೆ. ಬಾಕಿ ಉಳಿದ ಕೆಲಸವು ಈ ವರುಷಾಂತ್ಯದೊಳಗಾಗಿಯೇ ಮುಗಿಸಿ ಬೇಗನೇ ಸಾರ್ವಜನಿಕ ಉಪಯೋಗದ ಬಗ್ಯೆ ತೆರೆಯಬೇಕೆಂದು ಸಂಕಲ್ಪಿಸಿರುತ್ತೇವೆ. ಈ ಬಗ್ಯೆ ಧನಸಹಾಯ ಮಾಡಲು ವಾಗ್ದಾನ ಮಾಡಿದ ಪುಣ್ಯಾತ್ಮರು ತಮ್ಮ ವಾಗ್ದತ್ತವನ್ನು ಬೇಗನೇ ಪೂರೈಸಬೇಕಾಗಿಯೂ, ಸಮಾಜದ ಈ ಕಾರ್ಯಸಾಧನೆಯಲ್ಲಿ ಸಹಾನುಭೂತಿಯುಳ್ಳ ಸ್ವಜಾತಿ ಬಾಂಧವರೂ, ದೇಶಬಂಧುಗಳೂ ನಮಗೆ ಕೈನೀಡಿ ಸಹಾಯಮಾಡಬೇಕಾಗಿಯೂ ಬೇಡಿಕೊಳ್ಳುತ್ತೇವೆ. ನಮಗೆ ದಾನಕೊಟ್ಟ ಮತ್ತು ದಾನಕೊಡುವ ಪುಣ್ಯಾತ್ಮರ ಹೆಸರುಗಳನ್ನು ಪ್ರಕಟಿಸುತ್ತ ಬರುವೆವು.

ಮಂಗಳೂರು, [illegible], ತಾ. 10—3—17. } ಬಿ. ಮೋಹನ[illegible], [illegible].

ಸ್ಥಳಿಕ—ಮಂಗಳೂರು.

ಇದೇ ತಿಂಗಳ ತಾ. ೧೦ರಲ್ಲಿ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಈ ಜಿಲ್ಲೆಯ ಡಿಸ್ಟ್ರಿಕ್ಟ್ ಎಸೋಸಿಯೇಶನಿನ ಸಂಘದವರ ಸಭೆಯು ಕೂಡಿತ್ತು. ಪ್ರಜಾವರ್ಗಗಳ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು. ಮಿ| ಸ್ಯಾಮುನ್ ಆಲ್ವರೀಸರವರನ್ನು ಸಭೆಯ ಅಧ್ಯಕ್ಷರನ್ನಾಗಿ ಆರಿಸಿದರು. ಕಳೆದ ತಾ. ೧೦ರ ತನಕ ಸಂಘಕ್ಕೆ ಒಟ್ಟಿಗೆ ಸುಮಾರು ೧೫೦ ಜನ ಸಭಾಸದರು ಕೂಡಿರುವರೆಂಬ ವೃತ್ತಾಂತವನ್ನು ಬಹುಮಾನಪಟ್ಟ ಭಟ್ಟರವರು ಸಭೆಯಲ್ಲಿ ಓದಿ ಹೇಳಿದರು. ನಂತರ ಈ ಮೊದಲು ಪರೀಕ್ಷಾರ್ಥವಾಗಿ ಮಾಡೋಣಾದ ಸಂಘದ ನಿಯಮಗಳು ಸಭೆಯಲ್ಲಿ ಮಂಜೂರು ಮಾಡೋಣಾದವು. ಸಂಘದ ಅಧ್ಯಕ್ಷರನ್ನಾಗಿ ದಿವಾನ್ ಬಹದ್ದೂರ್ ಮೆ| ಎ. ಪಿಂತರವರನ್ನೂ ವೈಸ್ ಪ್ರೆಸಿಡೆಂಟರುಗಳಾಗಿ ಮ| ರಾ| ರಾ| ಸುಜೀರ ರಘುನಾಥಯ್ಯ ಮತ್ತು ಸ್ಯಾಮುನ್ ಆಲ್ವರೀಸರನ್ನೂ ಚುನಾಯಿಸಿರುತ್ತಾರೆ. ಮ| ರಾ| ರಾ| ಕಾರ್ನಾಡ ಸದಾಶಿವ ರಾವ್ ಮತ್ತು ಮ| ರಾ| ರಾ| ಅತ್ತಾವರ ಬಾಲಕೃಷ್ಣ ಶೆಟ್ಟಿಗಳವರನ್ನು ಕಾರ್ಯದರ್ಶಿಗಳಾಗಿ ಆರಿಸಿರುತ್ತಾರೆ. ಸಭೆಯು ಆಗಲುವ ಮೊದಲು ಈ ಜಿಲ್ಲಾ ಸಂಘದವರಿಂದ ಹಲವು ನಿರ್ಣಯಗಳು ಸಭೆಯಲ್ಲಿ ಮಂಜೂರಾದವು. ಮೊದಲನೇದು ಹಾಸನ್ ಮಂಗಳೂರು ರೈಲ್ವೆ ವಿಷಯವಾಗಿತ್ತು. ಈ ಜಿಲ್ಲೆಯವರ ಮತ್ತು ಯುನೈಟೆಡ್ ಪ್ಲೇಂಟರ್ಸ್ ಸಂಘದವರ ವಿಜ್ಞಾಪನೆಗಳನ್ನು ಕೇಳಿಕೊಂಡನಂತರವೇ ಭಟ್ಕಳ ಬಂದರದಲ್ಲಿ ಮೈಸೂರು ದರಬಾರದವರಿಗೆ ಕೊಡೋಣಾಗುವ ರಿಯಾತಿಯ ವಿಷಯದಲ್ಲಿ ಆಖೈರು ಇತ್ಯರ್ಥವು ಕೊಡೋಣಾಗಬೇಕೆಂಬ ನಿರ್ಣಯವನ್ನು ಈ ಸಂಘದವರು ಇಂಡಿಯಾ ಸರಕಾರಕ್ಕೆ ತಿಳಿಸಲು ನಿಶ್ಚೈಯಿಸಿರುತ್ತಾರೆ. ನಂತರ ಇತ್ತಲಾಗೆ ಪ್ರಕಟವಾದ ಸರಕಾರದ ಹುಕುಮಿನ ಮೇರೆಗೆ ತಾಲೂಕು ಬೋರ್ಡುಗಳಿಗೆ ನೊನ್ ಅಫೀಸಿಯಲ್ ಪ್ರೆಸಿಡೆಂಟರನ್ನು ನೇಮಿಸುವ ವಿಷಯದಲ್ಲಿ ಪುತ್ತೂರು ಮತ್ತು ಕುಂದಾಪುರ ಬೋರ್ಡುಗಳಿಗೆ ನೊನ್ ಅಫೀಸಿಯಲ್ ಪ್ರೆಸಿಡೆಂಟರನ್ನು ನೇಮಿಸುವದು ಅನುಕೂಲವೆಂಬೀ ವಿಷಯವು ಕಲೆಕ್ಟರ ದೊರೆಗಳವರಿಗೂ ಸರಕಾರಕ್ಕೂ ತಿಳಿಸಬೇಕೆಂತ ನಿರ್ಣಯಿಸಲ್ಪಟ್ಟಿದೆ. ಪಬ್ಲಿಕ್ ಸರ್ವಿಸ್ ಕಮ್ಮಿಶನಿನವರ ರಿಪೋರ್ಟು, ಡಿಫೆನ್ಸ್ ಒಫ್ ಇಂಡಿಯಾ ಆಕ್ಟು ಇವುಗಳ ಮೂಲಕ ಜನರಲ್ಲಿ ಉಂಟಾಗಿರುವ ವಿಷಾದವನ್ನು ಸೂಚಿಸುವ ನಿರ್ಣಯಗಳು ಸಭೆಯಲ್ಲಿ ಮಂಜೂರಾಗಿವೆ

ರೋಮನ್ ಕೆಥೋಲಿಕ್ ಕ್ರೈಸ್ತ ಮಿಶನರಿಗಳ ಬಾಲಿಕಾ ಪಾಠಶಾಲೆಗಳಲ್ಲಿ ಹಿಂದೂ ವ ಅನ್ಯಮತದ ಹುಡುಗಿಯರನ್ನು ಕಳುಹಿಸಿಕೊಡುವದರಿಂದ ಉಂಟಾಗುವ ಅನರ್ಥ ಯಾವುದೆಂಬುದು ಈಗೀಗ ಸರಿಯಾಗಿ ಹೊರ ಬೀಳುತ್ತವೆ. ಇಲ್ಲಿಯ ಕನ್ವೆಂಟ್ ಹ್ಯಾಸ್ಕೂಲಿನಲ್ಲಿ ವಿದ್ಯಾರ್ಥಿನಿಯಾಗಿರುವ ಇಲ್ಲಿಯ ಸಾರಸ್ವತ ಪ್ರಮುಖ ವಕೀಲರ ಮಗಳಿಗೆ ಏನೋ ರಿಂಫೆಟಿಕ್ ನೋವು ಬಂಫೆಯಲ್ಲಿ ಉಂಟಾದ್ದರಿಂದ ಹುಡುಗಿಯು ಶಾಲೆಯನ್ನು ಬಿಟ್ಟು ಮನೆಗೆ ಹೋಗಲು ಉಪಾಧ್ಯಾಯಿಯ ಅನುಮತಿಯನ್ನು ಕೇಳಿದಳೆಂತಲೂ ಇದಕ್ಕೆ ಪ್ರತ್ಯುತ್ತರವಾಗಿ ಹುಡುಗಿಗೆ ಪ್ಲೇಗು ಬೇನೆಯು ತಗಲಿರುವದೆಂದೂ ಮತಾಂತರವನ್ನು ಹೊಂದಿಕೊಂಡು ಸಮರ್ಥ ಡಾಕ್ಟರರಾದ ಫೆರ್ನಾಂಡೀಸರು ಇರುವ ಕಂಕನಾಡಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುವದುಯುಕ್ತವೆಂತಲೂ, ಇದ್ದ ಮತದಲ್ಲಿಯೇ ಇದ್ದರೆ ಸಾಯುವದು ನಿಜವೆಂತಲೂ—ಉಪಾಧ್ಯಾಯಿಯು ಉತ್ತರಕೊಟ್ಟದ್ದರಿಂದ ಹುಡುಗಿಯು ಗಾಬರಿ ಪಟ್ಟು ಮನೆಗೆ ನಡಕೊಂಡೇ ಹೋದಳೆಂತಲೂ, ಪ್ಲೇಗು ಬೇನೆಯು ಅಲ್ಲದ್ದರಿಂದ ಈ ವಿದ್ಯಾರ್ಥಿನಿಯು ಯಥಾರೀತಿ ಆರೋಗ್ಯದಿಂದಿರುವಳೆಂತಲೂ ಒಬ್ಬ ಮಾನ್ಯ ಗೃಹಸ್ಥರು ತಿಳಿಸಿರುವರು. ಇಷ್ಟೇ ಅಲ್ಲ, ತನಗೆ ಟ್ರಾನ್ಸಫರ [illegible]ಕೇಟು ಸಿಕ್ಕುವ ತನಕ ಈ ಕನ್ವೆಂಟ್ ಶಾಲಾಧಿಕಾರಿಗಳಿಗೆ ಈ ವಿಷಯ ಬೇಸರವನ್ನುಂಟುಮಾಡುವ ಪತ್ರವನ್ನು ಸಹ ಬರಿಯಕೂಡದೆಂದು ತಂದೆಯನ್ನು ವಿದ್ಯಾರ್ಥಿನಿಯು ಕೇಳಿಕೊಂಡಿರುವಳು. ಹಿಂದೂ ಮುಂದಾಳುಗಳು, ಅದರಲ್ಲಿಯೂ ನವನಾಗರಿಕತೆಯ ವಿದ್ಯಾರ್ಜನೆಯಲ್ಲಿ ಈ ಜಿಲ್ಲೆಗೆ ಮಾರ್ಗಸೂಚಕರಾಗಿರುವ ಸಾರಸ್ವತ ಮುಂದಾಳುಗಳು, ಈ ವೃತ್ತಾಂತದ ನಿಜತ್ವವನ್ನು ಪರಿಶೋಧಿಸಿ ತಿಳಕೊಳ್ಳಲಿ, ಮತ್ತು ತಮ್ಮ ದೇಶಬಾಂಧವರೂ ಅನುಯಾಯಿಗಳೂ ಆದ ಇತರರಿಗೆ ಯಾವ ಮಾರ್ಗವನ್ನು ಈ ಸಂದರ್ಭದಲ್ಲಿ ತೋರಿಸಿಕೊಡುವುದೆಂಬದನ್ನು ನಿರ್ಧರಿಸಿ ಹೇಳಲಿ. ಟ್ರಾನ್ಸಫರ್ ಸರ್ಟಿಫಿಕೇಟಿನ ಆ ಹುಡುಗಿಯ ವಿಷಾದ! ಇದಾದರೋ ಸರ್ವತ್ರ ಹರಿಸಿಕೊಂಡು ಇಲ್ಲಿಯ ಸ್ತ್ರೀ ಶಿಕ್ಷಣವೆಂಬ [illegible] ಇನ್ನೇನು ಭೀಕರ ವೃತ್ತಾಂತಗಳು ಉಂಟಾಗಲಿಕ್ಕಿರುವವೆಂಬುದು ಯೋಚಿಸಿಯಾದರೂ ಸುಮ್ಮನಿರುವ!

ಪಟ್ಟಣದಲ್ಲಿ ಪ್ಲೇಗಿನ ಹಾವಳಿಯು ಹೆಚ್ಚುತ್ತ ಬಂದಿದೆ. [illegible] ವಾರದಲ್ಲಿ ೧೫ ಪ್ಲೇಗು ಮರಣಗಳಾಗಿವೆ. [illegible] ವಾರ್ಡಿನಲ್ಲಿ ೧೧, ಗೋಳಿ[illegible] ವಾರ್ಡಿನಲ್ಲಿ ೩, [illegible] ೧.

ತಂದಿದ್ದರು. ಇವರು ಈ ಮೊಕದ್ದಮೆಯ ವಿಚಾರ ನಡಿಸಿ, ಇಂಥಾ ವ್ಯಕ್ತಿಯನ್ನು ಒಂದು ತಿಂಗಳ ನೋಟೀಸು ಕೊಟ್ಟು ಕೆಲಸದಿಂದ ತೆಗೆಯುವದು ನ್ಯಾಯವಲ್ಲ, ಶಾಲೆಯ ಕೆಲಸದ ಆರಂಭದಲ್ಲಿ ಒಬ್ಬ ಉಪಾಧ್ಯಾಯನಿಗೆ ಒಂದು ತಿಂಗಳ ನೋಟೀಸು ಕೊಟ್ಟು ಕೆಲಸದಿಂದ ತೆಗೆಯುವದಾದರೆ ಅವನಿಗೆ ಇನ್ನೊಂದು ಶಾಲೆಯಲ್ಲಿ ವೃತ್ತಿ ದೊರಕಿಸಿಕೊಳ್ಳುವದಕ್ಕೆ ಹ್ಯಾಗೂ ಕೆಲವು ಸಮಯ ಹೋಗುವದು ಎಂಬದಾಗಿ ಅಭಿಪ್ರಾಯಪಟ್ಟು ಫಿರ್ಯಾದಿಗೆ ಸಂಬಳದ ಲೆಕ್ಕದಲ್ಲಿ ರೂ. ೭೫೦ ಮತ್ತು ಆಹಾರ ಮತ್ತು ಊಟದ ಲೆಕ್ಕದಲ್ಲಿ ರೂ. ೩೫೦ ಕೊಡಬೇಕೆಂತ ಹೇಳಿ ಕಾಲೇಜು ಅಧಿಕಾರಿಗಳ ಮೇಲೆ ರೂ. ೧೧೦೦ಕ್ಕೆ ಡಿಕ್ರಿ ಮಾಡಿರುತ್ತಾರೆ.

ಇಂಡಿಯಾ ಸರಕಾರದ ಕೋಶಾಧ್ಯಕ್ಷರು ಮಾರ್ಚ ತಾ. ೧ರಲ್ಲು ವರಿಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ತಂದಿದ್ದ ಟೆರಿಫ್ ಎಮೆಂಡ್‌ಮೆಂಟ್ ಬಿಲ್, ಇನ್‌ಕಮ್ ಟೇಕ್ಸ್ ಎಮೆಂಡ್‌ಮೆಂಟ್ ಬಿಲ್ ಮತ್ತು ಸುಪರ್ ಟೇಕ್ಸ್ ಬಿಲುಗಳು ತಾ. ೭ರಲ್ಲು ಕೂಡಿದ ಸಭೆಯ ಮುಂದೆ ಇಡಲ್ಪಟ್ಟು ಈ ಸಂಬಂಧದಲ್ಲಿ ವಾದಪ್ರತಿವಾದಗಳು ನಡೆದು ಕೊನೆಗೆ ಈ ಮೂರು ಬಿಲುಗಳೂ ಪಾಸಾಗಿರುವವು.

ಇಂಡಿಯಾ ಸರಕಾರದವರು ಸಾಮ್ರಾಜ್ಯ ಸರಕಾರಕ್ಕೆ ಈ ವರ್ಷ ಕೊಡಲಿಚ್ಛಿಸಿರುವ ೧೦೦ ಮಿಲಿಯ ಪವನುಗಳ ಸಂಬಂಧವಾಗಿ ಮಾನ್ಯ ಪಂಡಿತ ಮದನಮೋಹನಮಾಲವಿಯರು ಒಂದು ಮಸೂದೆಯನ್ನು ಇದೇ ತಾ. ೭ರಲ್ಲು ಕೂಡಿದ ವರಿಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ತಂದಿದ್ದರು. ಬ್ರಿಟಿಷ ಸರಕಾರಕ್ಕೆ ಯುದ್ಧ ಖರ್ಚಿನ ಬಗ್ಗೆ ೧೦೦ ಮಿಲಿಯ ಪವನುಗಳನ್ನು ಉಚಿತವಾಗಿ ಕೊಡುವದರ ಬದಲಿಗೆ ಸ್ಪೆಶಲ್ ವೊರ್‌ಲೋನಿನ ಏರ್ಪಾಡಿನ ಮೂಲಕ ಹಿಂದೂಸ್ಥಾನದಲ್ಲಿ ಸಾಲವಾಗಿ ದೊರಕುವ ಎಲ್ಲಾ ಹಣವನ್ನೂ ಯುದ್ಧ ತೀರುವ ವರೆಗೆ ಪ್ರತಿ ವರ್ಷ ೭ ಮಿಲಿಯ ಪವನುಗಳನ್ನೂ ಬ್ರಿಟಿಷ ಸರಕಾರಕ್ಕೆ ಕೊಡುವದು ಉಚಿತವೆಂಬದೇ ಮಾನ್ಯ ಪಂಡಿತ ಮಾಲವಿಯರ ಮಸೂದೆಯ ಮುಖ್ಯ ತಾತ್ಪರ್ಯವಾಗಿತ್ತು. ಪಂಡಿತ ಮಾಲವಿಯರು ಈ ಮಸೂದೆಯನ್ನು ಸಭೆಯ ಮುಂದಿಟ್ಟು ಹಿಂದೂಸ್ಥಾನವು ಈ ವರೆಗೆ ಸಾಮ್ರಾಜ್ಯ ಸರಕಾರಕ್ಕೆ ಮಾಡಿದ ಸಹಾಯ್ಯವನ್ನೆಲ್ಲಾ ಕುಲಂಕಶವಾಗಿ ವಿವರಿಸಿ ಹಿಂದೂಸ್ಥಾನವು ಇತರ ಎಲ್ಲಾ ವಸಾಹತುಗಳಿಗಿಂತಲೂ ಹೆಚ್ಚಿನ ಸಹಾಯ್ಯವನ್ನು ಬ್ರಿಟಿಷ ಸರಕಾರಕ್ಕೆ ಈ ಯುದ್ಧದಕಾಲ ಮಾಡಿದೆಂಬದನ್ನು ಸ್ಪಷ್ಟಪಡಿಸಿ ಕೊಟ್ಟಿರುತ್ತಾರೆ. ಕೌನ್ಸಿಲಿನ ಪ್ರಜಾಪ್ರತಿನಿಧಿಗಳ ಯಾವದೊಂದು ಅಭಿಪ್ರಾಯಗಳನ್ನು ಕೇಳದೆ ೧೦೦ ಮಿಲಿಯ ಪವನುಗಳನ್ನು ಬ್ರಿಟಿಷ ಸರಕಾರದವರಿಗೆ ಉಚಿತ ಕೊಡಬೇಕೆಂಬದಾಗಿ ಮಾಡಿದ ಇಂಡಿಯಾ ಸರಕಾರದವರ ನಿರ್ಣಯವನ್ನು ಪಂಡಿತ ಮಾಲವಿಯರು ಚೆನ್ನಾಗಿ ಖಂಡಿಸಿ, ೧೦೦ ಮಿಲಿಯ ಪವನುಗಳು ಎಂಬದು ಹಿಂದೂಸ್ಥಾನಕ್ಕೆ ಬಹು ದೊಡ್ಡ ಹೊರೆ ಎಂಬದನ್ನು ಸೋದಾಹರಣವಾಗಿ ತಿಳಿಯ ಹೇಳಿ ಕೊನೆಗೆ ತನ್ನ ಮಸೂದೆಯನ್ನು ಹಿಂತೆಗೆದಿರುತ್ತಾರೆ.

ಹಿಂದೂಸ್ಥಾನದಲ್ಲಿ ಯುದ್ಧದ ಬಗ್ಗೆ ಸಾಲವನ್ನು ಎತ್ತುವ ಸಂದರ್ಭದಲ್ಲಿ ಲಾಹೋರಿನಲ್ಲಿ ಲೆಪ್ಟಿನೆಂಟ ಗವರ್ನರರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಒಟ್ಟಿಗೆ ೩೦ ಲಕ್ಷ ರೂಪಾಯಿಯ ಸಾಲ ದೊರಕಿರುವದು.

ಅಪರಾಧಗಳನ್ನು ಮಾಡಿ ಬಂದಿಖಾನೆಯ ಶಿಕ್ಷೆಯನ್ನನುಭವಿಸಿ ಬಿಡುಗಡೆಯಾದವರಿಗೆ ತಕ್ಕ ಕೆಲಸಗಳನ್ನು ಒದಗಿಸಿಕೊಡುವ ಮತ್ತು ಅಂಥವರನ್ನು ಸದ್ವರ್ತನೆಯಲ್ಲಿ ನಡಿಸುವ ಏರ್ಪಾಡು ಮಾಡುವ ಉದ್ದೇಶದಿಂದ ಮುಂಬಾಯಿಯಲ್ಲಿ ಕಳೆದ ವರ್ಷ ಒಂದು ಸೊಸೈಟಿ ತೆರೆಯಲ್ಪಟ್ಟಿತ್ತು. ಈ ಸೊಸೈಟಿಯ ಮೊದಲನೇ ವಾರ್ಷಿಕ ಸಭೆಯು ಇದೇ ತಾ. ೭ರಲ್ಲು ಮುಂಬಾಯಿ ಗವರ್ನರರ ಅಧ್ಯಕ್ಷತೆಯಲ್ಲಿ ಕೂಡಿತಂತೆ. ಅಧ್ಯಕ್ಷರು ಭಾಷಣದಲ್ಲಿ ಇಂಥವರಿಗೆ ಪಟ್ಟಣದಲ್ಲಿ ತಕ್ಕ ಕೆಲಸಗಳು ದೊರೆತು ಅವರು ಸಭ್ಯರಾಗಿ ನಡೆಯುವಂತಾದರೆ ಈ ಸೊಸೈಟಿಯ ಉದ್ದೇಶವು ಫಲದಾಯಕವಾಗುವದು ಎಂದು ಹೇಳಿ ಪಟ್ಟಣದಲ್ಲಿರುವ ಕಾರ್ಖಾನೆಗಳ ಯಜಮಾನರು ಇಂಥವರಿಗೆ ಇದಷ್ಟು ಕೆಲಸಗಳನ್ನು ಒದಗಿಸುವಂತೆ ಏರ್ಪಾಡು ಮಾಡಬೇಕೆಂತ ವಿಜ್ಞಾಪಿಸಿಕೊಂಡಿರುವರು. ಈ ಸೊಸೈಟಿಯ ವಾರ್ಷಿಕ ವರದಿಯಿಂದ ಬಂದಿಖಾನೆಯಿಂದ ಹೊರಬಂದ ೯೭ ಮಂದಿಗೆ ಸೊಸೈಟಿಯ ಸಹಾಯ್ಯ ದೊರಕಿರುವದು. ಈ ಪೈಕಿ ೩೯ ಮಂದಿಗೆ ಕಾಯಂ ಕೆಲಸ ದೊರಕಿರುವದು ಎಂತ ತಿಳಿದು ಬಂದಿರುತ್ತದೆ.

ಸಂಯುಕ್ತ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಚಿಂತಾಮಣಿಯವರು ಬ್ರಾಹ್ಮಣ ಕಾಯಸ್ಥ ಬನಿಯ ಜಾತಿಯವರು ಪೋಲಿಸ ಪೌಜಿನ ಆರ್ಮ್ಡ್ ಮತ್ತು ಸಿವಿಲ್ ಪೋಲಿಸ್ ಹುದ್ದೆಗೆ ಸೇರಿಕೊಳ್ಳುವದಕ್ಕೆ ಮಿತಿಯನ್ನಿಟ್ಟಿರುವದರ ಕಾರಣವನ್ನು ಕೇಳಿದಾಗ ಮಾನ್ಯ ಮರಿಸರವರು ಸೇನೆಯಲ್ಲಿದ್ದ ಬ್ರಾಹ್ಮಣರು ಕೆಟ್ಟ ಅಧಿಕಾರಿಗಳಾಗಿದ್ದುದೇ ಕಾರಣವೆಂತ ಹೇಳಲಿಲ್ಲ. ಆದರೆ ಕೆಟ್ಟ ಕುದುರೆ ಸವಾರರಾಗಿದ್ದುದೇ ಕಾರಣವೆಂತ ಹೇಳಿದ್ದರು. ಈ ವಾರ್ತೆಯನ್ನು ತಂತಿ ಮೂಲಕ ಕಳುಹಿಸುವಾಗ 'ಕುದುರೆ ("ಹೊರ್ಸ")' ಎಂಬ ಶಬ್ದವನ್ನು ಬಿಟ್ಟುಬಿಟ್ಟದ್ದರಿಂದ ಈ ಅನರ್ಥಕ್ಕೆ ಕಾರಣವಾಯಿತೆಂತ ತಿಳಿದು ಬಂದದೆ.

ಬಂಗಾಳ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ನವಾಬ್ ಸಯ್ಯದ್ ಶಮ್ಸುಲ್ಲಾ ಹುದ್ದಾರವರು ಕಲ್ಕತ್ತಾ ಹೈಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಲ್ಕತ್ತೆಗೆ ಸೇರಿದ ಕೃಷ್ಣನಗರ ಎಂಬಲ್ಲಿಯ ಸೆಶನ್ಸ್ ಕೋರ್ಟಿನಲ್ಲಿ ಒಂದು ಭೀಕರವಾದ ಕೊಲೆ ಮೊಕದ್ದಮೆಯ ತನಿಖೆ ಪ್ರಾರಂಭವಾಗಿರುವದು. ಈ ಮೊಕದ್ದಮೆಯಲ್ಲಿ ಎರಡು ಕ್ಷತ್ರಿಯ ಹೆಂಗಸರು ಮತ್ತು ಅವರ ಒಬ್ಬ "ಗುರು" ಕೂಡಿ ೨ ಮಕ್ಕಳನ್ನು ಕೊಂದರೆಂಬದಾಗಿ ಆಪಾದಿಸಲ್ಪಟ್ಟಿರುವರು. ಮೃತ ಹುಡುಗರ ತಂದೆಯು ಊಟಿಗೆ ಸತ್ತುಹೋದ್ದರಿಂದ ಈ ಹುಡುಗರ ತಾಯಿಯು ತನ್ನ ತಾಯಿ ಮತ್ತು ಸಹೋದರಿಯ ಮನೆಗೆ ಬಂದು ವಾಸಿಸುತ್ತಿದ್ದಳು. ಆ ಮನೆಗೆ ಒಬ್ಬ "ಗುರು" ಬಂದು ಈ ಮಕ್ಕಳನ್ನು ಕೊಂದು ಮಾಂಸವನ್ನು ಬೇಯಿಸಿ ದೇವತೆಗಳಿಗೆ ಅರ್ಪಿಸಬೇಕೆಂದನಂತೆ. ಅವನು ಈ ಹೆಂಗಸನ್ನು ಪೂರ್ಣವಾಗಿ ಸ್ವಾಧೀನಮಾಡಿಕೊಂಡದ್ದರಿಂದ ಆ ಹೆಂಗಸು ತನ್ನ ಮಕ್ಕಳಿಬ್ಬರನ್ನೂ ಕೊಂದು ಬೇಯಿಸಿದಳಂತೆ. ಆ "ಗುರು" ತನ್ನ ಹಣೆಯ ಮೇಲೆ ಏನೋ ಹಚ್ಚಿದ್ದರಿಂದ ತನಗೆ ಮಕ್ಕಳ ಮೇಲೆ ಇದ್ದ ಪ್ರೀತಿಯು ಒಡನೆ ಹೋಗಿ ಮಕ್ಕಳನ್ನು ಕೊಂದುಬಿಟ್ಟೆನೆಂದು ತಾಯಿಯು ಹೇಳುತ್ತಾಳೆ. ಬೇಯಿಸಿದ ಈ ಮಾಂಸವನ್ನು ದೇವತೆಗೆ ಅರ್ಪಿಸಿದ ನಂತರ ಈ ಮಕ್ಕಳಿಗೆ ಪುನಃ ಜೀವ ಬರುವದು ಎಂದು "ಗುರು" ಹೇಳಿದ್ದನಂತೆ. ಗುರು ಹೇಳಿದ್ದಂತೆ ಆ ಹೆಂಗಸರು ಮಾಡಿದ್ದರು. ಆದರೆ ಮಕ್ಕಳಿಗೆ ಪುನಃ ಜೀವ ಬರಲಿಲ್ಲ.

ಮಿ| ಸಿ. ಎಫ್. ಅಂಡ್ರ್ಯೂಸರವರು ಇನ್ನೊಂದು ಸಾರಿ ಫಿಜಿದ್ವೀಪಕ್ಕೆ ಹೋಗಿ ಅಲ್ಲಿಯ ಕೂಲಿಯಾಳುಗಳ ಸ್ಥಿತಿಯನ್ನು ತಿಳಿದುಕೊಂಡು ಬರುವದಕ್ಕಿದ್ದಾರೆ.

ಮುಂಬಾಯಿ ಯುನಿವರ್ಸಿಟಿ ಸೇನಾದಳಕ್ಕೆ ಸೇರಿಕೊಳ್ಳಲು ಮುಂಬಾಯಿಯ ವಿದ್ಯಾರ್ಥಿಗಳಲ್ಲಿ ವಿಶೇಷ ಚಳವಳವು ಉಂಟಾಗಿರುವದು.

ಇಂಡಿಯನ್ ಡಿಫೆನ್ಸ್ ಫೋರ್ಸಿಗೆ ಸೇರಿಕೊಳ್ಳಬೇಕೆಂತ ಬಹುಮಾನವಿಟ್ಟು ಪ್ರೋತ್ಸಾಹಿಸುವರು ಫರ್ಗುಸನ್ ಕಾಲೇಜಿಯ ವಿದ್ಯಾರ್ಥಿಗಳನ್ನು ವಿಜ್ಞಾಪಿಸಿಕೊಂಡಿರುತ್ತಾರೆ. ಸದರಿ ಕಾಲೇಜಿಯ ಪ್ರೊಫೆಸರರ ಪೈಕಿ ಪ್ರೊ| ಬಂಡೇಲ್, ಪ್ರೊ| ಗೋಖಲೆ, ಪ್ರೊ| ಪರಾಂಜಪೆಯವರು ಈ ಸ್ವಯಂ ಸೇನೆಗೆ ಸೇರಿಕೊಳ್ಳಲು ತಮ್ಮ ಹೆಸರನ್ನು ಕೊಟ್ಟಿರುತ್ತಾರೆ.

ಮಾರ್ಚ ತಾ. ೩೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲಿ [illegible] ಮಂದಿಗೆ ಪ್ಲೇಗ್ ಬೇನೆಯು [illegible] ಈ ಪೈಕಿ ಮುಂಬಾಯಿ ಮತ್ತು ಸಿಂಧದಲ್ಲಿ [illegible]; ಮದ್ರಾಸ್ ೫೦೧; ಬಂಗಾಳ ೧೪; ಬಿಹಾರ್ ಮತ್ತು ಒರಿಸ್ಸ ೩೦೩೫; ಸಂಯುಕ್ತ ಸಂಸ್ಥಾನಗಳು ೬೦೮೯; ಪಂಜಾಬು ೧೦೧; ಬರ್ಮ ೩೨೫; ಮಧ್ಯಸಂಸ್ಥಾನ ೩೭೬೮; ಕೊಡಗು ೨; ಮೈಸೂರು ೩೪೪; ಹೈದರಾಬಾದ್ ೯೩೭; ಮಧ್ಯ ಹಿಂದೂಸ್ಥಾನ ೨೪೯; ರಜಪುತಾನ ೧೪೬; ಕಾಶ್ಮೀರ ೯ ಮರಣಗಳಾಗಿರುವವು.

ಇದೇ ತಾ. ೧೦ರಲ್ಲು ಕೂಡಿದ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ೧೯೧೭—೧೮ನೇ ಇಸವಿಯ ಆದಾಯ ವೆಚ್ಚಗಳ ಅಂದಾಜು ಪಟ್ಟಿಯ ವಿಷಯವಾದ ಪರ್ಯಾಲೋಚನೆಯು ನಡೆಯಿತು. ಶಿಕ್ಷಣ ಮೆಂಬರರಾದ ಸರ್. ಶಂಕರನ್ ನಾಯರರು ಹಿಂದೂಸ್ಥಾನದ ಶಿಕ್ಷಣ ಸಂಬಂಧವಾಗಿ ವರ್ಷ ವರ್ಷ ಸರಕಾರದವರು ಹೆಚ್ಚೆಚ್ಚು ಹಣವನ್ನು ವೆಚ್ಚಮಾಡುತ್ತಿದ್ದಾರೆಂಬದನ್ನು ವಿವರಿಸಿ ಸರಕಾರದವರು ಈ ಯುದ್ಧ ಸಮಯ ಪುನಃ ಹೆಚ್ಚಿಗೆ ೩೦ ಲಕ್ಷ ರೂಪಾಯಿಗಳನ್ನು ಶಿಕ್ಷಣ ಬಗ್ಗೆ ರಿಕರಿಂಗ್ ಗ್ರೇಂಟಾಗಿ ಕೊಡುವದು ಹಿಂದೂಸ್ಥಾನದ ಶಿಕ್ಷಣಾಭಿವೃದ್ಧಿ ಸಂಬಂಧ ಸರಕಾರದವರು ಮಹತ್ವದ ದೃಷ್ಟಿಯನ್ನಿಟ್ಟಿರುತ್ತಾರೆಂಬದಕ್ಕೆ ನಿದರ್ಶನವಾಗಿದೆಂತಲೂ ಈ ಹಣವು ಪ್ರಾಯಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸ ಸಂಬಂಧ ಉಪಯೋಗಿಸಲ್ಪಡುವದೆಂತಲೂ ಹೇಳಿರುತ್ತಾರೆ. ಸರಕಾರದವರು ಶಿಕ್ಷಣ ಸಂಬಂಧವಾಗಿ ವೆಚ್ಚಮಾಡಲಿಕ್ಕಿರುವ ಈ ೩೦ ಲಕ್ಷ ರೂಪಾಯಿಗೆ ಕೂಡಿಸಿ ಪ್ರಾಥಮಿಕ ಶಿಕ್ಷಣ ಬಗ್ಗೆ ಪುನಃ ೩೦ ಲಕ್ಷ ರೂಪಾಯಿಗಳನ್ನು ಕೊಡಬೇಕೆಂಬ ಮಸೂದೆಯನ್ನು ಮಾನ್ಯ ಶ್ರೀನಿವಾಸ ಶಾಸ್ತ್ರಿಯವರು ಸಭೆಯ ಮುಂದೆ ತಂದು ಪ್ರಾಥಮಿಕ ವಿದ್ಯಾಭ್ಯಾಸಾಭಿವೃದ್ಧಿ ಬಗ್ಗೆ ಹೆಚ್ಚಿನ ೩೦ ಲಕ್ಷ ರೂಪಾಯಿಗಳನ್ನು ಕೊಡುವದರ ವಿನಃ ಈ ಶಿಕ್ಷಣವು ಅಭಿವೃದ್ಧಿಯನ್ನು ಹೊಂದದು ಎಂಬದನ್ನು ಸಭೆಯವರಿಗೆ ತೋರಿಸಿಕೊಟ್ಟರು. ಸರ್ ವಿಲಿಯಂ ಮೆಯರರವರು ಸರಕಾರದವರಿಗೆ ಯುದ್ಧಸಂಬಂಧ ಧಾರಾಳ ಹಣವನ್ನು ಖರ್ಚುಮಾಡಲಿಕ್ಕಿರುವದರಿಂದ ಸರಕಾರದವರು ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ೩೦ ಲಕ್ಷ ರೂಪಾಯಿಗಳ ಗ್ರೇಂಟು ಕೊಡುವ ಭಾರವನ್ನು ಹೊತ್ತುಕೊಳ್ಳುವದಾಗಿಲ್ಲವೆಂದೂ ಯೋಗ್ಯ ಉಪಾಧ್ಯಾಯರು ಇಲ್ಲದೆ ಶಾಲೆಗಳನ್ನು ತೆರೆಯುವದು ನಿಷ್ಪ್ರಯೋಜನವಾದುದರಿಂದ ಈಗ ಸರಕಾರದವರು ಉಪಾಧ್ಯಾಯರನ್ನು ತರ್ಬೇತುಮಾಡುವ ಮತ್ತು ಅವರ ಸಂಬಳಗಳನ್ನು ಹೆಚ್ಚಿಸುವ ಸುಧಾರಣೆಯನ್ನು ಮಾಡುವದು ಶಿಕ್ಷಣಾಭಿವೃದ್ಧಿ ದೃಷ್ಟಿಯಿಂದ ಪ್ರಾಮುಖ್ಯ ಕರ್ತವ್ಯವಾಗಿದೆಂತಲೂ ಸರ್ ವಿಲಿಯಂ ಮೇಯರರು ಹೇಳಿ ಮಾನ್ಯ ಶಾಸ್ತ್ರಿಯವರ ಮಸೂದೆಗೆ ಎಡತಡೆಯನ್ನು ತಂದುಹಾಕಿದರು. ಕೊನೆಗೆ ಮಾನ್ಯ ಶ್ರೀನಿವಾಸ ಶಾಸ್ತ್ರಿಯವರ ಮಸೂದೆಯು ಬಿದ್ದುಹೋಯಿತು.

ಇಂಡಿಯಾ ಸರಕಾರದವರು ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನಲ್ಲಿ ಒಂದು ಹೊಸ 'ರೂಲ'ನ್ನು ಸೇರಿಸಿ, ಹಿಂದೂಸ್ಥಾನದಿಂದ ಯಾವ ಹಿಂದೀ ಕೆಲಸಗಾರನಾದರೂ ಹಿಂದೂಸ್ಥಾನದ ಗಡಿಯನ್ನು ಬಿಟ್ಟು ಪರದೇಶಗಳಿಗೆ ಕೂಲಿ ಕೆಲಸಕ್ಕೆ ಹೋಗಕೂಡದೆಂಬ ಕಟ್ಟು ಮಾಡಿರುತ್ತಾರೆ. ಮತ್ತು ಗವರ್ನರ ಜನರಲರಿಂದ ಈ ಬಗ್ಗೆ ನೇಮಿಸೋಣಾಗುವ ಆಫೀಸರನ ಸ್ಪೆಶಲ್ ಲೈಸನ್ಸ್ ಪಡೆದಿರುವ ಯಾವನಿಗಾದರೂ ಈ ನಿಷೇಧ ಆಜ್ಞೆಯು ಲಾಗುವಾಗುವದಿಲ್ಲವೆಂಬ ಒಂದು ಉಪನಿಯಮವನ್ನು ಅದರೊಡನೆಯೇ ಸೇರಿಸಿರುತ್ತಾರೆ. ಯುದ್ಧ ಸಂಬಂಧವಾಗಿ ಹಿಂದೂಸ್ಥಾನದ ಕೆಲಸಗಾರರನ್ನು ಹಿಂದೂಸ್ಥಾನದಲ್ಲಿಯೇ ಉಳಿಗೊಡಿಸಲಿಕ್ಕಾಗುವ ಹಾಗೆ ಸರಕಾರದವರು ಈ ನಿಯಮವನ್ನು ಮಾಡಿ ಸಿಲೋನ್ ಮತ್ತು ಮಲಯಾ ದ್ವೀಪಗಳಿಗೆ ಹೋಗುವ ಕೆಲಸಗಾರರಿಗೆ ವಿನಾಯಿತಿಯನ್ನಿಡುವಹಾಗೆ ಉಪನಿಯಮವನ್ನು ಸೇರಿಸಿದರೆಂದು ತಿಳಿಯಬರುತ್ತದೆ. ಈ ವಿಧಿಯು ಕೂಡಲೇ ಜಾರಿಗೆ ಬರುವದು.

ರಸಾಯನಿಕ ಪರಿಶೋಧಕರು ಮತ್ತು ಕ್ರಿಮಿಶಾಸ್ತ್ರಜ್ಞರೂ ಆದ ಡಾಕ್ಟರ್ ಮಲ್ಲಾಂಬಿ'ರವರು ಹೊಗೆಸೊಪ್ಪನ್ನು ಕೋಣೆಯಲ್ಲಿ ಹರಡಿದರೆ ಪ್ಲೇಗು ರೋಗಾಣುಗಳು ಸತ್ತುಹೋಗುವವು ಮತ್ತು ಪ್ಲೇಗು ರೋಗಕ್ಕೆ ನಿವಾರಣೋಪಾಯವಾಗುವದೆಂಬದಾಗಿ ತಿಳಿಯಪಡಿಸಿರುವರು. ಆದರೆ ಪ್ಲೇಗುಬೇನೆಯ ಅನುಭವವುಳ್ಳ ಇತರ ಕೆಲವು ವೈದ್ಯರು ಡಾಕ್ಟರ್ ಮಲ್ಲಾಂಬಿಯರ ಅಭಿಪ್ರಾಯವನ್ನು ಒಪ್ಪುವದಿಲ್ಲ ಎಂತ ಹೈದರಾಬಾದಿನ ಒಬ್ಬ ಬಾತ್ಮೀದಾರರು ಒಂದು ಪತ್ರಿಕೆಗೆ ಬರೆದಿರುವರು. ಈ ಬಾತ್ಮೀದಾರರು ಒಬ್ಬ ಯುನಾನಿ ಡಾಕ್ಟರರನ್ನು ಈ ವಿಷಯದಲ್ಲಿ ಪ್ರಶ್ನಿಸಿದ್ದಲ್ಲಿ ಹೊಗೆಸೊಪ್ಪಿನ ಗಾಳಿಯನ್ನು ರಾತ್ರಿಹಗಲು ಶ್ವಾಸಿಸುತ್ತಿದ್ದ ಹಲವರು ಪ್ಲೇಗುಬೇನೆಗೆ ತುತ್ತಾದದ್ದು ತನಗೆ ಗೊತ್ತಿರುವದರಿಂದ ಡಾಕ್ಟರ್ ಮಲ್ಲಾಂಬಿಯ ಅಭಿಪ್ರಾಯವನ್ನು ತಾನು ನಂಬುವದಿಲ್ಲವೆಂದು ಹೇಳಿದರಂತೆ. ಇನ್ನು ಕೆಲವು ಡಾಕ್ಟರರೂ ಹಕೀಮರೂ ಸುಣ್ಣದ ನೀರನ್ನು ಕೋಣೆಯಲ್ಲಿ ೨—೩ ದಿವಸಗಳ ವರೆಗೆ ಚಿಮುಕಿಸಿದರೆ ಈ ರೋಗಾಣುಗಳು ಸತ್ತುಹೋಗುವವೆಂದು ಅಭಿಪ್ರಾಯ ಪಡುತ್ತಿದ್ದಾರೆಂತಲೂ ಇನ್ನು ಕೆಲವರು ಕೈಬೇವಿನ ಒಣಗಿದ ಸೊಪ್ಪನ್ನು ಪ್ರತಿ ಸಾಯಂಕಾಲ ಕೋಣೆಯಲ್ಲಿ ಸುಟ್ಟು ಹೊಗೆಕೊಡುವದರಿಂದ ಪ್ಲೇಗುಬೇನೆಯ ರೋಗಾಣುಗಳು ಸಾಯುವವೆಂತ ಹೇಳುವರೆಂತಲೂ ಅದೇ ಬಾತ್ಮೀದಾರರು ಬರೆದಿರುವರು,

ಪತ್ರವ್ಯವಹಾರ.

ಕನ್ನಡಿಗರ ಮೂರನೆಯ ಸಮ್ಮೇಳನ.

ಸ್ವಾಮಿ!

ಬರುವ ಜೂನ್ ತಿಂಗಳ ೮, ೯, ೧೦ನೇ ತಾರೀಕುಗಳಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ಕನ್ನಡಿಗರ ಮೂರನೆಯ ಸಮ್ಮೇಳನವು ಮೈಸೂರು ಪಟ್ಟಣದಲ್ಲಿ ನಡೆಯುವುದೆಂದೂ, ಪರಿಷದಧ್ಯಕ್ಷರಾದ ಶ್ರೀ ಎಚ್. ವಿ. ನಂಜುಂಡಯ್ಯನವರೇ ಈ ಸಾರಿಯೂ ಸಮ್ಮೇಳನದ ಸಭಾಪತಿಗಳಾಗುವರೆಂದೂ ತಿಳಿಯಬರುತ್ತಿದೆ. ಪುನಃ ಪುನಃ ಒಂದೇ ಸ್ಥಳದಲ್ಲಿ ನೆರೆಯುತ್ತಿದ್ದರೆ ಸಮ್ಮೇಳನದ ನೂತನತ್ವವು ಕೆಡುವುದು ಸಹಜ; ಇದಕ್ಕೆ ಕಳೆದ ಸಲ ಬೆಂಗಳೂರಿನಲ್ಲಿ ಆದ ಆಭಾಸವೇ ಸಾಕ್ಷ್ಯವಾಗಿದೆ. [illegible] ತ್ತಿನ ಕಾರ್ಯನಿರ್ವಾಹಕರು ಮಾಡಿದ ಏರ್ಪಾಡು ಬಹು ಸ್ತುತ್ಯವಾಗಿದೆ. ಆದರೆ ಇದರೊಂದಿಗೆ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೂ ಬೇರೆ ಯಾರೊಬ್ಬರನ್ನು ನೇಮಿಸಲು ಆಲೋಚಿಸಿದ್ದರೆ ಚೆನ್ನಾಗಿರುತ್ತಿತ್ತೆಂದು ನಾನು ಭಾವಿಸುವೆನು. ಮಹೋನ್ನತವಾದ ಪದವಿಯೂ, ಅಗಾಧವಾದ ಪಾಂಡಿತ್ಯವೂ, ದೃಢವಾದ ದೇಶಾಭಿಮಾನವೂ, ವಯೋಧಿಕತೆಯಿಂದ ಪ್ರಾಪ್ತವಾಗುವ ಅನುಭವವೂ ಸೌಜನ್ಯವೂ ಈ ಸ್ಥಾನಕ್ಕೆ ಅಗತ್ಯವಾಗಿ ಬೇಕಾಗಿರುವುವು. ಈ ಉದ್ದಾಮ ಗುಣಗಳೆಲ್ಲ ಒಂದೇ ಕಡೆ ಸೇರಿಕೊಂಡಿರುವುದು ಕೇವಲ ಅಪೂರ್ವವಾದರೂ, ಮ| ನಂಜುಂಡಯ್ಯನವರಲ್ಲಿ ಅನನ್ಯಸದೃಶವಾಗಿ ತುಂಬಿಕೊಂಡಿರುವುವೆಂದು ಸರ್ವರೂ ಒಪ್ಪದಿರಲಾರರು. ತಥಾಪಿ, ಮೊದಲನೆಯ ಸಲ ಶ್ರೀಯುತ ನಂಜುಂಡಯ್ಯನವರು ಮಾಡಿದ ಅಮೋಘವಾದ ಭಾಷಣವನ್ನೇ ಎರಡನೆಯ ಸಲ, ನಿರುಪಾಯವಾಗಿಯೋ ಎಂಬಂತೆ, ವಹಿಸಿದ ಮೌನವನ್ನೋ ಯಾವುದೊಂದು ವಿಷಯವಾಗಿ ಒಬ್ಬರೇ ಪುನಃ ಪುನಃ ಹೇಳತಕ್ಕ ನೂತನವೇನೂ ಇರುವುದಿಲ್ಲ. ಹೀಗಾಗುವುದರಿಂದ ಈ ಅಧ್ಯಕ್ಷಸ್ಥಾನಕ್ಕೆ ಪ್ರತಿವರ್ಷ ಕನ್ನಡಿಗರಲ್ಲಿ ಶ್ರೇಷ್ಠರಾದ ಬೇರೆ ಬೇರೆ ದೊಡ್ಡ ಮನುಷ್ಯರನ್ನು ನೇಮಿಸುವುದು ಶ್ರೇಯಸ್ಕರವೆಂದು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ಒಬ್ಬೊಬ್ಬರಲ್ಲಿ ಒಂದೊಂದು ಗುಣವು ವಿಶೇಷವಾಗಿರುವುದು; ಹಾಗೆಯೇ ಸಾಹಿತ್ಯವರ್ಧನದ ವಿಷಯದಲ್ಲಿಯೂ ಒಬ್ಬೊಬ್ಬರ ಅಭಿಪ್ರಾಯವು ಒಂದೊಂದು ವಿಧವಾಗಿರಬಹುದು. ಇವೆಲ್ಲ ನಮಗೆ ತಿಳಿಯ ಬರಬೇಡವೇ? ಒಬ್ಬರೇ ತಿರಿತಿರಿಗಿ ಅಧ್ಯಕ್ಷರಾದರೆ ಈ ಉದ್ದೇಶವು ನೆರವೇರುವುದೇ?

ಮೇಲೆ ಹೇಳಲಾದ ಮಹೋನ್ನತ ಯೋಗ್ಯತೆಗಳನ್ನುಳ್ಳ ದೊಡ್ಡ ಮನುಷ್ಯರನೇಕರು ಕನ್ನಡಿಗರಲ್ಲಿ ಇದ್ದೇ ಇರುವರು. ಮೈಸೂರು ಸೀಮೆಗೆ ಸೇರಿದವರೊಳಗೆ ಶ್ರೀ ಕರ್ಪೂರ ಶ್ರೀನಿವಾಸರಾಯರು, ಶ್ರೀ ಪುಟ್ಟಣ್ಣ ಶೆಟ್ಟಿಯವರು, ಶ್ರೀ ಜ್ಞಾನಶರಣ ಚಕ್ರವರ್ತಿಯವರು, ಶ್ರೀ ಆರ್. ನರಸಿಂಹಾಚಾರ್ಯರವರು, ಶ್ರೀ ಎಮ್. ವೆಂಕಟಕೃಷ್ಣಯ್ಯನವರು ಇವರೇ ಆದಿಯಾಗಿ ಇನ್ನು ಅನೇಕರು ಈ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಸರ್ವತೋ ಪರಿಸಮರ್ಥರಾಗಿರುವರು. ಬ್ರಿಟಿಷ್ ಸೀಮೆಗಳಲ್ಲಿಯೂ ಶ್ರೀ ವಿನಾಯಕರಾವ್ ಜೋಷಿಯವರು, ಶ್ರೀ ವಂಟಮುರಿಯ ಸರದೇಸಾಯಿಯವರು, ಶ್ರೀ ಸವೂರು ಮಂಗೇಶರಾಯರು ಮುಂತಾದ ಹಲವು ಮಂದಿ ನಾಯಕರಿರುವರು. ಇವರುಗಳನ್ನೂ ಇವರಂತೆಯೇ ಪ್ರಸಿದ್ಧರಾದ ಇತರ ಮಹನೀಯರನ್ನೂ ವರ್ಷಕೊಬ್ಬರಂತೆ ನಿಯಮಿಸುತ್ತ ಹೋದರೆ ಪರಿಷತ್ತಿನ ಉತ್ತರಾಭ್ಯುದಯಕ್ಕೆ ತುಂಬ ಸಹಾಯವಾಗದಿರದೆಂದು ದೃಢವಾಗಿ ಹೇಳಬಲ್ಲೆನು. ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯವರು ದಯವಿಟ್ಟು ಈ ಕಡೆಗೆ ಗಮನಕೊಡುವರಾಗಲಿ!

'ಸದಸ್ಯರಲ್ಲೊಬ್ಬ'.

ಈಗಿನ ಯುದ್ಧದಲ್ಲಿ ಗಾಯಗಳನ್ನು ತೊಳೆಯುವರೆ ಬೆಳ್ಳುಳ್ಳಿಯ ರಸವನ್ನು ವಿಶೇಷವಾಗಿ ಪ್ರಯೋಗಿಸುತ್ತಿದ್ದಾರೆ. ಗಾಯವನ್ನು ದಿವಸಕ್ಕೆ ಎರಡಾವರ್ತಿ ಬೆಳ್ಳುಳ್ಳಿ ರಸದಿಂದ ತೊಳೆದರೆ ೧ ಪಾಲು ಬೆಳ್ಳುಳ್ಳಿ ರಸಕ್ಕೆ ೩ ಪಾಲು ಶುದ್ಧಮಾಡಿದ ನೀರು ಕೂಡಿಸಿ [illegible] ರೋಗಿಗಳಿಗೆ ಅದರ ಉಪಯೋಗದಿಂದ [illegible]

ಉಪಾಧ್ಯಾಯರ ಕೆಪಿಟೇಶನ್ ಎಲೋವೆನ್ಸ್.

ಬೋರ್ಡು ಶಾಲಾ ಉಪಾಧ್ಯಾಯರಿಗೆ ಕೆಪಿಟೇಶನ್ ಎಲೋವೆನ್ಸ್ ಎಂಬ ಒಂದು ತರದ ಗ್ರೇಂಟು ಬೋರ್ಡಿನವರಿಂದ ಕೊಡೋಣಾಗುತ್ತದೆ. ಈ ಗ್ರೇಂಟು ಶಾಲಾ ಮಕ್ಕಳ ವರ್ಷಾವಧಿ ಸರಾಸರಿ ಹಾಜರಿಯ ಮೇಲೆ ಹೊಂದಿರುತ್ತದೆ. ಆದರೆ ಉಪಾಧ್ಯಾಯರು ಸರಿಯಾಗಿ ಕೆಲಸ ಮಾಡಲಿಲ್ಲವಾಗಿ ಇಲಾಖಾ ಉದ್ಯೋಗಸ್ಥರು ಅಭಿಪ್ರಾಯಪಟ್ಟರೆ ಅಂಥಾ ಎಲೋವೆನ್ಸನ್ನು ಬೋರ್ಡಿನವರು ವಜಾಮಾಡುತ್ತಾರಲ್ಲದೆ ಬಹಳ ತೃಪ್ತಿಕರವಾದ ಕೆಲಸ ಮಾಡುವ ಉಪಾಧ್ಯಾಯರಿಗೆ ಈ ಎಲೋವೆನ್ಸನ್ನು ಏರಿಸುವುದಿಲ್ಲ. ಇದು ಉಪಾಧ್ಯಾಯರಿಗೆ ಚಿಂತಾಸ್ಪದಕ್ಕೆ ಕಾರಣವಾಗಿದೆ ಮಾತ್ರವಲ್ಲ; ಉತ್ಸಾಹದಿಂದ ಕೆಲಸ ಮಾಡುವ ಉಪಾಧ್ಯಾಯರ ಉತ್ಸಾಹವನ್ನು ಕಡಿಮೆ ಮಾಡಿದ ಹಾಗೆ ಆಗುತ್ತದೆ. ಇಬ್ಬರು ಉಪಾಧ್ಯಾಯರ ಇಸಂ ಇರುವ ಒಂದು ಶಾಲೆಯಲ್ಲಿ ಒಂದು ಇಸಂ ಖಾಲಿ ಇದ್ದು ಒಬ್ಬನೇ ಉಪಾಧ್ಯಾಯನು ತೃಪ್ತಿಕರವಾದ ಕೆಲಸ ನಡಿಸಿ ಮಕ್ಕಳ ಸಂಖ್ಯೆಯನ್ನು ಏರಿಸಿದರೂ ಖಾಲಿ ಎಲೋವೆನ್ಸಿನ ಅರ್ಧಾಂಶವನ್ನು ಬೋರ್ಡಿನವರು ತಡೆಹಿಡಿಯುತ್ತಾರೆ. ಹಾಗೆಯೇ ಒಬ್ಬ ಕಾಯಂ ಸಿಬಂದಿಯ ಉಪಾಧ್ಯಾಯನು ರಜೆಯ ಮೇಲೆ ಹೋದಾಗ್ಯೆ ಆ ಸ್ಥಳಕ್ಕೆ ಇನ್ನೊಬ್ಬನನ್ನು ನೇಮಿಸದ ಸಂದರ್ಭಗಳಲ್ಲಿ ಕೂಡ ಆ ಶಾಲೆಯ ಪೂರ್ಣ ಕೆಲಸವನ್ನು ಬಾಕಿ ಉಳಿದ ಉಪಾಧ್ಯಾಯರು ಹೆಚ್ಚು ಶ್ರಮದಿಂದ ಮಾಡಿದರೂ ಆ ದಾಮಾಶಾಯಿ ಪ್ರಕಾರ ಸಿಕ್ಕತಕ್ಕ ಎಲೋವೆನ್ಸು ಕಷ್ಟಪಟ್ಟ ಈ ಉಪಾಧ್ಯಾಯರಿಗೆ ಸಿಗುವುದಿಲ್ಲ. ಆದರೆ ರಜೆಯಲ್ಲಿದ್ದ ಉಪಾಧ್ಯಾಯರ ಕ್ಲಾಸು ಯೋಗ್ಯರೀತಿಯಲ್ಲಿಲ್ಲದಿದ್ದರೆ ಆ ಬಗ್ಗೆ ಉದಾಹರಣೆಗೂ ಶಿಕ್ಷೆಗೂ ಬಾಕಿ ಉಳಿದ ಉಪಾಧ್ಯಾಯರು ಅರ್ಹರಾಗುತ್ತಿದ್ದಾರೆ. ಇದು ದೊಡ್ಡ ಕಷ್ಟವೇ ಸರಿ. ಅಷ್ಟು ಮಾತ್ರವಲ್ಲ; ತರ್ಬೇತುಹೊಂದಿದ ಒಬ್ಬ ಉಪಾಧ್ಯಾಯನಿರುವ ಶಾಲೆಯಲ್ಲಿ ಹೆಡ್ ಮಾಸ್ತರನು ಯಾ ಉಳಿದ ಉಪಾಧ್ಯಾಯರು ಆತನ ಕ್ಲಾಸನ್ನು ಮೇಲಕ್ಕೆ ತರುವರೆ ಹೆಚ್ಚು ಪ್ರಯತ್ನಪಡಬೇಕಾಗುತ್ತದೆ. ಆದರೆ ಕೆಪಿಟೇಶನ್ ಎಲೋವೆನ್ಸ್ ತರ್ಬೇತಾದ ಉಪಾಧ್ಯಾಯರಿಗೆ ದೊರೆಯುವದಿಲ್ಲವಷ್ಟೆ. ಆ ಅಂಶವನ್ನು ಕಷ್ಟಪಟ್ಟ ಈ ಉಪಾಧ್ಯಾಯರಿಗೆ ಕೂಡಾ ಬೋರ್ಡಿನವರು ಕೊಡದಿರುವದು ಉಪಾಧ್ಯಾಯರ ದುರಾದೃಷ್ಟವೇ ಸರಿ. ಇನ್ನೆಲ್ಲಾ ಆಲೋಚಿಸುವಾಗ ಉಪಾಧ್ಯಾಯರಿಗೆ ಸಿಕ್ಕುವ ಈ ತರದ ಎಲೋವೆನ್ಸ್ ಉಪಾಧ್ಯಾಯರ ಕಲಿಸುವಿಕೆಯ ಮೇಲೆಯೋ? ಯಾ ಮಕ್ಕಳ ಸಂಖ್ಯೆ ಏರಿಸುವದರಲ್ಲಿಯೋ? ಯಾ ಈ ಎರಡು ಕಾರಣಗಳಿಂದಲೋ? ಎಂತ ನಿರ್ಧರಿಸುವದು ಕಷ್ಟಸಾಧ್ಯವಾಗಿದೆ. ಈ ತರದ ಎಲೋವೆನ್ಸ್ ಯಾವ ಮುಖ್ಯ ಉದ್ದೇಶಗಳಿಗೆ ಅನುಸಾರವಾಗಿ ಕೊಡುತ್ತಾರೆಂಬುದು ಬಲ್ಲಾದವರು ಮುಂದಿನ ಪತ್ರಿಕೆಯಲ್ಲಿ ಅನುಭವದ ಬಗ್ಗೆ ಸೂಚಿಸುವರಾಗಿ ನಂಬುತ್ತೇನೆ.

ಉಪಾಧ್ಯಾಯರ ಹಿತಚಿಂತಕರಲ್ಲೊಬ್ಬ.

ಜೀನಸು ಧಾರಣೆ.

(ರಖಂ).

ಮಸ್ಸಿ ಅಕ್ಕಿ ಹೊಸ್ತು	5—8—0	ಇಂದ	5—14—0
ಗುಡ್ಡು ,, ,,	5—4—0	,,	5—10—0
ಹೊಸ ರಾಶಿ ,,	5—3—0	,,	5—6—0
ಅಪ್ಪರ್ ಬೆಳ್ತಿಗೆ ,,	6—0—0	,,	6—8—0
ಗುಡು ಬೆಳ್ತಿಗೆ ,,	5—8—0	,,	5—10—0
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	9—8—0	,,	9—12—0
ಗೋದಿ ಗೋಣಿ ೧ರ	11—12—0	,,	12—8—0
ತುರುವೆ ಗೋಣಿ ೧ರ	6—6—0	,,	6—8—0
ಕಡಲೆ ಗೋಣಿ ೧ರ ಬೊಂಬ್ಯ	10—0—0	,,	10—8—0
ತೊಗರಿ ಗೋಣಿ ೧ರ			11—0—0
ತೊಗರಿ ಬೇಳೆ ಗೋಣಿ ೧ರ	12—8—0	,,	15—8—0
ಉದ್ದು ಗೋಣಿ ೧ರ	10—8—0	,,	11—4—0
ಉದ್ದುಬೇಳೆ ಖಂಡಿ ೧ರ	30—0—0	,,	35—0—0
ಉಪ್ಪು ಗೋಣಿ ೧ರ	4—14—0	,,	5—0—0
ಕೊಬ್ರಿ ಖಂಡಿ ೧ರ	85—0—0	,,	90—0—0
ಕೊಬ್ರಿಹಿಂಡಿ ಖಂಡಿ ೧ರ	19—8—0	,,	20—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	27—8—0	,,	35—0—0
ಕೊಬ್ರಿ ಎಣ್ಣೆ ಮುಡಿ ೧ರ	6—8—0	,,	7—0—0
ಎಳ್ಳೆಣ್ಣೆ ಮುಡಿ ೧ರ(ಕುಲಸನ)		,,	4—8—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6—11—0	,,	7—5—0
ಮೋರಿಸ್ ಸಕ್ಕರೆ ಮುಡಿ ೧ರ	5—8—0	,,	5—10—0
ಕಾಫಿ ಖಂಡಿ ೧ರ	170—0—0		185—0—0
ಹೊಸ[illegible]ಗೋಟು ಖಂಡಿ ೧ರ	82—0—0	,,	85—0—0
ಗೇರುಬೀಜ ಮುಡಿ ೧ರ	2—0—0	,,	2—2—0
[illegible] ಖಂಡಿ ೧ರ		,,	75—0—0
[illegible] ಮುಡಿ ೧ರ	29—0—0	,,	30—8—0
[illegible] ಮುಡಿ ೧ರ		,,	32—0—0
[illegible]		,,	24—0—0
[illegible] ಮುಡಿ ೧ರ		,,	6—4—0
[illegible]			340—0—0

ಯುದ್ಧದ ಬಗ್ಗೆ [illegible]ಯಿಂದ ಎತ್ತಲ್ಪಡುವ ಸಾಲವು

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವ ಬಗ್ಗಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು.

1929ರಿಂದ 1947ರ ವರೆಗಿನ ವರ್ಷಗಳ ಮಧ್ಯಕಾಲದಲ್ಲಿ ಸಂದಾಯವಾಗುವ ಸೇಕಡಾ 5ರ ದರದ ಸಾಲವು—1920ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ವಾರ್ ಬಾಂಡ್ಸ್ ಎಂಬ ಯುದ್ಧಸಂಬಂಧವಾದ ಸಾಲಪತ್ರಗಳು, 1922ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ಯುದ್ಧಸಂಬಂಧವಾದ ಸಾಲಪತ್ರಗಳು—(1917—18ನೇ ಇಸವಿಯಲ್ಲಿ ಸಾದರು ಮಾಡಲ್ಪಡುವ) ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು.

ಅಸಲ್ ಮತ್ತು ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಆದಾಯಗಳ ಜವಾಬ್ದಾರಿ ಇರುವುದು.

I. 1929ರಿಂದ 1947ರ ಪರ್ಯಂತದ ವರ್ಷಗಳಲ್ಲಿ ಸಂದಾಯವಾಗತಕ್ಕ ವಾರ್ ಲೋನ್ ಎಂಬ ಯುದ್ಧಸಂಬಂಧವಾದ ಸಾಲವು.

ಸಾದರುಮಾಡುವ ಬೆಲೆ:—ಸೇಕಡಾ 95ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿ ಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 95ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 15ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ ರೂ. 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳನಂತರದ ಮೊದಲನೆಯ ತಿಂಗಳ, ಎರಡನೆಯ ತಿಂಗಳ, ಮೂರನೆಯ ತಿಂಗಳ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5ರ ಮೇರೆಗೆ ಫೆಬ್ರುವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಯಾಗುವುದು.

ಪರಿಹರಿಸಲ್ಪಡುವ ತಾರೀಕು:—ತತ್ಪೂರ್ವವಾಗಿಯೇ ಪರಿಹರಿಸಲ್ಪಡದಿದ್ದರೆ, 1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲವು 1947ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ನೂರಕ್ಕೆ ನೂರರಂತೆ ಮರು ಪಾವತಿಮಾಡಲ್ಪಡುವುದು. ಆದರೆ ಸದರೀ ಸಾಲ ಯಾ ಅದರ ಯಾವದೊಂದು ಭಾಗವನ್ನು ನೂರಕ್ಕೆ ನೂರರಂತೆ, 1929ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ಯಾ ಅನಂತರ ಇಂಡಿಯಾ ಗಜೇಟಿನಲ್ಲಿ ಮೂರು ಕ್ಯಾಲೆಂಡರು ತಿಂಗಳ ನೋಟೀಸು ಕೊಟ್ಟು ಪರಿಹರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇಂಡಿಯಾ ಗವರ್ನ್‌ಮೆಂಟಿನವರು ಇಟ್ಟುಕೊಂಡಿರುತ್ತಾರೆ.

ಸಾಲ ಪರಿಹಾರದ ಭಂಡವಾಳವು:—1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲಪತ್ರಗಳ ಪೇಟೆಯ ಬೆಲೆಯು ತಗ್ಗುವ ಸಂದರ್ಭದಲ್ಲಿ ಏರ್ಪಾಡು ಮಾಡುವ ಬಗ್ಗಾಗಿ, ಇಂಡಿಯಾ ಗವರ್ನ್‌ಮೆಂಟಿನವರು, ಸದರೀ ಸಾಲಪತ್ರಗಳ ಪೇಟೆಯ ಬೆಲೆಯು ಅವು ಸಾದರುಮಾಡಲ್ಪಟ್ಟ ಬೆಲೆಗಿಂತ ಕಡಿಮೆಯಾದಾಗಲೆಲ್ಲಾ ಸದರೀ ಸಾಲದ ಪತ್ರಗಳನ್ನು ರದ್ದುಪಡಿಸುವ ಉದ್ದೇಶವಾಗಿ ಅವುಗಳನ್ನು ಕೊಂಡುಕೊಳ್ಳಲು ಉಪಯೋಗಿಸತಕ್ಕ ಒಂದು ಭಂಡವಾಳವಾಗಿ ಏರ್ಪಡಿಸುವಗೋಸ್ಕರ ಸದರೀ 1929ರಿಂದ 1947ರೊಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೊಬಲಗಿನ ಸೇಕಡಾ ಒಂದುವರೆಗೆ ಸಮಾನವಾದ ಒಂದು ಮೊಬಲಗನ್ನು ವರ್ಷಂಪ್ರತಿ ಪ್ರತ್ಯೇಕಿಸಿಡಲು ಒಪ್ಪಿಕೊಂಡಿರುತ್ತಾರೆ.

II. 1920ನೇ ಇಸವಿಯ ವಾರ್ ಬಾಂಡುಗಳು ಮತ್ತು 1922ನೇ ಇಸವಿಯ ವಾರ್ ಬಾಂಡುಗಳು. (ಇನ್ಕಮ್‌ಟಾಕ್ಸ್ ಮಾಫಿ.)

ಸಾದರುಮಾಡುವ ಬೆಲೆ:—ಸೇಕಡಾ ರೂ. 100ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ ರೂ. 100ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವ ಕಾಲದಲ್ಲಿ ಸೇಕಡಾ 20ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳ ನಂತರದ ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5½ಯ ಪ್ರಕಾರ ಫೆಬ್ರುವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಮಾಡಲ್ಪಡುವದು.

ಪರಿಹರಿಸಲ್ಪಡುವ ತಾರೀಕು:—1920ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1920ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ, 1922ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1922ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ ಮರು ಪಾವತಿಮಾಡಲ್ಪಡುವುವು.

III. ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು. (ಇನ್ಕಮ್‌ಟಾಕ್ಸ್ ಮಾಫಿ).

ರೂ. 10, ರೂ. 20, ರೂ. 50 ಮತ್ತು ರೂ. 100ರ ಬಾಬತು ಸರ್ಟಿಫಿಕೇಟುಗಳು ಕೊಡಲ್ಪಟ್ಟ 5 ವರ್ಷಗಳ ತರುವಾಯ ಮರು ಪಾವತಿಯಾಗುವಂಥವುಗಳು.

ಸಾದರು ಮಾಡುವ ಬೆಲೆ:—ರೂ. 7—12, ರೂ. 15—8, ರೂ. 38—12 ಮತ್ತು ರೂ. 77—8.

ಈ ಸರ್ಟಿಫಿಕೇಟುಗಳನ್ನು, ಸದರಿ 5 ವರ್ಷಗಳ ವಾಯಿದೆಯಲ್ಲಿ ಯಾವ ಕಾಲದಲ್ಲಾದರೂ ಸದರಿ ಸಾಲದ ಕುರಿತ ಪ್ರಕಟನೆಯಲ್ಲಿ ನಿರ್ದೇಶಿಸಲ್ಪಟ್ಟ ದರಗಳ ಮೇರೆಗೆ ಅವು ಸಾದರುಮಾಡಲ್ಪಟ್ಟ ಪೋಸ್ಟು ಆಫೀಸುಗಳಲ್ಲಿ ವಟಾಯಿಸಲು ಸಹಾ ಬಹುದು.

1. **ಸೆಕ್ಯೂರಿಟಿಗಳ ನಮೂನೆ:**—1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಬಾಬತು ಸೆಕ್ಯೂರಿಟಿ ಪತ್ರಗಳು, 1920ನೇ ಇಸವಿಯ ವಾರ್‌ಬಾಂಡುಗಳು ಮತ್ತು 1922ನೇ ಇಸವಿಯ ವಾರ್‌ಬಾಂಡುಗಳು ಅರ್ಜಿದಾರನಿಗೆ ಇಷ್ಟವಿರುವ ಮೇರೆಗೆ ಈ ಕೆಳಗಿನ ನಮೂನೆಗಳಲ್ಲಿ (ಇದನ್ನು ಅತನು ತನ್ನ ಅರ್ಜಿಯಲ್ಲಿ ನಮೂದಿಸತಕ್ಕದ್ದು) ಕೊಡಲ್ಪಡುವುವು.

    (1) ಇನ್‌ಸ್ಕ್ರಾಯಿಬ್ಡ್ (ಹೆಸರು ರಿಜಿಸ್ಟ್ರಿ ಮಾಡಿರುವ) ಸ್ಟಾಕ್ ಸರ್ಟಿಫಿಕೇಟು ... ... ಪತ್ರಮೂಲವಾಗಿ ಪಂಥಾರೆ ಮಾಡಲ್ಪಡಬಹುದಾದುದು.
    (2) ಪ್ರಾಮಿಸರಿ ನೋಟುಗಳು ... ... ಇಂಡಾರಸು ಮೂಲವಾಗಿ ಪಂಥಾರೆ ಮಾಡಲ್ಪಡಬಹುದಾದುದು.
    (3) ಬ್ಯಾರರ್ ಬಾಂಡುಗಳು ... ... ಒಪ್ಪಿಸುವದರ ಮೂಲವಾಗಿ ಪಂಥಾರೆ ಮಾಡಲ್ಪಡಬಹುದಾದುದು.

    ಇಷ್ಟವನ್ನು ನಮೂದಿಸದಿದ್ದ ಪಕ್ಷದಲ್ಲಿ, ಸೆಕ್ಯೂರಿಟಿ ಪತ್ರಗಳು ಇನ್‌ಸ್ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟುಗಳ ರೂಪವಾಗಿ ಪ್ರಥಮತಃ ಸಾದರುಮಾಡಲ್ಪಡುವವು.

2. **ಇನ್ಕಮ್‌ಟ್ಯಾಕ್ಸ್:**—1920ನೇ ಇಸವಿಯ ವಾರ್‌ಬಾಂಡುಗಳ ಮತ್ತು 1922ನೇ ಇಸವಿಯ ವಾರ್‌ಬಾಂಡುಗಳ ಮೇಲಣ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಟ್ಟಿದೆ, ಆದರೆ ಸುಪರ್‌ಟ್ಯಾಕ್ಸ್ ಎಂಬ ವಿಶೇಷ ತೆರಿಗೆಯಿಂದ ವಿನಾಯಿಸಲ್ಪಡಲಿಕ್ಕಿಲ್ಲ.

    1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೇಲಣ ಬಡ್ಡಿಯು ಇನ್ಕಮ್‌ಟ್ಯಾಕ್ಸಿನಿಂದಾಗಲಿ ಸುಪರ್‌ಟ್ಯಾಕ್ಸಿನಿಂದಾಗಲಿ ವಿನಾಯಿಸಲ್ಪಡುವದಿಲ್ಲ. ಇನ್ಕಮ್‌ಟ್ಯಾಕ್ಸ್ ಆಕ್ಟಿನ ಎರಡನೆಯ ಶೆಡ್ಯೂಲಿನ III ನೇ ಭಾಗದ ನಿಬಂಧನೆಗಳಿಗನುಸಾರವಾಗಿ ಇನ್ಕಮ್‌ಟ್ಯಾಕ್ಸ್ ವಸೂಲು ಮಾಡಲ್ಪಡುವುದು.

3. **ಮಾರ್ಪಡಿಸಲು ಸ್ವಾತಂತ್ರ್ಯಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ಯುದ್ಧದ ಸಾಲದ ಬಾಬತು ಚಂದಾದಾರನು ಪ್ರತಿ (ಅಂಕಿತ) ರೂ. 100ರ ಬಗ್ಗೆ ಸೇಕಡಾ 3ರ ದರದ, ಅಥವಾ 3½ಯ ದರದ ಯಾವದಾದರೂ ರೂಪಾಯಿ ನಾಣ್ಯದಲ್ಲಿರುವ ಸಾಲಗಳ (ರುಪೀ ಲೋನುಗಳ) ಅಥವಾ ಇಂಡಿಯಾ ಗವರ್ನ್‌ಮೆಂಟಿನವರ 1916—17ನೇ ಇಸವಿಯ ಸೇಕಡಾ 4ರ ದರದ ಕನ್‌ವರ್ಷನ್ ಲೋನಿನ (ಅಂಕಿತ) ರೂ. 150ನ್ನು ಮಾರ್ಪಡಿಸಬಹುದು ಮತ್ತು ಅದರ ಬದಲಾಗಿ ಈ ಕೆಳಗಿನ ದರದಲ್ಲಿ, ಎಂದರೆ—

    ಮಾರ್ಪಡಿಸತಕ್ಕ ಸೇಕಡಾ 3ರ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 65,
    ಮಾರ್ಪಡಿಸತಕ್ಕ ಸೇಕಡಾ 3½ಯ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 76,
    ಮಾರ್ಪಡಿಸತಕ್ಕ ಸೇಕಡಾ 4ರ ದರದ ಸಾಲದ ಕನ್‌ವರ್ಷನ್ ಲೋನಿನ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 92

    ನ್ನು ಮತ್ತು ಪೂರ್ತಿಯಾಗಿ ರೂ. 100ಕ್ಕೆ ಭರ್ತಿಮಾಡಲು ಅಗತ್ಯವಿರುವ ಕಡಿಮೆ ಬೀಳುವ (ವಾರ್ ಲೋನಿನ) ಮೊಬಲಗಿನ ಸಹಿತವಾಗಿ ಪಾವತಿಮಾಡಿ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳನ್ನು ಹೊಂದಬಹುದು; ಪರಂತು ಈ ಹೆಚ್ಚಿಗೆ ಮೊಬಲಗನ್ನು ರೂಪಾಯಿ ಒಂದರ ಒಂದು ಆಣೆಯ ಮೇರೆಗೆ ವಜಾಮಾಡಿ ರೊಕ್ಕವಾಗಿ ಪಾವತಿಮಾಡತಕ್ಕದ್ದು.

4. ಮಾರ್ಪಡಿಸುವ ಹಕ್ಕುಗಳನ್ನು 1917ನೇ ಇಸವಿಯ ನವಂಬರು 1ನೇ ತಾರೀಕಿನ ತರುವಾಯ ಯಾವ ಕಾಲದಲ್ಲಾದರೂ ಚಲಾಯಿಸಬಹುದು, ಪರಂತು 1918ನೇ ಇಸವಿಯ ಜನವರಿ 15ನೇ ತಾರೀಕಿನ ನಂತರ ಚಲಾಯಿಸತಕ್ಕದ್ದಲ್ಲ. ಮಾರ್ಪಡಿಸುವ ಕುರಿತ ಅಧಿಕಾರ ಪತ್ರಗಳು ಪಂಥಾರೆ ಮಾಡತಕ್ಕವಾಗಿವೆ, ಮತ್ತು ಬ್ಯಾರರ್ ಫಾರ್ಮಿನಲ್ಲಿ ಕೊಡಲ್ಪಡುವುವು.

5. ಮಾರ್ಪಡಿಸಿ ಕೊಡಲ್ಪಟ್ಟ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನಿನ ಪತ್ರಗಳ ಬಗ್ಗೆ 1917ನೇ ಇಸವಿಯ ಆಗೋಸ್ತು 15ನೇ ತಾರೀಕು ಮೊದಲ್ಗೊಂಡು ಬಡ್ಡಿ ಪ್ರಾರಂಭವಾಗುವುದು. ಮೇಲಿನ 3ನೇ ಕ್ಲಾಜಿಗನುಗುಣವಾಗಿ ಪಾವತಿಮಾಡಿದ ರೊಕ್ಕ ಮೊಬಲಗುಗಳ ಬಗ್ಗೆ ಪ್ರತ್ಯೇಕವಾಗಿ ಬಡ್ಡಿ ಪಾವತಿಮಾಡೋಣಾಗಲಿಕ್ಕಿಲ್ಲ.

6. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳು, 1920ನೇ ಇಸವಿಯ ವಾರ್ ಬಾಂಡುಗಳು, ಮತ್ತು 1922ನೇ ಇಸವಿಯ ವಾರ್ ಬಾಂಡುಗಳನ್ನು ಪಡೆದಿರೋಣವು, ಇಂಡಿಯಾ ಗವರ್ನ್‌ಮೆಂಟಿನವರು ಇನ್ನು ಮುಂದೆ ಯಾವಾಗಲಾದರೂ ಸಾಲಪತ್ರಗಳನ್ನು ಕೊಡುವ ಸಂದರ್ಭದಲ್ಲಿ ಮಾರ್ಪಡಿಸಲು ಸ್ವಾತಂತ್ರ್ಯ ಕೊಡುವದಿಲ್ಲ.

7. **ಅರ್ಜಿಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಬಗ್ಗೂ, 1920ನೇ ಇಸವಿಯ ವಾರ್ ಬಾಂಡುಗಳ ಬಗ್ಗೂ, 1922ನೇ ಇಸವಿಯ ವಾರ್ ಬಾಂಡುಗಳ ಬಗ್ಗೂ ಮಾಡೋಣಾಗುವ ಅರ್ಜಿಗಳನ್ನು (ಪೋಸ್ಟು ಆಫೀಸಿನ ಮುಖಾಂತರವಾಗಿ ಮಾಡೋಣಾಗುವ ಅರ್ಜಿಗಳ ವಿನಾ) 1917ನೇ ಇಸವಿಯ ಮಾರ್ಚಿ 15ನೇ ತಾರೀಕು ಗುರುವಾರದ ಲಾಗಾಯಿತು, 1917ನೇ ಇಸವಿಯ ಜೂನು 15ನೇ ತಾರೀಕು ಶುಕ್ರವಾರದ ವರೆಗೆ, ಯಾವ ದಿನವಾದರೂ ಈ ಕೆಳಗೆ ನಮೂದಿಸಿರುವ ಆಫೀಸರರ ಯಾ ಮನುಷ್ಯರ ಬಳಿ ಹಾಜರುಪಡಿಸಬಹುದು:—

    (1) ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಬಳಿಗೆ, ಅಥವಾ ಯಾವದಾದರೂ ಪ್ರಾವಿನ್ಸಿನ ಅಕೌಂಟಾಂಟ್ ಜನರಲ್‌ರ ಯಾ ಕಂಟ್ರೋಲರ ಬಳಿಗೆ;—(2) ಬಂಗಾಳ, ಮುಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಸೆಕ್ರಿಟರಿಗಳ ವ ಟ್ರೆಜರರುಗಳ ಬಳಿಗೆ, ಅವರವರ ಹೆಡ್ ಆಫೀಸುಗಳಲ್ಲಿ; ಅಥವಾ ಇಂಡಿಯದಲ್ಲಿಯ ಸದರಿ ಬ್ಯಾಂಕುಗಳ ಯಾವದೊಂದು ಶಾಖೆಯ ಏಜಂಟರುಗಳ ಬಳಿಗೆ; ಮತ್ತು (3) ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಗವರ್ನ್‌ಮೆಂಟ್ ಖಜಾನೆಗಳ ತಾಬೆಯಿರುವ ಆಫೀಸರರ ಬಳಿಗೆ.

8. ಅರ್ಜಿಗಳು 100 ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ, ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು.

9. ಮೊಬಲಗು ರೂ. 100ರ ಬಗ್ಗೆ ಮಾತ್ರ ಮಾಡಲ್ಪಡುವ ಎಲ್ಲಾ ಅರ್ಜಿಗಳ ಸಂಗತಿಯಲ್ಲಿ ಪೂರಾ ಮೊಬಲಗು, ಎಂದರೆ 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಸಂಗತಿಯಲ್ಲಿ ರೂ. 95 ಮತ್ತು 1920ನೇ ಇಸವಿಯ ವಾರ್ ಬಾಂಡುಗಳ ಮತ್ತು 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 100 ಕಳುಹಿಸಲ್ಪಡಬೇಕು.

10. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ, 1920ನೇ ಇಸವಿಯ ವಾರ್ ಬಾಂಡುಗಳ ಅಥವಾ 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 200ರ ಯಾ ಅಧಿಕ ಮೊಬಲಗುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳು—

    (a) ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ,—(b) ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ, ಮಾಡಲ್ಪಡಬಹುದು.

12. ದಲಾಲಿ:—ಅಂಗೀಕರಿಸಲ್ಪಟ್ಟ ಬ್ಯಾಂಕರರಿಗೂ, ದಲಾಲಿಗಳಿಗೂ, ಅವರ ಸ್ವಾಂತ ಇದ್ದ ರೊಕ್ಕದ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಅವನ್ನು [illegible] ದಸ್ತೂರಿಯನ್ನು ಕೊಡಲ್ಪಡುವುದು. ಆದರೆ ಪೋಸ್ಟ್ ಆಫೀಸಿನ ಮುಖಾಂತರವಾಗಿ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಮತ್ತು ಪೋಸ್ಟು ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ [illegible] ಸರ್ಟಿಫಿಕೇಟುಗಳ ಬಗ್ಗೆ ಅರ್ಜಿಗಳ ಮತ್ತು ಮಾರ್ಪಡಿಸುವ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಸಹಾ ಈ ದಸ್ತೂರಿಯು ಕೊಡಲ್ಪಡತಕ್ಕದ್ದು.

ಅರ್ಜಿಯ ಫಾರ್ಮುಗಳನ್ನು [illegible] ಯಾ ಯಾವದಾದರು ಬ್ಯಾಂಕಿನವರಿಂದ ಯಾ ದಲಾಲಿಯ ಬಳಿಯಿಂದ ಅಥವಾ ಯಾವದೊಂದು [illegible]

ಕಂಡಿದ್ದರು. ಇವರು ಈ ಮೊಕದ್ದಮೆಯ ವಿಚಾರ ನಡಿಸಿ, ಇಂಥ ವ್ಯಕ್ತಿಯಲ್ಲಿ ಒಂದು ತಿಂಗಳ ನೋಟೀಸು ಕೊಟ್ಟು ಕೆಲಸದಿಂದ ತೆಗೆಯುವದು ನ್ಯಾಯವಲ್ಲ, ಶಾಲೆಯ ಕೆಲಸದ ಆರಂಭದಲ್ಲಿ ಒಬ್ಬ ಉಪಾಧ್ಯಾಯನಿಗೆ ಒಂದು ತಿಂಗಳ ನೋಟೀಸು ಕೊಟ್ಟು ಕೆಲಸದಿಂದ ತೆಗೆಯುವದಾದರೆ ಅವನಿಗೆ ಇನ್ನೊಂದು ಶಾಲೆಯಲ್ಲಿ ವೃತ್ತಿ ದೊರಕಿಸಿಕೊಳ್ಳುವದಕ್ಕೆ ಹ್ಯಾಗೂ ಕೆಲವು ಸಮಯ ಹೋಗುವದು ಎಂಬದಾಗಿ ಅಭಿಪ್ರಾಯಪಟ್ಟು ಮುಷ್ಟಿಗೆ ಸಂಬಳದ ಲೆಕ್ಕದಲ್ಲಿ ರೂ. ೭೫೦ ಮತ್ತು ಆಹಾರ ಮತ್ತು ಊಟದ ಲೆಕ್ಕದಲ್ಲಿ ರೂ. ೩೫೦ ಕೊಡಬೇಕೆಂತ ಹೇಳಿ ಕಾಲೇಜು ಅಧಿಕಾರಿಗಳ ಮೇಲೆ ರೂ. ೧೧೦೦ಕ್ಕೆ ಡಿಕ್ರಿ ಮಾಡಿರುತ್ತಾರೆ.

ಇಂಡಿಯಾ ಸರಕಾರದ ಕೋಶಾಧ್ಯಕ್ಷರು ಮಾರ್ಚ ತಾ. ೧೮ಲ್ಲು ವರಿಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ತಂದಿದ್ದ ಟೆರಿಫ್ ಎಮೆಂಡ್‌ಮೆಂಟ್ ಬಿಲ್, ಇನ್‌ಕಮ್ ಟ್ಯಾಕ್ಸ್ ಎಮೆಂಡ್‌ಮೆಂಟ್ ಬಿಲ್ ಮತ್ತು ಸುಪರ್ ಟ್ಯಾಕ್ಸ್ ಬಿಲುಗಳು ತಾ. ೭೮ಲ್ಲು ಕೂಡಿದ ಸಭೆಯ ಮುಂದೆ ಇಡಲ್ಪಟ್ಟು ಈ ಸಂಬಂಧದಲ್ಲಿ ವಾದ ಪ್ರತಿವಾದಗಳು ನಡೆದು ಕೊನೆಗೆ ಈ ಮೂರು ಬಿಲುಗಳೂ ಪಾಸಾಗಿರುವವು.

ಇಂಡಿಯಾ ಸರಕಾರದವರು ಸಾಮ್ರಾಜ್ಯ ಸರಕಾರಕ್ಕೆ ಈ ವರ್ಷ ಕೊಡಲಿಚ್ಛಿಸಿರುವ ೧೦೦ ಮಿಲಿಯ ಪವನುಗಳ ಸಂಬಂಧವಾಗಿ ಮಾನ್ಯ ಪಂಡಿತ ಮದನ ಮೋಹನಮಾಲವಿಯರು ಒಂದು ಮಸೂದೆಯನ್ನು ಇದೇ ತಾ. ೭೮ಲ್ಲು ಕೂಡಿದ ವರಿಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ತಂದಿದ್ದರು. ಬ್ರಿಟಿಷ ಸರಕಾರಕ್ಕೆ ಯುದ್ಧ ಖರ್ಚಿನ ಬಗ್ಗೆ ೧೦೦ ಮಿಲಿಯ ಪವನುಗಳನ್ನು ಉಚಿತವಾಗಿ ಕೊಡುವದರ ಬದಲಿಗೆ ಸ್ಪೆಶಲ್ ಫೊರ್‌ಲೋನಿನ ಏರ್ಪಾಡಿನ ಮೂಲಕ ಹಿಂದೂಸ್ಥಾನದಲ್ಲಿ ಸಾಲವಾಗಿ ದೊರಕುವ ಎಲ್ಲಾ ಹಣವನ್ನೂ ಯುದ್ಧ ತೀರುವ ವರೆಗೆ ಪ್ರತಿವರ್ಷ ೬ ಮಿಲಿಯ ಪವನುಗಳನ್ನೂ ಬ್ರಿಟಿಷ ಸರಕಾರಕ್ಕೆ ಕೊಡುವದು ಉಚಿತವೆಂಬದೇ ಮಾನ್ಯ ಪಂಡಿತ ಮಾಲವಿಯರ ಮಸೂದೆಯ ಮುಖ್ಯ ತಾತ್ಪರ್ಯವಾಗಿತ್ತು. ಪಂಡಿತ ಮಾಲವಿಯರು ಈ ಮಸೂದೆಯನ್ನು ಸಭೆಯ ಮುಂದಿಟ್ಟು ಹಿಂದೂಸ್ಥಾನವು ಈ ವರೆಗೆ ಸಾಮ್ರಾಜ್ಯ ಸರಕಾರಕ್ಕೆ ಮಾಡಿದ ಸಹಾಯ್ಯತನ್ನೆಲ್ಲಾ ಕೂಲಂಕಷವಾಗಿ ವಿವರಿಸಿ ಹಿಂದೂಸ್ಥಾನವು ಇತರ ಎಲ್ಲಾ ವಸಾಹತಿಗಳಿಗಿಂತಲೂ ಹೆಚ್ಚಿನ ಸಹಾಯ್ಯವನ್ನು ಬ್ರಿಟಿಷ ಸರಕಾರಕ್ಕೆ ಈ ಯುದ್ಧಕಾಲ ಮಾಡಿದೆಂಬದನ್ನು ಸ್ಪಷ್ಟಪಡಿಸಿ ಕೊಟ್ಟಿರುತ್ತಾರೆ. ಕೌನ್ಸಿಲಿನ ಪ್ರಜಾಪ್ರತಿನಿಧಿಗಳ ಯಾವದೊಂದು ಅಭಿಪ್ರಾಯಗಳನ್ನು ಕೇಳದೆ ೧೦೦ ಮಿಲಿಯ ಪವನುಗಳನ್ನು ಬ್ರಿಟಿಷ ಸರಕಾರದವರಿಗೆ ಉಚಿತ ಕೊಡಬೇಕೆಂಬದಾಗಿ ಮಾಡಿದ ಇಂಡಿಯಾ ಸರಕಾರದವರ ನಿರ್ಣಯವನ್ನು ಪಂಡಿತ ಮಾಲವಿಯರು ಚೆನ್ನಾಗಿ ಖಂಡಿಸಿ, ೧೦೦ ಮಿಲಿಯ ಪವನುಗಳು ಎಂಬದು ಹಿಂದೂಸ್ಥಾನಕ್ಕೆ ಬಹು ದೊಡ್ಡ ಹೊರೆ ಎಂಬದನ್ನು ಸೋದಾಹರಣವಾಗಿ ತಿಳಿಯ ಹೇಳಿ ಕೊನೆಗೆ ತನ್ನ ಮಸೂದೆಯನ್ನು ಹಿಂತೆಗೆದಿರುತ್ತಾರೆ.

ಹಿಂದೂಸ್ಥಾನದಲ್ಲಿ ಯುದ್ಧದ ಬಗ್ಗೆ ಸಾಲವನ್ನು ಎತ್ತುವ ಸಂದರ್ಭದಲ್ಲಿ ಲಾಹೋರಿನಲ್ಲಿ ಲೆಫ್ಟನೆಂಟ ಗವರ್ನರರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಒಟ್ಟಿಗೆ ೬೦ ಲಕ್ಷ ರೂಪಾಯಿಯ ಸಾಲ ದೊರಕಿರುವದು.

ಅಪರಾಧಗಳನ್ನು ಮಾಡಿ ಬಂದಿಖಾನೆಯ ಶಿಕ್ಷೆಯನ್ನನುಭವಿಸಿ ಬಿಡುಗಡೆಯಾದವರಿಗೆ ತಕ್ಕ ಕೆಲಸಗಳನ್ನು ಒದಗಿಸಿಕೊಡುವ ಮತ್ತು ಅಂಥವರನ್ನು ಸದ್ವರ್ತನೆಯಲ್ಲಿ ನಡಿಸುವ ಏರ್ಪಾಡು ಮಾಡುವ ಉದ್ದೇಶದಿಂದ ಮುಂಬಾಯಿಯಲ್ಲಿ ಕಳೆದ ವರ್ಷ ಒಂದು ಸೊಸೈಟಿ ತೆರೆಯಲ್ಪಟ್ಟಿತ್ತು. ಈ ಸೊಸೈಟಿಯ ಮೊದಲನೇ ವಾರ್ಷಿಕ ಸಭೆಯು ಇದೇ ತಾ. ೭೩ಲ್ಲು ಮುಂಬಾಯಿ ಗವರ್ನರರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಅಧ್ಯಕ್ಷರು ಭಾಷಣದಲ್ಲಿ ಇಂಥವರಿಗೆ ಪಟ್ಟಣದಲ್ಲಿ ತಕ್ಕ ಕೆಲಸಗಳು ದೊರೆತು ಅವರು ಸಭ್ಯರಾಗಿ ನಡೆಯುವಂತಾದರೆ ಈ ಸೊಸೈಟಿಯ ಉದ್ದೇಶವು ಫಲದಾಯಕವಾಗುವದು ಎಂದು ಹೇಳಿ ಪಟ್ಟಣದಲ್ಲಿರುವ ಕಾರ್ಖಾನೆಗಳ ಯಜಮಾನರು ಇಂಥವರಿಗೆ ಆದಷ್ಟು ಕೆಲಸಗಳನ್ನು ಒದಗಿಸುವಂತೆ ಏರ್ಪಾಡು ಮಾಡಬೇಕೆಂತ ವಿಜ್ಞಾಪಿಸಿಕೊಂಡಿರುವರು. ಈ ಸೊಸೈಟಿಯ ವಾರ್ಷಿಕ ವರದಿಯಿಂದ ಬಂದಿಖಾನೆಯಿಂದ ಹೊರಬಂದ ೯೭ ಮಂದಿಗೆ ಸೊಸೈಟಿಯ ಸಹಾಯ್ಯ ದೊರಕಿರುವದು. ಈ ಪೈಕಿ ೩೯ ಮಂದಿಗೆ ಕಾಯಂ ಕೆಲಸ ದೊರೆತಿರುವದೆಂತ ತಿಳಿದು ಬಂದಿರುತ್ತದೆ.

ಸಂಯುಕ್ತ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಚಿಂತಾಮಣಿಯವರು ಬ್ರಾಹ್ಮಣ ಕಾಯಸ್ಥ ಬನಿಯ ಜಾತಿಯವರು ಪೋಲಿಸ್ ಫೌಜಿನ ಆರ್ಮ್ಡ್ ಮತ್ತು ಸಿವಿಲ್ ಪೋಲಿಸ್ ಹುದ್ದೆಗೆ ಸೇರಿಕೊಳ್ಳುವದಕ್ಕೆ ನಿಷೇಧಿಸಲ್ಪಟ್ಟಿರುವದರ ಕಾರಣವನ್ನು ಕೇಳಿದಾಗ ಮಾನ್ಯ ಮೆರಿಸರವರು ಸೇನೆಯಲ್ಲಿದ್ದ ಬ್ರಾಹ್ಮಣರು ಕೆಟ್ಟ ಅಧಿಕಾರಿಗಳಾಗಿದ್ದುದೇ ಕಾರಣವೆಂತ ಹೇಳಲಿಲ್ಲ. ಆದರೆ ಕೆಟ್ಟ ಕುದುರೆ ಸವಾರರಾಗಿದ್ದುದೇ ಕಾರಣವೆಂತ ಹೇಳಿದ್ದರು. ಈ ವಾರ್ತೆಯನ್ನು ತಂತಿ ಮೂಲಕ ಕಳುಹಿಸುವಾಗ 'ಕುದುರೆ ("ಹೊರ್ಸ್") ಎಂಬ ಶಬ್ದವನ್ನು ಬಿಟ್ಟುಬಿಟ್ಟದ್ದರಿಂದ ಈ ಅನರ್ಥಕ್ಕೆ ಕಾರಣವಾಯಿತೆಂತ ತಿಳಿದು ಬಂದಿದೆ.

ಬಂಗಾಳ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ನವಾಬ್ ಸಯ್ಯದ್ ಶಮ್ಸುಲ್ಲಾ ಹುದ್ದಾರವರು ಕಲ್ಕತ್ತಾ ಹೈಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಲ್ಕತ್ತೆಗೆ ಸೇರಿದ ಶ್ಯಾಮ್ನಗರ ಎಂಬಲ್ಲಿಯ ಸೆಶನ್ಸ್ ಕೋರ್ಟಿನಲ್ಲಿ ಒಂದು ಭೀಕರವಾದ ಕೊಲೆ ಮೊಕದ್ದಮೆಯ ತನಿಖೆ ಪ್ರಾರಂಭವಾಗಿರುವದು. ಈ ಮೊಕದ್ದಮೆಯಲ್ಲಿ ಎರಡು ಕೆಳಜಾತಿಯ ಹೆಂಗಸರು ಮತ್ತು ಅವರ ಒಬ್ಬ "ಗುರು" ಕೂಡಿ ೩ ಮಕ್ಕಳನ್ನು ಕೊಂದರೆಂಬದಾಗಿ ಆಪಾದಿಸಲ್ಪಟ್ಟಿರುವರು. ಮೃತ ಹುಡುಗರ ತಂದೆಯು ಈಚೆಗೆ ಸತ್ತುಹೋದ್ದರಿಂದ ಈ ಹುಡುಗರ ತಾಯಿಯು ತನ್ನ ತಾಯಿ ಮತ್ತು ಸಹೋದರಿಯ ಮನೆಗೆ ಬಂದು ವಾಸಿಸುತ್ತಿದ್ದಳು. ಆ ಮನೆಗೆ ಒಬ್ಬ "ಗುರು" ಬಂದು ಈ ಮಕ್ಕಳನ್ನು ಕೊಂದು ಮಾಂಸವನ್ನು ಬೇಯಿಸಿ ದೇವತೆಗಳಿಗೆ ಅರ್ಪಿಸಬೇಕೆಂದನಂತೆ. ಅವನು ಈ ಹೆಂಗಸನ್ನು ಪೂರ್ಣವಾಗಿ ಸ್ವಾಧೀನಪಡಿಸಿಕೊಂಡದ್ದರಿಂದ ಆ ಹೆಂಗಸು ತನ್ನ ಮಕ್ಕಳಿಬ್ಬರನ್ನೂ ಕೊಂದು ಬೇಯಿಸಿದಳಂತೆ. ಆ "ಗುರು" ತನ್ನ ಹಣೆಯ ಮೇಲೆ ಏನೋ ಹಚ್ಚಿದ್ದರಿಂದ ತನಗೆ ಮಕ್ಕಳ ಮೇಲೆ ಇದ್ದ ಪ್ರೀತಿಯು ಒಡನೆ ಹೋಗಿ ಮಕ್ಕಳನ್ನು ಕೊಂದುಬಿಟ್ಟೆನೆಂದು ತಾಯಿಯು ಹೇಳುತ್ತಾಳೆ. ಬೇಯಿಸಿದ ಈ ಮಾಂಸವನ್ನು ದೇವತೆಗೆ ಅರ್ಪಿಸಿದ ನಂತರ ಈ ಮಕ್ಕಳಿಗೆ ಪುನಃ ಜೀವ ಬರುವದು ಎಂದು "ಗುರು" ಹೇಳಿದ್ದನಂತೆ. ಗುರು ಹೇಳಿದ್ದಂತೆ ಆ ಹೆಂಗಸರು ಮಾಡಿದ್ದರು. ಆದರೆ ಮಕ್ಕಳಿಗೆ ಪುನಃ ಜೀವ ಬರಲಿಲ್ಲ.

ಮಿ| ಸಿ. ಎಫ್. ಅಂಡ್ರ್ಯೂಸರವರು ಇನ್ನೊಂದು ಸಾರಿ ಫಿಜಿದ್ವೀಪಕ್ಕೆ ಹೋಗಿ ಅಲ್ಲಿಯ ಕೂಲಿಯಾಳುಗಳ ಸ್ಥಿತಿಯನ್ನು ತಿಳಿದುಕೊಂಡು ಬರುವದಲ್ಲಿದ್ದಾರೆ.

ಮುಂಬಾಯಿ ಯುನಿವರ್ಸಿಟಿ ಸೇನಾದಳಕ್ಕೆ ಸೇರಿಕೊಳ್ಳಲು ಮುಂಬಾಯಿ ವಿದ್ಯಾರ್ಥಿಗಳಲ್ಲಿ ವಿಶೇಷ ಚಳವಳವು ಉಂಟಾಗಿರುವದು.

ಇಂಡಿಯನ್ ಡಿಫೆನ್ಸ್ ಫೋರ್ಸಿಗೆ ಸೇರಿಕೊಳ್ಳಬೇಕೆಂತ ಬಹುಮಾನಪಟ್ಟ ಪರಾಂಜಪೆಯವರು ಫರ್ಗುಸನ್ ಕಾಲೇಜಿಯ ವಿದ್ಯಾರ್ಥಿಗಳನ್ನು ವಿಜ್ಞಾಪಿಸಿಕೊಂಡಿರುತ್ತಾರೆ. ಸದರಿ ಕಾಲೇಜಿಯ ಪ್ರೊಫೆಸರರ ಪೈಕಿ ಪ್ರೊ| ಬೆಂಡೇಲ್, ಪ್ರೊ| ಗೋಖಲೆ, ಪ್ರೊ| ಪರಾಂಜಪೆಯವರು ಈ ಸ್ವಯಂ ಸೇನೆಗೆ ಸೇರಿಕೊಳ್ಳುವದಕ್ಕೆ ಹೆಸರನ್ನು ಕೊಟ್ಟಿರುತ್ತಾರೆ.

ಮಾರ್ಚ ತಾ. ೩೧ಕ್ಕೆ ಅಂತ್ಯವಾಗುವ ವರ್ಷದಲ್ಲಿ ಹಿಂದೂಸ್ಥಾನದಲ್ಲಿ [illegible] ಮಂದಿ [illegible]

ಈ ಪೈಕಿ ಮುಂಬಾಯಿ ಮತ್ತು ಸಿಂಧಿನಲ್ಲಿ ೪೫೪೫; ಮದ್ರಾಸ್ ೫೦೧; ಬಂಗಾಳಗಳ; ಬಿಹಾರ್ ಮತ್ತು ಒರಿಸ್ಸ ೩೦೩೫; ಸಂಯುಕ್ತ ಸಂಸ್ಥಾನಗಳು ೬೦೫೯; ಪಂಜಾಬು ೧೦೧; ಬರ್ಮಾ ೩೨೪; ಮಧ್ಯಸಂಸ್ಥಾನ ೩೭೪೮; ಕೊಡಗು ೨; ಮೈಸೂರು ೨೪೪; ಹೈದರಾಬಾದ್ ೯೨೭; ಮಧ್ಯ ಹಿಂದೂಸ್ಥಾನ ೨೪೯; ರಜಪುತಾನ ೧೪೦; ಕಾಶ್ಮೀರ ೯ ಮರಣಗಳಾಗಿರುವವು.

ಇದೇ ತಾ. ೧೦ರಲ್ಲು ಕೂಡಿದ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ೧೯೧೭-೧೮ನೇ ಇಸವಿಯ ಆದಾಯ ವೆಚ್ಚಗಳ ಅಂದಾಜು ಪಟ್ಟಿಯ ವಿಷಯವಾದ ಪರ್ಯಾಲೋಚನೆಯು ನಡೆಯಿತು. ಶಿಕ್ಷಣ ಮೆಂಬರರಾದ ಸರ್. ಶಂಕರನ್ ನಾಯರರು ಹಿಂದೂಸ್ಥಾನದ ಶಿಕ್ಷಣ ಸಂಬಂಧವಾಗಿ ವರ್ಷ ವರ್ಷ ಸರಕಾರದವರು ಹೆಚ್ಚೆಚ್ಚು ಹಣವನ್ನು ವೆಚ್ಚಮಾಡುತ್ತಿದ್ದಾರೆಂಬದನ್ನು ವಿವರಿಸಿ ಸರಕಾರದವರು ಈ ಯುದ್ಧ ಸಮಯ ಪುನಃ ಹೆಚ್ಚಿಗೆ ೩೦ ಲಕ್ಷ ರೂಪಾಯಿಗಳನ್ನು ಶಿಕ್ಷಣ ಬಗ್ಗೆ ರಿಕರಿಂಗ್ ಗ್ರ್ಯಾಂಟಾಗಿ ಕೊಡುವದು ಹಿಂದೂಸ್ಥಾನದ ಶಿಕ್ಷಣಾಭಿವೃದ್ಧಿ ಸಂಬಂಧ ಸರಕಾರದವರು ಮಹತ್ವದ ದೃಷ್ಟಿಯನ್ನಿಟ್ಟಿರುತ್ತಾರೆಂಬದಕ್ಕೆ ನಿದರ್ಶನವಾಗಿದೆಂತಲೂ ಈ ಹಣವು ಪ್ರಾಮುಖ ಮತ್ತು ಸೆಕಂಡರಿ ವಿದ್ಯಾಭ್ಯಾಸ ಸಂಬಂಧ ಉಪಯೋಗಿಸಲ್ಪಡುವದೆಂತಲೂ ಹೇಳಿರುತ್ತಾರೆ. ಸರಕಾರದವರು ಶಿಕ್ಷಣ ಸಂಬಂಧವಾಗಿ ವೆಚ್ಚಮಾಡಲಿಕ್ಕಿರುವ ಈ ೩೦ ಲಕ್ಷ ರೂಪಾಯಿಗೆ ಕೂಡಿಸಿ ಪ್ರಾಥಮಿಕ ಶಿಕ್ಷಣ ಬಗ್ಗೆ ಪುನಃ ೩೦ ಲಕ್ಷ ರೂಪಾಯಿಗಳನ್ನು ಕೊಡಬೇಕೆಂಬ ಮಸೂದೆಯನ್ನು ಮಾನ್ಯ ಶ್ರೀನಿವಾಸ ಶಾಸ್ತ್ರಿಯವರು ಸಭೆಯ ಮುಂದೆ ತಂದು ಪ್ರಾಥಮಿಕ ವಿದ್ಯಾಭ್ಯಾಸಾಭಿವೃದ್ಧಿ ಬಗ್ಗೆ ಹೆಚ್ಚಿನ ೩೦ ಲಕ್ಷ ರೂಪಾಯಿಗಳನ್ನು ಕೊಡುವದರ ವಿನಹ ಈ ಶಿಕ್ಷಣವು ಅಭಿವೃದ್ಧಿಯನ್ನು ಹೊಂದದು ಎಂಬದನ್ನು ಸಭೆಯವರಿಗೆ ತೋರಿಸಿಕೊಟ್ಟರು. ಸರ್ ವಿಲಿಯಂ ಮೆಯರರವರು ಸರಕಾರದವರಿಗೆ ಯುದ್ಧಸಂಬಂಧ ಧಾರಾಳ ಹಣವನ್ನು ಖರ್ಚುಮಾಡಲಿಕ್ಕಿರುವದರಿಂದ ಸರಕಾರದವರು ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ೩೦ ಲಕ್ಷ ರೂಪಾಯಿಗಳ ಗ್ರ್ಯಾಂಟು ಕೊಡುವ ಭಾರವನ್ನು ಹೊತ್ತುಕೊಳ್ಳುವಹಾಗಿಲ್ಲವೆಂದೂ ಯೋಗ್ಯ ಉಪಾಧ್ಯಾಯರು ಇಲ್ಲದೆ ಶಾಲೆಗಳನ್ನು ತೆರೆಯುವದು ನಿಷ್ಪ್ರಯೋಜನವಾದುದರಿಂದ ಈಗ ಸರಕಾರದವರು ಉಪಾಧ್ಯಾಯರನ್ನು ತರ್ಬೀತುಮಾಡುವ ಮತ್ತು ಅವರ ಸಂಬಳಗಳನ್ನು ಹೆಚ್ಚಿಸುವ ಸುಧಾರಣೆಯನ್ನು ಮಾಡುವದು ಶಿಕ್ಷಣಾಭಿವೃದ್ಧಿ ದೃಷ್ಟಿಯಿಂದ ಪ್ರಾಮುಖ್ಯ ಕರ್ತವ್ಯವಾಗಿದೆಂತಲೂ ಸರ್ ವಿಲಿಯಂ ಮೆಯರರು ಹೇಳಿ ಮಾನ್ಯ ಶಾಸ್ತ್ರಿಯವರ ಮಸೂದೆಗೆ ವಿರೋಧವನ್ನು ತಂದಿಹಾಕಿದರು. ಕೊನೆಗೆ ಮಾನ್ಯ ಶ್ರೀನಿವಾಸ ಶಾಸ್ತ್ರಿಯವರ ಮಸೂದೆಯು ಬಿದ್ದುಹೋಯಿತು.

ಇಂಡಿಯಾ ಸರಕಾರದವರು ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನಲ್ಲಿ ಒಂದು ಹೊಸ 'ರೂಲ'ನ್ನು ಸೇರಿಸಿ, ಹಿಂದೂಸ್ಥಾನದಿಂದ ಯಾವ ಹಿಂದೀ ಕೆಲಸಗಾರನಾದರೂ ಹಿಂದೂಸ್ಥಾನದ ಗಡಿಯನ್ನು ಬಿಟ್ಟು ಪರದೇಶಗಳಿಗೆ ಕೂಲಿ ಕೆಲಸಕ್ಕೆ ಹೋಗಕೂಡದೆಂಬ ಕಟ್ಟು ಮಾಡಿರುತ್ತಾರೆ. ಮತ್ತು ಗವರ್ನರ ಜನರಲರಿಂದ ಈ ಬಗ್ಗೆ ನೇಮಿಸಲ್ಪಡುವ ಆಫೀಸರರ ಸ್ಪೆಶಲ್ ಲೈಸನ್ಸ್ ಪಡೆದಿರುವ ಯಾವನಿಗಾದರೂ ಈ ನಿಷೇಧ ಆಜ್ಞೆಯು ಲಾಗೂವಾಗುವದಿಲ್ಲವೆಂಬ ಒಂದು ಉಪನಿಯಮವನ್ನು ಅದರೊಡನೆಯೇ ಸೇರಿಸಿರುತ್ತಾರೆ. ಯುದ್ಧ ಸಂಬಂಧವಾಗಿ ಹಿಂದೂಸ್ಥಾನದ ಕೆಲಸಗಾರರನ್ನು ಹಿಂದೂಸ್ಥಾನದಲ್ಲಿಯೇ ಇರಗೊಡಿಸಲಿಕ್ಕಾಗುವ ಹಾಗೆ ಸರಕಾರದವರು ಈ ನಿಯಮವನ್ನು ಮಾಡಿ ಸಿಲೋನ್ ಮತ್ತು ಮಲಯಾ ದ್ವೀಪಗಳಿಗೆ ಹೋಗುವ ಕೆಲಸಗಾರರಿಗೆ ವಿನಾಯಿತಿಯನ್ನಿಡುವಹಾಗೆ ಉಪನಿಯಮವನ್ನು ಸೇರಿಸಿದರೆಂದು ತಿಳಿಯಬರುತ್ತದೆ. ಈ ವಿಧಿಯು ಕೂಡಲೇ ಜಾರಿಗೆ ಬರುವದು.

ರಸಾಯನಿಕ ಪರಿಶೋಧಕರು ಮತ್ತು ಕ್ರಿಮಿಶಾಸ್ತ್ರಜ್ಞರಾದ ಡಾಕ್ಟರ್ ಮಿಲ್ಲಾಂಪರವರು ಹೊಗೆಸೊಪ್ಪನ್ನು ಕೋಣೆಯಲ್ಲಿ ಹರಡಿದರೆ ಪ್ಲೇಗು ರೋಗಾಣುಗಳು ಸತ್ತುಹೋಗುವವು ಮತ್ತು ಪ್ಲೇಗು ರೋಗಕ್ಕೆ ನಿವಾರಣೋಪಾಯವಾಗುವದೆಂಬದಾಗಿ ತಿಳಿಯಪಡಿಸಿರುವರು. ಆದರೆ ಪ್ಲೇಗುಬೇನೆಯ ಅನುಭವವುಳ್ಳ ಇತರ ಕೆಲವು ವೈದ್ಯರು ಡಾಕ್ಟರ್ ಮಿಲ್ಲಾಂಪರ ಅಭಿಪ್ರಾಯವನ್ನು ಒಪ್ಪುವದಿಲ್ಲ ಎಂತ ಹೈದರಾಬಾದಿನ ಒಬ್ಬ ಬಾತ್ಮೀದಾರರು ಒಂದು ಪತ್ರಿಕೆಗೆ ಬರೆದಿರುವರು. ಈ ಬಾತ್ಮೀದಾರರು ಒಬ್ಬ ಯುನಾನಿ ಡಾಕ್ಟರರನ್ನು ಈ ವಿಷಯದಲ್ಲಿ ಪ್ರಶ್ನಿಸಿದ್ದಲ್ಲಿ ಹೊಗೆಸೊಪ್ಪಿನ ಗಾಳಿಯನ್ನು ರಾತ್ರಿಹಗಲು ಶ್ವಾಸಿಸುತ್ತಿದ್ದ ಹಲವರು ಪ್ಲೇಗುಬೇನೆಗೆ ತುತ್ತಾದದ್ದು ತನಗೆ ಗೊತ್ತಿರುವದರಿಂದ ಡಾಕ್ಟರ್ ಮಿಲ್ಲಾಂಪರ ಅಭಿಪ್ರಾಯವನ್ನು ತಾನು ನಂಬುವದಿಲ್ಲವೆಂದು ಹೇಳಿದರಂತೆ. ಇನ್ನು ಕೆಲವು ಡಾಕ್ಟರರೂ ಹಕೀಮರೂ ಸುಣ್ಣದ ನೀರನ್ನು ಕೋಣೆಯಲ್ಲಿ ೨-೩ ದಿವಸಗಳ ವರೆಗೆ ಚಿಮುಕಿಸಿದರೆ ಈ ರೋಗಾಣುಗಳು ಸತ್ತುಹೋಗುವವೆಂದು ಅಭಿಪ್ರಾಯ ಪಡುತ್ತಿದ್ದಾರೆಂತಲೂ ಇನ್ನು ಕೆಲವರು ಕೈಚೀಲದ ಒಣಗಿದ ಸೊಪ್ಪನ್ನು ಪ್ರತಿ ಸಾಯಂಕಾಲ ಕೋಣೆಯಲ್ಲಿ ಸುಟ್ಟು ಹೊಗೆಕೊಡುವದರಿಂದ ಪ್ಲೇಗುಬೇನೆಯ ರೋಗಾಣುಗಳು ಸಾಯುವವೆಂತ ಹೇಳುವರೆಂತಲೂ ಅದೇ ಬಾತ್ಮೀದಾರರು ಬರೆದಿರುವರು.

ಪತ್ರವ್ಯವಹಾರ.

ಕನ್ನಡಿಗರ ಮೂರನೆಯ ಸಮ್ಮೇಳನ.

ಸ್ವಾಮಿ!!

ಬರುವ ಜೂನ್ ತಿಂಗಳ ೮, ೯, ೧೦ನೇ ತಾರೀಕುಗಳಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ಕನ್ನಡಿಗರ ಮೂರನೆಯ ಸಮ್ಮೇಳನವು ಮೈಸೂರು ಪಟ್ಟಣದಲ್ಲಿ ನಡೆಯುವುದೆಂದೂ, ಪರಿಷದಧ್ಯಕ್ಷರಾದ ಶ್ರೀ ಎಚ್. ವಿ. ನಂಜುಂಡಯ್ಯನವರೇ ಈ ಸಾರಿಯೂ ಸಮ್ಮೇಳನದ ಸಭಾಪತಿಗಳಾಗುವರೆಂದೂ ತಿಳಿಯಬರುತ್ತದೆ. ಪುನಃ ಪುನಃ ಒಂದೇ ಸ್ಥಳದಲ್ಲಿ ನೆರೆಯುತ್ತಿದ್ದರೆ ಸಮ್ಮೇಳನದ ನೂತನತ್ವವು ಕೆಡುವುದು ಸಹಜ; ಇದಕ್ಕೆ ಕಳೆದ ಸಲ ಬೆಂಗಳೂರಿನಲ್ಲಿ ಆದ ಆಭಾಸವೇ ಸಾಕ್ಷ್ಯ. ಆಗಿದೆ. ಆದುದರಿಂದ ಈ ಸಲವಾದರೂ ಸ್ಥಳಾಂತರ ಮಾಡಬೇಕೆಂದು ಪರಿಷತ್ತಿನ ಕಾರ್ಯನಿರ್ವಾಹಕರು ಮಾಡಿದ ಏರ್ಪಾಡು ಬಹು ಸ್ತುತ್ಯವಾಗಿದೆ. ಆದರೆ ಇದರೊಂದಿಗೆ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೂ ಬೇರೆ ಯಾರೊಬ್ಬರನ್ನು ನೇಮಿಸಲು ಆಲೋಚಿಸಿದ್ದರೆ ಚೆನ್ನಾಗಿರುತ್ತಿತ್ತೆಂದು ನಾನು ಭಾವಿಸುವೆನು. ಮಹೋನ್ನತವಾದ ಪದವಿಯೂ, ಅಗಾಧವಾದ ಪಾಂಡಿತ್ಯವೂ, ದೃಢವಾದ ದೇಶಾಭಿಮಾನವೂ, ವಯೋಧಿಕತೆಯಿಂದ ಪ್ರಾಪ್ತವಾಗುವ ಅನುಭವವೂ ಸೌಜನ್ಯವೂ ಈ ಸ್ಥಾನಕ್ಕೆ ಅಗತ್ಯವಾಗಿ ಬೇಕಾಗಿರುವುವು. ಈ ಉದ್ದಾಮ ಗುಣಗಳೆಲ್ಲ ಒಂದೇ ಕಡೆ ಸೇರಿಕೊಂಡಿರುವುದು ಕೇವಲ ಅಪೂರ್ವವಾದರೂ, ಮ| ನಂಜುಂಡಯ್ಯನವರಲ್ಲಿ ಅನನ್ಯ ಸದೃಶವಾಗಿ ತುಂಬಿಕೊಂಡಿರುವುವೆಂದು ಸರ್ವರೂ ಒಪ್ಪದಿರಲಾರರು. ತಥಾಪಿ, ಮೊದಲನೆಯ ಸಲ ಶ್ರೀಯುತ ನಂಜುಂಡಯ್ಯನವರು ಮಾಡಿದ ಅಮೋಘವಾದ ಭಾಷಣದಲ್ಲಿ? ಎರಡನೆಯ ಸಲ, ನಿರುಪಾಯವಾಗಿಯೋ ಎಂಬಂತೆ, ವಹಿಸಿದ ಮೌನದಲ್ಲಿ? ಯಾವುದೊಂದು ವಿಷಯವಾಗಿ ಒಬ್ಬರೇ ಪುನಃ ಪುನಃ ಹೇಳತಕ್ಕ ನೂತನವೇನೂ ಇರುವುದಿಲ್ಲ. ಹೀಗಾದುದರಿಂದ ಈ ಅಧ್ಯಕ್ಷಸ್ಥಾನಕ್ಕೆ ಪ್ರತಿವರ್ಷ ಕನ್ನಡಿಗರಲ್ಲಿ ಶ್ರೇಷ್ಠರಾದ ಬೇರೆ ಬೇರೆ ದೊಡ್ಡ ಮನುಷ್ಯರನ್ನು ನೇಮಿಸುವುದು ಶ್ರೇಯಸ್ಕರವೆಂದು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ಒಬ್ಬೊಬ್ಬರಲ್ಲಿ ಒಂದೊಂದು ಗುಣವು ವಿಶೇಷವಾಗಿರುವುದು; ಹಾಗೆಯೇ ಸಾಹಿತ್ಯವರ್ಧನದ ವಿಷಯದಲ್ಲಿಯೂ ಒಬ್ಬೊಬ್ಬರ ಅಭಿಪ್ರಾಯವು ಒಂದೊಂದು ವಿಧವಾಗಿರಬಹುದು. ಇವೆಲ್ಲ ನಮಗೆ ತಿಳಿಯ ಬರಬೇಡವೇ? ಒಬ್ಬರೇ ತಿರತಿರಗಿ ಅಧ್ಯಕ್ಷರಾದರೆ ಈ ಉದ್ದೇಶವು ನೆರವೇರುವುದೇ?

ಮೇಲೆ ಹೇಳಲಾದ ಮಹೋನ್ನತ ಯೋಗ್ಯತೆಗಳನ್ನುಳ್ಳ ದೊಡ್ಡ ಮನುಷ್ಯರನೇಕರು ಕನ್ನಡಿಗರಲ್ಲಿ ಇದ್ದೇ ಇರುವರು. ಮೈಸೂರು ಸೀಮೆಗೆ ಸೇರಿದವರೊಳಗೆ ಶ್ರೀ ಕರ್ಪೂರ ಶ್ರೀನಿವಾಸರಾಯರು, ಶ್ರೀ ಪುಟ್ಟಣ್ಣ ಶೆಟ್ಟಿಯವರು, ಶ್ರೀ ಜ್ಞಾನಶರಣ ಚಕ್ರವರ್ತಿಯವರು, ಶ್ರೀ ಆರ್. ನರಸಿಂಹಾಚಾರ್ಯರವರು, ಶ್ರೀ ಎಮ್. ವೆಂಕಟಕೃಷ್ಣಯ್ಯನವರು ಇವರೇ ಅವಿಯಾಗಿ ಇನ್ನು ಅನೇಕರು ಈ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಸರ್ವತೋ ಸಮರ್ಥರಾಗಿರುವರು. ಬ್ರಿಟಿಷ್ ಸೀಮೆಗಳಲ್ಲಿಯೂ ಶ್ರೀ ವಿನಾಯಕರಾವ್ ಜೋಷಿಯವರು, ಶ್ರೀ ವಂಟಮುರಿಯ ಸರದೇಸಾಯಿಯವರು, ಶ್ರೀ ಸಪ್ಪೂರು ಮಂಗೇಶರಾಯರು ಮುಂತಾದ ಹಲವು ಮಂದಿ ನಾಯಕರಿರುವರು. ಇವರುಗಳನ್ನೂ ಇವರಂತೆಯೇ ಪ್ರಸಿದ್ಧರಾದ ಇತರ ಮುಖಂಡರನ್ನೂ ವರ್ಷಕೊಬ್ಬರಂತೆ ನಿಯಮಿಸುತ್ತ ಹೋದರೆ ಪರಿಷತ್ತಿನ ಉತ್ತರಾಭ್ಯುದಯಕ್ಕೆ ತುಂಬ ಸಹಾಯವಾಗದಿರದೆಂದು ದೃಢವಾಗಿ ಹೇಳಬಲ್ಲೆನು. ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯವರು ದಯವಿಟ್ಟು ಈ ಕಡೆಗೆ ಗಮನಕೊಡುವರಾಗಲಿ!

ಸದಸ್ಯರಲ್ಲೊಬ್ಬ.

ಈಗಿನ ಯುದ್ಧದಲ್ಲಿ ಗಾಯಗಳನ್ನು ಕಟ್ಟುವರೆ ಬೆಳ್ಳುಳ್ಳಿಯ ರಸವನ್ನು ವಿಶೇಷವಾಗಿ ಪ್ರಯೋಗಿಸುತ್ತಿದ್ದಾರೆ. ಗಾಯವನ್ನು ದಿವಸಕ್ಕೆ ಎರಡಾವರ್ತಿ ಬೆಳ್ಳುಳ್ಳಿ ರಸದಿಂದ ಅಂದರೆ ೧ ಪಾಲು ಬೆಳ್ಳುಳ್ಳಿ ರಸಕ್ಕೆ ೩ ಪಾಲು ಶುದ್ಧಮಾಡಿದ ನೀರು ಕೂಡಿಸಿದ ಮದ್ದು ನೀರಿನಿಂದ [illegible] ಗಾಯ [illegible] ಇದರ ಉಪಯೋಗದಿಂದ [illegible]

ಉಪಾಧ್ಯಾಯರ ಕೆಪಿಟೇಶನ್ ಎಲೊವೆನ್ಸ್.

ಬೋರ್ಡು ಶಾಲಾ ಉಪಾಧ್ಯಾಯರಿಗೆ ಕೆಪಿಟೇಶನ್ ಎಲೋವೆನ್ಸ್ ಎಂಬ ಒಂದು ತರದ ಗ್ರ್ಯಾಂಟು ಬೋರ್ಡಿನವರಿಂದ ಕೊಡೋಣಾಗುತ್ತದೆ. ಈ ಗ್ರ್ಯಾಂಟು ಶಾಲಾ ಮಕ್ಕಳ ವರ್ಷಾವಧಿ ಸರಾಸರಿ ಹಾಜರಿಯ ಮೇಲೆ ಹೊಂದಿರುತ್ತದೆ. ಆದರೆ ಉಪಾಧ್ಯಾಯರು ಸರಿಯಾಗಿ ಕೆಲಸ ಮಾಡಲಿಲ್ಲವಾಗಿ ಇಲಾಖಾ ಉದ್ಯೋಗಸ್ಥರು ಅಭಿಪ್ರಾಯಪಟ್ಟರೆ ಅಂಥಾ ಎಲೋವೆನ್ಸನ್ನು ಬೋರ್ಡಿನವರು ವಜಾಮಾಡುತ್ತಾರಲ್ಲದೆ ಬಹಳ ತೃಪ್ತಿಕರವಾದ ಕೆಲಸ ಮಾಡುವ ಉಪಾಧ್ಯಾಯರಿಗೆ ಈ ಎಲೋವೆನ್ಸನ್ನು ಏರಿಸುವದಿಲ್ಲ. ಇದು ಉಪಾಧ್ಯಾಯರಿಗೆ ಚಿಂತಾಸ್ಪದಕ್ಕೆ ಕಾರಣವಾಗಿದೆ ಮಾತ್ರವಲ್ಲ; ಉತ್ಸಾಹದಿಂದ ಕೆಲಸ ಮಾಡುವ ಉಪಾಧ್ಯಾಯರ ಉತ್ಸಾಹವನ್ನು ಕಡಿಮೆ ಮಾಡಿದ ಹಾಗೆ ಆಗುತ್ತದೆ. ಇಬ್ಬರು ಉಪಾಧ್ಯಾಯರ ಇಸಂ ಇರುವ ಒಂದು ಶಾಲೆಯಲ್ಲಿ ಒಂದು ಇಸಂ ಖಾಲಿ ಇದ್ದು ಒಬ್ಬನೇ ಉಪಾಧ್ಯಾಯನು ತೃಪ್ತಿಕರವಾದ ಕೆಲಸ ನೋಡಿ ಮಕ್ಕಳ ಸಂಖ್ಯೆಯನ್ನು ಏರಿಸಿದರೂ ಖಾಲಿ ಎಲೋವೆನ್ಸಿನ ಅರ್ಧಾಂಶವನ್ನು ಬೋರ್ಡಿನವರು ತಡೆಹಿಡಿಯುತ್ತಾರೆ. ಹಾಗೆಯೇ ಒಬ್ಬ ಕಾಯಂ ನಿಬಂಧಿಯ ಉಪಾಧ್ಯಾಯನು ರಜೆಯ ಮೇಲೆ ಹೋದಾಗ್ಯೆ ಆ ಸ್ಥಳಕ್ಕೆ ಇನ್ನೊಬ್ಬನನ್ನು ನೇಮಿಸದ ಸಂದರ್ಭಗಳಲ್ಲಿ ಕೂಡ ಆ ಶಾಲೆಯ ಪೂರ್ಣ ಕೆಲಸವನ್ನು ಬಾಕಿ ಉಳಿದ ಉಪಾಧ್ಯಾಯರು ಹೆಚ್ಚು ಶ್ರಮದಿಂದ ಮಾಡಿದರೂ ಆ ದಾಮಾಶಾಯಿ ಪ್ರಕಾರ ಸಿಕ್ಕತಕ್ಕ ಎಲೋವೆನ್ಸು ಕಷ್ಟಪಟ್ಟ ಈ ಉಪಾಧ್ಯಾಯರಿಗೆ ಸಿಗುವುದಿಲ್ಲ. ಆದರೆ ರಜೆಯಲ್ಲಿದ್ದ ಉಪಾಧ್ಯಾಯರ ಕ್ಲಾಸು ಯೋಗ್ಯರೀತಿಯಲ್ಲಿಲ್ಲದಿದ್ದರೆ ಆ ಬಗ್ಗೆ ಉದಾಹರಣೆಗೂ ಶಿಕ್ಷೆಗೂ ಬಾಕಿ ಉಳಿದ ಉಪಾಧ್ಯಾಯರು ಅರ್ಹರಾಗುತ್ತಿದ್ದಾರೆ. ಇದು ದೊಡ್ಡ ಕಷ್ಟವೇ ಸರಿ. ಅಷ್ಟು ಮಾತ್ರವಲ್ಲ; ತರ್ಬೀತುಹೊಂದಿದ ಒಬ್ಬ ಉಪಾಧ್ಯಾಯನಿರುವ ಶಾಲೆಯಲ್ಲಿ ಹೆಡ್ ಮಾಸ್ತರನು ಯಾ ಉಳಿದ ಉಪಾಧ್ಯಾಯರು ಆತನ ಕ್ಲಾಸನ್ನು ಮೇಲಕ್ಕೆ ತರುವರೆ ಹೆಚ್ಚು ಪ್ರಯತ್ನಪಡಬೇಕಾಗುತ್ತದೆ. ಆದರೆ ಕೆಪಿಟೇಶನ್ ಎಲೋವೆನ್ಸ್ ತರ್ಬೀತಾದ ಉಪಾಧ್ಯಾಯರಿಗೆ ದೊರೆಯುವದಿಲ್ಲವಷ್ಟೆ. ಆ ಅಂಶವನ್ನು ಕಷ್ಟಪಟ್ಟ ಈ ಉಪಾಧ್ಯಾಯರಿಗೆ ಕೂಡಾ ಬೋರ್ಡಿನವರು ಕೊಡದಿರುವದು ಉಪಾಧ್ಯಾಯರ ದುರಾದೃಷ್ಟವೇ ಸರಿ. ಇಷ್ಟೆಲ್ಲಾ ಆಲೋಚಿಸುವಾಗ ಉಪಾಧ್ಯಾಯರಿಗೆ ಸಿಕ್ಕುವ ಈ ತರದ ಎಲೋವೆನ್ಸ್ ಉಪಾಧ್ಯಾಯರ ಕಲಿಸುವಿಕೆಯ ಮೇಲೆಯೋ? ಯಾ ಮಕ್ಕಳ ಸಂಖ್ಯೆ ಏರಿಸುವದರಲ್ಲಿಯೋ? ಯಾ ಈ ಎರಡು ಕಾರಣಗಳಿಂದಲೋ? ಎಂತ ನಿರ್ಧರಿಸುವದು ಕಷ್ಟಸಾಧ್ಯವಾಗಿದೆ. ಈ ತರದ ಎಲೋವೆನ್ಸ್ ಯಾವ ಮುಖ್ಯ ಉದ್ದೇಶಗಳಿಗೆ ಅನುಸಾರವಾಗಿ ಕೊಡುತ್ತಾರೆಂಬುದು ಬಲ್ಲಾದವರು ಮುಂದಿನ ಪತ್ರಿಕೆಯಲ್ಲಿ ಅನುಭವದ ಬಗ್ಗೆ ಸೂಚಿಸುವರಾಗಿ ನಂಬುತ್ತೇನೆ.

ಉಪಾಧ್ಯಾಯರ ಹಿತಚಿಂತಕರಲ್ಲೊಬ್ಬ.

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ ಹೊಸ್ತು	5 – 8 – 0	ರಿಂದ	5 – 14 – 0
ಗುಡ್ಡು ,, ,, ...	5 – 4 – 0	,,	5 – 10 – 0
ಹೊಸ ರಾಶಿ ,, ...	5 – 3 – 0	,,	5 – 6 – 0
ಅವ್ವಲ್ ಬೆಳ್ತಿಗೆ ,, ...	6 – 0 – 0	,,	6 – 8 – 0
ಗುಡು ಬೆಳ್ತಿಗೆ ,, ...	5 – 8 – 0	,,	5 – 10 – 0
ರಂಗೂನು ಬೆಳ್ತಿಗೆ ಗೋಣಿ ೧ರ . .	9 – 8 – 0	,,	9 – 12 – 0
ಗೋದಿ ಗೋಣಿ ೧ರ	11 – 12 – 0	,,	12 – 8 – 0
ತುರಿಳಿ ಗೋಣಿ ೧ರ	6 – 6 – 0	,,	6 – 8 – 0
ಕಡಲೆ ಗೋಣಿ ೧ರ ಬೊಂಬ್ಯ . . .	10 – 0 – 0	,,	10 – 8 – 0
ತೊಗರಿ ಗೋಣಿ ೧ರ			11 – 0 – 0
ತೊಗರಿ ಬೇಳೆ ಗೋಣಿ ೧ರ . . .	12 – 8 – 0	,,	15 – 8 – 0
ಉದ್ದು ಗೋಣಿ ೧ರ	10 – 8 – 0	,,	11 – 4 – 0
[illegible] ಖಂಡಿ ೧ರ	30 – 0 – 0	,,	35 – 0 – 0
ಉಪ್ಪು ಗೋಣಿ ೧ರ	4 – 14 – 0	,,	5 – 0 – 0
ಕೊಬ್ಬರಿ ಖಂಡಿ ೧ರ	85 – 0 – 0	,,	90 – 0 – 0
ಕೊಬ್ಬರಿಹಿಂಡಿ ಖಂಡಿ ೧ರ . . .	19 – 8 – 0	,,	20 – 0 – 0
ನೆಲ್ಗಿಂಡಿ ಖಂಡಿ ೧ರ ಬೊಂಬ್ಯ. . .	27 – 8 – 0	,,	35 – 0 – 0
ಕೊಬ್ಬರಿ ಎಣ್ಣೆ ಮಣ ೧ರ . . .	6 – 8 – 0	,,	7 – 0 – 0
ಎಳ್ಳೆಣ್ಣೆ ಮಣ ೧ರ(ಕುರಾಸನ) . . .		,,	4 – 8 – 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ . . .	6 – 11 – 0	,,	7 – 5 – 0
ಮೋರಿಸ್ ಸಕ್ಕರೆ ಮಣ ೧ರ . . .	5 – 8 – 0	,,	5 – 10 – 0
ಕಾಫಿ ಖಂಡಿ ೧ರ	170 – 0 – 0		185 – 0 – 0
ಹೊಸಬೆಳಗೋಟು ಖಂಡಿ ೧ರ . . .	82 – 0 – 0	,,	85 – 0 – 0
ಗೇರುಬೀಜ ಮುಡಿ ೧ರ	2 – 0 – 0	,,	2 – 2 – 0
ಕಲ್ಲಿ [illegible] ಖಂಡಿ ೧ರ . . .		,,	75 – 0 – 0
[illegible] ಮಣ ೧ರ . . .	29 – 0 – 0	,,	30 – 8 – 0
[illegible] ಮಣ ೧ರ . . .		,,	32 – 0 – 0
[illegible] ೧ರ . . .		,,	24 – 0 – 0
[illegible] ಮಣ ೧ರ . . .		,,	5 – 4 – 0
[illegible] ಖಂಡಿಗೆ . . .			240 – 0 – 0

ಯುದ್ಧದ ಬಗ್ಗೆ ಇಂಡಿಯಾದಿಂದ ಎತ್ತಲ್ಪಡುವ ಸಾಲವು [illegible]

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವ ಬಗ್ಗಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು.

1929ರಿಂದ 1947ರ ವರೆಗಿನ ವರ್ಷಗಳ ಮಧ್ಯಕಾಲದಲ್ಲಿ ಸಂದಾಯವಾಗುವ ಸೇಕಡಾ 5ರ ದರದ ಸಾಲವು—1920ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ವಾರ್ ಬಾಂಡ್ಸ್ ಎಂಬ ಯುದ್ಧಸಂಬಂಧವಾದ ಸಾಲಪತ್ರಗಳು, 1922ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ಯುದ್ಧಸಂಬಂಧವಾದ ಸಾಲಪತ್ರಗಳು—(1917—18ನೇ ಇಸವಿಯಲ್ಲಿ ಸಾದರು ಮಾಡಲ್ಪಡುವ) ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು.

ಅಸಲ್ — ವ — ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಆಂದಾಯಗಳ ಜವಾಬ್ದಾರಿ ಇರುವುದು.

I. 1929ರಿಂದ 1947ರ ಪರ್ಯಂತದ ವರ್ಷಗಳಲ್ಲಿ ಸಂದಾಯವಾಗತಕ್ಕ ವಾರ್ ಲೋನ್ ಎಂಬ ಯುದ್ಧಸಂಬಂಧವಾದ ಸಾಲವು.

ಸಾದರುಮಾಡುವ ಬೆಲೆ:—ಸೇಕಡಾ 95ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿ ಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 95ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 15ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ ರೂ. 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳನಂತರದ ಮೊದಲನೆಯ ತಿಂಗಳ, ಎರಡನೆಯ ತಿಂಗಳ, ಮೂರನೆಯ ತಿಂಗಳ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5ರ ಮೇರೆಗೆ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಯಾಗುವುದು.

ಪರಿಹರಿಸಲ್ಪಡುವ ತಾರೀಕು:—ತತ್ಪೂರ್ವವಾಗಿಯೇ ಪರಿಹರಿಸಲ್ಪಡದಿದ್ದರೆ, 1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲವು 1947ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ನೂರಕ್ಕೆ ನೂರರಂತೆ ಮರು ಪಾವತಿಮಾಡಲ್ಪಡುವುದು. ಆದರೆ ಸದರೀ ಸಾಲ ಯಾ ಅದರ ಯಾವದೊಂದು ಭಾಗವನ್ನು ನೂರಕ್ಕೆ ನೂರರಂತೆ, 1929ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ಯಾ ಅನಂತರ ಇಂಡಿಯಾ ಗಜೇಟಿನಲ್ಲಿ ಮೂರು ಕ್ಯಾಲೆಂಡರು ತಿಂಗಳ ನೋಟೀಸು ಕೊಟ್ಟು ಪರಿಹರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇಂಡಿಯಾ ಗವರ್ನ್‌ಮೆಂಟಿನವರು ಇಟ್ಟುಕೊಂಡಿರುತ್ತಾರೆ.

ಸಾಲ ಪರಿಹಾರದ ಫಂಡವೇಳವು:—1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲಪತ್ರಗಳ ಪೇಟೆಯ ಬೆಲೆಯು ತಕ್ಕುವ ಸಂದರ್ಭದಲ್ಲಿ ಏರ್ಪಾಡು ಮಾಡುವ ಬಗ್ಗಾಗಿ, ಇಂಡಿಯಾ ಗವರ್ನ್‌ಮೆಂಟಿನವರು, ಸದರೀ ಸಾಲಪತ್ರಗಳ ಪೇಟೆಯ ಬೆಲೆಯು ಅವು ಸಾದರುಮಾಡಲ್ಪಟ್ಟ ಬೆಲೆಗಿಂತ ಕಡಿಮೆಯಾದಾಗಲೆಲ್ಲಾ ಸದರೀ ಸಾಲದ ಪತ್ರಗಳನ್ನು ರದ್ದುಪಡಿಸುವ ಉದ್ದೇಶವಾಗಿ ಅವುಗಳನ್ನು ಕೊಂಡುಕೊಳ್ಳಲು ಉಪಯೋಗಿಸತಕ್ಕ ಒಂದು ಫಂಡವೇಳವಾಗಿ ಏರ್ಪಡಿಸುವಗೋಸ್ಕರ ಸದರೀ 1929ರಿಂದ 1947ರೊಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೊಬಲಗಿನ ಸೇಕಡಾ ಒಂದುವರೆಗೆ ಸಮಾನವಾದ ಒಂದು ಮೊಬಲಗನ್ನು ವರ್ಷಂಪ್ರತಿ ಪ್ರತ್ಯೇಕಿಸಿಡಲು ಒಪ್ಪಿಕೊಂಡಿರುತ್ತಾರೆ.

II. 1920ನೇ ಇಸವಿಯ ವಾರ್ ಬಾಂಡುಗಳು ಮತ್ತು 1922ನೇ ಇಸವಿಯ ವಾರ್ ಬಾಂಡುಗಳು. (ಇನ್ಕಮ್‌ಟಾಕ್ಸ್ ಮಾಫಿ.)

ಸಾದರುಮಾಡುವ ಬೆಲೆ:—ಸೇಕಡಾ ರೂ. 100ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ ರೂ. 100ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವ ಕಾಲದಲ್ಲಿ ಸೇಕಡಾ 20ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳ ನಂತರದ ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5½ಯ ಪ್ರಕಾರ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಮಾಡಲ್ಪಡುವದು.

ಪರಿಹರಿಸಲ್ಪಡುವ ತಾರೀಕು:—1920ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1920ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ, 1922ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1922ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ ಮರು ಪಾವತಿಮಾಡಲ್ಪಡುವುದು.

III. ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು. (ಇನ್ಕಮ್‌ಟಾಕ್ಸ ಮಾಫಿ).

ರೂ. 10, ರೂ. 20, ರೂ. 50 ಮತ್ತು ರೂ. 100ರ ಬಾಬತು ಸರ್ಟಿಫಿಕೇಟುಗಳು ಕೊಡಲ್ಪಟ್ಟ 5 ವರ್ಷಗಳ ತರುವಾಯ ಮರು ಪಾವತಿಯಾಗುವಂಥವುಗಳು.

ಸಾದರು ಮಾಡುವ ಬೆಲೆ:—ರೂ. 7—12, ರೂ. 15—8, ರೂ. 38—12 ಮತ್ತು ರೂ. 77—8.

ಈ ಸರ್ಟಿಫಿಕೇಟುಗಳನ್ನು, ಸದರಿ 5 ವರ್ಷಗಳ ವಾಯಿದೆಯಲ್ಲಿ ಯಾವ ಕಾಲದಲ್ಲಾದರೂ ಸದರಿ ಸಾಲದ ಕುರಿತ ಪ್ರಕಟಣೆಯಲ್ಲಿ ನಿರ್ದೇಶಿಸಲ್ಪಟ್ಟ ದರಗಳ ಮೇರೆಗೆ ಅವು ಸಾದರುಮಾಡಲ್ಪಟ್ಟ ಪೋಸ್ಟು ಆಫೀಸುಗಳಲ್ಲಿ ವಟಾಯಿಸಲು ಸಹಾ ಬಹುದು.

1. **ಸೆಕ್ಯೂರಿಟಿಗಳ ನಮೂನೆ:**—1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಬಾಬತು ಸೆಕ್ಯೂರಿಟಿ ಪತ್ರಗಳು, 1920ನೇ ಇಸವಿಯ ವಾರ್‌ಬಾಂಡುಗಳು ಮತ್ತು 1922ನೇ ಇಸವಿಯ ವಾರ್‌ಬಾಂಡುಗಳು ಅರ್ಜಿದಾರನಿಗೆ ಇಷ್ಟವಿರುವ ಮೇರೆಗೆ ಈ ಕೆಳಗಿನ ನಮೂನೆಗಳಲ್ಲಿ (ಇದನ್ನು ಆತನು ತನ್ನ ಅರ್ಜಿಯಲ್ಲಿ ನಮೂದಿಸತಕ್ಕದ್ದು) ಕೊಡಲ್ಪಡುವುವು.

   (1) ಇನ್‌ಸ್ಕ್ರಾಯಿಬ್ಡ್ (ಹೆಸರು ರಿಜಿಸ್ಟ್ರಿ ಮಾಡಿರುವ) ಸ್ಟಾಕ್ ಸರ್ಟಿಫಿಕೇಟು ... ... ಪತ್ರಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.
   (2) ಪ್ರಾಮಿಸರಿ ನೋಟುಗಳು ... ... ಇಂಡಾರಸು ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.
   (3) ಬ್ಯಾರರ್ ಬಾಂಡುಗಳು ... ... ಒಪ್ಪಿಸುವದರ ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

ಇಷ್ಟವನ್ನು ನಮೂದಿಸದಿದ್ದ ಪಕ್ಷದಲ್ಲಿ, ಸೆಕ್ಯೂರಿಟಿ ಪತ್ರಗಳು ಇನ್‌ಸ್ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟುಗಳ ರೂಪವಾಗಿ ಪ್ರಥಮತಃ ಸಾದರುಮಾಡಲ್ಪಡುವವು.

2. **ಇನ್ಕಮ್‌ಟ್ಯಾಕ್ಸು:**—1920ನೇ ಇಸವಿಯ ವಾರ್‌ಬಾಂಡುಗಳ ಮತ್ತು 1922ನೇ ಇಸವಿಯ ವಾರ್‌ಬಾಂಡುಗಳ ಮೇಲಣ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಟ್ಟಿದೆ, ಆದರೆ ಸುಪರ್‌ಟ್ಯಾಕ್ಸು ಎಂಬ ವಿಶೇಷ ತೆರಿಗೆಯಿಂದ ವಿನಾಯಿಸಲ್ಪಡಲಿಕ್ಕಿಲ್ಲ.

1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೇಲಣ ಬಡ್ಡಿಯು ಇನ್ಕಮ್‌ಟ್ಯಾಕ್ಸಿನಿಂದಾಗಲಿ ಸುಪರ್‌ಟ್ಯಾಕ್ಸಿನಿಂದಾಗಲಿ ವಿನಾಯಿಸಲ್ಪಡುವದಿಲ್ಲ. ಇನ್ಕಮ್‌ಟ್ಯಾಕ್ಸು ಆಕ್ಟಿನ ಎರಡನೆಯ ಶೆಡ್ಯೂಲಿನ 111ನೇ ಭಾಗದ ನಿಬಂಧನೆಗಳಿಗನುಸಾರವಾಗಿ ಇನ್ಕಮ್‌ಟ್ಯಾಕ್ಸ್ ವಸೂಲು ಮಾಡಲ್ಪಡುವುದು.

3. **ಮಾರ್ಪಡಿಸಲು ಸ್ವಾತಂತ್ರ್ಯಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ಯುದ್ಧದ ಸಾಲದ ಬಾಬತು ಚಂದಾದಾರನು ಪ್ರತಿ (ಅಂಕಿತ) ರೂ. 100ರ ಬಗ್ಗೆ ಸೇಕಡಾ 3ರ ದರದ, ಅಥವಾ 3½ಯ ದರದ ಯಾವದಾದರೂ ರೂಪಾಯಿ ನಾಣ್ಯದಲ್ಲಿರುವ ಸಾಲಗಳ (ರುಪೀ ಲೋನುಗಳ) ಅಥವಾ ಇಂಡಿಯಾ ಗವರ್ನ್‌ಮೆಂಟಿನವರ 19¼-17ನೇ ಇಸವಿಯ ಸೇಕಡಾ 4ರ ದರದ ಕನ್‌ವರ್ಶನ್ ಲೋನಿನ (ಅಂಕಿತ) ರೂ. 150ನ್ನು ಮಾರ್ಪಡಿಸಬಹುದು ಮತ್ತು ಅದರ ಬದಲಾಗಿ ಈ ಕೆಳಗಿನ ದರದಲ್ಲಿ, ಎಂದರೆ—

ಮಾರ್ಪಡಿಸತಕ್ಕ ಸೇಕಡಾ 3ರ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 65,
ಮಾರ್ಪಡಿಸತಕ್ಕ ಸೇಕಡಾ 3½ಯ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 76,
ಮಾರ್ಪಡಿಸತಕ್ಕ ಸೇಕಡಾ 4ರ ದರದ ಸಾಲದ ಕನ್‌ವರ್ಶನ್ ಲೋನಿನ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 92

ನ್ನು ಮತ್ತು ಪೂರ್ತಿಯಾಗಿ ರೂ. 100ಕ್ಕೆ ಭರ್ತಿಮಾಡಲು ಅಗತ್ಯವಿರುವ ಕಡಿಮೆ ಬೀಳುವ (ವಾರ್ ಲೋನಿನ) ಮೊಬಲಗಿನ ಸಹಿತವಾಗಿ ಪಾವತಿಮಾಡಿ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳನ್ನು ಹೊಂದಬಹುದು; ಪರಂತು ಈ ಹೆಚ್ಚಿಗೆ ಮೊಬಲಗನ್ನು ರೂಪಾಯಿ ಒಂದರ ಒಂದು ಆಣೆಯ ಮೇರೆಗೆ ವಜಾಮಾಡಿ ರೊಕ್ಕವಾಗಿ ಪಾವತಿಮಾಡತಕ್ಕದ್ದು.

4. ಮಾರ್ಪಡಿಸುವ ಹಕ್ಕುಗಳನ್ನು 1917ನೇ ಇಸವಿಯ ನವಂಬರು 1ನೇ ತಾರೀಕಿನ ತರುವಾಯ ಯಾವ ಕಾಲದಲ್ಲಾದರೂ ಚಲಾಯಿಸಬಹುದು, ಪರಂತು 1918ನೇ ಇಸವಿಯ ಜನವರಿ 15ನೇ ತಾರೀಕಿನ ನಂತರ ಚಲಾಯಿಸತಕ್ಕದ್ದಲ್ಲ. ಮಾರ್ಪಡಿಸುವ ಕುರಿತ ಅಧಿಕಾರ ಪತ್ರಗಳು ಪರಭಾರೆ ಮಾಡತಕ್ಕವಾಗಿವೆ, ಮತ್ತು ಬ್ಯಾರರ್ ಫಾರ್ಮಿನಲ್ಲಿ ಕೊಡಲ್ಪಡುವುವು.

5. ಮಾರ್ಪಡಿಸಿ ಕೊಡಲ್ಪಟ್ಟ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನಿನ ಪತ್ರಗಳ ಬಗ್ಗೆ 1917ನೇ ಇಸವಿಯ ಆಗೋಸ್ತು 15ನೇ ತಾರೀಕು ಮೊದಲ್ಗೊಂಡು ಬಡ್ಡಿ ಪ್ರಾರಂಭವಾಗುವುದು. ಮೇಲಿನ 3ನೇ ಕ್ಲಾಜಿಗನುಗುಣವಾಗಿ ಪಾವತಿಮಾಡಿದ ರೊಕ್ಕ ಮೊಬಲಗುಗಳ ಬಗ್ಗೆ ಪ್ರತ್ಯೇಕವಾಗಿ ಬಡ್ಡಿ ಪಾವತಿಮಾಡೋಣಾಗಲಿಕ್ಕಿಲ್ಲ.

6. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳು, 1920ನೇ ಇಸವಿಯ ವಾರ್ ಬಾಂಡುಗಳು, ಮತ್ತು 1922ನೇ ಇಸವಿಯ ವಾರ್ ಬಾಂಡುಗಳನ್ನು ಪಡೆದಿರೋಣವು, ಇಂಡಿಯಾ ಗವರ್ನ್‌ಮೆಂಟಿನವರು ಇನ್ನು ಮುಂದೆ ಯಾವಾಗಲಾದರೂ ಸಾಲಪತ್ರಗಳನ್ನು ಕೊಡುವ ಸಂದರ್ಭದಲ್ಲಿ ಮಾರ್ಪಡಿಸಲು ಸ್ವಾತಂತ್ರ್ಯ ಕೊಡುವದಿಲ್ಲ.

7. **ಅರ್ಜಿಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಬಗ್ಗೆ, 1920ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ, 1922ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ ಮಾಡೋಣಾಗುವ ಅರ್ಜಿಗಳನ್ನು (ಪೋಸ್ಟು ಆಫೀಸಿನ ಮುಖಾಂತರವಾಗಿ ಮಾಡೋಣಾಗುವ ಅರ್ಜಿಗಳ ವಿನಾ) 1917ನೇ ಇಸವಿಯ ಮಾರ್ಚಿ 15ನೇ ತಾರೀಕು ಗುರುವಾರದ ಆಗಾಯಿತು, 1917ನೇ ಇಸವಿಯ ಜೂನು 15ನೇ ತಾರೀಕು ಶುಕ್ರವಾರದ ವರೆಗೆ, ಯಾವ ದಿನವಾದರೂ ಈ ಕೆಳಗೆ ನಮೂದಿಸಿರುವ ಆಫೀಸರರ ಯಾ ಮನುಷ್ಯರ ಬಳಿ ಹಾಜರುಪಡಿಸಬಹುದು:—

   (1) ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಬಳಿಗೆ, ಅಥವಾ ಯಾವದಾದರೂ ಪ್ರಾವಿನ್ಸಿನ ಅಕೌಂಟೆಂಟ್ ಜನರಲ್‌ರ ಯಾ ಕಂಟ್ರೋಲರ ಬಳಿಗೆ;—(2) ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಸೆಕ್ರೆಟರಿಗಳ ವ ಟ್ರೆಜರರುಗಳ ಬಳಿಗೆ, ಅವರವರ ಹೆಡ್ ಆಫೀಸುಗಳಲ್ಲಿ; ಅಥವಾ ಇಂಡಿಯದಲ್ಲಿಯ ಸದರಿ ಬ್ಯಾಂಕುಗಳ ಯಾವದೊಂದು ಶಾಖೆಯ ಏಜೆಂಟರುಗಳ ಬಳಿಗೆ; ಮತ್ತು (3) ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಗವರ್ನ್‌ಮೆಂಟ್ ಖಜಾನೆಗಳ ತಾಬೆಯಿರುವ ಆಫೀಸರರ ಬಳಿಗೆ.

8. ಅರ್ಜಿಗಳು 100 ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ, ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು.

9. ಮೊಬಲಗು ರೂ. 100ರ ಬಗ್ಗೆ ಮಾತ್ರ ಮಾಡಲ್ಪಡುವ ಎಲ್ಲಾ ಅರ್ಜಿಗಳ ಸಂಗತಿಯಲ್ಲಿ ಪೂರಾ ಮೊಬಲಗು, ಎಂದರೆ 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಸಂಗತಿಯಲ್ಲಿ ರೂ. 95 ಮತ್ತು 1920ನೇ ಇಸವಿಯ ವಾರ್ ಬಾಂಡುಗಳ ಮತ್ತು 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 100 ಕಳುಹಿಸಲ್ಪಡಬೇಕು.

10. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ, 1920ನೇ ಇಸವಿಯ ವಾರ್ ಬಾಂಡುಗಳ ಅಥವಾ 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 200 ಯಾ ಅಧಿಕ ಮೊಬಲಗುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳು—

   (a) ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ,—(b) ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ, ಮಾಡಲ್ಪಡಬಹುದು.

12. ದಲಾಲಿ:—ಅಂಗೀಕರಿಸಲ್ಪಟ್ಟ ಬ್ಯಾಂಕರರಿಗೂ, ದಲಾಲಿಗಳಿಗೂ, ಅವರ ಸ್ಟಾಂಪು ಇದ್ದ ರೊಕ್ಕದ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ [illegible] ಪ್ರಕಾರ [illegible] ಕೊಡಲ್ಪಡುವುದು, ಆದರೆ [illegible] ಆಫೀಸುಗಳ ಮುಖಾಂತರವಾಗಿ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಮತ್ತು ಪೋಸ್ಟು ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ [illegible] ಸರ್ಟಿಫಿಕೇಟುಗಳ ಬಗ್ಗಿನ ಅರ್ಜಿಗಳ ಮತ್ತು ಮಾರ್ಪಡಿಸುವ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಸಹಾ ಈ [illegible] ಕೊಡಲ್ಪಡಲಾರದು.

ಅರ್ಜಿಯ ಫಾರ್ಮುಗಳನ್ನು [illegible]

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital ...	225,000—0—0	ಹುಟ್ಟಿಸಿದ ಮೂಲ ಧನವು ,,	225,000—0—0
Subscribed Capital ...	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital ...	200,000—0—0	ಆಗತ ಮೂಲ ಧನವು ,,	200,000—0—0
Deposits ...	340,116—1—0	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	340,116—1—0
Reserve Fund ...	50,003—2—5	ರಕ್ಷಿತ ಧನವು	50,003—2—5

Besides the uncalled capital of Rs. 25,000/-25%. of the net profits are added annually to the Reserve Fund. Rs.28,485/- have been invested in Government Paper of the face value of Rs.29,300/-

Dividends of not less than 6%. paid during the past years and a bonus of 1%. to 2%. paid in addition during the last eight years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee.

Short-notice Deposits requiring one weeks notice of withdrawal after one month received @ 2½%. per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಧರ್ಮಾ ಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಕರಿಗೆ ಕೊಡಲ್ಪಟ್ಟಿರುವುದಲ್ಲದೆ ಈ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,
Mangalore, 1st March 1917.

P. Gopal Naik,
Secretary.

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! — ಎಲ್ಲರೂ ಕೊಂಡುಕೊಳ್ಳಿ!!

ತಿಥಿಗ ಹನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸವಿಚಾರವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ [illegible] ಮುದ್ರಿಸಿದ [illegible]. ಹಾಗದ ಮುಂಚಿನ ಮುದ್ರಣ ಸಾಮಾಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 40 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ **1ಕ್ಕೆ ಬೆಲೆ ಆಣೆ ಎರಡು ಮಾತ್ರ!** ಇದಲ್ಲದೆ ಹೆಚ್ಚು ಪ್ರತಿ ಕರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲರೂ ಉತ್ತಮವಾದುದು ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ,
ಉಡುಪಿ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಸ್ವದೇಶಾಭಿಮಾನಿ.

ಕಳೆದ 10 ವರುಷಗಳಿಂದ ಪ್ರಕಟಿಸಲ್ಪಡುವ ಕನ್ನಡ ವಾರಪತ್ರಿಕೆಯು.

ದಕ್ಷಿಣ ಕನ್ನಡದಲ್ಲಿ ಇದೊಂದರ ಹೊರತು ಬೇರೆ ವಾರಪತ್ರಗಳಿಲ್ಲವು.

ವಾರ್ಷಿಕ ಚಂದಾ ರೂ. ೧-೮-೦.
ಅಂಚೆ ವೆಚ್ಚ ಸೇರಿ ರೂ. ೨-೫-೦.

ವ್ಯಾಪಾರಗಳ ಜಾಹೀರಾತು ಮೊದಲಾದವುಗಳನ್ನು ಪ್ರಕಟಿಸಲು ಅನುಕೂಲವಾದ ಪ್ರಕಟಣಾ ಭಾಗವು ಪತ್ರದೊಂದಿಗೆ ಸೇರಿರುವದು. ಪ್ರಕಟಣಾ ವ ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ಸ್ವದೇಶಾಭಿಮಾನಿ ಆಫೀಸು,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ವ್ಯವಹಾರ ವ್ಯಾಪಾರಗಳ

ಬಗ್ಗೆ ಬೇಕಾಗುವ ಕೋರ್ಟು ಫ್ರೋರ್ಮು, ನೋಟೀಸು ಫ್ರೋರ್ಮುಗಳು, ಬೀಲು ಯಾನೆ ಪಟ್ಟಿ ಫ್ರೋರ್ಮುಗಳು ನಾನಾ ಬಗೆಯ ಲೆಕ್ಕದ ಪುಸ್ತಕಗಳು,

ಪರಸ್ಪರ ಸಹಾಯಕ ಸಂಘ

ಗಳಿಗೆ ಬೇಕಾಗುವ, ಸಾಲಪತ್ರದ ಫ್ರೋರ್ಮು, ರಶೀದಿ ಫ್ರೋರ್ಮು, ಲೆಕ್ಕದ ಪುಸ್ತಕಗಳು, ಕುರಿಫಂಡಿನ ರಶೀದಿಗಳು.

ಇನ್ನು ವಾಚನ ಪುಸ್ತಕ

ಗಳಲ್ಲಿ ಗವರ್ನಮೆಂಟ ಟ್ರನ್ಸ್‌ಲೇಟರ್ ಮ| ರಾ| ರಾ| ಬಿ. ರಾಮರಾವ್, ಎಮ್. ಎ. ಎಲ್. ಎಲ್. ಬಿ. ರವರಿಂದ ರಚಿತವಾದ ರಮಾಮಾಧವ, ಕ್ರಯ ೦-೬, ಗೃಹಶೀಲೆ, ಮುಕ್ತಾ ಹಾರಗಳೆಂಬ ಚಿಕ್ಕ ಕಾದಂಬರಿ ಪುಸ್ತಕಗಳು ಕ್ರಯ ೦-೧-೬. ವೈಷ್ಣವ ಸಂಧ್ಯಾವಂದನೆ, ವಾಯುಸ್ತುತಿ, ದೇವಪೂಜೆ, ಇತ್ಯಾದಿ ಪೂಜಾ ಪುಸ್ತಕಗಳು—ಇತ್ಯಾದಿ, ಇತ್ಯಾದಿ—

ಹಿಂದೂ ವ್ರತವಿವೇಕ.

(ಅಚ್ಚಾಗುತ್ತಲಿದೆ.)

ಹಿಂದೂಗಳು ಸರ್ವಸಾಮಾನ್ಯವಾಗಿ ಆಚರಿಸುವ ವ್ರತಗಳ ವಿವರ, ಅವುಗಳನ್ನು ಆಚರಿಸುವ ಸಂಕ್ಷೇಪ ವಿಧಾನ, ಅವುಗಳ ಮೂಲ ಇವೆಲ್ಲವನ್ನೊಳಕೊಂಡಿರುವ ಪುಸ್ತಕವು ಇನ್ನು ಸದ್ಯದಲ್ಲಿ ಪ್ರಕಟವಾಗುವದು.

ಮೊದಲನೆಯ ವರುಷದಲ್ಲಿ ಸಾಲೆಯ ಮಕ್ಕಳಿಗೆ ಗಣಿತದ ಪಾಠಪಟ್ಟಿ ಮತ್ತು ಕಲಿಸುವದನ್ನು ಕುರಿತು ಸೂಚನೆಗಳು ಕೂಡಿರುವ

ಗಣಿತ ಪಾಠ.

ಕ್ರಯ 0—2—6.

ಇವೆಲ್ಲವು ದೊರಿಯುವ ವಿಳಾಸ:—
ಶಾರದಾ ಛಾಪಖಾನೆ,
ಮಂಗಳೂರು ದ. ಕ.

ಒಂದು ಮಾತು!

ಸರಕಾರದವರು ಮತ್ತು ಲೋಕಲ್ ಬೋರ್ಡುಗಳು ಆಸ್ಪತ್ರೆಗಳನ್ನು ಪ್ರತಿ ತಾಲೂಕು ಪಟ್ಟಣಗಳಲ್ಲಿಯೂ ಸ್ಥಾಪಿಸಿರುತ್ತಾರೆ. ಬಹಳ ಜನರು ಇವುಗಳಿಂದ ಪ್ರಯೋಜನವನ್ನು ಪಡಿಯುತ್ತಿರುವರು. ರೋಗಕ್ಕೆ ತಕ್ಕ ಶೋಧನೆ, ಶೋಧನೆಗಳಿಗೆ ಬೇಕಾಗಿರುವ ಔಷಧಸಂಗ್ರಹ ಇವೆರಡರಿಂದಲೇ ಈ ಆಸ್ಪತ್ರೆಗಳು ಮೆರೆಯುವಂಥಾದ್ದು. ಇಷ್ಟು ಹೇಳಿದ ಮೇಲೆ ಆಸ್ಪತ್ರೆಗಳ

ಇಂಥಾ ಔಷಧ ಸಂಗ್ರಹಗಳು

ಏನೆಂದು ವಿವರಿಸಬೇಕೆಂತಿಲ್ಲ. ಆದರೆ ಆಸ್ಪತ್ರೆಗಳ ಅನುಕೂಲವು ಸದಾ ಸರ್ವದಾ ಒಂದೇ ರೀತಿ ದೊರಿಯುವದು ಸರ್ವರಿಗೂ ಸಾಧ್ಯವಲ್ಲದ್ದರಿಂದ

ಅಂಥಾ ಔಷಧಿಗಳ ಸಂಗ್ರಹ

ವನ್ನು ಮಾಡಿಕೊಂಡು

ಕಳೆದ ಇಪ್ಪತ್ತು ವರುಷಗಳಿಂದ

ಪ್ರಖ್ಯಾತ ಡಾಕ್ಟರರುಗಳ ಸಹಕಾರದಿಂದ ಔಷಧಿಗಳನ್ನು ಕೊಡುತ್ತಿದ್ದೇವೆ.

ದರಗಳು ಈ ಔಷಧಗಳ ಕ್ರಯದ ಮಾಹಿತಿಯುಳ್ಳದ ಗ್ರಾಮಸ್ಥರಿಗೂ ಇತರರಿಗೂ ಒಂದೇ ರೀತಿ ಸುಲಭವಾಗಿರುವವು. ಹಲವು ಡಾಕ್ಟರರುಗಳಿಗೆ ಔಷಧಗಳನ್ನು ಸಂಗ್ರಹಿಸುತ್ತಿದ್ದೇವೆ.

ನಮ್ಮ ವಿಳಾಸ:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ಔಷಧ ವ್ಯಾಪಾರಸ್ಥರು,
[illegible], ಮಂಗಳೂರು.

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪಿತ. 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹುಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟ ವಾಗುತ್ತವೆ. ೨೦–೨೫ ವರ್ಷಗಳ ಹಳತ, ಕ್ಕೈಮುನೆ ಮಾಡಿ ಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೪ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾದ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈ ಕಾಲುಗಳು ಒಡೆಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕಠಿಣ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಸ್ವ... ಔಷಧವು ನ... ನಾಶವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ"

ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಚ್ಛ, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅತ್ರಿಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಸುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ.
ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4 — 8 — 0.

ಇಕ್ಲಿಪ್ಸ್ ಬಾವ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಪೀನಸ, ತಲೆಸಿಡಿತ, ತಲೆನೋವು, ಹುಣ್ಣು, ತುರಿಕಜ್ಜಿ, ಮೂಲವ್ಯಾಧಿ, ಬೆಂಕಿಯಬೊಕ್ಕೆ, ಮೊಡವೆ, ಜೇಡ್ಡು, ಚಾಡಿಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ. ಪಿ. ಬೇರೆ
1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4 — 12 — 0.

[illegible]

ವಿಳಾಸ:— ಇಕ್ಲಿಪ್ಸ್ ... [illegible]

[illegible]

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವವರಿಂದ ಮೇಲೆ ಸಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ಪತ್ರಿಕೆಯನ್ನುದ್ದೇಶಿಸಿ ವಿಳಾಸ:—
ಭಂಡಾರಕಾರ ಬ್ರದರ್ಸ್,
ಉಡುಪಿ

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಷೆ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಶಕ್ತ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನು ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1 — 0 — 0. ಅಂಚೆ ಕೂಲಿ ಪ್ರತ್ಯೇಕ

ರಾಜವೈದ್ಯ ನಾರಾಯಣ ಜೀ ಕೇಶವಜೀ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್. ಮದ್ರಾಸು.

[illegible] 1,000 [illegible]

[illegible]

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

[illegible]



... ಯುತ್ತಿದ್ದರೂ, ಮೈಯ್ಯೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕಟ್ಟಿಕೊಂಡಿದ್ದರೂ, ಈ ಸಾಲಾಬಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವು ಒಳ್ಳೇ ಸ್ಥಿತಿಯಲ್ಲಿರುವುದು. ಈ ಮುರಬ್ಬಾವು ಸಾಲಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

[illegible]

ಕ್ರಯ ... 1ಕ್ಕೆ ರೂ. 2—0—0 [illegible]

[illegible]

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. [illegible]
[illegible] 1ಕ್ಕೆ 3 ಆಣೆ.

ಜವಾದಿ, [illegible] 1ಕ್ಕೆ [illegible]

ರಾಯಲ್ ಸುಗಂಧಿ. ತೀಸೆ 1ಕ್ಕೆ 8 ಆಣೆ. [illegible]
ಕೆತದಂತೆ ಬಹಳ ಮಹಾಸನೆಯಾಗಿ ತಯಾರಿಸಿರುತ್ತೆ. 1 ತೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ.
ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ಡಿ. ಉಲನ್ ಮಾರ್ಟರವರಲ್ಲಿಯೂ ಸಹ ದೊರೆಯುತ್ತೆ.

ಡಿ. ಉಲನ್ ಮಾರ್ಟ್, ಸೋಲ್ ಏಜೆಂಟ್ಸ್, ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್, ಸುಗಂಧಕಾರ, ಮೈಸೂರು.

ನೋಡಿ!

ಆಫ್ರಿಕಮಂಡಲ್. ಮುಸ್ಲೀಂ ... ಸ್ವರಯುಕ್ತವಾದ ಕನ್ನಡಾಕ್ಷರದ ಸಂಖ್ಯಾವಿ ನಿಸ್ವಕರ್ಮ ... ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ... ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,
Avenue Road. [illegible]
BANGALORE CITY. [illegible]

...ಯುವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಎಲ್ಲರೂ ತರಿ...

...ಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಗಳಿಂದ ಸ್ತ್ರೀಯರಿಗೆ ಉಂಟಾಗುವ ಹಾನಿಯನ್ನೂ, ಪತಿವ್ರತಾಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್‍ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ದಾಕು ಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯಂವೇನ್ ನಂ. 2. ದೂಂಟ್ಯ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆಯುಬ್ಬು, ವಿಷಮಶೀತಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ॥ ಲಲ್ಲುಭಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಪ್ರೇಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ॥ ಜೋರ್ಜ್‌ಕಿಂಗ್ ಎಫ್. ಎಫ್. ಎ ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಂಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ನ್ಯಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಆ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಿದುಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮಾ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಹಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

॥ ಚೌಪದಿ ॥

ಪಲಬಗ್ಗೆಯಿಂದೊಸರಿ ಕಾಲುವೆಗಳಾಗಿ ।
ಸಲೆಹರಿಯುತೊಂದಾಗಿ ನದಿಯಾಗಿ ಸಾಗಿ ॥
ಕಡಲಕಡೆಗುಕ್ಕಿ ಸೂಸುವ ನೀರಹೊನಲು ।
ಮಡಗುವೊಲು ದಂಡೆಯಲಿ ಬಂಗಾರಮುಗಿಲು ॥ ೧ ॥

ಸಲದಾಣದಿಂದ ಪಲಬಗೆಯೊಡವೆಗಳನ ।
ನೆಲೆಯಿಸುತ್ತೊದಗಿಸುವನ್ವೋತದವೆಯನು ॥
ಬರುತ ಪರಿಶೀಲಿಸುವುದೆವ್ವ ರಾಣಿಗೆಯನು ।
ಮರುಗಲಾರಿರಿ ಇಲ್ಲಿ ಸಂದ ಗಳಿಗೆಯನು ॥ ೨ ॥

ಕಿರಿದು ಲಾಭಂ ಗೀರುವೆವು ಪಿರಿದು ಹೇಮಂ ।
ನೆರೆಗಿರಾಕಿಯ ತಣಿಸುವುದೆಮ್ಮನೇಮಂ ॥
ಒಂದು ಸಲ ಕಂಡವರು ನಮ್ಮಂಗಡಿಯನು ।
ಮುಂದದಿಯನಿಕ್ಕೈದಲು ಬೇರೆಡೆಯನು ॥ ೩ ॥

ಕಂಡಿರೇ ಮೊನ್ನೆತಾನೇ ಬಂದ ಸಿರಿಯಂ ।
ಕೊಂಡುಕೊಳ್ಳಿರಿ ನೋಡಿ ಬೇಕಾದ ಪರಿಯಂ ॥
ನವವರ್ಷವುದಿಸಿತಲ್ಲರೆ ನಿಮ್ಮನಾಕಂ ।
ಭವಸಂಕೆಯೊಡೆಯ ರಕ್ಷಿಸುಗೆ ರಘುನಾಥಂ ॥ ೪ ॥

ದಿ ಉಲನ್ ಮಾರ್ಟ್,

ಮಂಗಳೂರು, ದ. ಕ.

ನ್ಯಾಯ ದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನೂ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪಂಭಾರೆ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟಾಂಪು, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಶ್ಯಾನುಭೋಗ ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,

ಬ್ಯಾಂಡ್ಸನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಿಗೆ ತರಿಸುವವರಿಗೆ ವಿ.ಪಿ. 16 ರೂ. ಮಾತ್ರ.

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ ೨.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ವನ ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಧಿದ ಮುಖ್ಯ ತಲೆತಿರುಕ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋದು, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧–೮–೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೆಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡಲಿಕ್ಕಿಲ್ಲ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ಹಲಿಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧–೦–೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧–೮–೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ**:—ಕ್ಷಯ, ಕೆಮ್ಮು, ಕ್ಷಯ, ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯ ಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹ ಪ್ರಸನ್ನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಋಷಿಯು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3–0–0.

೨. **ಬಾಣಂತಿ ಮಾತ್ರೆ**:— ಪ್ರಸೂತವಾದ ಲಾಗಾಯತು 30 ದಿವಸಗಳವರೆಗೆ ಉಪಯೋಗಿಸುವದರಿಂದ ಖಾರ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರತ್ಯಕ್ಷವಾದದ್ದು. ಕ್ರಯ ರೂ. 6–0–0.

ಇಲ್ಲಿ ಅನೇಕ ತರದ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೇನೆ ತೊನ್ನುಳ್ಳವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್, ಎಲ್. ಸಿ. ಪಿ. ಎಸ್. ವೈದ್ಯಶೇಕರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೇಟಿವ್ ಮೆಂಬರು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿ ಕೊಡಲು ಸಿದ್ಧನಾಗಿದ್ದೇನೆ.

ಪತ್ರ ವಿಳಾಸ—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟು ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಪಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡುಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ಪರಗಾಂವ ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರೆಯುವದು.

ಐದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ
ಒಂದು ಗೆಜ್ಜೆ ಅದ್ದಿಗೆ ಇನಾಮಾಗಿ ಕಳುಹುತ್ತೆ.
ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್ಧಾನ್ ಬಳ್ಳಿ ಶೀರೆ

ರೂಪಾಯಿ ೨–೮–೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಕ್ಷಿನಲ್ಲಿ ಗೋವರ್ಧಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಸ್ತದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ನಾಟ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

[illegible] ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ [illegible]
ನಮ್ಮ ಸ್ವಂತ ಆರ್ಡರು ಮೇರಿಗೆ ಸೀಮೆ[illegible]



ಇದರ ಸಾಮಾನುಗಳನ್ನು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕ ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ	ರೂ.	3—12—0.
ಗಡಿಯಾರ 1ಕ್ಕೆ ಕ್ರಯ	ರೂಪಾಯಿ	3—0—0.
ಪೇನಾ ,,	,,	1—0—0.

ವಿಳಾಸ:— ವೈರಂ ಅಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ತ್ರಿ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಕಚ್ಚಿದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಾ ಅಂಡ್ ಕಂಪೆನಿ,
ಸಾಹುಕಾರಪೇಟೆ, ಮದರಾಸು.

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

೧೦. ಇರುವ

ಹೊಸದಾಗಿ ಕಂಡ [illegible] ಸೋಪ್.

ಕಲೆಯಿಲ್ಲ. ಉರಿಯಿಲ್ಲ.

[illegible] ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅಚ್ಚುಕಟ್ಟಾಗಿ ತೆಗೆಯುತ್ತ[illegible] ನೋಯುವದಿಲ್ಲ. ಚರ್ಮಕ್ಕೆ ಕಲೆಯಾಗದು. ಇತರರು ಮಾರುವ ರೋಮಸಂಹಾರಿಯನ್ನು ವ ಸೋಪನ್ನು ಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತಾ ಪತ್ರಿಕೆಗಳು ಬಂದಿರುತ್ತೆ. ಅದರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್‌ಗೋಲ್ಡ್ ಉಂಗುರ ಇನಾಂ. ರೂ. 1-10-0.

ಯೋಗ್ಯತಾ ಪತ್ರಿಕೆ.

ಆರ್ಕಾಟ್ ಪೋಸ್ಟ್ ಮಡಿವಾಳ ಗ್ರಾಮದಲ್ಲಿ ಇರುವ ಮುನಸ್ವಾಮಿ ಮೊದಲಿಯಾರ್ — ನಿಮ್ಮ ಕಂಪೆನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದರಿಂದ ಬಹಳ ಆನಂದವಾಯಿತು. ದಯವಿಟ್ಟು ಇನ್ನೊಂದು ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು.

ವಿಳಾಸ: —

ಎಂ. ಎಚ್. ಸಿಂಗ್ ಅಂಡ್ ಕೋ.
ನಂ. 7-2ನೇ ನಾರಾಯಣನ್ ಬೀದಿ,
ಪಿಂಟು ಪೋಸ್ಟು, ಮದರಾಸ್.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು ಒಡೆವುದು, ಉಳುಕು, ಉರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮೂಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಸಂಪಲ್ ೧ ದಪ್ಪಿಗೆ ಖರ್ಚು ಟಪ್ಪಾಲು ಹಾಸಲು ಪ್ರತ್ಯೇಕ. ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಶನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇದೇ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು: —

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ: — ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಮೇಲಿನ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ದಿವ್ಯಾಂಜನವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಿಮ್ಮ ವಿಳಾಸವನ್ನು (ಮಾತ್ರ) ಇಂಗ್ಲೀಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು: — Someshwar & Sons,
Fergusson Road, BOMBAY.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0 — 4 — 0 ಬೇರೆ.

ಪ್ರಾಮುಖ್ಯ ಏಜಂಟರು: —

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ವಿಶ್ರವಾದ ಈ ಔಷಧದ ಬರೀ 48 ದಿವಸಗಳ ಸೇವನೆಯಿಂದ ಶ್ವಾಸಕಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು, ವಿತ್ತ, ಮೇಹ, ಶೀವಮೂತ್ರ, ಮೂತ್ರಕೃಚ್ರ, ಉಂಮೂತ್ರ ನಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಹರು.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಿಗಳೂ ತಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ: — ಪರಿಮಳಾಂಜನ ಡಿಪೋ,
ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಪ್ಲೇಗನ್ನು ನಿರ್ಮೂಲನಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶೀತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತಿ ವಿಳಾಸ — "ಪಂಡಿಟ್" ಮದರಾಸ್.

ಡಾಕ್ತರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. ೫ ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು: — ಡಿ. ಊಲನ್ ಮಾರ್ಟ್,
[illegible], ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.



[illegible] ಕಂಚಿನಿಂದ ತಯಾರಾದ [illegible] ಯೋಗ್ಯವಾದಂಥಾ ೩೨ ಸಾಮಾನುಗಳು [illegible] ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಸಟ್ಟು ೧ಕ್ಕೆ ೩-೦-೦. ದೊಡ್ಡ ಸಟ್ಟು ಉತ್ತಮತರದ ೧ಕ್ಕೆ ರೂ. ೯—೦—೦.

ಕಾಬೂಲಿ ಹಿಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದ್ವಿಯಂ ರೂಪ್ಯಾ ೧ಕ್ಕೆ ೮ ತೊಲೆ, ತ್ರೀಯಂ ರೂಪ್ಯಾ ಒಂದಕ್ಕೆ, ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಚಾರ್ಜು ಬೇರೆ.

ನಮ್ಮ ವಿಳಾಸ: —

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಂಬಾ, ಕಾಶಿ.

SIROMANI NARAYANA CHARYA & CO,
Choukhamba,
BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜೈನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದೊರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir,
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. [illegible]

ಚಂದಾದರ:—ವರ್ಷ 1ಕ್ಕೆ ರೂ. 1—8—0.

ವಿದೇಶಕ್ಕೆ [illegible] ರೂ. 2—8—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೨೩ನೇ ಮಾರ್ಚಿ ಶುಕ್ರವಾರ ೧೯೧೭. | ಸಂಚಿಕೆ ೧೨.

ಕೋರಾ ಮತ್ತು ಸೀತ ಸಿಡುಬು ಯಾ ಕೊಟ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡೆಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವೆಂತ ತೋರಿಬರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದೆನೇ ಆಗುವಂಥಾದ್ದು ಬಹುಪಕ್ಷ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವು ಅಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಬಾಧೆಯು ನಿಂತಾಕ್ಷಣವೇ ತಲೆದೋರವು. ಕೋರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೊಟಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕೋರಾ ನಂತರ ಬಂದುಬಿಟ್ಟದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥಾದ್ದೆ. ಆದ್ದರಿಂದ ಈ ರೋಗಗಳು ತಗಲಿದಾಗ ಹೆಚ್ಚಿನ ಜಾಗ್ರತೆಯ ಉಪಶಮನವು ಅಗತ್ಯವಾಗಿರುವನು.

ಹೊಮಿಯೊಪಥಿಕ್ ಮತ್ತು ಟಿಸ್ಯು ಔಷಧಿಗಳು.

ಇವುಗಳ ಮೂಲಕ ಈ ಉಪಶಮನವು ಬಹಳ ಸುಲಭದಲ್ಲಿ ಮಾಡಲು ಸಾಧ್ಯವಾಗುವದು. ಈ ಎರಡು ರೋಗಗಳು ಪ್ರಾಪ್ತವಾದ ಕಾಲದಲ್ಲಿ ಈ ಔಷಧಿಗಳಲ್ಲಿ ಯಾವ್ಯಾವದನ್ನು ಹೇಗೇಗ ತಕ್ಕೊಳ್ಳುವುದು ಇದರ ಅನುಪಾನವೇನೆಂಬುದನ್ನು ಸೂಚಿಸುವ ಅನುಪಾನ ಪತ್ರಗಳೂ ಈ ಔಷಧಗಳೂ ನಮ್ಮಲ್ಲಿ ದೊರಿಯುತ್ತವೆ.

ಕೋಟಲೆಯ ಕಲೆಗಳು ಬೇಗನೆ ವಾಸಿಯಾಗುವಂಥಾ ಮುಲಾಮು ತಯ್ಯಾರಿರುವದು.

ಕ್ರಯ ಕರಡಿಗೆ 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗೆಳಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು ಇತರರಿಂದ ಏಕೆ ಪಡಯಬೇಕು?

ಬಾಟ್ಲ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್‌ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ

ಗಜಕರ್ಣದ ಮುಲಾಮು.

ಡಬ್ಬಿ 1ಕ್ಕೆ ಆಣೆ 6.

ಮಕ್ಕಳ ಎಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನು ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಶಿಯೇಶನ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ನೋಟೀಸು.

ಕನ್ನಡ ದೇಶದ ಶಕ್ತಿದೇವಾಲಯಗಳಲ್ಲಿ ಚೆಂಡಾಟವೇ ಮೊದಲಾದ ಬಿರಿದುಗಳನ್ನೊಳಗೊಂಡು ಪ್ರಖ್ಯಾತಿ ಪಡೆದಿರುವ ಪೊಳಲಿ ಜಾತ್ರೆಯು ನಿಯಮ ಪ್ರಕಾರ ಮೀನ ಸಂಕ್ರಮಣ ತಾ. (13—3—17) ಕ್ಕೆ ಧ್ವಜಾರೋಹಣವಾಗಿರುವುದು. ಇದೇ ಬರುವ ಎಪ್ರೆಲ್ ತಾ. 5ಕ್ಕೆ ಚಂಡು ಪ್ರಾರಂಭವಾಗಿ ತಾ. 9ನೆ ಸೋಮವಾರ ಕಡೆ ಚಂಡು ಮಹೋತ್ಸಹವು ಜರಗುವುದು. ಇಂಥ ವಿಜೃಂಭಣೆಯ ಸಮಯಗಳಲ್ಲಿ ಬರುತ್ತಿದ್ದ ಮಿಠಾಯಿ ವ್ಯಾಪಾರದ ಎರಡು ಮೂರಂಶಗಳವರು ತಂತಮ್ಮ ಹಟಗಳಿಂದ ಸ್ಥಳ ಬಾಡಿಗೆಯನ್ನು ಹೆಚ್ಚಿಸುತ್ತಾ ಕಡೆಗೆ ವೈಶಮ್ಯದಿಂದ ಕಳೆದ ವರ್ಷ ಬಾರದೆ ಇದ್ದ ಕಾರಣ ಈ ವರ್ಷ ಇಚ್ಛೆ ಇದ್ದವರು ಮಿಠಾಯಿ ತರುವಂತೆಯೂ ಅವರವರ ವ್ಯಾಪಾರ ಸ್ಥಿತಿಗೆ ಸರಿಯಾದ ಬಾಡಿಗೆ ವಸೂಲುಮಾಡುವಂತೆಯೂ ಸದರಿ ದೇವಳ ಮೊಕ್ತೇಸರರು ಅದರ ವಿಲೆವಾರಿಯನ್ನು ಪೊಳಲಿ ಎಸ್. ಪಿ. ರಾಜಾ ಕಂಪೆನಿಯ ಮೆನೇಜರರಾದ ಬಿ. ಯಸ್. ಪರಮೇಶ್ವರಯ್ಯನವರಿಗೆ ಕೊಟ್ಟಿರುತ್ತಾರೆ. ಆದ್ದರಿಂದ ಮಿಠಾಯಿ ತರಲಾತುರ ಉಳ್ಳವರೆಲ್ಲರೂ ಬಂದು ಸದರಿಯವರಿಂದ ಪಡಕೊಳ್ಳಬಹುದಾಗಿದೆ.

ಒಳ್ಳೆ ಗೊಬ್ಬರ! ಅವ್ವಲ್ ಈಟು !!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನುಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಕೊಳ್ಳುವವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಲಿಪ್ ಕವರ್ ಬೈಂಡು 0—8—0
ಚಿಕ್ಕ ಸೈಜು ಕೆಲಿಕೊ ಬೈಂಡು 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ
ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.
1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ — ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕನ್ನಡ.

Foot Balls. (BEST QUALITY).

ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ—ಇಂಗ್ಲಿಷ್, ಇಂಗ್ಲಿಷ್—ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವ ದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು.

ವಿ. ಪಾರವೇ ತರಿಸಿಕೊಂಡರೆ ರೂ. 1—11—0. [illegible]

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
[illegible]

೧೦ ... ಇರುವ

... ಸೋಪ್.

ಹೊಸದಾಗಿ ...

... ಕಲೆಯಿಲ್ಲ. ... ಉರಿಯಿಲ್ಲ.

... ದೇಹದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅಚ್ಚುಕಟ್ಟಾಗಿ ತೆಗೆಯುತ್ತ ... ಚರ್ಮಕ್ಕೆ ... ನಡು. ಇತರರು ... ಸಂಪಾದಿಯನ್ನು ... ಕೊಂಡು ... ಯೋಗ್ಯತಾ ಪತ್ರಿಕೆಗಳು ... ರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಪೆಟ್ಟಿಗೆ ... ಒಂದೇ ಸಲ ... ಪೆಟ್ಟಿಗೆ ... ರೂ. 1-10-0.

ಯೋಗ್ಯತಾ ಪತ್ರಿಕೆ.

ಆನೇಕಲ್ ... ಗ್ರಾಮದಲ್ಲಿ ... ಮೋಹನಲಿಯಾಸ್—ನಮ್ಮ ... ಯೋಗಿಸಿದರಿಂದ ... ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು.

ವಿಳಾಸ:—

ಎಂ. ಎಚ್. ಸಿಂಗ್ ಆಂಡ್ ಕೋ.

ನಂ. 7-ನೇ ನಾರಾಯಣ ...

... ಪೋಸ್ಟು ...

ದಿವ್ಯಾಂಜನ. Divyanjan. (Regd.)

ಗುಣ ಬಾರದಿದ್ದರೆ ಹಣ ಮರತು.



ಇದು ತಲೆನೋವು, ತಲೆಸಿಡಿತ, ನಾತ, ಸಂಧಿವಾತ, ಸೊಂಟನೋವು, ನಾಯು, ಮೈನೋವು, ಗಾಯ, ಸುಟ್ಟಗಾಯ, ... ಗಾಯ, ತುರಿಕಜ್ಜಿ, ಕೈಕಾಲು ... ಉರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ... ಬಾಣ ... ಕ್ರಯ ಬಾಟ್ಲಿ 1ಕ್ಕೆ ಆಣೆ 8. ಸಂಪಲ್ ೧ ... ಟಪ್ಪಾಲು ... ಪ್ರತ್ಯೇಕ ... ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ... ಕೊಡುಕೊಳ್ಳುವವ ... ದೊರಕಲಾರದೀತು. ... ಬೇಕಾಗಿರುತ್ತಾರೆ.

... ನೋಲ್ ಏಜಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

... ದಿವ್ಯಾಂಜನ ...

... ಮಾಲಕರು:— Someshwar & Sons. Fergusson Road, BOMBAY.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನೆ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದರೆ ಆದರೆ ಕದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0. ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—

ಎಚ್. ಆರ್. ಮೋಡಿ ಎಂಡ್ ಕೋ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,

10 Princes Street, BOMBAY.

ಪ್ಲೇಗನ್ನು ನಿರ್ಮೂಲನಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಆನೇಕ ಪ್ರಾಣಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ.

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ಶೀಘ್ರದ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಹೆಚ್ಚು ಸ್ವಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ.

ಗಳಂ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾ ... ಎಲ್. ಎಮ್. ಎಸ್.

ಪ್ರಿನ್ಸಿಪಾಲ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,

55 ಆಚಾರಪ್ಪನ ಬೀದಿ,

ಜಾರ್ಜಟೌನ್ ಮದರಾಸ್.

ತಂತಿ ವಿಳಾಸ:—"ಪಂಡಿಟ್", ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

... ಯಾವ ... ಔಷಧ ... ಇದುವರೆಗೂ ... ಕಂಡುಬರಲಿಲ್ಲ. ... 48 ದಿವಸಗಳ ಸೇವನೆಯಿಂದ ... ಕೆಮ್ಮು, ದಮ್ಮು, ಕ್ಷಯ ... ಸಂಬಂಧವಾದ ಎಲ್ಲಾ ರೋಗಗಳು ... ಮೂತ್ರಕೃಚ್ಛ್ರ, ಉಷ್ಣಮೂತ್ರ ... ಎಲ್ಲಾ ವಿಧದ ... ನಿಸ್ಸಂದೇಹವಾಗಿ ಗುಣವಾಗುವವು. ... ಪುತ್ರವತಿಯರಹರು.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಿಗಳೂ ... ಇರುವ ... ಕೆಟಲಾಗ್ ... ಬಂಡುವು.

ವಿಳಾಸ:—ಪರಿಮಳಾಂಜನ ಡಿಪೋ, ಕದ್ರಿ, ಮಂಗಳೂರು. ಕಂಕನಾಡಿ ಪೋಸ್ಟು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಶ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲ ಚಾರ್ಜು 0—4—0.

Dr. Navaratna & Sons.

Kalbadevi Road, BOMBAY.

ಏಜಂಟರು:—ಡಿ. ಲೂಯಿಸ್ ಮಾರ್ಟಿಸ್, ಮೂರ್ತಿ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.



... ಚಿಕ್ಕ ... ಕಾಶಿಯ ... ತಯಾರಾದ ... ಸಾಮಾನು ... ೧—೮—೦. ಉತ್ತಮ ಕಂಚಿನ ... ದೊಡ್ಡ ಸೆಟ್ಟು ಉತ್ತಮ ... ಕ್ಕೆ ... ೩—೦—೦.

ಕಾಬುಲಿ ಇಂಗು.

ಉತ್ತಮ ತರದ ರೂಪ್ಯಾಗಿಕ್ಕೆ ೪ ತೊಲೆ, ಮಧ್ಯಮ ರೂಪ್ಯಾಗಿಕ್ಕೆ ೮ ತೊಲೆ, ಕೀಳು ರೂಪ್ಯಾ ಒಂದಕ್ಕೆ ೧೦ ತೊಲೆ, ಚಾರಂ ರೂಪ್ಯಾಗಿಕ್ಕೆ ೧೨ ತೊಲೆ.

... ಬೇರೆ ... ಸಾಮಾನುಗಳ ಕ್ಯಾಟಲಾಗನ್ನು ಕೇಳುವವರಿಗೆ ... ಕಳುಹಿಸಲಾಗುವುದು. ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ,

ಚೌಕಂಬಾ, ಕಾಶಿ.

SIROMANI NARAYANA CHARYA & CO,

Choukhamba,

BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜನಹಿತಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು. S. P. RAJA & Co., Kalyanakaraka Bishagmandir. POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ, ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 408

ಚಂದಾ ನಿರ್ಧಾರ:— ವರ್ಷ 1ಕ್ಕೆ ರೂ. 1—8—0.

ಟಪ್ಪಾಲ್ ಹಾಸಲು ಸಹಿತ 2—5—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಉತ್ಸವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೯ನೇ ಮಾರ್ಚಿ ಶುಕ್ರವಾರ ೧೯೧೭. | ಸಂಚಿಕೆ ೧೦.

ಕೋರಾ ಮತ್ತು ಸೀತ ಸಿಡುಬು ಯಾ ಕೊಟ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡೆಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವೆಂತ ತೋರಿಬರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದೆನೇ ಆಗುವಂಥಾದ್ದು ಬಹುಪಕ್ಷ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವು ಅಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಬಾಧೆಯು ನಿಂತಾಕ್ಷಣವೇ ತಲದೋರವು. ಕೋರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೊಟ್ಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕೋರಾ ನಂತರ ಬಂದುಬಿಟ್ಟದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥಾದ್ದೆ. ಆದ್ದರಿಂದ ಈ ರೋಗಗಳು ತಗಲಿದಾಗ ಹೆಚ್ಚಿನ ಜಾಗ್ರತೆಯ ಉಪಶಮನವು ಅಗತ್ಯವಾಗಿರುವದು.

ಹೊ ಮಿ ಯೊ ಪ ಥಿ ಕ್ ಮ ತ್ತು ಟಿ ಸ್ಯು ಔ ಷ ಧಿ ಗ ಳು .

ಇವುಗಳ ಮೂಲಕ ಈ ಉಪಶಮನವು ಬಹಳ ಸುಲಭದಲ್ಲಿ ಮಾಡಲು ಸಾಧ್ಯವಾಗುವದು. ಈ ಎರಡು ರೋಗಗಳು ಪ್ರಾಪ್ತವಾದ ಕಾಲದಲ್ಲಿ ಈ ಔಷಧಿಗಳಲ್ಲಿ ಯಾವ್ಯಾವದನ್ನು ಹೇಗೇಗ ತಕ್ಕೊಳ್ಳುವುದು ಇದರ ಅನುಪಾನವೇನೆಂಬುದನ್ನು ಸೂಚಿಸುವ ಅನುಪಾನ ಪತ್ರಗಳೂ ಈ ಔಷಧಗಳೂ ನಮ್ಮಲ್ಲಿ ದೊರಿಯುತ್ತವೆ.

'ಕೋಟಲೆಯ ಕಲೆಗಳು ಬೇಗನೆ ವಾಸಿಯಾಗುವಂಥಾ ಮುಲಾಮು ತಯ್ಯಾರಿರುವದು.

ಕ್ರಯ ಕರಡಿಗೆ 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು

ಇತರರಿಂದ ಏಕೆ ಪಡೆಯಬೇಕು?

ಬಾಟ್ಲು 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು? ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್‌ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ

ಗ ಜ ಕ ರ್ಣಾ ದ್ರು ಮು ಲಾ ಮು.

ಡಬ್ಬಿ 1ಕ್ಕೆ ಆಣೆ. 6.

ಮಕ್ಕಳ ಎಕ್ಜಿಮಾ ಎಂಬ ಹುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ನೋಟೀಸು.

ಕನ್ನಡ ದೇಶದ ಶಕ್ತಿದೇವಾಲಯಗಳಲ್ಲಿ ಚಂಡಾಟವೇ ಮುಂತಾದ ಬಿರಿದುಗಳನ್ನೊಳಗೊಂಡು ಪ್ರಖ್ಯಾತಿ ಪಡೆದಿರುವ ಪೊಳಲಿ ಜಾತ್ರೆಯು ನಿಯಮ ಪ್ರಕಾರ ಮೀನ ಸಂಕ್ರಮಣ ತಾ. (13—3—17) ಕ್ಕೆ ಧ್ವಜಾರೋಹಣವಾಗಿರುವುದು. ಇದೇ ಬರುವ ಎಪ್ರಿಲ್ ತಾ. 5ಕ್ಕೆ ಚಂಡು ಪ್ರಾರಂಭವಾಗಿ ತಾ. 9ನೆ ಸೋಮವಾರ ಕಡೆ ಚಂಡು ಮಹೋತ್ಸವವು ಜರಗುವುದು. ಇಂಥ ವಿಜೃಂಭಣೆಯ ಸಮಯಗಳಲ್ಲಿ ಬರುತ್ತಿದ್ದ ಮಿಠಾಯಿ ವ್ಯಾಪಾರದ ಎರಡು ಮೂರಂಶಗಳವರು ತಂತಮ್ಮ ಹಟಗಳಿಂದ ಸ್ಥಳ ಬಾಡಿಗೆಯನ್ನು ಹೆಚ್ಚಿಸುತ್ತಾ ಕಡೆಗೆ ವೈಶಮ್ಯದಿಂದ ಕಳದ ವರ್ಷ ಬಾರದೆ ಇದ್ದ ಕಾರಣ ಈ ವರ್ಷ ಇಚ್ಛೆ ಇದ್ದವರು ಮಿಠಾಯಿ ತರುವಂತೆಯೂ ಅವರವರ ವ್ಯಾಪಾರ ಸ್ಥಿತಿಗೆ ಸರಿಯಾದ ಬಾಡಿಗೆ ವಸೂಲುಮಾಡುವಂತೆಯೂ ಸದರಿ ದೇವಳ ಮೊಕ್ತೇಸರರು ಅದರ ವಿಲೆವಾರಿಯನ್ನು ಪೊಳಲಿ ಎಸ್. ಪಿ. ರಾಜಾ ಕಂಪೆನಿಯ ಮೆನೇಜರಾದ ಪಿ. ಎಸ್. ಪರಮೇಶ್ವರಯ್ಯನವರಿಗೆ ಕೊಟ್ಟಿರುತ್ತಾರೆ. ಆದ್ದರಿಂದ ಮಿಠಾಯಿ ತರಲಾತುರ ಉಳ್ಳವರೆಲ್ಲರೂ ಬಂದು ಸದರಿಯವರಿಂದ ಪಡಕೊಳ್ಳಬಹುದಾಗಿದೆ.

ಒಳ್ಳೆ ಗೊಬ್ಬರ! ಅವ್ವಲ್ ಈಡು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಜಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನುಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ಧಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ಲಿಪ್ ಕವರ್ ಬೈಂಡು	0—8—0
ಚಿಕ್ಕ ಸೈಜು ಕೆಲಿಕೊ ಬೈಂಡು	0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ

ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.

1 ಡಜನ್ ಪ್ರತಿಗಳಿಗೆ 1—12—0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ. ದ. ಕನ್ನಡ.

Foot Balls. (BEST QUALITY).

ಫುಟ್ ಬಾಲುಗಳು. (ಉತ್ತಮ ತರಹ).

No. 1	2	3	4	5
2—8—0	3—0—0	3—12—0	5—0—0	5—8—0

BLADDERS. ಬ್ಲಾಡರ್‌ಗಳು.

1—0—0	1—4—0	1—8—0	1—12—0	2—0—0

COVERS. ಕವರುಗಳು.

1—8—0	1—12—0	2—4—0	3—4—0	3—8—0

INFLATERS. ಇನ್‌ಫ್ಲೇಟರುಗಳು.

1—4—0	1—12—0	2—0—0	2—8—0

ಸಚಿತ್ರ ಆಂಗ್ಲಭಾಷಾ ಪ್ರಕಾಶಕ.

ಅಕ್ಷರಜ್ಞಾನ, ಶಬ್ದಜ್ಞಾನ, ವ್ಯಾಕರಣ, ಭಾಷಾ ಸಂಪ್ರದಾಯ, ಭಾಷಾಂತರ, ಸರ್ವ ವಿಷಯಗಳನ್ನು ಕುರಿತು 1,000 ಪ್ರಶ್ನೋತ್ತರ ಸಂಭಾಷಣೆಗಳು, ಕನ್ನಡ—ಇಂಗ್ಲಿಷ್, ಇಂಗ್ಲಿಷ್—ಕನ್ನಡ ಡಿಕ್ಷನರಿ 2,000 ಶಬ್ದಗಳು, ಅರ್ಥಸಹಿತವಾದ ನೂರಾರು ನೀತಿಬೋಧಕ ವಾಕ್ಯಗಳು, ಗಾದೆಗಳು, ಚಿತ್ರವಿಚಿತ್ರ ಕಥೆಗಳು, ಭಾಷಾ ಜ್ಞಾನಕ್ಕೆ ತಕ್ಕ ನೂರಾರು ಅನುಭವ ಮತ್ತು ಅಭ್ಯಾಸಗಳು ಇದರಲ್ಲಿ ಅಡಗಿವೆ. ನೂರಾರು ವಿಷಯಗಳು ಅಡಗಿರುವದರಿಂದ ಪ್ರತಿ ನಿಮಿಷವೂ ಇದು ನಿಮ್ಮಲ್ಲಿ ಇದ್ದೇ ಇರಬೇಕು.

ಈ ವಾರವೇ ತರಿಸಿಕೊಂಡರೆ ರೂ. 1—11—0. [illegible]

ವಿಳಾಸ:— ಹೆಚ್. ಎಸ್. ರಾವ್ ಬ್ರದರ್ಸ್,
[illegible]

ಅನುಭವ [ಸಿದ್ಧ]ವಾದ ವನೌಷಧಗಳು.

[೧. ...]ಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಅಣೆ.

೨. ಪ್ರಮೇಹರಿಪು ಬಿಂದು. ಉರಿಯುವಿಕೆ ... ವನ್ನು ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟಿಗೆ ೨-೮-೦.

೩. ಶಂಕರೇಶ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ... ಖಂಡಿತವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ... ಅತ್ಯುತ್ತಮವು. ಪ್ರಸಿದ್ಧವಾಗಿದೆ. ರಾತಲಿಗೆ ೨ ರೂ.

೫. ಪೀಹೋದರಾರಿ ... ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ... ತತ್ಸಂಬಂಧವಾದ ಇತರ ವಿಕಾರಗಳನ್ನೂ ... ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಅಣೆ.

೬. ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನವಷ್ಟೇ ಹೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಅಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ... ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ... ಕ್ಷಯ ... ಕಫ, ಕ್ಷಯಗಳ ... ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ... ಮೂತ್ರ... ಧಾತುಪತನ, ... ಮೂಲಕವಾಗಿ ... ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ... ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ... ಬಾಧೆಗಳನ್ನೂ ಕೂಡಲೆ ಗುಣಪಡಿಸುವದು. ಬಾಟ್ಲಿ ... ಅಣೆ. ೩ ಬಾಟ್ಲಿಗೆ ೧ ರೂ. ೬ ಅಣೆ.

೧೨. ಗಜಕರ್ಣ ಕೇಸರಿ ಮುಲಾಮು. ತುರುಕಜ್ಜಿ ಹುರಿಗಜ್ಜ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ... ಅಣೆ

೧೩. ಸವ್ವೀರಾಂಜನ (ಸುರುಮಾ). ... ನೇತ್ರ ರೋಗಗಳನ್ನು ... ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ... ಉನ್ಮಾದ, ಅಪಸ್ಮಾರ, ... ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು ... ಪಟುತ್ವವನ್ನು ಕೊಡುವದು. ... ಮಧುರವಾಗಿರುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಅಣೆ.

☞ ಮೇಲ್ಕಂಡ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿ ... ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹುವವರ ರೋಗ ... ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡದಲ್ಲಿ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ಪತ್ರ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ, ವೆಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists*, Vepary Post, MADRAS.

ಹಲ್ಲು ನೋವುಗಳಿಗೆ ಖಾತ್ರಿಯಾದ ಔಷಧಿ.

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗೆಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಕಂಪನೆ ಕಟ್ಟೆ ಕೋವುಗಳಲ್ಲಿ ದೊರಕುವದು.

STANY BROTHERS
Sole Agents
M. C. C's, Toothache Specific, Mangalore.

ಸಬ್ ಏಜಂಟರು ಬೇಕಾಗಿದೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ, ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co., *Mangalore.*

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯವಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನವೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ.

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ.

೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆವೆಚ್ಚ ಸೇರಿ ವರ್ಷಕ್ಕೆ ೩ ರೂ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—

ಅರ್ಥಸಾಧಕ ಪತ್ರಿಕಾ ಸಂಪಾದಕರು, "ರಿಂಗ್‌ವುಡ್", ಬೆಂಗಳೂರು.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷದ ವರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ... ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ದೀಪಕ್ಕೆ 1, ಕಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಂ ಮಣಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಬಿಂಬ ಭಂಗಾರದ ಉಂಗುರ 1. ಯಾವುವೂ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ., 3. ಇರುಳಪ್ಪನ ಬೀದಿ, ಮದರಾಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುವಾಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯ್ಯಾಪಾ ಹೇರ್ ಆಯಿಲ್ ,,	1—0—0
ವ್ಯಾಸಾರಾಜೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಅಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಅಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಅಣೆ ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅದ್ಭುತ ಘೀನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಸ್ತ್ರೀಶಕ್ತಿ	0—12—0
ಅಂಬಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ತಿದ್ದುವಿಕೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ತತ್ವಿಕ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ	1—3—0
ಚಂದ್ರವದನಾ	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"x28"ಕ್ಕೆ	0—1—0

ಯೂರೋಪದ ಮಹಾ ಯುದ್ಧ.

ರಣರಂಗದಲ್ಲಿ ಕಳೆದವಾರ ವಿಶೇಷ ಮಹತ್ವವನ್ನು ಕೊಡತಕ್ಕ ವಿಷಯವು ಜನರಲ್ ಮೋಡಯವರು ಮೆಸೊಪಟಾಮಿಯದಲ್ಲಿ ಜಯಶ್ರೀಯರಾಗಿ ಬಗ್ದಾದನ್ನು ಸ್ವಾಧೀನಪಡಿಸಿಕೊಂಡದ್ದೇ ಆಗಿದೆ. ಮುಖ್ಯವಾಗಿ ಇಲ್ಲಿ ಆದ ಜಯದಲ್ಲಿ ನಮ್ಮ ಹಿಂದೀ ಸೈನಿಕರು ಸೇರಿದ್ದುದೂ ಅವರೇ ಈ ಮಹಾ ಜಯಕ್ಕೆ ಕಾರಣರಾದುದೂ ಹಿಂದೀ ಜನರೆಲ್ಲರಿಗೂ ಒಂದು ವಿಶೇಷ ಸಂತೋಷದ ವಿಷಯವಾಗಿದೆ. ಇಲ್ಲಿ ತುರ್ಕರ ಮೇಲೆ ನುಗ್ಗಿಹೋಗಿ ಕಾರ್ಯಸಿದ್ಧಿಯನ್ನು ಹೊಂದಿದ ಅಶ್ವಪಡೆಯು ಮತ್ತು ಕಾಲಾಳು ಸೈನಿಕರಲ್ಲಿ ಹೆಚ್ಚಿನವರು ಹಿಂದೀಗಳು, ಅದಲ್ಲದೆ ಮಾರ್ಗ ಸೌಕರ್ಯಗಳನ್ನು ಸಿದ್ಧಮಾಡಿ ಸರಾಗವಾಗಿ ನುಗ್ಗಿಹೋಗುವಂತೆ ಮಾಡಿಕೊಟ್ಟವರೂ ಹಿಂದೀ ಕೆಲಸಗಾರರು. ಕಳೆದ ವರ್ಷ ಕುಟೇಲ್ ಅಮಾರವು ಬ್ರಿಟಿಷರ ಕೈತಪ್ಪಿಹೋದ್ದರಿಂದ ಹಿಗ್ಗಿಕೊಂಡು ತಮ್ಮ ಬಲದ ಮೇಲೆಯೇ ಆತುಕೊಂಡಿದ್ದ ತುರ್ಕರಿಗೆ ಈ ಜಯದಿಂದ ಒಳ್ಳೇ ಹಾಳ ಸಿಕ್ಕಿದಂತೆ ಆಯಿತು. ಕಳೆದ ವರ್ಷ ಬ್ರಿಟಿಷರಿಗೆ ಈ ಅಪಜಯವಾಗಲು ದಾರಿಗಳ ಕೊರತೆ ಮತ್ತು ಹವಾಗುಣವು ಸೆಟ್ಟಿಗಿಲ್ಲದೆ ಇದ್ದುದೇ ಹೇತುವಾಗಿತ್ತು. ಆದರೆ ತುರ್ಕರು ಇವನ್ನು ತಿಳಿಯದೆ ಇದ್ದರು. ಈಗ ಬ್ರಿಟಿಷರು ನುಗ್ಗಿಹೋಗಲು ಸಾನುಕೂಲವಾದ ಏರ್ಪಾಡುಗಳನ್ನು ಅತಿ ಜಾಗರೂಕತೆಯಿಂದ ಮಾಡಿಕೊಂಡು ಕೆಲವು ದಿವಸಗಳೊಳಗೆ ೧೩೦ ಮೈಲುಗಳ ವಿಸ್ತೀರ್ಣದಲ್ಲಿ ಮುಂದರಿದು ಬಗ್ದಾದನ್ನು ಸೇರಿದರು. ಹೀಗೆ ಬಗ್ದಾದ್ ಬಿದ್ದುಹೋಗಿ ಬ್ರಿಟಿಷರಿಗೆ ಒಂದು ಮಹತ್ತಾದ ಜಯ ಉಂಟಾಯಿತು. ಈ ಪಟ್ಟಣವು ಟರ್ಕಿ ಸಾಮ್ರಾಜ್ಯಕ್ಕೆ ವಿಶೇಷದ ಸ್ಥಳವಾಗಿದ್ದು ಲೋಕದಲ್ಲೆಲ್ಲಾ ಪ್ರಖ್ಯಾತಿಪಡೆದಿತ್ತು. ಜರ್ಮನರು ಈ ಪಟ್ಟಣವನ್ನು ತಮ್ಮ ವಶದಲ್ಲಿಟ್ಟುಕೊಳ್ಳುವದಕ್ಕೆ ಹತ್ತಿಪ್ಪತ್ತು ವರ್ಷಗಳಿಂದ ತುರ್ಕರೊಡನೆ ಮಾಡಬಾರದ ಸನ್ಯಾಸಿಯ ತಂತ್ರಗಳನ್ನು ನಡಿಸುತ್ತಿದ್ದು ಬಗ್ದಾದಿಗೆ ರೈಲ್ವೆ ಮಾರ್ಗಗಳನ್ನು ತೆರೆದಿದ್ದರು. ಇಲ್ಲಿಂದ ಪಾರ್ಶಿಕೊಲ್ಲಿಗೆ ರೈಲ್ವೆ ಹಾಕಿ ಜರ್ಮನಿಗೂ ಪರ್ಶಿಯಕ್ಕೂ ರೈಲ್‌ಮಾರ್ಗವನ್ನು ಕಲ್ಪಿಸಿ ಅಲ್ಲಿಂದ ಹಿಂದೂಸ್ಥಾನದ ಬ್ರಿಟಿಷ ಸ್ವಾತಂತ್ರ್ಯವನ್ನು ಬೆದರಿಸುತ್ತಿರಬೇಕೆಂಬ ಆಲೋಚನೆಯಲ್ಲಿದ್ದರು. ಆದರೆ ಈಗ ಜರ್ಮನರ ಈ ಸಂಕಲ್ಪವು ವ್ಯರ್ಥವಾಗಿ ಈ ಬಗ್ದಾದ್ ಪಟ್ಟಣವೇ ನಮ್ಮವರ ಕೈಸೇರಿತು. ಕಳೆದ ವರ್ಷ ಕುಟನಲ್ಲಿ ಬ್ರಿಟಿಷರಿಗೆ ಅಪಜಯವಾದುದರಿಂದ ಬ್ರಿಟಿಷರು ಧೈರ್ಯಗುಂದಿ ಈ ಪ್ರಾಂತ್ಯದ ಕದನಗಳನ್ನು ನಿಲ್ಲಿಸುತ್ತಿದ್ದರೆ ಜರ್ಮನರು ಪರ್ಶಿಯವನ್ನು ತಮ್ಮ ಸ್ವಾಧೀನಮಾಡಿಕೊಂಡು ಒಂದುವೇಳೆ ಹಿಂದೂಸ್ಥಾನಕ್ಕೆ ನುಗ್ಗಿ ಬರುವ ಸಂಭವವಿತ್ತು. ಇಂಥಾ ಕಾರ್ಯವನ್ನು ಸಾಧಿಸಿಕೊಳ್ಳಲು ಶತ್ರುಗಳಿಗೆ ಬೇಕಾದ ಸೇನಾಸನ್ನಾಹವಿಲ್ಲೆಂತ ಭಾವಿಸಿದರೂ ಹ್ಯಾಗೂ ಈ ಪ್ರಾಂತ್ಯವನ್ನು ಹಾಗೆಯೇ ಬಿಟ್ಟು ಬಿಟ್ಟಿದ್ದಾದರೆ ಹಿಂದೂಸ್ಥಾನಕ್ಕೆ ಒಂದು ವಿಧಾನದ ಭಯವು ಯಾವಾಗಲೂ ಇರುತ್ತಿತ್ತು. ಈಗಲಾದರೂ ಜರ್ಮನರಿಗೆ ಪರ್ಶಿಯಾ ಮತ್ತು ಹಿಂದೂಸ್ಥಾನದ ಹೆಬ್ಬಾಗಿಲನಂತಿದ್ದ ಬಗ್ದಾದ್ ನಮ್ಮವರ ಕೈಸೇರಿ ಶತ್ರುಗಳ ಹವಣು ಮುರಿಯಿತು. ಈಗ ಹಿಂದೂಸ್ಥಾನಕ್ಕೆ ಶತ್ರುಗಳ ಯಾವ ಭಯವೂ ಇಲ್ಲವಾಗಿದೆ. ಅತ್ತಕಡೆಯಿಂದ ರುಶ್ಯನರು ತುರ್ಕರನ್ನು ಬಗ್ದಾದಿನ ಕಡೆಗೆ ಒತ್ತುತ್ತಿದ್ದಾರೆ. ಇತ್ತಕಡೆ ಬಗ್ದಾದಿನಲ್ಲಿ ಈಗ ಬ್ರಿಟಿಷರು ಇರುವದರಿಂದ ತುರ್ಕರ ಸೇನೆಯು ಇಲ್ಲಿ ಬೋನಿನಲ್ಲಿ ಸಿಕ್ಕಿಕೊಳ್ಳುವ ಸ್ಥಿತಿಯಲ್ಲಿದೆ.

ಪಶ್ಚಿಮ ರಣರಂಗ.

ಜರ್ಮನರು ಜಲಯಾನಗಳಿಂದ ಸಿಕ್ಕಿಸಿಕ್ಕಿದ ಹಡಗಗಳನ್ನು ಮುಳುಗಿಸಿ ಒಂದೆರಡು ವಾರದೊಳಗೆನೇ ಯುದ್ಧವನ್ನು ಕೊನೆಗಾಣಿಸುವೆಂಬ ಝೇಂಕಾರ ಮಾಡುತ್ತಿದ್ದರೂ ಈಗ ಪಶ್ಚಿಮ ರಣರಂಗದಲ್ಲಿ ನಮ್ಮವರಿಗೆ ಉಂಟಾಗುವ ಜಯಗಳ ವಿಶೇಷತ್ವವನ್ನು ನೋಡುವದಾದರೆ ಜರ್ಮನರ ಆ ಸಂಕಲ್ಪವು ಬರೇ ನಾಚಿಕೆಗೇಡಿಗೆ ಮಾರ್ಪಟ್ಟಿದೆ ಎಂದು ಹೇಳಲೇ ಬೇಕು. ಕಳೆದ ವಾರದಲ್ಲಿ ನಮ್ಮವರು ಈ ರಣರಂಗದಲ್ಲಿ ನುಗ್ಗಿಹೋಗಿ ಕೆಲವು ಗ್ರಾಮಗಳನ್ನು ಸ್ವಾಧೀನಮಾಡಿಕೊಂಡು ಜರ್ಮನರನ್ನು ಬೆಪೋಮೆಯ ಕಡೆಗೆ ಓಡಿಸಿದ್ದರು. ಈಗಲಾದರೋ ಬೆಪೋಮೆಯನ್ನು ಕೂಡಾ ಜರ್ಮನರು ಬಿಟ್ಟುಹೋದರು ಎಂಬ ವಾರ್ತೆ ಬಂದಿರುತ್ತದೆ. ಬ್ರಿಟಿಷರು ಇಲ್ಲಿ ನುಗ್ಗಿಹೋಗಿ ಶತ್ರುಗಳೊಡನೆ ಭೀಕರ ಕಾಳಗ ಮಾಡಿದ್ದರು. ಈ ಪಟ್ಟಣವನ್ನು ಬಿಟ್ಟುಬಿಡದೆ ನಿರ್ವಾಹವಿಲ್ಲವೆಂದು ಜರ್ಮನರು ತಿಳಿದಾಗ ಪಟ್ಟಣಕ್ಕೆ ಬೆಂಕಿಕೊಟ್ಟು ಓಡಿಹೋದರು. ಬ್ರಿಟಿಷರು ಅಲ್ಲಿಂದ ಮುಂದರಿದು ಲೆಟ್ರಾನ್ಸ್‌ಲೋಯ ಮತ್ತು ಎಟಿಲ್ಲ ಪೆಟಿಟನ್ನು ಸ್ವಾಧೀನಮಾಡಿಕೊಂಡಿರುವರು. ಪೆರೊನ್ನೆ ಎಂಬ ಸ್ಥಳವೂ ಬ್ರಿಟಿಷರ ಕೈಸೇರಿರುತ್ತದೆ. ಸೈಂಟ್ ಪೀರೆರೆ ವಾಸ್ಟ್ ಅರಣ್ಯವೆಲ್ಲಾ ಬ್ರಿಟಿಷರ ಕೈಸೇರಿದೆ. ದಕ್ಷಿಣಕ್ಕೆ ೧೦೦೦ ಗಜ, ಉತ್ತರಕ್ಕೆ ೧,೦೦೦ ಗಜ ಉದ್ದದ ಕಂದಕಗಳು ನಮ್ಮವರ ಸ್ವಾಧೀನವಾಗಿವೆ. ವಾಯುನಾವೆಗಳ ಕೆಲವು ಕದನಗಳೂ ನಡೆದು ಜರ್ಮನರ ನಾಲ್ಕು ವಾಯುನಾವೆಗಳು ಕೆಳದೊಬ್ಬಲ್ಪಟ್ಟಿವೆ. ಬ್ರಿಟಿಷರು ಬೆಪೋಮೆಯಲ್ಲಿ ಕ್ರಯರ್‌ದಲ್ಲಿ ೧೭ ಮೈಲುಗಳ ವಿಸ್ತೀರ್ಣದ ರಣರಂಗದಲ್ಲಿರುವ ಫೆಸ್‌ನೆಸ್, ಹೊಗ್ನಿ ವಿಲ್ಲರ್ಸ್, ಕಾರ್ಬೊನ್ನೆಲ್, ಬಾರ್ಲೆಕ್ಸ್, ಎಟರ್‌ಪಿಗ್ನೆ ಮತ್ತು ಲಾಮೆಸನೊಟ್ಟೆ ಗ್ರಾಮಗಳನ್ನೂ ನದಿಯ ಉತ್ತರದಲ್ಲಿ ಬೆಪೋಮೆಯಲ್ಲದೆ ಲೆಟ್ರಾನ್ಸ್‌ಲೋಯ, ಬೆಫ್‌ವಿಲ್ಲರ್ಸ್, ಬ್ಯುಕೋರ್ಟು, ಎಟಿಟ್-ಲೆ-ಗ್ರೇಂಡ್ ಎಟಿಟ್-ಲೆ-ಪೆಟಿಟ್ ಮೊದಲಾದ ಗ್ರಾಮಗಳನ್ನೂ ಹಿಡಿದಿರುತ್ತಾರೆ. ಫ್ರೆಂಚರು ಎಂಡೆಟಿ ಮತ್ತು ಬ್ಯನೆ ಗ್ರಾಮಗಳ ಮಧ್ಯೆ ಇರುವ ರಣರಂಗದಲ್ಲೆಲ್ಲಾ ಶತ್ರುಗಳೊಡನೆ ಕದನ ಮಾಡಿ ಶತ್ರುಗಳು ಎರಡು ವರ್ಷಗಳಿಂದ ಬಲಕಾಯಿಸಿಕೊಂಡಿದ್ದ ಪ್ರಾಂತ್ಯಗಳನ್ನೆಲ್ಲಾ ಗೆದ್ದುಕೊಂಡಿರುತ್ತಾರೆ. ಹೀಗೆ ಈ ರಣರಂಗದಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ಜಯದ ಮೇಲೆ ಜಯಗಳಾಗುತ್ತಿವೆ.

ವಾಯುನಾವೆಗಳು.

ತಾ. ೧೭ರಲ್ಲು ಪಾರಿಸ್ ನಗರದ ಪ್ರಾಂತ್ಯದಲ್ಲಿ ಹಾರುತ್ತಿದ್ದ ಜರ್ಮನರ ಒಂದು ಜೆಪಲಿನ್ ನಾವೆಗೆ ಫ್ರೆಂಚರ ವಾಯುನಾವೆಯು ಗುಂಡುಹಾರಿಸಿ ಅದನ್ನು ಕೆಳದೊಬ್ಬಿರುತ್ತದೆ. ಜೆಪಲಿನ್ ನಾವೆಯ ನಾವಿಕರೆಲ್ಲಾ ಹತರಾದರು. ಶತ್ರುಗಳ ಇನ್ನು ಕೆಲವು ವಾಯುನಾವೆಗಳು ಇಂಗ್ಲಾಂಡ್ ಕರಾವಳಿಯ ಮೇಲೆ ಕಾಣಿಸಿಕೊಂಡು ಕೆಂಟಿನ ಮೇಲೆ ಬಾಂಬುಗಳನ್ನು ಹಾಕಿರುತ್ತವೆ.

ಪೂರ್ವ ರಣರಂಗ.

ಶತ್ರುಗಳು ಈ ರಣರಂಗದಲ್ಲಿ ಸ್ಟಾನಿಸ್ಲವೊಫಿನ ಮೇಲೆ ಹಲ್ಲೆ ಮಾಡಿದರು. ಆದರೆ ರುಶ್ಯನರು ಅವರನ್ನು ಹಿಂದಕ್ಕೆ ಓಡಿಸಿರುತ್ತಾರೆ. ಟ್ರೆಸ್ಸಿಟ್ ಪ್ರಾಂತ್ಯದಲ್ಲಿ ರುಶ್ಯನರು ವಾರಯ ಗ್ರಾಮವನ್ನು ಗೆದ್ದುಕೊಂಡಿರುತ್ತಾರೆ. ಸಕ್ಕಿಜ್ ಪ್ರಾಂತ್ಯದಲ್ಲಿ ಬಹಳ ಕತ್ತಲಿಂದ ಸನ್ನಾ ಮತ್ತು ಬಾನಾ ಎಂಬ ಸ್ಥಳಗಳನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ.

ಮೆಸೊಪಟಾಮಿಯ.

ಬ್ರಿಟಿಷರು ಇಲ್ಲಿ ಬಗ್ದಾದನ್ನು ಸ್ವಾಧೀನಮಾಡಿಕೊಂಡು ಮುಂತೆ ಮುಂತೆ ನುಗ್ಗಿಹೋಗಿರುತ್ತಾರೆ. ಬಗ್ದಾದಿಗೆ ಸಮೀಪದಲ್ಲಿರುವ ದಜಿಯಾ ನದಿಯ ಬಲಗಡೆಯಲ್ಲಿರುವ ಬಾಕುಬ ಎಂಬ ಪಟ್ಟಣದ ಒಂದಂಶವೂ ನಮ್ಮವರ ಸ್ವಾಧೀನವಾಗಿದೆ. ತಾ. ೧೯ನೇ ರಾತ್ರಿ ನಮ್ಮವರ ಸೈನಿಕರು ಟೈಗ್ರಿಸ್ ನದಿಯನ್ನು ದಾಟಲು ಯತ್ನಿಸುತ್ತಿದ್ದ ಶತ್ರುಗಳ ಒಂದು ಸಣ್ಣ ಹಡಗದ ಮೇಲೆ ಗುಂಡುಹಾರಿಸಿ ಅದನ್ನು ಹಿಡಿದರು. [illegible] ಇತರ ಯುದ್ಧ ಸಾಮಗ್ರಿಗಳೂ ಈ ಹಡಗದಲ್ಲಿದ್ದವು.

ಮೆಸಿಡೋನಿಯ.

[illegible]

ವಿದೇಶ ವೃತ್ತಾಂತ.

ಯುದ್ಧ ಸಂಬಂಧವಾದ ಸಾಮ್ರಾಜ್ಯದ ಮಹಾ ಸಭೆಯು ಬಹುಶ್ಯಾ ತಾ. ೨೦ರಲ್ಲು ಲಂಡನಿನಲ್ಲಿ ಕೂಡುವದು ಎಂಬ ವಾರ್ತೆ ಬಂದದೆ. ಒಂದು ದಿನ ಇಂಪೀರಿಯಲ್ ಕೆನ್ಫರೆನ್ಸ್ ಮತ್ತೊಂದು ದಿನ ಡೋಮಿನಿಯನ್ ಮತ್ತು ಹಿಂದೂಸ್ಥಾನದ ಪ್ರತಿನಿಧಿಗಳು ಕೂಡುವ ವಾರ್‌ಕೆಬಿನೆಟ್ ಸಭೆ—ಹೀಗೆ ಈ ಸಭೆಗಳು ಕೂಡಲಿಕ್ಕಿವೆ. ವಾರ್ ಕೆಬಿನೆಟ್ ಸಭೆಗೆ ಮಿ ಲಾಯ್ಡ್ ಜಾರ್ಜ್‌ರವರು ಅಧ್ಯಕ್ಷರಾಗಿರುವರು.

ಚೀನ ಸರಕಾರದವರು ಜರ್ಮನರೊಡನೆ ಇದ್ದ ಮಿತ್ರಭಾವವನ್ನು ಕಳೆದು ಬಿಟ್ಟಿರುತ್ತಾರೆ. ಚೀನದಲ್ಲಿರುವ ಜರ್ಮನರ ಒಳ್ಳೇತನ್ನು ಹೊಲ್ಲಾಂಡಿನವರೂ ಜರ್ಮನಿಯಲ್ಲಿರುವ ಚೀನಿಯರ ಒಳ್ಳೇತನ್ನು ಡೆನ್ಮಾರ್ಕಿನವರೂ ನೋಡಿಕೊಳ್ಳುವರು.

ಜರ್ಮನಿಯಲ್ಲಿ ಅಮೇರಿಕದ ರಾಯಭಾರಿಯಾಗಿದ್ದ ಮಿ ಗಿರಾರ್ಡರವರು ಜರ್ಮನಿಯಿಂದ ನ್ಯೂಯೋರ್ಕಿಗೆ ಬಂದು ತಲಪಿರುತ್ತಾರೆ. ಅಲ್ಲಿಯ ಸಿಟಿ ಹೋಲಿನಲ್ಲಿ ಇವರು ಕೊಟ್ಟ ಭಾಷಣದಲ್ಲಿ "ನಾವು ಜರ್ಮನಿಯೊಂದಿಗೆ ಯುದ್ಧವನ್ನು ತಂದುಕೊಂಡಿದ್ದೇವೆ. ಜರ್ಮನ್ ಅಮೇರಿಕನರಲ್ಲಿ ತನಗೆ ತುಂಬಾ ನಂಬಿಕೆ ಇದೆ. ಮತ್ತು ಇಂಥವರು ಹಿಂದಿನಿಂದ ಗುಂಡು ಹಾರಿಸರೆಂಬ ಧೈರ್ಯದಿಂದ ಇಂಥವರ ಸೇನಾಪಾಳಯವನ್ನು ನಡಿಸಬಹುದು" ಎಂಬದಾಗಿ ಹೇಳಿರುವರು.

ಬ್ರಿಟಿಷರ ಹಳೇ ಮಾದರಿಯ ಒಂದು ಡಿಸ್ಟ್ರೋಯರ್ ನಾವೆಯು ಇಂಗ್ಲಿಷ್ ಕಾಲುವೆಯಲ್ಲಿ ಮುಳುಗಿ ಹೋಗಿರುವದು. ಒಬ್ಬನು ಸತ್ತಿರುವನು. ೨೮ ಮಂದಿಗೆ ಗಾಯವಾಗಿದೆ. ಆಫೀಸರರೆಲ್ಲಾ ಬದುಕಿಕೊಂಡಿರುವರು.

ರುಶ್ಯಾದೇಶದಲ್ಲಿ ರಾಜ ವಿಪ್ಲವವುಂಟಾಗಿರುವದು. ರುಶ್ಯಾ ಚಕ್ರವರ್ತಿಯವರು ಸಿಂಹಾಸನ ಪರಿತ್ಯಾಗವನ್ನು ಮಾಡಿ ತನ್ನ ಸಹೋದರನಾದ ಗ್ರೇಂಡ್ ಡ್ಯೂಕ್ ಮಿಖಾಯೇಲರಿಗೆ ತನ್ನ ಹಕ್ಕನ್ನು ಬಿಟ್ಟುಕೊಟ್ಟರು. ಈಗ ರುಶ್ಯಾದಲ್ಲಿ ಹೊಸ ಸರಕಾರವು ಸ್ಥಾಪಿಸೋಣಾಗಿ ಡೂಮಾ ಸಭೆಯವರು ಅಧಿಕಾರವನ್ನು ನಡಿಸುತ್ತಿದ್ದಾರೆ. ಯುದ್ಧ ಪ್ರಾರಂಭವಾದಂದಿನಿಂದ ರುಶ್ಯಾದೇಶದ ರಾಜಕೀಯ ವಿಷಯವು ಚಂಚಲಸ್ಥಿತಿಯಲ್ಲಿತ್ತು. ಸರಕಾರದ ಮೇಲೆ ಜನರಿಗೂ ಜನರ ಮೇಲೆ ಸರಕಾರಕ್ಕೂ ವಿಶ್ವಾಸವು ಇದ್ದಿಲ್ಲ. ಆಗಾಗ್ಗೆ ಮಂತ್ರಿಗಳು ಬದಲಾಯಿಸಲ್ಪಟ್ಟು ಅಧಿಕಾರವು ಜರ್ಮನರ ಅನುಕೂಲಮತದವರ ಕೈಸೇರಿತು. ಚಕ್ರವರ್ತಿಯವರ ಇವರ ಸೂತ್ರದ ಗೊಂಬೆಯಂತಿದ್ದ ರಸ್‌ಪುಟೀನ ಎಂಬ ಬೋಧಕನ ಮತದಂತೆ ಎಲ್ಲವನ್ನು ನಡಿಸಿದರು. ಈ ಬೋಧಕನ ಪಕ್ಷದವರು ಜರ್ಮನರ ಅನುಕೂಲಮತದವರೆಂತ ರುಶ್ಯಾದೇಶದ ಜನರು ಅವರ ಮೇಲೆ ತಪ್ಪು ಹೊರಿಸಿದರು. ಈ ಪ್ರತಿಕಾರಕ ಪಕ್ಷದವರು ಇಂಥಾ ಆರೋಪಣೆಗೆ ತಕ್ಕವರೋ ಅಲ್ಲವೋ ಎಂಬದು ಕಡಿಮೆ ಎಂದರೂ ಎರಡು ಸಂದರ್ಭಗಳಲ್ಲಿ ಜನರಿಗೆ ಚೆನ್ನಾಗಿ ಮಂದಟ್ಟಾಯಿತು. ೧೯೧೫ನೇ ಇಸವಿಯಲ್ಲಿ ಜರ್ಮನರು ಮಹಾ ರಭಸವಾಗಿ ನುಗ್ಗಿಹೋದಾಗ ಜರ್ಮನರೊಡನೆ ಪ್ರತ್ಯೇಕ ಸಂಧಾನ ಮಾಡಿಕೊಳ್ಳಬೇಕೆಂತ ಇವರು ಜನರನ್ನು ಬಲತ್ಕರಿಸಿದರು. ಆದರೆ ರಾಷ್ಟ್ರೀಯ ಪಕ್ಷದವರು ಯುದ್ಧ ಮಾಡಿಯೇ ತೀರಬೇಕೆಂದು ಛಳವಳ ನಡಿಸಿದ್ದರಿಂದಲೂ ಇವರ ಪಕ್ಷವು ದುರ್ಬಲವಾಗಿದ್ದುದರಿಂದಲೂ ಅವರ ಸಾಧನೆಯು ಸಫಲವಾದಲಿಲ್ಲ. ಝಾರರು ಉಪಾಯವಿಲ್ಲದೆ ಈ ಹೊಸ ಸಂಗಡದವರ ಮುಂದಾಳಾಗಿ ನಿಲ್ಲಲೇ ಬೇಕಾಯಿತು. ಈ ಛಳವಳದಿಂದ ರುಶ್ಯದಲ್ಲಿ ಯುದ್ಧಸಾಮಗ್ರಿಗಳೂ ಸೈನಿಕರ ಸಂಖ್ಯೆಯೂ ಮತ್ತಷ್ಟು ಹೆಚ್ಚುವ ಮಾರ್ಗವಾಯಿತು. ಪ್ರತಿಕಾರಕ ಪಕ್ಷದವರ ಯತ್ನವು ಸಫಲವಾಗದ್ದರಿಂದ ಅವರು ಸಮಯವನ್ನು ನೋಡಿಕೊಂಡಿದ್ದು ತಮ್ಮ ಪಕ್ಷದ ಮುಂದಾಳಾದ ರಸ್‌ಪುಟಿನರನ್ನು ಹಿಡಿದ, ಅವನ ಇಂದ್ರಜಾಲದಿಂದ ಝಾರರ ಮತ್ತು ಝಾರೀನರ ಮನಸ್ಸನ್ನು ತಮ್ಮ ಕಡೆಗೆ ಎಳಕೊಂಡ. ೧೯೧೬ನೇ ಇಸವಿಯಲ್ಲಿ ರುಶ್ಯನರು ನುಗ್ಗಿಹೋಗಿ ಕದನ ಮಾಡಿ ಹೊಂದಬೇಕಾಗಿದ್ದ ಪ್ರಯೋಜನವನ್ನು ಪಡೆಯಲಿಲ್ಲ ಎಂಬ ನೆವದಿಂದ ಇವರು ಝಾರರನ್ನೂ ಪ್ರಜಾಜನರನ್ನೂ ಸಂಧಾನ ಪ್ರಸ್ತಾಪದ ಕಡೆಗೆ ಎಳೆಯ ನೋಡಿದರು. ಬರಬರುತ್ತಾ ಝಾರರು ಪ್ರೊಗ್ರೆಸಿವ್ ಪಕ್ಷದ ಒಬ್ಬೊಬ್ಬ ಮಂತ್ರಿಯನ್ನೇ ಕೆಲಸದಿಂದ ತೆಗೆದು ಹಾಕಿ ಇವರ ಬದಲಿಗೆ ಪ್ರತಿಕಾರಕ ಪಕ್ಷದವರನ್ನು ಮಂತ್ರಿಗಳನ್ನಾಗಿ ನೇಮಿಸಿದರು. ಡೂಮಾ ಸಭೆಯವರೂ ಸಾಮ್ರಾಜ್ಯ ಕೌನ್ಸಿಲಿನವರೂ ಈ ಬದಲಾವಣೆಗಳನ್ನು ಕಂಠಾತುಂಡವಾಗಿ ಎದುರಿಸಿದರು. ಆದರೆ ಪ್ರತೀಕಾರಕ ಪಕ್ಷದವರು ಝಾರರ ಬೆಂಬಲವಿದ್ದುದರಿಂದ ಇವರ ಮಾತಿಗೆ ಝಾರರು ಕಿವಿಗೊಡದೆ ಬದಲಾವಣೆಗಳನ್ನು ಮಾಡುತ್ತಾ ಹೋದರು. ದಶಂಬರ ತಿಂಗಳ ಪ್ರಾರಂಭದಲ್ಲಿ ಈ ಪ್ರತೀಕಾರಕಪಕ್ಷದ ನಾಯಕ ರಸ್‌ಪುಟಿನರನ್ನು ಯಾರೋ ಕೊಂದುಹಾಕಿದರು. ಇದೇ ರಾಜವಿಪ್ಲವದ ಪ್ರಥಮ ಚಿನ್ಹೆಯಾಯಿತು. ಇವರ ಕೊಲೆಯಾದನಂತರ ಯುದ್ಧವನ್ನು ನಡಿಸಿ ಜಯಪ್ರದರಾಗಿಯೇ ತೀರಬೇಕೆಂಬ ಪ್ರೊಗ್ರೆಸಿವ್ ಪಕ್ಷವು ಬಲವಾಯಿತು. ಈ ಪಕ್ಷಕ್ಕೆ ಎಲ್ಲಾ ಸೇನೆಯೂ, ಪ್ರಜಾಪ್ರತಿನಿಧಿಗಳೂ, ಆಫೀಸರರ ಹೆಚ್ಚಿನಂಶವೂ, ಪ್ರಥಮಕಾನದವರೆಲ್ಲರೂ, ರಾಜಕುಟುಂಬದವರಲ್ಲಿ ಹೆಚ್ಚಿನವರೂ ಸೇರಿದ್ದರು. ಆದರೆ ಅಧಿಕಾರವು ಪ್ರತೀಕಾರ ಪಕ್ಷದವರ ಕೈಯಲ್ಲಿಯೇ ಇತ್ತು. ಇವರ ಅಧಿಕಾರವು ತಕ್ಕ ಕ್ರಮದಲ್ಲಿಲ್ಲವಾದುದರಿಂದ ರುಶ್ಯನರು ಯುದ್ಧದಲ್ಲಿ ಅಪಜಯವಾಗುವ ಸಂಭವಗಳೇ ಹೆಚ್ಚಿದ್ದವು. ಅದಲ್ಲದೆ ಈಚೆಗೆ ರುಶ್ಯದಲ್ಲಿ ಆಹಾರ ಸಾಮಗ್ರಿಗಳ ಕೊರತೆಯು ಹೆಚ್ಚಾಯಿತು. ಆಹಾರ ಸನ್ನಾಹಗಳನ್ನು ಒದಗಿಸುವ ಏರ್ಪಾಡುಗಳನ್ನು ಅಧಿಕಾರಿಗಳು ತಕ್ಕ ಪ್ರಕಾರ ನಡಿಸಲಿಲ್ಲ. ಈ ಕಾರಣದಿಂದ ಉಂಟಾದ ಬಡ ಪ್ರಜಾಜನರ ದಾಂದಲೆಯಲ್ಲಿ ಸರಕಾರದ ಕಡೆಯ ಸೈನಿಕರು ಸೇರಿಕೊಂಡದ್ದರಿಂದ ಸರಕಾರಕ್ಕೆ ತಕ್ಕ ಸಹಾಯ್ಯ ಸಿಕ್ಕದೆ ಹೋಗಿ ರಾಜವಿಪ್ಲವವಾಯಿತು. ಯುದ್ಧವನ್ನು ಜಯ ಸಿಕ್ಕುವಂತೆ ನಡಿಸಿಯೇ ತೀರಬೇಕೆಂಬ ಮನಸ್ಸು ಝಾರರಿಗೆ ಇದ್ದರೂ ಪ್ರತೀಕಾರಕ ಪಕ್ಷದವರ ಅಧಿಕಾರವು ಝಾರರನ್ನು ಬಲಿತುಕೊಂಡಿದ್ದುದರಿಂದ ಝಾರರು ಸಿಂಹಾಸನ ಪರಿತ್ಯಾಗವನ್ನು ಮಾಡಲೇಬೇಕಾಯಿತು. ಈ ಕಾರಣದಿಂದ ರುಶ್ಯಾದಲ್ಲಿದ್ದ ನಿರಂಕುಶ ಪ್ರಭುತ್ವವು ಹೋಗಿ ಇನ್ನು ಪ್ರಜಾಧಿಪತ್ಯ ವ ಏಕರಾಜಾಧಿಪತ್ಯವು ಯುದ್ಧ ತೀರಿದನಂತರ ಯಥಾವಕಾಶ ಕಾಲದಲ್ಲಿ ಉಂಟಾಗಬಹುದು. ಈಗ ಅಧಿಕಾರಕ್ಕೆ ಬಂದ ಪಕ್ಷದವರು ಯುದ್ಧ ಮಾಡಿ ಜಯವನ್ನು ಸಂಪಾದಿಸಬೇಕೆಂಬ ಒಂದೇ ದಾರದ ತುದಿಯನ್ನು ಹಿಡಿದಿರುವವರಾದ್ದರಿಂದ ಈಗ ಸದ್ಯಾ ಯುದ್ಧದ ಕಡೆಗೆನೇ ಇವರ ಲಕ್ಷ್ಯವು ಹೋಗಿರುವದು. ಪ್ರಜಾಜನರ ಮತ್ತು ಸೇನೆಯ ಬೆಂಬಲವು ಈಗ ಅಧಿಕಾರಕ್ಕೆ ಬಂದಿರುವ ಪಕ್ಷದವರ ಕಡೆಗೆ ಇದೆ. ಹೀಗೆ ರುಶ್ಯದಲ್ಲಿ ರಾಜವಿಪ್ಲವವುಂಟಾದರೂ ಯುದ್ಧವನ್ನು ಮುಂದರಿಸುವರೆ ಮಿತ್ರರಾಜ್ಯಗಳವರಿಗೆ ಮತ್ತಷ್ಟು ಬಲಸಿಕ್ಕಿದಂತೆ ಆಯಿತು.

ಪ್ರಿನ್ಸ್ ಲವೊಫರವರು ರುಶ್ಯಾದ ತಾತ್ಕಾಲಿಕ ಸರಕಾರದ ಮಂತ್ರಿಯಾಗಿರುತ್ತಾರೆ. ಕೆಬಿನೆಟ್ ಸಭೆಗೆ ಹೊಸ ಮಂತ್ರಿಗಳು ನೇಮಿಸಲ್ಪಟ್ಟಿರುತ್ತಾರೆ. ಹಿಂದಿನ ಸರಕಾರದ ಮಂತ್ರಿಗಳಲ್ಲಿ ಕೆಲವರನ್ನು ಈ ಹೊಸ ಸರಕಾರದವರು ಕೈದುಮಾಡಿರುತ್ತಾರೆ. ಮಿನಿಸ್ಟರ್ ಆಫ್ ಜಸ್ಟಿಸರಾದ ಎಮ್. ಕೆರೆನ್ಸ್ಕಿಯವರು ಪ್ರಜಾ ಜನರೂ ಸೈನಿಕರೂ ಸೇರಿದ ಒಂದು ಮಹಾ ಸಮುದಾಯದಲ್ಲಿ ಭಾಷಣ ಕೊಟ್ಟು ಹಿಂದಿನ ಸರಕಾರದವರು ಕೈದಿಸಲ್ಪಟ್ಟ ಬಂದಿಗಳನ್ನು ಬಿಡಿಸುವದೇ ಹೊಸ ಸರಕಾರದ ಪ್ರಥಮ ಕೆಲಸವಾಗಿರುವದೆಂದೂ [illegible]

[illegible]

ಹಡಗುಗಳ ಮಿತ್ರರಾಜ್ಯದ [illegible] ನಡೆಯುವ ಹಾಗೆಯೂ ಜನರಿಗೆ ತಕ್ಕ ಅಧಿಕಾರಗಳು ಸಿಕ್ಕುವಂತೆಯೂ [illegible] ಅನ್ನು ಮಾಡಿ ಪ್ರಜಾ ಜನರಿಗೆ ಬೇಕಾದ ಸ್ವಾತಂತ್ರ್ಯಗಳನ್ನು ಕೊಟ್ಟಿರುವರು.

ಝಾರರು ಈಗ ಸ್ಕೋಫ್ ಎಂಬಲ್ಲಿಯೂ ಝಾರೀನರು [illegible] ಲ್ಲಿಯೂ ಸುರಕ್ಷಿತರಾಗಿರುವರು.

ಝಾರರು ತಾ. ೧೫ನೇ ಮಧ್ಯರಾತ್ರಿ ಸಿಂಹಾಸನ ಪರಿತ್ಯಾಗವನ್ನು ಮಾಡಿ ಗ್ರೇಂಡ್ ಡ್ಯೂಕ್ ಮಿಖಾಯೇಲರನ್ನು ತನ್ನ ಬದಲಿಗೆ ನೇಮಿಸಿದರು. ಗ್ರೇಂಡ್ ಡ್ಯೂಕ್ ಮಿಖಾಯೇಲರು ಶುಕ್ರವಾರ ಮಧ್ಯಾನ್ನದ ನಂತರ ಸಿಂಹಾಸನತ್ಯಾಗ ಮಾಡಿದರು. ಈಗ ಡೂಮಸಭೆಯವರೂ ನೇಶನಲ್ ಕೆಬಿನೆಟ್ ಸಭೆಯವರೂ ಅಧಿಕಾರ ನಡಿಸುತ್ತಿದ್ದಾರೆ.

ಶತ್ರುಗಳ ಡಿಸ್ಟ್ರೋಯರ್ ನಾವೆಗಳು ಇಂಗ್ಲಾಂಡಿಗೆ ಸೇರಿದ ಕೆಂಟಿಸ್ ಕರಾವಳಿಯ ಸಮೀಪ ಬಂದು ಬೆಳಿಗ್ಗೆ ೧೨—೪೫ ಗಂಟೆಗೆ ಕರಾವಳಿ ಪಟ್ಟಣಗಳಿಗೆ ಗುಂಡು ಹಾರಿಸಿರುತ್ತವೆ. ಪ್ರಾಣಾಪಾಯವಾಗಲಿಲ್ಲ. ಆದರೆ ಮೂರು ಮನೆಗೆ ಸ್ವಲ್ಪ ಧಕ್ಕೆ ಆಗಿರುತ್ತದೆ.

ಫ್ರಾನ್ಸಿನ ಕೆಬಿನೆಟ್ ಸಭೆಯವರು ರಾಜಿನಾಮೆ ಕೊಟ್ಟಿರುತ್ತಾರೆ.

ಅಮೇರಿಕದವರ "ವಿಜಲೆನ್ಸ್" ನಾವೆಯನ್ನು ಎಚ್ಚರಿಕೊಡದೆನೇ ಜರ್ಮನರು ಮುಳುಗಿಸಿರುವರು.

ಮಾರ್ಚ ತಾ. ೮ಕ್ಕೆ ಅಂತ್ಯವಾಗುವ ವಾರದಲ್ಲಿ ಇಟಲಿ ಬಂದರಗಳಿಗೆ ೪೯೧,೨೧೧ ಟನ್‌ಗಳ ಭರಾವಣೆಯ ೪೯೩ ಹಡಗಗಳು ಬಂದು ತಲಪಿರುತ್ತವೆ. ೪೧೫,೮೦೧ ಟನ್ ಭರಾವಣೆಯ ೪೬೪ ಹಡಗಗಳು ಬಂದರದಿಂದ ಪ್ರಯಾಣ ಬೆಳಸಿರುತ್ತವೆ. ೪ ಹಡಗಗಳೂ ೩ ಸಣ್ಣ ಹಡಗಗಳೂ ಮುಳುಗಿರುತ್ತವೆ.

ಮಾರ್ಚ ತಾ. ೧೧ಕ್ಕೆ ಅಂತ್ಯವಾಗುವ ವಾರದಲ್ಲಿ ಫ್ರೆಂಚ ಬಂದರಗಳಿಗೆ ೭೦೭ ಹಡಗಗಳು ಬಂದು ತಲಪಿರುತ್ತವೆ. ೨ ಹಡಗಗಳು ಮುಳುಗಿರುತ್ತವೆ.

ಉತ್ತರ ಹಿಂದೂಸ್ಥಾನ.

ಮಾರ್ಚ ತಾ. ೧೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲಿ ೧೩,೪೭೨ ಮಂದಿ ಪ್ಲೇಗ ಬೇನೆಯಿಂದ ಮೃತರಾಗಿರುವರು. ಈ ವಿ[illegible] ಮುಂಬಾಯಿ ಮತ್ತು ಸಿಂಧ್ ೩೫೧೮; ಮದ್ರಾಸ್ ೩೭೦; ಬಂಗಾಳ ಬಿಹಾರ್ ಮತ್ತು ಒರಿಸ್ಸ ೧೧೧೮; ಸಂಯುಕ್ತಸಂಸ್ಥಾನ ೫೧೩೭; ಪಂಜಾಬು ೭[illegible] ಬರ್ಮ ೨೫೦; ಮಧ್ಯಹಿಂದೂಸ್ಥಾನ ೧೬೨೮; ಕೊಡಗು ೧; ಮೈಸೂರು ೧೬[illegible] ಹೈದರಾಬಾದ್ ೮೧೨; ಮಧ್ಯಹಿಂದೂಸ್ಥಾನ ೨೯೩; ರಾಜಪುತಾನ ೯೬; ಕಾಶ್ಮೀರ [illegible] ಮರಣಗಳಾಗಿರುವವು.

ಮುಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ ವಸಂತ ಪಟೇಲರು ಮ[illegible] ಪಾಲಿಟಿಗಳಲ್ಲಿರುವ ಕೌನ್ಸಿಲರುಗಳ ಸಂಖ್ಯೆಯಲ್ಲಿ ¾ನೇ ಅಂಶವು ಪ್ರಜಾಪ್ರತಿನಿಧಿಗಳಾಗಿರಬೇಕೆಂಬ ಠರಾವನ್ನು ತಂದು ಕೌನ್ಸಿಲುಗಳ ಪ್ರೆಸಿಡೆಂಟರುಗಳನ್ನು ಆ[illegible]ವಾಗ ಪ್ರಜಾಪ್ರತಿನಿಧಿಗಳ ಸಂಖ್ಯೆಯು ಕಡಿಮೆ ಇರುವದರಿಂದ ಉಂಟಾ[illegible] ತೊಂದರೆಗಳನ್ನು ಸೋದಾಹರಣವಾಗಿ ತೋರಿಸಿಕೊಟ್ಟರು. ಈ ಠರಾವಿನ ವಿ[illegible] ಕೌನ್ಸಿಲಿನಲ್ಲಿ ವಿಶೇಷ ಚರ್ಚೆಗಳು ನಡೆದು ಕೊನೆಗೆ ಈ ಠರಾವು ಬಹುಮತದಿ ಪಾಸಾಯಿತು.

ಭಾರತ ಸಂರಕ್ಷಕ ಸೈನ್ಯಕ್ಕೆ ಯುನಿವರ್ಸಿಟಿ ವಿದ್ಯಾರ್ಥಿಗಳ ಸೇನಾ[illegible] ವೊಂದನ್ನು ಏರ್ಪಡಿಸಬೇಕೆಂಬ ಛಳವಳವು ಮುಂಬಾಯಿಯಲ್ಲಿ ನಡೆದಿರುತ್ತದೆ. [illegible] ಬಗ್ಗೆ ಮುಂಬಾಯಿಯಲ್ಲಿ ಒಂದು ಸಭೆ ಕೂಡಿತ್ತು. ಈ ಸಭೆಗೆ ಆಯಾ ಯುನಿವರ್ಸಿಟಿ [illegible]ಗಳ ಪ್ರಿನ್ಸಿಪಾಲರೂ ಬಂದಿದ್ದರು. ಈ ಸಭೆಯಲ್ಲಿ ಇಂಥಾ ಒಂದು ಸೇನಾವ[illegible]ವನ್ನು ಏರ್ಪಡಿಸಿ ಅದನ್ನು ಭಾರತ ಸಂರಕ್ಷಕ ಸೈನ್ಯಕ್ಕೆ ಕೂಡಿಸಬೇಕೆಂಬ ನಿ[illegible]ವಾಗಿ ಈ ನಿರ್ಣಯವನ್ನು ಕಾರ್ಯರೂಪಗೊಳಿಸುವರೆ ಒಂದು ಕಮಿಟಿಯು ನ[illegible]ಮೋಣಾಗಿದೆ. ಹಿಂದೀಗಳಿಗೆ ಸೇನೆಯಲ್ಲಿ ಅಧಿಕಾರಸ್ಥಾನ ಸಿಕ್ಕುವ ಎಡೆ ಇ[illegible] ಇಲ್ಲದಿರಲಿ, ಈ ಸುಸಂದರ್ಭವನ್ನು ಯಾರೂ ಕಳಕೊಳ್ಳಬಾರದೆಂತ ಪ್ರಿನ್ಸಿಪ[illegible] ಪರಾಂಜಪೆಯವರು ಯುವಕರನ್ನು ವಿಜ್ಞಾಪಿಸಿಕೊಂಡಿರುತ್ತಾರೆ.

ಯುದ್ಧದ ಬಗ್ಗೆ ಹಿಂದೂಸ್ಥಾನದಿಂದ ಎತ್ತಲ್ಪಡುವ ಸಾಲಕ್ಕೆ ಈ [illegible] ರೂ. ೨,೩೦,೦೦,೨೦೦ರ ಅರ್ಜಿಗಳು ಬಂದಿರುತ್ತವೆ.

ಪ್ರೆಸ್ ಆಕ್ಟಿನ ಮೇಲೆ ಹಿಂದೂಸ್ಥಾನದಲ್ಲಿ ಒಂದುಸಾರಿ ಎಚ್ಚರಿಸೋ[illegible] ಪತ್ರಿಗಳು ೧೮೩. ~~ಈ ಪೈಕಿ ಪಂಜಾಬಿನಲ್ಲಿ ೩೪, ಮುಂಬಾಯಿಯಲ್ಲಿ ೩೭, ಮ~~[illegible] ೨೦, ಬಂಗಾಳ ೨೦. ಎರಡಾವರ್ತಿ ಎಚ್ಚರಿಸೋಣಾದ ಪತ್ರಿಕೆಗಳು ಒಟ್ಟಿಗೆ [illegible] ಈ ಪೈಕಿ ಪಂಜಾಬಿನಲ್ಲಿ ೨೨. ಮೂರಾವರ್ತಿ ಎಚ್ಚರಿಸೋಣಾದ ಪತ್ರಗಳು [illegible] ಈ ಪೈಕಿ ಪಂಜಾಬು ೧೨, ಮುಂಬಾಯಿ ೮. ಪ್ರೆಸ್ ಆಕ್ಟಿನ ಸೆಕ್ಷನ್ ೩[illegible] ಮೇಲೆ ಸೆಕ್ಯುರಿಟಿ ತಕ್ಕೊಂಡ ಪತ್ರಗಳು ೮೦, ಈ ಪೈಕಿ ಮುಂಬಾಯಿ [illegible] ಬಂಗಾಳ ೨೧, ಪಂಜಾಬು ೧೭. ಸೆಕ್ಯುರಿಟಿ ಕೇಳಿದರೂ ಕೊಡದಿದ್ದ [illegible] ಸಂಖ್ಯೆ ೧೩೯. ಸೆಕ್ಯುರಿಟಿಯನ್ನು ಹೆಚ್ಚಿಸಿದ ಪತ್ರಗಳ ಸಂಖ್ಯೆ ೨. ಪ್ರೆಸ್ [illegible] ಸೆಕ್ಷನ್ ೮ (೨) ರ ಪ್ರಕಾರ ಸೆಕ್ಯುರಿಟಿ ಕೇಳಿದ ಪತ್ರಗಳು ೨೦. ಈ ಪೈಕಿ [illegible] ಪತ್ರಗಳು ಅನಂತರ ಪ್ರಕಟವಾಗಲಿಲ್ಲ. ಸೆಕ್ಷನ್ ೯ರ ಮೇರೆಗೆ ಸೆಕ್ಯುರಿಟಿ[illegible] ವನ್ನು ಸರಕಾರಕ್ಕೆ ಸೇರಿಸಿಕೊಂಡ ಪತ್ರಗಳು ೩ ಎಂಬದಾಗಿ ಮಾನ್ಯ ಸರ್ [illegible] ರವರು ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಹೇಳಿರುತ್ತಾರೆ.

ಯುದ್ಧದ ಕಾರಣದಿಂದ ಹಿಂದೂಸ್ಥಾನದಲ್ಲಿ ಆಹಾರ ಪದಾರ್ಥಗಳ ಬೆ[illegible] ದಿನೇ ದಿನೇ ಏರುತ್ತಾ ಬರುತ್ತಿದೆ. ಆಹಾರಪದಾರ್ಥಗಳ ಬೆಲೆಯು [illegible] ಏರುತ್ತಾ ಬಂದಿದೆ ಎಂಬದು ಕಲ್ಕತ್ತೆಯ ಆಹಾರಪದಾರ್ಥಗಳ [illegible] ಬೆಲೆಯಿಂದ ತಿಳಕೊಳ್ಳಬಹುದಾಗಿದೆ. ಕಳೆದ ವರ್ಷ ಜನವರಿ ತಿಂಗಳಲ್ಲಿ [illegible] ಪದಾರ್ಥಗಳ ಸರಾಸರಿ ಬೆಲೆಯು ೧೯೧೪ನೇ ಇಸವಿ ಜನವರಿ ತಿಂಗಳಿಗಿಂತ [illegible] ೧೦೮ರಂತೆ ಏರಿತ್ತು. ಆದರೆ ಫೆಬ್ರುವರಿ ಮತ್ತು ಮಾರ್ಚ ತಿಂಗಳಲ್ಲಿ ಹೊಸ [illegible] ಕಾರಣದಿಂದ ಈ ದರವು ಸೇಕಡಾ ೧೦೫ಕ್ಕೆ ಇಳಿಯಿತು. ಏಪ್ರಿಲ್ ತಿಂಗಳ [illegible] ಜೂನ ತಿಂಗಳ ವರೆಗೆ ತಿರಿಗಿ ಕ್ರಮೇಣ ಸೇಕಡಾ ೭೪ಕ್ಕೆ [illegible] ಆಗೋಸ್ತು ತಿಂಗಳಲ್ಲಿ ೯೬ಕ್ಕೂ ಸೆಪ್ಟಂಬರದಲ್ಲಿ ೧೦೮ಕ್ಕೂ [illegible] ನವಂಬರದಲ್ಲಿ ೧೧೬ಕ್ಕೂ ದಶಂಬರದಲ್ಲಿ ೧೧೭ಕ್ಕೂ ಏರಿರುವದು. [illegible] ಇಸವಿ ಜನವರಿಯಲ್ಲಿ ಈ ದರವು ಸೇಕಡಾ ೧೯೭ಕ್ಕೆ ಏರಿರುತ್ತದೆ. [illegible] ಬಂದರುಗಳಿಗೆ ಆಹಾರಪದಾರ್ಥಗಳನ್ನು ಕಳುಹಿಸುವರು [illegible] ವಾದುದರಿಂದ ಒಂದುವೇಳೆ ದರವು [illegible] ಆಹಾರಪದಾರ್ಥಗಳ ಕ್ರಯವು [illegible] ಮೇಲೆ ಹೇಳಿದ ಸಂಸ್ಥೆಯು ಸರಕಾರಕ್ಕೆ [illegible] ವದರಿಂದ ಬಡ ಜನರಿಗೆ ದೊರಕುವ ಆಹಾರಪದಾರ್ಥಗಳ [illegible]

[illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು.

ರುಶ್ಯಾ ದೇಶದ ಕ್ರಾಂತಿ ... ೪

ಸ್ಫುಟವಿಚಾರಗಳು:—

೧—೩ ಪ್ರಕೃತದ ಚಳವಳಿಗಳು ... ೪

೪—೪ ಲಂಕಾಶಯರಿನವರ ಸ್ವಾರ್ಥ ... ೪ ೫

೫ ಮಹಾರಾಜ ಬಿಕಾನೇರರ ಅಭಿಪ್ರಾಯ ... ,,

೬ ಸೀಲೋನಿನ ಕೈಗಾರಿಕೆಗಳ ನವಜೀವನ ... ,,

೭ ಇಟ್ಲಿಯ ಪ್ಲೇಗಿನ ಹಾವಳಿ ... ,,

ಸ್ಥಳಿಕ—ಮಂಗಳೂರು ... ,,

ವರ್ತಮಾನ ಸಂಗ್ರಹಗಳು:—

೧ ಯೂರೋಪದ ಮಹಾಯುದ್ಧ ... ೪

೨ ವಿದೇಶ ವೃತ್ತಾಂತ ... ,,

೩ ಉತ್ತರ ಹಿಂದೂಸ್ಥಾನ ... ೪-೬

೪ ದಕ್ಷಿಣ ಹಿಂದೂಸ್ಥಾನ ... ,,

೫ ದಿವ್ಯ ಔಷಧಿಗಳ ಶೋಧ ... ೫

ಪತ್ರವ್ಯವಹಾರ ಮತ್ತು ಬಾತಮಿಗಳು.

ಏಡೆಡ್ ಶಾಲೆಗಳ ಹೀನಾವಸ್ಥೆ ... ೬

ಕಾಪು ... ,,

ಬೆಳ್ಳಾರೆ ... ,,

ಸ್ವದೇಶಾಭಿಮಾನಿ.

ಶಕ ೧೮೩೮ ಫಾಲ್ಗುಣ ಬ. ೧೫ ಶುಕ್ರವಾರ.

ರುಶ್ಯಾದೇಶದ ಕ್ರಾಂತಿ.

ಈ ವಾರದೊಳಗಿನ ಮಹಾಯುದ್ಧದ ವರ್ತಮಾನಗಳು ಸಾಮಾನ್ಯವಾಗಿ ಎಲ್ಲರ ಮನಸ್ಸನ್ನು ಆಕರ್ಷಿಸುವ ಹಾಗಿವೆ. ಒಂದು ಕಡೆಯಲ್ಲಿ ಬಗದಾದ ಪಟ್ಟಣವು ನಮ್ಮ ಬ್ರಿಟಿಷರ ಕೈವಶವಾದುದಕ್ಕೆ—ಈ ಶುಭ ಸೂಚನೆ ಒಬ್ಬೆ—ನಾವು ಆನಂದವನ್ನು ಅನುಭವಿಸುತ್ತಿರುವಾಗ ಈ ಮಹಾಯುದ್ಧದ ಇನ್ನೊಂದು ಪಾರ್ಶ್ವದಲ್ಲಿ ಎಂದರೆ ರುಶ್ಯಾದೇಶದಲ್ಲಿ ನಡೆದ ರಾಜ್ಯಕ್ರಾಂತಿಯ ವರ್ತಮಾನವು ಬಂದಿದೆ; ಈ ವಿಷಯದಲ್ಲಿ ನಾವು ಮೊದಲಾಗಿಯೇ ಹೇಳುವುದಾವದೆ ಈ ಕ್ರಾಂತಿಯು ನಮ್ಮ ಮಿತ್ರ ಸಂಘದವರಿಗೆ ಅನುಕೂಲವಲ್ಲದೆ ಪ್ರತಿಕೂಲವಲ್ಲ; ಹೀಗೆನ್ನಬಹುದು. ಇದೇ ಮಾತನ್ನು ಬೇರೆ ಶಬ್ದಗಳೊಳ ವ್ಯಕ್ತಗೊಳಿಸುವುದಾದರೆ, ರುಶ್ಯಾದೇಶದಲ್ಲಿ ಲೋಕಮತದ ಒತ್ತಾಯದಿಂದ ಉಂಟಾದ ಝಾರನ ರಾಜಿನಾಮೆಯಿಂದ ಕೆಂಬಹುದಾ ವಾನಪ್ರಸ್ಥದಿಂದ ಅಧಿಕಾರ ಸಂಪನ್ನವಾದ 'ಡ್ಯೂಮಾ' ಸಭೆಯು ಇನ್ನಷ್ಟು ಉತ್ಸಾಹ, ಸಾಮರ್ಥ್ಯ, ಉಪಾಯ, ಮತ್ತು ಯುಕ್ತಿಗಳಿಂದ ಯುದ್ಧದಲ್ಲಿ ಮಿತ್ರಸಂಘದವರಿಗೆ ಸಾಹಾಯ್ಯ ಕೊಟ್ಟು ಯುದ್ಧವು ಬೇಗನೆ ಯಶಸ್ವಿಯಾಗುವಂತೆ ಯತ್ನಿಸೀತು. ಇದೇ ನಮ್ಮ ಮಿತ್ರ ಸಂಘದವರಿಗೆ ಅನುಕೂಲವಾದ ಗಾಳಿಯು. ಸಾರಾಂಶ ಝಾರನ ಅಧಿಕಾರ ತ್ಯಾಗವು ಸ್ವಯಂ ರುಶ್ಯದ ಮೇಲಾಗಲಿ, ಯುದ್ಧದ ಮೇಲಾಗಲಿ ಪರಿಣಾಮವನ್ನು ಉಂಟುಮಾಡೀತು, ಕಡಿಮೆ ಪಕ್ಷದಲ್ಲಿ ಯಾವ ತರದ ಹಾನಿಯನ್ನಾದರೂ ಮಾಡಲಿಕ್ಕಿಲ್ಲೆಂಬುದು ಖಂಡಿತ.

* ಝಾರನು ರಾಜಿನಾಮೆಯನ್ನು ಯಾಕೆ ಕೊಟ್ಟನು? ಅಂಥ ಪ್ರಸಂಗವೇನೊದಗಿತು? ಆ ಕಾಲದಲ್ಲಿ ಅವನೇನೆಂದನು? ಇವೇ ಮೊದಲಾದ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಗತ್ಯವಿಲ್ಲ. ಅವುಗಳನ್ನು ವಾಚಕರು ವರ್ತಮಾನ ಸಂಗ್ರಹದಿಂದ ತಿಳಿದುಕೊಳ್ಳಬಹುದು. ಝಾರನ ರಾಜಿನಾಮೆಯ ನಿಜವಾದ ಕಾರಣವು ಇಂಥದ್ದೇ ಎಂದು ನಿರ್ಧರಿಸಲು ಇನ್ನೂ ಸಾಧ್ಯವಿಲ್ಲಾದರೂ ಕೆಲವರು ಕೆಲವು ಕಾರಣಗಳನ್ನು ತೋರಿಸುವರು. ಝಾರನ ಹೆಂಡತಿಗೆ ಪ್ರಕೃತ ಯುದ್ಧದಲ್ಲಿ ಅಷ್ಟೊಂದು ಆಗ್ರಹ ಅಥವಾ ಆಸಕ್ತಿಯಿದ್ದಿಲ್ಲವಂತೆ. ಅವಳು "ನಮಗೆ ಯಾಕೆ ಈ ಯುದ್ಧವು? ನಾವು ಜರ್ಮನರೊಡನೆ ಒಪ್ಪಂದ ಮಾಡಿಕೊಳ್ಳಬಹುದಲ್ಲವೆ?" ಈ ತರದ ಅಭಿಪ್ರಾಯವುಳ್ಳದವಳಾದ ಕಾರಣ ಝಾರನು ಕೂಡ ಯುದ್ಧದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸದೆ ಅಪವಾದಕ್ಕೆ ತಕ್ಕಂತೆ ಏನೋ ಒಂದು ಬಗೆಯಿಂದ ಹೋರಾಡಿಕೊಂಡಿದ್ದನು. ಆದರೆ ರುಶ್ಯದ ಪ್ರಜೆಗಳಿಗಾಗಲಿ ಅವರ ಡ್ಯೂಮಾ ಸಭೆಗಾಗಲಿ ಝಾರನ ಈ ಶಿಥಿಲ ವರ್ತನೆಯು ಒಪ್ಪದೆ ಇದ್ದುದರಿಂದ ಅವರ ಒತ್ತಾಯದ ಮೇರೆಗೆ ಪ್ರಕೃತ ರಾಜಿನಾಮೆಯು ಸಂಭವಿಸಿದೆಂದು ಕೆಲವರು ಹೇಳುತ್ತಾರೆ. ಈ ವಿಷಯದಲ್ಲಿ ಅನೇಕರ ತರ್ಕ ವಿತರ್ಕಗಳಿದ್ದರೂ ಸದ್ಯ ರಾಜಿನಾಮೆಯಿಂದ ಅಧಿಕೃತವಾದ ಡ್ಯೂಮಾ ಸಭೆಯು ಬಳ್ಳಿ ಸಮರ್ಥವಾದ ರೀತಿಯಿಂದ ಯುದ್ಧದಲ್ಲಿ ಸನ್ನದ್ಧವಾದೀತೆಂಬುದರಲ್ಲಿ ಮಾತ್ರ ಎಳ್ಳಿನಷ್ಟು ಸಂದೇಹವಿಲ್ಲ.

ಇದು ಒಂದು ದಿವಸದ ಕ್ರಾಂತಿಯಲ್ಲ. ಒಂದು ದಿನ ಮಧ್ಯರಾತ್ರಿಯ ಸಮಯದಲ್ಲಿ ಕೆಲವು ಮುಂದಾಳುಗಳು ಅರಸನನ್ನು ಹಿಡಿದು "ರಾಜಿನಾಮೆ ಕೊಡು; ಇಲ್ಲವಾದರೆ ಗತಿಯಿಲ್ಲ" ವೆಂಬುದಾಗಿ ಬೆದರಿಸಿದ್ದು ಒಂದೆ ದಿವಸದ ಕೆಲಸವೆ? ಕ್ರಾಂತಿಯ ವರ್ತಮಾನದಲ್ಲಿ ಮಾತ್ರ ಒಂದೇ ದಿವಸದೊಳಗೆ ನಾವು ಈ ಸಂಗತಿಗಳನ್ನು ಓದಬಹುದು. ಆದರೆ ಈ ಕ್ರಾಂತಿಯು ನಡೆದುದು ಒಂದೇ ದಿವಸದಲ್ಲಿಯೆ! ಅಲ್ಲ. ಎಷ್ಟೋ ವರ್ಷಗಳ ಹಿಂದಿನಿಂದ ಟಾಲ್‌ಸ್ಟಾಯ್ ಮುಂತಾದವರ ಪ್ರಜಾಸತ್ತಾಕವಾದಿಯ ಲೇಖನದಿಂದಲೂ ಭಾಷಣದಿಂದಲೂ ಲೋಕಮತದಲ್ಲಿ ಒಂದು ತರದ ಜಾಗ್ರತೆಯು ಆಗಿತ್ತು; ಪಾರ್ಲಿಮೆಂಟಿನ ಸ್ವರೂಪದ 'ಡ್ಯೂಮಾ' ಎಂಬ ಲೋಕಮತದ ಸಭೆಯು ಅಸ್ತಿತ್ವದಲ್ಲಿ ಬಂದಿತ್ತು; ಅಶಿಕ್ಷಿತ ಸಮಾಜದಲ್ಲಿ ಶಿಕ್ಷಣ ಪ್ರಸಾರಣೆಯು ಬಹುವೇಗದಿಂದ ಆಗುತ್ತಿತ್ತು; ಮದ್ಯಪಾನದಂಥ ದುರ್ವ್ಯಸನದ ಮರವು ಲೋಕಮತದ ಆಗ್ರಹದಿಂದ ಉಂಟಾದ ಕಾಯಿದೆಯ ಕೊಡಲಿಯಿಂದ ಬುಡದಲ್ಲೇ ಕಡಿಯಲ್ಪಟ್ಟಿತ್ತು; ರುಶ್ಯದ ಏಕದೇಶವಾದ ಪೋಲಂಡಕ್ಕೆ ಸರಕಾರವು ತಾನಾಗಿಯೆ ಸ್ವರಾಜ್ಯದಾನವನ್ನು ಕೊಟ್ಟಿತ್ತು; ಇಷ್ಟೆಲ್ಲ ಸಂಗತಿಗಳು ಈಗ ಎಷ್ಟೋ ಸಮಯದಿಂದ ರುಶ್ಯಾದೇಶದಲ್ಲಿ ಕೆಲಸ ಮಾಡುತ್ತಿದ್ದವು. ಜ್ವಾಲಾಮುಖಿಯ ಸ್ಫೋಟವು ಒಮ್ಮಿಂದೊಮ್ಮೆ ಆಗಲಾರದು. ಭೂಮಿಯೊಳಗೆ ಎಷ್ಟೋ ವರ್ಷಗಳಿಂದ ಭೂಗತರಸಗಳು ಕುದಿಯುತ್ತಿದ್ದು ಪಾಕಕ್ರಿಯೆಯು ಪೂರ್ಣವಾದ ಕೂಡಲೇ ಮೇಲೆ ಮಾತ್ರ ಸ್ಫೋಟವು ಫಕ್ಕನೆ ಆದಂತೆ ಕಾಣುವುದು. ಹಾಗೆಯೇ ಮೊನ್ನೆ ನಡೆದ ಈ ರುಶ್ಯಾದೇಶದ ರಾಜ್ಯಕ್ರಾಂತಿಯ ಅವಸ್ಥೆಯು.

ಸುಧಾರಿಸಿದ ಪಾಶ್ಚಾತ್ಯರಾಷ್ಟ್ರಗಳಲ್ಲಿ ರುಶ್ಯದ ಗಣನೆಯು ಇಷ್ಟರವರೆಗೆ ಆಗುತ್ತಿರಲಿಲ್ಲ. ರುಶ್ಯದಲ್ಲಿ ಸಂಸ್ಕೃತಿ ಇದ್ದಿಲ್ಲ, ಶಿಕ್ಷಣವಿದ್ದಿಲ್ಲ, ಶಾಸ್ತ್ರ-ಶೋಧವಿದ್ದಿಲ್ಲ, ಯಂತ್ರ ಮಂತ್ರಗಳೇನೂ ಇದ್ದಿಲ್ಲ, ವ್ಯಾಪಾರ ಕೌಶಲ್ಯವಿದ್ದಿಲ್ಲ, ರಾಜಕಾರಣವಿದ್ದಿಲ್ಲ. ಒಟ್ಟಾರೆ ಸುಧಾರಿಸಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತೋರಿಬರುವ ಯಾವ ವಿದ್ಯಮಾನಗಳೂ ನಮ್ಮ ಈ ಹಳೆ ರುಶ್ಯದಲ್ಲಿ ಇರಲಿಲ್ಲ. ಇಷ್ಟರ ವರೆಗೆ ಇವು ರುಶ್ಯಕ್ಕೆ ಕೇವಲ ಅಪರಿಚಿತವಾಗಿದ್ದವು. ಎಂದ ಮೇಲೆ ಸುಧಾರಿಸಿದ ರಾಷ್ಟ್ರಮಾಲಿಕೆಯಲ್ಲಿ ಈ ಒರಟು ರುಶ್ಯದ ಗಣನೆಯು ಆಗುವುದು ಹೇಗೆ? ಆದರೆ ಕಾಲಮಹಿಮೆಯು ಅಗಾಧವಾದುದು. ಮೇಲೆ ತೋರಿಸಿದ ಕೆಲವು ಸುಧಾರಣೆಗಳು ಅಲ್ಲಿ ನಡೆಯುತ್ತ ಬಂದವು. ಮತ್ತು ಇಂಗ್ಲೆಂಡ, ಜಪಾನ, ಫ್ರಾನ್ಸ, ಇವುಗಳಂಥ ಸುಧಾರಣೆಗಳಿಗೆ ಮಾತೃ ಸ್ಥಾನವಾದ ರಾಷ್ಟ್ರಗಳೊಂದಿಗೆ ಮಿತ್ರತ್ವೀನ ಸೇರು ಈಗ ಹೆಚ್ಚುಕಡಿಮೆ ಮೂರು ವರ್ಷಗಳಿಂದ ಸುಧಾರಣೆಯ ಸಹವಾಸವನ್ನು ಹೊಂದುತ್ತಿದ್ದ ಕಾರಣ ಪ್ರಜಾಸತ್ತಾಕದ ತತ್ವವು ರುಶ್ಯದಲ್ಲಿ ಅಂಕುರಿಸಿಹೋಯಿತು. ಸಾಧು ಸಹವಾಸವನ್ನು ಮಾಡತಕ್ಕದೆಂದು ಹೇಳುವುದು ಇದಕ್ಕಾಗಿಯೇ. ಸಾಧುಗಳು ಬೇರೆಯವರನ್ನು-ಮೂರ್ಖರನ್ನು ತಮ್ಮಂತೆಯೆ ಜ್ಞಾನಿಗಳನ್ನಾಗಿ ಮಾಡುವರು. ಇದೇ ನ್ಯಾಯವು ಇಂಗ್ಲೆಂಡ ಫ್ರಾನ್ಸ, ಈ ಪ್ರಜಾಸತ್ತಾಕ ರಾಷ್ಟ್ರಗಳ ಮಿತ್ರತ್ವದಿಂದ ಪ್ರಜಾಸತ್ತೆಯ ತತ್ವವನ್ನು ಅಂಗೀಕರಿಸಿದ ರುಶ್ಯಾದೇಶದ ಈ ಉದಾಹರಣೆಯಿಂದಲೂ, ಇನ್ನೂ ಸ್ಪಷ್ಟವಾಗುತ್ತದೆ.

ರುಶ್ಯದ ಕ್ರಾಂತಿಯು ಸುಧಾರಿಸಿದ ರಾಷ್ಟ್ರಗಳ ಸಹವಾಸದಿಂದ ಉಂಟಾಯಿತೆಂಬುದು ಎಷ್ಟು ಸತ್ಯವೋ ಅಷ್ಟೆ ಇನ್ನೊಂದು ಸತ್ಯವಾದ ಕಾರಣವು ಇದಕ್ಕಿದೆ. ಈ ಇಪ್ಪತ್ತನೆ ಶತಮಾನವು ಶಾಸ್ತ್ರೀಯಶೋಧ, ಕಲ್ಪಕತೆ, ಯಂತ್ರವಿದ್ಯೆ, ಮುಂತಾದವುಗಳ ಉತ್ಪತ್ತಿ, ಅಭಿವೃದ್ಧಿ ಮತ್ತು ಪ್ರಸಾರಣೆಗೆ ಕಾರಣವಾದಂತೆಯೆ ಪ್ರಜಾಸತ್ತೆಯ ತತ್ವದ ಪ್ರಸಾರಣೆಗೂ ಕಾರಣವಾಗಿದೆಂದು ಯಾರೂ ಒಪ್ಪಿಕೊಳ್ಳಬೇಕಾದ ಸಂಗತಿಯೆ. ಜಪಾನ ದೇಶವು ಪಾಶ್ಚಾತ್ಯ ಸಮಾಗಮದೊಳಗೆ ಸುಧಾರಿಸಿಕೊಂಡಿತು, ಚೀನಾ ದೇಶದಲ್ಲಿ ಪ್ರಜಾಸತ್ತೆಯ ಗಾಳಿಯು ಬೀಸಿತು, ಪೋರ್ಚುಗಲ್ಲಿನಲ್ಲಿ ಪ್ರಜಾಸತ್ತೆಯು ಪ್ರಸ್ಥಾಪಿತವಾಯಿತು, ಇರಾಣದಲ್ಲಿಯೂ ಇದೇ ತತ್ವದ ವಿಜಯವಾಯಿತು. ಈ ಎಲ್ಲ ಸಂಗತಿಗಳು ನಡೆಯುತ್ತಿರುವಾಗ ರುಶ್ಯನರು ಕಣ್ಣು ಮುಚ್ಚಿಕೊಂಡಿದ್ದರೇ! ಇಲ್ಲ. ಇವುಗಳನ್ನೆಲ್ಲ ಒಬ್ಬ ತತ್ವರವಿದ್ಯಾರ್ಥಿಯಂತೆ ಅಧ್ಯಯನ ಮಾಡುತ್ತಿದ್ದರು, ಕಲಿಯುತ್ತಿದ್ದರು, ಒಡೆಯಲ್ಲಿ ಮೇಲೆ ಹೇಳಿದಂತೆ ಸ್ವಾತಂತ್ರ್ಯವಾದಿಗಳಾದ ಇಂಗ್ಲೆಂಡ ಫ್ರಾನ್ಸ ಈ ರಾಷ್ಟ್ರಗಳ ಸಹವಾಸ ಲಭಿಸಿದ್ದು, ಇದು ಹೇಗಾಯಿತೆಂದರೆ, ನಕ್ಷತ್ರಗಳ ಬೆಳಕನ್ನು ನೋಡಿ ನೋಡಿ ಬೆಚ್ಚಿ ಇರುವವರಿಗೆ ಚಂದ್ರೋದಯವು ಸಾಹಾಯ್ಯವಾದಂತೆ ಅವನ ಪ್ರಯಾಣವು ಎಷ್ಟು ನಿಶ್ಚಯಾತ್ಮಕರ ಮತ್ತು ಸುಖಮಯವಾಯಿತೋ ಅಷ್ಟೆ ನಮ್ಮ ರುಶ್ಯನ ಬಂಧುಗಳ ಪ್ರಜಾಸತ್ತೆಯ ಪ್ರವಾಸವು ಸುಖಮಯವಾಗಿದೆ. ರುಶ್ಯದ ಸೂತಕದ ದಿವಸಗಳು ಈಗ ಹೋಗಿ ಹೋದವು. ಅದಕ್ಕೆ ಸುದಿನವು ಉದಯಿಸಿದೆ. ಈ ಶುಭ ಜೀವನದ ಸಲುವಾಗಿ ನಮ್ಮ ಮಿತ್ರ ಸಂಘದವರು ಈಗ ಅಧಿಕೃತವಾದ ಡ್ಯೂಮಾ ಸಭೆಯನ್ನು ಅಭಿನಂದಿಸಿರುವರು. ಡ್ಯೂಮಾ ಸಭೆಯೂ ತನ್ನ ಪವಿತ್ರ ಕರ್ತವ್ಯವನ್ನು ಸ್ಮರಿಸಿಕೊಂಡಿರುವುದು. ಮಿತ್ರ ಸಂಘದಂತೆಯೆ ನಾವು ಕೂಡ ಈಗಿನ ರುಶ್ಯದ ಅಭಿನಂದನೆಯನ್ನು ಮಾಡುವೆವು. ಮತ್ತು ಹೆಚ್ಚಿನ ಉತ್ಸಾಹ, ಹೆಚ್ಚಿನ ಸಾಮರ್ಥ್ಯ, ಹೆಚ್ಚಿನ ಉಪಾಯ ಇವುಗಳಿಂದ ರುಶ್ಯನರು ಈ ಯುದ್ಧದಲ್ಲಿ ಮಿತ್ರ ಸಂಘದವರಿಗೆ ಮದತು ಕೊಟ್ಟು ಏಕತ್ರ ಸೇರಿದ ಈ ಮಿತ್ರ ಸಂಘದವರು ಬೇಗನೆ ಜಯಪ್ರಾಪ್ತಿಯನ್ನು ಹೊಂದಲೆಂದು ಹೃತ್ಪೂರ್ವಕ ಹಾರೈಸುವೆವು.

ಸ್ಫುಟವಿಚಾರಗಳು.

೧ ಪ್ರಕೃತ ಮಹಾ ಯುದ್ಧದಲ್ಲಿ ಸಾಮ್ರಾಜ್ಯ ಸರಕಾರಕ್ಕೆ ಸಾಹಾಯ್ಯ ಮಾಡಲು ಈಗ ಎರಡು ತರದ ಚಳವಳಿಗಳು ನಡೆದಿವೆ. ಒಂದು, ಸೈನ್ಯದಲ್ಲಿ ಯುವಕರು ಸ್ವಸಂತೋಷದಿಂದ ಸೇರುವಂತೆ ಅವರನ್ನು ಪ್ರೋತ್ಸಾಹಿಸುವುದು, ಇನ್ನೊಂದು, ಯುದ್ಧ—ಸಾಲವನ್ನು ಪ್ರಜೆಗಳು ಪಡೆಕೊಳ್ಳುವಂತೆ ಅವರನ್ನು ಪ್ರದೇಶಿಸುವುದು. ಈ ಎರಡು ತರದ ಸಹಾಯಕ ಮಾರ್ಗಗಳನ್ನು ಸರಕಾರಿ—ಉದ್ಯೋಗಸ್ಥರೂ, ಜನರ ಮುಖಂಡರೂ ಜನರಿಗೆ ತೋರಿಸಿ ಕೊಡುತ್ತಲಿದ್ದಾರೆ. ಮದ್ರಾಸು ಮುಂಬಯಿ ಕಲ್ಕತ್ತಾ ಮುಂತಾದ ಶಹರಗಳಲ್ಲಿ ದೊಡ್ಡ ದೊಡ್ಡ ಸಭೆಗಳು ನಡೆದು ಭಾರತ ಸಂರಕ್ಷಕ ಸೈನ್ಯದಲ್ಲಿ ಸೇರುವ ಉತ್ತೇಜನಕಾರಕ ಭಾಷಣಗಳಾದವು; ಅಲ್ಲಲ್ಲಿಯ ಕಚೇರಿಗಳಲ್ಲಿ ಯುವಕರು ಸಾವಿರ ಸಂಖ್ಯೆಯಿಂದ ತಮ್ಮ ಹೆಸರುಗಳನ್ನು ಕೊಟ್ಟಿರುತ್ತಾರೆ. ಮದ್ರಾಸಿನಲ್ಲಿ ಜರುಗಿದ ಸಭೆಯಲ್ಲಿ ಅಧ್ಯಕ್ಷರಾದ ಸರ್ ಶಿವಸ್ವಾಮಿ ಐಯ್ಯರರು ತರುಣರಿಗೆ ಉತ್ತೇಜನಪರವಾದ ಭಾಷಣವನ್ನು ಕೊಟ್ಟು ಹೇಳಿದ್ದೇನೆಂದರೆ— "ಸಂಬಳವೇನು ಸಿಕ್ಕೀತು, ಮೊದಲಾದ ಆಲೋಚನೆಗಳನ್ನು ಮಾಡುತ್ತ ಕೂಡ್ರಲು ಈ ಸಮಯವಲ್ಲ; ಸೈನ್ಯದಲ್ಲಿ ಮೊದಲು ಸೇರಿಕೊಳ್ಳಿರಿ ಮತ್ತು ನಿಮಗೆ ಬೇಕಾದ ಹಕ್ಕುಗಳನ್ನು ಮುತ್ತೆ ಕೇಳಿಕೊಳ್ಳಿರಿ." ಸರ್ ಶಿವಸ್ವಾಮಿಯವರ ಉಪದೇಶವು ನಿಜವಾಗಿ ಮನನೀಯವಾಗಿದೆ. ಈ ಸಮಯದಲ್ಲಿ ಬೇರೆ ಯಾವುದೊಂದೂ ವಿಚಾರ ಮಾಡದೆ ಸಾಮ್ರಾಜ್ಯ ಸರಕಾರಕ್ಕೆ ಸಾಹಾಯ್ಯ ಮಾಡುವುದೆ ನಮ್ಮ ಕರ್ತವ್ಯವಾಗಿದೆ. ಈಗ ನಾವು ಸಾಹಾಯ್ಯ ಮಾಡುವುದು ಬೇರೆಯವರಿಗೆಂದು ನೆನಸಕೂಡದು. ಈ ಸಾಹಾಯ್ಯವು ನಮಗಾಗಿಯೇ ಇದೆ. ಇದರಿಂದ ಸರಕಾರವು ನಮ್ಮ ಭಾವಿ ಆಕಾಂಕ್ಷೆಗಳನ್ನು ಪೂರೈಸುವುದೆಂಬುದಕ್ಕೆ ಸಂದೇಹವಿಲ್ಲ. ಕಲಕತ್ತೆಯಲ್ಲಿ ನೆರೆದ ಪ್ರಚಂಡ ಸಭೆಯಲ್ಲಿ ಬಾಬು ಸುರೇಂದ್ರನಾಥ ಬಾನರ್ಜಿಯವರು "ನಿಮಗೆ ಮುಂದೆ ಸ್ವರಾಜ್ಯವು ಬೇಕಾದರೆ ಈಗ ನೀವು ಸೈನ್ಯದಲ್ಲಿ ಸೇರಿ ಸರಕಾರಕ್ಕೆ ಮದತು ಮಾಡಿರಿ" ಎಂದು ಹೇಳಿರುವರು. ಇದರ ತಾತ್ಪರ್ಯವಾದರೂ ನಾವು ಮೇಲೆ ಹೇಳಿರುವಂತೆ ಈಗಿನ ನಮ್ಮ ಸಾಹಾಯ್ಯವನ್ನು ಸರಕಾರವು ಆತ್ಮಗತ ಹೋಮದೂಳಿನ ರೂಪದಿಂದ ತೀರಿಸೀತು. ನಾವು ಮಾತ್ರ ಈಗ ನಿರ್ಮಲವಾದ ಮನಸ್ಸಿನಿಂದ ಮದತು ಮಾಡಬೇಕು.

೨ ಆದರೆ ಜನರು ತಮ್ಮ ಮನಸ್ಸನ್ನು ಆದಷ್ಟು ನಿರ್ಮಲವಾಗಿಟ್ಟುಕೊಳ್ಳಲು ಪ್ರಯತ್ನಿಸಿದರೂ ಸರಕಾರದ ಕೆಲಕೆಲವು ದೊಡ್ಡ ದೊಡ್ಡ ಹುದ್ದೆದಾರರು ತಮ್ಮ ಭಾಷಣದಿಂದ ಜನರ ನಿರ್ಮಲವಾದ ಮನಸ್ಸಿನ ಮೇಲೆ ಒಮ್ಮೊಮ್ಮೆ ನಿರಾಶೆಯ ಮೋಡಗಳನ್ನು ತಂದು ಬಿಡುವರು! ಸತಿಪತಿಯರು ಇವರಿಬ್ಬರಲ್ಲಿ ಪರಸ್ಪರ ಪ್ರೀತಿಯಿದ್ದರೆನೆ—ಮಧ್ಯದಲ್ಲಿ ಕಲಹವುಂಟಾದರೂ—ಅದು ಆನಂದಪರ್ಯವಸಾಯಿಯಾಗುವುದು. ಅನ್ಯಥಾ ಪತಿಯು ಮಾತ್ರ ಪ್ರಣಯಾಂಧನು, ಪತಿಯ ಹೃದಯವು ಪ್ರೇಮಶೂನ್ಯವಾದುದು, ಶುಷ್ಕವಾದುದು ಅಥವಾ ಸತಿಯು ಪ್ರೇಮಾಂಧಳು, ಪತಿಯು ನಿಷ್ಕರುಣನು ಎಂದ ಮೇಲೆ ಈ ಯುಗ್ಮದಿಂದ ಯಾವುದನ್ನು ಅಪೇಕ್ಷಿಸುವ ಹಾಗಿದೆ? ಒಬ್ಬನು ಪ್ರೀತಿಯನ್ನು ತೋರಿಸುವಾಗ ಇನ್ನೊಬ್ಬನೂ ಅವನ್ನೇ ಅನುಸರಿಸುವುದು ಯುಕ್ತವಲ್ಲವೆ? ಮತ್ತು ಹಾಗೆಯೇ ಅನುಸರಿಸಬೇಕಲ್ಲವೆ? ಈ ಮಾತುಗಳನ್ನು ನಾವು ಯಾಕೆ ಹೇಳುವುದೆಂದರೆ, ಪ್ರಕೃತ ಯುದ್ಧದಲ್ಲಿ ಪ್ರಜೆಗಳು ಸರಕಾರಕ್ಕೆ ಎರಡು ವಿಧದಿಂದ ಸಾಹಾಯ್ಯ ಮಾಡುತ್ತಿದ್ದಾರೆ ಮತ್ತು ಅದು ಅವರ ಪವಿತ್ರ ಕರ್ತವ್ಯವಾಗಿದೆಂದು ನಾವು ಮೊದಲೆಯೆ ಹೇಳಿದ್ದೇವೆ. ಜನರು ಈ ರೀತಿಯಿಂದ ಪ್ರೀತಿಪೂರ್ವಕ ತಮ್ಮ ನಿರ್ಮಲಾಂತಃಕರಣವನ್ನು ಸರಕಾರ ಚರಣದಲ್ಲಿ ಅರ್ಪಿಸುವಾಗ ಸರಕಾರವಾದರೂ ಅಷ್ಟೇ ಅನುರಾಗದಿಂದ ತನ್ನ ದೀನ ಪ್ರಜೆಗಳ ಕಡೆಗೆ ನೋಡಬೇಕು; ಸಹಾನುಭೂತಿಯಿಂದ ಅವರ ಆಕಾಂಕ್ಷೆಗಳನ್ನು ಪೂರೈಸಬೇಕು. ದೀನೋದ್ಧಾರದಿಂದ ಬರುವ ಪುಣ್ಯವನ್ನು ಸೆರಗಿನಲ್ಲಿ ಕಟ್ಟಿಕೊಳ್ಳಬೇಕು. ಇದೀಗ "ಸಮಾಲಂಕಾರ"ದ ಉದಾಹರಣೆ. ಪರಂತು ಇತ್ತಲಾಗೆ ಮುಂಬಯಿ ಪಟ್ಟಣದಲ್ಲಿ ಯುದ್ಧ ಸಾಲದ ಬಗ್ಗೆ ನಾಗರಿಕರ ಒಂದು ಮಹಾ ಸಭೆಯಾಯಿತು, ಅದರಲ್ಲಿ ಮುಂಬಯಿಯ ಗವರ್ನರ ದೊರೆಗಳು ಮಾಡಿರುವ ಭಾಷಣವನ್ನು ಓದಿದರೆ ನಾವು ಈಗಲೇ ತೋರಿಸಿರುವ "ಸಮಾಲಂಕಾರ" ವು ಬರೇ ಕಲ್ಪನೆಯ ಒಂದು ತೆರೆಯಾಗಿ ಕಂಡುಬರುವುದು. ಗವರ್ನರ ದೊರೆಗಳ ಭಾಷಣವು ಕೊಂಚ ಭೀಕರವಾಗಿತ್ತು. ವಸ್ತುತಃ ಮುಂಬಯಿಯ ಗವರ್ನರರು ಉದಾರಮತವಾದಿಗಳು, ಉನ್ನತ ಮನಸ್ಕರು. ಆದರೆ ಮೊನ್ನೆಯ ಅವರ ಭಾಷಣವು ಮಾತ್ರ ವಿಪರೀತವನ್ನು ಹೆದರಿಸುವಷ್ಟು ತೋರಿಸಿದಿದೆ. ಯುದ್ಧಸಾಲದಲ್ಲಿ ಹಣ ಹಾಕುವವರು ಸಹ ಕೆಲವಂಶಗಳನ್ನು ತಕ್ಕೊಳ್ಳುವಷ್ಟು ಸೌಕರ್ಯವೂ ಅನುಕೂಲತೆಯೂ ಇಟ್ಟಿವೆ ಮುಂತಾದ ಸಂಗತಿಗಳನ್ನು ಹೇಳಿ ಹಾಗೆಯೇ ಮಿ| ಲೊಯ್ಡ್ ಜಾರ್ಜ—ಮುಖ್ಯ ಪ್ರಧಾನರು ಹಿಂದುಸ್ಥಾನದ ಪೂರ್ಣ ಸಾಹಾಯ್ಯವನ್ನು ಅಪೇಕ್ಷಿಸಿ ಬರೆದಿರುವ ಪತ್ರವನ್ನು ಮುಂಬಯಿ ಗವರ್ನರರು ಓದಿ ಹೇಳಿ ಮುಂದರಿಸಿದ್ದೇನೆಂದರೆ, "ಸಾಮ್ರಾಜ್ಯವು ಈಗ ಯಾವ ಸಂಕಟದಲ್ಲಿದೆಂಬುದನ್ನು ನೋಡದೆ ಕೆಲವರು ರಾಜಕೀಯ ಚಳವಳವನ್ನು ಪ್ರಾರಂಭಿಸಿರುವರು, ಇದು ಅನವಶ್ಯಕವಾದುದು. ಇದರಿಂದ ಅವರು ದೇಶದ ಬಹಳ ಅನಹಿತವನ್ನು ಮಾಡುವರು. ಯುದ್ಧ ಮುಗಿದ ಮೇಲೆ ಹಿಂದುಸ್ಥಾನದ ನ್ಯಾಯ್ಯ ಆಕಾಂಕ್ಷೆಗಳನ್ನು ಪೂರೈಸುವಾಗ ಇದರಿಂದ ಬಹಳೆ ತೊಂದರೆಗಳು ಬಂದಾವೆಂದು ನನ್ನ ದೃಢವಾದ ನಂಬಿಕೆಯಿದೆ." ಲೊರ್ಡ ವಿಲಿಂಗ್ಡನರ ಈ ಶಬ್ದಗಳು ಸಾತ್ವಿಕರ ಹೃದಯದಲ್ಲಿ ಭಯವನ್ನು ಹುಟ್ಟಿಸದೆ ಬಿಡವು. ಸಾಮ್ರಾಜ್ಯವು ಸಂಕಟದಲ್ಲಿ ಮುಳುಗಿರುವಾಗ ಇಲ್ಲಿಯವರು ತಮ್ಮ ಪ್ರಯೋಜನವನ್ನು ಪಡಕೊಳ್ಳಲು ಉದ್ಯುಕ್ತರಾಗಿದ್ದಾರೆಂದು ಭಾವಿಸಿದ್ದೇ ಲೊರ್ಡ ದೊರೆಗಳ ದೊಡ್ಡ ತಪ್ಪು. ಹಿಂದಿಗಳು ಇವರು ಭಾವಿಸಿದಷ್ಟು ನಿಜವಾಗಿ ವಿಘ್ನಸಂತೋಷಿಗಳಲ್ಲ. ಇದನ್ನು ಯಾರೂ ಹೇಳುವ ಹಾಗಿಲ್ಲ. ಹೀಗಿರಲು ಲೊರ್ಡ ವಿಲಿಂಗ್ಡನರಂಥ ಉದಾರಧಿ ಮತ್ತು ಸಮದೃಷ್ಟಿಯ ಮುತ್ಸದ್ದಿಗಳು ಈ ರೀತಿಯಿಂದ ವಿಪರೀತ ಭಾವನೆಯನ್ನು ಇಟ್ಟುಕೊಳ್ಳುವದೆಂದರೆ ನಮ್ಮ ದುರ್ದೈವವೇ ಸರಿ!

೩ ಹಿಂದುಸ್ಥಾನದ ಶೋಕಾಧಿಕಾರಿಗಳಾದ ಮಿ. ಎಲ್ಲಿಸ್ ರವರು ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಬರುವ ... ಮೇಲೆ ಮೊದಲು ... [illegible]

ದಕ್ಕೆ ಲಂಕಾಶಾಯರಿನ ವಸ್ತ್ರದ ಗಿರಣಿಯವರು ತಮ್ಮ ಸ್ವಾರ್ಥದ ಕೋಲಾಹಲದಿಂದಲೂ, ಆಕಾಂಡ ತಾಂಡವದಿಂದಲೂ, ಆಕಾಶ ಪಾತಾಳವನ್ನು ಒಂದೇ ಮಾಡುತ್ತಿದ್ದಾರೆ. ಈಗ ಇಪ್ಪತ್ತು ವರ್ಷಗಳಿಂದ ಹಿಂದುಸ್ಥಾನವು ಕೂಗುತ್ತಿದೆ, ಬೇಡಿಕೊಳ್ಳುತ್ತಿದೆ, ಇಲ್ಲಿಯ ವಸ್ತ್ರ ವ್ಯಾಪಾರಕ್ಕೆ ಉತ್ತೇಜನ ಬರಬೇಕಾದರೆ, ಅಲ್ಲ, ವಸ್ತ್ರವ್ಯಾಪಾರವು ನಾಮಶೇಷವಾಗದೆ ಉಸುರಾಡಿಸಿಕೊಂಡು ಇರಬೇಕಾದರೆ ವಿಲಾಯತಿಯಿಂದ ಬರುವ ವಸ್ತ್ರಕ್ಕೂ ಇಲ್ಲಿಯದಕ್ಕೂ ಒಂದೇ ವಿಧದ ಕರವನ್ನು ನಿರ್ಣಯಿಸಕೂಡದು, ಅಲ್ಲಿಯ ವಸ್ತ್ರದ ಮೇಲೆ ಕೊಂಚ ತೆರಿಗೆಯನ್ನು ಹೆಚ್ಚಿಸಿರಿ, ಇಲ್ಲವೆ ಸಂರಕ್ಷಿತ ವ್ಯಾಪಾರದ ತತ್ವವನ್ನಾದರೂ ಆಶ್ರಯಿಸಿರಿ. ಪರಂತು ಹಿಂದುಸ್ಥಾನದ ಈ ಯಾಚನೆಯ ಕಡೆಗೆ ಇಷ್ಟರ ವರೆಗೆ ಯಾರೂ ಕಿವಿಗೊಟ್ಟಿದ್ದಿಲ್ಲ. ಈ ವರ್ಷ ಏನೋ ಕೋಶಮಂತ್ರಿಗಳು ದಯವಿಟ್ಟು ಹಿಂದುಸ್ಥಾನದ ಮೇಲೆ ಸ್ವಲ್ಪ ಅನುಗ್ರಹವನ್ನು ತೋರಿಸಿದ್ದು ಸ್ವಾರ್ಥೈಕ ಪ್ರವಣರಾದ ಲಂಕಾಶಾಯರದವರಿಗೆ ಆಗಲಿಲ್ಲ, ಹೊಟ್ಟೆಕಿಚ್ಚು ಪ್ರಾರಂಭವಾಯಿತು. ಈ ಉದರಶೂಲದ ವ್ಯಥೆಯನ್ನು ತಾಳಲಾರದೆ ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಗಳಾದ ಚೆಂಬರ್ಲೇನ ದೊರೆಗಳ ಬಳಿಗೆ ಆ ಲಂಕಾಶಾಯರದವರ ಒಂದು ಡೆಪ್ಯುಟೇಶನು ಬಂತು. "ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಹೋಗುವ ವಸ್ತ್ರದ ಮೇಲೆ ತೆರಿಗೆಯನ್ನು ಹೆಚ್ಚಿಸಿದ್ದು ಬಹು ಅನ್ಯಾಯವು; ಈ ಅಧಿಕವಾದ ತೆರಿಗೆಯಿಂದ ಲಂಕಾಶಾಯರಿನ ಹತ್ತಿ ವ್ಯಾಪಾರಕ್ಕೆ ಒಂದು ದೊಡ್ಡ ಪೆಟ್ಟು ಕೊಟ್ಟಂತಾಗಿದೆ. ಈಗ ವಿಧಿಸಲ್ಪಟ್ಟ ಅಥವಾ ಹೊರಿಸಲ್ಪಟ್ಟ ತೆರಿಗೆಯನ್ನು ಕಡಿಮೆ ಮಾಡದಿದ್ದರೆ ಈ ಲಂಕಾಶಾಯರಿನವರು ಈ ಯುದ್ಧದಲ್ಲಿ ಸಹಾಯ್ಯ ಮಾಡಲು ಅಸಮರ್ಥರಾಗುವರು, ಮಾತ್ರವಲ್ಲ ಈ ತೆರಿಗೆಯನ್ನು ತೆಗೆದು ಹಾಕುವ ವರೆಗೆ ಅವರು ತಮ್ಮ ಪ್ರಯತ್ನಗಳನ್ನು ಬಿಡಲಾರರು." ಶಾಬಾಸ! ಲಂಕೆಯವರ ಈ ಆವೇಶವನ್ನು ನೋಡುವಾಗ ಹಿಂದುಸ್ಥಾನವು ಹಿಂದುಸ್ಥಾನಕ್ಕಾಗಿ ಬದುಕುವುದಿಲ್ಲ, ಲಂಕಾಶಾಯರಿಗಾಗಿ ಬದುಕುವುದೆಂದು ತೋರುತ್ತದೆ.

೪. ಲಂಕಾಶಾಯರಿನ ವ್ಯಾಪಾರಿಗಳು ಈ ರೀತಿಯಿಂದ ಕೈಕೆಯಂತೆ ಹಟ ಹಿಡಿದು ಚೆಂಬರ್ಲೇನರನ್ನು ಒತ್ತಾಯಿಸಿ ಅವರಾದರೂ ಏನು ಮಾಡ್ಯಾರು? ಪಾಪ! ತಥಾಪಿ ಅದನ್ನು ನೀತಿ ಧೈರ್ಯವನ್ನು ತಾಳಿ ಈ ಬುಭುಕ್ಷಿತ ಸ್ವಾರ್ಥ ಸಂಘಗಳಿಗೆ ಸ್ಟೇಟ ಸೆಕ್ರೆಟರಿಗಳು ಉತ್ತರ ಕೊಟ್ಟರು. ಆ ಉತ್ತರದಲ್ಲಿ ಹಿಂದುಸ್ಥಾನದವರು ನೆನೆಸಿಟ್ಟುಕೊಳ್ಳುವಂಥ ಹೆಚ್ಚಿನ ಅಂಶಗಳೇನೂ ಇದ್ದಂತೆ ತೋರುವುದಿಲ್ಲ. ಎಂದರೂ ಈ ಪ್ರಸಂಗದಲ್ಲಿ ಸೆಕ್ರೆಟರಿಯವರು ಆಡಿದ ಒಂದೆರಡು ಮಾತುಗಳು ಎಲ್ಲರೂ ಸ್ಮರಿಸುವ ಹಾಗಿವೆ. "ಯುದ್ಧಾಂತ್ಯದಲ್ಲಿ ಋಣದ ಒಗ್ಗೆ ಹಿಂದುಸ್ಥಾನವು ಸಾಮ್ರಾಜ್ಯ ಸರಕಾರವನ್ನು ಮಂತ್ರೀತ? ಸಾಮ್ರಾಜ್ಯದ ಉಪಕಾರಗಳನ್ನು ಅದು ಸ್ಮರಿಸಲಿಕ್ಕಿಲ್ಲವೆ? ತನ್ನ ಅವಾಟು ದಾರಿಯನ್ನು ಅದರಿತಿರಲಿಕ್ಕಿಲ್ಲವೆ?" ಸರಿ. ಚೆಂಬರಲೇನ ದೊರೆಗಳ ಈ ಆಶಯದಲ್ಲಿ ಹಿಂದುಸ್ಥಾನದ ಭಾವಿ ಜವಾಬುದಾರಿಯು ಅಸ್ಪಷ್ಟವಾಗಿ ಪ್ರತಿಬಿಂಬಿತವಾಗುತ್ತದೆ. ಕಲವಂಶದಿಂದ ತೆರಿಗೆಯನ್ನು ಹೆಚ್ಚಿಸಿದ್ದು ವಿಶೇಷ ತಪ್ಪಲ್ಲೆಂದು ಸಾಧಿಸುವಾಗ ಸದರಿ ಚೆಂಬರಲೇನರು ಕೊಟ್ಟ ಕಾರಣವನ್ನಾದರೂ ವಾಚಕರೊಮ್ಮೆ ಮನಸ್ಸಿಟ್ಟು ಕೇಳಬಹುದಲ್ಲವೆ? "ಈ ಯುದ್ಧದಲ್ಲಿ ಹಿಂದುಸ್ಥಾನವು ೧೦೦ ಮಿಲಿಯ ಎಂದರೆ ೧೧ ಕೋಟಿ ಪವನುಗಳನ್ನು ಖರ್ಚು ಮಾಡುವುದಿದ್ದುದರಿಂದ ಈ ಅಲ್ಪ ತೆರಿಗೆಯನ್ನು ಈ ರೀತಿಯಿಂದ ಹೆಚ್ಚಿಸುವುದು ಅನಿವಾರ್ಯವಾದ ಸಂಗತಿಯು." ಏವಂಚ ಒಂದು ಕಡೆಯಿಂದ ಕೊಟ್ಟರೆ ಇನ್ನೊಂದು ಕಡೆಯಿಂದ ಅದರ ಪ್ರತಿಫಲವು ಬರುತ್ತದೆ.

೫. ಲಂಕಾಶಾಯರಿನವರು ಮಿ. ಅಸ್ಕ್ವಿಥ್ ಮುಂತಾದವರ ಬೆನ್ನು ಹಿಡಿದು ಒದ್ದಾಡುವುದಂಲ್ಲೇ ಇದ್ದಾರೆ? ಚೆಂಬರಲೇನರು ಸಮಾಧಾನವನ್ನು ಹೇಳಿದಾಗ್ಯೂ ಅವರ ಸಮಾಧಾನವಾಗುವ ಹಾಗಿಲ್ಲ. ಕೊನೆಗೆ "ಕರಹೆಚ್ಚಿಸಿದ್ದು ಕಾಯಂ ಅಲ್ಲ, ಬೇಗನೆ ಇವರಲ್ಲಿ ಬದಲಾವಣೆಗಳಾದಾವು" ಎಂದು ತಿಳಿದ ಮೇಲೆ ಅವರು ಕೊಂಚ ಸಮಾಹಿತರಾಗಿದ್ದಾರೆ. ವಿಲಾಯತಿ ವ್ಯಾಪಾರಿಗಳ ಈ ಸ್ವಾರ್ಥ ಮೂಲಕ ಪ್ರವೃತ್ತಿಯನ್ನು ಅಲ್ಲಿಂದಲ್ಲೆ, ಮುಖದಲ್ಲಿ ನಿವೇದಿಸುವುದು ಅಗತ್ಯವಿತ್ತು. ಈ ಕೆಲಸವನ್ನು ಇಲ್ಲಿಂದ ಯುದ್ಧಮಂಡಲದಲ್ಲಿ ಪ್ರತಿನಿಧಿಗಳಾಗಿ ಹೋದ ಮಹಾರಾಜಾ ಗಂಗಾಸಿಂಹಜಿ ಬಿಕಾನೇರ ಇವರು ಮಾಡುವುದರಿಂದ ಅವರನ್ನು ಯಾರು ಅಭಿನಂದಿಸದೆ ಇರುವನು? ದುಷ್ ಪ್ರವೃತ್ತಿಯನ್ನು ನಿವೇದಿಸುವಾಗ ಮಹಾರಾಜರು ಸ್ಪಷ್ಟ ಶಬ್ದಗಳಿಂದ ಹೇಳಿದರು: "ಲಂಕಾಶಾಯರಿನ ಚಳವಳದವರು ತಮ್ಮ ಸ್ವಾರ್ಥ ಮೂಲಕ ಹಟದಲ್ಲಿ ಯಶಸ್ವಿಗಳಾದರೆ, ಅವರ ಹಟವು ಗೆದ್ದಿತೆಂದಾದರೆ ಹಿಂದುಸ್ಥಾನದಲ್ಲಿ ಒಂದು ವಿಲಕ್ಷಣವಾದ ಶೋಚನೀಯ ಪರಿಸ್ಥಿತಿಯುಂಟಾಗುವುದೆಂಬುದರಲ್ಲಿ ಏನೂ ಸಂಶಯವಿಲ್ಲ." [illegible] ಮಹಾರಾಜರ ಈ ಶಬ್ದಗಳು ಮಿ. ಎಸ್ಕ್ವಿಥ, ಚೆಂಬರಲೇನ ಮುಂತಾದವರ ಮನಸ್ಸಿನ ಮೇಲೆ ಪರಿಣಮಿಸಲೆಂದು ನಾವು ಮನಃಪೂರ್ವಕ ಕೋರುತ್ತೇವೆ.

೬. ಸಿಲೋನಿನೊಳಗಿನ ಕೈಗಾರಿಕೆಗಳಲ್ಲಿ ನವಜೀವನವು ಬರುವ ಹಾಗಿದೆಂದು ಅಲ್ಲಿಯ ಈ ವಿಷಯದ ವೃತ್ತಾಂತಗಳಿಂದ ತಿಳಿದುಬರುತ್ತದೆ. ಸಿಲೋನಿನಲ್ಲಿ ಮಗ್ಗ ಕಾರಖಾನೆಗಳು ಸ್ಥಾಪಿಸಲ್ಪಟ್ಟಿವೆ. ಅಲ್ಲಿಯವರು ಜಪಾನಿನಲ್ಲಿ ಹೋಗಿ ಚೀನಾದೇಶದಲ್ಲಿ ತಯಾರಾಗುವ ನಮೂನೆಯ ಬರಣಿಗಳನ್ನು ಮಾಡಲು ಕಲಿತು ಬಂದಿರುವರು. ಇನ್ನೊಬ್ಬನು ಕಾಗದ ತಯಾರಿಸುವುದನ್ನು ಜಪಾನಿನಲ್ಲಿ ಕಲಿತು ಬಂದಿದ್ದಾನೆ. ಕಾಗದ ಕೈಗಾರಿಕೆಯ ಒಂದು ಕಾರಖಾನೆಯು ಬೇಗನೆ ಏರ್ಪಡಿಸುವುದರಲ್ಲಿದೆ. ಈ ವಿಷಯದಲ್ಲಿ ಮಿ. ಸೋಮರತ್ನ ಎಂಬ ಒಬ್ಬ ಸಿಲೋನಿನ ಗೃಹಸ್ಥರು ಒಂದು ಪತ್ರದ ಬಾತಮಿದಾರನೊಟ್ಟಿಗೆ ನಡೆದ ಸಂಭಾಷಣದಲ್ಲಿ ಕೆಲವು ಮಾಹಿತಿಗಳನ್ನು ಕೊಟ್ಟಿರುವರು. "ಕಾಗದವನ್ನು ತಯಾರಿಸಲು ಬೇಕಾಗಿರುವ ಸಾಹಿತ್ಯಗಳು ಸಿಲೋನಿನಲ್ಲಿ ವಿಪುಲವಾಗಿವೆ. [illegible] ಹಳೆ ಕಾಗದ, ಹಳೆಯ ಸೆಣಬಿನ ಹಗ್ಗ, ಹತ್ತಿ, [illegible] ಕಬ್ಬಿನ ಸಿಪ್ಪೆ, ಮೊದಲಾದ ವಸ್ತುಗಳಿಂದ [illegible] ಕಾಗದವನ್ನು ತಯಾರಿಸಬಹುದು. [illegible] ಕಬ್ಬಿಗ, ಕಬ್ಬಿನ ಸಿಪ್ಪೆ, ನಾರು, ಮೊದಲಾದವು ಸಿಲೋನಿನಲ್ಲಿ ಹೇರಳವಿವೆ. ಕಾಗದವನ್ನು ತಯಾರಿಸುವುದರಲ್ಲಿ ಇವುಗಳನ್ನು ಪರೀಕ್ಷಿಸಲಾಗಿ ಅದಕ್ಕೆ ಉಪಯುಕ್ತವಾದ ಬಹು ಭಾಗವು ಇವುಗಳಲ್ಲಿದ್ದುದು ಕಂಡುಬಂದಿದೆ. ಸಾಧಾರಣ ಒಂದು ಲಕ್ಷ ರೂಪಾಯಿಯ ಬಂಡವಾಳದಿಂದ ಇಂಥ ಕಾರಖಾನೆಯನ್ನು ಸುಲಭವಾಗಿ ಹೂಡಿಸ ಬಹುದು. ಮತ್ತು ಕೊಂಚ ಪರಿಶ್ರಮ ಪೂರ್ವಕ ಕಾರಖಾನೆಯನ್ನು ನಡಿಸಿದರೆ. ಆದ್ದರಿಂದ ನಿಜವಾಗಿ ಲಾಭವುಂಟಾದೀತು." ಮಿ. ಸೋಮರತ್ನರ ಈ ಅಭಿಪ್ರಾಯವನ್ನು ಕೇಳುವಾಗ ನಮ್ಮ ಹಿಂದುಸ್ಥಾನದಲ್ಲಿಯೂ ಇಂಥ ಕಾರಖಾನೆಗಳನ್ನು ಹೂಡಿಸ ಬಹುದಲ್ಲವೆ? ಈ ಪ್ರಶ್ನೆಯು ಬರುತ್ತದೆ. ತಜ್ಞರು ಹೇಳುವಂತೆ ಸಿಲೋನ ಮತ್ತು ಹಿಂದುಸ್ಥಾನ ಈ ಎರಡು ದೇಶಗಳ ಪರಿಸ್ಥಿತಿಯೂ ಸಾಧಾರಣ ಒಂದೇ ಮಾದರಿಯದಿರುವ ಕಾರಣ ಅಲ್ಲಿ ಸುಲಭ ಸಾಧ್ಯವಾಗುವುದು ಇಲ್ಲಿಯೂ ಆಗಲಾರದೆ? ಜಪಾನಿನಲ್ಲಿ ಹೋಗಿ ಬೇಕಾದ ಮಾಹಿತಿ, ಅನುಭವ, ಶಿಕ್ಷಣ ಇವುಗಳನ್ನು ಪಡೆದು ಬಂದರೆ ಇಲ್ಲಿಯೆ ಮೇಲಿನಂಥ ಎಷ್ಟೋ ಕಾರಖಾನೆಗಳನ್ನು ಚಿಕ್ಕ ಚಿಕ್ಕ ಪ್ರಮಾಣದಿಂದ ಹೂಡಿಸ ಬಹುದು. ಕಾರಖಾನೆಗೆ ಅವಶ್ಯಕವಾದ ಯಂತ್ರ ಸಾಮಗ್ರಿಗಳನ್ನು ಜಪಾನಿನಿಂದಲೆ ಕೊಂಡುಕೊಳ್ಳಬಹುದು. ಆದರೆ ಇಂಥ ಸಂಗತಿಗಳ ಕಡೆಗೆ ಯಾರು ಮನಸ್ಸು ಕೊಡುವರು? ಸರಕಾರಕ್ಕೆ ಎಲ್ಲ ಸುಧಾರಣೆಗಳು ಬೇಕು. ಆದರೆ ಪುರಸತ್ತು, ದ್ರವ್ಯ, ಇವುಗಳ ಅನುಕೂಲತೆ ಇಲ್ಲದುದರಿಂದ ಈ ವಿಷಯದಲ್ಲಿ ಸರಕಾರ ಕೈಗಾರಿಕೆಯು ಬೇಗನೆ ನಡೆಯುವುದಿಲ್ಲ! ಜನರಿಗಂತು ಇಂಥ ಸಂಗತಿಗಳಲ್ಲಿ ವಿಶೇಷವೇನೂ ಕಾಣದು! ಅವರಿಗೆ ಮೋಟಾರ ಕಂಪೆನಿಯಂಥ ಬೇರೆ ವ್ಯವಸಾಯಗಳಿವೆ!!

೭. ನಮ್ಮ ಮಂಗಳೂರ ಶಹರದ ಆರೋಗ್ಯ ಮತ್ತು ಪ್ಲೇಗ ರೋಗದ ವಿಷಯದಲ್ಲಿ ನಾವು ಕಳೆದ ಸಂಚಿಕೆಯಲ್ಲಿ ಕೆಲವು ವಿಚಾರಗಳನ್ನು ವಿಶದವಾಗಿ ವ್ಯಕ್ತಗೊಳಿಸಿ ಕೆಲವು ಸೂಚನೆಗಳನ್ನು ಸಹ ಕೊಟ್ಟಿರುವೆವು. ನಗರದ ಆರೋಗ್ಯವು ನಿಜವಾಗಿ ಮುನ್ಸಿಪಾಲಿಟಿಯ ಮೇಲೆ ಹೊಂದಿರುತ್ತದೆ. ಜನವಸ್ತಿಯು ಹೆಚ್ಚಾಗಿ ಅವಲಂಬಿಸಿರುವ ಗಲ್ಲಿಗಳನ್ನು ತೆಗೆದು ಹಾಕಿ ನಗರದ ಆರೋಗ್ಯವನ್ನು ಕಾಪಾಡುವುದಕ್ಕಾಗಿಯೆ ಮುನ್ಸಿಪಾಲಿಟಿಯು ಅಸ್ತಿತ್ವದಲ್ಲಿ ಬಂದಿದೆ. ಇದ ತತ್ವವು ಮೊನ್ನೆ ಮದ್ರಾಸಿನಲ್ಲಿ ಜರಗಿದ ಮುನ್ಸಿಪಾಲಿಟಿಯ ಕೊನ್ಫರೆನ್ಸಿನಲ್ಲೂ ಅನುಮೋದಿಸಲ್ಪಟ್ಟಿದೆ. ಹೀಗಿರುವಾಗ ಮಾರ್ಗ ಬೀದಿಗಳಲ್ಲಿ ಕೊಳಕು, ದುರ್ಗಂಧ, ಬಿದ್ದುಹೋದ, ಅಲ್ಲಲ್ಲಿ ನಾರುತ್ತ ಬಿದ್ದಿರುವ ನಾಶಿಸ ಪದಾರ್ಥಗಳಿಂದ ಕಾಲರಾ, ನೂಹಿತಜ್ವರ, ಪ್ಲೇಗು, ದೇವಿ ಮುಂತಾದ ಸಾಂಕ್ರಾಮಿಕ ಮತ್ತು ಸ್ಪರ್ಶಿಕ ರೋಗಗಳು ಹಬ್ಬದಂತೆ ವ್ಯವಸ್ಥೆ ಸನ್ನಿಧ ಇದ್ದರೆ—ಈ ಎಲ್ಲ ಸಂಗತಿಗಳಿಗೆ ಮುನ್ಸಿಪಾಲಿಟಿಯ ಮುಖ್ಯಾಧಿಕಾರಿಗಳೆ ಜವಾಬುದಾರರಾಗುವರು. ಮು. ಅಧಿಕಾರಿಗಳು ಜವಾಬುದಾರರು ಈ ಮಾತಿನ ಅರ್ಥವು ಅವರೆ ಬೀದಿಬೀದಿಗಳಲ್ಲಿ ಹೋಗಿ ಕೊಳಕುಗಳನ್ನೆಲ್ಲ ತೆಗೆಯಬೇಕೆಂದಲ್ಲ. "ಶಿಷ್ಯಾಪರಾಧೇ ಗುರೋರ್ದಂಡಃ" ಶಿಷ್ಯನ ಅಪರಾಧಕ್ಕೆ ಗುರುವಿಗೆ ಪ್ರಾಯಶ್ಚಿತ್ತ ಎಂಬ ಮಾತಿನಂತೆ ಆಯಾ ಕೆಲಸಗಳ ಮೇಲೆ ನೇಮಿಸಲ್ಪಟ್ಟ ಕೆಳ ನೌಕರರು ತಮ್ಮ ತಮ್ಮ ಚಾಕರಿಯನ್ನು ಸರಿಯಾಗಿ ಮಾಡುತ್ತಿದ್ದೂ ಇಲ್ಲವೂ ಎಂಬುದನ್ನು ಮೇಲಿನ ಅಧಿಕಾರಿಗಳು ಯಾವಾಗಲೂ ತತ್ಪರತೆಯಿಂದ ನೋಡಿಕೊಂಡಿರಬೇಕು, ಹಾಗೆ ನೋಡುವುದರಲ್ಲಿ ಕೊಂಚ ಸಡಿಲುತನವನ್ನು ತೋರಿಸಿದರೆ ಆ ದೋಷವು ಮೇಲಿನ ಅಧಿಕಾರಿಗಳಿಗೆ ತಟ್ಟುತ್ತದೆ. ಆದರೆ ನಾವು ಕೇಳಿದ ಮೇರೆಗೆ ತಿಳಿಸಲು ಸಂತೋಷಪಡುತ್ತೇವೆ. ಎಂದರೆ ಈ ವಾರದಲ್ಲಿ ಆರೋಗ್ಯ ಇಲಾಖೆಯ ಮೇಲು-ಕೆಳಗಿನ ಅಧಿಕಾರಿಗಳು ಪ್ಲೇಗ ಪೀಡಿತವಾದ ಕುದ್ರೋಳಿ ಮುಂತಾದ ಭಾಗವನ್ನು ಸ್ವಂತಃ ಸಂದರ್ಶಿಸಿ ಅವಶ್ಯಕವಾದ ಉಪಾಯಗಳನ್ನು ನಡಿಸಿದ್ದಾರಂತೆ. ಈ ವರ್ತಮಾನವು ನಿಜವಿದ್ದುದಾದರೆ ಅದು ಅಭಿನಂದನೀಯವೆ. ಅಂತೂ ಆರೋಗ್ಯ ಖಾತೆಯ ದಕ್ಷತೆಯಿಂದ ಈ ಪ್ಲೇಗಿನ ಹಾವಳಿಯು ಬೇಗನೆ ನಿಂತು ನಾಳೆ ಹೊಸ ಸಂವತ್ಸರದಿಂದಲಾದರೂ ನಮ್ಮ ಪಟ್ಟಣಕ್ಕೆ ಶ್ರೇಯಸ್ಸುಂಟಾಗಲೆಂದು ನಾವು ದೀನಭಾವದಿಂದ ಪ್ರಾರ್ಥಿಸುವೆವು.

ಸ್ಥಳಿಕ — ಮಂಗಳೂರು.

ಈ ತಿಂಗಳ ಡಿಸ್ಟ್ರಿಕ್ಟ್ ಬೋರ್ಡ ಸಭೆಯು ಇದೇ ತಾ. ೧೫ರಂದು ಉಪ್ಪಿಯಲ್ಲಿ ಬೆಲ್ಲಾ ಕಲಕ್ಟರ ದೊರೆಗಳ ಅಧ್ಯಕ್ಷತೆಯಲ್ಲಿ ಕೂಡಿ ಬಂದಿರುತ್ತದೆ. ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗ್ ಉಪ್ಪಿ ಮೊಕ್ಕಾಂನಲ್ಲಿ ಕೂಡಿದ್ದು ಇದೇ ಮೊದಲನೇ ಸಾರಿ. ಸಭೆಯಲ್ಲಿ ೧೯೧೭-೧೮ನೇ ಇಸವಿಯ ಡಿಸ್ಟ್ರಿಕ್ಟ್ ಬೋರ್ಡಿನ ಕಾಮಗಾರಿಗಳ ಅಂದಾಜು ಪಟ್ಟಿಯು ಇದೋ ಈಗ ಸಮ್ಮತವನ್ನು ಹೊಂದಿರುತ್ತದೆ. ಜಿಲ್ಲೆಯ ರಾಜರಸ್ತೆಗಳ ದುರುಸ್ತಿ ಬಗ್ಗೆ ಕೆಲವು ಸಾವಿರ ರೂಪಾಯಿಗಳು ಈ ಸಭೆಯಲ್ಲಿ ಸೆಂಕ್ಷನ್ ಆಗಿರುತ್ತದೆ. ಕಾರ್ಕಳದಲ್ಲಿ ಮಿ। ಹಸನ್ ಸಾಹೇಬರ ಮನೆಯಿಂದ ಮಿ। ರಾ। ಚೋಳ್ಪಾಡಿ ಶ್ರೀನಿವಾಸ ಕಾಮತರ ಮನೆಯವರೆಗೆ ಒಂದು ದಾರಿಯನ್ನು ತೆರೆಯುವರೆ ರೂ. ೨೦೦೦ ಸೆಂಕ್ಷನ್ ಆಗಿರುತ್ತದೆ. ಮಂಗಳೂರು—ಸಂಪಾಜೆ, ಮಂಗಳೂರು—ಸೋಮೇಶ್ವರ, ಕಾಸರಗೋಡು—ಜಾಲಸೂರು ಮೊದಲಾದ ಡಿಸ್ಟ್ರಿಕ್ಟ್ ಬೋರ್ಡಿನ ರಸ್ತೆಗಳನ್ನು ದುರುಸ್ತಿ ಮಾಡುವರೆ ಒಟ್ಟಿಗೆ ರೂ [illegible] ಸೆಂಕ್ಷನ್ ಆಗಿರುತ್ತದೆ. ಉಪ್ಪಿನಂಗಡಿ ತಾಲೂಕಿನಲ್ಲಿ ಪೆರಿಯಶಾಂತಿಯಿಂದ ಮರ್ದಾಳಿಗೆ ರಸ್ತೆಯನ್ನು ತೆರೆಯುವರೆ ರೂ. ೫೦೦೦ ಸೆಂಕ್ಷನ್ ಆಗಿರುತ್ತದೆ.

ಬೋಳಾರ ಮಾರಿಗುಡಿಯ ಮೊಕದಮೆಯಲ್ಲಿ ಸಾಕ್ಷಿ ಹೇಳಿದ ಪರಮೇಶ್ವರ ನ್ಯಾಕನೆಂಬವನು ೨-೩ ದಿವಸಗಳಿಂದ ಕಾಣೆಯಾಗಿರುವನೆಂಬ ವದಂತಿ ಇದೆ.

ಇದೇ ತಾ. ೧೫ನೇ ರಾತ್ರಿ ತಧಬೀದಿಯ ಮ। ರಾ। ವಾಮನ ಕಿಣಿಯವರ ಮನೆಯ ದೇವರ ಕೋಣೆಯಿಂದ ೪೦ ಪವನುಗಳೂ, ಇತರ ದೇವರ ಚಿನ್ನಾಭರಣಗಳೂ ಒಟ್ಟಿಗೆ ಸುಮಾರು ೬೦೦ ರೂ. ಕ್ರಯ ಬಾಳುವ ಸೊತ್ತನ್ನು ಯಾರೋ ಕಳವು ಮಾಡಿಯವರೆಂತ ತಿಳಿಯುತ್ತೇವೆ.

ಬಿಜೈಯಲ್ಲಿ ಮಾರ್ಟಿನ್ ಡೇಗೋ ಮತ್ತು ಬಿಲ್ಲ ಗುರುವಪ್ಪ ಎಂಬವರಿಬ್ಬರು ಬ್ಯಾರಿಗೊಬ್ಬರಿಗೆ ಕತ್ತಿಯಿಂದ ಹೊಡೆಕೊಂಡು, ಇಬ್ಬರೂ ಆಸ್ಪತ್ರೆಯಲ್ಲಿ ಮಲಗಿದ್ದಾರೆ.

ಉಳ್ಳಾಲದ ಮ। ರಾ। ಯು. [illegible] ಸಾಹೇಬರು [illegible]

[illegible] ಮಾಡಿದ್ದರಿಂದ [illegible] ಲಕ್ಕೆ ಹೋಗಿ ದರ್ಬಾರು ನಡಿಸಿ ಮ। ರಾ। ಇಸ್ಮಾಯಿಲ್ ಸಾಹೇಬರು ಒಂದು ಬೆಳ್ಳಿಯ ವಾಚನ್ನು ಬಹುಮಾನಿಸಿರುವರು ಎಂತ ತಿಳಿಯುತ್ತದೆ.

ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾದ ಮ। ರಾ। ರಾವ್ ಬಹದ್ದೂರ ಸಿ. ಕೃಷ್ಣಸ್ವಾಮಿರಾಯರವರು ಮುನ್ಸಿಪ್ ಕೋರ್ಟುಗಳ ಸಂದರ್ಶನ ಬಗ್ಗೆ ಪುತ್ತೂರಿಗೆ ಹೋಗಿರುತ್ತಾರೆ.

ಕಾಸರಗೋಡಿನಲ್ಲಿ ವಕೀಲರಾದ ಮ। ರಾ। ಪಿ. ನಾರಾಯಣ ಮೆನೋನ ಬಿ. ಎ. ಬಿ. ಎಲ್‌ರವರು ಬಳ್ಳಾರಿಯ ಡಿಸ್ಟ್ರಿಕ್ಟ್ ಮುನ್ಸೀಫರಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರು ಕೆಲವು ಕಾಲ ಮಂಗಳೂರಲ್ಲಿಯೂ ಆಕ್ಟಿಂಗ್ ಮುನ್ಸೀಫ ಕೆಲಸ ನೋಡಿದ್ದರು.

ಡ್ಯೂಪಿಟಿ ಕಲೆಕ್ಟರರಾಗಿರುವ ಮೆ। ಕುಂಞರಾಯನ್ ಸಾಹೇಬ ಬಹದ್ದೂರಂಗೆ ಒಂದು ವರ್ಷದ ರಜೆ ಕೊಡೋಣಾಗಿದೆ.

ಮದ್ರಾಸಿನಲ್ಲಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಾಗಿರುವ ಮ। ರಾ। ಶ್ರೀ ನಾರಾಯಣ ಮೆನೋನರವರು ದಕ್ಷಿಣ ಕನ್ನಡ ಜಿಲ್ಲೆಯ ಜನರಲ್ ಡ್ಯೂಟಿ ಡ್ಯೂಪಿಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಪೆಂಟ್‌ಲೆಂಡ್ ಪೇಟೆಯ ರಸ್ತೆಗಳ ಸಮೀಪ ಕುಡಿಕರ ಬಾಧೆಯು ವಿಶೇಷವಾಗಿ ಬಂದಿದೆ. ಪಟ್ಟಣದಿಂದ ದೂರವಿರುವ ಇಂಥಾ ಸ್ಥಳಗಳಲ್ಲಿ ಕುಡಿಕರನ್ನು ಆಕ್ಷೇಪದಲ್ಲಿಡುವ ಪೋಲೀಸಿನವರ ಸಂಚಾರವು ಕಡಮೆಯಾಗಿರುವದರಿಂದ ಉರ್ವದ ಮೈದಾನಿನಲ್ಲಿ ಸಹ ರಾತ್ರೆಕಾಲ ಈ ಕುಡಿಕರು ತಂಡತಂಡಗಳಲ್ಲಿ ಕೂಡಿಕೊಂಡು ಅಲ್ಲಿ ಸುರಾಪಾನವನ್ನು ಮಾಡುತ್ತಿರುವರು. ಇಷ್ಟೇ ಅಲ್ಲ. ರಾತ್ರೆಕಾಲ ಒಬ್ಬಂಟಿಗರಾಗಿ ಯಾರಾದರೂ ಹೋಗುತ್ತಿರುವದನ್ನು ನೋಡಿಕೊಂಡು ಸಂದರ್ಭಾನುಸಾರ ದಾರಿಗರಿಂದ ಏನಾದರೂ ಸುಲಕೊಳ್ಳಲು ಪ್ರಯತ್ನಿಸುತ್ತಿರುವರು. ಕೆಲವು ಸರ್ತಿ ಈ ಕುಡಿಕರ ಸಹಾಯದಿಂದ ಪೋಕ್ರಿಗಳು ತಂತಮ್ಮ ದ್ವೇಷಗಳನ್ನು ಇಂಥಾ ರಾತ್ರೆಕಾಲಗಳಲ್ಲಿ ತೀರಿಸಿ ಬಿಡುವ ಯತ್ನಗಳನ್ನು ಸಹ ನಡಿಸುವರೆ ಅನುಕೂಲವಾಗಿರುತ್ತದೆ. ಪೆಂಟ್‌ಲೆಂಡ ಪೇಟೆಯ ಸಮೀಪ ಒಂದು ಔಟ್ ಪೋಸ್ಟ್ ಸ್ಟೇಶನು ಇದೆ. ಆದರೆ ಇಂಥಾ ಸ್ಟೇಶನು ಇದ್ದದ್ದು ಈ ಕುಡಿಕರಿಗೆ ಲಕ್ಷಕ್ಕೆ ಬಂದುದ್ದು ಇಲ್ಲ. ಅಥವಾ ಸ್ಟೇಶನ್ ಅಧಿಕಾರಿಗಳ ಲಕ್ಷಕ್ಕೆ ಈ ಕುತಿಕರೂ ಬಂದದಿಲ್ಲ ವೆಂತಲೂ ಹೇಳಬಹುದು.

ಮಂಗಳೂರು ಹವ್ಯಕ ದ್ವಿಜಪಿಡರ ವಿದ್ಯಾವರ್ಧಕ ಸಭೆಯ ಕೋಶಾಧಿಕಾರಿಯಾಗಿದ್ದ ಮ। ರಾ। ಮಾಣಿಪ್ಪಾಡಿ ಭೀಮಭಟ್ಟರ ಮಗ ಸುಬ್ಬಣ್ಣಭಟ್ಟರು ಇದೇ ಕಳೆದ ಫೆಬ್ರುವರಿ ತಾ. ೨೮ರಲ್ಲಿ ಅಕಾಲ ಮರಣವನ್ನು ಹೊಂದಿದ್ದಕ್ಕಾಗಿ ಇವರ ಮಾತಾಪಿತೃಗಳೊಡನೆ ಸಹಭಾಗಿಯಾಗಿ ವಿದ್ಯಾವರ್ಧಕ ಸಭೆಯು ತುಂಬಾ ವಿಷಾದಪಡುತ್ತದೆ. ಇವರು ಈ ಸಭೆಯು ಮೊದಲುಗೊಂಡಂದಿನಿಂದ ಸಭಾ ಪರವಾಗಿ ತಮ್ಮ ಶಕ್ತಿ ಮೀರಿ ಕೆಲಸಮಾಡಿ, ಇತರರನ್ನು ಕೆಲಸಕ್ಕೆ ಪ್ರೋತ್ಸಾಹಿಸಿ, ಸಭಾ ಮೆಂಬರುಗಳಿಗೆಲ್ಲಾ ಅತಿಯಾಗಿ ಪ್ರೀತಿಗೆ ಪಾತ್ರರಾಗಿದ್ದರು. ಇವರ ಸ್ಮಾರಕಾರ್ಥವಾಗಿ ಸಭೆಯ ಪೋಷಕರೂ ಮೆಂಬರರೂ ಸೇರಿ ಈ ವರುಷದಲ್ಲಿ ಇವರ ಹೆಸರಿನಿಂದ ಯೋಗ್ಯನಾದ ಒಬ್ಬ ವಿದ್ಯಾರ್ಥಿಗೆ ೧೨ ರೂಪಾಯಿ ವಿದ್ಯಾರ್ಥಿವೇತನ ಕೊಡುವುದಾಗಿ ನಿಶ್ಚೈಸಿರುತ್ತದೆ ಎಂತ ವಿದ್ಯಾವರ್ಧಕ ಸಭೆಯ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೧೨ ಪ್ಲೇಗು ಮರಣಗಳಿದ್ದವು. ಗೋಳಿಕಟ್ಟೆ ವಾರ್ಡ ೧; ಕೊಡಿಯಾಲಬೈಲು ವಾರ್ಡ ೬; ಕೋಟೆ ವಾರ್ಡ ೪; ಮಾರ್ಕೆಟು ವಾರ್ಡ ೧.

ದಿವ್ಯ ಮಹೌಷಧಿಗಳ ಶೋಧ.

ವೈದ್ಯರಾಜ ವಿಟ್ಠಲ ಶಾಸ್ತ್ರೀ ಪರಾಂಜಪೆ ಎಂಬವರು ಕೇಸರೀ ಪತ್ರದಲ್ಲಿ ಮೇಲಿನ ವಿಷಯದ ಕುರಿತು ಒಂದು ಚಿಕ್ಕ ಪತ್ರವನ್ನು ಪ್ರಕಟಿಸಿರುವರು. ಅದನ್ನು ಕನ್ನಡದಲ್ಲಿ ಪ್ರವರ್ತಿಸಿ ನಮ್ಮ ವಾಚಕರಿಗಾಗಿ ಕೆಳಗೆ ಕೊಡುತ್ತೇವೆ.

"ನಾನು ಸಧ್ಯ ಹಿಮಾಲಯದಲ್ಲಿ 'ವನಸ್ಪತಿಗಳನ್ನು ನೋಡುವುದಕ್ಕಾಗಿ' ಬಂದಿರುವೆನು. ನಮ್ಮ ಆಯುರ್ವೇದದಲ್ಲಿ ಎಷ್ಟೋ ದಿವ್ಯ ವನಸ್ಪತಿಗಳ ವರ್ಣನವಿದೆ, ಅವುಗಳ ಮಾಹಿತಿಯು—ಗುರುತು—ಇಷ್ಟರ ವರೆಗೆ ಆಗಲಿ ಇಲ್ಲ. ಗ್ರಂಥದಲ್ಲಿ ಉಲ್ಲೇಖಿಸಲ್ಪಡದೆ ಇದ್ದ ಎಷ್ಟೋ ದಿವ್ಯ ವನಸ್ಪತಿಗಳು ಇಲ್ಲಿ ಕಾಣುತ್ತವೆ. ಬೆಳಕಾಗಿ ಹೊಳೆಯುತ್ತಿರುವ ವನಸ್ಪತಿ, (ಕ್ಲೋರೋ ಫಾರ್ಮಿನಂತೆ) ಸಂವೇದನ ಶಕ್ತಿಯನ್ನು ಅಡಗಿಸಿ ಬಿಡುವ ವನಸ್ಪತಿ, ಹಾಲನ್ನು ಹುಟ್ಟಿಸುವ ವನಸ್ಪತಿ, ಚೇಳ ಕಡಿತದಂತೆ ವೇದನೆಯನ್ನು ಹುಟ್ಟಿಸುವ ವನಸ್ಪತಿ, ಯಾವುದನ್ನು ಸೇವಿಸುವುದರಿಂದ ಬಾಯಾರಿಕೆಯು ಆಗದೊ ಅಂಥ ವನಸ್ಪತಿ, ಎರಡು ಕಲ್ಲುಗಳ ಮಧ್ಯದಲ್ಲಿ ಇಟ್ಟರೆ ಆ ಕಲ್ಲುಗಳು ಒಂದಕ್ಕೊಂದು ತೊಡೆದುಕೊಳ್ಳಲು ಕಾರಣವಾಗುವ ವನಸ್ಪತಿ ಇಂಥ ನಾನಾ ಬಗೆಯ ವನಸ್ಪತಿಗಳನ್ನು ಈ ಪ್ರಾಂತದಲ್ಲಿ ನೋಡಬಹುದಾಗಿದೆ. ಅಲ್ಲದೆ ಬೇರೆ ಔಷಧಿಗಳು ಕೂಡ ವಿಪುಲವಾಗಿವೆ. ಹರಿದ್ವಾರದ ಕಡೆಗೆ [illegible] ಎಂಬದೊಂದು ಕಾಡಿದೆ. ಅಲ್ಲಿ ಶಿಲೋದಕವಿದೆ. ಆ ನೀರಿನಲ್ಲಿ ಏನಾದರೂ ಬಿದ್ದರೆ ಅದು ಕಲ್ಲಾಗುವುದು. ಇರಲಿ. ಈ ಮಾಹಿತಿಯನ್ನು ಬರೆಯಲು ಕಾರಣವೇನೆಂದರೆ, ನಿಜವಾದ ವನಸ್ಪತಿಗಳಾಗುವವೆಂಬುದನ್ನು ತಿಳಿದುಕೊಳ್ಳಲು ಜನರು ತಮ್ಮ ಮನಸ್ಸನ್ನು ಕೊಡಬೇಕು. ವನಸ್ಪತಿಗಳ ಉದ್ಯಾನಕ್ಕಾಗಿ ಯಾವ ಯಾವ ವನಸ್ಪತಿಗಳು ಎಲ್ಲೆಲ್ಲಿ ದೊರೆಕುತ್ತವೆಂದು ತೋರಿಸ ಒಂದು ಪುಸ್ತಕವನ್ನು ಪ್ರಕಟಿಸಲು [illegible] ಗುಣಧರ್ಮಗಳನ್ನು ವಿವರಿಸಿ ಒಂದು ಸ್ವತಂತ್ರವಾದ ಪುಸ್ತಕವನ್ನು ಬರೆಯುವವನಿದ್ದೇನೆ, ನಿಜವಾದ ವನಸ್ಪತಿಗಳ ವಿಷಯವು ಕೆಲವರಿಗೇ ಗೊತ್ತಿರುವದು. ನಮ್ಮ ಪ್ರಾಂತದಲ್ಲಿ (ಮಹಾರಾಷ್ಟ್ರದಲ್ಲಿ) ಕಷಾಯದಲ್ಲಿ 'ದೇವದಾರ' ಎಂದು [illegible] ಬೇರೊಂದು ವನಸ್ಪತಿಯನ್ನು ಉಪಯೋಗಿಸುವರು. ಆದರೆ ಇಲ್ಲಿ 'ದೇವದಾರ'ವೆಂಬುವು ಪ್ರತ್ಯೇಕವೆ ಇದೆ. ಅದರ ಗುಣಧರ್ಮಗಳು ಗ್ರಂಥದಲ್ಲಿ [illegible] ಸಿದ್ಧಂತೆಯೆ ಇವೆ. [illegible] ಸಂಗತಿಗಳವೆ. [illegible] ಮತ್ತು ಆಯುರ್ವೇದದ ಹಿತಚಿಂತಕರು ಗ್ರಂಥದ [illegible] ಮತ್ತು ಗ್ರಂಥದಲ್ಲಿ ಇಷ್ಟು ಇಷ್ಟರವರೆಗೆ [illegible] ತಿಳಿದುಕೊಳ್ಳಬಹುದು. ಅದರ ಅವುಗಳ [illegible] ಯಿಂದ ಭಸ್ಮಗಳನ್ನು ತಯಾರಿಸುವ ಆಯಾ ವನಸ್ಪತಿ [illegible] ಔಷಧಿ ಇತ್ಯಾದಿ ಸಂಗತಿಗಳನ್ನು [illegible] ನನಗೆ ಇನ್ನು ನಾಲ್ಕು ತಿಂಗಳ ವರೆಗೆ ಇಲ್ಲಿ [illegible] ಮಾಡಿದೆ. ಮಳೆಗಾಲದಲ್ಲಿ ನಾನು ನನ್ನ [illegible] ಇಲ್ಲವೆ ಇತರ ವನಸ್ಪತಿಗಳ ಮಾಹಿತಿ [illegible]

[illegible]

ಈ ಯುದ್ಧಕಾಲದಲ್ಲಿ ಸರಕಾರದವರಿಗೆ ವಿಶೇಷ ಖರ್ಚು ಇರುವದರಿಂದ ಇಂಡಿಯಾ ಸರಕಾರದವರು ಸಿಮ್ಲಾಕ್ಕೆ ಹೋಗಿ ಉಳಕೊಳ್ಳುವ ಸುಮಾರು ೪ ಲಕ್ಷ ರೂಪಾಯಿಯನ್ನು ಉಳಿಸಬೇಕೆಂಬ ತಾತ್ಪರ್ಯದ ಮಸೂದೆಯನ್ನು ಮಾನ್ಯ ಶ್ರೀನಿವಾಸ ಶಾಸ್ತ್ರಿಯವರು ವರಿಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ತಂದಿದ್ದರು. [illegible] ಪ್ರಾತಿನಿಧಿಗಳ ಪೈಕಿ ಮಾನ್ಯ ದಾದಾಭಾಯವರೂ ಸರಕಾರದ ಕಡೆಯಿಂದ ಮಾನ್ಯ ಸರ್ ಕ್ರೆಡಾಕರವರೂ ಈ ಠರಾವನ್ನು ವಿರೋಧಿಸಿದ್ದರಿಂದ ಮಾನ್ಯ ಶಾಸ್ತ್ರಿಯವರು ಕೊನೆಗೆ ಈ ಠರಾವನ್ನು ಹಿಂತೆಗೆದರು.

ಬಂಗಾಳ ಗವರ್ನರರಾಗಿ ನೇಮಿಸಲ್ಪಟ್ಟ ರೊನಾಲ್ಡ್‌ಸೆ ಪ್ರಭುಗಳವರು ಇದೇ ತಾ. ೨೮ರಲ್ಲಿ ಹಿಂದೂಸ್ಥಾನಕ್ಕೆ ಬಂದು ತಲುಪುವರೆಂತ ತಿಳಿಯಬರುತ್ತದೆ.

ಕೃಷ್ಣಾನಗರದಲ್ಲಿ ಒಬ್ಬ ತಾಯಿಯು "ಗುರು"ವಿನ ಬೋಧನೆಯಿಂದ ತನ್ನ ಇಬ್ಬರು ಸಣ್ಣ ಮಕ್ಕಳನ್ನು ಕೊಂದು ಬೇಯಿಸಿದ ಮೊಕದ್ದಮೆಯಲ್ಲಿ ಜಡ್ಜರು ಮೃತ ಮಕ್ಕಳ ತಾಯಿಗೂ ಗುರುವಿಗೂ ಜೀವಾಂತ ಬಂಕೋಲಿ ಶಿಕ್ಷೆಯನ್ನು ವಿಧಿಸಿ ಮಕ್ಕಳ ಅಜ್ಜ ಮತ್ತು ಚಿಕ್ಕತಾಯಿಯನ್ನು ಖುಲಾಸುಪಡಿಸಿದರು.

ಪಂಜಾಬು ಸರಕಾರದವರು ತಿಲಕರವರಿಗೆ ಪಂಜಾಬಿಗೆ ಬರಕೂಡದೆಂಬ ನಿಷೇಧ ಆಜ್ಞೆಯನ್ನು ಕೊಟ್ಟಿದ್ದರಿಂದ ಲೋ। ತಿಲಕರವರು ಸರಕಾರದ ಈ ಆಜ್ಞೆಗೆ ತಕ್ಕ ಕಾರಣವನ್ನು ಕೊಡಬೇಕೆಂತ ತಂತೀ ಮೂಲಕ ಪಂಜಾಬು ಲೆಪ್ಟನೆಂಟ ಗವರ್ನರರನ್ನು ಕೇಳಿದ್ದರಷ್ಟೆ. ಲೆಪ್ಟನೆಂಟ ಗವರ್ನರರವರು ಪೂನೆಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಮೂಲಕ ತಿಲಕರವರಿಗೆ ಈಗ ತಾನೇ ಉತ್ತರಕೊಟ್ಟು, ಸರಕಾರದವರು ಆ ಆಜ್ಞೆಯನ್ನು ಕೊಡಲು ತಕ್ಕ ಆಧಾರಗಳಿರುವದರಿಂದ ತಿಲಕರ ವಿಜ್ಞಾಪನೆಯನ್ನು ಪೂರ್ತಿಸಲಿಕ್ಕಾಗುವದಿಲ್ಲವೆಂತ ತಿಳಿಯಪಡಿಸುತ್ತಾರೆ.

ನೆಮ್ಸ್ಫರಾರು ಪದ್ಧತಿಯ ಸಂಬಂಧದಲ್ಲಿ ವೈಸರಾಯ ಪ್ರಭುಪತ್ನಿಯವರಿಗೆ ಭೇಟಿಕೊಡುವ ಹಿಂದೀ ವಿದುಷಿಗಳ ಪ್ರತಿನಿಧಿ ಮಂಡಲಿಗೆ ಮುಂಬಾಯಿಯಿಂದ ಲೇಡಿ ಟಾಟ, ದಿಲ್ಷಾದ್ ಬೇಗಮ್, ಮಿಸೆಸ್ ಡಿ. ಎನ್. ಸಿರೂರ, ಮತ್ತು ಮಿಸೆಸ್ ಜಹಂಗೀರ್ ಪೆಟಿಟರವರೂ ಮದ್ರಾಸಿನಿಂದ ಮಿಸೆಸ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಮತ್ತು ಮಿಸೆಸ್ ಕೆ. ವಿ. ರಂಗಸ್ವಾಮಿ ಅಯ್ಯಂಗಾರರೂ, ಬಂಗಾಳದಿಂದ ಲೇಡಿ ಜೆ. ಸಿ. ಬೋಸರವರೂ, ಸೆಂಟ್ರಲ್ ಪ್ರಾವಿನ್ಸಿನಿಂದ ಮಿಸೆಸ್ ಸರೋಜಿನ ನ್ಯಾಯುಡುವರೂ, ಸಂಯುಕ್ತ ಸಂಸ್ಥಾನದಿಂದ ಮಿಸೆಸ್ ತಾಮಲಾಲ್ ನೆಹರುರವರೂ ನೇಮಿಸಲ್ಪಟ್ಟಿರುತ್ತಾರೆ. ಇವರು ಇದೇ ತಾ. ೨೮ರಲ್ಲಿ ವೈಸರಾಯ ಪ್ರಭುಪತ್ನಿಯವರಿಗೆ ಭೇಟಿಕೊಡುವರು.

ಇಂಡಿಯಾ ಕೌನ್ಸಿಲಿನ ಮೆಂಬರರಾಗಿರುವ ಸರ್. ಕೃಷ್ಣಗುಪ್ತರವರು ತಾ. ೧೬ರಲ್ಲಿ ಅಲ್ಲಹಾಬಾದಿಗೆ ಬಂದು ಬಹುಮಾನಪಟ್ಟ ಪಂಡಿತ ಮೋತೀಲಾಲ ನೆಹರುರವರ ಅತಿಥಿಗಳಾಗಿದ್ದರು. ಅಲ್ಲಿಂದ ಮರುದಿನ ಡಿಲ್ಲಿಗೆ ಹೋಗಿ ಸರ್ ಶಂಕರನ್ ನಾಯರರ ಅತಿಥಿಯಾಗಿದ್ದರು.

ದಕ್ಷಿಣ ಹಿಂದೂಸ್ಥಾನ.

ಇದೇ ತಾ. ೧೩ರಲ್ಲಿ ಮದ್ರಾಸಿನಲ್ಲಿ ಕೂಡಿ ಬಂದ ನ್ಯಾಯವಿಧಾಯಕ ಸಭೆಯಲ್ಲಿ ಮದ್ರಾಸ್ ಕೌನ್ಸಿಲಿನ ಕೋಶಾಧ್ಯಕ್ಷರಾದ ಬಹುಮಾನಪಟ್ಟ ಸರ್ ಎ. ಕಾರ್ಡ್ಯೂರವರು ೧೯೧೮-೧೯ನೇ ಇಸವಿಯ ಸಂಸ್ಥಾನದ ಆದಾಯವೆಚ್ಚಗಳ ಪರಿಷ್ಕರಿಸಿದ ಪಟ್ಟಿಯನ್ನು ಸಭೆಯಮುಂದೆ ತಂದಿರುತ್ತಾರೆ. ಈ ಪಟ್ಟಿಯ ಪ್ರಕಾರ ೧೯೧೮-೧೯ನೇ ಇಸವಿಗಿಂತಲೂ ಬರುವ ವರ್ಷದಲ್ಲಿ ೯೬.೩೧ ಲಕ್ಷ ರೂಪಾಯಿಗಳ ಹೆಚ್ಚಿಗೆ ಉಳಿತಾಯವು ಅಂದರೆ ೧೧೮೦.೮೫ ಲಕ್ಷ ರೂಪಾಯಿಗಳ ಉಳಿತಾಯವು ಉಳಿಯುವದು ಎಂತ ಅಂದಾಜಾಗಿಯದೆ. ಈ ವರ್ಷ ಮುನಾಫೆಯು ೮೦೭.೫೯ ಲಕ್ಷ ರೂಪಾಯಿ ಖರ್ಚು ೭೯೪.೬೧ ಲಕ್ಷ ರೂಪಾಯಿ. ೧೨.೯೮ ಲಕ್ಷ ರೂಪಾಯಿಗಳ ಉಳಿತಾಯವು ಉಳಿದು ೧೯೧೭-೧೮ನೇ ವರ್ಷಾಂತ್ಯಕ್ಕೆ ೧೩೩.೮೩ ಲಕ್ಷ ರೂಪಾಯಿಗಳ ಶಿಲುಕು ನಿಧಿ ಉಳಿಯುವದು ಎಂತ ಅಂದಾಜಾಗಿಯದೆ. ವಿಶೇಷ ಸಂದರ್ಭದಲ್ಲಾಗಲೀ ಇಲ್ಲವೆ ಆಕಸ್ಮಿತ ಖರ್ಚಿದ್ದಾಗಲೀ ಸಂದರ್ಭದಲ್ಲಲ್ಲದೆ ಇತರ ಯಾವ ಕಾರ್ಯಗಳ ಬಗ್ಗೆಯೂ ಈ ಶಿಲ್ಲಕು ಹಣವನ್ನು ಉಪಯೋಗಿಸಬಾರದೆಂತ ಸ್ಟೇಟ ಸೆಕ್ರೆಟರಿಯವರ ಕಟ್ಟಾಜ್ಞೆಯಾಗಿದೆ. ಈ ಕಾರಣದಿಂದ ಈ ವರ್ಷ ಶಿಲ್ಲಕು ಧಾರಾಳ ಉಳಿಯಲು ಕಾರಣವಾಯಿತು. ಯುದ್ಧ ಬಗ್ಗೆ ಸಾಮ್ರಾಜ್ಯಕ್ಕೆ ಸಹಾಯ್ಯಮಾಡುವ ಸಂದರ್ಭಗಳು ಇಂಡಿಯಾ ಸರಕಾರದವರಿಗೆ ಬಂದೊದಗಿದರೆ ಒಂದುವೇಳೆ ಈ ಶಿಲ್ಲಕು ನಿಧಿಯನ್ನು ಕೊಡಬಹುದೆಂತ ಕೋಶಾಧ್ಯಕ್ಷರು ತಿಳಿಯ ಹೇಳುತ್ತಾರೆ. ಈ ಪರಿಷ್ಕರಿಸಿದ ಅಂದಾಜು ಪಟ್ಟಿಯಲ್ಲಿ ಸರಕಾರದವರಿಗೆ ೨೦ ಲಕ್ಷ ರೂಪಾಯಿಯು ಹೆಚ್ಚಿಗೆ ಹುಟ್ಟಿ ಸಿಗುವಂತೆ ತೋರಿ ಬಂದಿರುತ್ತದೆ. ಎಕ್ಸಾಯಿಜ್ ಎಂಬ ಸುಂಕದ ಮೂಲಕ ೬.೮೩ ಲಕ್ಷ, ಇನ್‌ಕಮ್ ಟೇಕ್ಸ್ ಮೂಲಕ ೩.೮೫ ಲಕ್ಷ ಮತ್ತು ಫೋರೆಸ್ಟುಗಳಿಂದ ೫.೫೦ ಲಕ್ಷ ರೂಪಾಯಿಗಳ ಹೆಚ್ಚಿಗೆ ಹುಟ್ಟು ಆಗುವದೆಂತ ಅಂದಾಜಾಗಿಯದೆ. ಪರಿಷ್ಕರಿಸಿದ ಪಟ್ಟಿಯಲ್ಲಿ ವೆಚ್ಚವು ೮೦೧.೬೫ ಲಕ್ಷಕ್ಕೆ ತಗ್ಗಿಸಲ್ಪಟ್ಟಿದೆ. ಶಿಕ್ಷಣ ಬಗ್ಗೆ ರೂ. ೩ ಲಕ್ಷಗಳ ಹೆಚ್ಚಿಗೆ ಹಣವು ಪ್ರತ್ಯೇಕಿಸಿಡೋಣಾಗಿದೆ. ಶಿಕ್ಷಣಾಭಿವೃದ್ಧಿ ಬಗ್ಗೆ ಇಂಡಿಯಾ ಸರಕಾರದವರು ಇನ್ನು ಮುಂದಕ್ಕೆ ಈಗಿನಗಿಂತಲೂ ಹೆಚ್ಚಿಗೆ ವ್ಯಯ ಮಾಡುವರೆಂತ ಕೋಶಾಧ್ಯಕ್ಷರು ಹೇಳಿರುತ್ತಾರೆ.

ಕಲಿಕೋಟೆಯ ಮುನ್ಸಿಪಾಲ್ ಕೌನ್ಸಿಲಿನ ೨೦ ಮೆಂಬರರಲ್ಲಿ ಈ ವರೆಗೆ ೧೨ ಮಂದಿ ಪ್ರಜಾಪ್ರತಿನಿಧಿಗಳೂ ಉಳಿದವರು ಸರಕಾರದಿಂದ ನೇಮಿಸಲ್ಪಟ್ಟವರೂ ಆಗಿದ್ದರು. ಆದರೆ ಕಳೆದ ಜನವರಿ ತಿಂಗಳಲ್ಲಿ ಕಲಿಕೋಟೆಯ ಮುನ್ಸಿಪಲ್ ಕೌನ್ಸಿಲಲ್ಲಿ ಈ ಪ್ರಜಾಪ್ರತಿನಿಧಿಗಳ ಸಂಖ್ಯೆಯನ್ನು ೧೨ರಿಂದ ೧೬ಕ್ಕೆ ಹೆಚ್ಚಿಸಬೇಕೆಂಬ ನಿರ್ಣಯವಾಯಿತು. ಈಗ ಮದ್ರಾಸ್ ಸರಕಾರದವರು ಈ ನಿರ್ಣಯವನ್ನು ಜಾರಿಗೆ ತರುವರೆ ತಮ್ಮ ಮತವನ್ನು ಕೊಟ್ಟಿರುತ್ತಾರೆ. ಮುನ್ಸಿಪಲ್ ಕೌನ್ಸಿಲಿನವರ ಈ ನಿರ್ಣಯವನ್ನು ಕಲೆಕ್ಟರರವರಿಗೆ ಕಳುಹಿಸಿಕೊಡುವಾಗ ರೆವಿನ್ಯೂ ಡಿವಿಜನಲ್ ಆಫೀಸರರಾದ ಮಿ। ಪ್ರಾಡ್‌ಹಾಸರವರು—"ಆರಿಸಲ್ಪಟ್ಟ ಮೆಂಬರರಿಗೆ ಕೌನ್ಸಿಲಿನಲ್ಲಿ ಅಧಿಕ ಸಂಖ್ಯೆಯನ್ನು ಕೊಡುವದರಿಂದ ಕೌನ್ಸಿಲಿನಲ್ಲಿ ಎಲ್ಲಾ ಜಾತಿಗಳ ಪ್ರತಿನಿಧಿಗಳು ಸೇರಲಿಕ್ಕೆ ಎಡೆ ಇಲ್ಲ. ಮೆಂಬರರನ್ನು ನೇಮಿಸುವದೇ ಹಿತಕರ. ಆರಿಸುವ ಸಂಖ್ಯೆಯನ್ನು ಹೆಚ್ಚಿಸುವದರಿಂದ ಕೌನ್ಸಿಲಿನ ಕ್ರಿಯಾಶಕ್ತಿಯು ಹೆಚ್ಚುವದರ ಬದಲಿಗೆ ಕಡಿಮೆಯಾದೀತು" ಎಂಬಿತ್ಯಾದಿ ಅನಾವಶ್ಯವಾದ ಅಭಿಪ್ರಾಯಗಳನ್ನು ಸೂಚಿಸಿದ್ದರು. ಆದರೆ ಜಿಲ್ಲಾ ಕಲೆಕ್ಟರರಾದ ಮಿ। ಇವನ್ಸ್ ದೊರೆಗಳು ಸಹಜವಾಗಿ ಸರಕಾರದವರ ನೀತಿಗಳಿಗೆ ಅನುಕೂಲಮತದವರಿದ್ದರೂ ಕೌನ್ಸಿಲಿನ ಈ ನಿರ್ಣಯವನ್ನು ಆದರಿಸಿ "ಕೌನ್ಸಿಲಿನ ಈ ನಿರ್ಣಯವನ್ನು ಸಮ್ಮತಿಸಲೇಬೇಕು, ಯಾಕಂದರೆ ಹೆಚ್ಚಿನ ಕೌನ್ಸಿಲುಗಳಲ್ಲಿ ಈಗ ಮುಸ್ಲಿಂ ಮೆಂಬರರು ಆರಿಸಲ್ಪಟ್ಟವರಾಗಿರುತ್ತಾರೆ. ಕಲಿಕೋಟೆಯಲ್ಲಿ ಮಾತ್ರ ಇದಕ್ಕೆ ವ್ಯತಿರಿಕ್ತವಾಗಿ ನಡೆಯಲು ಯಾವ ಕಾರಣವೂ ತೋರುವದಿಲ್ಲ. [illegible]

[illegible]

ನ್ಯೂ ಇಂಡಿಯಾ ಪತ್ರಿಕೆಯಿಂದ ಸರಕಾರದವರು [illegible] ಮತ್ತು ಈ ಹಣವನ್ನು ಸರಕಾರಕ್ಕೆ ಸೇರಿಸಿಕೊಂಡದ್ದು ನ್ಯಾಯವಲ್ಲವೆಂಬಿತ್ಯಾದಿ ಸಬಬುಗಳ ಮೇಲೆ ಅನ್ನಿಬೆಸೆಂಟರು ಹೈಕೋರ್ಟಿಗೆ ಮಾಡಿಕೊಂಡ ಮನವಿಯು ತಳ್ಳಿಹಾಕಲ್ಪಟ್ಟದ್ದರಿಂದ ಇನ್ನು ಪ್ರೀವಿಕೌನ್ಸಿಲಿಗೆ ಅಪೀಲು ಮಾಡಿಕೊಳ್ಳಲು ಹುಕುಂ ಕೊಡಬೇಕಾಗಿ ಅವರು ಮದ್ರಾಸ್ ಹೈಕೋರ್ಟ ಜಡ್ಜರಿಗೆ ಮನವಿ ಮಾಡಿಕೊಂಡಿದ್ದರು. ಈ ಮನವಿಯ ತನಖಿ ನಡೆದು ಜಸ್ಟಿಸ್ ಅಬ್ದುರ ರಹಿಮರೂ ಜಸ್ಟಿಸ ಶೇಷಗಿರಿ ಅಯ್ಯರರೂ ಈ ಮನವಿಗೆ ಹುಕುಂ ಕೊಡಲು ತಮಗೆ ಅಧಿಕಾರವಿಲ್ಲವೆಂಬ ಅಭಿಪ್ರಾಯಪಟ್ಟರು. ಜಸ್ಟಿಸ್ ಫಿಲಿಂಗರವರು ಈ ದಾವೆಯು ಪ್ರೀವಿ ಕೌನ್ಸಿಲಿಗೆ ಅಪೀಲು ಮಾಡಲಿಕ್ಕೆ ತಕ್ಕದ್ದೇ ಆಗಿದೆ ಎಂಬ ಅಭಿಪ್ರಾಯಪಟ್ಟಿರುವರು. ಆದರೆ ಇಬ್ಬರು ಜಡ್ಜರ ಮತವು ಒಂದೇ ಆದುದರಿಂದ ಈ ಮನವಿಯು ತಳ್ಳಿ ಹಾಕಲ್ಪಟ್ಟಿತು.

ಮದ್ರಾಸ್ ಸಂಸ್ಥಾನದಲ್ಲಿರುವ ಫೋರೆಸ್ಟ ಇಲಾಖೆಯಿಂದ ೧೯೧೭ನೇ ಇಸವಿ ಜೂನು ತಾ. ೩೦ಕ್ಕೆ ಅಂತ್ಯವಾಗುವ ವರುಷದಲ್ಲಿ ಸರಕಾರಕ್ಕೆ ೧೩೪.೩೧ ಲಕ್ಷ ರೂಪಾಯಿಗಳ ಉಳಿತಾಯವು ಉಳಿದಿರುತ್ತದೆ. ಅಂದರೆ ಈ ಆಯವು ೧೯೧೬ನೇ ಇಸವಿಗಿಂತಲೂ ೬.೪೯ ಲಕ್ಷ ರೂಪಾಯಿಗೆ ಹೆಚ್ಚಿದಂತಾಯಿತು. ಯುದ್ಧದ ಕಾಲವಾದುದರಿಂದ ಫೋರೆಸ್ಟ್ ಇಲಾಖೆಯಲ್ಲಿ ಕೆಲವು ಪ್ರಾಮುಖ್ಯ ಖರ್ಚುಗಳನ್ನು ಮಾಡದೆ ಇದ್ದುದೇ ಈ ದೊಡ್ಡ ಶಿಲುಕು ಉಳಿಯಲು ಕಾರಣವಾಯಿತು. ವರ್ಷಾಂತ್ಯಕ್ಕೆ ಸಂಸ್ಥಾನದಲ್ಲಿ ೧೯,೮೪೯ ಚಚ್ಚೌಕ ಮೈಲುಗಳ ವಿಸ್ತೀರ್ಣದ ರಿಜರ್ವ್ ಫೋರೆಸ್ಟುಗಳು ಇದ್ದವು. ಅಂದರೆ ಈ ವಿಸ್ತೀರ್ಣವು ಹಿಂದಿನ ವರ್ಷಕ್ಕಿಂತಲೂ ೩೬ ಮೈಲಿಗೆ ಕಡಿಮೆಯಾಯಿತು. ೪೦,೮೮೫ ಫೋರೆಸ್ಟ ತಕ್ಸೀರುಗಳು ನಡೆದಿರುತ್ತವೆ. ಹಿಂದಿನ ವರ್ಷ ಇಂಥಾ ತಕ್ಸೀರುಗಳು ೪೬,೦೪೧ ನಡೆದಿದ್ದವು. ಫೋರೆಸ್ಟ್ ಪಿಲೇಜು ಪದ್ಧತಿಯನ್ನು ಜಾರಿಗೆ ತಂದದ್ದೇ ಕಳೆದ ವರ್ಷ ಈ ತಕ್ಸೀರುಗಳು ತಗ್ಗಲು ಕಾರಣ. ಈ ಪದ್ಧತಿಯ ಪ್ರಕಾರ ರೈತರಿಗೆ ದನಕರುಗಳನ್ನು ಮೇಯಿಸುವದೆಯೂ ಹುಲ್ಲುಗಳನ್ನು ತೆಗೆಯುವದೆಯೂ ತಕ್ಕ ಏರ್ಪಾಡು ಮಾಡೋಣಾಗಿಯದೆ. ರೈತರು ಇದಕ್ಕೆ ಪ್ರತಿಯಾಗಿ ಕಾಡುಗಳಿಗೆ ಹಾನಿ ಸಂಭವಿಸದಂತೆ ನೋಡಿಕೊಳ್ಳಬೇಕಾಗಿರುವದು. ಕಳೆದ ಈ ವರ್ಷ ಕಾಲ ೧೪೬ ಫೋರೆಸ್ಟ ಪಂಚಾಯತಿಗಳು ೨೧೧ ಚಚೌಕ ಮೈಲು ವಿಸ್ತೀರ್ಣದ ರಿಜರ್ವ್ ಫೋರೆಸ್ಟಿನ ಮೇಲ್ತನಿಕೆಯನ್ನು ತಕ್ಕೊಂಡಿದ್ದವು.

ಸೀಲೋನ್ ಮತ್ತು ಮಲಯಾದ್ವೀಪಗಳಿಗೆ ಹೋಗುವ ಹಿಂದೀ ಕೆಲಸಗಾರರ ಸ್ಥಿತಿಗತಿಗಳನ್ನು ವಿಚಾರಿಸುವ ಉದ್ದೇಶದಿಂದ ಮದ್ರಾಸ್ ಸರಕಾರದವರು ಮಿ। ಎನ್. ಇ. ಮಾರ್ಜೋರಿ ಬ್ಯಾಂಕರನ್ನೂ ಬಹುಮಾನಪಟ್ಟ ಖಾನ್ ಬಹದ್ದೂರ್ ಎ. ಕೆ. ಜಿ. ಅಹಮ್ಮದ್ ತಂಬಿಮರಕಯ್ಯರರನ್ನೂ ಸದರಿ ದ್ವೀಪಗಳಿಗೆ ಕಳುಹಿಸಿದರಷ್ಟೆ. ಸರಕಾರದವರಿಂದ ನೇಮಿಸೋಣಾದ ಈ ಕಮಿಟಿಯವರ ವರದಿಯು ಈಗತಾನೇ ಪ್ರಕಟವಾಗಿದೆ. ಸೀಲೋನ್ ಮತ್ತು ಮಲಯಾದ್ವೀಪದ ತೋಟಗಳಲ್ಲಿ ಕೆಲಸ ಮಾಡುವ ಹಿಂದೀ ಕೂಲಿಗಾರರ ಕಷ್ಟಾವಸ್ಥೆಗೆ ಈ ವರದಿಯಲ್ಲಿ ಹೆಚ್ಚಿನ ಮಹತ್ವವು ಕೊಡೋಣಾಗಿರುವದಿಲ್ಲ. ಕೂಲಿಗಾರರ ಸ್ಥಿತಿ, ಅವರ ಸಂಬಳ, ಅವರಿಗೆ ಕೊಡುವ ಶಿಕ್ಷೆ, ಅವರ ಬಿಡಾರ, ವಿದ್ಯಾಭ್ಯಾಸ ಮೊದಲಾದ ಕಾರ್ಯಗಳು ತಕ್ಕಮಟ್ಟಿಗೆ ಒಳ್ಳೇದೇ ಇದೆ ಎಂತ ಈ ವರದಿಯಲ್ಲಿ ಸೂಚಿಸೋಣಾಗಿದೆ. ಈ ಕಮಿಟಿಯವರು ೧೦-೨೦ ದಿವಸಗಳ ವರೆಗೆ ಈ ದ್ವೀಪಗಳಲ್ಲಿ ಇದ್ದು ತಿರುಗಾಡಿ ಮಾಡಿದ ಈ ವರದಿಯಿಂದ ಪ್ರಜಾಜನರು ತೃಪ್ತಿಹಾಕುವ ಹಾಗಿಲ್ಲವೆಂದೂ ಈ ಕಮಿಟಿಯು ನೇಮಿಸೋಣಾದ ಈ ಉದ್ದೇಶವು ಈ ವರದಿಯಿಂದ ಈಡೇರಲಿಲ್ಲವೆಂದೂ ಸಂಸ್ಥಾನದ ಪತ್ರಿಕೆಗಳು ಟೀಕಿಸುತ್ತಿವೆ.

ಇದೇ ತಾ. ೮ರಲ್ಲಿ ಮದ್ರಾಸಿನ ಗೋಖಲೆ ಸಭಾಸದನದಲ್ಲಿ ಭಾರತ ಸಂರಕ್ಷಕ ಸೈನ್ಯಕ್ಕೆ ಸೇರಿಕೊಳ್ಳುವರೆ ಹಿಂದೀ ಯುವಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಒಂದು ಸಾರ್ವಜನಿಕ ಸಭೆಯು ಕೂಡಿಬಂತು. ಈ ಸಭೆಯಲ್ಲಿ ಮದ್ರಾಸಿನ ಪ್ರಮುಖ ಗೃಹಸ್ಥರಲ್ಲನೇಕರು ಹಾಜರಿದ್ದರು. ಈಗ ತಾನೇ ಮದ್ರಾಸ್ ಕಾರ್ಯನಿರ್ವಾಹಕ ಸಭೆಯಿಂದ ನಿವೃತ್ತರಾದ ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರವರು ಈ ಸಭೆಯ ಅಧ್ಯಕ್ಷರಾಗಿದ್ದರು. ಈ ಸೇನೆಗೆ ಸೇರಿಕೊಳ್ಳುವವರಿಗೆ ಅಧಿಕಾರ ಸ್ಥಾನಗಳನ್ನು ಕೊಡ ಬೇಕೆಂತ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯವೂ ಆಯಾ ಕಾಲೇಜುಗಳ ವಿದ್ಯಾರ್ಥಿಗಳನ್ನು ಸೇರಿಸಿ ಯುನಿವರ್ಸಿಟಿ ಸೇನಾಸಂಗದ ಪಂಗಡವನ್ನು ನಿರ್ಮಿಸಬೇಕೆಂಬ ಆಲೋಚನೆಯೂ ಈ ಸಭೆಯಲ್ಲಿ ನಡೆದಿರುವದು. ಈ ಸಭೆಯ ಉದ್ದೇಶವನ್ನು ನೆರವೇರಿಸುವರೆ ಒಂದು ಕಮಿಟಿಯೂ ನೇಮಿಸೋಣಾಗಿದೆ. ಈ ಸೇನೆಗೆ ಸೇರಿಕೊಳ್ಳುವರೆ ಮದ್ರಾಸಿನಲ್ಲಿ ಈ ವರೆಗೆ ೧೦೦೦ ಮಂದಿ ತಮ್ಮ ಹೆಸರನ್ನು ಕೊಟ್ಟಿರುವರು.

ನಿರ್ಗತಿಕ ಮಕ್ಕಳ ಪೋಷಣೆ ಬಗ್ಗೆ ಮದ್ರಾಸಿನಲ್ಲಿ ಸ್ಥಾಪಿಸೋಣಾಗಿರುವ ಸೊಸೈಟಿಯ ೯ನೇ ವಾರ್ಷಿಕೋತ್ಸವವು ತಾ. ೮ರಲ್ಲಿ ಮದ್ರಾಸಿನಲ್ಲಿ ನಡೆದಿರುತ್ತದೆ. ಕಳೆದ ವರ್ಷದಲ್ಲಿ ಈ ಸೊಸೈಟಿಯವರು ಇಂಥಾ ೯೬ ಮಕ್ಕಳನ್ನು ಕಾಪಾಡಿದ್ದರು. ವರ್ಷಾಂತ್ಯದಲ್ಲಿ ೭೭ ಮಕ್ಕಳು ಈ ಸೊಸೈಟಿಯ ಭವನದಲ್ಲಿದ್ದಾರೆಂಬದು ವಾರ್ಷಿಕ ವರದಿಯಿಂದ ತಿಳಿದುಬರುತ್ತದೆ. ಈ ಸೊಸೈಟಿಯ ಬಗ್ಗೆ ಕಟ್ಟಿಸೋಣಾಗುವ ಭವನಕ್ಕೆ ರೂ. ೩೫,೮೪೦ ಖರ್ಚು ತಗಲುವದು ಎಂತ ಅಂದಾಜಾಗಿಯದೆ. ಈ ಸೊಸೈಟಿಗೆ ಮದ್ರಾಸಿನ ರಾವ್ ಸಾಹೇಬ ಸಿ. ಸಿ. ಚೆಟ್ಟಿಯರರು ವರ್ಷಕ್ಕೆ ರೂ ೧೦೮೦ ಕೊಡುವರೆ ವಾಗ್ದಾನಮಾಡಿರುತ್ತಾರೆ. ನಿರ್ಗತಿಕ ಮಕ್ಕಳನ್ನು ಪೋಷಿಸುವದು, ಮಕ್ಕಳನ್ನು ಕ್ರೂರ ರೀತಿಯಿಂದ ನಡಿಸದಂತೆ ನೋಡುವದು, ಇವೇ ಮೊದಲಾದ ಮಕ್ಕಳ ಸಂರಕ್ಷಣೆಯೇ ಈ ಸೊಸೈಟಿಯ ಕೆಲಸವಾಗಿದೆ.

ಇದೇ ತಾ. ೧೭ರಲ್ಲಿ ಮದ್ರಾಸಿನಲ್ಲಿ ಲೋಕಲ್ ಮತ್ತು ಮುನ್ಸಿಪಲ್ ಕೌನ್ಸಿಲುಗಳ ಪ್ರಥಮ ಕನ್ಫರೆನ್ಸ್ ಜರಗಿತು. ಹಿಂದೂಸ್ಥಾನದಲ್ಲಿ ಇಂಥಾ ಕನ್ಫರೆನ್ಸ್ ನಡೆವುದು ಇದೇ ಮೊದಲಾಗಿದೆ. ಕನ್ಫರೆನ್ಸಿಗೆ ಸಂಸ್ಥಾನದ ಆಯಾ ಕಡೆಗಳಿಂದ ೩೦೦ಕ್ಕೆ ಮಿಕ್ಕಿದ ಪ್ರತಿನಿಧಿಗಳು ಬಂದಿದ್ದರು. ಬಹುಮಾನಪಟ್ಟ ದಿವಾನ್ ಬಹದ್ದೂರ್ ರಾಮಚಂದ್ರರಾಯರು ವಿಜ್ಞಾಪಿಸಿಕೊಂಡ ಪ್ರಕಾರ ಮದ್ರಾಸ್ ಗವರ್ನರರಾದ ಪೆಂಟಲೇಂಡ ಪ್ರಭುಗಳವರು ಸಭಾಕಾರ್ಯಗಳನ್ನು ಪ್ರಾರಂಭಿಸಿ ಒಂದು ಚಿಕ್ಕ ಭಾಷಣವನ್ನು ಮಾಡಿದರು. ಅನಂತರ ಮಿ। ರಾ। ರಾಮಚಂದ್ರರಾಯರು ಈ ಕನ್ಫರೆನ್ಸಿನ ಉದ್ದಿಷ್ಟಹೇತುಗಳನ್ನು ತಿಳಿಯಪಡಿಸಿದರು. ಕೊನೆಗೆ ಲೋಕಲ್ ಮತ್ತು ಮುನ್ಸಿಪಾಲ್ ಅಭಿವೃದ್ಧಿ ಸಾಧನೆಗೆ ಅಗತ್ಯವಾದ ಕೆಲವು ಪತ್ರಗಳು ಆಯಾ ಸದ್ಗೃಹಸ್ಥರಿಂದ ಓದೋಣಾದವು. ಈ ವಿಷಯ ಮತ್ತು ಒಂದೆರಡು ದಿನಗಳ ವರೆಗೆ ಸಭೆಯು ಕೂಡಿ ವಾದಪ್ರತಿವಾದಗಳು ನಡೆದಿರುವವು

ಬಾತಮಿಗಳು.

ಕಾಪು:—ಬಹಳ ಕಾಲ ರೆವಿನ್ಯೂ ಇನ್ಸ್‌ಪೆಕ್ಟರ ಕೆಲಸದಲ್ಲಿದ್ದು ಪೆನ್ಶನ್ ಹೊಂದಿ ತಮ್ಮ ಸ್ವಂತ ಮನೆಯಲ್ಲಿದ್ದುಕೊಂಡು ಸರ್ವಜನರ ಪ್ರೀತಿಗೆ ಪಾತ್ರರಾದ ಮ। ರಾ। ಮೂಡಕಲ್ಲು ಮಂಗೇಶರಾಯರು ಕಳೆದ ವಾರದಲ್ಲಿ ಪರಂಧಾಮವನ್ನೈದಿದರು ಎಂಬುದನ್ನು ತಿಳಿಸಲು ವಿಷಾದಪಡುತ್ತೇವೆ.

ಯಮಾರ[illegible] ಲಕ್ಷ್ಮೀ[illegible] ಮಾಮೂಲ[illegible] ಬಗ್ಗೆ ನೋಡುವದಕ್ಕೋಸ್ಕರ [illegible] ದರು ಎಂಬದನ್ನು [illegible] ಕೈಲಿಯ ಶ್ರೀ ಮ। ರಾ। [illegible]

ಹೆಗ್ಗಡೆರೆಂಬ ನಾಮಾಂಕಿತದಿಂದ ಯಮಾರಿ ನಿವಾಸಿಗಳು ಪಟ್ಟಾಭಿಷೇಕ ಮಾಡಿರುವರು. ಶ್ರೀ ಭಗವಂತನು ಧರ್ಮಾತ್ಮರಾದ ಹೆಗ್ಗಡೆರ ಪುತ್ರರಿಗೆ ದೀರ್ಘಾಯುಷ್ಯವನ್ನು ಕೊಟ್ಟು ರಕ್ಷಿಸಲಿ ಎಂದು ಪ್ರಾರ್ಥಿಸುವೆವು.

ಕಾಂಗಾಳದಲ್ಲಿ ವೆಂಕಪ್ಪ ಪೂಜಾರಿ ಎಂಬಾತನು ಗಾಂಜಾ ಎಳೆದು ಹುಚ್ಚು ಹಿಡಿದವನಾಗಿ ೩-೪ ಜನರಿಗೆ ಚೂರಿಯಿಂದ ಘಾಯಪಡಿಸಿರುವನಂತೆ. ಘಾಯ ಹೊಂದಿದವರು ಫಿರ್ಯಾದಿ ದಾಖಲು ಮಾಡಿರುವರು. ಆಸಾಮಿ ಫರಾರಿಯಾಗಿರುವನು. ಪೋಲೀಸು ತನಖಿ ನಡೆಯುತ್ತಲಿದೆ.

ಬೆಳಪ್ಪರೆ:—ಉಪ್ಪಿನಂಗಡಿ ತಾಲೂಕು ಬೆಳ್ಳಾರೆ ಗ್ರಾಮದಲ್ಲಿರುವ ಸಹಕಾರ ಸಂಘದ ಬಗ್ಗೆ ಒಂದು ಕಟ್ಟೋಣವನ್ನು ಕಟ್ಟಿಸುವುದೆಂತ ನಿರ್ಣಯಿಸಿಯದೆ. ದಕ್ಷಿಣ ಕನ್ನಡಾ ಜಿಲ್ಲೆಯ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿರುವ ಮಹಾರಾಜಶ್ರೀ ರಾವ್ ಬಹದ್ದೂರ ಸಿ. ಕೃಷ್ಣಸ್ವಾಮಿ ರಾಯರವರು ಸದರಿ ಕಟ್ಟೋಣದ ಶಂಕುಸ್ಥಾಪನೆ ಮಾಡುವರೆ ಪ್ರೀತಿಪೂರ್ವಕವಾಗಿ ಒಪ್ಪಿದ್ದಾರೆ. ಶಂಕುಸ್ಥಾಪನೆಯ ಸಮಾರಂಭವು ಬರುವ ಯುಗಾದಿಯ ಹುಟ್ಟಿದ ದಿನ ಶನಿವಾರ ಮಧ್ಯಾಹ್ನ ೮॥ ಗಂಟೆಗೆ ಜರಗುವುದು. ಅಂದಿಗೆ ಕ್ಲುಪ್ತಕಾಲಕ್ಕೆ ಬಂದು ಶುಭಕಾರ್ಯವನ್ನು ಛಂದಗಾಣಿಸಬೇಕಾಗಿ ಈ ಮೂಲಕ ಸಕಲ ಸಹಕಾರಿಗಳಿಗೂ ಇತರ ಹಿತೈಷಿಗಳಿಗೂ ಆಮಂತ್ರಿಸೋಣಾಗುತ್ತದೆ.

ಪತ್ರವ್ಯವಹಾರ.

ಯೈಡೆಡ್ ಶಾಲೆಗಳ ಹೀನಾವಸ್ಥೆ.

ಆಯ್ಯಾ ಮಹನೀಯರೇ,

ಸರಕಾರದಿಂದ ಸಹಾಯ ಧನ ಹೊಂದಿಕೊಂಡಿರುವ ರಿಜಲ್ಟ್ ಎಲಿಮೆಂಟರಿ ಶಾಲೆಗಳು ಮೊದಲಿಗೆ ಬಹಳವಿದ್ದವು, ಈಗೀಗ ಈ ಶಾಲೆಗಳ ಹೆಸರು ಕಡಿಮೆಯಾಗುತ್ತಾ ಬಂದು ಬೋರ್ಡ್ ಎಲಿಮೆಂಟರಿ ಶಾಲೆಗಳು, ತುಂಬಲ್ಪಟ್ಟವು. ಇದರ ಕಾರಣವೇನೆಂದರೆ:—ಉಪಾಧ್ಯಾಯರಿಗೆ ಮೊದಲು ಕೊಡೋಣಾಗುತ್ತಿದ್ದ ಗ್ರೇಂಟನ್ನು ತೆಗೆದುಹಾಕಿ, ಈಗ ಪ್ರಕೃತ ಟೀಚಿಂಗ್ ಗ್ರೇಂಟ್ ಮಾಡಿದ್ದೇ ಕಾರಣವೆಂದು ತಕ್ಕಮಟ್ಟಿಗೆ ತೋರುತ್ತದೆ. ಯಾಕಂದರೆ ಈಗ ಪ್ರತಿ ಒಬ್ಬ ಉಪಾಧ್ಯಾಯನಿಗೆ ಹೆಚ್ಚಿಗೆಯಾಗಿ ಸಿಕ್ಕಿದರೆ ವರ್ಷಕ್ಕೆ ಟೀಚಿಂಗ್ ಗ್ರೇಂಟ್ ಮತ್ತು ಮುಂಡೆಗ್ರೇಂಟ್ ಕೂಡಾ ಒಟ್ಟಿಗೆ ರೂಪಾಯಿ ೬೦ಕ್ಕಿಂತ ಜಾಸ್ತಿ ಸಿಕ್ಕಲಾರದು. ಈ ಅರುವತ್ತು ರೂಪಾಯಿ ಸಿಕ್ಕಿದರೆ ತಿಂಗಳು ೧ಕ್ಕೆ ಸರಾಸರಿ ೫ ರೂಪಾಯಿಯಂತೆ ಆಯಿತು. ಇಷ್ಟು ಕಡಿಮೆ ಹಣದಲ್ಲಿ ಒಬ್ಬನ ಊಟದ ಖರ್ಚು ಹೋಗುವದೇ ಕಷ್ಟ. ಹೀಗಿರುತ್ತಾ ವಸ್ತ್ರದ ಖರ್ಚು ಮತ್ತು ಶಾಲೆಯ ಇತರ ಖರ್ಚು ಕೂಡಾ ಗ್ರಹಿಸಿ ನೋಡಿದರೆ, ಇದು ಎಳ್ಳಿಗೂ ಸಾಲದು. ಈಗೀಗ ಬೋರ್ಡ್ ಶಾಲೆಗಳ ಸಂಬಳದ ದರವು ಹೆಚ್ಚಿಸಲ್ಪಟ್ಟಿದೆ. ಅದನ್ನು ಮತ್ತು ಈ ಶಾಲೆಗಳ ಗ್ರೇಂಟನ್ನು ಸರಿತೋಲಿಸಿದರೆ ಯೈಡೆಡ್ ಸ್ಕೂಲುಗಳಲ್ಲಿ ಒಬ್ಬ ಮಾಸ್ತರನಿಗೆ ಸಿಕ್ಕುವದಕ್ಕಿಂತ ೨ ಪಾಲಿಗಿಂತಲೂ ಜಾಸ್ತಿ ಬೋರ್ಡ್ ಸ್ಕೂಲಿನ ಒಬ್ಬ ಮಾಸ್ತರನಿಗೆ ಸಿಕ್ಕುತ್ತದೆ. ಕಲಿಸುವ ಕ್ರಮ ಬೋರ್ಡ್ ಶಾಲೆಗಳಲ್ಲಿ ಮತ್ತು ಈ ಶಾಲೆಗಳಲ್ಲಿ ಒಂದೇಯಲ್ಲದೆ, ಬೋರ್ಡ್ ಸ್ಕೂಲ್ ಉಪಾಧ್ಯಾಯರೇನಾದರೂ, ಹೆಚ್ಚಿಗೆ ಕೆಲಸಮಾಡುವದಿಲ್ಲ. ಮತ್ತು ಬೋರ್ಡ್ ಶಾಲೆಯಲ್ಲಿ ಅಗತ್ಯವಿರುವ ಎಲ್ಲಾ ಸಾಹಿತ್ಯ ಸಾಮಾಗ್ರಿ, ಕಟ್ಟಡದ ದುರಸ್ತಿ ಇವನ್ನೆಲ್ಲಾ ಬೋರ್ಡಿನವರಿಂದಲೇ ಒದಗಿಸೋಣಾಗುತ್ತದೆ. ಯೈಡೆಡ್ ಶಾಲೆಗಳಲ್ಲಿ ಉಪಾಧ್ಯಾಯರೇ ಇವನ್ನೆಲ್ಲಾ ಒದಗಿಸಬೇಕು. ಹೀಗಾದ ಕಾರಣ ಈ ರಿಜಲ್ಟ್ ಶಾಲೆಗಳಲ್ಲಿ ಗ್ರೇಂಟ್ ಕಡಿಮೆಯಾದ್ದರಿಂದ ಟ್ರೈನಿಂಗ್ ಆದ ಉಪಾಧ್ಯಾಯರು ಸಿಕ್ಕುವದೇ ಕಷ್ಟ. ಅಂಟ್ರೈನ್ ಉಪಾಧ್ಯಾಯರಿದ್ದರೂ ಶಾಲೆಯಲ್ಲಿ ಸರಿ ಉತ್ಪತ್ತಿ ಇಲ್ಲದಿರುವ ಕಾರಣದಿಂದ ಸ್ಕೂಲ್ ಕೆಲಸ ನಿರ್ವಹಿಸದೆ ಇತರ ಹಣ ಗಳಿಸುವ ವೃತ್ತಿಗೆ ಕೈಹಾಕುವ ಕಾರಣ ಯೈಡೆಡ್ ಸ್ಕೂಲುಗಳು ಎಲ್ಲಿ ನೋಡಿದರೂ ಹೀನ ಸ್ಥಿತಿಯಲ್ಲಿವೆ.

ಆದಕಾರಣ ದಯಾಳುವಾದ ನಮ್ಮ ಗವರ್ನಮೆಂಟಿನವರು ರಿಜಲ್ಟ್ ಶಾಲಾ ಉಪಾಧ್ಯಾಯರ ಮೇಲೆ ಕರುಣವಿಟ್ಟು ಈ ಶಾಲೆಗಳಲ್ಲಿ ತಕ್ಕ ಮಟ್ಟಿಗೆ ಗ್ರೇಂಟಿನ ದರವೆಂಬ ಪ್ರಭೆಯನ್ನು ಏರಿಸಿ, ಈಗ ಗ್ರೇಂಟ್ ಕಡಿಮೆಯಾಗಿ ತುಂಬಿಕೊಂಡಿರುವ ಹೀನಸ್ಥಿತಿಯೆಂಬ ತಮವನ್ನು ಹೋಗಲಾಡಿಸಿ ಬೋರ್ಡ್ ಶಾಲೆಗಳಂತೆಯೇ ಈ ಶಾಲೆಗಳನ್ನು ಕೂಡಾ ನಡಿಸಿ ಕಾಪಾಡಬೇಕಾಗಿ ಪ್ರಾರ್ಥಿಸುವ,

ಯೈಡೆಡ್ ಶಾಲೆಯ ಬಡ ಉಪಾಧ್ಯಾಯ.

ಜೀನಸು ಧಾರಣೆ.

(ರಖಂ).

ಮಸ್ಸಿ ಅಕ್ಕಿ ಹೊಸ್ತು	5—8—0	ರಿಂದ	5—14—0
ಸುಡ್ಡು ಸ್ಪಗ್ಗಿ ,,	5—4—0	,,	5—10—0
ಹೊಸ ರಾಶಿ ,,	5—3—0	,,	5—6—0
ಅವ್ವಲ್ ಬೆಳ್ತಿಗೆ ,,	6—4—0	,,	6—10—0
ಗುಡು ಬೆಳ್ತಿಗೆ ,,	5—8—0	,,	5—12—0
ರಂಗೂನು ಬೆಳ್ತಿಗೆ ಗೋಣಿ ೧ರ	9—8—0	,,	9—12—0
ಗೋದಿ ಗೋಣಿ ೧ರ	11—12—0	,,	12—8—0
ಹುರುಳಿ ಗೋಣಿ ೧ರ	6—5—0	,,	6—6—0
ಕಡಲೆ ಗೋಣಿ ೧ರ ಬೊಂಬೈ	10—0—0	,,	10—8—0
ಕೊಗರಿ ಗೋಣಿ ೧ರ			11—0—0
ಕೊಗರಿ ಬೇಳೆ ಗೋಣಿ ೧ರ	12—8—0	,,	15—8—0
ಉಪ್ಪು ಗೋಣಿ ೧ರ		,,	11—8—0
ಊರುಬೆಲ್ಲ ಖಂಡಿ ೧ರ	35—0—0	,,	37—0—0
ಉಪ್ಪು ಗೋಣಿ ೧ರ	4—12—0	,,	5—0—0
ಕೊಬ್ರಿ ಖಂಡಿ ೧ರ	85—0—0	,,	90—0—0
ಹೆಬ್ಬಿಹಿಂಡಿ ಖಂಡಿ ೧ರ		,,	19—0—0
ಎಳ್ಳಿಂಡಿ ಖಂಡಿ ೧ರ ಬೊಂಬೈ	27—8—0	,,	35—0—0
ಕೊಬ್ರಿ ಎಣ್ಣೆ ಮಣ ೧ರ	6—4—0	,,	7—0—0
ಎಳ್ಳೆಣ್ಣೆ ಮಣ ೧ರ (ಕುರಾಸನ)		,,	4—10—0
ಹಿಪ್ಪೆ ಎಣ್ಣೆ ಪೆಟ್ಟಿಗೆ ೧ರ	6—11—0	,,	7—5—0
ಮೋರಿಸ್ ಸಕ್ಕರೆ ಮಣ ೧ರ	5—7—0	,,	5—8—0
ಕಾಫಿ ಖಂಡಿ ೧ರ	185—0—0		200—0—0
ಹೊಸಬೇಗೋಟು ಖಂಡಿ ೧ರ	80—0—0	,,	90—0—0
ಗೇರುಬೀಜ ಮುಡಿ ೧ರ	2—0—0	,,	2—2—0
ಕಿಲ್ಪೆ ಖಂಡಿ ೧ರ	100—0—0	,,	110—0—0
ಕಾಂಟ್ರ ತಗಡು ಮಣ ೧ರ	29—0—0	,,	30—8—0
[illegible]		,,	32—0—0
[illegible]		,,	24—0—0
[illegible]		,,	6—[illegible]—0
[illegible]			[illegible]0—0—0

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital ...	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital ...	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid up Capital ...	200,000—0—0	ಆಗತ ಮೂಲ ಧನವು ,,	200,000—0—0
Deposits ...	340,116—1—0	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	340,116—1—0
Reserve Fund ...	50,003—2—5	ರಕ್ಷಿತ ಧನವು ...	50,003—2—5

Besides the uncalled capital of Rs. 25,000/-25% of the net profits are added annually to the Reserve Fund. Rs.28,485/ have been invested in Government Paper of the face value of Rs.29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಶೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾ ಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಈ 8 ವರುಷಗಳಲ್ಲಿ ಶೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಶೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಶೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.,
Mangalore, 1st March 1917.

P. Gopal Naik,
Secretary

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸವಿವೇಚನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ,
ಉಡುಪಿ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಹಿಂದೂ ವ್ರತವಿವೇಕ.

(ಅಚ್ಚಾಗುತ್ತಲಿದೆ)

ಹಿಂದೂಗಳು ಸರ್ವಸಾಮಾನ್ಯವಾಗಿ ಆಚರಿಸುವ ವ್ರತಗಳ ವಿವರ, ಅವುಗಳನ್ನು ಆಚರಿಸುವ ಸಂಕ್ಷೇಪ ವಿಧಾನ, ಅವುಗಳ ಮೂಲ ಇವೆಲ್ಲವನ್ನೊಳಕೊಂಡಿರುವ ಪುಸ್ತಕವು ಇನ್ನು ಸದ್ಯದಲ್ಲಿ ಪ್ರಕಟವಾಗುವದು.

ಮೊದಲನೆಯ ವರುಷದಲ್ಲಿ ಸಾಲೆಯ ಮಕ್ಕಳಿಗೆ ಗಣಿತದ ಪಾಠಪಟ್ಟಿ ಮತ್ತು ಕಲಿಸುವದನ್ನು ಕುರಿತು ಸೂಚನೆಗಳು ಕೊಡಿರುವ

ಗಣಿತ ಪಾಠ.

ಕ್ರಯ 0—2—6.

ವ್ಯವಹಾರ ವ್ಯಾಪಾರಗಳ

ಬಗ್ಗೆ ಬೇಕಾಗುವ ಕೋರ್ಟು ಫೋರ್ಮು, ಗೇಣಿ ಚೀಟು ಫೋರ್ಮುಗಳು, ಬೀಲು ಯಾನೆ ಪಟ್ಟಿ ಫೋರ್ಮುಗಳು ನಾನಾ ಬಗೆಯ ಲೆಕ್ಕದ ಪುಸ್ತಕಗಳು.

ಇವೆಲ್ಲವು ದೊರೆಯುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು ದ. ಕ.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸಹಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0—8—0. 1 ಡ್ರಾಮ್ ಟ್ಯೂಬ್ ರೂ. 0—12—0. ¼ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. [illegible] 0—4—0 [illegible]

[illegible]

[illegible]

10 [illegible]

[illegible]

ಇಮಿಟೇಶನ್

ವಜ್ರದ ಒಡವೆಗಳು.

ಈ ಒಡವೆಗಳು ಅಪರಂಜಿ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿ ಬಿಳೇ ಕಲ್ಲು, ಕೆಂಪು ಕಲ್ಲುಗಳು ಇಟ್ಟು ಕಟ್ಟಿರುತ್ತದೆ. ಈ ಒಡವೆಗಳು, ಅಮೇರಿಕಾ, ಇಂಗ್ಲೆಂಡ್ ದೇಶಗಳಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ 4 ವರುಷಗಳ ವರಿವಿಗೂ ಬಣ್ಣ ಹೋಗುವದಿಲ್ಲವೆಂದು ಗ್ಯಾರಂಟಿ ಕೊಡುವೆವು. ಅಮೇರಿಕಾ, ಇಂಗ್ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ಹೇಳುವವರಿಗೆ ಅವರ ಹಣವನ್ನು ವಾಪಸು ಕೊಡುವೆವು.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವದು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿದೆ. 7 ಕಲ್ಲಿನ ಬೆಂಡೋಲೆ ಕ್ರಯ ರೂ. 2—0—0, 7 ಕಲ್ಲಿನ ಕೆಂಪು ಬೆಂಡೋಲೆ ಕ್ರಯ ರೂ. 3—8—0.

ಕುರುಡು ಬಾವಲಿ.



ಈ ಬಾವಲಿಗಳು ಈಗ ಹೊಸ ಸೀಮೆಯಿಂದ ಬಂದಿವೆ. ಇದರಲ್ಲಿ ಕೆಂಪಿನದು ಬಿಳಿಕಲ್ಲಿನದು ಉಂಟು. ಇವು ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿರುತ್ತೆ. ಈ ಕಲ್ಲುಗಳು ಬಹು ಪ್ರಕಾಶವುಳ್ಳವುಗಳೂ ಬಹು ಸುಂದರವಾದ್ದು. ಇದಕ್ಕೆ ಮುತ್ತುಗಳು ಕಟ್ಟಿರುತ್ತೆ.

ಇದರ ಬೆಲೆ ಜೊತೆ 1ಕ್ಕೆ ರೂ. 2—8—0.

ಬುಲಾಕು.



ಈ ಬುಲಾಕುಗಳನ್ನು ಇಮಿಟೇಶನ್ ವಜ್ರದ ಕಲ್ಲುಗಳಿಟ್ಟು, ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿ ಅಪರಂಜಿ ಭಂಗಾರದ ಗಿಲೀಟು ಮಾಡಿರುವದು. ಇದರಲ್ಲಿ ಕೆಂಪು, ಬಿಳಪು, ಹಸುರು ಬಣ್ಣದಲ್ಲಿ ಇರುವವು.

ಇದರ ಬೆಲೆ 1ಕ್ಕೆ ರೂ. 1—8—0.



ಇದು ವಿದ್ಯುಚ್ಛಕ್ತಿಯ ಬಲೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಸಿಗರೇಟ್, ಚುಟ್ಟ ಸೇದುವವರಿಗೂ ರಾತ್ರಿಯಲ್ಲಿ ತಿರುಗುವವರಿಗೂ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ. ಕ್ರಯ ರೂ. 1—8—0.

ಕೈಯಲ್ಲಿ ಕಟ್ಟುವ ಗಡಿಯಾರ,



ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಅಥವಾ ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಷ್ಟಪಟ್ಟಾಗ್ಯೂ ನಿಲ್ಲದೆ ನಡೆಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾಗದು. ಇದರ ಕ್ರಯ ರೂ. 4—8—0.

ವಿಳಾಸ:— ಪಿ. ಗೋಪಾಲ್ ಎಂಡ್ ಕೊ.
28 ಹನುಮಂತರಾಯಿ ಕೊಯಿಲ್ ಬೀದಿ,
ಪಾರ್ಕ್‌ಟೌನ್, ಮದರಾಸು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವ ಇತರ ತೈಲಗಳಿಲ್ಲ. [illegible]

0—4—0.

Dr. Navaratna & Sons,
Kalbadevi Road, BOMBAY.

[illegible]

ಯುದ್ಧದ ಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಸಾಲವು

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವ ಬಗ್ಗಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು.

1929ರಿಂದ 1947ರ ವರೆಗಿನ ವರ್ಷಗಳ ಮಧ್ಯಕಾಲದಲ್ಲಿ ಸಂದಾಯವಾಗುವ ಸೇಕಡಾ 5ರ ದರದ ಸಾಲವು—1920ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ವಾರ್ ಬಾಂಡ್ಸ್ ಎಂಬ ಯುದ್ಧಸಂಬಂಧವಾದ ಸಾಲಪತ್ರಗಳು, 1922ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ಯುದ್ಧಸಂಬಂಧವಾದ ಸಾಲಪತ್ರಗಳು—(1917—18ನೇ ಇಸವಿಯಲ್ಲಿ ಸಾದರು ಮಾಡಲ್ಪಡುವ) ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು.

ಅಸಲ್—ವ—ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು.

I. 1929ರಿಂದ 1947ರ ಪರ್ಯಂತದ ವರ್ಷಗಳಲ್ಲಿ ಸಂದಾಯವಾಗತಕ್ಕ ವಾರ್ ಲೋನ್ ಎಂಬ ಯುದ್ಧಸಂಬಂಧವಾದ ಸಾಲವು.

ಸಾದರುಮಾಡುವ ಬೆಲೆ:—ಸೇಕಡಾ 95ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿ ಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 95ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 15ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ ರೂ. 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳನಂತರದ ಮೊದಲನೆಯ ತಿಂಗಳ, ಎರಡನೆಯ ತಿಂಗಳ, ಮೂರನೆಯ ತಿಂಗಳ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5ರ ಮೇರೆಗೆ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಯಾಗುವುದು.

ಪರಿಹರಿಸಲ್ಪಡುವ ತಾರೀಕು:—ತತ್ಪೂರ್ವವಾಗಿಯೇ ಪರಿಹರಿಸಲ್ಪಡದಿದ್ದರೆ, 1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲವು 1947ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ನೂರಕ್ಕೆ ನೂರರಂತೆ ಮರು ಪಾವತಿಮಾಡಲ್ಪಡುವುದು. ಆದರೆ ಸದರೀ ಸಾಲ ಯಾ ಅದರ ಯಾವದೊಂದು ಭಾಗವನ್ನು ನೂರಕ್ಕೆ ನೂರರಂತೆ, 1929ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ಯಾ ಅನಂತರ ಇಂಡಿಯಾ ಗಜೇಟಿನಲ್ಲಿ ಮೂರು ಕ್ಯಾಲೆಂಡರು ತಿಂಗಳ ನೋಟಿಸು ಕೊಟ್ಟು ಪರಿಹರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇಂಡಿಯಾ ಗವರ್ನ್‌ಮೆಂಟಿನವರು ಇಟ್ಟುಕೊಂಡಿರುತ್ತಾರೆ.

ಸಾಲ ಪರಿಹಾರದ ಭಂಡವಾಳವು:—1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲಪತ್ರಗಳ ಪೇಟೆಯ ಬೆಲೆಯು ತಗ್ಗುವ ಸಂದರ್ಭದಲ್ಲಿ ಏರ್ಪಾಡು ಮಾಡುವ ಬಗ್ಗಾಗಿ, ಇಂಡಿಯಾ ಗವರ್ನ್‌ಮೆಂಟಿನವರು, ಸದರೀ ಸಾಲಪತ್ರಗಳ ಪೇಟೆಯ ಬೆಲೆಯು ಅವು ಸಾದರುಮಾಡಲ್ಪಟ್ಟ ಬೆಲೆಗಿಂತ ಕಡಿಮೆಯಾದಾಗಲೆಲ್ಲಾ ಸದರೀ ಸಾಲದ ಪತ್ರಗಳನ್ನು ರದ್ದುಪಡಿಸುವ ಉದ್ದೇಶವಾಗಿ ಅವುಗಳನ್ನು ಕೊಂಡುಕೊಳ್ಳಲು ಉಪಯೋಗಿಸತಕ್ಕ ಒಂದು ಭಂಡವಾಳವಾಗಿ ಏರ್ಪಡಿಸುವಗೋಸ್ಕರ ಸದರೀ 1929ರಿಂದ 1947ರೊಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೊಬಲಗಿನ ಸೇಕಡಾ ಒಂದುವರೆಗೆ ಸಮಾನವಾದ ಒಂದು ಮೊಬಲಗನ್ನು ವರ್ಷಂಪ್ರತಿ ಪ್ರತ್ಯೇಕಿಸಿಡಲು ಒಪ್ಪಿಕೊಂಡಿರುತ್ತಾರೆ.

II. 1920ನೇ ಇಸವಿಯ ವಾರ್ ಬಾಂಡುಗಳು ಮತ್ತು 1922ನೇ ಇಸವಿಯ ವಾರ್ ಬಾಂಡುಗಳು. (ಇನ್ಕಮ್‌ಟಾಕ್ಸ್ ಮಾಫಿ.)

ಸಾದರುಮಾಡುವ ಬೆಲೆ:—ಸೇಕಡಾ ರೂ. 100ರ ಪ್ರಕಾರ, ಇದರಡಿ ನಮೂದಿರುವಂತೆ ಪಾವತಿಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ ರೂ. 100ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವ ಕಾಲದಲ್ಲಿ ಸೇಕಡಾ 20ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳ ನಂತರದ ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5½ಯ ಪ್ರಕಾರ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಮಾಡಲ್ಪಡುವದು.

ಪರಿಹರಿಸಲ್ಪಡುವ ತಾರೀಕು:—1920ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1920ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ, 1922ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1922ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ ಮರು ಪಾವತಿಮಾಡಲ್ಪಡುವುದು.

III. ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು. (ಇನ್ಕಮ್‌ಟಾಕ್ಸು ಮಾಫಿ).

ರೂ. 10, ರೂ. 20, ರೂ. 50 ಮತ್ತು ರೂ. 100ರ ಬಾಬತು ಸರ್ಟಿಫಿಕೇಟುಗಳು ಕೊಡಲ್ಪಟ್ಟ 5 ವರ್ಷಗಳ ತರುವಾಯ ಮರು ಪಾವತಿಯಾಗುವಂಥವುಗಳು.

ಸಾದರು ಮಾಡುವ ಬೆಲೆ:—ರೂ. 7—12, ರೂ. 15—8, ರೂ. 38—12 ಮತ್ತು ರೂ. 77—8.

ಈ ಸರ್ಟಿಫಿಕೇಟುಗಳನ್ನು, ಸದರಿ 5 ವರ್ಷಗಳ ವಾಯಿದೆಯಲ್ಲಿ ಯಾವ ಕಾಲದಲ್ಲಾದರೂ ಸದರಿ ಸಾಲದ ಕುರಿತ ಪ್ರಕಟಣೆಯಲ್ಲಿ ನಿರ್ದೇಶಿಸಲ್ಪಟ್ಟ ದರಗಳ ಮೇರೆಗೆ ಅವು ಸಾದರುಮಾಡಲ್ಪಟ್ಟ ಪೋಸ್ಟು ಆಫೀಸುಗಳಲ್ಲಿ ವಟಾಯಿಸಲು ಸಹಾ ಬಹುದು.

1. —ಸೆಕ್ಯೂರಿಟಿಗಳ ನಮೂನೆ:—1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಬಾಬತು ಸೆಕ್ಯೂರಿಟಿ ಪತ್ರಗಳು, 1920ನೇ ಇಸವಿಯ ವಾರ್‌ಬಾಂಡುಗಳು ಮತ್ತು 1922ನೇ ಇಸವಿಯ ವಾರ್‌ಬಾಂಡುಗಳು ಅರ್ಜಿದಾರನಿಗೆ ಇಷ್ಟವಿರುವ ಮೇರೆಗೆ ಈ ಕೆಳಗಿನ ನಮೂನೆಗಳಲ್ಲಿ (ಇದನ್ನು ಆತನು ತನ್ನ ಅರ್ಜಿಯಲ್ಲಿ ನಮೂದಿಸತಕ್ಕದ್ದು) ಕೊಡಲ್ಪಡುವುವು.

(1)	ಇನ್‌ಸ್ಕ್ರಾಯಿಬ್ಡ್ (ಹೆಸರು ರಿಜಿಸ್ಟ್ರಿ ಮಾಡಿರುವ) ಸ್ಟಾಕ್ ಸರ್ಟಿಫಿಕೇಟು … …	ಪತ್ರಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.
(2)	ಪ್ರಾಮಿಸರಿ ನೋಟುಗಳು … … … … … … …	ಇಂಡಾರಸು ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.
(3)	ಬ್ಯಾರರ್ ಬಾಂಡುಗಳು … … … … … … …	ಒಪ್ಪಿಸುವದರ ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

ಇನ್ನನ್ನು ನಮೂದಿಸದಿದ್ದ ಪಕ್ಷದಲ್ಲಿ, ಸೆಕ್ಯೂರಿಟಿ ಪತ್ರಗಳು ಇನ್‌ಸ್ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟುಗಳ ರೂಪವಾಗಿ ಪ್ರಥಮತಃ ಸಾದರುಮಾಡಲ್ಪಡುವವು.

2. ಇನ್ಕಮ್‌ಟ್ಯಾಕ್ಸು:—1920ನೇ ಇಸವಿಯ ವಾರ್‌ಬಾಂಡುಗಳ ಮತ್ತು 1922ನೇ ಇಸವಿಯ ವಾರ್‌ಬಾಂಡುಗಳ ಮೇಲಣ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಟ್ಟಿದೆ, ಆದರೆ ಸುಪರ್‌ಟ್ಯಾಕ್ಸು ಎಂಬ ವಿಶೇಷ ತೆರಿಗೆಯಿಂದ ವಿನಾಯಿಸಲ್ಪಡಲಿಕ್ಕಿಲ್ಲ. 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೇಲಣ ಬಡ್ಡಿಯು ಇನ್ಕಮ್‌ಟ್ಯಾಕ್ಸಿನಿಂದಾಗಲಿ ಸುಪರ್‌ಟ್ಯಾಕ್ಸಿನಿಂದಾಗಲಿ ವಿನಾಯಿಸಲ್ಪಡುವದಿಲ್ಲ. ಇನ್ಕಮ್ ಟ್ಯಾಕ್ಸು ಆಕ್ಟಿನ ಎರಡನೆಯ ಶೆಡ್ಯೂಲಿನ IIIನೇ ಭಾಗದ ನಿಬಂಧನೆಗಳಿಗನುಸಾರವಾಗಿ ಇನ್ಕಮ್‌ಟ್ಯಾಕ್ಸ್ ವಸೂಲು ಮಾಡಲ್ಪಡುವುದು.

3. ಮಾರ್ಪಡಿಸಲು ಸ್ವಾತಂತ್ರ್ಯಗಳು:—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ಯುದ್ಧದ ಸಾಲದ ಬಾಬತು ಚಂದಾದಾರನು ಪ್ರತಿ (ಅಂಕಿತ) ರೂ. 100ರ ಬಗ್ಗೆ ಸೇಕಡಾ 3ರ ದರದ, ಅಥವಾ 3½ಯ ದರದ ಯಾವವಾದರೂ ರೂಪಾಯಿ ನಾಣ್ಯದಲ್ಲಿರುವ ಸಾಲಗಳ (ರುಪೀ ಲೋನುಗಳ) ಅಥವಾ ಇಂಡಿಯಾ ಗವರ್ನ್‌ಮೆಂಟಿನವರ 1916–17ನೇ ಇಸವಿಯ ಸೇಕಡಾ 4ರ ದರದ ಕನ್‌ವರ್ಶನ್ ಲೋನಿನ (ಅಂಕಿತ) ರೂ. 150ನ್ನು ಮಾರ್ಪಡಿಸಬಹುದು ಮತ್ತು ಅದರ ಬದಲಾಗಿ ಈ ಕೆಳಗಿನ ದರದಲ್ಲಿ, ಎಂದರೆ—

ಮಾರ್ಪಡಿಸತಕ್ಕ ಸೇಕಡಾ 3ರ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 65,

ಮಾರ್ಪಡಿಸತಕ್ಕ ಸೇಕಡಾ 3½ಯ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 76,

ಮಾರ್ಪಡಿಸತಕ್ಕ ಸೇಕಡಾ 4ರ ದರದ ಸಾಲದ ಕನ್‌ವರ್ಶನ್ ಲೋನಿನ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 92

ಮಾರ್ಪಡಿಸತಕ್ಕ ಸೇಕಡಾ 4ರ ದರದ ಸಾಲದ ಕನ್‌ವರ್ಶನ್ ಲೋನಿನ ಪ್ರತಿ (ಅಂಕಿತ) ರೂ. 100ಕ್ಕೆ ಭರ್ತಿಮಾಡಲು ಅಗತ್ಯವಿರುವ ಕಡಿಮೆ ಬೀಳುವ (ವಾರ್ ಲೋನಿನ) ಮೊಬಲಗಿನ ಸಹಿತವಾಗಿ ಪಾವತಿಮಾಡಿ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳನ್ನು ಹೊಂದಬಹುದು; ಪರಂತು ಈ ಹೆಚ್ಚಿಗೆ ಮೊಬಲಗನ್ನು ರೂಪಾಯಿ ಒಂದರ ಒಂದು ಆಣೆಯ ಮೇರೆಗೆ ವಜಾಮಾಡಿ ರೊಕ್ಕವಾಗಿ ಪಾವತಿಮಾಡತಕ್ಕದ್ದು.

4. ಮಾರ್ಪಡಿಸುವ ಹಕ್ಕುಗಳನ್ನು 1917ನೇ ಇಸವಿಯ ನವಂಬರು 1ನೇ ತಾರೀಕಿನ ತರುವಾಯ ಯಾವ ಕಾಲದಲ್ಲಾದರೂ ಚಲಾಯಿಸಬಹುದು, ಪರಂತು 1918ನೇ ಇಸವಿಯ ಜನವರಿ 15ನೇ ತಾರೀಕಿನ ನಂತರ ಚಲಾಯಿಸತಕ್ಕದ್ದಲ್ಲ. ಮಾರ್ಪಡಿಸುವ ಕುರಿತ ಅಧಿಕಾರ ಪತ್ರಗಳು ಪರಭಾರೆ ಮಾಡತಕ್ಕವಾಗಿವೆ, ಮತ್ತು ಬ್ಯಾರರ್ ಫಾರ್ಮಿನಲ್ಲಿ ಕೊಡಲ್ಪಡುವುವು.

5. ಮಾರ್ಪಡಿಸಿ ಕೊಡಲ್ಪಟ್ಟ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನಿನ ಪತ್ರಗಳ ಬಗ್ಗೆ 1917ನೇ ಇಸವಿಯ ಆಗೋಸ್ತು 15ನೇ ತಾರೀಕು ಮೊದಲ್ಗೊಂಡು ಬಡ್ಡಿ ಪ್ರಾರಂಭವಾಗುವುದು. ಮೇಲಿನ 3ನೇ ಕ್ಲಾಜಿಗನುಗುಣವಾಗಿ ಪಾವತಿಮಾಡಿದ ರೊಕ್ಕ ಮೊಬಲಗುಗಳ ಬಗ್ಗೆ ಪ್ರತ್ಯೇಕವಾಗಿ ಬಡ್ಡಿ ಪಾವತಿಮಾಡೋಣಾಗಲಿಕ್ಕಿಲ್ಲ.

6. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳು, 1920ನೇ ಇಸವಿಯ ವಾರ್ ಬಾಂಡುಗಳು, ಮತ್ತು 1922ನೇ ಇಸವಿಯ ವಾರ್ ಬಾಂಡುಗಳನ್ನು ಪಡೆದಿರೋಣವು, ಇಂಡಿಯಾ ಗವರ್ನ್‌ಮೆಂಟಿನವರು ಇನ್ನು ಮುಂದೆ ಯಾವಾಗಲಾದರೂ ಸಾಲಪತ್ರಗಳನ್ನು ಕೊಡುವ ಸಂದರ್ಭದಲ್ಲಿ ಮಾರ್ಪಡಿಸಲು ಸ್ವಾತಂತ್ರ್ಯ ಕೊಡುವದಿಲ್ಲ.

7. ಅರ್ಜಿಗಳು:—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಬಗ್ಗೆ, 1920ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ, 1922ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ ಮಾಡೋಣಾಗುವ ಅರ್ಜಿಗಳನ್ನು (ಪೋಸ್ಟು ಆಫೀಸಿನ ಮುಖಾಂತರವಾಗಿ ಮಾಡೋಣಾಗುವ ಅರ್ಜಿಗಳ ವಿನಾ) 1917ನೇ ಇಸವಿಯ ಮಾರ್ಚಿ 15ನೇ ತಾರೀಕು ಗುರುವಾರದ ಲಾಗಾಯತು, 1917ನೇ ಇಸವಿಯ ಜೂನು 15ನೇ ತಾರೀಕು ಶುಕ್ರವಾರದ ವರೆಗೆ, ಯಾವ ದಿನವಾದರೂ ಈ ಕೆಳಗೆ ನಮೂದಿಸಿರುವ ಆಫೀಸರರ ಯಾ ಮನುಷ್ಯರ ಬಳಿ ಹಾಜರುಪಡಿಸಬಹುದು:—

(1) ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಬಳಿಗೆ, ಅಥವಾ ಯಾವದಾದರೂ ಪ್ರಾವಿನ್ಸಿನ ಅಕೌಂಟಂಟ್ ಜನರಲ್‌ರ ಯಾ ಕಂಟ್ರೋಲರ ಬಳಿಗೆ;—(2) ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಸೆಕ್ರೆಟರಿಗಳ ವ ಟ್ರೆಜರರುಗಳ ಬಳಿಗೆ, ಅವರವರ ಹೆಡ್ ಆಫೀಸುಗಳಲ್ಲಿ; ಅಥವಾ ಇಂಡಿಯದಲ್ಲಿಯ ಸದರಿ ಬ್ಯಾಂಕುಗಳ ಯಾವದೊಂದು ಶಾಖೆಯ ಏಜಂಟರುಗಳ ಬಳಿಗೆ; ಮತ್ತು (3) ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಗವರ್ನ್‌ಮೆಂಟ್ ಖಜಾನೆಗಳ ತಾಬೆಯಿರುವ ಆಫೀಸರರ ಬಳಿಗೆ.

8. ಅರ್ಜಿಗಳು 100 ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ, ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು.

9. ಮೊಬಲಗು ರೂ. 100ರ ಬಗ್ಗೆ ಮಾತ್ರ ಮಾಡಲ್ಪಡುವ ಎಲ್ಲಾ ಅರ್ಜಿಗಳ ಸಂಗತಿಯಲ್ಲಿ ಪೂರಾ ಮೊಬಲಗು, ಎಂದರೆ 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಸಂಗತಿಯಲ್ಲಿ ರೂ. 95 ಮತ್ತು 1920ನೇ ಇಸವಿಯ ವಾರ್ ಬಾಂಡುಗಳ ಮತ್ತು 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 100 ಕಳುಹಿಸಲ್ಪಡಬೇಕು.

10. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ, 1920ನೇ ಇಸವಿಯ ವಾರ್ ಬಾಂಡುಗಳ ಅಥವಾ 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 200ರ ಯಾ ಅಧಿಕ ಮೊಬಲಗುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳು—(a) ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ,—(b) ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ, ಮಾಡಲ್ಪಡಬಹುದು.

12. ದಲಾಲಿ:—ಅಂಗೀಕರಿಸಲ್ಪಟ್ಟ ಬ್ಯಾಂಕರರಿಗೂ, ದಲಾಲಿಗಳಿಗೂ, ಅವರ ಸ್ಟ್ಯಾಂಪು ಇದ್ದ ರೊಕ್ಕದ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ [illegible] ಕೊಡಲ್ಪಡುವುದು, ಆದರೆ ಪೋಸ್ಟಲ್ ಆಫೀಸುಗಳ ಮುಖಾಂತರವಾಗಿ ಮಾಡಲ್ಪಡುವ [illegible] ಪೋಸ್ಟು ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳ ಬಗ್ಗಿನ ಅರ್ಜಿಗಳ ಮತ್ತು ಮಾರ್ಪಡಿಸುವ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ [illegible] ಕೊಡಲ್ಪಡತಕ್ಕದ್ದು.

ಅರ್ಜಿಯ ಫಾರ್ಮುಗಳನ್ನು ಅಕೌಂಟಂಟ್ ಜನರಲರ ಬಳಿಯಿಂದ ಯಾ ಯಾವದೊಂದು ಬ್ಯಾಂಕಿನವರಿಂದ ಯಾ ದಲಾಲರ ಬಳಿಯಿಂದ [illegible]

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ, ೨೦-೩೦ ವರ್ಷಗಳ ಹಳತ, ಸ್ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೩ ಬಾಟ್ಲಿಗಳ ವರೆಗೆ ೩ಆಣೆ.

ವಿಶೇಷ ಸೂಚನೆ—ದೇಶಿ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾ.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಿನ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ)ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಕುರುಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋಯೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋಯೋಣ, ತಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ್ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಥೆ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನ ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗ್ಲಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟ್‌ರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರ, ಮೈಸೂರು.

ಇಕ್ಲಿಪ್ಸ್ ಡ್ರಾಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಆಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ.
ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ಇಕ್ಲಿಪ್ಸ್ ಬಾಮ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುರುಕು, ತುರಿಕಜ್ಜಿ, ಮೂಲವ್ಯಾದಿ, ಬೆಂಕಿಯಬೊಕ್ಕೆ, ಮೊಡವೆ, ಜೇಣು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

☞ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಟೂತ್‌ಕಟ್ ರೂ. 1-3-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನಸ್ಖಲಿತವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವು ಒಳ್ಳೇ ಸ್ಥಿತಿಯಲ್ಲಿರುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನೋಡಿ!

ಆಹ್ನಿಕಮಂಜರೀ, ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪ್ರತಿಗಳು ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,
Avenue Road.
BANGALORE CITY.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಪಡಿಸಿದಂಥವುಗಳನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಕೂರೆಯುವುದು ನಿವಾರಣೆಯಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಆಫ್ ದಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಡಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗ್ಮೋರ್ ನಂ. 2, ಮದ್ರಾಸ್ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವದರಲ್ಲಿ ಹ್ಯಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ವಿಷಮಶೀತ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮೆಂಬರ್, ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನವಟ್ಟೆ ಮೆ॥ ಲಲ್ಲೂಭಾಯಿ, ಸಾಮಲ್‌ದಾಸರವರು-ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ॥ ಜೋರ್ಜ್‌ಕಿಂಗ್ ಎಫ್. ಐ. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿ ಮಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ವಿಜ್ಞಪ್ತಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗನ ಸಂತನ ಪೋಲಿಸಿ ಪ್ರಕಾರ ನನ್ನ ಮಗನಿಗೆ ಬಾವತಿಯಾಗತಕ್ಕ ಹಣವನ್ನು ಸರಿಯಾದ ವೇಳೆಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ಕ್ಷಣ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಬಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿರುವುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

"ಗ್ರಾಹಕರೇ. ಒಮ್ಮೆಗೆ ಸಂದರ್ಶಿಸಿರಿ."

ನಮ್ಮಲ್ಲಿ ಎಲ್ಲಾ ತರದ ಸುಗಂಧ ಸಾಹಿತ್ಯಗಳೂ, ಇಂಗ್ಲಿಷ್ ಮತ್ತು ಸ್ವದೇಶಿ ಸಾಬೂನುಗಳು, ಸುಗಂಧ ತೈಲಗಳು, ಆರಾರೂಟ್, ಬಾರ್ಲಿ, ಕಾಫಿ, ಚಾಕೊಲೆಟ್, ಬಿಸ್ಕೆಟುಗಳು, ಟೊಯಿಲೆಟ್ ಪೌಡರುಗಳು, ಕೆಕೆ ಕಾಲಕ್ಕೆ ಅನುಕೂಲವಾದ ಐ.ಲ್ ಆಫ್ ರೋಜ್ ಮತ್ತು ಲೈಮ್‌ಜ್ಯೂಸ್ ಗ್ಲಿಸರಿನ್, ಪೋಮೆಡ್ ವೆಸ್ಲಿನ್, ಕೈಲಾಂದ್ರ ಮತ್ತು ಚಿಮ್ನಿ ಲಾಂದ್ರಗಳು, ಕಪ್ ಮತ್ತು ಸ್ಸಾಸರುಗಳು, ಚೊಕ್ಕಲೇಟ್ ಮತ್ತು ಪೆಪ್ಪರ್‌ಮಿಂಟುಗಳು, ಟೇಬಲ್ ಲೇಂಪುಗಳು, ವಿಶಿಷ್ಟ ಲೇಖನ ಸಾಹಿತ್ಯಗಳು, ಮುಖ ನೋಡುವ ಕನ್ನಡಿಗಳು, ಪಾತ್ರ ಮತ್ತು ಗಾಜಿನ ಸರವಣಿಗಳು, ಮಕ್ಕಳು ಆಡುವ ಸಾಹಿತ್ಯಗಳು, ಫೌಂಟೆನ್‌ಪೇನು ಮತ್ತು ಇಂಕುಗಳು, ಕ್ಯಾಶ್ ಬೋಕ್ಸ್‌ಗಳು, ದೃಷ್ಟಿ ಚಕ್ರಗಳು, ಪೇಟೆಂಟ್ ಔಷಧಿಗಳು, ರಖಮಾಗಿಯೂ ಚಿಲ್ಲರೆಯಾಗಿಯೂ ಅತೀ ಸುಲಭ ದರದಲ್ಲಿ ದೊರಕುವದಲ್ಲದೆ ಈ ಕೆಳಗೆ ಕಾಣಿಸಿದ ಸಾಹಿತ್ಯಗಳಿಗೆ ನಾವು ಮುಖ್ಯ ಏಜಂಟರಾಗಿರುವೆವು. ಕಾಮಿನಿಯಾ ತೈಲ ಮತ್ತು ಒಟ್ಟೊ-ದಿಲ್‌ಬಹಾರ್ ಅತ್ತರುಗಳು ಮತ್ತು ಕಾಮಿನಿಯಾ ಕಂಪೆನಿಯಲ್ಲಿ ಆಗುವ ಪ್ರತಿ ಒಂದು ಸಾಹಿತ್ಯಗಳು, ಅಮೃತಾಂಜನ, ಬಾಲಾಮೃತ, ಸಿಂತಾನ್, ಡೈಮಂಡ್ ಸೋಪುಗಳು, ಜಪಾನ್ ದೇಶದ ದಂತುಗಳಿಂದ ಆಗುವ ಕಡ್ಡಿಗಳು, ಇದೂ ಅಲ್ಲದೆ ಅನೇಕ ರೀತಿಯ ಪೆನ್ಸಿ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಮ್ಮೆಗೆ ನಮ್ಮಲ್ಲಿಗೆ ಬಂದು ಸಂದರ್ಶಿಸಿದರೆ ನಮ್ಮ ದರಗಳು ತಮಗೆ ಅನುಕೂಲವಾಗಿಯೇ ಇವೆಯೆಂದು ತಿಳಿಯಬಹುದು. ಡಿಷೋಯಲ್ ದಂತಮಂಜನ 6 ಡಬ್ಬಿಗಳ ಬೆಲೆ ಆಣೆ 8.

ದಿ ಉಲನ್ ಮಾರ್ಟ್,

ಮಂಗಳೂರು, ದ. ಕ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪಂಥಾವ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಗ್ರಾಮ ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳು, ಒಟ್ಟಾಗಿ ತರಿಸಿಕೊಂಡರೆ ಆಣೆ 15 ...

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ.

ಈ ಸಾರ್ಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯುಕ್ತಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿಗಳ್ಕೆ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಳಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯುಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ 1ಕ್ಕೆ ರೂ. ೦-೧೨-೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಬ್ಬೆ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ಶಂಪಾಗಿ ಮಾಡುತ್ತದೆ. ಬಾಟ್ಲಿಗಳ್ಕೆ ರೂ. ೧-೮-೦.

ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ.

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ದೂರಮಾಡುವದು. ದೇಹಕಾಂತಿಯನ್ನು, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನು ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತನಾದ ಚ್ಯವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ:**— ಪ್ರಸೂತವಾದ ಲಾಗಾಯತು 30 ದಿನಗಳವರೆಗೆ ಉಪಯೋಗಿಸುವದರಿಂದ ಪಥ್ಯ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹೆ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅಸ್ತಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೇನೆಯನ್ನು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರೆಸೆಂಟೆಟಿವ್ ಮೆಂಬರು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿ ಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಲೆಕ್ಸಾಂಡ್ರೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೇ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋವರ್ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರೆಗೂ ಇನ್ನಾರಲ್ಲಿಯೂ ಬಂದಿಲ್ಲ. ನಮ್ಮಲ್ಲಿಗೆ ಹುಟ್ಟಿದ ಮಹೋತ್ಸವಕ್ಕೆ ತರಿಸಿ ಇರುವವರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರಿಗೆ ಸೀಮೆಯಿಂದ ತರಿಸಿರುತ್ತೇವೆ.

ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್‌ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ	ರೂ.	3—12—0.
ಗಡಿಯಾರ 1ಕ್ಕೆ ಕ್ರಯ	ರೂಪಾಯಿ	3—0—0.
ಪೇನಾ ,,	,,	1—0—0.

ವಿಳಾಸ:— ವೈರಂ ಅಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗುವಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ಪಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಡೊಂಗರ್ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹೊಸದಾಗಿ ಕಂಡುಹಿಡಿಯಲ್ಪಟ್ಟು ಇರುವ

ಕ್ರೌನ್ ಸೋಪ್.

ಕೆಡಲಿಲ್ಲ. ಕಲೆಯಿಲ್ಲ. ಉರಿಯಿಲ್ಲ.

ಇದು ಶರೀರದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅಚ್ಚುಕಟ್ಟಾಗಿ ತೆಗಿಯುತ್ತೆ ನೋಯುವದಿಲ್ಲ. ಚರ್ಮಕ್ಕೆ ಕಲೆಯಾಗದು. ಇತರರು ಮಾರುವ ಲೋಷಂಪಾಡರುಗಳನ್ನು ವ ಸೋಪನ್ನು ತೆಗದು ಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತ ಪತ್ರಿಕೆಗಳು ಬಂದಿರುತ್ತೆ ಅವ ರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್‌ಗೋಲ್ ಉಂಗುರ ಇನಾಂ. ರೂ. 1-10-0.

ಯೋಗ್ಯತ ಪತ್ರಿಕೆ.

ಅನೇಕಲ್ ಪೋಸ್ಟು ಮಡಿವಾಳ ಗ್ರಾಮದಲ್ಲಿ ಇರುವ ವೀರಸ್ವಾಮಿ ಮೊದಲಿಯಾರ್ — ನಮ್ಮ ಕಂಪೆನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದರಿಂದ ಬಹಳ ಆನಂದವಾಯಿತು. ದಯಯಿಟ್ಟು ಇನ್ನೊಂದು ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು.

ವಿಳಾಸ: —

ಎಂ. ಎಚ್. ಸಿಂಗ್ ಅಂಡ್ ಕೋ.,
ನಂ. 7-2ನೇ ನಾರಾಯಣನ್ ಬೀದಿ.
ವಿಂಟು ಪೋಸ್ಟು, ಮದರಾಸ್.

ದಿವ್ಯಾಂಜನ. Divyanjan. (Regd.)

ಗುಣ ಬಾರದಿದ್ದರೆ ಹಣ ಪರತು.

ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು ಒಡೆವುದು, ಉಳುಕು, ಉರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ. 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಪ್ಪಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ.

ಇತ್ತೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:—

ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ: ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಲ್ಲಿ ಬರೆಯತಕ್ಕದ್ದು.

ಇಂತಿ ಮಾಲಕರು:— Someshwar & Sons,
Fergusson Road, BOMBAY.

ಒಂದು ಮಾತು!

ಸರಕಾರದವರು ಮತ್ತು ಲೋಕಲ್ ಬೋರ್ಡುಗಳು ಆಸ್ಪತ್ರೆಗಳನ್ನು ಪ್ರತಿ ತಾಲೂಕು ಪಟ್ಟಣಗಳಲ್ಲಿಯೂ ಸ್ಥಾಪಿಸಿರುತ್ತಾರೆ. ಬಹಳ ಜನರು ಇವುಗಳಿಂದ ಪ್ರಯೋಜನವನ್ನು ಪಡಿಯುತ್ತಿರುವರು. ರೋಗಕ್ಕೆ ತಕ್ಕ ಶೋಧನೆ, ಶೋಧನೆಗಳಿಗೆ ಬೇಕಾಗಿರುವ ಔಷಧಸಂಗ್ರಹ ಇವೆರಡರಿಂದಲೇ ಈ ಆಸ್ಪತ್ರೆಗಳು ಮೆರೆಯುವಂಥಾದ್ದು. ಇಷ್ಟು ಹೇಳಿದ ಮೇಲೆ ಆಸ್ಪತ್ರೆಗಳ

ಇಂಥಾ ಔಷಧ ಸಂಗ್ರಹಗಳು

ಏನೆಂದು ವಿವರಿಸಬೇಕೆಂತಿಲ್ಲ. ಆದರೆ ಆಸ್ಪತ್ರೆಗಳ ಅನುಕೂಲವು ಸದಾ ಸರ್ವದಾ ಒಂದೇ ರೀತಿ ದೊರಿಯುವದು ಸರ್ವರಿಗೂ ಸಾಧ್ಯವಲ್ಲದ್ದರಿಂದ

ಅಂಥಾ ಔಷಧಿಗಳ ಸಂಗ್ರಹ

ವನ್ನು ಮಾಡಿಕೊಂಡು

ಕಳೆದ ಇಪ್ಪತ್ತು ವರುಷಗಳಿಂದ

ಪ್ರಖ್ಯಾತ ಡಾಕ್ಟ್ರರುಗಳ ಸಹಕಾರದಿಂದ ಔಷಧಿಗಳನ್ನು ಕೊಡುತ್ತಿದ್ದೇವೆ.

ದರಗಳು ಈ ಔಷಧಗಳ ಕ್ರಯದ ಮಾಹಿತಿಯಿಲ್ಲದ ಗ್ರಾಮಸ್ಥರಿಗೂ ಇತರರಿಗೂ ಒಂದೇ ರೀತಿ ಸುಲಭವಾಗಿರುವವು. ಹಲವು ಡಾಕ್ಟ್ರರುಗಳಿಗೆ ಔಷಧಗಳನ್ನು ಸಂಗ್ರಹಿಸುತ್ತಿದ್ದೇವೆ.

ನಮ್ಮ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಔಷಧಿ ವ್ಯಾಪಾರಸ್ಥರು,
ರಥಬೀದಿ, ಮಂಗಳೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಹಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತಿ ವಿಳಾಸ: — "ಪಂಡಿಟ್" ಮದರಾಸ್.

ಸ್ವದೇಶಾಭಿಮಾನಿ

ಕಳೆದ 10 ವರುಷಗಳಿಂದ ಪ್ರಕಟಿಸಲ್ಪಡುವ ಕನ್ನಡ ವಾರಪತ್ರಿಕೆಯು.

ದಕ್ಷಿಣ ಕನ್ನಡದಲ್ಲಿ ಇದೊಂದರ ಹೊರತು ಬೇರೆ ವಾರಪತ್ರಿಕೆಗಳಿರವು.

ವಾರ್ಷಿಕ ಚಂದಾ ರೂ. ೧—೮—೦.

ಅಂಚೆ ವೆಚ್ಚ ಸೇರಿ ರೂ. ೨—೫—೦.

ವ್ಯಾಪಾರಗಳ ಜಾಹೀರಾತು ಮೊದಲಾದವುಗಳನ್ನು ಪ್ರಕಟಿಸಲು ಅನುಕೂಲವಾದ ಪ್ರಕಟಣಾ ಭಾಗವು ಪತ್ರದೊಂದಿಗೆ ಸೇರಿರುವದು. ಪ್ರಕಟಣಾವ ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ಸ್ವದೇಶಾಭಿಮಾನಿ ಆಫೀಸು,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇವರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಮಿಶ್ರಣದ ಬರೀ 48 ದಿವಸಗಳ ಸೇವನೆಯಿಂದ ಶ್ವಾಸಖಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಉಂಮೂತ್ರ ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಹರು.

ಶೀಸೆ 1ರ ಕ್ರಯ 14 ಆಣೆ. ವಿ. ಪಿ ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಿಗಳೂ ತಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರಿಯಿರಿ.

ವಿಳಾಸ:—ಪರಿಮಳಾಂಜನ ಡಿಪೋ,
ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವು. ಮಕ್ಕಳ ಆಟಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಸೆಟ್ಟು ೧ಕ್ಕೆ ೩-೦-೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದ್ವಯಂ ರೂಪಾಯಿ ೧ಕ್ಕೆ ೮ ತೊಲೆ, ತ್ರಿಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೫ ತೊಲೆ.

ಇದಲ್ಲದೆ ಬೇರೆ ರೇಷ್ಮೆ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Choukhambay,
BENARES CITY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು. S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore

Registered No. M. [illegible]

ಚಂದಾಹಣ:—ವರ್ಷ 1ಕ್ಕೆ ರೂ. 1—8—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧. ಮಂಗಳೂರು, ತಾರೀಕು ೩೦ನೇ ಮಾರ್ಚಿ ಶುಕ್ರವಾರ ೧೯೧೭. ಸಂಚಿಕೆ ೧೩.

ಕೋರಾ ಮತ್ತು ಸೀತ ಸಿಡುಬು ಯಾ ಕೊಟ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡೆಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವೆಂತ ತೋರಿಬರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದೆನೇ ಆಗುವಂಥಾದ್ದು ಬಹುವಕ್ಷ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವು ಆಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಬಾಧೆಯು ನಿಂತಾಕ್ಷಣವೇ ತಲೆದೋರವು. ಕೋರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೋಟಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕೋರಾ ನಂತರ ಬಂದುಬಿಟ್ಟದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥಾದ್ದೆ. ಆದ್ದರಿಂದ ಈ ರೋಗಗಳು ತಗಲಿದಾಗ ಹೆಚ್ಚಿನ ಜಾಗ್ರತೆಯ ಉಪಶಮನವು ಆಗತ್ಯವಾಗಿರುವದು.

ಹೊ ಮಿ ಯೊ ಪ ಥಿ ಕ್ ಮ ತ್ತು ಟಿ ಸ್ಯು ಔ ಷ ಧಿ ಗ ಳು.

ಇವುಗಳ ಮೂಲಕ ಈ ಉಪಶಮನವು ಬಹಳ ಸುಲಭದಲ್ಲಿ ಮಾಡಲು ಸಾಧ್ಯವಾಗುವದು. ಈ ಎರಡು ರೋಗಗಳು ಪ್ರಾಪ್ತವಾದ ಕಾಲದಲ್ಲಿ ಈ ಔಷಧಿಗಳಲ್ಲಿ ಯಾವ್ಯಾವದನ್ನು ಹೇಗೇಗೆ ತಕೊಳ್ಳುವದು ಇದರ ಅನುಪಾನವೇನೆಂಬುದನ್ನು ಸೂಚಿಸುವ ಅನುಪಾನ ಪತ್ರಗಳೂ ಈ ಔಷಧಗಳೂ ನಮ್ಮಲ್ಲಿ ದೊರಿಯುತ್ತವೆ.

ಕೋಟಲೆಯ ಕಲೆಗಳು ಬೇಗನೆ ಪಾಸಿಯಾಗುವಂಥಾ ಮುಲಾಮು ತಯ್ಯಾರಿರುವದು.

ಕ್ರಯ ಕರಡಿಗೆ 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ ಚೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು ಇತರರಿಂದ ಏಕೆ ಪಡೆಯಬೇಕು?

ಬಾಟ್ಲ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು? ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್‌ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ

ಗ ಜ ಕ ರ್ಣ ದ ಮು ಲಾ ಮು.

ಡಬ್ಬಿ 1ಕ್ಕೆ ಆಣೆ 6.

ಮಕ್ಕಳ ಎಕ್ಸಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ನೋಟೀಸು.

ದಕ್ಷಿಣ ಕನ್ನಡಾ

ಒಫಿಶಿಯಲ್ ರಿಸೀವರರ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 40/16.

ಉಳ್ಳಾಲ ಅಪ್ಪ ಕಿಣಿ—ಅರ್ಜಿದಾರ, ಕ್ರೆಡಿಟರ.

ಎದ್ರಿ

ಮಂಜೇಶ್ವರ ಚರಡಪ್ಪವ-ಲ್ಯ-ರೆಸ್ಪೊಂಡೆಂಟ್, ಇನ್ಸಾಲ್ವೆಂಟ್.

ಸದರಿ ಇನ್ಸಾಲ್‌ವೆಂಟಿನ ಬಾಬ್ತು ತಾ. 9-3-1917ರಲ್ಲು ಕೊಡೋಣಾವ ಏಲಂ ಇಸ್ತಿಹಾರಿನಿಂದ ತೋರುವ ಗೋಳಿಕಟ್ಟೆ ವಾರ್ಡಿಗೆ ಒಪ್ಪಿದ ಬಂದರ ರಸ್ತೆ ಬಡಗು ಸಾಲಿನ ಮುನ್ಸಿಪಲ್ ಟೌನ್‌ಸರ್ವೆ ನಂಬ್ರ II 541 ನಂಬ್ರ 1ನೆ ತಕ್ತಪೋಶಿ ಹಂಚು ಛಾವಣಿಯ ಭಂಡಸಾಲೆ ಕಟ್ಟೋಣಾ, ಮತ್ತು ಕಸಬಾ ಬಜಾರ ಗ್ರಾಮದ ನಂಬ್ರ 58ನೇ ಪಟ್ಟೆಗೊಪ್ಪಿದ ಸರ್ವೆ ನಂಬ್ರ 719 ಸೆಂಟ್ಸ್ 80 ವಿಸ್ತೀರ್ಣದ ರೂಪಾಯಿ 3—10—0 ಬೇರೀಜಿನ ಮೂಲಗಾರರ ಪ್ರತಿನಿಧಿ ತ್ರಿಶಿಲೇಶ್ವರ ವೆಂಕಟ್ರಾಯರಿಗೆ ಸಾಲಿಯಾನ ರೂಪಾಯಿ 24ರಂತೆ ಮೂಲಗೇಣಿ ತೆತ್ತು ಬರುವ ಬಾಗ್ಯಾತು ಹಿತ್ಲು ಯಾವತ್ತು ಮುರಮುಟ್ಟು ಹಂಚು ಛಾವಣಿ ಉಪ್ಪರಿಗೆ ಮನೆ ಇತರ ಉಪಕಟ್ಟಡಗಳು ಕೂಡಾ ಮತ್ತು ತಾ. 9—3—17ನೆ ಸ್ವದೇಶಾಭಿಮಾನಿ ಪತ್ರದ 5ನೆ ಪುಟದಲ್ಲಿ ವಿವರಿಸಿದ ಇನ್ಸ್ಯೂರೆನ್ಸ್ ಪೊಲಿಸಿಯು ಆ ದಿವಸ ಏಲಂ ಆಗದೆ ಇದ್ದದ್ದರಿಂದ ಅವು ಕೂಡಾ ಮೇಲ್ಕಂಡ ಸ್ಥಿರಸೊತ್ತುಗಳ ಮಾರಾಟದ ಸಂಗಡಲೇ ತಾ. 12—4—1917ನೆ ಮಧ್ಯಾಹ್ನ 11 ಘಂಟೆಯಿಂದ ಈ ಕೆಳಗೆ ದಸ್ಕತು ಮಾಡಿದ ಒಫಿಶಿಯಲ್ ರಿಸೀವರರ ಕದ್ರಿ ರಸ್ತೆಯಲ್ಲಿರುವ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವೆಂತಲೂ ಮತ್ತು ಸದರಿ ಆಸ್ತಿಗಳ ವಗೈರೆಗಳ ಅನುಭವ ಸದರಿ ಆಫೀಸಿನಲ್ಲಿ ತಿಳಕೊಳ್ಳಬಹುದೆಂತಲೂ ಈ ಮೂಲಕ ಪ್ರಕಟಿಸೋಣಾಗುತ್ತದೆ.

ಮಂಗಳೂರು,
ತಾ. 26—3—1917.

B. M. Hegde,
ಒಫಿಶಿಯಲ್ ರಿಸೀವರ್.

ಒಳ್ಳೆ ಗೊಬ್ಬರ! ಅವ್ವಲ್ ಈಟು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನುಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀಸು.

ವಿಟ್ಲ ಕಸಬೆಯಲ್ಲಿರುವ ಕೊಳಕೆ ವಾಸುದೇವ ಮಯ್ಯನು ತಿಳಿಸುವದೇನಂದರೆ—ಕಳೆದ 1914ನೆ ಇಸವಿ ಅಕ್ಟೋಬರ ತಾ. 10ರ ಲಾಗ್ಯಾತು 16ನೆ ಇಸವಿ ದಶಂಬರ ತಾ. 18ರ ವರೆಗೆ ನಾನು ಮತ್ತು ಮಂಗಳೂರಲ್ಲಿರುವ ಗುರುಪುರ ಸುಬ್ರಾಯ ಪ್ರಭುಗಳ ಮಗ ಗಣಪತಿ ಪ್ರಭುಗಳು ಪಾಲುಗಾರರಾಗಿ ಮಂಗಳೂರು ಶಹರ್ ಮಾರ್ಕೆಟ್ ರಸ್ತೆಯಲ್ಲಿ ನಡಿಸುತ್ತಿದ್ದ ಜವುಳಿ ವ್ಯಾಪಾರದ ಬಾಬ್ತು ನಮ್ಮಿಂದ ಹೊರಗೆ ಸಲತಕ್ಕವ ಬರತಕ್ಕ ಲೆಖ್ಖಾಚಾರಗಳನ್ನು ನಾನು ತೀರಿಸುವದಾಗಿ ಇದೇ ಮಾರ್ಚಿ ತಾ. 22ರಲ್ಲು ಸದರಿ ಗಣಪತಿ ಪ್ರಭುರಿಂದ ರಿಲೀಜು ಪತ್ರ ಮುಖಾಂತರ ಹಕ್ಕು ಪಡಕೊಂಡದ್ದರಿಂದ ಈವರೇಗೆ ಸದರಿ ಅಂಗಡಿಗೆ ಬರತಕ್ಕ ಕುಳುವಾರುಗಳ ವಸೂಲಿ ಮೊಬಲಗನ್ನು ಇನ್ನು ಮುಂದೆ ನನ್ನ ವಶ ಕೊಟ್ಟು ರಶೀದಿ ಪಡಿಯತಕ್ಕದ್ದು ಹೊರತು ಸದರಿ ಗಣಪತಿ ಪ್ರಭುರಿಗೆ ಸಂದಾಯ ಮಾಡಿದ್ದಲ್ಲಿ ಆ ನಷ್ಟಕ್ಕೆ ಅವರವರೆ ಜವಾಬ್ದಾರರಾಗಿರತಕ್ಕದ್ದು.

ತಾ. 25—3—1917. ವಾಸ್ದೇವ ಮಯ್ಯನ ರುಜು.

ಮಾರಾಟಕ್ಕೆ ಸಿದ್ಧವಾಗಿವೆ! ಬೇಗನೆ ಬಂಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ

ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.

1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ. ದ. ಕನ್ನಡ.

ಪ್ರಶ್ನೋತ್ತರ ಲೇಖ್ಯಬೋಧಿನಿ.

(6ನೆಯ ಛಾಪೆ.)

ಅರ್ಜಿ, ಪತ್ರ, ರಶೀದಿ, ದಾವೆ, ಭಾಗಪತ್ರ, ಉಯಿಲು ಮುಂತಾದ ಮಾದರಿಗಳೂ, ಎಲ್ಲ ಬಗೆಯ ಕಾನೂನುಗಳೂ ಇವೆ. ಕ್ರಯ ರೂ. 1-8-0.

"ಶಕ್ತಿ"

"ಭಾರತಿ" ಎಂಬ ವಂಗಭಾಷೆಯ ಸುಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕಿ ಶ್ರೀಮತಿ ಸ್ವರ್ಣಕುಮಾರಿ ದೇವಿಯಿಂದ ವಂಗಭಾಷೆಯಲ್ಲಿ "ಫುಲೇರ್ ಮಾಲಾ" (Fatel Garland) ರಚಿಸಲ್ಪಟ್ಟಿತು.

ಇದರಲ್ಲಿ ಮಹಮದೀಯ ಸಾಂಮ್ರಾಜ್ಯ ಸಿಂಹಾಸನವನ್ನು ಹಿಂದೂ ಸಾಮಂತ ರಾಜನೇರುವಿಕೆಯೂ, ರಾಜಪುತ್ರ ಯುವಕನೊಬ್ಬನು ಮಹಮದೀಯಾಂಗನೆಯ ಕೈ ಹಿಡಿದು ಚಕ್ರವರ್ತಿಯಾದುದೂ, ಅತ್ಯದ್ಭುತ ವರ್ಣನೀಯವು. ಕಥಾ ನಾಯಕಿಯಾದ "ಶಕ್ತಿ"ಯ ಧೈರ್ಯಸ್ಥೈರ್ಯ ಸಾಹಸಗಳು ಎಂಥವರ ಮನವನ್ನಾದರೂ ಆಕರ್ಷಿಸದಿರದು. ಒಟ್ಟಿನಲ್ಲಿ ಅನುರಾಗ ವಿಹೀನವಾದ ದಾಂಪತ್ಯದ ಪರಿಣಾಮಫಲವು ಚಿತ್ರಿತವಾಗಿ, ಸ್ನೇಹಾನುರಾಗ ಸಹಿತ ದಾಂಪತ್ಯದ ಪರಿಣಾಮವನ್ನು ಸೂಚಿಸುತ್ತಿದೆ. ಆಬಾಲವೃದ್ಧ ಸ್ತ್ರೀ ಪುರುಷರೆಲ್ಲರೂ ಓದತಕ್ಕದು.

ಕ್ರಯ ಹನ್ನೆರಡಾಣೆ ಮಾತ್ರ

ಶ್ರೀಮದಧ್ಯಾತ್ಮ ರಾಮಾಯಣ.

ಆದಿಕಾಣ್ಡವು. ೭ ಕಾಂಡಗಳಲ್ಲಿರುವ ಪ್ರತಿ ಒಂದು ಶ್ಲೋಕವು ಪ್ರತಿಪದ ಟೀಕು ತಾತ್ಪರ್ಯ ಸಹಿತ ಚಿಕ್ಕ ಬಾಲಕರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮತ್ತು ಇದು ಉತ್ತಮವಾದ ಕಾಗದಗಳುಳ್ಳದ್ದಾಗಿಯೂ [illegible] ಅನುಕೂಲವಾಗುವಂತೆ ಉತ್ತಮವಾದ [illegible] ಪ್ರತಿಯಾದ ಕಾರಣ ತಪ್ಪುಗಳಿರಲಾರವು. [illegible] ರಲ್ಲರೂ ಈ ಪುಸ್ತಕರತ್ನದ ಪ್ರತಿಯೊಂದನ್ನು ಸಂಗ್ರಹಿಸಬೇಕು. [illegible] ಪ್ರತಿಗಳೇ ಉಳಿದಿರುವದರಿಂದ ಜಾಗ್ರತೆಯಾಗಿ [illegible]

ಕ್ರಯ ರೂ. ೭—೮—೦.

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುವನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟಿಗೆ ೨-೮-೦.

೩. ಪಂಚಶೀತಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಆವನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಹಾರುವವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನಕ್ಕಿಂತ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪಂಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮರೋಗ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಸುವದು. ವಾಣಿಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists*, Vepery Post, MADARS.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ.

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪ್ಯಾ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಕಂಪನ್‌ಸಲ್ಟಿ ಕೋಷ್ಠಗಳಲ್ಲಿ ದೊರಕುವದು.

STANY BROTHERS
Sole Agents
M. C. C's, Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,** *Mangalore.*

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ.

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ.

೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆವೆಚ್ಚ ಸೇರಿ ವರ್ಷಕ್ಕೆ ೩ ರೂ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—

ಅರ್ಥಸಾಧಕ ಪತ್ರಿಕಾ ಸಂಪಾದಕರು,

"ರಿಂಗ್‌ವುಡ್," ಬೆಂಗಳೂರು.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವ ಲೋಕಪ್ರಸಿದ್ಧಿಯಾಗುವ ಹಾಗೆ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,

3. ಇರುಳಪ್ಪನ ಬೀದಿ, ಮದರಾಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯಿಸುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಸಾ ಹೇರ್ ಆಯಿಲ್ ,,	1—0—0
ವ. ಸಾರಾಂಗೀ ಹೇರಾಯಿಲ್ ,,	0-12—0
ಕಾಮಿನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಆವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ —

ಉನ್ಮಾದಿನಿ	0— 6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0— 8—0
ಅಮೃತ ಪುಳಿನ ,,	0—10—0
ಇಂದಿರಾ ಶ್ರ. ಮು.	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0— 4—0
ಪ್ರಫುಲ್ಲ	0—12—0
ಅಂಬಾಲಿಕೆ (ಹೊಸ ನಾವಿಲ್)	0— 1—6
ಕುಸುಮ ,,	0— 1—0
ರಾಧಾನಾಥ ,,	0— 2—0
ಸುಭದ್ರೆ ,,	0— 5—0
ಚಂದ್ರಹಾಸ (ಹೊಸ ಕಥೆ)	0— 1—0
ಧ್ರುವ ,,	0— 2—0
ಮಕ್ಕಳ ತಿದ್ದುವಿಕೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಆಹ್ನಿಕ ಮಂಜರಿ	1— 0—0
,, ಸಂಗೀತ ಸಮಯಸಾರ	1— 4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1— 4—0
ವಿಕ್ರಮ ,,	1— 2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮೊದಲು, ದೊಡ್ಡ ಸೈಜ್ 18"×28"ಕ್ಕೆ	0— 1—0

ಯೂರೋಪದ ಮಹಾ ಯುದ್ಧ.

ಜರ್ಮನರು ಫ್ರಾನ್ಸಿನಲ್ಲಿ ಕಳೆದ ಹತ್ತೆಂಟು ದಿವಸಗಳಿಂದ ಹಲವು ಗ್ರಾಮಗಳನ್ನು ಬಿಟ್ಟು ಹಿಂದೆ ಸರಿಯುತ್ತಲಿದ್ದಾರೆ. ಜರ್ಮನರು ಒಂದು ಸ್ಥಳದಲ್ಲಿ ಕಾಲಿಟ್ಟದ್ದೇ ಆದರೆ ನಂತರ ಅದನ್ನು ಬಿಟ್ಟುಹೋಗುವದು ಅತಿಪ್ರಯಾಸ. ಆದರೆ ಇಲ್ಲಿ ಈಗ ಒಂದರನಂತರ ಮತ್ತೊಂದು ಗ್ರಾಮವನ್ನು ಬಿಟ್ಟು ಹಿಂದೆ ಸರಿಯುವದನ್ನು ನೋಡುವಾಗ ಅವರು ಇದ್ದಂಥಾ ಈ ಹಳೇ ಸೇನಾನೆಲೆಗಳು ಅಸಮರ್ಥನಿಯವಾದುದೇ ಕಾರಣವೆಂದು ಹೇಳಲು ಪ್ರತ್ಯಕ್ಷವಾಯು ತೋರುವದಿಲ್ಲ. ಈಗ ಜರ್ಮನರು ಸುಮಾರು ಉದ್ದದಲ್ಲಿ ನೂರು ಮೈಲುಗಳಿಗೆ ಮಿಕ್ಕಿದ ಅಗಲದಲ್ಲಿ ೨೦ ಮೈಲುಗಳಿಗೆ ಮಿಕ್ಕಿದ ವಿಸ್ತೀರ್ಣದ ನೆಲೆಗಳನ್ನು ಬಿಟ್ಟು ಹಿಂದೆ ಸರಿದಿರುತ್ತಾರೆ. ಇಷ್ಟು ವಿಸ್ತೀರ್ಣದ ಸ್ಥಳಗಳನ್ನು ಜರ್ಮನರು ಬಿಟ್ಟು ಹಿಂದೆ ಸರಿದಿರುವದಾದರೂ ಜರ್ಮನ ವರ್ತಮಾನ ಪತ್ರಿಕಾಕಾರರು ಜರ್ಮನ ಸೇನಾನಾಯಕ ಹಿಂಡೆನ್‌ಬರ್ಗನ ಆಲೋಚನೆಯ ಪ್ರಕಾರ ಯುದ್ಧಸಾಧನೆಯ ಬಗ್ಗೆಗಿಯೇ ಜರ್ಮನರು ಹಿಂದೆಸರಿದುದು ಎಂದು ಹೇಳುತ್ತಿದ್ದಾರೆ. ಆದರೆ ಇವೆಲ್ಲಾ ಬರಿ ಹರಟೆಯ ಮಾತುಗಳೇ ಆಗಿವೆ. ಯಾಕೆಂದರೆ, ಮಿತ್ರರು ಈಗ ಸೇನಾ ಮತ್ತು ಯುದ್ಧಸಾಮಗ್ರಿಗಳನ್ನು ಯಥೇಷ್ಟವಾಗಿ ಒದಗಿಸಿಕೊಂಡು ಜರ್ಮನರಿಗಿಂತಲೂ ಒಂದು ಹೆಜ್ಜೆ ಮುಂದೆಯೇ ಇದ್ದಾರೆ. ಯುದ್ಧಾರಂಭ ಇಂಥಾ ಸೌಕರ್ಯಗಳು ಇಲ್ಲದ ಕಾಲದಲ್ಲಿ ಮಿತ್ರರನ್ನು ಹತಬಡೆಯಲಶಕ್ತರಾದ ಜರ್ಮನರು ಈಗ ಎಲ್ಲಾ ವಿಷಯಗಳಲ್ಲಿ ಬಲಾಢ್ಯರಾಗಿರುವ ಮಿತ್ರರನ್ನು ಹತಬಡೆಯುವದೆಂದು ಹೇಳುವದು ಬರೇ ಡಂಭಾಚಾರದ ಮಾತಾಗಿದೆ. ಹ್ಯಾಗೂ ಇರಲಿ; ಜರ್ಮನರು ಈ ರಣರಂಗದಲ್ಲಿ ಮಿತ್ರರ ತೋಪುಗಳ ಹೊಡತವನ್ನು ತಡೆಯಲಾರದೆ ಹಿಂದೆ ಸರಿದುದೇ ಅಲ್ಲದೆ ಮತ್ತೊಂದು ಕಾರಣದಿಂದಲ್ಲವೆಂತ ಧೈರ್ಯವಾಗಿ ಹೇಳಬಹುದು. ಈಗ ಬಿಟ್ಟುಹೋದ ನೆಲೆಗಳಲ್ಲಿ ಜರ್ಮನರು ಇನ್ನೂ ಇರುತ್ತಿದ್ದರೆ ಅವರಿಗೆ ಅಪಾರವಾದ ಸೇನಾ ನಷ್ಟವಾಗುತ್ತಿತ್ತು. ಈ ನಷ್ಟವನ್ನು ತಪ್ಪಿಸುವದಕ್ಕಾಗಿ ಜರ್ಮನರು ಹಿಂದೆ ಸರಿದು ತಮ್ಮ ನೆಲೆಯ ವಿಸ್ತೀರ್ಣವನ್ನು ಕಡಿಮೆಮಾಡಿಕೊಂಡಿರುವರು. ಜರ್ಮನರು ಹಿಂದೆ ಸರಿದುದರಿಂದ ಅವರ ನೆಲೆಯ ವಿಸ್ತೀರ್ಣವು ಕಡಿಮೆ ಎಂದರೆ ೨೦ ಮೈಲುಗಳಿಗೆ ತಗ್ಗಿಯದೆ. ಜರ್ಮನರು ಹೀಗೆ ಹಿಂದೆ ಸರಿಯುವಾಗ ಬಿಟ್ಟುಹೋಗುವ ಗ್ರಾಮಗಳಿಗೆ ಬೆಂಕಿಕೊಟ್ಟು, ಮನೆಗಳನ್ನು ಸುಟ್ಟು, ದಾರಿಗಳನ್ನು ನಾಶಪಡಿಸಿ ಇಲ್ಲಿಯೂ ತಮ್ಮ ಅಮಾನುಷಕೃತ್ಯವನ್ನು ವ್ಯಕ್ತಪಡಿಸಿರುತ್ತಾರೆ. ಫ್ರೆಂಚರು ಶತ್ರುಗಳನ್ನು ಎಡೆಬಿಡದೆ ಹೆಮ್‌ನಸ್ಲೆ ಥೈಲ್ಲೇ ಲ್ಯಾನಿನ ವರೆಗೆ ಹಿಂದಟ್ಟಿಕೊಂಡು ಹೋಗಿರುತ್ತಾರೆ. ಮಿಸ್ಸೆಯ ಪಶ್ಚಿಮದಲ್ಲಿರುವ ಶತ್ರುಗಳ ಮತ್ತೊಂದು ನೆಲೆಯೂ ಫ್ರೆಂಚರ ಸ್ವಾಧೀನವಾಗಿದೆ. ಶತ್ರುಗಳು ಬಹಳ ಕ್ರೂರ ರೀತಿಯಿಂದ ಕೆಲವು ಗ್ರಾಮಗಳನ್ನು ಹಾಳುಪಡಿಸಿ ಹೋಗಿರುವರು. ಬ್ರಿಟಿಷರು ಸೊಮ್ಮೆಯ ಪ್ರಾಂತ್ಯದಲ್ಲಿ ೩೦೧ ೪೦ ಗ್ರಾಮಗಳನ್ನು ಹಿಡಿದಿರುತ್ತಾರೆ. ಶತ್ರುಗಳು ನುರ್ಲು ಮತ್ತು ಅರ್‍ರಾಸಿನ ಮಧ್ಯೆ ಅತಿ ತೀಕ್ಷ್ಣತೆಯಿಂದ ಮುಂದೊತ್ತುತ್ತಿದ್ದಾರೆ. ಆದರೆ ಬ್ರಿಟಿಷ ಸೈನಿಕರು ಅವರನ್ನು ಹಿಂದಟ್ಟಿರುವರು. ಸ್ಯಾಂಟ್‌ಕ್ವೆಂಟೆನ್‌ನ ಪೂರ್ವದಿಂದ ಅರ್‍ರಾಸಿನ ದಕ್ಷಿಣದ ವರೆಗಿನ ನೆಲೆಗಳಲ್ಲಿ ಶತ್ರುಗಳು ಭೀಕರವಾಗಿ ಹಲ್ಲೆ ಮಾಡುತ್ತಿದ್ದಾರೆ. ಅರ್‍ರಾಸಿನ ಉತ್ತರದಲ್ಲಿ ಬ್ರಿಟಿಷ ಸೈನಿಕರು ದಾಳಿಮಾಡಿ ಜಯಪ್ರದರಾಗಿರುವರು.

ಸೊಮ್ಮೆ ಮತ್ತು ಬ್ಯಾಸಿನ ಮಧ್ಯೆ ಮಿತ್ರ ಸೈನಿಕರು ನುಗ್ಗಿಹೋಗಿ ಶತ್ರುಗಳೊಡನೆ ತೀಕ್ಷ್ಣವಾದ ಕದನಗಳನ್ನು ಮಾಡಿ ಜಯಪ್ರದರಾಗಿರುವರು. ಶತ್ರುಗಳು ಜೀವದ ಆಶೆ ಇಲ್ಲದೆ ಕಂಡಾತುಂಡವಾಗಿ ಎದುರಿಸಿದರೂ ಕೊನೆಗೆ ಹಿಮ್ಮೆಟ್ಟಿದರು. ಮಿತ್ರರು ಶತ್ರುಗಳನ್ನು ಬ್ಯಾಸ ಕಣಿವೆಯ ದಾರಿಯಲ್ಲಿರುವ ದಿಸ್ಸೆಯ ವರೆಗೆ ಅಟ್ಟಿರುತ್ತಾರೆ. ಬ್ಯಾಸಿನ ದಕ್ಷಿಣದಲ್ಲಿ ಮಿತ್ರರು ಏಲೆಟ್ಟೆ ನದಿಯನ್ನು ದಾಟಲುಪಕ್ರಮಿಸಿರುವರು. ಸೊಸ್ಸನ್ ಪ್ರಾಂತ್ಯದ ಉತ್ತರದಲ್ಲಿ ನಮ್ಮ ಸೈನಿಕರು ಮರ್ಗವಾಲ್ ಕಡೆಗೂ ಮುಂದರಿದಿರುವರು. ಶತ್ರುಗಳಿಗೆ ವಿಶೇಷ ನಷ್ಟವಾಗಿರುವದು. ಹೀಗೆ ಈ ರಣರಂಗದಲ್ಲಿ ಫ್ರೆಂಚರೂ ಬ್ರಿಟಿಷರೂ ಶತ್ರುಗಳನ್ನು ಒಂದೊಂದೇ ಗ್ರಾಮದಿಂದ ಹಿಂದೆ ಓಡಿಸಿ ಶತ್ರುಸೇನೆಯಲ್ಲಿ ಅಪಾರವಾದ ನಷ್ಟವನ್ನುಂಟುಮಾಡಿರುವರು. ಶತ್ರುಗಳ ೭ ರೆಜಿಮೆಂಟ್ ಸೇವೆಗೆ ಸೇರಿದ ಸೈನಿಕರಲ್ಲಿ ಅನೇಕರು ನಮ್ಮವರ ಕೈಸೆರೆಸಿಕ್ಕಿರುವರು. ನಮ್ಮವರ ಕೈಸೇರಿದ ಶತ್ರುಗಳ ಕಂದಕಗಳಲ್ಲಿ ತುಂಬಾ ಜರ್ಮನರ ಶವಗಳಿದ್ದವು. ಶತ್ರುಗಳ ಎರಡು ವಾಯುನಾವೆಗಳನ್ನು ನಮ್ಮವರು ಕೆಳಗಿಳಿಸಿರುವರು. ಜರ್ಮನರ ವಾಯುನಾವೆಗಳು ಕೆಲ್ಲೆ ಮತ್ತು ಡನ್‌ಕರ್ಕಿನ ಮೇಲೆ ಬೋಂಬುಗಳನ್ನು ಬಿಸಾಡಿರುವವು. ಆದರೆ ಡನ್‌ಕರ್ಕಿನಲ್ಲಿ ಅಪಾಯವಾಗಲೀ ನಷ್ಟವಾಗಲೀ ಸಂಭವಿಸಲಿಲ್ಲ. ಆದರೆ ಕೆಲ್ಲೆಯಲ್ಲಿ ಪ್ರಜಾಜನರಲ್ಲಿ ಇಬ್ಬರು ಹತರಾಗಿರುವರು. ಒಬ್ಬನಿಗೆ ಗಾಯವಾಗಿದೆ.

ಬ್ರಿಟಿಷರು ಪೆರೊನ್ನೆಗೆ ೭ ಮೈಲು ಪಶ್ಚಿಮದಲ್ಲಿರುವ ರೊಸ್ನೆ ಎಂಬ ಸ್ಥಳವನ್ನು ಸ್ವಾಧೀನಮಾಡಿ ಕೊಂಡಿರುತ್ತಾರೆ. ಜರ್ಮನರ ಒಂದು ಸೇನಾಪಾಳೆಯವು ಬಿಯೊಮೆಟ್ಸ್-ಲೆಸ್-ಕೆಂಬ್ರಾಯಿಯಲ್ಲಿದ್ದ ಬ್ರಿಟಿಷರ ಸೇನಾ ನೆಲೆಯ ಮೇಲೆ ಹಲ್ಲೆ ಮಾಡಿತು. ಆದರೆ ಬ್ರಿಟಿಷರು ಆ ಸೇನಾಪಾಳೆಯದ ಮೇಲೆ ಬಿದ್ದು ಅವರನ್ನು ಹಿಂದಕ್ಕಟ್ಟಿರುತ್ತಾರೆ. ಅರ್‍ರಾಸಿನಲ್ಲಿ ಬ್ರಿಟಿಷರು ದಾಳಿಮಾಡಿ ಶತ್ರುಗಳ ೨ನೇ ಸೇನಾಲೈನನ್ನು ಹಿಡಿದಿರುತ್ತಾರೆ. ಬ್ರಿಟಿಷರ ಒಂದು ಅಶ್ವದಳವು ಬಪೂಮಗೆ ೭ ಮೈಲು ಪಶ್ಚಿಮದಲ್ಲಿರುವ ವ್ಯಟ್ರೆಸ್ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಿರುವದು.

ಕಳೆದ ಒಂದು ವಾರದಲ್ಲಿ ೨೦೦ ಚದರ ಮೈಲು ವಿಸ್ತೀರ್ಣದ ಫ್ರೆಂಚ ಪ್ರದೇಶವನ್ನೂ ೨೦೦ ಪಟ್ಟಣಗ್ರಾಮಗಳನ್ನೂ ೧೦,೦೦೦ ನಿವಾಸಿಕರನ್ನೂ ಮಿತ್ರರು ಜರ್ಮನರಿಂದ ಬಿಡಿಸಿಕೊಂಡಿರುತ್ತಾರೆ. ಹೀಗೆ ಕಳೆದ ವಾರ ಫ್ರಾನ್ಸ್ ರಣರಂಗದ ೧೦೦ ಮೈಲು ವಿಸ್ತೀರ್ಣದಲ್ಲಿ ಕಂದಕಗಳ ಯುದ್ಧವು ನಿಂತು ಅಡಾಕಡಿಯ ಕದನವು ನಡೆದಿರುವದು.

ಮೆಸೊಪಟೊಮಿಯ.

ಇಲ್ಲಿ ನಮ್ಮ ಸೈನಿಕರು ಡಾಲಿಯಾ ನದಿಯನ್ನು ದಾಟಿ ಬಸ್ರಿಜ್ ಮತ್ತು ಬಕೂಬಾದ ಒಂದಂಶವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಬಕೂಬವು ಆಹಾರಸಾಮಗ್ರಿಗಳನ್ನು ಒದಗಿಸಿ ಕೊಡುವ ಮುಖ್ಯ ಸ್ಥಳವಾಗಿದೆ. ತಾ. ೧೫ರಲ್ಲು ಮೆಸೊಪಟೊಮಿಯದ [illegible] ಮೈಲು ಉತ್ತರದಲ್ಲಿರುವ ಮುಶಾಹಿದಾಯ ಎಂಬ ಸ್ಥಳವು ಬ್ರಿಟಿಷರ ಸ್ವಾಧೀನವಾಗಿದೆಂತ ತಿಳಿದುಬರುತ್ತದೆ. ಇದನ್ನು ಶತ್ರುಗಳಿಂದ ತೆಗೆದುಕೊಳ್ಳುವದಕ್ಕೆ ಮಧ್ಯಾಹ್ನದಿಂದ ಮಧ್ಯರಾತ್ರಿ ವರೆಗೆ ಬ್ರಿಟಿಷರು ಕದನ ಮಾಡಿರುವರು.

ರುಶ್ಯಾರಣರಂಗ.

ರೀಗಾ ಪ್ರಾಂತ್ಯದಲ್ಲಿ ರುಶ್ಯನರು ಶತ್ರುಗಳ ಕೈಸೇರಿದ್ದ ಕೆಲವು ಕಂದಕಗಳನ್ನು ಹಿಂದಕ್ಕೆ ಬಿಡಿಸಿಕೊಂಡಿರುತ್ತಾರೆ. ಕ್ರೈಲೊ ಪ್ರಾಂತ್ಯದಲ್ಲಿ ರುಶ್ಯನರು ಶತ್ರುಗಳನ್ನು ವಡನ್ ಮತ್ತು ಹಾಲ್ಟ್ ಸ್ಟೇಶನುಗಳಿಂದ ಓಡಿಸಿರುತ್ತಾರೆ. ರುಶ್ಯನರು ತುರ್ಕರನ್ನು ಬಿಟ್ಲೀಸಿಯ ನೆಲೆಗಳಿಂದ ಓಡಿಸಿ ಅಲಿಬಾದನ್ನು ಗೆದ್ದುಕೊಂಡಿರುತ್ತಾರೆ.

ಇಟಲಿ.

ಕೊಸ್ಸಾಟಿಲ್ಲ ಎಂಬಲ್ಲಿ ಶತ್ರುಗಳು ವಿಷಗ್ಯಾಸನ್ನು ಪ್ರಯೋಗಿಸಿ ಇಟಲಿಯವರ ಮೇಲೆ ಭೀಕರವಾದ ಹಲ್ಲೆ ಮಾಡಿದರು. ಆದರೆ ಇಟಲಿಯವರು ಶತ್ರುಸೇನೆಯಲ್ಲಿ ವಿಶೇಷ ನಷ್ಟಮಾಡಿ ಅವರನ್ನು ಹಿಂದಕ್ಕೆ ಓಡಿಸಿರುತ್ತಾರೆ.

ಮೆಸೆಡೋನಿಯ.

[illegible]

ಹೆಂಗಸರೂ ಮಕ್ಕಳೂ ಹತರಾಗಿರುವರು. ೧೧ ಮಂದಿಗೆ ಬಹಳ್ವಾಗಿಂತ ಅಪಾಯ ಉಂಟಾಗಿರುವದು. ಒಬ್ರೀಡಿಯ ಮತ್ತು ಸೆರೀದ ಮಧ್ಯೆ ಮಿತ್ರ ಸೈನಿಕರು ೧೫೦೦ ಮಂದಿ ಶತ್ರುಸೈನಿಕರನ್ನೂ ೨೦ ಆಫೀಸರರನ್ನೂ ಸೆರೆಹಿಡಿದಿರುತ್ತಾರೆ.

ವಿದೇಶ ವೃತ್ತಾಂತ.

ನ್ಯೂಯೋರ್ಕಿನಲ್ಲಿ ೧೩ ಸಾವಿರ ಪ್ರಜಾಜನರು ಕೂಡಿದ್ದ ಒಂದು ಸಭೆಯಲ್ಲಿ ಯುನೈಟೆಡ್ ಸ್ಟೇಟಿನವರು ಜರ್ಮನಿಗೆ ವಿರೋಧವಾಗಿ ಕೂಡಲೇ ಯುದ್ಧ ತೊಡಗುವಂತೆ ಡಾಕ್ಟರ್ ವಿಲ್ಸನರನ್ನು ಒತ್ತಾಯಪಡಿಸಬೇಕೆಂಬ ನಿರ್ಣಯವಾಗಿರುತ್ತದೆ.

ಮಾರ್ಚ ತಾ. ೧೮ಕ್ಕೆ ಅಂತ್ಯವಾಗುವ ವಾರದಲ್ಲಿ ೬೦೦ ಟನ್‌ಗಳಿಗೆ ಮಿಕ್ಕಿದ ಭರಾವಣೆಯ ೯೨೦ ವ್ಯಾಪಾರದ ಹಡಗಗಳು ಫ್ರೆಂಚ ಬಂದರಗಳಿಗೆ ಬಂದು ತಲುಪಿರುತ್ತವೆ. ೯೧೪ ಹಡಗಗಳು ಈ ಬಂದರಗಳಿಂದ ಹೊರ ಬಂದರಗಳಿಗೆ ಹೋಗಿರುತ್ತವೆ. ೧೬೦೦ ಟನ್‌ಗಳ ಭರಾವಣೆಗೆ ಮಿಕ್ಕಿದ ಫ್ರೆಂಚರ ೬ ಹಡಗಗಳೂ ೧೬೦೦ ಟನ್‌ಗಳಿಗೆ ಕಡಿಮೆಯ ೬ ಹಡಗಗಳೂ ಮೀನುಗಾರರ ೧೬ ದೋಣಿಗಳೂ ಮುಳುಗಿರುತ್ತವೆ. ಜಲಯಾನಗಳು ಹಲ್ಲೆಮಾಡಿದ ಮೂರು ಹಡಗಗಳು ತಪ್ಪಿಸಿಕೊಂಡಿರುವವು.

ಜಲಯಾನಗಳ ಅಪಾಯಕರವಾದ ಪ್ರಾಂತ್ಯವು ಇನ್ನುಮುಂದಕ್ಕೆ ನೋರ್ವೆಯ ಉತ್ತರ ಕರಾವಳಿಯಿಂದ ಸ್ಪಿಟ್ಸ್‌ಬರ್ಗನ್ ವರೆಗೆ ವಿಸ್ತರಿಸಲ್ಪಡುವದೆಂತ ಜರ್ಮನರು ನೋರ್ವೆ ಸರಕಾರಕ್ಕೆ ತಿಳಿಸಿರುತ್ತಾರೆ.

ತಾ. ೧೯ರಲ್ಲು ಮೆಡಿಟರೇನಿಯನ್ ಸಮುದ್ರದಲ್ಲಿ ಫ್ರೆಂಚರ "ಡಾಂಟನ್" ಎಂಬ ಯುದ್ಧಹಡಗಕ್ಕೆ ಶತ್ರುಗಳ ಟೊರ್ಪೆಡೊ ದೋಣಿಗಳು ಬಡೆದು ಅದು ಅರ್ಧ ಗಂಟೆಯೊಳಗೆ ಮುಳುಗಿರುವದು. ೮೦೬ ಮಂದಿ ಬದುಕಿಕೊಂಡಿರುವರು. ೨೯೬ ಮಂದಿ ಮುಳುಗಿರುವರು.

ಸಾಮ್ರಾಜ್ಯ ಯುದ್ಧ ಸಭೆಗೆ ಹಿಂದೂಸ್ಥಾನದಿಂದ ಪ್ರತಿನಿಧಿಯಾಗಿ ಹೋದ ಬಿಕಾನಿರ ಮಹಾರಾಜರವರು ತಾ. ೧೬ರಲ್ಲು ಚಕ್ರವರ್ತಿಯವರೊಡನೆ ಭೋಜನ ಮಾಡಿರುತ್ತಾರೆ.

ಇಂಗ್ಲಾಂಡಿನಲ್ಲಿ ಒಬ್ಬ ಗಿರಾಕಿಗೆ ೧೫ ದಿವಸಗಳಿಗೆ ಬೇಕಾಗುವದಕ್ಕಿಂತ ಹೆಚ್ಚಿನ ಸಕ್ಕರೆಯನ್ನು ಮಾರಕೂಡದು ವ ೧೫ ದಿವಸಗಳಿಗೆ ಬೇಕಾಗುವದಕ್ಕಿಂತ ಹೆಚ್ಚಿಗೆ ಸಕ್ಕರೆಯನ್ನು ಯಾರಾದರೂ ಕೊಂಡುಕೊಳ್ಳಕೂಡದು ಎಂಬ ಕಟ್ಟಪ್ಪಣೆ ಆಗಿರುತ್ತದೆ. ಆಹಾರ ಸಂಬಂಧವಾದ ಇನ್ನು ಕೆಲವು ಕಟ್ಟಳೆಗಳೂ ಸದ್ಯ ಇಂಗ್ಲಾಂಡಿನಲ್ಲಿ ಜಾರಿಗೆ ಬರುವದರಲ್ಲಿದೆ.

ಜರ್ಮನಿಯ ಬರ್ಲಿನ್ ನಗರದಲ್ಲಿ ಆಹಾರ ಕೊರತೆಯಿಂದ ದಂಗೆಯುಂಟಾಗಿರುವದು.

ಸಾಮ್ರಾಜ್ಯ ಯುದ್ಧ ಸಭೆಯ ಪ್ರತಿನಿಧಿಗಳಾಗಿ ಹಿಂದೂಸ್ಥಾನದಿಂದ ಹೋಗಿರುವ ಸರ್. ಜೆ. ಮೆಸ್ಟನ, ಸರ್. ಸತ್ಯೇಂದ್ರ ಪ್ರಸನ್ನಸಿಂಹ, ಬಿಕಾನೇರ ಮಹಾರಾಜರವರು ಬ್ರಿಟಿಷ ಪಾರ್ಲಿಮೆಂಟ ಕಾಮನ್ಸ ಸಭೆಯಲ್ಲಿ ಹತ್ತಿಯ ಕರ ಸಂಬಂಧವಾದ ವಾದಪ್ರತಿವಾದಗಳು ನಡಿಯುತ್ತಿರುವಾಗ ಹಾಜರಿದ್ದರು.

ಯುದ್ಧ ಪ್ರಾರಂಭವಾದಾಗ ಹನ್ಸ್ ಹಡಗಿನಲ್ಲಿ ಪ್ರಯಾಣಮಾಡುತ್ತಿದ್ದ ಹಿಂದೀ ಪ್ರಯಾಣಿಕರಲ್ಲಿ ೩೬ ಮಂದಿಯನ್ನು ಜರ್ಮನರು ಹೆವೆಲ್‌ಬರ್ಗನಲ್ಲಿ ಬಂಧಿಗಳಾಗಿ ಇಟ್ಟಿರುವರು. ಇವರ ಸ್ಥಿತಿಯು ತೃಪ್ತಿಕರವಾಗಿದೆ ಎಂತ ತಿಳಿದುಬಂದದೆ.

ಇದೇ ತಾ ೨೦ರಲ್ಲು ಸಾಮ್ರಾಜ್ಯ ಯುದ್ಧ ಮಹಾಸಭೆಯು ಬ್ರಿಟಿಷ ಪ್ರಧಾನ ಮಂತ್ರಿಯವರ ವಸತಿಯಲ್ಲಿ ಕೂಡಿಬಂದಿರುತ್ತದೆ. ಈ ಸಭೆಗೆ ಹಿಂದೂಸ್ಥಾನ, ಡೊಮಿನಿಯಾನುಗಳಿಂದ ಬಂದಿದ್ದ ಪ್ರತಿನಿಧಿಗಳು ಹಾಜರಿದ್ದರು. ಸಭೆಗೆ ಮೊದಲಾಗಿ ಮಿ। ವಿಲ್ಸನ್ ಲೋಂಗರವರೂ, ನಂತರ ನ್ಯೂಫೌಂಡ್‌ಲೇಂಡಿನ ಮಂತ್ರಿಯಾಗಿರುವ ಮಿ। ಮೊರಿಸ್ಸರೂ ಬಂದರು. ಸಭೆಗೆ ಸರ್ ಆರ್. ಬೋರ್ಡನ್, ಮಿ। ಹೆಜೆನ್, ಮಿ। ಪಾರ್ಡ್, ಮಿ। ಮಸ್ಸೆ, ಮಿ। ಚೆಂಬರ್ಲೇನ್, ಬಿಕಾನೆರ ಮಹಾರಾಜರು, ಸರ್. ಜೆ. ಮೆಸ್ಟನ್, ಸರ್ ಸಿನ್ಹರವರೂ ಚಿತ್ತೈಸಿದ್ದರು. ಕಡೆಗೆ ಜನರಲ್ ಸ್ಮಟ್ಸ್‌ರವರು ಸಭೆಗೆ ಬಂದರು. ಜನರಲ್ ಸ್ಮಟ್‌ರವರೂ ಬಿಕಾನೇರ ಮಹಾರಾಜರವರೂ ಯೂನಿಫಾರ್ಮ ಉಡುಪು ಹಾಕಿದ್ದರು. ಪ್ರಧಾನ ಮಂತ್ರಿಯವರು ಭಾಷಣದೊಂದಿಗೆ ಸಭಾ ಕಾರ್ಯಗಳನ್ನು ತೊಡಗಿದರು. ಪ್ರಧಾನ ಮಂತ್ರಿಯವರ ಭಾಷಣಕ್ಕೆ ಸರ್. ಆರ್. ಬೋರ್ಡನ್, ಮಿ। ಮೆಸ್ಸೆ, ಜನರಲ್ ಸ್ಮಟ್ಸ್, ಮಿ। ಮೊರಿಸ್ಸ, ಬಿಕಾನೇರ ಮಹಾರಾಜರು ಉತ್ತರ ಕೊಟ್ಟರು. ಈ ದಿನ ಈ ಸಭೆಯು ೩॥ ತಾಸುಗಳ ವರೆಗೆ ಕೂಡಿ ನಂತರ ತಾ. ೨೪ಕ್ಕೆ ಸಭೆಯು ಮುಂದರಿಸಿ ಹೋಯಿತು.

ಇಂಗ್ಲಾಂಡಿನಲ್ಲಿ ಬಟಾಟೆಯ ಕೊರತೆ ಬಂದದೆ. ಇನ್ನು ಮೂರು ತಿಂಗಳ ವರೆಗೆ ಇಂಗ್ಲಾಂಡಿನಲ್ಲಿ ಬಟಾಟೆಯು ಸಂಭಯಿಸಿರದು. ಆದುದರಿಂದ ಬಡವರಿಗೆ ಬಟಾಟೆಯು ಬೇಕಾದಷ್ಟು ದೊರಕುವಂತೆ ಶ್ರೀಮಂತರು ಇದನ್ನು ಉಪಯೋಗಿಸದಿರುವದು ಹಿತವೆಂತ ಡೆವನ್‌ಪೋರ್ಟ ಪ್ರಭುಗಳು ಶ್ರೀಮಂತರನ್ನು ವಿಜ್ಞಾಪಿಸಿಕೊಂಡಿರುತ್ತಾರೆ.

ಕಳೆದ ಒಂದು ವಾರದಲ್ಲಿ ಇಂಗ್ಲಾಂಡಿನ ಬಂದರಗಳಿಗೆ ೨೫೨೮ ಹಡಗಗಳು ತಲುಪಿರುವವು. ೨೫೫೪ ಹಡಗಗಳು ಪ್ರಯಾಣ ಹೊರಟಿರುವವು ೧೬೦೦ ಟನ್‌ಗಳ ಭರಾವಣೆಗೆ ಮಿಕ್ಕಿದ ೧೬ ಹಡಗಗಳೂ ೧೬೦೦ ಟನ್ ಭರಾವಣೆಗೆ ಕಡಿಮೆಯ ೮ ಹಡಗಗಳೂ, ೨೧ ಮೀನುಗಾರರ ದೋಣಿಗಳೂ ಜಲಯಾನಗಳಿಗೆ ತುತ್ತಾಗಿವೆ. ಜಲಯಾನಗಳು ಹಲ್ಲೆಮಾಡಿದ ೧೯ ಹಡಗಗಳು ತಪ್ಪಿಸಿಕೊಂಡಿರುವವು. ಸಿಡಿಮದ್ದಿನ ಗಣಿಗಳನ್ನು ಹುಡುಕಿ ತೆಗೆಯುವ ಬ್ರಿಟಿಷರ ೨ ಹಡಗಗಳು ಮುಳುಗಿಹೋಗಿವೆ.

ಮಿ। ಪೆಟಿಟ್ ಲೋರೆನ್ಸ್ ಎಂಬವರು ಇಂಗ್ಲಾಂಡಿನ ಅಬರ್ಡೀನ್ ಎಂಬಲ್ಲಿ ಶತ್ರುಗಳೊಡನೆ ಸಂಧಾನ ಮಾಡಿಕೊಳ್ಳುವ ವಿಷಯವಾಗಿ ಸುಮಾರು ೩೦೦ ಮಂದಿ ಕೂಡಿದ ಒಂದು ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ ಕೆಲವು ಸಾವಿರ ಜನರು ಒಳನುಗ್ಗಿ ಕಿಟಕಿಬಾಗಿಲುಗಳನ್ನು ಒಡೆದು ಸಭೆಯನ್ನು ಚದರಿಸಿಬಿಟ್ಟಿರುವರು.

ಯುದ್ಧ ಹಡಗಗಳನ್ನು ತ್ವರ್ಯದಲ್ಲಿ ಕಟ್ಟಿಸುವ ಹಾಗೆ ಯುನೈಟೆಡ್ ಸ್ಟೇಟ್ ಸರಕಾರದವರು ೧೫೦ ಮಿಲಿಯ ಡೋಲರುಗಳನ್ನು ಸೆಂಕ್ಷನ್ ಮಾಡಿರುತ್ತಾರೆ.

ಜ್ಝಾರರು ಸಿಂಹಾಸನತ್ಯಾಗ ಮಾಡುವ ಮೊದಲು ಮಾರ್ಚ ತಾ. ೧೪ನೇ ಸಾಯಂಕಾಲ ಸ್ಕೋವಿಗೆ ತಲುಪಿ, ತಾ. ೧೫ನೇ ಬೆಳಗ್ಗೆ ೩ ಗಂಟೆಗೆ ಜನರಲ್ ರಸ್ಕಿಯವರೊಡನೆ ಹೊಸ ಉತ್ತರವಾದಿತ್ವವುಳ್ಳ ಸರಕಾರವನ್ನು ಕೊಡಲಾಗಿರುತ್ತೇನೆ, ಮತ್ತು ಈ ಸಂಬಂಧವಾಗಿ ತಯಾರಿಸಿದ ರಾಜಾಜ್ಞೆಯ ಮೇಜಿಯ ಮೇಲೆ ಇದೆ ಅಂದರು. ಇದಾಗಿ ಒಂದು ತಾಸಿನ ನಂತರ ಜನರಲ್ ರಸ್ಕಿಯವರು ಡೂಮಾ ಸಭೆಯ [illegible] ಎಮ್. [illegible] ಸಂಭಾಷಣೆ ನಡೆಸಿದ್ದಲ್ಲಿ ಜ್ಝಾರರು ಸಿಂಹಾಸನತ್ಯಾಗ ಮಾಡಬೇಕೆಂದಾಗಿ ಅವರು ತಿಳಿಸಿದರು. ತಕ್ಷಣ ಜನರಲ್ ರಸ್ಕಿಯವರಿಗೆ [illegible] [illegible]

ಮಾಡುವದೇ ಉತ್ತಮವೆಂತು ತೋರುತ್ತದೆ [illegible] ಯಾವಸ್ಥೆರವರನ್ನು ಕರೆಸಿ ಕಾಣಬೇಕೆಂದರು. ಆದರೆ ಅವರಿಗೆ [illegible] ಬಿಟ್ಟು ಬರಲು ಅಸಾಧ್ಯವೆಂಬದಾಗಿ ತಿಳಿಸಿದ್ದರಿಂದ ಜ್ಝಾರರು [illegible] ಜನರಲ್ ರಸ್ಕಿಯವರೊಡನೆ ಸಿಂಹಾಸನತ್ಯಾಗ ಪತ್ರವನ್ನು ಕೊಟ್ಟು [illegible] ಗ್ರೇಡಿಗೆ ಕಳುಹಿಸಬೇಕೆಂದರು. ಜನರಲ್ ರಸ್ಕಿಯವರು ಅದನ್ನು [illegible] ವಿಲಂಬಮಾಡಿದ್ದರಿಂದ ರುಶ್ಯಾದ ಸ್ಥಿತಿಯು ಹೆಚ್ಚು ಬಿಕ್ಕಟ್ಟಾಯಿತೆಂಬುದಾಗಿ ಜ್ಝಾರರು ನೆನಸಿದರು. ಆದರೆ ರಾತ್ರಿ ೧೦ ಗಂಟೆಗೆ ಬಂದ ರಾಜದೂತನು ಪೆಟ್ರೊಗ್ರೇಡಿನಲ್ಲಿ ನಡೆದ ದಾಂದ್ಲೆಯನ್ನು ತಿಳಿಸಿದಾಕ್ಷಣ ಜ್ಝಾರರು ಗ್ರೇಂಡ್‌ಡ್ಯೂಕ್ ಮಿಖಯೇಲರಿಗೆ ಸಿಂಹಾಸನವನ್ನು ಬಿಟ್ಟುಕೊಟ್ಟು ಹೊಸ ಪತ್ರವನ್ನು ತಯಾರಿಸಿ, ಅದಕ್ಕೆ ದಸ್ಕತು ಹಾಕಿ ಹೆಡ್‌ಕ್ವಾರ್ಟರ್ಸಿಗೆ ಹೋದರು.

ರುಶ್ಯಾ ದೇಶದ ಹೊಸ ಸರಕಾರವನ್ನು ಬ್ರಿಟಿಷ, ಫ್ರೆಂಚ, ಇಟಲಿ ಸರಕಾರದವರೂ ಅಮೇರಿಕ ಸರಕಾರದವರೂ ಮಾನ್ಯ ಮಾಡಿರುತ್ತಾರೆ.

ಜರ್ಮನಿಗೆ ವಿರೋಧವಾಗಿ ಯುದ್ಧ ಸಾರಬೇಕೆಂಬುವ ಚಳವಳಿಯು ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ದಿನೇ ದಿನೇ ಉಚ್ಚಸ್ಥಾನವನ್ನು ಹೊಂದುತ್ತಿದೆ. ಅಲ್ಲಿಯ ಎಲ್ಲಾ ಪಟ್ಟಣಗಳಲ್ಲಿಯೂ ಸಭೆಗಳು ಕೂಡಿ ಜರ್ಮನರ ಮೇಲೆ ಯುದ್ಧ ಸಾರಬೇಕೆಂಬ ನಿರ್ಣಯಗಳನ್ನು ಮಾಡಿಕೊಂಡಿರುತ್ತಾರೆ. ಮದ್ದು ಗುಂಡುಗಳ ಸನ್ನಾಹವು ಅತಿ ಜಾಗರೂಕತೆಯಿಂದ ನಡಿಯುತ್ತಿದೆ. ಮಿತ್ರರಾಜ್ಯಗಳಿಗೆ ಬೇಕಾದ ಸಹಾಯ್ಯವನ್ನು ಮಾಡಬೇಕೆಂಬದಾಗಿ ಅಲ್ಲಿಯ ಕೆಬಿನೆಟ್ ಸಭೆಯಲ್ಲಿ ಮಾತು ನಡೆದಿದೆ.

ರುಶ್ಯಾ ದೇಶದ ರಾಜ್ಯವಿಪ್ಲವದಲ್ಲಿ ಗಾಯ ಒಡೆದ ಮತ್ತು ಹತರಾದವರ ಒಟ್ಟು ಸಂಖ್ಯೆ ೨೦೦೦ ಆಗಬಹುದೆಂದು ಅಂದಾಜಾಗಿಯದೆ. ಈಗ ರುಶ್ಯಾದಲ್ಲಿ ಎತ್ತಿರಲ್ ರೊಮೊನೊಫರೆಂದು ಕರೆಯಲ್ಪಡುವ ಜ್ಝಾರರ ದಾಯಾದಿಯಾದ ಸಿರಿಲ್ ಎಂಬವರು ಹೀಗೆಂದು ಹೇಳುವರು. "ಹಳೇ ಸರಕಾರಕ್ಕೆ ಈ ಯುದ್ಧದಲ್ಲಿ ಅಪಜಯವಾಗುತ್ತಿತ್ತು. ಜ್ಝಾರರಿಗೆ ಈ ವಿಷಯದಲ್ಲಿ ಆಗಾಗ್ಗೆ ಆಯಾ ವ್ಯಕ್ತಿಗಳಿಂದಲೂ ಕೆಲವು ಜನರು ಒಂದಾಗಿ ಕೂಡಿದ ಮಂಡಲಿಗಳಿಂದಲೂ ಬುದ್ಧಿ ಹೇಳಿಸಿದರೂ ಪ್ರತಿಕಾರಪಕ್ಷದವರು ಅವರ ಬೆಂಬಲವಿದ್ದುದರಿಂದ ಅವರು ಕಿವಿಗೊಡಲೇ ಇಲ್ಲ." ಗ್ರೇಂಡ್ ಡ್ಯೂಕರು ಸಿರಿಲರ ಹೆಂಡತಿಯನ್ನು ಜ್ಝಾರೀನರ ಬಳಿಗೆ ಕಳುಹಿಸಿ ತಕ್ಕವಾದ ಹೊಸ ಮಂತ್ರಿಸಭೆಯನ್ನು ರೂಪಿಸುವದು ಉಚಿತವೆಂದು ಹೇಳಿಸಿದ್ದಲ್ಲಿ ಜ್ಝಾರೀನರು ಹೀಗೆಂದು ಹೇಳಿದರು. "ಇವರೆಲ್ಲಾ ನಮ್ಮ ರಾಜವಂಶದ ಶತ್ರುಗಳು, ನಮಗೆ ವಿರೋಧವಾಗಿರುವವರು ಪೆಟ್ರೊಗ್ರೇಡಿನಲ್ಲಿರುವವರು. ಮತ್ತು ಮೂರ್ಧಾತ್ಮರಾದ ರಾಜಕುಲೀನರು. ನಾನು ಈಗ ೨೦ ವರ್ಷಗಳಿಂದ ಸಿಂಹಾಸನದಲ್ಲಿದ್ದೇನೆ. ರುಶ್ಯಾದ ಮತ್ತು ಅದರ ಜನರ ಸ್ಥಿತಿಗತಿಯು ನನಗೆ ಚೆನ್ನಾಗಿ ಗೊತ್ತದೆ. ಜನರು ನಮ್ಮ ಕುಟುಂಬವನ್ನು ಚೆನ್ನಾಗಿ ಪ್ರೀತಿಸುವರೆಂಬದೂ ನನಗೆ ಗೊತ್ತದೆ."

ಜರ್ಮನಿಯೊಡನೆ ಪ್ರತ್ಯೇಕ ಸಂಧಾನ ಮಾಡಿಕೊಳ್ಳಬೇಕೆಂಬ ವಿಷಯದಲ್ಲಿ ಜ್ಝಾರೀನರಿಗೂ ಹಳೇ ಸರಕಾರದ ಮಂತ್ರಿ ಪ್ರೊಟೊಪೊಪ ಎಂಬವರಿಗೂ ನಡೆದ ಪತ್ರ ವ್ಯವಹಾರಗಳು ಈಗ ಹೊರಬಿದ್ದದೆ.

ರಿಗ್ಗಾ ರಣರಂಗದಲ್ಲಿರುವ ಸೈನಿಕರ ಮತ್ತು ಡೂಮಸಭೆಯ ಮೆಂಬರರಾಗಿರುವ ಜನರಲ್ ದಮಿತ್ರಿಯವರ ಒಂದು ಮಹಾ ಸಭೆಕೂಡಿ ರುಶ್ಯಾ ದೇಶವನ್ನು ಶತ್ರುಗಳಿಂದ ಕಾಪಾಡುವದಕ್ಕಾಗಿ ಜೀವವಿರುವ ತನಕ ಕಾದಾಡಬೇಕೆಂಬ ನಿರ್ಣಯ ಮಾಡಿಕೊಂಡಿರುವರು.

ಬಲ್ಗೇರಿಯಾನರು ಮೆಸಡೋನಿಯದಲ್ಲಿ ಮಾಡುತ್ತಿರುವ ಅಮಾನುಷ ಕೃತ್ಯಗಳು ಈಗ ತಾನೇ ಹೊರಬಿದ್ದವೆ. ಸರ್ವಿಯರ ಅನುಕೂಲಪಕ್ಷದವರೆಂದು ಅನುಮಾನವಿರುವ ಶಾಲಾ ಉಪಾಧ್ಯಾಯರನ್ನೂ ಪಟ್ಟಣಾಧಿಕಾರಿಗಳನ್ನೂ ಬಲ್ಗೇರಿಯಾನರು ಸನೀನುಗಳಿಂದ ತಿವಿದು ಕೊಂದುಹಾಕಿರುತ್ತಾರೆ. ಒಬ್ಬ ಪಟ್ಟಣಾಧಿಕಾರಿಯನ್ನು ವಸ್ತ್ರದಿಂದ ಸುತ್ತಿ ಶೀಮೆ ಎಣ್ಣೆಯನ್ನು ಹೊಯ್ದು ಬೆಂಕಿಕೊಟ್ಟು ಜೀವಿತನಾಗಿಯೇ ಸುಟ್ಟುಹಾಕಿರುವರು. ಅದಲ್ಲದೆ ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಸೂರೆಸುಲಿಗೆ ಮಾಡುತ್ತಿದ್ದಾರೆ.

ಜರ್ಮನಿಯಲ್ಲಿ ಸರಕಾರದ ಕಡೆಗೆ ಜನರ ಅಸಂತೃಪ್ತಿಯು ದಿನೇ ದಿನೇ ಹೆಚ್ಚುತ್ತಿದೆ, ಮುಖ್ಯ ಮುಖ್ಯ ಪಟ್ಟಣಗಳಲ್ಲೆಲ್ಲಾ ಸರಕಾರದವರು ಕಾವಲಿಯನ್ನಿಟ್ಟಿರುವರು, ಆದರೂ ಆಗಾಗ್ಗೆ ಜನರು ದಾಂದಲೆಗಳನ್ನು ಮಾಡುತ್ತಲಿರುವರು. ಈಚೆಗೆ ಜರ್ಮನ್ ಮಂತ್ರಿಸಭೆಯಲ್ಲಿ ಸೋಶ್ಯಲಿಸ್ಟ ಪಕ್ಷದ ಕುನ್ನರ್ಟ್ ಎಂಬವರು — "ಕೈಸರರೂ ಬೆಥ್‌ಮ್ಯಾನ್ ಹೊಲ್ವೆಗರೂ ಈ ಯುದ್ಧದ ಮೂಲ ಪುರುಷರು. ರುಶ್ಯದಲ್ಲಿ ಈಚೆಗೆ ಉಂಟಾದ ಚಳವಳಿಯು ಇಲ್ಲಿಯೂ ಆಗುತ್ತಿದ್ದರೆ ನನಗೆ ಸಂತೋಷವಾಗುತ್ತಿತ್ತು" ಎಂದು ಹೇಳಿರುವರು. ಸೋಶ್ಯಲಿಸ್ಟ ಕೊಟರವರು "ಜನರಿಗೆ ಆಹಾರವಿಲ್ಲದೆ ದೇಶದಲ್ಲಿ ಭಯಂಕರಸ್ಥಿತಿ ಉಂಟಾಗಿರುವದು" ಎಂದು ಹೇಳಿರುತ್ತಾರೆ.

ಹಿಂದೂಸ್ಥಾನದ ಹತ್ತಿ ಕರ ಸಂಬಂಧವಾಗಿ ಬ್ರಿಟಿಷ ಕಾಮನ್ಸ ಸಭೆಯಲ್ಲಿ ವಾದಪ್ರತಿವಾದಗಳು ನಡಿಯುತ್ತಿರುವಾಗ ಸ್ಟೇಟ ಸೆಕ್ರೆಟರಿಯವರೂ, ಪ್ರಧಾನ ಮಂತ್ರಿಯಾದ ಮಿ। ಲ್ಯೊಯ್ಡರವರೂ ಹಿಂದೂಸ್ಥಾನದವರು ಈ ಯುದ್ಧಕಾಲ ಮಾಡಿದ ಸಾಹಾಯ್ಯವನ್ನು ಬಹಳವಾಗಿ ಹೊಗಳಿರುತ್ತಾರೆ. ೩,೦೦,೦೦೦ ಹಿಂದೀ ಸೈನಿಕರು ಈಗ ರಣರಂಗದಲ್ಲಿದ್ದಾರೆ. ಅದಲ್ಲದೆ ಸಾವಿರಾರು ಹಿಂದೀ ಕೆಲಸಗಾರರೂ ನೂರಾರು ವೈದ್ಯರೂ ರಣರಂಗದಲ್ಲಿ ಸಹಾಯ್ಯ ಮಾಡುತ್ತಿದ್ದಾರೆ. ಹಿಂದೂಸ್ಥಾನದವರು ಒದಗಿಸಿಕೊಟ್ಟ ಸಣ್ಣ ಸಣ್ಣ ಆಯುಧಗಳ ಸಂಖ್ಯೆಯು ಈಗ ಮೂರರಷ್ಟು, ಫಿರಂಗಿಗಳ ತೋಟೆ ಇತ್ಯಾದಿಗಳ ಸಂಖ್ಯೆಯು ಹನ್ನೆರಡರಷ್ಟು ಹೆಚ್ಚಾಗಿದೆಂತ ಹೇಳಿ ಸಾಮ್ರಾಜ್ಯಕ್ಕೆ ಹಿಂದೂಸ್ಥಾನವು ಮಾಡಿದ ಸಾಹಾಯ್ಯವು ಅಪಾರವಾದುದು ಎಂಬದನ್ನು ವ್ಯಕ್ತಗೊಳಿಸಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಯುದ್ಧದ ಸಾಲದ ಬಗ್ಗೆ ಹಿಂದೂಸ್ಥಾನದಲ್ಲಿ ಈ ವರೆಗೆ [illegible] ರೂಪಾಯಿಗಳ ದರಕಾಸ್ತುಗಳು ಬಂದಿವೆ. ಈ ಪೈಕಿ ಬಂಗಾಳದಿಂದ ರೂ. ೧,೮೨,೭೪,೩೦೦; ಮುಂಬಾಯಿ ೧,[illegible],೦೦೦; ಮದ್ರಾಸ್ [illegible]; ಸಂಯುಕ್ತ ಸಂಸ್ಥಾನ ರೂ. ೧೧,[illegible]; ಪಂಜಾಬು ರೂ. [illegible]; ಬರ್ಮ ರೂ. ೧[illegible]; ಬಿಹಾರ್ ಮತ್ತು ಒರಿಸ್ಸ ರೂ. [illegible]; ಮಧ್ಯಸಂಸ್ಥಾನಗಳು ರೂ. [illegible]; ಅಸ್ಸಾಮ್ ರೂ. [illegible]; ಇಂತ್ಯಾದ ಪ್ರಾಂತಗಳಿಂದ [illegible] ರೂಪಾಯಿಗಳ ದರಕಾಸ್ತುಗಳು ಬಂದಿವೆ.

ಬಂಗಾಳದ ಗವರ್ನರರಾಗಿರುವ ಕಾರ್ಮಯಿಕೇಲ್ ಪ್ರಭುಗಳು ಬಂಗಾಳದಲ್ಲಿ [illegible]

[illegible]

ಅನುಕ್ರಮಣಿಕೆ.

ಅಗ್ರಲೇಖ:— ಪುಟ.
ಶ್ರೀ ರಾಮಜಯಂತಿ ೧
ಸ್ಫುಟವಿಚಾರಗಳು:—
೧—೨ ನಾ. ಶಾಸ್ತ್ರಿಯವರ ಸೂಚನೆಗಳು ನಿಷ್ಫಲವಾದವು . . . ,,
೩ ಗಯ್ನೆ ಕರಾರಿನ ಕೂಲಿಪದ್ಧತಿಯ ಪ್ರತಿಬಂಧ . . . ೪-೫
೪ ಹಿಂದೀ ಶಾಲೆಗಳಲ್ಲಿ "ಬಾಲ-ಚವುಕ" . . . ,,
೫—೬ ವರಿಷ್ಠ ಕೌನ್ಸಿಲಿನ ಪ್ರಸ್ತಾವಗಳು . . . ,,
೭ ಸೀಲೋನಿನ ಕೈಗಾರಿಕೆಗಳ ನವಜೀವನ . . . ,,
೮ ಹಿಂದೀ ಶಾಲೀನ ಸ್ತ್ರೀಯರ ದೆಪ್ಯುಟೇಶನು . . . ,,
ಸ್ಥಳೀಕ — ಮಂಗಳೂರು . . . ,,
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ . . . ೩
೨ ವಿದೇಶ ವೃತ್ತಾಂತ . . . ,,
೩ ಉತ್ತರ ಹಿಂದೂಸ್ಥಾನ . . . ೩-೬
೪ ದಕ್ಷಿಣ ಹಿಂದೂಸ್ಥಾನ . . . ,,
ಜಾಹಿರುಗಳು ಮತ್ತು ಪತ್ರವ್ಯವಹಾರಗಳು . . . ,,

ಸ್ವದೇಶಾಭಿಮಾನಿ.

ಶಕ ೧೮೩೯ ಚೈತ್ರ ಶು. ೭ ಶುಕ್ರವಾರ.

ಶ್ರೀ ರಾಮಜಯಂತಿ.

ನಾಳೆ ಶ್ರೀ ರಾಮನವಮಿಯ ವ್ರತವು; ನಾಡದು ಜಯಂತಿ ಮಹೋತ್ಸವ. ಈ ದೇಶದ ಕೆಲವು ಕಡೆಗಳಲ್ಲಿ ಎರಡು ದಿವಸಗಳನ್ನೂ ಕೆಲವು ಕಡೆಗಳಲ್ಲಿ ಯಾವುದಾದರೊಂದು ದಿವಸವನ್ನಾದರೂ ಜನರು ಭಕ್ತಿಯಿಂದ ಪಾಲಿಸುತ್ತಾರೆ. ಉಪೋಷಣ, ಪೂಜೆ, ಹರಿಕಥೆ, ಭಜನೆ, ನಿರೂಪಣೆ, ಪುರಾಣಶ್ರವಣ, ಉಪನ್ಯಾಸ, ಮುಂತಾದವುಗಳಲ್ಲಿ ಯಾವುದಾದರೂ ಒಂದು ಸೇವೆಯನ್ನು ಶ್ರೀ ರಾಮನ ಪ್ರೀತ್ಯರ್ಥ ಅರ್ಪಿಸಿ, ಭಕ್ತರು ಅದರಿಂದ ತಮ್ಮನ್ನು ಜ್ಞಾನ ಸಂಪನ್ನರನ್ನಾಗಿ ಮಾಡಿಕೊಳ್ಳುತ್ತಾರೆ. ಇಂದಿನ ವರೆಗೂ ಈ ಪದ್ಧತಿಯು ಸಾಧಾರಣವಾಗಿ ಎಲ್ಲ ಕಡೆಗಳಲ್ಲಿ ನಡೆದಿದೆ. ಇನ್ನು ಮುಂದೆಯೂ ನಡೆಯುವ ಹಾಗಿದೆ. ಯಾಕೆ? ಶ್ರೀ ರಾಮನು ಒಬ್ಬ ಅವತಾರಿ ಪುರುಷನು, ಮಹಾ ವಿಷ್ಣುವಿನ ಅಂಶಸ್ವರೂಪನು. ಆದರೆ ಅವನು ಅವತರಿಸಿದ್ದು ಈ ಹೊತ್ತಲ್ಲ, ನಿನ್ನೆಯಲ್ಲ. ಹತ್ತು ವರ್ಷಗಳ ಹಿಂದೆ ಅಲ್ಲ, ಸಾವಿರ ವರ್ಷಗಳ ಹಿಂದೆಯೂ ಅಲ್ಲ. ಅವನು ಅವತರಿಸಿ ಎಷ್ಟೋ ಸಾವಿರ ವರ್ಷಗಳಾದವು. ಈ ಹೊತ್ತು ಅವನ ಸ್ಮರಣೆಯು ಯಾಕೆ? ಅವನ ಉತ್ಸಹವು ಯಾಕೆ? ರಾಮನ ಅವತಾರವಾಗಿ ಎಷ್ಟೋ ಯುಗಗಳು ದಾಟಿ ಹೋದವು, ರಾಮನ ಕಾಲದಲ್ಲಿ ನಾಡಿದ್ದಲ್ಲಿ ಈಗ ಕಾಡಾಗಿದೆ, ಸಾಗರವಿದ್ದಲ್ಲಿ ನಗರವಾಗಿದೆ, ಹೊಳೆಗಳಿದ್ದಲ್ಲಿ ಹಳ್ಳಗಳಾಗಿವೆ, ವೈಭವದ ಶಿಖರದಲ್ಲಿದ್ದ ಎಷ್ಟೋ ರಾಜವಂಶಗಳೂ ಅವರ ಸಾಮ್ರಾಜ್ಯಗಳೂ ಈಗ ಅಧಃಪಾತದ ಸಮುದ್ರದಲ್ಲಿ ಮುಣುಗಿ ಹೋಗಿವೆ. ರಾಮನ ಸ್ಮರಣೆಯೂ, ರಾಮನವಮಿಯೂ, ಅವಿಚ್ಛಿನ್ನವಾಗಿ ನಡೆದು ಬಂದಿವೆ. ಯಾಕೆ? ಸೃಷ್ಟಿಯಲ್ಲಿ ಬೇರೆ ಸ್ಥಿತ್ಯಂತರಗಳಾದರೂ ರಾಮನವಮಿಯಲ್ಲಿ ಸ್ಥಿತ್ಯಂತರವಾಗಲಿಲ್ಲ. ಸೂರ್ಯ ಚಂದ್ರ ಗ್ರಹಗಳಿಗೆ ಉದಯಾಸ್ತಗಳಿದ್ದರೂ ರಾಮನವಮಿಗೆ ಉದಯಾಸ್ತಗಳಿಲ್ಲ. ಅದು ಯಾವಾಗಲೂ ಒಂದೇ ರೀತಿಯಿಂದ ನಡೆಯುತ್ತೊಂಡು ಬಂದಿದೆ. ಇದು ಹೀಗೆ ಯಾಕೆ? ಲಕ್ಷ ಸಂಖ್ಯೆಯಿಂದ ವರ್ಷಗಳು ದಾಟಿದವು, ಈ ದೀರ್ಘವಾದ ಅವಧಿಯಲ್ಲಿ ಎಷ್ಟೋ ಸ್ಥಿತ್ಯಂತರಗಳಾದುವು, ಆದರೆ ರಾಮನವಮಿಯು ಏಕಪ್ರಕಾರವಾಗಿ ನಡೆದುಕೊಂಡು ಬಂದಿದೆ, ಇದರ ಕಾರಣವೇನಿರಬಹುದು! ಅನೇಕರಿಗೆ ಈ ಪ್ರಶ್ನೆಯು ಬಂದಿರಬೇಕು. ಆದರೆ ಇದರ ಉತ್ತರವನ್ನರಿತವರು ಮಾತ್ರ ಅನೇಕರಿರಲಿಕ್ಕಿಲ್ಲ.

ರಾಮನವಮಿಯ ಚಿರಂಜೀವಿತ್ವದ ಕಿಂಬಹುನಾ ಅಚಲತ್ವದ ಕಾರಣವು ಅನೇಕರಿಗೆ ಗೊತ್ತಿರಲಿಕ್ಕಿಲ್ಲವಾದುದರಿಂದ, ಆ ಕಾರಣವು ಬಹು ಗೂಢವಾದುದೆಂದು ಯಾರೂ ನೆನಸ ಬೇಕಾದುದಿಲ್ಲ. ಲೋಕದಲ್ಲಿ ಉಂಟಾದ ಮತ್ತು ಉಂಟಾಗುವ ಸ್ಥಿತ್ಯಂತರಗಳು ಅಸ್ವಾಭಾವಿಕ ಪದಾರ್ಥಗಳಲ್ಲಿ ಮಾತ್ರ ಸಂಭವಿಸುತ್ತವೆ, ಸ್ವಾಭಾವಿಕ ವಸ್ತುಗಳಲ್ಲಿ ಬದಲಾವಣೆಗಳು ಆಗಲಾರವು. ಕೃತಯುಗದಲ್ಲಿ ಕೆಳಮುಖವಾಗಿ ಹರಿದುಕೊಂಡು ಹೋಗುವ ನೀರಾಗಲಿ, ಮೇಲುಮುಖವಾಗಿ ಉರಿಯುತ್ತಿರುವ ಬೆಂಕಿಯಾಗಲಿ, ಅವು ಈ ಹೊತ್ತಿಗಾದರೂ ಅದೇ ಕ್ರಮದಲ್ಲಿವೆ. ತಮ್ಮ ಸ್ವಭಾವವನ್ನು ಬಿಡಲಿಲ್ಲ. ಹಾಗೆಯೆ ಭಾರತವಾಸಿಗಳಲ್ಲಿ ರಾಮಸ್ಮರಣೆಯು ಸ್ವಾಭಾವಿಕವಾದುದು. ಅದು ಮರೆತು ಹೋಗುವುದು ಹ್ಯಾಗೆ? ಮತ್ತು ಅದರಲ್ಲಿ ಸ್ಥಿತ್ಯಂತರಗಳಾಗುವುದು ಹ್ಯಾಗೆ? ಸ್ವಾಭಾವಿಕವಾದ ರಾಮಸ್ಮರಣೆಯು ಸೂರ್ಯಚಂದ್ರರಿರುವ ವರೆಗೆ ಕಲ್ಪಾಂತದ ತನಕ ನಿಲ್ಲದಿದ್ದರೆ ಅನ್ಯಾವ ಸ್ಮರಣೆಯು ನಿಂತೀತು! ರಾಮನು ತನಗಾಗಿ ಹುಟ್ಟಿದವನೆ? ತನಗಾಗಿ ಜೀವಿಸಿದವನೆ? ಅಲ್ಲ, ದೇವಕಾರ್ಯ, ದೇಶಕಾರ್ಯಗಳಿಗಾಗಿ ಅವನ ಅವತಾರವಾಯಿತ್ತು. ಭೂದೇವಿಯ ಸತ್ವವು ನಷ್ಟವಾಗಿತ್ತು; ನೀರು-ಕೈಕ್ಯವನ್ನು ಬಿಟ್ಟಿತ್ತು; ಗಾಳಿಯು ಕಲುಷಿತವಾಗಿತ್ತು: ಆಕಾಶದಲ್ಲಿ ಮೋಡಗಳು ತುಂಬಿಹೋಗಿತ್ತು; ದಿಗ್ದೇವತೆಗಳ ಮುಖಗಳು ಪಾಪದ ಧೂಳಿನಿಂದ ಮಲಿನವಾಗಿದ್ದವು. ಲೋಕದೀಪಕರಾದ ಸೂರ್ಯಚಂದ್ರರಿಗೆ ಮಾರ್ಗ ತೋರಿಸಲು ಬೇರೊಂದು ದೀಪವು ಬೇಕಿತ್ತು. ಈ ಪ್ರಕಾರ ಪಂಚಮಹಾಭೂತಗಳಿಗೂ, ದಿವ್ಯ ತೇಜಸ್ಸುಗಳಿಗೂ ದೊಡ್ಡ ದೊಡ್ಡ ರೋಗಗಳುಂಟಾಗಿ ದೇಶಕಾರ್ಯವೂ ನಡೆಯುತ್ತಿರಲಿಲ್ಲ. ಈ ರೋಗಗಳ ಮೇಲೆ ಅನೇಕ ವೈದ್ಯರು ಬೇರೆ ಬೇರೆ ರಸಾಯನಗಳನ್ನೂ ಮಾತ್ರೆಗಳನ್ನೂ ಪ್ರಯೋಗಿಸಿ ನೋಡಿದರು. ಪ್ರಯೋಜನವಾಗಲಿಲ್ಲ. ಈ ರೋಗಗಳ ಜಂತುಗಳು ಎಲ್ಲಿ ಉದ್ಭವಿಸುವವು, ಎಲ್ಲಿಂದ ಪಸರಿಸುವವು. ಈ ವಿಷಯವನ್ನು ವೈದ್ಯರು ಚೆನ್ನಾಗಿ ತಿಳಿದುಕೊಂಡಿದ್ದರೂ ಆ ಜಂತುಗಳಿಗೆ ತಕ್ಕದಾದ ಮದ್ದನ್ನರಿಯುವುದು ಮಾತ್ರ ಈ ಸಾಧಾರಣ ವೈದ್ಯರಿಂದಾಗದೆ ಹೋಯಿತು. ಸಮುದ್ರದ ಹೊರಗೆ ಲಂಕೆಯಲ್ಲಿ ಈ ರೋಗಜಂತುಗಳ ಉತ್ಪತ್ತಿಯಿತ್ತು. ಆ ರೋಗ ಜಂತುಗಳಿಂದ ನಾನಾ ವಿಧದ ರೋಗಗಳ ಒರತೆಯು ಹೊರಟು ಪಂಚ ಮಹಾ ಭೂತ, ದಿವ್ಯ ಗೋಲಕಗಳನ್ನೆ ಎಂದಲ್ಲ, ಬ್ರಹ್ಮಾಂಡವನ್ನೆ ವ್ಯಾಪಿಸಿತು! ತನ್ನ ದುಷ್ಟಭಾವದಿಂದ ಇಡೀ ಬ್ರಹ್ಮಾಂಡವನ್ನು ಮುಣುಗಿಸಿ ಬಿಡುವ ಈ ರೋಗ ಪ್ರವಾಹವು ಸ್ವೇಚ್ಛೆಯಿಂದ ಹರಿದುಕೊಂಡು ಹೋಗುವಾಗ ಪಾಪ! ವೈದ್ಯರಾದರೂ ಅದರ ಬಾಧೆಯನ್ನು ತಪ್ಪಿಸಿಕೊಂಡು ನಿಲ್ಲುವುದು ಹೇಗೆ? ಅಸಾಧ್ಯವಿದು! ಬ್ರಹ್ಮಾಂಡವು "ತ್ರಾಹಿ! ತ್ರಾಹಿ!" ಎಂದು ಕೂಗಿತು! ಪ್ರತ್ಯುತ್ತರವೇನೂ ಇರಲಿಲ್ಲ. ಈ ಅನರ್ಥದ ಜನ್ಮ ಪರಮಾವಧಿಯಾಗಲಿಕ್ಕಿತ್ತು. ಅದೂ ಆಯಿತು. ಲಂಕೆಯಿಂದ ಹೊರಡುವ ಪಿಶಾಚ ಕೃತ್ಯಗಳೂ ಪಶುಧರ್ಮವೂ ತನ್ನ ಪರಿಗೆಯ ಮುಗಿಲನ್ನು ಕಂಡವು! ಇಲ್ಲಿಗೆ ಮುಗಿಯಿತು! ಅಯೋಧ್ಯೆಯಲ್ಲಿ ಇದಕ್ಕೆ ಮದ್ದು ಹರಿದಾಯಿತು. ಪ್ರತಿಶಕ್ತಿಯು ಮೆಲ್ಲಮೆಲ್ಲನೆ ಅಂಕುರಿಸಿತು. ವಿಶ್ವಾಮಿತ್ರನಂಥ ಮಹಿಗಳು ಗಟ್ಟಿಯಾಗಿ ಅದು ಮನಸ್ಸಿನಲ್ಲಿಯೆ ಆಶೀರ್ವದಿಸಿದರು. ಅಂಕುರಿಸಿದ ಪ್ರತಿಶಕ್ತಿಯು ದೊಡ್ಡದೊಂದು ಮರವಾಯಿತು, ಅದರ ಶೀತಲವಾದ ಛಾಯೆಯಲ್ಲಿ ಪೌರುಷ, ಗಂಡುಸ್ತನ, ನೀತಿ ಧೈರ್ಯ, ತೇಜಸ್ಸು, ಸತ್ಯ, ಶುಚಿತ್ವ ಮೊದಲಾದ ದೈವೀ ಸಂಪತ್ತುಗಳು ದಣಿವಾರಿಸಿಕೊಂಡು ಕೊಂಚ ತಲೆ ಎತ್ತಿದವು. ಇದೇ ಮರದ ಆಶ್ರಯಕ್ಕೆ ಇಷ್ಟು ಸಮಯ ಅಡಗಿಕೊಂಡಿದ್ದ ಸತ್ವವೆಲ್ಲ ಬಂದು ಸೇರಿತು. ಇವೆಲ್ಲವುಗಳ ಒಂದು ಪ್ರಚಂಡ ಸಾಮರ್ಥ್ಯವುಂಟಾಗಿ ಏಕೀಕೃತವಾದ ಆ ಪುಂಜದಿಂದ ಸ್ವಾಭಿಮಾನದ ಸ್ವಾತಂತ್ರ್ಯದ ಹಾಗು ನವಜೀವನದ ಕಿಡಿಗಳು ಹೊರಟು ಅವು ಪಿಶಾಚ ಕೃತ್ಯಗಳನ್ನೂ ಪಾಶವ ಧರ್ಮವನ್ನೂ ಸುಡಹತ್ತಿದವು. ಆ ನವಜೀವನದ ಅಗ್ನಿಗೆ ಲಂಕೆಯೆ ಮುಖ್ಯ ಆಹಾರವಾಗಿತ್ತು. ಆ ಕಾಡಿನೊಳಗೆ ಎಲ್ಲಾ ಚಿಕ್ಕ ದೊಡ್ಡ ಮರಗಳನ್ನು ಸುಟ್ಟು ಈ ಎಲ್ಲ ಅನ್ಯಾಯ ಮತ್ತು ಅನರ್ಥದ ಕಾಡಿಗೆ ಕಾರಣವಾಗಿರುವ ರಾವಣ ರೂಪಿಯಾದ ಮಹಾ ಪ್ರಚಂಡ ಮರಗಳನ್ನು ಬೇರುಗಳೊಂದಿಗೆ ದಹಿಸಿ ಬೂದಿ ಮಾಡಿಬಿಟ್ಟಿತು! ಪಂಚಭೂತಗಳ ಮತ್ತು ದಿವ್ಯಗೋಲಕಗಳ ಕಾರ್ಯಗಳು ಎಂದಿನಂತೆ ಯಾವ ತೊಂದರೆ ಇಲ್ಲದೆ ನಡೆಯ ಹತ್ತಿದವು. ಇಷ್ಟರ ವರೆಗೆ "ಧರ್ಮಕ್ಕೆ ಬಂದಿರುವ ಗ್ಲಾನಿಯೂ" "ಅಧರ್ಮದ ಅಭ್ಯುತ್ಥಾನವೂ" ಇಂದಿಗೆ ಮುಗಿದವು. "ಸಾಧುಗಳ ಪರಿತ್ರಾಣವಾಯಿತು" "ದುಷ್ಕೃತರ ವಿನಾಶವಾಯಿತು." ಇದೆ ಈಗ ದೇವಕಾರ್ಯವು ಮತ್ತು ದೇಶಕಾರ್ಯವು.

ಈ ಎರಡು ಕಾರ್ಯಗಳಿಗಾಗಿಯೆ ಅವತರಿಸಿದ ಶ್ರೀ ರಾಮನ ಜೀವನವು ಯಾರಿಗೆ ಮರೆತು ಹೋದೀತು? ದೇಶಕಾರ್ಯಕ್ಕಾಗಿ ಜನ್ಮವನ್ನೆತ್ತಿದ ದೇಶ್ಯ ಸಾಧನನಾದ ಆ ರಾಮ ಪ್ರಭುವೂ—ಅವನ ಆ ಜನ್ಮ ದಿವಸವೂ ಯಾರಿಗೆ ತಾನೆ ಸ್ಮರಣೀಯವಾಗಲಿಕ್ಕಿಲ್ಲ? ಇಷ್ಟು ಕೃತಘ್ನನು ನಮ್ಮ ಭಾರತಖಂಡದಲ್ಲಿ ಯಾವನಾದರೂ ಇದ್ದಾನೆಯೆ? ರಾಮನ ಕಾಲದಲ್ಲಿ, ಅನಂತರದ ಕಾಲದಲ್ಲಿ ಇಲ್ಲವೆ ಸಾಂಪ್ರತಕಾಲದಲ್ಲಿ ಅನೇಕ ಜೀವಿಗಳು ಜನ್ಮವನ್ನು ತಾಳಿರುವವು. ಆದರೆ ರಾಮನವಮಿಯಂತೆ ಈ ಬೇರೆ ಜೀವಿಗಳ ನವಮಿ, ದಶಮಿ ಇಲ್ಲವೆ ಬೇರೆ ದಿವಸವು ಆಚರಣೀಯವಾಗಿರುವುದೇ? ಇಲ್ಲ. ಮಿಕ್ಕ ಜೀವಿಗಳು ದೇವಕಾರ್ಯಕ್ಕಾಗಿ ಬಂದವುಗಳಲ್ಲ, ದೇಶಕಾರ್ಯಕ್ಕಾಗಿ ಕಷ್ಟಪಟ್ಟವುಗಳಲ್ಲ. ಎಂದ ಮೇಲೆ ಆ ಜೀವಿಗಳ ನವಮಿಯು ಹ್ಯಾಗೆ ಆಚರಣೀಯವಾಗಿದ್ದೀತು? ಇಂಥ ಜೀವಿಗಳು ಎಷ್ಟು ಹುಟ್ಟಿದರೇನು, ಇನ್ನೇನಾದರೇನು? ಇವುಗಳ ಗಣನೆಯು ದೇವಕಾರ್ಯದ ಇತಿಹಾಸದಲ್ಲಿ ಬರುವುದಿಲ್ಲ. ಆ ಪ್ರತಾಪಿ ರಾಮನ ಪರಾಕ್ರಮ, ಅವನ ಸತ್ಯನಿಷ್ಠೆ, ಅವನ ಅಮೋಘವಾಕ್ಯ, ಇವು ಈ ಹೊತ್ತಿನ ನಮ್ಮಂಥ ಭಕ್ತರಿಗೆ ಅನುಕರಣೀಯವಾಗಿದ್ದರೂ ಅವನು ತನ್ನ ಅವತಾರಕಾಲದಲ್ಲಿ ತನ್ನ ದೇಶಕ್ಕೆ ಕೊಟ್ಟಿರುವ ನವಜೀವನವು ಅತಿ ಪೂಜ್ಯವಾಗಿದೆ. ಇಂಥ ಗುಣಗಳಾಗಲೀ ಜೀವನವಾಗಲಿ ಇಲ್ಲದಿರುವಾಗ ಮಿಕ್ಕವರ ಜನ್ಮದಿವಸವು ಯಾಕೆ ಪಾಲನೀಯವಾದೀತು?

ಆದರೂ ಪ್ರತಿ ಒಂದು ಜೀವಿಯ ಗುರಿಯು ರಾಮನ ಕಡೆಗಿರಬೇಕು. ಅವನ ಜೀವನ ಕ್ರಮ; ಅವನ ಅವತಾರಕೃತ್ಯ, ಅವನ ಧ್ಯೇಯ ಈ ಮೂರು ಸಂಗತಿಗಳನ್ನು ಗಾಯತ್ರಿಯಂತೆ ಅವನ ಭಕ್ತರು ಜಪಿಸಬೇಕು. ತಮ್ಮಲ್ಲಿ ಅವುಗಳನ್ನು ಆವಾಹಿಸಿಕೊಳ್ಳಬೇಕು. ದೇವಕಾರ್ಯವನ್ನೂ, ದೇಶಕಾರ್ಯವನ್ನೂ ಸಾಧಿಸಿ ರಾಮನ ಭಕ್ತನಾಗಲು ಯತ್ನಿಸಬೇಕು. ಈ ಉದ್ದೇಶದಿಂದಲೆ ರಾಮನವಮಿಯ ದಿವಸವು ಪೂರ್ವದಿಂದ ಪ್ರಚಾರದಲ್ಲಿ ಬಂದಿರುವುದು. ಆ ದಿವಸ ಈ ದೃಷ್ಟಿಯಿಂದ ಶ್ರೀ ರಾಮನ ಉಪಾಸನೆಯನ್ನು ಮಾಡದೆ ಬರೆ ಪಾನಕ ಪಚ್ಚಡಿಯ ಪೂಜೆಯನ್ನು ಮಾಡುವುದರಿಂದ ಶ್ರೀ ರಾಮನಿಗೆ ಅಥವಾ ದೇವತೆಗಳಿಗೆ ತೃಪ್ತಿಯಿಲ್ಲ, ಮಾಡಿದವರಿಗೂ ಪುಣ್ಯವಿಲ್ಲ. ಆದುದರಿಂದ ಪ್ರಿಯ ವಾಚಕರು ನಾಳೆಯ ಶ್ರೀ ರಾಮನವಮಿಯ ವ್ರತವನ್ನು ಹಾಗು ಉತ್ಸವವನ್ನು ಯಥಾರ್ಥ ಭಾವನೆಯಿಂದ ನೆರವೇರಿಸಿ ಶ್ರೇಯಸ್ಸನ್ನು ಹೊಂದಬೇಕೆಂದು ಪ್ರಾರ್ಥನೆಯಿದೆ.

ಸ್ಫುಟವಿಚಾರಗಳು.

೧. ಹಿಂದೀ ಜನರು ಸ್ವರಾಜ್ಯವನ್ನು ಕೇಳುವಾಗ 'ಹಿಂದೀಸಮಾಜವು ಅಶಿಕ್ಷಿತರಿಂದ ತುಂಬಿಹೋಗಿದೆ; ಇಂಥ ಕಡೆಯಲ್ಲಿ ಸ್ವರಾಜ್ಯವು ಹಿತಾವಹವಾಗಲಾರದು.' ಎಂದು ಸರಕಾರಿ ಅಧಿಕಾರಿಗಳು ಆಗಾಗ ಹೇಳುವುದುಂಟು. ಇದೊಂದು ಚಿತ್ರವು. ಇದರ ಸಂಗಡ ಇನ್ನೊಂದು ಚಿತ್ರವನ್ನು ವಾಚಕರು ನೋಡುವ ಹಾಗಿದೆ. 'ನಮ್ಮಲ್ಲಿ ಶಿಕ್ಷಣದ ಪ್ರಮಾಣವು ಕಡಿಮೆ ಎಂಬುದು ನಿಜ. ಪ್ರಾಥಮಿಕ ಶಿಕ್ಷಣವಾದರೂ ಸಾರ್ವತ್ರಿಕವಾಗುವಂತೆ ಇಂಥಿಂಥ ಅನುಕೂಲತೆಗಳನ್ನು ಒದಗಿಸಿಕೊಡಿರಿ' ಎಂದು ಗತಿಸಿದ ಗೋಖಲೆ ಅಥವಾ ಈಗಿನ ನಾಮ! ಶರ್ಮಾ ಮುಂತಾದವರು ಸರಕಾರದ ಕಡೆಗೆ ಕೇಳಿಕೊಂಡರೆ ಅದರಿಂದ ಏನಾದರೂ ಪ್ರಯೋಜನವಾಗುವುದೆ? ಇಲ್ಲ. ಈ ವಿಷಯದಲ್ಲಿ ನಮ್ಮ ವರಿಷ್ಠ ಕೌನ್ಸಿಲಿನೊಳಗೆ ಇತ್ತಲಾಗೆ ನಡೆದ ಎರಡು ಸಂಗತಿಗಳನ್ನು ದೃಷ್ಟಾಂತಕ್ಕಾಗಿ ಉದಾಹರಿಸಬಹುದು. ವರಿಷ್ಠ ಕೌನ್ಸಿಲಿನ ಕಳೆದ ಫೆಬ್ರವರಿ ತಿಂಗಳಿನ ಅಧಿವೇಶನದಲ್ಲಿ ನಾಮ! ಶರ್ಮಾ ಎಂಬವರು—ಪ್ರಾಥಮಿಕ ಶಿಕ್ಷಣವನ್ನು ೧೫ ವರ್ಷಗಳಲ್ಲಿ ಖಜಾನೆಯಿಂದ ಉಚಿತವಾಗಿ ಕೊಡಬೇಕೆಂಬುದಾಗಿ ಒಂದು ಠರಾವನ್ನು ತಂದಿದ್ದರು. ಅದು ಮಂಜೂರಾಗಲಿಲ್ಲ. ಆದರೂ ಇದರಲ್ಲಿ ಒಂದು ಸಂಗತಿಯನ್ನು ಲಕ್ಷ್ಯದಲ್ಲಿಡುವ ಹಾಗಿದೆ. ಕೆಲವು ವರ್ಷಗಳ ಹಿಂದೆ ಇದೆ ವಿಷಯದ ಠರಾವನ್ನು ನಾಮ! ಗೋಖಲೆಯವರು ತಂದಾಗ ಎಷ್ಟು ಮತಗಳು ಅನುಕೂಲವಾಗಿದ್ದವೊ ಅವಕ್ಕಿಂತಲೂ ಈಗ ಹೆಚ್ಚು ಮತಗಳು ಅನುಕೂಲವಾಗಿದ್ದವು. ಮತಗಳು ಹೆಚ್ಚು ಅನುಕೂಲವಿರಲಿ, ಹೇಗೂ ಇರಲಿ, ಅಂತು ಈ ಠರಾವು ಮಂಜೂರಾಗಲಿಲ್ಲ. ಪುನಃ ಇದೇ ಮಾರ್ಚ್ ತಿಂಗಳಲ್ಲಿ ನಾಮ. ಶಾಸ್ತ್ರಿಯವರು ಪ್ರಾಥಮಿಕ ಶಿಕ್ಷಣದ ವಿಷಯವಾಗಿ ಇನ್ನೂ ೩೦ ಲಕ್ಷ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡಬೇಕೆಂದು ಒಂದು ಸೂಚನೆಯನ್ನು ತಂದರು. ದುಃಖದ ಮಾತೇನೆಂದರೆ, ಶಿಕ್ಷಣಮಂತ್ರಿಗಳಾದ ಸರ್ ಶಂಕರನ್ ನಾಯರುಗಳು ಈ ಸೂಚನೆಗೆ ವಿರೋಧಿಗಳಾಗಿ ನಿಂತು ಅದನ್ನು ತಳ್ಳಿಹಾಕಿದರು! "ಟ್ರೈಂಡ ಶಿಕ್ಷಕರು ಸಾಕಷ್ಟು ಇಲ್ಲ, ಮತ್ತು ಹಣ ಖರ್ಚುಮಾಡಿ ಶಾಲೆಗಳನ್ನು ಹೆಚ್ಚಿಸುವುದು ಹೇಗೆ?" ಸರ ನಾಯರುಗಳ ಈ ಕೋಟಿ ಕ್ರಮವನ್ನು ಕೇಳುವಾಗ ಯಾರಿಗೆ ಆಶ್ಚರ್ಯವಾಗದೆ ಇರದು? ಟ್ರೈನಿಂಗ ಹೊಂದಿದ ಶಿಕ್ಷಕರ ಸಂಖ್ಯೆಯು ಕಡಮೆ ಇದ್ದುದಾದರೆ ಆ ಸಂಖ್ಯೆಯನ್ನೂ ಹೆಚ್ಚಿಸಿ ಅದಕ್ಕೆ ತಕ್ಕಷ್ಟು ಶಾಲೆಗಳ ಸಂಖ್ಯೆಯನ್ನು ಕೂಡ ಹೆಚ್ಚಿಸಬಹುದಲ್ಲವೆ? ನಾಲ್ಕು ವರ್ಷಗಳ ಹಿಂದೆ ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು ೯೧ ಸಾವಿರದಿಂದ ಹೆಚ್ಚಿಸುವೆವೆಂದು ಸರಕಾರದ ಕಡೆಯಿಂದ ಹೇಳಲಾಗಿತ್ತು. ಆದರೆ ಈ ಹೊತ್ತಿನ ವರೆಗೆ ಆದ ಈ ಸಂಖ್ಯೆಯ ಪ್ರಗತಿಯು ಏನೂ ಇಲ್ಲ. ಯುದ್ಧಕಾಲದಲ್ಲಿ ಇದಕ್ಕಿಂತ ಹೆಚ್ಚಿನ ಅಭಿವೃದ್ಧಿಯನ್ನು ಮಾಡಲು ಸಾಧ್ಯವಿಲ್ಲೆಂದರೆ ಕೊನೆಗೆ ನಾಮ. ಶಾಸ್ತ್ರಿಯವರ ಸೂಚನೆಯಂತೆ ಬರೆ ಮೂವತ್ತು ಲಕ್ಷ ರೂಪಾಯಿ ಹೆಚ್ಚು ಖರ್ಚು ಮಾಡಬಹುದಿತ್ತಲ್ಲವೆ?

೨. ಅದೆ ನಾಮದಾರ ಶಾಸ್ತ್ರಿಯವರು ಇನ್ನೊಂದು ಬಹು ಉಪಯುಕ್ತವಾದ ಸೂಚನೆಯನ್ನು ಮಾಡಿದರು. "ಈಗ ಯುದ್ಧಕಾಲವಾದುದರಿಂದ ಸಾಧಾರಣವಾಗಿ ಪ್ರತಿ ಒಂದು ಖಾತೆಯಲ್ಲಿ ಖರ್ಚು ಕಡಿಮೆ ಮಾಡಲ್ಪಡುತ್ತದೆ. ಹೀಗಿರುವಾಗ ಹಿಂದುಸ್ಥಾನ ಸರಕಾರವು ಶಿಮಲೆಯಂಥ ಶೀತಲ ಪರ್ವತಕ್ಕೆ ಹೋಗುವುದನ್ನು ಈ ವರ್ಷ ನಿಲ್ಲಿಸಿ ೩ ಲಕ್ಷ ರೂಪಾಯಿಗಳನ್ನು ಉಳಿಸಬಹುದು. ಇದರಿಂದ ಬೇರೆಯವರಿಗೆ ಒಂದು ಅನುಕರಣೀಯವಾದ ಉದಾಹರಣೆಯನ್ನು ಹಾಕಿ ಕೊಟ್ಟಂತಾಗುವುದು." ನಾ. ಶಾಸ್ತ್ರಿಯವರ ಈ ಸೂಚನೆಯೂ ವ್ಯರ್ಥವಾಯಿತು. ವಿಲಾಯತಿಯಂಥ ಶೀತಲಪ್ರದೇಶದಿಂದ ಇಲ್ಲಿಯ ಉಷ್ಣ ಹವೆಗೆ ಬಂದು ಕೆಲಸ ಮಾಡುವುದು ಸಿವಿಲಿಯನರಿಗೆ ಅಥವಾ ಗವರ್ನರರಂಥ ದೊಡ್ಡ ಅಧಿಕಾರಿಗಳಿಗೆ ಕಷ್ಟದ್ದಾಗಿರಬಹುದು. ಆದರೆ ಅವರ ಸೌಕರ್ಯಗಳನ್ನೆಲ್ಲ ಆಲೋಚಿಸಿ ಕಿಂಬಹುನಾ ಅವರ ಸೌಕರ್ಯಗಳು ಒದಗುವಂತೆ ಅವರ ಸಂಬಳವು ಬೇರೆ ಯಾವ ದೇಶದಲ್ಲಿಯೂ ಇಲ್ಲದಷ್ಟು ಇಲ್ಲಿ ಕೊಡಲ್ಪಡುತ್ತದೆ. ಹೀಗಿದ್ದರೂ ಶಿಮಲೆಯ ಆವಾಸ ತತ್ಕಾಲಕ್ಕಾದರೂ ಬಿಡಲು ಆಗದೆಹೋಯಿತು.

೩. ಗಯ್ನೆ ಕರಾರಿನ ಕೂಲಿಗಳನ್ನು ಫಿಜಿ ದ್ವೀಪದಲ್ಲಿ ಹೋಗಲು ಬರುವ ಮೇ ತಿಂಗಳ ನಂತರ ಪ್ರತಿಬಂಧಿಸಲ್ಪಟ್ಟಿದೆ. ಅದು ಪ್ರಸಿದ್ಧವಾಗಿ ಕೆಲವು ದಿವಸಗಳಾದವು. ಈಗ ಈ ವರ್ತಮಾನವು ಹಳೆಯದಾದರೂ ಈ ವಿಷಯದ ಮೀಮಾಂಸೆಯು ಜನರಿಗೆ ಒಪ್ಪದಿರಲಿಕ್ಕಿಲ್ಲೆಂದು ತೋರುತ್ತದೆ. ಪ್ರತಿಬಂಧದ ಹುಕುಮನ್ನು ಹೊರಡಿಸಿದ್ದಕ್ಕಾಗಿ ಸರಕಾರವು ಅಭಿನಂದನೆಗೆ ಪಾತ್ರವಾಗಿದೆ. ಪರಂತು ಈ ಪ್ರತಿಬಂಧದ ಕೈಕಾಲುಗಳನ್ನೆಲ್ಲ ಬಿಚ್ಚಿ ನೋಡಿದರೆ ಹಿಂದೀ ಗೃಹಸ್ಥನಿಗೆ ಅಷ್ಟೊಂದು ಸಮಾಧಾನವಾಗಲಾರದು. ಕಾರಣ—ಡಿಫೆನ್ಸ ಒಫ್ ಇಂಡಿಯಾ ಎಕ್ಟಿನ ಎಂದರೆ ರಾಜ್ಯರಕ್ಷಣೆ—ಕಾನೂನಿನ ಆಧಾರದಿಂದ ಹೊರಡಿಸಲ್ಪಟ್ಟದ್ದು. ಈ ವಿಷಯದಲ್ಲಿ ಸರಕಾರವು ಹೇಳುತ್ತದೇನೆಂದರೆ:—ಈ ಯುದ್ಧಕಾಲದಲ್ಲಿ ಹಿಂದುಸ್ಥಾನದ ಮನುಷ್ಯಬಲವು ಹಿಂದುಸ್ಥಾನದಲ್ಲಿಯೆ ಇರುವುದು ಬಹು ಇಷ್ಟವಿದ್ದುದರಿಂದ, ಯುದ್ಧವು ನಡೆಯುವತನಕ ತನಕ ಸಿಲೋನ ಮತ್ತು ಮಲಯಾ ಸ್ಟೇಟ್ಸಗಳಲ್ಲದೆ ಬೇರೆ ಕಡೆಗಳಲ್ಲಿ ಕೂಲಿಗಳು ಹೋಗಕೂಡದೆಂಬುದಾಗಿ ಹೇಳಿ ಮುಂದೆ ತೋರಿಸಿದ ಮಾತಿನಲ್ಲಿ ಈ ಪ್ರತಿಬಂಧದ ನಿಜವಾದ ಸ್ವರೂಪವು ವ್ಯಕ್ತವಾಗುತ್ತದೆ. [illegible]

ಕೂಡತಕ್ಕದ್ದು." ಈ ಮಾತಿನಿಂದಂತೂ ಕೂಲಿಗಳ ವಿಷಯದಲ್ಲಿ ಸರಕಾರವು ತೋರಿಸಿದ ಅನುಗ್ರಹದ ಮೇಲೆ ತುಂಬಾ ಪ್ರಕಾಶ ಬೀಳುತ್ತದೆನ್ನಬಹುದು! ಈ ಎಲ್ಲ ಇಂದ್ರಜಾಲದಿಂದ ಫಿಜಿಯಂಥ ಕ್ರೂರ ವಸಾಹತಗಳಿಗೆ ಇಲ್ಲಿಂದ ಕೂಲಿಗಳು ಹೋಗುವುದು ಸದ್ಯ ಪ್ರತಿಬಂಧಿಸಲ್ಪಟ್ಟಿದ್ದಾದರೂ ಎಮಿಗ್ರೇಶನ್ ಎಕ್ಟಿನ ಆಧಾರದಿಂದ ಇಲ್ಲವೆ ಅದರಲ್ಲಿ ತಕ್ಕ ಸುಧಾರಣೆಯನ್ನು ಮಾಡಿಯಾದರೂ ಈ ಅನಿಷ್ಟ ಪ್ರಕಾರವನ್ನು ನಿಲ್ಲಿಸಬಹುದಿತ್ತು; ಅದಕ್ಕೆ ರಾಜ್ಯರಕ್ಷಣೆ ಕಾನೂನಿನ ಸಾಹಾಯ್ಯವು ಬೇಕಿದ್ದಿಲ್ಲ. ಇಂಗ್ಲೆಂಡ್ ಫ್ರಾನ್ಸುಗಳಲ್ಲಿ ಕೂಲಿಯ ಅವಶ್ಯಕತೆಯನ್ನು ತೋರಿಸಿದ್ದರಿಂದಂತೂ ಇದರ ಗಾಂಭೀರ್ಯವು ಹೋಗಿಯೇ ಹೋಯಿತು! ಇರಲಿ. ಇದರಿಂದ ತಿಳಿದುಕೊಳ್ಳಬೇಕಾದ ಮುಖ್ಯ ಸಂಗತಿಯು ಇಷ್ಟೆ. ಸರಕಾರವು ಹಿಂದೀ ಜನರ ಯೋಗ್ಯ ವಿಜ್ಞಾಪನೆಗೂ ಕೂಡ ಸಾಕಷ್ಟು ಕಿವಿಗೊಡುವುದಿಲ್ಲ.

೮. ವಿಲಾಯತಿಯ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕೀ ಶಿಕ್ಷಣವನ್ನು ಕೊಡುವಂತೆ ಶಾರೀರಿಕ ಶಿಕ್ಷಣವನ್ನು ಸಹಾ ಕೊಡುತ್ತಾರೆ. ಇದರಿಂದ ವಿದ್ಯಾರ್ಥಿಗಳ ದೇಹದಮಟ್ಟಿಗೆ ದೇಹವು ಒಳ್ಳೇದಾಗಿ ಸಾಮಾಜಿಕ ಹಾಗು ರಾಷ್ಟ್ರೀಯ ಕಾರ್ಯಗಳಲ್ಲಿ ಸಾಹಾಯ್ಯ ಮಾಡಲು ಅವರಿಗೊಂದು ಸಂದರ್ಭವನ್ನು ಕೊಟ್ಟಂತಾಗುತ್ತದೆ. ದೊಡ್ಡದೊಂದು ಜಾತ್ರೆಯಾದಾಗ, ರಾಷ್ಟ್ರೀಯ ಸಭೆಯಂಥ ದೊಡ್ಡ ಸಭೆಯಾದಾಗ ಇಲ್ಲವೆ ದೊಡ್ಡದೊಂದು ಪ್ರಯಾಣದಲ್ಲಿ ಈ ವಿದ್ಯಾರ್ಥಿಗಳು ಆಯಾ ಜನರ ಸೌಕರ್ಯವನ್ನು ಪೂರೈಸುವುದರಲ್ಲಿ ಮದತು ಮಾಡುವರು. ಇಂಥವರಿಗೆ "ಸ್ವಯಂ ಸೇವಕರು" (Volunteers) ಎಂದೆನ್ನುತ್ತಾರೆ. ಇದೆ ಶಾಲೆಯ ವಿದ್ಯಾರ್ಥಿಗಳಿಗೆ ಸ್ವಲ್ಪ ಸೈನಿಕ ಶಿಕ್ಷಣವನ್ನು ಕೂಡ ಕೊಡುವದುಂಟು. ರಾಷ್ಟ್ರದ ಮೇಲೆ ಫಕ್ಕನೆ ಒಂದು ಆಪತ್ತು ಒದಗಿದರೆ ಈ ವಿದ್ಯಾರ್ಥಿಗಳು ಮಾತೃಭೂಮಿಯ ಸೇವೆಗಾಗಿಯೂ, ಸರಕಾರದ ಸಾಹಾಯ್ಯಕ್ಕಾಗಿಯೂ ತಮ್ಮ ಶರೀರ ಸಾಮರ್ಥ್ಯವನ್ನು ಅರ್ಪಿಸುವುದುಂಟು. ಅಂಥ ವಿದ್ಯಾರ್ಥಿಗಳಿಗೆ "ಬಾಲಚಮೂ" (Boyscouts) ಈ ಹೆಸರನ್ನು ಕೊಡುವರು. ಇಂಥ ಸಂಸ್ಥೆಗಳು ಇಂಗ್ಲಂಡಿನಲ್ಲಿ ಮಾತ್ರ ಇದ್ದಾವೆಂದಲ್ಲ; ಹಿಂದುಸ್ಥಾನದ ಎಂಗ್ಲೋ ಇಂಡಿಯನ್ ಶಾಲೆಗಳಲ್ಲಿಯೂ ಇವೆ. ಆದರೆ ಇಷ್ಟರವರೆಗೆ ಹಿಂದೀ ಶಾಲೆಗಳಲ್ಲಿ ಈ ಏರ್ಪಾಡಿದ್ದಿಲ್ಲ. ಅದು ನಾಮ| ಶರ್ಮಾ ಇವರು ವರಿಷ್ಠ ಕೌನ್ಸಿಲಿನಲ್ಲಿ ಪಾಸು ಮಾಡಿಸಿಕೊಂಡ ಒಂದು ಠರಾವಿನಿಂದ ಇನ್ನು ಮುಂದೆ ಹಿಂದೀ ಶಾಲೆಗಳಲ್ಲಿಯೂ ಮಾಡೋಣಾದೀತೆನ್ನಬಹುದಾಗಿದೆ. ಈ ಬಗ್ಗೆ ನಾಮ| ಶರ್ಮಾ ಇವರನ್ನೂ, ಅವರ ಠರಾವನ್ನು ಸಮ್ಮತಿಸಿದ ಶಿಕ್ಷಣಮಂತ್ರಿಗಳಾದ ಸರ್ ಶಂಕರನಾಯರುಗಳನ್ನೂ ಅಭಿನಂದಿಸುವುದು ನಮ್ಮ ಜನಾಂಗದ ಕರ್ತವ್ಯವಾಗಿದೆ. "ಬಾಲಚಮೂ" ಸಂಸ್ಥೆಯ ಠರಾವನ್ನು ಕೌನ್ಸಿಲಿನ ಮುಂದಿಡುವಾಗ ಶರ್ಮರು ಹೇಳಿದ್ದೇನಂದರೆ:— ಈ ಏರ್ಪಾಡಿನಿಂದ ಸ್ವತಃ ಸಾಮ್ರಾಜ್ಯಕ್ಕಾಗಲಿ ಹುಡುಗರ ಮಾತೃಭೂಮಿಗಾಗಲಿ ಒಂದು ದೊಡ್ಡ ಸಾಹಾಯ್ಯವೂ ಉಪಯೋಗವೂ ಆದಾವು. ಈ ರೀತಿಯ ಸಂಸ್ಥೆಯಿಂದ ಹುಟ್ಟುವ ಮಿತ್ರತ್ವದ ಭಾವನೆಯಿಂದ ವಿದ್ಯಾರ್ಥಿಗಳಲ್ಲಿ ಸರ್ವಸಾಧಾರಣವಾದ ನಿಗ್ರಹ ಕ್ರಮವು ಮಾತ್ರ ಬಂದೀತೆಂದು ನೆನೆಸಕೂಡದು; ಬೇರೆ ಬೇರೆ ಪ್ರಾಂತಗಳಲ್ಲಿ ರೂಢವಾದ ಆಚಾರವಿಚಾರಗಳಿಂದ ಹುಟ್ಟುವ ದ್ವೈತಭಾವನೆಯ ಬೇಲಿಯೂ ಮುರಿದುಹೋದೀತು. ನಾಮ| ಶರ್ಮರ ಈ ವಿಧಾನವನ್ನು ಸರ್ ಶಂಕರನಾಯರುಗಳು ಒಪ್ಪಿಕೊಂಡರು. ಈ ತರದ ಸಂಸ್ಥೆಯು ಇಂಗ್ಲಂಡಿನಲ್ಲಿ ಹುಟ್ಟಿದ್ದಾದರೂ ಈ ದೇಶದಲ್ಲಿ ಸರಕಾರವು ಅದರ ಪ್ರಸಾರಣೆಯ ಬಗ್ಗೆ ಅಥವಾ ಅದರ ಸಂಕೋಚದ ಬಗ್ಗೆ ಯಾವ ಯತ್ನವನ್ನು ನಡಿಸಲಿಲ್ಲ ಎಂಬುದಾಗಿ ಶಿಕ್ಷಣಮಂತ್ರಿಗಳು ಗುಣಗುಟ್ಟಿದರು. ಇವರ ತಾತ್ಪರ್ಯವೇನಂದರೆ ಇಲ್ಲಿಯ ಯುರೋಪಿಯನ್ ಶಾಲೆಗಳಲ್ಲಿ ಈ ಸಂಸ್ಥೆಯ ಉದ್ಭವವನ್ನು ಸರಕಾರವು ಮಾಡಿಲ್ಲ; ಇಲ್ಲವೆ ಹಿಂದೀ ಶಾಲೆಯಲ್ಲಿ ಇದರ ಸಂಕೋಚವನ್ನೂ ಮಾಡಿದ್ದಲ್ಲಾಗಿರಬಹುದು. ಆದರೆ ದೇಶದೊಳಗಿನ ತರುಣರ ಶರೀರವು ಸಮರ್ಥವಾಗಿ ಮಾತೃಭೂಮಿಯ ಸೇವೆಯಲ್ಲಿ ಅವರ ಉಪಯೋಗವಾಗುವಂತೆ ಏರ್ಪಡಿಸುವುದು ಸರ್ವಸೂತ್ರಧಾರಿಯಾದ ಸರಕಾರದ್ದೆ ಒಂದು ಪವಿತ್ರ ಕರ್ತವ್ಯವಾಗಿದೆ. ಇದನ್ನು ಯಾರೂ ಮರೆಯ ಕೂಡದು. ಕೊನೆಗೆ ಕಾಲವಿಲಂಬದಿಂದಲಾದರೂ ಈ ಇಷ್ಟು ಸುಧಾರಣೆಯಾಯಿತು. ಈ ಬಗ್ಗೆ ಸರಕಾರವು ಸ್ತುತ್ಯವಾಗಿದೆ.

೯. ಈ ಸಾರೆಯ ವರಿಷ್ಠ ಕೌನ್ಸಿಲಿನ ಅಧಿವೇಶನವು ಮಾರ್ಚ ತಾ. ೨೩ರಲ್ಲಿ ಮುಗಿಯಿತು. ಅದರಲ್ಲಿ ನಡೆದ ಹೆಚ್ಚಿನ ಪ್ರಸ್ತಾವಗಳು ಹಿಂದುಸ್ಥಾನದ ಬರುವ ವರ್ಷದ ಜಮಾ ಖರ್ಚಿನ ವಿಷಯವಾಗಿಯೆ ಇದ್ದವು. ಜಮಾ ಖರ್ಚಿನ ವಿಷಯದಲ್ಲಿ ಲೋಕಪ್ರತಿನಿಧಿಗಳು "ಅದು ಹಾಗಾಯಿತು, ಇದು ಹೀಗಾಗಬೇಕಿತ್ತು' ಎಂದು ಮುಂತಾಗಿ ಎಷ್ಟು ಕಂಠಶೋಷ ಮಾಡಿಕೊಂಡರೂ ಅದು ಪ್ರಯೋಜನಕ್ಕೆ ಬರುವುದಿಲ್ಲ. ಖಜಾನಾ ಮಂತ್ರಿಗಳು ಇಡೀ ದೇಶದ ಜಮಾ ಖರ್ಚನ್ನು ತಾವೊಬ್ಬರೇ ನಿರ್ಣಯಿಸಿ ಅದನ್ನು ಕೌನ್ಸಿಲಿನಲ್ಲಿ ಪ್ರತಿನಿಧಿಗಳ ಮುಂದೆ ಓದಿಹೇಳಿ, ಏನೋ ಸ್ವಲ್ಪವಾದ ವಿವಾದಾಂಶದಲ್ಲಿ, ಅದನ್ನು ಮಂಜೂರು ಮಾಡಿಕೊಳ್ಳುವುದೆಂದರೆ ಜಡ್ಜನು ಕಕ್ಷಿಗಾರ, ವಕೀಲರ ಮುಂದೆ ತನ್ನ ತೀರ್ಪನ್ನು ಓದುವಂತೆಯಾಗಲಿ ಇಲ್ಲವೆ ಪರದೆಯ ಒಳಗಡೆಯಲ್ಲಿ ತಯಾರಾಗುವ ನಾಟ್ಯದ ಪಾತ್ರಗಳು ರಂಗಭೂಮಿಯ ಮೇಲೆ ಬಂದು ನಟಿಸುವಂತೆಯಾಗಲಿ [illegible] ಮೊದಲು ಜಮಾ ಖರ್ಚನ್ನು ನಿರ್ಣಯಿಸಿಕೊಂಡು ಅನಂತರ ವಾದವಿವಾದದ [illegible]

ಹೇಳುವಂತೆ "ಕುದುರೆಗಿಂತ ಗಾಡಿಯನ್ನು ಮುಂದೆ ಕಟ್ಟುವಂತೆ ಉಪಹಾಸಾಸ್ಪದ ಮತ್ತು ಅಪ್ರಯೋಜಕವಾಗಿದೆ." "ಜಮಾ ಖರ್ಚಿನ ಪಟ್ಟಿಯನ್ನು ಕೌನ್ಸಿಲಿನಲ್ಲಿ ಸಾದರಪಡಿಸುವುದಕ್ಕಿಂತ ಮುಂಚೆಯೇ ಒಂದು ಚಿಕ್ಕ ಕಮಿಟಿಯನ್ನು ಮಾಡಿ ಅದರಲ್ಲಿ ಆ ಬಗ್ಗೆ ಚರ್ಚೆ ನಡೆದು ಆದರ ಇತ್ಯರ್ಥವನ್ನು ಮತ್ತೆ ಈಗಿನಂತೆ ಸಭೆಯ ಮುಂದಿಡುವುದು ಯೋಗ್ಯವಾಗಿದೆ." ಎಂದು ಮಿ. ಜಿನರು ಒಂದು ಯೋಗ್ಯ ಸೂಚನೆಯನ್ನು ಕೊಟ್ಟಿರುವರು. ಮಿ. ದಾದಾಭಾಯಿಯವರು ಈ ಅಧಿವೇಶನದಲ್ಲಿ ಉಪಯೋಗಿಸಿದ ಸ್ಪಷ್ಟ ಭಾಷೆಯೂ ಕೂಡ ಮಹತ್ವದಾಗಿತ್ತು. "ಹಿಂದುಸ್ಥಾನವು ಇಂಗ್ಲಂಡ ಹಾಗು ವಸಾಹತಗಳ ದಾಸವಾಗಿರುವುದು ಉಚಿತವಲ್ಲ. ಬ್ರಿಟಿಷ್ ಸಾಮ್ರಾಜ್ಯದ ಪುನರ್ಘಟನೆಯಲ್ಲಿ ಹಿಂದುಸ್ಥಾನಕ್ಕೆ ಅದರ ಜನಸಂಖ್ಯೆ ಮತ್ತು ಮಹತ್ವಗಳಿಗೆ ಸರಿಯಾಗುವಂತೆ ಬಹುಮಾನ ವಿಶ್ವಾಸ ಹಾಗೂ ಸಾಮರ್ಥ್ಯಗಳು ಸಿಗುವಂತಿಲ್ಲಾದರೆ ಜನರಲ್ಲಿ ನಿರಾಶೆಯುಂಟಾಗದೆ ಎಂದಿಗೂ ಇರದು. ಆಡಳಿತೆಯ ಮತ್ತು ಸಾಂಪತ್ತಿಕ ವಿಷಯದಲ್ಲಿ ಹಿಂದುಸ್ಥಾನವನ್ನು ವಸಾಹತುಗಳ ಕೈಕೆಳಗೆ ತಂದಿಡುವುದು ಹಿಂದುಸ್ಥಾನಕ್ಕೇನೂ ಇಷ್ಟವಿಲ್ಲೆಂಬುದು ಸಾಮ್ರಾಜ್ಯ ಸರಕಾರವು ಮರೆಯಕೂಡದೆಂಬುದಾಗಿ ನಾಮ| ದಾದಾ ಬಾಯಿಯವರು ಸ್ಪಷ್ಟೋಕ್ತಿಗಳಿಂದ ವಾದಿಸಿದರು.

೬. ಪ್ರಜಾಪ್ರತಿನಿಧಿಗಳು ಈ ರೀತಿಯಿಂದ ತಮ್ಮ ಜವಾಬುದಾರಿಯನ್ನರಿತು ಕೌನ್ಸಿಲಿನಲ್ಲಿ ಲೋಕಮತವನ್ನು ಅದಷ್ಟು ಸ್ಪಷ್ಟವಾಗಿಡುತ್ತಿದ್ದರೂ ಅದರ ಪರಿಣಾಮವು ಸರಕಾರದ ಮೇಲೆ ಎಷ್ಟಾಗುತ್ತಿದೆ. ಈ ವಿಷಯದಲ್ಲಿ ಮಾತ್ರ ಸಂದೇಹವೆ ತೋರುವುದು. ಕಾರಣ ಆದೆ ವರಿಷ್ಠ ಕೌನ್ಸಿಲಿನ ಅಧ್ಯಕ್ಷರಾದ ವೈಸರಾಯರವರು ತಮ್ಮ ಸಮಾಧೋಪದ ಭಾಷಣದಲ್ಲಿ ಪ್ರಜಾಪ್ರತಿನಿಧಿಗಳು ಉಚ್ಚರಿಸಿದ ರಾಜಕೀಯ ಆಕಾಂಕ್ಷೆಗಳ ವಿಷಯದಲ್ಲಿ ತಮ್ಮ ಯಾವ ಮತವನ್ನು ಕೊಟ್ಟಂತೆ ಕಾಣುವದಿಲ್ಲ, ಮೌನವನ್ನೇ ತಾಳಿರುವರು. ಬೇರೆ ವಿಷಯವಾಗಿ ಅಂದರೆ ಔದ್ಯೋಗಿಕ ವಿಷಯವಾಗಿ ಮಾತ್ರ ಬಹಳ ಒತ್ತಿ ಮಾತನಾಡಿರುವರು. ಹಿಂದುಸ್ಥಾನಕ್ಕೆ ಇಂದು ಔದ್ಯೋಗಿಕ ಉನ್ನತಿಯು ಬೇಕಾಗಿರುವಂತೆ ರಾಜಕೀಯ ಪ್ರಮೋನ್ನತಿಯೂ ಬೇಕಾಗಿರುವುದು. ಸತ್ಯವನ್ನೇ ಹೇಳುವುದಾದಲ್ಲಿ ರಾಜಕೀಯ ಪ್ರಗತಿಯಿಲ್ಲದೆ ಒಂದು ದೇಶಕ್ಕೆ ಬೇರೆ ಸಾಧನೆಗಳು ಅಷ್ಟೊಂದು ಫಲಕಾರಿಗಳಾಗವು. ಇದು ಬರೆ ನಮ್ಮ ಮಾತಲ್ಲ, ಅಬಾಧಿತವಾದ ಐತಿಹಾಸಿಕ ಸಿದ್ಧಾಂತವು. ಆದರೆ ಆ ವಿಷಯದಲ್ಲಿ ನಮ್ಮ ವೈಸರಾಯರು ಯಾವ ಆಶ್ವಾಸನೆಯನ್ನೂ ಕೊಡುವುದಿಲ್ಲ. ಆದರೆ ವೈಸರಾಯ ಪ್ರಭುಗಳು ಒಂದು ಮಾತ್ರ ಸಂತೋಷಕರವಾದ ವಿಧಾನವನ್ನು ಮಾಡಿರುವರು. "ಗಿರ್ಮಿಟ್ ಕರಾರಿನ ಕೂಲಿ ಪದ್ಧತಿಯು ಪುನರುಜ್ಜೀವಿಸಲಿಕ್ಕಿಲ್ಲ." ತಥಾಸ್ತು!!

೭. ಗಿರ್ಮಿಟ್ ಕರಾರಿನ ಕೂಲಿ ಪದ್ಧತಿಯು ನಿಲ್ಲಿಸಲ್ಪಟ್ಟದೆಂದು ವೈಸರಾಯ ಪ್ರಭುಗಳು ಕೌನ್ಸಿಲಿನಲ್ಲಿ ಪ್ರಸಿದ್ಧಪಡಿಸಿದ್ದಾರೆಂದು ಮೇಲೆಯೆ ಹೇಳಿದೆಯಷ್ಟೆ? ಇದೇ ವಿಷಯದಲ್ಲಿ ಮಾರ್ಚ ತಿಂಗಳ ೨೪ರಲ್ಲಿ ಹಿಂದುಸ್ಥಾನದೊಳಗಿನ ಕುಲೀನ ಸ್ತ್ರೀಯರ ಒಂದು "ಡೆಪ್ಯುಟೇಶನು" ವೈಸರಾಯರ ಭೇಟಿಗೆ ಹೋಗಿತ್ತು. ಈ ಡೆಪ್ಯುಟೇಶನಿನಲ್ಲಿ ಈ ದೇಶದೊಳಗಣ ಸಾಮಾನ್ಯ ಎಲ್ಲ ಭಾಗಗಳಿಂದ ಸ್ತ್ರೀ ಪ್ರತಿನಿಧಿಗಳಿದ್ದರೆನ್ನಬಹುದು. ವೈಸರಾಯ ಪ್ರಭುಗಳಿಗೆ ಅರ್ಪಿತಪಡಿಸತಕ್ಕ ವಿಜ್ಞಾಪನೆ ಅರ್ಜಿಯನ್ನು ಮಿಸೆಸ್ ಜಹಾಂಗೀರ ಪಿ. ಪೆಟಿಟ್ಸ ಎಂಬವರು ಓದಿ ತೋರಿಸಿದರು. ಅರ್ಜಿಯಲ್ಲಿ ಹಿಂದೂದೇಶದೊಳಗಿನ ಸ್ತ್ರೀಯರ ಪಾವಿತ್ರ್ಯವನ್ನೂ, ಈ ದುಷ್ಟ ಕೂಲಿಪದ್ಧತಿಯಿಂದ ದೇಶದ ಸಹೋದರ ಸಹೋದರಿಯರ ಪವಿತ್ರಾಚರಣೆಗೆ ಒದಗುವ ಕುಂದನ್ನೂ ಇಂಥ ದುಷ್ಟ ಪದ್ಧತಿಯನ್ನು ನಿರ್ಮೂಲ ಪಡಿಸಿ ಇಲ್ಲಿಯ ಸ್ತ್ರೀ ಪುರುಷರ ಮಾನ ಮರ್ಯಾದೆಯನ್ನು ಕಾಪಾಡಿ ಆ ಪುಣ್ಯವನ್ನು ವೈಸರಾಯರು ಸಂಪಾದಿಸುವುದು ಎಷ್ಟು ಅಗತ್ಯವೆಂಬ ಸಂಗತಿಯನ್ನೂ ಬಹಳ ಕನಿಕರ ಹುಟ್ಟಿಸುವ ರೀತಿಯಿಂದಲೂ ಸ್ತ್ರೀಯರ ಸ್ವಾಭಾವಿಕವಾದ ಕೋಮಲ ಶೀಲಕ್ಕೆ ಒಪ್ಪುವಂತೆಯೂ, ಉಲ್ಲೇಖಿಸಿದ್ದರು. ಅರ್ಜಿಯನ್ನು ಕೇಳಿ ವೈಸರಾಯರು ಬಹು ಸಮಾಧಾನಕರವಾದ ಉತ್ತರವನ್ನು ಕೊಟ್ಟಿರುವರು. "ಈ ದೇಶದಲ್ಲಿ ಸ್ತ್ರೀಯರಾಗಿ ಇಂಥ ಕೆಲಸಗಳನ್ನು ಕೈಕೊಂಡದ್ದು ಇದೇ ಮೊದಲನೇದಾಗಿದೆ. ಈ ದುಷ್ಟ ಪದ್ಧತಿಯು ಇಲ್ಲಿಗೆ ಅಂತ್ಯವಾಗಿದೆನ್ನಬಹುದು. ಈ ರೀತಿಯಿಂದ ಅಂತ್ಯವಾದುದು ಪುನಃ ತಲೆ ಎತ್ತಲಿಕ್ಕಿಲ್ಲೆಂದು ಭರವಸೆಯಿದೆ ಎಂದು ವೈ. ಪ್ರಭುಗಳು ಸ್ಪಷ್ಟ ಶಬ್ದಗಳಿಂದ ಉತ್ತರ ಕೊಟ್ಟರು! ಇಂಥ ಕೆಲಸಗಳಲ್ಲಿ ಮನಸ್ಸು ಕೊಡುವುದು ಈ ದೇಶದ ಸ್ತ್ರೀಯರಿಗೆ ನಿಜವಾಗಿ ಭೂಷಣಾಸ್ಪದವು.

ಸ್ಥಳಿಕ — ಮಂಗಳೂರು.

ಮಂಗಳೂರು ಬಂದರದ ಉತ್ತರ ಪಾರ್ಶ್ವದ ನದಿ ಕಿನಾರೆಯನ್ನು ಕೂಡಿಸಿಕೊಂಡು ಮಾರ್ಗವನ್ನು ಹಾಕಿಸಬೇಕೆಂಬಿತ್ಯಾದಿ ವಿಷಯಗಳುಳ್ಳ ಇಲ್ಲಿಯ ಬಂದರದ ಸಾವುಕಾರರ ಅರ್ಜಿಯನ್ನು ಈ ಬಗ್ಗೆ ಕಲೆಕ್ಟರ ದೊರೆಗಳವರಿಂದ ನೇಮಿಸಲ್ಪಟ್ಟ ಕಮಿಟಿಯವರು ನಿನ್ನೆ ಮುನ್ಸಿಪಲ್ ಆಫೀಸಿನಲ್ಲಿ ಸಭೆ ಕೂಡಿ ಪರ್ಯಾಲೋಚಿಸಿ ಅರ್ಜಿದಾರರ ವಿಜ್ಞಾಪನೆಗಳನ್ನು ಆದರಿಸಿರುವರೆಂಬುದಾಗಿ ತಿಳಿಯುತ್ತೇವೆ.

ಸ್ಯಾನಿಟರಿ ಇಂಜನಿಯರಾದ ಹಟನ್ ಸಾಹೇಬರವರು ನಿನ್ನೆ ಸಾಯಂಕಾಲ ಇಲ್ಲಿಗೆ ಬಂದಿರುವರು.

[illegible]

ನಿರ್ಣಯಿಸಿದ ಕಂಕನಾಡಿ ಖಾಸಗಿ ಶಾಲೆಯನ್ನು ಇಲ್ಲಿಯ ರೋಮನ್ ಕೆಥೋಲಿಕ ಮಿಶನರಿಗಳು ವಹಿಸಿಕೊಳ್ಳುವದರಲ್ಲಿದ್ದಾರೆಂಬುದಾಗಿ ತಿಳಿದು ಬಂದದ್ದರಿಂದ ಈ ಶಾಲೆಯನ್ನು ತಕ್ಕೊಳ್ಳುವದು ಅಗತ್ಯವಲ್ಲವೆಂತ ಕೌನ್ಸಿಲಿನಲ್ಲಿ ನಿರ್ಣಯವಾಗಿದೆ. ವೆನಲೋಕ ಆಸ್ಪತ್ರೆಗೆ ಬೇಕಾದ ವಸ್ತ್ರ ವ ಇತರ ಸರಬರಾಯಿ ಬೀಲುಗಳು, ೧೯೧೭-೧೮ನೇ ವರುಷದ ಬಗ್ಗೆ ಮಾರ್ಗದ ದುರಸ್ತಿಯ ರೂ. ೧೧,೦೦೦ದ ಅಂದಾಜು, ಮಾರ್ಕೇಟು ಇತ್ಯಾದಿಗಳ ಗುತ್ತೆಗಳ ಮಾರಾಟ ಇವೆಲ್ಲವುಗಳು ಕೌನ್ಸಿಲಿನ ಮಂಜೂರಾತಿಯನ್ನು ಹೊಂದಿವೆ. ಇಲ್ಲಿಯ ಮೈಕ್ರೇನ್ಸ್ ತೋಟದಲ್ಲಿ ಮಾರ್ಗಕ್ಕೆ ಬೇಕಾದ ಸ್ಥಳವನ್ನು ಪಡೆದು ಮಾರ್ಗವನ್ನು ಹಾಕಿಸುವರೆ ರೂ. ೭೬೨೨-೧೨-೧೦ ಗಳ ಅಂದಾಜು ಕೌನ್ಸಿಲಿನಲ್ಲಿ ಮಂಜೂರಾಗಿದೆ. ಕೌನ್ಸಿಲಿನ ಸಭೆಯು ಸಾಯಂಕಾಲ ೫ ಗಂಟೆಗೆ ಕೂಡಬೇಕೆಂದಿದ್ದು ಗಂಟೆ ೫-೧೫ಕ್ಕೆ "ಕೋರಂ" ಕೂಡಿ ಬಂದು ಸಭಾ ಸಮಯವು ಸಾಯಂಕಾಲದಿಂದ ರಾತ್ರೆವರೆಗೂ ವಿಸ್ತರಿಸುತ್ತದೆ. ಹೀಗೆ ಸಮಯ ವಿಸ್ತಾರವಾಗುತ್ತ ಬರುವದರಿಂದ ಸಭೆಗೆ ಬಂದ ಮೆಂಬರರಲ್ಲಿ ಹಲವರು ಬಹಳ ಬೇಸರವನ್ನು ವ್ಯಕ್ತಗೊಳಿಸುವರಲ್ಲದೆ ಇಂಥಾ ಸಮಯದಲ್ಲಿ ನಡಿಯುವ ಸಂಗತಿಗಳೇನೆಂಬುವದು ಸಭಾ ಮೆಂಬರರಿಗೆ ಸಹ ಬಹುವಕ್ಷ ಗೊತ್ತಾಗುವದಿಲ್ಲ. ಆದ್ದರಿಂದ ತಿಂಗಳ ಅಂತ್ಯದ ವರೆಗೆ ವಿಷಯಗಳನ್ನು ಕಟ್ಟಿ ಹಾಕಿ ಈ ರೀತಿ ಅವುಗಳ ಇತ್ಯರ್ಥವನ್ನು ಮಾಡುವುದಕ್ಕಿಂತ ವಿಷಯಗಳು ಹೆಚ್ಚಿದ್ದ ಸಂದರ್ಭದಲ್ಲಿ ಸ್ಪೆಶ್ಯಲ್ ಸಭೆಗಳನ್ನು ಕರೆಸುವುದು ಯುಕ್ತವಾಗಿದೆ.

ಮಂಗಳೂರಲ್ಲಿರುವ ಹೆಮ್ಮಕ್ಕಳ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಎಲಿಮೆಂಟರಿ ಲೋವರ್ ಮತ್ತು ಹಾಯರ್ ಗ್ರೇಡುಗಳಲ್ಲಿ ಉಪಾಧ್ಯಾಯಿನಿಯರ ವೃತ್ತಿ ಬಗ್ಗೆ ತರ್ಬೇತು ಹೊಂದಲು ಅಪೇಕ್ಷೆಯುಳ್ಳ ಉಮೇದ್ವಾರಿನಿಯರು ಕ್ರಮಪ್ರಕಾರವಾಗಿರುವ ತಮ್ಮ ಅರ್ಜಿಯನ್ನು ಸದರೀ ಶಾಲಾ ಮುಖ್ಯೋಪಾಧ್ಯಾಯಿನಿಯರಿಗೆ ಇದೇ ಬರುವ ಎಪ್ರಿಲ್ ತಿಂಗಳ ೧೦ನೇ ತಾರೀಕಿನೊಳಗಾಗಿ ತಲ್ಪುವಂತೆ ಕಳುಹಿಸತಕ್ಕದೆಂತಲೂ ಹೀಗೆ ಅರ್ಜಿ ಕಳುಹಿಸಿದ ಉಮೇದ್ವಾರಿನಿಯರು ಇದೇ ಎಪ್ರಿಲ್ ತಾರೀಕು ೧೧ನೇ ಬುಧವಾರ ಬೆಳಿಗ್ಗೆ ೯॥ ಗಂಟೆಗೆ ಸದರೀ ಶಾಲೆಯಲ್ಲಿ ಜರಗುವ ಪ್ರವೇಶ ಪರೀಕ್ಷೆಗೆ ತಪ್ಪದೆ ಹಾಜರಿರತಕ್ಕದೆಂತಲೂ ಕನ್ನಡ, ಗಣಿತ, ಮತ್ತು ಸಾಮಾನ್ಯ ತಿಳುವಳಿಕೆ ಎಂಬೀ ವಿಷಯಗಳಲ್ಲಿ ಪ್ರವೇಶ ಪರೀಕ್ಷೆ ಮಾಡೋಣಾಗುವುದೆಂತಲೂ ತಿಳಿಯುತ್ತೇವೆ.

ಪುತ್ತೂರು ವಿದ್ಯಾವರ್ಧಕ ಸಂಘದವರಿಂದ ಪುತ್ತೂರಲ್ಲಿ ಸ್ಥಾಪಿಸಲ್ಪಟ್ಟ ಸೆಕೆಂಡರೀ ಸ್ಕೂಲನ್ನು ರೆಕೊಗ್ನಾಯ್ಜ್ ಮಾಡಿ ಬಹುಮಾನ ಪಟ್ಟಿ ಡೈರೆಕ್ಟರ್ ಸಾಹೇಬರವರು ಹುಕುಂ ಕೊಟ್ಟಿರುತ್ತಾರೆ. ಈ ಸಂಗತಿಯು ಉಪ್ಪಿನಂಗಡಿ ತಾಲೂಕು ನಿವಾಸಿಗಳಿಗೆ ಬಹು ಆನಂದವನ್ನುಂಟು ಮಾಡುವುದು. ಸ್ಕೂಲ್ ಕಟ್ಟಡದ ಕೆಲಸವು ಜಾಗ್ರತೆಯಾಗಿ ನಡಿಯುತ್ತಿರುವುದು. ಗೋಡೆಗಳು ೮-೯ ಅಡಿ ಎತ್ತರಕ್ಕೆ ಎದ್ದಿವೆ. ಕಿಟಿಕಿ ಬಾಗಲುಗಳನ್ನು ಇಟ್ಟಿರುತ್ತಾರೆ. ಸ್ಕೂಲ್ ಮನೆಗೆ ಮಹಡಿಯನ್ನು ಹಾಕಬೇಕೆಂದು ಇತ್ಯರ್ಥವಾಗಿದೆ. ಸ್ಕೂಲ್ ಮನೆಯ ಪ್ರವೇಶವು ಜೂನ್ ತಿಂಗಳಲ್ಲಿ ಆಗಬಹುದು. ಜೂನ್ ತಾ. ೧ರಿಂದ III (ಮೂರನೆಯ) ಫಾರಂ ಇಡಲ್ಪಡುವುದು. ಕಳೆದ ವಾರ ಜಿಲ್ಲಾ ಡಿಸ್ಟ್ರಿಕ್ಟ್ ಜಡ್ಜರಾದ ರಾಜಪೂಜಿತ ರಾವ್ ಬಹದ್ದೂರ್ ಸಿ. ಕೃಷ್ಣಸ್ವಾಮಿ ರಾಯರು ಸ್ಕೂಲನ್ನು ಸಂದರ್ಶಿಸಿ "ಸ್ಕೂಲ್ ಕೆಲಸವು ಬಹು ಚೆನ್ನಾಗಿ ನಡಿಯುತ್ತಾ ಇದೆ. ಉಪಾಧ್ಯಾಯರೆಲ್ಲರೂ ಬಹು ಉತ್ಸಾಹದಿಂದ ಕೆಲಸ ಮಾಡುತ್ತಾರೆ" ಎಂದು ಮುಂತಾಗಿ ವಿಜಿಟರ್ಸ್ ಬುಕ್ಕಿನಲ್ಲಿ ಬರೆದಿರುತ್ತಾರಾಗಿ ಕೇಳುತ್ತೇವೆ. ಈ ಸ್ಕೂಲು ತಾಲೂಕಿನ ಮಹಾಜನಗಳ ವಂತಿಗೆಯಿಂದಲೇ ಪೋಷಿಸಲ್ಪಡುತ್ತಿದೆ. ಇದಕ್ಕೋಸ್ಕರ ಈ ವರೆಗೆ ವಂತಿಗೆ ಕೊಡದೆ ಇರುವ ಮಹನೀಯರು ಇನ್ನು ಮುಂದಾದರೂ ಈ ಸ್ಕೂಲಿಗೆ ಉದಾರಾಶ್ರಯವನ್ನು ಕೊಟ್ಟು ಕೀರ್ತಿಯನ್ನೂ ಪುಣ್ಯವನ್ನೂ ಪಡಕೊಳ್ಳುವುದಕ್ಕೆ ವಿಲಂಬ ಮಾಡಲಾರರು ಎಂದು ಅಪೇಕ್ಷಿಸೋಣಾಗುತ್ತದೆ.

ಸ್ವರ್ಗಸ್ಥ ಮಂಜೇಶ್ವರ ಸಾವುಕಾರ ಲಕ್ಷ್ಮಣ ಭಕ್ತರವರ ಸ್ಮರಣಾರ್ಥವಾಗಿ ಇವರ ಮಕ್ಕಳು ಸಾವುಕಾರ ವೈಕುಂಠ ಭಕ್ತರವರು ಇತ್ತಲಾಗೆ ಒಂದು ವಾಚನ ಮಂದಿರವನ್ನೂ ಪುಸ್ತಕ ಭಂಡಾರವನ್ನೂ ಸ್ಥಾಪಿಸಿದ ವೃತ್ತಾಂತವು ನಮ್ಮ ಕೈಸೇರಿರುವದು. ಇವೆರಡೂ ಸ್ಥಾಪನೆಗಳಿಗೆ ಮುಹೂರ್ತವು ಜಿಲ್ಲಾ ಕಲೆಕ್ಟರ ದೊರೆಗಳವರಿಂದ ಇದೇ ತಿಂಗಳ ತಾ. ೨೭ರಲ್ಲಿ ಮಾಡೋಣಾಯಿತು. ಗ್ರಂಥಾಲಯದಲ್ಲಿ ಹೆಚ್ಚು ಕಡಿಮೆ ೨೦೦೦ ಪುಸ್ತಕಗಳಿರುವವು. ಸರ್ವರಿಗೂ ಬಂದು ಓದಲು ಅನುಕೂಲವಾಗುವಂತೆ ಯೋಗ್ಯವಾದ ಇವರ ಸ್ವಂತದ ಕಟ್ಟೋಣದಲ್ಲಿ ಈ ಸಂಸ್ಥೆಯನ್ನು ಇರಗೊಳಿಸಿರುತ್ತಾರೆ. ಇಂಥಾ ಗ್ರಂಥಾಲಯದ ಸ್ಥಾಪನೆಯ ಮೂಲಕ ಮಂಜೇಶ್ವರದಲ್ಲಿ ವಿದ್ಯಾ ಪ್ರಸರಣೆಯನ್ನು ಪ್ರೋತ್ಸಾಹಗೊಳಿಸಿದಕ್ಕೆ ಭಕ್ತರವರ ಉಪಕಾರವನ್ನು ಸ್ಮರಿಸಿರುವರು.

ಗವರ್ನಮೆಂಟ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಸಭೆಯ ವಾರ್ಷಿಕೋತ್ಸವವು ಕೆನರಾ ಹೈಸ್ಕೂಲಿನ ಹೆಡ್ ಮಾಸ್ತರರಾದ ಮ| ರಾ| ರಾ| ಅ| ಪದ್ಮನಾಭಯ್ಯನವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ತಾ. ೨೪ನೇ ಶನಿವಾರ ಸಾಯಂಕಾಲ ಜರಗಿಸಲ್ಪಟ್ಟಿತು.

ಈ ಜಿಲ್ಲೆಯವರಾದ ಲೆಫ್ಟಿನೆಂಟ ವಾಮನ ರಾವ್ [illegible] ವರ ಸಹೋದರಿ [illegible] ಎಂಬವರು [illegible] ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟಿರುವರು.

ಕಳೆದವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ [illegible] ಮರಣಗಳಾಗಿರುವವು. [illegible]

ಕಳೆದ ಜನವರಿ ತಿಂಗಳಲ್ಲಿ ಬ್ರಿಟಿಶ ಹಿಂದೂಸ್ಥಾನದಲ್ಲಿ ರೂ. [illegible] ಮೂಲಧನದಿಂದ [illegible] ಜಾಯಿಂಟ್ ಸ್ಟಾಕ್ ಕಂಪೆನಿಗಳು ಸ್ಥಾಪಿತವಾಗಿವೆ. ಈ ಪೈಕಿ [illegible] ಸಾಲಕೊಡುವ ಮತ್ತು ಬ್ಯಾಂಕಿಂಗ್ ಕಂಪೆನಿಗಳು, ಒಂದು ಪ್ರಿಂಟಿಂಗ್ ಮತ್ತು ಪಬ್ಲಿಶಿಂಗ್ ಕಂಪೆನಿ, ನಾಲ್ಕು ವ್ಯಾಪಾರ ಮಾಡುವ ಕಂಪೆನಿಗಳು, ಎರಡು ಹತ್ತಿ ಕಾರ್ಖಾನೆಗಳು, ಎರಡು ಸಕ್ಕರೆ ಕಾರ್ಖಾನೆಗಳು, ಒಂದು ಹಿಟ್ಟು ಮಾಡುವ ಕಂಪೆನಿ, ಒಂದು ಮರಗಳನ್ನು ಕಿಗಿಯುವ ಯಂತ್ರಸಾಮಗ್ರಿಗಳ ಕಂಪೆನಿ, [illegible] ಟೀ ತೋಟಗಳ ಕಂಪೆನಿಗಳು. ಈ ಕಂಪೆನಿಗಳಲ್ಲಿ [illegible] ಬಂಗಾಳದಲ್ಲಿಯೂ [illegible] ಮುಂಬಾಯಿಯಲ್ಲಿಯೂ [illegible] ಮದ್ರಾಸಿನಲ್ಲಿಯೂ ರಿಜಿಸ್ಟ್ರಿಯಾಗಿವೆ.

[illegible] ಮೆಡ್ಯೂಸಾ ಎಂಬ ನಕ್ಷತ್ರವು ಎಪ್ರೀಲ್ ತಾ. [illegible]ರಿಂದ ಸೂರ್ಯನನ್ನು ಸುತ್ತಲಾರಂಭಿಸಿ [illegible] ತಿಂಗಳೊಳಗೆ ಭೂಪತನವಾಗಿ ಪ್ರಳಯವಾಗುವದೆಂಬ ಪ್ರಚಾರದ ನಿಜಾಂಶವನ್ನು ತಿಳಿಯುವ ಬಗೆಗೆ ಜೋತಿಶ್ಯಾಸ್ತ್ರ ಪಂಡಿತರಾದ ಕೊಲ್ಯೂಂಬಿಯ ಜೋನ್ಸ್ ಎಂಬವರನ್ನು ಕೇಳಿರುವಲ್ಲಿ ಅವರು "ಈ ಸಮಾಚಾರವು ಖಗೋಳಶಾಸ್ತ್ರ ಸಂಬಂಧವಾದ ಮುಖ್ಯ ಪತ್ರಿಕೆಗಳಾವುವುದರಲ್ಲಿಯೂ ಪ್ರಕಟವಾಗಿಲ್ಲ. ಮೆಡ್ಯೂಸಾ ಎಂಬ ಹೆಸರು ಸಣ್ಣ ನಕ್ಷತ್ರಗಳ ಹೆಸರಲ್ಲಿಯೂ ಕಂಡು ಬರುವದಿಲ್ಲ; ಕೊಲಂಬಿಯ ವಿಶ್ವವಿದ್ಯಾಲಯದ ಪಂಡಿತರೊಳಗೆ ಕಾರ್ ಎಂಬವರಾಗಲೀ ಸ್ವಿಯಾರ್ ಎಂಬ ಹೆಸರಿನವರಾಗಲೀ ಇಲ್ಲ. ಅದಲ್ಲದೆ ಈ ಹೆಸರಿನವರು ಮತ್ತೆಲ್ಲಿಯೂ ಇರುವಂತೆ ತೋರುವದಿಲ್ಲ" ಎಂದು ತಿಳಿಸಿರುತ್ತಾರೆ. ಆದಕಾರಣ ಈ ಸುಳ್ಳು ಸಮಾಚಾರದಿಂದ ಜನರು ಭೀತರಾಗಿರಬೇಕಾದುದಿಲ್ಲ ಎಂತ ಮದ್ರಾಸಿನ ಹ್ಯಾನ್ಸ್ ಪತ್ರಿಕೆಯು ಹೇಳುತ್ತದೆ.

೧೯೩೫ನೇ ಇಸವಿಯಲ್ಲಿ ೪ ಸೂರ್ಯಗ್ರಹಣಗಳೂ, ೩ ಚಂದ್ರಗ್ರಹಣಗಳೂ ಒಟ್ಟಿಗೆ ೭ ಗ್ರಹಣಗಳಾಗುವವು. ಒಂದೇ ವರ್ಷದಲ್ಲಿ [illegible] ಗ್ರಹಣಗಳು ಬರುವದು ಸಾಮಾನ್ಯ ಮತ್ತು ೭ ಗ್ರಹಣಗಳು ಬರುವುದು ಅತಿಶಯವೇನೂ ಅಲ್ಲ. ಹಿಂದೆ ೧೯೧೭ನೇ ಇಸವಿಯಲ್ಲಿ ೭ ಗ್ರಹಣಗಳು ಬಂದಿದ್ದವು. ಇನ್ನು ಮುಂದೆ ೧೫೦ ವರ್ಷಗಳ ಮಧ್ಯಕಾಲ ೨ ವೇಳೆ ಇಷ್ಟು ಹೆಚ್ಚು ಗ್ರಹಣಗಳು ಬರುವವು. ಇವುಗಳಲ್ಲಿ ೧ ಮಾತ್ರ ಭರತಖಂಡದಲ್ಲಿ ಕಾಣಿಸಿಕೊಳ್ಳುವದು ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬಂಗಾಳದ ಎಡ್ವೊಕೇಟು ಜನರಲರಾಗಿದ್ದ ಸರ್ ಸತ್ಯೇಂದ್ರಪ್ರಸನ್ನ ಸಿಂಹರವರ ಬದಲಿಗೆ ಮಿ। ಟಿ. ಸಿ. ಗಿಬ್ಸನ್ ಕೆ. ಸಿಯವರು ಬಂಗಾಳದ ಎಡ್ವೊಕೇಟು ಜನರಲರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮುಂಬಾಯಿಯ ಮಿ। ಜಿ. ಬಿ. ವೈದ್ಯರೆಂಬವರು ಹಿಂದೂ ಮಿಶನರಿ ಸೊಸೈಟಿಯೊಂದನ್ನು ಏರ್ಪಡಿಸುವವರಾಗಿದ್ದಾರೆ. ಅನ್ಯಮತಾವಲಂಬಿ [illegible] ಹಿಂದೂಗಳನ್ನು ಪ್ರಾಯಶ್ಚಿತ್ತ ಮೂಲಕ ಹಿಂದೂಮತಕ್ಕೆ ಸೇರಿಸಬೇಕೆಂಬುದೇ ಈ ಸೊಸೈಟಿಯ ಉದ್ದೇಶವಾಗಿದೆ.

ಬಂಗಾಳದ ಗವರ್ನರಾಗಿ ನೇಮಿಸಲ್ಪಟ್ಟ ರೊನಾಲ್ಡ್‌ಸೆ ಪ್ರಭುಗಳವರು ಸಪರಿವಾರ ಸಹಿತ ತಾ. [illegible]ರಲ್ಲು ಹೌರಸ್ಟೇಶನಿಗೆ ಬಂದು ತಲುಪಿದರು. ನಂತರ ಬಂಗಾಳದ ಗವರ್ನರರಾಗಿದ್ದ ಕಾರ್ಮೈಕೇಲ್ ಪ್ರಭುಗಳು ಹೊಸ ಗವರ್ನರರಿಗೆ ಚಾರ್ಜ ಕೊಟ್ಟು ಕಲ್ಕತ್ತೆಯಿಂದ ತೆರಳಿ ಹೋದರು.

ಗೆಯ್ಮೆಕರಾರು ಕೂಲಿಪದ್ಧತಿಯ ಸಂಬಂಧವಾಗಿ [illegible] ತಾ. [illegible]ರಲ್ಲು ಹಿಂದೀ ವಿದುಷಿ ಪ್ರತಿನಿಧಿಗಳು ವೈಸರಾಯಿ ಪ್ರಭುಗಳಿಗೆ ಭೇಟಿಕೊಟ್ಟು ಒಂದು ವಿಜ್ಞಾಪನಾ ಪತ್ರವನ್ನು ಒಪ್ಪಿಸಿದರು. ಪ್ರಭುಗಳವರು [illegible] ಉತ್ತರದಲ್ಲಿ ಈ ಯುದ್ಧಕಾಲ ಗೆಯ್ಮೆಕರಾರು ಪದ್ಧತಿಯು ಈಗ ತಾನೇ ನಿಲ್ಲಿಸಲ್ಪಟ್ಟಿರುವದೆಂದು ಹೇಳಿರುವರು. ಆದರೆ ಒಮ್ಮೆ ನಿಲ್ಲಿಸಿದ ಇಂಥಾ ಪದ್ಧತಿಯು ತಿರಿಗಿ ಪುನರ್ಜೀವವಾದೀತೆಂತ ಭಾವಿಸಲಾಗದು, ಹೆಚ್ಚಿನ ಸಂಪಾದನೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಇನ್ನು ಮುಂದಕ್ಕೆ ಹಿಂದೀ ಕೆಲಸಗಾರರು ವಸಾಹತಿಗಳಿಗೆ ಹೋಗ ವಸತಿ ಮಾಡಲೂ ಬಹುದು. ಅಂಥಾ ಸಂದರ್ಭ ಬಿದ್ದರೆ ಕೆಲಸಗಾರರಿಗೆ ವಸಾಹತುಗಳಲ್ಲಿ ಈಗಲಿರುವ ಸ್ಥಿತಿಯು ಬಾರದಂತೆ ಏರ್ಪಾಡು ಮಾಡಲ್ಪಡುವದು ಮತ್ತು ಮುಖ್ಯವಾಗಿ ಹೆಂಗಸರ ಮರ್ಯಾದೆಯನ್ನು ಕಾಪಾಡುವರೆ ಹೆಚ್ಚಿನ ಜಾಗರೂಕತೆಯು ತೆಗೆದುಕೊಳ್ಳೋಣಾಗುವದು. ಹಿಂದೂಸ್ಥಾನದಲ್ಲಿ ಇನ್ನು ಕೈಗಾರಿಕೆಯ ಅಭಿವೃದ್ಧಿಯಾಗುವ ಸಂಭವಗಳಿರುವದರಿಂದ ಮಾತೃಭೂಮಿಯಲ್ಲಿಯೇ ಹಿಂದೀಗಳಿಗೆ ಕೆಲಸ ಸಿಕ್ಕುವಂತಾಗಿ ಈ ಗೆಯ್ಮೆಕರಾರು ಪದ್ಧತಿಯು ತನ್ನಷ್ಟಕ್ಕೆ ನಿಂತು ಹೋಗುವದೆಂಬಿತ್ಯಾದಿ ಮಾತುಗಳಿಂದ ಹೆಂಗಸರ ವಿಜ್ಞಾಪನಾ ಪತ್ರಿಕೆಗೆ ಉತ್ತರ ಕೊಟ್ಟಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಮದ್ರಾಸ್ ಸರಕಾರದವರು ಮದ್ರಾಸಿನ ಮಿ। ಕೃಷ್ಣಸ್ವಾಮಿ ಶರ್ಮರವರಿಗೆ ಇದೇ ತಾ. [illegible]ರಲ್ಲು ನೋಟೀಸು ಕೊಟ್ಟು ಮದ್ರಾಸ್ ಪೋಲಿಸ್ ಕಮಿಶನರ ಬರಹಮೂಲಕವಾದ ಅಪ್ಪಣೆ ವಿನಾ ಯಾವ ಲೇಖನವನ್ನೂ ಪ್ರಕಟಿಸಕೂಡದು ವ ಯಾವ ಭಾಷಣವನ್ನಾದರೂ ಮಾಡಕೂಡದು ಎಂಬ ಹುಕುಂ ಮಾಡಿರುತ್ತಾರೆ.

ಶಾಲೆಗಳಿಗೆ ಹೋಗುವ ಮಕ್ಕಳ ಆರೋಗ್ಯ ಸ್ಥಿತಿಯನ್ನು ವೈದ್ಯರು ಶಾಲೆಗಳಿಗೆ ಆಗಾಗ್ಗೆ ಹೋಗಿ ವಿಚಾರಿಸುವ ಪದ್ಧತಿಯು ಪಶ್ಚಿಮಾತ್ಯ ದೇಶಗಳಲ್ಲಿ ಇದ್ದರೂ ನಮ್ಮ ಹಿಂದೂಸ್ಥಾನದಲ್ಲಿ ಇಲ್ಲವೆಂದೇ ಹೇಳಬೇಕಾಗಿದೆ. ಆದರೆ ಈಚೆಗೆ ಥಿಯೊಸಫಿಕಲ್ ಎಜ್ಯುಕೇಶನಲ್ ಟ್ರಸ್ಟಿನವರು ಒಲ್ಲಟ್ಟಿನಲ್ಲಿರುವ ಪಂಚಮರ ಬಗ್ಗೆ ಸ್ಥಾಪಿಸಲ್ಪಟ್ಟಿರುವ ಉಚಿತ ವಿದ್ಯಾದಾನ ಮಾಡುವ ಶಾಲೆಯ ಮಕ್ಕಳ ಆರೋಗ್ಯ ಸ್ಥಿತಿಯನ್ನು ಡಾಕ್ಟರ್ ಜಿ. ಶ್ರೀನಿವಾಸ ಮೂರ್ತಿಯವರ ಮೂಲಕ ಪರೀಕ್ಷಿಸಿರುವರು. ಈ ಡಾಕ್ಟರರು ಪರೀಕ್ಷಿಸಿದ [illegible] ವಿದ್ಯಾರ್ಥಿಗಳಲ್ಲಿ ಸೇಕಡಾ [illegible] ಮಂದಿಯ ಜೀರ್ಣಶಕ್ತಿಯು ಅಬಲವಾಗಿರುವದು. ಸೇಕಡಾ [illegible] ಮಂದಿ ಮೂಗು ಮತ್ತು ಗಂಟಲು ವ್ಯಾಧಿತರು. ಸೇಕಡಾ [illegible] ಮಂದಿ ಚರ್ಮರೋಗಿಗಳು. ಸೇಕಡಾ [illegible] ಹಲ್ಲು ಸರಿಯಿಲ್ಲದವರು. ಸೇಕಡಾ [illegible] ಪ್ಲೀಹೆಗೆ ಉಬ್ಬು ಇದ್ದವರು. ಸೇಕಡಾ [illegible] ದೃಷ್ಟಿ ಸಮಯಿಲ್ಲದವರು ಎಂಬದಾಗಿ ತಿಳಿದು ಬಂದದೆ.

ಖಾತಮಿಗಳು.

ಸಹಕಾರಕ ಚಟುವಟಿಕೆಗಳು.

ಬೆಳ್ಳಾರೆಯ ಸಂಘ ಸದನದ ಶಂಕುಸ್ಥಾಪನೆ.

ಮಂಗಳೂರು ಡಿಸ್ಟ್ರಿಕ್ಟ ಜಡ್ಜರವರ ಉತ್ಸುಕತೆ.

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ, ಬೆಳ್ಳಾರೆಯ ಸಹಕಾರ ಸಂಘಗೋಸ್ಕರ ಕಟ್ಟಿಸಬೇಕೆಂದು ನಿಶ್ಚಯಿಸಿದ ಕಟ್ಟೋಣದ ಶಂಕುಸ್ಥಾಪನೆಯ ಸಮಾರಂಭವು ವಿದ್ಯಂಭದಿಯಿಂದ [illegible] ಯುಗಾದಿಯ ದಿನದ ಸುಮುಹೂರ್ತದಲ್ಲಿ ಜರುಗಿತು. ಶಂಕುಸ್ಥಾಪನೆಯ ಕಾರ್ಯವನ್ನು ನಿರ್ವಹಿಸುವದಕ್ಕೆ ವಹಿಸಿಕೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ ಮತ್ತು ಸೆಶನ್ಸ್ ಜಡ್ಜರಾಗಿರುವ ರಾವ್ ಬಹದ್ದೂರ ಕೃಷ್ಣಸ್ವಾಮಿ ರಾಯರವರು ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ [illegible] ಸಂದರ್ಶನಕ್ಕೆ ಪುತ್ತೂರಿಗೆ ಬಂದವರು ಅಲ್ಲಿಂದ ಯುಗಾದಿಯ ದಿನದ [illegible] ಸಾಯಂಕಾಲಕ್ಕೆ ಬೆಳ್ಳಾರೆಗೆ ತಲುಪುವ ಹಾಗೆ ದಯಮಾಡಿದರು. ಅವರು [illegible] ಸೇರಿದ್ದ ಬೆಳ್ಳಾರೆಯ ವ ಸೆಗ್ರಾಮಗಳ ಪ್ರಮುಖ [illegible] ಬಳಿಗೆ ಕೂಡಿ ಬಂದ ಮಹನೀಯರನ್ನು ಆದರ ಪೂರ್ವಕವಾಗಿ ಯೋಗ್ಯರೀತಿಯಿಂದ ಅಲಂಕರಿಸಲ್ಪಟ್ಟಿದ್ದ ಲೋಕಲ್‌ಫಂಡ್ ಬಂಗ್ಲೆಗೆ ಕರೆದುಕೊಂಡು ಹೋದರು.

ಶಂಕುಸ್ಥಾಪನೆಯ ಸಮಾರಂಭವು ಮರುದಿನ ಪ್ರಾತಃಕಾಲಕ್ಕೆ ಜರಗಿತು. ಪ್ರಾರಂಭದಲ್ಲಿ ಪುತ್ತೂರು ಸೆಂಟ್ರಲ್ ಬೇಂಕಿನ ಕಡೆಯಿಂದ ಬೆಳ್ಳಾರೆಯ ಸಹಕಾರ ಸಂಘದ ಸಂಕ್ಷಿಪ್ತವಾದ ಚರಿತ್ರೆಯೊಂದು ಓದಲ್ಪಟ್ಟು, ಸದರಿ ಸಂಘಕ್ಕೋಸ್ಕರ ಒಂದು ಕಟ್ಟಡವನ್ನು ಕಟ್ಟಿಸುವ ಆಲೋಚನೆಯು ಉಂಟಾದುದರ ಕುರಿತು ಕೆಲವು ಮಾತುಗಳು ಹೇಳಲ್ಪಟ್ಟವು. ಬೆಳ್ಳಾರೆಯ ಗ್ರಾಮದಲ್ಲಿನ ಪ್ರಮುಖ ವರ್ಗದಾರರೊಳಗೊಬ್ಬರಾದ ಪುತ್ತೂರು ವಕೀಲ ನೆಟ್ಟಾರ ನರಸಿಂಗ ರಾಯರು ಕಟ್ಟಡವನ್ನು ಕಟ್ಟಿಸುವುದಕ್ಕೆ ಗ್ರಾಮದ ಮಧ್ಯ ಸ್ಥಳದಲ್ಲಿ ಒಂದು ಯಥಾಯೋಗ್ಯವಾದ ಅಡಿಸ್ಥಳವನ್ನು ಕೊಟ್ಟಿದ್ದಾರೆ; ವಕೀಲ ಮಹಶಯರುಗಳು ಮತ್ತು ವರ್ಗದಾರ ಸಾಂತರಾಜ ಶೆಟ್ರವರು [illegible]--[illegible] ಹಂಚುಗಳನ್ನು ಧರ್ಮಕೊಡುತ್ತೇವಾಗಿ ವಾಗ್ದಾನ ಮಾಡಿದ್ದಾರೆ. ಇನ್ನೂ ಅನೇಕ ಮೆಂಬರರು ಕಾಯ ಕಷ್ಟದಿಂದಾಗಲಿ ನಗದು ಹಣದ ಮುಖಾಂತರವಾಗಲಿ ತಂತಮ್ಮ ಯಥಾಶಕ್ತಿ ಮರತಿಗೆ ಯಾ ಇತರ ಸಹಾಯವನ್ನು ಮಾಡುತ್ತೇವಾಗಿ ಒಪ್ಪಿದ್ದಾರೆ.

ವರದಿಯನ್ನು ಓದಿ ಮುಗಿಸಿದ ಕೂಡಲೇ, ಜಡ್ಜ ಮಹಾಶಯರು ಸಹಕಾರದ ಮಹತ್ವದ ಕುರಿತು ಮತ್ತು ಸಹಕಾರಕ ಪದ್ಧತಿಯನ್ನು ಅನುಸರಿಸುವವರು ಮಾಡಬೇಕಾದ ಕರ್ತವ್ಯಗಳ ಕುರಿತು ಕೆಲವು ಯಥೋಚಿತವಾದ ಮಾತುಗಳನ್ನಾಡಿದರು. ಸಹಕಾರವು ವಿಧಿಯುಕ್ತವಾಗಿ ಆಚರಿಸಲ್ಪಟ್ಟರೆ, ಅದರ ಬೆಳವಣಿಗೆಯಿಂದ ಜನರೊಳಗಣ ವೈರವೈಮನಸ್ಯಗಳೆಲ್ಲವೂ ನಾಶವಾಗಿ, ಅನಂತರ ಮತ ಜಾತಿ ಭೇದಗಳನ್ನು ಲಕ್ಷಿಸದೆ ಎಲ್ಲವರೂ ದೇಶೋನ್ನತಿಯಲ್ಲಿ ಏಕಮನಸ್ಕರಾಗಿ ಪ್ರಯತ್ನಿಸುವ ಸಂದರ್ಭವು ಬಂದೊದಗುವುದರಲ್ಲಿ ಸಂದೇಹವಿಲ್ಲಾದ ಮೇಲೆ, ಸಹಕಾರದಲ್ಲಿ ಸ್ವರಾಜ್ಯದ ಜೀವವು ಕೂಡಾ ಅಡಕವಾಗಿರುತ್ತದೆಂದು ಹೇಳಬಹುದೆಂಬದೇ ಅವರ ಮಾತುಗಳ ಸಾರಾಂಶವಾಗಿತ್ತು. ಅನಂತರ ಶಂಕುಸ್ಥಾಪನೆಯ ವಿಧಿಗಳೆಲ್ಲವೂ ಸಾಂಗೋಪಾಂಗವಾಗಿ ತೀರಿದ ಮೇಲೆ, ನೆರೆದ ಜನರೆಲ್ಲರ ನಕ್ಷೆಯೊಂದನ್ನು ತೆಗಿಸಿ ಆದ ಬಳಿಕ, ಮಹಾನುಭಾವರು ಸುಬ್ರಹ್ಮಣ್ಯದ ಹೆಸರುಗೊಂಡ ದೇವಾಲಯವನ್ನು ನೋಡುವುದಕ್ಕೆ ಆ ಮಾರ್ಗವಾಗಿ ಪಂಜಕ್ಕೆ ತೆರಳಿದರು. [illegible] ಬರೋಣ, ಇರೋಣ, ಹೋಗೋಣ, ಮುಂತಾದವುಗಳಿಗೆಲ್ಲಾ ವಕೀಲ ನೆಟ್ಟಾರ ನರಸಿಂಗರಾಯರು ಮಾಡಿದ ಏರ್ಪಾಡುಗಳೆಲ್ಲವೂ ಬಹಳ ಚಲೋದಾಗಿದ್ದವು.

ಕುಂಬಳೆ: — ಇದೇ ಎಪ್ರಿಲ್ ತಿಂಗಳ [illegible]ರಿಂದ ಆಗುವ ರೈಲ್ವೆ ಗಾಡಿಗಳ ಸಮಯ ಬದಲಾವಣೆಯಿಂದ ಮಂಗಳೂರಿಂದ ಮೈಲ್ ಗಾಡಿಯು ಬೆಳಗ್ಗೆ [illegible], ಮಿಕ್ಸೆಡ್ ಘಂಟೆ [illegible], ವ ಪಾಸೆಂಜರ್ ಸಾಯಂಕಾಲ ಘಂಟೆ [illegible] ಆಗುವದು. ಮಂಗಳೂರಿಗೆ ಕಲ್ಪಿಸ ಸಮಯ ಮೈಲ್ ಸಾಯಂಕಾಲ ಘಂಟೆ [illegible], ಮಿಕ್ಸೆಡ್ ಘಂಟೆ [illegible], ಪಾಸೆಂಜರ್ ಬೆಳಗ್ಗೆ ಘಂಟೆ [illegible]. ಈ ಸಂಬಂಧ ಬೆಳಗ್ಗೆ ಮೈಲ್-ಪಾಸೆಂಜರ್ ಗಾಡಿಗಳು ಕಾಂಞಂಗಾಡಿನಲ್ಲಿ, ಮಿಕ್ಸೆಡ್-ಪಾಸೆಂಜರ್ ಬೆಳಗ್ಗೆ ಮಂಜೇಶ್ವರದಲ್ಲಿ ಮೈಲ್-ಪಾಸೆಂಜರ ಗಾಡಿಗಳು ಸಾಯಂಕಾಲ ಇಲ್ಲಿಯೂ ಬಿಟ್ಟುಹೋಗುವವು. ಮಿಕ್ಸೆಡ್-ಪಾಸೆಂಜರ್ ಗಾಡಿಗಳ ಘಂಟೆ [illegible] ಮೈಲುಗಳ ಓಟವನ್ನು [illegible] ಮೈಲುಗಳಿಗೆ ಹೆಚ್ಚಿಸಿದರು. ಈ ಎಲ್ಲಾ ಕಾರಣಗಳಿಂದ ಪ್ರಯಾಣಕ್ಕೆ ಮೊದಲಿನಂತೆಯೇ ಅನುಕೂಲವಾಗಿರುತ್ತದೆ.

ಇದೇ ತಾ. [illegible]ರಲ್ಲು ಸಾಯಂಕಾಲ ೪ ಘಂಟೆ ಸಮಯ ಆಕಸ್ಮಿಕ ಮೋಡ ಕವಿದು ಬಿರುಗಾಳಿ ಮಳೆಯುಂಟಾಗಿ ಅಲ್ಲಲ್ಲಿ ಮರಗಳು ಉರುಳಿ ಕೆಲವು ಮನೆ ಮಾಡುಗಳಿಗೂ ಒಡೆದು ಮನೆಗಳಿಗೂ ಹಾನಿ ಆಗಿರುತ್ತದೆ. ದೈವಾನುಗ್ರಹದಿಂದ ಪ್ರಾಣಾಪಾಯವೇನೂ ಆಗಲಿಲ್ಲ.

ಪುತ್ತೂರು:—ಡಿಸ್ಟ್ರಿಕ್ಟ ವ ಸೆಶನ್ಸ್ ಜಡ್ಜರಾದ ಮಿ। ರಾ। ಸಿ. ಕೃಷ್ಣಸ್ವಾಮಿರಾಯರವರು ಇದೇ ತಾ. [illegible]ರಲ್ಲು ಇಲ್ಲಿಗೆ ತಲುಪಿ, ತಾ. [illegible]ರಲ್ಲು ಮತ್ತು [illegible]ನೇ ಮಧ್ಯಾಹ್ನದ ವರೆಗೆ ಇಲ್ಲಿಯ ಡಿಸ್ಟ್ರಿಕ್ಟ ಮುನ್ಸಿಫಕೋರ್ಟ ಇನ್ಸಪೆಕ್ಷನ್ ಮಾಡಿ ಅಲ್ಲಿಂದ ಬೆಳ್ಳಾರೆಗಾಗಿ ಸುಬ್ರಮಣ್ಯ ದೇವಸ್ಥಾನಕ್ಕೆ ಹೋಗಿ ತಾ. [illegible]ರಲ್ಲು ಪುನಃ ಇಲ್ಲಿಗೆ ತಲುಪಿರುವರು. ಮುಂಚೆ ಇಲ್ಲಿ ಡಿಸ್ಟ್ರಿಕ್ಟ ಮುನ್ಸಿಫರಾಗಿದ್ದ ಸಬ್ ಜಡ್ಜ ಮಿ। ರಾ। ಟಿ. ಜೀವಾಜಿ [illegible] ತಾ. [illegible]ರಲ್ಲು ಇಲ್ಲಿಗೆ ಬಂದು ಇಲ್ಲಿಯ ಡಿಸ್ಟ್ರಿಕ್ಟ ಮುನ್ಸಿಫರಾದ ಮಿ। ರಾ। ಸಿ. ಆರ್ ಕೃಷ್ಣರಾಯರಲ್ಲಿ ಅತಿಥಿಗಳಾಗಿದ್ದರು.

ಡಿಸ್ಟ್ರಿಕ್ಟ ಜಡ್ಜರವರಿಗೆ ಇದೇ ತಾ. [illegible]ರಲ್ಲು ಇಲ್ಲಿಯ ಯೂನಿಯನ್ ಕ್ಲಬ್ಬಿನ ಹೋಲಿನಲ್ಲಿ ವಕೀಲರ ಸಮೂಹದ [illegible] ಕೊಡೋಣಾಯಿತು. ಜಡ್ಜರವರು ನಾಳೆ [illegible] ಘಂಟೆಗೆ ಹಿಂದೂ ಟ್ರಾನ್ಸಿಟ್ ಕಂಪೆನಿಯ ಮೋಟರ ಬಸಿನಲ್ಲಿ ಮಂಗಳೂರಿಗೆ ವಾಪಸ್ ಹೋಗುವವರು.

ಮುಂಬಯಿ: ಭಾರತ ಮಂಡಳಿಯವರಿಂದ:—ಭಾರತ ಮಂಡಳಿಯವರ ಈ ಸಲ ಸಂವತ್ಸರದಲ್ಲಿ ಪ್ರವಾಸ್ಯದ [illegible] ಶ್ರೀಮದ್ಭಾಗವತ ಮಹಾಪುರಾಣದ ಸಪ್ತಾಹ ಮಂಡಳಿಯಿಂದ ಆಚರಣೆಯು ಇದೇ ಮಾಘ ಬ। [illegible]ಯು (ತಾ. [illegible] — ೨ — ೧೯೧೭) ವಿಧಿಪೂರ್ವಕ ಆಚರಿಸಲ್ಪಟ್ಟು ಮಾರಣೆ ರವಿವಾರ ಮಂಗಳದ ಸಹಸ್ರಭೋಜನಾನಂತರ ದೇವರ ಸನ್ನಿಧಿಯಲ್ಲಿ [illegible] ಯುಕ್ತ ವಿಜೃಂಭಣೆಯಿಂದ [illegible] ಸಂಪೂರ್ಣಗೊಳಿಸಿದರು. ಇವರ ಮಂಗಳದ ಸಹಸ್ರಭೋಜನವು ಪ್ರತಿ ವರ್ಷ ಮಂಗಳೋತ್ಸಹ ದಿವಸ ನಡೆಯುತ್ತಿರುತ್ತಾ ಅದಕ್ಕೆ ಬೇಕಾದ ಪಾತ್ರೆಗಳ ಸಂಬಂಧದ ಅಡಚಣೆಯನ್ನು ಹೋಗಲಾಡಿಸುವದಕ್ಕಾಗಿ ಸ್ವರ್ಗಸ್ಥ [illegible] ಪುಣ್ಯ [illegible] ಶೇಖರಿಸಲ್ಪಟ್ಟ ಹಣದಿಂದ ಉಡುಪಿಯಲ್ಲಿ ತಯಾರಾದ ಸುಮಾರು ರೂ. [illegible] ಕ್ರಯದ ಒಂದು ಕೊಪ್ಪರಿಗೆ ಮತ್ತು ಕೌಳಿಗೆಯನ್ನು ತರಿಸಿಕೊಂಡಿರುತ್ತಾರೆ. ಈ ಮಂಗಳೋತ್ಸಹದ ಸಂಭಕಾರ್ಯಕ್ಕಾಗಿ ಅಂದು ಒಟ್ಟಾದ ಧನಸಹಾಯವು ರೂಪಾಯಿ [illegible] ಆಗಿರುತ್ತದೆ. ಮತ್ತು ಹೊಸಬೆಟ್ಟು ಊರು ಹತ್ತು ಸಮಸ್ತರ ಸಾಧಾರಣ ರೂ. [illegible] ಕ್ರಯದ ಎರಡು ಸಣ್ಣ ಕೌಳಿಗೆಯನ್ನು ದಾನಮಾಡಿದ್ದು ಶ್ಲಾಘ್ಯನೀಯವೇ ಸರಿ. ಇದನ್ನು ಇತರರೂ ಅನುಸರಿಸುವದಾದರೆ ಇವರಿಗಿರುವ ಅಡಚಣೆಗಳೆಲ್ಲಾ ತೀರಿ ಅಡಗಿದಂತಾಗುವವು. ಈ ಮೇಲಿನ ಸಹಾಯಕರಿಗೂ, ಕೊಪ್ಪರಿಗೆಯ ಬಾಬತು ವಂತಿಗೆ ಕೊಟ್ಟ ಮಹಾಶಯರಿಗೂ ಮಂಡಳಿಯವರು ಕೃತಜ್ಞರಾಗಿರುತ್ತಾರೆ.

ಪತ್ರವ್ಯವಹಾರ.

ಶಾಲಾ ಸುಪರ್‌ವ್ಯಾಜರುಗಳ ನೇಮಕ.

ಅಯ್ಯಾ ಪತ್ರಾಧಿಪರೇ,

ಉಪಾಧ್ಯಾಯ ವೃತ್ತಿಗೆ ಅರ್ಹರಾಗಲು ತರಬೇತಾಗಬೇಕೆಂತ ವರ್ಷಂಪ್ರತಿ ಅನೇಕರು ಹಲವು ಬೇರೆ ಬೇರೆ ಹಳ್ಳಿಹಳ್ಳಿಗಳಿಂದ ಕಷ್ಟಪಟ್ಟು ಬಂದು ಅಲ್ಪ ಸ್ಟೈಪೆಂಡ್‌ನ ಮೇಲೆ ಶಿಕ್ಷಣ ಹೊಂದುವರು. ಸುಪರ್‌ವ್ಯಾಜರ್ ಆಗಬೇಕೆಂತ ಸುಪರ್ ವ್ಯಾಜರ್ಸ್ 'ಟೆಸ್ಟನ್ನು' ಇನ್ನೂ ಹಲವು ತರದ ಪರೀಕ್ಷೆಗಳನ್ನೂ ಪ್ರಯಾಸದಿಂದ ಪಡೆದು ತೇರುವರು. ಎಂತಹ ತರದ ಯೋಗ್ಯತೆಯವರಾದರೂ ಈಗಲೀಗ ವಿದ್ಯಾ ಇಲಾಖೆಯ ಸರಕಾರಿ ಕೆಲಸಕ್ಕೆ ಅರ್ಜಿಮಾಡಿದರೆ ಅಧಿಕಾರಿಗಳು 'We are levelling up and not down' ಅಂದರೆ ನಾವು ನಮ್ಮ ಇಲಾಖಾಸಂಬಂಧಿಕಾರರಿಗಳ ಯೋಗ್ಯತೆ ಉನ್ನತದ್ದಾಗಬೇಕೆಂತ ಇದ್ದೇವೆ [illegible] ನಿಮ್ಮ ಅರ್ಜಿ ಪರ್ಯಾಲೋಚಿಸುವ [illegible] ಎಂತ ಹೇಳುವರು—ಇರಲಿ.

[illegible] ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ [illegible] ಸುಪರ್ ವ್ಯಾಜರ [illegible] ಆ ಸಂಗತಿಯು ಪ್ರಕಟಿಸಲ್ಪಟ್ಟಿತು. [illegible] ಸುಪರ್ ವ್ಯಾಜರ್ [illegible] ಹಂಗಾಮಿಯಾಗಿ ಸುಪರ್ ವ್ಯಾಜರ ಕೆಲಸ ಮಾಡಿದವರೂ [illegible] ನ್ಯಾಯವಾಗಿ ಯೋಗ್ಯತಾಯೋಗ್ಯತೆಗಳನ್ನು ಪರೀಕ್ಷಿಸುವವರಿಗೆ ಸೆಟ್ ಅಸಿಸ್ಟಾಂಟ್ ಟೆಸ್ಟ ತೇರಿದವರಿಗೆ ತಪ್ಪಿದರೆ ಸುಪರ್ ವ್ಯಾಜರ್ ಟೆಸ್ಟ ತೇರಿದವರಿಗೆ ಅದೂ ತಪ್ಪಿದ ಪಕ್ಷಕ್ಕೆ ಹಂಗಾಮಿಯಾಗಿ ಸುಪರ್ ವ್ಯಾಜರ್ ಆಗಿದ್ದವರಿಗೆ ಈ ಖಾಲಿ ಹುದ್ದೆ ಕೊಡಬೇಕಿತ್ತು ಎಂತ ಕಂಡು ಬರುವದು. ಆದರೆ ದೈವವಶಾತ್ ಬರೇ ಥಿಯೊರೆಟಿಕಲ್ ಟ್ರೈನಿಂಗ್ ಪಾಸಾದವರಿಗೆ ಈ ಹುದ್ದೆ ಸಿಕ್ಕಿತು.

ಇದು ತೇರ್ಗಡೆ ಪಟ್ಟವರ ದುರಾಗ್ರಹವೋ? ಯಾ ಅಧಿಕಾರಿಗಳು 'We are levelling up and not down' ಎಂಬ ನಿಯಮವನ್ನು ಮರೆತು ಬಿಟ್ಟರೋ? ಅಧಿಕಾರಿಗಳು ಯೋಗ್ಯತಾಯೋಗ್ಯತೆಗಳನ್ನು ವಿಚಾರಿಸದೆ ತಮ್ಮ ಕೃಪಾದೃಷ್ಟಿ ಯಾರ ಮೇಲೆ ಬೀಳುವದೋ ಅವರಿಗೆ ನೇಮಕ ಮಾಡುವದು ಯುಕ್ತವೆಂತ ಕಂಡರೆ ಸುಮ್ಮನೆ ಪ್ರಕಟಣೆಗಳನ್ನು ಪ್ರಕಟಿಸಿ ನೂರಾರು ಅರ್ಜಿಗಳು ಬರುವಂತೆ ಮಾಡುವುದ್ಯಾಕೆ?

ಆದುದರಿಂದ, ಜನಪ್ರೀತರಾದ ನಮ್ಮ ಜಿಲ್ಲೆಯ ವಿಷಯ ಮದ್ರಾಸ್ ನ್ಯಾಯ ವಿಧಾಯಕ ಸಭೆಯಲ್ಲಿ ಕಾದಾಡುವ ಒನರೇಬಲ್ ಭಟ್ಟರವರು ಈ ಸಂಗತಿಯನ್ನು ಪ್ರಶ್ನಿಸಿ ವಿದ್ಯಾ ಇಲಾಖಾ ಮೆಂಬರರಿಂದ ಸಮರ್ಪಕವಾದ ಉತ್ತರವನ್ನು ಪಡೆದು ಅದನ್ನು ನಿಮ್ಮ ಪತ್ರಿಕೆಯಲ್ಲಿ ಎಲ್ಲರ ತಿಳುವಳಿಕೆಗಾಗಿ ಪ್ರಕಟಿಸುವರೆಂತ ಕೋರುವ,

ನಿಷ್ಪಕ್ಷಪಾತಿ.

ಮುಂಬಾಯಿಯಲ್ಲಿ ನಮ್ಮ ಜಿಲ್ಲೆಯವರ ಸಂಘಗಳು.

ಸಂಪಾದಕರೇ,

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಅನೇಕರು ಹಲವು ವರ್ಷಗಳಿಂದ ಧನಾರ್ಜನೆಗಾಗಿ ಮುಂಬಯಿಗೆ ಬರುತ್ತಿರುವುದು ರೂಢಿಯಷ್ಟೆ. ಊರು ಬಿಟ್ಟು ಪರದೇಶಕ್ಕೆ ಹೊರಟಾಗಲೆ ಹಾಗೂ ವಿದ್ಯಾನಿಧಿಯೆನಿಸಿದ್ದ ಧನಾಧಿಪತಿಗಳ ನಿವಾಸಸ್ಥಾನವಾದ ಮುಂಬಯಿಯಂಥ ಪಟ್ಟಣಕ್ಕೆ ಮುಟ್ಟಿದಾಗಲೆ ನಡೆನುಡಿ, ಉಡಿಗೆ ತೊಡಿಗೆ, ಊಟೋಪಚಾರ, ಸಂಘಸುಧಾರಣಾದಿ ಸಮಸ್ತ ವಿಧದಲ್ಲೂ ಸುಧಾರಿಸಲ್ಪಟ್ಟ ಸುಶಿಕ್ಷಿತರಾದ ಅಲ್ಲಿಯವರ ವಿದ್ಯಾಮಾನವನ್ನೇ ಅನುಸರಿಸಬೇಕೆಂಬ ಆಕಾಂಕ್ಷೆ ಹುಟ್ಟುವದು ನೂತನವಲ್ಲ. ಪ್ರತಿಯೊಂದು ವಿಷಯದಲ್ಲೂ ಸ್ವಬುದ್ಧಿ ಜ್ಞಾನ ಸಾಲದಿದ್ದಾಗ ಪರರ ನಡತೆಯನ್ನು ಪರಿಶೀಲಿಸಿ ಅಥವಾ ಸುಬೋಧಿತರಾದ ಮಹನೀಯರ ಚರಿತ್ರೆಯನ್ನು ಮನನ ಮಾಡುವುದರಿಂದಲೂ ಅಂಥಾ ವಿಷಯದಲ್ಲಿ ಪ್ರಯತ್ನ ಪೂರ್ವಕ ಅವರನ್ನು ಹಿಂಬಾಲಿಸುವುದು ಅಥವಾ ಅವರ ಯೋಗ್ಯ ನಡತೆಗಳನ್ನು ಅನುಸರಿಸುವರೆ ಧಾವತಿ ಪಡುವದು ಸ್ವಭಾವಿಕವೇ. ಹುಟ್ಟು ದೇಶದಲ್ಲಿದ್ದು "ಶ್ರೀ" ಎಂಬ ಅಕ್ಷರದ ಪರಿಚಯಸ್ಥರಾಗಿರದಿದ್ದರೂ ಪರದೇಶದ ರೇಣಿ ಮಾತ್ರ ಸ್ಪರ್ಶಿಸಿದಾಗಲೆ ತನ್ನ [illegible] ವರ್ಷಗಳಾಗಿದ್ದರೂ ಅದರ ಪಾಠಯಕ್ಕೆ ಧಾವತಿ ಪಟ್ಟು ಅದನ್ನು ಪರಮಾಪ್ತನನ್ನಾಗಿ ಮಾಡಿಕೊಳ್ಳುವನ್ನು ಅನಕ್ಕ ತೋರುತ್ತದೆ. ಇಂಥಾ ಸಂಗತಿಗಳು ಈಗಿನ ಕಾಲಕ್ಕೆ ಸುಪ್ರಯೋಜನೀಯವಾದುದೇ ಸರಿ. ಆದರೆ ಸಂಘಸುಧಾರಣೆಯ ವಿಷಯಲ್ಲಿ ಹುಟ್ಟುವ ಕೋರಿಕೆಯು ಅಷ್ಟಿಷ್ಟಲ್ಲ. ಇದನ್ನು ಒಂದೇ ಮಾತಿನಿಂದ ಹೇಳುವುದಾದರೆ ಎಂಥ ಕನಿಷ್ಟ ಶರಗತಿಯವರಾದಾಗ್ಯೂ ತಮ್ಮ ಸಮಾಜವು ಸುಧಾರಣೆ ಹೊಂದಿ ಭಾರತೀಯರ (ಹಿರಿಯರ) ಪದ್ಧತಿಗೆ ಮುಟ್ಟಿಗೋಳನ್ನಟ್ಟು ಬೇಗನೆ ನವಸುಧಾರಕರ ಪದ್ಧತಿಯನ್ನನುಸರಿಸಿದರಾದೀತು ಎಂಬೀ ಕೋರಿಕೆಯೇ ಸಾಕು. ಸಮಸ್ತ ವಿಧದಲ್ಲೂ ಸುಧಾರಿಸಲ್ಪಟ್ಟಿರುವ ಪಟ್ಟಣಗಳಲ್ಲಿ ಇಂಥಾ ಕೋರಿಕೆಗಳು ಹುಟ್ಟುವದೇನೋ ಸೋಚನೀಯವಲ್ಲ. ಆದರೆ ಇಂಥಾ ಕೋರಿಕೆಗಳಿಂದ ಸ್ಥಾಪಿಸೋಣಾದ ನಮ್ಮ ಜಿಲ್ಲೆಯವರ ಸಂಘಗಳು ಮುಂಬಯಿಯಲ್ಲಿ ಅನೇಕ. ಇವುಗಳು ವಿವಿಧ ಉದ್ದಿಷ್ಟ ಹೇತುವಿನಿಂದ ಹುಟ್ಟುತ್ತಲೂ ಥಕ್ಕನೆ ಮಾಯವಾಗುತ್ತಲೂ ಇವೆ. ಇವುಗಳಲ್ಲಿ ತನ್ನ ಉದ್ದೇಶವನ್ನು ನೆರವೇರಿಸಿ ಸುಖಪಟ್ಟಿದ್ದು ಒಂದೂ ಇಲ್ಲ. ಇದಕ್ಕೆ ಕಾರಣವೇನೋ ನಾನರಿಯೆ. ಆದರೂ ನಾನು ಇದನ್ನು ಇಲ್ಲಿ ಪ್ರಸ್ತಾಪಿಸಲು ಕಾರಣವೇನಿರ ಬಹುದೆಂಬ ಸಂಗ್ರಿಗಳು ಈ ಕೆಳಗಿನ ವಿವರದಿಂದ ತಮಗೆನೇ ಶ್ರುತವಾಗುವದು. ಪ್ರಿಯರೇ, ಮೊಗೇರರ ಶ್ರೀಧರ್ಮೋದಯ ಸಂಘವು ತನ್ನ ಕರ್ಮಾನುಗತಿಯಿಂದ ಹುಟ್ಟುತ್ತಲೆ ಮಾಯವಾಗಿ ಇವರ ಉನ್ನತಿಗಾಗಿ ತೆತ್ತ ಬಂಡವಾಳವು ಇಂದಿಗೆ ಮೂರು ನಾಲ್ಕು ವರ್ಷಗಳಿಂದ ವಿಲೆವಾರಿ ಮಾಡಲ್ಪಡದ ದೀರ್ಘ ಮಾನಸಿಕೆಯಿಂದ ಬ್ಯಾಂಕಿನಲ್ಲಿ ಉಳಿಸಲ್ಪಟ್ಟು ಅವಯವನ್ನು ಸಂಪಾದಿಸುತ್ತಲಿದೆ. ಶ್ರೀ ಜ್ಞಾನೋದಯದ ಉಪಶಾಖೆಯು ಅಜ್ಞಾನಾಂಧಕಾರದಿಂದ ಉದಯಿಸದ ಕಾಣೆಯಾಯಿತು. ಬಂಟರ ಯಾನೆ ನಾಡವರ ಸಂಘವು ಸುಧಾರಕರ ವೈಮನಸ್ಸಿನ ಉಪದ್ರದಿಂದ ದಿನೇ ದಿನೇ ಕೃಶವಾಗುತ್ತಾ ಇದೆ. ಬಿಲ್ಲವರ ಶ್ರೀ ಗೋಕರ್ಣನಾಥ ಕ್ಷೇತ್ರಫಂಡು—ತನ್ನ ಪ್ರಿಯ ಅಧ್ಯಕ್ಷರೂ ಉಪನ್ಯಾಸಕರೂ ಆಗಿದ್ದ ಸ್ವರ್ಗಸ್ಥ ಐತಪ್ಪ ಯಾನೆ ಹಿಮಂತ ಸ್ವಾಮಿಗಳ ಆಶ್ರಯವನ್ನಪೇಕ್ಷಿಸಿ ಹೋದಂತೆ ದಿನೇ ದಿನೇ ಬಡವಾಗುತ್ತಾ ಬರುತ್ತಲಿದೆ. ಮೊಗೇರ ವ್ಯವಸ್ಥಾಪಕ ಮಂಡಳಿಯ ಮೆಂಬರರ ಪುರಸ್ಕಾರದಿಂದ ಈ ವರ್ಷದ ಮೀಟಿಂಗು ಬರಿದಾಯಿತು. ಮತ್ತು ಈ ಮಂಡಳಿಯ ಕಡೆಯಿಂದ ಸ್ಥಾಪಿಸೋಣಾದ ಎಡ್ವಾರ್ಡ್ ಎಳನೇ ಕೊರೊನೇಶನ್ ಫಂಡಿನ ಶ್ರೀ ನೈಟ್‌ಸ್ಕೂಲ್ ಇದ್ದದ್ದು ಹಾಗೆ ಮಾಯವಾಯಿತು. ಭಾರತ ಮಂಡಳಿ ಮತ್ತು ಕನ್ನಡ ಪುಸ್ತಕಾಲಯವು ಮತ್ತು ಇನ್ನೂ ಹಲವು ಸಂಘಗಳು ರಾಹು ಸೋಂಕಿದ ಚಂದ್ರನಂತೆ ಇದೆ. ಇದೆಲ್ಲಾ ನಮ್ಮ ಜಿಲ್ಲೆಯವರ ಸಂಘಗಳು, ಸ್ವಾಮಿ, ಕಂಡುದನ್ನು ಹೇಳಿದರೆ ಕೆಂಡದಂಥಾ ಕೋಪವಂತೆ. ಆದರೂ ಬನಾತು ಬಲ್ಲವಗೆ ಜಗಳವಿಲ್ಲ ಊಟ ಬಲ್ಲವಗೆ ರೋಗವಿಲ್ಲವೆಂಬ ನಾಣ್ಣುಡಿಯನವಿರುತ್ತಾ ಕಂಡುದನ್ನು ಕಂಡಂತೆ ಹೇಳಿದರೆ ಯಾವ ಕೊರತೆಗಳೂ ಇಲ್ಲ. ವಾಚಕ ಮಹಾಶಯರೇ, ಇಂಥ ಸಂಘಗಳನೇಕವಿರುವುದರಿಂದ ಇವುಗಳಿಂದ ದೊರೆಯತಕ್ಕ ಫಲಪ್ರಾಪ್ತಿ ಎಂಥಾದ್ದಾಗಿರಬಹುದು, ಮತ್ತು ಈ ಸಂಘಗಳ ಸ್ಥಾಪಕರು ಇವುಗಳಿಂದ ಯಾವ ತಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳುವರೆಂಬದನ್ನು ತಾವೇ ಸುಲಭದಿಂದ ನಿರ್ಧರಿಸಿಕೊಳ್ಳಬಹುದು. ಸಂಘೋತ್ತೇಜಕರಾದ ಮೆಂಬರರು ಕೆಲವರು ಪರೋಪಕಾರದ ನಿಜಭಕ್ತಿಶ್ರದ್ಧೆಯಿಂದಲೂ ಇನ್ನು ಕೆಲವರು ಮೆಂಬರುತನದ ಬರಿ ಹೆಸರು ಮಾತ್ರಕ್ಕೆ ಘಂಟಿಕ ಮೆಂಬರರಾಗಿಯೂ ಸೇರಿರುತ್ತಾ ತಿಂಗಳುಗಟ್ಟಲೆಯ ವರ್ಗಣಿಯನ್ನಾದರೂ ಕ್ರಮವಾಗಿ ಸಲಿಸದೆ ಇದ್ದು ಸಂಘದ ನಾಮವನ್ನೇ ಹೀನಸ್ಥಿತಿಗೆ ತಂದೊಡ್ಡುತ್ತಾರೆ. ಪಾಪ! ಇಂಥಾ ಬಡ ಸಂಘಗಳು ಹ್ಯಾಗೆ ತಾನೆ ತನ್ನ ಉದ್ದೇಶವನ್ನು ನೆರವೇರಿಸಿಕೊಂಡೀತು! ಇಂಥ ಮೆಂಬರರು ಮೆಂಬರರಾಗಿ ಸೇರಿಕೊಳ್ಳುವದಕ್ಕಿಂತಲೂ ಸಿಕ್ಕದೆ ತನ್ನ ಸಂಪಾದನೆಯನ್ನು ನಿರುಪಯೋಗಪಡಿಸದೆ ತನಗೆ [illegible] ತನ್ನ ಹಿಚಿಕೆಯನ್ನು ಅಡಗಿಸದುವಂತೆ ಇಟ್ಟುಕೊಳ್ಳುವವರು ಮನೋದ್ಭವವೇ ಉತ್ತಮ. ಈ ಎಲ್ಲಾ ಸಂಘಗಳಿಂದ ತಮ್ಮ ಗರ್ವ ಬಿಡ್ಡ ಹಣ ಸಾಲಪಡಕೊಂಡವರು ಸಂಘಗಳ ಈ ಎಲ್ಲಾ ಅವ್ಯವಸ್ಥೆಗಳನ್ನು ತಿಳಿದು ಸಲಿಸದೆ ದೊಡ್ಡ ಗಾಢರಂತೆ ಇರುತ್ತಾರೆ. ಇಂಥವರಿಗೆ ಸಂಘ ಚಾಲಕರು ಯಾವುದೊಂದು ವಿಲೆವಾರಿ ಮಾಡುವರೆಯೂ ಒಕ್ಕಟ್ಟಿನಲ್ಲಿ ಬಲವಿಲ್ಲದೆ ಅಶ್ಯಕ್ತರಾಗಿರುತ್ತಾ ಹಾಗೆಯೇ ಬಿಟ್ಟಿರುತ್ತಾರೆ! ಜೀಶ ಶುಭಕಾಂಕ್ಷಿಗಳೇ, ಸಂಘವು ಯಾವುದಾದರೂ ಸಂಯಿ—ಅವು ಆಯಾಯ ಸಮಾಜದ ಅಥವಾ ಸಾರ್ವಜನೋಪಕಾರಕ್ಕಾಗಿ ಸ್ಥಾಪಿಸಲ್ಪಡುವವಾಗಿರುತ್ತದೆ. ಆದರೆ ಇಂಥ ಸಂಘಗಳ ಚಾಲಕ ಮಹನೀಯರು ಸ್ವಾರ್ಥತ್ಯಾಗಿಗಳೂ, ದೇಶವತ್ಸಲರೂ, ಶಾಂತಸ್ವಭಾವದವರೂ ಆಗಿರಬೇಕೆಂಬುದು ಸರ್ವಸಮ್ಮತ. ಹಾಗಲ್ಲದಿದ್ದರೆ ಪಾಪ! ಆ ಬಡ ಸಂಘಗಳ ನಾಮವೇ ನಿರ್ನಾಮವಾಗುವಲ್ಲಿ ಎಳ್ಳಷ್ಟು ಸಂದೇಹವಿರದು. ಹೀಗಿರುತ್ತಾ [illegible] ಬಹಳ [illegible] ಬಂದಿರುವ ಈಗಿನ ಈ ಸಂಘಗಳನ್ನೆಲ್ಲಾ ಒಂದಾಗಿ [illegible] ಅದಕ್ಕೆ ನಮ್ಮ [illegible] ರಾದ ವಿದ್ವಾನ ಪುರುಷರನ್ನು ಚಾಲಕರನ್ನಾಗಿ ನೇಮಿಸಿ ಅವರಲ್ಲಿ [illegible] ವಿದ್ಯಾಭಿವರ್ಧನೆಗಾಗಿ ಸಮಸ್ತ [illegible] ಅದು [illegible] ಕನ್ನಡ ಜಿಲ್ಲೆಯ ಸರ್ವರಿಗೆ [illegible] ಪ್ರಯೋಜನವಾಗುವಂತೆ ಯೋಗ್ಯ ಕ್ರಮಗಳನ್ನು [illegible] ವರಾಗಿ [illegible]

[illegible]

[illegible]

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವ ಬಗ್ಗಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು.

1929ರಿಂದ 1947ರ ವರೆಗಿನ ವರ್ಷಗಳ ಮಧ್ಯಕಾಲದಲ್ಲಿ ಸಂದಾಯವಾಗುವ ಸೇಕಡಾ 5ರ ದರದ ಸಾಲವು—1920ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ವಾರ್ ಬಾಂಡ್ಸ್ ಎಂಬ ಯುದ್ಧಸಂಬಂಧವಾದ ಸಾಲಪತ್ರಗಳು, 1922ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ಯುದ್ಧಸಂಬಂಧವಾದ ಸಾಲಪತ್ರಗಳು—(1917—18ನೇ ಇಸವಿಯಲ್ಲಿ ಸಾದರು ಮಾಡಲ್ಪಡುವ) ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು.

ಅಸಲ್—ವ—ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು.

I. 1929ರಿಂದ 1947ರ ಪರ್ಯಂತದ ವರ್ಷಗಳಲ್ಲಿ ಸಂದಾಯವಾಗತಕ್ಕ ವಾರ್ ಲೋನ್ ಎಂಬ ಯುದ್ಧಸಂಬಂಧವಾದ ಸಾಲವು.

ಸಾದರುಮಾಡುವ ಬೆಲೆ:—ಸೇಕಡಾ 95ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿ ಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 95ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 15ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ ರೂ. 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳನಂತರದ ಮೊದಲನೆಯ ತಿಂಗಳ, ಎರಡನೆಯ ತಿಂಗಳ, ಮೂರನೆಯ ತಿಂಗಳ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5ರ ಮೇರೆಗೆ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಅಗೋಸ್ತು 15ನೇ ತಾರೀಕಿನಲ್ಲಿ ಪಾವತಿಯಾಗುವುದು.

ಪರಿಹರಿಸಲ್ಪಡುವ ತಾರೀಕು:—ತತ್ಪೂರ್ವವಾಗಿಯೇ ಪರಿಹರಿಸಲ್ಪಡದಿದ್ದರೆ, 1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲವು 1947ನೇ ಇಸವಿಯ ಅಗೋಸ್ತು 15ನೇ ತಾರೀಕಿನಲ್ಲಿ ನೂರಕ್ಕೆ ನೂರರಂತೆ ಮರು ಪಾವತಿಮಾಡಲ್ಪಡುವುದು. ಆದರೆ ಸದರೀ ಸಾಲ ಯಾ ಅದರ ಯಾವದೊಂದು ಭಾಗವನ್ನು ನೂರಕ್ಕೆ ನೂರರಂತೆ, 1929ನೇ ಇಸವಿಯ ಅಗೋಸ್ತು 15ನೇ ತಾರೀಕಿನಲ್ಲಿ ಯಾ ಅನಂತರ ಇಂಡಿಯಾ ಗಜೇಟಿನಲ್ಲಿ ಮೂರು ಕ್ಯಾಲಂಡರು ತಿಂಗಳ ನೋಟೀಸು ಕೊಟ್ಟು ಪರಿಹರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇಂಡಿಯಾ ಗವರ್ನ್‌ಮೆಂಟಿನವರು ಇಟ್ಟುಕೊಂಡಿರುತ್ತಾರೆ.

ಸಾಲ ಪರಿಹಾರದ ಭಂಡವಾಳವು:—1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲಪತ್ರಗಳ ಪೇಟೆಯ ಬೆಲೆಯು ತಗ್ಗುವ ಸಂದರ್ಭದಲ್ಲಿ ಏರ್ಪಾಡು ಮಾಡುವ ಬಗ್ಗಾಗಿ, ಇಂಡಿಯಾ ಗವರ್ನ್‌ಮೆಂಟಿನವರು, ಸದರೀ ಸಾಲಪತ್ರಗಳ ಪೇಟೆಯ ಬೆಲೆಯು ಅವು ಸಾದರುಮಾಡಲ್ಪಟ್ಟ ಬೆಲೆಗಿಂತ ಕಡಿಮೆಯಾದಾಗಲೆಲ್ಲಾ ಸದರೀ ಸಾಲದ ಪತ್ರಗಳನ್ನು ರದ್ದುಪಡಿಸುವ ಉದ್ದೇಶವಾಗಿ ಅವುಗಳನ್ನು ಕೊಂಡುಕೊಳ್ಳಲು ಉಪಯೋಗಿಸತಕ್ಕ ಒಂದು ಬಂಡವಾಳವಾಗಿ ಏರ್ಪಡಿಸುವಗೋಸ್ಕರ ಸದರೀ 1929ರಿಂದ 1947ರೊಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೊಬಲಗಿನ ಸೇಕಡಾ ಒಂದುವರೆಗೆ ಸಮಾನವಾದ ಒಂದು ಮೊಬಲಗನ್ನು ವರ್ಷಂಪ್ರತಿ ಪ್ರತ್ಯೇಕಿಸಿಡಲು ಒಪ್ಪಿಕೊಂಡಿರುತ್ತಾರೆ.

II. 1920ನೇ ಇಸವಿಯ ವಾರ್ ಬಾಂಡುಗಳು ಮತ್ತು 1922ನೇ ಇಸವಿಯ ವಾರ್ ಬಾಂಡುಗಳು. (ಇನ್ಕಮ್‌ಟಾಕ್ಸ್ ಮಾಫಿ.)

ಸಾದರುಮಾಡುವ ಬೆಲೆ:—ಸೇಕಡಾ ರೂ. 100ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ ರೂ. 100ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವ ಕಾಲದಲ್ಲಿ ಸೇಕಡಾ 20ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳ ನಂತರದ ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5½ಯ ಪ್ರಕಾರ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಅಗೋಸ್ತು 15ನೇ ತಾರೀಕಿನಲ್ಲಿ ಪಾವತಿಮಾಡಲ್ಪಡುವದು.

ಪರಿಹರಿಸಲ್ಪಡುವ ತಾರೀಕು:—1920ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1920ನೇ ಇಸವಿಯ ಅಗೋಸ್ತು 15ನೇ ತಾರೀಕಿನಲ್ಲಿಯೂ, 1922ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1922ನೇ ಇಸವಿಯ ಅಗೋಸ್ತು 15ನೇ ತಾರೀಕಿನಲ್ಲಿಯೂ ಮರು ಪಾವತಿಮಾಡಲ್ಪಡುವುವು.

III. ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು. (ಇನ್ಕಮ್‌ಟಾಕ್ಸು ಮಾಫಿ).

ರೂ. 10, ರೂ. 20, ರೂ. 50 ಮತ್ತು ರೂ. 100ರ ಬಾಬತು ಸರ್ಟಿಫಿಕೇಟುಗಳು ಕೊಡಲ್ಪಟ್ಟ 5 ವರ್ಷಗಳ ತರುವಾಯ ಮರು ಪಾವತಿಯಾಗುವಂಥವುಗಳು.

ಸಾದರು ಮಾಡುವ ಬೆಲೆ:—ರೂ. 7—12, ರೂ. 15—8, ರೂ. 38—12 ಮತ್ತು ರೂ. 77—8.

ಈ ಸರ್ಟಿಫಿಕೇಟುಗಳನ್ನು, ಸದರಿ 5 ವರ್ಷಗಳ ವಾಯಿದೆಯಲ್ಲಿ ಯಾವ ಕಾಲದಲ್ಲಾದರೂ ಸದರಿ ಸಾಲದ ಕುರಿತ ಪ್ರಕಟಣೆಯಲ್ಲಿ ನಿರ್ದೇಶಿಸಲ್ಪಟ್ಟ ದರಗಳ ಮೇರೆಗೆ ಅವು ಸಾದರುಮಾಡಲ್ಪಟ್ಟ ಪೋಸ್ಟು ಆಫೀಸುಗಳಲ್ಲಿ ವಟಾಯಿಸಲು ಸಹಾ ಬಹುದು.

1. **ಸೆಕ್ಯೂರಿಟಿಗಳ ನಮೂನೆ:**—1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಬಾಬತು ಸೆಕ್ಯೂರಿಟಿ ಪತ್ರಗಳು, 1920ನೇ ಇಸವಿಯ ವಾರ್‌ಬಾಂಡುಗಳು ಮತ್ತು 1922ನೇ ಇಸವಿಯ ವಾರ್‌ಬಾಂಡುಗಳು ಅರ್ಜಿದಾರನಿಗೆ ಇಷ್ಟವಿರುವ ಮೇರೆಗೆ ಈ ಕೆಳಗಿನ ನಮೂನೆಗಳಲ್ಲಿ (ಇದನ್ನು ಆತನು ತನ್ನ ಅರ್ಜಿಯಲ್ಲಿ ನಮೂದಿಸತಕ್ಕದ್ದು) ಕೊಡಲ್ಪಡುವುವು.

    (1) ಇನ್‌ಸ್ಕ್ರೈಬ್ಡ್ (ಹೆಸರು ರಿಜಿಸ್ತ್ರಿ ಮಾಡಿರುವ) ಸ್ಟಾಕ್ ಸರ್ಟಿಫಿಕೇಟು ... ... ಪತ್ರಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.
    (2) ಪ್ರಾಮಿಸರಿ ನೋಟುಗಳು ... ... ಇಂಡಾರಸು ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.
    (3) ಬ್ಯಾರರ್ ಬಾಂಡುಗಳು ... ... ಒಪ್ಪಿಸುವದರ ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

ಇಷ್ಟವನ್ನು ನಮೂದಿಸದಿದ್ದ ಪಕ್ಷದಲ್ಲಿ, ಸೆಕ್ಯೂರಿಟಿ ಪತ್ರಗಳು ಇನ್‌ಸ್ಕ್ರೈಬ್ಡ್ ಸ್ಟಾಕ್ ಸರ್ಟಿಫಿಕೇಟುಗಳ ರೂಪವಾಗಿ ಪ್ರಥಮತಃ ಸಾದರುಮಾಡಲ್ಪಡುವವು.

2. **ಇನ್ಕಮ್‌ಟ್ಯಾಕ್ಸು:**—1920ನೇ ಇಸವಿಯ ವಾರ್‌ಬಾಂಡುಗಳ ಮತ್ತು 1922ನೇ ಇಸವಿಯ ವಾರ್‌ಬಾಂಡುಗಳ ಮೇಲಣ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಟ್ಟಿದೆ, ಆದರೆ ಸುಪರ್‌ಟ್ಯಾಕ್ಸು ಎಂಬ ವಿಶೇಷ ತೆರಿಗೆಯಿಂದ ವಿನಾಯಿಸಲ್ಪಡಲಿಕ್ಕಿಲ್ಲ.

1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೇಲಣ ಬಡ್ಡಿಯು ಇನ್ಕಮ್‌ಟ್ಯಾಕ್ಸಿನಿಂದಾಗಲಿ ಸುಪರ್‌ಟ್ಯಾಕ್ಸಿನಿಂದಾಗಲಿ ವಿನಾಯಿಸಲ್ಪಡುವದಿಲ್ಲ. ಇನ್ಕಮ್ ಟ್ಯಾಕ್ಸು ಆಕ್ಟಿನ ಎರಡನೆಯ ಶೆಡ್ಯೂಲಿನ IIIನೇ ಭಾಗದ ನಿಬಂಧನೆಗಳಿಗನುಸಾರವಾಗಿ ಇನ್ಕಮ್‌ಟ್ಯಾಕ್ಸ್ ವಸೂಲು ಮಾಡಲ್ಪಡುವುದು.

3. **ಮಾರ್ಪಡಿಸಲು ಸ್ವಾತಂತ್ರ್ಯಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ಯುದ್ಧದ ಸಾಲದ ಬಾಬತು ಚಂದಾದಾರನು ಪ್ರತಿ (ಅಂಕಿತ) ರೂ. 100ರ ಬಗ್ಗೆ ಸೇಕಡಾ 3ರ ದರದ, ಅಥವಾ 3½ಯ ದರದ ಯಾವವಾದರೂ ರೂಪಾಯಿ ನಾಣ್ಯದಲ್ಲಿರುವ ಸಾಲಗಳ (ರುಪೀ ಲೋನುಗಳ) ಅಥವಾ ಇಂಡಿಯಾ ಗವರ್ನ್‌ಮೆಂಟಿನವರ 1916-17ನೇ ಇಸವಿಯ ಸೇಕಡಾ 4ರ ದರದ ಕನ್‌ವರ್ಷನ್ ಲೋನಿನ (ಅಂಕಿತ) ರೂ. 150ನ್ನು ಮಾರ್ಪಡಿಸಬಹುದು ಮತ್ತು ಅದರ ಬದಲಾಗಿ ಈ ಕೆಳಗಿನ ದರವನ್ನು, ಎಂದರೆ—

ಮಾರ್ಪಡಿಸತಕ್ಕ ಸೇಕಡಾ 3ರ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 65,
ಮಾರ್ಪಡಿಸತಕ್ಕ ಸೇಕಡಾ 3½ಯ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 76,
ಮಾರ್ಪಡಿಸತಕ್ಕ ಸೇಕಡಾ 4ರ ದರದ ಸಾಲದ ಕನ್‌ವರ್ಷನ್ ಲೋನಿನ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 92

ನ್ನು ಮತ್ತು ಪೂರ್ತಿಯಾಗಿ ರೂ. 100ಕ್ಕೆ ಭರ್ತಿಮಾಡಲು ಅಗತ್ಯವಿರುವ ಕಡಿಮೆ ಬೀಳುವ (ವಾರ್ ಲೋನಿನ) ಮೊಬಲಗಿನ ಸಹಿತವಾಗಿ ಪಾವತಿಮಾಡಿ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳನ್ನು ಹೊಂದಬಹುದು; ಪರಂತು ಈ ಹೆಚ್ಚಿಗೆ ಮೊಬಲಗನ್ನು ರೂಪಾಯಿ ಒಂದರ ಒಂದು ಆಣೆಯ ಮೇರೆಗೆ ವಜಾಮಾಡಿ ರೊಕ್ಕವಾಗಿ ಪಾವತಿಮಾಡತಕ್ಕದ್ದು.

4. ಮಾರ್ಪಡಿಸುವ ಹಕ್ಕುಗಳನ್ನು 1917ನೇ ಇಸವಿಯ ನವಂಬರು 1ನೇ ತಾರೀಕಿನ ತರುವಾಯ ಯಾವ ಕಾಲದಲ್ಲಾದರೂ ಚಲಾಯಿಸಬಹುದು, ಪರಂತು 1918ನೇ ಇಸವಿಯ ಜನವರಿ 15ನೇ ತಾರೀಕಿನ ನಂತರ ಚಲಾಯಿಸತಕ್ಕದ್ದಲ್ಲ. ಮಾರ್ಪಡಿಸುವ ಕುರಿತ ಅಧಿಕಾರ ಪತ್ರಗಳು ಪರಭಾರೆ ಮಾಡತಕ್ಕವಾಗಿವೆ, ಮತ್ತು ಬ್ಯಾರರ್ ಫಾರ್ಮಿನಲ್ಲಿ ಕೊಡಲ್ಪಡುವುವು.

5. ಮಾರ್ಪಡಿಸಿ ಕೊಡಲ್ಪಟ್ಟ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನಿನ ಪತ್ರಗಳ ಬಗ್ಗೆ 1917ನೇ ಇಸವಿಯ ಅಗೋಸ್ತು 15ನೇ ತಾರೀಕು ಮೊದಲ್ಗೊಂಡು ಬಡ್ಡಿ ಪ್ರಾರಂಭವಾಗುವುದು. ಮೇಲಿನ 3ನೇ ಕ್ಲಾಜಿಗನುಗುಣವಾಗಿ ಪಾವತಿಮಾಡಿದ ರೊಕ್ಕ ಮೊಬಲಗುಗಳ ಬಗ್ಗೆ ಪ್ರತ್ಯೇಕವಾಗಿ ಬಡ್ಡಿ ಪಾವತಿಮಾಡೋಣಾಗಲಿಕ್ಕಿಲ್ಲ.

6. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳು, 1920ನೇ ಇಸವಿಯ ವಾರ್ ಬಾಂಡುಗಳು, ಮತ್ತು 1922ನೇ ಇಸವಿಯ ವಾರ್ ಬಾಂಡುಗಳನ್ನು ಸದರೀಯವು, ಇಂಡಿಯಾ ಗವರ್ನ್‌ಮೆಂಟಿನವರು ಇನ್ನು ಮುಂದೆ ಯಾವಾಗಲಾದರೂ ಸಾಲಪತ್ರಗಳನ್ನು ಕೊಡುವ ಸಂದರ್ಭದಲ್ಲಿ ಮಾರ್ಪಡಿಸಲು ಸ್ವಾತಂತ್ರ್ಯ ಕೊಡುವದಿಲ್ಲ.

7. ~~ಅರ್ಜಿಗಳು:—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಬಗ್ಗೆ, 1920ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ, 1922ನೇ ಇಸವಿಯ ವಾರ್ ಬಾಂಡುಗಳ~~ ಬಗ್ಗೆ ಮಾಡೋಣಾಗುವ ಅರ್ಜಿಗಳನ್ನು (ಪೋಸ್ಟು ಆಫೀಸಿನ ಮುಖಾಂತರವಾಗಿ ಮಾಡೋಣಾಗುವ ಅರ್ಜಿಗಳ ವಿನಾ) 1917ನೇ ಇಸವಿಯ ಮಾರ್ಚಿ 15ನೇ ತಾರೀಕು ಗುರುವಾರದ ಲಾಗಾಯತು, 1917ನೇ ಇಸವಿಯ ಜೂನು 15ನೇ ತಾರೀಕು ಶುಕ್ರವಾರದ ವರೆಗೆ, ಯಾವ ದಿನವಾದರೂ ಈ ಕೆಳಗೆ ನಮೂದಿಸಿರುವ ಆಫೀಸರರ ಯಾ ಮನುಷ್ಯರ ಬಳಿ ಹಾಜರುಪಡಿಸಬಹುದು:—

    (1) ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಬಳಿಗೆ, ಅಥವಾ ಯಾವದಾದರೂ ಪ್ರಾವಿನ್ಸಿನ ಅಕೌಂಟಾಂಟ್ ಜನರಲ್‌ರ ಯಾ ಕಂಟ್ರೋಲರ ಬಳಿಗೆ;—(2) ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಸೆಕ್ರೆಟರಿಗಳ ವ ಟ್ರೆಜರರುಗಳ ಬಳಿಗೆ, ಅವರವರ ಹೆಡ್ ಆಫೀಸುಗಳಲ್ಲಿ; ಅಥವಾ ಇಂಡಿಯದಲ್ಲಿಯ ಸದರಿ ಬ್ಯಾಂಕುಗಳ ಯಾವದೊಂದು ಶಾಖೆಯ ಏಜಂಟರುಗಳ ಬಳಿಗೆ; ಮತ್ತು (3) ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಗವರ್ನ್‌ಮೆಂಟ್ ಖಜಾನೆಗಳ ತಾಬೆಯಿರುವ ಆಫೀಸರರ ಬಳಿಗೆ.

8. ಅರ್ಜಿಗಳು 100 ರೂಪಾಯಿ ಯಾ ಅದರ ಆವರ್ತ್ಯಗಳ ಬಗ್ಗೆ (ಎಂದರೆ, ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು.

9. ಮೊಬಲಗು ರೂ. 100ರ ಬಗ್ಗೆ ಮಾತ್ರ ಮಾಡಲ್ಪಡುವ ಎಲ್ಲಾ ಅರ್ಜಿಗಳ ಸಂಗತಿಯಲ್ಲಿ ಪೂರಾ ಮೊಬಲಗು, ಎಂದರೆ 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಸಂಗತಿಯಲ್ಲಿ ರೂ. 95 ಮತ್ತು 1920ನೇ ಇಸವಿಯ ವಾರ್ ಬಾಂಡುಗಳ ಮತ್ತು 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 100 ಕಳುಹಿಸಲ್ಪಡಬೇಕು.

10. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ, 1920ನೇ ಇಸವಿಯ ವಾರ್ ಬಾಂಡುಗಳ ಅಥವಾ 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 200ರ ಯಾ ಅಧಿಕ ಮೊಬಲಗುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳು—

    (a) ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ,—(b) ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ, ಮಾಡಲ್ಪಡಬಹುದು.

12. ದಲಾಲಿ:—ಅಂಗೀಕರಿಸಲ್ಪಟ್ಟ ಬ್ಯಾಂಕರರಿಗೂ, ದಲಾಲಿಗಳಿಗೂ, ಅವರ ಸ್ಟಾಂಪು ಇದ್ದ ರೊಕ್ಕದ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಅವನ್ನು ಅಂಗೀಕರಿಸಿದ ಮತ್ತು [illegible] ಪ್ರಕಾರ ಕಮೀಷನು ಕೊಡಲ್ಪಡುವುದು. ಆದರೆ [illegible] ಆಫೀಸುಗಳ ಮುಖಾಂತರವಾಗಿ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಮತ್ತು ಪೋಸ್ಟು ಆಫೀಸಿನ ಮೂಲವಾದ 5 ವರ್ಷಗಳ [illegible] ಸರ್ಟಿಫಿಕೇಟುಗಳ ಬಗ್ಗೆ ಅರ್ಜಿಗಳ ಮತ್ತು ಮಾರ್ಪಡಿಸುವ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಸಹಾ ಈ ಕಮೀಷನು ಕೊಡಲ್ಪಡಲಾರದು.

ಅರ್ಜಿಯ ನಮೂನೆಗಳನ್ನು ಎಕೌಂಟಾಂಟ್ ಜನರಲರ ಬಳಿಯಿಂದ ಯಾ ಯಾವದೇ ಒಂದು ಬ್ಯಾಂಕಿನವರಿಂದ ಯಾ ದಲಾಲಿಯ ಬಳಿಯಿಂದ ಅಥವಾ ಯಾವದಾದರು ಟ್ರೆಜರಿ [illegible]

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು „	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು „	225,000—0—0
Paid up Capital	200,000—0—0	ಆಗತ ಮೂಲ ಧನವು „	200,000—0—0
Deposits	340,116—1—0	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	340,116—1—0
Reserve Fund	50,003—2—5	ರಕ್ಷಿತ ಧನವು	50,003—2—5

Besides the uncalled capital of Rs. 25,000/-25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last eight years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,

Mangalore, 1st March 1917.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾ ಪತ್ರಗಳಲ್ಲಿ ಠೇವಣಿ ಮಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಬಹುದು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಒಡವೆ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! — ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕ್ಷೇಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಸ್ಮಮತ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 46 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ **1ರ ಬೆಲೆ ಆಣೆ ಎರಡು ಮಾತ್ರ!** ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ:—

ಸದಾನಂದ ಮುದ್ರಾಶಾಲೆ,
ಉಡುಪಿ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಹಿಂದೂ ವ್ರತವಿವೇಕ.

(ಅಚ್ಚಾಗುತ್ತಲಿದೆ.)

ಹಿಂದೂಗಳು ಸರ್ವಸಾಮಾನ್ಯವಾಗಿ ಆಚರಿಸುವ ವ್ರತಗಳ ವಿವರ, ಅವುಗಳನ್ನು ಆಚರಿಸುವ ಸಂಕ್ಷೇಪ ವಿಧಾನ, ಅವುಗಳ ಮೂಲ ಇವೆಲ್ಲವನ್ನೊಳಕೊಂಡಿರುವ ಪುಸ್ತಕವು ಇನ್ನು ಸದ್ಯದಲ್ಲಿ ಪ್ರಕಟವಾಗುವದು.

ಮೊದಲನೆಯ ವರುಷದಲ್ಲಿ ಸಾಲೆಯ ಮಕ್ಕಳಿಗೆ ಗಣಿತದ ಪಾಠಪಟ್ಟಿ ಮತ್ತು ಕಲಿಸುವದನ್ನು ಕುರಿತು ಸೂಚನೆಗಳು ಕೊಡಿರುವ

ಗಣಿತ ಪಾಠ.

ಕ್ರಯ 0—2—6.

ವ್ಯವಹಾರ ವ್ಯಾಪಾರಗಳ ಬಗ್ಗೆ ಬೇಕಾಗುವ ಕೋರ್ಟು ಫೋರ್ಮು, ಗೇಣಿ ಚೀಟಿ ಫೋರ್ಮುಗಳು, ಬೀಲು ಯಾನೆ ಪಟ್ಟಿ ಫೋರ್ಮುಗಳು ನಾನಾ ಬಗೆಯ ಲೆಕ್ಕದ ಪುಸ್ತಕಗಳು.

ಇವೆಲ್ಲವು ದೊರೆಯುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು ದ. ಕ.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ, ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ½ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಪ್ತಿಸ್ಥಳ:—

ಎಚ್. ಆರ್. ಮೋದಿ ಎಂಡ್ ಕೋ,

10 [illegible]

H. R. MODY & Co.

[illegible]

ಇಮಿಟೇಶನ್ ವಜ್ರದ ಒಡವೆಗಳು.

ಈ ಒಡವೆಗಳು ಅಪರಂಜಿ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿ ಬಿಳೇ ಕಲ್ಲು, ಕೆಂಪು ಕಲ್ಲುಗಳು ಇಟ್ಟು ಕಟ್ಟಿರುತ್ತದೆ. ಈ ಒಡವೆಗಳು ಅಮೇರಿಕಾ, ಇಂಗ್ಲೆಂಡ್ ದೇಶಗಳಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ 4 ವರುಷಗಳ ವರಿವಿಗೂ ಬಣ್ಣ ಹೋಗುವದಿಲ್ಲವೆಂದು ಗ್ಯಾರಂಟಿ ಕೊಡುತೇವು. ಅಮೇರಿಕಾ, ಇಂಗ್ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ಹೇಳುವವರಿಗೆ ಅವರ ಹಣವನ್ನು ವಾಪಸು ಕೊಡುವೆವು.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವವು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿದೆ. 7 ಕಲ್ಲಿನ ಬೆಂಡೋಲೆ ಕ್ರಯ ರೂ. 2—0—0, 7 ಕಲ್ಲಿನ (ಕೆಂಪು) ಬೆಂಡೋಲೆ ಕ್ರಯ ರೂ. 3—8—0.

ಕುರುಡು ಬಾವಲಿ.

ಈ ಬಾವಲಿಗಳು ಈಗತಾನೇ ಸೀಮೆಯಿಂದ ಬಂದಿವೆ. ಇದರಲ್ಲಿ ಕೆಂಪಿನದು ಬಿಳಿಕಲ್ಲಿನದು ಉಂಟು. ಇವು ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿರುತ್ತೆ. ಈ ಕಲ್ಲುಗಳು ಬಹು ಪ್ರಕಾಶವುಳ್ಳವುಗಳೂ ಬಹು ಸುಂದರವಾದ್ದು. ಇದಕ್ಕೆ ಮುತ್ತುಗಳು ಕಟ್ಟಿರುತ್ತೆ.

ಇದರ ಬೆಲೆ ಜೊತೆ 1ಕ್ಕೆ ರೂ. 2—8—0.

ಬುಲಾಕು.

ಈ ಬುಲಾಕುಗಳನ್ನು ಇಮಿಟೇಶನ್ ವಜ್ರದ ಕಲ್ಲುಗಳಿಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿ ಅಪರಂಜಿ ಭಂಗಾರದ ಗಿಲೀಟು ಮಾಡಿರುವದು. ಇದರಲ್ಲಿ ಕೆಂಪು, ಬಿಳುಪು, ಹಸರು ಬಣ್ಣದಲ್ಲಿ ಇರುವವು.

ಇದರ ಬೆಲೆ 1ಕ್ಕೆ ರೂ. 1—8—0.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಸಿಗರೇಟ್, ಚುಟ್ಟ ಸೇದುವವರಿಗೂ ರಾತ್ರಿಯಲ್ಲಿ ತಿರುಗುವವರಿಗೂ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ. ಕ್ರಯ ರೂ. 1—8—0.

ಕೈಯಲ್ಲಿ ಕಟ್ಟುವ ಗಡಿಯಾರ.



ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಅಥವಾ ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಷ್ಟಪಟ್ಟಾಗ್ಯೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾಗದು. ಇದರ ಕ್ರಯ ರೂ. 4—8—0.

ವಿಳಾಸ:— **ಪಿ. ಗೋಪಾಲ್ ಎಂಡ್ ಕೋ.**
28 ಹನುಮಂತರಾಯಿ ಕೋಯಿಲ್ ಬೀದಿ,
ಪಾರ್ಕ್‌ಟೌನ್, ಮದರಾಸು.

ಡಾಕ್ಟರ್ ನವರತ್ನರ ಪಕ್ಷ್ಮಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಶ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲ ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

[illegible]

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪಿತ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಪತ್ತವಾಗುತ್ತದೆ. ೨೦—೨೫ ವರ್ಷಗಳ ಹಳತ, ತ್ರಾಸ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೬ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈ ಕಾಲುಗಳುಂಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ.

ಗಿರಗಾಂವ ನಂ. ೪ ಮುಂಬಯಿ.

ಇಕ್ಲಿಪ್ಸ ದ್ರಿಪ್ಸ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗೆ ಹೀಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ.

ಮದ್ದಿನ ಗುಣ ಪರೀಕ್ಷಿಸಿ ನೋಡಿರಿ!! ಬೆಲೆ ಕಡಿಮೆ! ಖಾತ್ರಿಯಾದ ಗುಣ!

ಮೂತ್ರಗುಚ್ಛ, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ.

ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ಇಕ್ಲಿಪ್ಸ ಬಾಮ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುರುಕು, ತುರಿಕಜ್ಜಿ, ಮೂಲವ್ಯಾಧಿ, ಬೆಂಕಿಯಬೊಕ್ಕೆ, ಮೊಡವೆ, ಜೇಣು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1ಕ್ಕೆ 0—8—0. ವಿ.ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

ಕಾಜಾ ಯುಕಲಿಪ್ಟಸ್ ತೈಲ 5 ಆಣೆ; ಟೂರಕಟ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ ಏಜನ್ಸಿ, ಕಾಕಿನಾಡಿ—ಪೋಸ್ಟು, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಉಚಿತವು!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಉಚಿತವು!!

ಅಜೇಯ ಶತ್ರುವು.

ಅಜೀರ್ಣ, ರಕ್ತದೋಷ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ ವಾರ್ಧಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನ ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ದ ಸೇವನೆಯಿಂದ—ವೀರ್ಯವು ಕರಗಿಹೋಗುತ್ತಿದ್ದರೂ, ಸ್ವಪ್ನದೋಷವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ಸೆಳೆತವಿದ್ದರೂ, ಹಸಿವು ಇಲ್ಲದಿದ್ದರೂ, ಮಲಬದ್ಧತೆಯು, ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವು ಒಳ್ಳೇ ಸ್ಥಿತಿಯಲ್ಲಿರುವದು. ಈ ಮುರಬ್ಬಾದ ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿಲ್ಲವೆಂದು ಸ್ಥಾಪಿಸಬಹುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವದು. ಹಾಗೆ ಸ್ಥಾಪಿಸುವವರು ಬಹುಮಾನದ ಹಣವನ್ನು ನಾನು ಕೊಡದೆ ಹೋದರೆ ಸರಕಾರದ ಮೂಲಕ ವಸೂಲ ಮಾಡಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅಗರಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಸರಿ ವಿಧವಾದ ಚಿಕಿತ್ಸೆಯು ಇಲ್ಲ. ಸೀಸೆ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಸೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಸೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಉಪಯೋಗಿಸಬಹುದು ಸುವಾಸನೆಯಾಗಿ ತಯಾರಿಸಿರುತ್ತೆ. 1 ಸೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತಕರಿಗೆ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ... ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರೀಟೇಲಾಗಿಯೂ ... ಮಂಗಳೂರಿನಲ್ಲಿರುವ ... ಮಾರ್ಚೆಂಟರವರಲ್ಲಿಯೂ ಸಹ ದೊರೆಯುತ್ತೆ.

... ಮಾರ್ಟ್, ಸೋಲ್ ಏಜೆಂಟ್ಸ್, ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,

ಸುಗಂಧಶಾಲೆ, ಮೈಸೂರು.

ನೋಡಿ!

ಅಶ್ವಿನಿಕುಮಾರಿ ... ಮುಟ್ಟುಸ್ರಾವ ... ಗರ್ಭೋತ್ಪತ್ತಿ ... ಸಂತಾನ ... ಸ್ಟಟ್ಟವೇ ಇರುವದರಿಂದ ... ರೂ. ೧ ... ಖರ್ಚು ಬೇರೆ.

M. S. Rao Co.

Avenue Road,

Bangalore City.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಗಳಾದ ಸ್ತ್ರೀಯರಿಗೆ ಉಂಟಾಗುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಳ್ಳೆ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಕೂರಿಯಬೇಕಾದುದು ನಿಜವಾಗಿಯೂ ತಪ್ಪುತ್ತದೆ.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೀನ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ. 5—0—0.

ಶಿಷ್ಟವಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗ್ಮೋರ್ ಮೇನ್ ನಂ. 2, ಮದ್ರಾಸ್ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಚಳಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿಷ್ಠಿತ ಖ್ಯಾತ ರೋಗಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ಬಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ, ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು, ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಸಂತೋಷಪಡುತ್ತೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮಾತ್ರೆಗಳಂತೆ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮುಂಬೈಲ್ಯಾಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಬಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿ ರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ। ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ನ್ಯಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತೆತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೇಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೇಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

"ಗ್ರಾಹಕರೇ ಒಮ್ಮೆಗೆ ಸಂದರ್ಶಿಸಿರಿ."

ನಮ್ಮಲ್ಲಿ ಎಲ್ಲಾ ತರದ ಸುಗಂಧ ಸಾಹಿತ್ಯಗಳೂ, ಇಂಗ್ಲಿಷ್ ಮತ್ತು ಸ್ವದೇಶಿ ಸಾಬೂನುಗಳು, ಸುಗಂಧ ತೈಲಗಳು, ಆರಾರೂಟ್, ಬಾರ್ಲಿ, ಕೋಕೋ, ಚಾಕೊಲೆಟ್, ಬಿಸ್ಕಿಟುಗಳು, ಟೊಯಿಲೆಟ್ ಪೌಡರುಗಳು, ತಲೆ ಕಾಲಕ್ಕೆ ಅನುಕೂಲವಾದ ಮಿಲ್ಕ್ ಆಫ್ ರೋಜ್ ಮತ್ತು ಲೈಮ್‌ಜ್ಯೂಸ್ ಗ್ಲಿಸರಿನ್, ಪೋಮೆಡ್ ವೆಸ್ಲಿನ್, ತೈಲಾಂಧ್ರ ಮತ್ತು ಚೆಪ್ಪರ ಲಾಂದ್ರಗಳು, ಕಪ್ ಮತ್ತು ಸಾಸರುಗಳು, ಚೊಕ್ಕಲೇಟ್ ಮತ್ತು ಪೆಪ್ಪರ್‌ಮಿಂಟುಗಳು, ಟೇಬಲ್ ಲ್ಯಾಂಪುಗಳು, ಎನಿಮ್ಯಾ ಲೋಹದ ಸಾಹಿತ್ಯಗಳು, ಮುಖ ನೋಡುವ ಕನ್ನಡಿಗಳು, ವಾಚು ಮತ್ತು ವಾಚಿನ ಸರಪಣಿಗಳು, ಮಕ್ಕಳು ಆಡುವ ಸಾಹಿತ್ಯಗಳು, ಫೌಂಟಿನ್‌ಪೇನು ಮತ್ತು ಇಂಕುಗಳು, ಕ್ಯಾಶ್ ಬೋಕ್ಸ್‌ಗಳು, ದೃಷ್ಟಿ ಚಶ್ಮಗಳು, ಪೇಟೆಂಟ್ ಔಷಧಿಗಳು, ರಖಮಾಗಿಯೂ ಚಿಲ್ಲರೆಯಾಗಿಯೂ ಅತೀ ಸುಲಭ ದರದಲ್ಲಿ ದೊರಕುವದಲ್ಲದೆ ಈ ಕೆಳಗೆ ಕಾಣಿಸಿದ ಸಾಹಿತ್ಯಗಳಿಗೆ ನಾವು ಮುಖ್ಯ ಏಜಂಟರಾಗಿರುವೆವು. ಕಾಮಿನಿಯಾ ತೈಲ ಮತ್ತು ಒಟ್ಟೋ-ದಿಲ್‌ಬಹಾರ್ ಅತ್ತರುಗಳು ಮತ್ತು ಕಾಮಿನಿಯಾ ಕಂಪೆನಿಯಲ್ಲಿ ಆಗುವ ಪ್ರತಿ ಒಂದು ~~ಸಾಹಿತ್ಯ~~ಗಳು, ಅಮೃತಾಂಜನ, ಬಾಲಾಮೃತ, ಸೆಂಟೋನ್, ಡೈಮಂಡ್ ಸೋಪುಗಳು, ಜಪಾನ್ ದೇಶದ ಜಂಕುಗಳಿಂದ ಆಗುವ ಕಡ್ಡಿಗಳು, ಇದೂ ಅಲ್ಲದೆ ಅನೇಕ ರೀತಿಯ ಪೆನ್ನಿ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಮ್ಮೆಗೆ ನಮ್ಮಲ್ಲಿಗೆ ಬಂದು ಸಂದರ್ಶಿಸಿದರೆ ನಮ್ಮ ದರಗಳು ತಮಗೆ ಅನುಕೂಲವಾಗಿಯೇ ಇವೆಯೆಂದು ತಿಳಿಯಬಹುದು. ರೋಯಲ್ ದಂತಮಂಜನ 6 ಡಬ್ಬಿಗಳ ಬೆಲೆ ಆಣೆ 8.

ದಿ ಉಲನ್ ಮಾರ್ಟ್,
ಮಂಗಳೂರು, ದ. ಕ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. [illegible] ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ತಿ[illegible]ರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು. ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ದ್ರೋಹಕರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟಾಂಪು, ಕೋರ್ಟುಫೀಜು, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಪಟೇಲರ ಕೋಡ್, ಗ್ರಾಮ ಮುನಸೀಫ್ ಕೋರ್ಟು [illegible], ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ [illegible] ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿ [illegible] ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾ[illegible]

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,
[illegible]

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ ೨.

ದೆಮಿಯಾನ ಮತ್ತು ಕಂಪೌಂಡ್ ಫೋಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯವಶ್ಯಕ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬೆಳುವಾಗಿ ನಿರ್ಮಲವಾಗುವುದಲ್ಲದೆ ರೋಗದ ಶಕ್ತಿಯನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ:**— ಪ್ರಸವವಾದ ಲಾಗಾಯಿತು 30 ದಿನಗಳವರೆಗೆ ಉಪಯೋಗಿಸುವದರಿಂದ ಖಾರ, ಲೇಹ್ಯ ಇವುಗಳ ಆವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 2—0—0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳ ತೊಪ್ಪು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ಪುರೋಹಿತವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ತನ್ನ ವಿಳಾಸ— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ದುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋವರ್ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಮಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರೆಗೆ ಸೀಮೆಯಿಂದ ತರಿಸಿರುತ್ತೇವೆ.



ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್‌ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ	ರೂ.	3—12—0.
ಗಡಿಯಾರ 1ಕ್ಕೆ ಕ್ರಯ	ರೂಪಾಯಿ	3—0—0.
ಪೇನಾ ,,	,,	1—0—0.

ವಿಳಾಸ:— ವೈರಂ ಅಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಛಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಡೊಂಗರೆ, ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹೊಸದಾಗಿ ಕಂಡುಹಿಡಿಯಲ್ಪಟ್ಟು ಇರುವ

ಕ್ರೌನ್ ಸೋಪ್.

ಕೆಡಲಿಲ್ಲ. ಕಲೆಯಿಲ್ಲ. ಉರಿಯಿಲ್ಲ.

ಇದು ಶರೀರದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅಚ್ಚುಕಟ್ಟಾಗಿ ತೆಗಿಯುತ್ತೆ. ನೋಯುವದಿಲ್ಲ. ಚರ್ಮಕ್ಕೆ ಕಲೆಯಾಗದು. ಅತರಲು ದೂರುವ ರೋಮ ಸಂಹಾರಿಯನ್ನು ಈ ಸೋಪನ್ನು ತೆಗದುಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತಾ ಪತ್ರಿಕೆಗಳು ಬಂದಿರುತ್ತೆ. ಅದರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್‌ಗೋಲ್ಡ್ ಉಂಗುರ ಇನಾಂ. ರೂ. 1-10-0.

ಯೋಗ್ಯತಾ ಪತ್ರಿಕೆ.

ಅನೇಕಲ್ ಪೋಸ್ಟು ಮಡಿವಾಳ ಗ್ರಾಮದಲ್ಲಿ ಇರುವ ಮಾಸಪ್ಪಾ. **ಮೊದಲಿಯಾರ್** — ನಿಮ್ಮ ಕಂಪೆನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದರಿಂದ ಬಹಳ ಆನಂದವಾಯಿತು. ದಯಯಿಟ್ಟು ಇನ್ನೊಂದು ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು.

ವಿಳಾಸ:—
ಎಂ. ಎಚ್. ಸಿಂಗ್ ಅಂಡ್ ಕೋ,
ನಂ. 7-2ನೇ ನಾರಾಯಣನ್ ಸ್ಟ್ರೀಟ್,
ಮಿಂಟು ಪೋಸ್ಟು, ಮದರಾಸ್.

ನೋಟೀಸು.

ದಕ್ಷಿಣ ಕನ್ನಡಾ
ಒಫಿಶಿಯಲ್ ರಿಸೀವರರ ಕೋರ್ಟಿನಲ್ಲಿ.

(ಡಿಸ್ಟ್ರಿಕ್ಟ್ ಕೋರ್ಟ್ I. P. $\frac{4}{16}$) I. P. $\frac{59}{16}$

ಪಿ. ಲಕ್ಷ್ಮೀನಾರಾಯಣ ಮಲ್ಯ—ಅರ್ಜಿದಾರ, ಕ್ರೆಡಿಟರ್.
ಎದ್ರು
ಅಮ್ಮೆಂಬಳ ಬಾಲಕೃಷ್ಣ ಪೈ—ರೆಸ್ಪೊಂಡೆಂಟ್.

ಮೇಲಿನ ವಿವಾಳಿ ಅರ್ಜಿಯಲ್ಲಿ ಇನ್ಸಾಲ್ವೆಂಟನೆಂತ ಸ್ಥಾಪಿಸಲ್ಪಟ್ಟ ಅಮ್ಮೆಂಬಳ ಬಾಲಕೃಷ್ಣ ಪೈಗಳ ಬಾಬ್ತು ತಾರೀಕು 26—2—1917ರಲ್ಲು ಪ್ರಕಟ ಮಾಡಿದ ಏಲಂ ಇಸ್ತಿಹಾರಿ ನಿಂದ ತೋರುವ ಸ್ಥಿರ ಆಸ್ತಿಗಳು ಕೆಳಗೆ ದಸ್ಕತು ಮಾಡಿದವರ ಕದ್ರಿ ಗುಡ್ಡೆಯಲ್ಲಿರುವ ಆಫೀಸಿನಲ್ಲಿ ತಾ. 11—4—1917ನೆ ಮಧ್ಯಾನ್ಹ 2 ಘಂಟೆಯಿಂದ ಒಹಿರಂಗವಾಗಿ ಏಲಂ ಮಾಡುವದೆಂತಲೂ ಇಸ್ತಿಹಾರು ನಕಲು ಈ ಹೆಜ್ಜೆನ ಅನುಭವ ಅಪೇಕ್ಷಿಸುವವರು ಸದರಿ ಆಫೀಸಿನಲ್ಲಿ ಪಡಿಯಬಹುದೆಂತ ಸಹ ಈ ಮೂಲಕ ಪ್ರಕಟಿಸೋಣಾಗುತ್ತದೆ.

ಮಂಗಳೂರು, } B. M. Hegde,
ತಾ. 26—3—1917. } ಒಫಿಶಿಯಲ್ ರಿಸೀವರ್.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. $\frac{116}{17}$

ಪರಮೇಶ್ವರ ಮಂಜ—ವಾದಿ.
ಪುಟ್ಟ ಆಚಾರಿ ಕೂಡಾ 2 ಜನ—ಪ್ರತಿವಾದಿರು.

ಸದರಿ ವಾದಿಯು ಪ್ರತಿವಾದಿರ ಮೇಲೆ ಗೇಣಿ ಬಾಕಿ ರೂಪಾಯಿ 50—14—0ಕ್ಕೆ ಮಾಡಿದ ವ್ಯಾಜ್ಯವು ತಾ. 12—4—17ಕ್ಕೆ ತನಿಕಿಗೆ ಇಟ್ಟಿರುತ್ತದೆ.

ಕುಂದಾಪುರ, } **N. Subbannaya,**
ತಾ. 23—3—17. } *Pleader for Plaintiff.*

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳಿಂಬ ಈ ಘೃತವು ಪ್ಲೇಗ್‌ಬ್ಯೂಬೊ ಎಂಬ ಗಡ್ಡೆಯನ್ನೂ ಹುಣ್ಣು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಒಂದು ಮಾತು!

ಸರಕಾರದವರು ಮತ್ತು ಲೋಕಲ್ ಬೋರ್ಡುಗಳು ಆಸ್ಪತ್ರೆಗಳನ್ನು ಪ್ರತಿ ತಾಲೂಕು ಪಟ್ಟಣಗಳಲ್ಲಿಯೂ ಸ್ಥಾಪಿಸಿರುತ್ತಾರೆ. ಬಹಳ ಜನರು ಇವುಗಳಿಂದ ಪ್ರಯೋಜನವನ್ನು ಪಡಿಯುತ್ತಿರುವರು. ರೋಗಕ್ಕೆ ತಕ್ಕ ಶೋಧನೆ, ಶೋಧನೆಗಳಿಗೆ ಬೇಕಾಗಿರುವ ಔಷಧಸಂಗ್ರಹ ಇವೆರಡರಿಂದಲೇ ಈ ಆಸ್ಪತ್ರೆಗಳು ಮೆರೆಯುವಂಥಾದ್ದು. ಇಷ್ಟು ಹೇಳಿದ ಮೇಲೆ ಆಸ್ಪತ್ರೆಗಳ

ಇಂಥಾ ಔಷಧ ಸಂಗ್ರಹಗಳು

ಏನೆಂದು ವಿವರಿಸಬೇಕೆಂತಿಲ್ಲ. ಆದರೆ ಆಸ್ಪತ್ರೆಗಳ ಅನುಕೂಲವು ಸದಾ ಸರ್ವದಾ ಒಂದೇ ರೀತಿ ದೊರಿಯುವದು ಸರ್ವರಿಗೂ ಸಾಧ್ಯವಲ್ಲದ್ದರಿಂದ

ಅಂಥಾ ಔಷಧಿಗಳ ಸಂಗ್ರಹ

ವನ್ನು ಮಾಡಿಕೊಂಡು

ಕಳದ ಇಪ್ಪತ್ತು ವರುಷಗಳಿಂದ

ಪ್ರಖ್ಯಾತ ಡಾಕ್ಟರರುಗಳ ಸಹಕಾರದಿಂದ ಔಷಧಿಗಳನ್ನು ಕೊಡುತ್ತಿದ್ದೇವೆ.

ದರಗಳು ಈ ಔಷಧಗಳ ಕ್ರಯದ ಮಾಹಿತಿಯಿಲ್ಲದ ಗ್ರಾಮಸ್ಥರಿಗೂ ಇತರರಿಗೂ ಒಂದೇ ರೀತಿ ಸುಲಭವಾಗಿರುವವು. ಹಲವು ಡಾಕ್ಟರರುಗಳಿಗೆ ಔಷಧಗಳನ್ನು ಸಂಗ್ರಹಿಸುತ್ತಿದ್ದೇವೆ.

ನಮ್ಮ ವಿಳಾಸ:—
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಔಷಧಿ ವ್ಯಾಪಾರಸ್ಥರು,
ರಥಬೀದಿ, ಮಂಗಳೂರು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧-೮-೦. ಮಧ್ಯಮ ತರದ ಪೆಟ್ಟು ೧ಕ್ಕೆ ೨-೦-೦. ದೊಡ್ಡ ಪೆಟ್ಟು ಉತ್ತಮತರಹ ೧ಕ್ಕೆ ರೂ. ೪—೦—೦.

[illegible]

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದುಯಂ ರೂಪ್ಯಾ ೧ಕ್ಕೆ ೮ ತೊಲೆ, ಶೀಯಂ ರೂಪ್ಯಾ ಒಂದಕ್ಕೆ ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೬ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾಗುವುದು. ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.
SIROMANI NARAYANA CHARYA & CO,
Choukhambay,
BENARES CITY.

ಪಂಡಿತ್ ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಮಿಶ್ರಣದ ಬರೇ 48 ದಿವಸಗಳ ಸೇವನೆಯಿಂದ ಶ್ವಾಸಕಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ಮೇಹ, ಶೀಘ್ರಮೂತ್ರ, ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಹರು.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಿಗಳೂ ಕಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರಿಯಿರಿ.

ವಿಳಾಸ:—ಪರಿಮಳಾಂಜನ ಡಿಪ್ಪೋ,
ಕದ್ರಿ, ಮಂಗಳೂರು.
ಶಂಕನಾಡಿ ಪೋಸ್ಟು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ,
ಪೋಸ್ಟು ಪೊಳಲಿ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೬ನೇ ಎಪ್ರಿಲ್ ಶುಕ್ರವಾರ ೧೯೧೭. | ಸಂಚಿಕೆ ೧೪.

ಕೋರಾ ಮತ್ತು ಸೀತ ಸಿಡುಬು ಯಾ ಕೊಟ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡೆಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವೆಂತ ತೋರಿಬರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದೆನೇ ಆಗುವಂಥಾದ್ದು ಬಹುಪಕ್ಷ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವು ಅಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಬಾಧೆಯು ನಿಂತಕ್ಷಣವೇ ತಲೆದೋರುವು. 'ಕೋರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೋಟ್ಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕೋರಾ ನಂತರ ಬಂದುಬಿಟ್ಟದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥಾದ್ದೆ. ಆದ್ದರಿಂದ ಈ ರೋಗಗಳು ತಗಲಿದಾಗ ಹೆಚ್ಚಿನ ಜಾಗ್ರತೆಯು ಉಪಶಮನವು ಅಗತ್ಯವಾಗಿರುವದು.

ಹೊಮಿಯೊಪಥಿಕ್ ಮತ್ತು ಟಿಸ್ಯು ಔಷಧಿಗಳು.

ಇವುಗಳ ಮೂಲಕ ಈ ಉಪಶಮನವು ಬಹಳ ಸುಲಭದಲ್ಲಿ ಮಾಡಲು ಸಾಧ್ಯವಾಗುವದು. ಈ ಎರಡು ರೋಗಗಳು ಪ್ರಾಪ್ತವಾದ ಕಾಲದಲ್ಲಿ ಈ ಔಷಧಿಗಳಲ್ಲಿ ಯಾವ್ಯಾವದನ್ನು ಹೇಗೇಗೆ ತಕ್ಕೊಳ್ಳುವುದು ಇದರ ಅನುಪಾನವೇನೆಂಬುದನ್ನು ಸೂಚಿಸುವ ಅನುಪಾನ ಪತ್ರಗಳೂ ಈ ಔಷಧಗಳೂ ನಮ್ಮಲ್ಲಿ ದೊರಿಯುತ್ತವೆ.

'ಕೋಟ್ಲೆಯ ಕಲೆಗಳು ಬೇಗನೆ ವಾಸಿಯಾಗುವಂಥಾ ಮುಲಾಮು ತಯ್ಯಾರಿರುವದು.

ಕ್ರಯ ಕರಡಿಗೆ 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಉುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು

ಇತರರಿಂದ ಏಕೆ ಪಡೆಯಬೇಕು?

ಬಾಟ್ಲು 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು [illegible] ಗ್ರಹಿಸಲಾಗುವದಿಲ್ಲ. ಹೆಚ್ಚೇನು!

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು

ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಿಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ

ಗಜಕರ್ಣದ ಮುಲಾಮು.

ಡಬ್ಬಿ 1ಕ್ಕೆ ಆಣೆ 6.

ಮಕ್ಕಳ ಎಕ್ಸಿಮಾ ಎಂಬ ಹುಣ್ಣುಗಳಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನು ದೇಶಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಶಿಯೇಶನ್,

[illegible]

ಸ್ವದೇಶಾಭಿಮಾನಿ

ಕಳೆದ 10 ವರುಷಗಳಿಂದ ಪ್ರಕಟಿಸಲ್ಪಡುವ ಕನ್ನಡ ವಾರಪತ್ರಿಕೆಯು.

ದಕ್ಷಿಣ ಕನ್ನಡದಲ್ಲಿ ಇದೊಂದರ ಹೊರತು ಬೇರೆ ವಾರಪತ್ರಿಕೆಗಳಿರವು.

ವಾರ್ಷಿಕ ಚಂದಾ ರೂ. ೧—೮—೦.

ಅಂಚೆ ವೆಚ್ಚ ಸೇರಿ ರೂ. ೨—೫—೦.

ವ್ಯಾಪಾರಗಳ ಜಾಹೀರಾತು ಮೊದಲಾದವುಗಳನ್ನು ಪ್ರಕಟಿಸಲು ಅನುಕೂಲವಾದ ಪ್ರಕಟಣಾ ಭಾಗವು ಪತ್ರದೊಂದಿಗೆ ಸೇರಿರುವದು. ಪ್ರಕಟಣಾವ ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ಸ್ವದೇಶಾಭಿಮಾನಿ ಆಫೀಸು,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಳ್ಳೆ ಗೊಬ್ಬರ! ಅವ್ವಲ್ ಈಟು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನುಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾಗ್ವಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda.
1, Royal Exchange Place, Calcutta.

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸೈಜು ಸ್ವಿಸ್ ಕವರ್ ಬೈಂಡು	0—8—0
ಚಿಕ್ಕ ಸೈಜು ಕೆಲಿಕೊ ಬೈಂಡು	0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ

ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.

1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜೆನ್ಸಿ,
ವಿಟ್ಲ. ದ. ಕನ್ನಡ.

ಪ್ರಶ್ನೋತ್ತರ ಲೇಖ್ಯಬೋಧಿನಿ.

(6ನೆಯ ಛಾಪೆ.)

ಅರ್ಜಿ, ಪತ್ರ, ರಶೀದಿ, ದಾವೆ, ಭಾಗಪತ್ರ, ಉಯಿಲು ಮುಂತಾದ ಮಾದರಿಗಳೂ, ಎಲ್ಲ ಬಗೆಯ ಕಾನೂನುಗಳೂ ಇವೆ. ಕ್ರಯ ರೂ. 1-8-0.

" ಶಕ್ತಿ "

"ಭಾರತಿ" ಎಂಬ ವಂಗಭಾಷೆಯ ಸುಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕಿ ಶ್ರೀಮತಿ ಸ್ವರ್ಣಕುಮಾರಿ ದೇವಿಯಿಂದ ವಂಗಭಾಷೆಯಲ್ಲಿ "ಫುಲೇರ್ ಮಾಲಾ" (Fatel Garland) ರಚಿಸಲ್ಪಟ್ಟಿತು.

ಇದರಲ್ಲಿ ಮಹಮದೀಯ ಸಾಂಮ್ರಾಜ್ಯ ಸಿಂಹಾಸನವನ್ನು ಹಿಂದೂ ಸಾಮಂತ ರಾಜನೇರುವಿಕೆಯೂ, ರಾಜಪುತ್ರ ಯುವಕನೊಬ್ಬನು ಮಹಮದೀಯಾಂಗನೆಯ ಕೈ ಹಿಡಿದು ಚಕ್ರವರ್ತಿಯಾದುದೂ, ಅತ್ಯದ್ಭುತ ವರ್ಣನೆಯವು. ಕಥಾ ನಾಯಕಿಯಾದ "ಶಕ್ತಿ"ಯ ಧೈರ್ಯಸ್ಥೈರ್ಯ ಸಾಹಸಗಳು ಎಂಥವರ ಮನವನ್ನಾದರೂ ಆಕರ್ಷಿಸದಿರದು. ಒಟ್ಟಿನಲ್ಲಿ ಅನುರಾಗ ವಿಹೀನವಾದ ದಾಂಪತ್ಯದ ಪರಿಣಾಮವನ್ನು ಚಿತ್ರಿತವಾಗಿ, ಸ್ವಾನುರಾಗ ಸಹಿತ ದಾಂಪತ್ಯದ ಪರಿಣಾಮವನ್ನು ಸೂಚಿಸುತ್ತಿದೆ. ಆಬಾಲವೃದ್ಧ ಸ್ತ್ರೀ ಪುರುಷರೆಲ್ಲರೂ ಓದತಕ್ಕದು.

ಕ್ರಯ ಹನ್ನೆರಡಾಣೆ ಮಾತ್ರ.

ಶ್ರೀಮದಧ್ಯಾತ್ಮ ರಾಮಾಯಣ.

ಆದಿಕಾವ್ಯವು. ೭ ಕಾಂಡಗಳಲ್ಲಿರುವ ಪ್ರತಿ ಒಂದು ಶ್ಲೋಕಕ್ಕೂ ಪ್ರತಿಪದ ಟೀಕು ತಾತ್ಪರ್ಯ ಸಹಿತ [illegible] ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ ಮತ್ತು ಇದು ಉತ್ತಮವಾದ ಕಾಗದಗಳುಳ್ಳದ್ದಾಗಿಯೂ ಮಡಿಯಾಗಿರುವ ಸಮಯದಲ್ಲಿ [illegible] ಅನುಕೂಲವಾಗುವಂತೆ ಉತ್ತಮರೀತಿ [illegible] ಪ್ರತಿಯಾದ [illegible] ಈ ಪುಸ್ತಕದ ಪ್ರತಿಯೊಂದನ್ನು [illegible] ಪ್ರತಿಗಳೇ ಇರುವದರಿಂದ [illegible]

ಕ್ರಯ ರೂ. [illegible]

ವಿಳಾಸ:— [illegible]

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾವಣ್ಯ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿತವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಸಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುವನ್ನೂ [illegible] ವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಕಷ್ಟ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ [illegible] ಅತ್ಯುತ್ತಮವು. [illegible]ವಾಗಿದೆ. ರಾತಲಿಗೆ ೨ ರೂ.

೫. ಪೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಬಾರುಣವಾದ [illegible] ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ [illegible]ವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನಕ್ಕಿಂತ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರ [illegible]ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. [illegible], ಕಫ, ಕ್ಷಯಗಳ [illegible]ಮನವು. ರಾತಲಿಗೆ ೩ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ಹಸ್ತಮೈಥುನ ಮೂಲಕವಾದ ಸ್ವಾಸ್ಥ್ಯಹೀನ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಶಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ.

೧೧. ವಾತಪ್ರಹಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟ ನೋವು, [illegible], ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾ[illegible] ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಂಧಕರ್ಪೂರ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿತವಾಗಿದೆ. [illegible]ಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರತಿಷ್ಠಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡ [illegible] ಇಂಗ್ಲಿಷಿನಲ್ಲಿಯೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:— ಎಸ್. ಎಮ್. ನಾಥ್ ಮತ್ತು ಕಂಪೆನಿ, ವೆಪರಿ ಪೋಸ್ಟು ಮದರಾಸು.

S. M. Nath & Co., *Ayurvedic Chemists.*
Vepery Post, MADARS.

ಹಲ್ಲುನೋವುಗಳಿಗೆ
ಖಾತ್ರಿಯಾದ ಔಷಧಿ.

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ.
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ —
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಶೋಪುಗಳಲ್ಲಿ ದೊರಕುವದು.

STANY BROTHERS
Sole Agents
M. C. C's, Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಯ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟಿದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 167, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!
ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ.

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ.
೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆವೆಚ್ಚ ಸೇರಿ ವರ್ಷಕ್ಕೆ ೩ ರೂ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—

ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

ಮದರಾಸ್ ಮೇಲ್ ವಾಚ್.

6 ವರುಷಗಳ ಗ್ಯಾರಂಟಿ.
15 ಬಹುಮಾನಗಳ ಸಹಿತ ರೂಪಾಯಿ 4—0—0.
ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲೆ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಹುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಅರುಳಪ್ಪನ ಬೀದಿ, ಮದರಾಸ್.

ಯಂ. ಯಸ್. ರಾವ್ ಕಂಪೆನಿ,
ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಿಷಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0— 6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0— 8—0
ಅಮೃತ ಪುಳಿನ ,,	0—10—0
ಇಂದಿರಾ ಕ್ಕೈ. ಮು.	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0— 4—0
ಪ್ರಫುಲ್ಲೆ ,, ,,	0—12—0
ಅಂಬಾಲಿಕೆ (ಹೊಸ ನಾವಿಲ್)	0— 1—6
ಕುಸುಮ ,,	0— 1—0
ರಾಧಾನಾಥ ,,	0— 2—0
ಸುಭದ್ರೆ ,,	0— 5—0
ಚಂದ್ರಹಾಸ (ಹೊಸ ಕಥೆ)	0— 1—0
ಧ್ರುವ ,,	0— 2—0
ಮಕ್ಕಳ ತಿದ್ದುವಿಕೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಷ್ಟಕ ಮಂಜರಿ	1— 0—0
,, ಸಂಗೀತ ಸಮಯಸಾರ	1— 4—0
ಮಾತೃನಂದಿನಿ (ಶ್ರೀ ತಿರುಮಲತಮ್ಮ)	1— 4—0
ದಿಕ್ಪ್ರತು ,,	1— 2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"×28"ಕ್ಕೆ	0— 1—0

ಯೂರೋಪದ ಮಹಾ ಯುದ್ಧ.

ಜರ್ಮನರು ಫ್ರಾನ್ಸ್ ರಣರಂಗದಲ್ಲಿ ತಾವಾಗಿಯೇ ಹಿಂದೆ ಹಿಂದೆ ಸರಿದು ಹೋಗುತ್ತಿರುವದನ್ನು ಈಗ ನಿಲ್ಲಿಸಿ ಹಿಂದಿನ ನೆಲೆಗಳಿಗಿಂತ ಸುಲಭವಾಗಿ ಕಾಪಾಡಿಕೊಳ್ಳಬಹುದೆಂದು ಆಲೋಚಿಸಿರುವ ನೆಲೆಗೆ ಸೇರಿಕೊಂಡು ಅಲ್ಲಿ ತಮ್ಮ ಸೇನೆಯನ್ನು ಬಲಪಡಿಸಿಕೊಂಡಿರುವರು. ಬ್ರಿಟಿಷರ ಎದುರು ನಿಂತು ಕಂಠಾಕಂಠ ಕದನ ಮಾಡುವ ಉದ್ದೇಶದಿಂದಲೇ ಜರ್ಮನರು ಹೀಗೆ ಹಿಂದೆ ಸರಿದುದು ಎಂದು ಟೀಕಿಸುತ್ತಿದ್ದ ಜರ್ಮನ ಪತ್ರಿಕಾಕಾರರ ಮಾತುಗಳು ಸುಳ್ಳೆಂದೂ ರಣರಂಗದ ವಿಸ್ತೀರ್ಣವನ್ನು ಕಡಿಮೆ ಮಾಡುವ ಉದ್ದೇಶದಿಂದಲೇ ಜರ್ಮನರು ಹೀಗೆ ಮಾಡಿರುವರೆಂದೂ ಈಗ ತಿಳಿದು ಬಂದಿದೆ. ಆದರೆ ಜರ್ಮನರು ಈ ಪ್ರಾಂತ್ಯದಲ್ಲಿ ಯಾವ ಉದ್ದೇಶದಿಂದ ಸೇನೆಯನ್ನು ಒಟ್ಟಿ ಹಾಕಿರುವರೆಂಬದು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿರುವದಿಲ್ಲ. ಜರ್ಮನರು ಪಶ್ಚಿಮ ರಣರಂಗದಲ್ಲಿ ನುಗ್ಗಿಹೋಗಿ ಕದನ ಮಾಡಲಿಕ್ಕಿರುವರೆಂದು ಕೆಲವು ವಾರ್ತೆಗಳೂ ರಶ್ಯಾದ ಸ್ಥಿತಿಯು ಈಗ ಚಪಲವಾಗಿರುವದರಿಂದ ರಶ್ಯಾ ರಣರಂಗದಲ್ಲಿ ನುಗ್ಗಿ ಹೋಗಿ ಭೀಕರ ಕಾಳಗ ಮಾಡಲಿಕ್ಕಿರುವರೆಂದು ಕೆಲವು ವಾರ್ತೆಗಳೂ ಇವೆ. ಇನ್ನು ಕೆಲವು ವರ್ತಮಾನಗಳಿಂದ ಜರ್ಮನರು ಇಟಲಿಯ ಕಡೆಗೆ ದೃಷ್ಟಿಯನ್ನಿಟ್ಟಿರುವರೆಂದು ತಿಳಿಯ ಬರುತ್ತದೆ. ಆದರೆ ಈ ವಾರ್ತೆಗಳೆಲ್ಲಾ ನಿಜವೆಂದು ಹೇಳಲಾಗುವದಿಲ್ಲ. ಯಾಕೆಂದರೆ ಎಲ್ಲಾ ರಣರಂಗಗಳಲ್ಲಿಯೂ ಒಂದೇ ಸಲ ನುಗ್ಗಿ ಹೋಗಿ ಕದನ ಮಾಡುವದೆಂದರೆ ಒಂದು ಆಟವಲ್ಲ. ಇದು ಜರ್ಮನರಿಗೆ ಅಸಾಧ್ಯ. ಹ್ಯಾಗೂ ಜರ್ಮನರು ಈಗ ಸದ್ಯಾ ಪಶ್ಚಿಮ ರಣರಂಗದಲ್ಲಿ ನುಗ್ಗಿ ಹೋಗಿ ಕದನ ಮಾಡುವ ಆಲೋಚನೆಯನ್ನು ಬಿಟ್ಟು ಅಲ್ಲಿ ಬಲಪಡಿಸಿಕೊಳ್ಳುವರೆಂದೂ ಬಹುಶಃ ಚಂಚಲಸ್ಥಿತಿಯಲ್ಲಿರುವ ರಶ್ಯಾದ ಮೇಲೆ ನುಗ್ಗಿ ಹೋಗಿ ಕದನ ಮಾಡಲಿಕ್ಕಿದ್ದಾರೆಂದೂ ಹೇಳಲು ಹಲವು ನಿರ್ದೇಶಗಳು ಈಗೀಗ ತೋರ ಹತ್ತಿವೆ. ಜರ್ಮನರು ರಶ್ಯಾದ ಮೇಲೆ ನುಗ್ಗಿ ಹೋಗಲಿಕ್ಕಿರುವ ಆಲೋಚನೆ ಮಾಡಿರುವದಾದರೆ ಇಂಗ್ಲಾಂಡ್ ಮತ್ತು ಫ್ರಾನ್ಸಿನ ಮೇಲೆ ನೆಲದಲಗಳ ಮೂಲಕ ಹಲ್ಲೆಮಾಡಿ ಯುದ್ಧವನ್ನು ಕೊನೆಗಾಣಿಸಬೇಕೆಂಬ ಜರ್ಮನರ ಮೂಲದ ಆಲೋಚನೆಯನ್ನು ಈಗ ಬಿಟ್ಟುಬಿಡದೆ ನಿರ್ವಾಹವಿಲ್ಲವಾಗಿದೆ. ಜರ್ಮನರು ಪಶ್ಚಿಮ ರಣರಂಗದ ಈ ಆಲೋಚನೆಯನ್ನು ಬಿಟ್ಟು ರಶ್ಯಾ ರಣರಂಗಕ್ಕೆ ತಿರುಗುವದಾದರೂ ಜರ್ಮನರ ಕ್ಷಾತ್ರಶಕ್ತಿಗೆ ಕೊನೆಗಾಣಿಸಬೇಕೆಂಬ ಉದ್ದೇಶದಿಂದಲೇ ಪ್ರಜಾಧಿಕಾರವನ್ನು ರೂಪಿಸಿಕೊಂಡ ರಶ್ಯಾ ಸರಕಾರವು ಜರ್ಮನರ ಈ ಆಲೋಚನೆಯನ್ನು ಈಡೇರಿಸುವದಕ್ಕೆ ಬಿಡುವ ಸಂದರ್ಭಗಳು ಕಡಿಮೆ ಇರುವದರಿಂದ ಅಲ್ಲಿಯೂ ಜರ್ಮನರಿಗೆ ಸುಪ್ರಸಾದವಿರದು. ಹೀಗೆ ಜರ್ಮನಿಯ ಈ ಆಲೋಚನೆಗೂ ಭಂಗಬರುವದಾದರೆ ಜರ್ಮನಿಯು ಇಟಲಿಗೆ ನುಗ್ಗಿ ಹೋಗುವ ಇನ್ನೊಂದು ಮಾರ್ಗವನ್ನು ಹಿಡಿಯಬಹುದು. ಆದರೆ ಜರ್ಮನರ ಈ ಆಲೋಚನೆಗಳೆಲ್ಲಾ ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿರುವದಿಲ್ಲವಾದರೂ ಸೇನಾಬಲ, ಯುದ್ಧಸಾಮಗ್ರಿ, ಆಹಾರಪದಾರ್ಥ, ದ್ರವ್ಯಸಹಾಯ್ಯ ಮೊದಲಾದ ಸೌಕರ್ಯಗಳು ೧೯೧೮ನೇ ವರ್ಷದ ವರೆಗೆ ಯುದ್ಧವನ್ನು ಮುಂದರಿಸುವವು ಜರ್ಮನಿಗೆ ಇಲ್ಲವಾದುದರಿಂದ ಹ್ಯಾಗೂ ೧೯೧೭ನೇ ಇಸವಿಯಲ್ಲಿ ಯುದ್ಧವನ್ನು ಮುಗಿಸಬೇಕೆಂಬ ದೃಢ ಸಂಕಲ್ಪವನ್ನು ಜರ್ಮನಿಯು ಮಾಡಿದೆಂಬದಕ್ಕೆ ಸಂದೇಹ ತೋರುವದಿಲ್ಲ.

ಪಶ್ಚಿಮ ರಣರಂಗ.

ಸೊಮ್ಮ ಮತ್ತು ಓಯಿಸ ಮಧ್ಯೆ ಜರ್ಮನರಿಗೂ ಫ್ರೆಂಚರಿಗೂ ತೀಕ್ಷ್ಣವಾದ ಕದನಗಳು ನಡೆದು ಜರ್ಮನರ ಸೇನಾ ಪಾಳೆಯಗಳು ಸೈಂಟ್ ಕ್ವೆಂಟಿನನ್ನು ಬಿಟ್ಟು ಹೋಗಿರುವವು. ಈ ಪ್ರಾಂತ್ಯದಲ್ಲಿ ಫ್ರೆಂಚರು ಪ್ರತಿ ಕದನದಲ್ಲಿಯೂ ಶತ್ರು ಸೇನಿಕರನ್ನು ಕೊಲ್ಲು ಶತ್ರುಸೇನೆಯಲ್ಲಿ ವಿಶೇಷ ನಷ್ಟವನ್ನುಂಟುಮಾಡಿರುವರು. ಜರ್ಮನರು ಸೈಂಟ್ ಕ್ವೆಂಟಿನನ್ನು ಬಿಟ್ಟುಹೋಗುವಾಗ ಬೆಂಕಿಕೊಟ್ಟು ಪಟ್ಟಣವನ್ನು ನಾಶ ಮಾಡಿರುತ್ತಾರೆ. ಅದಲ್ಲದೆ ಬೆಲ್ಜಿಯಮಿನಿಂದ ಬಂದ ವಾರ್ತೆಯಿಂದ ಜರ್ಮನರು ಜೀಬ್ರುಗ್, ಘೆಂಟ್ ಪ್ರಾಂತ್ಯಗಳ ಗ್ರಾಮಗಳನ್ನೂ ನಾಶಪಡಿಸುತ್ತಿದ್ದಾರೆಂತ ತಿಳಿದು ಬರುತ್ತದೆ. ಬ್ರಿಟಿಷರು ನ್ಯೂವಿಲ್ಲಿ ಬ್ರಿಟಿಷ್‌ನೊವಾಲ್ಸ್ ಗ್ರಾಮವನ್ನು ಹಿಡಿದಿರುತ್ತಾರೆ. ಇಲ್ಲಿ ತೀಕ್ಷ್ಣವಾದ ಕದನ ನಡೆದು ಶತ್ರುಗಳಿಗೆ ವಿಶೇಷ ನಷ್ಟವಾಗಿರುತ್ತದೆ. ಈ ಕದನಗಳಲ್ಲಿ ಬ್ರಿಟಿಷರು ಜರ್ಮನರ ಎರಡು ವಾಯುಯಾನಗಳನ್ನು ಕೆಡಹಿರುವರು. ಹಾಡಿಕೋರ್ಟ್, ಮಾರ್ಟಿವಿಲ್ಲಿ, ವರ್ಮಾಂಡ ಮತ್ತು ಸೊಯ್ಕೋರ್ಟ ಗ್ರಾಮಗಳನ್ನು ಬ್ರಿಟಿಷರು ಸ್ವಾಧೀನ ಮಾಡಿಕೊಂಡಿರುತ್ತಾರೆ. ಬ್ರಿಟಿಷರ ತೋಫುಗಳ ಹೊಡತವನ್ನು ಜರ್ಮನರು ತಡೆಯಲಾರದೆ ಸೈಂಟ್ ಎಮಿಲ್ ಎಂಬ ಗ್ರಾಮವನ್ನು ಬಿಟ್ಟುಹೋಗಿರುವರು. ಬ್ರಿಟಿಷರು ಸೈಂಟ ಎಮಿಲ, ಜೀನ್‌ಕೋರ್ಟ, ಹರ್‌ವಿಲ್ಲಿ, ಹೆಸ್ಸಕೋರ್ಟ ಗ್ರಾಮಗಳನ್ನೂ ಹಿಡಿದು ಹೆಸ್ಸಕೋರ್ಟ ಎಂಬಲ್ಲಿಯ ಶತ್ರುಕಾವಲಿ ಸೇನೆಯನ್ನೆಲ್ಲಾ ಹತಬಡೆದಿರುತ್ತಾರೆ. ಇನ್ನು ಹಲವು ಗ್ರಾಮಗಳೂ ಬ್ರಿಟಿಷರ ಸ್ವಾಧೀನವಾಗಿವೆ. ಮಾರ್ಚ ತಿಂಗಳೊಂದರಲ್ಲಿ ಬ್ರಿಟಿಷರು ೧೨೩೯ ಜರ್ಮನ ಸೇನಿಕರನ್ನೂ, ೧೬ ಆಫೀಸರರನ್ನೂ, ೩ ಫೀಲ್ಡಗನ್ ಫಿರಂಗಿಗಳನ್ನೂ, ೨೫ ಕಂದಕಗಳನ್ನೂ, ೬೦ ಯಂತ್ರಚಾಲಿತ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ಜನವರಿ ತಿಂಗಳಿಂದ ಮಾರ್ಚ ತಿಂಗಳ ವರೆಗೆ ೪೬೨೦ ಜರ್ಮನ ಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ತಾ. ೧ನೇ ಬೆಳಗ್ಗೆ ಬ್ರಿಟಿಷರು ಸೈಂಟ್‌ಕ್ವೆಂಟಿನಿಗೆ ೪ ಮೈಲು ಪಶ್ಚಿಮದಲ್ಲಿರುವ ಸೇವಿ ಎಂಬ ಗ್ರಾಮವನ್ನು ಹಿಡಿದು ಶತ್ರುಸೇನೆಯಲ್ಲಿ ಅಪಾರವಾದ ನಷ್ಟಪಡಿಸಿರುತ್ತಾರೆ. ಈ ಪ್ರಾಂತ್ಯದಲ್ಲಿ ಇನ್ನು ಕೆಲವು ಗ್ರಾಮಗಳೂ ಬ್ರಿಟಿಷರ ಕೈಸೇರಿವೆ.

ಪೂರ್ವ ರಣರಂಗ.

ರಶ್ಯಾ ರಣರಂಗದಲ್ಲಿ ಟಾರ ನದಿಯ ಪಶ್ಚಿಮ ದಡದಲ್ಲಿ ಶತ್ರುಗಳು ರಶ್ಯನರ ಮೇಲೆ ಹಲ್ಲೆ ಮಾಡಿದರು. ಇಲ್ಲಿ ಶತ್ರುಗಳು ವಿಷಕರವಾದ ಗ್ಯಾಸನ್ನು ಪ್ರಯೋಗಿಸಿದ್ದರಿಂದ ರಶ್ಯನರು ಪೂರ್ವ ದಡಕ್ಕೆ ಸರಿದಿರುವರು. ಪೂರ್ವ ರಣರಂಗದಲ್ಲಿ ಇಲ್ಲಕ್ಸ್ಟ, ಮತ್ತು ಪೊಸ್ಟಾವಿಯ ಬಳಿ ಮೇಲ್ಬಾಯಿದ ಶತ್ರುಗಳನ್ನು ರಶ್ಯನರು ಅಟ್ಟಿರುತ್ತಾರೆ. ರಾತ್ರಿಕಾಲ ಜರ್ಮನರು ಮಾಡಿದ ದಾಳಿಯಲ್ಲಿ ಬೊಯಸ್ಸಿ ಎಂಬಲ್ಲಿ ಕೆಲವು ಕಂದಕಗಳು ಶತ್ರುಗಳ ಕೈಸೇರಿದರೂ ರಶ್ಯನರು ಹಲ್ಲೆಮಾಡಿ ಒಂದುಸಾರಿ ಕೈತಪ್ಪಿದ ಕಂದಕಗಳನ್ನು ಪುನಃ ಗೆದ್ದುಕೊಂಡಿರುತ್ತಾರೆ. ಸ್ವಾನಿಸ್ಲೋವ ಎಂಬಲ್ಲಿ ಹಲ್ಲೆಮಾಡಿದ ಶತ್ರುಗಳನ್ನು ರಶ್ಯನರು ಓಡಿಸಿರುತ್ತಾರೆ. ಕಿರಿಲ್‌ಬಾಬ, ಜಾಕೋಬೆನಿ, ಪೆಲಿಪುಟ್ನ ದಾರಿಗಳ ಪ್ರಾಂತ್ಯದಲ್ಲಿ ಮೇಲ್ಬಾಯಿದ ಶತ್ರುಗಳು ಹಿಮ್ಮೆಟ್ಟಿರುವರು.

ಇಟಲಿ.

ಈ ರಣರಂಗದಿಂದ ಕಳೆದ ವಾರ ವಿಶೇಷ ವರ್ತಮಾನಗಳು ಬಂದಿರುವದಿಲ್ಲ.

ಮೆಸೆಡೋನಿಯ.

ಸೆರೆಯೊಸಾಸ್ಟಿನ್ ಎಂಬಲ್ಲಿ ಕಾಲು ಮೈಲುಗಳ ವಿಸ್ತೀರ್ಣದ ಕಂದಕಗಳು ನಮ್ಮವರ ಸ್ವಾಧೀನವಾಗಿದೆ. ೧೦೦ ಶತ್ರುಸೇನಿಕರು ಸೆರೆಬಿದ್ದಿರುವರು. ಇಲ್ಲಿ ಶತ್ರುಗಳು ಪುನಃ ಹಲ್ಲೆಮಾಡಿ ಫ್ರೆಂಚರ ಕೈಸೇರಿದ ಕಂದಕಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಮೊನಸ್ಟಿರ್ ಪ್ರಾಂತ್ಯದಲ್ಲಿ ಈಚೆಗೆ ನಡೆದ ಕದನಗಳಲ್ಲಿ ೨೧೦೪ ಶತ್ರುಸೇನಿಕರು ನಮ್ಮವರ ಸೆರೆಬಿದ್ದಿರುತ್ತಾರೆ.

ಈಜಿಪ್ಟ.

[illegible] ಶತ್ರುಗಳಲ್ಲಿ ವಿಶೇಷ ನಷ್ಟವನ್ನುಂಟು ಮಾಡಿರುವರು. ಸುಮಾರು ೯೦೦ ಶತ್ರುಸೇನಿಕರು ನಮ್ಮವರ ಸೆರೆಬಿದ್ದಿರುವರು.

ಮೆಸೊಪೊಟಾಮಿಯ.

ಕಳೆದ ತಾ. ೧೯ರಿಂದ ಇಲ್ಲಿ ನಮ್ಮವರ ಸೇನೆಯು ಬಗ್ದಾದಿನ ಉತ್ತರದಲ್ಲಿ ಶತ್ರುಗಳೊಡನೆ ಕದನಮಾಡಿ ಶತ್ರುಗಳನ್ನು ಹಿಂದಕ್ಕೆ ಅಟ್ಟುತ್ತಾ ಕೈಸೇರಿದ ಸ್ಥಳಗಳನ್ನು ಬಲಪಡಿಸಿಕೊಳ್ಳುತ್ತಾ ಇದ್ದಾರೆ. ಖಾನ್‌ಕಿನ್ ಎಂಬಲ್ಲಿ ರಶ್ಯನರ ಮತ್ತು ನಮ್ಮವರ ಸೇನಿಕರು ಒಂದಾಗಿ ಕೂಡಿ ತುರ್ಕರ ಮೇಲೆ ಹಲ್ಲೆಮಾಡಲು ಹವಣಿಸುತ್ತಿದ್ದಾರೆ. ಆದರೆ ಇಲ್ಲಿ ಹಲವು ಕಾಲುವೆಗಳಿಗೂ ನದಿಗಳಿಗೂ ಸೇತುವೆಗಳನ್ನು ಕಟ್ಟಬೇಕಾಗಿರುವದರಿಂದ ಇಲ್ಲಿ ನಮ್ಮವರಿಗೆ ಈ ಉದ್ದೇಶವನ್ನು ಸಾಧಿಸಿಕೊಳ್ಳುವದು ವಿಶೇಷ ಕಷ್ಟವಿದೆ. ಇಲ್ಲಿ ಶತ್ರುಗಳು ಜೀವದ ಆಶೆ ಇಲ್ಲದೆ ನಮ್ಮವರನ್ನು ಎದುರಿಸಿರುವರಾದರೂ ನಮ್ಮವರು ಎದೆಗುಂದದೆ ಅವರ ಮೇಲೆ ಬಿದ್ದು ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿ ಅನೇಕ ಸೇನಿಕರನ್ನೂ ಯುದ್ಧ ಸಾಮಗ್ರಿಗಳನ್ನೂ ಆಹಾರ ಸಾಮಗ್ರಿಗಳನ್ನೂ ಹಿಡಿದಿರುತ್ತಾರೆ. ಮಾರ್ಚ ತಾ. ೨೩ರಲ್ಲಿ ಶಹರೋಬನ್ ಎಂಬ ಸ್ಥಳವನ್ನು ನಮ್ಮವರು ಗೆದ್ದುಕೊಂಡಿರುತ್ತಾರೆ. ದಿಯಾಲ ನದಿಯ ಪ್ರಾಂತ್ಯದಲ್ಲಿ ತೀಕ್ಷ್ಣವಾದ ಕದನಗಳಾಗಿ ತಾ. ೨೫ರಲ್ಲು ಇನ್ನೆರಡು ಸ್ಥಳಗಳು ನಮ್ಮವರ ಸ್ವಾಧೀನವಾಗಿವೆ. ಅದಲ್ಲದೆ ಬಗ್ದಾದಿನ ಉತ್ತರದಲ್ಲಿ ಫಲವತ್ತಾದ ಪ್ರಾಂತ್ಯಗಳಲ್ಲಿ ಬೆಲ್ಲೂವಾಹ ಮತ್ತು ಸಿಂಡಾಯಿ ಸ್ಥಳಗಳನ್ನು ನಮ್ಮವರು ಗೆದ್ದುಕೊಂಡಿರುವರು.

ವಿದೇಶ ವೃತ್ತಾಂತ.

೫೫,೩೯೭ ಜರ್ಮನರು, ೬ ಆಸ್ಟ್ರಿಯನರು, ೭೬೩ ಬಲ್ಗೇರಿಯನರು, ೧೫೪ ತುರ್ಕರು ಬ್ರಿಟಿಷರ ಬಂದಿಗಳಾಗಿರುವರು. ೨೨,೫೦೦ ಬ್ರಿಟಿಷರು ಜರ್ಮನಿಯಲ್ಲಿಯೂ, ೭೯೬ ಬ್ರಿಟಿಷರು ಟರ್ಕಿಯಲ್ಲಿಯೂ ಬಂದಿಗಳಾಗಿದ್ದಾರೆಂತ ಬ್ರಿಟಿಷ ಕಾಮನ್ಸ್ ಸಭೆಯಲ್ಲಿ ಮಿ ಹೋಪ್ ಎಂಬವರು ಹೇಳಿರುತ್ತಾರೆ.

ಶತ್ರುಗಳು ಲೊವಸ್ಟೋಫ್ಟ್ ಎಂಬಲ್ಲಿ [illegible] ಎಂಬ ಸುದ್ದಿಯು ಕಳೆದ ವಾರ ಇಂಗ್ಲಾಂಡಿನಲ್ಲೆಲ್ಲಾ ಹರಡಿಕೊಂಡಿತ್ತು. ಈ ಸುದ್ದಿಯ ಸಂಬಂಧವಾಗಿ ಬ್ರಿಟಿಷ ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಬಂದಾಗ ಮಿ। ಬಾನರ್‌ಲಾರವರು ತಾನೂ ಈ ಸುದ್ದಿಯನ್ನು ಕೇಳಿದ್ದೆನು, ಆದರೆ ಈ ಸುದ್ದಿಗಳೆಲ್ಲಾ ಆಧಾರವಿಲ್ಲದಂಥವುಗಳು ಎಂದು ಹೇಳಿರುತ್ತಾರೆ.

ಜರ್ಮನರು "ಅಸ್ಟೂರಿಯಸ್" ಎಂಬ ಹೆಸರಿನ ಬ್ರಿಟಿಷರ ಆಸ್ಪತ್ರೆ ಹಡಗವನ್ನು ಮುಳುಗಿಸಿರುತ್ತಾರೆ. ಈ ಹಡಗದಲ್ಲಿ ವ್ಯಾಧಿತರಾದ ೯೦೦ ಸೇನಿಕರಲ್ಲದೆ ನಾವಿಕರೂ, ವೈದ್ಯರೂ, ನರ್ಸುಗಳೂ ಇದ್ದರು. ಹಡಗದಲ್ಲಿದ್ದವರಲ್ಲಿ ೧೧ ಮಂದಿ ಮುಳುಗಿ ಸತ್ತಿರುವರು. ೧೭ ಮಂದಿಗೆ ಗಾಯವಾಗಿದೆ. ನಾವಿಕರಲ್ಲಿ ೨೦ ಮಂದಿ ಸತ್ತಿರುವರು, ೯ ಮಂದಿ ಕಾಣೆಯಾಗಿರುವರು.

ಜರ್ಮನರು ಬೆಲ್ಜಿಯಮಿನಿಂದ ಜರ್ಮನಿಗೆ ಕೊಂಡುಹೋದ ಬೆಲ್ಜಿಯನರು ಭಯಂಕರ ರೀತಿಯ ಕಷ್ಟಗಳನ್ನನುಭವಿಸುತ್ತಿದ್ದಾರೆ. ಜರ್ಮನರು ಅವರನ್ನು ನಡೆಸುವ ರೀತಿಯು ಭಾವಿಸಲಸಾಧ್ಯವಾಗಿದೆ. ಆಹಾರವಿಲ್ಲದೆ ಉಪವಾಸ ಬಿದ್ದು ಅನೇಕರು ಸತ್ತುಹೋದರು. ಕೆಲವರು ಆಹಾರ ಸಿಕ್ಕದ್ದರಿಂದ ಎಲೆಗಳನ್ನು ಕೂಡಾ ತಿಂದಿರುವರು. ಎಂತ ಈ ಸ್ಥಿತಿಯನ್ನು ಕಣ್ಣಾರೆ ನೋಡಿದವನೊಬ್ಬನು ಬೆಲ್ಜಿಯಮ್ ಸರಕಾರದವರಿಗೆ ತಿಳಿಸಿರುತ್ತಾನೆ.

ಆಸ್ಟ್ರಿಯಾ ದೇಶದ ಚಕ್ರವರ್ತಿಯವರು ಸಂಧಿಯ ಪ್ರಸ್ತಾಪವನ್ನು ಕುರಿತು ಮಾತಾಡುವ ಉದ್ದೇಶದಿಂದ ಬರ್ಲಿನಿಗೆ ಹೋಗಿರುವರು ಎಂತ ಸ್ವಿಟ್ಜರ್ಲೆಂಡಿನಿಂದ ವರ್ತಮಾನ ಬಂದಿದೆ.

ಸಾಮ್ರಾಜ್ಯ ಯುದ್ಧ ಕಾನ್ಫರೆನ್ಸಿಗೆ ಲಂಡನಿಗೆ ಹೋದ ಜನರಲ್ ಸ್ಮಟ್ಸ, ಸರ್. ಎ. ಮೊರಿಸ್ ಮತ್ತು ಹಿಂದೀ ಪ್ರತಿನಿಧಿಗಳಿಗೆ ಲಂಡನಿನ ಪಟ್ಟಣ ಸ್ವಾತಂತ್ರ್ಯವು ಕೊಡಬೇಕೆಂತ ನಿರ್ಣಯವಾಗಿದೆ. ಲಂಡನ ಪೌರರಿಗೆ ಈ ಮೊದಲೇ ಪಟ್ಟಣ ಸ್ವಾತಂತ್ರ್ಯ ದೊರಕಿದವು.

ಕಳೆದ ವಾರ ಬ್ರಿಟಿಷ ಬಂದರುಗಳಿಗೆ ೨೫೧೪ ಹಡಗಗಳು ಬಂದು ತಲಪಿದವು. ೨೫೩೨ ಹಡಗಗಳು ಈ ಬಂದರುಗಳಿಂದ ಪ್ರಯಾಣ ಹೊರಟಿರುವವು. ೧೬೦೦ ಟನ್ನುಗಳ ಭಾರವಣೆಗೆ ಮಿಕ್ಕಿದ ೧೮ ಹಡಗಗಳೂ ೧೬೦೦ ಟನ್ ಭಾರವಣೆಗೆ ಕಡಿಮೆಯ ೭ ಹಡಗಗಳೂ ಶತ್ರುಗಳ ಜಲಯಾನಗಳಿಗೆ ತುತ್ತಾಗಿವೆ. ೧೩ ಹಡಗಗಳು ಜಲಯಾನಗಳ ಹೊಡತದಿಂದ ತಪ್ಪಿಸಿಕೊಂಡಿರುವವು. ಮೀನುಗಾರರ ೧೦ ದೋಣಿಗಳೂ ಶತ್ರುಗಳ ಜಲಯಾನಗಳಿಗೆ ತುತ್ತಾಗಿವೆ.

ಮಾರ್ಚ ತಾ. ೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಇಟಲಿ ಬಂದರುಗಳಿಗೆ ೪೫೩,೫೭೦ ಟನ್ ಭಾರವಣೆಯ ೫೧೭ ಹಡಗಗಳು ಬಂದು ತಲಪಿರುವವು. ೩೭,೫೬೦ ಟನ್ ಭಾರವಣೆಯ ೪೮೯ ಹಡಗಗಳು ಈ ಬಂದರುಗಳಿಂದ ಹೊರ ಬಂದರುಗಳಿಗೆ ಹೋಗಿರುತ್ತವೆ. ೨೦೦೦ ಟನ್ ಭಾರವಣೆಗೆ ಕಡಿಮೆಯ ೪ ಹಡಗಗಳೂ ೧೦೦೦ ಟನ್ ಭಾರವಣೆಗೆ ಮಿಕ್ಕಿದ ಒಂದು ಹಡಗವೂ ಶತ್ರುಗಳ ಜಲಯಾನಗಳಿಗೆ ತುತ್ತಾಗಿದೆ. ಒಂದು ಹಡಗವು ಜಲಯಾನದ ಹೊಡತದಿಂದ ತಪ್ಪಿಸಿಕೊಂಡಿದೆ.

ಆಸ್ಟ್ರಿಯನರ ಮತ್ತು ಜರ್ಮನರ ಒಂದು ದೊಡ್ಡ ಸೇನೆಯು ವೊರಾಲ್‌ಬರ್ಗನಿಂದ ಇಟಲಿಯ ಮೇಲೆ ನುಗ್ಗಿ ಹೋಗಲು ಹೊರಟಿದೆ ಎಂತ ವಾರ್ತೆ ಇದೆ.

ರಶ್ಯಾದ ಆಕಾಶನಾವಿಕನಾದ ಪ್ರಿನ್ಸ್ ಪ್ರೆಮೂಳ ಕಿಲ್ ಎಂಬಾತನು ಗಾಯಗಳನ್ನು ಹೊಂದಿ ಸತ್ತುಹೋದನು.

ಮಾತಾಡುವ ಫೊನೊಗ್ರಾಫ್ ಮೊದಲಾದ ಯಂತ್ರಗಳ ನಿರ್ಮಾಣಿಕನಾದ ಅಮೇರಿಕದ ಎಡಿಸನ್ ಎಂಬವರು ಜಲಯಾನಗಳನ್ನು ಅಡಗಿಸಲು (೬ ಅಡಿಯ ಜಲನಾವೆಯ ಮಾದರಿಯ ನಾವೆಯೊಂದನ್ನು ನೂತನವಾಗಿ ರಚಿಸಲು ಹಗಲೂ ರಾತ್ರಿ ಪ್ರಯತ್ನ ಮಾಡುತ್ತಿದ್ದಾರೆ. ಇವರ ಮನೆಯ ಸುತ್ತಲೂ ಕಾವಲು ಇಟ್ಟಿದೆ.

ರಶ್ಯಾದಲ್ಲಿ ಪ್ರಜಾಧಿಪತ್ಯವು ಉಂಟಾದಂದಿನಿಂದ ರಣರಂಗಗಳ ಸ್ಥಿತಿಯು ಉತ್ತಮವಾಗುತ್ತಾ ಬರುತ್ತದೆ. ಹಿಮವು ಬಿದ್ದಿರುವದರಿಂದ ಅಲ್ಲಿ ಈಗ ಸದ್ಯಾ ಕಡಾಕಡಿಯ ಕದನಗಳು ನಡಿಯಲಾರವು. ಆದರೆ ಶತ್ರುಗಳು ತಮ್ಮ ಸೇನೆಯನ್ನು ಅಲ್ಲಲ್ಲಿ ಕೂಡಿ ಹಾಕುತ್ತಿದ್ದಾರೆ.

ಸೇನೆಗೆ ಸೇರಿಕೊಳ್ಳಲು ಅರ್ಹರಲ್ಲವೆಂದು ಒಮ್ಮೆ ಬಿಡಲ್ಪಟ್ಟ ಜನರನ್ನು ಪುನಃ ವೈದ್ಯರಿಂದ ಪರೀಕ್ಷಿಸುವ ಸಂಬಂಧದ ಕಾನೂನು ಇಂಗ್ಲಾಂಡಿನಲ್ಲಿ ಜಾರಿಗೆ ಬಂದದೆ. ಈ ಕಾನೂನು ಮಸೂದೆಯನ್ನು ಮಿ ಬಾನರ್‌ಲಾರವರು ಪಾರ್ಲಿಮೆಂಟ ಸಭೆಯು ಮುಂದಿಡುವಾಗ:— ಸೈನಿಕ ಸ್ಥಿತಿಯನ್ನು ನೋಡುವಾಗ ಈ ಕಾನೂನು ಅಗತ್ಯವಿದೆ. ಜಲಯಾನಗಳ ಬಾಧೆಯು ಇರುವದರಿಂದ ಬೇಸಾಯಗಾರರನ್ನು, ಹಡಗಕಟ್ಟುವವರನ್ನು ಸೇನೆಗೆ ಸೇರಿಸಿಕೊಳ್ಳುವದು ಈಗ ಅಸಾಧ್ಯ. ಈ ವರ್ಷಾರಂಭದಲ್ಲಿ ಸೇನೆಗೆ ಸೇರಿಸಿಕೊಳ್ಳಲು ಸಿಕ್ಕಿದವರ ಸಂಖ್ಯೆಯು ಭಾವಿಸಿದಕ್ಕಿಂತಲೂ ೧೦೦ ಸಾವಿರಕ್ಕೆ ಕಡಿಮೆಯಾಗಿದೆ. ಈಗ ಈ ಕಾನೂನನ್ನು ಜಾರಿಗೆ ತಂದರೆ ೩ ತಿಂಗಳೊಳಗೆ ಸೇನೆಗೆ [illegible] ೧೦೦ ಸಾವಿರ ಮಂದಿಯು ಸಿಕ್ಕಬಹುದು. ಇದೇ [illegible] [illegible] ಯುದ್ಧಾರಂಭದಲ್ಲಿ ಸೇನೆಗೆ ಸೇರಿ[illegible] ಸಿಕ್ಕಿದವರ ಸಂಖ್ಯೆಯು ಕಡಿಮೆಯಾದರೂ ರಣರಂಗದಲ್ಲಿ ಪ್ರಾಣಹಾನಿ ಹೊಂದಿದವರ ಸಂಖ್ಯೆಯು ಹೆಚ್ಚಾಗದ್ದರಿಂದ ಮಹತ್ತರ ಬಾಧಕವು ಉಂಟಾಗಲಿಲ್ಲ. ಆದರೆ ಭೀಕರವಾದ ಕದನಗಳನ್ನು ಮಾಡಿ ವಿಶೇಷ ನಷ್ಟಹೊಂದುವ ಕಾಲವು ನಮ್ಮ ಮುಂದಿದೆ. ಇದರಲ್ಲಿ ಜಯಹೊಂದುವದು ನಮ್ಮ ಮಹಾಸಾಮರ್ಥ್ಯದ ಮೇಲೆ ಹೊಂದಿಕೊಂಡಿದೆ" ಎಂದು ಹೇಳಿರುವರು.

ಪಾರ್ಲಿಮೆಂಟಿನಲ್ಲಿ ಗಂಡಸರಂತೆಯೇ ಹೆಂಗಸರಿಗೂ ಓಟಿನ ಸ್ವಾತಂತ್ರ್ಯವನ್ನು ಕೊಡಬೇಕೆಂಬದಾಗಿ ಯುದ್ಧದ ಮೊದಲು ಇಂಗ್ಲಾಂಡಿನಲ್ಲಿ ನಡೆಯುತ್ತಿದ್ದ ಸಫ್ರಜೆಟ್ಟ ಸ್ತ್ರೀಯರ ಚಳವಳವು ಯುದ್ಧ ಪ್ರಾರಂಭವಾದಂದಿನಿಂದ ಈ ವರೆಗೆ ಕೇಳಿಸಲಿಲ್ಲ. ಆದರೆ ಇಂಗ್ಲಾಂಡಿನ ಈ ಸ್ತ್ರೀಯರ ಚಳವಳದ ಫಲವು ಈಗ ಕಾಣೇ ಇಂಗ್ಲಾಂಡಿನಲ್ಲಿ ಕಾರ್ಯರೂಪಗೊಳ್ಳುವಂತಿದೆ. ಸಫ್ರಜೆಟ್ಟ ಸ್ತ್ರೀಯರ ಪರವಾದ ಕೆಲವು ಸ್ತ್ರೀ ಪ್ರತಿನಿಧಿಗಳು ಪ್ರಧಾನ ಮಂತ್ರಿಯವರಿಗೆ ಭೇಟಿಕೊಟ್ಟಲ್ಲಿ ಪ್ರಧಾನ ಮಂತ್ರಿಯವರು,— ಈ ಸಂಬಂಧವಾದ ಬಿಲು ತಯಾರಿಸಲ್ಪಟ್ಟಿದೆ. ಹೆಂಗಸರಿಗೆ ಓಟು ಕೊಡುವ ಸ್ವಾತಂತ್ರ್ಯವನ್ನು ಕೊಡುವ ವಿಷಯವು ಕಾಮನ್ಸ್ ಸಭೆಯವರ ಮತದ ಬಗ್ಗೆ ಇದಿರೋಡಾಗಿದೆ. ಸರಕಾರದ ಅಧಿಕಾಂಶದ ಮತವು ಹೆಂಗಸರಿಗೆ ಈ ಸ್ವಾತಂತ್ರ್ಯವನ್ನು ಕೊಡುವ ಪಕ್ಷಕ್ಕೇ ಇದೆ. ಕಾಮನ್ಸ್ ಸಭೆಯಲ್ಲಿಯೂ ಈ ಬಿಲಿಗೆ ಅಧಿಕ ಮತವು ದೊರಕುವದೆಂಬದಕ್ಕೆ ತನಗೆ ಅನುಮಾನವಿಲ್ಲವೆಂದು ಹೇಳಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಕಳೆದ ಜೂನ ತಿಂಗಳಲ್ಲಿ ಕಲ್ಕತ್ತೆಯ ಅನಾಯಕ ಮಂಡಲಿಯವರಿಂದ ಕೊಲೆಯಾದ ಪೋಲಿಸ್ ಡೆಪ್ಯುಟಿ ಸುಪರಿಂಟೆಂಡೆಂಟ ಮಿ। ಬಸಂತಕುಮಾರ ಚಟರ್ಜಿಯವರ ವಿಧವೆಗೆ ತಿಂಗಳೊಂದಕ್ಕೆ ರೂ ೭೫, ನಾಲ್ಕು ಗಂಡು ಮಕ್ಕಳಲ್ಲಿ ಒಬ್ಬೊಬ್ಬರಿಗೆ ರೂ. ೬೦; ಹೆಮ್ಮಕ್ಕಳಿಗೆ ರೂ ೫೦ ಮತ್ತು ವಿಧವೆಯ ತಾಯಿ ಮತ್ತು ಸಹೋದರಿಗೆ ರೂ ೨೫ ಪ್ರಕಾರ ಸರಕಾರದವರು ಕೊಡುವದಲ್ಲದೆ ಮಗಳ ವಿವಾಹಕ್ಕೆ ರೂ. ೧೫೦೦ ಮತ್ತು ಶ್ರಾದ್ಧಕ್ಕೆ ರೂ. ೧೦೦೦ ಕೊಡಬೇಕೆಂತ ಸಂಕ್ಷನ್ ಮಾಡಿರುತ್ತಾರೆ.

ಹಿಂದೂಸ್ಥಾನದ ಸಕಲ ಭಾರತೀಯ ಸಂಸ್ಕೃತ ಸಮ್ಮೇಳನವು ಇದೇ ಎಪ್ರೀಲ್ ತಾ. ೬ ೭ರಲ್ಲು ಲಕನೌ ನಗರದಲ್ಲಿ ಬಹುಮಾನಪಟ್ಟ ದರ್ಭಂಗ ಮಹಾರಾಜ ಸರ್ ರಾಮೇಶ್ವರ ಸಿಂಘ ಬಹದ್ದೂರ ಜಿ. ಸಿ. ಐ. ಇ ಇವರ ಅಧ್ಯಕ್ಷತೆಯಲ್ಲಿ ಜರಗುವದು.

ಯುದ್ಧಕಾಲದಲ್ಲಿ ಹಿಂದೂಸ್ಥಾನದವರು ಸಾಮ್ರಾಜ್ಯ ಸಹಾಯಕ್ಕೆ ಮಾಡಿದ ಸಹಾಯ್ಯವನ್ನು ಅಲ್ಪವೆಂದು ಹೇಳುತ್ತಿರುವವರಿಗೆ ಕಡೆಕಟ್ಟಲಿಕ್ಕಾಗುವ ಹಾಗೆ ಹಿಂದೂಸ್ಥಾನದವರು ಮಾಡಿದ ವಿಧವಿಧದ ಸಹಾಯ್ಯದ ಪಟ್ಟಿಯನ್ನು ಯುದ್ಧ ತೀರಿದ ನಂತರ ಸರಕಾರದವರು ಪ್ರಕಟಿಸಬೇಕೆಂಬ ಒಂದು ಪ್ರಶ್ನೆಯನ್ನು ಇಬ್ರಾಹಿಮ್ ರಹಿಮ್‌ತುಲ್ಲಾರವರು ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಎತ್ತಿದರು. ಯುದ್ಧ ತೀರಿದ ನಂತರ ಅದಕ್ಕೂ ಪೂರ್ವದಲ್ಲಿ ಈ ಸಂಬಂಧವಾದ ವರದಿಯು ಪ್ರಕಟಿಸಲ್ಪಡುವದೆಂದೂ ಈ ಬಗ್ಗೆ ಬೇಕಾದ ದಾಖಲೆಗಳು ಇಂಡಿಯಾ ಸರಕಾರ ಮತ್ತು ಸಂಸ್ಥಾನಿಕ ಸರಕಾರದ ಡಿಪಾರ್ಟಮೆಂಟುಗಳಲ್ಲಿ ಇರುವದರಿಂದ ಇದಕ್ಕಾಗಿ ಪ್ರತ್ಯೇಕ ಒಂದು ಕಮಿಟಿಯು ಅಗತ್ಯವಿಲ್ಲವೆಂದೂ ಸರಕಾರದ ಪರವಾಗಿ ಸರ್ ಕ್ರೆಡೋಕರವರು ಉತ್ತರ ಕೊಟ್ಟಿರುತ್ತಾರೆ.

ಮುಂಬಾಯಿ "ಕ್ರೊನಿಕಲ್" ಪತ್ರಿಕೆಯ ಸಂಪಾದಕರಾದ ಮಿ। ಹೊರ್ನಿಮ್ಯಾನರು ಸದರಿ ಪತ್ರಿಕೆಯಲ್ಲಿ ಮಿ। ಸುರಾಜಮಲ ಮೇಘಾರವರ ಮಾನಕ್ಕೆ ಕುಂದನ್ನು ತರುವಂಥಾ ಒಂದು ಲೇಖನವನ್ನು ಪ್ರಕಟಿಸಿದ್ದಾರೆಂಬ ಅಪವಾದದ ಮೇಲೆ ಪತ್ರ ಸಂಪಾದಕರ ಮೇಲೆ ಆದ ಮಾನನಷ್ಟ ದಾವೆಯ ವಿಚಾರಣೆಯು ಜಸ್ಟಿಸ್ ಮಾರ್ಟಿನರವರಲ್ಲಿ ನಡೆದು ಸಂಪಾದಕರು ರೂ. ೩೦೦೦ ಮಾನನಷ್ಟ ಕೊಡಬೇಕಾಗಿ ತೀರ್ಮಾನವಾಗಿತ್ತು. ಈ ತೀರ್ಮಾನದ ಮೇಲೆ ಪತ್ರ ಸಂಪಾದಕರು ಮುಂಬಾಯಿ ಹೈಕೋರ್ಟಿನಲ್ಲಿ ಅಪೀಲು ಮಾಡಿಕೊಂಡಲ್ಲಿ ಚೀಫ್ ಜಸ್ಟಿಸರೂ ಜಸ್ಟಿಸ ಹೀಟನರೂ ಅಪೀಲು ತನಿಖೆ ನಡಿಸಿದರು. ಪತ್ರದಲ್ಲಿ ಪ್ರಕಟವಾದ ಲೇಖನವು ನ್ಯಾಯವಾದ ಟೀಕೆಯಾಗಿದ್ದುದರಿಂದ ಕೆಳ ಕೋರ್ಟಿನ ತೀರ್ಮಾನವು ನ್ಯಾಯವಲ್ಲವೆಂಬದಾಗಿ ಚೀಫ್ ಜಸ್ಟಿಸರೂ, ಕೆಳ ಕೋರ್ಟಿನ ತೀರ್ಮಾನವು ನ್ಯಾಯವಾದುದೆಂದು ಜಸ್ಟಿಸ್ ಹೀಟನರೂ ಅಭಿಪ್ರಾಯಪಟ್ಟರು. ಅಪೀಲು ತನಿಖೆ ನಡಿಸಿದ ಇಬ್ಬರು ಜಡ್ಜರ ಅಭಿಪ್ರಾಯಗಳು ಹೀಗೆ ಬೇರೆಬೇರೆಯಾದುದರಿಂದ ಮೂರನೇ ಜಡ್ಜರ ಅಭಿಪ್ರಾಯವನ್ನು ಕೇಳಿಕೊಳ್ಳುವದೇ ನ್ಯಾಯವೆಂದು ಪ್ರತಿವಾದಿ ಕಡೆಯ ಮಿ। ಸೆಟಲವಾಡರು ವಾದಿಸಿ ಈ ವಿಷಯದಲ್ಲಿ ತನ್ನ ವಾದಾನುವಾದಗಳನ್ನು ನಡಿಸಲಿಕ್ಕಿರುವದರಿಂದ ಸಮಯ ಕೇಳಿಕೊಂಡರು. ಹೀಗೆ ಸಮಯ ಕೊಡಲ್ಪಟ್ಟನಂತರ ಕಳೆದ ಬೃಹಸ್ಪತಿವಾರ ಸೆಟಲ್‌ವಾಡರು ಹೈಕೋರ್ಟಿನಲ್ಲಿ ನಡಿಸಿದ ವಾದಪ್ರತಿವಾದಗಳನ್ನು ಚೀಫ್ ಜಸ್ಟಿಸರು ಕೇಳಿ ಕೆಳಕೋರ್ಟಿನ ತೀರ್ಮಾನವನ್ನು ರದ್ದುಪಡಿಸಿದರು. ಆದರೆ ಅಪೀಲು ಖರ್ಚನ್ನು ಪ್ರತಿವಾದಿಯೇ ನೋಡಿಕೊಳ್ಳಬೇಕೆಂಬ ತೀರ್ಮಾನ ಕೊಟ್ಟರು. ವ್ಯಾಜ್ಯದ ಖರ್ಚಿನ ಸಂಬಂಧ ಮಿ। ಸೆಟಲ್‌ವಾಡರು ವಿಶೇಷ ಹೆಣಗಾಟ ಮಾಡಿದರೂ ಪ್ರಯೋಜನವಾಗಲಿಲ್ಲ.

ಯುದ್ಧದ ಬಗ್ಗೆ ಎತ್ತಲ್ಪಡುವ ಸಾಲದ ನಿಮಿತ್ತವಾಗಿ ಇಂದೋರ್ ಸಂಸ್ಥಾನದಲ್ಲಿ ಸಭೆ ಕೂಡಿ ಸಭೆಯಲ್ಲೇ ೧ ಕೋಟಿ ೫೫ ಲಕ್ಷದ ೯೯೩೫೦ ಸಾವಿರ ರೂಪಾಯಿಗಳ ಸಾಲದ ದರಖಾಸ್ತುಗಳು ಬಂದಿವೆ.

ಹಿಂದೀ ವಿದುಷಿಯರಲ್ಲಿ ಕವಿತೆಯನ್ನು ಮಾಡುವದರಲ್ಲಿ ಪ್ರಖ್ಯಾತಿಯನ್ನು ಪಡೆದಿರುವ ಶ್ರೀಮತಿ ಸರೋಜಿನಿ ನಾಯ್ಡು ಅಮ್ಮನವರ ಕುಮಾರಿ ಪದ್ಮಜಮ್ಮನವರು ಕೆಂಬ್ರಿಜ್ಜಿನ ಸರ್ವ ಕಲಾಶಾಲೆಯಲ್ಲಿ ಗಣಿತ ಶಾಸ್ತ್ರವನ್ನೋದಿ ಪ್ರಥಮವಾಗಿ ಉತ್ತೀರ್ಣರಾಗಿರುತ್ತಾರೆ.

ಮಾರ್ಚ ತಾ. ೨೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೫,೩೯೪ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೪,೭೯೫ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಿ ಸಂಸ್ಥಾನ ಮತ್ತು ಸಿಂಧಿನಲ್ಲಿ ೨೫೬೮; ಮದ್ರಾಸ್ ೨೫೯; ಬಂಗಾಳ ೧೧; ಬಿಹಾರ ಮತ್ತು ಒರಿಸ್ಸ ೨೫೩೨; ಸಂಯುಕ್ತ ಸಂಸ್ಥಾನ ೬೪೭೧; ಪಂಜಾಬು ೧೬೪; ಬರ್ಮ ೧೪೭; ಮಧ್ಯಸಂಸ್ಥಾನ ೧೬೭೮; ಕೊಡಗು ೧; ಮೈಸೂರು ೧೪೧; ಹೈದರಾಬಾದ್ ೬೬೮; ಮಧ್ಯಹಿಂದೂಸ್ಥಾನ ೨೫೮; ರಾಜಪುತಾನ ೧೬೭; ಕಾಶ್ಮೀರ ೬ ಮರಣಗಳಾಗಿರುವವು.

ಮಣಿಪುರ ರಾಜರವರು ತನ್ನ ಸಂಸ್ಥಾನದಲ್ಲಿ ಕಾರ್ಮಿಕ ಸೇವಕರ ಒಂದು [illegible] ಕಂಪೆನಿಯನ್ನು ರೂಪಿಸಿರುವರಲ್ಲದೆ ಈ ಸೇನೆಯ ಖರ್ಚಿನ ಒಂದಂಶವನ್ನು ತಾನೇ ವಹಿಸಿಕೊಂಡಿರುವರು. ಈ ಬಗ್ಗೆ ರಾಜರವರು ಪ್ರಥಮತಃ ರೂ. ೧೫,೦೦೦ ಖರ್ಚು ಮಾಡಿರುವರು. ಇನ್ನು ೧೦೦೦ ಮಂದಿಯನ್ನು ಭರ್ತಿ ಮಾಡಿ ಅವರನ್ನು ರವಾನೆ ಮಾಡುವರೆ ಪ್ರತಿ ಒಂದಕ್ಕೆ ರೂ. [illegible] ಖರ್ಚಾಗುವದು.

ಮಾರ್ಚ ತಾ. ೩೧ರ ವರೆಗೆ ಹಿಂದೂಸ್ಥಾನದಲ್ಲಿ ಎತ್ತಲ್ಪಡುವ [illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು.

ಇದರಿಂದ ಬಾಧಕವೇನು? . . . ೪

ಸ್ಫುಟವಿಚಾರಗಳು:—

೧ ಭಾರತ ಸಂರಕ್ಷಕ ಸೈನ್ಯದ ನಿಯಮಗಳು . . . ,,

೨ ಸರ್ ದೊರಾಬ್ಜಿ ಟಾಟಿರವರ ಔದಾರ್ಯ . . . ,,

೩ ಐರ್ಲಂಡಿನ ಹೋಂರೂಲು . . . ,,

೪ ಸರ್ ಚಾರ್ಲ್ಸ್ ಹೆನ್ರಿಯವರ ಸೂಚನೆ . . . ೪-೫

೫ ರೂಸ್ಯರವ ಇನ್ನೊಂದು ವರ್ತಮಾನ . . . ,,

೬ ದಕ್ಷಿಣ ಹಿಂದೂಸ್ಥಾನದ ವಾಣಿಜ್ಯ ಸಂಘ . . . ,,

೭ ಮಿ| ಕರ್ಟಿಸರ ಚಲವಲಕ್ಕೆ ಅಂತ್ಯವು . . . ,,

೮ ಹಿಂದೀ ಪ್ರತಿನಿಧಿಗಳಿಗೆ ಔತಣ — ಮಿ| ಚೆಂಬರ್‌ಲೇನರ ಭಾಷಣ . . . ,,

ಸ್ಥಳೀಕ — ಮಂಗಳೂರು . . . ,,

ವರ್ತಮಾನ ಸಂಗ್ರಹಗಳು:—

೧ ಯೂರೋಪದ ಮಹಾಯುದ್ಧ . . . ೩

೨ ವಿದೇಶ ವೃತ್ತಾಂತ . . . ,,

೩ ಉತ್ತರ ಹಿಂದೂಸ್ಥಾನ . . . ೩-೬

೪ ದಕ್ಷಿಣ ಹಿಂದೂಸ್ಥಾನ . . . ,,

ಬಾತಮಿಗಳು ಮತ್ತು ಪತ್ರವ್ಯವಹಾರಗಳು . . . ೫-೬

ಸ್ವದೇಶಾಭಿಮಾನಿ.

ಶಕ ೧೮೩೯ ಚೈತ್ರ ಶು. ೧೪ ಶುಕ್ರವಾರ.

ಇದರಿಂದ ಬಾಧಕವೇನಿತ್ತು?

ಮದ್ರಾಸ್ ನ್ಯಾಯವಿಧಾಯಕ ಸಭೆಯ ಅಧಿವೇಶನಗಳು ನಡೆಯುತ್ತಿದ್ದು ಅವುಗಳಲ್ಲಿ ಸಾಮಾನ್ಯವಾಗಿ ಯಾವ ಯಾವ ಪ್ರಸ್ತಾಪಗಳು ಬರುತ್ತವೆಯೆಂದು ಕಲ್ಪನೆಯು ತಕ್ಕಮಟ್ಟಿಗಾದರೂ ಬರುವಂತೆ ಅಲ್ಲಿಯ ವಿಶೇಷ ಸಂಗತಿಗಳನ್ನು ಸಾರರೂಪದಿಂದ ಬೇರೆ ಕಲಮುಗಳಲ್ಲಿ ಆಗಾಗ್ಗೆ ಕೊಡುತ್ತಿದ್ದೇವೆ. ಈ ಪ್ರಸ್ತಾಪಗಳಲ್ಲಿ ವಾಚಕರು ಮನಸ್ಸಿನಲ್ಲಿ ಪುನರ್ವಿಮರ್ಶನೆ ಮಾಡುವ ಹಾಗೆ ಕೆಲವಾದರೂ ಇವೆ. ನಮ್ಮ ಹಿಂದುಸ್ಥಾನದ ಸರಕಾರವು ಸ್ವಲ್ಪ ಸುಧಾರಿಸಿದ್ದು; ಮತಸ್ವಾತಂತ್ರ್ಯವೆಂದರೆ ಶುದ್ಧ ಚಿನ್ನವೆಂದು ನಂಬುವ ದೇಶದಿಂದ ಇಲ್ಲಿಗೆ ಬಂದದ್ದು; ಸಮದೃಷ್ಟಿ, ವಿಶ್ವಬಂಧುತ್ವ, ಪ್ರಜಾಹಿತ ತತ್ಪರತೆ ಮುಂತಾದ ಸ್ವರ್ಗೀಯ ಗುಣಗಳು ನಮ್ಮ ಸರಕಾರದವರ ಜನಾಂಗದ ಆಹಾರವೆ ಸರಿ. ಇಷ್ಟೆಲ್ಲ ಮೂಲಶೋಧನೆ ಮಾಡಿನೋಡುವಾಗ ನಮ್ಮ ರಾಜ್ಯಶಾಸನ ಕ್ರಮವೂ ಇದರಂತೆಯೆ ಮಧ್ಯ ತರಗತಿಯ ಹಾಗು ಸುಧಾರಿಸಿದ ಕ್ರಮದ್ದಾಗಿರಬೇಕೆಂದು ಯಾರಾದರೂ ತ್ರಿಕಾಲ್ಪನ ನೆನಸಬಹುದು. ಆದರೆ ಮೇಲೆ ಹೇಳಿದ ಮೂಲಶೋಧನೆಯನ್ನು ಬಿಟ್ಟು ಇಲ್ಲಿಯ ಸ್ಥಿತಿಶೋಧನೆಯನ್ನು ಮಾಡಿದರೆ ಆ ತ್ರಿಕಾಲ್ಪನಿಗೆ ಇಲ್ಲಿಯ ಕೌನ್ಸಿಲುಗಳೂ, ಅವುಗಳೊಳಗಿನ ಮತಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ಹೊರಗಿನ ಲೇಖನಸ್ವಾತಂತ್ರ್ಯ ಇವೆಲ್ಲ ಸಾರವಿಲ್ಲದವುಗಳೆಂಬುದು ಗೊತ್ತಾಗದೆ ಇರದು. ಮೋರ್ಲೆ-ಮಿಂಟೊ ಸುಧಾರಣೆಗಳ ಅವತಾರಕಾಲದಿಂದ ಹಳೆಕಾಲದ ಎಂದರೆ ಐದಾರು-ಹತ್ತು ಕಾಲದಷ್ಟು ಹಿಂದಿನದಲ್ಲಾದರೂ ಅಶೋಕನ ಕಾಲದ ಕೌನ್ಸಿಲುಗಳು ಹೋಗಿ ಈಗ ಲೋಕಮತದ ಪ್ರತಿಬಿಂಬವು ಕೌನ್ಸಿಲುಗಳಲ್ಲಿ ಹೆಚ್ಚಾಗಿ ಬೀಳಲು ಬಂದು ಪ್ರಶಸ್ತವಾದ ಸಂದರ್ಭವು ಭರತಖಂಡಕ್ಕೆ ಬಂದೊದಗಿದೆಂದು ಕೆಲವರಿಗೆ ಪುತ್ರೋತ್ಸವದಷ್ಟು ಆನಂದವು ಉಕ್ಕುತ್ತಿತ್ತು. ಆದರೆ ಒಂದು ವೇಳೆ ಈ ನವಸುಧಾರಣೆಯಿಂದ ಲೋಕಮತದ ಪ್ರತಿಬಿಂಬವು ಹೆಚ್ಚಿ ಅದು ತನ್ನ ತೇಜಸ್ಸಿನಿಂದ ಕೌನ್ಸಿಲುಗಳಲ್ಲಿ ಹೊಳೆದರೂ ಯಾವ ವರೆಗೆ ಆ ಪ್ರತಿಬಿಂಬಿತ ಲೋಕಮತದ ಪರಿಣಾಮವು ಕಿಂಬಹುನಾ ಧಾರವು ಸರಕಾರದ ಮೇಲೆ ಬೀಳುವುದಿಲ್ಲವೊ ಅಷ್ಟರ ವರೆಗೆ ಲೋಕಪ್ರತಿನಿಧಿಗಳ ಸಯುಕ್ತಿಕ ಸಮರ್ಥನೆ, ನಿರುತ್ತರ ಕೋಟಿಕ್ರಮ, ಮತ್ತು ಗಣಿತ, ಅನುಭವಗಳ ಅಡಿಗಟ್ಟಿನಿಂದ ನಿರೂಪಿಸಿದ ಸಿದ್ಧಾಂತ, ಹಾಗು ಕೊನೆಗೆ ಕೋಪಾಟೋಪ, ಇವುಗಳಿಗೆ ಡಿಬೇಟಿಂಗ್ ಸೊಸೈಟಿಯೊಳಗಿನ ಹುಡುಗರ ವಕ್ತೃತ್ವದಷ್ಟೆ ಬೆಲೆಯಲ್ಲದೆ ಹೆಚ್ಚಾಗಿದ್ದುದು ಕಂಡು ಬರುವುದಿಲ್ಲೆಂದು ಬಹು ಕಷ್ಟದಿಂದ ಹೇಳಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಕೌ. ಮೆಂಬರುಗಳಾಗಲಿ ಅವರ ಮತದವರಾಗಲಿ ಈ ಕೌನ್ಸಿಲಿನ ಮೂಲಕ ಅಥವಾ ಅದರಲ್ಲಿ ಬರುವ ವಿಶಿಷ್ಟ ವ್ಯಕ್ತಿಯ ಮೂಲಕ "ರಾಮರಾಜ್ಯವು" ಉಂಟಾದೀತೆಂದು ನೆನೆಸುವುದು ಬರೆ ಹಾಸ್ಯಾಸ್ಪದ ಮಾತ್ರವಲ್ಲ, ಅಪ್ರಬುದ್ಧತನದ ಕೆಲಸವಾಗಿದೆ.

ಮೇಲಿನ ನಮ್ಮ ಈ ವಿಧಾನಗಳ ಸತ್ಯತ್ವವನ್ನು ನೋಡುವವರಿಗೆ ಕೌನ್ಸಿಲಿನೊಳಗಿನ ಬಹಳ ಹಿಂದಿನ ಸಂಗತಿಗಳನ್ನು ವಿಮರ್ಶಿಸಬೇಕೆಂದಿಲ್ಲ; ನಿನ್ನೆ ಮೊನ್ನೆಯ ಬಿಸಿ ಬಿಸಿ ಪ್ರಸ್ತಾಪಗಳ ಇತ್ಯರ್ಥವನ್ನು ಆಲೋಚಿಸಿದರೆ ಸಾಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸದ ವಿಸ್ತಾರ ಮತ್ತು ಸುಧಾರಣೆ ಮಾಡುವುದಕ್ಕಾಗಿ ಸರಕಾರಿ ಹಾಗು ಬಿನ್-ಸರಕಾರಿ ಗೃಹಸ್ಥರ ಒಂದು ಕಮಿಟಿಯನ್ನು ನೇಮಿಸುವುದು ಅಗತ್ಯವಿದೆಂಬ ಅರ್ಥದ ಒಂದು ಠರಾವು ಈ ಸಾರೆ ನಮ್ಮ ಮದ್ರಾಸ ಕೌನ್ಸಿಲಿನಲ್ಲಿ ಬಂದಿತ್ತು. ಇದಕ್ಕೆ ಪ್ರಮುಖರಾಗಿ ಬಹುಮಾನಪಟ್ಟ ಮಿ| ಸ್ಟೋನರವರು, ಕೆಲವು ಅಡ್ಡಿಗಳನ್ನು ಹೇಳಿ ಸ್ಥಾನಿಕಸರಕಾರವು ಮೂರು ವರ್ಷಕ್ಕಾಗಿ ಇಂಥದೊಂದು ವ್ಯವಸ್ಥೆಯನ್ನು ಮಾಡಿದೆ. ಈ ಠರಾವು ಆಗತ್ಯವಿಲ್ಲೆಂದು ಹೇಳಿದರು. ಇಷ್ಟರಿಂದ ಈ ಠರಾವನ್ನು ತಂದ ನಾಮದಾರ ಕೃಷ್ಣರಾಯರ ಸಮಾಧಾನವಾಗದೆ ಇದ್ದುದರಿಂದ ಕೌ. ಅಧ್ಯಕ್ಷರಾದ ಲೊ. ಪೆಂಟಲಂಡ ಪ್ರಭುಗಳು "ಇಂಥದೊಂದು ಕಮಿಟಿಯನ್ನು ನೇಮಿಸಿ ೧೦ ವರ್ಷಗಳ ವಿದ್ಯಾಭ್ಯಾಸವನ್ನು ರೂಪಿಸಲು ಇದು ಯುದ್ಧಸಮಯ ಎಂದು ಹೇಳಿದರು. ಠರಾವು ಸಭೆಯಲ್ಲಿ ಬಿದ್ದುಹೋಯಿತು. ಇನ್ನೊಂದು ವಿಧದ ಪ್ರಸ್ತಾಪವು ಇದೇ ಕೌನ್ಸಿಲಿನಲ್ಲಿ ಮೊನ್ನೆಯೇ ಬಂದಿತ್ತು. ಅದರಿಂದ ಬಾಧಕವೇನಿತ್ತು? ನಾಮದಾರ ನರಸಿಂಹ ಐಯರರು "ಹಳ್ಳಿಪಳ್ಳಿಗಳಲ್ಲಿ ಪರೆಯ, ಹೊಲೆಯ, ಕೊರಗ ಮುಂತಾದ ಹೀನಸ್ಥಿತಿಯಲ್ಲಿರುವ ಜಾತಿಗಳಿಗೆ ಕೋಳದಂಥ ಕಠಿಣ ಶಿಕ್ಷೆಯನ್ನು ಅಲ್ಲಿಯ ಪಟೇಲರಾಗಲಿ ಬೇರೆ ಅಧಿಕಾರಿಗಳಾಗಲಿ ವಿಧಿಸುತ್ತಿದ್ದಾರೆ; ಈ ಕ್ರೂರ ಪದ್ಧತಿಯನ್ನು ನಿಲ್ಲಿಸಬೇಕೆಂದು ಒಂದು ಠರಾವನ್ನು ತಂದರು. ಇದಾದರೂ ಪಾಸಾಗಬಹುದಿತ್ತಲ್ಲವೆ? ಯುದ್ಧಕಾಲವು ಮೇಲಿನ ಠರಾವಿಗೆ ಕಾಲವಾದಂತೆ ಇದಕ್ಕೂ ಆಗಬೇಕಿತ್ತೆ? ಎಂದರೆ ಒಂದು ಅರ್ಥದಿಂದ ಅಥವಾ ಈ ವಿಷಯದ ಕುರಿತು ಆದ ಚರ್ಚೆಯೊಳಗಿನ ಶಬ್ದಗಳ ಆಧಾರದಿಂದ ಹೇಳುವುದಾದರೆ ಯುದ್ಧಕಾಲವು ಈ ಠರಾವಿಗೆ ಕಾಲವಾಗಲಿಲ್ಲೆಂಬುದು ನಿಜ. ಆದರೂ ಯಾವ ಕಾರಣದಿಂದಲೆ ಆಗಲಿ ಅದು ಮೂಲೆಗೆ ಬಿದ್ದು ಹೋಯಿತೆಂಬ ಮಾತು ಮಾತ್ರ ಸತ್ಯವು. ಹದಿನೈದು ತಿಂಗಳ ಹಿಂದೆ ಇದೆ ಅರ್ಥದ ಠರಾವು ಬಂದಾಗ ಸರಕಾರದ ಕಡೆಯಿಂದ "ಇಂಥ ಕಠಿಣ ಶಿಕ್ಷೆಯು ಬೇಗನೆ ನಿಲ್ಲುವಂತೆ ವಿಚಾರಿಸಲಾದೀತೆಂದು ಹೇಳೋಣಾಗಿತ್ತು." ಈ ಮಾತನ್ನು ನೆನಪಿಗೆ ತಂದುಕೊಟ್ಟು, ನಾಮದಾರ ಐಯರರು "ಈಗ ಮೂರು ವರ್ಷಗಳಿಂದ ಸರಕಾರವು ಇದನ್ನು ನಿಲ್ಲಿಸಬೇಕೆಂದಿದೆ; ಆದರೆ ಈ ಅವಧಿಯಲ್ಲಿ ಇಂಥ ಅಪಮಾನದ ಶಿಕ್ಷೆಗೆ ಒಳಗಾದ ವ್ಯಕ್ತಿಯ ಸಂಖ್ಯೆಯನ್ನು ನೋಡಿದರೆ ಅದು ಎರಡು ಸಾವಿರ ತುಂಬುತ್ತದೆ. ಆದುದರಿಂದ ಗ್ರಾಮಪಟೇಲ ಮುಂತಾದ ಶಿಕ್ಷೆಯು ಈ ವಿಧಿಯನ್ನು ವಿಧಿಸುವ ಜನಗಳಿಗೆ ಇನ್ನು ಮುಂದೆ ಇದನ್ನು ನಿಲ್ಲಿಸುವಂತೆ ಅಧಿಕಾರಿಗಳ ಮುಖಾಂತರ ಹುಕುಮು ಕಳುಹಿಸಬೇಕೆಂದು" ಅರಿಕೆಮಾಡಿಕೊಂಡರು. ಈ ಅರಿಕೆಗೆ ಸರಕಾರವು ಪ್ರತ್ಯುತ್ತರವನ್ನು ಕೊಡಲು ಹಿಂಜರಿಯಲಿಲ್ಲ! ವರಿಷ್ಠ ಸರಕಾರದೊಡನೆ ಈ ವಿಷಯದಲ್ಲಿ ಮದ್ರಾಸ ಸರಕಾರವು ಆಲೋಚಿಸುತ್ತಾ ಇದೆ. ಆ ಆಲೋಚನೆಯು ತೀರಿದ ನಂತರ ಸರಕಾರವು ತಾನಾಗಿಯೆ ಒಂದು ಠರಾವನ್ನು ತಂದು ಈ ಪದ್ಧತಿಯನ್ನು ನಿರ್ಮೂಲಮಾಡೀತೆಂದು ಹೇಳಿದರೂ ಈ ನಮ್ಮ ಐಯರರು ತಮ್ಮ ಆಗ್ರಹವನ್ನು ಬಿಡಲಿಲ್ಲ. ಠರಾವು ಮತಗಳ ಎಣಿಕೆಗೆ ಬಿತ್ತು. ಸರಕಾರದ ಕಡೆಗೆ ಬಹು ಮತವಾಯಿತು. ಎಂದ ಮೇಲೆ ಜಯವು ಸರಕಾರದ ಕಡೆಗೆ ಬಂತೆಂದು ವಾಚಕರಿಗೆ ತಿರುಗಿ ಹೇಳಬೇಕಾದುದಿಲ್ಲ.

ಕೌನ್ಸಿಲಿನ ಈ ಪರಿಸ್ಥಿತಿಯನ್ನು ನೋಡುವಾಗ ಯಾರಿಗೆ ತಾನೆ ಈ ಸುಧಾರಿಸಿದ ಕೌನ್ಸಿಲುಗಳ ಬಗ್ಗೆ ಅಭಿಮಾನ ಅಥವಾ ಆನಂದವಾದೀತು. ಲೋಕಪಕ್ಷದ ಸಭಾಸದರಿಗಿಂತಲೂ ಹೆಚ್ಚಿನ ಸಭಾಸದರು ಸರಕಾರದ ಕಡೆಗಿರುವಾಗ ಲೋಕಮತಕ್ಕೆ ಜಯ ಬರುವುದೆಂದರೇನು? ಇಂಥ ಪ್ರಸಂಗಗಳಲ್ಲಿ ಲೋಕಮತಕ್ಕೆ ಜಯ ಬರುವುದಿಲ್ಲವಾದರೂ ಈ ಸಂಧರ್ಭದಲ್ಲಿ ಒಂದು ಚಿಕ್ಕ ಸಂಗತಿಯನ್ನು ಹೇಳಲು ನಮಗೆ ಯಾವ ಅಡ್ಡಿಯೂ ಕಂಡು ಬರುವುದಿಲ್ಲ. ಹಿಂದೀ ಶಿಕ್ಷಿತ ಮಂಡಳಿಗಳು ಪಂಚಮರಂಥಾ ಅಶಿಕ್ಷಿತ ವರ್ಗಗಳ ಯಥಾರ್ಥ ಪ್ರತಿನಿಧಿಗಳಲ್ಲ ಮತ್ತು ಅವರ ಸ್ವೈರ ಕ್ಷೇಮವನ್ನು ಇಂಗ್ಲೀಷ ಆಫೀಸರರು ನೋಡಿದಷ್ಟು ಹಿಂದೀ ಶಿಕ್ಷಿತ ವರ್ಗವು ನೋಡುವದಿಲ್ಲ — ಈ ವಿಧಾನಗಳು ಹಿಂದೀ ಜನರ ಸ್ವರಾಜ್ಯ ಧ್ಯೇಯದ ವಿರೋಧಿಗಳಿಂದ ಆಗಾಗ್ಗೆ ಬರುತ್ತಿರುತ್ತಿವೆ. ಇಂಥ ವಿಧಾನಗಳಲ್ಲಿ ಸತ್ಯತ್ವವು ಎಷ್ಟರ ಮಟ್ಟಿಗೆ ಇರುವುದೆಂಬುದು ಬಹುಮಾನಪಟ್ಟ ಐಯ್ಯರವರ ಬಿದ್ದುಹೋದ ಈ ನಿರ್ಣಯದಿಂದ ಕಾರ್ಯತಃ ತೋರಿಸಿಕೊಟ್ಟಂತಾಯಿತು. ಇರಲಿ, ಯಾವ ಬಾಧಕವೂ ಇಲ್ಲದಾಗ ಇಂಥ ಸತ್ಪ್ರವೃತ್ತಿಯಲ್ಲಿ ಸರಕಾರವು ಕಿಂಬಹುನಾ ಸರಕಾರಿ ಸಭಾಸದರು ಅದನ್ನು ವಿನಾ ಕಾರಣ ಕೆಡಿಸುವಾಗ ಆ ಕೌನ್ಸಿಲಿನ ಪ್ರಸ್ತಾಪಗಳಲ್ಲಿ ಮಹತ್ವದ್ದನ್ನು ಏನು ಹೇಳಬಹುದು? ನಿರ್ಧಾರಕವಾದ ಸಂಗತಿಯೂ ಮೂಲೆಗೊತ್ತಲ್ಪಡುವಾಗ ಇನ್ನಾವದನ್ನು ಅಪೇಕ್ಷಿಸಬಹುದು?

ಸ್ಫುಟವಿಚಾರಗಳು.

೧. ಹಿಂದುಸ್ಥಾನದ ಕಮಾಂಡರ ಇನ್ ಚೀಫರು ಕೌನ್ಸಿಲಿನಲ್ಲಿ ಪಾಸು ಮಾಡಿಸಿಕೊಂಡ ಭಾರತ ಸಂರಕ್ಷಕ ಸೈನ್ಯದ ಠರಾವಿನಂತೆ ಸೈನ್ಯದಲ್ಲಿ ಪ್ರವೇಶಿಸುವವರಿಗೆ ಅವಶ್ಯವಿರುವ ನಿಯಮಗಳು ಇತ್ತಲಾಗೆ ಪ್ರಸಿದ್ಧವಾಗಿದ್ದಾವೆ. ಈ ನಿಯಮಗಳ ಸಾರಾಂಶ: ೧ ಭಾರತ ಸಂರಕ್ಷಕ ಸೈನ್ಯದಲ್ಲಿ ಸೇರಲಿಚ್ಛಿಸುವವನು ಇಷ್ಟರ ವರೆಗೆ ಹಿಂದೀ ಸೈನ್ಯದಲ್ಲಿ ಇರುವ ವರ್ಗದೊಳಗಿನವನಾಗಿರಕೂಡದು. ೨. ಗುನ್ಹೆಗಾರಿ ವರ್ಗದೊಳಗಿನವನಾಗಿರ ಕೂಡದು. ಅವನು ಕೈದಿಯ ಅಥವಾ ದ್ವೀಪಾಂತರದ ಶಿಕ್ಷೆಯಾದವನಿರ ಕೂಡದು, ಅಥವಾ ಕ್ರಿಮಿನಲ್ ಪ್ರೊ. ಕೋಡಿನ ಪ್ರಕಾರ ಜಾಮೀನಿಗೆ ಒಳಪಟ್ಟವನಿರ ಕೂಡದು. ೩. ಕೂಲಿಯಂಥ ಚಿಲ್ಲರೆ ಮತ್ತು ಹೀನ ಕೆಲಸ ಮಾಡುವವನಾಗಿರ ಕೂಡದು. ೪. ಅವನ ನಡತೆಯು ನಿರಪವಾದವಾಗಿಯೂ ಶುದ್ಧವಾಗಿಯೂ ಇರಬೇಕು. ೫. ಅವನಿಗೆ ೧೮ ವರ್ಷ ವಯಸ್ಸಾಗಿರಬೇಕು. ೬. ಹಿಂದೀ ಸೈನ್ಯದಲ್ಲಿ ಸೇರಬೇಕಾದರೆ ಎದೆಯ ವಿಸ್ತಾರವೆಷ್ಟಿರಬೇಕೋ ಅಷ್ಟೇ ವಿಸ್ತಾರ ಮತ್ತು ಶರೀರದ ದೃಢತೆ ಈ ಭಾರತ ಸಂರಕ್ಷಕ ಸೈನ್ಯದ ಉಮೇದವಾರನಿಗೂ ಅವಶ್ಯವಿದೆ. ... ಗಳಿಗೂ ನಿರ್ಬಂಧಗಳಿಗೂ ಒಳಪಟ್ಟು ಸೈನ್ಯದಲ್ಲಿ ಸೇರಬಯಸುವವರು ಆಯಾ ಜಿಲ್ಲಾ ಅಧಿಕಾರಿಗೆ ಅಥವಾ ಮುಂಬಯಿ, ಮದ್ರಾಸ, ಕಲಕತ್ತೆ, ಇಲ್ಲವೆ ರಂಗೂನಿನ ಪೋಲಿಸ್ ಕಮಿಷನರ ಕಡೆಗೆ ಅರ್ಜಿ ಮಾಡಿಕೊಳ್ಳತಕ್ಕದ್ದು. ಈ ಪ್ರಕಾರ ನಿಯಮಗಳ ಸಂಕ್ಷಿಪ್ತ ಸಾರಾಂಶವು. ಈ ನಿಯಮಗಳು ಅಷ್ಟೊಂದು ಪೂರ್ಣವಿದ್ದಾವೆನ್ನಕೂಡದು. ಆದರೂ ಇನ್ನು ಮುಂದೆ ಆ ಬಗ್ಗೆ ವಿಲಂಬಮಾಡದೆ ಉಮೇದುವಾರರು ಜಿಲ್ಲಾಧಿಕಾರಿಗಳಿಂದ ಈ ವಿಷಯಕ್ಕೆ ಸಂಬಂಧ ಪಟ್ಟ ಪ್ರಶ್ನೆ ಪತ್ರಿಕೆಯನ್ನು ತರಿಸಿ ಅದರಂತೆ ಅರ್ಜಿ ಮುಖಾಂತರ ಭಾರತ ಸಂರಕ್ಷಕ ಸೈನ್ಯದಲ್ಲಿ ಸೇರುವುದು ಉಚಿತವಾಗಿದೆ. ಹಿಂದೆ ನಾವು ಒಂದೆರಡು ಸಾರಿ ಹೇಳಿದಂತೆ ಇದರಲ್ಲಿ ಸೇರುವುದೆಂಬುದರ ಅರ್ಥವು ಮಾತೃಭೂಮಿಯನ್ನು ಕಾಪಾಡುವುದು, ಸ್ವದೇಶ ಕಾರ್ಯವನ್ನು ಮಾಡುವುದು, ಕೇವಲ ಕರ್ತವ್ಯವೆಂಬ ಭಾವನೆಯಿಂದ ಇದನ್ನು ಕೈಕೊಳ್ಳುವುದಾಗಿದೆ. ಆದುದರಿಂದ ಸಂಬಳವೆಷ್ಟು, ಭತ್ತೆಯೆಷ್ಟು, ಬೇರೆ ಖರ್ಚಿನ ವ್ಯವಸ್ಥೆಯೇನೆಂದು ಮುಂತಾದ ಕ್ಷುದ್ರ ವಿಚಾರಗಳನ್ನು ಮಾಡುತ್ತ ಕಾಲಯಾಪನೆ ಮಾಡುವುದು ಲೇಸಲ್ಲ. ಈ ವಿಷಯಗಳಲ್ಲಿ ಸರಕಾರವು ತಕ್ಕ ಮಾಹಿತಿಯನ್ನು ಪ್ರಸಿದ್ಧ ಮಾಡಬೇಕಿತ್ತೆಂಬದು ಸರ್ವಥಾ ನಿಜ. ಪರಂತು ನಾವಾದರೂ ನಮ್ಮ ಕರ್ತವ್ಯವನ್ನು ತತ್ಪರತೆಯಿಂದ ಮಾಡೋಣ. ಇಷ್ಟೆ ದೇಶಬಂಧುಗಳಿಗೆ ನಮ್ಮ ಸೂಚನೆ.

೨. ಲೋರ್ಡ ಪೊಂಟಿಗೊ ಪ್ರಭುಗಳ ಸೂಚನೆ ಮೇರೆಗೆ ಮುಂಬಯಿಯ ಸುಪ್ರಸಿದ್ಧ ಶ್ರೀಮಂತರಾದ ಸರ್ ದೊರಾಬಜಿ ಟಾಟಾ ಎಂಬವರು ೪ ಜಲವಿಮಾನಗಳನ್ನು ಸರಕಾರಕ್ಕೆ ಕೊಡಲು ವಾಗ್ದಾನ ಮಾಡಿರುವರು. 'ಎರೋಪ್ಲೇನ್' ಎಂದರೆ ವಾಯುವಿಮಾನವೆಂಬ ಹೆಸರನ್ನು ವಾಚಕರು ಮೊದಲೆ ಕೇಳಿರ ಬಹುದು. ಎರೋಪ್ಲೆನಿಗೆ ಕೆಳಭಾಗದಲ್ಲಿ ರಥಕ್ಕೆ ಇದ್ದಂತೆ ಚಿಕ್ಕ ಚಿಕ್ಕ ಚಕ್ರಗಳಿದ್ದು ಮೇಲು ಭಾಗದಲ್ಲಿ ಗಾಳಿಯನ್ನು ತುಂಬಿಸಿಕೊಳ್ಳುವ ಸಾಧನೆಯು ಇರುವುದು. ತುಂಬಿಸಿಕೊಂಡ ಗಾಳಿಯ ಸಾಧನೆಯಿಂದ ಅದು ಹವೆಯಲ್ಲಿ ಸಂಚರಿಸ ಬಲ್ಲುದು, ಹಾಗು ಚಕ್ರಗಳ ಸಹಾಯದಿಂದ ನೆಲದ ಮೇಲೂ ಹೋಗ ಬಲ್ಲುದು. ಇದರಂತೆ "ಸೀಪ್ಲೇನ್" ಎಂಬುದಕ್ಕೆ ಅಡಿಯಲ್ಲಿ ದೋಣಿಯಂತೆ ನೀರಿನ ಮೇಲೆ ಹೋಗುವುದಕ್ಕಾಗಿ ರಬ್ಬರಿನ ಸಾಧನೆಯಿದ್ದು ವಿಮಾನಕ್ಕಿರುವಂತೆ ಗಾಳಿ ತುಂಬಿಸಿಕೊಳ್ಳಲು ಮೇಲುಗಡೆಯಲ್ಲಿ ಸಾಧನೆಯನ್ನಿಟ್ಟಿರುವರು. ಇದು ನೀರಿನ ಮೇಲೂ ಹವೆಯಲ್ಲಿಯೂ ಏಕಪ್ರಕಾರವಾಗಿ ಹೋಗುತ್ತದಂತೆ. ಇಂಥ ನಾಲ್ಕು ಜಲ ವಿಮಾನಗಳನ್ನು ಪಶ್ಚಿಮ ಸಮುದ್ರದ ತೀರವನ್ನು ಕಾಯುವುದಕ್ಕೆ ಸರ್ ದೋರಾಬರು ಕೊಟ್ಟಿದ್ದಾರೆ. ಹಿಂದೀ ಗೃಹಸ್ಥರು ತಮ್ಮ ಔದಾರ್ಯದಿಂದ ಇಂಥ ದಾನಗಳನ್ನು ಈ ಯುದ್ಧ ಸಮಯದಲ್ಲಿ ಸರಕಾರಕ್ಕೆ ಕೊಡುವುದರಿಂದ ನಿಜವಾಗಿ ಸರಕಾರವು ಈ ಉದಾರಿಗಳ ಮೇಲೆ ಕೃತಜ್ಞವಾಗಿಯೇ ಇದ್ದೀತೆಂಬುದರಲ್ಲಿ ಸಂದೇಹವಿಲ್ಲ. ಹಿಂದೀ ಗೃಹಸ್ಥರು ಕೊಟ್ಟಿರುವ ಈ ಜಲವಿಮಾನಗಳ ಮೇಲಿನ ಕೆಲಸವು ಹಿಂದೀ ತರುಣರ ಕೈಗೆ ಒಪ್ಪಿಸುವಂತೆ ಸರಕಾರವು ಅವರಿಗೆ ಶಿಕ್ಷಣೆಯನ್ನು ಕೊಡಬಹುದೆಂಬದಾಗಿ ಒಬ್ಬ ಪತ್ರಕಾರರು ಸೂಚಿಸಿದನ್ನು ನಾವು ಅನುಮೋದಿಸುವೆವು.

೩. ಹಿಂದುಸ್ಥಾನದಲ್ಲಿ ಪ್ರಜೆಗಳು ಅಥವಾ ಪ್ರಜೆಗಳ ಮುಖಂಡರು ಹೋಮರೂಲಿನ ಪ್ರಸ್ತಾಪವನ್ನೆತ್ತಿದರೆ ಮುಂಬಯಿ ಗವರ್ನರರಂಥ ಕೆಲವು ಅಧಿಕಾರಿಗಳಿಗೆ ಅಸಮಾಧಾನವುಂಟಾಗುವದು. 'ಇದು ಸಮಯವಲ್ಲ; ವಿವಾದ್ಯ ವಿಷಯಗಳಿಗೆ ಈಗ ಎಡೆಯಿಲ್ಲ. ಮತ್ತು ಹಾಗೆ ಎಡೆಕೊಡುವುದೂ ಅಯುಕ್ತವು' ಎಂದು ಇಂಥ ಅಧಿಕಾರಿಗಳು ಹಿಂದೂಸ್ಥಾನದಲ್ಲಿ ಹೇಳತಕ್ಕ ಸೂತ್ರಗಳು. ಯುದ್ಧವು ಪ್ರತ್ಯಕ್ಷ ಯುರೋಪದಲ್ಲಿ ನಡೆದು ಅದೇ ಖಂಡದ ಏಕದೇಶವಾದ ಐರ್ಲಂಡಿಗೆ ಸ್ವರಾಜ್ಯ ಕೊಡಬಹುದೆಂಬುದಾಗಿ ಪಾರ್ಲಿಮೆಂಟಿನೊಳಗೆ ಬಹಿರಂಗವಾಗಿ ಮಾತುಗಳು ನಡೆಯುತ್ತವೆ. ಕಾರಣ - ಬೋನರಲೊ ಎಂಬವರು ಒಂದು ಸೂಚನೆಯನ್ನು ತಂದು ಸಮರ್ಥಿಸಿದ್ದೇನೆಂದರೆ, ಆಯರಿಶ್ ನೆಶನಲಿಷ್ಟ ಮತ್ತು ಅಲ್‌ಸ್ಟರಿನವರ ಅಂಬೋಣವೇನೂ ಇರಲಿ, ಆಯರ್ಲಂಡಿನೊಳಗಿನ ದೊಡ್ಡ ಭಾಗಕ್ಕೆ ಸರಕಾರವು ಹೋಮರೂಲನ್ನು ಕೊಡುವ ಆಲೋಚನೆಯಲ್ಲಿದೆ. ಇದು ಆಲೋಚನೆ ಮಾತ್ರವಲ್ಲ, ಸರಕಾರವು ಇದನ್ನು ಆದಷ್ಟು ಬೇಗನೆ ಕಾರ್ಯರೂಪದಲ್ಲಿ ತಂದೀತು. ಆಯರಿಶ್ ನೆಶನಲಿಷ್ಟರಲ್ಲಿ ಪ್ರಮುಖರಾದ ಮಿ. ರೆಡ್‌ಮಂಡ ಮುಂತಾದವರಿಗೆ ಇಡಿ ಆಯರ್ಲಂಡಿಗೆ ಹೋಮರೂಲ ಕೊಡಬೇಕೆಂದಿದ್ದರೂ ವಿರುದ್ಧಪಕ್ಷದ ಮುಖಂಡರಾದ ಮಿ. ಕಾರ್ಸನರ ಅನುಮತಿಯಿಂದಲೆ ಈ ಹೊಸ ಯೋಜನೆಯನ್ನು ಬೋನರಲೊ ಇವರು ರೂಪಿಸಿರುವುದರಿಂದ ಇದು ರೆಡ್‌ಮಂಡರ ಸಮ್ಮತಿಗೆ ಪಾತ್ರವಾಗಿದೆ. ಇರಲಿ. ಹೇಗಿದ್ದರೂ ಆಯರ್ಲಂಡಿಗೆ ಹೋಮ ರೂಲ ಕೊಡಲು ಇಂಗ್ಲೆಂಡಿನಲ್ಲಿ ಪ್ರಸ್ತಾಪಗಳಾದರೂ ಯಾವ ಭಯವಿಲ್ಲದೆ ನಡೆಯುತ್ತವೆ. ಈ ಹಿಂದುಸ್ಥಾನದಲ್ಲಿ — ಯುದ್ಧಭೂಮಿಯಿಂದ ಇಷ್ಟು ದೂರದಲ್ಲಿರುವ ಈ ಹಿಂದುಸ್ಥಾನದಲ್ಲಿ ಜನರಿಗೆ ತಮ್ಮ ಸೌಮ್ಯ ಆಕಾಂಕ್ಷೆಗಳನ್ನು ಅಧಿಕಾರಿಗಳಿಗೆ ಪ್ರಕಟಿಸಲು ಅವಕಾಶವು ದೊರಕುವುದು ಕಷ್ಟಸಾಧ್ಯ. ಇದು ಈ ದೇಶದ ದೌರ್ಭಾಗ್ಯವಲ್ಲದೆ ಇದಕ್ಕೆ ಇನ್ನಾವ ಉಪಪತ್ತಿಯು ಹತ್ತುವಂತಿಲ್ಲ. ನಮ್ಮ ಆಯರ್ಲಂಡಿನ ಬಂಧುಗಳಿಗಾದರೂ ಅವರ ಮತ್ತು ಸರಕಾರದ ಸಮ್ಮತಿಯಿಂದ ಈ ... ಈ ಸುಧಾರಿಸಿದ ರಾಜ್ಯಶಾಸನ ಕ್ರಮವು ಸಿಗಲೆಂದು ಬಯಸುವೆವು.

೪. ಹಿಂದೂಸ್ಥಾನದ ...

ಸರಿಯಾಗಿ ಆಲೋಚಿಸಲು ಪ್ರಜೆಗಳ ಪ್ರತಿನಿಧಿಗಳಿಗೆ ಹಕ್ಕಿಲ್ಲ— ಇದೇ ಇಲ್ಲಿಯ ಬ್ಯೂರೋಕ್ರಸಿಯು ಲೋಕಮತಕ್ಕೆ ಜವಾಬುದಾರವಿಲ್ಲೆಂಬುದರ ಅರ್ಥವು. ಹಿಂದೂಸ್ಥಾನದ ಈ ಸ್ಥಿತಿಯು ಇರಬಾರದು, ಅಲ್ಲಿಯ ಕಾರಭಾರವು ಹ್ಯಾಗೆ ನಡೆದಿದೆ, ಈ ವಿಷಯದಲ್ಲಿ ಯೋಗ್ಯ ತನಖಿ ನಡಿಸಿ ಅದರ ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿಡಲು ಒಂದು ಕಮಿಷನು ನೇಮಿಸಬೇಕೆಂದು ಸರ್ ಚಾರ್ಲ್ಸ್ ಹೆನ್ರಿಯವರು ಹೌಸ್ ಒಫ್ ಕೊಮನ್ಸಿನಲ್ಲಿ ಕಳೆದ ಶುಕ್ರವಾರ ಒಂದು ಸೂಚನೆಯನ್ನು ತಂದರು. ಆದರೆ ಸರ್ ಹೆನ್ರಿಯವರ ಈ ನಿರುಪದ್ರವ ಸೂಚನೆಯು ಕೂಡ ನಿಷ್ಫಲವಾಯಿತು. ಸರಕಾರದ ಕಡೆಯಿಂದ ಬೋನರ್‌ಲೊ ಎಂಬವರು 'ಇಂಥ ಕಮಿಷನು ನೇಮಿಸಬೇಕಾದ ಅಗತ್ಯವಿಲ್ಲ; ಈ ವಿಷಯದಲ್ಲಿ ಸ್ವಯಂ ಸರಕಾರವೆ ಆಲೋಚನೆ ಮಾಡುತ್ತಿದೆ'ಂದು ಉತ್ತರ ಕೊಟ್ಟರು. ಪಾರ್ಲಿಮೆಂಟಿನಲ್ಲಿ ನಡೆದ ಈ ಪ್ರಶ್ನೋತ್ತರಗಳು ಹಿಂದೂಸ್ಥಾನದ ಜನತೆಯಲ್ಲಿ ನಿರಾಶೆಯನ್ನು ಹುಟ್ಟಿಸದೆ ಇರವು. ಕಂಪನಿಸರಕಾರದ ಕೈಯಿಂದ ಇಲ್ಲಿಯ ಆಡಳಿತೆಯನ್ನು ತೆಗೆದು ಅದನ್ನು ಬ್ರಿಟಿಷ್ ಪಾರ್ಲಿಮೆಂಟು ತನ್ನ ಅಧಿಕಾರದೊಳಗಿಟ್ಟುಕೊಂಡು ಈಗ ಸಾಧಾರಣ ಐದು ತಪಸ್ಸುಗಳು ಅಥವಾ ಅಷ್ಟೆ ಡಜನು ವರ್ಷಗಳಾಗುತ್ತ ಬಂದವು. ಇಲ್ಲಿಯ ಆಡಳಿತೆಯು ಸರಿಯಾಗಿ ನಡಿಯುವಂತೆ ತನಖಿ ಮಾಡಲು ಸ್ಟೇಟ ಸೆಕ್ರೆಟರಿಯನ್ನು ನೇಮಿಸಿದರು. ಆದರೆ ಇದರ ಪರಿಣಾಮವೇನಾಗಿದೆಂದರೆ ಹಿಂದೂಸ್ಥಾನದ ಅಧಿಕಾರಿಗಳ ಮತ್ತು ಇಂಗ್ಲಂಡಿನೊಳಗಿನ ವ್ಯಾಪಾರಿಗಳ ಆಟೋಪದೊಳಗೆ ಈ ಸ್ಟೇಟ ಸೆಕ್ರೆಟರಿಯು ಇರಬೇಕಾಗಿ ಬರುತ್ತದಲ್ಲದೆ ಹಿಂದೂಸ್ಥಾನದ ಪ್ರಜಾಮತದ ಕಡೆಗೆ ಅವನ ದೃಷ್ಟಿಯು ಹೋಗಲು ಸರಿಯಾದ ಆಸ್ಪದವಿಲ್ಲ. ಆದುದರಿಂದ ಇಲ್ಲಿಯ ಕಾರಭಾರವು ಹ್ಯಾಗೆ ನಡೆಯುತ್ತಿದೆ, ಇದನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿಡುವುದಕ್ಕಾಗಿ ಕಮಿಷನು ನೇಮಿಸಬೇಕೆಂದು ಸರ್ ಚಾರ್ಲ್ಸರು ಒಂದುಸೂಚನೆಯನ್ನು ತಂದಿದ್ದರು. ಪರಂತು ಅದು ಮಿ. ಲೋ ಇವರ ಉತ್ತರದಿಂದ ಮೇಲೆ ಹೇಳಿದಂತೆ ವಿಫಲವಾಯಿತು!

೫. ಇಲ್ಲಿಯ ಜನತೆಯಲ್ಲಿ ಮೇಲಿನ ಒಂದೇ ಸಂಗತಿಯಿಂದಲೆ ನಿರಾಶೆಯಾದೀತೆಂದಲ್ಲ, ರೊಯ್ಟರನು ಕಳುಹಿಸಿದ ಇನ್ನೊಂದು ವರ್ತಮಾನದಿಂದಲೂ ಜನರು ಸಂಶಯಚಿತ್ತರಾಗಲಿಕ್ಕೆ ಆಸ್ಪದವಿರುವದು. ಇಂಗ್ಲಂಡಿನಲ್ಲಿ "ಇಂಪೀರಿಯಲ್ ಡೆವಲಪ್‌ಮೆಂಟ್ ಬೋರ್ಡ್" ಎಂಬಂಥಾ ಒಂದು ಸಂಸ್ಥೆಯನ್ನು ಸ್ಥಾಪಿಸಿ ಸಾಮ್ರಾಜ್ಯದ ವ್ಯಾಪಾರ ಮತ್ತು ಕೈಗಾರಿಕೆಗಳ ಬೆಳವಣಿಕೆಗೆ ಬೇಕಾದ ಮೇಲ್ವಿಚಾರವನ್ನು ಆಗಿಂದಾಗ್ಗೆ ನಡಿಸಬೇಕೆಂಬುದನ್ನು ಡೊಮಿನಿಯನ್ ರೊಯಲ್ ಕಮಿಷನಿನವರು ಸಾಮ್ರಾಜ್ಯ ಸರಕಾರಕ್ಕೆ ಸೂಚಿಸಿರುತ್ತಾರೆ. ಇಂಥಾ ಸೂಚನೆಯಲ್ಲಿ ಹಿಂದೀ ಜನರ ಆಕ್ಷೇಪವೇನೂ ಇರದು. ಆದರೆ ಇಂಪಿರಿಯಲ್ ಇನ್ಸ್‌ಟಿಟ್ಯೂಟ್ದವರು ನಡಿಸುವ ಹಿಂದೀ ವ್ಯಾಪಾರ ವಿಭಾಗದಲ್ಲಿ ಹಿಂದೂಸ್ಥಾನಕ್ಕೆ ದೊರಗು ಜೀನಸುಗಳನ್ನು ಸಂಗ್ರಹಿಸಿ ಕೊಡುವ ಪ್ರಾಪ್ತಿಯು ಮಾತ್ರ ಬಂದೊದಗಬಹುದೆಂಬ ಸೂಚನೆಗೆ ಎಡೆ ಇರುವದು. ಇದರಿಂದ ತಮ್ಮ ಕೈಗಾರಿಕೆಗಳ ಮುಂದಿನ ಬೆಳವಣಿಕೆಯ ವಿಷಯ ಅಂಜಿಕೆಯು ಉಂಟಾಗಬಹುದಾದ್ದರಿಂದ ಇಂಥಾ ಅಂಜಿಕೆಯನ್ನು ಸಾಮ್ರಾಜ್ಯ ಸರಕಾರದವರು ಸ್ಪಷ್ಟ ಮಾತುಗಳ ಮೂಲಕ ಹೋಗಲಾಡಿಸುವದು ಅಗತ್ಯವಾಗಿದೆ.

೬. ಇಲ್ಲಿಯ ವ್ಯಾಪಾರ ಮುಂತಾದ್ದರ ಅಭಿವೃದ್ಧಿಗಾಗಿ ಹಿಂದುಸ್ಥಾನದ ಜನರು ಎಷ್ಟು ಒದ್ದಾಡುತ್ತಿದ್ದಾರೆ. ಇದಕ್ಕೆ ದೃಷ್ಟಾಂತವಾಗಿ ಹೇಳುವುದಾದರೆ ಈ ವಾರದಲ್ಲಿ ದಕ್ಷಿಣ ಹಿಂದೂಸ್ಥಾನದ "ಚೇಂಬರ ಒಫ್ ಕೊಮರ್ಸಿ"ನ ಸಭೆಯು ಕೂಡಿ ಅದರಲ್ಲಿ ನಡೆದ ವಿಷಯವನ್ನು ಹೇಳಬಹುದು. ಇದರಲ್ಲಿ ಕಳೆದ ವರ್ಷದ ವರದಿಯನ್ನೂ, ಆ ವರ್ಷದಲ್ಲಿ ಆದ ಅದರ ಅಭಿವೃದ್ಧಿಯನ್ನೂ ಓದಿ ಹೇಳಿ ಅನಂತರ ಅದರ ಅಧ್ಯಕ್ಷರಾದ ರಾವ್ ಬಹದ್ದೂರ ತ್ಯಾಗರಾಜ ಚೆಟ್ಟಿಯವರು ಹಿಂದುಸ್ಥಾನಕ್ಕೆ ಆರ್ಥಿಕ ಸ್ವರಾಜ್ಯವನ್ನು ಕೊಡುವುದು ಉಚಿತವಾಗಿದೆಂದು ಹೇಳಿದರು. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಇಲ್ಲಿಯ ವ್ಯಾಪಾರದ ಕೈಗಾರಿಕೆಯು ಉತ್ಕರ್ಷವಾಗಲಾರದೆಂದು ಅವರೂ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುವರು.

೭. ಕೆಲವು ದಿವಸಗಳ ಹಿಂದೆ ಪ್ರಸಿದ್ಧಿಗೆ ಬಂದ ರೌಂಡಟೇಬಲ್ ಎಂಬ ಸಂಸ್ಥೆಯ ಒಬ್ಬ ಮೆಂಬರರಾದ ಮಿ. ಕರ್ಟಿಸರ ಹೆಸರನ್ನು ವಾಚಕರಿಗೆ ಇನ್ನೂ ಮರೆತಿರಲಾರದು. ಇವರು ಹಿಂದೂಸ್ಥಾನದಲ್ಲಿ ಬಂದು ಇಲ್ಲಿಯ ದೊಡ್ಡ ದೊಡ್ಡ ಅಧಿಕಾರಿಗಳ ಮದವಳಿಕೆಯನ್ನು ಅನುಭವಿಸಿ ಅದರ ಪ್ರತಿಫಲವೋ ಎಂಬಂತೆ ಹಿಂದೂಸ್ಥಾನದ ಕಾರಭಾರವು ಇಷ್ಟರವರೆಗೆ ಒಂದೆ ಇಂಗ್ಲಂಡವು ನಡಿಸುತ್ತಿದ್ದುದು ಇನ್ನು ಮುಂದೆ ವಸಾಹತುಗಳು ಅದರಲ್ಲಿ ಪಾಲುಗಾರರಾಗಬೇಕೆಂದು ಪ್ರಯತ್ನಮಾಡಿಕೊಂಡಿದ್ದರು. ಆದರೆ ಈ ಅನಿಷ್ಟವು ಇನ್ನು ಮುಂದೆ ಬರಲಿಕ್ಕಿಲ್ಲೆಂದು ಪಾರ್ಲಿಮೆಂಟಿನಲ್ಲಿ ಮಿ. ಚೆಂಬರಲೇನರು ತಿಳಿಸಿರುವರು. ಹಿಂದೂಸ್ಥಾನದ ರಾಜ್ಯದಾಡಳಿತೆಯು ಯಾವ ಪ್ರಶ್ನೆಯೂ ವಸಾಹತುಗಳ ಕೈಗೆ ಬೀಳಲಾರವು; ಅವುಗಳಿಗೆ ಇದರಲ್ಲಿ ಸಂಬಂಧವಿಲ್ಲ; ಮಿ. ಕರ್ಟಿಸರಿಗೆ ಮತ್ತು ಅವರ ಚಳವಳಿಕ್ಕೆ ಸರಕಾರದ ಬಲವಾಗಲಿ, ಅನುಮತಿಯಾಗಲಿ, ಅಥವಾ ಸಹಾನುಭೂತಿಯಾಗಲಿ ಇರಲಿಲ್ಲೆಂದು ಮಿ. ಚೆಂಬರಲೇನರು ಪ್ರಸಿದ್ಧಪಡಿಸಿದ್ದಾರೆ. ಇದನ್ನು ತಿಳಿಸಲು ನಾವು ಬಹು ಸಂತೋಷಪಡುತ್ತೇವೆ.

೮. ಮಿ. ಚೆಂಬರಲೇನ್, [illegible] ಮಹಾರಾಜ, ಸರ [illegible] [illegible] ಗಳಾಗಿರುವ [illegible]

ಸಂದರ್ಭದಲ್ಲಿ ಮೆಸ್ಟನ್ ದೊರೆಗಳು ಒಂದೆರಡು ಮಾತುಗಳನ್ನಾಡಿದರು. "ಹಿಂದುಸ್ಥಾನವು ತನ್ನ ಭವಿಷ್ಯತ್‌ಕಾಲವನ್ನು ಇಂಗ್ಲಂಡಿನೊಡನೆಯೆ ಕಳೆಯಲು ನಿಶ್ಚಯಿಸಿದೆ." ಇದೆ ಅವರ ಮಾತಿನ ಸಾರವಿತ್ತು. ಸ್ಟೇಟ್ ಸೆಕ್ರೆಟರಿಗಳಾದ ಮಿ. ಚೆಂಬರಲೇನರ ಭಾಷಣವಂತು ಬಹು ಉತ್ಸಾಹಜನಕವಾಗಿಯೂ ಮನನೀಯವಾಗಿಯೂ ಇತ್ತು. 'ಹಿಂದುಸ್ಥಾನವು ಸಾಮ್ರಾಜ್ಯಕ್ಕೆ ಒಂದು ದೊಡ್ಡ ಸಂಗ್ರಹಾಲಯವಾಗಿದ್ದೀತು; ಎಂದು ಹೇಳಿ ಮಿ. ಚೆಂಬರಲೇನರು ಮುಂದರಿಸಿದ್ದೇನೆಂದರೆ, "ಇನ್ನು ಮುಂದೆ ಹಿಂದುಸ್ಥಾನವು ಬರೆ ಕಟ್ಟಿಗೆಯನ್ನು ಒಡೆಯುವ ಅಥವಾ ನೀರನ್ನು ಸೇದುವ ಕೆಲಸವನ್ನು ಮಾತ್ರ ಮಾಡುತ್ತ ಕೂಡ್ರಲಿಕ್ಕಿಲ್ಲ. ಬಾಲ್ಯಾವಸ್ಥೆಯಲ್ಲಿದ್ದ ಅದರ ಔದ್ಯೋಗಿಕ ವಿಕಾಸವು ಪ್ರಗಮನ ಶೀಲವಾಗತಕ್ಕದ್ದು. ಜೀನಸುಗಳ ಉತ್ಪತ್ತಿ ಹಾಗು ಕೈಗಾರಿಕೆಗಳ ವಿಷಯದಲ್ಲಿ ಹೆಚ್ಚಿನ ವ್ಯವಸಾಯವು ಅದರಿಂದಾಗತಕ್ಕದ್ದು. ವೃಥಾ ಸಂಶಯಕ್ಕೊಳಗಾಗದೆ, ಮತ್ಸರವನ್ನು ಪಡದೆ ನಾವು ಹಿಂದುಸ್ಥಾನವು ಊರ್ಜಿತ ಸ್ಥಿತಿಯಲ್ಲಿ ಬರುವಂತೆ ಅದನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ. ಇಂಗ್ಲಂಡಿನಲ್ಲಿಯೂ ಹಿಂದುಸ್ಥಾನದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಅನೇಕ ಅವಕಾಶವಿದೆ. ಈ ಎರಡು ದೇಶಗಳಲ್ಲಿ ಒಂದರ ಅಭಿವೃದ್ಧಿಯು ಇನ್ನೊಂದರ ಉನ್ನತಿಯ ಮೇಲೆ ಹೊಂದಿಕೊಂಡಿದೆ." ಈ ರೀತಿಯಿಂದ ಸ್ಟೇಟ ಸೆಕ್ರೆಟರಿಗಳು ಸ್ವನೋಕ್ತಿಗಳಿಂದ ಹಿಂದುಸ್ಥಾನದ ಶುಭಾಕಾಂಕ್ಷೆಗಳನ್ನು ವ್ಯಕ್ತಗೊಳಿಸಿ ಯುದ್ಧ ಕೆಬಿನೆಟ್ ಮತ್ತು ಯುದ್ಧ ಪರಿಷತ್ತಿನಲ್ಲಿ ಹಿಂದುಸ್ಥಾನದ ಪ್ರತಿನಿಧಿಗಳಿಗೆ ಕೊಟ್ಟ ಅತಿಥ್ಯಕ್ಕಾಗಿ ಅವರ ಹೃದಯದಲ್ಲಿ ಕೃತಜ್ಞತೆಯು ಮೂಡೀತೆಂದು ಹೇಳಿ ತಮ್ಮ ಭಾಷಣವನ್ನು ಅಂತ್ಯಪಡಿಸಿದರು. ಮಿ ಚೆಂಬರಲೇನರು ತಕ್ಕ ಪ್ರಸಂಗದಲ್ಲಿ ಆಡಿದ ಮಾತುಗಳಿಗಾಗಿ ಅವರು ಹಿಂದೀ ಜನರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಸ್ಥಳಿಕ — ಮಂಗಳೂರು.

ಇಲ್ಲಿಯ ಬಾಸೆಲ್ ಮಿಶನ್ ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ. ೯ನೇ ಸೋಮವಾರ ಸಾಯಂಕಾಲ ಜರಗುವುದು. ರಾವ್ ಸಾಹೇಬ್ ಡಾಕ್ಟರ್ ವರ್ಗಿಸರವರು ಈ ಸಂದರ್ಭದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು.

ಅಕ್ಕಿ ಧಾರಣೆಯು ದಿನೇ ದಿನೇ ಚಡಾವಾಗಿ ಬರುತ್ತಿರುವದು. ಮಲಬಾರು ಮೊದಲಾದ ಹೊರಪ್ರಾಂತ್ಯಗಳಿಗೆ ಅಕ್ಕಿಯು ಹೋಗುವದು ಕಡಮೆ, ಆದರೂ ಕ್ರಯವೇರಲು ಕಾರಣವೇನೆಂಬುದು ಹೇಳಲಾಗುವದಿಲ್ಲ. ಕಳೆದ ಕಾಲದ ಏಣೆಲು, ಸುಗ್ಗಿ ಮತ್ತು ಈಗಿನ ಕೊಳಕೆ ಬೆಳೆಗಳು ಹಲವು ಕಡೆಗಳಲ್ಲಿ ನಾನಾ ಕಾರಣಗಳಿಂದ ಹಾಳಾಗಿ ಹೋದ್ದರಿಂದ ಅಕ್ಕಿಯ ಪೈದಾಸ್ತು ಸರಿಯಿಲ್ಲದೆ ಕ್ರಯವೇರುತ್ತಿದೆ ಎನ್ನುವರು. ಅಕ್ಕಿಗೆ ಕಳೆದ [illegible] ಲ ರೂಪಾಯಿ ವರೆಗಿನ ಕ್ರಯವಾದ್ದರಿಂದ ಈ ವರುಷದಲ್ಲಿಯೂ ಹೀಗೆಯೇ ದರವು ಏರಬಹುದೆಂಬ ಗ್ರಹಿಕೆಯಿಂದ ರೈತರೂ ವ್ಯಾಪಾರಸ್ಥರೂ ಅಕ್ಕಿಯನ್ನು ಬಹಳವಾಗಿ ಕ್ರಯವೇರಿಸಿ ಪಡಕೊಂಡು ದಾಸ್ತಾನು ಇಡುತ್ತಿದ್ದಾರೆ. ಈ ಮೂಲಕ ಕ್ರಯವೇರಬಹುದೆಂಬ ಮತ್ತೊಂದು ವಿಚಾರವಿದೆ. ಹ್ಯಾಗೂ ಈ ಮೊದಲೇ ಏರ್ಪಡಿಸಲ್ಪಟ್ಟ ಡಿಸ್‌ಟ್ರೆಸ್ ರಿಲೀಫ್ ಕಮ್ಮಿಟಿಯವರು ಕೂಡಿಕೊಂಡು ಈಗಲೆ ಈ ವಿದ್ಯಮಾನಗಳನ್ನೆಲ್ಲ ಪರ್ಯಾಲೋಚಿಸಿ ಬಡಜನರಿಗೆ ಈ ಬಾಧೆಯಿಂದ ಯಾವ ನಿವೃತ್ತಿಯನ್ನು ಕೊಡಬಹುದೆಂಬುದನ್ನು ಪರ್ಯಾಲೋಚಿಸುವುದು ಯುಕ್ತವಾಗಿದೆ.

ಇದೇ ತಿಂಗಳ ತಾ. ೧೩ನೇ ಶುಕ್ರವಾರ ಸೌರಮಾನ ಯುಗಾದಿ ದಿವಸ ಸಾಯಂಕಾಲ ಘಂಟೆ ೪ಕ್ಕೆ ಬೊಕ್ಕಪಟ್ಣದ ಬಬ್ಬರಿಯ ದೇವಸ್ಥಾನದ ಬಳಿಯಲ್ಲಿ ಜ್ಞಾನೋದಯ ಸಮಾಜದವರ ಏಳನೇ ವಾರ್ಷಿಕೋತ್ಸವವು ನೆರವೇರುವದು. ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರಾದ ಮ| ರಾ| ರಾ| ಅರ್ನಿ ಸುಬ್ಬರಾವ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು. ಜ್ಞಾನೋದಯ ಸಮಾಜದ ಸಭಾಸದನದ ಕಟ್ಟಡದ ಅರ್ಧಾಂಶ ಖರ್ಚನ್ನು ಸರಕಾರದವರು ಕೊಡಲು ಸಮ್ಮತಿಸಿರುವರೆಂಬುದನ್ನು ಈ ಸಂದರ್ಭದಲ್ಲಿ ತಿಳಿಸಲು ಸಂತೋಷಪಡುತ್ತೇವೆ.

ಇದೇ ತಿಂಗಳ ತಾ. ೧೧ರಿಂದ ಕಲೆಕ್ಟರರ ಆಫೀಸಿನ ಹೆಡ್ ಎಕೌಂಟಾಂಟರಾದ ಮ| ರಾ| ಕೆ. ಮರ್ತು ಕಿಣಿಯವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜೆಯು ಕೊಡೋಣವಾಗಿರುವದು. ಮ| ರಾ| ಬಿ. ರಘುನಾಥ ಭಂಡಾರಿಗಳವರು ಇವರ ಬಗ್ಗೆ ಆಕ್ಟಿಂಗ್ ಕೆಲಸ ನೋಡುವರೆ ನೇಮಿಸಲ್ಪಟ್ಟಿರುವರು. ಮ| ರಾ| ಬಿ. ರಘುನಾಥ ಭಂಡಾರಿಗಳ ೧ನೇ ಎಕೌಂಟಾಂಟ ಕೆಲಸಕ್ಕೆ ಮ| ರಾ| ಎನ್. ಕೃಷ್ಣಪ್ಪನವರೂ, ಎನ್. ಕೃಷ್ಣಪ್ಪನವರ I ರಿಕೋರ್ಡ ಕ್ಲಾರ್ಕರ ಕೆಲಸಕ್ಕೆ ಮ| ಆರ್. ಎಲ್. ನಜರೇತರವರೂ ನೇಮಿಸಲ್ಪಟ್ಟಿರುತ್ತಾರೆ.

ಇಲ್ಲಿಯ ನೂಲಿನ ವ್ಯಾಪಾರಿಗಳೂ ಮತ್ತು ಸಾವುಕಾರ ಬಾಬಶೈಗಳ ಕುಟುಂಬದವರೂ ಆದ ಶ್ರೀನಿವಾಸ ರಂಗಶೈಗಳವರು ಕಳೆದ ಶುಕ್ರವಾರ ಸಾಯಂಕಾಲ ಗಂಟೆ ೫||ಗೆ ತಮ್ಮ ವೃದ್ಧಾಪ್ಯದಲ್ಲಿ ಕಾಲವಾದರೆಂಬುದನ್ನು ತಿಳಿಸಲು ವ್ಯಸನಪಡುತ್ತೇವೆ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೧೭ ಪ್ಲೇಗು ಮರಣಗಳಲ್ಲವ [illegible] ಕೊಡಿಯಾಲಬೈಲು ವಾರ್ಡು ೯; ಗೋಳಿಕಟ್ಟೆ ವಾರ್ಡು ೩; ಸೆಂಟ್ರಲ್ ವಾರ್ಡು ೧; ಮಾರ್ಕೆಟ್ ವಾರ್ಡು ೩; [illegible] ವಾರ್ಡು ೧; ಕೆಂಟೋನ್‌ಮೆಂಟ್ ವಾರ್ಡು, [illegible] ವಾರ್ಡು, ಮತ್ತು [illegible] ವಾರ್ಡುಗಳಲ್ಲಿ ಪ್ಲೇಗು ಮರಣಗಳಿಲ್ಲ.

ಶಾಲಾ ವರ್ಧಂತ್ಯೋತ್ಸವ.

ಶಿಕ್ಷಿಕಂಬಳ ಹಾಯರ್ ಎಲಿಮೆಂಟರಿ ಶಾಲೆಯ ಹನ್ನೆರಡನೆ ವರ್ಧಂತ್ಯೋತ್ಸವ ಇದೇ ಮಾರ್ಚ ತಿಂಗಳ ತಾರೀಕು 31ನೇ ತ್ರಿ [illegible] ವಿಜೃಂಭಣೆಯಿಂದ ಜರಗಿತು. ಮಕ್ಕಳು ಮನಸ್ವಿಯಾಗಿ ಮಧ್ಯಾಹ್ನದ ವರೆಗೆ [illegible] ವಿನೋದಗಳಿಂದ ಕಾಲ ಕಳೆದರು. ಎರಡು ಘಂಟೆಗೆ ಸೂಚನಾ ಪತ್ರದಲ್ಲಿ ತಿಳಿಸಿದ್ದ ಪ್ರಕಾರ ಸಭೆಯು ನೆರೆದು ಮಕ್ಕಳ ಇಂಗ್ಲಿಷ್ ಕನ್ನಡ ನಾಟಕಗಳು [illegible]. ಮ. ರಾ. ರಾ. ಕಾರ್ನಾಡ್ ಸದಾಶಿವರಾವ್ ಅವರ್ಗಳ್ ಬಿ. ಎ. ಎಲ್. ಎಲ್. ಬಿ. ಇವರು ದಯವಿಟ್ಟು ಅಗ್ರಾಸನಾಸೀನರಾಗಿದ್ದರು. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ರಾ| ಕುದ್ಮುಲ ರಂಗರಾವ್‌ರವರೂ, ಗವರ್ನಮೆಂಟ್ ಟ್ರೈನಿಂಗ್ ಸ್ಕೂಲಿನ ಮಾಸ್ತರರಾದ ರಾ| ಉಳ್ಳಾಲ ಮಂಗೇಶರಾವ್‌ರವರೂ; ಮಂಗಳೂರು ರೇಂಜ್ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್‌ಸ್ಪೆಕ್ಟರರಾದ ರಾ. ಪಿ. ಮಂಗೇಶರಾವ್‌ರವರೂ, ಈ ಸಭೆಯನ್ನು ಅಲಂಕರಿಸಿದ್ದರು. ಸುಮಾರು ಇನ್ನೂರು ಮಂದಿ ಊರ ಗೃಹಸ್ಥರೂ ಹಾಜರಿದ್ದರು. ಮಕ್ಕಳ ನಾಟಕಗಳಾದ ಮೇಲೆ ಶಾಲೆಯ ಮುಖ್ಯೋಪಾಧ್ಯಾಯರು ತಾಲೂಕು ಬೋರ್ಡಿನವರು ಪೂರ್ಣ ದಯವಿಟ್ಟು ಈ ಶಾಲೆಗಾಗಿ ಮಾಡಿದ ಖರ್ಚುಗಳನ್ನು ವಿವರಿಸಿ, ಶಾಲೆಯ ಶ್ರೇಯಸ್ಸಿಗೋಸ್ಕರ ನಮ್ಮ ಜಿಲ್ಲೆಯ ಅಸಿಸ್ಟಾಂಟ್ ಕಲೆಕ್ಟರರಾದ ಮಿಸ್ತರ್ ಪಿ. ಪಿ. ಸ್ಪೆಂಟರ್ ಮತ್ತು ಟೆಲಿಗ್ರಾಫಿಸ್ಟರಾದ ಮಿಸ್ತರ್ ವಿ. ಯಸ್. ಬಾಗ್ಲೋಡಿ ಇವರು ಮಾಡಿದ ಸಹಾಯಗಳನ್ನು ಶಾಲಾ ವಿದ್ಯಾರ್ಥಿಗಳು ನೇಚರ್ ನೋಲೆಜ್ ಲೀಗ್ (Nature Knowledge League) ಹಿಸ್ಟೋರಿಕಲ್ ಎಸೋಸಿಯೇಶನ್ (Historical Association) ಕೋಓಪರೇಟಿವ್ ಸೊಸೈಟಿ (Co-operative Society) ವಿದ್ಯಾರ್ಥಿ ಸಭಾ (Vidyarthi Sabha) ತಾಳಮದ್ದಳೆ ಟ್ರೂಪ್ (Talamaddale Troupe) ಫಿಸಿಕಲ್ ಕಲ್ಚರ್ ಟೀಮ್ (Physical Culture Team) ಎಂಬ ಕೂಟಗಳಾಗಿ ನಡಿಸುವ ಕರ್ತವ್ಯ ಮತ್ತು ಅವುಗಳ ದೆಸೆಯಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಒಂದು ರಿಪೋರ್ಟು ಓದಿದರು. ಅದರಲ್ಲಿ ಶಾಲೆಯ ಏಳಿಗೆಗೆ ಅಲ್ಪಸಂಬಳದ ಮೇಲೆ ಕೆಲಸ ಮಾಡುವವರಾದ ಉಪಾಧ್ಯಾಯರ ವರ್ಗಾ ವರ್ಗಿಯೂ, ಬೇಕಾದ ಉಪಕರಣಗಳಿಲ್ಲದಿರುವಿಕೆಯೂ, ಉಪಾಧ್ಯಾಯರಿಗೆ ತಮ್ಮ ಶಾಲೆ ಎಂಬ ಅಭಿಮಾನ ಹುಟ್ಟುವಂತೆ ಮಾಡುವ ಸಂಬಂಧದ ಆಕರ್ಷಣೆಗಳು ಇಲ್ಲದಿರುವದೂ, ಯೋಗ್ಯವಾದ ಕಟ್ಟಡದ ಅಭಾವವೂ, ಶೀಘ್ರದಲ್ಲಿ ಪರಿಹಾರಾರ್ಹವಾದ ಕೊರತೆಗಳೆಂದು ತೋರಿಸಿದ್ದರು. ಅಧ್ಯಕ್ಷರು ವಿದ್ಯಾರ್ಥಿಗಳಲ್ಲಿಬ್ಬರಿಗೆ ಅರ್ಧ ತಾಸು ಸಮಯ ಕೊಟ್ಟು, "ರಾಮದಾಸ್ ಮತ್ತು ಶಿವಾಜಿ" ಇವರೊಳಗೆ ನಡೆದ ಒಂದು ಸಂಭಾಷಣೆಯನ್ನು ನಟಿಸಿ ತೋರಬೇಕೆಂದು ಅಪೇಕ್ಷಿಸಿದ ಮೇರೆಗೆ ಶ್ರೀಧರ ಶರ್ಮ ಮತ್ತು ವಾಮನ ಶೆಟ್ಟಿ ಎಂಬಿಬ್ಬರು ಸುಮಾರು 40 ನಿಮಿಷಗಳ ವರೆಗೆ ಸಂವಾದ ನಡಿಸಿ ಸಭಿಕರನ್ನೆಲ್ಲಾ ಸಂತೋಷಗೊಳಿಸಿದರು. ಅಧ್ಯಕ್ಷರು ಮಕ್ಕಳ ಭಾಷಾಜ್ಞಾನ ವಾಗ್ಮಿತ್ವಗಳು ಎಲಿಮೆಂಟರಿ ಶಾಲೆಗಳಲ್ಲಂತಿರಲಿ, ಸೆಕೆಂಡರಿ ಶಾಲೆಗಳಲ್ಲಿ ಕೂಡ ನೋಡಲು ದುರ್ಲಭವೆಂದು ಶ್ಲಾಘಿಸಿ, ಈಗ ಶಾಲೆಗಿರುವ ಕಟ್ಟಡವಿಲ್ಲವೆಂಬ ದೊಡ್ಡ ಕೊರತೆಯನ್ನು ತಾಲೂಕು ಬೋರ್ಡಿನವರು ಸದ್ಯದಲ್ಲೇ ಪರಿಹರಿಸುವರೆಂದು ನನ್ನ ನಿರೀಕ್ಷಣೆ ಎಂದು ಹೇಳಿದರು. ರಾ| ಕುದ್ಮುಲ ರಂಗರಾವ್‌ರವರು 'ಅತ್ತಲ್ಲದೆ ಹೆತ್ತವಳೂ ಮೊಲೆಯೂಡಳು' ಎಂಬ ಗಾದೆಯಂತೆ; ಈ ಜಿಲ್ಲೆಯ ಉಪಾಧ್ಯಾಯರೊಳಗೆ ಏಕಮತ್ಯವಿಲ್ಲ. ಉಪಾಧ್ಯಾಯರೊಂದಾಗಿ ತಮ್ಮ ಸಂಕಷ್ಟಗಳನ್ನು ನಿರಂತರವೂ ಮೇಲಧಿಕಾರಿಗಳ ಅವಗಾಹನೆಗೆ ತರುತ್ತಾ ಬಂದರೆ ಒಮ್ಮೆ ಅಲ್ಲದಿದ್ದರೆ ಮತ್ತೊಮ್ಮೆ ಸಫಲವಾಗದಿರಲಿಕ್ಕಿಲ್ಲ ಎಂದೂ, ಶಾಲೆಗೆ ಯೋಗ್ಯವಾದ ಕಟ್ಟಡವಿಲ್ಲದ್ದರಿಂದ ಉಂಟಾಗುವ ದೋಷಗಳನ್ನು ತಾನು ಇಂದು ಕಣ್ಣಾರೆ ಕಂಡು ಬಹು ಮರುಕಗೊಂಡೆನೆಂದೂ ಈಗ ತಾಲೂಕು ಬೋರ್ಡಿನವರು ಖರ್ಚು ಮಾಡಲಿಕ್ಕಿರುವ ಒಂದು ಸಾವಿರ ರೂಪಾಯಿಗಳಿಂದ ಶಾಲಾ ರಿಪೋರ್ಟಿನಲ್ಲಿ ಹೇಳಿದ ಪ್ರಕಾರ ಪಕ್ಕಾ ಕಟ್ಟೋಣ ಕಟ್ಟುವ ಕಾಲದಲ್ಲಿ ಏನೇನೂ ಉಪಕಾರ ಲಭಿಸದ ಕಾರಣ ಈಗ ಇಂಜನಿಯರರು ಮಾಡಿದ ಆಲೋಚನೆಯನ್ನು ಬಿಟ್ಟು ಹಣವು ಯೋಗ್ಯ ರೀತಿಯಲ್ಲಿ ಉಪಯೋಗಿಸಲ್ಪಡುವಂತೆ ಹೆಡ್ ಮಾಸ್ತರರು ಪ್ರೆಸಿಡೆಂಟರವರಿಗೆ ಬರೆಯುವದು ಆವಶ್ಯವೆಂದೂ ತಿಳಿಸಿದರು.

ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾದ ಪಿ. ಮಂಗೇಶರಾವ್‌ರವರು ತಾರೀಕು 8-12-16ರಲ್ಲು ಈ ಶಾಲೆಯ ಇನ್ಸ್‌ಪೆಕ್ಷನ್ ರಿಮಾರ್ಕುಗಳಲ್ಲಿ ಬರೆದ ಪ್ರಕಾರ ಇಲ್ಲಿಯ ಮಾಸ್ತರುಗಳ ನೇಮಕವನ್ನು ಇಲ್ಲಿಯ ಹೆಡ್ ಮಾಸ್ತರರೇ ಸ್ವತಂತ್ರವಾಗಿ ಮಾಡಿಕೊಳ್ಳುವಂತೆ ಬಿಟ್ಟು ಬಿಟ್ಟು ಅಧಿಕಾರಿಗಳು ದೂರ ನಿಂತು ಹಾದಿ ತಪ್ಪಿ ಹೋಗದೋಪಾದಿ ಮೇಲ್ವಿಚಾರಿಕೆ ಮಾತ್ರ ನೋಡುತ್ತಿರುವದು ಈ ಶಾಲೆಯ ಏಳಿಗೆಗೆ ಅತ್ಯಾವಶ್ಯವೆಂಬ ತನ್ನ ಅಭಿಪ್ರಾಯವು ಈಗಲೂ ಕದಲದೆ ಇದೆ. ಎಂದೂ ಈ ತಾಲೂಕು ಬೋರ್ಡಿನೊಳಗೆ ಇರುವ ಹಾಯರ್ ಎಲಿಮೆಂಟರಿ ಶಾಲೆಯು ಇದೊಂದೇ ಆಗಿರುವದರಿಂದ ಖಾಸಗಿ ಶಾಲೆಗಳ ನಡುವೆ ಇದು ತಲೆ ಎತ್ತಿಕೊಂಡು ಅವಕ್ಕೆಲ್ಲಾ ಮಾದರಿಯಾಗಿರುವಂತೆ ಆಗಲು ಅನುಕೂಲವಾಗುವ ಹಾಗೆ ಈ ಶಾಲೆಗಾಗಿಯೇ ಸಂಬಳದ ವಿಷಯದಲ್ಲಿ ಪ್ರತ್ಯೇಕ ಸ್ಕೇಲನ್ನು ಜಾರಿಗೆ ತರುವದೂ, ಅಗಾಗ್ಗೆ ಸಿಕ್ಕುವ ಹಣದಿಂದ ಶಾಶ್ವತವಾದ ಒಂದು ಕಟ್ಟಡವು ಕ್ರಮೇಣ ಲಭಿಸುವ ಹಾಗೆ ಒಮ್ಮೆ ಸಂಚಾಂಗ ಒಮ್ಮೆ ಗೋಡೆ, ಒಮ್ಮೆ ಮಾಡು, ಈ ಪ್ರಕಾರ ಅಂಶ ಅಂಶಗಳಾಗಿ ಕಟ್ಟುವಂತೆ ಆ ಹಣವನ್ನು ವಿನಿಯೋಗಿಸುವದು ಯುಕ್ತವೆಂದೂ ಘಂಟಾಘೋಷವಾಗಿ ಹೇಳಿದರು.

ಈ ಸ್ಥಳವು ಬಯಲು ಪ್ರದೇಶದ ಮಧ್ಯದಲ್ಲಿದ್ದು ವಿರುಗಾಸಿಯ ಬಡಕ್ಕೆ ಒಳಗಾಗಿರುವದಾದ್ದರಿಂದ ಆ ತಾತ್ಕಾಲಿಕ ಕಟ್ಟಡದ ಗತಿಯೇನಾಗುವದೆಂದು ಹೇಳಲು ಸಾಧ್ಯವಿಲ್ಲಾದ್ದರಿಂದಲೂ ಈಗಿನ ಎಸ್ಟಿಮೇಟು ಪ್ರಕಾರದಲ್ಲಿ ವೆಚ್ಚ ಮಾಡುವ ಸಾವಿರ ರೂಪಾಯಿಗಳಿಂದ ಮುಂದೆ ಪಕ್ಕಾ ಕಟ್ಟೋಣ ಕಟ್ಟುವ ಸಂದರ್ಭದಲ್ಲಿ ಏನೂ ಪ್ರಯೋಜನ ಸಿಕ್ಕುವ ಸಂದರ್ಭವಿಲ್ಲಾದ್ದರಿಂದಲೂ, ಶಾಶ್ವತವಾದ ಕಟ್ಟಡವಾಗಿ ಮಾರ್ಪಡಿಸಲು ಅನುಕೂಲವಾಗುವ ರೀತಿಯಲ್ಲಿ ಈ ಹಣವನ್ನೂ ಇನ್ನು ಮುಂದೆ ಆಗಾಗ ಸಿಕ್ಕ ಬಹುದಾದ ಹಣಗಳನ್ನೂ ವಿನಿಯೋಗಿಸುವದೊಳ್ಳೇದೆಂಬ ಈ ಸಭಾಸದರ ಸರ್ವ ಸಮ್ಮತವಾದ ತೀರ್ಮಾನವನ್ನು ಹೆಡ್ ಮಾಸ್ತರರು ತಾಲೂಕು ಬೋರ್ಡ್ ಪ್ರೆಸಿಡೆಂಟರವರಿಗೆ ರಿಪೋರ್ಟು ಮಾಡಬೇಕೆಂತಲೂ ಸಭಿಕರೂ ಅಧ್ಯಕ್ಷರೂ ಏಕಕಂಠವಾಗಿ ಹೇಳಿದರು. ಮುಂದೆ ನಡೆಯುವ ವಿನೋದಗಳನ್ನು ನೋಡಬೇಕೆಂಬ ಕುತೂಹಲವಿದ್ದಾಗ್ಯೂ ಅನಿವಾರ್ಯವಾದ ಕೆಲವು ಕೆಲಸಗಳ ಬಗ್ಗೆ ಗಿ ತಾವು ಕೂಡಲೇ ಹೊರಟುಹೋಗಲು ಅಗತ್ಯ ಬಿದ್ದುದಕ್ಕಾಗಿ ಪಶ್ಚಾತ್ತಾಪವನ್ನು ಸೂಚಿಸಿ ಅಧ್ಯಕ್ಷರೂ ಇತರ ಮಂಗಳೂರ ಮಹಾನುಭಾವರೂ ಸಾಯಂಕಾಲ 6 ಗಂಟೆಗೆ ಹಿಂದೆರಳಿದರು.

ಆ ಮೇಲೆ ಶಾಲಾ ವಿದ್ಯಾರ್ಥಿಗಳು 6ರಿಂದ 8ರ ವರೆಗೆ "[illegible]" ಎಂಬ ನಾಟಕವನ್ನು ಆಡಿದರು. ಅಷ್ಟರಲ್ಲಿ [illegible] ದೇವಾಲಯದ ರಾ| [illegible] ಭಾಗವತರವರ [illegible] ಸರ್ವರೂ ಆಟದ ರಂಗಸ್ಥಳವನ್ನು ಶರವರಿಸಿ [illegible]. ಸುಮಾರು [illegible] ಜನರು ನೆರೆದಿದ್ದ ಸಭೆಯನ್ನು ಶಾಲಾ ಮಕ್ಕಳಲ್ಲಿ [illegible] ಕೆಲಸವನ್ನು [illegible] ಬಂದೋಬಸ್ತು [illegible] "[illegible]" ದಣಿಸಿದರು.

[illegible]

[illegible]

[illegible] ಈ ಸಾರಿ ಯುದ್ಧದ ಸಾಲಕ್ಕೆ ಮುಂಬಾಯಿಗಿಂತಲೂ ಬಂಗಾಳದಲ್ಲಿ ಹೆಚ್ಚು ದರಖಾಸ್ತುಗಳು ಬಂದಿದ್ದವು. ಈ ಕಾರಣದಿಂದ ಬಂಗಾಳದವರು ಮುಂಬಾಯಿಯನ್ನು ಕೆಳಸ್ಥಾನದಲ್ಲಿ ದೂಡಿ ಹಾಕಿದ್ದರು. ಬಂಗಾಳದ ಗವರ್ನರಾಗಿ ಬಂದ ರೊನಾಲ್ಡ್ ಶೇ ಪ್ರಭುಗಳವರೂ ತನ್ನ ಭಾಷಣದಲ್ಲಿ ಬಂಗಾಳವು ಈ ಸಲವೂ ಯುದ್ಧದ ಬಗ್ಗೆ ಎತ್ತಲ್ಪಡುವ ಸಾಲದಲ್ಲಿ ಮುಂಬಾಯಿಯನ್ನು ಮುಂದೋಯಲು ಬಿಡದೆಂಬ ನಂಬಿಕೆಯು ತನಗೆ ಕಂಡಾ ಇದೆ ಎಂಬದಾಗಿ ಹೇಳಿದ್ದರು. ಆದರೆ ತಾ. ೩೧ರಲ್ಲಿ ಮುಂಬಾಯಿಯ ಟಾಟ ಮತ್ತು ಸನ್ಸ್ ಕಂಪೆನಿಯವರು ೧೧೧ ಲಕ್ಷ ರೂಪಾಯಿಗಳನ್ನು ಯುದ್ಧದ ಸಾಲಕ್ಕೆ ಕೊಟ್ಟದ್ದರಿಂದ ಮುಂಬಾಯಿಯು ಬಂಗಾಳಕ್ಕಿಂತಲೂ ಮೊದಲಾಗಿ ನಿಂತು ಬಂಗಾಳವನ್ನು ಹಿಂದೆ ಹಾಕಿತು. ಹೀಗೆ ಈಗ ಮುಂಬಾಯಿಯಲ್ಲಿ ರೂ. ೨,೯೬,೪೪,೩೦೦; ಬಂಗಾಳ ರೂ. ೨,೪೬,೯೦,೬೦೦; ಮದ್ರಾಸ್ ರೂ. ೩೦,೪೮,೬೦೦, ಸಂಯುಕ್ತ ಸಂಸ್ಥಾನ ರೂ. ೨೫,೫೬,೭೦೦; ಪಂಜಾಬು ರೂ. ೫೪,೧೧,೦೦೦; ಬರ್ಮ ೨೬,೦೩,೯೦೦; ಬಿಹಾರ್ ಮತ್ತು ಒರಿಸ್ಸ ರೂ. ೪೪೬,೩೦೦; ಮಧ್ಯಸಂಸ್ಥಾನ ೧೧,೦೪,೫೦೦; ಅಸ್ಸಾಮು ೧,೦೭,೫೦೦; ಇತರ ಸಂಸ್ಥಾನಗಳು ೮,೩೫,೭೦೦; ರೂಪಾಯಿಗೆ ದರಖಾಸ್ತುಗಳು ಬಂದಿವೆ. ಯುದ್ಧದ ಸಾಲದ ಪೋಸ್ಟ್ ಆಫೀಸ್ ಸೆಕ್ಷನಲ್ಲಿ ಈ ವರೆಗೆ ರೂ. ೧೧,೧೯,೫೭೫ ಕೂಡಿ ಬಂದಿರುವದು.

ಯುದ್ಧ ಫಂಡಿನ ಬಗ್ಗೆ ಒಂದು ಲೊಟರಿಯನ್ನು ಮಾಡುವರೆ ಮುಂಬಾಯಿಯ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ಬಿನವರಿಗೆ ಮುಂಬಾಯಿ ಸರಕಾರದವರು ಸಮ್ಮತಿ ಕೊಟ್ಟಿರುವರು. ಒಂದೊಂದು ಟಿಕೇಟಿಗೆ ೧೦ ರೂಪಾಯಿಗಳ ಧರವಿದೆ. ಇದಕ್ಕೆ ಸೇರುವ ಜನಗಳ ಸಂಖ್ಯೆಗೆ ಮಿತಿಯನ್ನಿಟ್ಟಿರುವದಿಲ್ಲ. ಅರ್ಧ ಕೋಟಿ ರೂಪಾಯಿಗಳ ಟಿಕೇಟುಗಳು ಮಾರಿ ಹೋದರೆ ಮೊದಲನೇ ಪ್ರೈಜು ೧೦ ಲಕ್ಷ; ಅರ್ಧ ಕೋಟಿಗೆ ಮಿಕ್ಕಿದರೆ ಪ್ರೈಜಿನ ಮೌಲ್ಯವೂ ಅಧಿಕವಾಗಿರುವದು. ೨ನೇ ಪ್ರೈಜಿನ ಮೌಲ್ಯವು ೧ನೇ ಪ್ರೈಜಿನ ಮೌಲ್ಯದ ಅರ್ಧವಾಗಿರುವದು. ಪ್ರೈಜುಗಳ ಒಟ್ಟು ಸಂಖ್ಯೆ ೧೦೦೦. ಟಿಕೇಟುಗಳು ಮಾರಿ ಬಂದ ಹಣದಲ್ಲಿ ಪ್ರೈಜ್ ಮತ್ತು ಖರ್ಚಿಗೆ ಹೋಗಿ ಉಳಿದ ಹಣವು ಮುಂಬಾಯಿ ವಾರ್ ರಿಲೀಫ್ ಫಂಡಿಗೆ ಕೊಡಲ್ಪಡುವದು.

ದಕ್ಷಿಣ ಹಿಂದೂಸ್ಥಾನ.

[illegible] ಬಹದ್ದೂರ ಅಬ್ದುಲ್ ರಹಿಮಾನ ಸಾಹೇಬರವರು ಮದ್ರಾಸಿನ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ. ಅವಲ್ಲದೆ ಮದ್ರಾಸ್ ಸರಕಾರದವರು ಅವರನ್ನು ನ್ಯಾಯವಿಧಾಯಕ ಸಭೆಯ ಮೆಂಬರರಾಗಿಯೂ ನೇಮಿಸಿರುತ್ತಾರೆ.

ಕಳೆದ ತಾ. ೧೭ರಲ್ಲಿ ಒಬ್ಬ ಹೆಂಗಸು ತನ್ನ ಕಾಯಿ ಮತ್ತು [illegible] ಪೊದನೂರಿಂದ ಬಂದು ಹುಬ್ಬಳ್ಳಿಗೆ ಹೋಗುವದಕ್ಕಾಗಿ ಜಂಕ್ಷನ ರೈಲ್ವೆ ಸ್ಟೇಷನಲ್ಲಿ ಪೆಟ್ಟಿಗೆ ಹಾಸಿಗೆಗಳನ್ನು ಇಟ್ಟು ತನ್ನ ತಂದೆಯನ್ನು ಟಿಕೇಟನ್ನು ತರಲು ಕಳು[illegible] [illegible] ಕುಳಿತಿರುವಾಗ್ಗೆ ಕೊರಟ ಜಾಕಿಗೆ ಸೇರಿದವನೊಬ್ಬನು ಬಂದು [illegible] ಕೋಟು ಧರಿಸಿ ಕನ್ನಡಕಗಳನ್ನು ಬಹಳ ದಿಟ್ಟವಾಗಿ ಧರಿಸಿಕೊಂಡು ಆ ಹೆಂಗುಸರ ಬಳಿಗೆ ಬಂದು ನಿಮ್ಮ ಟಿಕೇಟುಗಳನ್ನು ತೋರಿಸಿ ಎಂದು ಗದರಿಸಿ ಕೇಳೆ ಅವರು [illegible] ಬಿದ್ದು ಅತ್ತಿತ್ತ ನೋಡುತ್ತಿರುವ ಸಮಯದಲ್ಲಿ [illegible] ಯನ್ನು ತನ್ನ ಜತೆಗಾರನ ಮೂಲಕ ಸಾಗಿಸಿದನು. ಆ ಹೆಂಗಸು ಅವನ್ನು [illegible] ಕೂಗಿಕೊಂಡಳು. ಪೋಲಿಸಿನವರು ಆ ಕೂಡಲೇ ಅಲ್ಲಿಗೆ ಬಂದು [illegible] ರಾವ್ ಎಂದು ಹೆಸರನ್ನಿಟ್ಟುಕೊಂಡಿದ್ದ ಆ ಕಳ್ಳನನ್ನು ಹಿಡಿದು ವಿಚಾರಣೆಗೆ [illegible] ಮಾಡಿದಲ್ಲಿ ರೈಲ್ವೆ ಮೆಜಿಸ್ಟ್ರೇಟರು ಅವನಿಗೆ ೩ ವರ್ಷಗಳ ಕಠಿಣ ಸಜೆಯನ್ನು ವಿಧಿಸಿದರಲ್ಲದೆ ಆ ಅವಧಿಯಲ್ಲಿ ಒಂದು ತಿಂಗಳ ಕಾಲ ಏಕಾಂತ ವಾಸದಲ್ಲಿಡಲ್ಪಡತಕ್ಕದ್ದೆಂದೂ ಬಂಧವಿಮುಕ್ತನಾದ ಮೇಲೆ ೩ ವರ್ಷಗಳ ಕಾಲದ ವರೆಗೆ [illegible] ಸಿದ ಸ್ಥಳ ಮೊದಲಾದುದರ ವಿಚಾರವಾಗಿ ಪೋಲೀಸರಿಗೆ ಪದೇ ಪದೇ ವರದಿ ಮಾಡುತ್ತಿರಬೇಕೆಂದೂ ಆಜ್ಞಾಪಿಸಿದರು.

ಲೋಕಲ್ ಫಂಡುಗಳಿಂದ ನಡೆಯೋಣಾಗುವ ಆಸ್ಪತ್ರೆಗಳ ಅರ್ಧ ಖರ್ಚನ್ನು ಸರಕಾರದವರು ಕೊಡುವರೆ ೧೯೧೫-೧೬ರಿಂದ ಒಪ್ಪಿಕೊಂಡು ಆ ವರ್ಷದಲ್ಲಿ ಇಂಥಾ ೫ ಆಸ್ಪತ್ರೆಗಳಿಗೆ ಈ ಹೊಸ ನಿರ್ಧಾರದ ಮೇರೆಗೆ ಸಹಾಯ್ಯ ಮಾಡಿದರು. ಮದ್ರಾಸ್ ಸಂಸ್ಥಾನದಲ್ಲಿ ಲೋಕಲ್ ಬೋರ್ಡುಗಳ ಆಡಳಿತೆಯಲ್ಲಿ ಒಟ್ಟಿಗೆ ೩೯೭ ಆಸ್ಪತ್ರೆಗಳಿವೆ. ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿ ಔಷಧೋಪಚಾರ ಹೊಂದಿದವರ ಸಂಖ್ಯೆಯು ಕಳೆದ ವರ್ಷ ೪,೧೫೫,೪೧೪ರಿಂದ ೪,೩೪೫,೧೭೭ಕ್ಕೆ ಹೆಚ್ಚಿರುವದು. ಆಸ್ಪತ್ರೆಗಳಿಗೆ ಔಷಧಿಗಳಿಗೆ ಮತ್ತು ಶಸ್ತ್ರಗಳ ಸಾಕಷ್ಟು ಕಳೆದ ವರ್ಷ ಕಡಿಮೆ ಮಾಡುವದರಿಂದ ಅವುಗಳ ಬಾಬ್ತಿನ ಖರ್ಚಿನಾಂಶವೂ ತಗ್ಗಿದೆ. ಪ್ರತಿ ಒಬ್ಬ ರೋಗಿಯ ಉಪಚಾರಕ್ಕೆ ಬೇಕಾದ ಖರ್ಚಿನಾಂಶವು ಆಣೆ ೩-೧೧ರಿಂದ ಆ ೩-೫ಕ್ಕೆ ಕಡಿಮೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಆಣೆ ೨-೧೧ರಿಂದ ಆಣೆ ೧೦-೬ ಪ್ರಮಾಣದ ಪ್ರತಿ ಒಬ್ಬೊಬ್ಬ ರೋಗಿಗೆ ಖರ್ಚು ಬಿದ್ದಿರುವದು.

ಪತ್ರವ್ಯವಹಾರ.

ಬಾತಮಿಗಳು.

ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ್ ಎಸೋಸಿಯೇಶನಿನ ಸಂಘದವರಿಗೆ ಒಂದು ವಿಜ್ಞಾಪನೆ.

[illegible] ಪ್ರಭಾವರ್ಗದ ಪ್ರತಿನಿಧಿಗಳಾದ ತಾವುಗಳು ಸಭೆ ಸೇರಿ ಮಾಡಿದ ನಿರ್ಣಯಗಳಲ್ಲಿ ಪುತ್ತೂರು ಮತ್ತು ಕುಂದಾಪುರ ತಾಲೂಕು ಬೋರ್ಡುಗಳಿಗೆ ನಾನ್ ಒಫಿಸಿಯಲ್ ಪ್ರೆಸಿಡೆಂಟರನ್ನು ನೇಮಿಸುವ ಹಾಗೆ ಹುಜೂರ್ ಜಿಲ್ಲಾ ಕಲೆಕ್ಟರ ದೊರೆಗಳವರಿಗೂ ಸರಕಾರಕ್ಕೂ ತಿಳಿಸಬೇಕೆಂತ ನಿಶ್ಚಯಿಸಿದ ನಿರ್ಣಯಗಳ ಸಂಗ್ತಿ ಈ ಪತ್ರ ಮುಖೇನ ತಿಳಿದು ನಾನೂ ನನ್ನ ಭ್ರಾತೃವರ್ಗದವರೂ ತುಂಬಾ ಸಂತೋಷ ಪಡುತ್ತೇವೆ. ಆದರೆ ಸಾರ್ವಜನಿಕ ಹಿತಚಿಂತಕರೆಂದೆನ್ನಿಸಿ ಕೊಂಡು ಬರೇ ಐಹಿಕ ಕೀರ್ತಿಯಭಿಲಾಷೆಯ ಡಾಂಭಿಕ ವೃತ್ತಿಯಿಂದ ಮುಂದಾಳುಗಳಾಗಿ ಅಂತರಂಗಿಕ ಸ್ವಾರ್ಥಭಾವದ ಜಾತಿ ವಾತ್ಸಲ್ಯವುಳ್ಳ ಮಹನೀಯರನ್ನು ನೇಮಿಸಿದ ಹಾಗೆ ತಮ್ಮಗಳ ಕಡೆಗಿನ ದೃಷ್ಟಿಯು ನೇಮಕದ ಪ್ರಥಮ ಪಂಕ್ತಿಯಲ್ಲಿ ನಿಜಗೊಳ್ಳುವದಾಗಿ ಭರವಸೆ ಇದೆ. ಹಾಗಲ್ಲದಿದ್ದರೆ "ನಾಗರಹಡೆ ನೆಲಬಾಳಿಗೆ ಹೋಗಿ ಸುಖವುಂಟಾಲ್ಲೆನಂಬ ಕಪ್ಪೆ ಪೋಲಕ್ಕಂ" ಎಂತಾಗುವದು. ಇನ್ನೊಂದೇನೆಂದರೆ ವಿದ್ಯಾಸಂಪನ್ನರೂ ನಿಷ್ಪೃಹರೂ ಪ್ರಜಾವಾತ್ಸಲ್ಯ ಉಳ್ಳವರೂ ಆದಾಗ್ಯೂ ವಯೋವೃದ್ಧತೆಯಿಂದಾಗಲಿ ದಾಕ್ಷಿಣ್ಯ ವರ್ತನೆಯಿಂದಾಗಲಿ ಎಡ ಬಲಕ್ಕೆ ನಂಬಿ ತನ್ನ ಉದ್ಯೋಗಾಭಿಮಾನದಿಂದಲೇ ಮೊತ್ತ ತೃಪ್ತಿ ಹೊಂದುವ ಮಹನೀಯರನ್ನು ನೇಮಿಸಿದ್ದಲ್ಲಿ ಹೊಸ ಸ್ಟಾನಿಂಗ್ ಮೆಷಿನ್ ತರಿಸಿದಂತಾಗುವದು. ಇದು "ಕಪ್ಪೆಗಳು ತಮ್ಮ ರಾಜನಾದ ಮರದ ಕೊರಡನ್ನು ತಿರಸ್ಕರಿಸಿ ಕೊಕ್ಕರೆಯನ್ನು ಅಪೇಕ್ಷಿಸಿ [illegible]ದಂತಾಗುವದು. ಮಹಾತ್ಮಾ ಕನ್ನಡ ಹೊಂದಿದವರನ್ನು ನೇಮಿಸುವದಾದರೆ ಸರ್ಕಾರ [illegible] [illegible]

ಪುತ್ತೂರು: ಇದೇ ಕಳೆದ ಮಾರ್ಚ ತಿಂಗಳ ತಾ. ೨೮ರಲ್ಲು ಇಲ್ಲಿ ಕಠಿಣ ಬಿರುಗಾಳಿ ಮಳೆ ಬಂದು ಗಾಳಿಯಿಂದ ಪುತ್ತೂರು ಮಾಣಿ ಮತ್ತು ಉಪ್ಪಿನಂಗಡಿ ರಸ್ತೆಯಲ್ಲಿ ಅನೇಕ ಮರಗಳು ಮುರಿದು ಬಿದ್ದವು. ಉಪ್ಪಿನಂಗಡಿ ರಸ್ತೆಯ ೨೪ ಮೈಲು ಕಲ್ಲಿನ ಬಳಿ ಚಿಕ್ಕ ಮುಡ್ನೂರು ಗ್ರಾಮದ ಗಿಂಡಾಡಿಕೆಯ ಎಂಬಲ್ಲಿ ಸರಿವೊಗ್ಗು ಗ್ರಾಮದ ಮರಳಿನ ಹೊಸಮನೆ ಬಿಲ್ಲ ಕೋಟಿ ಮತ್ತು ಆತನ ಮಗ ವೀರಪ್ಪ ಎಂಬವನು ದಾರಿಯಿಂದ ಹೋಗುವಾಗ ಗಾಳಿಮಳೆಗೆ ಮುರಿದುಬಿದ್ದ ಮರದ ಅಡಿಗೆ ಶಿಕ್ಕಿ ಬಿದ್ದು ಕೂಡಲೇ ಮೃತ ಹೊಂದಿದನು. ಕೋಟಿ ಎಂಬವನಿಗೆ ಏಶಂ ಮಾತ್ರ ಆಗಿಯದೆ. ಹೊಸ ಕಟ್ಟೋಣಗಳಿಗೆ ಹೆಚ್ಚಿನ ಅಪಾಯವು ಸಂಭವಿಸಿರುವುದು.

ಇದೇ ತಾ. ೨೧ನೇ ಆದಿತ್ಯವಾರ ಮಧ್ಯಾಹ್ನ ಸಮಯ ಇಲ್ಲಿಯ ಮಹಾಮ್ಮಾಯಿ ದೇವಸ್ಥಾನದ ಬಳಿಯಿರುವ ಮುನ್ಸಿಫ್ ಕೋರ್ಟು ಅಮೀನ ರಾ। ಹವಾಲ್ದಾರ ಸುಬ್ರಾಯರವರ ವಠಾರ ಮನೆ ಒಂದು, ಹಟ್ಟಿ ಒಂದು, ಮತ್ತು ಕೋರ್ಟು ಎಗ್ಸಾಮಿನರ ಜಂಗ್ಲಿ ಗುಮಾಸ್ತರಾದ ರಾ। ಪೈರುಪಾಡಿ ಲಕ್ಷ್ಮೀನಾರಾಯಣಯ್ಯನವರ ಕೊಟ್ಟಿಗೆ ಬೆಂಕಿಯಿಂದ ಸುಟ್ಟು ಭೂದಿಯಾದವು. ಇದರ ಒಟ್ಟಿಗೆ ಮೂರು ತೆಂಗಿನಮರಗಳೂ ಅಗ್ನಿ ಪಾಲಾದವು. ಬೆಂಕಿ ನೊಂದಿಸಲಿಕ್ಕೆ ನೀರು ಇಡಿವೆ. ಆದುದರಿಂದ ಇಲ್ಲಿಯ ಸಬ್ ರಿಜಿಸ್ಟ್ರಾರರವರಾದ ಮ।ರಾ।ರಾ। ಎನ್. ಬಾಬುರಾಯರವರು ಮಣ್ಣು ಹಾಕಿ ನೊಂದಿಸುವ ಏರ್ಪಾಡು ಮಾಡಿದರು. ಸಾವಿರಾರು ಜನಸಮೂಹಗಳು ಇದ್ದು ಡಿವಿಜನ್ ಆಫೀಸು, ತಾಲೂಕು ಆಫೀಸು, ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು, ಮುಂತಾದ ಸರಕಾರಿ ಆಫೀಸುಗಳು ಇರುವ ನಮ್ಮ ಪಟ್ಟಣದಲ್ಲಿ ಬೆಂಕಿ ನೊಂದಿಸುವ ಯಂತ್ರ ಇಲ್ಲದಿರುವದು ಸರಕಾರದವರ ಎಗಾಕೊಡದೆ ಇದ್ದದ್ದು ಶೋಚನೀಯವಾಗಿದೆ.

ಆದ್ಯಾರಿ ಇಲಾಖೆಯಲ್ಲಿ ಒಮ್ಮೆ ರೂಲಿಗೆ ಮೇರೆಗೆ ೧೦ ತಾಳೆ ಮರಗಳಿಗೆ ಮೊಹರು ಹಾಕಿಸಿದಾಗ್ಯೂ ೨ನೇದಫೆ ೧೦ ತೆಂಗು ಮರಗಳಿಗೆ ಕಡ್ಡಾಯವಾಗಿ ಮೊಹರು ಹಾಕಲಿಕ್ಕೆ ಮಾಡಲ್ಪಟ್ಟ ಅರ್ಜಿಗಳು ತಿರಸ್ಕರಿಸಿರುವದರಿಂದ ತೆಂಗು ಮರ ಕಡಿವಂತ ಮರಗಳು ಕಡಿಸಲಿಕ್ಕೆ ಒಪ್ಪದೆ ಅಂಗಡಿ ಗುತ್ತಿಗೆದಾರರಿಗೂ ಮರ ಕಡಿಯುವವರಿಗೂ ಹೆಚ್ಚಿನ ಸಂಕಷ್ಟ ಉಂಟಾಗಿರುವದು ಎಂದು ಹೇಳುವರು.

ಬೆಳ್ತಂಗಡಿ:— ಈ ಡಿವಿಜನ್ ಬಾಬತು ಮಹಾಸಭಾ ಜಮಾಬಂದಿಯು ಕಳೆದ ಫೆಬ್ರವರಿ ತಿಂಗಳಲ್ಲಿ ಇಟ್ಟಿದ್ದಾಗ್ಯೂ ನಮ್ಮ ಡಿವಿಜನಲ್ ಆಫೀಸರಿಗೆ ಅಕಸ್ಮಿತ ಕಾಯಿಲೆ ಸಂಭವಿಸಿದ್ದರಿಂದ ಮುಂದರಿಸಿಟ್ಟು ಕಳೆದ ಮಾರ್ಚ ತಾ. ೧೯-ನಕ್ಕೆ ಮಂಗಳೂರು ಡಿವಿಜನಲ್ ಆಫೀಸರರು ಬಂದು ಜಮಾಬಂದಿ ನಡಿಸಿ ಉಪ್ಪಿನಂಗಡಿ ಮೊಕ್ಕಾಮಿಗೆ ಹೋಗಿರುತ್ತಾರೆ. ಮಂಗಳೂರಿನಿಂದ ಬೆಳ್ತಂಗಡಿ ವರೆಗೂ ಟಪ್ಪಾಲು ಜನ್ನದ ಮೇಲೆ ಮಾರ್ಚ ತಾ. ೧ರಿಂದ ಬರುವದಾಗಿ ವರ್ತಮಾನವಿತ್ತು. ಆದರೆ ಮಾರ್ಚ ೧ ಕಳೆದು ಹೋದರೂ ಈ ವರೇಗೆ ಯಾವದೊಂದು ತಿಳಿಯಲಿಲ್ಲ. ಕನ್ನಡ ಜಿಲ್ಲೆಯ ಮಂಗಳೂರು ಟಿಬಲ್ ಸುಪರಿಂಟೆಂಡೆಂಟರಾದ ವಿಂಟರ್ ಬಾಥಮ್ ದೊರೆಗಳು ಮೊನ್ನೆ ಬೆಳ್ತಂಗಡಿಯಿಂದ ಮೋಟರ್ ಮೇಲೆ ಬಂಗಾಡಿ ಕಿಲ್ಲೂರಿನ ಕಡೆ ಹೋದವರು ರಸ್ತೆ ಸರಿಯಿಲ್ಲದೆ ನಾವೂರು ಹತ್ತರ ಮಾರ ಎಂಬಲ್ಲಿ ಮೋಟರನ್ನು ನಿಲ್ಲಿಸಿ, ಅಲ್ಲಿಂದ ಕಿಲ್ಲೂರು ವರೇಗೂ ನಡದು ಹೋದರು. ಈ ಬಂಗಾಡಿ ರಸ್ತೆಯು ೪ ಕಡೆಗಳಲ್ಲಿ ಬಹಳ ಕೆಟ್ಟಸ್ಥಿತಿಯಲ್ಲಿರುವದರಿಂದ ಪ್ರಯಾಣಿಕರಿಗೆ ತೋಳಬಾರವನ್ನು ಕಷ್ಟಗಳು ಸಂಭವಿಸುತ್ತದೆ. ಮುರ ಎಂಬಲ್ಲಿ ೧ ಹಳ್ಳವು ಬಂದು ಅದಕ್ಕೆ ಸಂಕವಿಲ್ಲದೆಯೂ ಯಾರಾಗಲೂ ಈ ಹಳ್ಳದಲ್ಲಿ ನೀರಿದ್ದ ಪಕ್ಷದಲ್ಲಿ ಇಳಿದು ಅಟೆ ಕಡೆಗೆ ಹೋಗಬೇಕು. ದೊರೆಗಳವರು ಸಹಾ [illegible] ಮಾಡಬೇಕಾಗಿರುತ್ತದೆ — ಹೀಗೆ ಬಿಟ್ಟು ಸಮೀಪ ಸಹಾ [illegible] ರಸ್ತೆಯು. ಹಳ್ಳದಲ್ಲಿ ಹೋಗುವದರಿಂದ ಸುಮಾರು ೧ ಮೈಲು ವರೇಗೆ ರಸ್ತೆಯು ಬಹಳ ಕೆಟ್ಟದಾಗಿಯೂ [illegible] ಬಂಗಾಡಿ ಪೇಟೆ ಮುಟ್ಟುವಲ್ಲಿ ರಸ್ತೆಯೂ [illegible] ಕಲ್ಲುದಾಳಿನಿಂದ ತುಂಬಿದ್ದಾಗಿಯೂ ಇದ್ದು ಜನರಿಗೂ [illegible] ಕಷ್ಟಸಾಧ್ಯವಿಂದ ಈ ರಸ್ತೆ ವಿಷಯ, [illegible] ಸರಕಾರದವರು ಸ್ವಲ್ಪ ಕೊಟ್ಟು ಪ್ರಜೆಗಳನ್ನು ಕಾಪಾಡುವದಾಗಿ ನಂಬುತ್ತೇನೆ. ಈ ರಸ್ತೆಯು ಕಳಸದಿಂದ ಬೆಳ್ತಂಗಡಿಗೆ ಬರುವ ಮುಖ್ಯ ರಸ್ತೆ. ಇಲ್ಲಿ [illegible] ಕಡೆಯಿಂದ ಬರುವ ಜನರು ಅವುಡ್ ರಸ್ತೆ ಆಗುವದರಿಂದ ಈ ರಸ್ತೆ ವಿಷಯದಲ್ಲಿ ನಮ್ಮ ಕಲೆಕ್ಟರ್ ದೊರೆಗಳವರು ದುರಸ್ತಿ ವಿಷಯ ಆಲೋಚನೆ ಮಾಡುವರೆಂದು ನಂಬುತ್ತೇನೆ. ಅಲ್ಲದೆ ಈ ರಸ್ತೆ ಕಲ್ಲ ರಸ್ತೆಯಾದ್ದರಿಂದ [illegible] ಗವರ್ನರ್ ದೊರೆಯವರು [illegible] ಇದರಲ್ಲಿ ನಮ್ಮ ಕನ್ನಡ ಜಿಲ್ಲೆಯ ಕಲೆಕ್ಟರ್ ದೊರೆಯವರು [illegible] ನಮ್ಮ ಜಿಲ್ಲೆಯಿಂದ ಸದರಿ ರಸ್ತೆಯನ್ನು ದುರಸ್ತಿ ಮಾಡಬೇಕೆಂಬುದಾಗಿ [illegible] ಆ ಗವರ್ನರ್ ಇವರು [illegible] ಕೇಳಿದ್ದೆ — ಆದರೆ ರಸ್ತೆ ವಿಷಯದ [illegible] ಆಲೋಚನೆ ಸಹಾ ಮಾಡದೆ ಇದ್ದದ್ದು ಇಲ್ಲಿಯ ಜನರ [illegible] ಪಡುತ್ತದೆ. ಲೋಕಲ್ ಸೆಸ್ — ವಿಲೇಜ್ ಸೆಸ್ ಕೊಡುವ ರೈತರು ಇಲ್ಲಿ ಅನೇಕ ಗ್ರಾಮಗಳಿಂದ ಅವುಡ್ ಬರ್ನ್ನಾಗುವದು ಮತ್ತು ಇಲ್ಲಿನ ಭತ್ತ, ಅಕ್ಕಿ, ಎಳ್ಳು ವಗೈರೆ ಉತ್ಪತ್ತಿಗಳನ್ನು ಈ ರಸ್ತೆಯಲ್ಲಿ ರವಾನೆ ಮಾಡುವದು ಬಹಳ ಪ್ರಯಾಸವಾಗಿ ಕಂಡುಬರುತ್ತದೆ. ಪ್ರಜಾ ಹಿತಚಿಂತಕರಾದ ನಮ್ಮ ಈಗಿನ ಕಲೆಕ್ಟರ್ ದೊರೆಗಳವರು ಇತ್ತಕಡೆ ಸರ್ಕಿಟು ದಯಪಾಲಿಸುವ ಸಮಯ ಈ ಬೆಳ್ತಂಗಡಿಯಿಂದ ಬಂಗಾಡಿ ವರೆಗೂ ಸರ್ಕಿಟು ಮಾಡಿದರೆ ಸಮಾಧಾನವಾದೀತೆಂತ ಬೇಡಿಕೊಳ್ಳುತ್ತೇನೆ. ಈ ಬಂಗಾಡಿ ಪ್ರಾಂತ್ಯದಲ್ಲಿ ರಸ್ತೆ ಸ್ಥಿತಿ ಮಾತ್ರವಲ್ಲ. ಇತರ ಸ್ಥಿತಿಗಳಲ್ಲಿ ಸಹಾ ಜನರಿಗೆ ಬಹಳ ದೋಷಗಳಿರುತ್ತವೆ.

ಇಲ್ಲಿ ಒಂದು ಸ್ಕೂಲ್ ಒಂದು ಪೋಲಿಸ್ ಔಟ್ ಪೋಸ್ಟು ಅಗತ್ಯವಾಗಿ ಬೇಕಾಗಿದೆ. ಬೆಳ್ತಂಗಡಿಯಿಂದ ೧೦ ಮೈಲು ದೂರವಿರುವ ಈ ಬಂಗಾಡಿಯಲ್ಲಿ ಈ ಮೊದಲು ಪೋಲಿಸ್ ಸ್ಟೇಷನ್ ಇತ್ತು. ಹೊಸ ವಿಲೆವಾರಿಯಲ್ಲಿ ಇಲ್ಲಿಯ ಸ್ಟೇಷನ್ ತೆಗೆದದ್ದರಿಂದ ಈ ಪ್ರಾಂತ್ಯದಲ್ಲಿ ಕಳ್ಳರುಗಳು ಹೆಚ್ಚಾಗಿಯದೆ. ಆಗಾಗ್ಗೆ ಖೂನಿ ಮಾರಾಮಾರಿ ದೊಂಬಿ [illegible] ಆದೆ. ಈ ಸಂಗತಿ ಜಾನ್ಗಾರಿ ಸ್ಟೇಶನ್‌ನಲ್ಲಿ ದಾಖ್ಲಾದ ಕಕ್ಷೀದಾರರ್ರೆಯನ್ನು ನೋಡಿದರೆ ಹತ್ತರಲ್ಲಿ ಎಂಟು ಬಂಗಾಡಿಯದು ಎಂತ ಕಂಡು ಬಂದೀತು. ಇದು ಬೆಳ್ತಂಗಡಿಯಿಂದ ಒಂದು ಮೂಲೆಯಾಗಿ ಮೈಸೂರು ಗಡಿಗೂ ಹತ್ತರವಾಗಿ ಇದ್ದು ಇಲ್ಲಿ ಕೆಲವು ಪೋಕ್ರಿ ಮನುಷ್ಯರು ಒಂದು ಕೂಟಮಾಡಿಕೊಂಡು ಇರುತ್ತಾರೆ. ಸರಕಾರಿಯಲ್ಲಿ ದಾಖಲಾಗುವ ತಪ್ಪುಗಳಲ್ಲದೆ ವಂಚನೆಯಿಂದ ಬಹಳ ತಪ್ಪುಗಳು ಖೂನಿಗಳು ಸಹಾ ಮರೆಸಿಟ್ಟು ಇರುತ್ತವೆ. ಇದರಿಂದ ಬಡ ಜನರಿಗೆ ಭೀತಿ ಇದೆ. ಜನರಲ್ಲಿ ವಿದ್ಯೆ ಸಹಾ ಇಲ್ಲದೆ ಇರುವದರಿಂದ ಸಣ್ಣ ಪ್ರಾಯದಿಂದಲೇ ಪೋಕ್ರಿ ಕೂಟಕ್ಕೆ ಮನಸ್ಸು ಹೋಗುವದರಿಂದ ಇಲ್ಲಿ ದಯಾಳು ಸರಕಾರದವರು ಒಂದು ಸ್ಕೂಲನ್ನು ಬೇಗನೇ ತೆರೆಯುವರೆ ಆಲೋಚನೆ ಮಾಡಿದರೆ ಬಹಳ ಉಪಕಾರವಾಗುತ್ತಿತ್ತು.

ಒಂದು ಔಟ್ ಪೋಸ್ಟು ಮತ್ತು ಒಂದು ಸ್ಕೂಲ್, ಒಂದು ಬ್ರೆಂಚ್ ಟಪ್ಪಾಲ್ ಆಫೀಸು ಇಲ್ಲಿ ಅಗತ್ಯ ಉಂಟು. ಇದು ಹೊರತು ಈ ಬಂಗಾಡಿಯಲ್ಲಿ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಆಸ್ತಿ ಇದ್ದ ಕೆಲವು ಜನರು ಪಾರ್ಟಿಯಾಗಿರುವದರಿಂದ ಬಡಜನರಿಗೆ ಹೆಚ್ಚಿನ ಕಷ್ಟ ಸಂಭವಿಸುತ್ತದೆ.

ಟಪ್ಪಾಲ್ ಆಫೀಸು ಬೆಳ್ತಂಗಡಿಯು ೧೦ ಮೈಲು ದೂರವಿರುವ ಕಾರಣ ೩-೪ ಪತ್ರಗಳಾದರೂ ಸರಿಯಾಗಿ ಬಟವಾಡೆ ಇಲ್ಲದೆ ಬಹಳ ತೊಂದರೆ ಸಂಭವಿಸುತ್ತದೆ.

ಮುಲ್ಕಿ:—ಇಲ್ಲಿಯ [illegible] ಸ್ಕೂಲ [illegible] ಒಂದು ಮಾರ್ಗ ಉಂಟು. [illegible]

[illegible] ಗ್ರಾಮವನ್ನುಸ್ಸಿಪ ಕೋರ್ಟಿಗೂ ವಿದ್ಯಾರ್ಥಿಗಳೂ ಕಕ್ಷಿಗಾರರೂ ಇದೇ ಮಾರ್ಗದಲ್ಲಿ ಹೋಗಬೇಕಾಗಿರುತ್ತದೆ. ಈ ಮಾರ್ಗದಲ್ಲಿ ಇಷ್ಟು ಚಲಾವಣೆ ಇದ್ದರೂ ಈ ಮಾರ್ಗವು ಬಹಳ ನಾದುರುಸ್ತಿಯಾಗಿ ಕೆಟ್ಟ ಸ್ಥಿತಿಯಲ್ಲಿರುವದು. ಈ ಮಾರ್ಗದ ಬಲಗಡೆಯಲ್ಲಿ ಸರಕಾರಿ ಸ್ಥಳವಿದ್ದು ಮಾರ್ಗವು ಅಗಲಪಡಿಸಲಿಕ್ಕೆ ಅನುಕೂಲ ವಿದ್ದರೂ ಇಕ್ಕಟ್ಟಾದ ಈ ಮಾರ್ಗದಲ್ಲಿ ಮಳೆನೀರು ಹೋಗಲಿಕ್ಕೆ ಸಹ ಸರಿಯಾದ ತೋಡುಗಳಿಲ್ಲದೆ ಮಳೆನೀರು ಮಾರ್ಗದ ಮೇಲಿಂದ ಹರಿದು ಮೇಲ್ಭಾಗದ ಮಣ್ಣೆಲ್ಲಾ ಕೊರೆದು ಹೋಗಿ ಮೇಲುಬಿದ್ದ ಸಣ್ಣ ದೊಡ್ಡ ನೊಸೆಗಲ್ಲುಗಳು ಪಥಿಕರ ಪಾದಗಳನ್ನು ಚುಚ್ಚಿ ಗಿಯರ್ಾರೋಹಣದ ನೆನಪನ್ನು ಹುಟ್ಟಿಸುವವು. ಅದಲ್ಲದೆ ಮೇಲಿನ ಶಾಲೆಗಳಿಂದ ಬಿಟ್ಟ ಸಣ್ಣ ಸಣ್ಣ ಮಕ್ಕಳು ಇಳಿಜಾರಾಗಿ ಇಕ್ಕಟ್ಟಾದ ಈ ಮಾರ್ಗದಲ್ಲಿ ಗುಂಪುಕೂಡಿ ತಮ್ಮ ಸ್ವಭಾವಿಕವಾದ ಹುಡುಗಾಟಿಕೆಯಿಂದ ವೇಗದಿಂದ ಬರುವ ರಭಸದಲ್ಲಿ ಈ ನೊಸೆಗಲ್ಲುಗಳಿಂದ ಕಡೆಯಲ್ಪಟ್ಟು ಗಪ್ಪನೆ ನೆಲಕ್ಕುರುಳಿ ಬಿದ್ದು ಮಾರ್ಗದಲ್ಲಿ ಪಸರಿರುವ ಕಲ್ಲುಗಳಿಂದ ಮೈಯೆಲ್ಲಾ ಚುಚ್ಚಲ್ಪಟ್ಟವರಾಗಿ ಆ ವೇದನೆಯಿಂದ ಹೊರಳಾಡುವುದನ್ನು ಈ ಮಾರ್ಗ ಸಂಚಾರಿಗಳು ಆಗ್ಗಾಗ್ಗೆ ನೋಡಿರಬಹುದು. ಹೀಗೆ ಬಿದ್ದು ಹೊರಳಾಡುವ ಮಕ್ಕಳಿಗೆ ಕಣ್ಣುಕತ್ತಲೆ ಬಂದರೆ ಕಣ್ಣಿಗೆ ನೀರು ಹಾಗಿಸಲಿಕ್ಕೆ ಸಹ ಒಂದು ಬಾವಿಯಾದರೂ ಈ ಸ್ಥಳದಲ್ಲಿರದು. ನಿರ್ಜನ ಸ್ಥಳವಾದ ಸ್ಮಶಾನದ ಹತ್ತರ ಕೂಡ ಬಾವಿಯನ್ನು ಅಗಿಸುವ ನಮ್ಮ ದಯಾಳು ಬೋರ್ಡಿನವರಿಗೆ ಜನಸಂಚಾರವಿರುವ ಹಾಗೂ ಪಬ್ಲಿಕ ಕಟ್ಟಡಗಳಿರುವ ಇಂಥಾ ಸ್ಥಳದಲ್ಲಿ ಒಂದು ಬಾವಿಯನ್ನಾದರೂ ಅಗಿಸುವ ಆಲೋಚನೆ ಹುಟ್ಟದಿರುವದು ಆಶ್ಚರ್ಯವೆಂದೇ ಹೇಳಬೇಕು. ಈ ಮಾರ್ಗ ದುರುಸ್ತಿ ವಿಷಯ ಇನ್ನಾದರೂ ಮನಸ್ಸುಕೊಡುವರಾಗಿ ಹಾರೈಸುತ್ತೇವೆ.

ಬೋರ್ಡು ಪ್ರಾಥಮಿಕ ಶಾಲೆಯ ಉಪಾಧ್ಯಾಯರ ಮುಂಗಾಯಿಭತ್ತೆ ವಿಷಯವಾಗಿ ಈ ಪತ್ರಿಕೆ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದ ಲೇಖವನ್ನು ನಮ್ಮ ದಯಾಳುಗಳಾದ ಕಲೆಕ್ಟರ ದೊರೆಗಳು ಪರಾಂಬರಿಸಿ ಅದನ್ನು ಮಂಗಳೂರು ತಾಲೂಕು ಬೋರ್ಡಿಗೆ ಕಳುಹಿಸಿದ ಸಂಬಂಧ ಬೋರ್ಡಿನವರು ಉಪಾಧ್ಯಾಯರಿಗೆ ಮುಂಗಾಯಿಭತ್ತೆ ಕೊಡಬೇಕೆಂಬದಾಗಿ ಬೋರ್ಡ ಮೀಟಿಂಗಿನಲ್ಲಿ ನಿರ್ಣಯಿಸಿದರು. ಈ ನಿರ್ಣಯವನ್ನು ಓದಿ ಬಡ ಉಪಾಧ್ಯಾಯರಿಗೆಲ್ಲಾ ಹಸಿದು ಬಂದವರಿಗೆ ಊಟಕ್ಕೆ ಕೂಂಡ್ರಿಸಿ ಬಡಿಸಲಿಕ್ಕೆ ದೊಡ್ಡ ಎಲೆಯನ್ನು ಇಟ್ಟಂತೆ ಬಹಳ ಸಂತೋಷವಾಯಿತು. ಆದರೆ ಮಾಡುವದೇನು ಎಲೆ ಮಾತ್ರ ದೊಡ್ಡದು ಬಡಿಸಲಿಕ್ಕೆ ಅನ್ನವಿಲ್ಲ — ಮೀಟಿಂಗಿನಲ್ಲಿ ಹುಸಾದರೂ ಕೊಡಲಿಕ್ಕೆ ಹಣವಿಲ್ಲವಂತೆ. ಪಾಪ! ಬಡ ಉಪಾಧ್ಯಾಯರ ದುರದೃಷ್ಟ! ಆದರೆ ಈ ವರುಷ ಈ ಉಪಾಧ್ಯಾಯರ ಲಾಭಾಧಿಪತಿಯು ವಿಶಾಲವಾದಲ್ಲಿ ಬಂದಂತೆ ತೋರುತ್ತದೆ. ವಂಶ್ಯ ನ್ಯಾಯವಿಧಾಯಕ ಸಭೆಯು ಮುಂದೆ ಬಂದ ಈ ವರುಷದ ಬಜೇಟಿನಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ಸಂಬಳ ಹೆಚ್ಚಿಸಲಿಕ್ಕೆ ವಗೈರೆ ೩೦ ಲಕ್ಷ ರೂಪಾಯಿ ವರ್ಷಾಶನವನ್ನು (ರಿಕರಿಂಗ ಗ್ರೇಂಟ) ಇಂಡಿಯಾ ಸರಕಾರದವರು ಪ್ರತ್ಯೇಕಿಸಿರುವರು. "ದೇವರು ಕೊಟ್ಟರೂ ಪೂಜಾರಿ ಬಿಡಾ" ಎಂಬ ಗಾದೆಯು ಬಡ ಉಪಾಧ್ಯಾಯರ ಅನುಭವಕ್ಕೆ ಬಾರದಿರಲಿ.

ಬಂಟರ ಯಾನೆ ನಾಡವರ ಸಂಘ.

ಶುಭಕಾರ್ಯಗಳ ಸಂದರ್ಭಗಳಲ್ಲಿ ವಸೂಲು ಆದದ್ದು:— ಪರಕಳ ಉದ್ದ ವೆಂಕಪ್ಪಯ್ಯನವರಿಂದ ರೂ. ೮; ಬೆಳ್ವಾಯಿ ಭಂಡಾರಮನೆ ಚಾರು ಅಜಿಲರಿಂದ ರೂ. ೧; ಅನಂತಾಡಿ ರಾಮಣ್ಣರೈಗಳಿಂದ ರೂ. ೫; ಚಿತ್ರ ಪಟೇಲ ರಾಮಪ್ಪ ಬಲ್ಲಾಳರಿಂದ ರೂ. ೫; ಇರ್ಮಾಡಿ ಮೋನಪ್ಪ ಶೆಟ್ರಿಂದ ರೂ. ೧೦; (ಕುಂದಾಪುರ) ಸೌಕೂರಲ್ಲಿ ಆದ ಲಗ್ನದ ಸಂದರ್ಭದಲ್ಲಿ:— ಸೌಕೂರು ಮಂಜ್ಜ ಸೆರೆಗಾರರಿಂದ ರೂ. ೨೦; ಸೌಕೂರು ಮಂಜ್ಜ ಸೆರೆಗಾರರ ಅಳಿಯ ರಾಮಣ್ಣಶೆಟ್ರು ಮತ್ತು ನಾಗಪ್ಪ ಶೆಟ್ರಿಂದ ರೂ. ೨೦; ಅತ್ತಿ ನಾಗ್ಯ ಶೆಟ್ರಿಂದ ರೂ. ೨೫; ಬ್ರಹ್ಮಾವರ ಮಹಾಬಲ ಶೆಟ್ರಿಂದ ರೂ. ೧೦; ಬಸ್ರೂರು ಸಂತ್ರ್ಯ ಶೆಟ್ರಿಂದ ರೂ. ೧೦; ಬಿಲ್ಲಾಡಿ ಸಂಕ್ಯ ಹೆಗಡೆರಿಂದ ರೂ. ೧೦; ಕಟೂರು ಶೀನಶೆಟ್ರಿಂದ ರೂ. ೧೦; ತೋನ್ಸೆ ವೆಂಕಪ್ಪ ಹೆಗಡೆರಿಂದ ರೂ. ೧೦.

ಅ. ಬಾಲಕೃಷ್ಣ ಶೆಟ್ಟಿ,
ಕೋಶಾಧಿಕಾರಿ.

ಜೀನಸು ಧಾರಣೆ.

(ರಖಂ).

ಮಸೂರಿ ಅಕ್ಕಿ ಹೊಸ್ತು	5-12-0 ರಿಂದ	6-2-0
ಗುಡ್ಡೆ ಸುಗ್ಗಿ ,, ...	5-8-0 ,,	5-12-0
ಹೊಸ ರಾಶಿ ,, ...	5-3-0 ,,	5-6-0
ಅಮ್ಮರ್ ಬೆಳ್ತಿಗೆ ,, ...	6-0-0 ,,	6-8-0
ಗುಡು ಬೆಳ್ತಿಗೆ ,, ...	5-8-0 ,,	5-10-0
ರಂಗೂನು ಬೆಳ್ತಿಗೆ ಗೋಣಿ ೧ರ . . .	9-8-0 ,,	9-12-0
ಗೋಧಿ ಗೋಣಿ ೧ರ	11-12-0 ,,	12-8-0
ಹುರುಳಿ ಗೋಣಿ ೧ರ	6-2-0 ,,	6-4-0
ಕಡಲೆ ಗೋಣಿ ೧ರ ಬೊಂಬೈ . . .	9-8-0 ,,	10-8-0
ತೊಗರಿ ಗೋಣಿ ೧ರ		10-8-0
ತೊಗರಿ ಬೇಳೆ ಗೋಣಿ ೧ರ . . .	12-8-0 ,,	15-8-0
ಉದ್ದು ಗೋಣಿ ೧ರ	11-8-0 ,,	11-12-0
[illegible] ಖಂಡಿ ೧ರ	,,	35-0-0
ಉಪ್ಪು ಗೋಣಿ ೧ರ	4-14-0 ,,	5-0-0
ಕೊಬ್ರಿ ಖಂಡಿ ೧ರ	85-0-0 ,,	90-0-0
ಹೊಪ್ಪುಹಿಂಡಿ ಖಂಡಿ ೧ರ	18-0-0 ,,	18-8-0
ಎಳ್ಳಿಂಡಿ ಖಂಡಿ ೧ರ ಬೊಂಬೈ . . .	27-8-0 ,,	35-0-0
ಕೊಬ್ರಿ ಎಣ್ಣೆ ಮುಡಿ ೧ರ	6-2-0 ,,	7-0-0
ಎಳ್ಳೆಣ್ಣೆ ಮುಡಿ ೧ರ (ಕುರಾಸಿನ) . . .	,,	4-10-0
[illegible] ಬೆಲ್ಲಗಿ ೧ರ . . .	6-11-0 ,,	7-6-0
ಮೋರಿಸ್ ಸಕ್ಕರೆ ಮುಡಿ ೧ರ . . .	5-7-0 ,,	5-8-0
ಕಾಫಿ ಖಂಡಿ ೧ರ	170-0-0 ,,	185-0-0
ಹೊಸಬೆಳಗೋಟು ಖಂಡಿ ೧ರ . . .	82-0-0 ,,	85-0-0
ಗೇರುಬೀಜ ಮುಡಿ ೧ರ	2-0-0 ,,	2-2-0
[illegible] ಖಂಡಿ ೧ರ		75-0-0
[illegible] ಮುಡಿ ೧ರ	29-0-0 ,,	30-8-0
[illegible]	,,	32-0-0
[illegible]	,,	24-0-0
[illegible]	,,	5-4-0
[illegible]		240-0-0

ಯುದ್ಧದ ಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಸಾಲವು

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವ ಬಗ್ಗಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪ[illegible]

1929ರಿಂದ 1947ರ ವರೆಗಿನ ವರ್ಷಗಳ ಮಧ್ಯಕಾಲದಲ್ಲಿ ಸಂದಾಯವಾಗುವ ಸೇಕಡಾ 5ರ ದರದ ಸಾಲವು—1920ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ [illegible] ಬಾಂಡ್ಸ್ ಎಂಬ ಯುದ್ಧ ಸಂಬಂಧವಾದ ಸಾಲಪತ್ರಗಳು, 1922ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ [illegible] ದರದ ಯುದ್ಧ ಸಂಬಂಧವಾದ ಸಾಲಪತ್ರಗಳು—(1917—18ನೇ ಇಸವಿಯ[illegible] ಮಾಡಲ್ಪಡುವ) ಪೋಸ್ಟು ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು.

ಅಸಲ್—ವ—ಬಡ್ಡಿಯು ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು.

I. 1929ರಿಂದ 1947ರ ಪರ್ಯಂತದ ವರ್ಷಗಳಲ್ಲಿ ಸಂದಾಯವಾಗತಕ್ಕ ವಾರ್ ಲೋನ್ ಎಂಬ ಯುದ್ಧಸಂಬಂಧವಾದ ಸಾಲವು.

ಸಾದರುಮಾಡುವ ಬೆಲೆ:—ಸೇಕಡಾ 95ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿ ಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 95ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 15ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ ರೂ. 20ರ ಪ್ರಕಾರ [illegible]ಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳನಂತರದ ಮೊದಲನೆಯ ತಿಂಗಳ, ಎರಡನೆಯ ತಿಂಗಳ, ಮೂರನೆಯ ತಿಂಗಳ ಮತ್ತು ನಾಲ್ಕನೆಯ ತಿಂಗಳ 15ನೇ [illegible]ಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5ರ ಮೇರೆಗೆ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಅಗೋಸ್ತು 15ನೇ ತಾರೀಕಿನಲ್ಲಿ ಪಾವತಿಯಾಗುವುದು.

ಪರಿಹರಿಸಲ್ಪಡುವ ತಾರೀಕು:—ತತ್ಪೂರ್ವವಾಗಿಯೇ ಪರಿಹರಿಸಲ್ಪಡದಿದ್ದರೆ, 1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲವು 1947ನೇ ಇಸವಿಯ ಅಗೋಸ್ತು 1[illegible] ತಾರೀಕಿನಲ್ಲಿ ನೂರಕ್ಕೆ ನೂರರಂತೆ ಮರು ಪಾವತಿಮಾಡಲ್ಪಡುವುದು. ಆದರೆ ಸದರೀ ಸಾಲ ಯಾ ಅದರ ಯಾವದೊಂದು ಭಾಗವನ್ನು ನೂರಕ್ಕೆ ನೂರರಂತೆ, 1929ನೇ ಇಸವಿಯ ಅಗೋಸ್ತು 15ನೇ [illegible]ನಲ್ಲಿ ಯಾ ಅನಂತರ ಇಂಡಿಯಾ ಗಜೇಟಿನಲ್ಲಿ ಮೂರು ಕ್ಯಾಲಂಡರು ತಿಂಗಳ ನೋಟಿಸು ಕೊಟ್ಟು ಪರಿಹರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇಂಡಿಯಾ ಗವರ್ನ್‌ಮೆಂಟಿನವರು ಇಟ್ಟುಕೊಂಡಿರುತ್ತಾರೆ.

ಸಾಲ ಪರಿಹಾರದ ಫಂಡವಾಳವು:—1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲಪತ್ರಗಳ ಪೇಟೆಯ ಬೆಲೆಯು ತಗ್ಗುವ ಸಂದರ್ಭದಲ್ಲಿ ಏರ್ಪಾಡು ಮಾಡುವ ಬಗ್ಗೆ[illegible] ಇಂಡಿಯಾ ಗವರ್ನ್‌ಮೆಂಟಿನವರು, ಸದರೀ ಸಾಲಪತ್ರಗಳ ಪೇಟೆಯ ಬೆಲೆಯು ಅವು ಸಾದರುಮಾಡಲ್ಪಟ್ಟ ಬೆಲೆಗಿಂತ ಕಡಿಮೆಯಾದಾಗಲೆಲ್ಲಾ ಸದರೀ ಸಾಲದ ಪತ್ರಗಳನ್ನು ರದ್ದುಪಡಿಸುವ ಉದ್ದೇಶವಾಗಿ ಅವುಗಳ[illegible] ಕೊಂಡುಕೊಳ್ಳಲು ಉಪಯೋಗಿಸತಕ್ಕ ಒಂದು ಬಂಡವಾಳವಾಗಿ ಏರ್ಪಡಿಸುವಗೋಸ್ಕರ ಸದರೀ 1929ರಿಂದ 1947ರೊಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೊಬಲಗಿನ ಸೇಕಡಾ ಒಂದುವ[illegible] ಸಮಾನವಾದ ಒಂದು ಮೊಬಲಗನ್ನು ವರ್ಷಂಪ್ರತಿ ಪ್ರತ್ಯೇಕಿಸಿಡಲು ಒಪ್ಪಿಕೊಂಡಿರುತ್ತಾರೆ.

II. 1920ನೇ ಇಸವಿಯ ವಾರ್ ಬಾಂಡುಗಳು ಮತ್ತು 1922ನೇ ಇಸವಿಯ ವಾರ್ ಬಾಂಡುಗಳು. (ಇನ್ಕಮ್‌ಟಾಕ್ಸ್ ಮಾಫಿ.)

ಸಾದರುಮಾಡುವ ಬೆಲೆ:—ಸೇಕಡಾ ರೂ. 100ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ ರೂ. 100ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವ ಕಾಲದಲ್ಲಿ ಸೇಕಡಾ 20ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ 20ರ ಪ್ರಕಾರ ತಿಂಗ[illegible]ಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳ ನಂತರದ ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5½ಯ ಪ್ರಕಾರ ಫೆಬ್ರುವರಿ 15ನೇ ತಾರೀಕಿನಲ್ಲಿ ಮತ್ತು ಅಗೋಸ್ತು 15ನೇ ತಾರೀಕಿನಲ್ಲಿ ಪಾವತಿಮಾಡಲ್ಪಡುವದು.

ಪರಿಹರಿಸಲ್ಪಡುವ ತಾರೀಕು:—1920ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1920ನೇ ಇಸವಿಯ ಅಗೋಸ್ತು 15ನೇ ತಾರೀಕಿನಲ್ಲಿಯೂ, 1922ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1922ನೇ ಇಸವಿಯ ಅಗೋಸ್ತು 15ನೇ ತಾರೀಕಿನಲ್ಲಿಯೂ ಮರು ಪಾವತಿಮಾಡಲ್ಪಡುವುದು.

III. ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು. (ಇನ್ಕಮ್‌ಟಾಕ್ಸು ಮಾಫಿ).

ರೂ. 10, ರೂ. 20, ರೂ. 50 ಮತ್ತು ರೂ. 100ರ ಬಾಬತು ಸರ್ಟಿಫಿಕೇಟುಗಳು ಕೊಡಲ್ಪಟ್ಟ 5 ವರ್ಷಗಳ ತರುವಾಯ ಮರು ಪಾವತಿಯಾಗುವಂಥವುಗಳು.

ಸಾದರು ಮಾಡುವ ಬೆಲೆ:—ರೂ. 7—12, ರೂ. 15—8, ರೂ. 38—12 ಮತ್ತು ರೂ. 77—8.

ಈ ಸರ್ಟಿಫಿಕೇಟುಗಳನ್ನು, ಸದರಿ 5 ವರ್ಷಗಳ ವಾಯಿದೆಯಲ್ಲಿ ಯಾವ ಕಾಲದಲ್ಲಾದರೂ ಸದರಿ ಸಾಲದ ಕುರಿತ ಪ್ರಕಟನೆಯಲ್ಲಿ ನಿರ್ದೇಶಿಸಲ್ಪಟ್ಟ ದರಗಳ ಮೇರೆಗೆ ಅವು ಸಾದರುಮಾಡಲ್ಪಟ್ಟ ಪೋಸ್ಟು ಆಫೀಸುಗಳಲ್ಲಿ ವಟಾಯಿಸಲು ಸಹಾ ಬಹುದು.

1. **ಸೆಕ್ಯೂರಿಟಿಗಳ ನಮೂನೆ:**—1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಬಾಬತು ಸೆಕ್ಯೂರಿಟಿ ಪತ್ರಗಳು, 1920ನೇ ಇಸವಿಯ ವಾರ್‌ಬಾಂಡುಗಳು ಮತ್ತು 1922ನೇ ಇಸವಿಯ ವಾರ್‌ಬಾಂಡುಗಳು ಅರ್ಜಿದಾರನಿಗೆ ಇಷ್ಟವಿರುವ ಮೇರೆಗೆ ಈ ಕೆಳಗಿನ ನಮೂನೆಗಳಲ್ಲಿ (ಇದನ್ನು ಆತನು ತನ್ನ ಅರ್ಜಿಯಲ್ಲಿ ನಮೂದಿಸತಕ್ಕದ್ದು) ಕೊಡಲ್ಪಡುವುವು.

    (1) ಇನ್‌ಸ್ಕ್ರಾಯಿಬ್ಡ್ (ಹೆಸರು ರಿಜಿಸ್ತ್ರಿ ಮಾಡಿರುವ) ಸ್ಟಾಕ್ ಸರ್ಟಿಫಿಕೇಟು ... ... ಪತ್ರಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

    (2) ಪ್ರಾಮಿಸರಿ ನೋಟುಗಳು ... ... ಇಂದಾರಸು ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

    (3) ಬ್ಯಾರರ್ ಬಾಂಡುಗಳು ... ... ಒಪ್ಪಿಸುವದರ ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

    ಇಷ್ಟವನ್ನು ನಮೂದಿಸದಿದ್ದ ಪಕ್ಷದಲ್ಲಿ, ಸೆಕ್ಯೂರಿಟಿ ಪತ್ರಗಳು ಇನ್‌ಸ್ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟುಗಳ ರೂಪವಾಗಿ ಪ್ರಥಮತಃ ಸಾದರುಮಾಡಲ್ಪಡುವವು.

2. **ಇನ್ಕಮ್‌ಟ್ಯಾಕ್ಸು:**—1920ನೇ ಇಸವಿಯ ವಾರ್‌ಬಾಂಡುಗಳ ಮತ್ತು 1922ನೇ ಇಸವಿಯ ವಾರ್‌ಬಾಂಡುಗಳ ಮೇಲಣ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಟ್ಟಿದೆ, ಆದರೆ ಸೂಪರ್‌ಟ್ಯಾಕ್ಸು ಎಂಬ ವಿಶೇಷ ತೆರಿಗೆಯಿಂದ ವಿನಾಯಿಸಲ್ಪಡಲಿಕ್ಕಿಲ್ಲ.

    1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೇಲಣ ಬಡ್ಡಿಯು ಇನ್ಕಮ್‌ಟ್ಯಾಕ್ಸಿನಿಂದಾಗಲಿ ಸೂಪರ್‌ಟ್ಯಾಕ್ಸಿನಿಂದಾಗಲಿ ವಿನಾಯಿಸಲ್ಪಡುವದಿಲ್ಲ. ಇನ್ಕಮ್‌ಟ್ಯಾಕ್ಸು ಆಕ್ಟಿನ ಎರಡನೆಯ ಶೆಡ್ಯೂಲಿನ IIIನೇ ಭಾಗದ ನಿಬಂಧನೆಗಳಿಗನುಸಾರವಾಗಿ ಇನ್ಕಮ್‌ಟ್ಯಾಕ್ಸ್ ವಸೂಲು ಮಾಡಲ್ಪಡುವುದು.

3. **ಮಾರ್ಪಡಿಸಲು ಸ್ವಾತಂತ್ರ್ಯಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ಯುದ್ಧದ ಸಾಲದ ಬಾಬತು ಚಂದಾದಾರನು ಪ್ರತಿ (ಅಂಕಿತ) ರೂ. 100ರ ಬಗ್ಗೆ ಸೇಕಡಾ 3ರ ದರದ, ಅಥವಾ 3½ಯ ದರದ ಯಾವವಾದರೂ ರೂಪಾಯಿ ನಾಣ್ಯದಲ್ಲಿರುವ ಸಾಲಗಳ (ರುಪೀ ಲೋನುಗಳ) ಅಥವಾ ಇಂಡಿಯಾ ಗವರ್ನ್‌ಮೆಂಟಿನವರ 1916–17ನೇ ಇಸವಿಯ ಸೇಕಡಾ 4ರ ದರದ ಕನ್‌ವರ್ಷನ್ ಲೋನಿನ (ಅಂಕಿತ) ರೂ. 150ನ್ನು ಮಾರ್ಪಡಿಸಬಹುದು ಮತ್ತು ಅದರ ಬದಲಾಗಿ ಈ ಕೆಳಗಿನ ದರದಲ್ಲಿ, ಎಂದರೆ—

    ಮಾರ್ಪಡಿಸತಕ್ಕ ಸೇಕಡಾ 3ರ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 65,
    ಮಾರ್ಪಡಿಸತಕ್ಕ ಸೇಕಡಾ 3½ಯ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 76,
    ಮಾರ್ಪಡಿಸತಕ್ಕ ಸೇಕಡಾ 4ರ ದರದ ಸಾಲದ ಕನ್‌ವರ್ಷನ್ ಲೋನಿನ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 99

    ನ್ನು ಮತ್ತು ಪೂರ್ತಿಯಾಗಿ ರೂ. 100ಕ್ಕೆ ಭರ್ತಿಮಾಡಲು ಅಗತ್ಯವಿರುವ ಕಡಿಮೆ ಬೀಳುವ (ವಾರ್ ಲೋನಿನ) ಮೊಬಲಗಿನ ಸಹಿತವಾಗಿ ಪಾವತಿಮಾಡಿ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳನ್ನು ಹೊಂದಬಹುದು; ಪರಂತು ಈ ಹೆಚ್ಚಿಗೆ ಮೊಬಲಗನ್ನು ರೂಪಾಯಿ ಒಂದರ ಒಂದು ಆಣೆಯ ಮೇರೆಗೆ ವಜಾಮಾಡಿ ರೊಕ್ಕವಾಗಿ ಪಾವತಿಮಾಡತಕ್ಕದ್ದು.

4. ಮಾರ್ಪಡಿಸುವ ಹಕ್ಕುಗಳನ್ನು 1917ನೇ ಇಸವಿಯ ನವಂಬರು 1ನೇ ತಾರೀಕಿನ ತರುವಾಯ ಯಾವ ಕಾಲದಲ್ಲಾದರೂ ಚಲಾಯಿಸಬಹುದು, ಪರಂತು 1918ನೇ ಇಸವಿಯ ಜನವರಿ 15ನೇ ತಾರೀಕಿನ ನಂತರ ಚಲಾಯಿಸತಕ್ಕದ್ದಲ್ಲ. ಮಾರ್ಪಡಿಸುವ ಕುರಿತ ಅಧಿಕಾರ ಪತ್ರಗಳು ಪರಭಾರೆ ಮಾಡತಕ್ಕವಾಗಿವೆ, ಮತ್ತು ಬ್ಯಾರರ್ ಫಾರ್ಮಿನಲ್ಲಿ ಕೊಡಲ್ಪಡುವವು.

5. ಮಾರ್ಪಡಿಸಿ ಕೊಡಲ್ಪಟ್ಟ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನಿನ ಪತ್ರಗಳ ಬಗ್ಗೆ 1917ನೇ ಇಸವಿಯ ಅಗೋಸ್ತು 15ನೇ ತಾರೀಕು ಮೊದಲ್ಗೊಂಡು ಬಡ್ಡಿ ಪ್ರಾರಂಭವಾಗುವುದು, ಮೇಲಿನ 3ನೇ ಕಲಮಿನನುಗುಣವಾಗಿ ಪಾವತಿಮಾಡಿದ ರೊಕ್ಕ ಮೊಬಲಗುಗಳ ಬಗ್ಗೆ ಪ್ರತ್ಯೇಕವಾಗಿ ಬಡ್ಡಿ ಪಾವತಿಮಾಡೋಣಾಗಲಿಕ್ಕಿಲ್ಲ.

6. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳು, 1920ನೇ ಇಸವಿಯ ವಾರ್ ಬಾಂಡುಗಳು, ಮತ್ತು 1922ನೇ ಇಸವಿಯ ವಾರ್ ಬಾಂಡುಗಳನ್ನು ಸದರಿಯೋ[illegible]ಣವು, ಇಂಡಿಯಾ ಗವರ್ನ್‌ಮೆಂಟಿನವರು ಇನ್ನು ಮುಂದೆ [illegible] ಸಾಲಪತ್ರಗಳನ್ನು ಕೊಡುವ ಸಂದರ್ಭದಲ್ಲಿ ಮಾರ್ಪಡಿಸಲು ಸ್ವಾತಂತ್ರ್ಯ ಕೊಡುವದಿಲ್ಲ.

7. **ಅರ್ಜಿಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಬಗ್ಗೆ, 1920ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ, 1922ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ ಮಾಡೋಣಾಗುವ ಅರ್ಜಿಗಳನ್ನು (ಪೋಸ್ಟು ಆಫೀಸಿನ ಮುಖಾಂತರವಾಗಿ ಮಾಡೋಣಾಗುವ ಅರ್ಜಿಗಳ ವಿನಾ) 1917ನೇ ಇಸವಿಯ ಮಾರ್ಜಿ 15ನೇ ತಾರೀಕು ಗುರುವಾರದ [illegible], 1917ನೇ ಇಸವಿಯ ಜೂನ 5ನೇ ತಾರೀಕು ಶುಕ್ರವಾರದ ವರೆಗೆ, ಯಾವ ದಿನವಾದರೂ ಈ ಕೆಳಗೆ ನಮೂದಿಸಿರುವ ಆಫೀಸರರ ಯಾ ಮನುಷ್ಯರ ಬಳಿ ಹಾಜರುಪಡಿಸಬಹುದು:—

    (1) ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಬಳಿಗೆ, ಅಥವಾ ಯಾವದಾದರೂ ಪ್ರಾವಿನ್ಸಿನ ಅಕೌಂಟಾಂಟ್ ಜನರಲ್‌ರ ಯಾ ಕಂಟ್ರೋಲರ ಬಳಿಗೆ;—(2) ಬಂಗಾಳ, ಮುಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಸೆಕ್ರೆಟರಿಗಳ ವ ಟ್ರೆಜರರುಗಳ ಬಳಿಗೆ, ಅವರವರ ಹೆಡ್ ಆಫೀಸುಗಳಲ್ಲಿ; ಅಥವಾ ಇಂಡಿಯದಲ್ಲಿಯ ಸದರಿ ಬ್ಯಾಂಕುಗಳ ಯಾವದೊಂದು [illegible] ಬಳಿಗೆ; ಮತ್ತು (3) ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಗವರ್ನ್‌ಮೆಂಟ್ ಖಜಾನೆಗಳ ತಾಬೆಯಿರುವ ಆಫೀಸರರ ಬಳಿಗೆ.

8. ಅರ್ಜಿಗಳು 100 ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ, ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು.

9. ಮೊಬಲು ರೂ. 100ರ ಬಗ್ಗೆ ಮಾತ್ರ ಮಾಡಲ್ಪಡುವ ಎಲ್ಲಾ ಅರ್ಜಿಗಳ ಸಂಗತಿಯಲ್ಲಿ ಪೂರಾ ಮೊಬಲಗು, ಎಂದರೆ 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಸಂಗತಿಯಲ್ಲಿ ರೂ. 9[illegible] ಮತ್ತು 1920ನೇ ಇಸವಿಯ ವಾರ್ ಬಾಂಡುಗಳ ಮತ್ತು 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 100 ಕಳುಹಿಸಲ್ಪಡಬೇಕು.

10. 1929[illegible] 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ, 1920ನೇ ಇಸವಿಯ ವಾರ್ ಬಾಂಡುಗಳ ಅಥವಾ 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 200ರ ಯಾ ಅಧಿಕ ಮೊಬಲಗಿಗೆ ಮಾಡಲ್ಪಡುವ ಅರ್ಜಿಗಳು—

    (a) ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ,—(b) ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ, [illegible]

12. ದಲಾಲಿ:—[illegible]

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.

Authorised Capital Rs.	...	300,000—0—0
Issued Capital	... ...	225,000—0—0
Subscribed Capital ...	...	225,000—0—0
Paid up Capital	...	200,225—0—0
Deposits	... ...	330,775—7—10
Reserve Fund	... ...	50,003—2—5

25% of the net profits are added annually to the Reserve Fund. Rs.28,485/- have been invested in Government Paper of the face value of Rs.29,300/-.

Dividends of not less than 6% paid during the past years and a bonus of 1% to 2% paid in addition during the last eight years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,

Mangalore, 1st April 1917.

1906ನೇ ಇಸ್ವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

ನಿಯಮಿತ ಮೂಲ ಧನವು ರೂಪಾಯಿ		300,000—0—0
ಹುಟ್ಟಿಬಂದ ಮೂಲ ಧನವು	„	225,000—0—0
ಪ್ರತಿಜ್ಞಾತ ಮೂಲ ಧನವು	„	225,000—0—0
ಆಗತ ಮೂಲ ಧನವು	„	200,225—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		330,775—7—10
ರಕ್ಷಿತ ಧನವು	... ...	50,003—2—5

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸಂಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಧನ್ಯಪತ್ರಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಈ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳರದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯು ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,

Secretary.

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 40 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ ಆಣೆ ಎರಡು ಮಾತ್ರ! ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೇ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ;—

ಸದಾನಂದ ಮುದ್ರಾಶಾಲೆ, ಉಡುಪಿ. | ಪಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಹಿಂದೂ ವ್ರತವಿವೇಕ.

(ಅಚ್ಚಾಗುತ್ತಲಿದೆ.)

ಹಿಂದೂಗಳು ಸರ್ವಸಾಮಾನ್ಯವಾಗಿ ಆಚರಿಸುವ ವ್ರತಗಳ ವಿವರ, ಅವುಗಳನ್ನು ಆಚರಿಸುವ ಸಂಕ್ಷೇಪ ವಿಧಾನ, ಅವುಗಳ ಮೂಲ ಇವೆಲ್ಲವನ್ನೊಳಕೊಂಡಿರುವ ಪುಸ್ತಕವು ಇನ್ನು ಸದ್ಯದಲ್ಲಿ ಪ್ರಕಟವಾಗುವದು.

ಮೊದಲನೆಯ ವರುಷದಲ್ಲಿ ಸಾಲೆಯ ಮಕ್ಕಳಿಗೆ ಗಣಿತದ ಪಾಠಪಟ್ಟಿ ಮತ್ತು ಕಲಿಸುವದನ್ನು ಕುರಿತು ಸೂಚನೆಗಳು ಕೂಡಿರುವ

ಗಣಿತ ಸಾರ.

ಕ್ರಯ 0—2—6.

ವ್ಯವಹಾರ ವ್ಯಾಪಾರಗಳ,

ಬಗ್ಗೆ ಬೇಕಾಗುವ ಕೋರ್ಟು ಫೋರ್ಮು, ಗೇಣಿ ಚೀಟು ಫೋರ್ಮುಗಳು, ಬೀಲು ಯಾನೆ ಪಟ್ಟಿ ಫೋರ್ಮುಗಳು ನಾನಾ ಬಗೆಯ ಲೆಕ್ಕದ ಪುಸ್ತಕಗಳು.

ಇವೆಲ್ಲವು ದೊರೆಯುವ ವಿಳಾಸ:—

ಶಾರದಾ ಛಾಪಖಾನೆ,

ಮಂಗಳೂರು ದ. ಕ.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದ್ದೆಥಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ¼ ಔನ್ಸ್ ಟ್ಯೂಬ್ 2—0—0. ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

[illegible] 0—4—0 [illegible]

[illegible]

ಎಚ್. ಆರ್. [illegible]

10 [illegible]

ಇಮಿಟೇಶನ್ ವಜ್ರದ ಒಡವೆಗಳು.

ಈ ಒಡವೆಗಳು ಅಪರಂಜಿ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿ ಬಿಳೇ ಕಲ್ಲು, ಕೆಂಪು ಕಲ್ಲುಗಳು ಇಟ್ಟು ಕಟ್ಟಿರುತ್ತದೆ. ಈ ಒಡವೆಗಳು ಅಮೇರಿಕಾ, ಇಂಗ್ಲೆಂಡ್ ದೇಶಗಳಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ 5 ವರುಷಗಳ ವರಿವಿಗೂ ಬಣ್ಣ ಹೋಗುವದಿಲ್ಲವೆಂದು ಗ್ಯಾರೆಂಟಿ ಕೊಡುವೆವು. ಅಮೇರಿಕಾ, ಇಂಗ್ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ಹೇಳುವವರಿಗೆ ಅವರ ಹಣವನ್ನು ವಾಪಸು ಕೊಡುವೆವು.

ಇಮಿಟೇಶನ್ ವಜ್ರದ ಬೆಂಡೋಲೆ.



ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲಿಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವದು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿದೆ. 7 ಕಲ್ಲಿನ ಬೆಂಡೋಲೆ ಕ್ರಯ ರೂ. 2—0—0, 7 ಕಲ್ಲಿನ ಕೆಂಪು ಬೆಂಡೋಲೆ ಕ್ರಯ ರೂ. 3—8—0.

ಕುರುಡು ಬಾವಲಿ.

ಈ ಬಾವಲಿಗಳು ಈಗತಾನೇ ಸೀಮೆಯಿಂದ ಬಂದಿವೆ. ಇದರಲ್ಲಿ ಕೆಂಪಿನದು ಬೀಕಲ್ಲಿನದು ಉಂಟು. ಇವು ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿರುತ್ತೆ. ಈ ಕಲ್ಲುಗಳು ಬಹು ಪ್ರಕಾಶವುಳ್ಳವುಗಳೂ ಬಹು ಸುಂದರವಾದ್ದು. ಇದಕ್ಕೆ ಮುತ್ತುಗಳು ಕಟ್ಟಿರುತ್ತೆ.

ಇದರ ಬೆಲೆ ಜೊತೆ 1ಕ್ಕೆ ರೂ. 2—8—0.

ಬುಲಾಕು.

ಈ ಬುಲಾಕುಗಳನ್ನು ಇಮಿಟೇಶನ್ ವಜ್ರದ ಕಲ್ಲುಗಳಿಟ್ಟು ರೋಲ್ಡ್‌ಗೋಲ್ಡ್ ಭಂಗಾರದಿಂದ ಕಟ್ಟಿ ಅಪರಂಜಿ ಭಂಗಾರದ ಗಿಲೀಟು ಮಾಡಿರುವದು. ಇದರಲ್ಲಿ ಕೆಂಪು, ಬಿಳುಪು, ಹಸರು ಬಣ್ಣದಲ್ಲಿ ಇರುವವು.

ಇದರ ಬೆಲೆ 1ಕ್ಕೆ ರೂ. 1—8—0.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆಯುವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಸಿಗರೇಟ್, ಚುಟ್ಟಿ ಸೇದುವವರಿಗೂ ರಾತ್ರಿಯಲ್ಲಿ ತಿರುಗುವವರಿಗೂ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ. ಕ್ರಯ ರೂ. 1—8—0.

ಕೈಯಲ್ಲಿ ಕಟ್ಟುವ ಗಡಿಯಾರ.



ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಅಥವಾ ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಷ್ಟಪಟ್ಟರೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾಗದು. ಇದರ ಕ್ರಯ ರೂ. 4—8—0.

ವಿಳಾಸ:— ಪಿ. ಗೋಪಾಲ್ ಎಂಡ್ ಕೊ.

28 ಹನುಮಂತರಾಯ ಕೋಯಿಲ್ ಬೀದಿ,

ಪಾರ್ಕ್‌ಟೌನ್, ಮದರಾಸು.

ಡಾಕ್ತರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ [illegible]ವಾದ್ದಾಗಿದೆ. [illegible] ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ [illegible] ಇತರ ತೈಲಗಳು [illegible]. ಪ್ರಯೋಗಿಸಲು [illegible]ವಾಗಿದೆ. ಪರಿಮಳ [illegible] ಬಹಳ [illegible] ಮತ್ತು [illegible] ಒಂದಕ್ಕೆ [illegible]

0—4—0.

Dr. [illegible] & Sons,

[illegible] Road, BOMBAY.

[illegible]

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಾಮು.

ಎಷ್ಟೋ ಹಳತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ವ್ಯಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ(ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಕೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋಯೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋಯೋಣ, ಕಟಿ ಕೈಕಾಲುಗಳುರಿಯೋಣ, ಮೈಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಇಕ್ಲಿಪ್ಸ್‌ಡ್ರಾಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ.

ಮದ್ದಿನ ಗುಣ. ಪರೀಕ್ಷಿಸಿ ನೋಡಿರಿ!! ಬೆಲೆ ಕಡಿಮೆ! ಖಾತ್ರಿಯಾದ ಗುಣ!

ಮೂತ್ರಗುದ್ದು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಆಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ನಾಶವಾಗುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ.

ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ಇಕ್ಲಿಪ್ಸ್ ಬಾಮ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ಕಲೆಸಿದಿತ, ತಲೆನೋವು, ಹುರುಕು, ಕುರಿಕಜ್ಜಿ, ಮೂಲವ್ಯಾಧಿ, ಚೇಳು ಕಚ್ಚೋಣ, ಸೊಡವೆ, ಬೇಮ, ಚಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1 ಕ್ಕೆ 0—8—0. ವಿ.ಪಿ. ಬೇರೆ. 1. ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4—12—0.

ಶ್ರೇಷ್ಠ ತಾಜಾ ಯೂಕಲಿಪ್ಟಸ್ ತೈಲ 5 ಆಣೆ; ಟೂರಚಟ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:— ಭಂಡಾರಕಾರ ಬ್ರದರ್ಸ್, ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಧ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿರಿ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನ ನಿರೋಗ್ಯಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಬೈನಾ ಬಜಾರ್ ರೋಡ್, ಮದ್ರಾಸು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಸುಖವಾಗಿ ಶರೀರವನು ಒಳ್ಳೆ ಸ್ಥಿತಿಯಲ್ಲಿರುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟಿನವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್, ಸೋಲ್ ಏಜಂಟ್ಸ್, ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,

ಸುಗಂಧಕಾರಿ, ಮೈಸೂರು.

ನೋಡಿ!

ಅನ್ನಿಕಮಂಜರೀ. ಮಸ್ತೇರೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co., ಮ್ಯಾನೇಜರ್,

Avenue Road, ಶ್ರೀದವಾಹನ,

BANGALORE CITY.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೩೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೩೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೬೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೬೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಟ್ಟಿದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ| ಲಲ್ಲುಭಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಆನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000 ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗನ್ನು ಬರೆಯುವ ವಿಳಾಸ:—

ಕೊಚಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವರಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೆದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮ ಸಂಘಗಳಲ್ಲಿಲ್ಲದಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೆದಾರರ ಮನೆಗೆ ಕಳುಹಿಸಿಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

"ಗ್ರಾಹಕರೇ ಒಮ್ಮೆಗೆ ಸಂದರ್ಶಿಸಿರಿ."

ನಮ್ಮಲ್ಲಿ ಎಲ್ಲಾ ತರದ ಸುಗಂಧ ಸಾಹಿತ್ಯಗಳೂ, ಇಂಗ್ಲಿಷ್ ಮತ್ತು ಸ್ವದೇಶಿ ಸಾಬೂನುಗಳು, ಸುಗಂಧ ತೈಲಗಳು, ಅರಾರೂಟ್, ಬಾರ್ಲಿ, ಕೊಕ್ಕೊ, ಜಾಸೆನ್ಸು, ಬಿಸ್ಕಿಟುಗಳು, ಟ್ಯೊಲೆಟ್ ಪೌಡರುಗಳು, ಶಕೆ ಕಾಲಕ್ಕೆ ಅನುಕೂಲವಾದ ವಿಲ್ ಆಫ್ ರೋಜ್ ಮತ್ತು ಲೈಮ್‌ಜ್ಯೂಸ್ ಗ್ಲಿಸರಿನ್, ಪೋಮೆಡ್ ವೆಸ್ಲಿನ್, ಕೈಲಾಂದ್ರ ಮತ್ತು ಚಪ್ಪರ ಲಾಂದ್ರಗಳು, ಕಪ್ ಮತ್ತು ಸ್ವಾಸರುಗಳು, ಚೊಕ್ಲೆಟ್ ಮತ್ತು ಪೆಪ್ಪರ್‌ಮಿಂಟುಗಳು, ಟೇಬಲ್ ಲೇಂಪುಗಳು, ವಿಚಿತ್ರ ಲೇಖನ ಸಾಹಿತ್ಯಗಳು, ಮುಖ ನೋಡುವ ಕನ್ನಡಿಗಳು, ವಾಚು ಮತ್ತು ವಾಚಿನ ಸರಪಣಿಗಳು, ಮಕ್ಕಳ ಆಡುವ ಸಾಹಿತ್ಯಗಳು, ಫೌಂಟನ್‌ಪೆನು ಮತ್ತು ಇಂಕುಗಳು, ಕ್ಯಾಶ್ ಬೋಕ್ಸ್‌ಗಳು, ದೃಷ್ಟಿ ಚಶ್ಮಗಳು, ಪೇಟೆಂಟ್ ಔಷಧಿಗಳು, ರಖಮಾಗಿಯೂ ಚಿಲ್ಲರೆಯಾಗಿಯೂ ಅತಿ ಸುಲಭ ದರದಲ್ಲಿ ದೊರಕುವದಲ್ಲದೆ ಈ ಕೆಳಗೆ ಕಾಣಿಸಿದ ಸಾಹಿತ್ಯಗಳಿಗೆ ನಾವು ಮುಖ್ಯ ಏಜಂಟರಾಗಿರುವೆವು. ಕಾಮಿನಿಯಾ ತೈಲ ಮತ್ತು ಒಟ್ಟೋ-ದಿಲ್‌ಬಹಾರ್ ಅತ್ತರುಗಳು ಮತ್ತು ಕಾಮಿನಿಯಾ ಕಂಪೆನಿಯಲ್ಲಿ ಆಗುವ ಪ್ರತಿ ಒಂದು ಸಾಹಿತ್ಯಗಳು, ಅಮೃತಾಂಜನ, ಬಾಲಾಮೃತ, ಸಿಂಕಾನ್, ಡೈಮಂಡ್ ಸೋಪುಗಳು, ಜಪಾನ್ ದೇಶದ ಜಿಂಕುಗಳಿಂದ ಆಗುವ ಕಡ್ಡಿಗಳು, ಇದೂ ಅಲ್ಲದೆ ಅನೇಕ ರೀತಿಯ ಪೆನ್ಸಿ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಮ್ಮೆಗೆ ನಮ್ಮಲ್ಲಿಗೆ ಬಂದು ಸಂದರ್ಶಿಸಿದರೆ ನಮ್ಮ ದರಗಳು ತಮಗೆ ಅನುಕೂಲವಾಗಿಯೇ ಇರುವೆಂದು ತಿಳಿಯಬಹುದು. ರೋಯರ್ ದಂತಮಂಜನ 6 ಡಬ್ಬಿಗಳ ಬೆಲೆ ಆಣೆ 8.

ದಿ ಉಲನ್ ಮಾರ್ಟ್,

ಮಂಗಳೂರು, ದ. ಕ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.
ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಹಾಭಾಗ್ಯ. ಒಂದೇ ಒಂದು ಲೋಕಾಮಯಿಕವೆಂದು ನಿಜವಾಗಿಯೂ ತಪ್ಪದು. ನಾನಾ ತರ ವೈದ್ಯರ ಸಮಯವನ್ನು ಕಾದು ಕೂರಿಯುವದು. ವಾತ, ಪಿತ್ತ, ಶ್ಲೇಷ್ಮ, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕಟ್ಟಿ ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವದು. 260 ಮಾತ್ರೆಗಳುಳ್ಳ ಬುಡ್ಡಿಗೆ ೧ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮೆ| ರಾ| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಟಾಸಿಲಂ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರ್‌ಲೇನ್ ನಂ. 2, ಬೊಂಬಾಯಿ ಇವರು ಬರೆದಿರುವದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ಮುದರಲ್ಲಿ ಜ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಿನ ಜ್ವರ, ಪಿತ್ತ ಸಂಬಂಧವಾದ ರೋಗ, ಮಕ್ಕಳ ಎಲ್ಲಾ ವಾಯುಗಳಲ್ಲಿಯೂ ಗುಣವಾಗಿರುತ್ತದೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮೆ| ರಾ| ಪಿ. ಎನ್. ಅಣ್ಣಸ್ವಾಮಿ ಅಸಿಸ್ಟೆಂಟ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪ್ರತಿಫಲವು ಪ್ರಶಸ್ತವಾಗಿದೆ. ವೈದ್ಯಶಾಲೆಯಲ್ಲಿ ಉತ್ತಮವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಉತ್ತಮ ಗುಣಗಳುಳ್ಳದ್ದಾದ ಕರ್ನಾಟಕ ಮುದ್ರಣಾಲಯದಿಂದ ಔಷಧವನ್ನು ತಯಾರು ಮಾಡುತ್ತಿದ್ದಾರೆ. ಎಲ್ಲಾ ಕಡೆ ಸಿಗುತ್ತದೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಜಿ. ರಾಘವ ವೈದ್ಯಶಾಲಾ, ಮೈಸೂರು.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡೆಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನು ಎಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಧಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪ್ರದಾನ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ್, ಕೋರ್ಟುಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಪ್ರಿಂಟ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಶ್ಯಾನುಭೋಗರ ಪಟೇಲರ ಕೋಡ್, ಗ್ರಾಮ ಮೊನಸೀಫ್ ಕೋರ್ಟ್, ಸರ್ಕಾರಿ ನೌಕರರು ಮನೆಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಸಮೀಪದಲ್ಲಿ ಇರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯಂ. ಯಸ್. ನಂಜಪ್ಪನವರು,

ಬ್ಯಾಂಸ್ಟಾನ್ ಬಜಾರ್, ಮೈಸೂರು.

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ.

ಈ ಸಾರ್ಸಾಪರೀಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದು ಕೊಳ್ಳುವುದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಷಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತ ದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯ ನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿ ಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ, ಬಾಟ್ಲಿಗೆ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾರಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರ ಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿ ಗಳ ಸೇವನೆಯಿಂದ ಹುಷಾರಾಗಿದೆ. ಬಾಟ್ಲಿ 1ಕ್ಕೆ ರೂ. ೦—೧೪—೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಚ್ಚೆ ಹೊಯ್ಯು ವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದ ರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪ ಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸ ಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ಶಂಟಾಗಿ ಮಾಡುತ್ತದೆ. ಬಾಟ್ಲಿಗೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯ ವನ್ನೂ, ಹೆಚ್ಚಾದ ಆಯಸ್ಸನ್ನೂ, ಇಂದ್ರಿಯಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ:**—ಪ್ರಸವವಾದ ಲಾಗಾಯಿತು ೩೦ ದಿನಗಳವರೆಗೆ ಉಪಯೋಗಿಸುವದರಿಂದ ಪಾಕ, ಲೇಹ್ಯ ಇವುಗಳ ಅವಶ್ಯಕತೆ ಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹದ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟ ಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳ ತೊನ್ನು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌಂಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರು ವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿ ಕೊಡಲು ಸಿದ್ಧನಾಗಿದ್ದೇನೆ.

ಪತ್ರ ಬರಹ:— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರೆಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ದುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್‌ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕವಾದ ಬಿಳೇ ಮಲ್ಲಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಪೇಟೆಯಲ್ಲಿಯೂ ಬರಲಿಲ್ಲ. ನವ್ಯಕ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಆಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.



ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರೆಗೆ ಸೀಮೆಯಿಂದ ತರಿಸಿರುತ್ತೇವೆ.

ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಮಾಲುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ	ರೂ.	3—12—0.
ಗಡಿಯಾರ 1ಕ್ಕೆ ಕ್ರಯ	ರೂಪಾಯಿ	3—0—0.
ಪೇನಾ ,,	,,	1—0—0.

ವಿಳಾಸ:— ವೈರಂ ಆಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ತ್ರಿ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ೧ಕ್ಕೆ ೮ ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಹೊಸದಾಗಿ ಕಂಡುಹಿಡಿಯಲ್ಪಟ್ಟು ಇರುವ

ಕ್ರೌನ್ ಸೋಪ್.

ಕೆಡಲಿಲ್ಲ. ಕಲೆಯಿಲ್ಲ. ಉರಿಯಿಲ್ಲ.

ಇದು ಶರೀರದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅಚ್ಚುಕಟ್ಟಾಗಿ ತೆಗಿಯುತ್ತೆ. ನೋಯುವದಿಲ್ಲ. ಚರ್ಮಕ್ಕೆ ಕಲೆಯಾಗದು. ಕ್ಷೌರಿಕರು ಮಾರುವ ರೋಮಸಂಹಾರಿಯನ್ನು ವ ಸೋಪನ್ನು ತೆಗದು ಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತಾ ಪತ್ರಿಕೆಗಳು ಬಂದಿರುತ್ತೆ. ಅವರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್‌ಗೋಲ್ಡ್ ಉಂಗುರ ಇನಾಂ ರೂ, 1-10-0.

ಯೋಗ್ಯತಾ ಪತ್ರಿಕೆ.

ಅಕ್ಕೀಕಲ್ ಪೋಸ್ಟು ಮಡಿವಾಳ ಗ್ರಾಮದಲ್ಲಿ ಇರುವ ಮಾನಸ್ವಾಮಿ ಮೊದಲಿಯಾರ್—ನಿಮ್ಮ ಕಂಪೆನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದರಿಂದ ಬಹಳ ಆನಂದವಾಯಿತು. ದಯಯಿಟ್ಟು ಇನ್ನೊಂದ ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು.

ವಿಳಾಸ:—

ಎಂ. ಎಚ್. ಸಿಂಗ್ ಅಂಡ್ ಕೋ.,
ನಂ. 7-2ನೇ ನಾರಾಯಣನ್ ವೀದಿ,
ಮಿಂಟು ಪೋಸ್ಟು, ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಮಿಶ್ರದ ಬರೇ 48 ದಿವಸಗಳ ಸೇವನೆಯಿಂದ ಶ್ವಾಸಕಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ಮೇಹ, ಸಿಹಿಮೂತ್ರ, ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಹರು.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಿಗಳೂ ಕಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರಿಯಿರಿ.

ವಿಳಾಸ:—ಪರಿಮಳಾಂಜನ ಡಿಪ್ಪೋ,
ಕದ್ರಿ, ಮಂಗಳೂರು.
ಕೇಂದ್ರಸಾದಿ ಪೋಸ್ಟು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು. S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳಂಜ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್ ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವು. ... ಮಕ್ಕಳು ಆಡಲಿಕ್ಕೆ ಯೋಗ್ಯವಾದಂಥಾ ... ಸಾಮಾನುಗಳು ಇರುವ ಪೆಟ್ಟಿಗೆ ಒಂದಕ್ಕೆ ೧—೮—೦. ಮಧ್ಯಮ ತರದ ಪೆಟ್ಟಿಗೆ ಒಂದಕ್ಕೆ ೨-೦-೦. ದೊಡ್ಡ ಪೆಟ್ಟಿಗೆ ಉತ್ತಮತರಹ ಒಂದಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿಗೆ ೪ ತೊಲೆ, ದ್ವಿತೀಯಂ ರೂಪಾಯಿಗೆ ೮ ತೊಲೆ, ತೃತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚತುರ್ಥಂ ರೂಪಾಯಿಗೆ ೧೫ ತೊಲೆ.

ಇದಲ್ಲದೆ ಬೇರೆ ದೇಶಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾಗುವದು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Chowkhambay,
BENARES CITY.

ಒಂದು ಮಾತು!

ಸರಕಾರದವರು ಮತ್ತು ಲೋಕಲ್ ಬೋರ್ಡು ಗಳು ಆಸ್ಪತ್ರೆಗಳನ್ನು ಪ್ರತಿ ತಾಲೂಕು ಪಟ್ಟಣಗಳಲ್ಲಿಯೂ ಸ್ಥಾಪಿಸಿರುತ್ತಾರೆ. ಬಹಳ ಜನರು ಇವುಗಳಿಂದ ಪ್ರಯೋಜನವನ್ನು ಪಡಿಯುತ್ತಿರುವರು. ರೋಗಕ್ಕೆ ತಕ್ಕ ಶೋಧನೆ; ಶೋಧನೆಗಳಿಗೆ ಬೇಕಾಗಿರುವ ಔಷಧಸಂಗ್ರಹ ಇವೆರಡರಿಂದಲೇ ಈ ಆಸ್ಪತ್ರೆಗಳು ಮೆರೆಯುವಂಥಾದ್ದು. ಇಷ್ಟು ಹೇಳಿದ ಮೇಲೆ ಆಸ್ಪತ್ರೆಗಳ

ಇಂಥಾ ಔಷಧ ಸಂಗ್ರಹಗಳು

ಏನೆಂದು ವಿವರಿಸಬೇಕೆಂತಿಲ್ಲ. ಆದರೆ ಆಸ್ಪತ್ರೆಗಳ ಅನುಕೂಲವು ಸದಾ ಸರ್ವದಾ ಒಂದೇ ರೀತಿ ದೊರೆಯುವದು ಸರ್ವರಿಗೂ ಸಾಧ್ಯವಲ್ಲದ್ದರಿಂದ,

ಅಂಥಾ ಔಷಧಿಗಳ ಸಂಗ್ರಹೆ
ವನ್ನು ಮಾಡಿಕೊಂಡು
ಕಳೆದ ಇಪ್ಪತ್ತು ವರುಷಗಳಿಂದ

ಪ್ರಖ್ಯಾತ ಡಾಕ್ಟ್ರರುಗಳ ಸಹಕಾರದಿಂದ ಔಷಧಿಗಳನ್ನು ಕೊಡುತ್ತಿದ್ದೇವೆ.

ದರಗಳು ಈ ಔಷಧಗಳ ಕ್ರಯದ ಮಾಹಿತಿಯಿಲ್ಲದ ಗ್ರಾಮಸ್ಥರಿಗೂ ಇತರರಿಗೂ ಒಂದೇ ರೀತಿ ಸುಲಭವಾಗಿರುವವು. ಹಲವು ಡಾಕ್ಟ್ರರುಗಳಿಗೆ ಔಷಧಗಳನ್ನು ಸಂಗ್ರಹಿಸುತ್ತಿದ್ದೇವೆ.

ನಮ್ಮ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಔಷಧಿ ವ್ಯಾಪಾರಸ್ಥರು,
ರಥಬೀದಿ, ಮಂಗಳೂರು.

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡವೆಯು ಒಳ್ಳೆಯದೊ ಕೆಡುಕೊ ಎಂಬದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೇಲಿನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ.

ಅತ್ಯುತ್ತಮವಾದ ಗೊಬ್ಬರಗಳು.

1. ನೈಟ್ರೇಟ್ ಒಫ್ ಸೋಡಾ Nitrate of Soda.
2. ಸುಪರ್ ಫೊಸ್‌ಫೇಟ್ಸ್ Super Phosphates.
3. ಬೆಸಿಕ್ ಸ್ಲೆಗ್ Basic Slag.

ಇವುಗಳು ತೊಪ್ಪೆ ಸಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಖಂಡುಗ ಹಟ್ಟಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುಪ್ಪೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಸಿಹಾಕುವುದಕ್ಕಿಂತ ಒಂದು ಹಿಡಿ ಸೌಳುಪ್ಪನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲ ಮಾಹಿತಿಯನ್ನು ಕೊಡುವ-ಸೂಚನಾಪತ್ರಗಳು ಬೇಕಾದ್ದಲ್ಲಿ ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. ಕೆಳಗೆ ಕಾಣಿಸಿದ ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ, ಸಾಕಷ್ಟು ರಖಮಾಗಿ ಪಡಕೊಳ್ಳಬಹುದು.

ಹೆಚ್ಚಿನ ಅನುಭವವನ್ನು ಖಂಡಿತ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ತೇರಬೀದಿ, ಮಂಗಳೂರು.

Printed & Published by V. S. Kamath at the Mangalore Trading Association's Sharada Press, Mangalore.

Registered No. M. [illegible]

ಮುಂಗಡ ವರ್ಷ 1ಕ್ಕೆ ರೂ. 1-8-0

ಅಂಚೆ ವೆಚ್ಚ ಸೇರಿ ವರ್ಷ 1ಕ್ಕೆ ರೂ. 2-5-0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಉತ್ನವು ನಡೆಯುತ್ತಲೇ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೩ನೇ ಎಪ್ರಿಲ್ ಶುಕ್ರವಾರ ೧೯೧೭. | ಸಂಚಿಕೆ ೧೫.

ಕೋರಾ ಮತ್ತು ಸೀತ ಸಿಡುಬು ಯಾ ಕೊಟ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವೆಂತ ತೋರಿಬರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದೆನೇ ಆಗುವಂಥಾದ್ದು ಬಹುಶಕ್ತ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವು ಅಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಬಾಧೆಯು ನಿಂತಾಕ್ಷಣವೇ ತಲೆದೋರವು. ಕೋರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೊಟಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕೋರಾ ನಂತರ ಬಂದುಬಿಟ್ಟದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥಾದ್ದೆ. ಆದ್ದರಿಂದ ಈ ರೋಗಗಳು ತಗಲಿದಾಗ ಹೆಚ್ಚಿನ ಜಾಗ್ರತೆಯ ಉಪಶಮನವು ಅಗತ್ಯವಾಗಿರುವದು.

ಹೋಮಿಯೊಪಥಿಕ್ ಮತ್ತು ಟಿಸ್ಯು ಔಷಧಿಗಳು.

ಇವುಗಳ ಮೂಲಕ ಈ ಉಪಶಮನವು ಬಹಳ ಸುಲಭದಲ್ಲಿ ಮಾಡಲು ಸಾಧ್ಯವಾಗುವದು. ಈ ಎರಡು ರೋಗಗಳು ಪ್ರಾಪ್ತವಾದ ಕಾಲದಲ್ಲಿ ಈ ಔಷಧಿಗಳಲ್ಲಿ ಯಾವ್ಯಾವದನ್ನು ಹೇಗೇಗ ತಕ್ಕೊಳ್ಳುವುದು ಇದರ ಅನುಪಾನವೇನೆಂಬುದನ್ನು ಸೂಚಿಸುವ ಅನುಪಾನ ಪತ್ರಗಳೂ ಈ ಔಷಧಗಳೂ ನಮ್ಮಲ್ಲಿ ದೊರಿಯುತ್ತವೆ.

ಕೊಟಲೆಯ ಕಲೆಗಳು ಬೇಗನೆ ವಾಸಿಯಾಗುವಂಥಾ ಮುಲಾಮು ತಯ್ಯಾರಿರುವದು.

ಕ್ರಯ ಕರಡಿಗೆ 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು ಇತರರಿಂದ ಏಕ ಪಡೆಯಬೇಕು?

ಬಾಟ್ಲ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು? ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್‌ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ

ಗಜಕರ್ಣಾದ ಮುಲಾಮು.

ಡಬ್ಬಿ 1ಕ್ಕೆ ಆಣೆ. 6.

ಮಕ್ಕಳ ಎಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್,
ಶಾರದಾ ಛಾಪಖಾನೆ. ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿ

ಕಳದ 10 ವರುಷಗಳಿಂದ ಪ್ರಕಟಿಸಲ್ಪಡುವ ಕನ್ನಡ ವಾರಪತ್ರಿಕೆಯು.

ದಕ್ಷಿಣ ಕನ್ನಡದಲ್ಲಿ ಇದೊಂದರ ಹೊರತು ಬೇರೆ ವಾರಪತ್ರಿಕೆಗಳಿರವು.

ವಾರ್ಷಿಕ ಚಂದಾ ರೂ. ೧—೮—೦.

ಅಂಚೆ ವೆಚ್ಚ ಸೇರಿ ರೂ. ೨—೫—೦.

ವ್ಯಾಪಾರಗಳ ಜಾಹೀರಾತು ಮೊದಲಾದವುಗಳನ್ನು ಪ್ರಕಟಿಸಲು ಅನುಕೂಲವಾದ ಪ್ರಕಟಣಾಭಾಗವು ಪತ್ರದೊಂದಿಗೆ ಸೇರಿರುವದು. ಪ್ರಕಟಣಾವ ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ಸ್ವದೇಶಾಭಿಮಾನಿ ಆಫೀಸು,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಳ್ಳೆ ಗೊಬ್ಬರ! ಅವ್ವಲ್ ಊಟ!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನುಗೊಬ್ಬರದಂತೆ ನಾತ ಒಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

WANTED

A good proof reader

Salary according to qualifications—

Apply to— **THE MANAGER,**
Sharada Press, Mangalore.



ಪ್ರಖ್ಯಾತಪಟ್ಟ ಪ್ರೊಟೇ ಗಾಸ್‌ದೀಪಗಳು:—

ಗಾಸ್ ದೀಪಗಳಲ್ಲಿ ಅತಿ ಗಟ್ಟಿಯಾದವುಗಳು ಮತ್ತು ಉತ್ಕೃಷ್ಟವಾದವುಗಳು. ಹಿಲ್ ಫೊಟೋಮೆಂಟರ್ ಯಾ ಬತ್ತಿಗಳು, ಬಹಳ ಅಗ್ಗ, ಕೆಟ್‌ಲೋಗ್ ಅಥವಾ ಸಾಮಾನು ಪಟ್ಟಿಯನ್ನು ಉಚಿತವಾಗಿ ಕಳುಹಿಸಿ ಕೊಡುವೆವು.

ಸೋಲ್ ಏಜಂಟರು:— ಸನ್ ಕಂಪೆನಿ,
ತಂಜಾವೂರು.

ಮಾರಾಟಕ್ಕೆ ಸಿದ್ಧವಾಗಿದೆ! ಬೇಗನೆ ಬರಕೊಳ್ಳಿರಿ!!

ತುಳು ಭಾಷೆಯಿಂದ ರಚಿಸಲ್ಪಟ್ಟ

ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.

1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ. ದ. ಕನ್ನಡ.

ಪ್ರಶ್ನೋತ್ತರ ಲೇಖ್ಯಬೋಧಿನಿ.

(6ನೆಯ ಛಾಪೆ.)

ಅರ್ಜಿ, ಪತ್ರ, ರೋದಿ, ದಾವೆ, ಭಾಗಪತ್ರ, ಉಯಿಲು ಮುಂತಾದ ಮಾದರಿಗಳೂ, ಎಲ್ಲ ಬಗೆಯ ಕಾನೂನುಗಳೂ ಇವೆ. ಕ್ರಯ ರೂ. 1-8-0.

"ಶಕ್ತಿ"

"ಭಾರತಿ" ಎಂಬ ವಂಗಭಾಷೆಯ ಸುಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕಿ ಶ್ರೀಮತಿ ಸ್ವರ್ಣಕುಮಾರಿ ದೇವಿಯಿಂದ ವಂಗಭಾಷೆಯಲ್ಲಿ "ಫಲೇತ್ ಮಾಲಾ" (Fatel Garland) ರಚಿಸಲ್ಪಟ್ಟಿತು.

ಇದರಲ್ಲಿ ಮಹಮದೀಯ ಸಾಂಮ್ರಾಜ್ಯ ಸಿಂಹಾಸನವನ್ನು ಹಿಂದೂ ಸಾಮಂತ ರಾಜನೇರುವಿಕೆಯೂ, ರಾಜಪುತ್ರ ಯುವಕನೊಬ್ಬನು ಮಹಮದೀಯಾಂಗನೆಯ ಕೈ ಹಿಡಿದು ಚಕ್ರವರ್ತಿಯಾದುದೂ, ಅತ್ಯದ್ಭುತ ಪರ್ಣನೀಯವು. ಕಥಾ ನಾಯಕಿಯಾದ "ಶಕ್ತಿ"ಯ ಧೈರ್ಯಸ್ಥೈರ್ಯ ಸಾಹಸಗಳು ಎಂಥವರ ಮನವನ್ನಾದರೂ ಆಕರ್ಷಿಸದಿರದು. ಒಟ್ಟಿನಲ್ಲಿ ಅನುರಾಗ ವಿಹೀನವಾದ ದಾಂಪತ್ಯದ ಪರಿಣಾಮಫಲವು ಚಿತ್ರಿತವಾಗಿ, ನೈಜಾನುರಾಗ ಸಹಿತ ದಾಂಪತ್ಯದ ಮಹಾಮಹಿಮೆಯನ್ನು ಸೂಚಿಸುತ್ತಿದೆ. ಆಬಾಲವೃದ್ಧ [illegible]

ಕ್ರಯ ಹನ್ನೆರಡಾಣೆ ಮಾತ್ರ.

ಶ್ರೀಮದಧ್ಯಾತ್ಮ ರಾಮಾಯಣ.

ಆದಿಕಾವ್ಯವು, ೬ ಕಾಂಡಗಳಲ್ಲಿರುವ ಪ್ರತಿ ಒಂದು ಶ್ಲೋಕಕ್ಕೂ ಪ್ರತಿಪದ ಟೀಕು ತಾತ್ಪರ್ಯ ಸಹಿತ ಚಿಕ್ಕ ಬಾಲಕರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ ಮತ್ತು ಇದು ಉತ್ತಮವಾದ ಕಾಗದಗಳುಳ್ಳದ್ದಾಗಿಯೂ ಮಡಿಯಾಗಿರುವ ಸಮಯದಲ್ಲಿ ಪಾರಾಯಣಕ್ಕೆ ಅನುಕೂಲವಾಗುವಂತೆ ಉತ್ತಮವಾದ ಶಿಲ್ಕ್ ಕಾರು ಬೈಂಡ್ ಮಾಡಲ್ಪಟ್ಟಿದೆ. ಪುರಾತನ ಪ್ರತಿಯಾದ ಕಾರಣ ತಪ್ಪುಗಳಿರಲಾರವು. ಶ್ರೀ ರಾಮಭಕ್ತ ರಾದವರೆಲ್ಲರೂ ಈ ಪುಸ್ತಕದ ಪ್ರತಿಯೊಂದನ್ನು ಸಂಗ್ರಹಿಸತಕ್ಕದ್ದು. ಕೆಲವು ಪ್ರತಿಗಳೇ ಇರುವದರಿಂದ ಜಾಗ್ರತೆಯಾಗಿ ಪುಸ್ತಕಗಳನ್ನು ತರಿಸಿಕೊಳ್ಳಿರಿ.

ಕ್ರಯ ರೂ. ೮—೮—೦.

ವಿಳಾಸ:—ಹೆಚ್. ಎಸ್. ರಾವ್ ಬ್ರದರ್ಸ್,
[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾಪ್ಯಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬೆಳ್ಳಿಗಳನ್ನು ಅನೇಕಾನೇಕ ಸರ್ಟಿಫಿಕೇಟುಗಳನ್ನು ಪಡದದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹಹರವು ಬಿಂದು. ಉರಿಯನ್ನು ಕೀವನ್ನು ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟಲಿಗೆ ೨-೮-೦.

೩. ಪಂಚಶೀರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ [illegible] ಖಂಡಿತವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ [illegible] ಅತ್ಯುತ್ತಮವು. ಸೌಮ್ಯವಾಗಿದೆ. ರಾತಲಿಗೆ ೨ ರೂ.

೫. ಪೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ [illegible] ಗಡ್ಡೆಯನ್ನು ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ [illegible] ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ [illegible] ಅನೇಕ [illegible]ಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಪ್ರಬಲಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ್ಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಉಬ್ಬಸ, [illegible] ಕಫ, ಕ್ಷಯಗಳ [illegible] ನಾಶಕವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಸ್ಖಲನ, ಮೂತ್ರಪಿಂಡ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿಶ್ಶಕ್ತಿ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತವಿಧ್ವಂಸಿನಿ ಬಾವ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೨ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ಕುರಿಗಜ್ಜಿ [illegible] ಚರ್ಮವ್ಯಾಧಿಗಳನ್ನು ಒಂದೆರಡು ಲೇಪದೊಳಗಾಗಿ ಗೆಲ್ಲುವದು. [illegible] ಸುವಾಸಿಕವಾಗಿದೆ. [illegible] ೪ ಆಣೆ.

೧೩. ಸಪ್ಲೀರಾಂಜನ (ಸುರುಮಾ). ಎಲ್ಲ ನೇತ್ರ ರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದ ವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ಸೂಚನೆ:— ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿ ಕೇಳಲಾಗಿ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡದಿ ಅಥವಾ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಜಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists.*
Vepery Post, MADARS.

ಹಲ್ಲುನೋವುಗಳಿಗೆ
ಖಾತ್ರಿಯಾದ ಔಷಧಿ.

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಕೋವೂಗಳಲ್ಲಿ ದೊರಕುವದು.	STANY BROTHERS Sole Agents M. C. C's, Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತುಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!
ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ಸಮೃದ್ಧಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತದೆ.

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ,
೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆವೆಚ್ಚ ಸೇರಿ ವರ್ಷಕ್ಕೆ ೩ ರೂ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—

ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರದ ಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4—0—0.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
8. ಇರುಳಪ್ಪನ ಬೀದಿ, ಮದರಾಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಭೀ ಹೇರ್ ಆಯಿಲ್ ಶೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0-12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಶೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0— 6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0— 8—0
ಅದ್ಭುತ ಪ್ರಣಯ ,,	0—10—0
ಇಂದಿರಾ ಕೃ. ಮು.	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಲ್	0— 4—0
[illegible]	0—12—0
ಅಂಬಾಲಿಕೆ (ಹೊಸ ನಾವಲ್)	0— 1—6
ಕುಸುಮ ,,	0— 1—0
ರಾಧಾನಾಥ ,,	0— 2—0
ಸುಭದ್ರೆ ,,	0— 5—0
ಚಂದ್ರಹಾಸ (ಹೊಸ ಕಥೆ)	0— 1—0
ಧ್ರುವ ,,	0— 2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1— 0—0
,, ಸಂಗೀತ ಸಮುಚ್ಚಯಸಾರ	1— 4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1— 4—0
ವಿಕ್ರಮ ,,	1— 2—0
ಚಂದ್ರವದನಾ ,,	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"×28"ಕ್ಕೆ	0— 1—0

ಯೂರೋಪದ ಮಹಾ ಯುದ್ಧ.

ಕಳೆದ ವಾರದ ಯುದ್ಧಸಮಾಚಾರವು ಬಹಳ ಮಹತ್ವದ್ದಾಗಿಯದೆ. ಬರ್ಲಿನದಲ್ಲಿ ಹುಟ್ಟಿಯುಳ್ಳ [illegible] ಒಳ್ಳೆಯದರೊಳಗೆ ಹೊರ ಬಿದ್ದು ಹೋದ ಯುದ್ಧ ಜ್ವಾಲೆಗಳ ಕಿಡಿಗಳು ಭೂಲೋಕದ ಹಲವು ಕಡೆಗಳಲ್ಲಿ ಬಂದು ಬೀಳುತ್ತಿವೆ. ಯಾದರೂ ಶಾಂತ ಸಾಗರದ ಆಚೆಯಾಗಿನ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಇವುಗಳು ಈ ತನಕ ಶಾಂತವಾಗಿ ನೊಂದುಹೋಗುತ್ತಿದ್ದವು. ಆದರೆ ಭೀಕರವಾದ ಈ ಯುದ್ಧ ಯಾತನೆಗೆ ಕಾರಣಭೂತರಾದ ಜರ್ಮನರ ಬಾಹುಗಳ ತೀಟೆಯು ಅದರ ಶರವಣವನ್ನು ಹೊಂದಿಕೊಂಡು ಸಂಪೂರ್ಣ ನಾಶವಾಗಿ ಹೋದರೇನೇ ಜಗತ್ತಿನಲ್ಲಿ ಶಾಂತತೆಯು ಭದ್ರವಾಗಬಹುದಾದ್ದರಿಂದ ಯುದ್ಧಕ್ಕೆ ಸೇರದೆ ಬಾಕಿಯುದ್ದ ಭೂಲೋಕದ ಇನ್ನೊಂದು ದೊಡ್ಡ ರಾಷ್ಟ್ರವು ಯುದ್ಧಕ್ಕೆ ಸೇರಿತು. ಮಿತ್ರರ ಪಕ್ಷವು ಬಲಹೊಂದಿತು. ಇನ್ನು ಜರ್ಮನಿಗೆ ಪೂರ್ಣ ಆವೇಶವನ್ನು ಹೊರಪಡಿಸಬೇಕಾಗಿ ಬಂದಿದೆ. ಯುದ್ಧವನ್ನು ಮಾಡಬೇಕೆಂಬ ನಿರ್ಣಯವು ಅಮೇರಿಕದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮಂಜೂರಾಗಿ ಈ ನಿರ್ಣಯಕ್ಕೆ ಪ್ರೆಸಿಡೆಂಟ ವಿಲ್ಸನರವರ ಸಹಿಯು ಬಿದ್ದದೆ. ಈಗ ಮಿತ್ರರಿಗೆ ಬೇಕಾದ ದ್ರವ್ಯಸಹಾಯವನ್ನು ಬ್ರಿಟಿಷರೇ ಮಾಡಬೇಕಾಗಿತ್ತು. ಇನ್ನು ಇಂಥಾ ದ್ರವ್ಯಸಹಾಯವು ಅಮಿತವಾದ ಸಂಪತ್ತುಳ್ಳ ಅಮೇರಿಕದಿಂದಲೂ ಕೊಡೋಣಾಗುವದು. ಸುಮಾರು ೬೦೦,೦೦೦ ಟನ್ನುಗಳ ಭರಾವಣೆಯ ಅಮೇರಿಕದಲ್ಲಿದ್ದ ಜರ್ಮನರ ಹಡಗಗಳನ್ನು ಅಮೇರಿಕದವರು ಹಿಡಿದಿರುತ್ತಾರೆ. ಅಮೇರಿಕದ ಎಲ್ಲಾ ಕಡೆಗಳಲ್ಲಿಯೂ ಯುದ್ಧ ಸನ್ನಾಹಗಳು ನಡೆಯುತ್ತಲಿವೆ. ಅಮೇರಿಕದ ಯುದ್ಧ ಸನ್ನಾಹಗಳ ಅಂದಾಜು ಪಟ್ಟಿಯು ಪ್ರಕಟವಾಗಿರುವದು. ೬೪೦ ಮಿಲಿಯ ಪವನುಗಳು ತತ್ಕಾಲದ ಖರ್ಚಿಗೂ ಇದಕ್ಕಿಂತ ದೊಡ್ಡ ಮೊಬಲಗುಗಳ ದ್ರವ್ಯಸಹಾಯವು ಮಿತ್ರರಿಗೂ ಕೊಡೋಣಾಗುವದು. ೫೦೦ ಮಿಲಿಯ ಪವನುಗಳ ವೆಚ್ಚದಿಂದ ಒಂದು ವರುಷದ ಕಾಲದೊಳಗೆ ಒಂದು ಮಿಲಿಯ ಸೇನಿಕರ ಫೌಜು ತಯ್ಯಾರಿಸಲ್ಪಡುವದು. ನೌಕಾಸೈನ್ಯದ ಬಗ್ಗೆ ೩೪ ಮಿಲಿಯ ಮತ್ತು ೩೫ ಮಿಲಿಯ ಮದ್ದುಗುಂಡುಗಳ ಬಗ್ಗೆ ಎಂತ ವಿಂಗಡಿಸಲ್ಪಟ್ಟಿದೆ. ಅಮೇರಿಕದ ಆದಾಯ ತೆರಿಗೆಯ ದರವು ತ್ರಿಗುಣಿತವಾಗುವದು. ೩೨ ಸಾವಿರ ಕಾರ್ಖಾನೆಗಳು ಯುದ್ಧಸಾಮಗ್ರಿಗಳನ್ನು ತಯ್ಯಾರಿಸಲು ಸಿದ್ಧವಾಗಿರುವವು. ಯುದ್ಧಕಾಲದಲ್ಲಿ ಜನಾಂಗಗಳು ಆಚರಿಸಬೇಕಾದ ಧರ್ಮಶಾಸ್ತ್ರವನ್ನು ಮೂಲೆಗೆ ಒತ್ತಿ, ಮಾನವ ಕುಲವನ್ನೇ ಸಂಹರಿಸಿಬಿಡುವ ಸಾಧನವನ್ನು ಕೈಕೊಂಡಿರುವ ಜರ್ಮನಿಯ ಕಾಟವನ್ನೂ ಅಕೃತ್ಯಗಳನ್ನೂ ಸಹಿಸಲಾರದೆ ದುಷ್ಟ ಕೈಸರರ ನಿಗ್ರಹಾರ್ಥವಾಗಿ ಅಮೇರಿಕವು ಯುದ್ಧಕ್ಕೆ ಕೂಡಬೇಕಾಯಿತು. ಜಯ ಪ್ರಾಪ್ತಿಯ ಸಂಭವಗಳು ಈ ಮೊದಲು ಮಿತ್ರರಿಗೇನೇ ಹೆಚ್ಚಾಗಿದ್ದವು ಎಂದ ಮೇಲೆ ಈಗ ಅಮೇರಿಕವು ಮಿತ್ರರನ್ನು ಸೇರಿದ ಬಳಿಕ ಜಯಲಾಭದಲ್ಲಿ ಮಿತ್ರರಿಗೆ ಇನ್ನೇನು ಸಂಶಯವಿರುವದು?

ಬ್ರಿಟಿಷರು ಜನರಲ್ ಹೇಗ್ ಎಂಬ ಸೇನಾಪತಿ ಕೈಕೆಳಗೆ ಪಶ್ಚಿಮ ರಣರಂಗದಲ್ಲಿ ಸುಮಾರು ೨ ಯಾ ೩ ಮೈಲುಗಳ ವಿಸ್ತೀರ್ಣಕ್ಕೆ ಮುಂದರಿದಿರುತ್ತಾರೆ. ಕೆನಡಾ ದೇಶದ ಸೇನಾಂಗದವರು ವಿಮಿರಿಜ್ ಎಂಬ ಶತ್ರುಗಳಿಂದ ಬಹಳವಾಗಿ ಭದ್ರಗೊಳಿಸಲ್ಪಟ್ಟಂಥಾ ಸೇನಾನೆಲೆಯನ್ನು ಸ್ವಾಧೀನಪಡಿಸಿಕೊಂಡಿರುವರು. ಇಲ್ಲಿ ಬ್ರಿಟಿಷರಿಗೆ ಸಿಕ್ಕಿದ ಜಯವು ಬಹಳ ವಿಶೇಷವಾಗಿರುವದು. ಅನೇಕ ಕಂದಕಗಳು ಶತ್ರುಗಳು ಫಿರಂಗಿ ಇತ್ಯಾದಿಗಳಿಂದ ಭದ್ರಗೊಳಿಸಿದ ಸ್ಥಾನಗಳು ಬ್ರಿಟಿಷರ ಕೈವಶವಾಗಿವೆ. ಆ ದಿನದ ಮಧ್ಯಾನದ ವರೆಗೆ ಸುಮಾರು ೫೦೦೦ ಜನ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಜನರಲ್ ಹೇಗ್‌ರ ಕೈಕೆಳಗೆ ಕೆನಡಾ ದೇಶದ ಸೇನಿಕರು ಪಡೆದ ಈ ಜಯದ ವೃತ್ತಾಂತವನ್ನು ಕೇಳಿ ಜೋರ್ಜ ಚಕ್ರವರ್ತಿಯವರು ತಮ್ಮ ಸಂತೋಷವನ್ನು ಜನರಲ್ ಹೇಗರವರಿಗೆ ಸೂಚಿಸಿರುವರು. ವಿಮಿರಿಜ್ಜದಲ್ಲಿ ಇದು ಬೆಳಿಗ್ಗಿನಿಂದ ಮಧ್ಯಾನದ ವರೆಗೆ ನಡೆದ ವೃತ್ತಾಂತವಾಗಿದೆ. ನಂತರ ವೃತ್ತಾಂತದಲ್ಲಿಯೂ ಸಹ ಬ್ರಿಟಿಷರು ಪಡೆದ ಜಯದ ಇನ್ನೂ ಅಧಿಕವಾದ ಪ್ರಸ್ತಾಪಗಳಿವೆ. ಬ್ರಿಟಿಷರು ತಮ್ಮ ಸೇನೆಯ ಮುಂಭಾಗವನ್ನು ಈ ಪ್ರಾಂತ್ಯದಲ್ಲಿ ಬೊವರ್‌ವಾಲ್ ಎಂಬುದರ ಉತ್ತರಕ್ಕೆ ಮುಂದರಿಸಿರುವರು. ಶತ್ರುಗಳ ಸೆರೆಬಿದ್ದ ಸೇನಿಕರ ಸಂಖ್ಯೆಯು ೧೧೦೦೦ಕ್ಕೆ ಮಿಕ್ಕಿರುವದು. ಹಲವು ದೊಡ್ಡ ಫಿರಂಗಿಗಳು ಇನ್ನು ಕೆಲವು ಯಂತ್ರಗಳ ಮೇಲಣ ತೋಪಿಗಳು ಕಂದಕಗಳನ್ನು ಸಿದ್ಧಪಡಿಸುವ ಯಂತ್ರಗಳೇ ಮೊದಲಾದ ಹಲವು ಸಾಮಾಗ್ರಿಗಳು ಶತ್ರುಗಳಿಂದ ಬ್ರಿಟಿಷರು ಹಿಡಿದಿರುತ್ತಾರೆ. ಫ್ರೆಂಚರು ನಡೆಸಿದ ಕಾಳಗಗಳ ವೃತ್ತಾಂತವೂ ಸಹ ಅತ್ಯಪ್ತಿಕರವಾಗಿರುವದಿಲ್ಲ. ಒಯಿಸೆಯ ಉತ್ತರದಲ್ಲಿ ಶತ್ರುಗಳೊಡನೆ ತೋಪಿಗಳ ಕಾಳಗವು ನಡೆದಿತ್ತು. ಒಯಿಸೆಯ ದಕ್ಷಿಣ ದಿಕ್ಕಿನಲ್ಲಿ ಶತ್ರುಗಳ ಸೇನಾವ್ಯವಸ್ಥೆ ಎಲ್ಲವನ್ನು ಫ್ರೆಂಚರು ಕೆಡಿಸಿಬಿಟ್ಟಿರುವರು. ಫ್ರೆಂಚರ ನುವಲ್ಲಿ ಸರ್ ಮಾರ್ಗಿವಲ್ ಎಂಬ ರಣರಂಗದಲ್ಲಿ ಶತ್ರುಗಳು ಬಹಳ ಕಠಿಣವಾದ ಕಾಳಗಗಳನ್ನು ನಡಿಸಿರುತ್ತಾರೆ.

ಪೂರ್ವರಣರಂಗ.

ರುಷ್ಯದಲ್ಲಿ ಹೊಸ ಸರಕಾರದವರು ಸೇನೆಗಳನ್ನು ಬಲಪಡಿಸಿಕೊಂಡು ನವಚೇತನದಿಂದ ಕಾದಾಡುತ್ತಿದ್ದಾರೆ. ಪಾಲ್ಯಾವಸ್ ಪೂರ್ವಕ್ಕೆ ಮತ್ತು ರೀಗಾದ ದಕ್ಷಿಣಕ್ಕೆ ಇರುವ ರುಷ್ಯನರ ಕಂದಕಗಳನ್ನು ಶತ್ರುಗಳು ಕೈವಶಮಾಡಿಕೊಂಡಿರುವರು. ಆದರೆ ಪುನಹ ರುಷ್ಯಯನರು ಕಠಿಣವಾಗಿ ಕಾದಾಡಿಕೊಂಡು ಇದರ ಸ್ವಾಧೀನತೆಯನ್ನು ಶತ್ರುಗಳ ಕೈಯಿಂದ ತಪ್ಪಿಸಿಕೊಂಡಿರುವರು. ಕುಟ ಎಂಬಲ್ಲಿಯ ಶತ್ರುಗಳ ಠಾಣ್ಯದ ಮೇಲೆ ರುಷ್ಯನರ ಹತ್ತು ಆಕಾಶವಿಮಾನಗಳನ್ನು ಕಳ್ಕೊಂಡು ಹೋಗಿ ಬೊಂಬುಗಳನ್ನು ಎಸೆದು ಬಹಳ ಹಾನಿಯನ್ನುಂಟುಮಾಡಿರುತ್ತಾರೆ. ಬೊಸ್ಪೊರಸ್ಸದಲ್ಲಿಯ ಕೋಟೆಗಳನ್ನು ರುಷ್ಯಯನರು ತಮ್ಮ ಜಲವಿಮಾನಗಳ ಮೂಲಕ ಬಹಳವಾಗಿ ಬಲಕಾಯಿಸಿದರು. ಸ್ಟೋಕ್‌ಹೋದಿನ ದಕ್ಷಿಣ ಭಾಗದಲ್ಲಿ ನಡೆದ ಕದನಗಳಲ್ಲಿ ರುಷ್ಯನರು ಉತ್ತರ ದಡವನ್ನು ಸೇರಲು ಶಕ್ತರಾದರೂ ಸಂಕವನ್ನು ಸುರಕ್ಷಿತಪಡಿಸುವದಕ್ಕಾಗಿ ಕಾಳಗ ಕೊಟ್ಟ ಸೇನಿಕರಲ್ಲಿ ಹಲವರು [illegible]

ಮೆಸೊಪೊಟಾಮಿಯಾ ಪ್ರಾಂತ್ಯಗಳಲ್ಲಿ ರುಷ್ಯಯನರು ಮುಂದರಿಸಿಕೊಂಡು ಕಿಜಿಲ್ರಾಬಾತ್ ಎಂಬಲ್ಲಿ ಬ್ರಿಟಿಷ ಸೇನಿಕರನ್ನು ಕೂಡಿರುವರೆಂತ ಪೆಟ್ರೊಗ್ರೆಡ್‌ದಲ್ಲಿ ಪ್ರಕಟವಾದ ವೃತ್ತಾಂತದಿಂದ ತಿಳಿದುಬರುತ್ತದೆ. ಇತರ ರಣರಂಗಗಳಲ್ಲಿ ವಿಶೇಷವಾದ ವಾರ್ತೆಗೇರವು.

ವಿದೇಶ ವೃತ್ತಾಂತ.

ಹಿಂದೂಸ್ಥಾನದ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ವಿದೇಶಗಳಿಂದ ಹಿಂದೂಸ್ಥಾನಕ್ಕೆ ಬರುವ ವಸ್ತ್ರ ಇತ್ಯಾದಿ ಹತ್ತಿಯ ಬಡವಗಳ ಮೇಲೆ ಸೇಕಡಾ ೭½ ದರದ ಕರವನ್ನು ಹಾಕುವಂಥಾ ಸಂಗತಿ ಹೊರಬಿದ್ದಂದಿನಿಂದ ಹತ್ತಿಯ ವ್ಯಾಪಾರವನ್ನು ಹಿಂದೂಸ್ಥಾನದಲ್ಲಿ ಹೇರಳವಾಗಿ ನಡಿಸುತ್ತಿದ್ದ ಅಂಗ್ಲಾಂಡದ ಲಂಕಶಾಯರಿನ ಹತ್ತಿಯ ಕಾರ್ಖಾನೆಯವರು ವಿಶೇಷ ಕೋಲಾಹಲವನ್ನು ಎಬ್ಬಿಸುತ್ತಿದ್ದಾರೆ. ಹೀಗೆ ಕರವನ್ನು ವಿಧಿಸಿದ್ದರಿಂದ ತಮ್ಮ ವ್ಯಾಪಾರ ಕೆಡುವದು, ಕಾರ್ಖಾನೆಗಳನ್ನು ನಡಿಸುವದು ಕಷ್ಟವಾಗುವದು. [illegible]

[illegible]

ಹಡಗಗಳಿಂದ ಮೊದಲು ನಿಶ್ಚಯಿಸಿರುವಾಗ ಅಂಥಾ ಸಹಾಯವು ಅರ್ಧದಿಂದ ಮಾತ್ರ ಆಗುವಂತೆ ನಿರ್ಣಯಿಸಿದ ಈ ಕರದ ವಿಷಯ ಆಕ್ಷೇಪಗಳು ಬ್ರಿಟಿಷ್ ಪಾರ್ಲಿಮೆಂಟ ಸಭೆಯಲ್ಲಿ ಕೇಳಿ ಬರುವಂಥಾದ್ದು ಉಚಿತವಲ್ಲ ಎಂತ ಸ್ಟೇಟ್ ಸೆಕ್ರೆಟರಿಗಳು ವಿಜ್ಞಾಪಿಸುತ್ತಿರುವರಾದರೂ ಲಂಕಶಾಯರಿನಲ್ಲಿ ಈ ವಿಜ್ಞಾಪನೆಯನ್ನು ಕೇಳುವವರಿಲ್ಲ. ಅಲ್ಲಿಯ ಸರ್ವರೂ ಪಕ್ಷಭೇದಗಳನ್ನು ಹಿಂದೂಸ್ಥಾನದ ಪರವಾಗಿ ಮುಖ್ಯ ವಿಷಯಗಳಲ್ಲಿ ಬಹುಕಾಲದಿಂದಿರುವ ಸಹಾನುಭೂತಿಯನ್ನು ಮೂಲೆಗೊತ್ತಿ ಕರವನ್ನು ವಜಾಮಾಡಿರಿ ಎಂತ ಹಟಹಿಡಿದು ಕೇಳುತ್ತಿರುವರು. ಹಿಂದೂಸ್ಥಾನದ ವಿಷಯಗಳನ್ನು ವಾದಿಸಲಿಕ್ಕೆ ವ ಪ್ರಸ್ತಾಪಿಸಲಿಕ್ಕೆ ಬ್ರಿಟಿಷ್ ಪಾರ್ಲಿಮೆಂಟನ್ನು ಎಷ್ಟು ಸಾರಿ ಕೇಳಿದರೂ ಇಂಥಾ ಸಂದರ್ಭವನ್ನು ಪಾರ್ಲಿಮೆಂಟ್ ಸಭೆಯವರು ಕೊಟ್ಟದ್ದಿಲ್ಲ. ಆದರೆ ಈ ಸಾರಿ ಹಟ ಹಿಡಿದು ಲಂಕಶಾಯರು ಈ ಸಂದರ್ಭವನ್ನು ಪಾರ್ಲಿಮೆಂಟ್ ಸಭೆಯಿಂದ ದೊರಕಿಸಿಕೊಂಡಿರುತ್ತದೆ. ಹೀಗಿದ್ದರೂ ಪಾರ್ಲಿಮೆಂಟ ಸಭೆಯು ಎಲ್ಲಾ ಲಂಕಶಾಯರಿನವರಿಂದಲೇ ತುಂಬಿರದು. ಅಲ್ಲಿಯ ೫೦ ಜನ ಮೆಂಬರರು ಈ ಕರಕ್ಕೆ ವಿರೋಧಿಗಳಾಗಿ ಹೋದರೂ ಪಾರ್ಲಿಮೆಂಟು ಇವರ ಅಭಿಪ್ರಾಯಗಳನ್ನು ಸ್ವೀಕರಿಸುವಂತೆ ಇಲ್ಲ, ಎಂಬದಾಗಿ ಇತ್ತಿತ್ತಲಾಗೆ ಅಂಗ್ಲಾಂಡದಲ್ಲಿ ಪ್ರಕಟಿಸಲ್ಪಟ್ಟ ಲೇಖಗಳಿಂದ ತೋರಿಬರುತ್ತದೆ.

ಬರುವ ಜುಲಾಯಿ ತಿಂಗಳಿನಿಂದ ಮುಂಬಯಿ ಕಾಲುವೆಯ ಫೀಸು ಸೇಕಡಾ ೭೫ರಂತೆ ಹೆಚ್ಚಿಸಲ್ಪಡುವದ.

ಹಿಂದೂಸ್ಥಾನದಿಂದ ಅಂಗ್ಲಾಂಡಕ್ಕೆ ಇಂಪಿರಿಯಲ್ ಕಾನ್ಫರೆನ್ಸಿನ ಪ್ರತಿನಿಧಿಗಳಾಗಿ ಹೋದ ಸರ್. ಎಸ್. ಪಿ. ಸಿಂಹ, ಬಿಕಾನೀರ ಮಹಾರಾಜರವರು, ಮತ್ತು ಸರ್. ಜೆ. ಮೆಸ್ಟನ್‌ರವರನ್ನು ಅಲ್ಲಿಯ ಭಾರತೀಯ ಸಂಘದವರ ಸತ್ಕರಿಸಿದರು. ಡೊಮಿನಿಯನ್ಸ್ ಒಫ್ ಕೆನಡಾ ಮೊದಲಾದ ಸ್ವರಾಜ್ಯಭಾರ ಕ್ರಮದ ಬ್ರಿಟಿಷ್ ರಾಷ್ಟ್ರಗಳ ಮಂತ್ರಿಗಳೂ ಪ್ರಧಾನ ಮಂತ್ರಿಗಳೂ ಹಿಂದೂಸ್ಥಾನದ ಪ್ರತಿನಿಧಿಗಳನ್ನು ವಿಶೇಷ ಮನ್ನಣೆಯಿಂದ ಆದರಿಸಿರುವರೆಂಬದಾಗಿ ಬಿಕಾನೀರು ಮಹಾರಾಜರವರು ವಿದ್ಯಾರ್ಥಿಗಳ ಸಭೆಗೆ ಹೇಳಿರುತ್ತಾರೆ.

ಜರ್ಮನ ಕೈಸರರವರು ಜರ್ಮನ ಸರಕಾರದ ಪ್ರತಿನಿಧಿ ಸಭೆಯ ಚುನಾವಣೆಯ ಕ್ರಮಗಳಲ್ಲಿ ಮಾರ್ಪಾಟುಗಳನ್ನು ಬೇಗನೆ ಮಾಡೋಣಾಗುವವೆಂಬ ವಾಗ್ದಾನವನ್ನು ಅವರ ಪ್ರಜಾವರ್ಗಕ್ಕೆ ಕೊಟ್ಟಿರುವರು.

ಬ್ರಿಟಿಷರ ಆಯುಧಧಾರಿಗಳಾದ ನಾವೆಗಳನ್ನು ಹಚ್ಚ ಬಂದರಗಳಿಗೆ ಬರಗೊಡಲಾರವೆಂಬದಾಗಿ ಹೊಲ್ಲೆಂಡಿನವರು ಬ್ರಿಟಿಷರಿಗೆ ತಿಳಿಯ ಹೇಳಿರುತ್ತಾರೆ. ಇದರಿಂದ ಈ ಎರಡು ದೇಶಗಳೊಳಗೆ ವಿಶೇಷ ವಾದಕ್ಕೆ ಕಾರಣವಾಗುವದೆಂಬದಾಗಿ ತಿಳಿದು ಬರುತ್ತದೆ.

ಸುಮಾರು ೩೫,೦೦೦ ಜನರು ಕೆಲಸ ಮಾಡುತ್ತಿರುವ ಅಂಗ್ಲಾಂಡದ ಒಲ್ಡಮ್ ಎಂಬಲ್ಲಿಯ ಕಾರ್ಖಾನೆಯು ೧೦ ದಿವಸಗಳ ತನಕ ಕೆಲಸವನ್ನು ನಿಲ್ಲಿಸಬೇಕಾಯಿತು. ಇನ್ನು ಕೆಲವು ಹತ್ತಿ ಕಾರ್ಖಾನೆಗಳು ಇದೇ ರೀತಿ ಕೆಲಸವನ್ನು ನಿಲ್ಲಿಸಬೇಕಾಯಿತು. ತಯಾರಾದ ವಸ್ತ್ರವು ವಿಶೇಷವಾಗಿದೆ. ತುಂಬಿಸಲು ಹಡಗಗಳು ಕಡಮೆ ಮತ್ತು ಈಗಿನ ಅತ್ಯಧಿಕ ಧಾರಣೆಗಳಲ್ಲಿ ಬೇಕಾದಂತೆ ವಸ್ತ್ರವನ್ನು ತಯಾರಿಸುವದು ಯುಕ್ತವೂ ಅಲ್ಲ. ಈ ಕಾರಣಗಳಿಂದ ಕಾರ್ಖಾನೆಗಳ ಕೆಲಸಗಳನ್ನು ಆಗಿಂದಾಗ್ಗೆ ನಿಲ್ಲಿಸಬೇಕಾಯಿತು.

'ಪರಾನಾ' ಎಂಬ ಬ್ರೆಜಿಲ ದೇಶದ ಹಡಗವು ಜಲಾಂತರ್ಗಾಮಿ ನಾವೆಗಳ ಕಾಟಕ್ಕೆ ಬಲಿಬಿತ್ತು. ೧೩ ಜನ ಕಲಾಸಿಗಳು ಕಾಣೆಯಾಗಿರುವರು.

ಶತ್ರುಗಳ ಜಲಾಂತರ್ಗಾಮಿ ನಾವೆಗಳ ಕಾಟದಿಂದ ಶತ್ರುಗಳು ಉದ್ದೇಶಿಸಿರುವ ಹಾನಿಯು ಉಂಟಾಗಲಿಲ್ಲ. ಈ ಕಾಟವು ಹೆಚ್ಚಾದ ಕಾಲದಲ್ಲಿ ಸಹ ವ್ಯಾಪಾರವನ್ನು ನಡೆಸುವ ಹಡಗಗಳ ಸಂಖ್ಯೆಯು ಕಡಮೆಯಾಗಲಿಲ್ಲ. ಮತ್ತು ಜಲಾಂತರ್ಗಾಮಿ ನಾವೆಗಳ ಕಾಟವು ಇನ್ನು ಹೆಚ್ಚಾಗುವಂತೆ ತೋರುವದಿಲ್ಲವೆಂಬುದಾಗಿ ಬ್ರಿಟಿಷ ಮಾಹಿತಿಗಾರರ ಅಭಿಪ್ರಾಯವಿದೆ.

ಕಳೆದ ಫೆಬ್ರುವರಿ ತಿಂಗಳಲ್ಲಿ ನೊರ್ವೆಯ ಹಡಗಗಳಲ್ಲಿ ೪೧ ಮಾರ್ಚ ತಿಂಗಳಲ್ಲಿ ೪೬ ಹಡಗಗಳು ಟೊರ್ಪೆಡೊಗಳಿಗೆ ಬಲಿಬಿದ್ದವೆಂತ ತಿಳಿದುಬರುತ್ತದೆ.

ಲಂಡನಿನಲ್ಲಿ ಇದೇ ತಿಂಗಳ ತಾರೀಖು ೫ರಲ್ಲು ಕೂಡಿದ ಒಂದು ಸಭೆಯಲ್ಲಿ ಸರ್ ವಿಲಿಯಮ್ ರೊಬರ್ಟ್‌ಸನ್‌ರ ಒಂದು ಭಾಷಣವಿತ್ತು. ಶತ್ರುಗಳು ರಣರಂಗದಿಂದ ಹಿಂದರಿಯುತ್ತಿರುವರು. ಆದರೆ ಪೂರ್ಣವಾಗಿ ಅವರನ್ನು ಹೊಡೆದು ಬಿಡಲು ಆಗಲಿಲ್ಲ. ಹಿಂದಕ್ಕೆ ಹೋದ್ದರಿಂದ ಸೇನೆಯ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಬಲಗೊಳ್ಳುವೆವೆಂಬ ಕೋರಿಕೆಯಿಂದ ಶತ್ರುಗಳು ಹಿಂದೆ ಸಾರಿರಬಹುದು. ಶತ್ರುಗಳ ಸೇನೆಯ ಸಂಖ್ಯೆಯು ಈಗ ಬಹಳವಾಗಿ ಬಲಗೊಂಡಿರುತ್ತದೆ. ಕಳೆದ ವರುಷಕ್ಕಿಂತ ಈ ವರುಷ ಜರ್ಮನರ ಸೇನಾಂಗಗಳು ರಣಭೂಮಿಯಲ್ಲಿ ಹೆಚ್ಚಾಗಿವೆ. ಒಂದು ಮಿಲಿಯ ಸೇನಿಕರು ಹೆಚ್ಚಿದ್ದಾರೆ. ಹಿಂದುಮುಂದು ನೋಡದೆ ಅಮಾನುಷ ರೀತಿಗಳಲ್ಲಿ ಜರ್ಮನರು ಈ ರೀತಿ ಸೇನೆಯನ್ನು ಹೆಚ್ಚಿಸಿರುವರು. ಸೆರೆ ಹಿಡಿಯಲ್ಪಟ್ಟ ಕೈದಿಗಳನ್ನು ಮತ್ತು ಕೈವಶ ಮಾಡಿಕೊಂಡ ರಾಷ್ಟ್ರಗಳ ಜನರನ್ನು ಪಶ್ಚಾತ್ತಿಯದಿಂದ ಮದ್ದುಗುಂಡುಗಳ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಹಚ್ಚಿ ಅಲ್ಲಿರುವ ಜರ್ಮನರನ್ನು ಸೇನೆಗೆ ಸೇರಿಸುತ್ತಿದ್ದಾರೆ. ನಮಗೂ ಜನರು ಬೇಕಾಗಿರುವರು. ಅರ್ಧ ಮಿಲಿಯ ಜನರು ಇಂದಿನಿಂದ ಜುಲಾಯಿ ತಿಂಗಳ ಅಂತ್ಯದೊಳಗೆ ಬೇಕಾಗಿರುವರು. ಜಯವು ನಿಶ್ಚಯವಾಗಿ ಪ್ರಾಪ್ತವಾಗುವದು. ಆದರೆ ಜಯವನ್ನು ಶೀಘ್ರದಲ್ಲಿ ಸಾಧಿಸಲಿಕ್ಕೆ ಜನರು ಬೇಕಾಗಿರುವರು — ಈ ರೀತಿ ಸರ್ ವಿಲಿಯಮ್‌ರ ಭಾಷಣವಾಯಿತು. ಬ್ರಿಟಿಷ ಪತ್ರಕಾರರೆಲ್ಲರು ಸರ್ ವಿಲ್ಯಮರನ್ನು ಆದರಿಸಿರುವರು. ೪೧ಕ್ಕೆ ಮಿಕ್ಕಿದ ವಯಸ್ಸಿನವರ ಸೇನಾಂಗಗಳನ್ನು ನಿರ್ಮಿಸಿಕೊಂಡು ಇವರನ್ನು [illegible] ಕಳುಹಿಸಿಕೊಡಬಹುದೆಂದು ಪತ್ರಗಳು ಸೂಚಿಸುವವು.

ಹಿಂದೂಸ್ಥಾನದಿಂದ ಬ್ರಿಟಿಷ ದ್ವೀಪಗಳಿಗೆ ರಫ್ತಾಗುವ ಕಾಫಿಗೆ ತಡೆಯುಂಟಾಗಿರುವದರಿಂದ ಇಂಥಾ ತಡೆಯನ್ನು ತೆಗೆದುಹಾಕಬೇಕೆಂದು ಬ್ರಿಟಿಷ ಸಾಮ್ರಾಜ್ಯದ ದವಸುಗಳ ಪೈದಾಸಿನ ಸಂಘದವರು ಸಾಮ್ರಾಜ್ಯದ ಸರಕಾರವನ್ನು ವಿಜ್ಞಾಪಿಸಿಕೊಂಡಿರುತ್ತಾರೆ. ಹಿಂದೂಸ್ಥಾನದಿಂದ ಕಾಫಿಯನ್ನು ಒಯ್ಯಲಿಕ್ಕೆ ಬಹಳ ಹಡಗಗಳೇನಾದರೂ ಬೇಕೆಂತಿಲ್ಲ. ಇದರ ಬಗ್ಗೆ ಹಡಗಗಳು ಈ ಮೊದಲೇ ನಿಶ್ಚಯಿಸಲ್ಪಟ್ಟಿವೆ. ಅದಲ್ಲದೆ ಹಿಂದೂಸ್ಥಾನದ ಕಾಫಿಗೆ ಹೀಗೆ ಅತಂಕವುಂಟಾದ್ದರಿಂದ ಬ್ರಿಟಿಷ ದ್ವೀಪಗಳಲ್ಲಿ ಈ ಮೊದಲೇ ಬಂದಿರುವ ದಕ್ಷಿಣ ಅಮೇರಿಕದ ಕಾಫಿಗೆ ವೃಥಾ ನ್ಯಾಯವಲ್ಲದ ಪ್ರೋತ್ಸಾಹವನ್ನು ಕೊಟ್ಟಂತಾಗುವದು. ದಕ್ಷಿಣ ಅಮೇರಿಕದವರ ಕಾಫಿಯು ಜರ್ಮನರಿಗೋಸ್ಕರವೆಂತ ಸಹ ತಿಳಿದು ಬರುತ್ತಿದ್ದಲ್ಲದೆ, ಯುದ್ಧದ ಮೊದಲು ಈ ಕಾಫಿಯು ಜರ್ಮನಿಗೆ ಸೀದಾ ಹೋಗುತ್ತಿತ್ತು. ಇಂಥಾ ವಿದ್ಯಮಾನಗಳಲ್ಲಿ ಹಿಂದೂಸ್ಥಾನದಲ್ಲಿ ರಾಜಭಕ್ತಿಯುಳ್ಳರಾದ ದೇಶೀಯ ಸಂಸ್ಥಾನದ ಅರಸರ ದೇಶದಲ್ಲಿ ಬೆಳೆದ ಕಾಫಿಯ ರಫ್ತಿಗೆ ಪ್ರತಿಬಂಧಕಗಳಿರುವದು ಯುಕ್ತವಲ್ಲವೆಂತ ಬ್ರಿಟಿಷ ಪತ್ರಗಳು ಸಾಮ್ರಾಜ್ಯದ ಸರಕಾರವನ್ನು ವಿಜ್ಞಾಪಿಸಿಕೊಂಡಿವೆ.

[illegible]

ಹಡಗಗಳಲ್ಲಿ ೧೭ ಹಡಗಗಳನ್ನು ಮುಳುಗಿಸಿರುವ ಪ್ರಯತ್ನಗಳು [illegible] ಫಲಿಸದೆ ಹೋದವು. ಮೂವರು ನಿಕಾರಿಯ ಆರು ಹಡಗಗಳು [illegible] ಮುಳುಗಿಹೋಗಿವೆ.

ಉತ್ತರ ಹಿಂದೂಸ್ಥಾನ.

ನಾಣ್ಯಗಳ ಚಲಾವಣೆಯಲ್ಲಿ ಉಂಟಾಗುವ ಅಡಚಣೆಯನ್ನು ನಿವಾರಿಸುವದಕ್ಕೂ ಮತ್ತು ಚಲಾವಣೆಯಲ್ಲಿ ಬೇಕಾದ ಮಾರ್ಪಾಟುಗಳನ್ನು ಮಾಡುವ ಉದ್ದೇಶದಿಂದ ಇಂಡಿಯಾದ ಸರಕಾರದವರು ಒಂದು ರೂಪಾಯಿ ನಾಣ್ಯದ ಕರೆನ್ಸಿ ನೋಟುಗಳನ್ನು ಹೊರಪಡಿಸುವದು ಬಹುಶಕ್ಯ ಖಂಡಿತವಾಗಿದೆ, ಎಂತ 'ಪಾಯೋನೀಯರ್' ಪತ್ರಿಕೆಗೆ ಒಬ್ಬ ಬಾತ್ಮೀದಾರರು ಬರೆದಿರುವರು. ಕಲ್ಕತ್ತೆಯಲ್ಲಿ ಪೇರಕುಗಳ [illegible]ಗಳೊಡನೆ ಸರಕಾರದ ಖಜಾನಾ ಮಂತ್ರಿಗಳಾದ ಸರ್. ವಿಲಿಯಮ್ ಮೇಯರರವರು ವಾದಿಸಿದ ವಿಷಯಗಳಲ್ಲಿ ಈ ವಿಷಯವು ಒಂದಾಗಿತ್ತೆಂಬದಾಗಿ ತಿಳಿದು ಬರುತ್ತದೆ.

ಬಂಗಾಲ ಸಂಸ್ಥಾನದ ಆಯುರ್ವೇದಿಕ ಪರಿಷತ್ತು ಈ ತಿಂಗಳ ತಾರೀಖು [illegible]ರಲ್ಲಿ ದಕ್ಕಾದಲ್ಲಿ ಕೂಡಿತು. ಆ ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಸುಮಾರು ೩೨೦ ಪ್ರತಿನಿಧಿಗಳು ಸಭೆಗೆ ಬಂದಿದ್ದರು. ದೇಶೀಯ ಗಿಡಮೂಲಿಕೆಗಳ ಒಂದು ಪ್ರದರ್ಶನವು ಈ ಪರಿಷತ್ತಿನೊಡನೆ ಏರ್ಪಡಿಸಲ್ಪಟ್ಟಿತು. ಪ್ರದರ್ಶನಕ್ಕೆ ಅಲ್ಲಿಯ ಜಿಲ್ಲಾ ಕಲೆಕ್ಟರರು ಮುಹೂರ್ತ ಮಾಡಿದರು.

ಈ ತಿಂಗಳ ತಾ. ೮ರಲ್ಲಿ ಕಲ್ಕತ್ತೆಯಲ್ಲಿ ಕೊಂಗ್ರೆಸ್ ಸಭೆಯ ವರಿಷ್ಠ ಕಮಿಟಿಯ ಒಂದು ಸಭೆಯು ಕೂಡಿತ್ತು. ಪೂನೆಯಿಂದ ತಿಲಕ ಕಪರ್ದೆಯವರೂ ಮದ್ರಾಸು ಇತ್ಯಾದಿ ಇತರ ಪ್ರಾಂತ್ಯಗಳಿಂದ ಪ್ರತಿನಿಧಿಗಳೂ ಬಂದಿದ್ದರು. ಈ ವರುಷದ ರಾಷ್ಟ್ರೀಯ ಸಭೆಯು ಕಲ್ಕತ್ತೆಯಲ್ಲಿ ಕೂಡಬೇಕೆಂತ ನಿರ್ಣಯಿಸಲ್ಪಟ್ಟಿರುವದು. ಲಕ್ನೌನಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ಮಂಜೂರಾದ ಸ್ವರಾಜ್ಯಭಾರ ಕ್ರಮದ ನಿರ್ಣಯವು ಅಂಗ್ಲಾಂಡದವರ ಆಧಾರವನ್ನು ಹೊಂದುವಂತೆ ಹಿಂದೂಸ್ಥಾನದಿಂದ ೮ ಜನ ಪ್ರತಿನಿಧಿಗಳು ಬರುವ ಮೇ ತಿಂಗಳ ಅಂತ್ಯದೊಳಗೆ ಅಂಗ್ಲಾಂಡಕ್ಕೆ ಹೊರಟು ಹೋಗಬೇಕೆಂತ ನಿರ್ಣಯಿಸಲ್ಪಟ್ಟಿರುತ್ತದೆ.

'ಸ್ವರಾಜ್ಯ'ದ ನಿರ್ಣಯದ ಚಳವಳವು ದೇಶದಲ್ಲಿ ಪ್ರಬಲಗೊಳ್ಳುವಂತೆ ಭಾರತ ಸೇವಾಸಂಘದ ಅಧ್ಯಕ್ಷರಾದ ಬಹುಮಾನ ಪಟ್ಟ ಶ್ರೀನಿವಾಸ ಶಾಸ್ತ್ರಿಗಳವರು ಉತ್ತರ ಹಿಂದೂಸ್ಥಾನದಲ್ಲಿ ಪ್ರಜಾಜನರ ದೊಡ್ಡ ದೊಡ್ಡ ಸಭೆಗಳಲ್ಲಿ ಭಾಷಣಗಳನ್ನು ಮಾಡುತ್ತಿರುವರು. ಅಲ್ಲಹಾಬಾದಿನಲ್ಲಿ ಪ್ರಜಾಜನರ ದೊಡ್ಡ ಸಭೆಯು ಕೂಡಿತ್ತು. ಬಹುಮಾನ ಪಟ್ಟ ಸಪ್ರುರವರು ಅಧ್ಯಕ್ಷರಾಗಿದ್ದರು. ಶ್ರೀನಿವಾಸ ಶಾಸ್ತ್ರಿಗಳ ಭಾಷಣದ ನಂತರ ಪಂಡಿತ ಮದನಮೋಹನ ಮಾಲವೀಯವರ ಭಾಷಣವೂ ಇತ್ತು. ಬ್ರಿಟಿಷ ಆಳಿಕೆಯ ಮೊದಲುಗೊಂಡು ನಾವು ಕೈಕೊಂಡ ಚಳವಳಗಳಲ್ಲಿ ಈ ಚಳವಳವೇ ಬಹಳ ಮಹತ್ವವುಳ್ಳದ್ದಾಗಿದೆ. ಈ ಚಳವಳಕ್ಕೆ ಬೆನ್ನು ಹಾಕಿ ನಿಲ್ಲುವಂಥಾದ್ದು ಸರ್ವಥಾ ಕೂಡದು. ಈ ಪ್ರಯತ್ನಗಳಲ್ಲಿ ಕಷ್ಟವು ರಾಶಿ ರಾಶಿಯಾಗಿ ತೋರುತ್ತದೆಯಾದರೂ ಇದರ ಫಲಪ್ರಾಪ್ತಿಯು ಅನ್ಯಥಾ ಇರಲಾಗದೆಂದು ಶಾಸ್ತ್ರಿಗಳವರು ಬಹಳ ಒತ್ತಿ ಹೇಳಿರುತ್ತಾರೆ.

ಮುಂಬಯಿಯ 'ಪ್ರಿನ್ಸೆಸ್ ಡೋಕ್' ರೇವಿನಲ್ಲಿದ್ದ ಒಂದು ಹಡಗಕ್ಕೆ ಬೆಂಕಿ ಬಿದ್ದು ಸುಮಾರು ೩ ಲಕ್ಷ ರೂಪಾಯಿಗಳ ಮೌಲ್ಯದ ಸಾಮಾನು ನಷ್ಟವಾಗಿ ಹೋಗಿದೆ.

ಲಾಹೋರಿನಲ್ಲಿ ಕಳೆದ ವಾರದಲ್ಲಿ ಮಹಾಸಭೆಗಳ ಗದ್ದಲವು ಬಹಳ ವಿಶೇಷವಾಗಿತ್ತು. ಸಿಕ್ಖ ಮತಸ್ಥರ ವಿದ್ಯಾಪರಿಷತ್ತು, ಮುಹಮ್ಮದೀಯರ ಅಂಜುಮಾನ ಇಸ್ಲಾಮಿಯಾ ಪರಿಷತ್ತು, ಸನಾತನ ಧರ್ಮದವರ ಸಮ್ಮೇಲನ ಈ ಮೂರು ಸಭೆಗಳು ಜರಗಿದ್ದವು. ಭೋಪಾಲದ ಹಮಿದುಲ್ಲಾ ಖಾನ್‌ರವರು ಇಸ್ಲಾಮಿಯಾ ಕೊಲೇಜಿನ ಮಸೀದಿಗಳ ಶಂಕುಸ್ಥಾಪನೆಯನ್ನು ಮಾಡಿ ಇದರ ಫಂಡಿಗೆ ರೂ. ೧೦,೦೦೦ವನ್ನು ಕೊಟ್ಟರು. ಸಿಕ್ಖಪರಿಷತ್ತಿನ ಅಧ್ಯಕ್ಷರಾದ ರಾಜಾ ದಾಲಜಿತ್ ಸಿಂಘ ಮೊದಲಾದ ಸಿಕ್ಖ ಪ್ರಮುಖರು ಮಹಮ್ಮದೀಯರ ಸಭೆಗೂ ಮುಹಮ್ಮದೀಯರ ಪ್ರಮುಖರು ಸಿಕ್ಖರ ಸಭೆಗೂ ಬಂದಿದ್ದರು. ದರ್ಭಂಗದ ಮಹಾರಾಜರವರು ಸಿಕ್ಖರ ಪರಿಷತ್ತಿಗೆ ಹೋಗಿ ರೂ. ೨,೦೦೦ವನ್ನು ಪರಿಷತ್ತಿನ ಫಂಡಿಗೆ ಕೊಟ್ಟಿರುತ್ತಾರೆ. ಪಂಜಾಬಿನ ಲೆಫ್ಟಿನೆಂಟ್ ಗವರ್ನರರು, ಸರ್ ಮೆಲೆಂಸ್ಯಾನ್ ಬೇತೋಲರೊಡನೆ ಈ ಮೂರು ಪರಿಷತ್ತುಗಳಿಗೆ ಹೋಗಿ ಸಭಿಕರನ್ನು ಪ್ರೋತ್ಸಾಹಿಸಿ ಭಾಷಣಗಳನ್ನು ಮಾಡಿದರು. ಸನಾತನ ಧರ್ಮದವರ ಮೆರವಣಿಗೆಯಲ್ಲಿ ಇತರ ಬ್ರಾಹ್ಮಣ ಮಹಾರಾಜರುಗಳೊಡನೆ ಕ್ಷತ್ರಿಯರಾದ ಕಾಶ್ಮೀರದ ಮಹಾರಾಜರೂ ಸಹ ರಥಾರೂಢರಾಗಬೇಕೆಂದು ಬಹಳವಾಗಿ ಕೇಳಿಕೊಂಡರೂ ಇವರು ತಾವು ಬ್ರಾಹ್ಮಣರ ಸಮಾನ ಸ್ಥಾನದಲ್ಲಿ ಕೂತು ಕೊಳ್ಳಲಿಕ್ಕಿಲ್ಲವೆಂತ ಹೇಳಿ ಮೆರವಣಿಗೆಯಲ್ಲಿ ನಡೆದೇ ಬಂದರು. ದರ್ಭಂಗದ ಮಹಾರಾಜರವರ ಅಧ್ಯಕ್ಷತೆಯಲ್ಲಿ ಒಂದು ಸಂಸ್ಕೃತ ಪರಿಷತ್ತು ಸಹ ಮರುದಿನ ಕೂಡಿತ್ತು.

ರಾವ್ ಬಹದ್ದೂರ್ ಹಿರಾನಂದ ಖೇಮಸಿಂಗರವರ ಅಧ್ಯಕ್ಷತೆಯಲ್ಲಿ ಸಿಂಧ ಸಂಸ್ಥಾನಿಕ ಪರಿಷತ್ತು ಇದೇ ತಿಂಗಳ ತಾ. ೭ರಲ್ಲು ಕೂಡಿತ್ತು. ವಿಪಿನ ಚಂದ್ರ ಪಾಲರವರನ್ನು ಈ ಸಭೆಗೆ ಬರಮಾಡಿಕೊಂಡು ಅವರಿಂದ ಭಾಷಣಗಳನ್ನು ಮಾಡಿಸಬೇಕೆಂತ ಸಭೆಯವರು ಯೋಚಿಸಿದ್ದರು. ಆದರೆ ಸರಕಾರದವರು ಇದಕ್ಕೆ ಸಮ್ಮತಿಯನ್ನು ಕೊಡದೆ ಪಾಲರವರು ಸಭೆಗೆ ಬರ ಕೂಡದೆಂತ ತಿಳಿಸಿದರು.

ಪ್ರಜಾಜನರ ಸಲುವಾಗಿ ಸರಕಾರದ ಸೇವೆಯನ್ನು ಮಾಡಿ ಖ್ಯಾತಿಹೊಂದಿದಂಥವರಿಗೆ ಜಾಗೀರುಗಳು ಕೊಡೋಣಾಗುವ ಪೂರ್ವ ಸಾಂಪ್ರದಾಯವನ್ನು ಪಂಜಾಬಿನಲ್ಲಿ ಸರಕಾರದವರು ಪುನಃರುಜ್ಜೀವಿಸುವರೆಂಬುದಾಗಿ ತಿಳಿದು ಬರುತ್ತದೆ. ಸ್ಟೇಟ್ ಸೆಕ್ರೆಟರಿಯವರ ಮತ್ತು ಇಂಡಿಯಾ ಸರಕಾರದವರ ಸಮ್ಮತಿಯು ಇದಕ್ಕೆ ದೊರಕಿರುವದು. ಅನಾಯಕತ್ವ, ಖುಲಾಮು, ಇತ್ಯಾದಿಗಳ ಹುಟ್ಟನ್ನಡಗಿಸಿ, ಸೇನೆಗೆ ಜನರನ್ನು ಸೇರಿಸಿ ಕೊಡುವದರಲ್ಲಿ ಸಹಾಯ ಮಾಡಿದಂಥವರಿಗೆ ಜಾಗೀರುಗಳನ್ನು [illegible] ಇವರನ್ನು ಪ್ರೋತ್ಸಾಹಿಸುವದು ಈ ಕಾಲದಲ್ಲಿ ಅಗತ್ಯವೆಂತ ಅಭಿಪ್ರಾಯ [illegible] ಪಂಜಾಬು ಸರಕಾರದವರು ಈ ಕ್ರಮವನ್ನು ಜಾರಿಗೆ ತಂದಿರುವರು. ಜಾಗೀರುಗಳು ದ್ರವ್ಯರೂಪದಲ್ಲಿ ಕೊಡೋಣಾಗುವವು. ಜಾಗೀರು ಸ್ವತಃ ಪಡೆಕೊಂಡವನ [illegible]ದಲ್ಲಿ ಒಂದು ತಲೆಯ ವರೆಗೆ ಅರ್ಧಾಂಶವಾಗಿ ದೊರಕುವದು. [illegible] ಕೊಡೋಣಾಗುವಂಥವುಗಳು ವರ್ಷಾವಧಿಗೆ ಒಂದು ಸಾವಿರಕ್ಕೆ ಮಿಕ್ಕ[illegible]ದು. ಹೀಗೆ ಪ್ರಥಮ ವರ್ಷದಲ್ಲಿ ಕೊಡೋಣಾಗುವ ಜಾಗೀರುಗಳ [illegible] ಒಟ್ಟು ರೂ. ೧,೦೦೦ಕ್ಕೆ ಮೀರಕೂಡದು. ನಂತರ ಪ್ರತಿ ವರುಷ [illegible] ರೂ. ೫,೦೦೦ಕ್ಕೆ ಮೀರ ಕೂಡದ್ದಾಗಿದೆ. [illegible] ಜಾಗೀರುಗಳ ಸನ್ನದುಗಳು ಇದೇ ತಿಂಗಳ ತಾ. [illegible]ರಲ್ಲಿ [illegible] ದರಬಾರಿನಲ್ಲಿ ಕೊಡೋಣಾಗುವವು. ದರಬಾರಿಗೆ ಪ್ರಸಿದ್ಧ [illegible] ಬರುವವರಲ್ಲಿದ್ದಾರೆ.

ಬರೋಡೆಯ ಮಹಾರಾಜರವರು [illegible] ರೂ. [illegible] ಕೊಟ್ಟಿರುವರು.

ಹಿಂದೂ ಯೂನಿವರ್ಸಿಟಿಯನ್ನು [illegible] ಮುಹಮ್ಮದೀಯರ [illegible]

[illegible]

ಅನುಕ್ರಮಣಿಕೆ.

	ಪಾನು.
ಅಗ್ರಲೇಖ:—	
ಎಲ್ಲರ ಗುರಿಯು ಒಂದೆ!	೪
ಸ್ಫುಟವಿಚಾರಗಳು:—	
೧ ಮತಾಭಿಲಾಷಿಣಿಯರಿಗೆ ಹಕ್ಕುಗಳು	,,
೨ ಅಸ್ಪೃಶ್ಯರ ನಿವಾಸ ಸ್ಥಳಗಳು	೫
೩ ಆ ಬಗ್ಗೆ ಮಿ. ಕಾಟ್ರಮನರ ಅಭಿಪ್ರಾಯ	,,
೪ ಮದ್ರಾಸು ಕೌನ್ಸಿಲು	,,
೫ ಕನ್ನಡ ಸಾಹಿತ್ಯ ಸಮ್ಮೇಳನ	,,
೬ ತಡಕೆ ದಾಲು	,,
೭ ೪೪೪—ಮಂಗಳೂರು	,,
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೩
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದೂಸ್ಥಾನ	೩-೬
೪ ದಕ್ಷಿಣ ಹಿಂದೂಸ್ಥಾನ	,,
ಬಾತಮಿಗಳು ಮತ್ತು ಪತ್ರವ್ಯವಹಾರಗಳು	೫-೬

ಸ್ವದೇಶಾಭಿಮಾನಿ.

ಶಕ ೧೮೪೦ ಚೈತ್ರ ಬ. ೬ ಶುಕ್ರವಾರ.

ಎಲ್ಲರ ಗುರಿಯು ಒಂದೆ!

ಕಥೆಯ ಪುಸ್ತಕಗಳಲ್ಲಿ ಹೀಗೊಂದು ಕಥೆ ಇದೆ. ಒಬ್ಬ ಶ್ರೀಮಂತನಿಗೆ ಮೂವರು ಮಕ್ಕಳಿದ್ದರು. ಒಬ್ಬನು ಆರು, ಇನ್ನೊಬ್ಬನು ಎಂಟು, ಮತ್ತೊಬ್ಬನು ಹತ್ತು, ಹೀಗೆ ಅವರೆಲ್ಲರು ಹತ್ತು ವರ್ಷ ಪ್ರಾಯದೊಳಗಿನವರಿದ್ದರು. ಒಮ್ಮೆ ಅವರು ಆಡುತ್ತಾಡುತ್ತ, ತಮ್ಮ ತಂದೆಯ "ದಿವಾಣಖಾನೆ" (Hall)ಗೆ ಬಂದರು. ಆ ದಿವಾಣಖಾನೆಯಲ್ಲಿ ಹಲವು ವಿಧದ ಒಡವೆಗಳಿದ್ದವು. ಬಗೆಬಗೆಯ ಆಟದ ವಸ್ತುಗಳಿಂದಲೂ, ಉಡಿಗೆ ತೊಡಿಗೆ ಬೇಕಾದ ಬೆಲೆಯುಳ್ಳ ವಸ್ತ್ರಗಳಿಂದಲೂ, ಪುಸ್ತಕಗಳ ಕಪಾಟುಗಳಿಂದಲೂ, ಆ "ದಿವಾಣಖಾನೆ" ಎಂಬುದು ಒಂದು ವಸ್ತು ಸಂಗ್ರಹಾಲಯವೆ ಆಗಿತ್ತೆನ್ನಬಹುದು. ಈ ಪ್ರೇಕ್ಷಣೀಯವಾದ "ದಿವಾಣಖಾನೆ"ಯಲ್ಲಿಯ ಒಂದು ಕಡೆಯಲ್ಲಿ ಬುಟ್ಟಿಯೊಳಗೆ ಒಳ್ಳೇ ಜಾತಿಯ ಮಾವಿನ ಹಣ್ಣುಗಳಿದ್ದವು. ಆಡಿಕೊಂಡು ಬರುವ ಹುಡುಗರು "ದಿವಾಣಖಾನೆ"ಯಲ್ಲಿ ಬಂದು ಎಂದಿನಂತೆ ಅಲ್ಲಿಯ ವಸ್ತು ದರ್ಶನದಿಂದ ಸಂತೋಷಪಟ್ಟು ಮೊದ ಮೊದಲು ಕಂಡ ವಸ್ತುಗಳೆಲ್ಲ ಸ್ಪೃಹಣೀಯವೆಂದೇ ಎಣಿಸಿದರು. ಆದರೆ ಒಂದು ಕಡೆಯಲ್ಲಿಟ್ಟಿರುವ ಮಾವಿನ ಹಣ್ಣುಗಳನ್ನು ನೋಡುತ್ತಲೇ ಹುಡುಗರ ಬಾಯಿಗೆ ನೀರು ಬರಹತ್ತಿತು. ಅವರಿಗೆ ಆಟದ ಒಡವೆಗಳಾಗಲಿ, ಜರಿಯ ಟೋಪಿಗಳಾಗಲಿ, ಸುಂದರವಾದ ಬೈಂಡಿನ ಪುಸ್ತಕಗಳಾಗಲಿ, ಒಂದೂ ಬೇಕಾಗಿರಲಿಲ್ಲ. ಸ್ಪೃಹಣೀಯತ್ವದ ಅವರ ಮೊದಲನೆಯ ಕಲ್ಪನೆಯಲ್ಲಿ ಬದಲಾವಣೆಯಾಯಿತು. ಆ ಮೂವರಲ್ಲಿ ಪ್ರತಿ ಒಬ್ಬನಿಗೆ ಹಣ್ಣಿನ ಅಭಿಲಾಷೆಯಾಯಿತು. ಅವರ ಅಭಿಲಾಷೆಯನ್ನು ನೋಡಿ ಪರಮಕಾರುಣಿಕನಾದ ಅವರ ತಂದೆಯು ಮೂವರಿಗೂ ಆ ಹಣ್ಣುಗಳನ್ನು ಹಂಚಿಕೊಟ್ಟನು. ಇದೇ ಚಿಕ್ಕ ಕಥೆ. ಈ ಕಥೆಯಲ್ಲಿ ಸಂವಿಧಾನಕ ಚಾತುರ್ಯವಾಗಲಿ, ಅದ್ಭುತ ರಸವಾಗಲಿ, ಉದಾತ್ತವಾದ ಸ್ವಭಾವವರ್ಣನೆಯಾಗಲಿ, ಏನೂ ಇಲ್ಲ. ಆದರೆ ರಾಜಕೀಯ ಜೀವನದ ಇತಿಹಾಸದಲ್ಲಿ ಈ ಕಥೆಗೆ ಬಹಳ ಬೆಲೆಯಿದೆಯೆಂದು ನೆನೆಸಬಹುದು. ಬುಭುಕ್ಷೆ, ಎಂದರೆ ಹಸಿವೆಯಡಗುವಂತೆ, ಆತ್ಮತೃಪ್ತಿಯಾಗುವಂತೆ, ಹಣ್ಣುಗಳನ್ನು ಹೊಟ್ಟೆ ತುಂಬಾ ತಿನ್ನುವ ಪ್ರಸಂಗವು ಒದಗಿದಾಗ ಹಣ್ಣಿನ ಗುಣಧರ್ಮ, ಯೋಗ್ಯತೆ, ಉಪಯುಕ್ತತೆ, ಹಾಗು ಹಿತಾವಹತೆ ಇವುಗಳನ್ನು ತಿಳಿದುಕೊಂಡು ಅಂಥ ಹಣ್ಣನ್ನು ಕಣ್ಣಿಗೆ ಬಿದ್ದಿರುವಾಗ—ಈ ಸುಪ್ರಸಂಗದ ಪ್ರಯೋಜನವನ್ನು ಯಾರು ತಾನೆ ಪಡೆದುಕೊಳ್ಳದಿರುವನು! ಆಟದ ಒಡವೆಗಳು ಅಥವಾ ಉಡುಪಿನ ಸಾಹಿತ್ಯಗಳು ಉಪಯುಕ್ತವಾದವುಗಳಾದರೂ ಹಣ್ಣನ್ನು ಆತ್ಮತೃಪ್ತಿಗೆ ಕಾರಣಗಳಲ್ಲೆಂಬ ಅಂಶವು ಮಂದಟ್ಟಾದಲ್ಲಿ ಅಂಥ ಹಣ್ಣಿನ ವಿಷಯದಲ್ಲಿ ಅಭಿಲಾಷೆಯು ಹುಟ್ಟುವುದು ಹ್ಯಾಗೆ ಸ್ವಾಭಾವಿಕವಾಗಿಯೆ ಇದೆಯೊ ಹಾಗೆಯೆ ರಾಜಕೀಯ ಸುಧಾರಣೆಗಳಲ್ಲಿ ರಾಷ್ಟ್ರದೇವತೆಯ ತೃಪ್ತಿಗೂ, ಜನಾಂಗದ ಉನ್ನತಿಗೂ ಕಾರಣವಾದ ವಸ್ತುವು ಇಂಥಾದ್ದೆಂದು ತಿಳಿದಲ್ಲಿ ಅದರ ಅಭಿಲಾಷೆಯು ಯಾರಿಗೆ ಹುಟ್ಟದೆ ಇದ್ದೀತು! ಇನ್ನೂ ಕೆಲವು ದೃಷ್ಟಾಂತಗಳನ್ನು ಈ ಬಗ್ಗೆ ತೋರಿಸಬಹುದು. ಎಲ್ಲ ಧರ್ಮ ಪ್ರವರ್ತಕರು ಉಗ್ರತಪಸ್ಸನ್ನಾಚರಿಸಿದರು; ಆಚರಣೆಯ ಬೇರೆ ಬೇರೆ ಮಾರ್ಗಗಳನ್ನು ತೋರಿಸಿಕೊಟ್ಟರು. ಆದರೆ ಆ ಎಲ್ಲರು ತಾವು ಸ್ವತಃ "ಈಶ್ವರ ಪ್ರಾಪ್ತಿ"ಯೆಂಬ ಒಂದೆ ಗುರಿಯನ್ನು ಉದ್ದೇಶಿಸಿ ಜನರೆಲ್ಲರಿಗೂ ಅದನ್ನೆ ಬೋಧಿಸಿದರು. ನಮ್ಮ ಪುರಾಣಗಳನ್ನು ತೆರೆದರೆ ಅವುಗಳಲ್ಲಿ ಇಂಥ ಅನೇಕ ಉದಾಹರಣೆಗಳನ್ನು ನಾವು ಕಂಡುಹಿಡಿಯಬಹುದು. ಭಕ್ತರಾದವರು ರಾಮಕೃಷ್ಣಾದಿ ದೇವಾವತಾರಿಗಳ ಸಾದಸಾಯುಜ್ಯವನ್ನು ಇಚ್ಛಿಸುವುದು ಆಶ್ಚರ್ಯವಲ್ಲ. ಕಾರಣ ಅಜನ್ಮ ವಿರೋಧಿಗಳಾಗಿ ನಿಂತು, ದುರುಳತನಗಳನ್ನು ನಡಿಸಿ, ರಾಕ್ಷಸರೂ ಯುದ್ಧವನ್ನು ಸಹ ಮಾಡಿದವರು, ಕಣ್ಣ ಮುಂದಾದ ವ್ಯಕ್ತಿಗಳು ಕೊನೆಗೆ ಆ ದಿವ್ಯಪದವನ್ನು ಬಯಸುವಾಗ ಇದರ ಅರ್ಥವೇನೆಂದರೆ, ಲೋಕದಲ್ಲಿ ಉತ್ಕೃಷ್ಟ ಮತ್ತು ಸ್ವರ್ಗೀಯವಾದ ವಸ್ತುವು ಜನರ ಸ್ಪೃಹೆಗೆ ಪಾತ್ರವಾದುದು. ಇಂಥ ವಸ್ತುವನ್ನು ಜನರು ಬಯಸುವುದು ಆಶ್ಚರ್ಯವಲ್ಲ. ಎರಡು ದಿವಸ ಹಿಂದೆ ಅಥವಾ ಮುಂದೆ, ಎಂತು ಅದರ ಜ್ಞಾನವಾಗುತ್ತಲೆ ಅದು ಜನರ ಆಕಾಂಕ್ಷೆಗೆ ಪಾತ್ರವಾಗುತ್ತದೆ. ಇದೆ ಮೇಲೆ ತೋರಿಸಿದ ಎಲ್ಲ ದೃಷ್ಟಾಂತಗಳ ಇತ್ಯರ್ಥವು.

ಈ ಸಿದ್ಧಾಂತವು—ಈ ತತ್ವವು ಮೇಲೆ ಹೇಳಿದಂತೆ ರಾಜಕೀಯ ವಿಷಯದಲ್ಲಿಯೂ ಸರ್ವತ್ರ ನೆಲೆಗೊಂಡಿದ್ದು ಕಂಡುಬರುತ್ತದೆ. ಇಂಗ್ಲಂಡಿನಲ್ಲಿ ಕೆಲವು ಶತಮಾನಗಳ ಹಿಂದೆ ಕೇವಲ ರಾಜಸತ್ತಾತ್ಮಕವಾದ ಶಾಸನಪದ್ಧತಿಯೆ ಪ್ರಚಾರದಲ್ಲಿತ್ತು. ಆದರೆ ಅದು ಮುಂದೆ ನಿಲ್ಲಲಿಲ್ಲ. ದೇಶವನ್ನು ಆಳುವುದು ಒಂದು ವ್ಯಕ್ತಿಯಾದರೇನು, ಒಂದು ಸಂಸ್ಥೆಯಾದರೇನು ಅದು ದೇಶಕ್ಕಾಗಿ—ಆ ದೇಶದೊಳಗಿನ ಪ್ರಜೆಗಳಿಗಾಗಿ ಅಧಿಕಾರಾರೂಢವಾದುದು. ಪರಂತು ಈ ತತ್ವದಲ್ಲಿ ಯಾವಾಗ ವ್ಯತ್ಯಾಸವುಂಟಾಗುತ್ತದೊ ಎಂದರೆ ಪ್ರಜೆಗಳಿಗಾಗಿ ರಾಜನು ಎಂಬ ಸರ್ವಮಾನ್ಯ ತತ್ವವು ಹೋಗಿ ಅದರ ಬದಲು ರಾಜನಿಗಾಗಿ ಪ್ರಜೆಗಳೆಂಬೀ ಸ್ಥಿತಿಯು ಯಾವಾಗ ಬರುತ್ತದೊ ಆಗ ಒಂದು ತರದ ಕ್ರಾಂತಿಯುಂಟಾಗುತ್ತದೆ. ಈ ನಿಯಮದಂತೆಯೆ ಇಂಗ್ಲಂಡಿನ ಲೋಕಮತದಲ್ಲಿ ಬದಲಾವಣೆಯಾಗಿ ಅನೇಕ ವರ್ಷಗಳಲ್ಲಿ ನಡೆದ ವಿವಿಧ ಪ್ರಯತ್ನಗಳ ನಂತರ ಈಗಿನ ಉತ್ಕೃಷ್ಟವಾದ ಮತ್ತು ಉದಾಹರಣೀಯವಾದ ರಾಜ್ಯಕ್ರಮವು ಇಂಗ್ಲಂಡಿನಲ್ಲಿ ಪ್ರಸ್ಥಾಪಿತವಾಯಿತು. ಜರ್ಮನಿಯಂಥ 'ಬಾದಶಾಹಿ ದರಬಾರಿ'ನ ಮೂರು ನಾಲ್ಕು ದೇಶಗಳನ್ನು ಬಿಟ್ಟರೆ ಬೇರೆ ಸಾಮಾನ್ಯ ಇಡೀ ಯುರೋಪಖಂಡದಲ್ಲಿ ಉದಾರಮತದ ರಾಜ್ಯಕ್ರಮವೆ ನೆಲಗೊಂಡಿದೆ. ಯುರೋಪದಲ್ಲಿಯಾಗಲಿ ಬೇರೆ ಖಂಡಗಳಲ್ಲಿಯಾಗಲಿ ಒಂದುವೇಳೆ ಅಲ್ಲಲ್ಲಿ ಇನ್ನೂ ಅನುದಾರ ಪದ್ಧತಿಯ ಶಾಸನವಿದ್ದರೂ ಬೇಗನೆ ಅದರ ಜಾಗೆಯನ್ನು ಉದಾರಮತವು ಸ್ವಾಧೀನದಲ್ಲಿ ತಂದೀತೆಂದು ಇತಿಹಾಸ ಶಾಸ್ತ್ರಿಗಳು ಭವಿಷ್ಯವನ್ನು ಹೇಳುತ್ತಾರೆ. ಇತಿಹಾಸ ಶಾಸ್ತ್ರಿಗಳ ಈ ಭವಿಷ್ಯ ಕಥನವು ಒರೆ/ಭವಿಷ್ಯೋತ್ತರ ಪುರಾಣದೊಳಗಿನದಲ್ಲ; ನಾವು ನೋಡುವ ಹಾಗೆ ಇದೇ ತತ್ವದ ವಿಜಯವು ಲೋಕದಲ್ಲಿ ದಿನೇ ದಿನೇ ಆಗುತ್ತಲಿದೆ. ಆದುದರಿಂದಲೆ 'ಎಲ್ಲರ ಗುರಿಯು ಒಂದೆ' ಎಂಬ ಮಾತನ್ನು ಇದರ ಶಿರೋಲೇಖದಲ್ಲಿಯೆ ಹೇಳಿರುವೆವು. ಈ ವಿಧಾನಕ್ಕೆ ಈಚೆಯ ಒಂದು ದೃಷ್ಟಾಂತವನ್ನು ಹೇಳುವುದಾದರೆ ಸಿಲೋನಿನೊಳಗಿನ ಸರ್. ಪೊನ್ನಂಬಲಂ ಅರುಣಾಚಲಂ ಇವರ ಭಾಷಣವನ್ನು ಉದಹರಿಸಬಹುದು. "ಸಿಲೋನ್ ನೆಶನಲ್ ಎಸ್ಸೋಸಿಯೇಶನ"ನಲ್ಲಿ ಕೊಲಂಬೊ ಪಟ್ಟಣದ ಮಾನ್ಯ ನಾಗರಿಕರಾದ ಸರ್. ಪೊನ್ನಂಬಲಂ ಇವರು ಒಂದು ಮನನೀಯವಾದ ಉಪನ್ಯಾಸವನ್ನು ಕೊಟ್ಟಿರುವರು. ಪ್ರಕೃತ ಸಿಲೋನಿನೊಳಗಿನ ಅವರು ವರ್ಣಿಸುವ ರಾಜ್ಯಭಾರ ಕ್ರಮವನ್ನು ನೋಡಿದರೆ ಇಲ್ಲಿಯ ಎಷ್ಟೊ ಸಂಗತಿಗಳು ತುಲನಾಪ್ರಿಯರ ಮನಸ್ಸಿನಲ್ಲಾರೂಢವಾಗಿರವು. ಇಲ್ಲಿಯಂತೆ ಸಿಲೋನಲ್ಲಿಯೂ ಪೋಲೀಸ ಬಹಾದೂರರು/ದೇಶವನ್ನು ರಕ್ಷಿಸುವರು, ತೀರ್ವೆಯು ವಸೂಲಾಗುವುದು, ಮಾರ್ಗಗಳು ತಯಾರಾಗುವವು, ಕೋರ್ಟು ಕಚೇರಿಗಳಲ್ಲಿ ನ್ಯಾಯಗಳು ತೀರ್ಮಾನಿಸಲ್ಪಡುವವು. ಆದರೆ ಸರ್ ಪೊನ್ನಂಬಲಂ ಇವರ ಅಂಬೋಣವು "ಸಿಲೋನಿಗೆ ಒಳ್ಳೆ ಇಷ್ಟೆ ಸಂಗತಿಗಳಿದ್ದರೆ ಸಾಲದು, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಮಾನ್ಯತೆಯನ್ನು ಪಡದು ಸಿಲೋನ ದೇಶವು ತನ್ನ ಕಾಲಿನ ಮೇಲೆ ತಾನು ನಿಂತುಕೊಳ್ಳಬೇಕೆಂದು ಬಯಸಿದರೆ ಅದಕ್ಕೆ ಮೇಲೆ ತೋರಿಸಿದವುಗಳಿಗಿಂತಲೂ ಹೆಚ್ಚಿನ ಯೋಗ್ಯತೆಯ ಸುಧಾರಣೆಗಳು ಅವಶ್ಯ ಇವೆ." ಎಂದಿರುವರು. "ಬ್ಯುರೋಕ್ರಸಿಯ ಎಂದರೆ ಅಧಿಕಾರಿ ಮಂಡಲದ ಲಾಲನೆಯಲ್ಲಿ ಬಿದ್ದಿರುವುದರಿಂದ ನಾವು ನಮ್ಮ ಸಾಮರ್ಥ್ಯ ಮತ್ತು ಜವಾಬದಾರಿಕೆಗಳನ್ನು ತಿಳಿಯಲಾರೆವು. ನಮ್ಮ ಜೀವನವು ಹೀನ ತರದ ವಾತಾವರಣದಲ್ಲಿ ಸಾಗುತ್ತಿದೆ. ಇದರಿಂದ ನಾವು ಮನುಷ್ಯನು ಏರಬೇಕಾದ ಉಚ್ಚಸ್ಥಿತಿಗೆ ಮುಟ್ಟೇವೆಂದು ಹೇಳಲಾಗದು. ನಾವು ದುರ್ಬಲರೂ, ಹೀನರೂ ಎಂಬ ಅಜ್ಞಾನದ ಮಾಯೆಯು ನಮ್ಮನ್ನು ಬಡೆದಿದೆ. (ಈ ಅಜ್ಞಾನವೆಂಬ ಮಾಯೆಗಿಂತ) ದೊಡ್ಡದಾದ ವಿಪತ್ತು ಮನುಷ್ಯನನ್ನು ಆಕ್ರಮಿಸಲಾರದು. ನಾವು ನಮ್ಮ ಆತ್ಮವಿಶ್ವಾಸವನ್ನು (self confidence) ತಿರುಗಿ ಸಂಪಾದಿಸಬೇಕು." ಸಿಲೋನಿನ ದೇಶಸ್ಥಿತಿಯ ಕುರಿತು ಪೊನ್ನಂಬಲಂರು ಈ ತರದ ಆಲೋಚನೆಗಳನ್ನು ತಮ್ಮ ಉಪನ್ಯಾಸದಲ್ಲಿ ಸ್ಪಷ್ಟಪಡಿಸಿದ್ದಾರೆ.

ಮೇಲೆ ಹೇಳಿದಂತೆ ದೇಶಸ್ಥಿತಿಯ ವಿಷಯದಲ್ಲಿ ತಮ್ಮ ವಿಚಾರಗಳನ್ನು ಮುಂದಿಟ್ಟು ಬಳಿಕ ಅವರು ಅಲ್ಲಿಯ ಕಾಯಿದೆ ಕೌನ್ಸಿಲಿನ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿರುವರು. 'ಸರಕಾರವು ಒಂದು ವಿವಕ್ಷಿತ ಸಂಗತಿಯನ್ನು ಸಾಧಿಸುವ ಆಲೋಚನೆಯನ್ನು ಮಾಡಿದ್ದಾದರೆ ಕಾಯಿದೆ ಕೌನ್ಸಿಲಿನೊಳಗೆ ಸರಕಾರಿ ಬಹುಮತವಿರುವುದರಿಂದ ಅರ್ಥಾತ್ ಲೋಕಮತದ ಸ್ವರೂಪವು ಪರಿಣಾಮಕಾರಕವಾಗದಿರುವುದರಿಂದ ಕಿಂಬಹುನಾ ಲೋಕಮತವು ಪರಿಣಾಮಜನಕವಾಗುವ ತನಕ ಅದಕ್ಕೆ ಆ ವಿವಕ್ಷಿತ ಸಂಗತಿಯನ್ನು ಸುಲಭದಿಂದ ಸಾಧಿಸಬಹುದಾಗುತ್ತದೆ. ಕೌನ್ಸಿಲಿನ ಈಗಿನ ರಚನೆಯಿಂದ ಉಪಯುಕ್ತವಾದ ಕಾರ್ಯವನ್ನು ಅಪೇಕ್ಷಿಸುವುದು ಅಸಾಧ್ಯವು. ಇದರಿಂದ ಕೆಲವು ದಿನ ಸರಕಾರಿ ಮೆಂಬರುಗಳಿಗೆ ಪ್ರತಿಷ್ಠೆಯನ್ನು ಹೊಂದಲು ಒಂದು ಸಂದರ್ಭವು ಸಿಕ್ಕಿ ಅದು ಅವರ ವಕ್ತೃತ್ವಕ್ಕೆ ಅಥವಾ ಮೌನಕ್ಕೆ ಒಂದು ರಂಗಭೂಮಿಯೆ ಆಗಿದೆಂಬುದಕ್ಕೇನೂ ಸಂದೇಹವೆ ಇಲ್ಲ. ಇಂಥ ನ್ಯಾಯವಿಧಾಯಕ ಸಭೆಗಳು ಬರಿ ಆಲೋಚಕ ಮಂಡಲಗಳಲ್ಲದೆ ಹೆಚ್ಚಿನ ಯೋಗ್ಯತೆಯವುಗಳಲ್ಲ. ಈ ಕೌನ್ಸಿಲುಗಳ ನವದಂಡ [illegible] ಬರಿ ಹೊದಿಕೆಯನ್ನು ಹಾಕಬಹುದಷ್ಟೆ.' ಈ ರೀತಿಯಿಂದ ಪೊನ್ನಂಬಲಂ ಇವರು ಈಗಿನ ಸಿಲೋನ ರಾಜ್ಯಭಾರದ ವರ್ಣನೆಯನ್ನು ಕೊಟ್ಟು ಅದರಲ್ಲಿ 'ಲೋಕಮತದ ದೃಷ್ಟಿಯಿಂದ ಯಾವ ಯಾವ ಸುಧಾರಣೆಗಳಾಗಬೇಕಾಗಿವೆಂಬದನ್ನು ನಿರ್ದೇಶಿಸಿ ಕೆಲವು ಉಪಾಯಗಳನ್ನು ಸೂಚಿಸಿರುವರು. ಅವರು ಹೇಳಿರುವ ಸುಧಾರಣೆಯ ಸ್ವರೂಪವು ಸ್ವರಾಜ್ಯ ತತ್ವವನ್ನೆ ಅಧರಿಸಿಕೊಂಡಿದ್ದು ಅದನ್ನು ಸಾಧಿಸುವುದಕ್ಕಾಗಿ ಇಡೀ ವರ್ಷದಲ್ಲಿ ಸತತ ಕೆಲಸ ಮಾಡುವಂಥ "ಸಿಲೋನ್-ಸುಧಾರಣಾ-ಸಂಘ"ವನ್ನು ಸ್ಥಾಪಿಸಲು ಸೂಚಿಸಿದ್ದಾರೆ. ಮಾತ್ರವಲ್ಲ; ಇಂಗ್ಲಂಡಿನಲ್ಲಿ ಹೋಗಿ ಅಲ್ಲಿಯು ಲೋಕಮತದಲ್ಲಿ ಸಿಲೋನಿನ ರಾಜ್ಯಭಾರದ ಕುರಿತು ಎಚ್ಚರವನ್ನು ಹುಟ್ಟಿಸುವುದು ಆಗತ್ಯವೆಂಬುದನ್ನೂ ಕೂಡ ಸರ್ ಪೊನ್ನಂಬಲಂರು ಹೇಳಿದ್ದಾರೆ.

ಸಾರಾಂಶ ಸದ್ಯದ ದಿವಸಗಳಲ್ಲಿ ರಾಜಕೀಯ ವಿಷಯದ ಕುರಿತು ಯಾವ ಯಾವ ಸುಧಾರಣೆಗಳನ್ನು ಹಿಂದೂಸ್ಥಾನವು ಅಪೇಕ್ಷಿಸಿಕೊಂಡಿರುವುದೊ ಅವುಗಳನ್ನು ಈಗ ಸಿಲೋನವು ಸಹ ಬಯಸಹತ್ತಿದೆ. ಭರತಖಂಡವಾದರೇನಾಯಿತು, ಸಿಂಹಲದ್ವೀಪವಾದರೇನಾಯಿತು, ಬರೆ ಇವೆರಡೆ ಈ ಸುಧಾರಣೆಗಳನ್ನು ಕೇಳುತ್ತಿವೆಂದಲ್ಲ, ಲೋಕದಲ್ಲಿ ಈಗ ಎಲ್ಲ ರಾಷ್ಟ್ರಗಳಿಗೆ "ಸ್ವರಾಜ್ಯ"ವೇ ಧ್ಯೇಯವಾಗಿದೆ. ಈಗಿನ ಕಾಲದಲ್ಲಿ ಸ್ವರಾಜ್ಯದ ಪ್ರವಾಹವು ಲೋಕತುಂಬಾ ಹರಿದುಕೊಂಡು ಹೋಗುವಾಗ ಆ ಗಂಗೆಯಲ್ಲಿ ಹಿಂದುಸ್ಥಾನ ಅಥವಾ ಸಿಲೋನಿನಂಥ ರಾಷ್ಟ್ರಗಳು ಅವಗಾಹನೆಯನ್ನು ಮಾಡದೆ ಹ್ಯಾಗೆ ಇದ್ದಾವು? ನಾವು ಮೇಲಿನ ಕಥೆಯಲ್ಲಿ ತೋರಿಸಿದಂತೆ ಅಥವಾ ಪೌರಾಣಿಕ ದೃಷ್ಟಾಂತಗಳಲ್ಲಿ ಉದಹರಿಸಿದಂತೆ ಒಮ್ಮೆ ಉತ್ಕೃಷ್ಟ ವಸ್ತುವಿನ ಜ್ಞಾನವುಂಟಾದಲ್ಲಿ ಅದನ್ನು ಯಾರು ತಾನೆ ಗುರಿಯಾಗಿಟ್ಟುಕೊಳ್ಳದೆ ಇರುವರು? ಸ್ವರಾಜ್ಯವೆಂಬ ಹೆಸರು ಕೇಳಿದ ಕೂಡಲೆ ಕೆಲವು ಅಧಿಕಾರಿಗಳಿಗೆ ವೃಥಾ ಭಯವು ಬಂದು ಹೋಗುವುದುಂಟು. ಆದುದರಿಂದ ಹಿಂದೂಸ್ಥಾನದಂತೆ ಸಿಲೋನಾದರೂ ಕೇಳುವ ಸ್ವರಾಜ್ಯವು ಪೂರ್ಣ ಸ್ವಾತಂತ್ರ್ಯವಲ್ಲ, ಬ್ರಿಟಿಷ್ ಸಾಮ್ರಾಜ್ಯಾಂತರ್ಗದ ಸ್ವರಾಜ್ಯವೆ ನಮ್ಮಂತೆ ಅವರ ಗುರಿಯೂ ಆಗಿದೆ. ಬ್ರಿಟಿಷರ ಆ ದೇದೀಪ್ಯಮಾನವಾದ ಸಾಮ್ರಾಜ್ಯ ಛತ್ರವು ಹಿಂದೂಸ್ಥಾನದ ತಲೆಯ ಮೇಲೆ ಅವಶ್ಯವಾಗಿ ಬೇಕು. ಆದರೆ ಒಳಗಿನ ಕಾರಭಾರದ ಮಟ್ಟಿಗೆ ಕೆಲವು ಹೆಚ್ಚಿನ ಸುಧಾರಣೆಗಳು ಅವಶ್ಯವಾಗಿವೆ. ಇಷ್ಟೆ ಹಿಂದುಸ್ಥಾನದ ಮುಖಂಡರ ಹೇಳಿಕೆಯು, ದೇಶದ ಆಕಾಂಕ್ಷೆಯು. ಸಿಲೋನಾದರೂ ಹೇಳುವುದು ಇಷ್ಟೆ.

ಸ್ಫುಟವಿಚಾರಗಳು.

೧. ಈ ಯುದ್ಧದ ಕೋಲಾಹಲದಲ್ಲಿಯೆ ಐರ್ಲಾಂಡಿಗೆ ಹೋಮ್‌ರೂಲು ಸಿಗುವ ಸಂದರ್ಭ ಮಾತ್ರವಲ್ಲ, ಅದಕ್ಕೆ ಬೇಕಾದ ಏರ್ಪಾಟುಗಳು ಸಹ ಆಗುತ್ತಲಿವೆ ಎಂಬ ಸಂಗತಿಯನ್ನು ಕಳೆದ ಸಂಚಿಕೆಯಲ್ಲಿ ತೋರಿಸಿರುವೆವಷ್ಟೆ. ಇದೇ ಯುದ್ಧದ ಪರ್ವಣಿಯಲ್ಲಿ ಐರಿಷ್ ಹೋಮ್‌ರೂಲಿನಂತೆಯೆ ವಿಲಾಯತಿಯೊಳಗಿನ ಸ್ತ್ರೀಯರಿಗೆ ವೋಟು (ಮತ) ಕೊಡುವ ಹಕ್ಕು ಲಭಿಸೀತೆಂದು ಹೇಳಬಹುದಾಗಿದೆ. ಈ ವಿಷಯದಲ್ಲಿ ಪ್ರಧಾನ ಮಂಡಲಿಯವರು ತಮ್ಮ ಯೋಜನೆಯನ್ನು ಸಾಧಾರಣವಾಗಿ ಎಲ್ಲ ಪಕ್ಷದವರ ಸಮ್ಮತಿಯಿಂದ ನಿಶ್ಚಯಿಸಿಕೊಂಡು ಅಲ್ಲಿಯ ಮತಾಭಿಲಾಷಿಣಿ ಸ್ತ್ರೀಯರು ಇಷ್ಟರ ವರೆಗೆ ಕೇಳಿಕೊಂಡಿದ್ದ ಹಕ್ಕನ್ನು—ಪಾರ್ಲಿಮೆಂಟಿನ ಚುನಾವಣೆಯಲ್ಲಿ ಸ್ತ್ರೀಯರಿಗೂ ಮತ ಕೊಡುವ ಹಕ್ಕು—ಪಾರ್ಲಿಮೆಂಟು ಈಗ ಕೊಟ್ಟೀತೆಂದು ಹೇಳಿರುವರು. ಮಾಜಿ ಮುಖ್ಯ ಮಂತ್ರಿಗಳಾದ ಮಿ. ಎಸ್‌ಕ್ವಿಥರು ಸ್ತ್ರೀಯರ ಮತವಾದಿತ್ವಕ್ಕೆ ಪ್ರತಿಕೂಲರಾಗಿದ್ದದು ಸುಪ್ರಸಿದ್ಧವಷ್ಟೆ. ಆದರೂ ಅವರೆ ಸ್ತ್ರೀಯರಿಗೆ ಈ ರಾಜಕೀಯ ಹಕ್ಕನ್ನು ಕೊಡಬೇಕೆಂಬ ಒಂದು ಠರಾವನ್ನು ಪಾರ್ಲಿಮೆಂಟಿನಲ್ಲಿ ತಂದರು; ಮತ್ತು ಅದನ್ನು ಈಗಿನ ಮಂತ್ರಿಗಳಾದ ಮಿ. ಲೊಯ್ಡ್ ಜೊರ್ಜರು ಆದರಪೂರ್ವಕ ಸ್ವೀಕರಿಸಿದರು! ಈ ಮತಾಭಿಲಾಷಿಣಿ ಸ್ತ್ರೀಯರ ಕೆಲವು ವರ್ಷಗಳ ಹಿಂದಿನ ಚರಿತ್ರೆಯನ್ನು ನೋಡಿದರೆ ಆಗ ಅವರು ಅಲ್ಲಿಯ ಪ್ರತಿಷ್ಠಿತ ಮುತ್ಸದಿಗಳ ಮನೆ ಕಿಡಿಕಿಗಳನ್ನು ಒಡೆಯುತ್ತಿದ್ದರು; ತಮ್ಮ ಆಕಾಂಕ್ಷೆಗೆ ವಿರೋಧಿಗಳಾದವರ ಮೈಮೇಲೆ ಕೊಳಕು ತತ್ತಿಗಳನ್ನು ಬಿಸಾಡುತ್ತಿದ್ದರು. ಇಷ್ಟೆ ಅಲ್ಲ, ಇಂಥ ಅನೇಕ ಅತ್ಯಾಚಾರಗಳನ್ನು ಕೈಕೊಂಡಿದ್ದರು. ಆದರೆ ಈ ಎಲ್ಲಾ ಅತ್ಯಾಚಾರಗಳ ಫಲವು ಅವರು ಲೋಕಮತವನ್ನು ತಮ್ಮ ಕಡೆಗೆ ಆಕರ್ಷಿಸಿಕೊಂಡಿದ್ದೆ ಆಗಿತ್ತು. ಬೇರೆ ಯಾವ ಪ್ರಯೋಜನವೂ ಆಗ ದೊರಕಲಿಲ್ಲ. ಪರಂತು ಈ ಮಹಾ ಯುದ್ಧವು ಸುರುವಾದಂದಿನಿಂದ ಇಂಗ್ಲಂಡಿನೊಳಗಿನ ಸ್ತ್ರೀ ವರ್ಗವು ಅನೇಕ ವಿಧದಿಂದ ಮದತು ಮಾಡಿದುದಕ್ಕಾಗಿ ಆ ವರ್ಗದ ರಾಜಕೀಯ ಹಕ್ಕಿನ ಸಂಬಂಧದಿಂದ ಈಗ ಆ ರಾಷ್ಟ್ರದಲ್ಲಿ ಸಹಾನುಭೂತಿಯು ಉದ್ಭವಿಸಿಯದೆ. ಹೀಗೆ ಸಹಾನುಭೂತಿಯು ಉದ್ಭವಿಸುವುದು ಸಹಜವೆ ಎನ್ನೋಣ. ಆದರೆ ಇದರಲ್ಲಿ ಆಶ್ಚರ್ಯಪಡಬೇಕಾದ ವಿಷಯವೇನೆಂದರೆ, ಸ್ತ್ರೀಯರು ಚಂಚಲ ಸ್ವಭಾವದವರು, ಅವರು ರಾಜಕೀಯ ಹಕ್ಕುಗಳಿಗೆ ಅರ್ಹರಲ್ಲೆಂದು ವಾದಿಸುತ್ತಿದ್ದ ಮಿ. ಎಸ್‌ಕ್ವಿಥರಂಥ ಗಂಡಸರು ಈಗ ತಾವೆ ಅವರ ಕಡೆಯಿಂದ ವಕೀಲತನವನ್ನು ನಡಿಸಿ ತಮ್ಮ ಸ್ವಭಾವದ ಅಸ್ಥಿರತ್ವವನ್ನು ತೋರಿಸುದಂತೆ ಮಾಡಿದರು! ಇದನ್ನು ಮಾತ್ರ ಎಲ್ಲರು [illegible] ಸಲ್ಲಿಟ್ಟುಕೊಳ್ಳತಕ್ಕದ್ದಾಗಿದೆ.

[illegible]

ರ್ಯರ ಡೆಪ್ಯುಟೇಶನಿನ ವಿಷಯವಾಗಿ ಒಂದು ಪ್ರಶ್ನೆಯನ್ನು ಕೇಳಿದರು. ಈ ಡೆಪ್ಯುಟೇಶನಿಗೆ ಅಸ್ಪೃಶ್ಯವರ್ಗದವರಿಗೆ ಮನೆಮಾರುಗಳಿಗೆ ಬೇಕಾದ ಸ್ಥಳಗಳನ್ನು ಹೇಗೆ ದೊರಕಿಸಿಕೊಡಬಹುದೆಂಬುವ ವಿಷಯ, ಮಾಹಿತಿಕೆಯನ್ನೆಂದು ಸರಕಾರಕ್ಕೆ ಸೂಚಿಸುವ ಕೆಲಸವಿತ್ತು. ಆದುದರಿಂದ ಈ ಡೆಪ್ಯುಟೇಶನಿನ ವಾರ್ತೆ ಏನೆಂಬುದಾಗಿ ಪೀಲ್ಕಂಡ ಮೆಂಬರರು ನ್ಯಾಯವಿಧಾಯಕ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಮಾಡಿದರು. ಇದಕ್ಕೆ ಸರಕಾರದ ಕಡೆಯಿಂದ ಉತ್ತರ ಕೊಡೋಣಾಯಿತೇನೆಂದರೆ, ಈ ಡೆಪ್ಯುಟೇಶನಿನಲ್ಲಿ ಎ. ಶ್ರೀ. ಇವರಿಗೆ ದೇಸಾಯಿ ಮತ್ತು ವೃತ್ತಿಗಳಿಂದ ಜೀವಿಸುವ ಬಡವರ ಸ್ಥಿತಿಗಳ ಹಾಗು ವೃತ್ತಿಗಳ ಸಂಪೂರ್ಣ ಮತ್ತು ಸಾಧಾರಣವಾದ ಮಾಹಿತಿಯನ್ನು ತಿಳಿದು ಆ ವಿಷಯವಾಗಿ ರಿಪೋರ್ಟು ಮಾಡಲು ಕೆಲಸ ಕೊಟ್ಟಿತ್ತು. ಹಾಗು ಈ ಸಂಸ್ಥಾನದ ನಿಬಿಡ ಪ್ರದೇಶಗಳಲ್ಲಿ ಹಳ್ಳಿಗಳನ್ನು ಎಲ್ಲಾ ತರದ ಜನರಿಗೆ ಅನುಕೂಲವಾಗುವಂತೆ ವಿಸ್ತರಿಸುವ ಬಗೆಯು ಹ್ಯಾಗೆ ಮುಂತಾದ ವಿಷಯದಲ್ಲಿ ಮಿ। ಶ್ರೀನಿವಾಸಾಚಾರ್ಯರು ರಿಪೋರ್ಟು ಬರೆದುಕೊಳ್ಳಬೇಕಿತ್ತು. ತಂಜಾವೂರ ಜಿಲ್ಲೆಯೊಳಗಿನ ಪಂಚಮರಿಗೆ ಮನೆಗಳು ಒದಗುವಂತೆ ಅಲ್ಲಿಯ ಕಲೆಕ್ಟರರು ಕೊಟ್ಟಿರುವ ವಿಶೇಷ ಸೂಚನೆಗಳ ವಿಷಯದಲ್ಲಿ ಶ್ರೀನಿವಾಸ ಆಚಾರ್ಯರಿಗೆ ತಮ್ಮ ಅಭಿಪ್ರಾಯವೇನೆಂಬುದಾಗಿ ಕೇಳಿತ್ತು. ಆದರೆ ಇಷ್ಟರ ವರೆಗೆ ಈ ರಿಪೋರ್ಟು ಸರಕಾರದ ಬಳಿಗೆ ಬರಲಿಲ್ಲವಾದರೂ ಇದಕ್ಕೆ ಸಂಬಂಧಪಟ್ಟ ಬೇರೆ ಕಾಗದ ಪತ್ರಗಳು ಪ್ರಸಿದ್ಧವಾಗಿದ್ದಾವೆ. ತಂಜಾವೂರಿನ ಕಲೆಕ್ಟರರ ಆಶಯವೇನೆಂದರೆ, ಪಂಚಮರಿಗಾಗಲಿ, ಬೇರೆ ಕೂಲಿವರ್ಗದವರಿಗಾಗಲಿ ಇತ್ತಲಾಗೆ ಸಂಬಳವು ಹೆಚ್ಚು ಸಿಗುತ್ತಿದ್ದರೂ ಅದನ್ನು ಅವರು ಕುಡಿಕತನದ ದುರ್ವ್ಯಸನದಲ್ಲಿ ಖರ್ಚು ಮಾಡುವರು. ಆದುದರಿಂದ ಹಣ ಅಥವಾ ಲಾಭವನ್ನುಳಿಸಿ ಸ್ಥಳವನ್ನು ಕೊಂಡುಕೊಳ್ಳುವುದು ಅವರಿಗೆ ಅಸಾಧ್ಯವಾಗುತ್ತದೆ. ಈ ಕಾರಣಗಳನ್ನು ಕೊಟ್ಟು ಕಲೆಕ್ಟರ ದೊರೆಗಳು ಮುಖ್ಯವಾದ ಕೆಲವು ಉಪಾಯಗಳನ್ನು ಸೂಚಿಸಿರುವರು. "ಸ್ಮಾಲ್ ಹೋಲ್ಡಿಂಗ ಎಕ್ಟಿನ"ಂಥ ಕೆಲವು ಕಾಯಿದೆಗಳನ್ನು ಮಾಡಿ ಪರಾಧೀನ ಮಾಡಕೂಡದೆಂಬ ಶರ್ತದಿಂದ ಸ್ಥಳವನ್ನು ಪಡೆಯಲು ಪಂಚಮರಿಗೆ ಸಹಾಯ್ಯ ಮಾಡಿದರೆ ಅದರಿಂದ ಪಂಚಮರ ಕೈಯಲ್ಲಿ ಹಣವು ಅಲ್ಪಸ್ವಲ್ಪ ಉಳಿಯಬಹುದು. ಮನೆ ಜಾಗೆಗಳನ್ನು ಕೊಂಡುಕೊಳ್ಳುವುದಕ್ಕಾಗಿ ಅವರಲ್ಲಿಯೆ ಸಹಕಾರ ಸಂಘವಿರುವುದು ಅಗತ್ಯವೆಂತಲೂ ಕಲೆಕ್ಟರರು ಅಭಿಪ್ರಾಯಪಡುತ್ತಾರೆ.

೩. ಇದೆ ವಿಷಯದಲ್ಲಿ ದಕ್ಷಿಣ ಕನ್ನಡದ ಮಾಜಿ ಕಲೆಕ್ಟರರಾದ ಬಹುಮಾನಪಟ್ಟ ಎ. ಕೌಚಮನ ದೊರೆಗಳು ಬೇರೆ ತರದ ಉಪಾಯಗಳನ್ನು ಸೂಚಿಸಿರುವರು. ಜಮೀನುದಾರರಿಗೆ ಪಂಚಮರಿಗಾಗಿ ಸ್ಥಳಗಳನ್ನು ಕೊಂಡು ಮನೆಗಳನ್ನು ಕಟ್ಟಿಸಿ ಕೊಡಲು ಸೂಚಿಸಿದ್ದಲ್ಲಿಯೂ ಅವರು ತಕ್ಕ ಗಮನವನ್ನು ಕೊಡದೆ ಇದ್ದರೆ ಲೋಕಲ್ ಬೋರ್ಡುಗಳಿಗೆ ಈ ಬಗ್ಗೆ ಕಂದಾಯವನ್ನು ವಸೂಲು ಮಾಡಲು ಸಂದರ್ಭ ಕೊಡತಕ್ಕದ್ದು. ಜಮೀನದಾರರ ಅಲಕ್ಷ್ಯಭಾವದ ಪ್ರಾಯಶ್ಚಿತ್ತವು ಸಾಮಾನ್ಯ ತೀರ್ವೆಯವರಿಗೆ ಸಿಗುವಂತೆ ಮಾಡುವುದು ಯುಕ್ತವಲ್ಲ." ಸರಕಾರವು ಈ ವಿಷಯದಲ್ಲಿ ಶ್ರೀನಿವಾಸಾಚಾರ್ಯರನ್ನು ಟೆಂಜೂರ ಡಿಸ್ಟ್ರಿಕ್ಟಿಗೆ ಕಳುಹಿಸಿ ಎ. ಕೌಚಮನ್ ಮತ್ತು ಎ. ವುಡ್ ಈ ಇಬ್ಬರು ಪಟ್ಟ ಅಭಿಪ್ರಾಯದ ಬಗ್ಗೆ ತನಿಖಿ ಮಾಡಿ ಅದನ್ನು ರಿಪೋರ್ಟು ದ್ವಾರಾ ಸರಕಾರದ ಮುಂದಿಡಲು ಹೇಳಿಯದೆ. ಈ ಪ್ರಶ್ನೆಯು ವಿಚಾರಣೀಯವಾದುದೆಂಬುದಕ್ಕೆ ಸಂದೇಹವಿಲ್ಲ. ಆದರೆ ತಂಜಾವೂರ ಜಿಲ್ಲಾ ಕಲೆಕ್ಟರರು ಅಭಿಪ್ರಾಯಪಡುವಂತೆ ಪಂಚಮರಂಥ ಅಸ್ಪೃಶ್ಯವರ್ಗದವರು "ಮಿರಾಸದಾರ"ರ ಕೈವಶರಾಗಿದ್ದುದರಿಂದ ಅವರ ವಿಮೋಚನೆಗೆ ಕಾಯಿದೆಗಳ ಆಶ್ರಯವನ್ನು ತೆಕ್ಕೊಳ್ಳುವುದೆ ಯುಕ್ತವೆಂದು ನಮಗನಕ ತೋರದು. ಪಾಶ್ಚಾತ್ಯ ದೇಶಗಳಲ್ಲಿ ಕೂಲಿ ಅಥವಾ ಅವರಿಗಿಂತಲೂ ಕೆಳಗಿನವರಿಗಿರುವ ಬಂಧನಗಳು ಈ ದೇಶದಲ್ಲಿಲ್ಲಾದುದರಿಂದ ಇದಕ್ಕೆ ಕಾಯಿದೆಯ ಆಶ್ರಯವೆ ಬೇಕೆಂದು ವಾದಿಸುವುದು ನಮ್ಮಿಂದಾದುದಲ್ಲ!

೪. ನಮ್ಮ ಮದ್ರಾಸ ಸಂಸ್ಥಾನದ ಈ ಸಾರಿಯ ಅಧಿವೇಶನವು ಈ ತಿಂಗಳ ತಾ. ೫ರಲ್ಲಿ ಅಂತ್ಯವಾಯಿತು. ಈ ಅಧಿವೇಶನದ ನಾಲ್ಕು ದಿವಸಗಳಲ್ಲಿ ಅನೇಕ ಮಹತ್ವದ ವಿಷಯಗಳು ಚರ್ಚಿಸೋಣಾದವು. ಕೌನ್ಸಿಲಿನ ಕಾರ್ಯಕ್ರಮದ ವಿಷಯದಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಬಂದಿರುವ ಸೂಚನೆಯು, ನಾಮ. ಮೆಂಬರುಗಳಿಗೆ ಆ ವಿಷಯದಲ್ಲಿ ಆಲೋಚಿಸಲು ಸಾಕಷ್ಟು ಅವಕಾಶವಿಲ್ಲೆಂದು ಮುಂದರಿಸೋಣಾಯಿತು. ಈ ಸಾರಿಯ ಅಧಿವೇಶನದ ಗೋಷವಾರಿಯನ್ನು ಕೊಡುವುದಾದರೆ ಅದನ್ನು ಒಂದೆರಡೆ ಮಾತುಗಳಿಂದ ತಿಳಿಸಬಹುದು. ಈ ಅಧಿವೇಶನದ ಸೂಚನಾಪತ್ರದಲ್ಲಿ ಮೂವತ್ತಾರು ಠರಾವುಗಳಿಗೆ ಎಡೆಯಿತ್ತು. ಅವುಗಳಲ್ಲಿ ೧೨ ಠರಾವುಗಳು ಸ್ವಲ್ಪ ಚರ್ಚೆಯ ಅನಂತರ ಸಭಾಸದರಿಂದ ಹಿಂದೆ ತೆಕ್ಕೊಳ್ಳಲ್ಪಟ್ಟವು; ಮೂರು ಠರಾವುಗಳನ್ನು ಸ್ವರೂಪಾಂತರದಿಂದ ಸರಕಾರವು ಸ್ವೀಕರಿಸಿತು; ಹನ್ನೆರಡು ಕೌನ್ಸಿಲಿನಿಂದ ನಿರಾಕರಿಸಲ್ಪಟ್ಟವು; ಮತ್ತು ಬಾಕಿ ಉಳಿದ ಒಂಬತ್ತು ವೇಳೆಯಿಲ್ಲಾದುದರಿಂದ ಮುಂದರಿಸಲ್ಪಟ್ಟವು. ಇದು ಮೊನ್ನೆಯ ಅಧಿವೇಶನದ ಸಂಕ್ಷಿಪ್ತವಾದ ರೂಪರೇಷೆಯು. ಈ ಸಾರಿ ನಡೆದ ಮಹತ್ವದ ಪ್ರಸ್ತಾಪಗಳ ಕುರಿತು ನಾವು ಕಳೆದ ಸಂಚಿಕೆಯಲ್ಲಿ ನಮ್ಮ ಅಭಿಪ್ರಾಯವನ್ನು ವಾಚಕರ ಮುಂದಿಟ್ಟಿದ್ದೇವೆ. ಮದ್ರಾಸಿನ ಹಿಂದು ಪತ್ರಕಾರರು ಅಭಿಪ್ರಾಯಪಟ್ಟಂತೆ ಒಂದು ಮಾತನ್ನು ಹೇಳುವುದು ಅನುಚಿತವಾಗಲಾರದು. ಕೌನ್ಸಿಲಿನಲ್ಲಿ ಒಂದು ಠರಾವು ಬಂದರೆ ಬಿನ್-ಸರಕಾರಿ ಮೆಂಬರುಗಳ ಬಹುಮತವಿದ್ದರೂ ಅದು ಸರಕಾರದ ಕಡೆಯಿಂದ ಅಸ್ವೀಕೃತವಾಗದೆ ಸಾಗುವುದು ಬಹು ವಿರಳ. [illegible] ಒಂದು [illegible]

[illegible]

ನಡೆಯತಕ್ಕದ್ದರ ವಸ್ತುಸ್ಥಿತಿಯಿದು. ಆದರೂ ಈಗಿನ ಕೌನ್ಸಿಲುಗಳಲ್ಲಿ ಲೋಕಮತದ ಸಭಾಸದರು ಸ್ವಲ್ಪ ಮಟ್ಟಿಗೆ ತಮ್ಮ ಮತ ಸ್ವಾತಂತ್ರ್ಯವನ್ನು, ವಾದವಿವಾದದ ಕೌಶಲ್ಯವನ್ನೂ ತೋರಿಸಿ ಅಧ್ಯಕ್ಷರ ಕೈಯಿಂದಷ್ಟು ಹೆಚ್ಚಿನ ಸಮಯವನ್ನು ಉಪಯೋಗಿಸಿಕೊಳ್ಳಬಹುದು. ಈಗಿರುವ ಕೌನ್ಸಿಲುಗಳಿಂದ ನಮಗಿಷ್ಟವಿರುವ ಸುಧಾರಣೆಗಳಾಗುವುದು ಪ್ರಯಾಸಕರವೆಂದು ತೋರಿದರೂ ಮುಂದೆ ಮಾರ್ಪಾಡಾಗಲಿಕ್ಕಿದ್ದ ಕೌನ್ಸಿಲುಗಳಿಂದಲಾದರೂ ಇದು ಸಾಧ್ಯವಾದೀತೆಂದು ನಮ್ಮ ದೃಢ ನಂಬಿಕೆಯು.

೫. ಬೆಂಗಳೂರು ಕರ್ಣಾಟಕ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಲ್ಲಿ ಆಗಬೇಕಾದ ತಿದ್ದುಪಡಿಗಳ ವಿಷಯವಾಗಿಯೂ, ಈ ಸಾರಿಯ ಸಮ್ಮೇಳನಕ್ಕೆ ಯಾರೊಬ್ಬ ಹೊಸ ಅಧ್ಯಕ್ಷರನ್ನು ಇಟ್ಟುಕೊಳ್ಳಬೇಕೆಂದು ಸೂಚಿಸಿಯೂ ನಮ್ಮ ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಪರಿಷತ್ತಿನ ಅಭಿಮಾನಿಗಳಾದ ವಾಚಕರು ನೋಡದಿರಲಾರರು. ಪರಿಷತ್ತಿನ ಮುಂದಿನ ಸಮ್ಮೇಳನವು ಬರುವ ಜೂನ್ ೮ನೇ ತಾರೀಖಿನಿಂದ ಮೂರು ದಿನ ಮೈಸೂರಲ್ಲಿ ನಡೆಯುವುದೆಂದೂ, ಬಹುಶಃ ಮ। ನಂಜುಂಡಯ್ಯನವರೇ ಈ ಸಾರೆಯೂ ಅಧ್ಯಕ್ಷರಾಗುವವರೆಂದೂ ಇತ್ತಲಾಗೆ ನಮ್ಮ ಕೈ ಸೇರಿರುವ ವಾಗ್ಭೂಷಣದ ಮಾರ್ಚ ಸಂಚಿಕೆಯಿಂದ ತಿಳಿದುಬರುತ್ತದೆ. ಕನ್ನಡಿಗರ ಸಮ್ಮೇಳನವು ಮೈಸೂರು "ಸರಕಾರಕ್ಕೆ ಸೇರಿದ ಒಂದು ಮುಖ್ಯ ಶಾಖೆ"ಯಂತಿರುವುದೆಂದೂ, ಮ। ನಂಜುಂಡಯ್ಯನವರನ್ನೇ "ಪ್ರತಿಯೊಂದು ಸಾರಿ ಅಧ್ಯಕ್ಷರನ್ನಾಗಿ ನೇಮಿಸುವುದರಿಂದ ಏನು ಪ್ರಯೋಜನವೋ ಕಾಣೆವು" ಎಂದೂ ಸಮ್ಮೇಳನಕ್ಕೆ ಬೇಸಿಗೆಯ ರಜೆಯೆಲ್ಲವೂ ಮುಗಿದು ಜನರು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿರುವ ಕಾಲವನ್ನು ನೇಮಿಸುವುದರ ಗುಟ್ಟು ಏನೋ ನಮಗೆ ತಿಳಿಯದಾಗಿದೆ"ಯೆಂದೂ "ತಾರೀಖನ್ನು ಬೇಗನೆ ಬದಲಾಯಿಸದಿದ್ದ ಪಕ್ಷಕ್ಕೆ ಬಹು ಜನರಿಗೆ ಇತ್ತ ಕಡೆಯ ಭಾಗದಿಂದ ಬರಲು ತುಂಬ ಅನನುಕೂಲವಾಗುವುದು" ಎಂದೂ, "ಸಮ್ಮೇಳವಲ್ಲಿ ಇಷ್ಟವಾದ ಮತ್ತು ಹಿತವಾದ ಮಾರ್ಪಾಡುಗಳನ್ನು ಕ್ಷಿಪ್ರದಲ್ಲಿಯೇ ಮಾಡದಿದ್ದರೆ ಸಮ್ಮೇಳನವು ಸಂಪುಷ್ಟದಲ್ಲಿ ಬಾರದೇ ಇರಲಾರದು" ಎಂದೂ ವಾಗ್ಭೂಷಣದ ಸಂಪಾದಕರು ನಿರ್ದಾಕ್ಷಿಣ್ಯವಾಗಿ "ಸಾರಿ ಸಾರಿ" ಹೇಳಿರುವರು. ಇದಕ್ಕೂ ತೀವ್ರವಾದ ವಾಕ್ಯಗಳಿಂದ ಬರೆಯಲು ನಾವು ಇಷ್ಟಪಡುವುದಿಲ್ಲ. ತಥಾಪಿ, ಇದರ ದೆಸೆಯಿಂದ ಧಾರವಾಡ ಪ್ರಾಂತ್ಯದ ಕನ್ನಡಿಗರೊಳಗೆ ಎಷ್ಟು ಕ್ಷೋಭವುಂಟಾಗಿದೆಯೋ ಎಂಬದನ್ನು ವಾಗ್ಭೂಷಣದ ಈ ಸಂಚಿಕೆಯನ್ನೇ ನೋಡಿ ನಮ್ಮ ವಾಚಕರು ತಿಳಿಯಬಹುದಾಗಿದೆ. ನಮ್ಮಲ್ಲಿಗೂ ಇದೇ ಆಶಯದ ಹಲವು ಲೇಖನಗಳು ಬಂದಿರುವುವು. ಧಾರವಾಡದವರ ಆಕ್ಷೇಪಣೆಯು ಮಂಗಳೂರು ಪ್ರಾಂತ್ಯದವರಿಗೂ ಸರ್ವತೋಪರಿ ಸಮ್ಮತವಾಗಿದೆ. ಆದುದರಿಂದ ಸಾಹಿತ್ಯ ಪರಿಷತ್ತಿನ ಅಧಿಕಾರಿಗಳು ಈ ಅನನುಕೂಲತೆಗಳನ್ನು ಕೂಡಲೇ ಪರಿಹರಿಸಿ ಸಮ್ಮೇಳನವು ಚೆನ್ನಾಗಿ ನಡೆಯಲು ಬೇಕಾದ ಯಾವತ್ತು ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಸೂಚಿಸುವೆವು.

೬. ಬೆಂಗಳೂರಿನ ರಾ। ಎಮ್. ಎಸ್. ಪುಟ್ಟಣ್ಣ ಬಿ. ಎ. ಯವರು ಅಡಕೆ ಹಾಲು ಅಂದರೇನು ಮತ್ತು ಅದರ ಉಪಯೋಗವೇನೆಂಬುದನ್ನು ಸೂಚಿಸಿ ಒಂದು ಲೇಖವನ್ನು ಕಳೆದ ತಾ. ೭ನೆಯ ಅರ್ಥಸಾಧಕ ಪತ್ರಿಕೆಗೆ ಬರೆದಿರುವರು. "ಅಡಕೆಕಾಯಿ ಮೇಲಿನ ಸಿಪ್ಪೆಯನ್ನು ಒಡೆದು ಒಳಗಿನ ಪಪ್ಪನ್ನು ತೆಗೆಯುತ್ತಾರೆ. ಈ ಪಪ್ಪನ್ನು ಸೀಳಿ ನೀರಿನಲ್ಲಿ ಬೇಯಿಸಿ ಹದವರಿತು ಅದನ್ನು ತೆಗೆದು ನೆರಳಿನಲ್ಲಿ ಒಣಗ ಹಾಕಿ ತರುವಾಯ ತುಂಬಿ ಇರಿಸತಕ್ಕದ್ದನ್ನು ಎಲ್ಲರೂ ಬಲ್ಲರು. ಆದರೆ ಇದನ್ನು ಬೇಯಿಸಿದ ನೀರು ಗಂಜಿಯಂತೆ ಮಂದವಾಗಿರುವದು. ಇದು ಮಾಸಲವರ್ಣದ ಕೆಂಪು ಛಾಯವಾಗಿರುವುದು. ಇದನ್ನು ಅಡಕೆಯ ಹಾಲು ಅನ್ನುವರು. ಇದರಲ್ಲಿ ಉತ್ತಮವಾದ ಮೈಲು ಕೋರಬಣ್ಣವಾಗುವದು. ಚಿತ್ರದುರ್ಗದ ಡಿಸ್ಟ್ರಿಕ್ಟಿನ ಕೆಲವು ಪ್ರಾಂತ್ಯಗಳಲ್ಲಿ ಅಡಕೆಯನ್ನು ಬೇಯಿಸಿ ಬಂದ ಹಾಲಿನಲ್ಲಿ ರೈತರೂ ಇತರ ಜನರೂ ತಮ್ಮ ದುಪ್ಪಟಿಗಳನ್ನು ಅದ್ದಿಸುತ್ತಾರೆ. ಒಂದು ಸಾರಿ ಅದ್ದಿದರೆ ಬಟ್ಟೆಗೆ ಬಣ್ಣವು ಸಾಧಾರಣವಾಗಿ ಅಂಟುವದು. ಎರಡು ಯಾ ಮೂರು ಸಾರಿ ಅದ್ದಿದರೆ ಬಟ್ಟೆಗೆ ಒಳ್ಳೆಯ ರಂಗುಬಂದು ಲಕ್ಷಣವಾಗಿ ಕಾಣಿಸುವದು. ಅಡಕೆಯ ಹಾಲಿನಲ್ಲಿ ಒಗರು ಇರುವ ಕಾರಣ ಬಣ್ಣ ಗಟ್ಟಿಯಾಗಿ ನಿಲ್ಲುವದು. ಅಡಕೆಯ ಹಾಲನ್ನು ಮಣೆಯ ಮೇಲೋ ಬಟ್ಟೆಯ ಮೇಲೋ ಮಂದಮಾಡಿ ಹೊಯಿದು ಒಣಗಿಸಿ ಬಿಲ್ಲೆಗಳನ್ನು ಮಾಡಿ ಇರಿಸಿಕೊಂಡಿದ್ದು ಇತರ ಬಣ್ಣಗಳ ಸಂಗಡ ಹದವನ್ನು ಕಂಡು ಈ ಬಿಲ್ಲೆಗಳನ್ನು ಹಾಕಿ ಮಿಶ್ರ ಮಾಡಿ ಬಣ್ಣವನ್ನು ಬಟ್ಟೆಗೆ ಹಾಕಿದರೆ ಗಟ್ಟಿಬಣ್ಣವಾಗುವುದು." ಈ ಜಿಲ್ಲೆಯ ಹಲವು ಪ್ರಾಂತ್ಯಗಳಲ್ಲಿ ಅಡಕೆಯ ಬೆಳೆಯು ಬಹಳವಾಗಿದೆ. ಯುದ್ಧ ಪ್ರಾರಂಭವಾದಂದಿನಿಂದ ಬಣ್ಣದ ಕೊರತೆಯನ್ನು ಅನುಭವಿಸುತ್ತಿರುವ ಹಲವು ಮಗ್ಗದ ಕಾರ್ಖಾನೆಗಳೂ ಇರುವವು. ಮಗ್ಗದವರೂ ವಸ್ತ್ರ ರಂಗಾಯಿಸುವವರೂ ರಾ। ಎಮ್. ಎಸ್. ಪುಟ್ಟಣ್ಣನವರ ಈ ಸೂಚನೆಯನ್ನು ಪರೀಕ್ಷಿಸಿ ನೋಡಬಹುದು.

ಪುತ್ತೂರು: — ಇದೇ ತಿಂಗಳ ತಾ. ೭ನೇ ಶನಿವಾರ ದಿವಸ ಇಲ್ಲಿಯ ಶ್ರೀ ವೇಣುಗೋಪಾಲ ಮಂದಿರದ ಬಳಿ ಮ। ರಾ। ರಾ। ಸಂತ್ ಕೃಷ್ಣರಾವ್ ಮತ್ತು ರಾವ್ ಬಹದೂರ್ ಎಮ್ ರಘುನಾಥರಾವರು ಕೂಡಿ ಇಲ್ಲಿಯ ಆಸ್‌ಪಾಸಿನ ಸುಮಾರು ೫೦೦ ಹೊಲೆಯರಿಗೆ ಅಕ್ಕಿ ಪರಮಾನ್ನವನ್ನು ಇಕ್ಕಿ ಸಂತೋಷಪಡಿಸಿದರು.

ಲೆಂಡ ರಿಕಾರ್ಡ ತಹಶಿಲದಾರಿ ಕೆಲಸಕ್ಕೆ ಹೋಗಿದ್ದ ಇಲ್ಲಿಯ ಸ್ಪೇಶಲ ಮುಜಸ್ಟ್ರೇಟರಾದ ಮ। ರಾ। ರಾ। ಕಿಲಪಾಡಿ ಶಿವರಾಯರವರು ಇದೇ ತಾ. ೯ರಲ್ಲು ಹಾಜರಾಗಿ ಟೌನು ಮಜಿಸ್ಟ್ರೇಟರಾಗಿದ್ದ ಮ। ರಾ। ರಾ। ಮಾಧವ ಪ್ರಭುಗಳಿಂದ ಚಾರ್ಜು ವಹಿಸಿಕೊಂಡರು.

ಇಲ್ಲಿಯ ಪೇಟೆಯಲ್ಲಿ ಸರಕು ತುಂಬಿಸುವ, ವ ಸರಕು ಇಳಿಸುವ ಗಾಡಿಗರು ಗಾಡಿಗಳನ್ನು ಬಿಟ್ಟಲ್ಲಿಯೆ ಎತ್ತುಗಳನ್ನು ಪೂರ ಕಟ್ಟಿದ, ಅಲ್ಲಿಯ ಖಮವದರಿಂದ ಸ್ಕ್ವಾಳ್, ವ ಪೋಲಿಸ್ ಸ್ಕ್ವಾಳ್, ಮುಂತಾದವುಗಳು ಆಮರು ರಕ್ಷಾಗುವಾಗ್ಗೆ ಗಾಡಿ ಎತ್ತುಗಳ ಸಂದಾಂಶರಲ್ಲಿ ಸಿಕ್ಕಿ [illegible] ಇತ್ತಲಾಗೆ ಇಲ್ಲಿಯ [illegible]

[illegible]

ಸ್ಥಳೀಕ—ಮಂಗಳೂರು.

ಈ ದಿನ ನೆರವೇರುವ ಶ್ರೀ ಜ್ಞಾನೋದಯ ಸಮಾಜದ ೭ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಲು ಜಿಲ್ಲಾ ಸುಪರಿಂಟೆಂಡೆಂಟ ದೊರೆಗಳವರಿಗೆ ಅನನುಕೂಲವಾದ್ದರಿಂದ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸೀಫರಾದ ಮ। ರಾ। ರಾ। ಜಗನ್ನಾಥರಾವ್, ಎಸ್ ಟಾಗೆಟ್‌ರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸುವರು.

ಯುದ್ಧದ ಬಗ್ಯೆ ಸಾಲವನ್ನು ಎತ್ತುವ ಈ ಪಟ್ಟಣದ ಪ್ರಜಾ ಜನರ ಸಭೆಯು ಸದ್ಯದಲ್ಲಿ ಕೂಡುವದೆಂಬುದಾಗಿ ತಿಳಿಯುತ್ತೇವೆ.

ಈ ತಿಂಗಳ ತಾರೀಕು ೨೧ರಿಂದ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು, ಸಬ್ ಕೋರ್ಟು, ಜಿಲ್ಲಾ ಕೋರ್ಟುಗಳು ಶಖೆಕಾಲದ ರಜೆಯ ಬಗ್ಯೆ ಮುಚ್ಚಲ್ಪಡುವವು.

ಮಂಗಳೂರಿನ ಪ್ರಜಾ ಜನರು ಕೂಡಿಕೊಂಡು ಕೆಲವು ಕಾಲದ ಹಿಂದೆ ಮಂಗಳೂರಲ್ಲಿ ಬಾಲಿಕೆಯರ ಬಗ್ಯೆ ಒಂದು ಬಾಲಿಕಾ ಪಾಠಶಾಲೆಯನ್ನು ಸರಕಾರದವರು ಸ್ಥಾಪಿಸಬೇಕೆಂದು ಮಾಡಿದ ವಿಜ್ಞಾಪನೆಗೆ ಅನುಸಾರವಾಗಿ ಸರಕಾರದವರು ಮಂಗಳೂರಲ್ಲಿ ಬಾಲಿಕಾ ಸೆಕೆಂಡರಿ ಶಾಲೆಯನ್ನು ಸ್ಥಾಪಿಸಲು ನಿರ್ಣಯಿಸಿರುತ್ತಾರೆಂಬುದು ಈ ಸಾರಿಯ ಕೌನ್ಸಿಲಿನ ವೃತ್ತಾಂತಗಳಿಂದ ತೋರಿಬರುತ್ತದೆ.

ಇಲ್ಲಿಯ ಮಹಮ್ಮದೀಯರ ಶಾಲೆಗಳ ಸುಪರ್‌ವೈಸರರಾಗಿದ್ದು ಪ್ರಕೃತ ಬಳ್ಳಾರಿಯಲ್ಲಿ ಮಹಮ್ಮದೀಯರ ಎಲಿಮೆಂಟರಿ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟರರಾಗಿರುವ ಮಿ। ತಾಲಿಬ ಅಲಿ ಸಾಹೇಬರು ಬೆಂಗಳೂರು ರೇಂಜಿನ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮದ್ರಾಸಿನ ನ್ಯಾಯವಿಧಾಯಕ ಸಭೆಯ ಮುಕ್ತಾಯ ಕಾಲದಲ್ಲಿ ಇಲ್ಲಿಯ ಪ್ರತಿನಿಧಿಗಳಾದ ಬಹುಮಾನಪಟ್ಟ ಸದಾಶಿವ ಭಟ್ಟರವರು ತಮ್ಮ ಭಾಷಣ ಮೂಲಕ ಪದೇ ಪದೇ ಈ ಜಿಲ್ಲೆಯ ವಿಷಯಗಳನ್ನು ಸರಕಾರದವರ ಲಕ್ಷ್ಯಕ್ಕೆ ತಂದಿರುತ್ತಾರೆ. ಮೂಲಗೇಣಿ ವಿಷಯ ಅಗತ್ಯವಿರುವ ಕಾನೂನು ಮಸೂದೆಯನ್ನು ಬೇಗನೆ ಏರ್ಪಡಿಸಬೇಕೆಂತಲೂ ಪ್ರತಿನಿತ್ಯದಲ್ಲಿಯೂ ಜಂಗ್ಲಿ ಇಲಾಖೆಯ ಮೂಲಕ ಹೆಚ್ಚುತ್ತ ಬರುವ ಸಂಕಷ್ಟಗಳ ನಿವಾರಣೆಯನ್ನು ಇಲ್ಲಿಯ ಜಿಲ್ಲಾ ಕಲೆಕ್ಟರರ ಮೂಲಕ ಪರಿಹರಿಸಬೇಕೆಂತಲೂ, ಜಿಲ್ಲೆಯ ವಿಭಜನೆಯ ವಿಷಯ ಜನರಲ್ಲಿ ಬಹಳ ಯೋಚನೆಯಿರುವದರಿಂದ ಇದರ ಇತ್ಯರ್ಥವನ್ನು ಪೂರ್ಣ ಆಲೋಚಿಸದೆ ಮಾಡಕೂಡದೆಂಬುದಾಗಿಯೂ ಮತ್ತು ಜಿಲ್ಲೆಯ ಸಾಂಪತ್ತಿಕ ಅಭಿವೃದ್ಧಿಯ ವಿಷಯ ಸರಕಾರದವರು ಹೆಚ್ಚಿನ ಲಕ್ಷ್ಯಕೊಡಬೇಕೆಂದೂ ಭಟ್ಟರವರು ಸರಕಾರದವರನ್ನು ಕೇಳಿಕೊಂಡಿದ್ದಾರೆ. ಗಂಧದ ವಿಷಯದಲ್ಲಿ ಭಟ್ಟರು ಮಾಡಿದ ಪ್ರಸ್ತಾವವನ್ನು ಕೇಳಿಕೊಂಡು ಇಲ್ಲಿಯ ಜಿಲ್ಲಾ ಕಲೆಕ್ಟರರಿಂದ ಸರಕಾರದವರು ಈ ತಿಂಗಳ ಅಂತ್ಯದೊಳಗೆ ಈ ವಿಷಯ ರಿಪೋರ್ಟನ್ನು ಕೇಳಿರುತ್ತಾರೆ. ಮತ್ತು ಮೂಲಗೇಣಿ ಕಾನೂನಿನ ವಿಷಯದಲ್ಲಿ ಭಟ್ಟರು ಸ್ವತಹ ಸರಕಾರದ ಮೆಂಬರರಾದ ಸರ್. ಅಲೆಕ್ಸಾಂಡರ್ ಕಾರ್ಡ್ಯೂರವರ ಕೂಡೆ ವಾದಿಸಬಹುದೆಂತಲೂ ಸರಕಾರದವರು ಸೂಚಿಸಿರುವರು.

ಇಲ್ಲಿಯ 'ಸ್ಟುಡೆಂಟ್ ಬ್ರದರ್ ಹುಡ್' ಎಂಬ ವಿದ್ಯಾರ್ಥಿ ಛಾತ್ರ ಸಂಘವವರು ದೇಶಬಂಧುಗಳಿಗೆ ಒಂದು ವಿಜ್ಞಾಪನೆಯನ್ನು ಪ್ರಕಟಿಸಿಕೊಂಡು ಈ ವಿಜ್ಞಾಪನಾ ಪತ್ರಗಳನ್ನು ಸರ್ವರಿಗೂ ಹಂಚುತ್ತಿದ್ದಾರೆ. ವಿಜ್ಞಾಪನೆಯ ಮುಖ್ಯ ಸಾರಾಂಶವು—ಜನರು ಆದಷ್ಟು ಮಟ್ಟಿಗೆ ಧೂಂದುಗಾರಿಕೆಯನ್ನು ಬಿಟ್ಟು, ಹಣ ಕಾಸುಗಳನ್ನು ಉಳಿಸಿಕೊಂಡು ದೇಶ ಸೇವೆಯ ಕಡೆಗೆ ತಮ್ಮ ಮನಸ್ಸನ್ನು ತಿರುಗಿಸಬೇಕೆಂಬುದಾಗಿದೆ. ಈ ವಿಜ್ಞಾಪನೆಯ ಕುರಿತು ಇನ್ನೊಮ್ಮೆ ಪ್ರಸ್ತಾಪಿಸುವೆವು.

ಕಳೆದ ವಾರ ಮಂಗಳೂರಲ್ಲಿ ಒಟ್ಟಿಗೆ ೯೦ ಪ್ಲೇಗು ಮರಣಗಳಿದ್ದವು. ಕೊಡಿಯಾಲ್‌ಬೈಲ್ ವಾರ್ಡಿನಲ್ಲಿ ೫೪; ಗೋಳಿಕಟ್ಟೆ ೬; ಮಾರ್ಕೆಟ್ ವಾರ್ಡು ೧; ಕೋರ್ಟು ವಾರ್ಡಿನಲ್ಲಿ ೧೧.

ಆಕ್ಟಿಂಗ್ ೩ನೇ ಗ್ರೇಡು ತಹಶೀಲದಾರರಾಗಿರುವ ಮ। ರಾ। ರಾ। ಎಮ್. ಅನಂತನ್ ನಾಯರರಿಗೆ ಈ ಮೊದಲು ಕೊಡೋಣಾದ ರಜೆಯೊಂದಿಗೆ ಇನ್ನು ಎರಡು ವಾರಗಳ ರಜೆಯು ಕೊಡೋಣಾಗುವದು.

ಕಾರ್ಕಳದಲ್ಲಿ ತಾಲೂಕು ಹೆಡ್ ಎಕೌಂಟೆಂಟರಾಗಿರುವ, ಮ। ರಾ। ರಾ। ಪಿ. ರಾಮಚಂದ್ರಯ್ಯನವರಿಗೆ ೬ ಹಪ್ತೆಗಳ ರಜೆಯು ತಾ. ೫-೬-೧೭ ರಿಂದ ಕೊಡೋಣಾಗುವದು. ಇವರ ಬದಲಿಗೆ ಉಡುಪಿ ಫಿರ್ಕಾ ರೆವಿನ್ಯು ಇನ್ಸಪೆಕ್ಟರರಾಗಿರುವ ಮ। ರಾ। ರಾ। ಕೆ. ನಾಗಪ್ಪನವರು ತಾಲೂಕು ಹೆಡ್ ಎಕೌಂಟಾಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಾಪು: — ನಮ್ಮ ಈಗಿನ ಮಾನ್ಯ ಜಿಲ್ಲಾ ಜಡ್ಜರವರು ಕುಟುಂಬ ಸಮೇತ ಉಡುಪಿಗೆ ಮೋಟಾರಿನಲ್ಲಿ ಪ್ರಯಾಣಮಾಡುವಾಗ ತಾ. ೬-೪-೧೭ನೇ ಬೈಸಾರಿ ೪-೩೦ಕ್ಕೆ ಯರ್ಮಾಳದಲ್ಲಿ ಮ। ರಾ। ಯರ್ಮಾಳ ಕುಮಾರ ಅರಸು ಮೂರಂ ಹೆಗ್ಗಡೆಯವರಿಂದ ನೂತನವಾಗಿ ಕಟ್ಟಿಸಲ್ಪಟ್ಟ ಮಗ್ಗದ ಕಾರ್ಖಾನೆಯಲ್ಲಿ ೨೦ ನಿಮಿಷಗಳ [illegible] ವಿಶ್ರಾಂತಿ ತಕ್ಕೊಂಡು ಸದ್ರಿ ಶ್ರೀಯುತ ಅರಸರವರಿಂದ ಸರ್ವರಿಗೂ [illegible] ತಾಂಬೂಲ ಪುಷ್ಪ-ಕಾಫಿ-ಫಲಹಾರಾದಿಗಳಿಂದ [illegible] ಪರಮ ಆಹ್ಲಾದದಿಂದ ಸ್ವೀಕರಿಸಿಕೊಂಡು ಮುಂತೆರಳುವವರಾದರು.

ಮ। ರಾ। ರಾ। ಯರ್ಮಾಳ ಕುಮಾರ ಅರಸು [illegible] ತಮ್ಮ ಪಟ್ಟಾಭಿಷೇಕದ ದಿನ ಸುಮಾರು ೩೦೦ [illegible] ಬ್ರಾಹ್ಮಣರಿಗೂ ಅನ್ನದಾನ ಮಾಡಿರುವರು. [illegible]

[illegible]

ಸರಕಾರದ ವಿದ್ಯಾಖಾತೆಯು ಮೆಂಬರರೊಡನೆ ಪ್ರಸ್ತಾಪಿಸಿ ತಯ್ಯಾರಿಸುವದರಲ್ಲಿದ್ದಾ ರೆಂಬುದಾಗಿ ತಿಳಿಯುತ್ತೇವೆ.

ರಾಜಕೀಯ ವಿಷಯಗಳ ಮುಖ್ಯವಾಗಿ ಹಿಂದೂಸ್ಥಾನದ ರಾಜಕೀಯ ವಿಷಯಗಳನ್ನು ಕ್ರಮಪ್ರಕಾರ ಅಭ್ಯಾಸ ಮಾಡಿಕೊಳ್ಳುವರೆ ಮುಂಬಯಿಯಲ್ಲಿ "ದಿ. ಇಂಡಿಯನ್ ಲಿಬರಲ್ ಕ್ಲಬ್ಬ" ಎಂಬುವ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಈ ಕ್ಲಬ್ಬು ಮುಂಬಯಿಯ ಭಾರತ ಸೇವಾ ಸಂಘದ ಆಫೀಸಿನಲ್ಲಿಯೇ ಸ್ಥಾಪಿಸೋಣಾಗಿದೆ. ಸರ್ ನಾರಾಯಣ ಚಂದಾವರಕಾರರವರು ಇದರ ಅಧ್ಯಕ್ಷರಾಗಿರುತ್ತಾರೆ. ಬಹುಮಾನಪಟ್ಟ ಪರಂಜಪೆ, ಭಾರತ ಸೇವಾಸಂಘದ ಮೆಂಬರರಾದ ದೇವಧರ ಮೊದಲಾದವರು ಈ ಸ್ಥಾಪನೆಯ ಕಮಿಟಿಯ ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಸನಾತನ ಧರ್ಮ ಪರಿಷತ್ತಿನ ನಿನ್ನೆ ದಿನ ಪ್ರಕಟವಾದ ವೃತ್ತಾಂತಗಳಲ್ಲಿ ಇನ್ನು ಕೆಲವು ಮಹತ್ವವಾದ ಸಂಗತಿಗಳಿವೆ. ಲಾಹೋರಿನ ಸನಾತನ ಧರ್ಮ ಕೊಲೇಜಿನ ಬಗ್ಗೆ ಸಭೆಯಲ್ಲಿ ರೂ. ೮೦,೦೦೦ ಚಂದಾಹಣವು ವಾಗ್ದಾನ ಮಾಡಲಾಯಿತು. ರೈ. ಬಹದ್ದೂರ್ ರಾಮಶರ್ಮರವರು ರೂ. ೧೦,೦೦೦, ಮಹಾಂತ ಶ್ರೀ ಬೃಂದಾವನ ರಂಗಾಚಾರ್ಯರಿಂದ ರೂ. ೧೦,೦೦೦ ಅಲ್ಲದೆ ರೂ. ೫೦,೦೦೦ ಕ್ರಯಬಾಳುವ ಜಮೀನು, ಬಹುಮಾನಪಟ್ಟ ಹ್ಯಾಕೋರ್ಟ ಜಡ್ಜರಾದ ಶಹಾದಿ ಲಾಲ್‌ರವರಿಂದ ರೂ. ೧೫೦೦ ರಾ। ಮೂಲಚಂದರಿಂದ ರೂ. ೧೦,೦೦೦ ಈ ರೀತಿ ಹಣ ಸಂಗ್ರಹವು ಆಗಿರುತ್ತದೆ. ಇದರ ಮೊದಲೇ ರೂ. ೯೦,೦೦೦ದ ದ್ರವ್ಯ ಸಹಾಯದ ವಚನಗಳು ಈ ಕೊಲೇಜಿನ ಬಗ್ಗೆ ವಸೂಲು ಆದದ್ದೇ ಇರುವದು. ಇದರಲ್ಲಿ ರೂ. ೫೦,೦೦೦ ದರ್ಭಂಗದ ಮಹಾರಾಜರವರೇ ಕೊಟ್ಟಿರುವರು. ಭಾರತ ಧರ್ಮ ಮಹಾ ಮಂಡಲ ಮತ್ತು ಸನಾತನ ಧರ್ಮ ಸಮ್ಮೇಳನ ಇವೆರಡನ್ನೂ ಈ ಪರಿಷತ್ತಿನಲ್ಲಿ ಸಂಯೋಜಿಸಿರುವರು. ಬರುವ ವರುಷದ ಪರಿಷತ್ತು ಆಗ್ರಾದಲ್ಲಿ ಕೂಡುವದು. ಲಾಹೋರು ಚೀಫ್ ಕೋರ್ಟಿನ ವಕೀಲರಾದ ಲಾಲಾ ಗುಲ ಶಾಹಾನ್ ಲೈಯವರು ತಮ್ಮ ಅಶನದ ಖರ್ಚನ್ನು ಮಾತ್ರ ಪಡೆಯುವರೆ ಒಪ್ಪಿಕೊಂಡು ತಮ್ಮ ಜೀವಿತವನ್ನು ಸನಾತನ ಧರ್ಮ ಕೊಲೇಜಿಗೆ ಅರ್ಪಿಸಿರುವರು.

ಪೂನೆಯಲ್ಲಿ ಸ್ತ್ರೀಯರ ಬಗ್ಗೆ ಸ್ಥಾಪಿತವಾದ ಯುನಿವರ್ಸಿಟಿಯ ರಿಪೋರ್ಟು ಪ್ರಕಟವಾಗಿರುವದು. ಕಳೆದ ಜೂನು ತಿಂಗಳಲ್ಲಿ ನಡೆದ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ನಾಲ್ಕು ಜನ ವಿದ್ಯಾರ್ಥಿನಿಯರು ಕೊಲೇಜಿನ ಪ್ರಥಮ ವರುಷದ ವರ್ಗದಲ್ಲಿ ಕಲಿಯುತ್ತಿದ್ದಾರೆ. ರೂ. ೫೦,೦೦೦ ದ್ರವ್ಯಸಹಾಯವಾಗಿಯೂ ರೂ. ೧೦,೦೦೦ ಪ್ರತಿ ವರುಷದಲ್ಲಿ ಚಂದಾಹಣವಾಗಿಯೂ ಕೊಡೋಣಾಗುವ ವಾಗ್ದಾನಗಳು ಆಗಿರುತ್ತವೆ. ಈ ಪೈಕಿ ರೂ. ೩೦,೦೦೦ ವಸೂಲಾಗಿರುವದು. ೧೯೧೮ನೇ ವರುಷದಲ್ಲಿ ಕೊಲೇಜಿನ ಎಲ್ಲಾ ಕ್ಲಾಸುಗಳ ಉಪಯೋಗವಾಗಬಹುದು. ೧೯೨೦ರಲ್ಲಿ ಈ ಯುನಿವರ್ಸಿಟಿಯಲ್ಲಿ ತೇರ್ಗಡೆಹೊಂದಿದ ಸ್ತ್ರೀಯರು ತಯ್ಯಾರಾಗುವರೆಂತಲೂ ರಿಪೋರ್ಟಿನಿಂದ ತೋರಿಬರುವದು.

ದಕ್ಷಿಣ ಹಿಂದೂಸ್ಥಾನ.

ಯುದ್ಧದ ಸಾಲವನ್ನು ಎತ್ತುವ ಬಗ್ಗೆ ಪ್ರಜಾ ಜನರ ಸಭೆಗಳು ದಕ್ಷಿಣ ಹಿಂದೂಸ್ಥಾನದ ಹಲವು ಪ್ರಾಂತ್ಯಗಳಲ್ಲಿ ಕೂಡುತ್ತಲಿವೆ. ಬೆಂಗಳೂರಲ್ಲಿ ಈ ತಿಂಗಳ ತಾ. ೭ನೇ ಸಾಯಂಕಾಲ ಈ ಬಗ್ಗೆ ಸರ್. ಯಮ್. ವಿಶ್ವೇಶ್ವರಾಯರ ಅಧ್ಯಕ್ಷತೆಯಲ್ಲಿ ಬೆಂಗಳೂರು ಪುರಜನರ ಸಭೆಯು ಕೂಡಿತ್ತು. ಮೈಸೂರಿನ ರೆಸಿಡೆಂಟ ಸಾಹೇಬರವರೂ ಸರಕಾರದ ಹುದ್ದೇದಾರರೂ ಸಾಹುಕಾರರೂ ವರ್ತಕರೂ ಬಹಳವಾಗಿ ಕೂಡಿದ್ದರು. ದಿವಾನ್ ಸಾಹೇಬರವರು ಯುದ್ಧದ ಈ ಸಾಲದಲ್ಲಿ ಪ್ರಜಾ ಜನರು ಹಣಹಾಕುವ ಆವಶ್ಯಕತೆಯನ್ನು ವಿವರಿಸಿ ಹೇಳಿದರು. ೩೩ ಲಕ್ಷ ರೂಪಾಯಿಗಳನ್ನು ಈ ಸಾಲದ ಬಗ್ಗೆ ಕೊಡುವರೆ ಮಹಾರಾಜರವರು ನಿರ್ಣಯಿಸಿದ್ದಾರೆ. ದಿವಾನ್‌ರವರು ೧ ಲಕ್ಷ, ಅಲ್ಬರ್ಟ್ ಚಿಟರ್ಟನ್‌ರವರು ೧ ಲಕ್ಷ, ಜಿ. ಎಸ್. ಚಕ್ರವರ್ತಿಯವರು ರೂ. ೧೦,೦೦೦, ಸಾಲವಾಗಿ ಕೊಡಲು ನಿರ್ಣಯಿಸಿರುತ್ತಾರೆ. ಸಭೆಕೂಡಿದ ಕಾಲದಲ್ಲಿ ಒಟ್ಟಿಗೆ ಸುಮಾರು ೩ ಲಕ್ಷ ರೂಪಾಯಿಗಳ ಸಾಲದ ಮೊಬಲಗು ಕೂಡಿರುವದು.

ದಕ್ಷಿಣ ಹಿಂದೂಸ್ಥಾನದ ಮಹಮ್ಮದೀಯರ ವಿದ್ಯಾಪ್ರಸಾರಕ ಸಂಘದ ವಾರ್ಷಿಕ ಸಭೆಯು ಈ ಸಂಘದ ಅಧ್ಯಕ್ಷರಾದ ಬಹುಮಾನಪಟ್ಟ ಅಬ್ದುಲ್ ರಹೀಮರವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸಂಘಕ್ಕೆ ಪ್ರಕೃತ ೩೫೧ ಜನ ಸಭಾಸದರು ಇರುವರೆಂತ ತಿಳಿದುಬರುತ್ತದೆ. ಸಂಘವು ಪ್ರತಿ ತಿಂಗಳಲ್ಲಿ ರೂ. ೨೧೦ ರ ಮೊಬಲಗಿನ ವಿದ್ಯಾರ್ಥಿವೇತನಗಳನ್ನು ಕೊಡುತ್ತದೆ. ವಿದ್ಯಾರ್ಥಿವೇತನ ಫಂಡು ಪ್ರಕೃತ ರೂ. ೧೯,೧೬೫ ಆಗಿರುವದು. ಮಹಮ್ಮದೀಯ ವಿದ್ಯಾರ್ಥಿಗಳ ಬಗ್ಗೆ ವಿದ್ಯಾರ್ಥಿಭವನವು ಪ್ರಕೃತ ಒಂದು ಬಾಡಿಗೆಯ ಕಟ್ಟೋಣದಲ್ಲಿರುವದು. ಸಂಘದವರ ಈ ಬಗ್ಗೆ ಕಟ್ಟಿಸುವಂಥಾ ಕಟ್ಟಡವು ಮುಂದಿನ ತಿಂಗಳ ಅಂತ್ಯದೊಳಗೆ ಸಿದ್ಧವಾಗುವದು. ಹೈದರಾಬಾದಿನ ನೈಜಾಮರವರು ಹೊಸದಾಗಿ ಸ್ಥಾಪಿಸೋಣಾಗುವ ಕೊಲೇಜಿನ ಬಗ್ಗೆ ರೂ. ೨೫,೦೦೦ ಮತ್ತು ತಿಂಗಳು ಒಂದಕ್ಕೆ ರೂ. ೧೦೦೦ವನ್ನು ಚಂದಾ ದ್ರವ್ಯವಾಗಿ ಕೊಡಲು ಸಮ್ಮತಿಸಿರುವದರಿಂದ ಸಂಘದವರು ನೈಜಾಮರವರ ಉಪಕಾರ ಸ್ಮರಣೆಯನ್ನು ಮಾಡಿರುವರು.

ಹಿಂದೂಸ್ಥಾನದಲ್ಲಿ ಏರ್ಪಡುವ ಸಂರಕ್ಷಕ ಸೇನೆಗೆ ಉಮೇದ್ವಾರರನ್ನು ಕೂಡಿಸಿಕೊಳ್ಳುವ ಒಂದು ಕಮಿಟಿಯು ಮದ್ರಾಸಿನಲ್ಲಿ ಏರ್ಪಡಿಸಲ್ಪಟ್ಟಿರುವದು. ಸರ್. ಪಿ. ಎಸ್. ಶಿವಸ್ವಾಮಿ ಅಯ್ಯರರವರು ಈ ಕಮಿಟಿಯ ಅಧ್ಯಕ್ಷರೂ, ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿ, ಎನ್ನಿಬಿಸೆಂಟ ರಾ। ಕಸ್ತೂರಿ ರಂಗಯ್ಯಂಗಾರರವರೇ ಮೊದಲಾದವರು ಈ ಕಮಿಟಿಯ ಮೆಂಬರರಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಗೋದಾವರಿ ಜಿಲ್ಲೆಯ ಡಿಸ್ಟ್ರಿಕ್ಟ್ ಕನ್ಫರೆನ್ಸ್ ಸಭೆಯು ಅಮಲಾಪುರದಲ್ಲಿಯೂ, ಕೃಷ್ಣಾ ಜಿಲ್ಲೆಯ ಇದೇ ಸಭೆಯು ಜಗ್ಗಪೇಟ ಎಂಬಲ್ಲಿಯೂ ನಡೆದವು. ಭೂಕಂದಾಯ ಸಾಗುವಳಿ ಬಗ್ಗೆ ನೀರಿನ ಶರಬರಾಯಿ ಮುಂತಾದ ಆ ಜಿಲ್ಲೆಗಳ ಹಾನಿವೃದ್ಧಿಯ ಕುರಿತು ಹಲವು ಪ್ರಸ್ತಾಪಗಳು ಸಭೆಯಲ್ಲಿ ವಾದಿಸಲ್ಪಟ್ಟು ಸರಕಾರದಿಂದ ಇವುಗಳ ಅನುಸ್ಥಿತಿಯನ್ನು ಕೋರಿರುತ್ತಾರೆ.

ಸೂಳೆಯರ ಅಥವಾ ನಾಯಕಸಾನಿಯವರ ಸೊತ್ತುಗಳಿಗೆ ಕಾನೂನು ಪ್ರಕಾರ ಹಕ್ಕುಳ್ಳ ವಾರಿಸುದಾರರು ಯಾರೆಂಬುವ ಒಂದು ದಾವೆಯು ಮದ್ರಾಸು ಹ್ಯಾಕೋರ್ಟಿನಲ್ಲಿ ಬಹುಮಾನಪಟ್ಟ ಅಬ್ದುಲ್ ರಹೀಮ್ ಮತ್ತು ಶ್ರೀನಿವಾಸ ಅಯ್ಯಂಗಾರರವರ ಮುಂದೆ ಇತ್ಯರ್ಥಕ್ಕೆ ಬಂದಿತ್ತು. ಮೃತಪಟ್ಟ ನಾಯಕಸಾನಿಯ ತಾಯಿಯ ತಾಯಿಯ ತಂದೆಯ ಸಹೋದರನ ಮಗಳು ಮತ್ತು ತಾಯಿಯ ತಂದೆಯ ಸಹೋದರನ ಮಗಳ ಮಗನು — ಇವರೊಳಗೆ ಹೆಚ್ಚಿನ ಹಕ್ಕುಳ್ಳವರು ಯಾರು? ಜಡ್ಜರವರ ಅಭಿಪ್ರಾಯವೇನೆಂದರೆ — ನಾಯಕಸಾನಿಯವರು ಹಿಂದುಗಳು ಆದ್ದರಿಂದ ಇವರ ವಾರಿಸಿನ ಹಕ್ಕು ಹಿಂದೂಗಳ ಕಾನೂನಿನ ಪ್ರಕಾರ ತೀರ್ಮಾನಿಸ ತಕ್ಕದ್ದಾಗಿದೆ. ಇವರು ಮದುವೆಯಾಗದ ಇದ್ದಂಥಾ ಸ್ತ್ರೀಯರೂ ಅಲ್ಲ, ಅಥವಾ ಗಂಡನನ್ನು ಕಳಕೊಂಡ ವಿಧವೆಯರೂ ಅಲ್ಲ, ಆದ್ದರಿಂದ ಇವರಲ್ಲಿ ಸ್ತ್ರೀಧನದ ಕಾನೂನು ಲಗಾವಾಗ ತಕ್ಕದ್ದಲ್ಲ. ಹಿಂದೂ ಲೋ ಸಹಿಂತದ ಕ್ರಮದ ಪ್ರಕಾರ ಹತ್ತರದಲ್ಲಿಯ ಕುಟುಂಬಿಕನು ಹಕ್ಕುದಾರನಾಗಿರುವನು. ಮತ್ತು ನಾಯಕಸಾನಿಯವರ ವಾರಿಸು ಹಕ್ಕಿನ ಇತ್ಯರ್ಥದಲ್ಲಿ ಹೆಮ್ಮಕ್ಕಳಿಗೇನೆ ಹೆಚ್ಚಿನ ಹಕ್ಕು ಇರುವಂಥಾದ್ದಾಗಿದೆ. ಆದ್ದರಿಂದ ತಾಯಿಯ ತಾಯಿಯ ತಂದೆಯ ಸಹೋದರನ ಮಗಳಿಗೆ ಇರುವ ಹಕ್ಕು [illegible] ಗಿರುವಂಥಾದ್ದಾಗಿದೆ ಎಂತ ತೀರ್ಮಾನವಾಗಿರುವದು.

ಈ ತಿಂಗಳ ತಾ. ೧೧ರಲ್ಲಿ ಮದ್ರಾಸು ಗವರ್ನರ ದೊರೆಗಳವರು ಮದ್ರಾಸಿನಿಂದ ತೆರಳಿ ತಾ. ೧೨ಕ್ಕೆ ಮೆಟ್ಟುಪಾಲಯಮಿಗೆ ತಲಪಿ ಅಲ್ಲಿಂದ ಮೋಟಾರಿನಲ್ಲಿ ಉದಕಮಂಡಲಗೆ ಹೋಗಿರುವರು.

ಮದ್ರಾಸಿನ ಆಯುರ್ವೇದಿಕ ಕೊಲೇಜಿನ ವಾರ್ಷಿಕೋತ್ಸವವು ಬಹುಮಾನಪಟ್ಟ ದಿವಾನ್ ಬಹದ್ದೂರ್ ಸಿ. ರಾಜಗೋಪಾಲಾಚಾರ್ಯ ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ನ್ಯಾಯವಿಧಾಯಕ ಸಭೆಯ ಹಲವು ಬಹುಮಾನಪಟ್ಟ ಮೆಂಬರರೂ ಡಾಕ್ಟರ್ ಸರ್. ಎಸ್. ಸುಬ್ರಹ್ಮಣ್ಯಯ್ಯರವರೂ ದಿವಾನ್ ಬಹದ್ದೂರ್ ಕೃಷ್ಣಸ್ವಾಮಿರಾವ್ ಮೊದಲಾದ ಅನೇಕ ಗ್ರಹಸ್ಥರು ಈ ಸಂದರ್ಭದಲ್ಲಿ ಕೂಡಿದ ಸಭೆಗೆ ಬಂದಿದ್ದರು. ಮದ್ರಾಸಿನ ಶೆರೀಫರಾದ ರಾವ್‌ಸಾಹೇಬ ಸಿ. ರಾಮಾನುಜನ್ ಚೆಟ್ಟಿಯವರು ಈ ಕೊಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ತಿಂಗಳ ಒಂದರ ರೂ. ೧೫ರ ೩ ವಿದ್ಯಾರ್ಥಿವೇತನಗಳನ್ನು ಕೊಟ್ಟಿರುತ್ತಾರೆ. ಕೊಲೇಜಿನ ಖರ್ಚಿನ ಅಧಿಕಾಂಶವನ್ನು ಪಂಡಿತ ವೃದ್ಧರತ್ನ ಡಿ. ಗೋಪಾಲ ಆಚಾರ್ಯರವರೇ ತರುತ್ತಿದ್ದಾರೆ. ಇವರ ಸ್ನೇಹಿತರೊಬ್ಬರಿಂದ ಈ ಕೊಲೇಜಿಗೆ ಉಚಿತವಾಗಿ ಕೊಡೋಣಾದಂಥಾ ಪಂಡಿತರ ಚಿತ್ರಪಟವು ಅಧ್ಯಕ್ಷರಿಂದ ಈ ಸಾರಿ ಪ್ರತಿಷ್ಠಿಸಲ್ಪಟ್ಟಿತು. ಈ ಸಾರಿ ಕೂಡಿದ ನ್ಯಾಯವಿಧಾಯಕ ಸಭೆಯಲ್ಲಿ ಯುನಾನಿ ಮತ್ತು ಆಯುರ್ವೇದಿಕ ಔಷಧಿಗಳ ಕ್ರಮಗಳನ್ನು ಶೋಧಿಸುವ ಬಗ್ಗೆ ಒಬ್ಬ ಆಫೀಸರರು ನೇಮಿಸಲ್ಪಡಬೇಕೆಂಬ ನಿರ್ಣಯವು ಆದ್ದರಿಂದ ಅಂಥಾ ಆಫೀಸರರಿಗೆ ಅವರ ಶೋಧನೆಯಲ್ಲಿ ಬೇಕಾದ ಸಹಾಯವು ಈ ಕೊಲೇಜಿನವರಿಂದ ಕೊಡೋಣಾಗಬೇಕೆಂದು ಅಧ್ಯಕ್ಷರು ಹೇಳಿ ಪುರಾತನ ಆರ್ಯವಿದ್ಯೆಯನ್ನು ಅದನ್ನು ಇಷ್ಟು ಪ್ರಚರಗೊಳಿಸಿ ವ್ಯವಸ್ಥೆಗೊಳಿಸಬೇಕೆಂಬ ಪ್ರಜಾ ಮುಖಂಡರ ಆಕಾಂಕ್ಷೆಯನ್ನು ಶ್ಲಾಘಿಸಿರುವರು.

ಕೊಯಂಬುತ್ತೂರಿನಲ್ಲಿ ಪ್ಲೇಗನ್ನು ನಿವಾರಿಸಿದ ಸಾಧನೆಯನ್ನು ಮಂಗಳೂರಿನ ನಿವಾಸಿಕರೂ ಆಫೀಸರರೂ ತಿಳಕೊಳ್ಳುವದು ಉತ್ತಮ. ಅಲ್ಲಿ ಹಜೂರು ಶಿರಸ್ತೆದಾರರಾದ ರಾ। ಕೆ. ಎಸ್. ನಾಗೇಶ್ವರ ಅಯ್ಯರವರು ಸ್ಪೆಶಲ್ ಪ್ಲೇಗು ಆಫೀಸರರಾಗಿ ನೇಮಿಸಲ್ಪಟ್ಟರು. ಮತ್ತು ಸುಮಾರು ೯೭,೩೦ ಜನರಿಗೆ ಪ್ಲೇಗಿನ ದಾಕು ಹಾಕಿಸಲಾಯಿತು. ದಾಕು ಹಾಕಿಸಿದ ಇಷ್ಟು ಜನರಲ್ಲಿ ರೋಗದ ಸೋಂಕು ತಟ್ಟಿದಾಗ ೬೭೬ ಜನರು ಮಾತ್ರ ರೋಗಕ್ಕೆ ತುತ್ತಾದರು. ಆದರೆ ದಾಕು ಹಾಕಿಸಿಕೊಳ್ಳದೆ ಇದ್ದ [illegible] ಜನರಿಗೆ ರೋಗದ ಸೋಂಕು ತಗಲಿ [illegible] ಜನರು ಇದರಿಂದ ಮೃತಪಟ್ಟರು. ದಾಕಿನ ಪ್ರತ್ಯಕ್ಷ ಪ್ರಮಾಣವನ್ನು ಈ ಪುರಜನರು ಏನೆಂಬುದನ್ನು ಈ ಮೂಲಕ ತಿಳಕೊಳ್ಳಬಹುದು. ಕೊಯಂಬುತ್ತೂರಿನಲ್ಲಿ ಈಗ ಪ್ಲೇಗು ಇಲ್ಲ.

ಇಲ್ಲಿಯ ಗೋದಾವರಿ ಜಿಲ್ಲೆಗೆ ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರಾಗಿ ದ್ದಂಥ ರಾವ್‌ಸಾಹೇಬ ಕೆ. ಕೃಷ್ಣನ್ ನಾಯರರವರು ಮಲಬಾರಿನ ಡಿಸ್ಟ್ರಿಕ್ಟ್ ಬೋರ್ಡ ಇಂಜಿನೀಯರರಾಗಿ ನೇಮಿಸಲ್ಪಡಬಹುದೆಂತ ಆ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿನವರು ಶಿಫಾರಸು ಮಾಡಿರುವರೆಂಬುದಾಗಿ ತಿಳಿಯುತ್ತೇವೆ.

ತಿರುಚಿನಾಪಳ್ಳಿಯ ಡಿಸ್ಟ್ರಿಕ್ಟ್ ಬೋರ್ಡಿನವರ ರೈಲ್ವೆ ಬಗ್ಗೆ ಕೂಡಿಸಿರುವ ಸುಮಾರು ಒಂದು ಲಕ್ಷ ರೂಪಾಯಿಗಳ ರೈಲ್ವೆ ಸೆಸ್ಸನ್ನು ಯುದ್ಧದ ಬಗ್ಗೆ ಎತ್ತಲ್ಪಡುವ ಸಾಲದಲ್ಲಿ ವಿನಿಯೋಗಿಸುವರೆ ನಿರ್ಣಯಿಸಿರುತ್ತಾರೆ.

ಒಬ್ಬ ಪಂಚಮ ಜಾತಿಯಲ್ಲಿ ಜನ್ಮವೆತ್ತಿದ ಭಕ್ತನ ವೃತ್ತಾಂತವು ಗೂಟಿಯಿಂದ ಬಂದಿರುವದು. ಇವನ ಹೆಸರು ಸ್ವಾಮಿ ಸಹಜಾನಂದ ಎಂತ ಆಗಿರುವದು. ವೆಲ್ಲೂರು ಜಿಲ್ಲೆಯ ಪಡುಪಕ್ಕಮ್ ಎಂಬ ಗ್ರಾಮದಲ್ಲಿ ಇವನು ಹುಟ್ಟಿದನು. ಈತನ ಪ್ರಾಯವು ೨೬ ವರುಷ. ಇವನ ತಂದೆ ತಾಯಿಗಳು ಜೀವಂತರಾಗಿರುವರು. ಎಲಿಮೆಂಟರಿ ವಿದ್ಯಾಭ್ಯಾಸವನ್ನು ಒಂದು ಮಿಶನ್ ಶಾಲೆಯಲ್ಲಿ ಪಡೆದ ನಂತರ ಶೀಲವರ್ಧನ ಸ್ವಾಮಿ ಎಂಬವರಿಂದ ಈತನು ಕೆಲವು ವೇದಾಂತ ಪಾಠಗಳನ್ನು ಕಲಿತುಕೊಂಡನು. ನಂತರ ಕರಪತ್ರ ಶಿವಪ್ರಕಾಶ ಸ್ವಾಮಿ ಎಂಬವರಿಂದ ಉಪದೇಶವನ್ನು ಪಡೆದು ಈತನು ಸನ್ಯಾಸಿಯಾದನು. ಪುರಾಣ ತರ್ಕಶಾಸ್ತ್ರ ಇತ್ಯಾದಿಗಳನ್ನು ಈತನು ಮದ್ರಾಸಿನ ರಾಮಾನಂದ ಶಾಸ್ತ್ರಿ ಮೊದಲಾದವರಿಂದ ಕಲಿತು ಪ್ರಕೃತ ತನ್ನ ಬಂಧು ವರ್ಗದವರ ಉದ್ಧರಣೆಗಾಗಿ ಜೀವಿತವನ್ನು ಅರ್ಪಿಸಿರುತ್ತಾನೆ. ಗೂಟಿಯಲ್ಲಿ ದಿವಾನ್ ಬಹದ್ದೂರ್ ಪಿ. ಕೇಶವಪಿಳ್ಳೆಯವರ ಅತಿಥಿಯಾಗಿದ್ದು ಅಲ್ಲಿ ಹಲವು ಪ್ರಸಂಗಗಳನ್ನು ಮಾಡಿದನು. ಭಕ್ತಿ, ರಾಮಾಯಣ ಇವುಗಳ ವಿಷಯ ಬಹಳ ಸಮರ್ಥವಾದ ರೀತಿಯಲ್ಲಿ ಉಪನ್ಯಾಸಗಳನ್ನು ಕೊಡುತ್ತಿರುವನು. ದೊಡ್ಡ ದೊಡ್ಡ ಸಭೆಗಳು ಈ ಉಪನ್ಯಾಸಗಳನ್ನು ಕೇಳಲು ಡಿಸ್ಟ್ರಿಕ್ಟ್ ಮುನ್ಸಿಫ್, ಡೆಪ್ಯುಟಿ ಕಲೆಕ್ಟರ್ ಮೊದಲಾದವರ ಅಧ್ಯಕ್ಷತೆಯಲ್ಲಿ ಕೂಡುತ್ತಿರುತ್ತವೆ. ಬಹಳ ರಸವತ್ತಾದ ರೀತಿಯಲ್ಲಿ ವಾಖ್ಯಾನಗಳನ್ನು ಮಾಡುವದರಿಂದ ಜನರು ಬಹಳ ಉತ್ಸಾಹದಿಂದ ಕೂಡಿ ಈತನ ಪ್ರಸಂಗಗಳನ್ನು ಕೇಳುತ್ತಿರುವರು. ಚಿದಂಬರದಲ್ಲಿ ಒಂದು ಸ್ಥಳವನ್ನು ಮಾಡಿಕೊಂಡು ಶಾಲೆಯನ್ನು ಸ್ಥಾಪಿಸಿ ತನ್ನ ಜಾತಿವರ್ಗದವರಿಗೆ ಶಿಕ್ಷಣವನ್ನು ಈ ಸನ್ಯಾಸಿಯು ಕೊಡುತ್ತಿರುವನು.

ಪತ್ರವ್ಯವಹಾರ.

ಅಕ್ಕಿಯ ವ್ಯಾಪಾರ ಮತ್ತು ದಾಸ್ತಾನು.

ಪತ್ರಾಧಿಪರೇ,

ಡಿಸ್ಟ್ರೆಸ್ ಕಮಿಟಿಯವರ ಚಟುವಟಿಕೆಗಳಿಗೆ ತಿಂಗಳುಗಳು ಎಡೆ ಇದೆ — ಎಂದು ತಮ್ಮ ಸೂಚನೆಯು ಕಳೆದ ಸಂಚಿಕೆಯಲ್ಲಿತ್ತು. ಡಿಸ್ಟ್ರೆಸ್ ಕಮಿಟಿ, ಇಂಥಾದೊಂದು ಏರ್ಪಾಡು ಸ್ತುತ್ಯವಾದದ್ದೇ ಸರಿ. ಈ ಕಮಿಟಿಯವರ ಸ್ಥಾಪನೆ ಮತ್ತು ಇವರಿಂದ ಜನರಿಗಾಗುವ ಉಪಕಾರವನ್ನು ಆಲೋಚನೆಗೆ ತರುವಾಗ ಒಂದು ಸಾಮ್ಯವು ನೆನಪಿಗೆ ಬರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಲಕ್ಷ ಕಟ್ಟಳೆಯ ಜನರನ್ನು ಕಾರ್ಖಾನೆಗಳಲ್ಲಿ ಕೆಲಸ ಮಾಡಿಸಿ ಕೋಟಿ ಕಟ್ಟಳೆಯ ಹಣವನ್ನು ಸಂಪಾದಿಸಿ ಇಟ್ಟಂಥಾ ಕಾರ್ನೆಜಿ ಮೊದಲಾದಂಥಾ ಹಲವು ಯೋಗ್ಯ ಮನುಷ್ಯರಿದ್ದಾರೆ. ಇಂಥವರು ತಾವು ಕಟ್ಟಿಟ್ಟ ಹಣದಿಂದ ಲೋಕೋಪಕಾರ ಮಾಡುತ್ತಿದ್ದಾರೆ. ಹೀಗೆ ಪ್ರಥಮದಲ್ಲಿ ಹಣ ಕಟ್ಟಿಕೊಂಡು ನಂತರ ಅದರಲ್ಲಿಯ ಅಂಶವನ್ನು ಪರೋಪಕಾರಕ್ಕೋಸ್ಕರ ಕೊಡುವದಕ್ಕಿಂತಲೂ ಇಂಥವರ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂಥವರಿಗೆ ಮೊದಲೇ ಸಾಕಷ್ಟು ಸಂಬಳ ಕೊಟ್ಟು ಅಂಥವರನ್ನು ಅಭಿವೃದ್ಧಿ ಸ್ಥಿತಿಯಲ್ಲಿರಗೊಡಿಸಿದ ಪಕ್ಷಕ್ಕೆ ಕೋಟಿ ಕಟ್ಟಳೆಯಲ್ಲಿ ಹಣ ಶೇಖರಿಸಲಿಕ್ಕೆ ಆಗುವದಿಲ್ಲ, ಪರೋಪಕಾರಕ್ಕೆ ಹೆಚ್ಚಿನ ಅಸ್ಪದವೂ ಇರುವದಿಲ್ಲ.

ಇದೇ ರೀತಿ ಇಲ್ಲಿಯ ವ್ಯಾಪಾರಸ್ಥರು ವರ್ತಕರೇ ಮೊದಲಾದವರು ಈಗ ಅಕ್ಕಿಯನ್ನು ಮಾರಿದೆ ಹಣವನ್ನು ಬಿತ್ತಿಗಾದರೂ ಪಡೆದು ಅದನ್ನು ಇಷ್ಟು ಕ್ರಯ ಏರುವ ವರೆಗೆ ದಾಸ್ತಾನಿಟ್ಟು ನಂತರ ಪಡೆಯುವ ಮುನಾಫೆಯಿಂದ ಚಂದಾಹಣ ಕೊಟ್ಟು ಕಮಿಟಿಗಳನ್ನು ಏರ್ಪಡಿಸಿ ಪರೋಪಕಾರಿಗಳೆಂದು ಹೇಳಿಸಿಕೊಳ್ಳುವದಕ್ಕಿಂತಲೂ ಈಗಲೇ ಅಕ್ಕಿಯನ್ನು ತಮ್ಮ ಕ್ರಯಕ್ಕೆ ಬೇಕಾದ ಮುನಾಫೆಯಿಟ್ಟು ಮಾರಿ ಕಮಿಟಿಗಳನ್ನು ಏರ್ಪಡಿಸಲು ಅವಕಾಶಕೊಡದೆ ಸುಮ್ಮನಿರುವದು ಬಹುತವಲ್ಲವೇ? ವ್ಯಾಪಾರ ರೀತಿಗಳನ್ನು [illegible] [illegible] ಬಗ್ಗೆ ಮತ್ತು ಇರುವಾಗ [illegible]

[illegible]

ನಷ್ಟು ಶಿಕ್ಕುವಂಥಾ ಅಕ್ಕಿಯನ್ನು ಇದರಲ್ಲಿ ಪರಊರುಗಳಿಗೆ ಹೋಗುವಂಥಾದ್ದು ಎಷ್ಟು. ಈ ವರುಷದಲ್ಲಿ ಈ ಸಂಖ್ಯೆಗಳು ಹ್ಯಾಗೆ ಮಾರ್ಪಟ್ಟಿರುತ್ತವೆ? ಅದ್ದರಿಂದ ದಾಸ್ತಾನು ಹ್ಯಾಗಾಗಬೇಕು. ರೈಲ್ವೆ ಪ್ರಯೋಜನವನ್ನು ನಾವು ಹ್ಯಾಗೆ ಇಂಥಾ ಕಾಲದಲ್ಲಿ ಪಡಿಯುತ್ತಿರುತ್ತೇವೆ. ಗೋದಾವರಿ ಮೊದಲಾದ ಈ ಸಂಸ್ಥಾನದ ಇತರ ಜಿಲ್ಲೆಗಳಲ್ಲಿ ಅಕ್ಕಿಯ ಧಾರಣೆ ಜೋರಾಗುತ್ತದೆ. ಇದನ್ನಾದರೂ ತರಿಸಿಕೊಂಡು ಧಾರಣೆಯನ್ನು ತಗ್ಗಿಸಲು ಸಾಧ್ಯವಿಲ್ಲವೇ? ಅಥವಾ ತರಿಸಿದಲ್ಲಿ ವಿಕ್ರಯಕ್ಕೆ ಪೂರೈಸುವದಲ್ಲವೋ? ಅಂದರೆ ಪರಜಿಲ್ಲೆಗಳಿಂದ ಅಕ್ಕಿಯನ್ನು ತರಿಸಿದರೆ ಇಲ್ಲಿ ಇದರ ಕ್ರಯವು ಬಿದ್ದು ಹೋಗಿ ಗೋವೆಗೆ ಹೋಗುವ ಇಲ್ಲಿಯ ಅಕ್ಕಿಗೆ ಧಾರಾಳವಾದ ಕ್ರಯವು ದೊರಕದೆ ಅಡಚಣೆ ಸಂಭವಿಸಬಹುದೆಂತ ಆಗುತ್ತದೋ? ಈ ಜಿಲ್ಲಾ ಜನರಿಗೆ ಜೀವನದ ಆಹಾರವು ಅಕ್ಕಿಯಲ್ಲದೆ ಮತ್ತೊಂದರ ಅಭ್ಯಾಸವು ಇಲ್ಲದ್ದರಿಂದ ಅಕ್ಕಿಗೆ ಧಾರಣೆಯು ಏರಿದ್ದಲ್ಲಿ ಬಡವರಿಗೆ ಬಹಳ ಸಂಕಟಗಳೊದಗುವವು. ಅದ್ದರಿಂದ ಇಲ್ಲಿಯ ಅಕ್ಕಿ ವ್ಯಾಪಾರ ಮತ್ತು ದಾಸ್ತಾನು ವಿಷಯಗಳನ್ನು ಆಲೋಚಿಸಿಕೊಂಡು ಅವನ್ನು ವಿವರವಾಗಿ ತಿಳಿಸಿ ಜನರು ಈ ಸಂಕಷ್ಟವನ್ನು ತಪ್ಪಿಸಿಕೊಳ್ಳುವ ಬಗೆಯನ್ನು ಸೂಚಿಸಿದರೆ ಬಹಳ ಉಪಕಾರವಾಗುತ್ತದೆ. ಅಕ್ಕಿ ವ್ಯಾಪಾರಸ್ಥರು ಇಲ್ಲಿ ಬಹಳ ಜನರಿದ್ದಾರೆ. ಬಹಳ ಅನುಭವಸ್ಥರೂ ಇರುವರು. ಇವರಲ್ಲಿ ಕೆಲವರು ಕಳೆದ ಸಾರಿಯ ಡಿಸ್ಟ್ರೆಸ್ ಕಮಿಟಿಯ ಮೆಂಬರರಾಗಿಯೂ ಇದ್ದರು. ಇಂಥವರು ಬಡ ಜನರ ಉಪಕಾರಾರ್ಥವಾಗಿ ಯಥಾರ್ಥ ಸ್ಥಿತಿಯನ್ನು ತಮ್ಮ ಪತ್ರಮೂಲಕ ವಿವರಿಸಿ ಹೇಳಿದರೆ ಡಿಸ್ಟ್ರೆಸ್ ಕಮಿಟಿಯ ಕೆಲಸವು ಸುಲಭವಾಗುವದು.

ಉತ್ತರಾಭಿಲಾಷಿ.

ಪಂಚಾಂಗಗಳ ವಿಷಯ.

ಅಯ್ಯಾ ಆರ್ಯ ಮಹಾಶಯರೇ — ಈಗ ಕೆಲವು ದಿನಗಳ ಹಿಂದೆ ಇದೇ ಪತ್ರಿಕೆಯಲ್ಲಿ "ಪಿಂಗಲ ಸಂವತ್ಸರದ ಪಂಚಾಂಗಗಳ ಪಿಕಲಾಟ"ವೆಂಬ ಒಂದು ಲೇಖವನ್ನು ತಾವೆಲ್ಲರೂ ಓದಿರಬಹುದು. ಊರಲ್ಲಿಯೂ ಈ ವರ್ಷ ಪಂಚಾಂಗ ಚರ್ಚೆಯು ಬಲ್ಲಲ್ಲಿ ಜೆಟ್ಟಾಗಿ ನಡೆಯುತ್ತಿದೆ. ಪಂಚಾಂಗಗಳು ಅನೇಕ ಹೊರಡುವದರಿಂದ ಮತ್ತು ಒಂದಕ್ಕೊಂದು ತಾಳೆ ಇಲ್ಲದಿರುವದರಿಂದಲೂ ಈ ಚರ್ಚೆಯು ಉಂಟಾಗಲೂ ದಿನೆ ದಿನೆ ವೃದ್ಧಿಹೊಂದಲೂ ಕಾರಣ. ಪಂಚಾಂಗಗಳು ಒಂದಕ್ಕೊಂದು ತಾಳೆ ಇಲ್ಲದಿರುವ ಕಾರಣ, ಈಗಿನ ಕಾಲದಲ್ಲಿ ಇಂಥ ಪಂಚಾಂಗಗಳೇ ಯೋಗ್ಯ? ಎಂಬಿವೇ ಮೊದಲಾದ ಎಲ್ಲಾ ವಿಷಯಗಳೂ "ವೈಜಯಂತೀ" ಎಂಬ ಹೆಸರಿನ ಪುತ್ತೂರು ಪಂಚಾಂಗದ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಬರೆದಿವೆ. ಹೊಸದಾಗಿ ಗಣಿತ ಗ್ರಂಥಾಧಾರದಿಂದ ಮಾಡುವ ಪಂಚಾಂಗಗಳಲ್ಲಿ ಬರೆದಂತೆ ಗ್ರಹಣ ವಕ್ರಮೌಢ್ಯ ಸಮಾಗಮ ಮೊದಲಾದವು ಆಕಾಶದಲ್ಲಿ ಆಯಾ ಸಮಯದಲ್ಲಿ ಪ್ರತ್ಯಕ್ಷ ನಿದರ್ಶನಕ್ಕೆ ಸರಿಯಾಗದೆ ತಪ್ಪಿಹೋಗುವವು. ದೃಷ್ಟಾಂತಕ್ಕಾಗಿ ಎಲ್ಲರಿಗೂ ಗೊತ್ತಾಗುವ ಒಂದು ವಿಷಯವನ್ನು ಈ ಕೆಳಗೆ ತಿಳಿಸುತ್ತೇನೆ. ನಮ್ಮ ಈ ಊರಲ್ಲಿ ಪ್ರಚಾರವಿರುವ ಉಡುಪಿ ವೆಂಕಟರಾಜ ಉಡುಪರ ಪಂಚಾಂಗದಲ್ಲಿಯೂ ಉಡುಪಿ ಗೋಪಾಡಿ ಕೃಷ್ಣಭಟ್ಟರಿಂದ ಗುಣಿಸಲ್ಪಟ್ಟ ಪಂಚಾಂಗದಲ್ಲಿಯೂ ಚಕ್ರಕೋಡಿ ಸುಬ್ರಹ್ಮಣ್ಯ ಶಾಸ್ತ್ರಿಗಳವರ ಪಂಚಾಂಗದಲ್ಲಿಯೂ, ಮಂಗಳೂರು ಉದಿಯಾವರ ನಾರಾಯಣಾಚಾರ್ಯರ ಪಂಚಾಂಗದಲ್ಲಿಯೂ ಇದೇ ಪಿಂಗಲ ಸಂ। ವೈಶಾಖ ಶು ೨ ಚಂದ್ರವಾರ (ತಾ. ೨೩-೪-೧೭) ಚಂದ್ರದರ್ಶನವೆಂತಲೂ ಗುರುವಿಗೆ ಪಶ್ಚಾದಸ್ತವೆಂತಲೂ ಬರೆದಿದೆ. ಆದರೆ "ವೈಜಯಂತೀ" ಎಂಬ ನೂತನ ದೃಕ್ಸಿದ್ಧಾಂತ ಪ್ರಕಾರ ಗುಣಿಸಿದ ಪುತ್ತೂರು ಪಂಚಾಂಗದಲ್ಲಿ ಪಿಂಗಲ ಸಂ। ವೈಶಾಖ ಶು. ೧ ರವಿವಾರ (ತಾ. ೨೨-೪-೧೭)ನೇ ಚಂದ್ರದರ್ಶನವೆಂತಲೂ ವೈಶಾಖ ಶು. ೬ ಶುಕ್ರವಾರ (ತಾ. ೨೭-೪-೧೭) ಗುರುವಿಗೆ ಪಶ್ಚಾದಸ್ತವೆಂತಲೂ ಬರೆದಿದೆ. ಪಂಚಾಂಗಗಳ ಯಥಾರ್ಥವನ್ನು ತಿಳಿಯಲಪೇಕ್ಷೆಯುಳ್ಳ ಆಸ್ತಿಕ ಶಿರೋಮಣಿಗಳು ಪಿಂಗಲ ಸಂ। ವೈಶಾಖ ಶು. ೧ಯು ರವಿವಾರ (ತಾ. ೨೨-೪-೧೭) ಸೂರ್ಯಾಸ್ತಮಾನ ಸಮಯದಲ್ಲಿ ಸ್ವಲ್ಪ ಎತ್ತರ ಸ್ಥಳದಲ್ಲಿ ನಿತ್ತು ಒಂದು ಘಳಿಗೆಯ ವರೇಗೆ ಪಶ್ಚಿಮ ದಿಗಂಗನಾಮುಖವನ್ನು ನೋಡುವವರಾದರೆ ನಖಾಕೃತಿಯಿಂದಿರುವ ಚಂದ್ರನು ಮತ್ತು ಅದರ ಸಮೀಪದಲ್ಲಿ ಚುಕ್ಕಿಯಂತೆ ಕಾಣುವ ಗುರುವು ಕಾಣುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಪಂಚಾಂಗಗಳ ರಹಸ್ಯವನ್ನು ಇಂಥ ದೃಕ್ಪ್ರತ್ಯಕ್ಷ ವಿಷಯಗಳಿಂದಲೇ ತಿಳಿಯಬೇಕಾಗಿರುವುದರಿಂದ ಆಗಿಂದಾಗ್ಗೆ ಅಂಥ ವಿಷಯಗಳನ್ನು ತಮ್ಮೆಲ್ಲರಿಗೂ ತಿಳಿಸಬೇಕೆಂದಿರುವೆನು. ಆರ್ಯಮತಾಭಿಮಾನಿಗಳಾದ ಮಹನೀಯರು ಈ ವಿಷಯಗಳನ್ನು ಪರೀಕ್ಷಿಸಿ ನನಗೆ ತಿಳಿಸುವಿರಾಗಿ ನಂಬುತ್ತೇನೆ.

ಎರುಮುಂಜ ಶಂಕರ ಜೋಯಿಸ.

ಜೀನಸು ಧಾರಣೆ.

(ರಖಂ).

ಮಸ್ಕಿ ಅಕ್ಕಿ ಹೊಸ್ತು	5—14—0 ರಿಂದ	6— 4—0
ಗುಡ್ಡ ಸುಗ್ಗಿ ,,	5—10—0 ,,	6— 0—0
ಹೊಸ ರಾಶಿ ,,	5— 8—0 ,,	5—12—0
ಅವ್ವಲ್ ಬೆಳ್ತಿಗೆ ,,	6— 4—0 ,,	6—10—0
ಗುಡು ಬೆಳ್ತಿಗೆ ,,	5— 8—0 ,,	5—12—0
ರಂಗೂನು ಬೆಳ್ತಿಗೆ ಗೋಣಿ ಗರಿಪ	9— 8—0 ,,	9—12—0
ಗೋದಿ ಗೋಣಿ ಗರ	11—12—0 ,,	12— 8—0
ಹುರುಳಿ ಗೋಣಿ ಗರ	5—10—0 ,,	6— 4—0
ಕಡಲೆ ಗೋಣಿ ಗರ ಚೋಂಟು	9— 8—0 ,,	10— 8—0
ತೊಗರಿ ಗೋಣಿ ಗರ		10—8—0
ತೊಗರಿ ಬೇಳೆ ಗೋಣಿ ಗರ	12— 8—0 ,,	15— 8—0
ಉದ್ದು ಗೋಣಿ ಗರ	11— 8—0 ,,	11—12—0
[illegible] ಖಂಡಿ ಗರ		,, 35— 0—0
ಉಪ್ಪು ಗೋಣಿ ಗರ	4—12—0 ,,	4—14—0
ಕೊಬ್ರಿ ಖಂಡಿ ಗರ	70— 0—0 ,,	75— 0—0
ಕೊಬ್ರಿಹಿಂಡಿ ಖಂಡಿ ಗರ	17— 0—0 ,,	17— 8—0
ಎಳ್ಳಿಂಡಿ ಖಂಡಿ ಗರ ಚೋಂಟು	27— 8—0 ,,	35— 0—0
ಕೊಬ್ರಿ ಎಣ್ಣೆ ಮುಡಿ ಗರ	6— 0—0 ,,	7— 0—0
ಎಳ್ಳೆಣ್ಣೆ ಮುಡಿ ಗರ (ಕುರಾಸಿನ)		,, 4—10—0
ಚಿಮಣಿ ಎಣ್ಣೆ ಪೆಟ್ಟಿಗೆ ಗರ	6—11—0 ,,	7— 5—0
ಮೋರಿಸ್ ಸಕ್ಕರೆ ಮುಡಿ ಗರ	5— 7—0 ,,	5— 8—0
ಕಾಫಿ ಖಂಡಿ ಗರ	160— 0—0	172— 0—0
[illegible] ಖಂಡಿ ಗರ	80— 0—0 ,,	84— 0—0
ಗೇರುಬೀಜ ಮುಡಿ ಗರ	2— 0—0 ,,	2— 1—0
[illegible] ಖಂಡಿ ಗರ		75— 0—0
[illegible] ಮುಡಿ ಗರ	29— 0—0 ,,	30— 8—0
[illegible] ಮುಡಿ ಗರ		,, 32— 0—0
[illegible] ಗರ		,, 24— 0—0
[illegible] ಮುಡಿ ಗರ	5— 6—0 ,,	5—10—0
[illegible]		310— 0—0

ಯುದ್ಧದ ಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಸಾಲವು

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವ ಬಗ್ಗಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವವು.

1929ರಿಂದ 1947ರ ವರೆಗಿನ ವರ್ಷಗಳ ಮಧ್ಯಕಾಲದಲ್ಲಿ ಸಂದಾಯವಾಗುವ ಸೇಕಡಾ 5ರ ದರದ ಸಾಲವು—1920ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ವಾರ್ ಬಾಂಡ್ಸ್ ಎಂಬ ಯುದ್ಧಸಂಬಂಧವಾದ ಸಾಲಪತ್ರಗಳು, 1922ನೇ ಇಸವಿಯಲ್ಲಿ ಸಂದಾಯವಾಗತಕ್ಕ ಸೇಕಡಾ 5½ ದರದ ಯುದ್ಧಸಂಬಂಧವಾದ ಸಾಲಪತ್ರಗಳು—(1917—18ನೇ ಇಸವಿಯಲ್ಲಿ ಸಾದರುಮಾಡಲ್ಪಡುವ) ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು.

ಅಸಲ್—ವ—ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು.

I. 1929ರಿಂದ 1947ರ ಪರ್ಯಂತದ ವರ್ಷಗಳಲ್ಲಿ ಸಂದಾಯವಾಗತಕ್ಕ ವಾರ್ ಲೋನ್ ಎಂಬ ಯುದ್ಧಸಂಬಂಧವಾದ ಸಾಲವು.

ಸಾದರುಮಾಡುವ ಬೆಲೆ:—ಸೇಕಡಾ 95ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿ ಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 95ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ 15ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ ರೂ. 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳನಂತರದ ಮೊದಲನೆಯ ತಿಂಗಳ, ಎರಡನೆಯ ತಿಂಗಳ, ಮೂರನೆಯ ತಿಂಗಳ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5ರ ಮೇರೆಗೆ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಯಾಗುವುದು.

ಪರಿಹರಿಸಲ್ಪಡುವ ತಾರೀಕು:—ತತ್ಪೂರ್ವವಾಗಿಯೇ ಪರಿಹರಿಸಲ್ಪಡದಿದ್ದರೆ, 1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲವು 1947ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ನೂರಕ್ಕೆ ನೂರರಂತೆ ಮರು ಪಾವತಿಮಾಡಲ್ಪಡುವುದು. ಆದರೆ ಸದರೀ ಸಾಲ ಯಾ ಅದರ ಯಾವದೊಂದು ಭಾಗವನ್ನು ನೂರಕ್ಕೆ ನೂರರಂತೆ, 1929ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿ ಯಾ ಅನಂತರ ಇಂಡಿಯಾ ಗಜೇಟಿನಲ್ಲಿ ಮೂರು ಕ್ಯಾಲಂಡರು ತಿಂಗಳ ನೋಟಿಸು ಕೊಟ್ಟು ಪರಿಹರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇಂಡಿಯಾ ಗವರ್ನ್‌ಮೆಂಟಿನವರು ಇಟ್ಟುಕೊಂಡಿರುತ್ತಾರೆ.

ಸಾಲ ಪರಿಹಾರದ ಭಂಡವಾಳವು:—1929ರಿಂದ 1947ರೊಳಗೆ ಪರಿಹರಿಸಲ್ಪಡುವ ಯುದ್ಧಸಂಬಂಧವಾದ ಸಾಲಪತ್ರಗಳ ಪೇಟೆಯ ಬೆಲೆಯು ತಗ್ಗುವ ಸಂದರ್ಭದಲ್ಲಿ ಏರ್ಪಾಡು ಮಾಡುವ ಬಗ್ಗಾಗಿ, ಇಂಡಿಯಾ ಗವರ್ನ್‌ಮೆಂಟಿನವರು, ಸದರೀ ಸಾಲಪತ್ರಗಳ ಪೇಟೆಯ ಬೆಲೆಯು ಅವು ಸಾದರುಮಾಡಲ್ಪಟ್ಟ ಬೆಲೆಗಿಂತ ಕಡಿಮೆಯಾದಾಗಲೆಲ್ಲಾ ಸದರೀ ಸಾಲದ ಪತ್ರಗಳನ್ನು ರದ್ದುಪಡಿಸುವ ಉದ್ದೇಶವಾಗಿ ಅವುಗಳನ್ನು ಕೊಂಡುಕೊಳ್ಳಲು ಉಪಯೋಗಿಸತಕ್ಕ ಒಂದು ಭಂಡವಾಳವಾಗಿ ಏರ್ಪಡಿಸುವಗೋಸ್ಕರ ಸದರೀ 1929ರಿಂದ 1947ರೊಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೊಬಲಗಿನ ಸೇಕಡಾ ಒಂದುವರೆಗೆ ಸಮಾನವಾದ ಒಂದು ಮೊಬಲಗನ್ನು ವರ್ಷಂಪ್ರತಿ ಪ್ರತ್ಯೇಕಿಸಿಡಲು ಒಪ್ಪಿಕೊಂಡಿರುತ್ತಾರೆ.

II. 1920ನೇ ಇಸವಿಯ ವಾರ್ ಬಾಂಡುಗಳು ಮತ್ತು 1922ನೇ ಇಸವಿಯ ವಾರ್ ಬಾಂಡುಗಳು. (ಇನ್ಕಮ್‌ಟಾಕ್ಸ್ ಮಾಫಿ.)

ಸಾದರುಮಾಡುವ ಬೆಲೆ:—ಸೇಕಡಾ ರೂ. 100ರ ಪ್ರಕಾರ, ಇದರಡಿ ನಮೂದಿಸಿರುವಂತೆ ಪಾವತಿಮಾಡಬೇಕಾಗಿದೆ.

ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವಾಗ ಸೇಕಡಾ ರೂ. 100ರ ಪ್ರಕಾರ.

ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗೆ:—ದರಖಾಸ್ತು ಮಾಡುವ ಕಾಲದಲ್ಲಿ ಸೇಕಡಾ 20ರ ಪ್ರಕಾರ ಮತ್ತು ಉಳಿದ ಮೊಬಲಗನ್ನು ಸೇಕಡಾ 20ರ ಪ್ರಕಾರ ತಿಂಗಳುಗಟ್ಟಲೆಯ ನಾಲ್ಕು ಕಂತುಗಳಲ್ಲಿ, ದರಖಾಸ್ತು ಯಾವ ತಿಂಗಳಲ್ಲಿ ಮಾಡಲ್ಪಡುವುದೋ ಆ ತಿಂಗಳ ನಂತರದ ಮೊದಲನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಿಂಗಳ 15ನೇ ತಾರೀಕಿನಲ್ಲಿ, ಅಥವಾ ಆ ತಾರೀಕು ಆದಿತ್ಯವಾರ ದಿನವಾದರೆ 16ನೇ ತಾರೀಕಿನಲ್ಲಿ, ಪಾವತಿಮಾಡಬೇಕಾಗಿದೆ.

ಬಡ್ಡಿ:—ವರ್ಷ ಒಂದರ ಸೇಕಡಾ 5½ಯ ಪ್ರಕಾರ ಫೆಬ್ರವರಿ 15ನೇ ತಾರೀಕಿನಲ್ಲಿ ಮತ್ತು ಆಗೋಸ್ತು 15ನೇ ತಾರೀಕಿನಲ್ಲಿ ಪಾವತಿಮಾಡಲ್ಪಡುವದು.

ಪರಿಹರಿಸಲ್ಪಡುವ ತಾರೀಕು:—1920ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1920ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ, 1922ನೇ ಇಸವಿಯ ವಾರ್‌ಬಾಂಡುಗಳ ಮೊಬಲಗು 1922ನೇ ಇಸವಿಯ ಆಗೋಸ್ತು 15ನೇ ತಾರೀಕಿನಲ್ಲಿಯೂ ಮರು ಪಾವತಿಮಾಡಲ್ಪಡುವುದು.

III. ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು. (ಇನ್ಕಮ್‌ಟಾಕ್ಸ್ ಮಾಫಿ).

ರೂ. 10, ರೂ. 20, ರೂ. 50 ಮತ್ತು ರೂ. 100ರ ಬಾಬತು ಸರ್ಟಿಫಿಕೇಟುಗಳು ಕೊಡಲ್ಪಟ್ಟ 5 ವರ್ಷಗಳ ತರುವಾಯ ಮರು ಪಾವತಿಯಾಗುವಂಥವುಗಳು.

ಸಾದರು ಮಾಡುವ ಬೆಲೆ:—ರೂ. 7—12, ರೂ. 15—8, ರೂ. 38—12 ಮತ್ತು ರೂ. 77—8.

ಈ ಸರ್ಟಿಫಿಕೇಟುಗಳನ್ನು, ಸದರಿ 5 ವರ್ಷಗಳ ವಾಯಿದೆಯಲ್ಲಿ ಯಾವ ಕಾಲದಲ್ಲಾದರೂ ಸದರಿ ಸಾಲದ ಕುರಿತ ಪ್ರಕಟಣೆಯಲ್ಲಿ ನಿರ್ದೇಶಿಸಲ್ಪಟ್ಟ ದರಗಳ ಮೇರೆಗೆ ಅವು ಸಾದರುಮಾಡಲ್ಪಟ್ಟ ಪೋಸ್ಟು ಆಫೀಸುಗಳಲ್ಲಿ ವಟಾಯಿಸಲು ಸಹಾ ಬಹುದು.

1. **ಸೆಕ್ಯೂರಿಟಿಗಳ ನಮೂನೆ:**—1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಬಾಬತು ಸೆಕ್ಯೂರಿಟಿ ಪತ್ರಗಳು, 1920ನೇ ಇಸವಿಯ ವಾರ್‌ಬಾಂಡುಗಳು ಮತ್ತು 1922ನೇ ಇಸವಿಯ ವಾರ್‌ಬಾಂಡುಗಳು ಅರ್ಜಿದಾರನಿಗೆ ಇಷ್ಟವಿರುವ ಮೇರೆಗೆ ಈ ಕೆಳಗಿನ ನಮೂನೆಗಳಲ್ಲಿ (ಇದನ್ನು ಆತನು ತನ್ನ ಅರ್ಜಿಯಲ್ಲಿ ನಮೂದಿಸತಕ್ಕದ್ದು) ಕೊಡಲ್ಪಡುವುವು.

   (1) ಇನ್‌ಸ್ಕ್ರಾಯಿಬ್ಡ್ (ಹೆಸರು ರಿಜಿಸ್ಟ್ರಿ ಮಾಡಿರುವ) ಸ್ಟಾಕ್ ಸರ್ಟಿಫಿಕೇಟು ... ... ಪತ್ರಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

   (2) ಪ್ರಾಮಿಸರಿ ನೋಟುಗಳು ... ... ಇಂಡಾರಸು ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

   (3) ಬ್ಯಾರರ್ ಬಾಂಡುಗಳು ... ... ಒಪ್ಪಿಸುವದರ ಮೂಲವಾಗಿ ಪರಭಾರೆ ಮಾಡಲ್ಪಡಬಹುದಾದುದು.

ಇಷ್ಟವನ್ನು ನಮೂದಿಸದಿದ್ದ ಪಕ್ಷದಲ್ಲಿ, ಸೆಕ್ಯೂರಿಟಿ ಪತ್ರಗಳು ಇನ್‌ಸ್ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟುಗಳ ರೂಪವಾಗಿ ಪ್ರಥಮತಃ ಸಾದರುಮಾಡಲ್ಪಡುವವು.

2. **ಇನ್ಕಮ್‌ಟ್ಯಾಕ್ಸು:**—1920ನೇ ಇಸವಿಯ ವಾರ್‌ಬಾಂಡುಗಳ ಮತ್ತು 1922ನೇ ಇಸವಿಯ ವಾರ್‌ಬಾಂಡುಗಳ ಮೇಲಣ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಟ್ಟಿದೆ, ಆದರೆ ಸುಪರ್‌ಟ್ಯಾಕ್ಸ್ ಎಂಬ ವಿಶೇಷ ತೆರಿಗೆಯಿಂದ ವಿನಾಯಿಸಲ್ಪಡಲಿಕ್ಕಿಲ್ಲ.

1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ಯುದ್ಧಸಂಬಂಧವಾದ ಸಾಲದ ಮೇಲಣ ಬಡ್ಡಿಯು ಇನ್ಕಮ್‌ಟ್ಯಾಕ್ಸಿನಿಂದಾಗಲೆ ಸುಪರ್‌ಟ್ಯಾಕ್ಸಿನಿಂದಾಗಲಿ ವಿನಾಯಿಸಲ್ಪಡುವದಿಲ್ಲ. ಇನ್ಕಮ್‌ಟ್ಯಾಕ್ಸು ಆಕ್ಟಿನ ಎರಡನೆಯ ಶೆಡ್ಯೂಲಿನ IIIನೇ ಭಾಗದ ನಿಬಂಧನೆಗಳಿಗನುಸಾರವಾಗಿ ಇನ್ಕಮ್‌ಟ್ಯಾಕ್ಸ್ ವಸೂಲು ಮಾಡಲ್ಪಡುವುದು.

3. **ಮಾರ್ಪಡಿಸಲು ಸ್ವಾತಂತ್ರ್ಯಗಳು:**—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ಯುದ್ಧದ ಸಾಲದ ಬಾಬತು ಚಂದಾದಾರನು ಪ್ರತಿ (ಅಂಕಿತ) ರೂ. 100ರ ಬಗ್ಗೆ ಸೇಕಡಾ 3ರ ದರದ, ಅಥವಾ 3½ಯ ದರದ ಯಾವವಾದರೂ ರೂಪಾಯಿ ನಾಣ್ಯದಲ್ಲಿರುವ ಸಾಲಗಳ (ರುಪೀ ಲೋನುಗಳ) ಅಥವಾ ಇಂಡಿಯಾ ಗವರ್ನ್‌ಮೆಂಟಿನವರ 1916—17ನೇ ಇಸವಿಯ ಸೇಕಡಾ 4ರ ದರದ ಕನ್‌ವರ್ಶನ್ ಲೋನಿನ (ಅಂಕಿತ) ರೂ. 150ನ್ನು ಮಾರ್ಪಡಿಸಬಹುದು ಮತ್ತು ಅದರ ಬದಲಾಗಿ ಈ ಕೆಳಗಿನ ದರದಲ್ಲಿ, ಎಂದರೆ—

ಮಾರ್ಪಡಿಸತಕ್ಕ ಸೇಕಡಾ 3ರ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 65,

ಮಾರ್ಪಡಿಸತಕ್ಕ ಸೇಕಡಾ 3½ಯ ದರದ ಸಾಲದ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 76,

ಮಾರ್ಪಡಿಸತಕ್ಕ ಸೇಕಡಾ 4ರ ದರದ ಸಾಲದ ಕನ್‌ವರ್ಶನ್ ಲೋನಿನ ಪ್ರತಿ (ಅಂಕಿತ) ರೂ. 100ಕ್ಕೆ ವಾರ್ ಲೋನಿನ (ಅಂಕಿತ) ರೂ. 92

ನ್ನು ಮತ್ತು ಪೂರ್ತಿಯಾಗಿ ರೂ. 100ಕ್ಕೆ ಭರ್ತಿಮಾಡಲು ಅಗತ್ಯವಿರುವ ಕಡಿಮೆ ಬೀಳುವ (ವಾರ್ ಲೋನಿನ) ಮೊಬಲಗಿನ ಸಹಿತವಾಗಿ ಪಾವತಿಮಾಡಿ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳನ್ನು ಹೊಂದಬಹುದು; ಪರಂತು ಈ ಹೆಚ್ಚಿಗೆ ಮೊಬಲಗನ್ನು ರೂಪಾಯಿ ಒಂದರ ಒಂದು ಆಣೆಯ ಮೇರೆಗೆ ವಜಾಮಾಡಿ ರೊಕ್ಕವಾಗಿ ಪಾವತಿಮಾಡತಕ್ಕದ್ದು.

4. ಮಾರ್ಪಡಿಸುವ ಹಕ್ಕುಗಳನ್ನು 1917ನೇ ಇಸವಿಯ ನವಂಬರು 1ನೇ ತಾರೀಕಿನ ತರುವಾಯ ಯಾವ ಕಾಲದಲ್ಲಾದರೂ ಚಲಾಯಿಸಬಹುದು, ಪರಂತು 1918ನೇ ಇಸವಿಯ ಜನವರಿ 15ನೇ ತಾರೀಕಿನ ನಂತರ ಚಲಾಯಿಸತಕ್ಕದ್ದಲ್ಲ. ಮಾರ್ಪಡಿಸುವ ಕುರಿತ ಅಧಿಕಾರ ಪತ್ರಗಳು ಪರಭಾರೆ ಮಾಡತಕ್ಕವಲ್ಲಾಗಿವೆ, ಮತ್ತು ಬ್ಯಾರರ್ ಫಾರ್ಮಿನಲ್ಲಿ ಕೊಡಲ್ಪಡುವುವು.

5. ಮಾರ್ಪಡಿಸಿ ಕೊಡಲ್ಪಟ್ಟ 1929ರಿಂದ 1947ನೇ ಇಸವಿಯ ಒಳಗೆ ಸಂದಾಯವಾಗುವ ವಾರ್ ಲೋನಿನ ಪತ್ರಗಳ ಬಗ್ಗೆ 1917ನೇ ಇಸವಿಯ ಆಗೋಸ್ತು 15ನೇ ತಾರೀಕು ಮೊದಲ್ಗೊಂಡು ಬಡ್ಡಿ ಪ್ರಾರಂಭವಾಗುವುದು. ಮೇಲಿನ 3ನೇ ಕ್ಲಾಜಿಗನುಗುಣವಾಗಿ ಪಾವತಿಮಾಡಿದ ರೊಕ್ಕ ಮೊಬಲಗುಗಳ ಬಗ್ಗೆ ಪ್ರತ್ಯೇಕವಾಗಿ ಬಡ್ಡಿ ಪಾವತಿಮಾಡೋಣಾಗಲಿಕ್ಕಿಲ್ಲ.

6. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನ್ ಪತ್ರಗಳು, 1920ನೇ ಇಸವಿಯ ವಾರ್ ಬಾಂಡುಗಳು, ಮತ್ತು 1922ನೇ ಇಸವಿಯ ವಾರ್ ಬಾಂಡುಗಳನ್ನು ಸದರಿರೋಣವು, ಇಂಡಿಯಾ ಗವರ್ನ್‌ಮೆಂಟಿನವರು ಇನ್ನು ಮುಂದೆ ಯಾವಾಗಲಾದರೂ ಸಾಲಪತ್ರಗಳನ್ನು ಕೊಡುವ ಸಂದರ್ಭದಲ್ಲಿ ಮಾರ್ಪಡಿಸಲು ಸ್ವಾತಂತ್ರ್ಯ ಕೊಡುವದಿಲ್ಲ.

7. ~~ಅರ್ಜಿಗಳು:—1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಬಗ್ಗೆ, 1920ನೇ ಇಸವಿಯ ವಾರ್ ಬಾಂಡುಗಳ ಬಗ್ಗೆ, 1922ನೇ ಇಸವಿಯ ವಾರ್ ಬಾಂಡುಗಳ~~ ಬಗ್ಗೆ ಮಾಡೋಣಾಗುವ ಅರ್ಜಿಗಳನ್ನು (ಪೋಸ್ಟು ಆಫೀಸಿನ ಮುಖಾಂತರವಾಗಿ ಮಾಡೋಣಾಗುವ ಅರ್ಜಿಗಳ ವಿನಾ) 1917ನೇ ಇಸವಿಯ ಮಾರ್ಚಿ 15ನೇ ತಾರೀಕು ಗುರುವಾರದ ರಾಗಾಯಿತು, 1917ನೇ ಇಸವಿಯ ಜೂನು 15ನೇ ತಾರೀಕು ಶುಕ್ರವಾರದ ವರೆಗೆ, ಯಾವ ದಿನವಾದರೂ ಈ ಕೆಳಗೆ ನಮೂದಿಸಿರುವ ಆಫೀಸರರ ಯಾ ಮನುಷ್ಯರ ಬಳಿ ಹಾಜರುಪಡಿಸಬಹುದು:—

   (1) ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಬಳಿಗೆ, ಅಥವಾ ಯಾವದಾದರೂ ಪ್ರಾವಿನ್ಸಿನ ಅಕೌಂಟಾಂಟ್ ಜನರಲ್‌ರ ಯಾ ಕಂಟ್ರೋಲರ ಬಳಿಗೆ;—(2) ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಸೆಕ್ರೆಟರಿಗಳ ವ ಟ್ರೆಜರರುಗಳ ಬಳಿಗೆ, ಅವರವರ ಹೆಡ್ ಆಫೀಸುಗಳಲ್ಲಿ; ಅಥವಾ ಇಂಡಿಯದಲ್ಲಿಯ ಸದರಿ ಬ್ಯಾಂಕುಗಳ ಯಾವದೊಂದು ಶಾಖೆಯ ಮ್ಯಾನೇಜರುಗಳ ಬಳಿಗೆ; ಮತ್ತು (3) ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಗವರ್ನ್‌ಮೆಂಟ್ ಖಜಾನೆಗಳ ತಾಬೆಯಿರುವ ಆಫೀಸರರ ಬಳಿಗೆ.

8. ಅರ್ಜಿಗಳು 100 ರೂಪಾಯಿ ಯಾ ಅದರ ಅಪವರ್ತ್ಯಗಳ ಬಗ್ಗೆ (ಎಂದರೆ, ರೂ. 100, 200, 300 ಈ ಮೇರೆಗೆ) ಮಾಡಲ್ಪಡಬೇಕು.

9. ಮೊಬಲಗು ರೂ. 100ರ ಬಗ್ಗೆ ಮಾತ್ರ ಮಾಡಲ್ಪಡುವ ಎಲ್ಲಾ ಅರ್ಜಿಗಳ ಸಂಗತಿಯಲ್ಲಿ ಪೂರಾ ಮೊಬಲಗು, ಎಂದರೆ 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ ಸಂಗತಿಯಲ್ಲಿ ರೂ. 95 ಮತ್ತು 1920ನೇ ಇಸವಿಯ ವಾರ್ ಬಾಂಡುಗಳ ಮತ್ತು 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 100 ಕಳುಹಿಸಲ್ಪಡಬೇಕು.

10. 1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ವಾರ್ ಲೋನಿನ, 1920ನೇ ಇಸವಿಯ ವಾರ್ ಬಾಂಡುಗಳ ಅಥವಾ 1922ನೇ ಇಸವಿಯ ವಾರ್ ಬಾಂಡುಗಳ ಸಂಗತಿಯಲ್ಲಿ ರೂ. 200ರ ಯಾ ಅಧಿಕ ಮೊಬಲಗುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳು—

   (a) ಪೂರ್ತಿಯಾಗಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ,—(b) ಕಂತುಗಳಲ್ಲಿ ಪಾವತಿಮಾಡಲ್ಪಡುವ ಮೊಬಲಗುಗಳ ಬಗ್ಗಾಗಿ ಆಗಲಿ, [illegible]

12. ದಲಾಲಿ:—ಅಂಗೀಕರಿಸಲ್ಪಟ್ಟ ಬ್ಯಾಂಕರರುಗಳು, ದಲಾಲಿಗಳಿಗೂ, ಅವರ ಸ್ವಾಂತ ಇದ್ದ ರೊಕ್ಕದ ಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ [illegible] ಪ್ರಕಾರ ಕಮ್ಮಿಷನು ಕೊಡಲ್ಪಡುವುದು. ಆದರೆ ಪೋಸ್ಟ್ ಆಫೀಸುಗಳ ಮುಖಾಂತರವಾಗಿ ಮಾಡಲ್ಪಡುವ ಅರ್ಜಿಗಳ ಸಂಗತಿಯಲ್ಲಿ ಮತ್ತು ಪೋಸ್ಟು ಆಫೀಸಿನ [illegible] ಸರ್ಟಿಫಿಕೇಟುಗಳ ಬಗ್ಗೆ [illegible]

[illegible]

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	...	300,000—0—0
Issued Capital	...	225,000—0—0
Subscribed Capital	...	225,000—0—0
Paid up Capital	...	200,225—0—0
Deposits	...	339,775—7—10
Reserve Fund	...	50,003—2—5

ನಿಯಮಿತ ಮೂಲ ಧನವು ರೂಪಾಯಿ		300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	200,225—0—0
ಠೇವಣಾತಿಯಾಗಿ ಕೊಡೋಣಾದ ಮೊಬಲುಗುಗಳು		330,775—7—10
ರಕ್ಷಿತ ಧನವು	...	50,003—2—5

25% of the net profits are added annually to the Reserve Fund. Rs.28,485/- have been invested in Government Paper of the face value of Rs.29,300/-

Dividends of not less than 6% paid during the past years and a bonus of 1% to 2% paid in addition during the last eight years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,

Mangalore, 1st April 1917.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಧನ್ಯತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು(ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಳೆದ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋತ್ತೇಜಕವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮೀರಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್, ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಪಿಂಗಳ ಸಂವತ್ಸರದ ಉಡುಪಿ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ! ಎಲ್ಲರೂ ಕೊಂಡುಕೊಳ್ಳಿ!!

ತಿಥಿಗಣನಾದಿ ಎಲ್ಲ ಭಾಗಗಳಲ್ಲಿಯೂ ಸಪ್ರಮಾಣವಾದುದು. ಇದೇ ಸರಿ!!!

ಧರ್ಮಶಾಸ್ತ್ರೋಕ್ತವಾದ ತಿಥಿನಿರ್ಣಯವು ಸ್ಮಾರ್ತ, ವೈಷ್ಣವ, ಸೌರ, ಚಾಂದ್ರ, ಸಂಪ್ರದಾಯಾನುಸಾರವಾಗಿ ಸರ್ವ ಸಮೀಚೀನವಾಗಿ ಸಂಕಲ್ಪಿಸಲ್ಪಟ್ಟಿರುವುದು ಇದೊಂದರಲ್ಲಿಯೇ!!! ಅಷ್ಟಮಠ ಪುರೋಹಿತರೂ, ಅಗ್ನಿಹೋತ್ರಿಗಳೂ, ಜ್ಯೋತಿಷಿಕರೂ ಆದ ಬ್ರಹ್ಮಶ್ರೀ ಅನಂತ ರಾಮೋಪಾಧ್ಯಾಯರಿಂದ ಪರಿಶೋಧಿತವಾಗಿ ಉಡುಪಿ ಸದಾನಂದ ಮುದ್ರಾಶಾಲೆಯ ಸುಂದರ ಮುದ್ರಣದಿಂದ ಕಂಗೊಳಿಸುತ್ತಿರುವುದು. ಕಾಗದ ಮುಂತಾದ ಮುದ್ರಣ ಸಾಮಾಗ್ರಿಗಳ ದರವು ಅತ್ಯಧಿಕವಾಗಿ ಏರಿದರೂ ಕೂಡ ಜನರ ಸೌಕರ್ಯಕ್ಕೋಸ್ಕರ 40 ಪುಟಗಳುಳ್ಳ ಗ್ಲೇಜ್ ಕಾಗದದ ಈ ಪಂಚಾಂಗ 1ರ ಬೆಲೆ **ಆಣೆ ಎರಡು ಮಾತ್ರ!** ಇದಲ್ಲದೆ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಒಳ್ಳೆ ಕಮಿಶನ್! ಎಲ್ಲಕ್ಕೂ ಉತ್ತಮವಾದುದು! ತ್ವರೆಮಾಡಿ!

ವಿಳಾಸ: —

ಸದಾನಂದ ಮುದ್ರಾಶಾಲೆ, ಉಡುಪಿ. | ಸಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ., ಉಡುಪಿ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿ ದೊರೆಯುವದು.

ಹಿಂದೂ ವ್ರತವಿವೇಕ.

(ಅಚ್ಚಾಗುತ್ತಲಿದೆ.)

ಹಿಂದೂಗಳು ಸರ್ವಸಾಮಾನ್ಯವಾಗಿ ಆಚರಿಸುವ ವ್ರತಗಳ ವಿವರ, ಅವುಗಳನ್ನು ಆಚರಿಸುವ ಸಂಕ್ಷೇಪ ವಿಧಾನ, ಅವುಗಳ ಮೂಲ ಇವೆಲ್ಲವನ್ನೊಳಕೊಂಡಿರುವ ಪುಸ್ತಕವು ಇನ್ನು ಸದ್ಯದಲ್ಲಿ ಪ್ರಕಟವಾಗುವದು.

ಮೊದಲನೆಯ ವರುಷದಲ್ಲಿ ಸಾಲೆಯ ಮಕ್ಕಳಿಗೆ ಗಣಿತದ ಪಾಠಪಟ್ಟಿ ಮತ್ತು ಕಲಿಸುವದನ್ನು ಕುರಿತು ಸೂಚನೆಗಳು ಕೂಡಿರುವ

ಗಣಿತ ಪಾಠ.

ಕ್ರಯ 0—2—6.

ವ್ಯವಹಾರ ವ್ಯಾಪಾರಗಳ

ಬಗ್ಗೆ ಬೇಕಾಗುವ ಕೋರ್ಟು ಫೋರ್ಮು, ಗೇಣಿ ಚೀಟು ಫೋರ್ಮುಗಳು, ಬೀಲು ಯಾನೆ ಪಟ್ಟಿ ಫೋರ್ಮುಗಳು ನಾನಾ ಬಗೆಯ ಲೆಕ್ಕದ ಪುಸ್ತಕಗಳು.

ಇವೆಲ್ಲವು ದೊರಿಯುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು ದ. ಕ.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸ್ಥಿರ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೫ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0—12—0. ¼ ಔನ್ಸ್ ಟ್ಯೂಬ್ 2—0—0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ವಿ. ಪಿ. ಖರ್ಚು 0—4—0 ಬೇರೆ.

[illegible]

10 [illegible]

S. S. [illegible] & Co.

ಇಮಿಟೇಶನ್

ವಜ್ರದ ಒಡವೆಗಳು.

ಈ ಒಡವೆಗಳು ಅಪರಂಜಿ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿ ಬಿಳೇ ಕಲ್ಲು, ಕೆಂಪು ಕಲ್ಲುಗಳು ಇಟ್ಟು ಕಟ್ಟಿರುತ್ತದೆ. ಈ ಒಡವೆಗಳು ಅಮೇರಿಕಾ, ಇಂಗ್ಲೆಂಡ್ ದೇಶಗಳಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ 4 ವರುಷಗಳ ವರಿವಿಗೂ ಬಣ್ಣ ಹೋಗುವದಿಲ್ಲವೆಂದು ಗ್ಯಾರಂಟಿ ಕೊಡುವೆವು. ಅಮೇರಿಕಾ, ಇಂಗ್ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ಹೇಳುವವರಿಗೆ ಅವರ ಹಣವನ್ನು ವಾಪಸು ಕೊಡುವೆವು.

ಇಮಿಟೇಶನ್ ವಜ್ರದ ಬೆಂಡೋಲೆ.



ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವದು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಈ ಬೆಂಡೋಲೆಯನ್ನು ಕೊಂಡುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ರೋಲ್ಡ್ ಗೋಲ್ಡ್ ಭಂಗಾರದಿಂದ ತಯಾರಿಸಿದೆ. 7 ಕಲ್ಲಿನ ಬೆಂಡೋಲೆ ಕ್ರಯ ರೂ. 2—0—0. 7 ಕಲ್ಲಿನ ಕೆಂಪು ಬೆಂಡೋಲೆ ಕ್ರಯ ರೂ. 3—8—0.

ಕುರುಡು ಬಾವಲಿ.

ಈ ಬಾವಲಿಗಳು ಈಗತಾನೇ ಸೀಮೆಯಿಂದ ಬಂದಿವೆ. ಇದರಲ್ಲಿ ಕೆಂಪಿನದು ಬಿಳಿಕಲ್ಲಿನದು ಉಂಟು. ಇವು ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿರುತ್ತೆ. ಈ ಕಲ್ಲುಗಳು ಬಹು ಪ್ರಕಾಶವುಳ್ಳವುಗಳೂ ಬಹು-ಸುಂದರವಾದ್ದು. ಇದಕ್ಕೆ ಮುತ್ತುಗಳು ಕಟ್ಟಿರುತ್ತೆ.

ಇದರ ಬೆಲೆ ಜೊತೆ 1ಕ್ಕೆ ರೂ. 2—8—0.

ಬುಲಾಕು.



ಈ ಬುಲಾಕುಗಳನ್ನು ಇಮಿಟೇಶನ್ ವಜ್ರದ ಕಲ್ಲುಗಳಿಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿ ಅಪರಂಜಿ ಭಂಗಾರದ ಗಿಲೀಟು ಮಾಡಿರುವದು. ಇದರಲ್ಲಿ ಕೆಂಪು, ಬಿಳಪು, ಹಸರು ಬಣ್ಣದಲ್ಲಿ ಇರುವವು.

ಇದರ ಬೆಲೆ 1ಕ್ಕೆ ರೂ. 1—8—0.



ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ, ಎಣ್ಣೆ ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ದೀಪ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಸಿಗರೇಟ್, ಚುಟ್ಟ ಸೇದುವವರಿಗೂ ರಾತ್ರಿಯಲ್ಲಿ ತಿರುಗುವವರಿಗೂ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ. ಕ್ರಯ ರೂ. 1—8—0.

ಕೈಯಲ್ಲಿ ಕಟ್ಟುವ ಗಡಿಯಾರ.

ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಅಥವಾ ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಷ್ಟಪಟ್ಟಾಗ್ಯೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾಗದು. ಇದರ ಕ್ರಯ ರೂ. 4—8—0.

ವಿಳಾಸ:— ಪಿ. ಗೋಪಾಲ್ ಎಂಡ್ ಕೊ.
28 ಹನುಮಂತರಾಯ ಕೊಯಿಲ್ ಬೀದಿ,
ಪಾರ್ಕ್‌ಟೌನ್, ಮದರಾಸು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಖರ್ಚು 0—4—0.

Dr. Navaratna & Sons,
Kalbadevi Road, BOMBAY.

[illegible]

K. B. RELE & Cos.,—BOMBAY

Estd. 1888.   ಕೆ. ಬಿ. ರೇಳೆ ಕಂಪೆನಿಕೃತ   ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೇ ಸಾರಿ ಹಚ್ಚೋಣದಿಂದಲೇ ಶಮನವಾಗುತ್ತದೆ. ೨೦—೩೦ ವರ್ಷಗಳ ಹಳತ, ಶ್ಯಾಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ)ಯಿಂದ ಮೈಮೇಲೆ ಉಬ್ಬುವ ಹಕ್ಕಿಗಳೂ, ಜಿಬುಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹೂಡು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯಸಂದು ನೋವೋಣ, ಕೈಕಾಲು ಒಡಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕೊಳ್ಳುವವರಿಗೆ ಧರಪುರ ಕಮಿಷನ್.

ಗ… ಎರಡು … ಗುಣವಾಗ… ಹೊಸತಾ… ದ್ದಿಲ್ಲಾ…

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಇಕ್ಲಿಪ್ಸ್ ಡ್ರಾಪ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, … ಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವವ. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ಇಕ್ಲಿಪ್ಸ್ ಬಾವ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುರುಕು, ತುರಿಕಜ್ಜಿ, ಮೂಲವ್ಯಾಧಿ, ಬೆಂಕಿಯ ಬೊಕ್ಕೆ ನೊಡವೆ, ಜೇಣು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1ಕ್ಕೆ ಆಣೆ … ವಿ. ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4-12-…

☞ ಖಾಸಾ ಯುಕಲಿಪ್ಟಸ್ ತೈಲ 5 ಆಣೆ; ಟೂರಕಟ್ ರೂ. 1-8 ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರೆಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋ. ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟ್‌ರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು …

ಇದ್ದರೂ, ಸ್ವಪ್ನೇಂದ್ರಿಯಸ್ರಾವವೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, … ಮತ್ತು ಸೊಂಟದಲ್ಲಿ ನೋವಿದ್ದರೂ … ಇಲ್ಲದಿದ್ದರೂ, ಮಲವಿಸರ್ಜನೆಯು … ಯಾಗಿ ಆಗದಿದ್ದರೂ, ಶರೀರದಲ್ಲಿ … ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗ… ರವನ್ನು … ಸ್ಥಿತಿಯಲ್ಲಿ ಇರುವ … ಮುರಬ್ಬಾವು ಸಾಲಾಬ್ … ತಯಾರಿಸಲ್ಪಟ್ಟಿದ್ದಲ್ಲವೆಂದು … ವವರಿಗೆ —

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ … ಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು. ಸಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಡಬ್ಬಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, … ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2. ಕೊಂಬ್ಬ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ನೋಡಿದರಲ್ಲಿ … ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ … ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗ ತಿಳಿಸಲು ನಾನು ಬಹಳ ಸಂತೋಷಪಡುತ್ತೇನೆ. … ಅನೇಕ … ಔಷಧವನ್ನು ಉಪಯೋಗ ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್, ರೆವಿನ್ಯೂ (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ … ಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು … ಯಾರೂ ಹೇಳಕೂಡದುಹಾಗೆ ಹೇಳುವುದನ್ನು ಅಂಗೀ… ವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ಬೇಕಾದ ಪಿನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ … ಕಂಟ್ರ್ಯಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ದ್ರೋಹದ … ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ, ಕೋರ್ಟುಫೀ, ರಿಜಿಸ್ಟ್ರೇಶನ್, ಹಿಂದೂ ಲಾ, ದೊಡ್ಡಿ ಆಕ್ಟ್, ಟ್ರಿಯಲ್ ಆಫ್ ಕಂಟ್ರ್ಯಾಕ್ಟ್, … ಆಕ್ಟ್, ರೆವಿನ್ಯೂ ಕೋಡ್, … ಪಾಲೀಸ ಕೋಡ್, … ಕೋರ್ಟ್ ಕೋಡ್, ಸಹೋದರರು ಮನೆಗಳನ್ನು … ಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, … ನಮೂನೆಗಳು ಮತ್ತು ದಸ್ತೈವಜುಗಳ 40 … ಇದು ಪ್ರತಿಯೊಬ್ಬನ ಸಮೀಪದಲ್ಲಿ ಇರತಕ್ಕದ್ದು. …

… 1—8—0. … 1—12—0.

ಯಂ. ಯಸ್. ನಂ…
…

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುವಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೬೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೬೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯರ್ನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—
ಭಂಡಾರಕಾರ ಬ್ರದರ್ಸ್,
ಉಡುಪಿ.

ಅಜೇಯಶತ್ರುವು.

ಅಜೀರ್ಣ, ರಕ್ತಶೋಥೆ, ಮೂತ್ರ ಪಿಂಡರೋಗಗಳು, ನಪ್ಪುಂಸಕತ್ವ, ಅಕಾಲ, ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನ ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೬ ಸಾಮಾನುಗಳು ಇರುವ ಪೆಟ್ಟಿಗೆಗೆ ೧—೮—೦. ಮಧ್ಯಮ ತರದಸೆಟ್ಟು ೧ಕ್ಕೆ ೩-೦-೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಸ್ವಾಬುಲಿ ಇಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದುಯಂ ರೂಪ್ಯಾ ೧ಕ್ಕೆ ೮ ತೊಲೆ, ತೀಯಂ ರೂಪ್ಯಾ ಒಂದಕ್ಕೆ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—
ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಂಬಾ, ಕಾಶಿ.
SIROMANI NARAYANA CHARYA & CO,
Chowkhambay,
BENARES CITY.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯ ಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ—

ಮುಂಬೈಲ್ಯಾಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ| ಲಲ್ಲುಬಾಯಿ, ಸಾಮಲ್‌ದಾಸ್‌ರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿ ಜೆ.ಪಿ. ಒನರರಿ ಪ್ರೆಸಿಡನ್ಸಿ ಮೆಜಿಸ್ಟ್ರೇಟರು.

ಎಕ್ಚು ವೆರಿ:—ಮಿ| ಜೋರ್ಜ್‌ಕಿಂಗ್ ಎಫ್. ಎಫ್. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. ೨—೦, ಠೇವಣಾತಿ ಮಾಡಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಜಗ್ಗ ಪತ್ರ ಒದೆಯುವ ವಿಳಾಸ:—

ಗಣಾನೇ
ಕೊಚ್ಚಿಕ್ಕಾರ್ ಬ್ರದರ್ಸ್, ಉ ಇದ
ಪ್ರಾಮುಖ್ಯ ವದು

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಇನ್ನು ಆ ಬಗ್ಗೆ ರಶೀದಿಯನ್ನು ಕೊಚ್ಚಿಕ್ಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡತಕ್ಕದ್ದು.

ಸೇಲಂ, ತಾ. 10—4.

ಮುಂಬಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರೇ

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕವನ್ನು ಸಹರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೋನಸ್ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತೆತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೇಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಿಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗ್ಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

"ಗ್ರಾಹಕರೇ ಒಮ್ಮೆಗೆ ಸಂದರ್ಶಿಸಿರಿ."

ನಮ್ಮಲ್ಲಿ ಎಲ್ಲಾ ತರದ ಸುಗಂಧ ಸಾಹಿತ್ಯಗಳೂ, ಇಂಗ್ಲಿಷ್ ಮತ್ತು ಸ್ವದೇಶಿ ಸಾಬೂನುಗಳು, ಸುಗಂಧ ತೈಲಗಳು, ಅರಾರೂಟ್, ಬಾರ್ಲಿ, ಕೋಕೋ ಸೊಪ್ಪು, ಬಿಸ್ಕಿಟುಗಳು, ಟೊಯಿಲೆಟ್ ಪೌಡರುಗಳು, ಶೀತ ಕಾಲಕ್ಕೆ ಅನುಕೂಲ ವಿರ್ಲ್ ಆಫ್ ರೋಜ್ ಮತ್ತು ಕ್ರೈಮ್‌ಜ್ಯೂಸ್‌ಗ್ಲಿಸೆರಿನ್, ಫೋಮಿಡ್ ಪೆಟ್ಲಿನ್ ಲಾಂದ್ರ ಮತ್ತು ಚಿಮಣಿ ಲಾಂದ್ರಗಳು, ಕಪ್ ಮತ್ತು ಸ್ಸಾಸರುಗಳು, ಬೋಕ್ ಮತ್ತು ಪೆಪ್ಪರ್ ಮಿಟುಗಳು, ಟೇಬಲ್ ಲೇಂಪುಗಳು, ವಿವಿಧ ಲೋಹದ ಸಾಹಿತ್ಯ ಮುಖ ನೋಡುವ ಕನ್ನಡಿಗಳು, ವಾಚು ಮತ್ತು ವಾಚಿನ ಸರಪಣಿಗಳು, ಮಕ್ಕಳು ಆಡುವ ಸಾಹಿತ್ಯಗಳು, ಫೌಂಟನ್‌ಪೇನು ಮತ್ತು ಇಂಕುಗಳು, ಕ್ಯಾಶ್ ಬೊಕ್ಸುಗಳು, ದೃಷ್ಟಿ ಚಕ್ರಗಳು, ಪೇಟೆಂಟ್ ಔಷಧಿಗಳು, ರಬ್ಬರು ಮಾಗಿಯೂ ಚಿಲ್ಲರೆ ಸಾಗಿಯೂ ಅತೀ ಸುಲಭ ದರದಲ್ಲಿ ದೊರಕುವದಲ್ಲದೆ ಈ ಕೆಳಗೆ ಕಾಣಿಸಿದ ಸಾಹಿತ್ಯಗಳಿಗೆ ನಾವು ಮುಖ್ಯ ಏಜಂಟರಾಗಿರುವೆವು. ಕಾಮಿನಿಯಾ ಮತ್ತು ಒಟ್ಟೋದಿಲ್ ಬಹಾರ್ ಅತ್ತರುಗಳು ಮತ್ತು ಕಾಮಿನಿಯಾ ಕಂಪೆನಿಯಲ್ಲಿ ಆಗುವ ಪ್ರತಿ ಒಂದು ಸಾಹಿತ್ಯಗಳು, ಅಮೃತಾಂಜನ, ಬಾಲಾಮೃತ, ಸೆಂಟಾನ್, ಡೈಮಂಡ್ ಸೋಪುಗಳು, ಜಪಾನ್ ದೇಶದ ದಂತುಗಳಿಂದ ಆಗುವ ಕಡ್ಡಿಗಳು, ಇದೂ ಅಲ್ಲದೆ ಅನೇಕ ರೀತಿಯ ಹೊಸ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಮ್ಮೆಗೆ ನಮ್ಮಲ್ಲಿಗೆ ಬಂದು ಸಂದರ್ಶಿಸಿದರೆ ನಮ್ಮ ದರಗಳು ತಮಗೆ ಅನುಕೂಲವಾಗಿಯೇ ಇವೆಯೆಂದು ತಿಳಿಯಬಹುದು. ರೋಯಿಲ್ ದಂತಮಂಜನ 6 ಡಬ್ಬಿಗಳ ಬೆಲೆ ಆಣೆ 8.

ದಿ ಉಲನ್ ಮಾರ್ಟ್,
ಮಂಗಳೂರು, ದ. ಕ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡಪಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಡಬ್ಬಿ ೧ಕ್ಕೆ ೫ ಆಣೆ.

ಶಹರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್:— ಜಿ. ಎಸ್. ಸೋಜ ಮತ್ತು ಕಂಪೆನಿ

ಆರ್. ಮಾರ್ಟಿನ್ಸ್‌ನರ ಮಾತ್ರೆಗಳು

ನಂಬ್ರ ೨.

ದಯಿಯಾನ ಮತ್ತು ಕೆಂಪೌಂಡ್ ಪ್ರೊಕ್ಸೆಸ್ ಕೂಡಿರುವ, ಈ ಮಾತ್ರೆಗಳು ದಿವ್ಯವಾದ ಎಲಾ ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು, ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ, ಮಿದುಳು ಕೆಲಸ ಮಾಡುವವರಿಗೆ ಅತ್ಯವಕಾರಿ, ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೧೦—೦.

ಆರ್. ಮಾರ್ಟಿನ್ಸ್‌ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ದಿನವು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಥ ರೋಗಗಳು ಕಳೆಯುವಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೨—೦.

ಆರ್. ಮಾರ್ಟಿನ್ಸ್‌ನರ ಗ್ಲಿಟೋಡಾಯಿನ್.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಶ್ಚನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೧೪—೦.

ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಲಾಂತಿ ಮಾತ್ರೆ:**— ಪ್ರಸುವವಾದ ಬಾಣಂತಿಯರು 30 ದಿವಸಗಳವರಿಗೆ ಉಪಯೋಗಿಸುವದರಿಂದ ಖಾರ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರತ್ಯಕ್ಷವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹೆ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳು ತೊಸ್ಸು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮುಂಬಯಿ.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟು ಆಫೀಸು ಎದುರು,
ರಾಮೇಶ್ವರಮ್.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕರ್ನಾಟಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬೆನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿ ಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ. ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!

೧೬ ಮೊಳ!!

ಗೋವರ್ಧನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋವರ್ಧನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ

ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹೆಚ್ಚು ದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರಿಗೆ ಸೀಮೆಯಿಂದ ತರಿಸಿರುತ್ತೇವೆ.

ಇದರ ಸಾಮಾನುಗಳು ಬಹು ದೃಢವಾಗಿಯೂ ನಾಜೂಕಾಗಿಯೂ ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಸಾಮಾನುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ	ರೂ.	3—12—0.
ಗಡಿಯಾರ 1ಕ್ಕೆ ಕ್ರಯ	ರೂಪಾಯಿ	3—0—0.
ಪೇನಾ	,, ,,	1—0—0.

ವಿಳಾಸ:— ವೈರಂ ಅಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವವರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜೆಂಟರು:— ದಿ ಊಲನ್ ಮಾರ್ಟ್, ಮಾರ್ಕೆಟ ಬಿಲ್ಡಿಂಗ್ಸ್.

ಹೊಸದಾಗಿ ಕಂಡುಹಿಡಿಯಲ್ಪಟ್ಟು ಇರುವ

ಕ್ರೌನ್ ಸೋಪ್.

ಕೆಡಲಿಲ್ಲ. ಕಲೆಯಿಲ್ಲ. ಉರಿಯಿಲ್ಲ.

ಇದು ಶರೀರದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೊಳ

ಚನ್ನೆಲ್ಲಾ ಅಚ್ಚುಕಟ್ಟಾಗಿ ತೆಗೆಯುತ್ತ-ನೆ. ಹೀಯುವದಿಲ್ಲ. ಚರ್ಮಕ್ಕೆ ಕಲೆಯಾಗದು. ಇತರರು ಮಾರುವ ರೋಗ ಸಂಹಾರಿಯನ್ನು ವ ಸೋಪನ್ನು ತಗದು ಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತ ಪತ್ರಿಕೆಗಳು ಬಂದಿರುತ್ತ ಅದರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್ ಗೋಲ್ಡ್ ಉಂಗುರ ಇನಾಂ. ರೂ. 1-10-0.

ಯೋಗ್ಯತ ಪತ್ರಿಕೆ.

ಆನೇಕಲ್ ಪೋಸ್ಟು ಮಡಿವಾಳ ಗ್ರಾಮದಲ್ಲಿ ಇರುವ ಮಾಸಸ್ವಾಮಿ ಮೊದಲಿಯಾರ್ — ನಿಮ್ಮ ಕಂಪೆನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದರಿಂದ ಬಹಳ ಆನಂದವಾಯಿತು. ದಯಯಿಟ್ಟು ಇನ್ನೊಂದು ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು.

ವಿಳಾಸ: —

ಎಂ. ಎಚ್. ಸಿಂಗ್ ಅಂಡ್ ಕೋ,
ನಂ. 7-2ನೇ ನಾರಾಯಣನ್ ಬೀದಿ,
ಮಿಂಟು ಪೋಸ್ಟು, ಮದರಾಸ್.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಮಿಶ್ರಣದ ಬರೀ 48 ದವಸಗಳ ಸೇವನೆಯಿಂದ ಶ್ವಾಸಬಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯ ರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಉಂಮೂತ್ರ ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಹರು.

ಶೀಸೆ 1ರ ಕ್ರಯ 14 ಆಣೆ. ವಿ. ಪಿ ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಿಗಳೂ ತಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರಯಿರಿ.

ವಿಳಾಸ:—ಪರಿಮಳಾಂಜನ ಡಿಪ್ಪೋ,
ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

೩. ವಸಾಹತದೊಳಗಿನ ಅಧಿಕಾರಿಗಳು ಹಿಂದೀ ಜನರೊಡನೆ ಎಷ್ಟು ಅನಾದರದ, ಪುಂಡುತನದ ಅಥವಾ ಅನ್ಯಾಯದ ವರ್ತನವನ್ನು ಮಾಡುತ್ತಿದ್ದಾರೆಂಬುದಕ್ಕೆ ದಕ್ಷಿಣ ಅಫ್ರಿಕದೊಳಗಿನ ದರ್ಬಾನ್ ಎಂಬಲ್ಲಿ ನಡೆದ ಒಂದು ದೃಷ್ಟಾಂತವನ್ನು ತೋರಿಸಬಹುದು. ದಕ್ಷಿಣ ಅಫ್ರಿಕದಲ್ಲಿ ಕೂಲಿಕೆಲಸದಿಂದ ತಮ್ಮ ಎಲುಬುಗಳನ್ನು ನುಗ್ಗುನುಸಿ ಮಾಡಿ ಸ್ವಲ್ಪ ಹಣವನ್ನು ಜಮಾಯಿಸಿಕೊಂಡು ಕೆಲವು ಕೂಲಿಗಳು ದರ್ಬಾನಿನ ಬಂದರಕ್ಕೆ ಬೋಟು ಹತ್ತಿ ಮುಂಬಯಿಗೆ ಬರಲು ಹೊರಟರು. ಆದರೆ ಬೋಟಿನ ಮೇಲೆ ಪೋಲಿಸರು ಅವರ ಸಾಮಾನುಗಳನ್ನು ಜಪ್ತಿ ಮಾಡಿದರು. ಯಾರ ಹತ್ತರ ೩೫ ಪೌಂಡುಗಳಿಗಿಂತ ಹೆಚ್ಚು ಚಿನ್ನದ ನಾಣ್ಯಗಳಿದ್ದವೊ ಅವರಿಂದ ಆ ನಾಣ್ಯಗಳನ್ನು ತೆಕ್ಕೊಂಡು ಅವರನ್ನು ಬೋಟಿನಿಂದಿಳಿಸಿ, ಕೈದುಮಾಡಿ, ಮೆಜಿಸ್ಟ್ರೇಟರಿದ್ದಲ್ಲಿಗೆ ಕೊಂಡುಹೋದರು. ಪರಂತು ಈ ರೀತಿಯಿಂದ ಅವರನ್ನು ಪ್ರತಿಬಂಧಿಸುವುದು ಕಾನೂನಿಗೆ ವಿರೋಧವಾದುದೆಂದು ಹಿಂದಿನಿಂದ ಅಧಿಕಾರಿಗಳಿಗೆ ಗೊತ್ತಾಗಿ ಅವರು ಆ ಕೂಲಿಗಳನ್ನು ಪುನಃ ಬೋಟಿನ ಮೇಲೆ ತಂದು ಬಿಟ್ಟರು. ಆದರೂ ೩೫ ಪೌಂಡುಗಳಿಗಿಂತ ಹೆಚ್ಚಿದ್ದ ನಾಣ್ಯಗಳನ್ನು ಸರಕಾರದಲ್ಲಿ ಧರಾಯಿಸಿ ಆ ಬಗ್ಗೆ ಅಫ್ರಿಕನ್ ಸರಕಾರದ ಕರೆನ್ಸಿ ನೋಟುಗಳನ್ನು ತೆಕ್ಕೊಳ್ಳಬೇಕೆಂದು ಕೂಲಿಗಳಿಗೆ ತಿಳಿಸಿದರು. ಇದು ಕೂಡ ಕಾನೂನಿಗೆ ವಿರೋಧವಾದುದು, ಅಲ್ಲದೆ, ಅಫ್ರಿಕನ್ ನೋಟುಗಳು ಹಿಂದುಸ್ಥಾನದಲ್ಲಿ ನಡಿಯುವುದಿಲ್ಲ, ಎಂದು ಮುಂತಾದ ಸಂಗತಿಗಳನ್ನಾಲೋಚಿಸಿ, ಕೂಲಿಗಳು ನೋಟುಗಳನ್ನು ಕೊಂಡುಕೊಳ್ಳುವದನ್ನು ನಿರಾಕರಿಸಿದರು. ಆಗ ಇವರಲ್ಲಿಯ ಕೆಲವು ಮುಖಂಡರನ್ನು ದಂಗೆಗೆ ಉತ್ತೇಜನ ಕೊಡುವವರೆಂಬ ನಿಮಿತ್ತದಿಂದ ಹಿಡಿದು ಬಾಕಿ ಉಳಿದವರನ್ನು ಪೋಲಿಸರು ಗದರಿಸ ಹತ್ತಿದರು. ನಿರುಪಾಯವಾಗಿ ಕೆಲವರು ನೋಟುಗಳನ್ನು ಕೊಂಡುಕೊಳ್ಳಲು ಒಪ್ಪಿಕೊಂಡರು. ಆದರೆ ಅವರ ದುರ್ದೈವವೇನೆಂದರೆ ದರ್ಬಾನಿನ ಖಜಾನೆಯಲ್ಲಿ ಕೂಲಿಗಳ ಹತ್ತರ ಇದ್ದ ನಾಣ್ಯಗಳಷ್ಟು ನೋಟುಗಳೆ ಇದ್ದಿಲ್ಲ! ಹೀಗಾಗಿ ತಮ್ಮ ಮೇಲೆಯೆ ಇದು ತಿರುಗಿತೆಂದೆಣಿಸಿ ಕೊನೆಗೆ ಅಧಿಕಾರಿಗಳು ಅವರಿಗೆ ಹೋಗಲು ಅಪ್ಪಣೆ ಕೊಟ್ಟರು. ಇದನ್ನು ಓದುವಾಗ್ಗೆ ಹಾಗಲವಾಡಿ ಸಂಸ್ಥಾನದ ಕಾಲ್ಪನಿಕ ಚಿತ್ರವು ಮೂರ್ತಿಮತ್ತಾಗಿ ನಿಂತುಕೊಳ್ಳುತ್ತದೆ!

೪. ಪಬ್ಲಿಕ್ ಸರ್ವಿಸ್ ಕಮಿಷನಿನ ರಿಪೋರ್ಟು ಅತ್ಯಂತ ನಿರಾಶಾಜನಕವಾಗಿರುವುದರಿಂದ ಅದರಲ್ಲಿ ಸೂಚಿಸಿರುವ ವಿಷಯಗಳನ್ನು ಕಾಯಿದೆ ಕೌನ್ಸಿಲಿನಲ್ಲಿ ಚರ್ಚಿಸುವ ವರೆಗೆ ಜಾರಿಯಲ್ಲಿ ತರಕೂಡದೆಂಬುದಾಗಿ ವರಿಷ್ಟ ನ್ಯಾಯವಿಧಾಯಕ ಸಭೆಯಲ್ಲಿ ನಾ। ಮಾಳವೀಯರು ಠರಾವನ್ನು ತಂದಾಗ ಸರ್. ರಿಜಿನಾಲ್ಡ್ ಕ್ರೆಡೋಕರು ಸರಿಯಾದ ಆಶ್ವಾಸನೆಯನ್ನು ಕೊಡದೆ ಇದ್ದರೂ ಒಂದು ಸಂಗತಿಯನ್ನು ಹೇಳಿದ್ದರು. ಹೆಚ್ಚಿನ ಖರ್ಚಿನ ಸೂಚನೆಗಳನ್ನು ಈಗಲೇ ಜಾರಿಯಲ್ಲಿ ತರುವ ಸಂದರ್ಭವಿಲ್ಲಾದುದರಿಂದ ಬರುವ ಸಪ್ತಂಬರ ತಿಂಗಳ ಕೌನ್ಸಿಲಿನಲ್ಲಿ ಈ ಠರಾವನ್ನು ತರಬಹುದು. ಸರ್. ಕ್ರೆಡೋಕರ ಈ ಮಧ್ಯಸ್ಥತನದ ಉಪಾಯದಿಂದ ಆ ಪ್ರಸ್ತಾಪವು ತತ್ಕಾಲಕ್ಕೆ ಅಲ್ಲಿಗೆ ಮುಕ್ತಾಯವಾದರೂ ಇದರ ಪ್ರಯೋಜನವನ್ನು ಪಡಕೊಂಡು ಲೋಕಪ್ರತಿನಿಧಿಗಳು ಯೋಗ್ಯ ಪ್ರಯತ್ನವನ್ನು ನಡಿಸ್ಯಾರೆಂಬುದಕ್ಕೆ ಸಂದೇಹವಿಲ್ಲ. ಈ ಬಗ್ಗೆ ವರಿಷ್ಠ ಅಧಿಕಾರಿಗಳಿಗಿಂತ ಸಂಯುಕ್ತ ಪ್ರಾಂತ್ಯದ ಅಧಿಕಾರಿಗಳು ಕೈಕೊಂಡ ಹಾದಿಯು ಹೆಚ್ಚು ಪ್ರಶಸ್ತವಾಗಿದೆ. ಸಂಯುಕ್ತಪ್ರಾಂತ್ಯದೊಳಗಿನ ಕೌನ್ಸಿಲಿನಲ್ಲಿ ಇದೆ ವಿಷಯದ ಚರ್ಚೆ ನಡೆದು ಸರಕಾರದ ಕಡೆಯಿಂದ ಹೇಳೋಣಾಯಿತೇನೆಂದರೆ, ಈ ರಿಪೋರ್ಟಿನ ವಿಷಯದಲ್ಲಿ ಕೊಂಗ್ರೆಸ್ ಕಮಿಟಿ, ಮೊಸ್ಲೆಮ್ ಲೀಗ್ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳ ಅಭಿಪ್ರಾಯವನ್ನು ಪರ್ಯಾಲೋಚಿಸದೆ, ರಿಪೋರ್ಟಿನೊಳಗಿನ ಸೂಚನೆಗಳು ಜಾರಿಯಲ್ಲಿ ತರಲ್ಪಡವು.

೫. ನಮ್ಮ ಮಂಗಳೂರು ಮುನ್ಸಿಪಾಲಿಟಿಯ ಅಧ್ಯಕ್ಷ ಸ್ಥಾನವು ಡಾ. ವರ್ಗೀಸರವರ ಅವಧಿಯು ಮುಗಿದ ಕಾರಣ, ತಿರಿಗಿ ಖಾಲಿಯಾಗಿದೆಂದು ನಾವು ಕೇಳುತ್ತೇವೆ. ಮೊದಲಿನಿಂದ ನಮ್ಮ ಅಭಿಪ್ರಾಯವು ಒಂದೆ: ಲೋಕಲ್‌ಬೋರ್ಡ, ಮುನ್ಸಿಪಾಲಿಟಿ, ಮುಂತಾದ ಸ್ಥಾನಿಕ ಸ್ವರಾಜ್ಯ ತತ್ವದ ಮೇಲೆ ನಡದುಕೊಂಡಿರುವ ಸಂಸ್ಥೆಗಳು ಜನರ ಕೈಯಲ್ಲಿರುವುದೆ ನ್ಯಾಯ್ಯವಲ್ಲದೆ ಅಧಿಕಾರಸ್ಥರ ಆಡಳಿತೆಗೆ ಒಳಪಡುವುದು ಲೋಕಮತವೃದ್ಧಿಯಿಂದ ಹಿತಾಹವಲ್ಲ. ಪ್ರಜೆಗಳಿಗೆ ಸ್ವರಾಜ್ಯದ ಶಿಕ್ಷಣವು ಸಿಗಬೇಕಾದರೆ ಅದು ಮುನ್ಸಿಪಾಲಿಟಿಯಂಥ ಸಂಸ್ಥೆಗಳಲ್ಲಿ ಅಲ್ಲದೆ ಬೇರೆ ಕಡೆಗಳಲ್ಲಿ ಅಲ್ಲ. ಆದರೆ ಅಂಥ ಸಂಸ್ಥೆಗಳೂ ಕೂಡ ಜನರ ಅನಾದರದಿಂದಲೊ, ಅಸಡ್ಡೆಯಿಂದಲೊ, ಕಾರಣಾಂತರದಿಂದಲೊ, ಅಧಿಕಾರಿಗಳ ಕೈಗೆ ಸಿಕ್ಕಿದರೆ ಸ್ಥಾನಿಕ ಸ್ವರಾಜ್ಯದ ಮೇಲಿನ ಉದ್ದೇಶವು ಸಿದ್ಧವಾಗುವುದು ಹ್ಯಾಗೆ? ಮುನ್ಸಿಪಾಲಿಟಿಗೆ ಮಾತ್ರವಲ್ಲ, ಡಿಸ್ಟ್ರಿಕ್ಟ್ ಬೋರ್ಡಿಗೆ ಸಹಾ ಬಿನ್‌ಸರಕಾರಿ ಅಧ್ಯಕ್ಷರಿರಬೇಕೆಂದು ಬಂಗಾಲ, ಮುಂಬಯಿ ಸಂಸ್ಥಾನಗಳಲ್ಲಿ ಏರ್ಪಾಟುಗಳಾಗಿವೆ. ಸರಕಾರವು ತಾನಾಗಿಯಾಗಲಿ ಇಲ್ಲವೆ ಲೋಕಪ್ರತಿನಿಧಿಗಳ ಆಗ್ರಹದಿಂದಾಗಲಿ, ಜನತೆಗೆ ಒಂದು ಹಕ್ಕನ್ನು ಕೊಟ್ಟರೆ ಅಷ್ಟರಿಂದಲೆ ಜನತೆಯು ಕೃತಾರ್ಥವಾಗುತ್ತದೆಂದು ನೆನಸುವುದು ಶುದ್ಧ ತಪ್ಪು. ಆ ಹಕ್ಕನ್ನು ಉಪಯೋಗಿಸುವ [illegible] ದೃಷ್ಟಾಂತಕ್ಕಾಗಿ ಇದೆ ನಮ್ಮ ಮುನ್ಸಿಪಾಲಿಟಿಯ ಅಧ್ಯಕ್ಷಸ್ಥಾನವು. ಅಧ್ಯಕ್ಷತ್ವದ ಹಕ್ಕು ಜನತೆಯ ಕೈಯಲ್ಲಿ ದಿಟ್ಟುಕೊಟ್ಟಿರುವಾಗ ಹಿಂದಿನ ಒಂದೆರಡು ಪ್ರಸಂಗಗಳಲ್ಲಿ ಅಪವಾದಕ್ಕೆ ಒಬ್ಬರಲ್ಲದೆ ಬೇರೆ ಯಾರೂ ಇಲ್ಲಿಯ ಪಟ್ಟಣಿಗರು ಉಮೇದುವಾರರಾಗಿ ನಿಂತುಕೊಳ್ಳಲಿಲ್ಲ. ಇದು ಬಹು ಶೋಚನೀಯವು. ತಂತಮ್ಮ ಪಟ್ಟಣಗಳ ಹಿತದ ಕಡೆಗೆ ಜನರು ತತ್ಪರತೆಯಿಂದ ಮನಸ್ಸನ್ನು ಕೊಡುವ ಬಗ್ಗೆ ನಾವು ನಮ್ಮ ಮಾತುಗಳಿಂದ ಹೇಳುವುದಕ್ಕಿಂತ ನಮ್ಮ ಸಂಸ್ಥಾನಾಧಿಪತಿಗಳಾದ ಲೊರ್ಡ ಪೆಂಟ್‌ಲೆಂಡ್ ದೊರೆಗಳು ಕಳೆದ ಮಾರ್ಚಿನಲ್ಲಿ ಮದ್ರಾಸು ಪಟ್ಟಣದಲ್ಲಿ ನೆರೆದ ಸ್ಥಾನಿಕ ಸ್ವರಾಜ್ಯದ ಪರಿಷತ್ತಿನ ಕಾರ್ಯಕ್ರಮವನ್ನು ಉಪಕ್ರಮಿಸುವಾಗ ಆಡಿದ ಪ್ರಸ್ತಾವಿಕ ಭಾಷಣದೊಳಗಿನ ಶಬ್ದಗಳನ್ನೆ ಕಾಣಿಕೆಯಾಗಿ ಈ ಸಂದರ್ಭದಲ್ಲಿ ನಮ್ಮ ಪಟ್ಟಣಿಗರ ಮುಂದಿಡುವುದು ಒಳ್ಳೇದು. "(ಮುನ್ಸಿಪಾಲಿಟಿಯಂಥ) ಈ ಸಂಸ್ಥೆಗಳ ಘಟನೆಯನ್ನು ಎಷ್ಟೋ ಸುಧಾರಿಸಿರಿ, ಹಾಗು ಅವುಗಳ ಕಾರ್ಯಕ್ಷೇತ್ರವನ್ನ ಆದಷ್ಟು ವ್ಯಾಪಕ ಮಾಡಿರಿ, ಕರವನ್ನು ಕೊಡುವ ಯಾವ ಜನರಗಾಗಿ ಈ ಸಂಸ್ಥೆಗಳಿರುವವೊ ಆ ಜನರ ಮನಸ್ಸು ಇವುಗಳ ಆಡಳಿತೆಯ ಕಡೆಗೆ ಹೋಗುವ ವರೆಗೆ ಇವು ಎಂದೂ ಸುಧಾರಿಸಲಾರವು. ಅರ್ಥಾತ್ ಯಾವ ಪಟ್ಟಣದೊಳಗಿನ ಜನರು ತಮ್ಮ ಹಕ್ಕುಗಳ ಬಗ್ಗೆ ಬಹು ಜಾಗರೂಕರಾಗಿರುವರೊ ಅಲ್ಲಿಯ ವ್ಯವಸ್ಥೆಯು ಸರಿಯಾಗಿ ನಡೆಯುವುದು. ನಾವಿಕರು ವೈಲುಗಳ ಅಂತರದಲ್ಲಿರುವ ನಕ್ಷತ್ರಗಳನ್ನು ನಿರೀಕ್ಷಿಸುವುದರಲ್ಲಿಯೇ ಪ್ರದಿಯಾಗಿ, ಕಾಲಡಿಯಲ್ಲಿದ್ದ ಹೊಂಡವನ್ನು ಕಾಣದೆ, ಅದರಲ್ಲಿ ಬಿದ್ದ ಜ್ಯೋತಿಷಿಯಂತೆ ನೀವು ನಿಮ್ಮ ಆಚರಣೆಯನ್ನು ಮಾಡಿಕೊಳ್ಳಬೇಡಿರಿ. ತಂತಮ್ಮ ಜಿಲ್ಲೆಯ, ತಾಲೂಕಿನ ಹಾಗು ಪಟ್ಟಣದ ಸ್ಥಿತಿಯ ಕಡೆಗೆ ಮುಖ್ಯವಾಗಿ ಮನಸ್ಸನ್ನು ಕೊಡಿರಿ." ಗವರ್ನರ ದೊರೆಗಳ ಈ ಉಪದೇಶವನ್ನು ನಮ್ಮ ಪಟ್ಟಣಿಗರು ಮನಸ್ಸಿಗೆ ತಂದು ಈ ಸಾರಿಯಾದರೂ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರರಾಗಿ ನಿಂತುಕೊಳ್ಳುವುದು ಯೋಗ್ಯವಾಗಿದೆ. ಹಾಗೆ ಈ ಪ್ರಸಂಗದಲ್ಲಿಯೂ ಯಾರೂ ನಿಲ್ಲದ ಹೋದರೆ, ಅದರ ಅರ್ಥವೇನಾದೀತೆಂದರೆ, ಒಂದು ಗವರ್ನರ ದೊರೆಗಳು ಹೇಳುವಂತೆ ಪಟ್ಟಣದ ಹಿತೈಷಿಗಳೂ, ಅಭಿಮಾನಿಗಳೂ ಈ ಮಂಗಳೂರಲ್ಲಿ ಯಾರೂ ಇಲ್ಲ; ಅಥವಾ ಇನ್ನೊಂದು ಆ ತರದ ಭಾವನೆಯವರು ಇದ್ದುದಾದರೆ, ಅವರಲ್ಲಿ ಈ ಸ್ಥಾನದ ಪಾತ್ರತೆಯಿಲ್ಲ. ಹ್ಯಾಗೂ ಇರಲಿ, ಈ ಎರಡು ಪಕ್ಷಗಳಲ್ಲಿ ಯಾವುದಾದರೂ ಒಂದು ನಿಜವಾದರೂ ಅದು ನಮ್ಮ ಪಟ್ಟಣಕ್ಕೆ ಭೂಷಣಾಸ್ಪದವಲ್ಲ. ಲೊರ್ಡ ಪೆಂಟಲೆಂಡರಂಥ ಪ್ರಭುಗಳು ಸಾರ್ವಜನಿಕ ಹಿತಪ್ರೇರಿತರಾಗಿ ಮೇಲಿನಂತೆ ಸ್ಪಷ್ಟೋಕ್ತಿಗಳಿಂದ ಉಪದೇಶಿಸುವಾಗ ಅದರ ಕಡೆಗೆ ನಮ್ಮ ಪಟ್ಟಣಿಗರು ಕಿವಿಗೊಡದೆ ಇದ್ದರೆ ನಮ್ಮದೆ ಎಂಬಲ್ಲ, ಪೆಂಟಲೆಂಡ್ ದೊರೆಗಳ ಮಾತು ಕೂಡ 'ಹಾವು ಕಚ್ಚಿದ್ದ ಒರೆ ಬಾಯಿ' ಗೆ ಸಮಾನವಾದೀತು. ಅಥವಾ ಆ ಉಪದೇಶವು ಅಸ್ಥಾನದಲ್ಲಿ ಆಗಿಹೋದೀತು! ಆದರೆ ಡಾ. ಫರ್ನಾಂಡಿಸರಂಥ ಯೋಗ್ಯ ಪಟ್ಟಣಿಗರು ಸ್ವತಃ ಕೌನ್ಸಿಲಿನಲ್ಲಿ (ಸಭಾಸದರಾಗಿ) ಇರುವುದರಿಂದ ಅವರು ಉಮೇದುವಾರರಾಗಿ ನಿಂತರೆ ಅಧ್ಯಕ್ಷರಾಗಿ ಚುನಾಯಿಸಿ ಬರಲು ಯಾವ ಪ್ರತಿಬಂಧವು ಕಂಡು ಬರುವುದಿಲ್ಲ. ದ. ಕಾರಣ ಗವರ್ನರರ ಉಪದೇಶಕ್ಕಾಗಲಿ ನಮ್ಮ ಆಶಯಕ್ಕಾಗಲಿ, ವೈಯರ್ಥ್ಯ ಬರಲಿಕ್ಕಿಲ್ಲೆಂದು ಭರವಸೆ ಇದೆ.

೬. ಇಲ್ಲಿಯ ಸ್ಟೂಡೆಂಟ್ಸ್ ಬ್ರದರ್ ಹೂಡಿನವರಿಂದ ಒಂದು ವಿನಂತಿ ಪತ್ರಕವು ನಮ್ಮ ಕೈಸೇರಿದ ವಿಷಯವನ್ನು ನಾವು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಜನರು ಅನಾವಶ್ಯಕವಾದ ಖರ್ಚುಗಳಲ್ಲಿ ಬಿದ್ದು ದ್ರವ್ಯಹಾನಿಯನ್ನು ಮಾಡಿಕೊಳ್ಳುವುದು ಯುಕ್ತವಲ್ಲೆಂದು ಈ ವಿನಂತಿ ಪತ್ರಕ ದ್ವಾರಾ ಈ ಬ್ರದರ್ ಹುಡ್ಡಿನವರು ಸೂಚಿಸಿದ್ದು ನಿಜವಾಗಿ ಗ್ರಾಹ್ಯವಾಗಿದೆ, ಅದು ಮಾತ್ರವಲ್ಲ, ಜನರು—ಮತ್ತೆ ಅವರು ಸುಖವಸ್ತುಗಳೇ ಆಗಲಿ, ತಮ್ಮ ಮಿತಿಮೀರಿದ ಉಡಿಗೆತೊಡಿಗೆಗಳಲ್ಲಿ, ಆಹಾರವಿಹಾರದಲ್ಲಿ, ಇಲ್ಲವೆ ಮರ್ಯಾದದ ಒಡವೆಗಳನ್ನು ಕೊಂಡುಕೊಳ್ಳುವುದರಲ್ಲಿ, ವೃಥಾ ಹಣವನ್ನು ಖರ್ಚುಮಾಡುವುದನ್ನು ಉಳಿಸಿ ಆ ಹಣವನ್ನು ಲೋಕೋಪಯುಕ್ತವಾದ ಸಾರ್ವಜನಿಕ ಸಂಸ್ಥೆಯ ಉತ್ಪತ್ತಿಗೆ ಅಥವಾ ಅಭಿವೃದ್ಧಿಗೆ ಖರ್ಚು ಮಾಡಿದರೆ, ಮಾಡುವವರಿಗೂ ಕೀರ್ತಿ ಬಂದೀತು, ದೇಶಕ್ಕೂ ಅಭಿವೃದ್ಧಿಯುಂಟಾದೀತು. ಸಾರಾಂಶ: ಸ್ಟೂಡೆಂಟ್ಸ್ ಬ್ರದರ ಹೂಡಿನವರ ಈ ಉಪಕ್ರಮವು ನಿಜವಾಗಿ ಶ್ಲಾಘ್ಯವಾಗಿಯೇ ಇದೆ. ಈ ಸಂಘದವರು ಸ್ವತಃ ತಾವು ಅದರಂತೆ ನಡೆದುಕೊಂಡು ಬೇರೆಯವರಿಗೂ ಈ ರೀತಿಯಿಂದ ಉಪದೇಶಿಸುವುದರಿಂದ ಈ ನೂತನ ಪದ್ಧತಿಯ ಶಿಕ್ಷಣವು ಸಮಾಜಕ್ಕೆ ಒಂದು ಆದರ್ಶವಾಗುವದೆನ್ನಬಹುದು.

೭. ಕೆಲವು ವರುಷಗಳ ಮೊದಲಿನಿಂದ ಅಂದರೆ ಸ್ವದೇಶಿ ಚಳವಳವು ಪ್ರಾರಂಭವಾದ ಒಂದೆರಡು ವರುಷಗಳ ನಂತರ ಮುಂಬಾಯಿ ಮತ್ತು ಕಲ್ಕತ್ತಾ ಇತ್ಯಾದಿ ಪ್ರಾಂತ್ಯಗಳಿಂದ ಬರುವ ದೇಶೀಯ ಸಾಬೂನುಗಳನ್ನು ನೋಡಿ ಇಲ್ಲಿಯೂ ಅಂಥಾ ಸಾಬೂನುಗಳನ್ನು ತಯಾರಿಸಲು ಪ್ರಯತ್ನಿಸಿದರು. ಕೆಲವು ವರುಷಗಳ ವರೇಗೆ ಈ ಪ್ರಯತ್ನಗಳು ಫಲಿಸಲಿಲ್ಲ. ನಂತರದಲ್ಲಿ ಸಾಬೂನು ಇಲ್ಲಿ ತಯಾರು ಮಾಡುವಂಥಾದ್ದು ಸಾಧ್ಯವೆಂತ ಕಂಡು ಬಂದರೂ, ವಿದೇಶಗಳಿಂದ ಬರುವ ಸಾಬೂನು ನೋಡಲಿಕ್ಕೆ ಚೊಕ್ಕದ್ದಾಗಿಯೂ, ಅಗ್ಗವಾಗಿಯೂ, ದೊರಕುತ್ತಿದ್ದದರಿಂದ ಇಲ್ಲಿಯವರಿಗೆ ತಮ್ಮ ಪ್ರಯತ್ನಗಳಲ್ಲಿ ಪ್ರೋತ್ಸಾಹ ದೊರಕಲಿಲ್ಲ. ಯುದ್ಧ ಪ್ರಾರಂಭವಾದ ನಂತರ ವಿದೇಶಿ ಸಾಬೂನುಗಳಿಗೆ ಕ್ರಯವೇರಿತು. ಇವುಗಳ ಸರಬರಾಯಿಯೂ, ಕ್ರಮವಾಗಿ ಬರಲು ತಪ್ಪುವದರಿಂದ ಇಲ್ಲಿ ತಯಾರಾಗುವ ಸಾಬೂನುಗಳಿಗೆ ಮೊದಲಿನಕ್ಕಿಂತ ಹೆಚ್ಚಾಗಿ ಗಿರಾಕಿಯು ಪ್ರಕೃತ ದೊರಕುತ್ತಿದೆ. ಈ ಕಾರಣ ಸಾಬೂನು ಆಕಾರದಲ್ಲಿಯೂ, ಗುಣದಲ್ಲಿಯೂ, ವಿದೇಶಿ ಸಾಬೂನುಗಳಂತೆಯೇ ಚೊಕ್ಕದ್ದಾಗಿ ಬಂದಿದೆ. ಜನರು ಇನ್ನು ಇಲ್ಲಿ ಆಗುವ ಸಾಬೂನುಗಳನ್ನೆ ಹೆಚ್ಚಾಗಿ ಉಪಯೋಗಿಸುತ್ತ ಬಂದರೆ, ಸಾಬೂನು ಕೈಗಾರಿಕೆಯು ಈ ಪಟ್ಟಣದಲ್ಲಿ ಬಲವಾಗಿ ನೆಲೆಗೊಳ್ಳದೆ ಇರದು. ಮಳೆ, ಧೂಳಿಗೆ, ಮತ್ತು [illegible] ದಲ್ಲಿಯೂ, ಮಾರಾಟವಾದಂತಾಗಿ ಕೆಲವರ ದೂರು ಇರುವದು. ಆದರೆ ಇದೇ ಜಾತಿಯ ವಿದೇಶಿ ಸಾಬೂನುಗಳನ್ನು ಸಹಾ ಪರೀಕ್ಷಿಸಿ ನೋಡಿದರೆ, ಅವುಗಳಲ್ಲಿಯೂ ಇದೇ ಕೊರತೆಯು ನಿಷ್ಪಕ್ಷಪಾತಿಗಳಿಗೆ ಕಂಡು ಬಾರದೆ ಇರದು. ಜನರ ಇನ್ನೂ ಹೆಚ್ಚಿನ ಸಾಹಾಯ್ಯವು ಇಲ್ಲಿಯ ಸಾಬೂನು ಕೈಗಾರಿಕೆಗೆ ಬೇಕಾಗಿರುವದರಿಂದ ವ್ಯಾಪಾರಸ್ಥರೂ, ಇದನ್ನು ಉಪಯೋಗಿಸಿಕೊಳ್ಳುವವರೂ, ನಿಷ್ಕಾರಣವಾಗಿ ಇಲ್ಲಿಯ ಸಾಬೂನುಗಳನ್ನು ಹೀಯಾಳಿಸದೆ ಗುಣಶೋಧವನ್ನು ಇನ್ನಾದರೂ ಮಾಡುವಂಥಾದ್ದು ಅಗತ್ಯವಾಗಿದೆ. ವಿದೇಶಿ ಸಾಬೂನುಗಳಲ್ಲಿ ಹಲವನ್ನು ಆ ದೇಶಗಳಲ್ಲಿ ಬೆಳೆದು ಬಂದ ಬುದ್ಧಿವಂತಿಕೆಯ ಬಲದಿಂದ ಅವೆಮಣ್ಣು, ಜೇಡಿಮಣ್ಣು, ಇತ್ಯಾದಿಗಳನ್ನು ಬೆರಸಿಕೊಂಡು ಮಾಡುತ್ತಾರೆ. ಈ ರೀತಿ 'ಕಣ್ಣಿಗೆ ಮಣ್ಣು ಹಾಕಿ' ಗಿರಾಕಿಗಳ ಮನಸ್ಸನ್ನು ಆಕರ್ಷಿಸುವದೂ ಉಂಟು. ಮತ್ತು ಕೆಲವು ವಿಧದ ಸಾಬೂನುಗಳಲ್ಲಿ ಪ್ರಾಣಿಗಳ ವಸೆಯನ್ನು ಸಹಾ ಧಾರಾಳವಾಗಿ ಉಪಯೋಗಿಸುವರು. ಈ ಕೃತ್ರಿಮ ಸಾಧನಗಳು ಇಲ್ಲಿಯ ಸಾಬೂನು ತಯ್ಯಾರಿಯಲ್ಲಿ ಇರವು. ಯುದ್ಧ ಕಾಲದಲ್ಲಿ ದೇಶೀಯ ಸಾಬೂನುಗಳಿಗೆ ಕೊಟ್ಟ ಪ್ರೋತ್ಸಾಹವನ್ನು ಇನ್ನು ಮುಂದೆಯೂ ಇದೇ ರೀತಿ ಇರಗೊಡಿಸಿದರೆ ಈ ಕೈಗಾರಿಕೆಯು ಇಲ್ಲಿ ನೆಲೆಗೊಳ್ಳುವುದು. ಮತ್ತು ಸಾಬೂನುಗಳು ತಯಾರಾದ ನಂತರ ಉಳಿಯುವ ಮಡ್ಡಿನಿಂದ ಗ್ಲಿಸರೀನ್ (ವಿದೇಶಿ ಔಷಧಿಗಳಲ್ಲಿ ಧಾರಾಳವಾಗಿ ಉಪಯೋಗಕ್ಕೆ ಬೀಳುವಂಥಾ ದ್ರಾವಕ)ವನ್ನು ಪ್ರತ್ಯೇಕಿಸಿ ತೆಗೆಯುವ ಯಂತ್ರ ಒಂದನ್ನು ತರಿಸಿದ್ದಲ್ಲಿ ಇಂಥಾ ಯಂತ್ರದಿಂದ ಇಲ್ಲಿಯ ಎಲ್ಲಾ ಸಾಬೂನು ಕಾರ್ಖಾನೆಯವರಿಗೆ ವಿಶೇಷ ಸಹಾಯ ಮಾಡಬಹುದು. ಸಾಬೂನಿನ ಮಡ್ಡಿಗೆ ಸಹ ಕ್ರಯ ದೊರಕಲು ಸಾಧ್ಯವಾಗಿ ಸಾಬೂನಿನ ಕ್ರಯವನ್ನು ಮತ್ತೂ ತಗ್ಗಿಸಬಹುದು.

ಸ್ಥಳಿಕ — ಮಂಗಳೂರು.

ಬರುವ ಮೇ ಅಥವಾ ಜೂನು ತಿಂಗಳೊಳಗೆ ಮದ್ರಾಸು ಗವರ್ನರ ದೊರೆಗಳವರು ಇಲ್ಲಿಗೆ ಬರುವರೆಂಬುದಾಗಿ ವದಂತಿ ಇರುವದು.

ಬಂಟವಾಳ ಫಿರ್ಕಿನ ತಾಲೂಕು ಬೋರ್ಡು ಮೆಂಬರರ ಸ್ಥಾನವು ಖಾಲಿಬಿದ್ದಿರುವದರಿಂದ ಡಿವಿಜನಲ್ ಆಫೀಸರರು ಆ ಖಾಲಿಬಿದ್ದ ಸ್ಥಾನಕ್ಕೆ ಒಬ್ಬ ಮೆಂಬರನನ್ನು ವೋಟರರುಗಳು ಚುನಾಯಿಸುವ ವಿಷಯ ಅಗತ್ಯವುಳ್ಳ ಮಾಹಿತಿಯನ್ನು ಪ್ರಕಟಗೊಳಿಸಿರುವರು. ಉಮೇದ್ವಾರರಾಗಿ ನಿಲ್ಲಲು ಅಪೇಕ್ಷೆಯಿದ್ದವರು ಬರುವ ಮೇ ತಿಂಗಳ ತಾ. ೩೧ರೊಳಗೆ ಬಂಟಾವಳ ಡಿಪ್ಯುಟಿ ತಹಸೀಲ್ದಾರರಿಗೆ ಶಿಫಾರಸು ಪತ್ರಗಳನ್ನು ಕಳುಹಿಸಬೇಕೆಂತ ಈ ಪ್ರಕಟಣೆಯಲ್ಲಿ ಸೂಚಿಸೋಣಾಗಿರುವದು.

ಜಿಲ್ಲಾ ಕಲೆಕ್ಟರ ದೊರೆಗಳವರು ಈ ತಿಂಗಳ ಅಂತ್ಯದಲ್ಲಿ ಪುತ್ತೂರಿಗೆ ಹೋಗಿ ಇದೇ ತಾ. ೨೮ರಲ್ಲಿ ಡಿಸ್ಟ್ರಿಕ್ಟ್ ಬೋರ್ಡ ಸಭೆಯು ಪುತ್ತೂರಲ್ಲಿ ಜರಗುವದೆಂತ ತಿಳಿದು ಬರುತ್ತದೆ.

ಯುದ್ಧಫಂಡಿನ ಸಾಹಾಯಾರ್ಥವಾಗಿ ಇಲ್ಲಿಯ ಕಲೆಕ್ಟರ ದೊರೆಗಳವರ ಆಶ್ರಯದಲ್ಲಿ ಪ್ರೊಫೆಸರ್ ಎನ್. ಎಸ್. ರಾಮರವರು ತಮ್ಮ ಇಂದ್ರಜಾಲದ ದೇಖಾವೆಗಳನ್ನು ಇದೇ ಬರುವ ಮಂಗಳವಾರ ರಾತ್ರೆ ಘಂಟೆ ೯ರಿಂದ ೧೧ರ ವರೆಗೆ ರತ್ನಾವಳಿ ನಾಟಕ ಮಂದಿರದಲ್ಲಿ ತೋರಿಸುವರು.

ಈ ಜಿಲ್ಲೆಯವರಾದ ಬಾಳಬೈಲ್ ದಾಸಣ್ಣಾಚಾರ್ಯರು ಫಿಜಿಕಲ್ ಸಾಯನ್ಸಿನ ಒನರ್ಸ್ ಬಿ. ಎ. ಪರೀಕ್ಷೆಯಲ್ಲಿಯೂ ಮುಲ್ಕಿ ಮಂಜುನಾಥರಾವರು ಎಮ್. ಎ. ಪರೀಕ್ಷೆಯಲ್ಲಿಯೂ ತೇರ್ಗಡೆ ಪಟ್ಟಿರುತ್ತಾರೆ.

ಡಾಕ್ಟರ ರಾವ್ ಸಾಹೇಬ ವರ್ಗೀಸರವರ ಚೇಯರ್ಮೆನ ಕೆಲಸದ ಅವಧಿಯು ಈ ದಿನ ಅಂತ್ಯವಾಗುವದರಿಂದ ಚೇಯರ್ಮೆನರನ್ನು ಮುನ್ಸಿಪಾಲಿಟಿಯವರು ಆರಿಸಬೇಕಾಗಿ ಬಂದಿದೆ. ಒಟ್ಟಿಗೆ ಹೆಚ್ಚು ಕಡಿಮೆ ಒಂದು ವರುಷದ ಕಾಲದಲ್ಲಿ ಮೂರು ಸಲ ಈ ಪದವಿಗೆ ಉಮೇದ್ವಾರನನ್ನು ಆರಿಸಿದ್ದಾಯಿತು.

ನಿನ್ನೆ ದಿನ ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಮಂಜೇಶ್ವರದ ಶ್ರೀ ಮದನಂತಶ್ವೇರ ದೇವಸ್ಥಾನಕ್ಕೆ ರಿಸೀವರರನ್ನು ನೇಮಿಸಬೇಕೆಂದು ಕೆಲವು ೪೨ ಜನರು ಕೂಡಿಕೊಂಡು ಅಫಿದಾವೀತುಗಳ ಮೂಲಕ ಕೊಟ್ಟ ಅರ್ಜಿಯನ್ನು ತೆಗೆದುಹಾಕುವಾಗ ಜಡ್ಜರವರಿಂದ ಹೇಳೋಣಾದ ಮಾತುಗಳನ್ನು ದೇವಸ್ಥಾನಗಳನ್ನು ಸುವ್ಯವಸ್ಥೆಗೆ ತರಬೇಕೆಂತ ಕೋರ್ಟುಗಳಲ್ಲಿ ವೃಥಾ ಒದ್ದಾಡುತ್ತಿರುವವರು ಮನಸ್ಸಿಗೆ ತಂದುಕೊಂಡರೆ ಆಗಬಹುದು. ದಕ್ಷಿಣ ಹಿಂದೂಸ್ಥಾನದಲ್ಲಿ ದೇವಸ್ಥಾನಗಳ ಆಡಳಿತೆಗಳನ್ನು ಊರ್ಜಿತಾವಸ್ಥೆಗೆ ತರಬೇಕೆಂಬುವ ಉದ್ದೇಶದಿಂದ, ಧರ್ಮರಕ್ಷಣಾ ಸಭಾ ಎಂಬದೊಂದು ಏರ್ಪಡಿಸಲ್ಪಟ್ಟಂಥಾದ್ದು ಇರುವದು. ಇವರ ಮೂಲಕ ಆಡಳಿತೆಗೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕೆಂತ ದಾವೆ ಮೂಲಕ ಸಾಧಿಸುವದು ಉಚಿತವೆಂದೇ ತಾತ್ಪರ್ಯವನ್ನು ವ್ಯಕ್ತಗೊಳಿಸಿರುತ್ತಾರೆ.

ರಾ। ಹರಿಕಾಮತ್‌ರವರು ರಾ। ಕೆ. ನಾಗಪ್ಪನವರ ಸ್ಥಳದಲ್ಲಿ ಒಂದನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಇಲ್ಲಿಯ ಡಿವಿಜನಲ್ ಆಫೀಸಿನ ರಾ। ಡಿ. ನಾರಾಯಣರಾಯರು ಎರಡನೆ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟು ಉಡ್ಪಿಗೆ ವರ್ಗಾಯಿಸಲ್ಪಟ್ಟಿರುವರು.

ಬಲೋದ್ಬಂದಿ ನಡಿಸಿ ರಶೀದಿ ಮಾಡಿಕೊಂಡ ವಿಷಯ ಒಂದು ಕ್ರಿಮಿನಲ್ ಫಿರ್ಯಾದಿಯು ದಾಖಲಾಗಿರುವದು. ಬೋಳಾರದ ಇಸಾಕ್ ಪೆಂಗಳರವರು ಸುಲೇಮಾನ್ ಮತ್ತು ನೊರ್ಬರ್ಟ ಲೋಬೊ ಎಂಬವರ ಮೇಲೆ ಒಂದು ಕೈಸೇತು ಗ್ರಾಮಮುನ್ಸಿಫ ಕೋರ್ಟಿನಲ್ಲಿ ತಂದಿದ್ದರು. ಸದರಿ ದಾವೆಯ ತನಖಿ ದಿನ (ಇದೇ ತಿಂಗಳ ತಾ. ೧೧ನೇ ದಿನ) ವಾದಿಯು ಬೋಳಾರದ ಮಂಗಳಾದೇವಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಪ್ರತಿವಾದಿಗಳಿಬ್ಬರೂ ಕೂಡಿ ವಾದಿಯನ್ನು ಹಿಡಿದು ಒಂದು ತೋಟಕ್ಕೆ ಒಯ್ದು ಅಲ್ಲಿ ಕುತ್ತಿಗೆ ಹಿಸುಕಿ ಹೊಡೆದು ಬಲಾತ್ಕಾರದಿಂದ ರಶೀದಿ ಬರೆಸಿಕೊಂಡಿರುವರೆಂಬ ಆರೋಪಣೆಗಳು ಫಿರ್ಯಾದಿಯಲ್ಲಿರುವವೆಂತ ಇಲ್ಲಿಯ ಬಾತ್ಮೀದಾರರು ಬರೆದಿರುವರು.

ಕಳೆದ ವಾರದಲ್ಲಿ ಮಂಗಳೂರಲ್ಲಿ ೪ ಪ್ಲೇಗು ಮರಣಗಳು [illegible] ನಲ್ಲಿ ೩, [illegible] ವಾರ್ಡಿನಲ್ಲಿ ೧, [illegible] ವಾರ್ಡಿನಲ್ಲಿ ೧.

[illegible] [illegible] ಸ್ಟೇಟ್ ಕೋರ್ಟ್ [illegible] (ಮದ್ರಾಸು [illegible]) [illegible] ಮತ್ತಷ್ಟು ಪ್ರಕಟವಾಗುತ್ತದೆ.

[illegible] ಬಂದರವು ಇನ್ನು ಬೇಗನೆ ಮುಂಬಾಯಿ ಸರಕಾರದವರಿಂದ ಮೈಸೂರು [illegible]ದವರಿಗೆ ಕೊಡೋಣಾಗುವದೆಂಬ ಒಬ್ಬ ಮೈಸೂರಿನ ಬಾತ್ಮೀದಾರನ ಹೇಳಿಕೆ [illegible] ಮಾಡಿ [illegible] ಘಟಿಕಳ ವಿಷಯ ಮೈಸೂರು ಸರಕಾರದವರು [illegible] ಮುಂಬಾಯಿ ಸರಕಾರದವರೂ ಇಂಡಿಯಾ [illegible]ದವರೂ ಅಗ್ರಹದಿಂದ ಮುನ್ನಿರುವರಾದರೂ ಭಟಕಳವು ಯಾರ ಕೈಕೆಳಗೆ [illegible] ವಿಷಯ ಇನ್ನು ಅಖೈರ ತೀರ್ಮಾನವಾಗಲಿಲ್ಲವೆಂತ ತಿಳಿದು ಬರು[illegible].

[illegible] ಯುದ್ಧ ಸಾಲದ ಬಗ್ಗೆ ಕೂಡಿದ ಸಭೆಯಲ್ಲಿ ಮಿಸಿಸ್ [illegible] ಮತ್ತು ಸಿ. ಶ್ರೀರಾಮಸ್ವಾಮಿ ಅಯ್ಯರವರು ರೂ. ೫೦,೦೦೦ ಸಾಲ [illegible]ದಾಗಿ ವಾಗ್ದಾನ ಮಾಡಿರುತ್ತಾರೆ.

ಸ್ವರ್ಗಸ್ಥರಾದ ಸರ್. ಪಿ. ಎನ್. ಕೃಷ್ಣಮೂರ್ತಿಗಳ ಪತ್ನಿ ಲಿಖಿ ಕೃಷ್ಣಮೂರ್ತಿ [illegible]ವರು ಧರ್ಮ ಸಹಾಯಕ್ಕಾಗಿ ಕೊಟ್ಟ ರೂ. ೨೫,೦೦೦ ಮೈಸೂರು ಸರಕಾರ[illegible]ವರು ಸ್ವೀಕರಿಸಿರುತ್ತಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ವಿದ್ಯಾಭಿ[illegible] ಬಗ್ಗೆ ಇದರಲ್ಲಿಯ ರೂ. ೨೦,೦೦೦ ವಿನಿಯೋಗಿಸಲ್ಪಡುವದು. ಬಾಕಿ ಹಣವು [illegible]ಸಂಸ್ಥೆಗಳಿಗೆ ಹಂಚಿಕೊಡೋಣಾಗುವದು.

ಕೆಲವು ವಾರಗಳ ಹಿಂದೆ ಮದ್ರಾಸಿನಲ್ಲಿ ಕೂಡಿದ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡುಗಳ ಪರಿಷತ್ತಿನಲ್ಲಿ ಲೋಕಲ್ ಬೋರ್ಡು ಮತ್ತು ಮುನ್ಸಿಪಲ್ ಎಸೋಸಿಯೇಶನ್ ಎಂಬ ಸಂಘವನ್ನು ಏರ್ಪಡಿಸಬೇಕೆಂತ ನಿಶ್ಚಯಿಸಲ್ಪಟ್ಟಿತ್ತು. [illegible] ಲೋಕಲ್ ಬೋರ್ಡುಗಳ ಮತ್ತು ಮುನ್ಸಿಪಲ್ ಕೌನ್ಸಿಲಿನ ಮೆಂಬರರಾಗಿರುವವರು ಮತ್ತು ಈ ಮೊದಲು ಇದ್ದವರೂ ವರುಷ ೧ಕ್ಕೆ ರೂ. ೨ನ್ನು ಚಂದಾ ಹಣವಾಗಿ ಕೊಟ್ಟು ಮೆಂಬರರಾಗಬಹುದು. ಸಂಘದ ಜೋಯಿಂಟ್ ಸೆಕ್ರೆಟರಿಗಳಾದ ಕೋಕನಾಡದಲ್ಲಿರುವ ಬಹುಮಾನ ಪಟ್ಟ ಕೆ. ಆರ್. ವಿ. ಕೃಷ್ಣರಾವ್ ಬಹದ್ದೂರರವರಿಗೆ ಮೆಂಬರರಾಗಲು ಅಪೇಕ್ಷೆಯುಳ್ಳವರು ಬರೆಕೊಳ್ಳಬಹುದು.

ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಡುವ ಕಬ್ಬಿಣ ತಯ್ಯಾರಿಯ ಕಾರ್ಖಾನೆಗಳಿಗೆ ಬೇಕಾದ ಹಣವನ್ನು ಮೈಸೂರು ಸರಕಾರದವರು ಕೊಡುವರು. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯವರು ಇದರ ಆಡಳಿತೆಯನ್ನು ವಹಿಸಿಕೊಳ್ಳುವರೆಂಬುದಾಗಿ ತಿಳಿಯುತ್ತೇವೆ.

ಈ ಸಂಸ್ಥಾನದ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿರುವ ಆಸ್ಪತ್ರೆಗಳ ಬಗ್ಗೆ ಬೇಕಾಗುವ ಖರ್ಚಿನ ವಿಷಯ ಒಂದು ಸರಕಾರಿ ಹುಕುಂ ಇದೇ ತಿಂಗಳ ತಾ. ೨ರಲ್ಲಿ [illegible] ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಮುನ್ಸಿಪಲ್ ಕೌನ್ಸಿಲುಗಳಿಗೂ ಕೊಡೋಣಾಗಿರುವದು. ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿರುವಂಥಾ ಆಸ್ಪತ್ರೆಗಳ ಖರ್ಚನ್ನು ಮುನ್ಸಿಪಾಲಿಟಿಯವರೇ ವಹಿಸಿಕೊಳ್ಳುತ್ತಿದ್ದಾರೆ. ಆದರೆ ಈ ಆಸ್ಪತ್ರೆಗಳಲ್ಲಿ ಹೆಚ್ಚಾಗಿ ಸರಕಾರದ ನೌಕರರೂ ಜಿಲ್ಲೆಯ ಆಯಾ ಕಡೆಯ ಜನರೂ ಚಿಕಿತ್ಸೆಯನ್ನು ಹೊಂದುವದರಿಂದ ಈ ಆಸ್ಪತ್ರೆಗಳ ಖರ್ಚನ್ನು ಸರಕಾರದವರೇ ವಹಿಸಿಕೊಳ್ಳುವದು ಯುಕ್ತವೆಂತ ಡಿಸೆಂಟ್ರಲ್ಯಾಜೇಷನ್ ಕಮಿಷನಿನವರು ಸೂಚಿಸಿದ್ದರು. ಸರಕಾರದಲ್ಲಿ ಹಣದ [illegible] ಇದ್ದಕಾರಣ ಈ ಆಸ್ಪತ್ರೆಗಳ ಖರ್ಚನ್ನು ಪೂರ್ಣವಾಗಿ ವಹಿಸಿಕೊಳ್ಳಲು [illegible]ಲಿಲ್ಲ. ಪಟ್ಟಣ ನಿವಾಸಿಕರಲ್ಲಿ ಅನೇಕರು ಈ ಆಸ್ಪತ್ರೆಗಳಿಂದ ಔಷಧಿಗಳನ್ನು [illegible]ಯುವದರಿಂದ ಪೂರ್ಣ ಖರ್ಚನ್ನು ಸರಕಾರದವರು ನೋಡಿಕೊಳ್ಳಬೇಕೆಂಬ ಅಭಿಪ್ರಾಯವು ಸರಿಯೆಂತ ಸರಕಾರಕ್ಕೆ ತೋರದು. ಆದರೂ ಖರ್ಚಿನ ಮೂರು ಪಾಲುಗಳಲ್ಲಿ ಒಂದು ಪಾಲನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಮತ್ತು ಮುನ್ಸಿಪಾಲಿಟಿಯವರು ಕೂಡಿಕೊಂಡು ಕೊಟ್ಟರೆ ಮಿಕ್ಕ ಖರ್ಚನ್ನು ಸರಕಾರದವರು ವಹಿಸಿಕೊಳ್ಳುವ ಆಲೋಚನೆಯನ್ನು ಮಾಡುವರು. ಮತ್ತು ಹೀಗೆ ಈ ಖರ್ಚನ್ನು ವಹಿಸಿಕೊಂಡು ಆಸ್ಪತ್ರೆಗಳನ್ನು ಉತ್ತಮ ತರಗತಿಗೆ ತರಬೇಕಾಗಿರುವದರಿಂದ ಪ್ರಕೃತ ಇವುಗಳಿಗೆ ಸಂಬಂಧಪಟ್ಟ ಕಟ್ಟಡಗಳನ್ನು ಸರಕಾರಕ್ಕೆ ಬಿಟ್ಟುಕೊಡಬೇಕಾಗಿದೆ. ಹಣ ಒದಗಿದಂತೆ [illegible] ಏರ್ಪಾಡಿನ ಜ್ಯಾರಿ ನಡಿಸಬೇಕೆಂತಿದೆ, ಆದ್ದರಿಂದ ಈ ವಿಷಯ ಡಿಸ್ಟ್ರಿಕ್ಟ್ ಬೋರ್ಡಿನವರೂ ಮುನ್ಸಿಪಾಲಿಟಿಯವರೂ ತಮ್ಮ ಅಭಿಪ್ರಾಯಗಳನ್ನು ಸರಕಾರದವರಿಗೆ [illegible]ಗನೆ ಸೂಚಿಸಬೇಕೆಂತ ಅಪ್ಪಣೆಯಾಗಿದೆ.

~~~~~~~~

ಪತ್ರವ್ಯವಹಾರ.

ಮಂಗಳೂರಲ್ಲಿ ಬೆಂಚ್ ಮೇಜಿಸ್ಟ್ರೇಟರು.

ಅಯ್ಯಾ,

ಬೆಂಚ್ ಮೇಜಿಸ್ಟ್ರೇಟರ ಸ್ಥಾನಗಳಲ್ಲಿ ಕೆಲವು ಪ್ರಕೃತ ಖಾಲಿ ಬಿದ್ದಿದ್ದವಂತೆ. ಖಾಲಿಬಿದ್ದ ಸ್ಥಳಗಳು ಯಾರಿಗೆ ಕೊಡೋಣಾಗುವವೋ ತಿಳಿಯದು. ಅನೇಕ ಜಾತಿಗಳಿವೆ, ವರ್ಗಗಳು ಇವೆ. ಯೋಗ್ಯತೆ ಇದ್ದವರು ಬಹಳ ಮಂದಿ ಇದ್ದಾರೆ. ಪೆನ್ಶನುದಾರರು, ವರ್ಗದಾರರು, ಸಾವುಕಾರರು, ದಲಾಲಿ ಸಾವುಕಾರರು, ಸರಾಫರು, ಕಾರ್ಖಾನೆಗಳ ಮಾಲೀಕರು ಇವೇ ಮೊದಲಾದ ವರ್ಗದವರಿರುವರು. ಪೆನ್ಶನು ಪಡೆದವರಲ್ಲಿ ಯೋಗ್ಯತೆಯುಳ್ಳವರು ಹೆಚ್ಚು. ಈ ವರ್ಗಕ್ಕೆ ಸೇರಿದ [illegible]ವನಾದರೂ ಒಬ್ಬನನ್ನು ಆರಿಸಬಹುದು. ಆದರೆ ಇವರ ವಿಷಯ ಏನೋ [illegible] ಗದ್ದಲವಿರುವದು. ಈ ವರ್ಗದವರನ್ನು ಈ ಕೆಲಸಗಳಿಗೆ ಬರಮಾಡಿಕೊಳ್ಳು[illegible] ಇಂಥವರು ಬಹಳ ವಯೋವೃದ್ಧರಾದ್ದರಿಂದ ಇಂಥವರನ್ನು ಡಾಕ್ಟರರ [illegible] ಪರೀಕ್ಷೆಗೆ ಕಳುಹಿಸಿ ನಂತರ ನೇಮಿಸುವದು ಉತ್ತಮ ಎಂತ ಕೆಲವರು ಸೂಚಿಸುವರು. ಇತ್ತಲಾಗೆ ಬೆಂಚು ಮೇಜಿಸ್ಟ್ರೇಟರಲ್ಲಿ ಈ ವರ್ಗಕ್ಕೆ ಸಂಬಂಧಪಟ್ಟವರಲ್ಲಿ ಒಬ್ಬಿಬ್ಬರು ಬಹಿರಂಗವಾದ ಕೋರ್ಟಿನಲ್ಲಿ ಅಭಿಪ್ರಾಯ ನಿರ್ಣಯದ [illegible] ಮಾಡಿ ಬಿಟ್ಟರೆಂಬುವ ಕಾರಣದಿಂದ ಈ ಸೂಚನೆಯನ್ನು ಕೆಲವರು ಎದುರು ಹಾಕುತ್ತಿದ್ದಾರೆ. ನನಗಾದರೂ ಅದು ಸರಿ ಕಾಣದು. ಒಬ್ಬಿಬ್ಬರ ತಪ್ಪಿಗಾಗಿ [illegible] ಇದೇ ವರ್ಗದವರ ಮೇಲೆ ಈ ವೈದ್ಯಕ ಪರೀಕ್ಷೆಯ ಶರ್ತವನ್ನು ಹಾಕಬೇಕೆಂದರೆ ಅದು ಎಂದೂ ಸರಿಯಲ್ಲ. ಈ ಎಲ್ಲ ಮಾತುಗಳು ಹಾಗಿರಲಿ, ಕಲೆಕ್ಟರರ [illegible] ಹ್ಯಾಗೆ? ಅರ್ಜಿಗಳನ್ನು ಹಿಡಕೊಂಡು ಬಂದವರಿಗೋ ಅಥವಾ ಸ್ವತಃ [illegible] ಯಾರು ಯೋಗ್ಯರೆಂಬುದನ್ನು ತಿಳಕೊಂಡೋ ಈ ನೇಮಕಗಳನ್ನು [illegible]ಸುವದು. ಅದೂ ಸಹ ಊಹಿಸಲು ಸಾಧ್ಯವಿಲ್ಲ. ಪೆನ್ಶನುದಾರರ ನಂತರ [illegible]ದಾರರು. ಇವರ ಕಡೆಯಿಂದ ಸಾಕಷ್ಟು ಜನರು ಈ ಕಾಲದಲ್ಲಿ ಬೆಂಚಿನ ಮೇಲೆ ಇರುವರು, ಆದ್ದರಿಂದ ಈ ವರ್ಗದವರಿಗೆ ಈ ಸರ್ತಿ ಬೇಡ. ಸಾವುಕಾರರು, ದಲಾಲಿ ಸಾವುಕಾರರು, ಸರಾಫರು—ಇದು ದೊಡ್ಡ ವರ್ಗವೇ ಸರಿ! ಇವರಲ್ಲಿಂದ ಬೇಕಾದವರನ್ನು ಬೆಂಚಿನ ಮೇಲೆ ತರಬಹುದು. ಈಗಲೇ ಈ ವರ್ಗದವರಲ್ಲಿ ನಾಲ್ವರು ಜನರು ಬೆಂಚಿನ ಮೇಲೆ ಇದ್ದಾರೆ. ಇನ್ನು ಒಬ್ಬಿಬ್ಬರನ್ನು ಈ [illegible] ಮಾಡಿದರೆ—ಬಂದರದಲ್ಲಿ ನಡೆಯುವ ಕಳವು—ಕಾಫಿ ಕಳವು—[illegible] ಕಳವು—ಕೊಬ್ಬರಿ ಕಳವು—ಇನ್ನು ಇಂಥಾ ಬಹಳಗೆ [illegible] ಕಳವುಗಳು ಕಡಿಮೆಯಾಗಬಹುದೋ ಏನೋ! ಯಾಕೆಂದರೆ ಅರೆಂಟು ಜನರು ಬಹಳ ಮಂದಿ ಮೇಜಿಸ್ಟ್ರೇಟರು ಬಂದರದಲ್ಲಿದ್ದಾರೆಂದರೆ ಇತ್ತ ಕಳ್ಳರಿಗೂ ಭೀತಿ ಅತ್ತ ಪೋಲೀಸಿನವರಿಗೂ ಭೀತಿ. ಇದು ಆಗ ಬಹುದೆಂದು ಹೇಳಬಹುದು. ಇದರಲ್ಲಿಯೂ ಒಂದು ಪ್ರಶ್ನೆ ಮಾತಬಹುದು. ಬಂದರದಿಂದ ಒನರೆ ಮೇಜಿಸ್ಟ್ರೇಟರು ನಾಲ್ಕೈದು ಜನರು ಬೆಂಚಿನ ಮೇಲೆ ಬಂದ ನಂತರ ಈ ಕಳವುಗಳು ಹ್ಯಾಗಿವೆ. ಇದು ಯಾರಿಗೆ ಗೊತ್ತು? ಅಧಿಕಾರಿಗಳಿಗೆನೇ ತಮ್ಮ ಗೂಢಾಚಾರಿಗಳಿಂದ ಗೊತ್ತುಪಡಿಸಲು ಸಾಧ್ಯ. ಹ್ಯಾಗೂ ಒಬ್ಬನು ಈ ವರ್ಗದವನಿಂದ ನೇಮಕವಾದರೆ ಆಗಬಹುದು. ನಾನಾದರೋ ಇವರಿಗೆ ಒಂದು ಮಾತನ್ನು ಹೇಳುವೆನು. ಪ್ರಜಾವರ್ಗಗಳೊಳಗೆ ಹೀಗೆ ನೀತಿಯನ್ನು ಪಾಲಿಸುವ ಅಧಿಕಾರವು ನನಗೆ ಬೇಕು ನನಗೆ ಬೇಕು—ಎಂತ ಮುಂದರಿಸಿ ಹೋಗುವದು ಒಳ್ಳೇದೆ ಸರಿ. ಆದರೆ ಇಂಥಾ ನೀತಿಪಾಲನೆಯನ್ನು ಮಾಡುವಂಥಾದ್ದು ಮನುಷ್ಯನು ಮಾಡಿದ ಕಾನೂನಿನ ಪ್ರಕಾರ. ದೇವರು ಮಾಡಿದ ಕಾನೂನು ಅಂದರೆ ಸೃಷ್ಟಿ ನಿಯಮಗಳಿಗೆ ವಿರುದ್ಧವಾದ ಅತ್ಯಾಚಾರಗಳು ಬಂದರದಲ್ಲಿ ಕಂಡು ಬಂದರೆ ಅಂಥವುಗಳನ್ನು ಧೈರ್ಯದಿಂದ ಪ್ರಕಾಶಕ್ಕೆ ತಂದು ಅವುಗಳು ಆಗದಂತೆ ಜಾಗ್ರತೆಯಿಡಿರಿ. ಆಗ ಅರ್ಜಿಗಳ ಸಹಾಯ ಇಲ್ಲದೆ ಬೇರೆ ಬೇರೆ ಮನುಷ್ಯರ ಸರ್ಟಿಫಿಕೇಟುಗಳನ್ನು ಬೇಡದೆ ಬೆಂಚಿನ ದಂಡಾಧಿಕಾರಿಗಳಾಗಬೇಕೆಂದು ಸರಕಾರವು ನಿಮ್ಮನ್ನು ಆಮಂತ್ರಿಸುವದು. ಇಷ್ಟಾಯಿತು! ಕಾರ್ಖಾನೆಗಳ ಮಾಲೀಕರು ಅಂದರೆ ಹಂಚಿನ ಕಾರ್ಖಾನೆ ಮತ್ತು ಮುಗ್ಗದ ಕಾರ್ಖಾನೆಯವರು ಇವರೂ ಬಹಳ ಮಂದಿ ಇರುವರು ಯೋಗ್ಯತೆ ಇದ್ದವರೂ ಇವರಲ್ಲಿರುವರು. ಬೆಂಚಿನ ಮೇಲೆ ಇವರಿಂದ ಒಬ್ಬಿಬ್ಬರಾಗಬಹುದು. ಇಷ್ಟೆಲ್ಲ ಹೇಳುವಾಗ ಸ್ವಾಮಿ ಪತ್ರಾಧಿಪರೇ, ನಿಮ್ಮ ಮುಂದೆ ಒಂದು ಸಂಗತಿಯನ್ನು ಹೇಳುವೆನು. ಮಾನವರಾದರೂ ಇನ್ನು ಮೂಕ ಪ್ರಾಣಿಗಳಾಗಿರುವಂಥವರು—ದೀನರಾದ ಗಾಡಿಗಾರರು, ಮತ್ತು ಕೂಲಿ ಕೆಲಸದವರು—ಇವರೆಲ್ಲರ ಸಂಕಷ್ಟಗಳು ಚೆನ್ನಾಗಿ ಗೊತ್ತಿದ್ದವರಿಗೆ ಇಂಥಾ ಕೆಲಸಗಳು ಕೊಡೋಣಾಗುತ್ತಿದ್ದರೆ ಎಷ್ಟು ಉಪಕಾರವಾಗುತ್ತಿತ್ತು! ಮೊಕದ್ದಮೆಗಳು ಈ ವರ್ಗದವರ ಮೇಲೆ ನಡೆಸೋಣಾಗುವವು. ಸರ್ವರೂ ಇವರಿಂದಲೇ ಪ್ರಯೋಜನಪಡೆಯುವದು ಹೆಚ್ಚು. ಮಾತುವದೇನು—ಅಷ್ಟರ ಮಟ್ಟಿಗೆ ತಮ್ಮ ಸಂಕಷ್ಟಗಳನ್ನು ಹೇಳಿಕೊಡುವವರು—ಮೂಕ ಪ್ರಾಣಿಗಳೆಂದು ಹೇಳಿದೆನಲ್ಲ. ಇವರ ಕಡೆಯಿಂದ ಬೆಂಚಿನ ಮೇಲಿನ ಮೇಜಿಸ್ಟ್ರೇಟರೂ ಮತ್ತು ಅಫಿದಾವಿತುಗಳಿಗೆ, ಸೈನ್ ಕರಾರುಗಳಿಗೆ ಸಾಕ್ಷಿ ಹಾಕುವ ಅಧಿಕಾರಸ್ಥರಿಗೂ ಒಂದು ಅರಿಕೆಯಿದೆ. ಅಧಿಕಾರ ಪಡಕೊಂಡವರಲ್ಲಿ ಕಾರ್ಖಾನೆ ಮಾಲೀಕರಿದ್ದರೆ ಇನ್ನೂ ವಿಧವಿಧದ ವೃತ್ತಿಯವರಿದ್ದಾರೆ. ಬಡವರ ಮೇಲೆ ಅಂದರೆ ಇವರ ವಿರೋಧವಾದಂಥಾ ಅಫಿದಾವಿತುಗಳಿಗೆ ದಸ್ಕತು ಮಾಡುವಾಗ ಒಳ್ಳೇ ತನಿಖೆ ಮಾಡಿ ದಸ್ಕತು ಹಾಕಿರಿ. ಮತ್ತು ಹೆಸರೂ ಇಲ್ಲ, ಹಣವೂ ಇಲ್ಲ, ಇಸವಿಯೂ ಇಲ್ಲ, ತಾರೀಕೂ ಇಲ್ಲ, ಇಂಥ ಸೈನ್ ಕರಾರುಗಳಿಗೆ ರುಜು ಹಾಕುವಾಗ ಕಣ್ಣು ಮುಚ್ಚಿ ಹಾಕಬೇಡಿರಿ. ಇಲ್ಲಿಗೆ ಆಯಿತು. ಇನ್ನು ಗಜೀಟಿನಲ್ಲಿ ಯಾರ ಹೆಸರುಗಳು ಬರಲಿಕ್ಕಿವೆ ಎಂಬುದನ್ನು ನೋಡೋಣ.

ಪುರವಾಸಿ.

ಶ್ರೀ ಜ್ಞಾನೋದಯ ಸಮಾಜದ ಏಳನೇ ವಾರ್ಷಿಕೋತ್ಸವ

ಕಳೆದ ಸೌರಮಾನ ಯುಗಾದಿ ದಿನ ಬಹೂ ವಿಜೃಂಭಣೆಯಿಂದ ಆಚರಿಸೋಣಾಯಿತು. ಈ ದಿನ ಸೂರ್ಯೋದಯ ಕಾಲದಲ್ಲಿ ಸಮಾಜದ ಸದಸ್ಯರೆಲ್ಲರೂ ಸಮುದ್ರಸ್ನಾನ ಮಾಡಿ, ದೇವತಾಪ್ರಾರ್ಥನಾ ಕೀರ್ತನಾದಿಗಳನ್ನು ನಡಿಸಿ, ಮದ್ಯಪಾನ ವರ್ಜನೆಯ ಕುರಿತಾದ ಶಪಥಗಳನ್ನು ಉಚ್ಚರಿಸಿ, ಒಬ್ಬರಿಗೊಬ್ಬರು ಪ್ರಮಾಣದಾರಗಳನ್ನು ಕಟ್ಟಿಕೊಂಡರು. ಬೊಕ್ಕಪಟ್ಣದಲ್ಲಿ ವಾರ್ಷಿಕ ಸಮ್ಮೇಳನಕ್ಕಾಗಿ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟ ಒಂದು ದೊಡ್ಡದಾದ ಸಭಾ ಮಂಟಪವನ್ನು ಸಿದ್ಧಗೊಳಿಸಿದ್ದರು. ಮಧ್ಯಾಹ್ನದ ಮೇಲೆ ಕ್ಲಪ್ತಕಾಲಕ್ಕೆ ಸರಿಯಾಗಿಯೇ ಈ ಸಭಾ ಮಂಟಪವಲ್ಲವೂ ಮೊಗೇರ ಸ್ತ್ರೀ, ಪುರುಷ, ಬಾಲ, ಬಾಲಕಿಯರುಗಳ ಮಹಾ ಸಭೆಯಿಂದ ತುಂಬಿ ಹೋಗಿತ್ತು. ಮಹಾ ರಾಜಶ್ರೀಗಳಾದ ರಾವ್ ಬಹದ್ದೂರ್ [illegible] ಸುಬ್ಬರಾಯರವರು, [illegible] ಸದಾಶಿವರಾಯರವರು, ಅಡಿಗೆ ಶ್ರೀನಿವಾಸರಾಯರವರು, ಕೆ. ಪಟ್ಟಾಲ್ ರಂಗರಾಯರು, ಮುಜೀರ ರಘುನಾಥಯ್ಯನವರು, ಉಳ್ಳಾಲ ಮಂಗೇಶರಾಯರವರು, ಸಾಹುಕಾರ ಯಚ್. ಕೊರಗಪ್ಪನವರು, ಮೊದಲಾದ ಮಂಗಳೂರಿನ ಪ್ರಮುಖ ಮಹಾಶಯರುಗಳೂ ಮಂಗಳೂರು ಮಹಿಳಾ ಸಭೆಯ ಪ್ರಮುಖ ಸ್ತ್ರೀ ಭಗಿನಿಯರುಗಳೂ ಸಹಾ ದಯಮಾಡಿಸಿದ್ದರು. ಅಂದು ಸಭಾಧ್ಯಕ್ಷರಾಗಲು ಒಪ್ಪಿಕೊಂಡ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫರಾದ ಮಹಾರಾಜಶ್ರೀ ಜಗನ್ನಾಥರಾಜ ಯನ್. ತಗಕೋರರವರು ದಯಮಾಡಿಸುತ್ತಲೇ ಸಭಿಕರೆಲ್ಲರೂ ಎದ್ದು ನಿಂತು ಹಸ್ತತಾಡನ ಘೋಷದಿಂದ ಸುಸ್ವಾಗತವನ್ನು ಬಯಸಿದರು. ಪ್ರಥಮತಃ ದೇವರ ಪ್ರಾರ್ಥನೆ ಕೀರ್ತನಾದಿಗಳಿಂದ ಸಭಾಕಾರ್ಯವು ಪ್ರಾರಂಭವಾಯಿತು. ರಾ। ಮಹಲಿಂಗ ತಿಂಗಳಾಯರು ಸ್ವಾಗತ ಭಾಷಣವನ್ನು ಕೊಟ್ಟರು. ರಾ। ಪೂವಪ್ಪ ಅಮ್ಮಣ್ಣಯರು ವಾರ್ಷಿಕ ವರದಿಯನ್ನು ಓದಿದರು. ಕಳೆದ ವರುಷ ೫೮ ಜನರು ಹೊಸತಾಗಿ ಸೇರಿದವರು ಕೂಡಿ ಒಟ್ಟು ಈಗ ೩೩೩ ಜನರು ಸಮಾಜದ ಸದಸ್ಯರಾಗಿರುವರೆಂದೂ, ವರದಿಯ ವರುಷದಲ್ಲಿ ರೂಪಾಯಿ ೫೯೮-೩-೭ ಜಮೆಗೆ ಬಂದು, ಪ್ರಯೋಜನಕರವಾದ ವಿವಿಧ ವಿಷಯಗಳಿಗೆ ರೂಪಾಯಿ ೫೩೪-೧೧-೯ ಖರ್ಚು ಆಗಿ, ರೂಪಾಯಿ ೬೩-೬-೧೦ ಮಾತ್ರ ಶಿಲ್ಕು ಉಳಿದಿರುವುದೆಂದೂ ವಾರ್ಷಿಕ ವರದಿಯಿಂದ ಗೊತ್ತಾಯಿತು.

ತರುವಾಯ ಪೊಯ್ಯ ಊರಿನ ಮೊಗೇರ ಜಾತಿ ಹತ್ತು ಸಮಸ್ತರ ಭಂಡಾರದ ಕಡೆಯಿಂದ ಯೌವನಸ್ಥರ ಗುರಿಕಾರರಾದ ರಾ। ತುಕ್ರ ತಿಂಗಳಾಯರು ಮುಂದೆ ಬಂದು, ಸಮಾಜದವರಿಗೆ ಕೊಡಬೇಕೆಂದು ರೂಪಾಯಿ ೭೫/-ನ್ನು ಸಭಾಧ್ಯಕ್ಷರ ಕೈವಶಮಾಡಿದರು. ಅಧ್ಯಕ್ಷರು ಪೊಯ್ಯ ಊರ ಹತ್ತು ಸಮಸ್ತರ ಈ ಔದಾರ್ಯೋತ್ಸಾಹವನ್ನು ಶ್ಲಾಘಿಸಿ, ಇತರ ಊರವರಿಂದಲೂ ಇದು ಅನುಕರಣೀಯವಾದುದೆಂದು ಅಪ್ಪಣೆ ಕೊಟ್ಟರು. ಈ ಸಮಾಜದವರು ನಿರ್ಮಿಸುತ್ತಿರುವ ಜ್ಞಾನೋದಯ ಮಂದಿರದ ಬಗ್ಗೆ ಸರಕಾರದವರು ೧೨೫೦ ರೂಪಾಯಿಗಳನ್ನು ಸೆಂಕ್ಷನ್ ಮಾಡಿ ಕಳುಹಿಸಿದ ಗವರ್ನ್‌ಮೆಂಟ್ ಹುಕುಮನ್ನು, ರಾ। ಮೋಹನಪ್ಪ ತಿಂಗಳಾಯರು ಓದಿ ತಿಳಿಸಿದರು. ಮತ್ತು ನಮ್ಮಂಥಾ ಬಡ ಪ್ರಜಾಜನರ ಏಳಿಗೆಯನ್ನು ಚಿಂತಿಸಿ ಕೊಟ್ಟ ಈ ಉತ್ತೇಜನಕ್ಕಾಗಿ ಸರಕಾರದವರನ್ನು ಸಮಾಜದವರೆಲ್ಲರ ಹೆಸರಿನಲ್ಲಿ ಕೃತಜ್ಞತೆಯಿಂದ ವಂದಿಸಿದರು.

ಅಮಲು ಪಾನದ ಕಡು ವ್ಯಸನಾಧೀನನಾಗಿ ವಿವಿಧ ಸಂಕಷ್ಟಗಳನ್ನನುಭವಿಸುತ್ತಿದ್ದು ಪ್ರಕೃತ ಸಮಾಜದ ನಂಬಿಗೆಯ ಸದಸ್ಯನಾಗಿ ಮದ್ಯಪಾನದ ಕಡೆಗೆ ಓಡುತ್ತಿದ್ದ ತನ್ನ ಮನಸ್ಸನ್ನು ಕಟ್ಟಿಹಾಕಿದ ಸಿರಿಶ್ಯಾಲ್ಯ ಅಂತಪ್ಪ ಸಾಲ್ಯಾನ್ ಎಂಬವನನ್ನು ರಾ। ಮೋಹನಪ್ಪ ತಿಂಗಳಾಯರು ಸಭಿಕರಿಗೆ ಪರಿಚಯ ಮಾಡಿಕೊಟ್ಟು ಆತನ ತಾಯಿಯು ತನ್ನ ಮಗನ ಈ ಬದಲಾವಣೆಯಿಂದುಂಟಾದ ತನ್ನ ಸಂತೋಷವನ್ನು ವ್ಯಕ್ತಗೊಳಿಸುವರೆ ಆತಗೆ ಸಭೆಯಲ್ಲಿ ಕೊಡಲು ಕಳುಹಿಸಿದ ಚಿನ್ನದ ಕಂಠಿಯೊಂದನ್ನು ಅಧ್ಯಕ್ಷರ ಕೈವಶಮಾಡಿದರು. ಅಂತಪ್ಪ ಸಾಲ್ಯಾನನು ತನ್ನ ಕುಡಿತದ ಜೀವನವ ಹ್ಯಾಗಿತ್ತೆಂಬುದನ್ನು ವರ್ಣಿಸಿ, ಪ್ರಕೃತ ಸಮಾಜಕ್ಕೆ ಸೇರಿ ಅಮಲು ಪಾನ ವರ್ಜಿಸಿದ್ದರಿಂದ, ತನಗಿದ್ದ ಸಾಲಗಳೆಲ್ಲಾ ಹ್ಯಾಗೆ ಪರಿಹಾರವಾಗಿ ಹೋಯಿತೆಂಬುದನ್ನು ವಿವರಿಸಿ, ತನ್ನ ಶರೀರಾರೋಗ್ಯವು ಮೊದಲಿಗಿಂತಲೂ ಈಗ ಉತ್ತಮ ಸ್ಥಿತಿಯಲ್ಲಿರುವುದೆಂದೂ ಹೇಳಿದನು. ಅಧ್ಯಕ್ಷರು [illegible] ಮತ್ತು [illegible] [illegible] [illegible] ಹರ್ಷದಿಂದ [illegible] [illegible] [illegible] [illegible] [illegible] ಕಂಠೀಸರವನ್ನು [illegible].

[illegible] ಅಧ್ಯಕ್ಷರು ಕರ್ನಾಟಕ ಭಾಷೆಯಲ್ಲಿ [illegible] ಭಾಷಣ ಕೊಟ್ಟು ಸಮಾಜದವರಿಗೆ ಸಭಿಕರಿಗೂ ಒಳ್ಳೇ ಬುದ್ಧಿವಾದವನ್ನು ಮಾಡಿದರು. ಈ ಸಭಾಕಾರ್ಯದ ನಡುನಡುವೆ ಸಮಾಜದ ಸಂಗೀತ ಕೂಟದವರು ಮದ್ಯಪಾನ ನಿಷೇಧಪರವಾಗಿಯೂ, ಉಲ್ಲಾಸದ ವಿಷಯವಾಗಿಯೂ ತುಳು ಕರ್ನಾಟಕ ಸಂಗೀತಗಳನ್ನೂ ಪ್ರಶ್ನೋತ್ತರ ಸಂವಾದಗಳನ್ನೂ ಮಾಡಿ ಸಭಿಕರನ್ನೆಲ್ಲ ಆನಂದಗೊಳಿಸಿದರು. ಮತ್ತು ರಾಜಗೀತೆ ಮಂಗಲಾಚರಣೆಗಳಿಂದ ಕಾರ್ಯ ಸಮಾಪ್ತಿಗೊಳಿಸಿ, ಪನ್ನೀರು ತಿಪ್ಪತಾಂಬೂಲಾದಿಗಳಿಂದ ಸರ್ವರನ್ನೂ ಸತ್ಕರಿಸಿದರು.

ಪ್ರೇಕ್ಷಕ.

ಬಾತಮಿಗಳು.

ಮುಲ್ಕಿ:— ಲೇಡಿಸ್ ಯುದ್ಧಫಂಡಿನ ಬಗ್ಗೆ ಇಲ್ಲಿ ಒಂದು ಸಭೆಯು ಕೂಡಿತ್ತು. ಇಲ್ಲಿಯ ಡಿಪ್ಯುಟಿ ತಹಸೀಲದಾರರೂ ರೆವಿನ್ಯೂ ಇನ್ಸ್‌ಪೆಕ್ಟರರೂ, ಡಾಕ್ಟರರೂ ಮೊದಲಾದವರೆಲ್ಲಾ ಸಭೆಯಲ್ಲಿ ಕೂಡಿದ್ದರು. ಪಟೇಲ ಮುಕುಂದರಾಯರು ಈ ಫಂಡಿಗೆ ವಂತಿಗೆ ಹಾಕಬೇಕೆಂತ ಬಹಳ ಉತ್ಸಾಹದಿಂದ ಮಾತಾಡಿದರು. ವಂತಿಗೆ ಪಟ್ಟಿಯು ಸಭೆಯಲ್ಲಿ ಮಾಡೋಣಾಯಿತು. ತಿಂಗಳಿಗೆ ರೂ. ೫೦ಕ್ಕೆ ಮಿಕ್ಕಿದ ಮೊಬಲಗು ವಂತಿಗೆ ವಸೂಲಾಗುವಂತ ಕಾಣಬರುತ್ತದೆ. ಚಿತ್ರಾಪುರ ರಾ। ಲಕ್ಷ್ಮೀವತಯ್ಯನವರು ರೂ. ೬, ಸಾವಂತರು ರೂ. ೪, ರಾ। ಶೇಷಯ್ಯನವರು ರೂ. ೪ ಈ ರೀತಿ ವಂತಿಗೆ ಹಾಕೋಣಾಗಿರುತ್ತದೆ.

ಮುಲ್ಕಿಯಲ್ಲಿ ಕಳೆದ ಬಪ್ಪನಾಡ ಜಾತ್ರೆಕಾಲದಲ್ಲಿ ಪಟೇಲರ ಮಗನಿಗೂ ಮೊಕ್ತೇಸರರ ಮಗನಿಗೂ ಆದ ಜಗಳಾಟದಲ್ಲಿ ಫಿರ್ಯಾದು ದಾಖಲಾಗಿರುವದು.

ಮುಲ್ಕಿ ವೆಂಕಟರಮಣ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ಮುಳ್ಳು ಕಟ್ಟಿಸಿ ಜನರಿಗೆ ಬಹಳ ಅನಾನುಕೂಲತೆಯಾಗಿದೆ ಎಂತ ಒಮ್ಮೆ ತಿಳಿಸಿದ್ದೆನು. ಜನರು ಸಿವಿಲ್ ವ್ಯಾಜ್ಯದ ಮೂಲಕ ಈ ಮಾರ್ಗದ ಹಕ್ಕನ್ನು ಊರ್ಜಿತಪಡಿಸಬೇಕೆಂತ ಹುಕುಮಾಗಿದೆಯಂತೆ. ಬಡಬಗ್ಗರು ಸಿವಿಲ್ ವ್ಯಾಜ್ಯಕ್ಕೆ ಹೋಗುವದೆಂದರೆ ಇದ್ದ ವೃತ್ತಿಯನ್ನು ಬಿಟ್ಟು ಕೈಯಲ್ಲಿದ್ದ ಕಾಸನ್ನು ಕಳಕೊಂಡು ತಿರುಗುವ ಸಾಧನೆ. ಈ ಸಾಧನೆಯನ್ನು ಅಧಿಕಾರಿಗಳು ಸೂಚಿಸುವದಕ್ಕಿಂತ ಅಲ್ಪ ಕ್ರಿಯಬಾಳುವ ಈ ಮಾರ್ಗವನ್ನು ಕ್ರಿಯಕ್ಕೆ ಪಡದು ಅದನ್ನು ಜನರು ಉಪಯೋಗಿಸುವಂತೆ ಮಾಡಕೊಡದೋ? ತಾಲೂಕು ಬೋರ್ಡು ಪ್ರೆಸಿಡೆಂಟರೂ ಡಿಪ್ಯುಟಿ ತಹಸೀಲದಾರರೂ ಈ ವಿಷಯಕ್ಕೆ ಇನ್ನೂ ಗಮನಕೊಡದೆ ಇರುವದು ಜನರ ದುರದೃಷ್ಟವೇ ಸರಿ.

ಅಕ್ಕಿಯ ಧಾರಣೆಯು ಇಲ್ಲಿಯೂ ಸಹ ಕಡಿಮೆಯಾಗಿರದು. ಕೋಳಕೆ ಬೆಳೆಯು ಏನೂ ಫಲವಿಲ್ಲದ್ದಾಗಿದೆ. ರೈತರೂ ಒಕ್ಕಲುಗಳೂ ಅಕ್ಕಿಯನ್ನು ಮಾರಲಿಕ್ಕೆ ತರುವದೇ ಇಲ್ಲ. ಕಳದ ವರುಷದ ಸ್ಥಿತಿಯನ್ನು ನೋಡಿ ಈ ವರುಷ ಅಕ್ಕಿಯನ್ನು ರೈತರೂ ಒಕ್ಕಲುಗಳೂ ದಾಸ್ತಾನು ಇಡುವದರಲ್ಲಿ ಇದ್ದಾರೆ.

~~~~~

ಪುತ್ತೂರು:— ಇಲ್ಲಿಯ ಡಿವಿಜನ ಆಫೀಸರ ಮ॥ ರಾ। ಪಿ. ನಾರಾಯಣ ಮೆನೋನರವರು ತಾ. ೧೨ರಲ್ಲು ಇಲ್ಲಿಗೆ ತಲಪಿರುವರು.

ಇಲ್ಲಿಯ ಡಿವಿಜನ ಆಫೀಸರರು ಇದೇ ತಿಂಗಳ ತಾ. ೧೫ರಲ್ಲು ಪುತ್ತೂರಿನಿಂದ ಮಂಗಳೂರು ತಾ. ೧೬ ಮಂಗಳೂರು, ತಾ. ೧೭ ಮಂಗಳೂರಿನಿಂದ ಮಂಜೇಶ್ವರ, ತಾ. ೧೮ ಮಂಜೇಶ್ವರ, ತಾ. ೧೯ರಿಂದ ೨೦ರ ವರೆಗೆ ಕಾಸರಗೋಡು, ತಾ. ೨೧ ನಿಲೇಶ್ವರ, ತಾ. ೨೨-೨೩ ಹೊಸದುರ್ಗ, ತಾ. ೨೪-೨೫ ಕುಂಬಳೆ, ತಾ. ೨೬ ವಿಟ್ಲ, ತಾ. ೨೭ ಪುತ್ತೂರು ಈ ರೀತಿ ಸರ್ಕೀಟು ಬೆಳಸುವರು.

ಇದೇ ತಾ. ೧೫ರಲ್ಲು ಕೆಮ್ಮಿಂಜೆ ಗ್ರಾಮದ ಮದಿಲು ಎಂಬಲ್ಲಿರುವ ಕೋಟೆರ ಜಾತಿ ಸುಬ್ಬಾಯ ಎಂಬವನು ಪುತ್ತೂರು ಕಸಬಾ ಪಟೇಲರ ಉಗ್ರಾಣಿ ಶೇಕ ಇಮಾಮ್ ಎಂಬವನನ್ನು ಚೂರಿಯಿಂದ ಕೊಂದುಬಿಟ್ಟದಲ್ಲದೆ ಬೆದ್ರಹಳ್ಳಿ ಕೇರಿ ಗುತ್ತಿದಾರ ಸೈತಾಡಿ ಪಕೀರ ಪೂಜಾರಿ ಎಂಬವನನ್ನು ಕತ್ತಿಯಿಂದ ಘಾಯ ಪಡಿಸಿರುವನು. ಘಾಯಪಡೆದವನನ್ನು ಆಸ್ಪತ್ರೆಗೆ ಒಯ್ದಿರುತ್ತಾರೆ. ಸುಬ್ಬಾಯ ಎಂಬವನು ಪೋಲಿಸ್ ಸ್ಟೇಶನಿಗೆ ತಾನಾಗಿ ಹಾಜರಾಗಿರುತ್ತಾನೆ.

ಇದೇ ತಾ. ೧೫ರಲ್ಲು ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಥೋತ್ಸವವು ಬಹು ವಿಜೃಂಭಣೆಯಿಂದ ಜರಗಿತು.

~~~~~~~~

ಜೀನಸು ಧಾರಣೆ.

(ರಖಂ).

ಮುಷ್ಠಿ ಅಕ್ಕಿ ಹೊಸ್ತು		5—14—0 ರಿಂದ	6—4—0
ಗುಡ್ಡು ಸುಗ್ಗಿ ,,		5—10—0	,, 5—15—0
ಹೊಸ ರಾಶಿ ,,		5—8—0	,, 5—10—0
ಅವ್ವಲ್ ಬೆಳ್ತಿಗೆ ,,		6—4—0	,, 6—10—0
ಗುಡು ಬೆಳ್ತಿಗೆ ,,		5—8—0	,, 5—12—0
ರಂಗೂನು ಬೆಳ್ತಿಗೆ ಗೋಣಿ ೧ರ		9—8—0	,, 9—12—0
ಗೋದಿ ಗೋಣಿ ೧ರ		12—12—0	,, 12—8—0
ಹುರುಳಿ ಗೋಣಿ ೧ರ		5—8—0	,, 6—2—0
ಕಡಲೆ ಗೋಣಿ ೧ರ ಬೊಂಬೈ		9—8—0	,, 10—8—[illegible]
ತೊಗರಿ ಗೋಣಿ ೧ರ			10—8—0
ತೊಗರಿ ಬೇಳೆ ಗೋಣಿ ೧ರ	11—0—0	12—8—0	,, 15—8—0
ಉದ್ದು ಗೋಣಿ ೧ರ		11—8—0	,, 11—12—0
ಊರುಬೆಲ್ಲ ಖಂಡಿ ೧ರ			,, 37—8—0
ಉಪ್ಪು ಗೋಣಿ ೧ರ		4—12—0	,, 4—14—0
ಕೊಬ್ರಿ ಖಂಡಿ ೧ರ		70—0—0	,, 75—0—0
ಹಿಂಡಿಹಿಂಡಿ ಖಂಡಿ ೧ರ		17—0—0	,, 17—8—0
ಎಳ್ಳಿಂಡಿ ಖಂಡಿ ೧ರ ಬೊಂಬೈ		27—8—0	,, 35—0—0
ಕೊಬ್ರಿ ಎಣ್ಣೆ ಮುಡಿ ೧ರ		5—14—0	,, 6—8—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)			,, 4—10—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		6—11—0	,, 7—6—0
ಮೋರಿಸ್ ಸಕ್ಕರೆ ಮುಡಿ ೧ರ		5—7—0	,, 5—8—0
ಕಾಫಿ ಖಂಡಿ ೧ರ		150—0—0	165—0—0
ಹೊಸಬೀಗೋಟು ಖಂಡಿ೧ರ		77—0—0	,, 83—0—0
ಗೇರುಬೀಜ ಮುಡಿ ೧ರ		2—0—0	,, 2—1—0
ಕೆಸ್ಲಿಕ್ ಖಂಡಿ ೧ರ		105—0—0	,, 110—0—0
ಹುಂಬ್ಳ ಕೆಗಡು ಮುಡಿ ೧ರ		31—0—0	,, 34—8—0
[illegible] ಮುಡಿ ೧ರ			,, 34—0—0
[illegible] ೧ರ		23—8—0	,, 24—0—0
[illegible] ಮುಡಿ ೧ರ		5—4—0	,, 5—8—0
[illegible]			240—0—0
~~~~~~~~

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ . ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳೆ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೩೦ ವರ್ಷಗಳ ಹಳೆ, ಕ್ಷಿಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಳಿಗೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ)ಯಿಂದ ಮೈಮೇಲೆ ಬೊಬ್ಬೆ ಬೊಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಎಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಳಿಗೆ ರೂ. ೧–೪–೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ.

ಗಿರಗಾಂವ ನಂ. ೪ ಮುಂಬಯಿ

ಇಕ್ಲಿಪ್ಸ್ ಪಿಲ್ಸ್ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೀವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4–8–0.

ಇಕ್ಲಿಪ್ಸ್ ಬಾಮ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳೆತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುಣ್ಣು, ಕುರಿಕಜ್ಜಿ, ಮೂಲವ್ಯಾಧಿ, ಬೆಂಕಿಯ ಬೊಕ್ಕೆ, ಮೊಡವೆ, ಚೇಳು, ಜಾಡರಹುಳ, ಜೇನುಹುಳಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1ಕ್ಕೆ ಆಣೆ 8. ವಿ. ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4–12–0.

ಶುದ್ಧ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಟೂರಬಟ್ ರೂ. 1–8–0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2–8–0, 1–0–0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ಹೋಲುವುದು. ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿದ್ದಾಗಿದೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತದೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟ್‌ರವರಲ್ಲಿ ಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಶ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಶ್ರಿ ಮುರಬ್ಬಾ"ವಿನ ಸೇವನೆ ಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ವತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಶ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿ ಇರುವುದು. ಈ ಮುರಬ್ಬಾವು ಸಾಲಾಬ್ ಮಿಶ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವನಿಗೆ—

೧,೦೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಹೊರೆಯಿಡುವುದು ಸಹಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಬೇನೆ, ಬಾಲಬೇನೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರಿಕೆ ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ ೯ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಭಟ್ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ... ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರ್ ನಂ. 2, ... ಅವರು ಬರೆಯುತ್ತಾರೆ: ... ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ... ಅಜೀರ್ಣ, ಮಲಬದ್ಧ, ತಲೆಯ ನೋವು, ಹೊಟ್ಟೆನೋವು, ... ಜ್ವರ, ... ರೋಗ, ಮಕ್ಕಳ ಎಳವು ... ಗುಣವಾಗಿರುತ್ತದೆ. ... ತಿಳಿಸುತ್ತೇನೆ.

ಮ॥ ರಾ॥ ಬಿ. ಎಸ್. ... ಗವರ್ನ್‌ಮೆಂಟ್ ಅವರು ಬರೆಯುತ್ತಾರೆ: ... ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ... ಮಾತ್ರೆಗಳಿಂದ ಬಹಳ ಉಪಯುಕ್ತವಾದ ... ತಯಾರು ಮಾಡುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ವೆಂಕಟಾಚಲ ವೈದ್ಯಶಾಲಾ, ಮೈಸೂರು.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನ ನಡೆಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ ... ಎಂದು ... ರೆಗುಲೇಷನ್ (ಮುಖ್ಯ) ಎಂದು ವಿಧಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ಬೇಕಾದ ಪೆನಲ್ ಕೋಡು, ಕ್ರಿಮಿನಲ್ ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರ್ಯಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ಸ್ಪೆಸಿಫಿಕ್ ರಿಲೀಫ್ ಮತ್ತು ಲಿಮಿಟೇಷನ್ ಆಕ್ಟ್, ಸ್ಟಾಂಪ್, ಕೋರ್ಟ್‌ಫೀ, ರಿಜಿಸ್ಟ್ರೇಷನ್ ಆಕ್ಟ್, ಹಿಂದೂ ಲಾ, ... ಆಕ್ಟ್, ... ಮತ್ತು ... ಆಕ್ಟ್, ರೆವಿನ್ಯೂ ಕೋಡ್, ... ಕೋಡ್, ... ಕೋರ್ಟ್ ಕೋಡ್, ... ಕೋಡ್, ಮುಂತಾದವುಗಳ ಸಂಗ್ರಹಗಳು, ... ಮತ್ತು ... 40 ನಮೂನೆಗಳು ... ಇದು ಪ್ರತಿಯೊಬ್ಬನ ... ಅದ್ವಿತೀಯವಾದದ್ದು.

ಕ್ರ 1—8—0. ವಿ. ಪಿ. 1—12—0.

ಎಂ. ಯಸ್. ... ನವರು,
... 11 ...

ಎಲ್ಲರೂ ಕೊಂಡು ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೩೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್; ಬಳ್ಳಾರಿ.

ಉಚಿತವು! ಉಚಿತವು!!

ಮಾನವ ಗಡಿಯಾರವು.

ಅದನ್ನು

ದುರುಸ್ತು ಮಾಡುವದು ಹೇಗೆ?

ಮಾನವ ಗಡಿಯಾರವನ್ನು ರಿಪೇರು ಮಾಡುವ ವಿಧವನ್ನು ತಿಳಿಯಲಪೇಕ್ಷಿಸುವ ಸ್ತ್ರೀಪುರುಷರೆಲ್ಲರೂ

144 ಪುಟಗಳ ವೈದ್ಯ ವಿದ್ಯಾ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ವಿವರಿಸಿರುವ ಪದ್ಧತಿಗಳನ್ನು ಅನುಸರಿಸುವದರಿಂದ ಮೇಲೆ ನಮೂದಿಸಿರುವ ವಿಷಯವನ್ನು ತಿಳಿದುಕೊಳ್ಳಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:—

ಭಂಡಾರಕಾರ ಬ್ರದರ್ಸ್,

ಉಡುಪಿ.

ಅಜೇಯ ಶತ್ರುವು.

ಅಜೀರ್ಣ, ರಕ್ತಶೋಧೆ, ಮೂತ್ರ ಪಿಂಡರೋಗಗಳು, ನಪುಂಸಕತ್ವ, ಅಕಾಲ ವಾರ್ಧಿಕ್ಯ ಮುಂತಾದ ಬಲವತ್ತರವಾದ ಶತ್ರುಗಳೊಂದಿಗೆ ಹೋರಾಡಿ ಜಯಿಸಿದ

ಮದನಮಂಜರಿ ಮಾತ್ರೆಗಳು

ಸೇವಿಸುವದರಿಂದ ನಿಮ್ಮ ಜೀವಿತಕಾಲವನ್ನ ನಿರೋಗಿಗಳಾಗಿ ಕಳೆಯಬಹುದು.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಅಂಚೆ ಹಾಸಲು ವಗೈರೆ ಪ್ರತ್ಯೇಕ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್, ಮದ್ರಾಸು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆಗಳ್ಳೆ ೧—೮—೦. ಮಧ್ಯಮ ತರದಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರದ ರೂಪಾಯಿ ೧ಕ್ಕೆ ೪ ತೊಲೆ, ದುಯಂ ರೂಪಾಯಿ ೧ಕ್ಕೆ ೮ ತೊಲೆ, ತೀಯಂ ರೂಪಾಯಿ ಒಂದಕ್ಕೆ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೫ ತೊಲೆ.

ಇದಲ್ಲದೆ ಬೇರೆ ರೇಶ್ಮಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ

ಮತ್ತು ಕಂಪೆನಿ,

[illegible]

SIROMANI NARAYANA CHARYA & CO.,

[illegible]

[illegible] CITY.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲೈಫ್ ಎಸ್ಯೂರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಬಾಯಿ, ಸಾಮಲ್‌ದಾಸ ರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ। ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ.ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕ್ಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ಸಂಬಂಧ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

"ಗ್ರಾಹಕರೇ ಒಮ್ಮೆಗೆ ಸಂದರ್ಶಿಸಿರಿ."

ನಮ್ಮಲ್ಲಿ ಎಲ್ಲಾ ತರದ ಸುಗಂಧ ಸಾಹಿತ್ಯಗಳೂ, ಇಂಗ್ಲಿಷ್ ಮತ್ತು ಸ್ವದೇಶಿ ಸಾಬೂನುಗಳು, ಸುಗಂಧ ತೈಲಗಳು, ಅರಾರೂಟ್, ಬಾರ್ಲಿ, ಕೊಕ್ಕೊ, ಟಾಫೀ, ಬಿಸ್ಕಿಟುಗಳು, ಟ್ಯೊಲೆಟ್ ಪೌಡರುಗಳು, ಶಿಕೆ ಕಾಯಿಗೆ ಅನುಕೂಲವಾದ ಬಿಲ್ ಆಫ್ ರೋಜ್ ಮತ್ತು ಕ್ರೈಮ್‌ಜ್ಯೂಸ್‌ಗ್ಲಿಸರಿನ್, ಪೋಮೇಡ್ ವೆಸ್ಲಿನ್, ಕೈಲಾಂದ್ರ ಮತ್ತು ಚಪ್ಪರಾ ಲಾಂದ್ರಗಳು, ಕಪ್ ಮತ್ತು ಸ್ಸಾಸರುಗಳು, ಚೊಕ್ಕಲೇಟ್ ಮತ್ತು ಪೆಪ್ಪರ್ ಮಿಂಟುಗಳು, ಟೇಬಲ್ ಲೇಂಪುಗಳು, ವಿಶಿಷ್ಟ ಲೇಖನ ಸಾಹಿತ್ಯಗಳು, ಮುಖ ನೋಡುವ ಕನ್ನಡಿಗಳು, ವಾಚು ಮತ್ತು ವಾಚಿನ ಸರಪಣಿಗಳು, ಮಕ್ಕಳು ಆಡುವ ಸಾಹಿತ್ಯಗಳು, ಫೌಂಟನ್‌ಪೇನು ಮತ್ತು ಇಂಕುಗಳು, ಕ್ಯಾಶ್ ಬೋಕ್ಸ್‌ಗಳು, ದೃಷ್ಟಿ ಚಕ್ರಗಳು, ಪೇಟೆಂಟ್ ಔಷಧಿಗಳು, ರಖಮಾಗಿಯೂ ಚಿಲ್ಲರೆಯಾಗಿಯೂ ಅತೀ ಸುಲಭ ದರದಲ್ಲಿ ದೊರಕುವದಲ್ಲದೆ ಈ ಕೆಳಗೆ ಕಾಣಿಸಿದ ಸಾಹಿತ್ಯಗಳಿಗೆ ನಾವು ಮುಖ್ಯ ಏಜಂಟರಾಗಿರುವೆವು. ಕಾಮಿನಿಯಾ ತೈಲ ಮತ್ತು ಓಟ್ಟೊ-ದಿಲ್ ಬಹಾರ್ ಅತ್ತರುಗಳು ಮತ್ತು ಕಾಮಿನಿಯಾ ಕಂಪೆನಿಯಲ್ಲಿ ಆಗುವ ಪ್ರತಿ ಒಂದು ಸಾಹಿತ್ಯಗಳು, ಅತ್ಯತಾಂಜನ, ಬಾಲಾಮೃತ, ಸೆಂಟಾನ್, ಡೈಮಂಡ್ ಸೋಪುಗಳು, ಜಪಾನ್ ದೇಶದ ಜಂತುಗಳಿಂದ ಆಗುವ ಕಡ್ಡಿಗಳು, ಇದೂ ಅಲ್ಲದೆ ಅನೇಕ ರೀತಿಯ ಹೆನ್ನ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಮ್ಮೆಗೆ ನಮ್ಮಲ್ಲಿಗೆ ಬಂದು ಸಂದರ್ಶಿಸಿದರೆ ನಮ್ಮ ದರಗಳು ತಮಗೆ ಅನುಕೂಲವಾಗಿಯೇ ಇವೆಯೆಂದು ತಿಳಿಯಬಹುದು. ರೋಯಲ್ ದಂತಮಂಜನ 6 ಡಬ್ಬಿಗಳ ಬೆಲೆ ಆಣೆ 8.

ದಿ ಉಲನ್ ಮಾರ್ಟ್,
ಮಂಗಳೂರು, ದ. ಕ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಅಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಡಬ್ಬಿ ೧ರ 5 ಆಣೆ.

ಪರವೂರುಗಳಲ್ಲಿ ಏಜಂಟರಾಗುವಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

[illegible]:— ಜೆ. ಎಸ್. ಸೋಜ ಮತ್ತು ಕಂಪೆನಿ,

[illegible]

ಮದರಾಸ್ ಮೇಲ್ ವಾಚ್.

6 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ತರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಕಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 167, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore.

ಜಂಟಲ್‌ಮೆನ್ ಪಾಕೆಟ್ ಲೀವರ್ ವಾಚ್.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಗಡಿಯಾರಗಳನ್ನು ನಮ್ಮ ಸ್ವಂತ ಆರ್ಡರು ಮೇರಿಗೆ ಸೀಮೆಯಿಂದ ತರಿಸಿರುತ್ತೇವೆ.



ಇದರ ಸಾಮಾನುಗಳು ಬಹು ದೃಢವಾಗಿಯೂ [illegible] ಇದೆ. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವದಿಲ್ಲ. ಮತ್ತು ಇದರಲ್ಲಿ ಕಾಣುತ್ತಿರುವ ಫೌಂಟನ್‌ಪೆನ್ ನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಮುಳ್ಳು ಇರುವುದು. ಒಂದಾವರ್ತಿ ಇಂಕಿಯನ್ನು ಹಾಕಿದರೆ 500 ಮಾತುಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವುದು. ನಮ್ಮ ಸಾಮಾನುಗಳನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ.

ಗಡಿಯಾರ ಮತ್ತು ಪೇನಾ 1ಕ್ಕೆ ರೂ. 3—12—0.
ಗಡಿಯಾರ 1ಕ್ಕೆ ಕ್ರಯ ರೂಪಾಯಿ 3—0—0.
ಪೇನಾ 1—0—0.

ವಿಳಾಸ:— [illegible] ಅಂಡ್ ಕೊ.,
[illegible]

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ, ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಅನೇಕ ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸ್ತವ್ಯವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಿಗಾಗಿ ಒದಗುವ ಕನ್ನಡ, ತುಳು, ಮರಾಠಿ ಮುಂತಾದ ನಾನಾ ಭಾಷೆಯ, ನಾನಾ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

ಮೈಸೂರು ದಸರಾ ಪ್ರದರ್ಶನದಲ್ಲಿ ಭಂಗಾರದ ಮೆಡಲ್ ಪಡವಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. ಚವನಪ್ರಾಶ ಲೇಹ್ಯ:—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. ಬಾಣಂತಿ ಮಾತ್ರೆ:—ಪ್ರಸೂತವಾದ ಬಾಣಂತಿಯು 30 ದಿನಗಳ ವರೆಗೆ ಉಪಯೋಗಿಸುವದರಿಂದ ಬೇರೆ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ, ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳುತೊನ್ನು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟ್ ಪೊಳಲಿ, ದ. ಕ.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತೆರದ ಮಾದಕ ವಸ್ತುಗಳೂ ಸೇರುವದಿಲ್ಲ. ಕಸ್ತೂರಿ ಮಿಶ್ರಿತವಾದ ಈ ಔಷಧದ ಬರೇ 48 ದಿವಸಗಳ ಸೇವನೆಯಿಂದ ಶ್ವಾಸಕಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ [illegible] ರೋಗಗಳು ಮತ್ತು ಮೂತ್ರಕೃಚ್ಛ್ರ, [illegible] ಮುಂತಾದ [illegible] ರೋಗಗಳು [illegible] ಗುಣವಾಗುವವು [illegible]

ಡಜನ್ 1ರ ಕ್ರಯ 14 ಆಣೆ. [illegible]

[illegible]

ಆರ್. ಮಾರ್ಟಿನ್ಸರ
ಸಾರಸಾಪರಿಲ್ಲಾ.

ಈ [illegible] ಔಷಧವನ್ನು ಪ್ರತಿದಿನವೂ [illegible] ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. [illegible] ಕೆಟ್ಟರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ [illegible] ಕೀಲುಗಳಲ್ಲಿರುವ ನೋವು, ವಾತ, ಸಂಧಿವಾತ, ಯಕೃತ್ಸಾರ, ಕೆಮ್ಮು, ಫರಂಗಿಹುಣ್ಣು, [illegible] ಮತ್ತು ಚರ್ಮದ ರೋಗಗಳು, ವಿಷಶರೀರದಿಂದುಂಟಾದ ವ್ಯಾಧಿ, [illegible] ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ [illegible] ಮುಂತಾದ್ದರಿಂದ ಅದೆನ್ನತೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಮಾಡಿ [illegible] ಮನುಷ್ಯನನ್ನು ಯಾವಾಗಲೂ ಆರೋಗ್ಯವಿಟ್ಟಿರುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿಗೆ ಕ್ರಯ ರೂ. [illegible]

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸ್‌ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಬಾರಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ 1ಕ್ಕೆ ರೂ. ೦—೧೩—೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಹುಚ್ಚೆ ಹೊಯ್ಯುವಿಕೆ, ಮಲಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ಸ್ವತಃ ಕೆಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ಕಂಪಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. ೧—೮—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಸ್ವಾಮಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಪ್ರಶ್ನೋತ್ತರ ಲೇಖ್ಯಬೋಧಿನಿ.

(6ನೆಯ ಛಾಪೆ.)

ಅರ್ಜಿ, ಪತ್ರ, ರಶೀದಿ, ಧ್ರಾವೆ, ಭಾಗಪತ್ರ, ಉಯಿಲು ಮುಂತಾದ ಮಾದರಿಗಳೂ, ಎಲ್ಲ ಬಗೆಯ ಕಾನೂನುಗಳೂ ಇವೆ. ಕ್ರಯ ರೂ. 1-8-0.

"ಶಕ್ತಿ"

"ಭಾರತಿ" ಎಂಬ ವಂಗಭಾಷೆಯ ಸುಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕಿ ಶ್ರೀಮತಿ ಸ್ವರ್ಣಕುಮಾರಿ ದೇವಿಯಿಂದ ವಂಗಭಾಷೆಯಲ್ಲಿ "ಫುಲೇರ್ ಮಾಲಾ" (Fatel Garland) ರಚಿಸಲ್ಪಟ್ಟಿತು.

ಇದರಲ್ಲಿ ಮಹಮ್ಮದೀಯ ಸಾಮ್ರಾಜ್ಯ ಸಿಂಹಾಸನವನ್ನು ಹಿಂದೂ ಸಾಮಂತ [illegible] ಹಿಡಿದು ಚಕ್ರವರ್ತಿಯಾದುದೂ, ಅತ್ಯದ್ಭುತ ವರ್ಣನೆಯು [illegible] ಯಾದ "ಶಕ್ತಿ"ಯ ಧೈರ್ಯಸ್ಥೈರ್ಯ ಸಾಹಸಗಳು ಎಂಥವರ ಮನವನ್ನಾದರೂ ಆಕರ್ಷಿಸದಿರದು, ಒಟ್ಟಿನಲ್ಲಿ ಅನುರಾಗ ನಿಬಿಡವಾದ ದಾಂಪತ್ಯದ ಪರಿಣಾಮ ಫಲವು ಚಿತ್ರಿತವಾಗಿ, ನೈಜಾನುರಾಗ ಸಹಿತ ದಾಂಪತ್ಯದ ಪರಿಣಾಮವನ್ನು [illegible] ತ್ತಿದೆ. ಆಬಾಲವೃದ್ಧ ಸ್ತ್ರೀ ಪುರುಷರೆಲ್ಲರೂ ಓದತಕ್ಕುದು.

ಕ್ರಯ ಹನ್ನೆರಡಾಣೆ ಮಾತ್ರ.

ಶ್ರೀಮದಧ್ಯಾತ್ಮ ರಾಮಾಯಣ.

ಆದಿಕಾಂಡವು. [illegible]

ಕ್ರಯ ರೂ. [illegible]

ವಿಳಾಸ:— [illegible] ಎಸ್. [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾನಂದ ತೈಲವು. ಕೇಶವರ್ಧಕವೂ ಶಿರೋರೋಗನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. [illegible] ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. [illegible] ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು [illegible] ತಪ್ಪದೆ [illegible] ೨ ರೂ.

೪. [illegible] ಲೇಹ. [illegible] ಅತ್ಯುತ್ತಮವು. [illegible] ೨ ರೂ.

೫. [illegible] ಯಿಲ್ಲದೆ [illegible] ಇತರ [illegible] ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. [illegible] ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನಕ್ಕಿಂತ [illegible] ಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿ [illegible] ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸ [illegible] ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮ ಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದುವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, [illegible] ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. [illegible] ಬಾಟ್ಲಿಗೆ ೧ ರೂ. ೭ ಆಣೆ.

೧೨. [illegible]

೧೩. [illegible] ಆಣೆ.

೧೪. [illegible] ೨ ರೂ. ೮ ಆಣೆ.

[illegible] ಹಾಕಲು ಹೇಳಿಸಿಲ್ಲ. ನಮ್ಮಲ್ಲಿ [illegible] ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗ ನೋಡಿರಿ. ರೋಗ ಲಕ್ಷಣಗಳನ್ನು [illegible] ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪೆರಿ ಪೋಸ್ಟು ಮದರಾಸು.

B. M NATH & CO. Ayurvedic Chemists
Vepery Post MADRAS,

ಕೋರಾ ಮತ್ತು ಸೀತ ಸಿಡುಬು ಯಾ ಕೊಟ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡೆಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವೆಂತ ತೋರಿಬರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದೆನೇ ಆಗುವಂಥಾದ್ದು ಬಹು ಪಕ್ಷ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವು ಅಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಬಾಧೆಯು ನಿಂತಾಕ್ಷಣವೇ ತಲೆದೋರವು. ಕೋರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೊಟ್ಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕೋರಾ ನಂತರ ಬಂದುಬಿಟ್ಟದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥಾದ್ದೆ. ಆದ್ದರಿಂದ ಈ ರೋಗಗಳು ತಗಲಿದಾಗ ಹೆಚ್ಚಿನ ಜಾಗ್ರತೆಯು ಉಪಶಮನವು ಅಗತ್ಯವಾಗಿರುವದು.

ಹೋಮಿಯೋಪಥಿಕ್ ಮತ್ತು ಟಿಸ್ಯು ಔಷಧಿಗಳು.

[illegible]

[illegible] ತಯಾರಿರುವವು.

ಕ್ರಯ [illegible] 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ [illegible] ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಗಾರರಿಗೆ ಸಿಕ್ಕದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು
ಇತರರಿಂದ ಏಕೆ ಪಡೆಯಬೇಕು?
ಬಾಟ್ಲಿ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು

ಇನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ
ಗಜಕರ್ಣಾದಿ ಮುಲಾಮು.
ಡಬ್ಬಿ 1ಕ್ಕೆ ಆಣೆ. 6.

ಮಕ್ಕಳ ಎಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಹಲ್ಲು ನೋವುಗಳಿಗೆ
ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳ ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ **ಪ್ರಖ್ಯಾತಗೊಳಿಸಿ.**

ಶೀಸೆ 1ರ ಕ್ರಯ ರೂಪ್ಯಾ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡೆಲ್ ಗಾರ್ಡನ್ ಮತ್ತು ಹಂಪನಕಟ್ಟೆ ಹೋಪುಗಳಲ್ಲಿ ದೊರಕುವದು.	STANY BROTHERS Sole Agents M. C. C's, Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ
ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.
ಬಹಳ ಸೊಗಸಾದದ್ದು! ಬಾಳಿಕೆ ಬರುವುದು!!
೧೬ ಮೊಳ!!

ಗೋವರ್‌ಜಾನ್ ಬಳ್ಳಿ ಶೀರೆ

ರೂಪಾಯಿ ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಲ್ಲಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ

ಹಗುರಾಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನವ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರ ಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವುದು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಯಮ್ ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಿಷಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯೂ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಆವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳೆವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರಫುಲ್ಲೆ ,, ,,	0—12—0
ಅಂಬಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ತಿದ್ದುಪಡಿ (School Discipline)	0—12—0
ಪುಷ್ಪರಚನೆ (Flower Making)	0—14—0
[illegible]	1—0—0
,, ಸಂಗೀತ ಸಮಯಸಾರ	1—4—0
[illegible]	1—4—0
[illegible]	1—2—0
[illegible]	0—10—0
[illegible]	[illegible]

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೋ ದಿಲ್-ಬಹಾರ್.

(ರಿಜಿಸ್ಟರ್ಡ್).

ಸುರಭಿಗಳಲ್ಲಿ ಮುಕುಟವರ್ಧನ!



ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ವಸ್ತ್ರದಲ್ಲಿ ಹಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ¼ ಔನ್ಸ್ ಟ್ಯೂಬ್ 2-0-0 ಒಟ್ಟೋ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನ್ 1ರ 0-12-0. ವಿ. ಪಿ. ಖರ್ಚು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.
H. R. MODY & Co.
10 Princess Street, BOMBAY.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲ ಖರ್ಚು 0—4—0.

Dr. Navaratna & Sons,
Kalbadevi Road, BOMBAY.
ಏಜಂಟರು:—
ಡಿ. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೨೭ನೇ ಏಪ್ರಿಲ್ ಶುಕ್ರವಾರ ೧೯೧೭. | ಸಂಚಿಕೆ ೧೭.

WANTED

A Writer for Kathlekhan Coffee Estate in Kadur District, 18 miles from Tarikere Railway Station; must have good knowledge of Coffee planting and Accounts etc.

For further particulars please apply to:—

Messrs. Peirce, Leslie & Co., Ltd.

MANGALORE.

Subba Rau Pai Memorial Fund.

NOTICE.

Applications in the prescribed form for scholarships out of the Ammembal Subba Rau Pai Memorial Fund from deserving poor students of the Goud Saraswath Brahmin community should reach the Secretary of the Fund by the end of May 1917.

Subba Rau Pai Memorial Fund Office, Mangalore; *16th April 1917.* — **M. Mukunda Rao,** *Secretary.*

ನೋಟೀಸು.

ಈ ಕೆಳಗೆ ದಸ್ಕತು ಮಾಡಿದ ಕಾಸರಗೋಡು ತಾಲೂಕು ಬಾಯಾರ ಮಾಗಣೆ ಕುಡಾಲಮೆರ್ಕಳ ಗ್ರಾಮದ ಕಂಬಾರ ಮುಮ್ಮಿ ಕುಂಞಾಲಿ ಬ್ಯಾರಿಗಳ ಮಗ ಮಹಮ್ಮದೆ ಬ್ಯಾರಿಯಾದ ನಾನು ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

ನಾನು 1898ನೇ ಇಸವಿ ದಸೆಂಬರ ತಾ. 10ಲ್ಲು ನನ್ನ ಹೆಂಡತಿ ಜುಲೇಕಮ್ಮನ ಹೆಸರಲ್ಲಿ ಕುಡಾಲಮೆರ್ಕಳ ಗ್ರಾಮದ ಮೂಲಿನಂಬ್ರ 10ನೆ ವರ್ಗದ ಆಸ್ತಿಗೆ ಬಿನಾಮೆಯಾಗಿ ಬರೆದಿಟ್ಟ ಕ್ರಯಚೀಟು ವ ಅದಕ್ಕೆ ಸಂಬಂಧಪಟ್ಟ ಕೆಲವು ಒಳ ರಿಕಾರ್ಡುಗಳು, ಸದರಿ ಗ್ರಾಮದ ಪೊಡುವಾರ ಮದನ ಪೂಜಾರಿ ವಾರೀಸುದಾರರು ಉಂಞ್ ಹೆಂಗಸು ವಗೈರೆರಿಂದ 1897ನೇ ಇಸವಿ ಮಾರ್ಚಿ ತಾ. 24ಲ್ಲು ರೂ. 1250ಕ್ಕೆ ನನ್ನ ಮಗ ಕುಂಞಾಲಿ ಹೆಸರಲ್ಲಿ 30 ವರ್ಷಗಳ ಅವಧಿಯಿಂದ ಬರಿಸಿಕೊಂಡ ಬಿನಾಮೆ ದಸ್ತೈವಜು 1, 1910ನೇ ಇಸವಿ ಎಪ್ರಿಲ್ ತಾರೀಕು 2ಲ್ಲು ಬಟ್ಟೆ ಪೂಜಾರಿ ವಗೈರೆರಿಂದ ರೂ. 300ಕ್ಕೆ ಬರಿಸಿಕೊಂಡ ಜವಾಬ್ದಾರಿ ದಸ್ತೈವಜು ವಗೈರೆ ರಿಕಾರ್ಡುಗಳು, ಅಂಗಡಿಮೊಗರು ಕಸಬಾ ಗ್ರಾಮದ ನಂಬ್ರ 12ನೇ ಮಾಡಪ್ಪ ರಾಯಪ್ಪ ಎಂಬ ಹೆಸರುವರ್ಗದ ಭಾಬ್ತು ನಾನು ವ ನನ್ನ ತಾಯಿ ಕೂಡಾ ಕ್ರಯಕ್ಕೆ ಪಡಕೊಂಡ ಆಸ್ತಿಯನ್ನು ನನ್ನ ಹೆಂಡತಿ ಜುಲೇಕಮ್ಮನ ಹೆಸರಲ್ಲಿ ರೂ. 1500ಕ್ಕೆ ತಾ. 18-10-17ಲ್ಲು ಬರೆದಿಟ್ಟ ಬಿನಾಮೆ ದಸ್ತೈವಜು ವ ಇದಕ್ಕೆ ಸಂಬಂಧಪಟ್ಟ ಒಳರಿಕಾರ್ಡುಗಳು, ನನ್ನ ತಾಯಿ ಬೀಪಾತುಮ್ಮ ಹಜ್ಜುಮ್ಮನವರಿಂದ ರೂ. 2500ಕ್ಕೆ ಅವರ ಹಕ್ಕಿನ ಕೆಲವು ಅಂಶವನ್ನು ನನ್ನ ಮಗ ಕುಂಞಾಲಿ ಹೆಸರಲ್ಲಿ ನಾನು ಬರಿಸಿಟ್ಟ ಬಿನಾಮೆ ದಸ್ತೈವಜು 1, 1914ನೆ ಇಸವಿ ಮಾರ್ಚಿ ತಾ. 21ಲ್ಲು ನಾನು ನನ್ನ ಮಗ ಕುಂಞಾಲಿ ಹೆಸರಲ್ಲಿ ಮುನ್ನೂರು ಕೇಶವ ಭಟ್ಟರ ಮಗ ಈಶ್ವರ ಭಟ್ಟರಿಂದ ರೂ. 100ಕ್ಕೆ ಬರಿಸಿಟ್ಟ ಪ್ರೊಮಿಸರೀ ನೋಟು ಕೂಡಾ ರಿಕಾರ್ಡುಗಳೂ ಸುಮಾರು 18 ತೊಲದ ಚಿನ್ನದ ಮುಂದಲೆಬೊಟ್ಟು 1, ಮುತ್ತು ಕೂಡಾ ಇರುವ ಬೋಡು [illegible] 1, ಬತ್ತ [illegible] 2, ಎಡಮಣಿ 3, [illegible] 2 ಕೂಡಾ ಒಡವೆಗಳೂ ನಮ್ಮ ಮನೆಯಲ್ಲಿ ಕಪಾಟಿನಲ್ಲಿ ಇಟ್ಟದ್ದು ಕಾಣೆಯಾಗಿರುತ್ತವೆ. ಮೇಲೆ ತೋರುವ ರಿಕಾರ್ಡು ಮತ್ತು ಒಡವೆಗಳನ್ನು ತಲಾಶಿಮಾಡಿ ಕೊಟ್ಟವರಿಗೆ ರೂಪಾಯಿ 50ನ್ನು ಇನಾಮಾಗಿ ಕೊಡುವರೆ ಸಿದ್ಧನಾಗಿದ್ದೇನೆ.

ತಾ. 26—4—1917. **K. Mahammad Beary.**

ಒಳ್ಳೆ ಗೊಬ್ಬರ! ಅವ್ವಲ್ ಊಟು !!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಒಳ್ಳೆ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದ್ದಕ್ಕೆ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ. ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಮಾರಾಟಕ್ಕೆ ಸಿದ್ಧವಾಗಿವೆ! ಬೇಗನೆ ಬರಕೊಳ್ಳಿರಿ !!

ತುಳು ಭಾಷೆಯಿಂದ ರಚಿಸಲ್ಪಟ್ಟ
ಪಂಚವಟಿ ರಾಮಾಯಣವೆಂಬ

ವಾಲಿಸುಗ್ರೀವರ ಕಾಳಗ

ಕ್ರಯ ಪ್ರತಿ ಒಂದರ ಮೂರಾಣೆ.
1 ಡಜನ್ ಪ್ರತಿಗಳಿಗೆ 1-12-0. ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ. ದ. ಕನ್ನಡ.

ಹಿಂದೂ ವ್ರತವಿವೇಕ.

(ಅಚ್ಚಾಗುತ್ತಲಿದೆ)

ಹಿಂದೂಗಳು ಸರ್ವಸಾಮಾನ್ಯವಾಗಿ ಆಚರಿಸುವ ವ್ರತಗಳ ವಿವರ, ಅವುಗಳನ್ನು ಆಚರಿಸುವ ಸಂಕ್ಷೇಪ ವಿಧಾನ, ಅವುಗಳ ಮೂಲ ಇವೆಲ್ಲವನ್ನೊಳಕೊಂಡಿರುವ ಪುಸ್ತಕವು ಇನ್ನು ಸದ್ಯದಲ್ಲಿ ಪ್ರಕಟವಾಗುವದು.

ಮೊದಲನೆಯ ವರುಷದಲ್ಲಿ ಶಾಲೆಯ ಮಕ್ಕಳಿಗೆ ಗಣಿತದ ಪಾಠಪಟ್ಟಿ ಮತ್ತು ಕಲಿಸುವದನ್ನು ಕುರಿತು ಸೂಚನೆಗಳು ಕೊಡಿರುವ

ಗಣಿತ ಪಾಠ.

ಕ್ರಯ 0—2—6.

ವ್ಯವಹಾರ ವ್ಯಾಪಾರಗಳ ಬಗ್ಗೆ ಬೇಕಾಗುವ ಕೋರ್ಟು ಫೋರ್ಮು, ಗೇಣಿಚೀಟು ಫೋರ್ಮುಗಳು, ಬೀಲು ಯಾನೆ ಪಟ್ಟಿ ಫೋರ್ಮುಗಳು ನಾನಾ ಬಗೆಯ ಲೆಕ್ಕದ ಪುಸ್ತಕಗಳು.

ಇವೆಲ್ಲವು ದೊರೆಯುವ ವಿಳಾಸ:—

ಶಾರದಾ ಛಾಪಖಾನೆ,
ಮಂಗಳೂರು [illegible]

ಸಂಗೀತ ಪುಸ್ತಕಗಳು.

೧. ಸಂಗೀತ ಕೃತಿದರ್ಪಣ. (ತೆಲುಗು)

ಈ ಪುಸ್ತಕದಲ್ಲಿ ಸಂಗೀತವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅನೇಕ ವಿಷಯಗಳೂ, ಪ್ರಸಿದ್ಧಿಪಡೆದ ತ್ಯಾಗಯ್ಯರ್ ಮುಂತಾದ ಭಕ್ತರಿಂದ ರಚಿಸಲ್ಪಟ್ಟ ಕೀರ್ತನೆಗಳೂ ಇವೆ. ಕೀರ್ತನೆಗಳಿಗೆಲ್ಲಾ ಸಂಪೂರ್ಣವಾಗಿ ಸ್ವರಗಳು ಹಾಕಿರುತ್ತೆ.

ಬೆಲೆ. { ಒಂದನೆಯ ಭಾಗ ೨—೪—೦ (೧೦೦ ಕೀರ್ತನೆಗಳುಳ್ಳದ್ದು)
ಎರಡನೆಯ ಭಾಗ ೨—೪—೦ (೭೫ ಕೀರ್ತನೆಗಳುಳ್ಳದ್ದು) }

೨. ಸಂಗೀತ ವಿದ್ಯಾದರ್ಪಣ. (ತೆಲುಗು)

ಮೇಲ್ಕಂಡಂತೆ ಸಂಗೀತವಿದ್ಯಾರ್ಥಿಗಳಿಗೂ, ಸಂಗೀತವಿದ್ವಾಂಸರಿಗೂ ಉಪಯೋಗವಾದ ಪುಸ್ತಕ. ಬೆಲೆ ರೂ. ೩—೮—೦.

೩. ಗಾಂಧರ್ವ ಕಲ್ಪವಲ್ಲಿ. (ತೆಲುಗು)

ಬೋಧಕರ ಸಹಾಯವಿಲ್ಲದೆ ಕೃತಿಗಳು, ಜಾವಡಿಗಳು, ಪಾರ್ಸಿ, ಹಿಂದುಸ್ಥಾನಿ ಮಟ್ಟುಗಳು ಇವುಗಳನ್ನು ಕಲಿಯುವಂತೆ ಸ್ವರಸಾಹಿತ್ಯಗಳನ್ನು ಕೊಟ್ಟಿರುತ್ತೆ.

ಬೆಲೆ ರೂ. ೨—೪—೦.

೪. ಸಂಗೀತ ಸಮಯಸಾರ. (ಕನ್ನಡ)

ಕನ್ನಡ ಭಾಷೆಯಲ್ಲಿ ಸಂಗೀತವಿದ್ಯಾವಿಷಯಕವಾದ ಪುಸ್ತಕವು ಇದೊಂದೇ.

ಬೆಲೆ ರೂ. ೧—೪—೦.

೫. ಶತಕೀರ್ತನ ಸ್ವರಾವಳಿ. (ತೆಲುಗು ಪುಸ್ತಕವು)

ಇದರಲ್ಲಿ ತ್ಯಾಗಯ್ಯನವರು ಮಾಡಿರುವ ಒಂದುನೂರು ಕೀರ್ತನೆಗಳಿರುತ್ತೆ. ಪ್ರತಿಒಂದು ಕೀರ್ತನೆಗೂ ಸ್ವರಗಳನ್ನು ಹಾಕಿರುತ್ತೆ. ಕಲಿಯತಕ್ಕವರಿಗೆ ಸುಲಭವಾಗಿರುತ್ತೆ. ಬೆಲೆ ರೂ. ೩—೧೧—೦.

೬.	ಹಾರ್ಮೋನಿಯಂ ಸ್ವಯಂ ಬೋಧಿನಿ ...	೦—೪—೦.	ಕನ್ನಡ ಪುಸ್ತಕಗಳು
೭.	ಸಂಗೀತ ಪಾರಿಜಾತ	೦—೪—೦.	
೮.	ಕಲ್ಯಾಣ ಗೀತಾವಳಿ	೦—೬—೦.	
೯.	ಬಾಲಿಕಾಗೀತ ಮುಕ್ತಾಕಲಾಪ. ...	೦—೯—೦.	

ಎಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡನೆಯುಒಳ್ಳೆಯದೊ ಕೆಡುಕೊ ಎಂಬದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೇಲಿನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ

ಅತ್ಯುತ್ತಮವಾದ ಗೊಬ್ಬರಗಳು.

1.	ನೈಟ್ರೇಟ್ ಒಫ್ ಸೋಡಾ	Nitrate of Soda.
2.	ಸುಪರ್ ಫೊಸ್‌ಫೇಟ್ಸ್	Super Phosphates.
3.	ಬೆಸಿಕ್ ಸ್ಲೆಗ್	Basic Slag.

ಇವುಗಳು ತೊಪ್ಪೆ ಸೆಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಬಂಡಿಗೆ ಹಟ್ಟಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುವೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಸಿ ಹಾಕುವುದಕ್ಕಿಂತ ಒಂದು ಹಿಡಿ ಸೌಳುಪ್ಪನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲ ಮಾಹಿತಿಯನ್ನು ಕೊಡುವ [illegible] ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. [illegible] ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ [illegible] ಪಡಕೊಳ್ಳಬಹುದು.

[illegible]

ದಿ ಮಂಗಳೂರು ಟ್ರೇಡಿಂಗ್ [illegible]
[illegible]

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಸಿದ ಮೂಲ ಧನವು	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು	225,000—0—0
Paid up Capital	200,225—0—0	ಆಗತ ಮೂಲ ಧನವು	200,225—0—0
Deposits	330,775—7—10	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	330,775—7—10
Reserve Fund	50,003—2—5	ರಕ್ಷಿತ ಧನವು	50,003—2—5

25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ. 29,300ರ ಧನಪಾಪತ ಗಳಲ್ಲಿ ಠೇವಣಾತಿ ಮಾಗಿಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರ ದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 5ರಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one weeks notice of withdrawal after one month received @ ... per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಸೇಕಡಾ ... ದಂತೆ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ... ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿ ಕೂಡ ಕೊಡೋಣಾಗುವುದು.

Loans granted on proper securities and pledges.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಒತ್ತೆಯ ಮೇಲೆ ಸಾಲಗಳು ಕೊಡೋಣಾಗುತವೆ.

Canara Bank Ltd.,
Mangalore, 1st April 1917.

P. Gopal Naik,
Secretary.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ — ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಸ್ವೈಮಾವಿಶಾನಕ ... ನ್ನು ... ಚಿಕಿತ್ಸೆಯು ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಚ. ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಗಳಿಂದ ಮಾಡಲ್ಪಟ್ಟ ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಣ್ಣು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಪ್ಪಿ 1ಕ್ಕೆ ಆಣೆ 12. ಚಿಕ್ಕ ಸ್ಯಾಚ. ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ: — "ಪಂಡಿಟ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುವು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು: — ದಿ ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಇಮಿಟೇಶನ್

ವಜ್ರದ ಒಡವೆಗಳು.

ಈ ಒಡವೆಗಳು ಅಪರಂಜಿ ಭಂಗಾರಕ್ಕೆ ಸರಿಯಾದ ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿ ಬಿಳೀ ಕಲ್ಲು, ಕೆಂಪು ಕಲ್ಲುಗಳು ಇಟ್ಟು ಕಟ್ಟಿರುತ್ತದೆ. ಈ ಒಡವೆಗಳು ಅಮೇರಿಕಾ, ಇಂಗ್ಲೆಂಡ್ ದೇಶಗಳಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ 4 ವರುಷಗಳ ವರಿವಿಗೂ ಬಣ್ಣ ಹೋಗುವದಿಲ್ಲವೆಂದು ಗ್ಯಾರಂಟಿ ಕೊಡುವೆವು. ಅಮೇರಿಕಾ, ಇಂಗ್ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ಹೇಳುವವರಿಗೆ ಅವರ ಹಣವನ್ನು ವಾಪಸು ಕೊಡುವೆವು.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವದು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಈ ಬೆಂಡೋಲೆಯನ್ನು ಕೊಂಡುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿದೆ.

7 ಕಲ್ಲಿನ ಬೆಂಡೋಲೆ ಕ್ರಯ ರೂ. 2—0—0.

ಜಂಟಲ್‌ಮೇನ್ ಲೀವರ್ ವಾಚ್.

7 ಬಹುಮಾನಗಳ ಸಹಿತ ಕ್ರಯ ರೂ. 4—0—0
5 ವರುಷಗಳ ಖಾತ್ರಿಯಾದ ಗ್ಯಾರಂಟಿ ಸಹ.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಈ ಗಡಿಯಾರವು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಹೊಂದಿರುವುದು. ಗಾಳಿ, ಧೂಳು, ಸೇರದಂತೆ ಹಿಂಭಾಗದ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ



ಮಾಡುವುದಿಲ್ಲ. ಒಂದನ್ನು ತರಿಸಿ ನೋಡಿರಿ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಶಾಪಂಗಿಗೆ ಹೂವು 1, ಸೆಂಟ್‌ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಭಂಗಾರದ ಉಂಗುರ 1, ಜುಮುಲಾ ಏಳು ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 4—0—0

ಸೊಗಸಾದ ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಸಾಧಾರಣ ಡಾಬುಗಳಂತೆ ತೆಗೆಯುವುದಕ್ಕೂ, ಹಾಕುವುದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ ಗಿಣಿ ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದುಸಲ ತರಿಸಿನೋಡಿರಿ. ಭಂಗಾರದ ಗಿಲೀಟಿನ ಗೆಜ್ಜೆ ಡಾಬು 1ಕ್ಕೆ ರೂ. 3—8—0.

ಕೈಯಲ್ಲಿ ಕಟ್ಟುವ ಗಡಿಯಾರ.



ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡಾಗಲೂ ಅಥವಾ ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಷ್ಟಪಟ್ಟರೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾಗದು. ಇದರ ಕ್ರಯ ರೂ. 4—8—0.

ವಿಳಾಸ: — ಜಿ. ಪೆರುಮಾಳ್ ಎಂಡ್ ಕೊ.
28 ಹನುಮಂತರಾಯ ಕೊಯಿಲ್ ಬೀದಿ,
ಜಾರ್ಜ್‌ಟೌನ್, ಮದರಾಸು.

ಹೊಸದಾಗಿ ಕಂಡುಹಿಡಿಯಲ್ಪಟ್ಟು ಇರುವ

ಕ್ರೌನ್ ಸೋಪ್.

ಕೆಡಲಿಲ್ಲ. ಕಲೆಯಿಲ್ಲ. ಉರಿಯಿಲ್ಲ.

ಇದು ಶರೀರದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅಚ್ಚುಕಟ್ಟಾಗಿ ತೆಗಿಯುತ್ತೆ. ನೋಯುವದಿಲ್ಲ. ಚರ್ಮಕ್ಕೆ ಕಲೆಯಾಗದು. ಇತರರು ಮಾರುವ ರೋಮಸಂಹಾರಿಯನ್ನು ವ ಸೋಪನ್ನು ತೆಗದುಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತಪತ್ರಿಕೆಗಳು ಬಂದಿರುತ್ತೆ ಅದರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್ ಗೋಲ್ಡ್ ಉಂಗುರ ಇನಾಂ. ರೂ. 1-10-0.

ಯೋಗ್ಯತಾ ಪತ್ರಿಕೆ.

ಅನೇಕಲ್ ಪೋಸ್ಟು ಮಡಿವಾಳ ಗ್ರಾಮದಲ್ಲಿ ಇರುವ ಮಾನಸ್ವಾಮಿ ಮೊದಲಿಯಾರ್ — ನಿಮ್ಮ ಕಂಪೆನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದರಿಂದ ಬಹಳ ಆನಂದವಾಯಿತು. ದಯಯಿಟ್ಟು ಇನ್ನೊಂದು ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು. ವಿಳಾಸ: —

ಎಂ. ಎಚ್. ಸಿಂಗ್ ಅಂಡ್ ಕೋ.
ನಂ. 7-2ನೇ ನಾರಾಯಣ ... ಬೀದಿ,

ಯೂರೋಪದ ಮಹಾ ಯುದ್ಧ

ಕಳೆದ ಒಂದೆರಡು ವಾರಗಳಿಂದ ಬ್ರಿಟಿಷರು ಶತ್ರುಗಳ ಘಡೆಗಳನ್ನು ಮುರಿದು ಬಿಟ್ಟು ಮುಂದರಿಸಿ ವಿಸ್ತಾರವಾದ ಪ್ರದೇಶಗಳನ್ನು ತಮ್ಮ ಕೈವಶಮಾಡಿಕೊಂಡು ಹೋಗುತ್ತಿರುವರೆಂತ ತಿಳಿಸಿದೆವು. ಈ ವಾರದಲ್ಲಿ ಫ್ರೆಂಚರು ಸಹ ಬ್ರಿಟಿಷರಂತೆಯೇ ಶತ್ರುಗಳನ್ನು ಸೋಲಿಸಿ ಮುಂದರಿಸುತ್ತಿದ್ದಾರೆ. ಈ ವಾರದಲ್ಲಿ ಫ್ರೆಂಚರ ಜಯವು ಬಹಳ ವಿಶೇಷವಾದದ್ದಾಗಿದೆ. ಜೋರ್ಜ ಚಕ್ರವರ್ತಿಗಳವರು ಫ್ರೆಂಚರು ಪಡೆದ ಜಯದಿಂದ ತನಗುಂಟಾದ ಸಂತೋಷವನ್ನು ಫ್ರೆಂಚ ಸರಕಾರದ ಪ್ರೆಸಿಡೆಂಟರಿಗೆ ಸೂಚಿಸುತ್ತಿದ್ದಾರೆ. ಚೆಂಪೈನ್ ಪ್ರಾಂತ್ಯಗಳಲ್ಲಿ ಫ್ರೆಂಚ್ ಸೇನಿಕರು ಹತ್ತು ದಿವಸಗಳ ತನಕ ಭೀಕರವಾದ ತೋಪುಗುಂಡುಗಳ ಮಳೆಯನ್ನು ಶತ್ರುಗಳ ಮೇಲೆ ಸುರಿಸಿ ಶತ್ರುಗಳ ಸೇನಾವ್ಯೂಹದಲ್ಲಿ ನಿರ್ಬಲವಾದ ಪ್ರಾಂತ್ಯವನ್ನು ಗೊತ್ತುಮಾಡಿ ಅಲ್ಲಿಗೆ ವಿಶೇಷವಾಗಿ ಕಾದಾಡುತ್ತ ಮುಂದರಿಸಿದರು. ಫ್ರೆಂಚರಿಗೆ ಈ ಪ್ರಾಂತ್ಯಗಳಲ್ಲಿ ಎಡೆಕೊಟ್ಟರೆ ವಿಶೇಷ ಹಾನಿಯುಂಟಾಗುವದೆಂಬು ಜರ್ಮನರು ಬ್ರಿಟಿಷರೊಡನೆ ಕಾದಾಡುತ್ತಿರುವ ತಮ್ಮ ಸೇನಾಂಗಗಳನ್ನು ಚೆಂಪೆನ್ ಪ್ರಾಂತ್ಯಗಳಿಗೆ ತರಿಸಿಕೊಂಡು ಕಾಳಗಕೊಟ್ಟರು. ಜರ್ಮನರ ಸೇನಾವ್ಯೂಹವು ಈ ಪ್ರಾಂತ್ಯಗಳಲ್ಲಿ ಭೇದಿಸಲ್ಪಟ್ಟರೆ ಲೋಯನ್ ಸುತ್ತಲಿನ ಪ್ರದೇಶಕ್ಕೆ ಪ್ರವೇಶ ದೊರಕಿ ಜರ್ಮನರ ಸೇನೆ ಎಲ್ಲವು ಫ್ರೆಂಚರ ಕೈಗೆ ಬೀಳುವದಲ್ಲದೆ ಮುಂದಕ್ಕೆ ಬೆಲ್ಜಿಯಮ್ ಸರಹದ್ದಿಗೆ ಹೋಗುವ ರೈಲ್ವೆಯು ಸಹ ಫ್ರೆಂಚರ ಕೈವಶವಾಗುವದು. ಇಂಥಾ ಪರಿಸ್ಥಿತಿಯು ಸರ್ವಥಾ ಬಂದೊದಗಕೂಡದೆಂದು ಜರ್ಮನರು ಈ ಪ್ರಾಂತ್ಯಗಳಲ್ಲಿ ಸೇನಾಂಗಗಳನ್ನು ಉತ್ತರ ದಿಕ್ಕಿನಿಂದ ಬರಮಾಡಿಕೊಂಡು ವಿಶೇಷವಾಗಿ ಕಾದಾಡುತ್ತಿರುವರು. ಫ್ರೆಂಚರಿಗೆ ಜರ್ಮನರ ಈ ಕಾದಾಟದ ವಿಶೇಷತ್ವವು ತಿಳಿದುಹೋದ್ದರಿಂದ ಬಹಳ ದಿನಗಳಿಂದ ಈ ಪ್ರಾಂತ್ಯಗಳಲ್ಲಿಯೇ ಫ್ರೆಂಚರು ಜರ್ಮನರನ್ನು ಕಾದಾಡುತ್ತ ಸೋಯಿಸ್ಸನ್ಸ್ ಮತ್ತು ರ್ಹೀಮ್ಸ್‌ಗಳ ಮಧ್ಯಭಾಗದಲ್ಲಿ ಫ್ರೆಂಚರು ಶತ್ರುಗಳ ಮೇಲೆ ಬಿದ್ದರು. ರಣವು ಭೀಕರವಾಯಿತು. ಫ್ರೆಂಚರು ಪ್ರತಿ ಒಂದು ಕಡೆಯಲ್ಲಿಯೂ ಶತ್ರುಗಳನ್ನು ಸೋಲಿಸುತ್ತ ಸೋಯಿಸ್ಸನ್ಸ್ ಮತ್ತು ಕ್ರೆಯೊನ್ ನಡುವೆ ಇರುವ ಜರ್ಮನರ ಪ್ರಥಮ ಸೇನಾನೆಲೆಯನ್ನು ಸ್ವಾಧೀನಮಾಡಿಕೊಂಡರು. ಇಷ್ಟೇ ಅಲ್ಲ. ಕ್ರೆಯಾನ್ನಿನ ಪೂರ್ವದಲ್ಲಿರುವ ಶತ್ರುಗಳ ನೆಲೆಗಳನ್ನು ಸ್ವಾಧೀನಮಾಡಿಕೊಳ್ಳುತ್ತ ಫ್ರೆಂಚರು ಮುಂದುವರಿದು ಇದ್ದಾರೆ. ಜರ್ಮನರು ಈ ನೆಲೆಗಳನ್ನು ಹಿಂದಕ್ಕೆ ಪಡೆಯಲು ಎಷ್ಟು ಸಲ ಮೇಲ್ಹಾಯ್ದು ಬಂದರೂ ಪ್ರಯೋಜನವುಂಟಾಗಲಿಲ್ಲ. ಫ್ರೆಂಚರು ಈಗ ಈ ಪ್ರಾಂತ್ಯಗಳಲ್ಲಿ ತಮ್ಮ ಸೇನೆಯನ್ನು ವ್ಯವಸ್ಥೆಗೊಳಿಸಿ ಶತ್ರುಗಳಿಂದ ಪಡೆದಿರುವ ಸೇನಾನೆಲೆಗಳನ್ನು ಭದ್ರಪಡಿಸಿರುತ್ತಾರೆ. ಫ್ರೆಂಚರು ಈ ತನಕ ೧೦,೦೦೦ ಶತ್ರುಸೇನಿಕರನ್ನೂ ಯುದ್ಧಸಾಮಾಗ್ರಿಗಳನ್ನೂ ಸ್ವಾಧೀನಪಡಿಸಿರುವರು. ಈ ರೀತಿ ಬ್ರಿಟಿಷರ ಮತ್ತು ಫ್ರೆಂಚರ ಸೇನೆಗಳು ಪ್ರಕೃತ ಸುಮಾರು ೧೦೦ ಮೈಲುಗಳ ಉದ್ದದ ರಣರಂಗದಲ್ಲಿ ತಮ್ಮ ಸೇನೆಯನ್ನು ಕಟ್ಟಿಕೊಂಡು ಮುಂದುವರಿಯುತ್ತಿರುವರು. ಮಿತ್ರರ ಈ ಜಯದಿಂದ ಕೈಸರರಲ್ಲಿ 'ಆಶ್ಚರ್ಯವುಂಟಾಗಿದೆ. ಮುಂದಿನ ವೃತ್ತಾಂತಗಳು ಮಿತ್ರರ ಜಯವನ್ನೆ ಸೂಚಿಸುತ್ತಿರುವವು. ಮಳೆಯೂ ಸುಂಟರಗಾಳಿಯೂ ವಿಶೇಷವಾಗಿದ್ದರೂ ವಿಜಯಶ್ರೀಯನ್ನು ಪಡೆದ ಫ್ರೆಂಚರು ವಿಶೇಷ ಉತ್ಸಾಹದಿಂದ ರ್ಹೀಮ್ಸ್ ಪೂರ್ವಕ್ಕೆ ಇರುವ ಜರ್ಮನರ ಸೇನಾನೆಲೆಗಳ ಮೇಲ್ಹಾಯ್ದು ಹೋದರು. ಹನ್ನೊಂದು ಕಿಲೊಮಿಟರಿನ ವಿಸ್ತೀರ್ಣದ ಸೇನಾನೆಲೆಯನ್ನು ಶತ್ರುಗಳಿಂದ ಪಡೆದಿರುತ್ತಾರೆ. ಈ ಪ್ರಾಂತದಲ್ಲಿ ೨೫೦೦ ಜರ್ಮನ ಸೇನಿಕರು ಸೆರೆಬಿದ್ದಿರುತ್ತಾರೆ. ಫ್ರೆಂಚರು ನಂತರದಲ್ಲಿ ನೆಸ್‌ಂಟುಯಿಲ್ ಮತ್ತು ಮೈಲಿಗಳನ್ನು ಪಡಕೊಂಡದ್ದರಿಂದ ಲಿಯೊನ್ ಕ್ರೆಯೊನ್ ಭೂಪ್ರದೇಶದಲ್ಲಿ ಫ್ರೆಂಚರ ನೆಲೆಯು ಸ್ಥಾಪಿತವಾಯಿತು. ಫ್ರೆಂಚರು ಈ ರೀತಿ ಶತ್ರುಗಳಿಂದ ಸೇನಾನೆಲೆಗಳನ್ನು ಪಡೆದು ಅವುಗಳನ್ನು ಭದ್ರಪಡಿಸುತ್ತಾ ಕಾಳಗವನ್ನು ಮುಂಗಾಣಿಸುತ್ತಿದ್ದಾರೆ. ಬ್ರಿಟಿಷರೊಡನೆ ಶತ್ರುಗಳು ಈಗ ಬಹಳ ತೀಕ್ಷ್ಣವಾಗಿ ಕಾದಾಡುತ್ತಿದ್ದಾರೆಂದು ತಿಳಿದುಬರುತ್ತದೆ. ಜರ್ಮನರಿಗೆ ಬೆಂಬಲವು ಬಹಳವಾಗಿ ಬಂದಿದೆ. ಹೊಸ ಫಿರಂಗಗಳ ಸಂಗ್ರಹವೂ ಪ್ರಕೃತ ಅವರಿಗಿದೆ. ಈ ಸರ್ತಿಯ ಕಾದಾಟಗಳಲ್ಲಿಯೇ ಜಯಾಪಜಯಗಳು ನಿಶ್ಚಿತವಾಗುವವೆಂತ ಶತ್ರುಗಳು ಬಹಳ ರಭಸದಿಂದ ಬ್ರಿಟಿಷರನ್ನು ಎದುರಾಡುತ್ತಿದ್ದಾರೆ. ಸ್ಕಾರ್ಪನದಿಯ ಎರಡು ದಡಗಳಲ್ಲಿಯೂ ಕಾಳಗವು ನಡೆದು ಆ ಪ್ರಾಂತ್ಯಗಳಲ್ಲಿ ಸಹ ಬ್ರಿಟಿಷರು ಸೇನಾನೆಲೆಗಳನ್ನು ಪಡೆದಿರುತ್ತಾರೆ. ಗ್ರೆವಿಲ್ಲೆ ಗ್ರಾಮವನ್ನು ಹಿಡಕೊಂಡು ಅಲ್ಲಿಂದ ೨॥ ಮೈಲುಗಳ ವಿಸ್ತಾರದಲ್ಲಿ ತಮ್ಮ ಸೇನಾವ್ಯೂಹಗಳನ್ನು ರಚಿಸಿರುವರು. ಸುಮಾರು ಒಂದು ಸಾವಿರ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಜರ್ಮನರ ಆರು ಆಕಾಶನಾವೆಗಳನ್ನು ನಾಶಪಡಿಸಿರುವರು. ೧೫ ಆಕಾಶನಾವೆಗಳನ್ನು ಓಡಿಸಿಬಿಟ್ಟಿರುವರು. ಬ್ರಿಟಿಷರೂ ಫ್ರೆಂಚರೂ ಈ ರೀತಿ ಏಕಕಾಲದಲ್ಲಿಯೇ ಶತ್ರುಗಳ ಮೇಲೆ ಬಿದ್ದು ಕಾಳಗವನ್ನು ನಡಿಸಿದ್ದರಿಂದ ಪೂರ್ವ ರಣರಂಗದಲ್ಲಿ ಹಿಂಡನ್‌ಬರ್ಗನು ರೀಗಾದ ಮೇಲೆ ಕೈಮಾಡಲು ಅಣಿಗೊಳಿಸಿದ ಸೇನೆಯನ್ನು ಪಶ್ಚಿಮ ರಣರಂಗಕ್ಕೆ ಕಳುಹಿಸಿಕೊಡಬೇಕಾಯಿತು. ಅದಲ್ಲದೆ ಕೆಲೈ ಮತ್ತು ಪಾರಿಸ್ ಪಟ್ಟಣಗಳನ್ನು ಮುತ್ತಬೇಕೆಂಬ ಹಿಂಡನ್‌ಬರ್ಗನ ಆಶೆಯು ವ್ಯರ್ಥವಾಯಿತು.

ಪೂರ್ವ ರಣರಂಗದಲ್ಲಿ ಕಾಳಗಗಳ ವಿಶೇಷ ಸಮಾಚಾರವೇನೂ ಇರದು.

ಮೆಸೊಪಟೊಮಿಯದಲ್ಲಿ ಜನರಲ್ ಮೋಡ್‌ರವರು ಕಟಲ್ ಔಥೇಮ್ ನದಿಯನ್ನು ಅಡ್ಡಕಟ್ಟಿದ ತುರ್ಕರ ಸೇನಾಂಗವನ್ನು ಸೋಲಿಸಿ ಟಿಗ್ರಿಸ್ ನದಿಯ ಉತ್ತರ ದಡದಲ್ಲಿ ಸುಮಾರು ೧೩ ಮೈಲುಗಳ ವಿಸ್ತೀರ್ಣಕ್ಕೆ ಶತ್ರುಗಳನ್ನು ಹಿಂದಕ್ಕೆ ಅಟ್ಟಿರುವರು.

ಜಲಾಂತರ್ಗಾಮಿ ನಾವೆಗಳಿಂದ ನಾಶವಾದ ಹಡಗಗಳ ವಿವರವು ವ್ಯಾಸರಾಯಿ ಪ್ರಭುಗಳಿಗೆ ಸಿಮ್ಲಾಕ್ಕೆ ಬಂದ ವಾರ್ತೆಯ ಪ್ರಕಾರ ಈ ರೀತಿ ಇರುವದು:— ಬ್ರಿಟಿಷ ಬಂದರುಗಳಿಗೆ ಗತವಾರದಲ್ಲಿ ಬಂದಂಥಾ ಹಡಗಗಳ ಸಂಖ್ಯೆಯು ೨೨೬೪ ಮತ್ತು ಬಂದರುಗಳಿಂದ ಹೊರಟ ಸಂಖ್ಯೆಯು ೨೩೨೧ ಆಗಿರುತ್ತದೆ. ೧೬೦೦ ಟನ್ನುಗಳ ಭಾರಾವಣಿಯ ಹಡಗಗಳು ೧೯ ಮತ್ತು ಇದಕ್ಕಿಂತ ಚಿಕ್ಕದಾದ ಹಡಗಗಳು ೯ ಈ ರೀತಿ ೨೮ ಹಡಗಗಳು ಮುಳುಗಿಹೋಗಿರುತ್ತವೆ. ಈ ರೀತಿ ಕಳೆದ ೮ ವಾರಗಳ ಸಂಖ್ಯೆಯನ್ನು ನೋಡಿದರೆ ಹಡಗಗಳ ನಾಶವು ಸ್ವಲ್ಪ ಹೆಚ್ಚಿದೆಂದು ಕಂಡು ಬಂದರೂ ವ್ಯಾಪಾರವು ಏನೂ ಕಡಿಮೆಯಾದದ್ದಿಲ್ಲವೆಂತ ವ್ಯಕ್ತವಾಗುತ್ತದೆ.

ವಿದೇಶ ವೃತ್ತಾಂತ.

[illegible] ಇವರ ಎರಡನೇ ಮಗನಾದ [illegible] ಎಂಬವರು [illegible] ಹೋಗಿರುವರೆಂತ ತಿಳಿಯುತ್ತದೆ.

ಹಿಂದೂಸ್ಥಾನದ ಕಾಡುಗಳ ವಿಷಯ ಆರ್. ಎಸ್. ಪಿಯರ್ಸನ್ ಎಂಬವರು ಒಂದು ಲೇಖವನ್ನು ಬರೆದಿರುವರು. ಕಾಗದದ ತಯ್ಯಾರಿಗೆ ಬೇಕಾದ ಹುಲ್ಲು ಮತ್ತು ಬಿದಿರುಗಳು ಹಿಂದೂಸ್ಥಾನದ ಕಾಡುಗಳಲ್ಲಿ ಬಹಳ ವಿಶೇಷವಾಗಿವೆ. ಹಿಂದೂಸ್ಥಾನದಲ್ಲಿ ಸಾಮಾನ್ಯ ಶಿಕ್ಷಣದ ಬಗ್ಗೆ, ಆರೋಗ್ಯಪಾಲನೆ ಬಗ್ಗೆ, ಭೂವ್ಯವಸಾಯದ ಅಭಿವೃದ್ಧಿ ಬಗ್ಗೆ ಬಹಳ ಹಣವು ಬೇಕಾಗಿರುವದು. ಈ ಎಲ್ಲ ಹಣವನ್ನು ಹಿಂದೂಸ್ಥಾನದ ಕಾಡುಗಳನ್ನು ಸರಿಯಾಗಿ ಉಪಯೋಗಿಸಿಕೊಂಡಲ್ಲಿ ಸಂಗ್ರಹಿಸಿಕೊಳ್ಳಬಹುದೆಂದು ಇವರು ಸೂಚಿಸಿರುವರು. ಬೆಲ್ಜಿಯಮ್ ಸ್ಪೈನ್, ಪೋರ್ಚುಗಲ್ ಈ ಮೂರು ದೇಶಗಳಲ್ಲಿ ಇಷ್ಟಿಷ್ಟು ಕಾಡುಗಳು ಹಿಂದೂಸ್ಥಾನದಲ್ಲಿದ್ದರೂ ಇವುಗಳಿಂದ ಎಕರೆಗೆ ಸುಮಾರು ೪ ಆಣೆಯಷ್ಟು ಉತ್ಪತ್ತಿಗಿಂತ ಹೆಚ್ಚು ಉತ್ಪತ್ತಿಯು ಪ್ರಕೃತ ಸಿಗುವದಿಲ್ಲವೆಂಬ ಶೋಚನೀಯ ಸ್ಥಿತಿಯನ್ನು ಪಿಯರ್ಸನ್‌ರವರು ವಿವರಿಸಿ ಹೇಳಿರುತ್ತಾರೆ.

ಮಿತ್ರರ ರಾಷ್ಟ್ರಗಳ ನಿವಾರಣಾ ಫಂಡುಗಳಿಗೆ ಜಪಾನ್ ಚಕ್ರವರ್ತಿಯವರು ೧೦,೦೦೦ ಪವನುಗಳನ್ನು ಕೊಟ್ಟಿರುವರು.

ಜರ್ಮನ್ ಸೇನಿಕರಲ್ಲಿ ವಸ್ತ್ರಗಳ ಕೊರತೆಯು ಬಹಳ ವಿಶೇಷವಾಗಿರುತ್ತದೆ ಸೇನಿಕರಿಗೆ ಪರಟುಗಳು ಸಹ ಇರವು.

ಅಮೇರಿಕಾ ಖಂಡದಲ್ಲಿ ಕೋಟೇಶ್ವರರು ೧೦ ಕೋಟಿ ಜನರಿರುತ್ತಾರೆ.

ಜರ್ಮನಿಯಲ್ಲಿ ಕಲ್ಲಿದ್ದಲು ಕಡಮೆಯಾಗಿ ಹೋದ್ದರಿಂದ ಅನೇಕ ನಾಟಕ, ಗಾಯನ, ಪ್ರದರ್ಶನ ಶಾಲೆಗಳು ಮುಚ್ಚಲ್ಪಟ್ಟಿರುವವು.

'ಹೊಸ್ಪಿಟಲ್' ಹಡಗಗಳನ್ನು ಸಹ ನಾಶಪಡಿಸುವೆವು ಎಂತ ಜರ್ಮನರು ತಿಳಿಸಿದನಂತರ ಫ್ರೆಂಚರು ಈ ಹಡಗಗಳಲ್ಲಿ ಸೆರೆಹಿಡಿದ ಜರ್ಮನರನ್ನು ತುಂಬಿಸುವೆವೆಂತ ಹೇಳಿರುವರು.

ಆಹಾರ ಜೀನಸುಗಳನ್ನು ಬ್ರಿಟಿಷ್ ದ್ವೀಪಗಳಲ್ಲಿಯೇ ಹೆಚ್ಚಾಗಿ ಬೆಳಸಬೇಕೆಂಬ ಚಳವಳವು ವಿಶೇಷವಾಗಿ ನಡಿಯುತ್ತದೆ. ಫ್ರಾನ್ಸದೇಶದಲ್ಲಿ ಮೂರರಲ್ಲಿ ಎರಡು ಪಾಲನ್ನು, ಮತ್ತು ಡೆನ್‌ಮಾರ್ಕಿ ೧೦ರಲ್ಲಿ ೯ ಪಾಲನ್ನು ಜಮೀನು ಭೂವ್ಯವಸಾಯದಲ್ಲಿದೆ, ಇಂಗ್ಲಾಂಡದಲ್ಲಿ ಐದು ಪಾಲಲ್ಲಿ ಮೂರು ಪಾಲನ್ನು ಇರುವದು. ಇಂಗ್ಲಾಂಡದಲ್ಲಿ ೩೦೦,೦೦೦ ಮತ್ತು ಐರ್ಲಾಂಡದಲ್ಲಿ ೭೦೦,೦೦೦ ಎಕ್ರೆಗಳಲ್ಲಿ ಆಹಾರ ಜೀನಸುಗಳನ್ನು ನವೀನವಾಗಿ ಬೆಳಸಲು ಪ್ರಾರಂಭಿಸಿರುತ್ತಾರೆ.

ಬೆಲ್ಜಿಯಮದಲ್ಲಿ ಒಬ್ಬ ಹೊಸ ಗವರ್ನರ ಜನರಲರನ್ನು ನೇಮಿಸಿರುತ್ತಾರೆ

ನವೀನವಾಗಿ ವರ್ತಮಾನ ಪತ್ರಗಳು ಹೊರಡಿಸಕೂಡದೆಂದು ಬ್ರಿಟಿಷ ದ್ವೀಪಗಳಲ್ಲಿ ವಿಧಿಸೋಣಾಗಿದೆ.

ಆಸ್ಟ್ರಿಯಾ ದೇಶವು ರುಶ್ಯಾದೊಡನೆ ಪ್ರತ್ಯೇಕವಾಗಿ ಸಂಧಾನವನ್ನು ಮಾಡಿಕೊಳ್ಳಲು ಸಿದ್ಧವಿರುವದೆಂಬ ಸಂಗತಿಯನ್ನು ಆಧಾರಪೂರ್ವಕ ಪ್ರಸಿದ್ಧಪಡಿಸಿರುವರು. ಯುದ್ಧದ ಉದ್ದೇಶವು ರಾಷ್ಟ್ರಕ್ಷೆಸ್ಸೆಯಲ್ಲವೆಂಬ ರುಶ್ಯಾ ದೇಶದ ಧ್ಯೇಯವು ಆಸ್ಟ್ರಿಯನರದ್ದೂ ಆಗಿರುವದರಿಂದ ಇನ್ನು ಪರಸ್ಪರ ಯುದ್ಧದಲ್ಲಿ ಬಿದ್ದಿರುವದು ಯುಕ್ತವಲ್ಲವೆಂಬ ತನ್ನ ಮನೋಗತವನ್ನು ಸೂಚಿಸಿ ತನ್ನ ಹೇಳಿಕೆಯನ್ನು ಹೊರಪಡಿಸಿರುವದು. ಆದರೆ ರುಶ್ಯಾದ ಹೊಸ ಸರಕಾರವು ಮಿತ್ರರಾಜ್ಯಗಳೊಡನೆ ಇದ್ದ ಎಲ್ಲಾ ಒಪ್ಪಂದಗಳಿಗೂ ಭಾಗಿಯಾಗಿರುವದರಿಂದ ಪ್ರತ್ಯೇಕ ಸಂಧಾನವು ಆಗುವಂಥಾ ಸಂಭವವು ಎಂದಿಗೂ ಇರದು. ಈ ಸಂಧಾನ ಯತ್ನದಿಂದ ಒಂದು ವ್ಯಕ್ತವಾಗುತ್ತದೆ. ಏನಂದರೆ ಒಸ್ಟ್ರಿಯಾವು ಬಹಳ ಬೆಂಡಾಗಿ ಹೋಗಿದೆ. ಯುದ್ಧವನ್ನು ಮುಂದರಿಸಲು ಅದಕ್ಕೆ ಸಾಮರ್ಥ್ಯವಿರದು.

ಈಗಿನ ಬ್ರಿಟಿಷ ಪಾರ್ಲಿಮೆಂಟು ಸಭೆಯ ಅವಧಿಯನ್ನು ಬರುವ ನವಂಬರ ತಿಂಗಳ ೩೦ರ ವರೆಗೆ ಹೆಚ್ಚಿಸಬೇಕೆಂದು ಬೊನಾರ್ ಲೋರವರು ಒಂದು ಬಿಲ್ಲನ್ನು ಪಾರ್ಲಿಮೆಂಟು ಸಭೆಯ ಮುಂದೆ ತಂದಿದ್ದರು. ಯುದ್ಧವು ಬಹು ತೀಕ್ಷ್ಣವಾಗಿ ನಡಿಯುತ್ತಿದ್ದು ಹೆಚ್ಚಿನ ಜನರೆಲ್ಲರೂ ಯುದ್ಧಭೂಮಿಯಲ್ಲಿರುವಾಗ ಮತ್ತು ಬ್ರಿಟಿಷ ಸೇನಿಕರು ವಿಶೇಷವಾಗಿ ಜಯವನ್ನು ಹೊಂದುತ್ತಿರುವಾಗ ಈಗಿನ ಪಾರ್ಲಿಮೆಂಟು ಸಭೆಯನ್ನು ಕಳಚಿಬಿಟ್ಟು ಚುನಾವಣೆಯನ್ನು ನಡಿಸಿ ಹೊಸ ಪಾರ್ಲಿಮೆಂಟನ್ನು ರಚಿಸುವದು ಯುಕ್ತವಲ್ಲವೆಂತ ಬೊನಾರ್ ಲೊರವರು ಹೇಳಿದರು. ಪಾರ್ಲಿಮೆಂಟು ಸಭೆಯಲ್ಲಿ ಮಿ| ಲೊರವರಿಗೆ ೨೪೬ ಮತಗಳು ದೊರಕಿವೆ. ೫೨ ಮತಗಳು, ರಾಷ್ಟ್ರೀಯ ಪಕ್ಷದವರು ಇವರಿಗೆ ವಿರೋಧವಾಗಿದ್ದರು.

ಅಮೇರಿಕದವರು ಮಿತ್ರರನ್ನು ಸೇರಿದಕ್ಕಾಗಿ ತಮ್ಮ ವಂದನೆಗಳನ್ನು ಸೂಚಿಸಲಿಕ್ಕೆ ಫ್ರಾನ್ಸದೇಶದ ಪರವಾಗಿ ಜನರಲ್ ಜೊಫ್ರೆ ಮತ್ತು ಎಮ್. ವಿಯಾನಿಯವರು ಅಮೇರಿಕಕ್ಕೆ ಹೋಗುವರು.

ಜರ್ಮನರ ಬಾವುಟಗಳುಳ್ಳ ಬೋಟುಗಳು ಚೀನಾದೇಶದ ಒಳಪ್ರಾಂತ್ಯಗಳಲ್ಲಿ ಸಂಚರಿಸಕೂಡದೆಂತ ಚೀನಾ ಸರಕಾರದವರು ಅಪ್ಪಣೆಕೊಟ್ಟಿರುತ್ತಾರೆ.

ರುಶ್ಯದೇಶದ ರೈಲ್ವೆ ಹಾದಿಗಳನ್ನು ವ್ಯವಸ್ಥೆಗೊಳಿಸಲಿಕ್ಕೆ ಅಮೇರಿಕದಿಂದ ೫೦೦ ಜನ ಮಾಹಿತಿದಾರರು ರುಶ್ಯಕ್ಕೆ ಹೋಗುವರು.

ರುಶ್ಯದ ಹೊಸ ಸರಕಾರವು ಎಂದಿಗೂ ಜರ್ಮನ್ ಮತ್ತು ಒಸ್ಟ್ರಿಯನರ ಕೂಡ ಸಂಧಾನವನ್ನು ಮಾಡಲಿಕ್ಕಿಲ್ಲವೆಂಬ ಭರವಸೆಯನ್ನು ಅಮೇರಿಕಕ್ಕೆ ಕೊಟ್ಟಿದೆ. ಇದರ ಬದಲಿಗೆ ರುಶ್ಯದೇಶದ ಸೋಸಿಯಲಿಸ್ಟ್ ಸಂಗಡದವರು ಜರ್ಮನ್ ಮತ್ತು ಒಸ್ಟ್ರಿಯಾದೇಶದ ಸೋಸಿಯಲಿಸ್ಟರ ಮುಖಾಂತರ ಜರ್ಮನಿಯಲ್ಲಿಯೂ ಒಸ್ಟ್ರಿಯದಲ್ಲಿಯೂ ಕ್ರಾಂತಿಯನ್ನುಂಟುಮಾಡಿ ಅಲ್ಲಿಯೂ ಸಹ ರುಶ್ಯದೇಶದಂತೆ ಹೊಸ ಸರಕಾರಗಳನ್ನು ಸ್ಥಾಪಿಸಲು ಯತ್ನಿಸುವೆವೆಂಬುದಾಗಿ ಹೇಳಿರುತ್ತಾರೆ.

ಗ್ರೀನಾಕ್ ಎಂಬ ಸ್ಥಳದಲ್ಲಿ ಕುರುಡನೊಬ್ಬನು ಕ್ಷೌರದ ಕತ್ತಿಯಿಂದ ತನ್ನ ಹೆಂಡತಿಯ ಕತ್ತನ್ನು ಕತ್ತರಿಸಿಹಾಕಿದ ಅಪರಾಧಕ್ಕಾಗಿ ವಿಚಾರಣೆಗೆ ಗುರಿಪಡಿಸಲ್ಪಟ್ಟನು. ತನ್ನ ಹೆಂಡತಿಯು ಪರಪುರುಷನ ಆಶಾವಶೆಯಿಂದ ತನ್ನನ್ನು ಕೊಲ್ಲಲು ಪ್ರಯತ್ನಿಸಿದ್ದರಿಂದ ತಾನು ಆತ್ಮರಕ್ಷಣೆಗಾಗಿ ಅವಳನ್ನು ಕತ್ತರಿಸಿದೆನೆಂದನು. ಜಡ್ಜಿಯವರು ಆತನನ್ನು ಶೀಘ್ರ ಬಿಡುಗಡೆ ಮಾಡಿರುವರು.

ಜರ್ಮನ್ ಕೈಸರರು ಸಬ್‌ಮೆರೀನುಗಳ ಪ್ರಯೋಗದಿಂದ ಯುದ್ಧವನ್ನು [illegible] ಜರ್ಮನ್ ಸರಕಾರದ ಸಮ್ಮತಿಯು [illegible]

ಇಂಗ್ಲಾಂಡದಲ್ಲಿ ಸ್ತ್ರೀಯರು [illegible] ಯುದ್ಧಸಾಮಾಗ್ರಿಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿಯೂ ಪೋಲೀಸು ಕೆಲಸಗಳಲ್ಲಿಯೂ ಪ್ರಕೃತ ಸ್ತ್ರೀಯರಿರುವರು. ಸೇನೆಯಲ್ಲಿ ಕಾದಾಡುತ್ತಿರುವ ಸೇನಿಕರ ಪಾಲನೆ ಬಗ್ಗೆ ವಿಶೇಷ ಜನರು ಬೇಕಾಗಿರುವರು. ಇಂಥಾ ಕೆಲಸಗಳಲ್ಲಿ ಸ್ತ್ರೀಯರ ಸಂಖ್ಯೆಯು ಹೆಚ್ಚುತ್ತಿರುವದು. ಕ್ರಮೇಣ ಈ ಕೆಲಸವು ಸ್ತ್ರೀಯರಿಗೇನೆ ಕೊಡೋಣಾಗಿ ಪ್ರಕೃತ ಈ ಕೆಲಸದಲ್ಲಿರುವ ಪುರುಷರು ಕಾದಾಡುವ ಬಗ್ಗೆ [illegible] ತೋರಿಬರುತ್ತದೆ. ಸ್ತ್ರೀಯರು ಈ ಕೆಲಸಗಳನ್ನು ಸೇರಬೇಕಾದರೆ ಕೆಲವು ನಿಯಮಗಳು ಇರುವವು. ಅವು ಯಾವವಂದರೆ:— ಸ್ತ್ರೀಯರಿಗೆ ಬೇಕಾಗಿರುವ ಉಡುಪುಗಳೂ ಫ್ರಾನ್ಸಿನಿಂದ ಸ್ವದೇಶಕ್ಕೂ, ಬಂದು ಹೋಗುವ ಖರ್ಚು ಸರಕಾರದಿಂದ ಕೊಡೋಣಾಗುವದು. ೩೦ ವರುಷಗಳ ವಯಸ್ಸಿನ ಮೇಲಾದವರು ಮತ್ತು ೪೦ ವರುಷಗಳ ವಯಸ್ಸಿನ ಕೆಳಗಿನವರು ಇಂಥ ಕೆಲಸಕ್ಕೆ ಕೊಡಬಹುದು. ಗುಮಾಸ್ತೆ, ಟ್ಯಾಪಿಸ್ಟ್, ಅಡಿಗೆ ಕೆಲಸ, ಟೆಲಿಫೋನ್ ಕೆಲಸ, ಟಪ್ಪಾಲು ಕೆಲಸ— ಈ ಕೆಲಸಗಳು ಇವರಿಗೆ ಕೊಡೋಣಾಗುವವು.

ಇದೇ ವರುಷದ ಜನವರಿ ತಿಂಗಳ ತಾ. ೩೧ರೊಳಗೆ ಯುದ್ಧದಲ್ಲಿ ಉಭಯ ಕಡೆಗಳಲ್ಲಿಯೂ ಮಡಿದವರ ಸಂಖ್ಯೆಯು ೫,೮೦೦,೦೦೦ ಮತ್ತು ಘಾಯ ಪಡೆದವರ ಸಂಖ್ಯೆಯು ೧೫,೦೦೦,೦೦೦ ಆಗಬಹುದೆಂತ ಅಂದಾಜು ಮಾಡುತ್ತಾರೆ.

ಆಸ್ಟ್ರಿಯಾದಲ್ಲಿರುವ ಬೊಹೇಮಿಯಾದಲ್ಲಿ ಹೊಟ್ಟೆಗಿಲ್ಲದೆ ಜನರು ಹೇಸರಕತ್ತೆಯ ಮಾಂಸವನ್ನು ತಿನ್ನುತ್ತಿರುವರಂತೆ.

ಬ್ರಿಟಿಷ್‌ನವರು ಈಚೆಗೆ ಅದ್ಭುತವಾದ ಆಕಾಶವಿಮಾನವೊಂದನ್ನು ರಚಿಸಿರುವರು. ಇದರಲ್ಲಿ ೩೦ ಮಂದಿ ಪ್ರಯಾಣಿಕರು ಕೂತುಕೊಂಡು ೭ ಸಾವಿರದ ಅಡಿ ಎತ್ತರದ ವರೆಗೆ ಹೋಗಬಹುದು.

ರುಶ್ಯ ದೇಶಕ್ಕೆ ಏನೇನೆಲ್ಲಾ ಬೇಕೆಂಬುವದನ್ನು ತಿಳಿಸಿದೊಡನೆಯೆ ಅಮೇರಿಕದವರು ಅವನ್ನೆಲ್ಲಾ ಕಳುಹಿಸಿಕೊಡಲು ಸಿದ್ಧರಾಗಿರುವರೆಂತ ರುಶ್ಯದ ಹೊಸ ಸರಕಾರಕ್ಕೆ ತಿಳಿಯ ಹೇಳಿರುತ್ತಾರೆ. ಪ್ರಜಾಸತ್ತೆಯ ಈಗಿನ ಹೊಸ ಸರಕಾರವನ್ನು ತಮ್ಮಿಂದ ಸಾಧ್ಯವಾಗುವ ರೀತಿಯಲ್ಲಿ ಬಲಪಡಿಸಬೇಕೆಂಬುವ ಉದಾತ್ತ ಉದ್ದೇಶದಿಂದಲೆ ಅಮೇರಿಕವು ರುಶ್ಯಕ್ಕೆ ಈ ರೀತಿ ತಿಳಿಸಿರುವದು.

ಮರದ ಕೆಲಸ, ಕಬ್ಬಿಣದ ಕೆಲಸ ಇತ್ಯಾದಿ ಕೆಲಸಗಳನ್ನು ಮಾಡುವ ಜರ್ಮನರ ಕೂಲಿಯಾಳುಗಳು ಮುಷ್ಕರ ಹಿಡಿದು, ಕೂಲಿಯ ದರವನ್ನು ಹೆಚ್ಚಿಸಬೇಕೆಂತಲೂ, ಆಹಾರ ಸಾಮಾಗ್ರಿಗಳನ್ನು ಹೆಚ್ಚಾಗಿ ಕೊಡಬೇಕೆಂತಲೂ, ರಾಜಕೀಯ ವ್ಯವಸ್ಥೆಯನ್ನು ಮಾರ್ಪಡಿಸಬೇಕೆಂತಲೂ, ಯುದ್ಧವನ್ನು ಮುಗಿಸಬೇಕೆಂತಲೂ ಕೇಳುತ್ತಿರುವದಾಗಿ ಎಮ್‌ಸ್ಟರ್‌ಡಮ್‌ದಲ್ಲಿಯ ಪತ್ರಗಳಿಂದ ತೋರಿಬರುತ್ತದೆ. ನಂತರದ ಈ ಕಡೆಯ ಪತ್ರಗಳಲ್ಲಿ ಕೂಲಿ ಜನರಿಗೆ ತಮ್ಮ ಆಕಾಂಕ್ಷೆಯನ್ನು ಪೂರೈಸುವ ವಾಗ್ದಾನಗಳು ಕೊಡೋಣಾದ್ದರಿಂದ ಮುಷ್ಕರ ಹಿಡಿದವರು ಪುನಹ ಕೆಲಸಕ್ಕೆ ಸೇರಿರುವರೆಂತ ತಿಳಿದುಬರುತ್ತದೆ.

ಉತ್ತರ ಹಿಂದೂಸ್ಥಾನ.

ಬರುವ ತಿಂಗಳ ತಾ. ೧೩, ೧೪, ೧೫ನೇ ದಿನಗಳಲ್ಲಿ ಕೂಡುವ ಮುಂಬಯಿ ಪ್ರಾಂತಿಕ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೆ ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಯವರು ಸಮ್ಮತಿಸಿರುವರು.

ಈ ತಿಂಗಳ ತಾ. ೬ ಮತ್ತು ೭ರಲ್ಲಿ ಢಕ್ಕಾದಲ್ಲಿ ಕೂಡಿದ ಬಂಗಾಳ ಪ್ರಾಂತಿಕ ಆಯುರ್ವೇದಿಕ ಪರಿಷತ್ತಿನ ವಿಸ್ತಾರವಾದ ವೃತ್ತಾಂತವು ಈಗ ಪ್ರಕಟವಾಗಿರುತ್ತದೆ. ವೈದ್ಯನಾಥ ಕವಿರಾಜ ಜೋಗೇಂದ್ರನಾಥ ಸೇನ್ ವಿದ್ಯಾಭೂಷಣ ಎಮ್. ಎ.ರವರು ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆಮಂತ್ರಣ ಸಭೆಯ ಅಧ್ಯಕ್ಷರೂ ಪರಿಷತ್ತಿನ ಅಧ್ಯಕ್ಷರೂ ಮಾಡಿದ ಭಾಷಣಗಳು ಬಹಳ ವಿದ್ವತ್ತಿಕೆಯಿಂದ ತುಂಬಿದ್ದವು. ತ್ರಿದೋಷ ಮತ್ತು ತ್ರಿಸೂತ್ರ ಈ ಸೂಕ್ಷ್ಮವಾದ ಸಿದ್ಧಾಂತಗಳನ್ನು ಆಯುರ್ವೇದವು ಹೇಗೆ ಅವಲಂಬಿಸಿರುವದೆಂಬುದನ್ನು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬಹಳ ಶ್ಲಾಘ್ಯವಾದ ರೀತಿಯಲ್ಲಿ ವಿವರಿಸಿರುತ್ತಾರೆ. ಈ ಪರಿಷತ್ತಿನ ಕಾಲದಲ್ಲಿ ಅಲ್ಲಿಯೇ ಏರ್ಪಡಿಸಿದ ಔಷಧಗಳ ಮತ್ತು ಅವುಗಳ ಉಪಕರಣಗಳ ಪ್ರದರ್ಶನವು ಜನರಲ್ಲಿ ಬಹಳ ಉತ್ಸಾಹವನ್ನು ಉಂಟುಮಾಡಿರುತ್ತದೆ. ಅಲ್ಲಿಯ ಕಲೆಕ್ಟರ ದೊರೆಗಳವರು ಪ್ರದರ್ಶನವನ್ನು ತೆರೆಯುವ ಮುಹೂರ್ತವನ್ನು ನೆರವೇರಿಸಿಕೊಟ್ಟು ಇದನ್ನು ಬಹಳವಾಗಿ ಪ್ರೋತ್ಸಾಹಿಸಿರುತ್ತಾರೆ. ೧೦ ದಿವಸಗಳ ತನಕ ದಿನಂಪ್ರತಿ ೩,೦೦೦ ಜನರಂತೆ ಈ ಪ್ರದರ್ಶನವನ್ನು ನೋಡಲು ಪ್ರೇಕ್ಷಕರು ಬರುತ್ತಿದ್ದರು. ಔಷಧಗಳಿಗೆ ಬೇಕಾದ ಗಿಡಮೂಲಿಕೆಗಳ ಒಂದು ತೋಟವನ್ನು ಶೀಘ್ರದಲ್ಲಿ ತಯ್ಯಾರಿಸಬೇಕೆಂತ ನಿರ್ಣಯಿಸಲ್ಪಟ್ಟಿರುತ್ತದೆ. ಕೆಲವರು ಇಂಥ ತೋಟಗಳಿಗೆ ಬೇಕಾದ ಸ್ಥಳವನ್ನು ಉಚಿತವಾಗಿ ಬಿಟ್ಟುಕೊಟ್ಟಿರುತ್ತಾರೆ. ಬರುವ ವರುಷದ ಪರಿಷತ್ತು ಮುರ್ಷಿದಾಬಾದಿನಲ್ಲಿ ಕೂಡುವದು.

ಬರ್ಮಾ ದೇಶದ ಯಾವ ಬಂದರುಗಳಿಂದಾಗಲಿ ಕಲ್ಕತ್ತೆಗೆ ಅಕ್ಕಿಯನ್ನು ಕಳುಹಿಸಕೂಡದೆಂತಾಗಿದೆ.

ಭಟ್ಕಳ ಬಂದರವು ಮೈಸೂರು ಸರಕಾರದವರಿಗೆ ಇನ್ನು ಸದ್ಯದಲ್ಲಿ ಕೊಡೋಣಾಗುವದೆಂಬ ವರ್ತಮಾನವು ನಿಜವಲ್ಲವೆಂತ ಸಿಮ್ಲಾದಲ್ಲಿ ಪ್ರಕಟಿಸಲ್ಪಟ್ಟ ವೃತ್ತಾಂತದಿಂದ ತೋರಿಬರುತ್ತದೆ.

ಮುನ್ಸಿಪಲ್ ಮತ್ತು ಲೋಕಲ್ ಬೋರ್ಡುಗಳ ಎಲ್ಲಾ ಮೆಂಬರರುಗಳು ಪ್ರಜಾ ಜನರಿಂದ ಚುನಾಯಿಸಲ್ಪಡಬೇಕೆಂಬ ನಿರ್ಣಯವನ್ನು ವ್ಯಾಸರಾಯಿ ಪ್ರಭುಗಳಿಗೆ ಸೂಚಿಸಬೇಕೆಂತ ಪುನಾ ಮುನ್ಸಿಪಾಲಿಟಿಯವರು ನಿಶ್ಚಯಿಸಿರುತ್ತಾರೆ.

ಬಂಗಾಳ ಪ್ರಾಂತಿಕ ಸಭೆಯು ಈ ತಿಂಗಳ ತಾ. ೩ರಲ್ಲಿ ಭವಾನಿಪುರದಲ್ಲಿ ಕೂಡಿತ್ತು. ಸಿ. ಆರ್. ದಾಸರವರು ಸಭೆಯ ಅಧ್ಯಕ್ಷರಾಗಿದ್ದರು. ಡಾಕ್ಟರ ರಾಷ್‌ಬಿಹಾರಿಘೋಷ, ಬಾಬು ಅಂಬಿಕಾಚರಣ ಮುಜುಮ್‌ದಾರ, ಸುರೇಂದ್ರನಾಥ ಬೆನರ್ಜಿ ಮೊದಲಾದ ಬಂಗಾಳ ವೃದ್ಧ ಮಹಶಿಯರು ಆ ಪ್ರಾಂತ್ಯಗಳಲ್ಲಿ [illegible] ಬೇಕಾದ ರಾಜಕೀಯ ವಿಷಯಗಳ [illegible] ಪ್ರಯತ್ನವನ್ನು ಈ ಸಭೆ ಮೂಲಕ ಅತ್ಯಾದರದಿಂದ ನಡಿಸಲು ಸಿದ್ಧವಾಗಿ ಆ ಸಭೆಗೆ ಬಂದಿದ್ದರು. ಮುಸಲ್ಮಾನರ ಪ್ರತಿನಿಧಿಗಳು ಈ ಸರ್ತಿಯ ಸಭೆಯಲ್ಲಿ ವಿಶೇಷವಾಗಿ ಹಾಜರಿದ್ದರು. ಹಿಂದುಸ್ಥಾನಕ್ಕೆ 'ಸ್ವರಾಜ್ಯ'ವು ಕೊಡೋಣಾಗಬೇಕು ಮತ್ತು ಹಿಂದೀ ಜನರು ಅದಕ್ಕೆ ಯೋಗ್ಯರಾಗಿದ್ದಾರೆ ಎಂಬ ಠರಾವನ್ನು ಬಾಬು ಸುರೇಂದ್ರನಾಥ ಬೆನರ್ಜಿಯವರು [illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನ.
ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದೀ ಪ್ರತಿನಿಧಿ ೧
ಸ್ಫುಟವಿಚಾರಗಳು:—
೧ ವೂರ್ ಲೋನ್ ಮೀಟಿಂಗ್ ಮಂಗಳೂರು. . . . . . . „
೨ ಶ್ರೀಯುತ ಗಾಂಧಿಯವರ ಪ್ರತಿಬಂಧ . . . . „
೩ ಡಿ. ಮೆಜಿಸ್ಟ್ರೇಟರ ಅವ್ಯಾಹಾರೀಕ ವ್ಯಾಪಾರ . . . . . . „
೪ ಮಿ. ಕಟೋಸರ ವಕ್ತ್ಯಾಖ್ಯಾನ ೫
೫ ಎಮಿಗ್ರೇಶನ್ ಕೊನ್ಫರೆನ್ಸಿನಲ್ಲಿ ಹಿಂದೀ ಪ್ರತಿನಿಧಿಗಳು . . . . „
೬ ಯೂರೋಪದ ಶಸ್ತ್ರಯುದ್ಧ . . . . „
ಸ್ಥಳೀಕ—ಮಂಗಳೂರು . . . . „
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ ೩
೨ ವಿದೇಶ ವೃತ್ತಾಂತ ೫
೩ ಉತ್ತರ ಹಿಂದೂಸ್ಥಾನ ೫-೬
೪ ದಕ್ಷಿಣ ಹಿಂದೂಸ್ಥಾನ . . . . „
ಪತ್ರವ್ಯವಹಾರಗಳು . . . . „

ಸ್ವದೇಶಾಭಿಮಾನಿ.

ಶಕ ೧೮೩೯ ವೈಶಾಖ ಶು. ೬ ಶುಕ್ರವಾರ.

ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದೀ ಪ್ರತಿನಿಧಿ.

ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯ ಅಗ್ರಲೇಖದಲ್ಲಿ ಹಿಂದುಸ್ಥಾನದ ರಾಜಕೀಯ ಪ್ರಯಾಣದಲ್ಲಿ ಸಂಭವಿಸಿದ ಒಂದು ಶುಭಶಕುನವನ್ನು ವಾಚಕರಿಗೆ ತಿಳಿಸಿದ್ದೇವೆ ಮಾತ್ರ, ಅಷ್ಟರೊಳಗೆ ಇನ್ನೊಂದು ಉತ್ಸಾಹಕಾರಕವಾದ ವರ್ತಮಾನವು ಮೊನ್ನೆ ಎಂದರೆ ಎಪ್ರಿಲ ತಾ. ೨೨ನೆಯ ದಿವಸ ಪ್ರಸಿದ್ಧವಾಗಿದೆ. ಹಿಂದುಸ್ಥಾನದ ಸೆಕ್ರೆಟರಿಗಳಿಂದ ವೈಸರಾಯ ಪ್ರಭುಗಳಿಗೆ ತಂತಿಮೂಲಕ ಒಂದು ಮಹತ್ವದ ಸಂದೇಶವು ಬಂದಿರುವುದು. ಅದರ ಸಾರಾಂಶವೇನೆಂದರೆ: "ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದುಸ್ಥಾನದ ಕಡೆಯಿಂದ ಪ್ರತಿನಿಧಿಗಳಿರಬೇಕೆಂದು ವಸಾಹತುಗಳ ಮೆಂಬರುಗಳಲ್ಲಿ ಒಬ್ಬರು ಠರಾವನ್ನು ತಂದರು ಅದನ್ನು ಇನ್ನೊಬ್ಬರು ಅನುಮೋದಿಸಿದರು. ಈ ಠರಾವಿನಂತೆ ಹಿಂದುಸ್ಥಾನವು ಸಾಮ್ರಾಜ್ಯದೊಳಗಿನ ಬೇರೆ ಘಟಕಗಳೊಡನೆ ಪ್ರತಿನಿಧಿತ್ವದ ಹಕ್ಕಿನಿಂದ ಸೇರಬೇಕಾದಲ್ಲಿ ಆ ಪರಿಷತ್ತಿನಲ್ಲಿ ಯಾವ ಯಾವ ಬದಲಾವಣೆಗಳು ಅಥವಾ ಬೇರೆ ಅವಶ್ಯಕವಾದ ಸಂಗತಿಗಳು ಆಗಬೇಕಾಗಿವೆಂಬುದನ್ನು ಸಾಮ್ರಾಜ್ಯಾಂತರ್ಗತ ಸರಕಾರಗಳ ಆಲೋಚನೆಯ ಬಗ್ಗೆ ಈ ಠರಾವು ಕಳುಹಿಸಲ್ಪಟ್ಟಿದೆ." ವೈಸರಾಯರಿಗೆ ಸ್ಟೇಟ ಸೆಕ್ರೆಟರಿಗಳಿಂದ ಬಂದ ಈ ಸಂದೇಶವು ಈಗ ಹಿಂದೀ ಲೋಕಮತವನ್ನು ನಿರೀಕ್ಷಿಸಿಕೊಂಡಿದ್ದೀತು ಮತ್ತು ಹಾಗೆ ನಿರೀಕ್ಷಿಸುತ್ತಿದೆಂಬುದಕ್ಕೆ ಸಂದೇಹವಿಲ್ಲ. ಈ ನಿರೀಕ್ಷಣೆಯಂತೆಯೆ ಇಲ್ಲಿಯ ಲೋಕಮತವು ಅದಷ್ಟು ಸ್ಪಷ್ಟರೀತಿಯಿಂದ ಸರಕಾರದ ಮುಂದೆ ಬರುವುದೆಂಬುದಕ್ಕೂ ಅಡ್ಡಿಯಿಲ್ಲ.

ಸಾಮ್ರಾಜ್ಯ ಪರಿಷತ್ತು ಮತ್ತು ಸಾಮ್ರಾಜ್ಯದ ಯುದ್ಧಮಂಡಲ ಇವೆರಡರ ಸೂಕ್ಷ್ಮಭೇದವನ್ನ ಸ್ವಲ್ಪ ಮಾತಿನಿಂದಲೆ ವಾಚಕರಿಗೆ ತಿಳಿಸುವುದು ಒಳ್ಳೇದು. "ಇಂಪೀರಿಯಲ್ ವೂರ್ ಕೌನ್ಸಿಲ್" ಎಂದರೆ ಸಾಮ್ರಾಜ್ಯ ಯುದ್ಧಮಂಡಲವು. ಇದರಲ್ಲಿ ಪ್ರಕೃತ ಯುದ್ಧವನ್ನು ಎಷ್ಟು ಕಾಲದವರೆಗೆ ಯಾವ ರೀತಿಯಿಂದ ನಡಿಸಬೇಕು, ಯುದ್ಧ ಮುಗಿದ ಮೇಲೆ ಸೈನಿಕರಿಗೆ ಕೊಡಬೇಕಾದದ್ದೇನು, ಯುದ್ಧದ ಖರ್ಚನ್ನು ಯಾವ ರೀತಿಯಿಂದ ಭರ್ತಿ ಮಾಡಬೇಕು ಇತ್ಯಾದಿ ಮುಖ್ಯವಾಗಿ ಯುದ್ಧ ಸಂಬಂಧದ ಪ್ರಶ್ನೆಗಳೆ ಚರ್ಚಿಸಲ್ಪಡುತ್ತವೆ. ಇಲ್ಲಿಂದ ಬೀಕಾನೆರದ ಮಹಾರಾಜರೂ ಸರ್ ಸತ್ಯೇಂದ್ರ ಪ್ರ. ಸಿಂಹರು ಪ್ರತಿನಿಧಿಗಳಾಗಿ ಹಿಂಬಹುನಾ ಸ್ಟೇಟ ಸೆಕ್ರೆಟರಿಗಳಿಗೆ ಸಹಾಯಕರಾಗಿ ಹೋದದು ಇದೆ ಯುದ್ಧಮಂಡಲದಲ್ಲಿ ಎಂದರೆ ಇಂಪೀರಿಯಲ್ ವೂರ್ ಕೌನ್ಸಿಲಿನಲ್ಲಿ. ಈಗ ಮೊನ್ನೆ ವೈಸರಾಯರ ದ್ವಾರಾ ಪ್ರಕಟವಾದ ಸ್ಟೇಟ ಸೆಕ್ರೆಟರಿಗಳ ಮೇಲಿನ ಸಂದೇಶವು "ಇಂಪೀರಿಯಲ್ ಕೊನ್ಫರನ್ಸ್" ಎಂದರೆ ಸಾಮ್ರಾಜ್ಯ ಪರಿಷತ್ತಿನ ವಿಷಯವಾಗಿದೆ. ಈ ಪರಿಷತ್ತಿನಲ್ಲಿ ಚರ್ಚಿಸಲ್ಪಡತಕ್ಕ ವಿಷಯಗಳು ಸಾಮ್ರಾಜ್ಯ ಹಿತಸಂಬಂಧದವಾಗಿವೆ. ಇಂಥ ಮಹತ್ವದ ಪರಿಷತ್ತಿನಲ್ಲಿ ಹಿಂದುಸ್ಥಾನದ ಕಡೆಯಿಂದಲೂ ಒಬ್ಬನೊ ಇಬ್ಬರೊ ಎಷ್ಟೊ ಎಂತು ಪ್ರತಿನಿಧಿ ಇರಬೇಕೆಂದು ಲೊರ್ಡ ಹಾರ್ಡಿಂಜ ದೊರೆಗಳಿರುವಾಗಲೆ ವರಿಷ್ಠ ಕೌನ್ಸಿಲಿನಲ್ಲಿ ಪ್ರಸ್ತಾವಗಳು ನಡೆದಿದ್ದವು. ಆ ಸಮಯದಲ್ಲಿ ವೈಸರಾಯರು "ಈ ಸಾಮ್ರಾಜ್ಯ ಪರಿಷತ್ತು ಆಯಾ ಅಂತರ್ಗತ ಸರಕಾರಗಳಿಂದ ರಚಿತವಾದುದು. ಅದರ ರಚನೆಯಲ್ಲಿ ಬದಲಾವಣೆಯನ್ನಾಗಲಿ ಅಥವಾ ಅದರಲ್ಲಿ ಹೊಸದೊಂದು ಕಾರ್ಯಕ್ರಮದ ಸಮಾವೇಶವನ್ನಾಗಲಿ ಮಾಡುವುದು ಹಿಂದುಸ್ಥಾನ ಸರಕಾರಕ್ಕೆ ಹಾಗು ಬರೆ ಬ್ರಿಟಿಷ ಸರಕಾರಕ್ಕೆ ಸಾಧ್ಯವಿಲ್ಲ. ಇಷ್ಟು ಸುಧಾರಣೆಗಳನ್ನು ಪರಿಷತ್ತಿನವರೆ ಮಾಡಿಕೊಳ್ಳತಕ್ಕದೆಂದು ಉತ್ತರವನ್ನು ಕೊಟ್ಟಿದ್ದರು. ಯಾವ ಪರಿಷತ್ತಿನಲ್ಲಿ ಸಾಮ್ರಾಜ್ಯ ಹಿತಸಂಬಂಧದ ಪ್ರಶ್ನೆಗಳು ಚರ್ಚಿಸಲ್ಪಡುವವೊ ಅದರಲ್ಲಿ ಅದೇ ಸಾಮ್ರಾಜ್ಯದ ಒಂದು ವಿಸ್ತೃತ ಭಾಗವಾದ ಹಿಂದುಸ್ಥಾನಕ್ಕೆ—ಬರೆ ಅಸ್ವತಂತ್ರ ದೇಶವೆಂಬ ಕಾರಣವನ್ನು ತೋರಿಸಿ ಪ್ರತಿನಿಧಿತ್ವದ ಹಕ್ಕಿಗೆ ನಾಮ ಹಾಕುವುದು ಸರಿ ಅಲ್ಲೆಂಬುದು ಲೊರ್ಡ ಹಾರ್ಡಿಂಜರಿಗೂ ಗೊತ್ತಿತ್ತು. ಬೇರೆಯವರಿಗೂ ಗೊತ್ತಾಗುವ ವಿಷಯವೆ. ಸಾಮ್ರಾಜ್ಯ ಹಿತದ ಪ್ರಶ್ನೆಗಳನ್ನು ವಿಮರ್ಶಿಸುವಾಗ ಅಸ್ವತಂತ್ರವೆಂಬ ನೆವದಿಂದ ಹಿಂದುಸ್ಥಾನವನ್ನು ಬಿಟ್ಟುಬಿಡುವದಾದರೆ ಹಿಂದುಸ್ಥಾನದ ಉತ್ಸಾಹವು ತಗ್ಗಲಿಕ್ಕಿಲ್ಲವೆ? ಯಾವ ಅಭಿಮಾನದಿಂದ ಹಿಂದುಸ್ಥಾನವು ಸಾಹಾಯ್ಯ ಮಾಡುತ್ತಿದೆಯೊ ಅಂಥ ಅಭಿಮಾನಕ್ಕೆ ತಕ್ಕ ಪ್ರತಿಫಲವು ಸಿಗುವಂತೆ ಆದಷ್ಟು ಅದಕ್ಕೆ ಹೆಚ್ಚಿನ ಹಕ್ಕುಗಳನ್ನು ಕೊಡುವುದು ಕರ್ತವ್ಯವಲ್ಲವೆ? ಈ ಎಲ್ಲ ಪ್ರಶ್ನೆಗಳು ವಸಾಹತನವರಲ್ಲಿಯೇ ಮೂಡಿ ಹಿಂದುಸ್ಥಾನದ ಕಡೆಯಿಂದ ಈ ಸಾಮ್ರಾಜ್ಯ ಪರಿಷತ್ತಿನಲ್ಲಿ ಪ್ರತಿನಿಧಿಯು ಇರಬೇಕೆಂದು ಅವರೆ ಠರಾವನ್ನು ತಂದಿದ್ದಾರೆ. ಇದು ಹಿಂದುಸ್ಥಾನದು ಸುದೈವವೆ ಸರಿ.

ಹಿಂದುಸ್ಥಾನದ ನ್ಯಾಯ್ಯವಾದ ಆಕಾಂಕ್ಷೆ ಹಿಂಬಹುನಾ ಹಕ್ಕಿ ಲೊರ್ಡ ಹಾರ್ಡಿಂಜರಂಥವರ ಉದ್ಯೋಗ, ವಸಾಹತಿನವರ ಅವಿರೋಧ ಮತ್ತು ಬ್ರಿಟಿಷರ ಔದಾರ್ಯ ಈ ಎಲ್ಲ ಕಾರಣಗಳಿಂದಾಗಲಿ ಇಲ್ಲವೆ ಇವುಗಳಲ್ಲಾವುದಾದರೊಂದರಿಂದಾಗಲಿ ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದುಸ್ಥಾನದ ಪ್ರತಿನಿಧಿತ್ವದ ಠರಾವು ಪಾಸಾಗಿ ಕಾರ್ಯರೂಪದಲ್ಲಿ ಬರುವುದಾದರೆ ಈ ಲಾಭದ ಪ್ರಯೋಜನವು ಹಿಂದುಸ್ಥಾನಕ್ಕೆ ಉಪಯುಕ್ತವಾದ ರೀತಿಯಲ್ಲಿ ಸಿಕ್ಕೀತೊ ಹ್ಯಾಗೆ ಇದೊಂದು ವಿಚಾರ ಮಾಡಬೇಕಾದ ಪ್ರಶ್ನೆಯು. ಇದೆ ವಿಷಯದ ಕುರಿತು ಬರೆಯುವಾಗ ನಾವು ಕಳೆದ ವರ್ಷವೆ ಹೇಳಿದಂತೆ ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದುಸ್ಥಾನಕ್ಕೆ ಪಂಕ್ತಿಪಾವನತ್ವವು ಸಿಕ್ಕಿದ್ದು ಅದರ ಸಂಗಿನಲ್ಲಿ ಸರಿಯಾದ ರೀತಿಯಲ್ಲಿ ಬಿದ್ದರೆನೆ ಪ್ರಯೋಜನವಲ್ಲದೆ ಅನ್ಯಥಾ ಇದೊಂದು ತಮಾಷೆಯಾದೀತು. ಇಲ್ಲಿ ಬರುವ ಪ್ರಶ್ನೆಯು ಏನೆಂದರೆ, ಹಿಂದುಸ್ಥಾನದ ಕಡೆಯಿಂದ ಪರಿಷತ್ತಿನಲ್ಲಿ ಪ್ರತಿನಿಧಿಗಳಾಗಿ ಹೋಗುವವರು ಯಾರು? ವರಿಷ್ಠ ಕಾಯಿದೆ ಕೌನ್ಸಿಲಿನವರು ಯಾರನ್ನಾದರೂ ಆರಿಸುವುದೊ? ಅಥವಾ ಸರಕಾರವೆ ತನ್ನ ಒಬ್ಬ ನೌಕರನನ್ನು ಆರಿಸೀತೆ? ಹಿಂದುಸ್ಥಾನದ ಪ್ರತಿನಿಧಿಯೆಂದ ಮೇಲೆ ಅವನು ಹಿಂದುಸ್ಥಾನದ ಲೋಕಮತದಿಂದಲೆ ಆರಿಸಲ್ಪಟ್ಟವನೂ—ಅದರಲ್ಲಿಯೂ ಲೋಕಮತಾನುಯಾಯಿಯೂ ಆಗಬೇಕು. ಇದಾವುದಕ್ಕೂ ಎಡೆಯಿಲ್ಲದೆ ಸ್ಟೇಟ ಸೆಕ್ರೆಟರಿಯಂಥ ಅಧಿಕಾರಿಯು ತಾನು ಹಿಂದುಸ್ಥಾನದ ಪ್ರತಿನಿಧಿಯೆಂಬ ಹೆಸರನ್ನು ಧರಿಸಿ ಸಾಮ್ರಾಜ್ಯ ಪರಿಷತ್ತಿನ ಪಂಕ್ತಿಯಲ್ಲಿ ಒಂದು ಎಲೆಯನ್ನು ಹಿಡಕೊಂಡು ಕುಳಿತರೆ ಈ ಪ್ರತಿನಿಧಿತ್ವದ ಪ್ರಹಸನವು ಹಿಂದುಸ್ಥಾನದ ಉಪಹಸನಕ್ಕೆ ಒಂದು ಬಗೆಯಾದೀತು! ಇಷ್ಟರ ವರೆಗೆ ಈ ಪರಿಷತ್ತಿನಲ್ಲಿ ಸ್ಟೇಟ ಸೆಕ್ರೆಟರಿಯು ಸುಮ್ಮನೆ ಅಲಂಕಾರಕ್ಕೆಂಬಂತೆ ಕುಳಿತುಕೊಂಡು ಪರಿಷತ್ತಿನ ಅನುಗ್ರಹದಿಂದ ಎಲ್ಲ ಸಂಗತಿಗಳನ್ನು ಕೇಳುತ್ತಿದ್ದನು, ನೋಡುತ್ತಿದ್ದನು. ಮಾತ್ರ ಮತ ಕೊಡುವ ಅಧಿಕಾರವು ಅವನಿಗಿದ್ದಿಲ್ಲ. ಇನ್ನು ಮುಂದೆ ಪ್ರತಿನಿಧಿಯೆಂಬ ಹಕ್ಕಿನಿಂದ ಸ್ಟೇಟ ಸೆಕ್ರೆಟರಿಯು ಪರಿಷತ್ತನ್ನಲಂಕರಿಸಬಹುದು. ವಸಾಹತಿನವರ ಬಹುಮತದಲ್ಲಿ ತನ್ನದೊಂದು ಮತವನ್ನು ಕೂಡಿಸಬಹುದು. ಆ ಪ್ರಸಂಗವು ಹಿಂದುಸ್ಥಾನದ ಗುಣಾರ್ಥವಿರಬಹುದು, ಅವಗುಣದ್ದೂ ಇರಬಹುದು. ಇಂಥ ಸಂದರ್ಭದಲ್ಲಿ ಆ ಹಕ್ಕು ಯಾಕೆ? ಎಂದು ಉದ್ವೇಗದಿಂದ ಉದ್ಗಾರಗಳು ಬರುತ್ತವೆ. ಹಿಂದುಸ್ಥಾನಕ್ಕೆ ಪ್ರತಿನಿಧಿತ್ವದ ಹಕ್ಕನ್ನು ಕೊಟ್ಟ ಮೇಲೆ ಆ ಪ್ರತಿನಿಧಿಯು ಲೋಕಮತದಿಂದಲೆ ಮತ್ತು ಸರಕಾರಿ ಉದ್ಯೋಗಸ್ಥನಲ್ಲದವನೆ ಆರಿಸಲ್ಪಡುವುದು ವಿಹಿತವಾಗಿದೆ. ಈ ವಿಷಯದಲ್ಲಿ ಹಿಂದೀ ಲೋಕಮತವು ಸಕಾಲದಲ್ಲಿ ಜಾಗ್ರತೆಯನ್ನು ಹೊಂದಿ ಈ ನೂತನ ಪ್ರತಿನಿಧಿತ್ವದ ಲಾಭವು ನಾವು ಮೇಲೆ ಸೂಚಿಸಿದ ರೀತಿಯಲ್ಲಿ ಹಿಂದುಸ್ಥಾನಕ್ಕೆ ಉಪಯುಕ್ತವಾಗುವಂತೆ ಅದರ ಸಂಗಿನಲ್ಲಿ ಬಿದ್ದೀತೆಂಬ ಭರವಸೆ ಇದೆ.

ಸ್ಫುಟವಿಚಾರಗಳು.

೧. ಯುದ್ಧಸಾಲವನ್ನು ಎತ್ತುವ ಬಗ್ಗೆ ಇಲ್ಲಿಯ ಕೆನರಾ ಹ್ಯಾಸ್ಕೂಲಿನಲ್ಲಿ ಜಿಲ್ಲಾ ಕಲೆಕ್ಟರ್ ವಿ.! ವ್ಯಾಟರ್ಸ ದೊರೆಗಳವರ ಅಧ್ಯಕ್ಷತೆಯಲ್ಲಿ ಕೂಡಿದ ಇಲ್ಲಿಯ ಪುರಜನರ ಸಭಾ ವೃತ್ತಾಂತವನ್ನು ಸ್ಥಳೀಕ ವರ್ತಮಾನ ಸಂಗ್ರಹದಲ್ಲಿ ಪ್ರಕಟಿಸಿರುತ್ತೇವೆ. ಯುದ್ಧ ಸಾಲದ ಮೊಬಲಗು ಮುಂಬಯಿ ಮತ್ತು ಬಂಗಾಳ ಸಂಸ್ಥಾನದಲ್ಲಿ ಸಂಗ್ರಹಿಸಲ್ಪಟ್ಟಂತೆ ಮದ್ರಾಸು ಸಂಸ್ಥಾನದಲ್ಲಿ ಈ ತನಕ ಸಂಗ್ರಹಿಸಲ್ಪಡಲಿಲ್ಲವೆಂಬ ದೂರು ಇರುವದು. ಈ ದೂರಿನ ಕಾರಣಗಳು ಹೇಗಿದ್ದರೂ ಇದು ನಮ್ಮ ಜಿಲ್ಲೆಗೆ ಅನ್ವಯವಾಗ, ತಕ್ಕದ್ದಲ್ಲವೆಂತ ಮಂಗಳೂರಿನವರು ದೃಷ್ಟಾಂತ ಪೂರ್ವಕ ತೋರಿಸಿರುತ್ತಾರೆ. ಯುದ್ಧ ಸಾಲದ ಮಟ್ಟಿಗೆ ನಾವು ಮದ್ರಾಸಿಗೆ ಸೇರಿದವರಲ್ಲ ಮುಂಬಯಿಗೆ ಸೇರಿದವರು ಮುಂಬಯಿಯವರ ಅನುಯಾಯಿಗಳೆಂದು ಹೇಳಲೂ ಬಹುದು. ಸಭೆಯು ಸೇರಿ ಆಗಲುವಷ್ಟರೊಳಗೆ ರೈತವಾರಿ ಜಮೀನುಗಳಿಂದಲೆ ತುಂಬಿರುವ ಈ ಬಡ ಜಿಲ್ಲೆಯವರಾದ ಮಂಗಳೂರಿನವರು ಒಂದು ಲಕ್ಷ ಸುಮಾರು ೬೦ ಸಾವಿರ ರೂಪಾಯಿಗಳ ಸಾಲದ ಮೊಬಲಗುಗಳನ್ನು ವಾಗ್ದಾನ ಮಾಡಿರುತ್ತಾರೆ! ಕಾಫಿಯು ಪರದೇಶಗಳಿಗೆ ಕಳುಹಿಸೋಣಾಗಲಿಕ್ಕೆ ತಡೆಯು ಬಂದುದಿದ್ದು ಕಾಫಿಯ ಕ್ರಯವು ಬಹಳ ತಗ್ಗಿದೆ, ಜಿಲ್ಲೆಯ ಇತರ ಉತ್ಪತ್ತಿಗಳಾದ ಗೇರುಬೀಜ ಮೊದಲಾದವು ಸಹ ಹೊರಹೋಗದೆ ಹಣದ ಅಡಚಣೆಯು ವಿಶೇಷವಾಗಿದೆ, ಮಳೆಗಾಲವು ಸಮೀಪಿಸುತ್ತದರಿಂದ ಸಮಸ್ತ ಸಾಮಗ್ರಿಗಳನ್ನು ತುಂಬಿಸಿಡುವ ಕಾಲ, ಇಂಥಾ ಕಾಲದಲ್ಲಿ ಸಹ ತಮ್ಮ ವ್ಯಾಪಾರವಾದ ಅಡಚಣೆಗಳನ್ನು ಗಣನೆಗೆ ತಾರದೆ ಊರು ಎಲುವಷ್ಟರೊಳಗೆ ಇಲ್ಲಿಯ ಪಟ್ಟಣಿಗರು [illegible] ಇಲ್ಲಿಯ ರಾಜನಿಷ್ಠೆಯ ಸ್ವಭಾವವು ಎಂಥಾದ್ದೆಂಬುವದು ಇದರಿಂದ ವ್ಯಕ್ತವಾಗುವದು. ಸಾಧಾರಣ ಮೂರು ಯಾ ನಾಲ್ಕು ಸಾವಿರ ರೂಪಾಯಿಗಳು ಹುಟ್ಟಬಹುದೆಂಬ ನಿರೀಕ್ಷಣೆಯಿಂದ ಇತ್ತಲಾಗೆ ಏರ್ಪಡಿಸಿದ ವೂರ್‌ಫಂಡ್ ಷೇಟಿನಲ್ಲಿ ರೂ. ೧೧,೦೦೦ವನ್ನು ಸಂಗ್ರಹಿಸಿ ಕೊಟ್ಟ ಈ ಜಿಲ್ಲೆಯ ಜನರಿಗೆ ಸರಕಾರದಿಂದ ಬಡ್ಡಿ ಪಡದು ಹಣ ಸಾಲಕೊಡುವ ವಿಷಯದಲ್ಲಿ ವಿಶೇಷವಾಗಿ ಹೇಳತಕ್ಕದ್ದು ತನಗೇನೂ ಆಗತ್ಯತೋರದು—ಎಂತ ಜಿಲ್ಲಾ ಕಲೆಕ್ಟರರ ಶ್ಲಾಘನೆಗೆ ಈ ಜಿಲ್ಲೆಯ ಜನರು ಹೇಗೆ ಪಾತ್ರರಿದ್ದಾರೆಂಬುದು ಸಾಲವನ್ನು ಎತ್ತಲು ಇಲ್ಲಿ ನಡಿಸಿದ ಪ್ರಥಮ ಪ್ರಯತ್ನದ ಫಲದಿಂದ ತೋರಿಬರುವದು. ಈ ಪಟ್ಟಣದ ಆಯಾ ಜಾತಿ ಮತಸ್ಥರ ಪ್ರತಿನಿಧಿಗಳುಳ್ಳ ದೊಡ್ಡದೊಂದು ಕಮ್ಮಿಟಿಯು ಸಾಲಗಳನ್ನು ಸಂಗ್ರಹಿಸುವ ಬಗ್ಗೆ ಏರ್ಪಡಿಸಲ್ಪಟ್ಟಿರುವದು. ಜಿಲ್ಲೆಯ ಎಲ್ಲಾ ಮುಖ್ಯ ಪಟ್ಟಣಗಳಲ್ಲಿಯೂ ಇದೇ ರೀತಿ ಸಭೆಗಳು ಕಮ್ಮಿಟಿಗಳು ಏರ್ಪಟ್ಟು ಮಂಗಳೂರಿನ ಮುಂದಾಳುಗಳು ತೋರಿಸಿರುವ ಉದಾಹರಣೆಯನ್ನು ಅನುಸರಿಸದೆ ಇರರೆಂಬುದಾಗಿ ಕೋರುತ್ತೇವೆ. ಸಾಲದ ಶರ್ತಗಳೇನು, ಮೊದಲಾದ ವಿವರವುಳ್ಳ ಪ್ರಕಟಣೆಯನ್ನು ಕಳೆದ ನಾಲ್ಕು ಸಂಚಿಕೆಗಳಲ್ಲಿ ಪ್ರಕಟಿಸಿರುತ್ತೇವೆ. ಪ್ರತಿ ಟಪ್ಪಾಲು ಆಫೀಸುಗಳಲ್ಲಿಯೂ ತಾಲೂಕು ಕಚೇರಿಗಳಲ್ಲಿಯೂ ಇದರ ಮಾಹಿತಿಯು ಬೇಕಾದವರಿಗೆ ದೊರಕುತ್ತದೆ. ಸರಕಾರದ ನೌಕರರಿಗೆ ಸಹ ಸಾಲಪತ್ರಗಳನ್ನು ಪಡೆಯಲು ಅನುಕೂಲವಾಗುವಂತೆ ಮೊಬಲಗುಗಳನ್ನು ತಿಂಗಳುಕಟ್ಟಿಯಲ್ಲಿ ಕೊಡುವ ನವೀನ ಒಂದು ಏರ್ಪಾಡು ಸಹ ಮಾಡೋಣಾಗಿದೆ. ಸಾಲಪತ್ರಗಳನ್ನು ಪಡಿಯಲು ಇಷ್ಟವುಳ್ಳ ಖಾಸಗಿ ಜನರಿಗೆ ಮದ್ರಾಸು ಹೆಡ್ ಆಫೀಸಿನಲ್ಲಿರುವ ಚಾರ್ತದರಕ್ಕಿಂತ ಸೇಕಡಾ ಎರಡರಂತೆ ಕಡಿಮೆಯಾದ ದರದ ಬಡ್ಡಿಯಲ್ಲಿ ಇಲ್ಲಿಯ ಮದ್ರಾಸು ಬೇಂಕಿನವರು ಹಣ ಸಾಲಕೊಡುವರು. ಹೀಗೆ ಬೇಂಕಿನಿಂದ ಪಡದ ಹಣದಿಂದ ಸಾಲಪತ್ರಗಳನ್ನೆ ಕೊಂಡುಕೊಳ್ಳಬೇಕು.

೨. ಉತ್ತರ ಬಿಹಾರ ಪ್ರಾಂತದ ಚಂಪಾರಾಣ ಜಿಲ್ಲೆಯ ಮೆಜಿಸ್ಟ್ರೇಟರು ಸುಪ್ರಸಿದ್ಧ ದೇಶಭಕ್ತರಾದ ಶ್ರೀಯುತ ಗಾಂಧಿಯವರಿಗೆ ಆ ಜಿಲ್ಲೆಯನ್ನು ಬಿಡಲು ಒಂದು ನೋಟಿಸನ್ನು ಕೊಟ್ಟಿರುವರು. ಉತ್ತರ ಬಿಹಾರದಲ್ಲಿ ನೀಲಿತೋಟಗಳು ಬಹಳ ಇರುವುದರಿಂದ ಅಲ್ಲಿಯ ತೋಟಗರಿಗೂ ಕೂಲಿಗಳಿಗೂ ಹಿಂದಿನಿಂದಲೆ ಸರಿಬೀಳುತ್ತಿರಲಿಲ್ಲ. ತಿರಹೂತಿನೊಳಗಿನ ತೋಟಗರ ಮತ್ತು ಅವರ ಕೂಲಿಗಳ ಸಂಬಂಧವು ಹ್ಯಾಗಿದೆಂಬುದನ್ನು ಪರಿಶೋಧಿಸುವುದಕ್ಕಾಗಿ ಸರಕಾರಿ—ಬಿನ್‌ಸರಕಾರಿ ಗೃಹಸ್ಥರ ಒಂದು ಕಮಿಟಿಯನ್ನು ನೇಮಿಸುವ ವಿಷಯದಲ್ಲಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕೆಂದು ಕಳೆದ ರಾಷ್ಟ್ರೀಯ ಸಭೆಯಲ್ಲಿ ಒಂದು ಠರಾವು ಪಾಸಾಗಿತ್ತು. ಶ್ರೀ ಗಾಂಧಿಯವರು ಆ ಸಮಯದಲ್ಲಿಯೆ ಕೂಲಿಗಳ ಸ್ಥಿತಿಯ ಅನುಭವವನ್ನು ಪಡಕೊಳ್ಳುವುದಕ್ಕಾಗಿ ಆ ಜಿಲ್ಲೆಯನ್ನು ಸಂದರ್ಶಿಸಲು ಅಭಿವಚನವಿತ್ತಿದ್ದರು. ಅದರಂತೆ ಅವರು ಕಳೆದ ವಾರದಲ್ಲಿ ಚಂಪಾರಾಣ ಜಿಲ್ಲೆಯನ್ನು ಸಂದರ್ಶಿಸಲು ಹೋದಾಗ ಅಲ್ಲಿಯ ಮೆಜಿಸ್ಟ್ರೇಟರು (ಕ್ರಿ. ಪ್ರೊ.)ಕೋಡಿನ ೧೪೪ನೆ ಕಲಮಿನ ಪ್ರಕಾರ ಜಿಲ್ಲೆಯನ್ನು ಬಿಟ್ಟುಹೋಗುವ ವಿಷಯದಲ್ಲಿ ಆಜ್ಞೆಯನ್ನು ಕೊಟ್ಟಿರುವರು. ಆದರೆ ನೀತಿ ಧೈರ್ಯಶಾಲಿಗಳಾದ ಗಾಂಧಿಯವರು ಈ ಹುಕುಮನ್ನು ಲಕ್ಷಿಸಲಿಲ್ಲ. ಮಾರನೆ ದಿನ ಆ ಗಾಂಧಿಯವರು ಮುಝಫರಪುರಕ್ಕೆ ಬಂದು ಅಲ್ಲಿ ಡಿವಿಜನ್ ಕಮಿಷನರನ್ನೂ ಮತ್ತು ತೋಟಿಗರ ಸೆಕ್ರೆಟರಿ ಮುಂತಾದವರನ್ನು ಕಂಡರು. ಕಮಿಷನರು "ಈ ವಿಷಯದಲ್ಲಿ ಸರಕಾರವು ಚೌಕಶಿ ಮಾಡುತ್ತಿದೆ. ನೀವು ಮಾಡುವುದು ಅವಶ್ಯವಿಲ್ಲೆಂಬುದಾಗಿ ಹೇಳಿದರು. ಆಗ ಗಾಂಧಿಯವರು "ನೀವು ನನಗೆ ಸಹಾಯ್ಯ ಮಾಡುತ್ತೀರಿ. ನಾನು ಸಹ ನಿಮಗೆ ಅವಶ್ಯ ಸಹಾಯ್ಯ ಮಾಡುತ್ತೇನೆಂಬುದಾಗಿ ಉತ್ತರ ಕೊಟ್ಟರು. ಈ ರೀತಿಯಿಂದ ಪ್ರಶ್ನೋತ್ತರಗಳಾದ ಮೇಲೆ ಶ್ರೀಯುತ ಗಾಂಧಿಯವರು ಮೊತಿಹರಿ ಎಂಬಲ್ಲಿಗೆ ಮುಂದರಿಸಿ ಕೆಲವು ಹಳ್ಳಿಗಳನ್ನು ದಾಟಿಹೋಗುವಷ್ಟರಲ್ಲಿ ಅವರ ಮೇಲೆ ನೋಟಿಸನ್ನು ಜಾರಿಮಾಡಿದರು. ನೋಟಿಸಿನಲ್ಲಿ ಯಾವ ಶರ್ತಗಳನ್ನೂ ತೋರಿಸಿದ್ದಿಲ್ಲ. ಗಾಂಧಿಯವರು ಕೋರ್ಟಿನಲ್ಲಿ ಹಾಜರಾಗಿ ಸ್ವಪಕ್ಷವನ್ನು ಸಮರ್ಥಿಸಿರುವರು. ಮೆಜಿಸ್ಟ್ರೇಟರು ತೀರ್ಮಾನವನ್ನು ಮುಂದರಿಸಿಟ್ಟರು.

೩. ದೇಶಭಕ್ತರಾದ ಗಾಂಧಿಯವರಿಗೆ ಮೇಲೆ ತೋರಿಸಿದಂತೆ ಡಿ. ಮೇಜಿಸ್ಟ್ರೇಟರು ಜಿಲ್ಲೆಯಿಂದ ಹೊರಗೆ ಹೋಗಲು ಹುಕುಮು ಕೊಟ್ಟಿದ್ದರೂ ಕಾನೂನಿನ ಮರ್ಯಾದೆಯನ್ನು ಉಲ್ಲಂಘಿಸಿರುವ ಆ ಹುಕುಮನ್ನು ಮೇಜಿಸ್ಟ್ರೇಟರಿಗೆ ಸ್ವಯಮೇವ ಹಿಂದಕ್ಕೆ ತೆಕ್ಕೊಳ್ಳಬೇಕಾಯಿತು. ಮೇಜಿಸ್ಟ್ರೇಟರ ಈ ಹುಡುಗಾಟವನ್ನು ನೋಡಿ ವಿಚಾರವಂತರ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳು ಬಾರದೆ ನಿಲ್ಲವು. ಮೇಜಿಸ್ಟ್ರೇಟರು ಪೂರ್ವಾಪರ ವಿಚಾರಮಾಡದೆ ಹುಕುಮನ್ನು ಮಾಡಿದ್ದು ಯಾಕೆ? ಮತ್ತು ಅದನ್ನು ಹಿಂದಕ್ಕೆ ತೆಕ್ಕೊಂಡಿದ್ದು ಯಾಕೆ? ಈ ಪ್ರಶ್ನೆಗಳು ಬರೆ ಈ ಒಂದು ದೃಷ್ಟಾಂತದಿಂದ ಮನಸ್ಸಿನಲ್ಲಿ ಬರುತ್ತವೆಂದಲ್ಲ, ಎಷ್ಟೋ ಪ್ರಸಂಗಗಳಲ್ಲಿ ಬರುವವು. ಲೋಕಮತಕ್ಕೆ ಜವಾಬುದಾರವಾಗದ ಬ್ಯುರೊಕ್ರಸಿಯು ನಿರಂಕುಶವಾದ ಪ್ರಭುತ್ವವನ್ನು ನಡಿಸಿ ಈ ರೀತಿ ತಪ್ಪುಬೀಳುವುದು ಆದುದರಿಂದಲೆ ಹಿಂದೂಸ್ಥಾನದವರು ಕಾರ್ಯನಿರ್ವಾಹಕ ಮಂಡಲವು ಕಾಯಿದೆ ಕೌನ್ಸಿಲಿಗೆ ಅಧೀನವಾಗಿರಬೇಕು, ಆ ಕಾಯಿದೆ ಕೌನ್ಸಿಲು ಲೋಕಮತ ನಿದರ್ಶಕವಾಗಿರಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಸ್ವರಾಜ್ಯವೆಂದರೆ ಇದೆ, ಬೇರೆ ಏನೂ ಅಲ್ಲ. ಈ ದೃಷ್ಟಿಯಿಂದ ಬ್ಯುರೊಕ್ರಸಿಯು ಈ [illegible] ಲೋಕಮತದ [illegible]

ಮನ್ನು ಹೊರಪಡಿಸಿ ನಿಷ್ಕಾರಣವಾಗಿ ಅವ್ಯಾಪಾರೇಷು ವ್ಯಾಪಾರವನ್ನು ಮಾಡುವ ಪ್ರಸಂಗವು ಬರುತ್ತಿತ್ತೆ?

೪. 'ಮಿ. ಕರ್ಟಿಸ್' ಅವರ "ರೌಂಡ್ ಟೇಬಲ್" ಈ ಎರಡು ಹೆಸರುಗಳು ಕಳೆದ ದಶಂಬರ-ಜನವರಿ ತಿಂಗಳಲ್ಲಿ ಹಿಂದೂಸ್ಥಾನದೊಳಗಿನ ವರ್ತಮಾನಪತ್ರ ವಾಚಕರಿಗೆ ಹೆಚ್ಚು ಪರಿಚಿತವಾಗಿದ್ದವು. ಹಿಂದೂಸ್ಥಾನದ ಮೇಲೆ ಈಗ ಇಂಗ್ಲಂಡ ಅತ್ತೆಯ ಸತ್ತೆಯು ನಡೆಯುವಂತೆ ಯುದ್ಧಾಂತ್ಯದಲ್ಲಿ ಆಗತಕ್ಕ ಮಾರ್ಪಾಟಿನಿಂದ ಕೊಲೊನಿಗಳೆಂಬ ನೆರೆಯವರ ಅಧಿಕಾರವು ಸಹಾ ನಡೆಯಬೇಕೆಂಬ ಇವರ ತಾತ್ಪರ್ಯವಿತ್ತು. ಇದು ತತ್ಕಾಲದಲ್ಲಿಯೆ ಹೊರಬಿದ್ದ ಕಾರಣ ರಾಷ್ಟ್ರೀಯ ಸಭೆ, ಹೋಮ್ ಲೀಗ್, ಬೇರೆ ಸಾರ್ವಜನಿಕ ಸಂಸ್ಥೆಗಳು, ವರ್ತಮಾನ ಪತ್ರಿಕೆಗಳು, ಬೇರೆ ಬೇರೆ ವಕ್ತಾರ ಭಾಷಣಗಳು ಕೂಡಿ ಕರ್ಟಿಸ್ಸರ ಹೇತುವನ್ನೂ ಚಳವಳವನ್ನೂ ತೀವ್ರ ಶಬ್ದದಿಂದ ನಿಷೇಧಿಸಿದ ಕಾರಣ ಈ ಕ್ಷುಬ್ಧಲೋಕಮತದ ಭಾರದಿಂದ ಮಿ. ಚೇಂಬರಲೇನರಿಗೆ ತುಂಬಿದ ಪಾರ್ಲಿಮೆಂಟಿನಲ್ಲಿ ಕರ್ಟಿಸರ ಕುಟಿಲನೀತಿಯ ಇತಿಶ್ರೀಯನ್ನು ಮಾಡಬೇಕಾಗಿ ಬಂತು. ಈ ಎಲ್ಲ ಸಂಗತಿಗಳನ್ನು ನಾವು ಆಗಲೆ ವಾಚಕರಿಗೆ ತಿಳಿಸಿದ್ದೇವೆ. ಹಿಂದೀ ಲೋಕಮತದ ನಿಷೇಧ ಹಾಗು ಚೆಂಬರಲೇನರ ಅಂಕುಶ ಇವುಗಳಿಂದ ಕರ್ಟಿಸರಿಗೆ ಕಣ್ಣಿನಲ್ಲಿ ಸರಿಯಾಗಿ ಅಂಜನ ಹಾಕಿದ್ದಂತಾಗಿ ಅವರು ಈಗ ಪಶ್ಚಾತ್ತಾಪಪಟ್ಟು ತಮ್ಮ ಮೊದಲಿನ ಮತಗಳನ್ನು ಹಿಂದಕ್ಕೆ ತೆಕ್ಕೊಂಡಿದ್ದಾರೆ. 'ತನ್ನ ಮೊದಲಿನ ಮತವು ಅನುಭವಶೂನ್ಯವಾಗಿದ್ದುದರಿಂದ ಅದರಲ್ಲಿ ಅನೇಕ ತಪ್ಪುಗಳಿದ್ದವು ಅವುಗಳನ್ನು ತಾನು ಒಪ್ಪಿಕೊಳ್ಳತಕ್ಕದೆಂದು ಹೇಳಿ ಕರ್ಟಿಸರು ನ್ಯಾಯವಾದ ತಪ್ಪುಗಳನ್ನು ಒಪ್ಪಿಕೊಳ್ಳದವನು ರಾಜಕೀಯ ವ್ಯವಹಾರವನ್ನರಿತವನಲ್ಲೆಂದು ಹೇಳುತ್ತಾರೆ. ಈ ಪ್ರಕಾರ ಕರ್ಟಿಸರು "ಪಶ್ಚಾತ್ತಾಪೇನ ಶುದ್ಧ್ಯತಿ' ಎಂಬ ನ್ಯಾಯದಂತೆ ಶುದ್ಧರಾಗಲು ಯತ್ನಿಸುತ್ತಿದ್ದಾಗ್ಯೂ ಕುಟಿಲ ನೀತಿಯು ಅಲ್ಪಸ್ವಲ್ಪ ಆಶ್ರಯವನ್ನು ಇನ್ನೂ ಬಿಟ್ಟಿಲ್ಲ. 'ಹಿಂದೂಸ್ಥಾನವು ಅಸ್ವಾತಂತ್ರ್ಯದಲ್ಲಿಯೆ ಇರುವುದಾದುದರಿಂದ ಇದಕ್ಕೆ ಪಾರ್ಲಿಮೆಂಟಿನಲ್ಲಿ ಪ್ರತಿನಿಧಿತ್ವದ ಹಕ್ಕು ಸಿಗಲಾರದು. ಆದರೆ ಸಾಮ್ರಾಜ್ಯ ಪರಿಷತ್ತಿನ ಸತ್ತೆಯಲ್ಲಿ ಸೇರಿದರೆ ಅದರಲ್ಲಿ ಒಂದು ತರದ ಪ್ರತಿನಿಧಿತ್ವವು ಇದಕ್ಕೆ ಲಭಿಸೀತು. ಹಾಗಿರುವಾಗ ಇದು ಒಳ್ಳೇದೊ ಅದೊ? ಎಂದು ಕರ್ಟಿಸರು ಕೇಳುವರು. ಕರ್ಟಿಸರ ಈ ಆಕಾಂಕ್ಷೆಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೇಳುವ ಹಿಂದೂಸ್ಥಾನವು ಬೇರೆ ಸ್ವತಂತ್ರವಾದ ಉತ್ತರ ಕೊಡಬೇಕಾದ ಅಗತ್ಯವಿಲ್ಲ.'

೫. ವ್ಯಾಪಾರ, ಕೆಲಸ ಮೊದಲಾದ ವೃತ್ತಿಗಳಿಂದ ವಸಾಹತುಗಳಲ್ಲಿ ಹೋಗಿ ಹಿಂದೀ ಜನರು ಜೀವಿಸುತ್ತಿರುತ್ತಾರೆ. ಈ ಹಿಂದೂಸ್ಥಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಬೇರೆ ಬೇರೆ ವಸಾಹತುವಾಸಿಗಳಾದ ಗೌರಕಾಯರು ದೊಡ್ಡ ದೊಡ್ಡ ಉದ್ಯೋಗದ ಮೇಲೂ ವ್ಯಾಪಾರ ಮುಂತಾದ ವೃತ್ತಿಯ ಮೇಲೂ ಬಂದು ಮಾನ್ಯತೆಯಿಂದ ಬೇಕಷ್ಟು ಹಣವನ್ನು ದುಡಿದು ಸ್ವದೇಶಕ್ಕೆ ಹೋಗುತ್ತಾರೆ. ಇಂಥವರನ್ನು ತಡೆಯುವವರು ಇಲ್ಲಿ ಯಾರೂ ಇಲ್ಲ. ಇಲ್ಲಿ ಇವರ ಸಂಚಾರವು ಅನಿರುದ್ಧವಾದುದು. ಆದರೆ ಹಿಂದಿ ಗೃಹಸ್ಥನು ವಸಾಹತುಗಳಲ್ಲಿ ಹೋಗಿ ವಾಸಿಸುವುದೆಂದರೆ ಸ್ವಪ್ನೇಪಿ ಕಷ್ಟಸಾಧ್ಯವು. ಅಲ್ಲಿ ಹಲವು ಬಗೆಯ ಕಾಯಿದೆಗಳಿರುವವು, ಒಂದನೆದಾಗಿ ಹಿಂದಿ ಗೃಹಸ್ಥನಿಗೆ ಕೆಲವು ವಸಾಹತುಗಳಲ್ಲಿ ಪ್ರವೇಶವೆ ಇಲ್ಲ. ಕೆಲವು ಕಡೆಗಳಲ್ಲಿ ಪ್ರವೇಶವನ್ನು ಪಡೆದರೂ ಮೇಲೆ ಹೇಳಿದಂತೆ ಅಲ್ಲಿಯ ತ್ರಾಸದಾಯಕ ಮತ್ತು ಅಪಮಾನಕಾರಕ ಕಾನೂನುಗಳಿಂದ ಇವನ ಜೀವಿತವು ಬಹು ಸಂಕೋಚವಾಗುತ್ತ ಬರುವುದು. ಈ ಕಷ್ಟಮಯ ಸ್ಥಿತಿಯ ಕುರಿತು ಏನಾದರೂ ಪರಿಹಾರವು ದೊರಕಬಹುದೆಂತ ಇಲ್ಲಿಯ ಪ್ರಜೆಗಳಿಗೆ ನಂಬಿಕೆ ಇದೆ. ಪರಂತು, "ಕೊಲೊನಿಯಲ್ ಎಮಿಗ್ರೇಶನ್ ಕೊನ್‌ಫರನ್ಸಿ"ನಲ್ಲಿ ಹಿಂದೂಸ್ಥಾನದ ಕಡೆಯಿಂದ ಸರಕಾರವು ಆರಿಸಿದ ಪ್ರತಿನಿಧಿಗಳನ್ನು ನೋಡುವಾಗ ಆ ನಂಬಿಕೆಯೊಡನೆ ಅಂಜಿಕೆಯೂ ಉಂಟಾಗಿದೆ. ಒಂದು ದೇಶದಿಂದ ಇನ್ನೊಂದು ದೇಶದಲ್ಲಿ ವಸಾಹತು ಮಾಡುವ ಪ್ರಶ್ನೆಯ ಕುರಿತು ಚರ್ಚಿಸಲಿಕ್ಕಿರುವ ಈ ಪರಿಷತ್ತಿನಲ್ಲಿ ಹಿಂದೂಸ್ಥಾನದ ಕಡೆಯಿಂದ ಮಿ. ಸತ್ಯೇಂದ್ರಪ್ರಸನ್ನ ಸಿಂಹ ಇವರೊಬ್ಬರೆ ಹಿಂದಿ ಗೃಹಸ್ಥರಲ್ಲದೆ ಬೇರೆ ಇಬ್ಬರು ಯುರೋಪಿಯನರಿರುವರು. ಹಿಂದೂಸ್ಥಾನದ ಪ್ರತಿನಿಧಿಗಳೆಂದಾದ ಮೇಲೆ ಹಿಂದೀಗಳನ್ನು ಆರಿಸಬೇಕಲ್ಲದೆ ಬೇರೆಯವರನ್ನು ಆರಿಸುವುದು ಹೇಗೆ ಯುಕ್ತವಾದೀತು? ಗೋಧಿವರ್ಣೀಯರ ಸ್ಥಿತಿಗತಿಗಳನ್ನು ಭೀಮರಕಾಯರು ಹೇಳುವುದು ಹೇಗೆ ವ್ಯವಹಾರ್ಯವಾದೀತು? ವಸಾಹತುಗಳ ಕಡೆಯಿಂದ ಬಹು ಜನ ಪ್ರತಿನಿಧಿಗಳು ಬಹುಮೋಪಗಳಿಂದ ಸ್ವಹಿತವನ್ನು ಸಾಧಿಸುವಾಗ ಸಿಂಹರಾದರೂ ಹಿಂದೂಸ್ಥಾನದ ಹಿತವನ್ನು ಎಷ್ಟೆಂದು ಸಾಧಿಸ್ಯಾರು? ಪರದೇಶದಲ್ಲಿ ಹಿಂದಿಗಳಿಗೆ ಯಾವ ಯಾವ ಕಷ್ಟ ವಿಪತ್ತುಗಳು ಒದಗುತ್ತವೆಂಬುದನ್ನು ಪ್ರತ್ಯಕ್ಷ ಅನುಭವದಿಂದ ತಿಳಿದಿದ್ದ ಶ್ರೀಯುತ ಗಾಂಧಿಯವರಂಥ ಸದ್ಗೃಹಸ್ಥರಿರುವಾಗ ಅವರನ್ನು ಆರಿಸದೆ ಸರಕಾರವು ಯುರೋಪಿಯನರನ್ನು ಹಿಂದೂಸ್ಥಾನದ ಪ್ರತಿನಿಧಿಗಳನ್ನಾಗಿ ಆರಿಸುತ್ತದೆ. ಈ ವ್ಯತ್ಯಸ್ತಕ್ರಮದಿಂದ ಇಲ್ಲಿಯ ಲೋಕಮತವು ಕಲಕದೆ ಇರದು.

೬. ಯುದ್ಧವು ಭೀಕರವಾದ ಮತ್ತು ಆಶ್ಚರ್ಯಕರವಾದ ಎಂಥೆಂಥಾ ನೂತನ ಚಮತ್ಕೃತಿಗಳಿಂದಲೂ ನವೀನ ಆಯುಧಗಳಿಂದಲೂ ನಡೆಯುತ್ತಿರುವುದು ವಾಚಕರಿಗೆ ಗೊತ್ತಿರುವದು. [illegible]

[illegible]

ಬ್ರಿಟಿಷ ಬ್ಲೊಕೇಡ್ ಅಂದರೆ ಬ್ರಿಟಿಷರು ಜರ್ಮನಿಯ ಸಮುದ್ರ ವ್ಯಾಪಾರವನ್ನು ನಿಲ್ಲಿಸಿಬಿಟ್ಟದ್ದರಿಂದ ಶತ್ರುಗಳ ರಾಜ್ಯದಲ್ಲಿ ಹಸಿವೆಯ ಬಾಧೆಯು ಬಹಳ ವಿಪರೀತವಾಗಿ ಜನರು ಅಸಂತುಷ್ಟರಾಗುತ್ತಿದ್ದಾರೆ. ಇಂಥಾ ಬಾಧೆಯನ್ನು ಮಿತ್ರರ ರಾಜ್ಯಗಳಲ್ಲಿಯೂ ಉಂಟುಮಾಡಬೇಕೆಂತ ಜರ್ಮನಿಯು ಪ್ರಕೃತ ತನ್ನ 'ಯು' ಬೋಟಿಗಳ ಮೂಲಕ ಸಿಕ್ಕಿದ ಹಡಗಗಳನ್ನೆಲ್ಲ ಹುಚ್ಚರಂತೆ ನಾಶಗೊಳಿಸಲು ಸಾಧನೆಮಾಡುತ್ತದೆ. ಈ ಹುಚ್ಚು ಕಾಟವನ್ನು ಆಟೋಪಿಸುವ ಪ್ರಯತ್ನವನ್ನು ಬ್ರಿಟಿಷರು ಬಹಳ ವ್ಯವಸ್ಥೆಯಿಂದ ಮಾಡುತ್ತಿದ್ದಾರೆ. ಸಾಮಾಗ್ರಿಗಳನ್ನು ವೈಯ್ಯಲು ಬೇಕಾದ ಹಡಗಗಳನ್ನು ಬಹಳವಾಗಿ ಕಟ್ಟಿಸುತ್ತಿರುವರು. ಅಮೇರಿಕದಲ್ಲಿ ಲಕ್ಷ ಕಟ್ಟಳೆಯ ಟನ್ನುಗಳ ಭರಾವಣೆಯ ಹಡಗಗಳು ತಯ್ಯಾರಾಗುತ್ತಿದ್ದಾವೆ. ಇಷ್ಟೇ ಅಲ್ಲ. ಆಹಾರಸಾಮಾಗ್ರಿಗಳ ಬೆಳೆಯು ಧಾರಾಳವಾಗಿ ಬೆಳಸುವಂತೆ ಬ್ರಿಟಿಷ ದ್ವೀಪಗಳಲ್ಲಿಯೂ ಮಿತ್ರರ ರಾಜ್ಯಗಳಲ್ಲಿಯೂ ಸಮಗ್ರವಾದ ಪ್ರಯತ್ನಗಳು ನಡಿಯುತ್ತಿವೆ. ಮತ್ತು ಜನರು ಆಹಾರಸಾಮಾಗ್ರಿಗಳನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸುವಂತೆ ಬೇಕಾದ ಕ್ರಮಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಈ ವಿಷಯದಲ್ಲಿ ಬ್ರಿಟಿಷ್ "ಫೂಡ್ ಕಂಟ್ರೋಲರ್"ರಾಗಿರುವ ಡವನ್ ಪೋರ್ಟ ಪ್ರಭುಗಳು ಜನರಿಗೆ ಒಂದು ವಿಜ್ಞಾಪನೆಯನ್ನು ಬರೆದಿರುವರು. ಈ ವಿಜ್ಞಾಪನೆಯಲ್ಲಿ ಪ್ರತಿಯೊಬ್ಬನಿಗೆ ಒಂದು ಹಪ್ತೆಯಲ್ಲಿ ಬೇಕಾಗಿರುವಂಥಾ ಮಾಂಸ, ಸಕ್ಕರೆ ಮತ್ತು ಬ್ರೆಡ್ ಇವುಗಳ ಪರಿಮಾಣವು ಸೂಚಿಸೋಣಾಗಿದೆ. ಇಂಥಾ ಮಿತಿಗಳನ್ನು ಆಹಾರದಲ್ಲಿ ಕಲ್ಪಿಸಿಕೊಂಡರೆ ಒಂದು ವರುಷದಲ್ಲಿ ಈ ಆಹಾರ ಜಿನಸುಗಳಲ್ಲಿ ಸುಮಾರು ೧,೦೦೦,೦೦೦ ಟನ್ನುಗಳಂತೆ ಆಹಾರ ಸಾಮಾಗ್ರಿಗಳು ಉಳಿಯುವವು. ಆಹಾರದ ಮಿತಿಯನ್ನು ಕಲ್ಪಿಸಿ ಹೇಳುವಾಗ ಜನರ ಸಾಮಾನ್ಯವಾದ ಅಭ್ಯಾಸಗಳನ್ನು ಪರ್ಯಾಲೋಚಿಸಿರುವರು. ಅಭಿಮಾನಪೂರ್ವಕ ಬ್ರಿಟಿಷ ಜನಾಂಗವು ಡವನ್‌ಪೋರ್ಟ ಪ್ರಭುಗಳ ಈ ವಿಜ್ಞಾಪನೆಯಲ್ಲಿ ಸೂಚಿಸೋಣಾದ ಆಹಾರಉಪಯೋಗದ ಕ್ರಮಗಳನ್ನು ಜಾರಿಗೆ ತರಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಇದರ ಜಾರಿಯನ್ನು ಹೀಗೆ ಅಭಿಮಾನಕ್ಕೆ ಬಿಟ್ಟುಕೊಡುವುದು ಯುಕ್ತವಲ್ಲವೆಂತ ಅಲ್ಲಿಯ ವರ್ತಮಾನಪತ್ರಿಕೆಗಳಲ್ಲಿ ಕೆಲವು ಸೂಚಿಸುತ್ತವೆ. ಮಿತ್ರವರ್ಗವನ್ನು ಇತ್ತಲಾಗೆ ಸೇರಿದ ಅಮೇರಿಕಾದವರು ಯುದ್ಧದ ಈ ನವೀನ ಸಾಧನಕ್ಕೆ ಪ್ರತಿ ಕ್ರಿಯೆಯನ್ನು ಮಾಡುತ್ತಿರುವರು. ರಷ್ಯಾ, ಫ್ರಾನ್ಸ್, ಬ್ರಿಟಿಷ ಮೊದಲಾದ ಮಿತ್ರ ರಾಷ್ಟ್ರಗಳಿಗೆ ವಿಶೇಷವಾದ ಆಹಾರಸಾಮಾಗ್ರಿಗಳು ಯುದ್ಧಕಾಲದಲ್ಲಿಯೂ ಯುದ್ಧವು ಮುಗಿದನಂತರವೂ ಬೇಕಾಗುವದೆಂದು ನಿರೀಕ್ಷಿಸಿಕೊಂಡು ಪ್ರೆಸಿಡೆಂಟ ವಿಲ್ಸನರವರು ಭೂವ್ಯವಸಾಯವನ್ನು ವಿಶೇಷವಾಗಿ ಮಾಡಬೇಕೆಂತ ಪ್ರಜಾವರ್ಗಕ್ಕೆ ಒಂದು ಸಂದೇಶವನ್ನು ಕೊಟ್ಟಿರುವರು. ಹೀಗೆ ಹಡಗಗಳ ನವೀನ ತಯ್ಯಾರಿ, ಆಹಾರಸಾಮಾಗ್ರಿಗಳನ್ನು ವಿಶೇಷವಾಗಿ ಬೆಳೆಸುವುದು, ಮತ್ತು ಇವುಗಳನ್ನು ಉಪಯೋಗಿಸುವದರಲ್ಲಿ ಮಿತವನ್ನಿಡುವದು ಈ ಮೂರು ಉಪಾಯಗಳಿಂದ ಶತ್ರುಗಳ ಕ್ಷುಧಾ ಬಾಣವನ್ನು ಮಿತ್ರರು ಕತ್ತರಿಸಿ ಬಿಡುತ್ತಿದ್ದಾರೆ. ಶತ್ರುಗಳಿಗಾದರೋ ಈ ಸಾಧನೆಗಳೆಲ್ಲ ಮಿತ್ರರಿಗಿರುವಷ್ಟು ಉಪಾಯಗಳಿರವು.

~~~~~~

ಸ್ಥಳಿಕ—ಮಂಗಳೂರು.

~~~~~~

ಮಂಗಳೂರು ಮುನ್ಸಿಪಾಲಿಟಿಯ ಚೇಯರ್ಮೇನರಾದ ಡಾಕ್ಟರ್ ರಾವ್‌ಸಾಹೇಬ ವರ್ಗಿಸರವರು ಕೊಟ್ಟ ನೋಟೀಸು ಪ್ರಕಾರ ಕೆನರಾ ಹ್ಯಾಸ್ಪೊಟಿನ-ಭುವನೇಂದ್ರ ಸಭಾಸದನದಲ್ಲಿ ಯುದ್ಧದ ಬಗ್ಯೆ ಸಾಲವನ್ನೆತ್ತುವ ಏರ್ಪಾಡನ್ನು ನಡಿಸಲಿಕ್ಕೆ ಪಟ್ಟಣಿಗರ ಸಭೆ ಮೆ। ವ್ಯಾಟರ್ಟ ರವರ ಅಧ್ಯಕ್ಷತೆಯಲ್ಲಿ ಜರುಗಿತ್ತು. ಸಭೆಯಲ್ಲಿ ಮ। ರಾ। ರಾ। ದಿವಾನ್ ಬಹದ್ದೂರ್ ಮುಂಡಪ್ಪ ಬಂಗೇರ, ಮ। ರಾ। ಸುಜೀರ ರಘುನಾಥಯ್ಯ, ಮ। ರಾ। ವರ್ಕಾಡಿ ರಾಮರಾವ್, ಮ। ರಾ। ಕಲ್ಮಾಡಿ ಲಕ್ಷ್ಮೀನಾರ್ಣಪ್ಪಯ್ಯ, ಮ। ರಾ। ಪಾಂಗಾಳ ಸುಬ್ಬರಾವ್, ಮ। ರಾ। ಬಿ. ವ್ಯಾಸರಾಯಾಚಾರ್ಯ, ಮ। ರಾ। ನೆಲ್ಲಿಕಾಯಿ ವೆಂಕಟರಾವ್, ಮ। ರಾ। ಪೇಜಾವರ ಭೋಜರಾವ್, ಮ। ರಾ। ವಿ. ಯಸ್. ಕಾಮತ್, ಮ। ರಾ। ಅತ್ತಾವರ ದೇವಪ್ಪ ಪೂಂಜ, ಮ। ರಾ। ಎಮ್. ಮುಕುಂದ ರಾವ್, ಮ। ರಾ। ವಕೀಲ ಸುವರ್ಣ, ಮ। ರಾ। ಅ. ಶ್ರೀನಿವಾಸ ಪೈ, ಮ। ರಾ। ಉಳ್ಳಾಲ ಬಾಬುರಾವ್, ಡಾಕ್ಟರ್ ಫೆರ್ನಾಂದೀಸ್, ಮೆ। ದಿವಾನ್ ಬಹದ್ದೂರ್ ಎ. ಪಿಂಟೊ, ಮೆ। ಚಾರ್ಲ್ಸ ಮೋರ್ಗನ್, ಮೆ। ಹೆಕೊಕ್, ಮೆ। ಹೆಮಿಲ್ಟನ್, ಫಾದರ್ ಬುಜೋನಿ, ಮ। ರಾ। ಬೆಳ್ಳಿ ಸುಬ್ಬಯ್ಯ ಶೆಟ್ಟಿ, ಮ। ರಾ। ಎಮ್. ಎನ್. ಪ್ರಭು, ಮ। ರಾ। ಎಮ್. ವೆಂಕಟರಾವ್, ಮ। ರಾ। ಪಾಂಗಾಳ ಗೋಪಾಳ ನಾಯಕ, ಮ। ರಾ। ಹ್ಯೊಗೆ ಕೊರಗಪ್ಪ, ಮ। ರಾ। ನರಸಿಂಹ ಮರ್ತಭಂಡಾರಿ, ಮ। ರಾ। ಮಣೇಲ ಅಣ್ಣಪ್ಪ ನಾಯಕ, ಮ। ರಾ। ಅ. ಪದ್ಮನಾಭಯ್ಯ, ಮ। ರಾ। ಪಿ. ಶ್ಯಾಮ ಕೃಷ್ಣಯ್ಯ, ಮ। ರಾ। ಆರ್. ಎಮ್. ರೊಯಿ, ಮ। ರಾ। ಮಿಜಾರ ಗಣೇಶ ಪೈ, ಮ। ರಾ। ಮಿಜಾರ ಸುಬ್ರಾಯ ಪೈ, ಮ। ರಾ। ಗಣೇಶ ಶ್ರೀನಿವಾಸ ಪೈ, ಮ। ರಾ। ಎಮ್. ಪಾಂಡುರಂಗ ಕಿಣಿ, ಮೆ। ಸಿ. ಡೆವಿಸ್, ಮ। ರಾ। ರಗಡೆ ರಾಮರಾವ್, ಮ। ರಾ। ಎಮ್. ಮುಹಮ್ಮದ್, ಮ। ರಾ। ಬಿ. ಮಹಾಬಲ ಹೆಗ್ಗಡೆ, ಮ। ರಾ। ಟಿ. ಜೀವಾಜಿರಾವ್, ಮ। ರಾ। ಸಿ. ಗೋಪಾಳನ್ನಾಯರ್, ಮ। ರಾ। ರಾಮವರ್ಮರಾಜಾ, ಮ। ರಾ। ಅರ್ನೆಸುಬ್ಬರಾವ್, ಮ। ರಾ। ರಾಮಚಂದ್ರ ಅಯ್ಯರ್, ಡಾಕ್ಟರ್ ವರ್ಗಿಸ್ ಮತ್ತು ಡಾಕ್ಟರ್ ಕೆ. ಧನಾನಿರಾವ್, ಡಾಕ್ಟರ್ ಎಮ್. ಶಿವರಾವ್, ಮ। ಮೇರಿಯಸ್ ಪ್ಯಾಸ್, ಮ। ಎಮ್. [illegible] ಯಸ್ ಮೊದಲಾದ ಗೃಹಸ್ಥರು ಸಭೆಗೆ ಬಂದಿದ್ದರು. [illegible]

[illegible]

ಇರುವಂಥಾ ಅಪಾರವಾದ ಜವಾಬ್ದಾರಿಯನ್ನು [illegible] ಬ್ದಾರಿಯಿದ್ದರೂ ಸರಕಾರದವರು ಕೊಡುವ ಬಡ್ಡಿ [illegible] ಬಡ್ಡಿಯ ದರವನ್ನು ವಿವರಿಸಿ ಹೇಳಿದರು. ನಂತರ [illegible] ರಾದ ಮೆ। ಸಿ. ಡೇವಿಸ್‌ರವರು ಸಾಲದಿಂದುಂಟಾಗುವ [illegible] ಕುರಿತು ಮಾತಾಡಿದರು. ಸಾಮ್ರಾಜ್ಯದ ಸರಕಾರಕ್ಕೆ [illegible] ಗಳನ್ನು ಕೊಂಡುಕೊಳ್ಳುವ ಮೂಲಕ ಹಿಂದೀ ಜನರು [illegible] ಕರ್ತವ್ಯಗಳ ಕುರಿತು ಆರ್. ಎಮ್. ರೊಯಿ, ಅ. ಶ್ರೀನಿವಾಸ [illegible] ವರೇ ಮೊದಲಾದ ಗೃಹಸ್ಥರು ಚಿಕ್ಕ ಭಾಷಣಗಳನ್ನು [illegible] ನಂತರ ಈ ಕರ್ತವ್ಯಗಳನ್ನೆಲ್ಲ ಸೂಚಿಸಿ ಎರಡು ಮೂರು [illegible] ಸಭೆಯಲ್ಲಿ ಮಂಜೂರಾದವು. ಕಡೆಗೆ ಸಭೆಯಲ್ಲಿದ್ದ [illegible] ಹಲವರು ಅವರವರ ತಾರತಮ್ಯಾನುಸಾರ ಈ ರೀತಿ ಸಾಲಬಾಂಡುಗ[illegible] ವಾಗ್ದಾನ ಮಾಡಿದರು:—ಕೆನರಾ ಬೇಂಕಿನ ಪ್ರೆಸಿಡೆಂಟರಾದ ಮ। ವರ್ಕಾಡಿ ರಾಮರಾವ್‌ರವರು ಈ ಮೊದಲೆ ಬೇಂಕಿನವರು ಈ ಸಾಲ[illegible]ಗಳನ್ನು ಪಡಕೊಂಡಿರುವರೆಂದೂ ಈ ಸೊಬಲಗ್ಗು ಕೂಡಿ [illegible] ಸುಮಾರು ಅರ್ಧ ಲಕ್ಷ ರೂಪಾಯಿಗಳ ಸಾಲಪತ್ರವನ್ನು ಕೊಂ[illegible]ಕೊಳ್ಳುವರೆಂದೂ ಬೇಂಕಿನ ಪರವಾಗಿ ವಾಗ್ದಾನ ಮಾಡಿದರು. [illegible] ಮೆಸರ್ಸ್ ಮೋರ್ಗನ್ ಎಂಡ್ ಸನ್ಸ್ ರೂ. ೨೦,೦೦೦, ಡಿಸ್ಟ್ರಿಕ್ಟ್ ಬೋ[illegible]ನಿಂದ ಸಿಕ್ಕಬಹುದಾದ್ದು ರೂ. ೨೦,೦೦೦, ರೋಮನ್ [illegible] ಫಂಡಿನಿಂದ ರೂ. ೫,೦೦೦, ಫಾದರ್ ಬುಜೋನಿಯವರು ರೂ. [illegible] ರಾವ್‌ಬಹದ್ದೂರ್ ಎನ್. ಸುಬ್ಬರಾವ್‌ರವರು ರೂ. ೭,೦೦೦, [illegible] ಗಪ್ಪಾ ಅಬ್ದುಲ್‌ರಹಿಮಾನ್‌ರವರು ರೂ. ೧,೦೦೦, ವಾ। ಬಿ. ಮಹಾ[illegible] ಹೆಗ್ಗಡೆ ರೂ. ೫೦೦, ಮಾಜಿ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಮ। ರಾ। ರಾಮಕೃಷ್ಣಯ್ಯ ರೂ. ೨,೫೦೦, ಮ। ರಾ। ತಲಚೇರಿ ಭವಾನಿರಾ[illegible] ರೂ. ೩,೦೦೦, ಡಾಕ್ಟರ್ ವರ್ಗಿಸ್ ರೂ. ೫,೦೦೦, ಮೆ। ಹೆಮಿಲ್ಟ[illegible] ರೂ. ೧೦,೦೦೦, ದಿವಾನ್ ಬಹದ್ದೂರ್ ಸಿ. ಗೋಪಾಳನ್ನಾಯ[illegible] ರೂ. ೩,೦೦೦, ಮ। ರಾ। ಎಮ್. ಮುಹಮ್ಮದ್ ರೂ. ೨,೦೦೦, ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟ್ ರಾ। ರಾಮಚಂದ್ರಯ್ಯರ್ ರೂ. [illegible] ಡಾಕ್ಟರ್ ಎಲ್. ಪಿ. ಫೆರ್ನಾಂಡಿಸ್ ರೂ. ೨೦೦೦; ಮೆ। ಎಮ್. [illegible] ಯಸ್ ರೂ. ೧೫೦೦; ಮ। ರಾ। ರಾ। ಯು. ಬಾಬು ರಾವ್ ರೂ. [illegible] ಮ। ರಾ। ಮುಂಡಪ್ಪ ಬಂಗೇರ ರೂ. ೧೨೦೦; ಮ। ರಾ। ಎನ್. [illegible] ರಾವ್ ರೂ. ೧೦೦೦; ಮ। ರಾ। ನರಸಿಂಹ ಮರ್ತ ಭಂಡಾರಿ ರೂ. ೧೦೦೦; ಮ। ರಾ। ಅಮ್ಮೆಂಬಳ ಶ್ರೀನಿವಾಸ ಪೈ ರೂ. ೧೦೦೦; ಮ। ರಾ। ಕೆ. ರಾಮವರ್ಮ ರೂ. ೬೦೦; ಮಾಜಿ ಡಿಸ್ಟ್ರಿಕ್ಟ್ ರಿಜಿಸ್ಟ್ರರ್ ಎಮ್. ಮುಕುಂದ ರಾವ್ ರೂ. ೧೦೦೦; ಮ। ರಾ। ಎಮ್. ಕೃಷ್ಣನಾಯ[illegible] ಎಂಡ್ ಸನ್ಸ್ ರೂ. ೧೦೦೦; ಮ। ರಾ। ಬೆಳ್ಳಿ ಸುಬ್ಬಯ ಸೆಟ್ಟಿ ರೂ. ೧೦೦೦; ಮ। ರಾ। ಸುಜೀರ ರಘುನಾಥಯ್ಯ ರೂ. ೧೦೦೦; ಮ। ರಾ। ಟಿ. ಜಿವಾಜಿರಾವ್ ರೂ. ೬೦೦; ಮ। ರಾ। ಯಂ. ವೆಂಕಟರಾವ್ ರೂ. ೬೦೦. ಈ ರೀತಿ ವಾಗ್ದಾನಗಳು ಆದನಂತರ ಜಿಲ್ಲಾ ಕಲೆಕ್ಟರ ದೊರೆಗಳು ಡಿಫೆನ್ಸ್ ಒಫ್ ಇಂಡಿಯಾ ಫೋರ್ಸಿನ ಕೆಲವು ವಿವರವನ್ನು ಸಭಿಕರಿಗೆ ಹೇಳಿದರು. ನಂತರ ಸಭಾಂತ್ಯದಲ್ಲಿ ಡಾಕ್ಟರ್ ರಾವ್‌ಸಾಹೇಬ ವರ್ಗೀಸರವರು ಯುದ್ಧಸಾಲದ ಕಮ್ಮಿಟಿಯ ಸೆಕ್ರೆಟರಿಗಳಾಗಿಯೂ ಮ। ರಾ। ಸಿ. ಗೋಪಾಳನ್ನಾಯರ್ ಮತ್ತು ಸಿ. ಡೆವಿಸ್‌ರವರು ಖಜಾನಜಿಗಳಾಗಿಯೂ ನೇಮಿಸಲ್ಪಟ್ಟಿತ್ತಾರೆ.

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ತಿಂಗಳುಗಟ್ಟಲೆ ಸಭೆಯು ನಿನ್ನೆ ದಿನ ಕೂಡಿತ್ತು. ವೈಸ ಚೇಯರ್‌ಮೇನರವರು ಸಭಾಧ್ಯಕ್ಷಸ್ಥಾನದಲ್ಲಿದ್ದರು. ಪಟ್ಟಣದ ಕೆಲವು ಕಡೆಗಳಲ್ಲಿ ಇರುವ ಗ್ಯಾಸ್‌ದೀಪಗಳ ಬಗ್ಯೆ ಬೇಕಾಗುವ ಸುಮಾರು ರೂಪಾಯಿ ೨೦೦೦ರ ಸಾಮಾನುಗಳನ್ನು ತರಿಸುತ್ತಾರೆ. ಇನ್ನಾದರೂ ಈ ದೀಪಗಳು ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿ ಉರಿಸಲ್ಪಡಬಹುದೆಂಬುದಾಗಿ ತೋರುತ್ತದೆ.

ಶ್ರೀಕೃಷ್ಣ ಟ್ರಾನ್ಸ್‌ಪೋರ್ಟ ಕಂಪೆನಿ ಎಂಬ ಹೆಸರಿನಿಂದ ಇನ್ನೊಂದು ಮೋಟಾರ್ ಬಸ್ ಕಂಪೆನಿಯು ಮಂಗಳೂರಲ್ಲಿ ಇನ್ನು ಬೇಗನೆ ಸ್ಥಾಪಿಸಲ್ಪಡುವದಾಗಿ ತಿಳಿಯುತ್ತೇವೆ.

ಕುಂದಾಪುರ ತಾಲೂಕು ಬೋರ್ಡಿಗೆ ನೊನ್‌ಅಫೀಸಿಯಲ್ ಪ್ರೆಸಿಡೆಂಟರು ಬೇಗನೆ ನೇಮಿಸಲ್ಪಡುವರೆಂಬ ವರ್ತಮಾನವಿರುವದು.

ಈ ವಾರದಲ್ಲಿ ಮಂಗಳೂರು ಪಟ್ಟಣದಲ್ಲಿ ಪ್ಲೇಗು-ಮರಣಗಳು ೩ ಇದ್ದವು. ಕೊಡಿಯಾಲಬೈಲ್ ವಾರ್ಡ ೧, ಗೋಳಿಕಟ್ಟೆ ವಾರ್ಡ ೧, ಸೆಂಟ್ರಲ್ ವಾರ್ಡ ೧.

ಖಜಾನಾ ಡಿಪ್ಯುಟಿ ಕಲೆಕ್ಟರರಾಗಿರುವ ಮ। ರಾ। ರಾ। ದಿವಾನ್ ಬಹದ್ದೂರ್ ಸಿ. ಗೋಪಾಳನ್ನಾಯರಿಗೆ ಮೂರನೇ ಗ್ರೇಡಿನಿಂದ [illegible]ದನೇ ಗ್ರೇಡಿಗೆ ಬಡ್ತಿಯು ಆಗಿರುವದು.

ತಿದ್ದುಪಡಿ.—ಕಳೆದ ಸಂಚಿಕೆಯ [illegible] ವರ್ತಮಾನ [illegible]ದಲ್ಲಿ ೫ನೇ ಪಂಕ್ತಿಯಲ್ಲಿ "ಅರ್ಜಿಯನ್ನು ತೆಗೆದು [illegible]" [illegible]ದರ ಬದಲಿಗೆ "ಅರ್ಜಿಯನ್ನು ತೆಗೆದು ಪ್ರತ್ಯೇಕ [illegible]" ಎಂಬುದನ್ನು ಸೇರಿಸಿ ಓದಬೇಕು. [illegible] ಎಮ್. [illegible] ಎಂಬ [illegible] ಬಂದು [illegible] ಬಂದು [illegible]

[illegible]

[illegible] ರಾವ ಎಮ್. ಕೆ. ಗಂಧಿಯವರು ಉತ್ತರ ಬಿಹಾರದ ಚಂಪಾರನ್ [illegible] ಪಟ್ಟಣಕ್ಕೆ ಹೋಗಿದ್ದರು. ಅಲ್ಲಿಯ ಪ್ಲಾಂಟರುಗಳ ಕೈಕೆಳಗೆ [illegible]ಯುಗಳ ಮತ್ತು ಕೂಲಿಜನರ ಸ್ಥಿತಿಗತಿಯನ್ನು ವಿಚಾರಿಸಿ ತಿಳಕೊಳ್ಳುವದೇ [illegible]ವಾಗಿತ್ತು. ಅಲ್ಲಿಯ ಡಿಸ್ಟ್ರಿಕ್ಟ್ ಮಜಿಸ್ಟ್ರೇಟರು ಗಂಧಿಯವರು ಈ [illegible] ಹಳ್ಳಿಗಳಿಗೆ ಹೋಗಕೂಡದೆಂಬದಾಗಿ ನೋಟೀಸು ಕೊಟ್ಟರು. ಗಂಧಿಯವರು ಈ ನೋಟೀಸಿಗೆ ವಿಧೇಯವಾಗಿ ನಡಿಯಲಿಲ್ಲಾದ್ದರಿಂದ ಇವರ [illegible] ಹೊರಿಸೋಣಾಗಿ ಅಧಿಕಾರಿಗಳಿಗೆ ಜವಾಬು ಕೊಡಲಿಕ್ಕೆ ಗಂಧಿಯವರು ಮಜಿಸ್ಟ್ರೇಟರ ಮುಂದೆ ಹಾಜರಾದರು. ಗಂಧಿಯವರು ತನ್ನ ತಪ್ಪನ್ನು [illegible]ರು. ಆದರೆ ಮಜಿಸ್ಟ್ರೇಟರು ಏನೊಂದು ಹುಕುಮನ್ನು ಕೊಡದೆ ಈ [illegible]ಯನ್ನು ಬಾಕಿಯಲ್ಲಿಟ್ಟಿದ್ದರು. ನಂತರ ಗಂಧಿಯವರಿಗೆ ಈ ರೀತಿ [illegible] ಕೊಟ್ಟದ್ದು ಕಾನೂನಿಗೆ ವಿರೋಧವೆಂತ ಕಂಡುಬಂತು. ಗಂಧಿಯವ [illegible]ಲಾಯಿತು. ಮತ್ತು ಪ್ರಕೃತ ಸರಕಾರದ ಉದ್ಯೋಗಸ್ಥರೇ ಕೂಲಿಯವರ [illegible]ನ್ನು ಗೊತ್ತುಮಾಡಿಕೊಳ್ಳುವ ವಿಚಾರದಲ್ಲಿ ಗಂಧಿಯವರಿಗೆ ಬೇಕಾದ [illegible]ಮಾಡುತ್ತಿರುವರೆಂಬುದಾಗಿ ತಿಳಿದುಬರುತ್ತದೆ.

ಕಲ್ಕತ್ತೆಯಲ್ಲಿ ಬಾಲಾದೇವಿ ಎಂಬವಳು ತನ್ನ ತಾಯಿಗೆ ಮನೆಗೆ ಹೋಗಲು [illegible] ಅನುಮತಿಯು ಸಿಕ್ಕದ್ದರಿಂದ ತಾನುಟ್ಟಿದ್ದ ಸೀರೆಗೆ ಸೀಮೆಯೆಣ್ಣೆ ಹುಯಿದು [illegible]ಯನ್ನು ಹೊತ್ತಿಸಿಕೊಂಡು ಪ್ರಾಣತ್ಯಾಗವನ್ನು ಮಾಡಿಕೊಂಡಳು.

ಯುದ್ಧಸಾಲಕ್ಕೆ ಬಂದ ಅರ್ಜಿಗಳಲ್ಲಿ ಮೊಬಲಗು ಇಡೀ ಹಿಂದೂಸ್ಥಾನದಲ್ಲಿ ೧೫,೩೮,೩೫೩೦೦ ಆಗಿರುತ್ತದೆ. ಇದರಲ್ಲಿ ಮುಂಬಯಿ ರೂಪಾಯಿ [illegible],೩೦೦, ಬಂಗಾಳ ೪,೯೭,೭೭,೨೦೦, ಪಂಜಾಬು ೧,೧೨,೧೧,೯೦೦, ನ್ಯಾಟಿವ್ ಪ್ರಾವಿನ್ಸುಗಳು ೧,೦೩,೦೦೪೦೦ ಮದ್ರಾಸು ೭೫,೭೭,೬೦೦, [illegible] ೫೧,೩೬,೮೦೦, ಇತರ ಚಿಕ್ಕ ಸಂಸ್ಥಾನಗಳು ೩೭,೮೪,೦೦೦, ಸೆಂಟ್ರಲ್ ಪ್ರಾವಿನ್ಸುಗಳು ೨೩,೫೮೦೦೦, ಬಿಹಾರ ಮತ್ತು ಒರಿಸ್ಸಾ ೧೬,೩೪,೬೦೦, [illegible]ಮು ೩,೦೧,೩೦೦.

ದಕ್ಷಿಣ ಹಿಂದೂಸ್ಥಾನ.

ಮಾಧವ ಪೆರುಮಾಲ್ ದೇವಸ್ಥಾನದ ಟ್ರಸ್ಟಿ ಮೇಲೆ ಮದ್ರಾಸ ಹ್ಯಾಕೋರ್ಟಿನಲ್ಲಿ ರೂ. ೧೨,೦೦೦ಕ್ಕೆ ದಾಖಲಾದ ಒಂದು ದಾವೆಯಲ್ಲಿ ದೇವಸ್ಥಾನದ [illegible]ಸರರು ರೂ. ೧೨,೦೦೦ವನ್ನು ಕೊಡಬೇಕೆಂತ ತೀರ್ಮಾನಿಸಲ್ಪಟ್ಟಿರುತ್ತದೆ. [illegible]ಯ ಕಾರಣವು ಈ ರೀತಿಯಾಗಿತ್ತು. ಒಬ್ಬ ಹುಡುಗನ ಕಾಲಿನ ಮೇಲೆ ದೇವ[illegible]ನದ ಬಾಗಿಲುಗಳು ಬಿದ್ದು ಕಾಲುಗಳು ಸರಿಯಾಗದ ರೀತಿ ಮುರಿದುಹೋಗಿದ್ದವು. ಹುಡುಗನು ಈ ರೀತಿ ವ್ಯಂಗನಾಗಿಹೋದ್ದರಿಂದ ಅವನ ಜೀವನಾರ್ಥವಾಗಿ ೧೨,೦೦೦ ಕೊಡೋಣಾಗಬೇಕೆಂದು ದಾವೆಯು ಹಾಕಲ್ಪಟ್ಟಿತ್ತು. ದೇವಸ್ಥಾ[illegible] ಆಸ್ತಿಗಳಿಂದ ಈ ಮೊಬಲಗು ಕೊಡೋಣಾಗಬೇಕೆಂತ ಡಿಕ್ರಿಯಾಗಿದೆ.

ಗಂಧಿಯವರು ಉತ್ತರ ಬಿಹಾರದಲ್ಲಿ ಕೂಲಿಯವರ ಸ್ಥಿತಿಯನ್ನು ವಿಚಾರಿಸಲು ಹೋಗುವಾಗ ಅಧಿಕಾರಿಗಳು ಗಂಧಿಯವರ ಮೇಲೆ ನಡಿಸಿದ ಅತ್ಯಾಚಾರಗಳನ್ನು [illegible]ಸರಾಯಿ ಪ್ರಭುಗಳ ಮತ್ತು ಒರಿಸ್ಸಾ ಬಿಹಾರು ಲೆಫ್ಟಿನೆಂಟ ಗವರ್ನರರವರ [illegible]ಕ್ಕೆ ಮದ್ರಾಸು ಮಹಾಜನ ಸಭೆಯವರು ತಂತೀ ಮೂಲಕ ತಂದಿರುತ್ತಾರೆ.

ಮದ್ರಾಸು ಗವರ್ನರರೊಡನೆ ಉದಕಮಂಡಲಕ್ಕೆ ಹೋಗಿದ್ದ ಮದ್ರಾಸಿನ [illegible] ಗವರ್ನರರಾದ ಸರ್ ಆರ್ಥರ್ ಲೋಲೆಯವರು ಮೈಸೂರು ಮಹಾರಾಜ[illegible]ಡನೆ ಮೈಸೂರಿಗೆ ಬಂದು ಮಹಾರಾಜರವರ ಅತಿಥಿಗಳಾಗಿದ್ದರು.

ಬ್ರಿಟಿಷ ದ್ವೀಪಗಳಿಗೆ ಕಾಫಿಯನ್ನು ಕಳುಹಿಸಕೊಡಕೂಡದೆಂಬುವ ನಿರ್ಬಂಧದಿಂದ ಉಂಟಾಗುವ ನಷ್ಟವನ್ನು ಸೂಚಿಸಿ ಮೈಸೂರು ಚೆಂಬರ್ ಒಫ್ ಕೊಮರ್ಸ್[illegible]ವರು ಮೈಸೂರು ಸರಕಾರಕ್ಕೆ ಮನವಿಯನ್ನು ಮಾಡಿರುವದಲ್ಲದೆ ಈ ನಿರ್ಬಂಧವನ್ನು ತೆಗೆದುಹಾಕುವದರಲ್ಲಿ ಇಂಡಿಯಾ ಸರಕಾರದವರೂ ಮದ್ರಾಸು ಸರಕಾರದವರೂ ಬೇಕಾಗಿರುವ ಸಹಾಯವನ್ನು ಮಾಡಬೇಕೆಂತ ಸೂಚಿಸಿರುತ್ತಾರೆ.

ಕರಿಮೆಣಸು ಮೊದಲಾದ ಸಾಮಾಗ್ರಿಗಳನ್ನು ತುಂಬಿಕೊಂಡು ಕೊಚ್ಚಿಯಿಂದ ಮುಂಬಯಿಗೆ ಹೋಗುತ್ತಿದ್ದ ಕಲ್ಲಿಯಾನ್‌ಬಾಸಾ ಎಂಬ ದೊಡ್ಡದೊಂದು ಪಕ್ಕೆ [illegible]ರಿಯು ಬೇಪೂರಿನ ಹತ್ತಿರ ಒಡೆದುಹೋಯಿತು. ಸುಮಾರು [illegible] ಲಕ್ಷ ರೂಪಾಯಿಗಳ ಮೌಲ್ಯದ ಸಾಮಾಗ್ರಿಗಳು ಇದರಿಂದ ನಷ್ಟವಾಗಿ ಹೋಗಿವೆ.

ಮೈಸೂರು ಸರಕಾರದ ಫೂರೆಸ್ಟ್ ಇಲಾಖೆಯಿಂದ ೧೯೧೫-೧೬ನೇ ವರುಷದಲ್ಲಿ ದೊರಕುವಂಥಾ ಉತ್ಪತ್ತಿಯು ೧೧,೭೯,೩೪೪ರಿಂದ ರೂ. ೨೩,೧೩,೯೪೭ಕ್ಕೆ [illegible]ರುವುದು. ಗಂಧದ ಬೆಲೆಯು ಅಧಿಕವಾಗಿ ಹೋದ್ದರಿಂದ ಈ ರೀತಿ ಉತ್ಪತ್ತಿ ಹೆಚ್ಚಲು ಕಾರಣವಾಯಿತು. ಅಮೇರಿಕ ಮತ್ತು ಯೂರೋಪದ ಕಾರಖಾನೆಗಳಲ್ಲಿ ಹಲವು ಗಂಧದ ಎಣ್ಣೆಯನ್ನು ತಯ್ಯಾರಿಸುವ ಕೈಗಾರಿಕೆಯನ್ನು ವಿಶೇಷವಾಗಿ ಕೈಕೊಂಡದ್ದರಿಂದ ಗಂಧಕ್ಕೆ ಕ್ರಯವೇರಲು ಕಾರಣವಾಯಿತು. ಇನ್ನು ಮುಂದಕ್ಕೆ ಗಂಧದ ಎಣ್ಣೆಯನ್ನು ಮೈಸೂರು ದೇಶದಲ್ಲಿಯೇ ತಯ್ಯಾರಿಸುವ ಬಗ್ಗೆ ಸರಕಾರದವರು ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂದಿದ್ದಾರೆ. ಒಂದೆರಡು ಕಾರ್ಖಾನೆಗಳು ಈಗಲೆ ಸ್ಥಾಪಿತವಾಗಿವೆ. ಕಾಡು ಉತ್ಪತ್ತಿಯನ್ನು ಇನ್ನೂ ಯಾವ್ಯಾವ ಬಗೆಯಿಂದ ಉಂಟುಮಾಡಬಹುದೆಂಬುವ ವಿಷಯ ಬೇಕಾದ ಪರಿಶೋಧನೆಗಳನ್ನು ನಡಿಸಲು ಒಬ್ಬ [illegible]ಲ್ ಆಫೀಸರರು ನೇಮಿಸಲ್ಪಟ್ಟಿರುವರು. ಕಾಡುಗಳ ಪಾಲನೆಯ ಬಗ್ಗೆ ಸಹ [illegible]ಯಾದ ಏರ್ಪಾಡು ಮಾಡೋಣಾಗಿರುವದು.

ಮೈಸೂರು ಸಂಸ್ಥಾನದ ೧೯೧೭-೧೮ನೇ ವರುಷದ ಬಜೇಟು ಪ್ರಕಟಿಸಲ್ಪಟ್ಟಿರುವದು. ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿಸೋಣಾಗುವ ಕಬ್ಬಿಣ ತಯ್ಯಾರಿಯ ಕಾರ್ಖಾನೆಗೂ ಮರಗಳಿಂದ ಎಣ್ಣೆಯನ್ನು ತೆಗಿಯುವ ಕೈಗಾರಿಕೆಯ ಸ್ಥಾಪನೆಯ ಬಗ್ಗೆಯೂ ರೂ. ೨೦ ಲಕ್ಷ ಪ್ರತ್ಯೇಕಿಸೋಣಾಗಿರುವದು.

ಚಿನ್ನಸಾಮಿನಾಯುಡು ಜೋಯಿಸರು ನಮ್ಮ ಸಾರ್ವಭೌಮ ಚಕ್ರವರ್ತಿಯವರ ಗ್ರಹಗಳ ಸ್ಥಿತಿಯನ್ನು ಪರ್ಯಾಲೋಚಿಸಿಕೊಂಡು ಹೇಳಿದ ಇನ್ನು ಮುಂದಿನ ಯುದ್ಧದ [illegible] ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಈ ರೀತಿ ಪ್ರಕಟಿಸಲ್ಪಟ್ಟಿರುವದು. ನಮ್ಮ ಸಾರ್ವಭೌಮ ಚಕ್ರವರ್ತಿಯವರಿಗೆ (ಕನ್ಯಾಲಗ್ನದಲ್ಲಿ) ಚಂದ್ರನು ತತ್ಕಾಲದಲ್ಲಿ ಶನಿಯು ಗೋಚಾರದಲ್ಲಿ ೧೧ನೆಯ ಮನೆಯಲ್ಲಿ ಬಹಳ ಬಲಿಷ್ಠನಾಗಿರುವದರಿಂದ ೧೯೧೬ನೆಯ ಮೇ ತಾ. ೨೯ರಲ್ಲಿ ಸೇರುವ ಗೋಚಾರದಲ್ಲಿ ೧೧ನೆಯ ಮನೆಗೆ [illegible]ವದರಿಂದ ಆ ಶನೀಶ್ವರನಿಂದ ನಮ್ಮ ಚಕ್ರವರ್ತಿಯವರಿಗೆ ಎಲ್ಲ ದಿಕ್ಕಿನಲ್ಲಿಯೂ [illegible]ವಾಗುವದು. ಡಿಂಡಿಗಲ್ಲಿನ ಕಂದಸ್ವಾಮಿ ಪಿಳ್ಳೆಯವರು ೩೪೯ ದಿನಗಳಲ್ಲಿ ಅಂದರೆ ಈ ಏಪ್ರಿಲ್ ತಾ. ೯ರಿಂದ ೧೯೧೮ನೆಯ ಮಾರ್ಚ ತಾ. ೨೪ರ ವರೆಗೆ ಯುದ್ಧ ನಡದು ಅನಂತರ ಮಿತ್ರಮಂಡಲಿಯವರಿಗೇನೇ ಜಯಪ್ರದವಾಗುವದೆಂದೂ ಯುದ್ಧ ಮುಗಿದನಂತರ ಒಂದು ವರುಷದ ವರೆಗೆ ರೋಗಾದ್ಯುಪದ್ರವವೂ ಕ್ಷಾಮ[illegible] ಜನರನ್ನು ಪೀಡಿಸುವದೆಂದೂ ತಿಳಿಸಿರುತ್ತಾರೆ. ಯುದ್ಧವು ಆರಂಭಿಸಿದ [illegible] ಭವಿಷ್ಯಗಳು ಹೇಳಲ್ಪಟ್ಟು ಯುದ್ಧಾಗ್ನಿಯಲ್ಲಿ ದಗ್ಧವಾಗುವ [illegible] ಅವುಗಳ ಪರ್ಯವಸಾನವೂ ಆಗಿದೆ. ಈಗಿನ ಭವಿಷ್ಯವು ಹೇಗಾಗುವುದೋ [illegible].

[illegible] ಮಣಿಯರು ರೂ. ೧ ಲಕ್ಷವನ್ನು [illegible] ಯುದ್ಧಸಾಲಕ್ಕೆ ಕೊಡಲು [illegible] ಮಾಡಿರುವರು.

ಮಲಿಬಾರು ಡಿಸ್ಟ್ರಿಕ್ಟ್ ಕೋನ್ಫರೆನ್ಸ್ ಸಭೆಯ ಎರಡನೆಯ ಅಧಿವೇಶನವು ಕಲ್ಲಿಕೋಟೆಯಲ್ಲಿ ಮದ್ರಾಸಿನ ಹ್ಯಾಕೋರ್ಟ್ ವಕೀಲರಾದ ಸಿ. ಪಿ. ರಾಮಸ್ವಾಮಿ ಅಯ್ಯರವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ತಾ. ೨೩ರಲ್ಲಿ ಕೂಡಿತು. ಕಸ್ತ್ರಿನ್ನಿನ ಆಮಂತ್ರಣ ಸಭೆಯ ಅಧ್ಯಕ್ಷರಾದ ಮ। ರಾ। ಕೆ. ಪಿ. ರಾಮನ್ ಮೇನನರವರೂ ಸಭಾ ಅಧ್ಯಕ್ಷರವರೂ ಮದ್ರಾಸಿನಲ್ಲಿ ಇತ್ತಲಾಗೆ ತಲೆದೋರಿದ ದಕ್ಷಿಣ ಹಿಂದೂಸ್ಥಾನದ ಹಿಂದೂಗಳೊಳಗೆ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬುವ ಭೇದವನ್ನು ಕಲ್ಪಿಸಿಕೊಂಡು ದೇಶದ ಐಕ್ಯಕ್ಕೆ ಹಿತವಲ್ಲದ ಕೆಲವು ಸಾಧನೆಗಳನ್ನು ನಡಿಸುತ್ತಿರುವ ಸಂಘದ ಚಟುವಟಿಕೆಯು ಅನರ್ಥಕಾರಿಯಾಗಿದೆ ಎಂತ ಒಂದೇ ರೀತಿಯಲ್ಲಿ ಟೀಕಿಸಿರುತ್ತಾರೆ.

ರಾಜಮಹೇಂದ್ರಿಯ 'ದೇಶಮಾತಾ' ಎಂಬ ದೇಶಭಾಷೆಯ ವಾರ್ತಾಪತ್ರಿಕೆಯ ಬಗ್ಗೆ ರೂ. ೧೦೦೦ದ ಜಾಮೀನು ಕೊಡಬೇಕೆಂತ ವಿಧಿಸೋಣಾಗಿದೆ.

ಪತ್ರವ್ಯವಹಾರ.

ಅಯ್ಯಾ,

ನನ್ನ ಕೈಯಲ್ಲಿ ಭ್ರಾತೃಸಂಘದ ವಿನಂತಿಯ ಪತ್ರವು ಬಿತ್ತು. ನಾನು ಅವನ್ನು ಓದಿ ಉಪನ್ಯಾಯಸದ ಅರ್ಥವನ್ನು ಮನಸ್ಸಿನಲ್ಲಿ ತಂದುಕೊಂಡೆನು. ನನಗೆ ಎಲ್ಲವೂ ವಿಟವೆಂದು ತೋರಿತು. ಆದರೆ ಕೆಲವು ಆಲೋಚನೆಗಳು ಮನಸ್ಸಿನಲ್ಲಿ ಹೊರಟು ನನ್ನನ್ನು ಕೆಲವು ಪ್ರಶ್ನೆಗಳಿಂದ ಪೀಡಿಸಲಾರಂಭಿಸಿವೆ.

ಈಗ ಭ್ರಾತೃ ಸಂಘದವರು ನೋಟೀಸುಗಳನ್ನು ಹಂಚುವುದರಿಂದ ಲೋಕವು ಸನ್ಮಾರ್ಗಪ್ರವರ್ತವಾಗಬಹುದೆಂದು ತೀರಾ ನಂಬಿಕೊಂಡಿದ್ದೇನೆ. ಈ ಸಂಘವು ಲೋಕೋಪಕಾರವನ್ನು ಅನೇಕ ರೀತಿಯಿಂದ ಮಾಡುವುದೆಂದು ಎಲ್ಲರಿಗೂ ಗೊತ್ತಿರಬಹುದು. ಈಗಿನ ಭಾರತ ಯುವಕನ ಅಭಿಪ್ರಾಯವೂ ನಡೆನುಡಿಯೂ ಬೇರೆಯಾಗಿವೆ.

ಈಗ ಪ್ರಕಟಿಸಿದ ನೋಟೀಸಿನಲ್ಲಿ ಯಾವ ರೀತಿಯಲ್ಲಿ ಜನರು ಹಣ ಹಾಳು ಮಾಡುವರು. ಹೇಗೆ ಜನರು ಹಣವನ್ನು ಒಳ್ಳೇ ರೀತಿಯಲ್ಲಿ ವ್ಯಯಿಸಬಹುದು ಎಂಬ ಇವೆ ಮೊದಲಾದ ಸೂಚನೆಗಳು ಕಾಣಬರುತ್ತವೆ. ಈಗ ನಾಟಕ ಮಂಡಳಿಯು ನಾಟಕವಾಡುವುದರಿಂದ ಲೋಕವು ಎಷ್ಟು ಗಂಭೀರ ಸ್ಥಿತಿಯಲ್ಲಿ ಮುಳುಗುವುದು, ಜಗತ್ತು ಎಷ್ಟು ರೋಗಗಳಿಗೆ ಈಡಾಗುವುದು, ಭೂಮಿಯು ಎಷ್ಟು ದುಃದ ಗಾರಿಕೆಯಲ್ಲಿಯೂ ದುರ್ಗುಣಗಳಲ್ಲಿಯೂ ಸಾಗುವುದು ಎಂಬ ಇವೇ ಮೊದಲಾದ ಘೋರ ವರ್ತನೆಗಳು ಮನಸ್ಸಿನಲ್ಲಿ ಹೊರಡುವುವು.

ಆದರೂ ಎಷ್ಟೆಂದರೂ ಲೋಕವು ಹಾಳಾಗುವುದು ನಿಂತುಹೋಯಿತೋ? ಒಳ್ಳೇದು ಇದ್ದಲ್ಲಿ ಕೆಟ್ಟದು ಉಂಟೇ ಉಂಟು. ಮನುಷ್ಯನು ಪ್ರಥಮತಃ ಒಳ್ಳೇವಿಷಯವನ್ನು ಕಡೆಗೆ ಕೆಟ್ಟದಾಗುವನು. ಅವನು ಈ ಹೀನಸ್ಥಿತಿಯಲ್ಲಿ ಅನುಭವಿಸಿದ ಕಷ್ಟಗಳಿಂದ ಅವನಿಗೆ ಬುದ್ಧಿ ಬಂದು ಕಟ್ಟಕಡೆಗೆ ಎಷ್ಟು ವಿಲೋಭನೆಗಳು ಬಂದರೂ ಪತಂಗದಂತೆ ಮುಂದಿನ ಆಲೋಚನೆಯನ್ನು ಎಣಿಸದೆ ಧುಡುಂ ಪ್ರವೇಶ ಮಾಡಲಾರದೆ ಅವನು ದೇವರಂತೆ ಆಗುವನು. ಇದೇ ಲೋಕದ ಸ್ಥಿತಿಯು. ಆದರೂ ನಾವು ಆದಷ್ಟು ಲೋಕೋದ್ಧಾರವನ್ನು ಮಾಡಬೇಕು. ಇದೇ ಅಭಿಪ್ರಾಯದಿಂದಲ್ಲವೇ ಭ್ರಾತೃ ಸಂಘದವರು ನೋಟೀಸುಗಳನ್ನು ಹಂಚುವರು.

ಆದರೆ ಒಬ್ಬನು ಲೋಕವನ್ನು ಒಳ್ಳೇದು ಮಾಡಬೇಕಾದರೆ ಪ್ರಥಮತಃ ತಾನು ಒಳ್ಳೆಯವನಾಗಬೇಕು, ಕಡೆಗೆ ಇತರರನ್ನು ಬೋಧಿಸಬೇಕು. ಆದರೂ ಒಂದೇ ಸಲ ಎಲ್ಲರನ್ನೂ ಕೂಡಿಸಿ ಉಪನ್ಯಾಸ ಕೊಟ್ಟರೆ ಏನೂ ಫಲವಿಲ್ಲ. ಆದುದರಿಂದ ಭ್ರಾತೃ ಸಂಘದವರು ಅವರ ಸಂಘಕ್ಕೆ ಕೂಡಿದ ಮೆಂಬರರಿಗೆ ಮುಟ್ಟಿ ಮೊದಲು ಬೋಧಿಸಿ, ಕಡೆಗೆ ಆ ಸಂಘದ ಹಿತಚಿಂತಕರನ್ನು ಇಷ್ಟಮಿತ್ರರನ್ನು ಬೋಧಿಸಿ ಹಾಗೆಯೇ 'ಸಿಂಧು ಮುಟ್ಟಿ' ಎನ್ನುವಂತೆ ಲೋಕವನ್ನು ಒಳ್ಳೇ ರೀತಿಗೆ ತರಬಹುದು.

[illegible] ಒಂದುವೇಳೆ ಬೋಧವನ್ನು ಕೊಟ್ಟರೂ ಅವರು ಹೇಳಿದ ವಿಷಯಗಳು ಜನರಿಗೆ ಏನು ತಿಳಿಯದ ವಿಷಯಗಳೋ? ಎಲ್ಲರಿಗೂ ಯಾವುದು ಒಳ್ಳೇದು ಯಾವುದು ಕೆಟ್ಟದೆಂದು ಗೊತ್ತುಂಟು. ಆದರೂ ಅಧರ್ಮವೂ ಅನಾಚಾರಗಳೂ ನಡೆಯುತ್ತಲೇ ಇವೆ.

ಕೆಲವು ಉಗ್ರ ಸ್ವಭಾವದವರು ಈ ನೋಟೀಸುಗಳನ್ನು ನೋಡಿದ ಕೂಡಲೇ "ಯಾರಯ್ಯಾ ಇವರು! ನಮಗೆ ಮಿತವಾಗಿ ಖರ್ಚು ಮಾಡಲಿಕ್ಕೆ ಕಲಿಸುವರೇನು? ನಮಗೆ ಮಕ್ಕಳು ಇದ್ದು ದೊಡ್ಡ ಸಂಸಾರವನ್ನು ನಡಿಸುವವರಿಗೆ ಮಿತವ್ಯಯದ ಬೋಧನೆ ಈ ತರುಣ ಪೋರರು ಕಲಿಸುವರೇನು? ಇವರು ಹೇಳುವ ಮುಂಚೆ ನಮಗೆ ಗೊತ್ತುಂಟು. ನಾವು ಹಾಗೆ ಮನಸ್ಸು ಬಂದ ಹಾಗೆ ಖರ್ಚು ಮಾಡಲೂ ಇಲ್ಲ, ಮಾಡುವುದೂ ಇಲ್ಲ" ಎಂದು ಹೇಳುವರು.

ಮನೆಯ ವೃದ್ಧರು ಹೇಳುವರೇನೆಂದರೆ, "ನಾವು ಒಂದುವೇಳೆ ನಮ್ಮ ಮಕ್ಕಳನ್ನು ನಾಟಕಕ್ಕೆ ಕಳುಹಿಸುವುದು. ಏಕೆಂದರೆ ಅವರು ನಮಗೆ ಉಪದ್ರ ಕೊಟ್ಟು, ಹಟವಿಡಿದು, ಊಟಮಾಡಲು ಒಡಂಬಡದೆ, ಕಣ್ಣೀರು ಸುರಿಸುವರು. ಆದುದರಿಂದ ನಮ್ಮ ಹುಡುಗರನ್ನು ಒಂದು ಯಾ ಎರಡು ನಾಟಕಕ್ಕೆ ಕಳುಹಿಸುವೆವು."

ಮತ್ತು ಕೆಲವರೇನೆನ್ನುವರೆಂದರೆ "ನಾವು ನಾಟಕವನ್ನು ನೋಡುವುದು ಏಕೆಂದರೆ ಗಾಯನವನ್ನು ಕೇಳಲಿಕ್ಕೆ. ಸಂಗೀತವು ದೇವರ ಮಹಿಮೆಯನ್ನು ಕೊಂಡಾಡುತ್ತದೆ. ನಾರದರು, ತುಕಾರಾಮನು, ರಾಮದಾಸರು, ಇವರೆಲ್ಲರೂ ಅವರ ಗಾಯನದಿಂದ ದೇವರನ್ನು ಸ್ತುತಿಸಿ ಮೋಕ್ಷವನ್ನು ಪಡೆದವರು. ನಿಜವಾದ ಸುಖವು ಗಾಯನದಲ್ಲಿ ಉಂಟು. ಆದುದರಿಂದ ಅಂಥಾ ಪ್ರಖ್ಯಾತಪಟ್ಟ ನಾಟಕ ಮಂಡಳಿಯವರ ಇಂಪಾದ ಧ್ವನಿಯನ್ನು ಕೇಳುವುದೆಂದರೆ ಮೋಕ್ಷ ಸಾಧನವೇ? ನಾಟಕಕ್ಕೆ ಹೋಗಬೇಡವೆನ್ನುವರು ಕೃಪಣರಾಗಬೇಕು ಇಲ್ಲವೆ ರಾಗಜ್ಞಾನವಿಲ್ಲದ ಕಿವುಡರಾಗಬೇಕು," ಎಂದು ಬೈಯುವರು.

ಮತ್ತು ಕೆಲವರು ಮನೆಯ ಲೌಕಿಕ ಪೀಡನೆಯಿಂದ, ಮನಸ್ಸಿನ ಕುದಿಯುತ್ತಿರುವುದರಿಂದ, ಸೆಕೆಯಲ್ಲಿ ನಿದ್ರೆಹತ್ತಲೊಲ್ಲದೆ ದುರ್ಗುಣ ಆಲೋಚನೆಗಳು ಬಾರದಂತೆ ಒಂದರೆ ಘಳಿಗೆಯಾದರೂ ಮನಸ್ಸು ಬೇರೆ [illegible] ಹಾಗೆ ಮಾಡಲಿಕ್ಕೆ ನಾಟಕಕ್ಕೆ ಹೋಗುವರು.

ದುಂದುಗಾರರೂ ಮರ್ಗ್ಗಣೆಗಳೂ "ಇವರು ನಮ್ಮ ಖರ್ಚಿಗೆ ಅಡ್ಡಿ ಬರುವರಾರು? ಅವರು ಅವರ ಕೆಲಸವನ್ನು ನೋಡಲಿ. ನಾವು ಮನಸ್ಸು ನಿರ್ಧರಿಸಲು ಅಶಕ್ತರು" ಎಂದು ಬಾಯಿಗೆ ಬಂದಷ್ಟು ಬೈಯುವರು.

ಕೆಲವು ವಕೀಲರು ಹೇಳುವರು. ಯಾರಾದರೂ ದುಂದುಗಾರರನ್ನು ಪಕ್ಕನೆ ಕೃಪಣರಾಗಿ ಮಾಡಲು ಅಸಾಧ್ಯ. ನಾಟಕಗಳಿಂದ ಪ್ರಯೋಜನವಿಲ್ಲವೇನು? ಮುಂಚಿನ ಪುರಾಣ ಕಥೆಗಳನ್ನು ಸ್ಮರಣೆಗೆ ತರುವುದು ನಾಟಕದಿಂದಲ್ಲವೇ? ಅದಲ್ಲದೆ ಓದು ಬರೆಯಲು ತಿಳಿಯದವರು ನಾಟಕವನ್ನು ನೋಡಿಯಲ್ಲವೇ ಮುಂಚಿನ ಮಹತ್ವವನ್ನು ತಿಳುಕೊಳ್ಳುವರು? 'ಪ್ರತಾಪಸಿಂಹ' ನಾಟಕದಿಂದಲ್ಲವೇ ಮುಂಚಿನ ರಾಜಪುತರ ವೀರತ್ವವೂ, ರಾಜಭಕ್ತಿಯೂ, ದೇವಭಕ್ತಿಯೂ, ಪ್ರಜಾಪ್ರೇಮವೂ, ಮುಂಚಿನ ಆಳುವಿಕೆಯ ಮಹತ್ವವನ್ನು ತಿಳುಕೊಳ್ಳುವರು. ಅವರು ಎಲ್ಲರೂ ಹಿಂದು ಚರಿತ್ರವನ್ನು ಓದುವುದಿಲ್ಲ. ಆದರೂ ನಾಟಕದ ಮೂಲಕ ಚರಿತ್ರೆ ತಿಳಿಯುತ್ತಾರೆ. ಪ್ರಾಚೀನ ಪುರಾಣ ಕಥೆಗಳೂ, ಚರಿತ್ರೆಯೂ ನಾಟಕಗಳಿಂದಲೂ ದಶಾವತಾರ ಆಟಗಳಿಂದಲೂ ತಿಳಿಯುತ್ತಾರೆ. ಬಾಯಿಸ್ಕೋಪಿನಿಂದಲ್ಲವೇ ಯುದ್ಧದ ಘೋರತೆಯೂ, ನ್ಯಾಯಮಾರ್ಗ ಸ್ಮರಣೆಯೂ, [illegible] [illegible].

ಆದುದರಿಂದ ಭ್ರಾತೃಸಂಘದವರ ಕಷ್ಟಗಳು ಸಫಲಿಸದೆ ಹೋಗುವುದೋ? ದೇ ಲೋಕವೇ? ಒಬ್ಬನು ಒಳ್ಳೇದು ಮಾಡಲು ನಿಂತರೆ ಅವನನ್ನು ಉದಾಸೀನ ಮಾಡುವುದೇನು? ಇದೇ, ಲೋಕವೇ, ನಿನ್ನ ಪ್ರತ್ಯುಪಕಾರವು. ಅಲ್ಲ! ಭ್ರಾತೃ ಸಂಘದವರ ವಿನಂತಿಯ ಘೋಷವು ಎಲ್ಲರ ಮನಸ್ಸಿಗೂ ನಾಟಲಿ. ಭ್ರಾತೃ ಸಂಘದವರು ಈ ಮಾರ್ಗಕ್ಕಿಂತ ಬೇರೆ ಇನ್ನೂ ಉಪಯುಕ್ತವಾದ ಮಾರ್ಗವನ್ನು ಹಿಡಿದು ಲೋಕೋಪಕಾರವನ್ನು ನಿಜವಾಗಿಯೂ ಶಾಶ್ವತವಾಗಿಯೂ ಮಾಡಲಿ. ಅವರಿಗೆ ನಿಜವಾದ ಕಾರ್ಯ ಮಾಡಲು ಒಳ್ಳೇ ಸೂಚನೆಗಳು ತಲೆದೋರದಿದ್ದರೆ ಅವರು ಹಿರಿಯರ ಹತ್ತರವೂ ವೃತ್ತಾಂತ ಪತ್ರಗಳಿಂದಲೂ ಇತರರ ಅಭಿಪ್ರಾಯವನ್ನು ಕೇಳಲಿ. ಸುಮ್ಮನೆ ಈ ನೋಟೀಸುಗಳನ್ನು ಹಂಚಿ ಕಾಗದ ಶಾಯಿ ಹಣ ಖರ್ಚು ಮಾಡುವುದು ಬೇಡ.

ಭ್ರಾತೃ ಸಂಘದ ಮೆಂಬರರೇ ಮುಂದಕ್ಕೆ ಹಿಂದುಸ್ಥಾನವನ್ನು ಏಳಿಗೆಗೆ ತರುವರು. ಆದರೆ ಅವರಿಗೆ ತಕ್ಕ ದಾರಿಯನ್ನು ತೋರಿಸಲು ಯೋಗ್ಯ ದಾರಿ ತೋರಿಸುವವರು ಭರತ ಭೂಮಿಯು ಕೊಡಲಿ!

ಹಿತಚಿಂತಕ.

ಅಯ್ಯಾ ಪತ್ರಾಧಿಪರೇ,

ಮಂಗಳೂರಿನಲ್ಲಿ ಜ್ವರಬಾಧೆಯು ಬಹಳವಿದೆ. ವಿಷಮಜ್ವರವು ಹೆಚ್ಚಿರುವದು. ಈ ಸಂಗತಿಯು ಯಾವ ಕಾರಣದಿಂದ ಎಂಬುದು ಯಾರೂ ಗೊತ್ತುಮಾಡಿದ್ದಿಲ್ಲ. ಭಾವಿಯ ನೀರಿನ ದೋಷದಿಂದ ಜ್ವರಗಳ ಈ ಕಾಟಕ್ಕೆ ಕಾರಣವೆಂತ ಸಾಮಾನ್ಯವಾಗಿ ತಿಳಿಯುತ್ತಾರೆ. ಜನರಿಗೆ ಭಾವಿಯನ್ನು ಹ್ಯಾಗೆ ಶುದ್ಧವಿಡಬೇಕೆಂಬುದು ಗೊತ್ತಿಲ್ಲದೆ ಈ ರೋಗವು ಉಂಟಾಗುವದು. ಹೆಣಗಳನ್ನು ಹುಗಿಯುವ ವಟಾರಗಳು ಪಟ್ಟಣದ ನಿವಾಸಸ್ಥಾನಗಳಲ್ಲಿ ಹೆಚ್ಚಿದಂತೆ ಈ ಜ್ವರದಬಾಧೆಯು ಹೆಚ್ಚುವದು. ರೋಮನ್ ಕೆಥೊಲಿಕ್ ಹೆಣಗಳು ಆಯಾ ದೇವಾಲಯದ ವಟಾರಗಳಲ್ಲಿಯೇ ಹುಗಿಯೋಣಾಗುತ್ತವೆ. ಇಂಥ ದೇವಾಲಯಗಳು ಪಟ್ಟಣದ ಸುತ್ತಲೂ ಪಟ್ಟಣದ ನಡುಭಾಗದಲ್ಲಿಯೂ ಇರುವವು. ಟ್ಯುಟಿಕೋರಿನ್ ಪಟ್ಟಣದಲ್ಲಿ ರೋಮನ್ ಕೆಥೋಲಿಕ್ ಮತಸ್ಥರು ಸುಮಾರು ೧೧,೦೦೦ ಇದ್ದಾರೆ. ಅಲ್ಲಿಯೂ ಶಹಸ್ರಾವರ ಹೆಣಗಳು ದೇವಾಲಯಗಳ ಅಂಗಳದಲ್ಲಿ ಹುಗಿಯಲ್ಪಡುತ್ತವೆ. ಇದರಿಂದ ಆ ಪಟ್ಟಣದ ಆರೋಗ್ಯಕ್ಕೆ ಹಾನಿಯುಂಟಾಗುವದನ್ನು ಅಲ್ಲಿಯ ಮುನ್ಸಿಪಾಲಿಟಿಯವರು ತಿಳಕೊಂಡು ಪಟ್ಟಣದಿಂದ ದೂರವಿರುವ ಒಂದು ಸ್ಥಳವನ್ನು ಶವಗಳನ್ನು ಹುಗಿಯುವ ಬಗ್ಗೆ ಸುಮಾರು ರೂ. ೩೦,೦೦೦ ಖರ್ಚಿನಿಂದ ಸಿದ್ಧಪಡಿಸಿಕೊಟ್ಟಿರುವರು. ಈಗ ಶವಗಳನ್ನು ಪಟ್ಟಣದ ಮಧ್ಯಭಾಗದಲ್ಲಿರುವ ದೇವಾಲಯಗಳಲ್ಲಿ ಹುಗಿಯಲು ಬಿಡುವದಿಲ್ಲ. ಮಂಗಳೂರಲ್ಲಿ ವಿಷಮಜ್ವರದ ಇತರ ಕಾರಣಗಳಲ್ಲಿ ಟುಟಿಕೋರಿನ್‌ದಲ್ಲಿಯ ಕಾರಣವು ಒಂದಾಗಿರಬಹುದು. ಮುನ್ಸಿಪಾಲಿಟಿಯವರು ಈ ಕಾರಣದ ನಿಜತ್ವವನ್ನು ಪರಿಶೋಧಿಸಿ ತಿಳಿಯಬಹುದು.

ಈಗ ಪೆಂಟ್‌ಲೆಂಡ್ ಪೇಟೆಯಲ್ಲಿ ಜನರು ವಸತಿಗಳನ್ನು ಕಟ್ಟುತ್ತಿದ್ದಾರೆ. ಪೇಟೆಯ ಪಶ್ಚಿಮದಲ್ಲಿ ಪ್ರೊಟೆಸ್ಟಾಂಟ್ ಕ್ರೈಸ್ತರ ಶವಗಳನ್ನು ಹುಗಿಯುವ ಸ್ಥಳವಿದೆ, ಉತ್ತರದಲ್ಲಿ ರೋಮನ್ ಕೆಥೊಲಿಕರ ಹೆಣಗಳನ್ನು ಹುಗಿಯುವಂಥಾ ಅಂಗಳವಿರುವ ರೋಮನ್ ಕೆಥೋಲಿಕ ದೇವಾಲಯವಿರುವದು. ಇಷ್ಟೇ ಅಲ್ಲ. ಇತ್ತಲಾಗಿನ ವರೆಗೆ ಈಗ ಪೇಟೆಯಾಗುವ ಸ್ಥಳದಲ್ಲಿ ಇಡೀ ಪಟ್ಟಣದ ಗಲೀಜನ್ನು ಹುಗಿಯುತ್ತಿದ್ದರು. ಇಂಥಾ ಸ್ಥಳದಲ್ಲಿ ಪಟ್ಟಣ ಬೆಳೆಯುವದು. ಇನ್ನು ಸ್ವಲ್ಪ ಕಾಲದಲ್ಲಿ ಮನೆಗಳು ತುಂಬಿಹೋಗುವವು. ವಿಷಮಜ್ವರದ ಬಾಧೆಯು ಇಲ್ಲಿ ಕ್ರಮೇಣ ಜ್ಯಾಗಾಗುವದೆಂದು ಊಹಿಸಬಹುದು.

ಇದಕ್ಕೆಲ್ಲ ನಿವಾರಣೆಯೇನು? ಭಾವಿಯ ನೀರನ್ನು ಇಂಥಾ ವಿಧ್ಯಮಾನಗಳಲ್ಲಿ ಶುದ್ಧವಿರಿಸುವದು ಕಷ್ಟ, ಜನರು ಭಾವಿಯ ನೀರನ್ನು ಉಪಯೋಗಿಸದೆ ಇರುವದು ಉತ್ತಮ. ನೀರು ಸರಬರಾಯಿಯ ಬಗ್ಗೆ ಮುನ್ಸಿಪಾಲಿಟಿಯವರು ತುಂಬಾ ಶ್ರಮ ಮಾಡುತ್ತಿರಬೇಕು. ಮತ್ತು ಪೆಂಟ್‌ಲೆಂಡ್ ಪೇಟೆಯ ಪಶ್ಚಿಮ ದಿಕ್ಕಿನಲ್ಲಿಯಾದರೂ ಹೆಣಗಳು ಹುಗಿಯೋಣಾಗದಂತೆ ಏರ್ಪಾಡು ಮಾಡಬೇಕು. ರೋಮನ್ ಕೆಥೋಲಿಕ ದೇವಾಲಯದವರು ಪಟ್ಟಣದ ಆಜುಬಾಜುಗಳಲ್ಲಿ ಹೆಚ್ಚು ಸ್ಥಳಗಳನ್ನು ಸರಕಾರದಿಂದ ಪಡದಿರುತ್ತಾರೆ. ಹೀಗಿರುತ್ತಾ ಅಂಥಾ ಸ್ಥಳಗಳಲ್ಲಿಯೇ ಸತ್ತವರ ಶವಗಳನ್ನು ಹುಗಿಯುವದು ಲೇಸಲ್ಲವೇ? ಪಟ್ಟಣದ ಆರೋಗ್ಯಪಾಲನೆಯನ್ನು ಈ ರೀತಿ ಮಾಡಿದರೆ ವಿಷಮಜ್ವರದ ಬಾಧೆಯು ಕಡಿಮೆಯಾಗುವದು.

ಪುರಹಿತಾಭಿಲಾಷಿ.

ಜೀನಸು ಧಾರಣೆ.

(ರಖಂ)

ಮಸ್ಸೂರಿ ಅಕ್ಕಿ ಹೊಸ್ತು	5—14—0	ರಿಂದ 6— 4—0
ಗುಡ್ಡ ಸುಗ್ಗಿ ,,	5—10—0	,, 5—15—0
ಹೊಸ ರಾಶಿ ,,	5— 8—0	,, 5—10—0
ಅವ್ವಲ್ ಬೆಳ್ತಿಗೆ ,,	6— 4—0	,, 6—10—0
ಗುಡು ಬೆಳ್ತಿಗೆ ,,	5— 8—0	,, 5—12—0
ರಂಗೂನು ಬೆಳ್ತಿಗೆ ಗೋಣಿ ೧ರ	9— 8—0	,, 9—12—0
ಗೋಧಿ ಗೋಣಿ ೧ರ	12—12—0	,, 12— 8—0
ಹುರುಳಿ ಗೋಣಿ ೧ರ	5— 8—0	,, 6— 2—0
ಕಡಲೆ ಗೋಣಿ ೧ರ ಬೊಂಬ್ಯ	9— 8—0	,, 10— 8—0
ತೊಗರಿ ಗೋಣಿ ೧ರ		10—8 —0
ತೊಗರಿ ಬೇಳೆ ಗೋಣಿ ೧ರ 11—0—0	12— 8—0	,, 15— 8—0
ಉದ್ದು ಗೋಣಿ ೧ರ	11— 8—0	,, 11—12—0
ಊರುಬೆಲ್ಲ ಖಂಡಿ ೧ರ		,, 37— 8—0
ಉಪ್ಪು ಗೋಣಿ ೧ರ	4—12—0	,, 4—14—0
ಕೊಬ್ಬರಿ ಖಂಡಿ ೧ರ	70—0—0	,, 75— 0—0
ಬೆಲ್ಲಕುಂಬಿ ಖಂಡಿ ೧ರ	17— 0—0	,, 17— 8—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	27— 8—0	,, 35— 0—0
ಕೊಬ್ಬರಿ ಎಣ್ಣೆ ಮುಡಿ ೧ರ	5—14—0	,, 6— 8—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		,, 4—10—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	6—11—0	,, 7— 6—0
ಮೋರಿಸ್ ಸಕ್ಕರೆ ಮುಡಿ ೧ರ	5—7—0	,, 5— 8—0
ಕಾಫಿ ಖಂಡಿ ೧ರ	160—0—0	165—0—0
ಹೊಸಬೀಗೋಟು ಖಂಡಿ ೧ರ	77— 0—0	,, 83— 0—0
ಗೇರುಬೀಜ ಮುಡಿ ೧ರ	2— 0—0	,, 2— 1—0
ಕಪ್ಪು ಖಂಡಿ ೧ರ	105—0—0	,, 110— 0—0
ಹಾಂಬ್ರ ತಗಡು ಮುಡಿ ೧ರ	31— 0—0	,, 34— 8—0
[illegible] ಮುಡಿ ೧ರ		,, 34— 0—0
[illegible] ಗೀರು ೧ರ	23—8—0	,, 24— 0—0
[illegible] ಮುಡಿ ೧ರ	5— 4—0	,, 5— 8—0
[illegible] ಖಂಡಿಗೆ		240 —0—0

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಘಾಳಿ, ಧೂಳಿ ಸೇರದಂತೆ ಹಿಂಧಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,

3. ಇರುಳಪ್ಪನ ಬೀದಿ, ಮದರಾಸ್.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ವಿಕ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟಿದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**

Mangalore.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ಕ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ¼ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ರ 0-12-0.

ವಿ. ಪಿ. ಚಾರ್ಜು 0—4—0 ಬೇರೆ.

ಶಾಮುಖ್ಯ ಏಜಂಟರು:—

ಎಚ್. ಆರ್. ಮೋದಿ ಎಂಡ್ ಕೊ,

10 ಪ್ರಿನ್ಸಸ್ ಸ್ಟ್ರೀಟ್, ಬೊಂಬೈ.

H. R. MODY & Co.,

10 Princess Street, Bombay.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜೆಜುದ್ವೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅವ್ವದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗ್ಯೆರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ

ನನ್ನ ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,

ಪುರೋಹಿತ, ಧರ್ಮಪುರೀ ಛತ್ರಂ,

ಪೋಸ್ಟ್ ಆಫೀಸು ಎದುರು,

ರಾಮೇಶ್ವರಮ್.

ಮೈಸೂರು ದಸರಾ ಪ್ರದರ್ಶನದಲ್ಲಿ

ಭಂಗಾರದ ಮೆಡಲ್ ಪಡದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಹಳೆಕೆಮ್ಮು, ಕ್ಷಯ ಮತ್ತು ಶ್ವಾಸ ಇವುಗಳನ್ನು ನಾಶಮಾಡುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯಸ್ಸನ್ನೂ, ಇಂದ್ರಿಯಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ:**—ಪ್ರಸವವಾದ ಲಾಗಾಯಿತು 30 ದಿನಗಳವರೆಗೆ ಉಪಯೋಗಿಸುವದರಿಂದ ಬಾರ, ಲೇಹ್ಯ ಇವುಗಳ ಆವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಸರ್ವ ವಾಯುವಿನಿಂದ ಪೀಡಿತರಾದವರೂ, ಬೇಳಿತೊನ್ನು ಇರುವವರೂ, ಉದರದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,

ಎಂ. ಎ. ಎಸ್. ಎಲ್. ಸಿ. ಎ. ಎಸ್ ವೈದ್ಯಶೇಖರ,

ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜೆನಧಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,

Kalyanakaraka Bishagmandir.

POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಡೈಮಂಡ್ ಸೋಪುಗಳು.

ಈ ಡೈಮಂಡ್ ಸೋಪುಗಳು ಪ್ರತಿ ಒಬ್ಬರಿಗೂ ಹೆಚ್ಚು ಕಾಲದಿಂದ ತಿಳಿದವುಗಳೇ ಆಗಿವೆ.

ಈ ಡೈಮಂಡ್ ಸೋಪುಗಳು "ಬೊಂಬಾಯಿ ಡೈಮಂಡ್ ಸೋಪು ಕಂಪನಿಯಲ್ಲಿ ತಯಾರಿಸಲ್ಪಟ್ಟಿದ್ದಾಗಿವೆ. ಈ ಸೋಪುಗಳ ವಿಷಯವಾಗಿ ಅನೇಕ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ದೊರಕಿವೆ. ಉಪಯೋಗಕ್ಕೆ ತುಂಬಾ ಅನುಕೂಲ. ಕ್ರಯದಲ್ಲಿ ಸಹಾ ಸುಲಭ. ಈ ಕೆಳಗೆ ಕಾಣಿಸಿದ ಸೋಪುಗಳು ಬಿಕರಿಗೆ ಸಿದ್ಧವಾಗಿವೆ. ಡೈಮಂಡ್ ಬಾತ್ ಸೋಪು, ಡೈಮಂಡ್ ಮಸ್ಕ್, ಡೈಮಂಡ್ ಲವೆಂಡರ್, ಡೈಮಂಡ್ ಅತ್ತರು ಸೋಪು, ಡೈಮಂಡ್ ಹಿಲ್ಡ್ ಸೋಪು ಮತ್ತು ಡೈಮಂಡ್ ರಂಗು ಸಾಬೂನುಗಳು. ಕ್ರಯ ವಗೈರೆ ಬರೆದು ತಿಳಕೊಳ್ಳಬಹುದು.

ಏಜಂಟರು:—

ದಿ ಊಲನ್ ಮಾರ್ಟ್,

ಮಂಗಳೂರು. ದ. ಕ.

ಆರ್. ಮಾರ್ಟಿನ್ನರ ಮಾತ್ರೆಗಳು

ನಂಬ್ರ ೨.

ದಮಿಯಾನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆತಿರುಗು, [illegible], ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ: ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧—೧೦—೦.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೩—೦.

ಆರ್. ಮಾರ್ಟಿನ್ನರ ಗ್ಲಿಟೋಢಾಯಿನ್.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೧೪—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,

ನಂಬ್ರ ಡಿ. ಫ್ರೆಯರ್ ರೋಡ್,

ಮುಂಬಯಿ.

R. D. Kately & Co.

No. D. Frere Road,

Near Wright & Co. Fort Bombay

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ತ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ

ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ.

ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,

ಸಾಹುಕಾರಪೇಟೆ, ಮದರಾಸು.

ಬೇಸಿಗೆಕಾಲದಲ್ಲಿ ಅನುಕೂಲವಾದ ಶರಬತ್ತುಗಳು.

ಶ್ರೀಯುತ ಕರ್ನಲ್ ಬ್ರದರ್ಸರವರು ಶಾಸ್ತ್ರೋಕ್ತ ಪರಿಶೋಧನೆಯಿಂದ ತಯಾರಿಸಿರುವರು. ಇದು ಎಂದಿಗೂ ಕೆಡಲಾರದಂತ ದ್ರಾವಕವಿರುತ್ತೆ. ಇದು ಮಾಧುರ್ಯವಾಗಿ ತುಂಬಾ ಶಮನಗೊಳಿಸುವದು. ಈ ಕೆಳಗೆ ಕಾಣಿಸಿದ ಹೆಸರಿನಲ್ಲಿದೆ.

ಲೆಮನ್, ರೋಜ್‌ಬೆರಿ, ರೋಜ್ ಮತ್ತು ಪೈನಾಪ್ಪಲ್ ಆಗಿರುವದು. 1 ಬಾಟ್ಲಿ ಸೋಡಾ ಯಾ 1 ಟಂಬ್ಲರ್ ನೀರಿನಲ್ಲಿ 1 ಚಮಚ ಈ ಶರಬತ್ತಿನ ದ್ರಾವಕವನ್ನು ಹಾಕಿದ್ದಲ್ಲಿ ಇದು ಮಧುರವಾಗಿ ದಣುವನ್ನು ಪರಿಹರಿಸುವದು. ಪ್ರತಿ ಒಬ್ಬರು ಇದರ ವಿಷಯವಾಗಿ ಹೊಗಳುತ್ತಿರುವರು. ಸೀಸೆ 1ರ ಬೆಲೆ ಆಣೆ 9.

ಏಜಂಟರು:—

ದಿ ಊಲನ್ ಮಾರ್ಟ್,

ಮಂಗಳೂರು. ದ. ಕ.

ಪಂಡಿತ್ ಟಿ. ಬಾಲುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. [illegible] ಮಿಶ್ರವಾದ ಈ ಚಿತ್ರದ ಬರೇ 48 ದಿವಸಗಳ ಸೇವನೆಯಿಂದ [illegible], ಕೆಮ್ಮು, ದಮ್ಮು, ಧಾತುಕ್ಷಯ; ಕ್ಷಯರೋಗವೇ ಮೊದಲಾದ [illegible] ಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ಮೇಹ, [illegible], ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ ಎಲ್ಲಾ ತರದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. [illegible] ಪ್ರಶಂಸೆಯ ಪತ್ರಗಳು ವನ್ನು [illegible]

ಸೀಸೆ 1ರ ಕ್ರಯ 14 ಆಣೆ. ವಿ. ಪಿ. [illegible]

[illegible]

ಸಮ್ಮ ಕೆಲಸಗಾಗಿ ಬರೆಯಿರಿ.

ವಿಳಾಸ:— [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೂಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಪೇಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಪ್ಪಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವಸನೆಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದುವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. ಸೌವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರು ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M NATH & CO. *Ayurvedic Chemists*
Vepery Post MADRAS,

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂಧರೀರೋಜ

ಎಂಬ ಮನೋಹರವೂ ಮೋಹಕರವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಡಮೆ ತರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬೇಕಾದರೆ ಅವು ರೇಶ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇದಲ್ಲದೆ ಅವು ಯಾವ ರೀತಿಯಿಂದಾದರೂ ಕಟ್ಟಿದಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಲಾಡಿಸುವದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಅದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸುತ್ತಲೆ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕಂಚಾಗಿರದ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವದು, ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು ಮಿದುಳಿಗೆ ತಂಪನ್ನುಂಟು ಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿ ರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಳ 6, ಕಣ್ಣುಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ಚಿತ್ರವರ್ಣ ಪೋಸ್ಟುಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1 ಕ್ರಯ 50 ಬಹುಮಾನಗಳ ಸಹಿತ ರೂ 1—0—0

ವಿಳಾಸ:— ವಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಹೊಸ ಪುಸ್ತಕ! **'ಹಿಂದೂ ಲಾ'** ಹೊಸ ಪುಸ್ತಕ!

ಇದುವರೆವಿಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅಣ್ಣತಮ್ಮಂದಿರ ದಾಯಭಾಗ ಪಾಲು ಪಾರಿವತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯಬೋಗ್ಯ ಆಧಾರ ಅನ್ವಾದಿಪತ್ರಗಳು, ಗುರುಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಒಕ್ಕಣೆಗಳು ವಿಶದವಾಗಿ ಅಚ್ಚುಮಾಡಲ್ಪಟ್ಟಿದೆ. ಕ್ರಯ ರೂ. ೧—೮—೦.

ವಿಳಾಸ:—ಬಿ. ನರಸಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು ಸಿಟಿ.

ಪ್ರಖ್ಯಾತಪಟ್ಟ ಪೊಜೀ ಗಾಸ್‌ದೀಪಗಳು:—
ಗಾಸ್‌ದೀಪಗಳಲ್ಲಿ ಅತಿ ಗಟ್ಟಿಯಾದವುಗಳು ಮತ್ತು ಉತ್ಕೃಷ್ಟವಾದವುಗಳು. ಹಿರ್ ಫ್ಲಿಮೆಂಟ್ ಯಾ ಬತ್ತಿಗಳು, ಬಹಳ ಅಗ್ಗ. ಕೆಟ್‌ಲೊಗ್ ಅಥವಾ ಸಾಮಾನು ಪಟ್ಟಿಯನ್ನು ಉಚಿತವಾಗಿ ಕಳುಹಿಸಿ ಕೊಡುವೆವು.

ಸೋಲ್ ಏಜಂಟರು— ಸನ್ ಕಂಪೆನಿ,
ತಂಜಾವೂರು.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಹೊಕ್ಕರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ.
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಶುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪ್ಯ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ, ಕೋಡಿಯಾಲಬೈಲ್ ದೊರಕುವದು. **STANY BROTHERS** Sole Agents M. C. C's. Toothache Specific, Mangalore.

ಸಬ್‌ಏಜಂಟರು ಬೇಕಾಗಿವೆ.

ಕಾಲರಾ ಮತ್ತು ಸೀತ ಸಿಡುಬು ಯಾ ಕೋಟ್ಲೆ.

ಇವುಗಳ ಅಂಟು ಪ್ರಕೃತ ಜಿಲ್ಲೆಯ ಹಲವು ಕಡೆಗಳಲ್ಲಿ ವ್ಯಾಪಿಸಿಕೊಂಡಿದೆ. ಈ ರೋಗಗಳು ಸಾಮಾನ್ಯವೆಂತ ತೋರಿಬರುತ್ತವೆ. ಇವುಗಳಿಂದ ಬಿಡುಗಡೆಯು ಔಷಧಗಳು ಇಲ್ಲದೆನೇ ಆಗುವಂಥಾದ್ದು ಬಹುಪಕ್ಷ ನಿಜವಾಗಿದೆ. ಆದರೆ ಇದಕ್ಕೆ ಔಷಧಿಗಿಂತ ಉಪಶಮನವೆ ಅಗತ್ಯ. ಈ ರೋಗಗಳಿಂದ ಶರೀರದ ಪ್ರಕೃತಿಯಲ್ಲಿ ಪ್ರಾಪ್ತವಾಗುವ ಅವಗುಣಗಳು ರೋಗಬಾಧೆಯು ನಿಂತಾಕ್ಷಣವೇ ತಲೆದೋರವು. ಕಾಲರಾ ನಂತರ ಮಕ್ಕಳು ಶರೀರದಲ್ಲಿ ಪುಷ್ಟಿಹೊಂದಲಿಲ್ಲ, ಕೋಟ್ಲೆ ನಂತರ ಜೀರ್ಣವೇ ಸರಿಯಿಲ್ಲ, ಈ ಕೆಮ್ಮು ದಮ್ಮು ಕಾಲರಾ ನಂತರ ಬಂಧುಬಿಟ್ಟಿದೆ ಎಂಬ ಮಾತುಗಳ ಅನುಭವವು ಸರ್ವರಿಗೂ ಗೊತ್ತಿರುವಂಥಾದ್ದೆ. ಆದ್ದರಿಂದ ಈ ರೋಗಗಳು ತಗಲಿದಾಗ ಹೆಚ್ಚಿನ ಜಾಗ್ರತೆಯ ಉಪಶಮನವು ಅಗತ್ಯವಾಗಿರುವದು.

ಹೋಮಿಯೊಪಥಿಕ್ ಮತ್ತು ಟಿಸ್ಯು ಔಷಧಗಳು.

ಇವುಗಳ ಮೂಲಕ ಈ ಉಪಶಮನವು ಬಹಳ ಸುಲಭದಲ್ಲಿ ಮಾಡಲು ಸಾಧ್ಯವಾಗುವದು. ಈ ಎರಡು ರೋಗಗಳು ಪ್ರಾಪ್ತವಾದ ಕಾಲದಲ್ಲಿ ಈ ಔಷಧಿಗಳಲ್ಲಿ ಯಾವ್ಯಾವದನ್ನು ಹೇಗೇಗೆ ತಕ್ಕೊಳ್ಳುವುದು ಇದರ ಅನುಪಾನವೇನೆಂಬುದನ್ನು ಸೂಚಿಸುವ ಅನುಪಾನ ಪತ್ರಗಳೂ ಈ ಔಷಧಗಳೂ ನಮ್ಮಲ್ಲಿ ದೊರಿಯುತ್ತವೆ.

'ಕೋಟಳೆಯ ಕಲೆಗಳು ಬೇಗನೆ ವಾಸಿಯಾಗುವಂಥಾ ಮುಲಾಮು ತಯ್ಯಾರಿರುವದು.

ಕ್ರಯ ಕರಡಿಗೆ 1ಕ್ಕೆ ಆಣೆ 6.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ. ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು
ಇತರರಿಂದ ಏಕೆ ಪಡೆಯಬೇಕು?
ಬಾಟ್ಲಿ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು
ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ:

ನಮ್ಮ ಅನುಭವಸಿದ್ಧವಾದ
ಗಜಕರ್ಣದ ಮುಲಾಮು.
ಡಬ್ಬಿ 1ಕ್ಕೆ ಆಣೆ 6.

ಮಕ್ಕಳ ಎಕ್ಸಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್,
ಶಾರದಾ ಛಾಪಖಾನೆ. ರಥಬೀದಿ, ಮಂಗಳೂರು.

ಯಂ ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಷಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ದ್ವಿ. ಮು.	0—6—0

(ಇತರ ಎಲ್ಲ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).

ಕಳೆದುಹೋದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರಫುಲ್ಲ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಪ್ರಭಾ (ಹೊಸ ಕಥೆ) ,,	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ	0—10—0
[illegible] 18 x 22	0—1—0

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೪ನೇ ಮೇ ಶುಕ್ರವಾರ ೧೯೧೭. | ಸಂಚಿಕೆ ೧೮.

ಸರ್ವರಿಗೂ ಸಾಧ್ಯ!

ಹನಿಗಳು ಕೂಡಿಯೆ ಹಳ್ಳವಾಗುವದು!

ಹಣವಂತರು ಮಾತ್ರ ಯುದ್ಧಸಾಲದಲ್ಲಿ ಹಣ ಹಾಕುವದೆಂಬ ತಪ್ಪು ಗ್ರಹಿಕೆಯು ಸರ್ವಥಾ ಇರ ಕೂಡದು. ಭಿಕ್ಷಾಪತಿಯೂ ಲಕ್ಷಾಧಿಪತಿಯೂ ತಮ್ಮ ಯಥಾನುಶಕ್ತಿ ಸಹಾಯಮಾಡಲು ಅವಕಾಶವಿದೆ.

ರೂ. 10, 20, 50 ಈ ಮೊಬಲಗುಗಳ ಲೆಕ್ಕವೇ ವಿಶೇಷವಾಗುವದು.

ಅಲ್ಪ ಮೊಬಲಗುಗಳ ಸಾಲ ಪಡಿಯೋಣಾಗುವದೋ ಎಂಬ ಅಂಜಿಕೆಯಿಂದ ಹಿಂಜರಿಯಬೇಡಿರಿ. ಸಾಮ್ರಾಜ್ಯದ ರಕ್ಷಣೆಗಾಗಿ ದೇಶದ ಭದ್ರತೆಗಾಗಿ ಈ ಸಾಲವು ಬೇಕಾಗಿರುವದು.

ಭದ್ರವಾದ ಜವಾಬ್ದಾರಿ.
ಖಂಡಿತವಾದ ಬಡ್ಡಿ.
ಈಗಲೇ ಬೇಕಾಗಿರುವದು.

ಯುದ್ಧಸಾಲಕ್ಕೆ ಮೊಬಲಗುಗಳನ್ನು ಸೂಚಿಸಿ ಈ ದಿನವೇ ಮನವಿಗಳನ್ನು ಬರಕೊಳ್ಳಿರಿ.

ಪೋಸ್ಟು ಆಫೀಸುಗಳಲ್ಲಿ, ಬೇಂಕುಗಳಲ್ಲಿ ಅಥವಾ ಇತರ ಸರಕಾರದ ಆಫೀಸುಗಳಲ್ಲಿ ಈ ಮನವಿಗಳನ್ನು ಬರಕೊಳ್ಳಬಹುದು.

ಇನ್ನೂ ವಿಶೇಷ ಮಾಹಿತಿ ಬೇಕಾದವರು ತಹಸೀಲದಾರರುಗಳಿಂದ, ಟಪ್ಪಾಲು ಮಾಸ್ತರುಗಳಿಂದ, ರೆವಿನ್ಯು ಇನ್ಸ್‌ಪೆಕ್ಟರುಗಳಿಂದ ಅಥವಾ ಆಯಾ ಕಡೆಗಳಲ್ಲಿ ಏರ್ಪಡಿಸಲ್ಪಟ್ಟಿರುವ ಕಮ್ಮಿಟಿಗಳಿಂದ ತಿಳಕೊಳ್ಳಬಹುದು.

WANTED

A Writer for Kathlekhan Coffee Estate in Kadur District, 18 miles from Tarikere Railway Station; must have good knowledge of Coffee planting and Accounts etc.

For further particulars please apply to:—

Messrs. Peirce, Leslie & Co., Ltd.
MANGALORE.

Subba Rau Pai Memorial Fund.

NOTICE.

Applications in the prescribed form for scholarships out of the Ammembal Subba Rau Pai Memorial Fund from deserving poor students of the Goud Saraswath Brahmin community should reach the Secretary of the Fund by the end of May 1917.

Subba Rau Pai Memorial Fund Office, Mangalore, 19th April 1917.

M. Mukunda Rao,
Secretary.

ಒಳ್ಳೆ ಗೊಬ್ಬರ! **ಅವ್ವಲ್ ಈಟು!!**

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಒತ್ತೆ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದ್ದಕ್ಕೆ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ. ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda.
1, Royal Exchange Place, Calcutta.

ನೋಟೀಸು.

ಉಪ್ಪಿನಂಗಡಿ ತಾಲೂಕು ಪಟ್ರಮೆ ಗ್ರಾಮದ ಅಕ್ಕದ ವಿಷ್ಣು ಶಬ್ರಾಯನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:— ನನ್ನ ತಂದೆ ವೆಂಕಟ್ರಮಣ ಶಾಬ್ರಾಯರು ಈಗ ಕೆಲವು ತಿಂಗಳಾರಭ್ಯ ಕೆಲವು ದುಷ್ಟಜನರ ಸಂಗದೋಷದಿಂದ ಕೆಟ್ಟ ಚಾಲ್ತಿಯಲ್ಲಿದ್ದು ಚಿತ್ತಭ್ರಮೆಯಾಗಿರುತ್ತದೆ. ಆದ್ದರಿಂದ ಸದರಿ ವೆಂಕಟ್ರಮಣ ಶಬ್ರಾಯರು ಅಡವು, ಅರ್ವಾರ್, ಮೂಲಗೇಣಿ, ನೋಟು ವಗೈರೆ ಏನೊಂದೂ ಯಾರಾದರೂ ಸದರಿ ವೆಂಕಟ್ರಮಣ ಶಾಬ್ರಾಯರಿಂದ ಬರಸಿಕೊಂಡರೆ ಶಿಂಧು ಆಗತಕ್ಕದ್ದಲ್ಲ. ಮತ್ತು ನಮಗೆ ವ ಆಸ್ತಿಗೆ ಕೂಡಾ ಬಾಧಿಸತಕ್ಕದ್ದಲ್ಲ. ಈ ಸಂಗತಿ ಸರ್ವ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಿದ್ದಾಗಿರುತ್ತದೆ.

ವಿಷ್ಣು ಶಬ್ರಾಯನ ರುಜು.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟಿದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ಸೇರಿದ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆಗಳನ್ನು, ಆಯಾಯ

ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ. 0—12—0. ವಿ. ಪಿ. ಚಾರ್ಜು 2 ಆಣೆ
ಎರಡು ಭಾಗಗಳು ಸೇರಿ ಕ್ರಯ ರೂ. 1— 4—0. „ 3 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,
ಜಿಮ್ನಾಸ್ಟಿಕ್ಸ್ ಇನ್ಸ್‌ಟ್ರಕ್ಟರ್, ಪಾಚ್ಚಯ್ಯಾಸ್ ಕಾಲೇಜ್, ಮದರಾಸು.

B. RAHAVULU NAIDU,
Senior Gymnastic Instructor,
Pachiyappa's College, MADRAS.

N. B.—[illegible]

ಸಂಗೀತ ಪುಸ್ತಕಗಳು.

೧. ಸಂಗೀತ ಕೃತಿದರ್ಪಣ. (ತೆಲುಗು)

ಈ ಪುಸ್ತಕದಲ್ಲಿ ಸಂಗೀತವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅನೇಕ ವಿಷಯಗಳೂ, ಪ್ರಸಿದ್ಧಿಪಡೆದ ತ್ಯಾಗಯ್ಯರ್ ಮುಂತಾದ ಭಕ್ತರಿಂದ ರಚಿಸಲ್ಪಟ್ಟ ಕೀರ್ತನೆಗಳೂ ಇವೆ. ಕೀರ್ತನೆಗಳಿಗೆಲ್ಲಾ ಸಂಪೂರ್ಣವಾಗಿ ಸ್ವರಗಳು ಹಾಕಿರುತ್ತೆ.

ಬೆಲೆ. { ಒಂದನೆಯ ಭಾಗ ೨—೪—೦ (೧೦೦ ಕೀರ್ತನೆಗಳುಳ್ಳದ್ದು)
ಎರಡನೆಯ ಭಾಗ ೨—೪—೦ (೭೫ ಕೀರ್ತನೆಗಳುಳ್ಳದ್ದು)

೨. ಸಂಗೀತ ವಿದ್ಯಾದರ್ಪಣ. (ತೆಲುಗು)

ಮೇಲ್ಕಂಡಂತೆ ಸಂಗೀತವಿದ್ಯಾರ್ಥಿಗಳಿಗೂ, ಸಂಗೀತವಿದ್ವಾಂಸರಿಗೂ ಉಪಯೋಗವಾದ ಪುಸ್ತಕ. ಬೆಲೆ ರೂ. ೩—೮—೦.

೩. ಗಾಂಧರ್ವ ಕಲ್ಪವಲ್ಲಿ. (ತೆಲುಗು)

ಬೋಧಕರ ಸಹಾಯವಿಲ್ಲದೆ ಕೃತಿಗಳು, ಜಾವಡಿಗಳು, ಪಾರ್ಸಿ, ಹಿಂದುಸ್ಥಾನಿ ಮಟ್ಟುಗಳು ಇವುಗಳನ್ನು ಕಲಿಯುವಂತೆ ಸ್ವರಸಾಹಿತ್ಯಗಳನ್ನು ಕೊಟ್ಟಿರುತ್ತೆ.

ಬೆಲೆ ರೂ. ೨—೪—೦.

೪. ಸಂಗೀತ ಸಮಯಸಾರ. (ಕನ್ನಡ)

ಕನ್ನಡ ಭಾಷೆಯಲ್ಲಿ ಸಂಗೀತವಿದ್ಯಾವಿಷಯಕವಾದ ಪುಸ್ತಕವು ಇದೊಂದೇ.

ಬೆಲೆ ರೂ. ೧—೪—೦.

೫. ಶತಕೀರ್ತನ ಸ್ವರಾವಳಿ. (ತೆಲುಗು ಪುಸ್ತಕವು)

ಇದರಲ್ಲಿ ತ್ಯಾಗಯ್ಯನವರು ಮಾಡಿರುವ ಒಂದುನೂರು ಕೀರ್ತನೆಗಳಿರುತ್ತೆ. ಪ್ರತಿಒಂದು ಕೀರ್ತನೆಗೂ ಸ್ವರಗಳನ್ನು ಹಾಕಿರುತ್ತೆ. ಕಲಿಯತಕ್ಕವರಿಗೆ ಸುಲಭವಾಗಿರುತ್ತೆ. ಬೆಲೆ ರೂ. ೩—೧೧—೦.

೬.	ಹಾರ್ಮೋನಿಯಂ ಸ್ವಯಂ ಬೋಧಿನಿ ..	೦—೮—೦.	ದ್ರಾವಿಡ
೭.	ಸಂಗೀತ ಪಾರಿಜಾತ	೦—೪—೦.	
೮.	ಕಲ್ಯಾಣ ಗೀತಾವಳಿ	೦—೬—೦.	
೯.	ಬಾಲಿಕಾಗೀತ ಮುಕ್ತಾಕಲಾಪ. ...	೦—೯—೦.	

ಎಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡನೆಯು ಒಳ್ಳೆಯದೊ ಕೆಡುಕೊ ಎಂಬುದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೇಲಿನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ

ಅತ್ಯುತ್ತಮವಾದ ಗೊಬ್ಬರಗಳು.

1.	ನೈಟ್ರೇಟ್ ಒಫ್ ಸೋಡಾ	Nitrate of Soda.
2.	ಸುಪರ್ ಫೋಸ್ಫೇಟ್ಸ್	Super Phosphates.
3.	ಬೆಸಿಕ್ ಸ್ಲೇಗ್	Basic Slag.

ಇವುಗಳು ತೊಪ್ಪೆ ಸಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಖಂಡುಗ ಹಟ್ಟಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುಪ್ಪೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಶಿ ಹಾಕುವುದಕ್ಕಿಂತ ಒಂದು ಹರಳು ಸೌಳುಪ್ಪನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲ ಮಾಹಿತಿಯನ್ನು ಕೊಡುವ ಸೂಚನಾಪತ್ರಗಳು ಬೇಕಾದ್ದನ್ನು ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. ಬೇರೆ [illegible] ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ, [illegible] ಪಡಕೊಳ್ಳಬಹುದು.

[illegible]

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
[illegible], ಮಂಗಳೂರು.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

Authorised Capital	Rs. ...	300,000—0—0
Issued Capital	... ...	225,000—0—0
Subscribed Capital	... ...	225,000—0—0
Paid up Capital	... ...	200,225—0—0
Deposits	... ...	323,038—15—10
Reserve Fund	... ...	50,003—2—5

— 25% of the net profits are added annually to the Reserve Fund. Rs.28,485/- have been invested in Government Paper of the face value of Rs.29,300/-.

Dividends of not less than 6% paid during the past years and a bonus of 1% to 2% paid in addition during the last eight years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

ನಿಯಮಿತ ಮೂಲ ಧನವು	ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	200,225—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		323,038—15—10
ರಕ್ಷಿತ ಧನವು	... ...	50,003—2—5

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ. 29,300ರ ಧರ್ಮಪತ್ರಗಳಲ್ಲಿ ಠೇವಣಾತಿ ಮಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಈಡ 8 ವರುಷಗಳಲ್ಲಿ ಸೇಕಡಾ 1ರ ದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,

Mangalore, 1st May 1917.

P. Gopal Naik,
Secretary.

ಇಮಿಟೇಶನ್

ವಜ್ರದ ಒಡವೆಗಳು.

ಈ ಒಡವೆಗಳು ಅಪರಂಜಿ ಭಂಗಾರಕ್ಕೆ ಸರಿಯಾದ ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿ ಬಿಳೀ ಕಲ್ಲು, ಕೆಂಪು ಕಲ್ಲುಗಳು ಇಟ್ಟು ಕಟ್ಟಿರುತ್ತದೆ. ಈ ಒಡವೆಗಳು ಅಮೇರಿಕಾ, ಇಂಗ್ಲೆಂಡ್ ದೇಶಗಳಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ 4 ವರುಷಗಳ ವರಿವಿಗೂ ಬಣ್ಣ ಹೋಗುವದಿಲ್ಲವೆಂದು ಗ್ಯಾರಂಟಿ ಕೊಡುವೆವು. ಅಮೇರಿಕಾ, ಇಂಗ್ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ಹೇಳುವವರಿಗೆ ಅವರ ಹಣವನ್ನು ವಾಪಸು ಕೊಡುವೆವು.

ಇಮಿಟೇಶನ್ ವಜ್ರದ ಬೆಂಡೋಲೆ.



ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವದು. ಅಚ್ಚ ವಜ್ರಗಳಿಂದ ಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಈ ಬೆಂಡೋಲೆಯನ್ನು ಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿದೆ. 7 ಕಲ್ಲಿನ ಬೆಂಡೋಲೆ ಕ್ರಯ ರೂ. 2—0—0.

ಜಂಟಲ್‌ಮೇನ್ ಲೀವರ್ ವಾಚ್.

7 ಬಹುಮಾನಗಳ ಸಹಿತ ಕ್ರಯ ರೂ. 4—0—0

5 ವರುಷಗಳ ಖಾತ್ರಿಯಾದ ಗ್ಯಾರಂಟಿ ಸಹ.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಈ ಗಡಿಯಾರವು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು.

ಗಾಳಿ, ಧೂಳು, ಸೇರದಂತೆ ಹಿಂಭಾಗದ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ಒಂದನ್ನು ತರಿಸಿ ನೋಡಿರಿ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಶಾವಂತಿಗೆ ಹೂವು 1, ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಭಂಗಾರದ ಉಂಗುರ 1, ಜುಮುಲಾ ಏಳು ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 4—0—0

ಸೊಗಸಾದ ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಸಾಧಾರಣ ಡಾಬುಗಳಂತೆ ತಗೆಯುವುದಕ್ಕೂ, ಹಾಕುವುದಕ್ಕೂ ಕಷ್ಟ ತೋರಿಸುವುದಿಲ್ಲ. ಇದರಲ್ಲಿ ಗಿಣಿ ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇವಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದುಸಲ ತರಿಸಿನೋಡಿರಿ. ಭಂಗಾರದ ಗಿಲೀಟಿನ ಗೆಜ್ಜೆ ಡಾಬು 1ಕ್ಕೆ ರೂ. 3—8—0.

ಕೈಯಲ್ಲಿ ಕಟ್ಟುವ ಗಡಿಯಾರ.



ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳು ಬಹು ನಾಜೂಕಾದ ಯಂತ್ರದಿಂದ ತಯಾರಿಸಲ್ಪಟ್ಟಿದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಅಥವಾ ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಷ್ಟಪಟ್ಟಾಗ್ಯೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾಗದು. ಇದರ ಕ್ರಯ ರೂ. 4—8—0.

ವಿಳಾಸ:— ಜಿ. ಪೆರುಮಾಲ್ ಎಂಡ್ ಕೊ.
28 ಹನುಮಂತರಾಯಿ ಕೋಯಿಲ್ ಬೀದಿ,
ಜಾರ್ಜ್‌ಟೌನ್, ಮದರಾಸು.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

[illegible] ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಣ್ಣನ್ನೂ, ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಗುಣಮಾಡುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:— "ಪಂಡಿಟ್" ಮದರಾಸ್.

ಹೊಸದಾಗಿ ಕಂಡುಹಿಡಿಯಲ್ಪಟ್ಟು ಇರುವ

ಕ್ರೌನ್ ಸೋಪ್.

ಕೆಡಲಿಲ್ಲ. ಕಲೆಯಿಲ್ಲ. ಉರಿಯಿಲ್ಲ.

ಇದು ಶರೀರದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅಚ್ಚುಕಟ್ಟಾಗಿ ತೆಗಿಯುತ್ತೆ. ನೋಯುವದಿಲ್ಲ. [illegible] ಈ ರೋಮಸಂಹಾರಿಯನ್ನು ವ ಸೋಪನ್ನು ತಗದುಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತಪತ್ರಿಕೆಗಳು ಬಂದಿರುತ್ತೆ ಅದರಲ್ಲಿ ಒಂದನೇ ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್ ಗೋಲ್ಡ್ ಉಂಗುರ ಇನಾಂ. ರೂ. 1-10-0.

ಯೋಗ್ಯತಾ ಪತ್ರಿಕೆ.

ಅನೇಕಲ್ ಪೋಸ್ಟು ಮಡಿವಾಳ ಗ್ರಾಮದಲ್ಲಿ ಇರುವ ಮಾನಸ್ವಾಮಿ ಮೊದಲಿಯಾರ್ — ನಿಮ್ಮ ಕಂಪೆನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದ್ದರಿಂದ ಬಹಳ ಆನಂದವಾಯಿತು. ದಯಮಾಡಿ ಇನ್ನೊಂದು ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು. ವಿಳಾಸ:—

ಎಂ. ಎಚ್. ಸಿಂಗ್ ಅಂಡ್ ಕೋ,
ನಂ. 7-[illegible] ನಾರಾಯಣನ್ [illegible] ಬೀದಿ,
[illegible]

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವವರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಸೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:— ದಿ ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್,

ಯೂರೋಪದ ಮಹಾ ಯುದ್ಧ.

ಈ ತಿಂಗಳ ತಾ. ೧೬ರಲ್ಲಿ ಪ್ರಕಟವಾದ ಯುದ್ಧವಾರ್ತೆಯಿಂದ ಪಶ್ಚಿಮ ರಣರಂಗದಲ್ಲಿ ಕದನಗಳ ವಿಶೇಷ ಚಟುವಟಿಕೆ ಇಲ್ಲವೆಂತ ತೋರುತ್ತದೆ. ವಿಶೇಷ ಕದನಗಳನಂತರ ಈ ವಿರಾಮಕಾಲವು ಸೇನಾಂಗಗಳನ್ನು ತಿರುಗಿ ಯುದ್ಧಕ್ಕೆ ಹದಗೊಳಿಸಿಕೊಳ್ಳಲು ಬೇಕಾಗುತ್ತದೆ. ಆದರೆ ಇಂಥಾ ಕಾಲಗಳಲ್ಲಿ ವಾಯುನಾವೆಗಳಿಗೆ ತುಂಬಾ ಕೆಲಸವಿರುವದು. ಶತ್ರುಗಳ ಸಂಚಲನೆಯನ್ನು ಇವುಗಳು ತಿಳಕೊಳ್ಳುತ್ತಿರುವವು. ಫ್ರೆಂಚರು ಗೊತ್ತುಮಾಡಿದ ಅಂದಾಜು ಪ್ರಕಾರ ಜರ್ಮನರ ೧೪೩ ರಿಜರ್ವ ಸೇನಾಂಗಗಳಲ್ಲಿ ೩೩ ಸೇನಾಂಗಗಳು ಈತನಕ ನಡದ ಯುದ್ಧದ ಬಗ್ಗೆ ಕಳುಹಿಸೋಣಾಗಿವೆ. ಇನ್ನು ಉಳಿದವುಗಳು ವಿಶೇಷ ಪ್ರಯೋಜನದವುಗಳಲ್ಲವೆಂತ ಹೇಳುತ್ತಾರೆ. ಲಂಡನ್ ಟಯಿಮ್ಸವರು ಲೆನ್ಸ್ ಜಿಲ್ಲೆಗೆ ಸ್ವತಹ ಬಂದು ವಿಮಿಯಲ್ಲಿ ಅಪಜಯವನ್ನು ಪಡೆದ ಸೇನಾಪತಿಗಳಿಗೆ ವಾಗ್ದಂಡನೆ ಮಾಡಿರುವರಂತೆ. ಬ್ರಿಟಿಷರು ಇತ್ತಲಾಗಿನ ಕದನಗಳಲ್ಲಿ ಸೆರೆಹಿಡಿದಿರುವ ಶತ್ರುಸೈನಿಕರ ಸಂಖ್ಯೆಯು ೧೯,೩೪೩ ಆಗಿರುತ್ತದೆ. ಜರ್ಮನರು ತಮ್ಮ ಸೇನಾವ್ಯೂಹದ ಭದ್ರತೆಗೆ ಅಗತ್ಯವಿರುವ ಹಲವು ನೆಲೆಗಳನ್ನು ಕಳಕೊಂಡದ್ದರಿಂದ ರಾಶಿರಾಶಿಯಿಂದ ಸೇನೆಯನ್ನು ತರಿಸಿಕೊಂಡು ಮಿತ್ರರೊಡನೆ ಪದೇಪದೇ ಕದನಗಳನ್ನು ನಡಿಸಿದರೂ ಮಿತ್ರರನ್ನು ತಮ್ಮ ಹೊಸ ನೆಲೆಗಳಿಂದ ಅಂದಾಡಿಸಲಿಕ್ಕಾಗಲಿಲ್ಲ. ಇಂಥಾ ಕಾದಾಟಗಳಿಂದ ಜರ್ಮನ ಸೈನಿಕರು ಬಹಳ ನಷ್ಟವಾಗಿ ಹೋದರು.

ಇತರ ರಣರಂಗಗಳಲ್ಲಿ ವಿಶೇಷ ವಾರ್ತೆಗಳಿರವು.

ಹೊಲೆಂಡದಲ್ಲಿಯ ಜೇರಿಸ್ಕೀ ಎಂಬ ಪಟ್ಟಣದ ಮೇಲೆ ಒಂದು ನಾವೆಯು ಕೆಲವು ಬೊಂಬುಗಳನ್ನು ಹಾಕಿ ಪಟ್ಟಣಕ್ಕೆ ಬಹಳ ಹಾವಳಿಯನ್ನುಂಟುಮಾಡಿರುವದು. ತಟಸ್ಥ ರಾಜ್ಯವಾದ ಹೊಲ್ಲೆಂಡ ದೇಶದಲ್ಲಿ ಬೊಂಬು ಎಸೆದವರು ಯಾವ ಪಕ್ಷದವರೆಂಬದು ಈತನಕ ಗೊತ್ತಾಗಲಿಲ್ಲ. ತಟಸ್ಥ ದೇಶಗಳಲ್ಲಿರುವ ಜರ್ಮನರ ಮಂತ್ರಿಗಳನ್ನು ಬರ್ಲಿನಿಗೆ ತರಿಸಿರುವರೆಂತಲೂ ಜರ್ಮನರ ಜಲಂತರ್ಗಾಮಿ ನಾವೆಗಳ ಹಾವಳಿಯಿಂದ ತಟಸ್ಥ ದೇಶದವರ ಭಾವನೆಯು ಹೇಗಿದೆಂಬುದನ್ನು ನಿರ್ಣಯಿಸುವ ಬಗ್ಗೆ ಈ ಮಂತ್ರಿಗಳು ಆಮಂತ್ರಿಸಲ್ಪಟ್ಟಿರುವರೆಂತಲೂ ತಿಳಿದುಬರುತ್ತದೆ.

ಅಮೇರಿಕದವರು ಮಿತ್ರರೊಡನೆ ಅಲ್ಲದೆ ಪ್ರತ್ಯೇಕವಾಗಿ ಶತ್ರುಗಳೊಡನೆ ಸಂಧಾನವನ್ನು ಮಾಡದೆಂಬುದಾಗಿ ನಂಬಿಕೆ ಕೊಟ್ಟಿರುವರು.

ಉತ್ತರ ಹಿಂದೂಸ್ಥಾನ.

ಯುದ್ಧವು ಪ್ರಾರಂಭವಾದ ಮೂರು ವರುಷಗಳ ಸಮಯದಲ್ಲಿ ಜಪಾನ್ ದೇಶದಿಂದ ಹೊರಹೋಗುವ ವಸ್ತ್ರವು ಮೊದಲಿನ ಮುಮ್ಮಡಿಯಾಗಿದೆ. ಸಾಮಾಗ್ರಿಗಳನ್ನು ಒಯ್ಯುವ ಸ್ಟೀಮರುಗಳು ಜಪಾನ ದೇಶದಲ್ಲಿ ಬಹಳವಿದ್ದದ್ದರಿಂದ ಇವರಿಗೆ ಈ ಸೌಕರ್ಯವು ದೊರಕಲು ಕಾರಣವಾಯಿತೆಂದೂ ಈಗ ಹಿಂದೂಸ್ಥಾನದಲ್ಲಿ ಟಾಟಾರವರ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯು ಇರುವದರಿಂದ ಸ್ಟೀಮರುಗಳನ್ನು ಹಿಂದೂಸ್ಥಾನದಲ್ಲಿಯೇ ತಯ್ಯಾರಿಸುವ ಏರ್ಪಾಡನ್ನು ಮಾಡಬೇಕೆಂದೂ ಮುಂಬಯಿ ಪೀಸ್ ಗೂಡ್ಸ್ ಎಸೋಶಿಯೇಶನ್ ಎಂದರೆ ವಸ್ತ್ರವ್ಯಾಪಾರಿಗಳ ಸಂಘದವರು ಆಲೋಚಿಸಿರುವರು.

ಕಲ್ಕತ್ತೆಯ ಪ್ರೆಸಿಡೆನ್ಸಿ ಕೊಲೇಜಿನ ಪಂಡಿತರಾದ ಮಾಣಿಕಲಾಲವಸ್ತ ಎಂಬವರಿಗೆ ಅಮೇರಿಕದ ಸರಕಾರದವರು ೧೧,೫೦೦ ಡೊಲ್ಲರುಗಳ ಒಂದು ವೇತನವನ್ನು ಕೊಟ್ಟಿರುತ್ತಾರೆ. ಜಿಯೋಲೊಜಿಕಲ್ ಎಂಬುವ ವಿಧಾನದ ಪ್ರಕಾರ ಹಲವು ಖನಿಗಳ ಪರಿಶೋಧನೆ ಬಗ್ಗೆ ಈ ವೇತನವು ಕೊಡೋಣಾಗಿರುವದು.

ಲೋಕಮಾನ್ಯ ತಿಲಕರವರು ಸರ್ ವೆಲೆಂಟೈನ್ ಚಿರೋಲರ ಮೇಲೆ ಒಂದು ಸಿವಿಲ್ ದಾವೆಯನ್ನು ಇಂಗ್ಲಾಂಡದಲ್ಲಿ ದಾಖಲು ಮಾಡಿರುವದಷ್ಟೆ. ಪ್ರತಿವಾದಿಗಳ ಕಡೆಯಿಂದ ಹಿಂದೂಸ್ಥಾನದಲ್ಲಿ ಮುಂಬಾಯಿಯಲ್ಲಿ ನಡೆಯುವ ಸಾಕ್ಷಿಗಾರರ ವಿಚಾರಣೆ ಬಗ್ಗೆ ಒಂದು ಕಮಿಷನ್ ಮೊಕ್ರರಾಗಿರುವದು. ನಾಸಿಕ ಮೊಕದಮೆಯಲ್ಲಿಯೂ ಇತರ ಕೆಲವು ಮೊಕದಮೆಗಳಲ್ಲಿಯೂ ಸಾಕ್ಷಿ ಹೇಳಿದ ಕೆಲವು ಸಾಕ್ಷಿಗಾರರನ್ನು ಪೋಲೀಸು ಇಲಾಖೆಯ ಕೆಲವು ಆಫೀಸರರು ಕರೆತಂದು ಸರ್ ವೆಲೆಂಟಾಯಿನರವರ ಪರವಾಗಿ ಏನೇನು ಸಾಕ್ಷಿಗಳನ್ನು ಹೇಳುವರು ಎಂಬೀ ವಿಚಾರಗಳನ್ನು ಮಾಡುತ್ತಿದ್ದಾರೆ. ಹೀಗೆ ಸರಕಾರದ ಆಫೀಸರರು ಖಾಸಗಿ ಮೊಕದಮೆಗಳಲ್ಲಿ ವರ್ತಿಸುವದು ಅನುಚಿತವೆಂತಲೂ ಪೋಲೀಸಿನವರನ್ನು ಹೀಗೆ ವರ್ತಿಸಲು ಬಿಡಕೂಡದೆಂಬುದಾಗಿಯೂ ತಿಲಕರವರು ಒಂದು ವಿಜ್ಞಾಪನೆಯನ್ನು ಮುಂಬಾಯಿ ಸರಕಾರಕ್ಕೆ ಬರಕೊಂಡಿರುತ್ತಾರೆ.

ಪತ್ರವ್ಯವಹಾರ.

ಆಯ್ಯಾ ಪತ್ರಿಕಾಕರ್ತರೇ—

ನಿಮ್ಮ ಕಳದ ಸಂಚಿಕೆಯಲ್ಲಿ ಪತ್ರವ್ಯವಹಾರದಲ್ಲಿದ್ದ ಹಿತಚಿಂತಕನ ಪತ್ರವನ್ನು ನೋಡಿ ಈ ಕೆಳಗಿನ ಕೆಲವು ಸಂಗತಿಗಳನ್ನು ವಾಚಕರ ಅವಗಾಹನೆ ಬಗ್ಗೆ ತರುವದು ಯೋಗ್ಯವೆಂದು ಕಂಡು ಬಂದುದರಿಂದ ಅವನ್ನು ತಮ್ಮ ಬರುವ ಸಂಚಿಕೆಯಲ್ಲಿಯೇ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪ್ರಥಮತಃ ನಮ್ಮ ವಿನಂತಿ ಪತ್ರದಲ್ಲಿರುವ ವಿಷಯಗಳನ್ನೇ ಸ್ವಲ್ಪ ವಿಶದಗೊಳಿಸುವಾ. ನಾಟಕ ಮುಂತಾದ ವಿಷಯಭೋಗಗಳನ್ನು ಪಡೆಯಲೇ ಬಾರದೆಂದು ಖಂಡಿತವಾಗಿಯೂ ಹೇಳಲಿಲ್ಲ.

ಕಾಲಸ್ಥಿತಿಯು ಸ್ವಲ್ಪ ಹಾಳು ಇದ್ದುದರಿಂದ ಅದನ್ನು ವಿವೇಚಿಸಿ ಈಗ ಬಾದರೋ ಮಿತವ್ಯಯದ ಅಭ್ಯಾಸವನ್ನು ಪ್ರಾರಂಭಿಸಬೇಕೆಂಬುದು ದೀನಭಾವದ ವಿನಂತಿಯು ಮಂಗಳೂರು ಮಹಾ ಜನರೊಡನೆ ಮಾಡಿರುವೆವು. ಒಬ್ಬ ನಿಷ್ಪಕ್ಷಪಾತಿಯು ನಮ್ಮ ವಿನಂತಿಪತ್ರವನ್ನು ಪಂಕ್ತಿ ದಿಸಿದಲ್ಲಿ ಈ ವಿಷಯಗಳು ಸ್ಪಷ್ಟವಾಗುವವು. ಹಿತಚಿಂತಕನು ಅವನ್ನು ಅಲ್ಲಗಳೆಯುವನಾದರೆ ತನ್ನ ಆಧಾರ ಕೊಟ್ಟು ಹಾಗೆ ನುಡಿಲಿ.

ದವಸಧಾನ್ಯಗಳ ಕ್ರಯವು ಏರಿಹೋಗಿ ಜೀವನದ ಕಷ್ಟವು ಹೆಚ್ಚುತ್ತಾ ಬಂದದೆ. ಹೋದ ವರ್ಷ ಇದೇ ಸಮಯದಲ್ಲಿ ಎಷ್ಟು ಜನ ಬಡಬಗ್ಗರು ಒಂದೇ ಊಟದಿಂದ ತೃಪ್ತಿಗೊಂಡಿದರೆಂದು ನೋಡಬೇಕಾದರೆ ಮಂಗಳೂರು ಉದುಪಿ ಪುತ್ತೂರು, ಕಾಸರಗೋಡಿನಲ್ಲಿ ಸ್ಥಾಪಿಸೋಣಾದ ಕ್ಷಾಮನಿವಾರಣಾ ಸಂಸ್ಥೆಯೊಡನೆ ಕೇಳಿದರೆ ತಿಳಿದೀತು. ಈ ಸ್ಥಿತಿಯು ಈಗಲೂ ಮುಂದುವರಿಯುತ್ತಿದೆ. ಜನರಿಗೆ ದುಡಿಯುವ ಸಾಮರ್ಥವೇನೂ ಹೆಚ್ಚಲಿಲ್ಲ. ಹಾಗಾದರೆ ವಿಹಾರಗಳಲ್ಲಿ ಆಸಕ್ತರಾಗಿ ಹಣ ವ್ಯಯಮಾಡುವುದು ನ್ಯಾಯವೇ?

ಜನಪದ ಕ್ಷೇಮದ ಬಗ್ಗೆ ನಾವು ಮಾಡಲಿಕ್ಕಿರುವ ಕಾರ್ಯಗಳು ಇನ್ನೂ ಬಾಕಿ ಇರುವವು. ನಾವು ಶಕ್ಯದಾದಷ್ಟು ಲೋಕೋಪಕಾರ ಸಂಸ್ಥೆಗಳನ್ನು ಸ್ಥಾಪಿಸಿದ್ದೇವೆಂದು ಹಿತಚಿಂತಕನ ನಂಬಿಕೆ ಆದರೆ ಅವನ್ನು ಆತನು ನಮಗೆ ತೋರಿಸಲಿ.

ಪ್ಲೇಗು, ಕ್ಷಾಮ, ಮೈಲುಬೇನೆ ಮುಂತಾದ ಸಾಂಕ್ರಾಮಿಕ ರೋಗಗಳು ನಮ್ಮ ಪಟ್ಟಣದಲ್ಲಿ ಉಂಟು ಮಾತ್ರವಲ್ಲ, ಕೆಲವು ತಿಂಗಳು ಹಿಂದೆ ಅವುಗಳ ಹಾವಳಿ ಹೆಚ್ಚಾಗಿದೆ. ಊರಿನ ಸ್ಥಿತಿಯು ಈ ಪ್ರಕಾರ ಇರುವಾಗ ನಾಟಕಶಾಲೆಗೆ ಯಾ ಸರ್ಕಸ್ ಡೇರೆಗೆ ಹೋಗಿ ರಾತ್ರಿಕಾಲದಲ್ಲಿ ಹೆಚ್ಚು ಸಮಯದ ವರೆಗೆ ಗುಂಪಾಗಿ ಕೂಡುವುದು ಯೋಗ್ಯವೆಂದು ಆರೋಗ್ಯ ಶಾಸ್ತ್ರದಲ್ಲಿ ಉಂಟೇ?

ಈಗ ನಡೆಯುವ ಘೋರ ಯುದ್ಧದಲ್ಲಿ ನಮ್ಮ ಅರಸರು ಸೇರಿದ ದೇಶದ ಮತ್ತು ಸಾಮ್ರಾಜ್ಯದ [illegible] ಅಲ್ಲವೇ? ಅವರಿಗೆ [illegible] ಸಹಾಯಮಾಡುವುದು ಪ್ರತಿ ಒಬ್ಬನ ಕರ್ತವ್ಯವಾಗಿರುವುದು. [illegible]

"ದೇಶದ ಸ್ಥಿತಿಯು ಸ್ವಲ್ಪಮಟ್ಟಿಗಾದರೂ ಉನ್ನತಿ ಹೊಂದುವ ತನಕ ಜನಪದದ ಹಿತಕ್ಷೇಮ ಸಾಧಿಸುವ ಸಂಸ್ಥೆಗಳು ಸ್ವಲ್ಪಮಟ್ಟಿಗಾದರೂ ನಮ್ಮ ಪಟ್ಟಣದಲ್ಲಿ ತಲೆದೋರುವ ತನಕ ಅನಾವಶ್ಯಕವಾದ ಸುಖಭೋಗಗಳಲ್ಲಿ ವೆಚ್ಚಮಾಡುವ ಹಣವನ್ನು ಸ್ವಲ್ಪಮಟ್ಟಿಗಾದರೂ ಉಳಿಸುವ ಅಭ್ಯಾಸದ ವ್ಯವಸಾಯವನ್ನು ಪ್ರಾರಂಭಿಸಿರಿ"

ಈ ಮೂಲಕ ಉಳಿಯುವ ಹಣವನ್ನು ಪರೋಪಕಾರಸಂಸ್ಥೆಗಳ ಬಗ್ಗೆ ಮತ್ತು ದೇಶಕ್ಕೆ ಅತ್ಯಗತ್ಯವಾದ ಸತ್ಕಾರ್ಯಗಳಲ್ಲಿ ಉಪಯೋಗಿಸುವುದು ಒಳ್ಳೆದಲ್ಲವೇ? ಇಷ್ಟೆ ನಮ್ಮ ವಿನಂತಿ।"

ಈ ವಾಕ್ಯಗಳ ಅರ್ಥವು ತಮ್ಮಷ್ಟಕ್ಕೆ ಸ್ಪಷ್ಟವಾಗುವುದರಿಂದ ಟೀಕೆಯು ಅನಾವಶ್ಯಕ.

ಅಯ್ಯಾ ಹಿತಚಿಂತಕನು ಹಿಂದೆ ನಿಂತು ಬರೀ ತಪ್ಪುಗಳನ್ನು ಹಿಡಿಯುವುದಕ್ಕೆ ಬದಲಾಗಿ ಇತರ ಒಳ್ಳೇ ಸೂಚನೆಗಳನ್ನು ಮಾಡಿದ್ದಲ್ಲಿ ನಮ್ಮಿಬ್ಬರಿಂದೂ ಶ್ರೇಯಸ್ಕರವಾಗಿತ್ತು. ಹಿತಚಿಂತಕನ, ತಾನು ಯಾರೇ ಎಂದು ಹೇಳಿದ್ದಾದರೆ ಭ್ರಾತೃ ಸಂಘದವರು ಆತನ ಕಾಲಡಿಗೆ ಬಂದು ಆತನ ಬುದ್ಧಿವಾದವನ್ನು ಕೇಳಲಿಕ್ಕೆ ಸಿದ್ಧರಾಗಿದ್ದರು. ಆದರೆ ಅಂಥ ಹಿತಚಿಂತಕನು ಎಲ್ಲಿ ಇದ್ದಾನೆಂದು ದೇವರೊಬ್ಬನಿಗೇ ಗೊತ್ತು. ಆಹಾ ಭಾರತಮಾತೆಯೇ ನಿನ್ನ ಎಲ್ಲಾ ಹಿತಚಿಂತಕರುಗಳು ಇದಪ್ರವರೇ ಆದರೆ ನಿನಗೆ ಎಂತು ಸದ್ಗತಿ ಪ್ರಾಪ್ತವಾಗುವುದೋ? ವಿದ್ಯಾರ್ಥಿ ಸಂಘದ ಪ್ರೇಕ್ಷಕರಾದರೂ 'ಬರೆ ತರುಣ ಪೋರರು' ತಮ್ಮ ಯೌವನ ಬುದ್ಧಿಯಿಂದಲೋ ತಪ್ಪುಗ್ರಹಿಕೆಯಿಂದಲೋ ವಿಚಾರಹೀನತೆಯಿಂದಲೋ ಅಚಾತುರ್ಯ ಕೆಲಸಗಳನ್ನು ಮಾಡಲಿಕ್ಕೆ ಸಾಕು. ಅದಕ್ಕೆ ಕ್ಷಮೋಪಣೆಯೂ ಇರುವುದು. ನಮ್ಮನ್ನು ಕ್ಷಮಿಸಿ ನಮ್ಮ ತಪ್ಪುಗಳನ್ನು ಸರಿಗೊಳಿಸಿ ನಮಗೆ ಒಳ್ಳೆ ಹಾದಿಯನ್ನು ತೋರಿಸುವ ಕೆಲಸವು ಪ್ರತಿ ಒಬ್ಬ ದೇಶಾಭಿಮಾನಿಯ ಮತ್ತು ಹಿತಚಿಂತಕರದ್ದು ಅಗತ್ಯಲ್ಲವೇ? ಪ್ರತಿ ಮಾಲಿಯಿಂದ ದೋಷ ಹುಡುಕಿ ತೆಗೆಯುವುದು ಮತ್ತು ಇಲ್ಲದಂಥಾ ತಪ್ಪುಗಳನ್ನು ಒಬ್ಬನ ಮೇಲೆ ಹೊರಿಸುವುದು ಹಿತಚಿಂತಕರಿಗೆ ಮತ್ತು ವಿಮರ್ಶಕರಿಗೆ ಯೋಗ್ಯವಾದ ಕೆಲಸವೊ ಎಂದು ನಿಮ್ಮ ವಾಚಕರೇ ಭಾವಿಸಲಿ.

ಹಿತಚಿಂತಕನು ತನ್ನ ಪತ್ರದ ಅದಿಯಲ್ಲಿಯೇ ನಮ್ಮ ವಿನಂತಿ ಪತ್ರದ ಅರ್ಥವು ತನಗೆ ಎಲ್ಲವೂ ದಿಟವೆಂದು ತೋರಿ ಬಂತು ಎಂತ ಹೇಳುತ್ತಾನೆ. ಆದರೆ ಕೆಲವು ಆಲೋಚನೆಗಳ ಸಹಾ ತನ್ನನ್ನು ಪೀಡಿಸಲಾರಂಭಿಸಿದವಂತೆ. ಮಿಟಾದ ಸಂಗತಿಗಳಿಂದ ಕೂಡಾ ಪೀಡಿಸಮಾಡಾರೆಂಬ ವಿಷಯವು ಈಗ ತಿಳಿದ ಬಂತು. ಇದಕ್ಕೆ ಯಾರು ಬಾಧ್ಯರೆಂದು ಹೇಳಬೇಕೇ? ನಮ್ಮ ಹಿತಚಿಂತಕನಿಗೆ ನಿವಾರಿಸಲಾರದಷ್ಟು ಪೀಡೆಯು ನಮ್ಮ ವಿನಂತಿಪತ್ರದಿಂದ ಆಗುತ್ತದಾದರೆ ಆತನ ಕ್ಷಮಾಪಣೆಯನ್ನು ಕೇಳುತ್ತೇವೆ. ಹಿತಚಿಂತಕನು ನಮ್ಮ ವಿನಂತಿಪತ್ರವನ್ನು ಇನ್ನೊಮ್ಮೆ ನಿಧಾನವಾಗಿ ಓದಿದರೆ ನಮ್ಮ ಮೇಲೆ ಆರೋಪಿಸಿದಂಥಾ ಕೆಲವು ತಪ್ಪುಗಳಿಂದ ವಿಮೋಚನೆಯಾದೇನೆಂದು ನಂಬುತ್ತೇನೆ. "ಈಗ ಪ್ರಕಟಿಸಿದ ನೋಟೀಸಿನಲ್ಲಿ ಜನರು ಯಾವ ರೀತಿಯಲ್ಲಿ ಹಣ ಹಾಳುಮಾಡುವದು ಹೇಗೆ ಜನರು ಹಣವನ್ನು ಒಳ್ಳೆ ರೀತಿಯಲ್ಲಿ ವ್ಯಯಿಸಬಹುದು ಎಂಬ ಇವೆ ಮೊದಲಾದ ಸೂಚನೆಗಳ ಕಾಣಬರುತ್ತವೆ." ಇದರ ಅವರೆ ನಾಟಕವು ಲೋಕವನ್ನು ಗರೀಬ ಸ್ಥಿತಿಗೆ ಬರುವುದು, ಜಗತ್ತನ್ನು ರೋಗದಲ್ಲಿ ಮುಳುಗಿಸುವುದು ಮತ್ತು ನಾಶಪಡಿಸುವುದು ಎಂಬ ಈ ಘೋರ ವರ್ತನೆಗಳು ಹಿತಚಿಂತಕನಂಥವನ ಮನಸ್ಸಿನಲ್ಲಿಯೇ ಹೊರಡಬೇಕು ವಿನಹಾ ನಮ್ಮ ಪತ್ರದಿಂದ ಎಂದೂ ಹೊರಡವು.

'ಪ್ರಥಮತಃ ತಾವು ಒಳ್ಳೆಯದಾಗಬೇಕು ಕಡೆಗೆ ಇತರರನ್ನು ಬೋಧಿಸಬೇಕು ಇದು ಸರಿ. ಭ್ರಾತೃ ಸಂಘದವರೂ ಅದೇ ಪ್ರಕಾರ ಮಾಡಿದ್ದಾರೆ. ವಿಷಯ ವಿನೋದಗಳಲ್ಲಿ ಹೆಚ್ಚು ಆರೂಢರಾಗಬಾರದೆಂತಲೂ ಈ ತತ್ವವನ್ನು ಎಲ್ಲರಲ್ಲಿಯೂ ಪ್ರಚಾರಗೊಳಿಸಬೇಕೆಂತಲೂ ಭ್ರಾತೃಸಂಘದ ಮೂಲಪತಿಜ್ಞೆಯಾಗಿರುವುದು. ಅದರಿಂದ ಮೊಟ್ಟಮೊದಲು ನಮ್ಮೊಳಗೇನೇ ಬೋಧಿಸಿ ಕಡೆಗೆ ಪಟ್ಟಣದ ಜನ ಸರ್ವ ಹಿತಕ್ಕೋಸುಗವಾಗಿ ಸೂಚನಪತ್ರಗಳನ್ನು ಹಂಚಿಸಿದ್ದು ದೊಡ್ಡ ಅನ್ಯಾಯವಾಯಿತೋ ಏನೋ ಎಂದು ನಮ್ಮ ಅಲ್ಪಬುದ್ಧಿಗೆ ಹೊಳೆಯುವುದಿಲ್ಲ.

ಯಾವುದು ಒಳ್ಳೆದು ಯಾವುದು ಕೆಟ್ಟದು ಎಂದು ಎಲ್ಲರಿಗೂ ಗೊತ್ತಿರುವುದರಿಂದ ಬೋಧವು ಅಗತ್ಯವಿಲ್ಲವೆಂದು ಹಿತಚಿಂತಕರಾದ ವಾಚಕ ಮಹಾಶಯರೇ ನೀವು ನಮ್ಮ ತರ್ಕಜ್ಞಾನವನ್ನು ಹಿತಚಿಂತಕರಿಂದ ಪಡೆಯುವರೆ ಹೆಚ್ಚಿನ ಅಪೇಕ್ಷೆಯುಳ್ಳವರಾಗಿದ್ದೀರೊ.

ಕದಿಯುವುದು, ಕೊಲೆಪಾತಕ ಮಾಡುವುದು, ಕುಡಿಯುವುದು ಎಲ್ಲಾ ಕೆಟ್ಟದೆಂದು ಯಾರಿಗೆ ಗೊತ್ತಿಲ್ಲ. ಆದರೂ ಪ್ರತಿ ಒಬ್ಬ ಧರ್ಮಸಂಸ್ಥಾಪಕನೂ ಸಮಾಜ ಸೇವಕನೂ ಸುಧಾರಕನೂ ಇವುಗಳ ವಿಷಯ ಬೊಬ್ಬಿಡುವನಲ್ಲಾ ಆಹಾ ಇವರ ಹಾಳು ಕಪಾಲವೇ! ಸುಳ್ಳುಗಾರನಿಗೆ ಅವ್ವಾ ಸುಳ್ಳನ್ನು ಹೇಳಬೇಡ ಎನ್ನುವುದು ಅನಾವಶ್ಯಕವೆಂದು ಹಿತಚಿಂತಕನ ಪತ್ರವ್ಯವಹಾರದ ವಿಶೇಷ ವರ್ತಮಾನವಾಗಿರುವುದು. ಕೆಲವು ಉಗ್ರಸ್ವಭಾವದವರು ನಮ್ಮ ನೋಟೀಸನ್ನು ನೋಡಿ ಕೋಪೋದ್ರೇಕರಾಗುವರಂತೆ. ಉಗ್ರಸ್ವಭಾವದವರಾಗಲಿ ಶಾಂತಸ್ವಭಾವದವರಾಗಲಿ ಅಷ್ಟು ಕೋಪೋದ್ರೇಕರಾಗಲಿಕ್ಕೆ ಎಷ್ಟು ಕಾರಣ ಉಂಟೆಂದು ನೀವೇ ಯೋಚಿಸಿರಿ. ಆದರೆ ಕಂಡದ್ದು ಹೇಳಿದರೆ ಕೆಂಡದಂತೆ ಕೋಪ ಎಂಬ ನಾಣ್ನುಡಿಗೆ ಸರಿಯಾಗಿ ತಾಮಸಿಕರಾಗಲಿಕ್ಕೆ ಸಾಕು. ನಾವು ಯಾರಿಗೂ ಬುದ್ಧಿವಾದ ಹೇಳಲಿಲ್ಲ. ಮಿತಿಮೀರಿ ಖರ್ಚು ಮಾಡುವಾಗ ಅಡ್ಡ ಬರುತ್ತಿದಿಲ್ಲ. ಯಾರು ಎಷ್ಟು ಖರ್ಚುಮಾಡಿದರೂ ನಮ್ಮ ಮನೆ ವಾರ್ತೆ ಬಗ್ಗೆ ಏನೂ ಬೀಳುತ್ತಿವಿಲ್ಲ. ಅಧುದರಿಂದ ಹಿತಚಿಂತಕರೇ ಕೋಪಗೊಂಡವರಲ್ಲಿ ನೀವು ಒಬ್ಬರಾದರೆ ಶಾಂತಗೊಳ್ಳಬಹುದು.

ಹಿತಚಿಂತಕರು ನಾಟಕದ ಗುಣಗಳ ವಿಷಯ ದೊಡ್ಡ ಉಲ್ಲೇಖ ಮಾಡಿರುವುದರಿಂದ ಈ ಪತ್ರವನ್ನು ಇನ್ನೂ ಸ್ವಲ್ಪ ಮುಂದರಿಸಬೇಕಾಗಿದೆ. ಪ್ರಿಯ ವಾಚಕರೇ ಸ್ವಲ್ಪ ತಾಳ್ಮೆಗೊಳ್ಳಿ, ನಾಟಕದಿಂದ ಪ್ರಯೋಜನವಿಲ್ಲವೇನೊ ಎಂತ ಹಿತಚಿಂತಕರ ಪ್ರಶ್ನೆಯಾಗಿರುವುದು. ತನ್ನ ಪಂಥವನ್ನು ಗೆಲ್ಲಬೇಕಾದರೆ ಶಕುನಿಯು ಕೂಡಾ ಶ್ರೀ ಭಗವದ್ಗೀತೆಯನ್ನು ಆಧಾರ ಹೇಳುವನೆಂಬಂತೆ, ನಮ್ಮ ಮೇಲೆ ತಪ್ಪು ಹೊರಿಸುವುದಕ್ಕಾಗಿ, ನಾಟಕಾಭಿಮಾನಿಗಳಾಗಿ ತೋರ್ಪಡಿಸಿ, ನಾಟಕವನ್ನು ಸ್ವಲ್ಪ ವಿಶೇಷವಾಗಿಯೇ ಹೊಗಳಿದ್ದಾರೆ. ನಾಟಕದಿಂದಲೂ ಕೆಲವು ಗುಣಗಳುಂಟು. ಆದರೆ ಈ ಪ್ರಕಾರ ವಾದಿಸುವದಾದರೆ ಈ ಪ್ರಪಂಚದಲ್ಲಿ ಸಮಸ್ತಕ್ಕೂ ಕೆಲವು ಆದರೂ ಗುಣಗಳಿರುವವು.

ಯುದ್ಧದಿಂದಲೂ ಕೆಲವು ಪ್ರಯೋಜನಗಳುಂಟಲ್ಲವೇ? ಅದಕ್ಕೋಸ್ಕರವಾಗಿ ಯುದ್ಧ ಬಯಸಬೇಕೇ? ಹಿಂದೂದೇಶದ ಚರಿತ್ರೆಯನ್ನೂ ಪುರಾಣ ಕಥೆಗಳನ್ನೂ ತಿಳಿಯಬೇಕಾದರೆ ನಾಟಕ ಒಂದೇ ಉಪಾಯವೇ? ದೇವಸ್ಥಾನಗಳಲ್ಲಿ ಆಗುವ ವ್ಯಾಖ್ಯಾನಗಳಿಂದಲೂ, ಕಥೆಗಳಿಂದಲೂ, ಹಬ್ಬಗಳಲ್ಲಿ ಆಡುವ ಆಟಗಳಿಂದಲೂ ಸುಲಭ ಸಾಧ್ಯದಲ್ಲಿಯೇ ಅವನ್ನೆಲ್ಲಾ ತಿಳಿಯಬಾರದೇ.

ಗಾಯನ ಕೇಳಲಿಕ್ಕಾಗಿ ಕೆಲವರು ನಾಟಕವನ್ನು ನೋಡುವರಂತೆ. ಸಂಗೀತವು ದೇವರ ಮಹಿಮೆಯನ್ನು ಕೊಂಡಾಡುವುದು; ಇದೆಲ್ಲಾ ನಿಜ. ಸಂಕೀರ್ತನೆಗಳಲ್ಲಿಯೂ, ಭಜನೆಯಲ್ಲಿಯೂ ಭಕ್ತಿಪುರಸ್ಸರವಾದ ಗಾನವಿರುವುದು. ತುಕಾರಾಮ, ರಾಮದಾಸ, ಕಬೀರ, ಪುರಂಧರ, ಜ್ಞಾನದೇವ, ನಿರ್ಮಾಯಿಭಗವಾನ, ಮೀರಾಬಾಯಿ, ಮುಕ್ತಾಬಾಯಿ, ಮೊದಲಾದವರ ಪ್ರೇಮಪದಗಳೂ, ಅಭಂಗಗಳೂ ನಾಟಕಶಾಲೆಯೊಳಗಿಂತಲೂ ಹರಿಕಥಾ ಸಮಯದಲ್ಲಿ ಕೇಳಬಹುದಲ್ಲಾ. ಆದರೆ ಹರಿಕಥೆಗಳಿಗೂ, ಹರಿದಾಸರಿಗೂ ಕೇಳುವವರಿದ್ದಾರೆಯೇ? ಅವರಿಗೆ ಉಪಹಾಸಿಗೆಯು 'ವಿಠಲ ವಿಠಲ್!' 'ರಾಧೇಶ್ಯಾಮ್!' 'ಹರಮಹಾದೇವ್' ಎಂದು ಹೇಳಿದ್ದೇ ಲಾಭ. ಆದುದರಿಂದ ನಾಟಕ ಗಾಯನದ ಮಹಿಮೆಯನ್ನು ಕೊಂಡಾಡಿ ಪ್ರಯೋಜನವೇನು?

ಹಿತಚಿಂತಕರೇ ನಿಮಗೆ ಅಷ್ಟೊಂದು ಗಾಯನದ ಮೇಲೆ ಪ್ರೀತಿಯಾದರೆ ಕೀರ್ತನೆಗಳನ್ನು ಕೇಳಲು ಹೋಗಬಾರದೇ, ಸಾಮುದಾಯಿಕ ಗಾಯನಕ್ಕಿಂತಲೂ ಶ್ರೇಷ್ಠವಾದ ಗಾಯನವೇ [illegible]

[illegible]

...ಉವುದಿಲ್ಲವೆಂದು ನಾಟಕಕ್ಕೆ ಹೋಗುವ ಅವರಿಗೆ ನಮ್ಮ ಉದಾರ ಸಂಕಲ್ಪಗಳು ಪರ್ಯಾಲೋಚಿಸಿ, ಅವನ್ನು ದೂರಪಡಿಸುವ ವಿಚಾರಗೋಷ್ಠಿಯಗಳನ್ನು ಯೋಚಿಸಿದ್ದಲ್ಲಿ ನಮಗೂ ನಮ್ಮ ದೇಶಕ್ಕೂ ಶ್ರೇಯಸ್ಸು ಪ್ರಾಪ್ತವಾಗುವುದು.

'ಭ್ರಾತೃಸಂಘದವರು ಈ ಮಾರ್ಗಕ್ಕಿಂತಲೂ ಬೇರೆ ಇನ್ನೂ ಉಪಯುಕ್ತವಾದ ಮಾರ್ಗವನ್ನು ಹಿಡಿದು ಲೋಕೋಪಕಾರವನ್ನು ನಿಜವಾಗಿಯೂ ಶಾಶ್ವತವಾಗಿಯೂ ಮಾಡಲಿ, ಎಂದು ಹಿತಚಿಂತಕರ ಅಪೇಕ್ಷೆ. ಇದಕ್ಕೆ ಅವರನ್ನು ಸಹರ್ಷ ಪೂರ್ವಕ ವಂದಿಸುವೆವು. ಮತ್ತು ಅವರ ಈ ಘನವಾದ ಅಪೇಕ್ಷೆಯನ್ನು ನಮ್ಮಿಂದಾದಮಟ್ಟಿಗೆ ಕೈಗೂಡಿಸಲು ಪ್ರಯತ್ನಪಡುವೆವು ಎಂಬ ಭರವಸೆಯನ್ನು ಕೊಡುತ್ತೇವೆ. ಹಿತಚಿಂತಕರಾದರೋ ಕತ್ತಲೆಯಲ್ಲಿ ನಿಂತುಕೊಂಡು ನಾವು ನೋಟೀಸು ಹಂಚಿ ಕಾಗದ ಶಾಯಿ ಹಣ ಖರ್ಚುಮಾಡಿದ್ದಕ್ಕೆ ಕರಕರೆಪಡುವ ಬದಲಾಗಿ ಅವರ ಹಿತಚಿಂತನೆಯ ಬುದ್ಧಿಯಿಂದ ಇನ್ನೂ ಉಪಯುಕ್ತವಾದ ಮಾರ್ಗಗಳು ಯಾವ್ಯಾವುವು ಎಂಬುದನ್ನು ಖುದ್ದಾಗಿ ಈ ಸ್ವದೇಶಾಭಿಮಾನಿ ಮೂಲಕ ತಿಳಿಸಿದಲ್ಲಿ ವಿದ್ಯಾರ್ಥಿ ಭ್ರಾತೃಸಂಘದವರು ಅವರಿಗೆ ಸದಾ ಕೃತಜ್ಞರಾಗುವರು.

ಇತಿ ತಮ್ಮ ಸೇವಕ

ಮಂಗಳೂರು
ತಾ. 2-5-17.

ಬಂಟ್ವಾಳ ನಾರಾಯಣ ಬಾಳಿಗ,
ವಿದ್ಯಾರ್ಥಿ ಭ್ರಾತೃಸಂಘದ
ಕಾರ್ಯದರ್ಶಿ.

ವಿಷಯ ಖಂಡನ.

ಪ್ರಿಯ ವಾಚಕರೇ—

ಇದೇ ಪತ್ರಿಕೆಯ ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟವಾದ "ಪಂಚಾಂಗಗಳ ಪಿತಲಾಟ"ವೆಂಬ ಪೂರ್ವಪಕ್ಷಕ್ಕೆ ಸಿದ್ಧಾಂತರೂಪವಾಗಿ "ಪಂಚಾಂಗಗಳ ವಿಷಯ."ವೆಂಬ ಶೀರ್ಷಿಕೆಯಿಂದ ತಾ. ೧೩-೪-೧೭ನೆ ಸಂಚಿಕೆಯಲ್ಲಿ ಪ್ರಚುರಪಡಿಸಿದ ಬಿ. ನಾರ್ಣಪ್ಪ ಶಂಕರ ಜೋಯಿಸರ ಒಂದು ಲೇಖನವನ್ನು ನೋಡಿ ಅತ್ಯಾನಂದವಾಯಿತು. ಇದನ್ನು ಕೇವಲ ಸ್ವಾರ್ಥದಿಂದಲೇ ಜೋಯಿಸರು ಬರೆದಿದ್ದರೂ ಪರಂಪರೆಯಿಂದ ಪಂಚಾಂಗ ಕರ್ತೃಗಳಾದವರ ಹೆಸರನ್ನೆತ್ತಿ ಘೋಷಿಸುತ್ತಾರೆ. ಶಾಸ್ತ್ರಬಹಿಷ್ಕೃತವಾದ ಪೂರ್ವಪಕ್ಷಕ್ಕೆ ಮೌನವಾಗಿದ್ದರೂ, ಹೆಸರೆತ್ತಿ ಘೋಷಿಸಿದ ಜೋಯಿಸರ ಸಿದ್ಧಾಂತಕ್ಕೆ ಅವರು ಅಪೇಕ್ಷಿಸಿದಂತೆ ಅವರಿಗೆ ತಿಳಿಸುವುದರಲ್ಲಿ ಹಿಂಜರಿಯಬಾರದು ಆಗದಿಲ್ಲ.

ಜೋಯಿಸರು ಕೇಳುವ "ವೈಜಯಂತಿ" ಪಂಚಾಂಗವು ತನ್ನಿಂದಲೇ ಮುಗಿಸಲ್ಪಟ್ಟ ಪ್ರಮಾಣ ಬಹಿಷ್ಕೃತವಾದ ನಾಡಂಬರ ಪ್ರಸ್ತಾವನೆಯೊಡನೆ ಪ್ರಕಟವಾದ ಕಾರಣ ನವೀನ "ದೃಕ್ ಸಿದ್ಧಾಂತರೀತ್ಯಾ" ಸಂಪಾದಿತವಾದ ಇವರ ಪ್ರಚಾರಕ್ಕಾಗಿ ಪ್ರಸ್ತಾವನೆಯಲ್ಲಿ ಮಾತ್ರವಲ್ಲದೆ ಅನ್ಯರನ್ನು ಆಗಿಂದಾಗ್ಗೆ ದೂಷಿಸಬೇಕಾಗುತ್ತದೆ. ದೂಷಣವಾದರೂ ಸಪ್ರಮಾಣವಿದ್ದರೆ ನಾವು ನಿರುತ್ತರರಾಗಬೇಕಾದ್ದು ಸಹಜ. ಕೇವಲ ಯುಕ್ತಿಪರವಾದ ಈ ಪ್ರಸ್ತಾವನೆಗೆ ಯುಕ್ತಿಗಳಿಂದಲೂ ಪ್ರಮಾಣಗಳಿಂದಲೂ ಸವಿಸ್ತರ ಖಂಡನವನ್ನು ಪ್ರತ್ಯೇಕ ಸದ್ಯದಲ್ಲೇ ಪ್ರಕಟಿಸಲಿಕ್ಕಿರುವ ಕಾರಣ ಮೇಲಿನ ಇವರ ಲೇಖಕ್ಕೆ ಮಾತ್ರ ಖಂಡನವು ಬರೆಯಲ್ಪಡುತ್ತದೆ. ಸನಾತನಧರ್ಮಕ್ಕೆ ಯೋಗ್ಯಾಯೋಗ್ಯ ಕಾಲಗಳನ್ನು ತಿಳಿಸತಕ್ಕ ಪಂಚಾಂಗವು ಕಾಲಾನುಗುಣವಾಗಿ ವ್ಯತ್ಯಾಸಪಡಿಸತಕ್ಕದ್ದೊ, ಅಲ್ಲವೊ—ಎಂಬುದು ಕೂಡಾ ಅದರಲ್ಲೆ ಚರ್ಚಿಸಲ್ಪಡುವುದು. ಪ್ರಕೃತ ನಾಲ್ಕು ಪಂಚಾಂಗಗಳಲ್ಲಿ ಬರೆದ ಚಂದ್ರದರ್ಶನಕ್ಕೆ ವಿಪರೀತವಾಗಿ ಹಿಂದಿನ ದಿವಸವೇ ಚಂದ್ರನು ಕಾಣುತ್ತಾನೆಂದು ತನ್ನ ಪಂಚಾಂಗದಲ್ಲಿ ಬರೆದ್ದನ್ನು ಸ್ಥಾಪಿಸುವುದಕ್ಕೆ ಮಾತ್ರ ಇವರ ಅಂಬೋಣವು ಯಥಾರ್ಥವೆಂತ ನಂಬಲಾಗುವುದಿಲ್ಲ. ಇದರಿಂದ ದೃಕ್ ಸಿದ್ಧಾಂತವು ತ್ಯಾಜ್ಯವೆಂತಲೇ ನಮ್ಮಭಿಪ್ರಾಯವಲ್ಲ. ಅದು ಸರ್ವತ್ರ ಗ್ರಾಹ್ಯವೋ, ಅಗ್ರಾಹ್ಯವೋ ಮತ್ತು ಅವರು ಸ್ವೀಕರಿಸಿದ ಗ್ರಂಥವು ಉಪಾದೇಯವೋ, ಎಂಬದು ಮಾತ್ರ ಚರ್ಚಿಸಲಿಕ್ಕಿದೆ. ಇವರ ಗ್ರಂಥಾಧಾರದಿಂದಲೇ ಮುಂಬಾಯಿಯಲ್ಲಿ ಪ್ರಕಟವಾದ ಮುಕ್ಕಾಲು ಫಳಿಗೆ ಮಾತ್ರ ವ್ಯತ್ಯಾಸವಿರುವ ಪಂಚಾಂಗದಲ್ಲಿಯೂ ತಾ. ೨೩ಕ್ಕೇನೇ ಚಂದ್ರದರ್ಶನವನ್ನು ಬರೆದಿದೆ. ಇದನ್ನು ಪರೀಕ್ಷಿಸಿ ನಮ್ಮ ಜೋಯಿಸರಿಗೆ ತಿಳಿಸುವುದಕ್ಕಾಗಿ ಅವರು ಬರೆದ ದಿನ ಅಸ್ತಮಾನದ ಸಮಯ ಒಂದು ಎತ್ತರವಾದ ಸ್ಥಳದಲ್ಲಿಯೂ ಸುಮಾರು ಮೂರಾಳು ಎತ್ತರದ ಮರವೇರಿ ಒಂದೂವರೆ ಎರಡು ಘಂಟೆಗಳ ವರೆಗೆ, ಪಶ್ಚಿಮ ದಿಕ್ಕನ್ನು ನಿರ್ನಿಮೇಷದಿಂದ ನೋಡುತ್ತಿದ್ದರೂ ಚಂದ್ರನು ದೃಷ್ಟಿಗೆ ಗೋಚರಿಸಲಿಲ್ಲ. ಇದಕ್ಕೆ ನಾವು ಮಾತ್ರವಲ್ಲದೇ ಇನ್ನು ಕೆಲಮಂದಿ ಪ್ರಯತ್ನಿಸಿದವರು ಸಾಕ್ಷಿಗಳಿರುತ್ತಾರೆ. ಮೇಘಾವರಣದಿಂದ ಕಾಣಲಿಲ್ಲವೆಂತ ಸಹ ಹೇಳಲಿಕ್ಕೆ ಆಗ್ಯೆ ಕಾರಣವಿದ್ದಿಲ್ಲ. ಹೀಗಿರುವಾಗ ಜೋಯಿಸರು ಬಿದ್ದಾಡುವ ವಿಷಯವೇನೆಂದರೆ, ದೇಶದಲ್ಲಿ ಪ್ರಚಾರವಿಲ್ಲದ ಅದರಲ್ಲಿಯೂ ಪರಂಪರೆಯಿಂದ ಕರ್ತೃಗಳಲ್ಲದವರ ಪಂಚಾಂಗದಲ್ಲಿ ವಿಶ್ವಾಸವಿಲ್ಲದ ಜನರಿಗೆ ಇದೇ ಸರ್ವೋತ್ತಮವೆಂದು ನಂಬುಗೆಯನ್ನುಂಟುಮಾಡಿ ಎಲ್ಲಕನ್ನೂ ಪ್ರತಿಭಟಿಸುತ್ತಾ ದೇಶೀಯ ಪಂಡಿತರಿಂದ ಅಂಗೀಕೃತವಲ್ಲದ ನವೀನ ಪಂಚಾಂಗವನ್ನು ಹೊರಡಿಸಿ ಪ್ರಚಾರಪಡಿಸುವುದಕ್ಕೆ ಹೊರತು ಬೇರೆಯಲ್ಲ. ಇದಕ್ಕಾಗಿ ಅಲ್ಲಲ್ಲಿ ತನ್ನ ಸ್ನೇಹಿತರಿಗೆ ಅಂತರಿಕ್ಷಕ್ಕೆ ಕೈತೋರಿಸಿ ಕೆಲಸಮಯ ವ್ಯತ್ಯಾಸವಿದ್ದರೂ ಅದರಿಂದ ಸರಿಯನ್ನಿಸಲು ಅನುಕೂಲವಾಗುತ್ತೆ. ಈ ವರಣ ಪಂಚಾಂಗದ ವಿಷಯ ಚರ್ಚೆಯು ಅಲ್ಲಲ್ಲಿ ವಿಶೇಷವಾಗಿತ್ತೆಂದು ಇವರು ಹೇಳುವುದು ವೈಜಯಂತಿಯ ಪರವಾಗಿಯೇ ಹೊರತು ಬೇರೆ ಈ ನಮ್ಮ ಪಂಚ ಪುಸ್ತಕದ, ವಿಟ್ಲ-ಕುರಬಳ ಪ್ರಾಂತಗಳಲ್ಲಿಲ್ಲಿಯೂ ಸಭೆಯಾಗಿ ಚರ್ಚಿಸಿದ್ದಿದ್ದರೆ ಅವರೇ ಬಲ್ಲರು. "ವೈಜಯಂತಿ" ವಿಷಯ ಕೆಲವೆಡೆ ವಿವಾದಿಸಿ ಇದು ನಮ್ಮ ಪ್ರಾಂತದ ಎಲ್ಲಾ ವಿದ್ವನ್ಮಹನೀಯರಿಂದಲೂ, ಶ್ರೀ ಮದ್ರಾಮ ಚಂದ್ರಾಪುರ ಮಠದ ಶ್ರೀ ಶ್ರೀ ಮದ್ರಾಮ ಚಂದ್ರ ಭಾರತೀ ಸ್ವಾಮಿಗಳವರಿಂದಲೂ ಅಭಿಪ್ರಾಯವನ್ನು ಪಡದು ಖಂಡಿಸಲ್ಪಟ್ಟದ್ದೆಂದು ಈಗ ಸುಮಾರು ಒಂದೂವರೆ ತಿಂಗಳಿಗೆ ಹಿಂದೆ ವೇ. ಮೂ. ಮುಲಿತ್ತಾಯ ವೆಂಕಟರಮಣ ಶಾಸ್ತ್ರಿಗಳಲ್ಲಿ ಜೋಯಿಸರು ಸಮೇತ ಕೂಡಿದ ಕೆಲ ಮಹನೀಯರ ಸಭೆಯಲ್ಲಿ ವಿದಿತವಾಗಿತ್ತು. ಇದು ಪತ್ರಮೂಲಕವಲ್ಲದ್ದರಿಂದ ತಾನೊಪ್ಪುವುದಿಲ್ಲವೆನ್ನುತ್ತಾರೋ, ಏನೋ, ಇರಲಿ. ಇದರ ವಿಷಯ ಹೆಚ್ಚಾಗಿ ಬರೆಯತಕ್ಕದ್ದಿದ್ದರೂ ಕತ್ತಲ ವಿಸ್ತಾರಕ್ಕೆ ಭಯಪಟ್ಟು ಅದನ್ನು ಸಮಯಾಂತರಕ್ಕೆ ಮುಂದರಿಸಿ ಪ್ರಕೃತ ಆಸ್ತಿಕ ಮಹನೀಯರು ನಿರ್ಧರಿಸಿಕೊಳ್ಳತಕ್ಕ ಯಥಾರ್ಥ ವಿಷಯವನ್ನು ಮಾತ್ರ ಸೂಚಿಸಿ ಇಲ್ಲಿಗೆ ಈ ಉಪನ್ಯಾಸವು ಮುಗಿಸಲ್ಪಡುವುದು.

ಪಂಚಾಂಗವು ಆರ್ಯರ ಧರ್ಮಾಚರಣಕ್ಕೆ ಯುಕ್ತಾಯುಕ್ತ ಕಾಲಗಳನ್ನು ನಿರ್ಣಯಿಸತಕ್ಕದ್ದಾದ್ದರಿಂದ ಅದು ಹಿಂದೂ ಧರ್ಮಶಾಸ್ತ್ರಕ್ಕನುಸರಿಸುತ್ತದಲ್ಲದೇ ನಾಸ್ತಿಕರಂತೆ ಕೇವಲ ದೃಕ್ ಸಾಮ್ಯವನ್ನಲ್ಲ. ಧರ್ಮಶಾಸ್ತ್ರಗಳಲ್ಲಿ ಪರೋಕ್ಷ ಪ್ರತ್ಯಕ್ಷಗಳೆರಡೂ ಪ್ರಮಾಣಗಳಾದ್ದರಿಂದ ಪಂಚಾಂಗವು ಕೂಡಾ ಇದರಂತೇ ಮಿಶ್ರವಾಗಿ ಪೂರ್ವಾಚಾರ್ಯರಿಂದ ಸಿದ್ಧಾಂತವಾದ್ದಾಗಿದೆ. ಅಲ್ಲವಾದರೆ ನಮ್ಮ ದೇಶದ ನಾಲ್ಕೈದು ಜನ ಪಂಚಾಂಗ ಕರ್ತೃಗಳಲ್ಲಿ ಒಬ್ಬಿಬ್ಬರು ಅಂಥ ಪರಂಪರಾಪ್ರಸಕ್ತರಾಗಿದ್ದರೂ ಎಲ್ಲರೂ ವಿವೇಕಹೀನರಾಗಲಿಕ್ಕಿಲ್ಲವಷ್ಟೆ. ಪಾಶ್ಚಾತ್ಯ ದೇಶವನ್ನು ಮಾತ್ರ ಹಿಡಿದು ನವೀನ ಪುನಸ್ಥಾಪನೆಯಲ್ಲಿ ದುರಾಗ್ರಹಗ್ರಸ್ತರಾದವರಿಗೆ ಮುಂದಿನಗತಿ ಏನೆಂದು ಕಲಿಯುತ್ತಾರೆಂಬದನ್ನು ಅವರೇ ಯೋಚಿಸಿಕೊಳ್ಳಲಿ. ಒಬ್ಬಾರೆ ಇದನ್ನು ಪರ್ಯಾಲೋಚಿಸಿದರೆ ಇವರು ಪಂಚಾಂಗ ಕರ್ತೃಗಳ ಪದವಿಯನ್ನಪೇಕ್ಷಿಸಿದ್ದರೂ ದೇಶವಿರುದ್ಧವಾದ ಮತವನ್ನು ಪಂಡಿತರ ಅನುಮೋದನವಿಲ್ಲದೇ ಏಕಾಕಿ ಪ್ರಚಾರಪಡಿಸುವರು ಸ್ವಾರ್ಥಪರರೆಂಬುದೇ ಸ್ಪಷ್ಟ [illegible] ವೇಳೆ ಇವರು ಪಂಡಿತರ ಸಹಾಯದಿಂದಲೇ ಇದನ್ನು [illegible] ಈ ವಿಷಯ ಮುಂದೆ ನಾವು ಪ್ರಕಟಿಸಲಿಕ್ಕಿರುವ [illegible]

ಇಂತು ವಿದ್ವಜ್ಜನ [illegible] ವಿಧೇಯರು,

[illegible] ಶಾಸ್ತ್ರಿ

[illegible]

ಅನುಕ್ರಮಣಿಕೆ.

	ಪಾನು.
ಅಗ್ರಲೇಖ:—	
ಬ್ರಾಹ್ಮಣರೂ ಬ್ರಾಹ್ಮಣೇತರರೂ	೪
ಸ್ಫುಟವಿಚಾರಗಳು:—	
೧ ಪಂಜಾಬದೊಳಗಿನ ಖಡ್ಡಾಯದ ಶಿಕ್ಷಣ	,,
೨—೩ "ವೂರ್ ಕೆಬಿನೆಟ"ನ ವರ್ತಮಾನಗಳು	೪-೫
೪ ನಮ್ಮ ಜಿಲ್ಲೆಯನ್ನು ಕಾಡುವ ಎರಡು ವಿಶೇಷ ಸಂಗತಿಗಳು	,,
೫ ಮುಂಬಯಿಯ ಜೀವದಯಾ ಫಂಡಿನ ವೃತ್ತಾಂತ	,,
ಸ್ಥಳೀಕ—ಮಂಗಳೂರು	,,
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೩
೨ ಉತ್ತರ ಹಿಂದೂಸ್ಥಾನ	೩
೩ ಪತ್ರವ್ಯವಹಾರಗಳು	೩-೬
೪ ಲೇಖಗಳ—ಇಂಗ್ಲಿಷ ದೇಶಭಾಷೆಗಳೂ	೬
೫ ಬಂಟರ ಯಾನೆ ನಾಡವರ ಸಂಘ	,,

ಸ್ವದೇಶಾಭಿಮಾನಿ:

ಶಕ ೧೮೩೯ ವೈಶಾಖ ಶು. ೧೩ ಶುಕ್ರವಾರ.

ಬ್ರಾಹ್ಮಣರೂ ಬ್ರಾಹ್ಮಣೇತರರೂ.

ಇದೇ ವಿಷಯದ ಕುರಿತು ಸ್ವದೇಶಾಭಿಮಾನಿಯ ಇದೇ ವರ್ಷದ ಜನವರಿ ತಾ. ೧೯ನೆಯ ಸಂಚಿಕೆಯಲ್ಲಿ ಕೆಲವು ವಿಚಾರಗಳನ್ನು ಪ್ರದರ್ಶಿಸಿದ್ದೆವು.) ಈ ಹೊತ್ತು ಪುನಃ ಅದೇ ವಿಷಯವನ್ನು ಕೈಕೊಳ್ಳುವುದರ ಕಾರಣವೇನೆಂದರೆ, ನಮ್ಮ ನೆರೆ ಜಿಲ್ಲೆಯಾದ ಮಲಬಾರ ಜಿಲ್ಲೆಯ ಜಿಲ್ಲಾ ಸಭೆಯು ಕೆಲವು ದಿವಸಗಳ ಹಿಂದೆ ಕೂಡಿತ್ತಷ್ಟೆ, ಅದರಲ್ಲಿ ಮಿಸೆಸ್ ಬಿಝಂಟರು ತಮ್ಮ "ನ್ಯೂ ಇಂಡಿಯಾ" ಪತ್ರದಲ್ಲಿ ಹೇಳುವ ಹಾಗೆ ಕೆಲವು ವಿಘ್ನಗಳು ಆಗಲಿಕ್ಕಿದ್ದವು. ಎಂದರೆ ಮಲಬಾರ ಜಿಲ್ಲಾ ಪರಿಷತ್ತು ಸೇರದ ಹಾಗೆ ಬ್ರಾಹ್ಮಣೇತರ ಪಕ್ಷದಿಂದ ಪ್ರಯತ್ನಗಳು ನಡೆದಿದ್ದವು. ಪರಂತು ಆ ಪರಿಷತ್ತು ಜಿಲ್ಲೆಯೊಳಗಿನ ಎಲ್ಲ ಜಾತಿಮತಸ್ಥ ಪ್ರಮುಖರ ಸಾಹಾಯ್ಯದಿಂದಲೂ ಏಕಮತ್ಯದಿಂದಲೂ ನಿರ್ವಿಘ್ನವಾಗಿ ನೆರವೇರಿಸಲ್ಪಟ್ಟಿತೆಂದು ಮಿಸೆಸ್ ಬಿಝಂಟರು ಸ್ವತಃ ಬರೆದಿರುತ್ತಾರೆ. ಈ ವೃತ್ತಾಂತವು ಸತ್ಯವಾದುದಾದರೆ ಅದು ನಿಜವಾಗಿ ಶೋಚನೀಯವೆ ಸರಿ. ಅಲ್ಲದೆ, ಆ ಪರಿಷತ್ತಿನ ಅಧ್ಯಕ್ಷರಾದ ಪಿ. ಸಿ. ಪಿ. ರಾಮಸ್ವಾಮಿಯವರ ಭಾಷಣವನ್ನು ನೋಡಿದರೆ ಅದು ಅರ್ಧದಷ್ಟು ಬ್ರಾಹ್ಮಣ, ಬ್ರಾಹ್ಮಣೇತರ ಈ ವಿಷಯದಿಂದಲೂ, ಬ್ರಾಹ್ಮಣೇತರರ ಮತವನ್ನು ಪ್ರತಿಪಾದಿಸುವುದಕ್ಕಾಗಿಯೆ ಹೊರಡಿಸಿದ "ಜಸ್ಟಿಸ್" ಎಂಬ ದೈನಿಕದ ವಿಷಯದಿಂದಲೂ ತುಂಬಿಹೋಗಿದೆ. ಮದ್ರಾಸಿನ ಡಾ. ನಾಯರರು ಬ್ರಾಹ್ಮಣೇತರರ ಪ್ರಶ್ನೆಯನ್ನು ಉಪಸ್ಥಿತಪಡಿಸಿದಂದಿನಿಂದ ಮತ್ತು ಅವರ 'ಜಸ್ಟಿಸ್' ಹೊರಟಂದಿನಿಂದ ರೈಲ ಬಂಡಿಯಲ್ಲಿ ಪ್ರಯಾಣ ಮಾಡುವಾಗ ಸಹ ಇಬ್ಬರು ಸುಶಿಕ್ಷಿತರು ಸೇರಿದರೆ—ಅವರು ಪರಸ್ಪರ ಅಪರಿಚಿತರೆ ಇರಲಿ—ಅವರ ಸಂಭಾಷಣೆಯಲ್ಲಿ ಈ ಹೊಸ ಚಳವಳದ ವಿಷಯವು ಬಾರದೆ ಇರುವುದು ಬಹುಕ್ವಚಿತವೆಂದು ಅನುಭವಿಕರು ಹೇಳುವರು. ಮದ್ರಾಸ ಸಂಸ್ಥಾನದಲ್ಲಿ ಈ ಚಳವಳವು ಇಷ್ಟು ಪ್ರಮಾಣದಿಂದ ಹಬ್ಬಿಕೊಂಡಿದೆ ಮಾತ್ರವಲ್ಲ, ಮುಂಬಯಿ ಪ್ರಾಂತದಲ್ಲಿಯೂ ಇದರ ಚಿಹ್ನೆಗಳು ಕಾಣಹತ್ತಿವೆಂದು ಕೆಲವು ಮದ್ರಾಸ ಪತ್ರಿಕೆಗಳಿಂದಲೂ ಮುಂಬಯಿಯ "ಟೈಮ್ಸ ಒಫ್ ಇಂಡಿಯಾ" ಪತ್ರದಿಂದಲೂ ತಿಳಿದುಬರುತ್ತದೆ. ಬ್ರಾಹ್ಮಣೇತರರ ಈ ಹೊಸ ಚಳವಳವು ಇಷ್ಟು ಬೇಗನೆ ಇಷ್ಟು ವ್ಯಾಪಕವಾದುದನ್ನು ನೋಡುವಾಗ ಬಹು ಆಶ್ಚರ್ಯವಾಗುತ್ತದೆ. ಆದರೂ ಸುದೈವದ ಮಾತೇನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಇಷ್ಟರ ವರೆಗೆ ಈ ಚಳವಳದ ಸೋಂಕು ಹತ್ತಲಿಲ್ಲ. ಈ ಒಂದೇ ಕಾರಣದಿಂದ ನಾವು ಕೂಡ ಈ ಹೊತ್ತು ಈ ವಿಷಯವನ್ನೆತ್ತಿಕೊಳ್ಳುವುದು ಅಗತ್ಯವಿಲ್ಲೆಂದು ನಮ್ಮ ವಾಚಕ ವರ್ಗದಲ್ಲಿ ಕೆಲವರು ಅಭಿಪ್ರಾಯಪಡಬಹುದು. ಆದರೂ ಅದೆ ಸಮಯದಲ್ಲಿ ಇದು ಯಾವುದನ್ನು ಮುರಿದು ಹಾಕಲು ಜನ್ಮವನ್ನು ತಾಳಿದೆಯೊ ಅಂಥ 'ಹೋಮ್‌ರೂಲಿ'ನ ಚಳವಳವಾದರೂ ಈ ಜಿಲ್ಲೆಯಲ್ಲಿ ಇದೆಯೊ ಈ ಪ್ರಶ್ನೆಯನ್ನು ಅವರು ಆಲೋಚಿಸಬೇಕು. 'ಹೋಮ್‌ರೂಲಿನ' ಅಲ್ಪ ಸ್ವಲ್ಪ ಮೆಂಬರುಗಳಿರುವುದರಿಂದ ಅದರ ಚಳವಳ ಉಂಟೆಂದು ಹೇಳಲು ಸಾಧ್ಯವಿಲ್ಲ. ಎಷ್ಟಂತ ಈ ಜಿಲ್ಲೆಯಲ್ಲಿ ಹೋಮ್‌ರೂಲಿನ ಚಳವಳವೂ ಇಲ್ಲ ಮತ್ತು ಅದಕ್ಕೆ ಪ್ರತಿಯೋಗಿ ಆದ ಬ್ರಾಹ್ಮಣೇತರರ ಚಳವಳವೂ ಇಲ್ಲ. ಹೀಗಿದ್ದರೂ ದೇಶದೊಳಗೆ ಪ್ರಚಲಿತವಾಗಿರುವ ಸಾರ್ವಜನಿಕ ಪ್ರಶ್ನೆಯ ಕುರಿತು ತಮ್ಮ ಮತವನ್ನು ವ್ಯಕ್ತಗೊಳಿಸುವುದು ಪತ್ರಕಾರರ ಕರ್ತವ್ಯವಾದುದರಿಂದ ಈ ಹೊಸ ಚಳವಳದ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳಲು ಸಂಕಲ್ಪಿಸಿದ್ದೇವೆ.

ಇದಕ್ಕೆ ಮೇಲೆ ಹೊಸ ಚಳವಳವೆಂದು ಹೇಳಿದ್ದೇಕೆಂದರೆ, ಈ ಮೊದಲು ಇಂಥ ದೇಶೆ ಎಷ್ಟೊ ಚಳವಳಗಳು ಆಗಿಹೋದವು. ಹಿಂದೀ ರಾಷ್ಟ್ರೀಯ ಸಭೆಯು ಅಸ್ತಿತ್ವದಲ್ಲಿ ಬಂದು ಮೂರು ನಾಲ್ಕು ವರ್ಷಗಳು ದಾಟುತ್ತಲೆ ಮಾತ್ರ, ಹಿಂದೂಗಳೂ ಮುಸಲಮಾನರೂ [illegible] ಎರಡು ಭೇದಗಳೂ ತಲೆದೋರಿ ಒಬ್ಬರು ಒಂದು ಸಂಗತಿಯನ್ನು ಕೇಳುವುದು, ಇನ್ನೊಬ್ಬರು ಅದನ್ನ ನಿರಾಕರಿಸುವುದು. ಈ ಕ್ರಮವು ಮೊನ್ನೆ ತನಕ ನಡೆದುಕೊಂಡ ಇತ್ತು. ಇದಲ್ಲದೆ ರಾಷ್ಟ್ರೀಯ ಸಭೆಯು ಅಥವಾ ಬೇರೊಂದು ಸಾರ್ವಜನಿಕ ಸಂಸ್ಥೆಯ ಮುಖಾಂತರ ಸುಶಿಕ್ಷಿತರು ಯಾವ ಸುಧಾರಣೆಯನ್ನ ಕೇಳಲಿ, ಅದಕ್ಕೆ 'ಈ ಸುಧಾರಣೆಗಳು ನಿಮಗೆ ಸುಶಿಕ್ಷಿತರಿಗೆ ಮಾತ್ರ ಬೇಕಾಗಿವೆ; ಅಶಿಕ್ಷಿತ ಸಮಾಜಕ್ಕೆ ಇಂಥ ಚಳವಳವು ಅಗತ್ಯವಿಲ್ಲ. ಈ ಸುಶಿಕ್ಷಿತರು ಕೇವಲ ಸ್ವಂತ ಪ್ರಯೋಜನವನ್ನೆ ನೋಡಿಕೊಳ್ಳುತ್ತಾರೆ.' ಎಂಬೀ ವಿಧದ ಉತ್ತರವು ಅಧಿಕಾರಿಗಳಿಂದ ಕೂಡಲೆ ಸಿಗುತ್ತಿತ್ತು. ಇದರಿಂದ ಅಶಿಕ್ಷಿತರಿಗೂ ಸುಶಿಕ್ಷಿತರಿಗೂ ಮಧ್ಯದಲ್ಲಿ ಒಂದು ದೊಡ್ಡ ಗೋಡೆಯನ್ನು ನಿಲ್ಲಿಸಿದ್ದಂತಾಗುತ್ತಿತ್ತು. ಸುಶಿಕ್ಷಿತರಲ್ಲಿ ಪುನಃ ಎಲ್ಲರ ಏಕಮತ್ಯವಿತ್ತೆ? ಅವರಲ್ಲಿ ಮಿರುಸು, ಸಪ್ಪೆ ಮುಂತಾದ ತಂಡಗಳು. ಈ ರೀತಿಯಿಂದ ಇಲ್ಲಿಯವರು ಒಬ್ಬರ ಜುಟ್ಟು ಇನ್ನೊಬ್ಬರು ಹಿಡಿದು ತಂತಮ್ಮೊಳಗೆ ವಿವಾದಿಸಿಕೊಳ್ಳುವ ಪರಿಸ್ಥಿತಿಯು ನಿರ್ಮಿತವಾಗಿತ್ತು. ಆದರೆ ದಿನೇ ದಿನೇ ದೇಶದಲ್ಲಿ ಜ್ಞಾನದ ಅಭಿವೃದ್ಧಿಯಾಗುತ್ತ ಹೋಯಿತು. ರಾಜ್ಯಶಕಟವನ್ನು ನಡೆಸುವ ಅಧಿಕಾರಿ ಮಂಡಲದ ರಾಜನೀತಿಯ ದೋರಣದ ಅನುಭವವು ಎಲ್ಲರಿಗೆ ಸಕಪ್ಪ ಕಾರವಾಗಿ ಬರಹತ್ತಿತು. ಅರ್ಥಾತ್ ಈ ಜುಟ್ಟುಜುಟ್ಟಿಯು ಬಹುಕಾಲ ನಿಲ್ಲಲಿಲ್ಲ. ಮತ್ತು ಅದು ನಿಲ್ಲುವಂತೆಯೂ ಇದ್ದಿಲ್ಲ. ಹಿಂದುಗಳಿಗೆ ಜುಟ್ಟುವಿದ್ದರೂ ಮುಸಲ್‌ಮಾನರಿಗೆ ಅದಿಲ್ಲದುದರಿಂದ ಇದು ಅಸಾಧ್ಯವೆ ಎನ್ನೋಣ! ಇರಲಿ. ಕಳೆದ ರಾಷ್ಟ್ರೀಯ ಸಭೆಯಲ್ಲಿ ಎಲ್ಲರೂ ಹಿಂದು, ಮುಸಲ್‌ಮಾನ, ಪಾರ್ಸಿ ಮುಂತಾದ ಮತಸ್ಥರೂ, ಶಾಂತೋಗ್ರಪಕ್ಷದವರೂ, ಸುಶಿಕ್ಷಿತ ಅಶಿಕ್ಷಿತರೂ ಇವರೆ ಮೊದಲಾದವರೆಲ್ಲರು ಒಟ್ಟಿಗೆ ಸೇರಿ ಮಾತೃದೇಶದ ಸುಧಾರಣೆಯ ಹೆಸರಾದ ಕೈಯಾದ "ಹೋಮ್‌ರೂಲನ್ನು" ಕೇಳಿಕೊಂಡರು. ಇದರಿಂದ ಕೆಲವು ಎಂಗ್ಲೊ ಇಂಡಿಯನ್ನರಿಗೆ ಒಂದು ಅಪಜಯವೆ ಉಂಟಾದಂತಾಯಿತು. ಆಗ ಭೇದೋಪಾಯದ ಗುಟ್ಟನ್ನು ಯಾವಿಗ ಕುಡಿಸುವುದು ಎಂದು ಕೆಲವರು ಆಲೋಚಿಸಹತ್ತಿದರು. ಎಂಗ್ಲೊ ಇಂಡಿಯನ್ನರ ತಲೆ ಸಾಮಾನ್ಯವಲ್ಲ; ಸಮೃದ್ಧವಾದ ಬೆಳೆ ಬೆಳೆಯುವ ಜಮೀನು. ಕೂಡಲೆ ಬ್ರಾಹ್ಮಣರೂ, ಬ್ರಾಹ್ಮಣೇತರರೂ ಈ ಹೊಸ ಚಳವಳವು ಹೊರಟಿತು. ಈ ಉಪಪಾದನೆಯಿಂದ ಇದಕ್ಕೆ ಹೊಸ ಚಳವಳವೆಂದು ಹೇಳಿದ್ದು ಅನನ್ವಿತವಲ್ಲೆಂದು ನಮ್ಮ ವಾಚಕರಿಗೆ ತಿಳಿಯದೆ ಇರದು.

ಈ ಹೊಸ ಚಳವಳದವರ ಎಂದರೆ ಬ್ರಾಹ್ಮಣೇತರರ ಇತ್ಯರ್ಥವೇನೆಂಬುದನ್ನಾದರೂ ನೋಡೋಣ. ಕಾರಣ, ಅವರ ಮತದಲ್ಲಿ ನಿಜವಾಗಿ ದೇಶಹಿತದ ಸಾಮರ್ಥ್ಯ ಉಂಟೆಂದಾದರೆ ಅದನ್ನೆ ಎಲ್ಲರು ಅನುವರ್ತಿಸಬಹುದು. ಅಥವಾ ಇನ್ನೊಂದು ಪಕ್ಷದಲ್ಲಿ ಅವರ ಚಳವಳವು ದೇಶಹಿತಕ್ಕೆ ವಿಘಾತಕವಾದುದೆಂದಾದರೆ ಅವರು ಅದನ್ನು ಬಿಡಬಹುದು. ಆದುದರಿಂದ ಅದರ ಸ್ವರೂಪವನ್ನು ಮೊದಲಾಗಿ ವಿಚಾರಿಸೋಣ. ಬ್ರಾಹ್ಮಣೇತರರ ಅರಿಯುವೇನೆಂದರೆ, ಹಿಂದೂಸ್ಥಾನಕ್ಕೆ ಹೋಮ್‌ರೂಲ್ ಯಾನೆ ಪ್ರಾತಿನಿಧಿಕ ಸತ್ತೆಯನ್ನು ಕೊಡುವುದು ಹಿತಾವಹವಲ್ಲ. ಇಲ್ಲಿ ಬ್ರಾಹ್ಮಣರ ವರ್ಚಸ್ಸು ಮಿತಿಮೀರಿರುವುದರಿಂದ ಅವರು ಸ್ವರಾಜ್ಯ ಪ್ರಾಪ್ತ್ಯನಂತರ ಬ್ರಾಹ್ಮಣರಲ್ಲದವರನ್ನು ಮೇಲಕ್ಕೆ ತಲೆ ಎತ್ತಲು ಬಿಡಲಿಕ್ಕಿಲ್ಲ. ಬ್ರಾಹ್ಮಣರಲ್ಲಿ ವಿದ್ಯಾಪ್ರಸಾರಣೆಯು ಮೊದಲಿನಿಂದಲೆ ಇರುವುದರಿಂದ ವರಿಷ್ಠ ತರಗತಿಯ ನೌಕರಿಗಳು, ಅ ಐಯ್ಯರರು, ಈ ಐಯ್ಯಂಗಾರರು, ಓ ರಾಯರು, ಈ ಚಟ್ಟಿ(?)ರು, ಎಂದು ಮದ್ರಾಸಿನಲ್ಲಿ ಹಾಗೆ ಬಂಗಾಳದಲ್ಲಿ ಆ ಬಾನರ್ಜಿಗಳು, ಈ ಘೋಷರು ಈ ರೀತಿಯಿಂದ ಬ್ರಾಹ್ಮಣರ ಕೈಸೇರಿಹೋಗಿವೆ. ಬ್ರಾಹ್ಮಣರಲ್ಲಿ ಜಾತಿಮತ್ಸರವು ಮಿತಿಮೀರಿರುವ ಕಾರಣ ಅವರು ಇತರ ವರ್ಗದ ಪ್ರಯೋಜನವನ್ನು ಸಾಧಿಸುವುದು ಬಹು ಅಪರೂಪ. ಈ ಹೊತ್ತು ಹೋಮ್‌ರೂಲ್ ಬೇಕೆಂದು ಹೇಳುವವರು ಅವರೆ. ಅವರು ನೆನಸುವಂತೆ ಅವರ ಕೈಗೆ ಸ್ವರಾಜ್ಯದ ಸೂತ್ರಗಳು ಸಿಕ್ಕಿಹೋದರೆ ಅವರು ತಿರುಗಿ ಮನುಸ್ಮೃತಿಯ ಅನುದಾರವಾದ ಕಾನೂನುಗಳ ಸಾಮ್ರಾಜ್ಯವನ್ನು ಸ್ಥಾಪಿಸಲಿಕ್ಕಾಗಲಿ ಇಲ್ಲವೆ ಪೇಶ್ವೆಯವರ ರಾಜನೀತಿಯನ್ನು ಪುನರಾವರ್ತಿಸಲಿಕ್ಕಾಗಲಿ ಎಂದೂ ಕಡಿಮೆಮಾಡಲಿಕ್ಕಿಲ್ಲ. ತಾತ್ಪರ್ಯ ಒಂದೆ ಮಾತಿನಿಂದ ಹೇಳುವುದಾದರೆ ಹಿಂದೂಸ್ಥಾನಕ್ಕೆ ಈ ಹೊತ್ತು ಹೋಮ್‌ರೂಲ್ ಕೊಡುವುದೆಂದರೆ ಬ್ರಾಹ್ಮಣರ ರಾಜ್ಯವನ್ನು ಸ್ಥಾಪಿಸುವುದೆ ಸರಿ.

ಮೇಲೆ ದಿಗ್ದರ್ಶಿಸಿ ಈ ಮತವನ್ನು ಉಪಪಾದಿಸುವಾಗ ಜಸ್ಟಿಸ್ ದಂಥಪತ್ರಿಕೆಯು ಬ್ರಾಹ್ಮಣರನ್ನು ದೂಷಿಸಿದ್ದೆಷ್ಟು, ಬೈದುದೆಷ್ಟು, ಛಿದ್ರಗಳನ್ನು ಹೇಳಿದ್ದೆಷ್ಟು ಇವುಗಳ ಲೆಕ್ಕವನ್ನಾರಿಟ್ಟಿದ್ದಾರೆ! ಪಕ್ಷಾಭಿಮಾನವು ಹಾಗು ದ್ವೈತವು ಪ್ರಾರಂಭವಾದ ಕೂಡಲೆ ಅಲ್ಲಿ ಬೈಗಳು, ದೂಷಣೆ, ದುರುಕ್ತಿ ಇವುಗಳೆಲ್ಲ ಅತಿಥಿಗಳಾಗುತ್ತವೆ! ಇದು ಲೋಕದ ವಾಡಿಕೆ. ಅದರಂತೆ ಈ ವಾದದಲ್ಲಿಯಾದರೂ ಅವುಗಳ ಆತಿಥ್ಯವು ಯಥೇಚ್ಛವಾಗಿ ನಡೆಯುವುದು ಏನೂ ಆಶ್ಚರ್ಯವಲ್ಲ. ಹಿಂದೀ ಸ್ವರಾಜ್ಯದ ಚಳವಳವು ಸರಕಾರದ ಕೃಪೆಯಿಂದ ಒಂದುವೇಳೆ ಫಲಿತವಾದರೆ ಅದರ ಪ್ರಯೋಜನವನ್ನು ಬರೆ ಬ್ರಾಹ್ಮಣರೆ ಪಡೆಯುವರೆಂದು ಬ್ರಾಹ್ಮಣೇತರರು ನೆನಸಿಕೊಳ್ಳುವುದೆ ಆಶ್ಚರ್ಯವಾಗಿದೆ. ಹಿಂದೀ ಸ್ವರಾಜ್ಯದ ಕೇಳುವಿಕೆಯು ಬರೆ ಬ್ರಾಹ್ಮಣರಿಗಾಗಿ ಮಾತ್ರವಲ್ಲ, ಹಿಂದೂದೇಶದ ಕಾಯಂ ನಿವಾಸಿಗಳಾದ ಹಿಂದು, ಮುಸಲ್ಮಾನ, ಪಾರ್ಸಿ, ಕ್ರಿಶ್ಚನ್ ಹಾಗು ಹಿಂದುಗಳಲ್ಲಿ ಪುನಃ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಪಂಚಮ ಯಾನೆ ಅಸ್ಪೃಶ್ಯರೂ ಈ ಎಲ್ಲರಿಗಾಗಿದೆ. ಈ ತತ್ವವನ್ನು [illegible]

ಚಳವಳದ ಮಾರ್ಗದಲ್ಲಿ ವೃಥಾ ಅಡ್ಡಬರುವುದು ಯಾವ ಹಿಂದಿಗೂ ಯುಕ್ತವಲ್ಲ. ಹಿಂದೀ ಸ್ವರಾಜ್ಯವು ಪ್ರಾತಿನಿಧಿಕ ತತ್ವದ್ದಾಗಿದೆ. ಅದರಲ್ಲಿ ಯಾರಿಗೂ ಅಸೂಯೆ ಪಡಬೇಕಾದ ಅಗತ್ಯವಿಲ್ಲ. ದ್ವೇಷಬುದ್ಧಿಯಿಂದ ಇಂದಿಗೆ ಬ್ರಾಹ್ಮಣರನ್ನು ಎಷ್ಟು ದೂಷಿಸಿದರೂ ಹಿಂದೂಸ್ಥಾನದಲ್ಲಿ ಹಿಂದುತ್ವವು ಉಳಿಯುವಂತೆ ತಮ್ಮ ವಿದ್ಯಾಸಾಮರ್ಥ್ಯದಿಂದ ಮತ್ತು ಬುದ್ಧಿಬಲದಿಂದ ಮಾಡಿದವರು ಬ್ರಾಹ್ಮಣರಲ್ಲದೆ ಬೇರೆಯವರಲ್ಲೆಂಬುದು ನಿರ್ಮತ್ಸರಿಗಳಾದ ಎಲ್ಲರೂ ಒಪ್ಪಿಕೊಳ್ಳುವ ಮಾತಾಗಿದೆ. ಮಾತ್ರವಲ್ಲ, ನಾವು ಕಳೆದ ಸಲವೆ ಹೇಳಿದಂತೆ ಬ್ರಾಹ್ಮಣೇತರರಿಗಾಗಿಯೆ ಖಡ್ಡಾಯದ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಹಟಹಿಡಿದವರು ಮತ್ತು ಈಗಲೂ ಹಟಹಿಡಿಯುವವರು ಬ್ರಾಹ್ಮಣರೆ ಸರಿ. ಕಳೆದ ರಾಷ್ಟ್ರೀಯ ಸಭೆಯ ವ್ಯಾಸಪೀಠದಿಂದ "ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಕೊಟ್ಟಲ್ಲಿ ಬ್ರಾಹ್ಮಣರ ಸ್ವಾರ್ಥವು ತದಿತರರನ್ನು ಹಾಳುಮಾಡುವುದೆಂದಿದ್ದರೆ, ಆ ಸ್ವರಾಜ್ಯವನ್ನು ಬ್ರಾಹ್ಮಣರ ಕೈಯಲ್ಲಿ ಅಲ್ಲ, ಬ್ರಾಹ್ಮಣೇತರರ ಕೈಯಲ್ಲಿ ಅಲ್ಲ, ಪಂಚಮರ ಕೈಯಲ್ಲಿಯೆ ಕೊಡಿರಿ. ಎಂತೂ ಸ್ವರಾಜ್ಯವನ್ನು ಕೊಡಿರಿ." ಎಂದು ಬ್ರಾಹ್ಮಣ್ಯದ ಸ್ವಾರ್ಥವನ್ನು ತ್ಯಜಿಸಿ ಕೂಗಿ ಹೇಳಿದವರು ಬ್ರಾಹ್ಮಣರೆ. ಹೀಗಿರುವಾಗ ಬ್ರಾಹ್ಮಣರು ಸ್ವಪ್ರಯೋಜನಕ್ಕಾಗಿ ಸ್ವರಾಜ್ಯವನ್ನು ಕೇಳುತ್ತಾರೆಂದು ಹೇಳಿ ಕೂಡಿದಷ್ಟು ವಿಘ್ನಗಳನ್ನು ತಂದೊಡ್ಡುವುದು ಯುಕ್ತವಲ್ಲ. ಇದು ವೈದ್ಯನು ಸ್ವಂತ ಪ್ರಯೋಜನಕ್ಕಾಗಿಯೆ ಔಷಧವನ್ನು ಕೊಡುವುದೆಂದು ಒಬ್ಬ ರೋಗಿಯು ನೆನಸುವಂತೆಯೆ ಆಗಿದೆ. ಬ್ರಾಹ್ಮಣೇತರರ ಈ ವಿರೋಧದಿಂದ ಇಲ್ಲಿಯ ಬ್ಯುರೋಕ್ರಸಿಗೆ ಮಾತ್ರ ಬಲ ಬಂದಂತಾಗುತ್ತದೆ. ಈ ಹೊತ್ತು ಬ್ರಾಹ್ಮಣರೂ ಬ್ರಾಹ್ಮಣೇತರರೂ ಹಾಗು ಬೇರೆಯವರೂ ಸಹ ಒಟ್ಟಿಗೆ ಸೇರಿ ಏಕಮತ್ಯದಿಂದ ಸ್ವರಾಜ್ಯವನ್ನು ಕೇಳಿದ್ದಲ್ಲಿ ಈ ಹೊತ್ತೆ ರಾಜ್ಯಕರ್ತರು ಈ ದಾನವನ್ನು ಕೊಡ್ಬಾರೆಂದಿಲ್ಲ. ಆದರೆ ಬ್ರಾಹ್ಮಣೇತರರು ಅಥವಾ ಬೇರೆಯವರು ಈ ಬಗೆಯಿಂದ ವಿರೋಧವನ್ನು ತಂದೊಡ್ಡಿದರೆ ಅದಕ್ಕೆ ಮಾತ್ರ ಬೆಲೆ ಬರುತ್ತದೆ. ಈ ಮಾತನ್ನೆ ಬ್ರಾಹ್ಮಣೇತರರು ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಬೆಕ್ಕಿನಿಂದ ಕಾರ್ಯಸಿದ್ಧಿಯಾಗದು. ಆದರೆ ಅದು ಸುಮ್ಮನೆ ಅಡ್ಡಬಂದು ವಿಘ್ನವನ್ನು ಮಾತ್ರ ತರಬಹುದು.

ಸ್ಫುಟವಿಚಾರಗಳು.

೧. ಹಿಂದುಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗುವಂತೆ ಸರಕಾರವು ಆ ಬಗ್ಗೆ ಖಡ್ಡಾಯದ ಕ್ರಮವನ್ನನುಸರಿಸಬೇಕೆಂದು ದಿವಂಗತ ಗೋಖಲೆಯವರಿಂದ ಈ ವರೆಗಿನ ಲೋಕಪ್ರತಿನಿಧಿಗಳು ಎಷ್ಟೊ ಸಾರಿ ಆಯಾ ಸ್ಥಳಿಕ ಕೌನ್ಸಿಲುಗಳಲ್ಲಿ ಪ್ರಯತ್ನಿಸುತ್ತಿದ್ದಾರೆ. ಈ ವಿಷಯದ ಕಡೆಗೆ ಬ್ರಿಟಿಷ್ ಸರಕಾರದವರು ಅಷ್ಟೊಂದು ಕಿವಿಗೊಡಲಿಲ್ಲವಾದರೂ ಬರೋಡಾ, ಮೈಸೂರ ಮೊದಲಾದ ಸಂಸ್ಥಾನಗಳಲ್ಲಿ ಈ ಕ್ರಮವು ಅನುಸರಿಸಲ್ಪಡಹತ್ತಿದೆ. ಗೀತೆಯಲ್ಲಿ "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ" ಎಂದರೆ ಶಿಷ್ಟರಾದವರನ್ನು ನೋಡಿ ಅನ್ಯರು ಪ್ರವರ್ತಿಸುತ್ತಾರೆಂದು ಹೇಳಿದಂತೆ ಪಾಶ್ಚಾತ್ಯ ಸುಧಾರಣೆ ಮತ್ತು ಉದಾರ ತತ್ವ ಇವುಗಳ ಆಧಾರದಿಂದ ನಡೆಯುವಂಥ ಬ್ರಿಟಿಷ್ ಸರಕಾರವು ಸಂಸ್ಥಾನಿಕರಿಗೆ ಉದಾಹರಣೀಯವಾಗಬೇಕಾದುದು. ಖಡ್ಡಾಯ ಶಿಕ್ಷಣದ ಮೇಲ್‌ಪಂಕ್ತಿಯನ್ನು ಹಾಕಿಕೊಡುವುದು ಬ್ರಿಟಿಷ್ ಸರಕಾರದ ಕೆಲಸವಿತ್ತು. ಹಾಗೆ ಅದು ಹಾಕಿಕೊಡಲಿಲ್ಲ. ಪರಂತು ಸಂಸ್ಥಾನಿಕರು ಹಾಕಿಕೊಟ್ಟ ಮೇಲ್‌ಪಂಕ್ತಿಯನ್ನಾದರೂ ನಮ್ಮ ಸರಕಾರವು ತಿದ್ದಬಹುದಿತ್ತಲ್ಲವೆ? ಅದೂ ಕಂಡು ಬರುವುದಿಲ್ಲ. ಆದರೆ ಈ ಮಾತಿಗೆ ಪಂಜಾಬ ಪ್ರಾಂತದ ಸರಕಾರವು ಅಪವಾದವಾಗಿದೆ. ಇದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ಪಂಜಾಬ-ಲೆಫ್ಟಿನೆಂಟ್-ಗವರ್ನರರು ತಮ್ಮ ಕೌನ್ಸಿನಲ್ಲಿ ಜಮಾ-ಖರ್ಚಿನ ವಿಷಯವನ್ನು ಉಪಸಂಹರಿಸುವಾಗ ಹೇಳಿದ್ದೇನೆಂದರೆ ಪಂಜಾಬ ಪ್ರಾಂತದೊಳಗಿನ ಕೆಲವು ಕಡೆಗಳಲ್ಲಿ ಪರೀಕ್ಷಾರ್ಥವಾಗಿ ಖಡ್ಡಾಯದ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ಪಂಜಾಬ ಸರಕಾರವು ಆಲೋಚಿಸಿದೆ. ಆದರೆ ಅದಕ್ಕೆ ಖಡ್ಡಾಯದ ಶಿಕ್ಷಣವನ್ನು ಹೊಂದುವ ಇಚ್ಛೆಯುಳ್ಳವರ ಬಹುಮತವಿರಬೇಕು. ಹಾಗು ಜನರು ಅವಶ್ಯವಿದ್ದ ದ್ರವ್ಯಾನುಕೂಲ್ಯವನ್ನು ಮಾಡಲು ಸಿದ್ಧರಿರಬೇಕು. ಹೀಗೆ ಎರಡು ಶರ್ತಗಳನ್ನಿಟ್ಟು ಪಂಜಾಬ ಸರಕಾರವು ಈ ಶರ್ತಗಳನ್ನು ಒಪ್ಪಿಕೊಳ್ಳುವ ಕಡೆಗಳಲ್ಲಿ ಅನುಭವಾರ್ಥವಾಗಿ ಖಡ್ಡಾಯದ ಶಿಕ್ಷಣವನ್ನು ಪ್ರಾರಂಭಿಸಲು ಅಡ್ಡಿಯಿಲ್ಲೆಂದು ಅಭಿಪ್ರಾಯಪಡುತ್ತಿದೆ. ಪಂಜಾಬ ಸರಕಾರವು ಈ ರೀತಿಯಿಂದ ಉಪಕ್ರಮಿಸಿದ್ದನ್ನು ನೋಡಿ—ಮತ್ತೆ ಈ ಉಪಕ್ರಮವು ಸಂಸ್ಥಾನಿಕರ ಅನುಕರಣೆಯಿಂದ ಉಂಟಾದುದೆ ಇರಲಿ—ಪ್ರತಿ ಒಬ್ಬನು ಸಂತೋಷಪಡತಕ್ಕದ್ದು. ಈ ಉಪಕ್ರಮವು ಅನುಭವಾರ್ಥವಾಗಿದ್ದರೂ ಅದರಿಂದ ಬರುವ ಅನುಭವವು ಹಿತಾವಹತ್ವೇನ ಪರಿಣಮಿಸಿ ಈ ಖಡ್ಡಾಯ-ಶಿಕ್ಷಣ ಕ್ರಮವು ಪಂಜಾಬದ ಮಟ್ಟಿಗಾದರೂ ಕಾಯಂ ಆದೀತೆಂದು ನೆನಸುತ್ತೇವೆ. ಪಂಜಾಬದ ಈ ಅನುಕರಣೀಯ ಉದಾಹರಣೆಯನ್ನು ಇತರ ಪ್ರಾಂತೀಯ ಸರಕಾರಗಳಿಗೆ ಕಣ್ಣೆದುರಿಟ್ಟುಕೊಳ್ಳಲು ಸದ್ ಬುದ್ಧಿಯು ಬರಲೆಂದು ಆಶಿಸಿದರೆ ಅದು ಅಸ್ಥಾನದಲ್ಲಾದೀತೆ?

೨. 'ವೂರ್ ಕೆಬಿನೆಟ'ನಿಂದ ಬರುವ ವರ್ತಮಾನಗಳೆಲ್ಲವೂ ಒಂದೆ ತರದವಿರುವದಿಲ್ಲ. ಕೆಲವು ಹಿಂದಿಗೆ ಉತ್ಸಾಹಕಾರಕಗಳಾಗಿದ್ದರೆ ಕೆಲವು ಅನುತ್ಸಾಹಕಾರಕಗಳಾಗಿರುವವು. ಇದು ಆಶ್ಚರ್ಯದ ಸಂಗತಿಯಲ್ಲ. ಎಲ್ಲ [illegible]

ಮಾನಗಳನ್ನು ನೋಡೋಣ. ಒಂದು ಔತಣದ ಸಂದರ್ಭದಲ್ಲಿ ಕೆನಡಾ ದೇಶದ ಮಂತ್ರಿಗಳಾದ ಸರ್ ರೊಬರ್ಟ್ ಬೋರ್ಡನ್ ಎಂಬವರು ಹೇಳಿದ್ದೇನೆಂದರೆ "ಇಂಪೀರಿಯಲ್ ವೊರ್-ಕೆಬಿನೆಟ್ ಈ ಸಂಸ್ಥೆಯು ಸುಸ್ಪಷ್ಟವಾದ ಅಭಿವೃದ್ಧಿಯ ಸಾಕ್ಷಿಯನ್ನು ಕೊಡುತ್ತದೆ. ಕಾರಣ, ಇದರಿಂದ ಸನದುಶೀರ ಸಂಬಂಧಗಳ ಒಗಟುಗಳನ್ನು ಬಿಚ್ಚಬಹುದಾಗಿದೆ. ಸರ್ವಸಾಧಾರಣವಾದ ರಾಜನಿಷ್ಠೆಯಿಂದ ಒಡಗೂಡಿದ ಸಮಾನ ರಾಷ್ಟ್ರೀಯತೆಯು ಸಾಮ್ರಾಜ್ಯದ ಒಂದು ಪ್ರಶಸ್ತವಾದ ಮಾರ್ಗವಾಗಿದೆ." ಈ ಅಂಬೋಣದಂತೆ ವಿಚಾರಿಸಿದರೆ ಬ್ರಿಟಿಷ್ ಸಾಮ್ರಾಜ್ಯದ ಅಧಿಕಾರದಲ್ಲಿಯೂ ಹಿಂದುಸ್ಥಾನವು ಬೇರೆ ಸ್ವತಂತ್ರ ಭಾಗಗಳಂತೆ ಸಮಾನ ರಾಷ್ಟ್ರೀಯತ್ವವನ್ನು ಬಯಸುವುದು ತಪ್ಪಲ್ಲ. ಇದೊಂದು. ಹಾಗೆಯೆ ಇನ್ನೊಂದು ಉತ್ತೇಜನಕಾರಕವಾದ ವಾರ್ತೆಯು ಅಲ್ಲಿಂದಲೆ ಬಂದಿದೆ. ಹಿಂದುಸ್ಥಾನದ ಕಡೆಯಿಂದ ಪ್ರತಿನಿಧಿಗಳಾಗಿ ಹೋದವರಲ್ಲಿ ಒಬ್ಬರಾದ ಸರ್ ಮೆಸ್ಟನ್ ದೊರೆಗಳು ಹಿಂದೀ ಪ್ರತಿನಿಧಿಗಳನ್ನು ಇಂಗ್ಲಂಡವು ಆದರದಿಂದ ಸತ್ಕರಿಸಿದ್ದಕ್ಕೆ ಹಿಂದೀ ಜನರು ಕೃತಜ್ಞರಾಗಿದ್ದಾರೆ ಎಂದೂ ಹಿಂದೂಸ್ಥಾನದ ರಾಜಭಕ್ತಿಯು ಸಂಸ್ತುತ್ಯವಾದುದೆಂದೂ ಹೇಳಿ ಕೊನೆಗೆ ಪ್ರಸ್ತಾಪಿಸಿದ್ದೇನೆಂದರೆ, ಪಾರ್ಲಿಮೆಂಟಿನ ಮೆಂಬರುಗಳೂ ವರ್ತಮಾನಪತ್ರಿಕೆಗಳ ಸಂಪಾದಕರೂ ... ಹಿಂದುಸ್ಥಾನವನ್ನು ಸಂದರ್ಶಿಸಿ—ಅಲ್ಲಿಯ ಕಷ್ಟಗಳನ್ನೂ ಇಕ್ಕಟ್ಟುಗಳನ್ನೂ ಪರಿಹರಿಸಲು ಸಹಾಯಕರಾಗಬೇಕು. ಸರ್ ಜೇಮ್ಸ್ ಮೆಸ್ಟನರ ಈ ಸೂಚನೆಯೂ ಸಹಾ ಹಿಂದಿಗಳಿಗೆ ಉತ್ತೇಜನಾಸ್ಪದದೆ.

೩. ಆದರೆ ಮೇಲೆ ಹೇಳಿದ್ದಂತೆ ಅನುತ್ಸಾಹಕಾರಿಗಳಾದ ವರ್ತಮಾನಗಳೂ ಬರುವವು. ಹೌಸ್ ಒಫ್ ಕೊಮನ್ಸಿನಲ್ಲಿ ಮಿ. ಬೋನರ್‌ಲೊ ಇವರು ಶ್ರುತಪಡಿಸಿದ್ದೇನೆಂದರೆ, ಸಾಮ್ರಾಜ್ಯದವರ ಪ್ರಯೋಜನವು ಕೆಡದಂತೆ ನಮ್ಮ ಸಾಮ್ರಾಜ್ಯದೊಳಗಿನ ಪ್ರತಿ ಒಂದು ಭಾಗವು ಬೇರೆ ಭಾಗಗಳಲ್ಲಿಯ ಉತ್ಪತ್ತಿಗಳಿಗೂ, ಕೈಗಾರಿಕೆಗಳಿಗೂ ಅನುಕೂಲವಾದ ಶರ್ತಗಳನ್ನೂ ಸೌಕರ್ಯಗಳೂ ವಿಶೇಷವಾಗಿ ಕೊಡತಕ್ಕದೆಂದು ಇಂ. ವೊರ್ ಕೆಬಿನೆಟ್ ಸರ್ವಸಮ್ಮತದಿಂದ ಅಂಗೀಕರಿಸಿದ್ದೆ. ಮಿ. ಬೋನರ್‌ಲೊ ಇವರು ಹೇಳುವಂತೆ ವೊರ್ ಕೆಬಿನೆಟಿನ ಈ ಠರಾವು ಯುದ್ಧಾಂತ್ಯದಲ್ಲಿ ಜಾರಿಗೆ ಬರುವುದಾದರೆ ಹಿಂದೂಸ್ಥಾನ ಸರಕಾರವು ಹೆಚ್ಚಿಸಿದ ವಸ್ತ್ರಗಳ ಮೇಲಿನ ಕರಾ ಅವಸ್ಥೆಯು ಏನಾಗಬೇಕಾಯಿತು? ಬ್ರಿಟಿಷ್ ಸಾಮ್ರಾಜ್ಯದೊಳಗಿನ ಇಂಗ್ಲಂಡಿನ ಕೈಗಾರಿಕೆಗಳಿಗೆ—ಲಂಕಾಶಾಯರಿನ ವಸ್ತ್ರದ ಗಿರಣಿಗಳಿಗೆ—ಅನುಕೂಲವಾದ ಶರ್ತಗಳನ್ನೂ ಸೌಕರ್ಯಗಳನ್ನೂ ನಾವು ಕೊಡಲು ಹೊಂಟರೆ ನಮ್ಮ ಎಂದರೆ ಹಿಂದೂಸ್ಥಾನದ ಸಾಂಪತ್ತಿಕ ಸ್ಥಿತಿಯು ಏನಾಗಬೇಕಾಯಿತು? ದೇಶದ ಸಾಂಪತ್ತಿಕ ಸ್ಥಿತಿಯು ಕೈಗಾರಿಕೆ ಮತ್ತು ಉತ್ಪನ್ನಗಳ ಮೇಲೆ ಹೊಂದಿರುವುದು. ಆ ಕೈಗಾರಿಕೆಗಳು ಬೇರೆ ಭಾಗಗಳ ಅನುಕೂಲತೆಗಾಗಿ ತುಳಿಯಲ್ಪಡುವುದಾದರೆ ದೇಶದ ಸಾಂಪತ್ತಿಕ ಸ್ಥಿತಿಯು ಹೇಗೆ ತಾನೇ ನಿಂತೀತು? ಈ ತರದ ಪ್ರಶ್ನೆಗಳು ಮಿ. ಲೊ. ಇವರ ಭಾಷಣ ಕೇಳಿ ಅನೇಕರಿಗೆ ಒದಗುತ್ತಿವೆ. ಆದರೆ ಈ ಪ್ರಶ್ನೆಗಳು ಬರಿ ಜನರ ತಲೆಯಲ್ಲಿ ಬಂದು ಪ್ರಯೋಜನವೇನು? ವೊರ್‌ಕೆಬಿನೆಟಿನಲ್ಲಿ ನಮ್ಮ ಪ್ರತಿನಿಧಿಗಳೆಂದರೆ ಮಿ. ಚೆಂಬರಲೇನ ಇವರೊಬ್ಬರೆ ಅಲ್ಲವೊ? ಅವರು ಮತ್ತು ಇಲ್ಲಿಂದ ಹೋದ ಅವರ ಸಹಾಯಕರು ವೊರ ಕೆಬಿನೆಟಿನ ಈ ಅಂಗೀಕರಣೆಗೆ ಯಾವ ಉಪಾಯವನ್ನು ಯೋಜಿಸುವವರಿದ್ದಾರೆ ಇದನ್ನು ನೋಡಬೇಕು.

೪. ನಮ್ಮ ಜಿಲ್ಲೆಯನ್ನು ಕಾಡುವ ಎರಡು ವಿಶೇಷ ಸಂಗತಿಗಳಲ್ಲಿ ಒಂದನೇದು ಭಟಕಳ ಶಿವಮೊಗ್ಗಾ ರೈಲ್ವೇ. ಎರಡನೇದು ಈ ಜಿಲ್ಲೆಯ ವಿಭಜನೆ, ಅಂದರೆ ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸಿ ಬಿಡುವದು. ಭಟಕಳವನ್ನು ರೇವಾಗಿ ಮಾಡಿಕೊಂಡು ಮೈಸೂರು ಸರಕಾರದವರು ಶಿವಮೊಗ್ಗಾದಿಂದ ಭಟಕಳಕ್ಕೆ ರೈಲ್ವೇ ಹಾಕಿಸುವ ವಿಷಯು ಆಗಿಂದಾಗ್ಯೆ ವರ್ತಮಾನ ಪತ್ರಗಳಲ್ಲಿ ವಿಧವಿಧದ ಪ್ರಸ್ತಾಪಗಳು ಬರುತ್ತಿರುತ್ತವೆ. ಆದರೆ ಈ ತನಕ ಈ ವಿಷಯದಲ್ಲಿ ಇಂಡಿಯಾ ಸರಕಾರದವರು ತಮ್ಮ ಅಖೈರ ತೀರ್ಮಾನವನ್ನು ಹೊರಪಡಿಸಲಿಲ್ಲ. ಮುಂಬಾಯಿ ಮತ್ತು ಮದ್ರಾಸು ಸರಕಾರಗಳು ತಮ್ಮ ಅಭಿಪ್ರಾಯಗಳನ್ನು ಈ ಮೊದಲೇ ಕೊಟ್ಟಿರುತ್ತವೆ. ಮೈಸೂರು ಸರಕಾರದ ಪರವಾಗಿ ದಿವಾನ್ ಸಾಹೇಬರವರು ಮೈಸೂರು ಪ್ರತಿನಿಧಿಗಳ ಸಭೆಯಲ್ಲಿ ಸಂಸ್ಥಾನದ ಬಜೇಟನ್ನು ಸಭೆಯ ಮುಂದಿಡುವಾಗ ಈ ರೀತಿ ಹೇಳಿರುವರು:—ಭಟ್ಕಳವು ರೇವಿನ ಬಗ್ಗೆ ಯೋಗ್ಯವೋ ಎಂಬುದನ್ನು ನಿರ್ಧರಿಸಲು ಬೇಕಾದ ಪರಿಶೋಧನೆಯ ಪ್ರಯತ್ನಗಳು ಇನ್ನೂ ನಡಿಯುತ್ತಲಿವೆ. ಈತನಕ ನಡೆದ ಶೋಧನೆಯಿಂದ ಅದು ಯೋಗ್ಯವೇ ಎಂತ ಕಂಡು ಬಂದಿದೆ. ಮೈಸೂರು ಸಂಸ್ಥಾನದ ಸರಹದ್ದಿನಿಂದ ಭಟ್ಕಳದಲ್ಲಿ ಸಮುದ್ರವು ೧೧೦ ಮೈಲುಗಳ ದೂರದಲ್ಲಿರುವದು. ಈ ಹಾದಿಯು ಇತರ ಹಾದಿಗಳಂತೆಯೇ ಇರುವದು. ಮತ್ತು ಘಟ್ಟಗಳ ಶಿರೋಭಾಗದಿಂದ ಭಟ್ಕಳ ಕರಾವಳಿಗೆ ರೈಲ್ವೇಯನ್ನು ಹಾಕಿಸುವದು ಸುಲಭವಾಗಿದೆ. ರೈಲ್ವೆಯನ್ನು ಹಾಕಿಸುವ ಈ ಸಂಗತಿಯಲ್ಲಿ ಸಂಸ್ಥಾನದಲ್ಲಿರುವವರ ಮತ್ತು ಅದರ ಹೊರಗಿನವರ ಅನುಕೂಲತೆಗಳನ್ನು ಆಲೋಚಿಸಿಕೊಂಡು ಅವರ ಪೂರ್ಣ ಸಹಕಾರದಿಂದಲೆ ಈ ಕಾರ್ಯವನ್ನು ಪೂರೈಸಬೇಕಾಗಿ ಸರಕಾರದವರ ಯೋಚನೆ. ಆದರೆ ಸಂಸ್ಥಾನಕ್ಕೆ ಅಧಿಕವಾದ ನಷ್ಟ ಮತ್ತು ನಿಷ್ಪ್ರಯೋಜನವು ಈ ಸಂದರ್ಭಗಳಲ್ಲಿ ಉಂಟಾಗದಂತೆ ನೋಡಿಕೊಳ್ಳಬೇಕು. ಇದು ದಿವಾನ ಸಾಹೇಬರ ಮಾತುಗಳ ಸಾರಾಂಶ. ಭಟ್ಕಳವೇ ಮೈಸೂರು ಸಂಸ್ಥಾನಕ್ಕೆ ಬೇಕಾದದ್ದು ಮತ್ತು ಆ ಮಾರ್ಗವಾಗಿಯೇ ಮೈಸೂರು ಸಂಸ್ಥಾನಕ್ಕೆ ಪಶ್ಚಿಮ ಕರಾವಳಿಗೂ ರೈಲ್ವೆ [illegible]

ಇದೆ. ಇಂಡಿಯಾ ಸರಕಾರದವರ ಅನುಮತಿಯನ್ನು ಮಾತ್ರ ಮೈಸೂರು ಸರಕಾರದವರು ನಿರೀಕ್ಷಿಸಿಕೊಂಡಿರುವರು. ಮಂಗಳೂರು ಹಾಸನ್ ರೈಲ್ವೇಯ ಮಾತೇ ಇಲ್ಲ. ಮೈಸೂರು ಸರಕಾರಕ್ಕೆ ಅದು ಇಷ್ಟವಾದದ್ದಲ್ಲ. ಅದ್ದರಿಂದ ಮೈಸೂರು ಸಂಸ್ಥಾನದಂಥಾ ಮಹತ್ವವಾದ ಸಂಸ್ಥಾನಿಕರ ಈ ಹಟಸಾಧನೆಯ ಮುಂದೆ ಈ ಚಿಕ್ಕ ಜಿಲ್ಲೆಯ ಹಾಲು ಹವಾಲಿಗಳು ಇಂಡಿಯಾ ಸರಕಾರದವರಿಂದ ಹೇಗೆ ಕೇಳಸೋಣಾಗುವವೋ ಎಂಬುವ ಸಂಶಯವು ದಿವಾನ್ ಸಾಹೇಬರ ಮೊನ್ನೆಯ ಮಾತುಗಳಿಂದ ಮತ್ತಷ್ಟು ಅಧಿಕವಾಗಲು ಕಾರಣವಿದೆ. ಈ ಸಂಗತಿ ಹೀಗೆ. ಇನ್ನೊಂದು ಏನು? ಇತ್ತಲಾಗೆ ಕಲ್ಲಿಕೋಟೆಯಲ್ಲಿ ಕೂಡಿದ ಜಿಲ್ಲಾ ಕನ್ಫರೆನ್ಸಿನಲ್ಲಿ ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸಬೇಕೆಂದು ಸಭೆಯವರ ನಿರ್ಣಯವಾಗಿದೆ. ನಮ್ಮ ಜಿಲ್ಲೆಯಿಂದ ಕಾಸರಗೋಡು ತಾಲೂಕನ್ನು ಪ್ರತ್ಯೇಕಿಸುವ ಸಾಧನೆಗೆ ಮಲಬಾರು ಜಿಲ್ಲೆಯ ಪೂರ್ಣ ಸಹಾಯವಿದೆಂದು ಈ ನಿರ್ಣಯದಿಂದ ಖಚಿತವಾಯಿತು. ಅದ್ದರಿಂದ ಈ ಬಾಬಿನಲ್ಲಿಯೂ ನಮ್ಮ ಜಿಲ್ಲೆಗೆ ಒಂದೊದಗುವ ಸಂಕಷ್ಟಗಳನ್ನು ಪದೇಪದೇ ಅಧಿಕಾರಿಗಳ ಲಕ್ಷ್ಯಕ್ಕೆ ತರುತ್ತ ಮಲಬಾರಿನವರ ಈ ಕಾಟವನ್ನು ಇದಿರಾಡುತ್ತಿರಬೇಕಾಗಿದೆ. ಗವರ್ನರ ದೊರೆಗಳವರ ಸವಾರಿಯು ಈ ಜಿಲ್ಲೆಗೆ ಬರುವದೆಂಬ ವರ್ತಮಾನವು ಇದೆ. ಹಾಗೆ ಬಂದ ಸಂದರ್ಭದಲ್ಲಿ ಪ್ರಭುಗಳಿಗೆ ಮನಪಿಕೆ ಈ ಎರಡು ಕಾಟಗಳಿಂದ ನಮ್ಮೆಲ್ಲರಲ್ಲಿ ಪ್ರಾಪ್ತವಾಗಿರುವ ಮನೋವ್ಯಥೆಯನ್ನು ತಿಳಿಸಿ ಇದರಿಂದ ನಿವೃತ್ತಿಯನ್ನು ಹೊಂದುವ ಬಗೆಯನ್ನು ಕೇಳಿಕೊಳ್ಳಬೇಕಾಗಿರುವದು.

೫. ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಜೀವದಯಾ ಜ್ಞಾನ ಪ್ರಸಾರಕ ಫಂಡಿನ ಆರನೇ ವರ್ಷದ ವೃತ್ತಾಂತವು ನಮ್ಮ ಕೈಸೇರಿದೆ. ಮಾಂಸ ಆಹಾರವು ಮನುಷ್ಯನಿಗೆ ತಕ್ಕದ್ದಲ್ಲ, ಅದು ಮನುಷ್ಯ ಸ್ವಭಾವಕ್ಕೂ ಪ್ರಕೃತಿಗೂ ವಿರೋಧವಾಗಿರುವಂಥಾದ್ದು, ಆರೋಗ್ಯ ವಿತ್ತವ್ಯಯ, ವಿತಭೋಗ ಈ ದೃಷ್ಟಿಯಿಂದ ನೋಡಿದರೂ ಇದು ಆಕ್ಷೇಪಕರ, ಇಷ್ಟೇ ಅಲ್ಲ, ಅಹಿಂಸಾಪರಮೋಧರ್ಮ—ಧರ್ಮಕ್ಕೂ ವಿರೋಧ, ಎಂಬೀ ತತ್ವಗಳನ್ನು ನಾನಾ ವಿಧಾನಗಳಲ್ಲಿ ಮಾಂಸತಿನ್ನುವವರ ಲಕ್ಷ್ಯಕ್ಕೆ ತಂದು ಪ್ರಾಣಿಗಳ ವಧೆಯನ್ನು ಸಾಧ್ಯವಾದಷ್ಟು ಕಡಿಮೆಮಾಡುವದು, ವಿಧವೆಯರ ಸಂಕಷ್ಟನಿವಾರಣೆ, ಚಿನ್ನಾಭರಣಗಳಗೋಸ್ಕರ ಮಕ್ಕಳ ವಧೆಯನ್ನು ನಿಲ್ಲಿಸುವದು, ಹಿಂಸಾತ್ಮಕ ಆಚಾರಗಳನ್ನು ತೆಗೆದುಹಾಕಿಸುವದು, ಪಶುಪಕ್ಷಿಗಳನ್ನು ಪೀಡನೆಯಿಂದ ರಕ್ಷಿಸುವದು, ಈ ಎಲ್ಲಾ ಉದ್ದೇಶಗಳ ನೆರವೇರಿಕೆ ಬಗ್ಗೆ ಈ ಫಂಡು ಏರ್ಪಡಿಸಲ್ಪಟ್ಟಿರುವದು. ಕ್ರೈಸ್ತರೂ ಮಹಮ್ಮದೀಯರೂ ಪಾರ್ಸಿಗಳೂ ಏಕೋಭಾವದಿಂದ ಈ ಫಂಡಿನ ಕಾರ್ಯಗಳನ್ನು ನಿರ್ವಹಿಸುತ್ತಿರುವರು. "ಮುಂಬಯಿ ಮುನ್ಸಿಪಾಲಿಟಿಯಲ್ಲಿ ಕೆಲಸಮಾಡುತ್ತಿರುವ ಹಲವು ಬಡ ಉಪಾಧ್ಯಾಯರಿಗೆ ಸಂಬಳವು ಸಾಲದೆ ಅವರಲ್ಲಿ ಹೆಚ್ಚಿನವರು ಕ್ಷಯ ಇತ್ಯಾದಿ ರೋಗಗಳಿಗೆ ತುತ್ತಾಗುವದನ್ನು ನೋಡಿಕೊಂಡು ಇಂಥವರು ಜೀವದಿಂದ ಉಳಿಯುವಷ್ಟು ಸಂಬಳವನ್ನಾದರೂ ಕೊಡೋಣಾಗಬೇಕೆಂದು ಈ ಫಂಡಿನವರು ಮುಂಬಯಿ ಗವರ್ನರರಿಗೂ ಮುನ್ಸಿಪಲ್ ಅಧಿಕಾರಿಗಳಿಗೂ ಬರಕೊಂಡಿರುತ್ತಾರೆ. ಈ ರೀತಿ ಹಿಂಸೆ ಅಥವಾ ಪೀಡನೆ ಇದು ಯಾವ ಪ್ರಾಣಿವರ್ಗಕ್ಕೂ ಇರಕೂಡದೆಂಬುವ ಸಿದ್ಧಾಂತವು ಈ ಫಂಡಿನವರದಾಗಿರುವದು. ಮುಂಬಯಿಯ ವ್ಯಾಪಾರಸ್ಥರು ಈ ಫಂಡಿಗೆ ಸಹಾಯ ಮಾಡುತ್ತಿರುವರು. ಆಶ್ರಿತ ರಾಜರುಗಳು ಮತ್ತು ದೊಡ್ಡ ದೊಡ್ಡ ಸರಕಾರದ ನೌಕರರು ಈ ಫಂಡಿನ ಸಹಾಯಕರಾಗಿರುತ್ತಾರೆ. ಈ ಫಂಡಿನಿಂದ ನೆರವೇರಬೇಕಾದ ಕಾರ್ಯಗಳು ಬಹಳವಿರುವದರಿಂದ ದೇಶದ ಎಲ್ಲಾ ಭಾಗಗಳಿಂದಲೂ ಸಹಾಯವನ್ನು ನಿರೀಕ್ಷಿಸಿರುತ್ತಾರೆ.

ಸ್ಥಳಿಕ — ಮಂಗಳೂರು.

ಡಾಕ್ಟರ್ ರಾವ್ ಸಾಹೇಬ ವರ್ಗಿಸರವರೊಬ್ಬರೇ ಈ ಸರ್ತಿಯ ಮುನ್ಸಿಪಲ್ ಚೇಯರ್ಮೇನರ ಕೆಲಸಕ್ಕೆ ಉಮೇದ್ವಾರರಾಗಿರುವರು. ಚುನಾವಣೆಯು ಇದೇ ತಿಂಗಳ ತಾ. ೭ರಲ್ಲು ನಡಿಯುವದು.

ಮಂಗಳೂರು ಬಂದರದ ಸಾವುಕಾರರು ಇಲ್ಲಿಯ ದಕ್ಕೆ ಫೀಸು ಕಮಿಟಿಯವರಿಗೆ ಸೂಚಿಸಿರುವ ಹೊಸ ರಸ್ತೆಯ ಪ್ರಸ್ತಾವವು ಕಳೆದ ಸರ್ತಿಯ ಮುನ್ಸಿಪಲ್ ಸಭೆಯ ಮುಂದೆ ಬಂದಿತ್ತು. ಪ್ರಕೃತ ಮುನ್ಸಿಪಾಲಿಟಿಯವರು ನದಿ ಕಿನಾರೆಯ ಬಳಿಯಿಂದ ಹಾಕಿಸುತ್ತಿರುವ ಈ ಮೊದಲೇ ಸಂಕ್ಷನಾದ ಮಾರ್ಗದ ಕೆಲಸವನ್ನು ಪ್ರಕೃತ ಸೂಚಿಸೋಣಾದ ಹೊಸ ಮಾರ್ಗದ ವಿಷಯವು ಸರಕಾರದವರಿಂದ ತೀರ್ಮಾನಿಸಲ್ಪಡುವ ತನಕ ಮುಂದರಿಸದೆ ಬಾಕಿ ಇಡಲು ಸರಕಾರದ ಮಂಜೂರಾತಿಯನ್ನು ಕೇಳಬೇಕೆಂತ ಮುನ್ಸಿಪಾಲ್ ಕೌನ್ಸಿಲಿನವರು ನಿಶ್ಚಯಿಸಿರುವರು.

ಮನೆಮಾರು ಇಲ್ಲದ ಬಡವರಿಗೆ ಮನೆಗಳನ್ನು ಕಟ್ಟಲು ಸ್ಥಳಗಳನ್ನು ಕೊಡಬೇಕೆಂತ ೧೯೧೩ನೇಯಲ್ಲಿ ಆದ ಹುಕುಮಿನ ಮೇರೆಗೆ ಈ ಜಿಲ್ಲೆಯ ಹಲವು ಪಂಚಮರಿಗೂ ಸ್ಥಳಗಳು ಕೊಡೋಣಾಗಿದ್ದವು. ಆದರೆ ಇಂಥಾ ಸ್ಥಳಗಳನ್ನು ಅನುಭೋಗಿಸುವಷ್ಟು ಸ್ಥಿತಿಯವರು ಸಹ ಇವರಲ್ಲಿಲ್ಲದ್ದರಿಂದ ಈ ಸ್ಥಳಗಳು ಸರಕಾರಕ್ಕೆ ಪುನಹ ಬಿಟ್ಟುಕೊಡುವ ಸಂದರ್ಭಗಳು ಬಂದೊದಗಿದ್ದರಿಂದ ಇಲ್ಲಿಯ ನಿರಾಶ್ರಿತ ಜನ ಸಹಾಯಕ ಸಂಘದ ಸೆಕ್ರೆಟರಿಗಳಾದ ಮ। ರಾ। ರಾ। ಕೆ. ರಂಗರಾಯರವರೂ ಮತ್ತು ಮ। ರಾ। ರಾ। ಕಾರ್ನಾಡ ಸದಾಶಿವರಾಯರೂ ಈ ಕುರಿತು ಒಂದು ಮನವಿಯನ್ನು ಜಿಲ್ಲಾ ಕಲೆಕ್ಟರ ದೊರೆಗಳಿಗೆ ಬರಕೊಂಡಿದ್ದರು. ಅದರಲ್ಲಿ ... [illegible]

ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿಯೂ ಪಂಚಮರ ವಸ್ತಿಗಳನ್ನು ಸ್ಥಾಪಿಸುವ ಬಗ್ಗೆ ೧೦೦ ಎಕ್ರೆಗಳ ವಿಸ್ತೀರ್ಣಕ್ಕೆ ಕಡಮೆಯಾಗದ ಸ್ಥಳಗಳನ್ನು ಬಡವರು ಪ್ರಕೃತ ಸರಕಾರಕ್ಕೆ ಬಿಟ್ಟುಕೊಡುವ ಸ್ಥಳಗಳಿಂದ ಕೊಡೋಣಾಗಬೇಕೆಂದು ಕಲೆಕ್ಟರ ದೊರೆಗಳನ್ನು ವಿಜ್ಞಾಪಿಸಿಕೊಂಡಿದ್ದರು. ಕಲೆಕ್ಟರ ದೊರೆಗಳವರು ಈ ವಿಜ್ಞಾಪನೆಯನ್ನು ಮನ್ನಿಸಿ ಪಂಚಮರಿಂದ ಹಿಂದಕ್ಕೆ ಸ್ಥಳಗಳನ್ನು ಪಡಿಯೋಣಾಗುವ ಮೊದಲು ಇಂಥಾ ಸ್ಥಳಗಳು ಒಟ್ಟಿಗೆ ವಿಸ್ತೀರ್ಣದಲ್ಲಿ ೧೦೦ ಎಕ್ರೆಗಳಿಗೆ ಕಡಮೆಯಾಗದಿದ್ದರೆ ಮತ್ತು ಕಡಮೆಯಾದ್ದಲ್ಲಿ ೧೦೦ ಎಕ್ರೆಗಳ ಭರ್ತಿಗೆ ದರಕಾಸ್ತಿನಮೇಲೆ ಪಡಿಯಲು ಸಾಕಷ್ಟು ಸ್ಥಳವು ಸಮೀಪದಲ್ಲಿರುವಂಥಾ ಸಂಗತಿಗಳು ತಹಸೀಲದಾರರೂ ಡಿಪ್ಯುಟಿ ತಹಸೀಲದಾರರೂ ಈ ವಿಷಯವನ್ನು ರಾ। ರಂಗರಾಯರ ಲಕ್ಷ್ಯಕ್ಕೆ ತರಬೇಕೆಂತ ಆಜ್ಞಾಪಿಸಿರುವರು. ಪಂಚಮರಿಗೆ ಈ ಮೂಲಕ ಕಲೆಕ್ಟರ ದೊರೆಗಳವರು ಬಹಳ ಉಪಕಾರವನ್ನು ಮಾಡಿದಂತೆ ಆಯಿತು.

ಮುಲ್ಕಿಯಲ್ಲಿ ಬಪ್ಪನಾಡ ಜಾತ್ರೆಯ ಸಮಯದಲ್ಲಿ ಮ। ಗೋಪಾಲಕೃಷ್ಣ ಕುಡ್ವರ ಮಗನನ್ನು ಹೊಡೆದರೆಂಬ ಆರೋಪಣೆಯ ಮೇಲೆ ಮ। ದೇವಪ್ಪ ಸೆಟ್ಟಿ ಮತ್ತು ಇನ್ನೊಬ್ಬರ ಮೇಲೆ ಮುಲ್ಕಿ ಡಿಪ್ಯುಟಿ ತಹಸಿಲ್ದಾರ ಕೋರ್ಟಿನಲ್ಲಿ ದಾಖಲಾದ ಫಿರ್ಯಾದಿನಲ್ಲಿ ಮುದ್ದೈಯಾಳುಗಳು ಚಾರ್ಜ ಮಾಡಲ್ಪಟ್ಟಿರುವರು.

ಇದೇ ಫಿರ್ಯಾದಿಯಲ್ಲಿ ಮುದ್ದೈ ಕಡೆ ಸಾಕ್ಷಿಯಾಗಿ ಬಂದಿದ್ದ ಶ್ರೀನಿವಾಸ ಕಮ್ತಿ ಎಂಬವರನ್ನು ಮುದ್ದೈಯಾಳ ದೇವಪ್ಪ ಶೆಟ್ಟಿ ಮತ್ತು ಇತರರು ಮಂಗಳೂರಲ್ಲಿ ಹೊಡೆದು ಚೂರಿಯಿಂದ ಘಾಯ ಪಡಿಸಿದರೆಂಬ ಆರೋಪಣೆಯ ಮೇಲೆ ಮತ್ತೊಂದು ಫಿರ್ಯಾದು ಇಲ್ಲಿಯ ಟೌನ್ ಮೇಜಿಸ್ತ್ರೇಟರಲ್ಲಿ ದಾಖಲಾಗಿರುವದು.

ಇಲ್ಲಿಯ ಪಟ್ಟಾದರ, ಇಂಜಿನೀಯರ್ ಮತ್ತು ಸರ್ವೇಯರ್ ಮ। ರಾ। ಯಲ್ಲೂರು ಸಂಜೀವರಾವ್‌ರವರು ಬಂಟ್ವಾಳ ಫಿರ್ಕಿನ ತಾಲೂಕು ಬೋರ್ಡ ಮೆಂಬರುತನಕ್ಕೆ ಉಮೇದ್ವಾರರಾಗಿ ನಿಂತು ಆ ಫಿರ್ಕಿನ ತಾಲೂಕು ಬೋರ್ಡು ಓಟರರುಗಳಿಗೆ ಬರೆದಿರುವ ವಿನಂತಿ ಪತ್ರದ ಒಂದು ಪ್ರತಿಯನ್ನು ನಮ್ಮ ಬಳಿ ರವಾನಿಸಿ ಕೊಟ್ಟಿರುತ್ತಾರೆ. ಬೋರ್ಡುಗಳ ಹೆಚ್ಚಿನ ಉತ್ಪತ್ತಿಯು ಅವುಗಳ ಇಂಜಿನೀಯರಿಂಗ್ ಕಾರ್ಯಗಳ ಮೂಲಕವೇ ಖರ್ಚಾಗುವದರಿಂದ ಇಂಜಿನಿಯರಿಂಗ್ ಕೆಲಸಗಳ ಮಾಹಿತಿದಾರರಾದ ತನ್ನಂಥವರು ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟರೆ ಇಂಜಿನೀಯರಿಂಗ್ ಕೆಲಸದ ತನ್ನ ಅನುಭವವನ್ನು ಬೋರ್ಡಿನವರಿಗೆ ಕೊಡೋಣಾಗುವ ಮೂಲಕ ಓಟರರಿಗೆ ಹೆಚ್ಚಿನ ಪ್ರಯೋಜನವು ಉಂಟಾಗಬಹುದೆಂಬುದಾಗಿ ಇವರು ತನ್ನ ವಿನಂತಿ ಪತ್ರದಲ್ಲಿ ಸೂಚಿಸಿರುವರು.

ತಿರುಪತಿಯ ಶ್ರೀ ತಿರುಮಲೆ ದೇವಸ್ಥಾನದ ಮಹಂತ ಅಧಿಕಾರಿಗಳೂ ಅಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ತಾಲೂಕು ಬೋರ್ಡ್ ಮೆಂಬರರೂ ಆಗಿರುವ ಶ್ರೀ ರಾಮ ಲಖ್ಮನ್‌ದಾಸ್‌ಜೆಯವರು ಉಡುಪಿಯ ಶ್ರೀಕೃಷ್ಣನ ದರ್ಶನಾರ್ಥವಾಗಿಯೂ ಮತ್ತು ಈ ಜಿಲ್ಲೆಯಲ್ಲಿರುವ ಇತರ ವಿಶೇಷ ಸ್ಥಳಗಳನ್ನು ನೋಡುವದಕ್ಕಾಗಿಯೂ ಇದೇ ತಿಂಗಳ ತಾ. ೧೫ರಿಂದ ೨೦ರೊಳಗೆ ಈ ಜಿಲ್ಲೆಗೆ ಬಂದು ತಲ್ಪುವರಾಗಿ ತಿಳಿಯುತ್ತೇವೆ. ತಿರುಪತಿಯ ಶ್ರೀ ವೆಂಕಟರಮಣ ದೇವರ ಭಜಕ ವರ್ಗದಲ್ಲಿ ಹಲವರು ಇವರನ್ನು ಸನ್ಮಾನದಿಂದ ಎದುರುಗೊಳ್ಳಲು ತಕ್ಕ ವ್ಯವಸ್ಥೆಯನ್ನು ಮಾಡುತ್ತಿರುವರು.

ಮಂಗಳೂರು ಬ್ರಹ್ಮ ಸಮಾಜದವರಿಂದ ಸ್ಥಾಪಿಸಲ್ಪಟ್ಟ ಅನಾಥ ಬಾಲಕರ ಮತ್ತು ವಿಧವೆಯರ ಸಂರಕ್ಷಣಾ ಫಂಡಿನ ಮತ್ತು ಮಂಗಳೂರು ನಿರಾಶ್ರಿತ ಸಂಘದ ಸಹಾಯಾರ್ಥವಾಗಿ ಕೆಲವು ಸ್ಥಳೀಕ ಯುವಕರು ಕದ್ರಿ ರಸ್ತೆಯ ಕೋರ್ಟುಗುಡ್ಡೆ ಬಳಿಯಲ್ಲಿರುವ ನಿರಾಶ್ರಿತರ ಬಗ್ಗೆ ಏರ್ಪಡಿಸಲ್ಪಟ್ಟ ಶಾಲಾ ಕಟ್ಟೋಣದಲ್ಲಿ ಇದೇ ತಿಂಗಳ ತಾ. ೬, ೧೧, ೧೪ ಮತ್ತು ೨೧ನೇ ತಾರೀಕಿನ ದಿವಸಗಳ ರಾತ್ರೆ ೯ ಘಂಟೆ ಸಮಯಕ್ಕೆ ಐದು ಅಂಕಗಳಿಂದ ಕೂಡಿರುವ "ಮೋಹಿನಿ ಮಾನವ" ನಾಟಕವನ್ನು ಅಭಿನಯಿಸಿ ತೋರಿಸುವರು.

ಈ ವಾರದಲ್ಲಿ ಪ್ಲೇಗು ಮರಣಗಳು ಮಂಗಳೂರು ಮುನ್ಸಿಪಾಲಿಟಿಯಲ್ಲಿ ೪ ಇದ್ದವು. ಕೊಡಿಯಾಲಬೈಲ್ ವಾರ್ಡಿನಲ್ಲಿ ೨; ಸೆಂಟ್ರಲ್ ವಾರ್ಡ ೧, ಕೆಂಟೋನ್‌ಮೆಂಟ್ ವಾರ್ಡು ೧.

ಸ್ವೀಕಾರ.

೧. ಜೇಮ್ಸ್ ಗಾರ್ ಫೀಲ್ಡರವರ ಚರಿತ್ರೆ— ಧಾರವಾಡ ... [illegible] (ಬೆಂಗಳೂರು) ಇದರಿಂದ ಬಂದಿರುವದು.

೨. ಪಿಂಗಳ ಸಂವತ್ಸರದ ವೈಜಯಂತಿ ಪಂಚಾಂಗ— ತಾ ಯರಮುಂಜ ಭೀಮಭಟ್ಟೋಯಿಸರ ಮಗ ಶಂಕರ ಜೋಯಿಸರಿಂದ ಬಂದಿರುವದು.

೩. ವಿಜ್ಞಾನ—ಶಾಸ್ತ್ರೀಯ ವಿಷಯದ ಸಚಿತ್ರಮಾಸಿಕ ಪತ್ರಿಕೆ ಬೆಂಗಳೂರ—"ಜನರಿಗೆ ಉಪಯುಕ್ತವಾದ ವಿವಿಧವಿಜ್ಞಾನ ವಿಷಯಗಳು ಸುಲಭ ಶೈಲಿಯಲ್ಲಿ ಕಥಾರೂಪವಾಗಿಯೂ ಉಪನ್ಯಾಸರೂಪವಾಗಿಯೂ [illegible] ವಾಗಿ ವಿವರಿಸಲ್ಪಡುವವು." ಮಾಸಪತ್ರಿಕೆಯ ಈ ಉದ್ದೇಶವು ಸ್ತುತ್ಯವಾಗಿದೆ.

ವಿಳಾಸ:—ಬಿ. ವೆಂಕಟರಾಮಕೃಷ್ಣನವರು ಎಮ್. ಎ. [illegible] ವಿಜ್ಞಾನ ಪ್ರಚಾರಿಣೀಸಭೆ, ಬಸವನಗುಡಿ, ಬೆಂಗಳೂರು.

೪. ಶುಭೋದಯ—ಧಾರವಾಡ— [illegible] ಪತ್ರಿಕೆ. ಪ್ರಚಲಿತ ವಿಷಯಗಳನ್ನು [illegible] ಭಾಷಾಶೈಲಿಯೂ ಯೋಗ್ಯವಾಗಿದೆ. [illegible] ಆಗಲೆಂದು ಇಚ್ಛಿಸುತ್ತೇವೆ.

ವಿಳಾಸ:—[illegible]

[illegible]

ರಾತ್ರಿಕಾಲದಲ್ಲಿ ವಾದ್ಯ.

ಸ್ವಾಮಿ,

ರಾತ್ರಿಕಾಲದಲ್ಲಿ ೯ ಅಥವಾ ೧೦ ಗಂಟೆಗಳ ನಂತರ ಮಂಗಳೂರಿನ ಮುನ್ಸಿಪಾಲಿಟಿಯೊಳಗೆ ವಾದ್ಯ ಇತ್ಯಾದಿಗಳನ್ನು ಬಾರಿಸಕೂಡದೆಂಬುವ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಜ್ಞೆಯು ಇತ್ತಲಾಗೆ ಎರಡು ಮೂರು ವರುಷಗಳಿಂದ ಇಲ್ಲಿ ಜ್ಯಾರಿಯಲ್ಲಿರುವದು. ಕ್ರೈಸ್ತರಲ್ಲದ ಇತರ ಸಮುದಾಯದವರಲ್ಲಿ ಮದುವೆ ಇತ್ಯಾದಿಗಳಿಗೆ ಮುಹೂರ್ತ ಕಾಲಗಳು ಬೇಕು. ಇಂಥಾ ಮುಹೂರ್ತ ಕಾಲಗಳು ರಾತ್ರಿಯಲ್ಲಿ ಗಂಟೆ ೧೧ರ ನಂತರ ಬೆಳಗ್ಗಿನ ಜಾಮದ ವರೆಗೂ ಇರುವದುಂಟು. ಮುಹೂರ್ತ ಕಾಲಗಳಲ್ಲಿ ಮದುವೆ ಇತ್ಯಾದಿಗಳು ನೆರವೇರುವಾಗ ಅಪಶಬ್ದಗಳು ಇತ್ಯಾದಿಗಳು ಕೇಳಿಸದಂತೆ ವಾದ್ಯವು ಅಗತ್ಯ. ವಾದ್ಯವು ಬಾರಿಸಿದರೆ ಈಗಿನ ವಿದ್ಯಮಾನಗಳಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಿದಂತೆ ಆಗುತ್ತದೆ. ಮತ್ತು ಈ ಆಜ್ಞೆಯ ಉಲ್ಲಂಘನೆಯು ಆಗದಂತೆ ಪೋಲೀಸಿನವರೂ ನೋಡುತ್ತಾರೆ, ಜನರಿಗೆ ಅತಿರೇಕ ಬಾಧೆಯು ಉಂಟಾಗುತ್ತದೆ. ನಮ್ಮ ಸಂಸ್ಕಾರಗಳನ್ನು ನಮ್ಮ ಆಚಾರಕ್ಕೆ ಅನುಕೂಲವಾಗಿ ಆಚರಿಸುವರೆ ಆಗುವದಿಲ್ಲ. ಕ್ರೈಸ್ತರಲ್ಲದ ಸಮಸ್ತ ಜನರಿಗೂ ಇದೆಲ್ಲ ಗೊತ್ತುಂಟು ಆದ್ದರಿಂದ ಇಂಥವರು ತಮ್ಮ ನೆರೆಯಲ್ಲಿ ವಾದ್ಯ ರಾತ್ರಿಕಾಲ ಬಾರಿಸುವದಾದರೂ ಗುಣುಗುಟ್ಟರು. ಇಂಥಾ ವಿದ್ಯಮಾನಗಳಲ್ಲಿ ಮೇಜಿಸ್ಟ್ರೇಟರ ಈ ಆಜ್ಞೆಯು ಕಾನೂನಿಗೆ ವಿರೋಧವೋ? ವಿರೋಧವಾದರೆ ಇದನ್ನು ಊರ್ಜಿತವಿಡುವದು ಯಾಕೆ — ಎಂಬುದನ್ನು ಬಹುಮಾನಪಟ್ಟ ಸದಾಶಿವ ಭಟ್ಟರವರು ಸರಕಾರದವರಿಂದ ಇದೇ ತಿಂಗಳಲ್ಲಿ ಕೂಡುವ ಕಾಯಿದೆ ಕೌನ್ಸಿಲಿನ ಸಭೆಯಲ್ಲಿ ಕೇಳಿ ತಿಳಕೊಳ್ಳುವದು ಅಗತ್ಯ. ಮೇ ಜೂನ್ ಜುಲಾಯಿ ತಿಂಗಳುಗಳಲ್ಲಿ ವಿವಾಹಗಳ ಲಗ್ನ ಮುಹೂರ್ತಗಳು ರಾತ್ರಿಕಾಲದಲ್ಲಿರುವದರಿಂದ ಈ ಸಂಗತಿಯಲ್ಲಿ ಜನರಿಗೆ ಬೇಕಾದ ವಿಮೋಚನೆಯು ಸಿಕ್ಕುವಂತೆ ಈ ಸೂಚನೆ ಈಗಲೆ ತಮ್ಮ ಪತ್ರಿಕೆ ಬರೆದು ಕಳುಹಿಸಿರುವೆನು.

ವಾಲಗಾಭಿಲಾಷಿ

ಇಂಗ್ಲಿಷೂ ದೇಶಿಭಾಷೆಗಳೂ

(ಶ್ರೀ. ಆತ್ಮಾರಾಮ ಶಾಸ್ತ್ರೀ ಓಡ್ಲಮನೆ)

"ಬದುಕಬೇಕೊ, ಸಾಯಬೇಕೊ" ಎಂದು ಶೇಕ್ಸ್‌ಪಿಯರನ ಹೆಮ್ಲೆಟನು ಆಗಾಗ್ಗೆ ಆಲೋಚಿಸುತ್ತಿದ್ದನು. ಇದೇ ಒಂದು ಅವನಿಗೆ ದೊಡ್ಡ ಪ್ರಶ್ನೆಯಾಗಿತ್ತು. ಹಾಗೆಯೆ ಸದ್ಯ ಕನ್ನಡ ಭಾಷೆಗೂ "ಜೀವಿಸಬೇಕೊ, ಗತಿಸಬೇಕೊ" ಈ ಪ್ರಶ್ನೆಯು ಬಂದೊದಗಿದೆ. ಒಂದು ಕಾಲದಲ್ಲಿ ಕನ್ನಡವು ಎಲ್ಲಿಂದಲೊ ಎಲ್ಲಿ ತನಕ ಹಬ್ಬಿಕೊಂಡಿತ್ತು, ಕನ್ನಡದಲ್ಲಿ ಮಹಾಪ್ರತಿಭಾಶಾಲಿಗಳಾದ ಕವಿಗಳು ಆಗಿಹೋದರು, ಅವರು ಇಂಥಿಂಥ ಕಾವ್ಯಗಳನ್ನೂ, ಗ್ರಂಥಗಳನ್ನೂ ಬರೆದಿರುವರು. ಇದರ ಪ್ರಾಚೀನ ಗ್ರಂಥ ಭಂಡಾರವು ಅಷ್ಟಿದೆ, ಇಷ್ಟಿದೆ, ಇವೆ ಮೊದಲಾದ ಸಾಭಿಮಾನೋಕ್ತಿಗಳನ್ನು ಕನ್ನಡ ಲೇಖಕರು ಆಗಾಗ್ಗೆ ಬರೆಯುತ್ತಿರುವರು. ಸ್ವಕೀಯ ರಾಷ್ಟ್ರದೊಳಗಿನ ಕಳೆದು ಹೋದ ಸಂಗತಿಗಳ ಬಗ್ಗೆ ಅಂತಃಕರಣದಲ್ಲಿ ಆದರವನ್ನಿಟ್ಟುಕೊಳ್ಳುವುದಾಗಲಿ ಕೇಂಬಹುದಾ ಯೋಗ್ಯ ಅಭಿಮಾನವನ್ನು ಪಡುವುದಾಗಲಿ ಆ ರಾಷ್ಟ್ರದ ಹಾಗು ಅದರ ಅಂಗಗಳಾದ ಭಾಷೆ, ಧರ್ಮ, ಸಮಾಜ ಮೊದಲಾದವುಗಳ ಸಜೀವತ್ವದ ಲಕ್ಷಣವೆಂದು ದೊಡ್ಡ ದೊಡ್ಡ ಗ್ರಂಥಕಾರರು ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದ ಕೆಲವು ಕನ್ನಡ ಲೇಖಕರು ನಾವು ಮೇಲೆ ತೋರಿಸಿದಂತೆ ಕನ್ನಡ ಭಾಷೆಯ ಪ್ರಾಚೀನ ವೈಭವದ ವಿಷಯದಲ್ಲಿ ಸಾಭಿಮಾನೋದ್ಗಾರಗಳನ್ನು ತೆಗೆಯುವದು ಯುಕ್ತವಾದರೂ ಈಗಿನ ಅರ್ವಾಚೀನ ಕಾಲದಲ್ಲಿ ಮೊದಲಿನಂತೆ ಕವಿಗಳು, ಗ್ರಂಥಕಾರರು, ದರ್ಶನಕರ್ತರು ಹಾಗು ಅವರ ಗ್ರಂಥಗಳ ಅಸ್ತಿತ್ವದಲ್ಲಿ ಬರುವುದಿಲ್ಲ. ಮಹತ್ವದ ವಿಷಯದ ಮೇಲಿಂತೂ ಇಲ್ಲ, ಬರೆ ಸಾಮಾನ್ಯ ವಿಷಯದ ಕುರಿತು ಅಲ್ಪಸ್ವಲ್ಪ ಗ್ರಂಥಗಳು ಸಹಾ ಆಗುವದಿಲ್ಲ. ಹೈಸ್ಕೂಲಿನೊಳಗಿನ ಅಂತಿಮ ಕ್ಲಾಸಿನ ಹುಡುಗರಿಗೆ ಹಾಗೂ ಕೋಲೇಜಿನ ಹುಡುಗರಿಗೆ ಒಂದು ಚಿಕ್ಕ ಉಪನ್ಯಾಸವನ್ನು ಸಮರ್ಪಕವಾಗಿಯೂ ಶುದ್ಧವಾಗಿಯೂ ಕನ್ನಡ ಭಾಷೆಗೆ ಒಪ್ಪುವಂತೆಯೂ ಬರೆಯುವುದು ಸಾಧ್ಯವಿಲ್ಲದಂತಾಗಿದೆ. ಇಂಥ ಶೋಚನೀಯ ಸ್ಥಿತಿಗಳನ್ನು ನೋಡಿದಾಗ ಹೆಮ್ಲೆಟನಿಗೆ ಬಂದಂತೆ ಕನ್ನಡಕ್ಕೂ 'ಬದುಕಬೇಕೊ, ಸಾಯಬೇಕೊ' ಈ ಪ್ರಶ್ನೆಯು ಬಾರದೆ ಇದ್ದೀತೆ! ಈ ಸ್ಥಿತಿಯಲ್ಲಿ ಬರೆ ಸಾಭಿಮಾನ ಉದ್ಗಾರಗಳಿಂದ ಫಲವೇನು? ಇದೊಂದು ಸಂಗತಿ. ಇನ್ನೊಂದು ಯಾವುದೆಂದರೆ ಆಧುನಿಕ ಸುಶಿಕ್ಷಿತ ಕನ್ನಡಿಗರಿಗೂ ಕನ್ನಡಕ್ಕೂ 'ಸೋದಬೇಟು' ಆದಂತಾಗಿದೆ. ಪರಸ್ಪರ ಸಂಭಾಷಣೆಗಳು ಕನ್ನಡದಿಂದಲ್ಲ, ಪತ್ರವ್ಯವಹಾರವು ಕನ್ನಡದಿಂದಲ್ಲ, ಕನ್ನಡದ ಮೇಲೆ ಒಂದು ತರದ ತಾತ್ಸಾರ. ಈಗಿನ ಸುಶಿಕ್ಷಿತರಿಗೆ ಕನ್ನಡದ ನೆನಪೆ ಆಗದು, ಗುರುತ ಹತ್ತದು. ಇದಕ್ಕೆ ಕೆಲವು ಅಪವಾದಗಳಿರಬಹುದು. ಎಂದರೆ ಮಿ. ಎಟ್ಲಿರಂಥ ವಿದ್ಯಾಪ್ರಿಯರಾದ ಇನ್ಸಪೆಕ್ಟರರು ಬಂದಾಗ ಕನ್ನಡದಿಂದ ಕಲಿಸಬೇಕೊ, ಮಾತೃಭಾಷೆಯಿಂದ ಕಲಿಸಬೇಕೊ, ಅಥವಾ ಇಂಗ್ಲಿಷಿನಿಂದ ಕಲಿಸಬೇಕೊ, ಎಂಬ ಕೆಲವು ಚರ್ಚೆಗಳು ಮಾತ್ರ ಹೊರಡುವವಲ್ಲದೆ ಅಥವಾ ಮಂಗಳೂರಿನ ಬಾವಟೆ ಕಟ್ಟೆಯಂಥ ಅಥವಾ ಆಟದ ಮೈದಾನಿನಂಥ ಗಾಳಿಯ ಜಾಗೆಯಲ್ಲಿ ಕುಳಿತುಕೊಂಡಾಗ ಸಮಯವನ್ನು ಕಳೆಯಲು ಕೆಲವು ಕನ್ನಡೋಪಜೀವಿಗಳು ಕನ್ನಡ ವಿಷಯವನ್ನು ಚರ್ಚಿಸುವುದಲ್ಲದೆ ಬೇರೆ ಕಡೆಯಲ್ಲಿ ಈ ವಿಷಯದ ಪೂರ್ಣ ಔದಾಸೀನ್ಯವು. ಈ ಪರಿಸ್ಥಿತಿಯಲ್ಲಿ ಸಾಯುವೆನೋ ಬದುಕುವೆನೋ ಎಂಬ ಕನ್ನಡಕ್ಕೆ ತೋರಲಿಕ್ಕಿಲ್ಲವೆ? ಕನ್ನಡಕ್ಕೆ ಒದಗಿರುವ ಮೂರನೆಯ ಕಷ್ಟವಾವರೂ ಸಾಮಾನ್ಯದ್ದಲ್ಲ. ಈ ದೊಡ್ಡ ಕನ್ನಡ ದೇಶವು ಒಂದೆ ಸರಕಾರದ ಆಡಳಿತೆಯಲ್ಲಿ ಇಲ್ಲ. ಇದರ ಕೆಲವು ಅವಯವಗಳು ಮುಂಬಾಯಿ ಸರಕಾರದ ಅಧಿಕಾರದಲ್ಲಿ, ಕೆಲವು ಮದ್ರಾಸಿನ ಆಡಳಿತೆಯಲ್ಲಿ ಹಾಗು ಕೆಲವು ಮೈಸೂರು ಸಂಸ್ಥಾನದ ಕಾರಭಾರದಲ್ಲಿ ಸಿಕ್ಕಿಹೋಗಿವೆ. ಕನ್ನಡಿಗರ ಸಂಸ್ಕೃತಿ, ವಿಚಾರ, ಸಾಮಾಜಿಕ ಬಂಧನ ಮೊದಲಾದವು ಒಂದೆ ತರದವಾಗಿದ್ದರೂ ಈಗ ಬೇರೆ ಬೇರೆ ಸರಕಾರಗಳ ಕೈಸೇರಿಹೋದುದರಿಂದ ಈ ಹೊತ್ತು ಅವರ ಏಂಕ್ಯಭಾವದ ಮತ್ತು ಭಾಷೈಕ್ಯದ ಯಾವ ಫಲವೂ ಉಂಟಾಗುವುದಿಲ್ಲ. ಆದುದರಿಂದಲೆ ಹೋಮ್ ರೂಲ್ ವಾದಿಗಳು ಭಾಷೆಗೆ ತಕ್ಕಂತೆ ಪ್ರಾಂತರಚನೆಯಾಗಬೇಕೆಂದು ಕೇಳಿಕೊಳ್ಳುತ್ತಾರೆ. ಇರಲಿ. ಈ ರೀತಿಯಿಂದ ಕನ್ನಡ ಜನಾಂಗವು ವಿಷಮವಾಗಿ ವಿಭಾಗಿಸಲ್ಪಟ್ಟ ಕಾರಣ ಅದಕ್ಕೆ ಹೆಮ್ಲೆಟನಿಗೆ ಬಂದ ಪ್ರಶ್ನೆಯು ಬರುವುದು ಆಶ್ಚರ್ಯವೆ? ಈ ಮೂರು ಕಾರಣಗಳಲ್ಲದೆ ದೇಶಿಭಾಷೆಗಳಿಗೆ ಸರ್ವಸಾಧಾರಣವಾದ ಇನ್ನೊಂದು ಆಪತ್ತು ಕನ್ನಡದ ಪಾಲಿಗೂ ಬಂದಿರುವುದು. ಹಿಂದೂಸ್ಥಾನದೊಳಗಿನ ಆಧುನಿಕ ವಿಶ್ವವಿದ್ಯಾಲಯಗಳಲ್ಲಿ ದೇಶಿಭಾಷೆಗಳಿಗೆ ಕೊಡಬೇಕಾದ್ದಷ್ಟು ಪ್ರಾಧಾನ್ಯವು ಕೊಡಲ್ಪಡಲಿಲ್ಲ. ಇಂಗ್ಲಿಷರು ಹಿಂದೂಸ್ಥಾನದ ರಾಜ್ಯಕರ್ತರಾದುದರಿಂದ ಅವರ ಭಾಷೆಯ ಶಿಕ್ಷಣವು ವಿಶಿಷ್ಟರೀತಿಯಾಗಿ ಇರಬೇಕಾದುದು ಅಪರಿಹಾರ್ಯವು. ಈ ವಿಷಯದಲ್ಲಿ ಹೆಚ್ಚಾಗಿ ಯಾರ ಮತಭೇದವೂ ಇರಲಾರದು. ಆದರೆ ಶಿಕ್ಷಣವು ಭಾಷಾತ್ಮಕವಲ್ಲ. ಎಂದರೆ ಶಿಕ್ಷಣದ ಸೀಮೆಯಲ್ಲಿ ಒಳಕೊಂಡಿರುವ ವಿವಿಧ ವಿಷಯಗಳೂ, ಶಾಸ್ತ್ರಗಳೂ ಇಂಗ್ಲಿಷ್ ಅಥವಾ ಬೇರೆ ಯಾವುದೂ ಭಾಷಾಮಯವಲ್ಲ. ಭಾಷೆಯು ಪ್ರತ್ಯೇಕ, ವಿಷಯವು ಪ್ರತ್ಯೇಕ. ಅದು ಇಂಗ್ಲಿಷಿನಿಂದಲೆ ಕಲಿಸಲ್ಪಡಬೇಕೆಂದಿಲ್ಲ. ಆದರೆ ಕೆಲವರು ದೇಶಿಭಾಷೆಗಳಿಗೆ ಪ್ರಾಧಾನ್ಯವನ್ನು ಕೊಡಿರಿ. ಶಿಕ್ಷಣವನ್ನು ದೇಶಿಭಾಷೆಗಳಿಂದಲೆ ಕೊಡತಕ್ಕದ್ದು ಎಂದು ಮುಂತಾದ ವಿಧಾನಗಳನ್ನು ಕೇಳಿದಕೂಡಲೆ ಆ ವಿಧಾನಗಳ ಪ್ರತಿಪಕ್ಷರಿಯರು ಇಂಗ್ಲಿಷ್ ಭಾಷೆಯ ಮಹತ್ವವನ್ನೂ ಅವಶ್ಯಕತೆಯನ್ನೂ [illegible] ತೋರಿಸುತ್ತಾರೆ. ಇಂಗ್ಲಿಷ್ ಭಾಷೆಯು ಮಹತ್ವದ್ದಿರಬಹುದು, ಉಪಯುಕ್ತವಾದದ್ದೂ ಇರಬಹುದು. ಇದೇ ಕಾರಣಗಳಿಂದ ದೇಶಿಭಾಷೆಗಳು ಶಿಕ್ಷ[illegible] ಇಂಗ್ಲಿಷ್ ಭಾಷೆಯಿಂದ [illegible] ಶಿಕ್ಷಣವನ್ನು [illegible] [illegible] ಅದರಿಂದ ಇಂಗ್ಲಿಷಿನ ಮತ್ತು ದೇಶಿಭಾಷೆಗಳ [illegible] [illegible] ದೇಶಿಭಾಷೆಗಳ [illegible]

ಇಷ್ಟು ಸಂಗತಿಗಳನ್ನು ಕುರಿತು ನಮ್ಮ ಆಲೋಚನೆಗಳನ್ನು ಕನ್ನಡಿಗರ ಮುಂದಿಡಲು ಯೋಚಿಸಿದ್ದೇವೆ. ದೇಶಿಭಾಷೆಗಳ ವಿಷಯದಲ್ಲಿ ಸಮಷ್ಟಿ ರೂಪದಿಂದ ವಿವೇಚಿಸಿದ್ದಲ್ಲಿ ವಾಚಕರು ಅದನ್ನು ಕನ್ನಡಕ್ಕೂ ಅನ್ವಯಿಸಿಕೊಂಡಾರೆಂದು ನೆನಸುತ್ತೇವೆ. ಇಷ್ಟೇ ಪ್ರಸ್ತಾವನೆಯು ಸಾಕಾಗಿದೆ.

ಈಗಿನ ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಮೂರು ವಿಭಾಗಗಳನ್ನು ಮಾಡಿದ್ದಾರೆ. ಪ್ರಾಥಮಿಕ ಶಿಕ್ಷಣ, ಹೈಸ್ಕೂಲಿನಲ್ಲಿ ಸಿಗುವ ಮಧ್ಯಮ ಶಿಕ್ಷಣ ಮತ್ತು ಕೋಲೇಜಿನ ಉಚ್ಚ ಶಿಕ್ಷಣ ಈ ಮೂರು ಶಿಕ್ಷಣಾವಸ್ಥಾವಿಭಾಗಗಳಲ್ಲಿ ದೇಶಿಭಾಷೆಗಳಿಗೆ ಯಾವ ತರಗತಿಯು ಕೊಡಲ್ಪಟ್ಟಿದೆ ಇದನ್ನು ನೋಡೋಣ. ಪ್ರಾಥಮಿಕ ಶಿಕ್ಷಣವು ದೇಶಿಭಾಷೆಗಳಲ್ಲಿ ನಡೆಯುತ್ತಿದೆನ್ನಬಹುದು. ಪ್ರಾಥಮಿಕ ಶಿಕ್ಷಣವು ದೇಶಿಭಾಷೆಯಲ್ಲಿ ನಡೆಯುವಾಗ ಕೆಲವರು ಅದನ್ನು ಮಾತೃಭಾಷೆಯಲ್ಲಿ ಕೊಡಬೇಕೆಂದು ಅಭಿಪ್ರಾಯ ಪಡುವರು. ಮಾತೃಭಾಷೆಯು ದೇಶಿಭಾಷೆಯಲ್ಲದ ಸಮಯದಲ್ಲಿ ಮತ್ತು ಆ ಮಾತೃಭಾಷೆಯಲ್ಲಿ ವಾಙ್ಮಯವು ಸೊನ್ನೆಯಾದಲ್ಲಿ ಅಂಥ ಮಾತೃಭಾಷೆಯ ಹಟಹಿಡಿಯುವುದು ಸಮಂಜಸವೊ ಎಂಬದೊಂದು ಪ್ರಶ್ನೆಯು. ಇಂಥ ಸ್ಥಿತಿಯಲ್ಲಿ ಆ ಮಾತೃಭಾಷೆಗೆ ಹತ್ತಿರಿರುವ ದೇಶಿಭಾಷೆಯಿಂದಲೆ ನಿರ್ವಹಿಸಬಹುದಾಗಿ ತೋರುತ್ತದೆ. ಉದಾಹರಣೆಗೆ ಕೊಂಕಣಿ ಮತ್ತು ತುಳು ಈ ಭಾಷೆಗಳನ್ನಿಟ್ಟುಕೊಂಡರೆ ಕೊಂಕಣಿಭಾಷೆಯವರು ಮರಾಠಿಯನ್ನೂ, ತುಳುಮಾತಿನವರು ಕನ್ನಡವನ್ನೂ ಇಟ್ಟುಕೊಂಡರೆ ಅದರಿಂದ ಅವರಿಗೆ ದುರ್ಬೋಧತ್ವಗಳಾಗಲಿ ಹೆಚ್ಚಿನ ಹಾನಿಯಾಗಲಿ ಸಂಭವಿಸಲಿಕ್ಕಿಲ್ಲೆಂದು ತೋರುತ್ತದೆ. ಈ ವಾದವು ಹೇಗಿದ್ದರೂ ಅದು ನಮಗೆ ಪ್ರಕೃತವಲ್ಲ. ಅಸ್ತು ನಾಲ್ಕು ವರ್ಷಗಳ ಪ್ರಾಥಮಿಕ ಶಿಕ್ಷಣದಿಂದ ಹುಡುಗನು ಅಲ್ಪ ಸ್ವಲ್ಪ ಓದುಬರಹ ಲೆಕ್ಕಗಳನ್ನೂ ಕಲಿತು ಶಿಕ್ಷಣ ಮಂದಿರದ ಎರಡನೆಯ ಅಂತಸ್ತಿನ ಮೇಲೆ ಕಾಲಿಡುತ್ತಾನೆ ಮಾತ್ರ ಆಗಲೆ ಅವನಿಗೆ ಇಂಗ್ಲಿಷ್ ಭಾಷೆಯ ಬಂಧನವು ಬಿತ್ತು. ದೇಶಿಭಾಷೆಗೆ ಐಚ್ಛಿಕಕೋಟಿಯಲ್ಲಿ ಸೇರಿಸಿದರಿಂದ ಅದರ ಪರಿಚಯವು ಕಡಿಮೆಯಾಗುತ್ತ ಹೋಯಿತು. ಇತಿಹಾಸ, ಭೂಗೋಲವಿದ್ಯೆ, ಗಣಿತ, ಪದಾರ್ಥವಿಜ್ಞಾನ, ರಸಾಯನ ಮೊದಲಾದ ಶಿಕ್ಷಣದ ಎಲ್ಲ ಅಂಗಗಳು ಇಂಗ್ಲಿಷ್ ಭಾಷಾ 'ಲೇಡಿ'ಯ ದೃಷ್ಟಿಯಿಂದ ಶಿಕ್ಷಣದ ಪ್ಲೆಟ್‌ಫೋರ್ಮಿನ ಮೇಲೆ ಬಂದು ನಟಿಸತೊಡಗಿದವು. 'ಡ್ರಾಯಿಂಗ್'ದಂಥ ಲಲಿತಕಲೆಯಾಗಲಿ, 'ಡ್ರಿಲ್, ಜಿಮ್ನಾಸ್ಟಿಕ್'ನಂಥ ಶರೀರ ಸಾಧನೆಯಾಗಲಿ ಇವು ಇಂಗ್ಲಿಷ ಭಾಷಾದೇವಿಯ ಆರಾಧನೆಯನ್ನು ಮಾಡತೊಡಗಿದವು. ಇಷ್ಟರಿಂದಲೆ ಹೈಸ್ಕೂಲಿನೊಳಗಿನ ಇಂಗ್ಲಿಷ್ ಭಾಷೆಯ ಪ್ರಾಬಲ್ಯವು ನಿಲ್ಲಲಿಲ್ಲ. ತನಗೆ ಬೇಕೆಂಬ ಇಚ್ಛೆಯಿಂದ ಪ್ರೇರಿತನಾಗಿ ಐಚ್ಛಿಕ ವಿಷಯವಾದ ದೇಶಿಭಾಷೆಯನ್ನು ಕಲಿಯುವಾಗ ವಿದ್ಯಾರ್ಥಿಗೆ ಮತ್ತು ಕಲಿಸುವಾಗ ಉಪಾಧ್ಯಾಯನಿಗೆ ಮಧ್ಯಮಧ್ಯದಲ್ಲಿ ಕೆಲವಾದರೂ ಇಂಗ್ಲಿಷ್ ಶಬ್ದಗಳು ಬಾಯಿಯಿಂದ ಬಾರದೆ ಹೋದರೆ ಆವರಿಬ್ಬರು ಮನೋರಂಜನೆಯವರ ಸಂತೋಷಕ್ಕೆ ಪಾತ್ರರಾಗುವುದಿಲ್ಲ. ಏವಂಚ ಮಧ್ಯಮ ಶಿಕ್ಷಣವು ಸಂಪೂರ್ಣ ಇಂಗ್ಲಿಷ್ ಭಾಷೆಯಿಂದಲೆ ತುಂಬಿ ಹೋದುದರಿಂದ ಪ್ರಾಥಮಿಕ ಶಿಕ್ಷಣವನ್ನು ಹೊಂದುವಾಗ ಕಲಿತ ದೇಶಿಭಾಷೆಯ ವರ್ಣಮಾಲೆಯನ್ನು ಸಹಾ ಅವನಿಗೆ ಮರೆತುಬಿಡಬೇಕಾಗುತ್ತದೆ. ಇದು ಅತಿಶಯೋಕ್ತಿಯಲ್ಲ. ಹೈಸ್ಕೂಲಿನೊಳಗಿನ ಆರನೆಯ ಫೋರ್ಮಿನ ಹುಡುಗರು ಬರೆಯುವ ಉಪನ್ಯಾಸಗಳನ್ನು ತಿದ್ದುವವರಿಗೆ ನಮ್ಮೀ ವಿಧಾನದ ಸತ್ಯತೆಯು ಪ್ರತೀತವಾಗದೆ ಇರದು. ಇದು ದೇಶಿಭಾಷೆಯ ವ್ಯಾಪ್ತಿಯನ್ನೂ ಕಡಿಮೆಮಾಡಿದ್ದರ ಫಲವು. ಇಂಗ್ಲಿಷನ್ನು ಭಾಷೆಗೆ ಬೇರಾಗಿ ಕಲಿಯಬೇಕಲ್ಲದೆ ವಿಷಯಜ್ಞಾನಕ್ಕಾಗಿ ಕಲಿಯಬೇಕಾದ ಅಗತ್ಯವಿಲ್ಲೆಂಬುದನ್ನು ನಾವು ಮೇಲೆಯೆ ಸೂಚಿಸಿದ್ದೇವೆ.

ಇತಿಹಾಸ, ಗಣಿತ, ಪದಾರ್ಥ ವಿಜ್ಞಾನ, ರಸಾಯನ ಇತ್ಯಾದಿ ಶಾಸ್ತ್ರಗಳನ್ನು ದೇಶಿಭಾಷೆಗಳಲ್ಲಿ ಕಲಿಸದೆ ಇಂಗ್ಲಿಷಿನಲ್ಲಿಯೆ ಕಲಿಸುವ ಕ್ರಮವನ್ನಿಟ್ಟುಕೊಂಡದ್ದರಿಂದ ಒದಗುವ ಹಾನಿಯು ಯಾವುದೆಂದರೆ, ಮಧ್ಯಮ ಶಿಕ್ಷಣದ ಲಾಭವು ದೇಶದೊಳಗಿನ ಬಹುಜನ ಸಮಾಜಕ್ಕೆ ತಪ್ಪಿಹೋಗುವುದು. ಬರೆ ಈ ವಿದೇಶಿಭಾಷೆಯ ಮೂಲಕದಿಂದಲೆ ವಿಷಯ-ಶಿಕ್ಷಣದಲ್ಲಿ ಕಾಠಿಣ್ಯವು ಬಂದು ಇದರ ಪ್ರಸಾರಣೆಯು ಕಡಿಮೆಯಾಗುತ್ತದೆ. ಎಂದರೆ ಕನಿಷ್ಠ ಪಕ್ಷದಲ್ಲಿ ಈ ಮಧ್ಯಮ ಶಿಕ್ಷಣದ ಪಸೆಯು ದೇಶದೊಳಗಿನ ಸಾಮಾನ್ಯ ವರ್ಗದಲ್ಲಿ ತನಕ ಉಂಟಾಗಬೇಕೆಂಬ ಧ್ಯೇಯವನ್ನು ಮಧ್ಯಮ ಶಿಕ್ಷಣಕ್ಕೆ ಇಟ್ಟುಕೊಂಡರೆ ಅದು ಸಾಧ್ಯವಾಗದು. ಈ ಬಗೆಯಾಗಿ ಶಿಕ್ಷಣದ ಪ್ರಸಾರವು ಹೇಗೆ ಕಡಿಮೆಯಾಗುವದೂ ಹಾಗೆಯೆ ಆ ಮಧ್ಯಮ ಶಿಕ್ಷಣವನ್ನು ಹೊಂದುವವರಿಗೂ ಶ್ರಮವು ದ್ವಿಗುಣಿತ ಬೀಳುವುದು. ಪರಕೀಯ ಭಾಷೆಯಲ್ಲಿ ವಿಷಯವು ಬರೆಯಿಸುವುದರಿಂದ ಆ ಭಾಷೆಯ ಮೂಲಕ ವಿಷಯದಲ್ಲಿ ವೃಥಾಕಾಠಿಣ್ಯವು ಬಂದುಹೋಗುವುದು. ಅದೇ ಈಗ ಆ ವಿಷಯಗಳನ್ನು ದೇಶಿಭಾಷೆಯಿಂದ ಕಲಿಸುವ ಕ್ರಮವಿದ್ದರೆ — ಕಲಿಸುವುದು ಮಾತ್ರವಲ್ಲ, ಪರೀಕ್ಷೆಯ ಪ್ರಶ್ನೋತ್ತರಗಳನ್ನು ಸಹಾ ದೇಶಿಭಾಷೆಯಿಂದಲೆ ತೆಗೆದುಕೊಳ್ಳುವ ಕ್ರಮವನ್ನಿಟ್ಟರೆ ಹುಡುಗರಿಗೆ ಶ್ರಮವು ಬಹಳ ಕಡಿಮೆಯಾದೀತು. ತ್ರಿಕೋಣಮಿತಿವನ್ನು ಇಂಗ್ಲಿಷಿನಿಂದಲೆ ವಿವರಿಸಿದರೆ ಹುಡುಗರಿಗೆ ಗೊತ್ತಾಗುತ್ತದೆ, ದೇಶಿಭಾಷೆಯಿಂದ ಹೇಳಿದರೆ ಅವರ ತಲೆಯಲ್ಲಿ ಹಿಡಿಯುವದಿಲ್ಲೆಂಬುದಾಗಿ ಏನಾದರೂ ಪ್ರತಿಬಂಧವಿದೆಯೆ? ಗುರುತ್ವಾಕರ್ಷಣದ ವ್ಯಾಖ್ಯೆಯು ಇಂಗ್ಲಿಷ್ ಭಾಷೆಯ ಪಂಚಗವ್ಯದಿಂದಲೆ ಪುನೀತವಾಗಬೇಕೆಂಬುದಾಗಿ ವಿಧಿಯುಂಟೆ? ಆ ವ್ಯಾಖ್ಯೆಯನ್ನು ವರ್ಣಿಸಲು ದೇಶಿಭಾಷೆಯು ಸಾಲದೆ? ವಸ್ತುತಃ ದೇಶಿಭಾಷೆಯಿಂದ ಉಂಟಾಗುವ ಸೌಕರ್ಯವು ಇಂಗ್ಲಿಷ್ ಭಾಷೆಯ ದುರವಗಾಹತ್ವದಿಂದ ಹೋಗಿಹೋಗುವುದು. ಸೌಕರ್ಯ ಸೌಕರ್ಯಗಳ ದೃಷ್ಟಿಯಿಂದ ವಿಚಾರಮಾಡಿದರೂ ದೇಶಿಭಾಷೆಗಳಿಂದಲೆ ಮಧ್ಯಮ ಶಿಕ್ಷಣವನ್ನು ಕೊಡುವುದು ಉಚಿತ ಮಾತ್ರವಲ್ಲ ಹಿತಾವಹವೆಂದೂ ಕಂಡುಬಂದೀತು. ಇದೇ ಕಾರಣದಿಂದ ಸದ್ಯ ನೆರೆದ ಆಂಧ್ರಸಾಹಿತ್ಯ ಪರಿಷತ್ತಿನಲ್ಲಿ ಮಧ್ಯಮ ತರಗತಿಯ ಶಿಕ್ಷಣವು ದೇಶಿಭಾಷೆಯಿಂದಲೆ ಕೊಡಲ್ಪಡಬೇಕೆಂಬುದಾಗಿ ಒಂದು ಠರಾವನ್ನು ನಿರ್ಣಯಿಸಿರುವರು. ಹಾಗು ಮೆಟ್ರಿಕ್ ಪರೀಕ್ಷೆಯು, ಒಂದು ಇಂಗ್ಲಿಷಲ್ಲದೆ ಬೇರೆ ವಿಷಯಗಳಲ್ಲೆಲ್ಲ ದೇಶಿಭಾಷೆಯಿಂದ ನಡೆಯಬೇಕೆಂಬುದಾಗಿ ಮುಂಬಯಿ ಪ್ರಾಂತದವರು ಪ್ರಯತ್ನಿಸುತ್ತಿದ್ದಾರೆ.

ಆದರೂ ಕೆಲವರಿಗೆ ದೇಶಿಭಾಷೆಯ ಸರ್ವವಿಷಯಗಾಮಿತ್ವದ ತತ್ವವು ಗೊತ್ತಾಗುವುದಿಲ್ಲ. ಮಧ್ಯಮ ಶಿಕ್ಷಣದ ಕಕ್ಷೆಯಲ್ಲಿ ಎಲ್ಲಾ ವಿಷಯಗಳನ್ನು ದೇಶಿಭಾಷೆಗಳಲ್ಲಿ ಕಲಿಸುವುದೆಂದು ನಿಯಮವನ್ನಿಟ್ಟುಕೊಂಡರೆ ಅದು ಪೂರೈಸದು. ಹಿಂದೂಸ್ಥಾನದಲ್ಲಿ ಸದ್ಯ ಒಂದು ಡಜನಿಗಿಂತ ಹೆಚ್ಚು ದೇಶಿಭಾಷೆಗಳು ಸೇರಿಕೊಂಡಿದ್ದಾವೆ. ಈ ಭಾಷೆಗಳಿಂದ ಗಣಿತ, ಪದಾರ್ಥವಿಜ್ಞಾನ ಶಾಸ್ತ್ರ ಮುಂತಾದವುಗಳನ್ನು ಕಲಿಸುವುದೆಂದರೆ ಆಯಾ ಪಾರಿಭಾಷಿಕ ಶಬ್ದಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ತಯಾರಿಸಿ ಕಲಿಸಬೇಕು. ಹಾಗೆ ಪರಿಶ್ರಮಪಟ್ಟು ಕಲಿಸುವುದರಿಂದಲಾದರೂ ಸಾಧ್ಯಾಂಶವೇನು? ದೇಶಿಭಾಷೆ, ದೇಶಿಭಾಷೆಯೆಂದು ಹೊಡಕೊಂಡು ಇಲ್ಲದ ಪಾರಿಭಾಷಿಕ ಶಬ್ದ ಇತ್ಯಾದಿಗಳನ್ನು ಕಲ್ಪಿಸುವುದರಲ್ಲಿ ಪರಿಶ್ರಮ ಪಡುವುದಕ್ಕಿಂತ ಇಂಗ್ಲಿಷ್ ಭಾಷೆಯಿಂದ ಆಯಾ ವಿಷಯಗಳನ್ನು ಕಲಿತುಕೊಳ್ಳುವುದು ಬಹು ಸುಲಭವಲ್ಲವೆ? ಈ ಆಕ್ಷೇಪವು ಮೇಲಿಂದ ಮೇಲೆ ವಿಚಾರಿಸುವವರಿಗೆ ಮಾತ್ರ ಸಮರ್ಪಕವೆಂದು ತೋರುವದು. ಇಲ್ಲದ ಪಾರಿಭಾಷಿಕ ಶಬ್ದಗಳನ್ನು ನಿರ್ಮಿಸಿ ವೃಥಾ ಆಯಾಸಪಡುವುದಕ್ಕಿಂತ ಇದ್ದುದರಿಂದಲೆ ನಿರ್ವಹಿಸಿಕೊಳ್ಳುವುದು ಸುಲಭವಲ್ಲವೆ ಎಂಬ ಯುಕ್ತಿವಾದವನ್ನು ಮಾಡುವುದೆಂದರೆ ಜನರು ತಮ್ಮ ತಮ್ಮ ಮನೆಗಳಲ್ಲಿ ಅಕ್ಕಿ, ಬೇಳೆ, ಕಟ್ಟಿಗೆ, ಮೆಣಸು, ಉಪ್ಪು ಮುಂತಾದ ಸಾಹಿತ್ಯಗಳನ್ನು ತಂದು ಅಡಿಗೆ ಮಾಡಿ ಊಟಮಾಡುವುದಕ್ಕಿಂತ ಹೋಟೇಲುಗಳಲ್ಲಿಯೆ ಹೋಗಿ ಸಿದ್ಧ ವಾದುದನ್ನು ಊಟಮಾಡುವುದು ಬಹು ಸುಲಭವೆಂದು ಹೇಳುವುದರಂತೆಯೆ ಸರಿ. ಇದು ಬರೆ ಸೌಲಭ್ಯದ ಪ್ರಶ್ನೆಯಲ್ಲ; ಸ್ವಾಭಿಮಾನದ ಹಾಗು ಶಿಕ್ಷಣ ಪ್ರಸಾರಣೆಯ ಪ್ರಶ್ನೆಯಾಗಿದೆ. [illegible] ಕೊಡಲ್ಪಡುವ ರಾಷ್ಟ್ರೀಯ ಶಿಕ್ಷಣ [illegible] ಯಲ್ಲಿ ಕಲಿಸಲ್ಪಡುತ್ತದಲ್ಲದೆ [illegible] ಭಾಷೆಗಳಲ್ಲಿ [illegible] ವರು. [illegible] [illegible] ಯಲ್ಲಿ [illegible] [illegible] ಶಿಕ್ಷಣ ಪ್ರಸಾರ [illegible]

ಪುತ್ತೂರು:— ಜಿಲ್ಲಾ ಕಲೆಕ್ಟರ ಮಿ ಲಯೋನಾಲ್ ಡ್ಯಾವಿಡ್ ದೊರೆಗಳವರ ಸವಾರಿಯು ಧ್ವಜಪತಾಕೆಗಳಿಂದ ಅಲಂಕರಿಸಲ್ಪಟ್ಟ ಹಿಂದೂ ಟ್ರಾನ್ಸಿಟ್ ಕಂಪೆನಿಯ ಮೋಟರ್ ಬಸ್ಸಿನಲ್ಲಿ ಇದೇ ಎಪ್ರಿಲ್ ತಾ. ೨೫ನೇ ಸಾಯಂ ೪ ಘಂಟೆಗೆ ಇಲ್ಲಿಗೆ ಚಿತ್ತೈಸಿದರು. ತಾ. ೨೬ರಲ್ಲು ಇಲ್ಲಿಯ ತಾಲೂಕು ಆಫೀಸು ತನಿಖೆ ನಡಿಸಿದರು.

ಎಪ್ರಿಲ್ ತಾ. ೨೮ರಲ್ಲು ಸಾಯಂ ೩ ಘಂಟೆಗೆ ಜಿಲ್ಲಾ ಕಲೆಕ್ಟರ ದೊರೆಗಳವರ ಅಧ್ಯಕ್ಷತೆಯಲ್ಲಿ ಇಲ್ಲಿಯ ರೆವಿನ್ಯೂ ಡಿವಿಜನ್ ಆಫೀಸಿನ ಕಟ್ಟೋಣದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಸಭೆ ಜರಗಿತು. ಈ ಸಭೆಗೆ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ರೆವರೆಂಡ್ ಫಾದರ ಟಿ. ಕೈಟಿನಿ ಗುರುಗಳು, ಜಿಲ್ಲಾ ಸರ್ಜನ ಮಿ ವರ್ಗೀಸರವರು, ಮ। ರಾ। ರಾ। ಹೊನರೆಬಲ್ ಕೆ. ಸದಾಶಿವ ಭಟ್ಟ, ಮಿ। ಹಾಜಿ ಅಬ್ದುಲ ಸಾಹೇಬ, ಮಿ। ಮಹಮ್ಮದ್ ಸಾಹೇಬ, ಪುತ್ತೂರು ತಾಲೂಕು ಬೋರ್ಡು ವೈಸ್ ಪ್ರೆಸಿಡೆಂಟ ಮ। ರಾ। ರಾ। ಬಿ. ರಾಮರಾವ್, ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟ ಯಸ್. ರಘುನಾಥಯ್ಯ, ಮ। ರಾ। ರಾ। ಕೆ. ಪಿ. ಅಚ್ಯುತಯ್ಯ, ಕೆ. ನರ್ಸಿಂಹ ನ್ಯಾಕ, ಎಮ್. ವಿಟ್ಟಲ ಕಾಮತ್, ಎಸ್. ಮಂಗೇಶ ರಾವ್, ಎನ್. ಸುಬ್ಬರಾವ್, ಕೆ. ರಂಗರಾವ್, ಎಚ್. ಮಾದವಯ್ಯ, ರಾಮಯ್ಯ ಶೆಟ್ಟಿ ಈ ೧೮ ಜನ ಮೆಂಬರರು ಸಭೆಗೆ ಹಾಜರು ಇದ್ದರು. ಡಿಸ್ಟ್ರಿಕ್ಟ್ ಬೋರ್ಡು ಸಭೆಯು ಈ ತಾಲೂಕಿನಲ್ಲಿ ಇದೇ ಪ್ರಥಮ ದಫೆ ಕೂಡಿದ್ದಾಗಿರುತ್ತದೆ.

ತಾಲೂಕು ಬೋರ್ಡಿನ ಸಭೆಯು ಇದೇ ಎಪ್ರಿಲ್ ತಾ. ೨೮ರಲ್ಲಿ ಬೆಳಗ್ಗೆ ಇಲ್ಲಿಯ ಡಿವಿಜನ್ ಆಫೀಸಿನಲ್ಲಿ ಜರಗಿತು.

ಕಳೆದ ಮಾರ್ಚ ತಾ. ೨೬ನೇ ರಾತ್ರಿ ಗೋಳಿತಟ್ಟು ಗ್ರಾಮದ ನಾರ್ಣಗೌಡನ ಮನೆಯಿಂದ ನಗದಿ ವ ಚಿನ್ನಾಭರಣ ಕೂಡ ರೂಪಾಯಿ ೩೦೦೦ ವರೆಗಿನ ಸೊತ್ತುಗಳನ್ನು ಕಳ್ಳರು ಎತ್ತಿಹಾಕಿದರು. ಪೋಲಿಸಿನವರಿಗೆ ಕೊಟ್ಟ ಫಿರ್ಯಾದಿ ಮೇರೆಗೆ ಪುತ್ತೂರು ಸರ್ಕಲ ಪೋಲಿಸು ಇನ್ಸಪೆಕ್ಟರ್ ಸಬ್ ಇನ್ಸಪೆಕ್ಟರ್ ಮಿ। ಚಮನಾಪಡರವರು ಉಪ್ಪಿಂಗಡಿ ಸ್ಟೇಶನ್ ಹೌಸ್ ಆಫೀಸರರು ಇಲ್ಲಿಯ ಸ್ಟೇಶನ್ ಹೆ. ಕೆ. ಎಫ್. ರುದ್ರಪ್ಪರವರು ಕೂಡಾ ತನಿಖೆ ನಡಿಸಿ ಅನುಮಾನದಮೇಲೆ ಕಟಿಕಾ ಹಾಜಬ್ಯಾರಿ, ಬರಿಮಾರ ಇದ್ದಿನಬ್ಯಾರಿ, ಇವರನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರು. ಮುಂದಿನ ತನಿಖೆ ನಡೆಯುತ್ತಿರುವದು.

ಉಗ್ರಾಣಿ ಶೇಕಯ ಮಾವನ ಕೊಲೆಯ ಮೊಕದ್ದಮೆಯ ಕೆಂಪಿಂಬಾಮರಿಲು ಸುಬ್ಬಯನನ್ನು ಜಾಮಿನಮೇಲೆ ಬಿಟ್ಟಿರುತ್ತಾರೆ.

ಜಿಲ್ಲಾ ಕಲೆಕ್ಟರ ದೊರೆಗಳವರು ಎಪ್ರಿಲ್ ತಾ. ೨೯ರಲ್ಲು ಉಪ್ಪಿಂಗಡಿಗೆ ಹೋಗಿ ವಾಪಾಸು ಬಂದರು. ತಾ. ೩೦ರಲ್ಲು ಧ್ವಜ ಪತಾಕೆಗಳಿಂದ ಅಲಂಕರಿಸಿದ ಹಿಂದೂ ಟ್ರಾನ್ಸಿಟ್ ಕಂಪೆನಿಯ ಮೋಟರ್ ಬಸಿನಲ್ಲಿ ಬೆಳಗ್ಗೆ ೫ ಘಂಟೆಗೆ ವಾಪಾಸು ಮಂಗಳೂರಿಗೆ ಹಿಂತಿರಳಿದರು.

ಇಲ್ಲಿ ಪಂಪಿನ ಬಾವಿಯನ್ನು ಕೆಂಟ್ರಾಕ್ಟ ಮೂಲಕ ಅಗಿಯಲಿಕ್ಕೆ ಆರಂಭಿಸಿದ್ದು ನೀರು ಬಾರದೆ ಇದ್ದದರಿಂದ ಈ ವರ್ಷ ಪುನಹಾ ಲೋಕಲ್ ಫಂಡು ಇಲಾಖೆಯಿಂದಲೆ ಅಗಿಯಲಿಕ್ಕೆ ಆರಂಭಿಸಿದಾಗ್ಯೂ ಕೆಲಸ ಅರಿಯದ ಜನರಿಂದ ಕೆಲಸ ತೊಡಗಿಸಿದ್ದರಿಂದ ಬೋರಿಂಗಬ್ಯಾರಿ ಅಡಿಯಲ್ಲಿ ಸಿಕ್ಕಿಬಿದ್ದದರಿಂದ ಕೆಲಸವು ಮೊಕುವು ಆಗಿರುವದು. ಮಳೆ ಪಕ್ಕನೆ ಆರಂಭಿಸಿದರೆ ಸದರಿ ಕೆಲಸ ಇನ್ನೊಂದು ವರ್ಷ ವರೆಗೆ ಮುಂದರಿಸಲಿಕ್ಕೆ ಸಾಕೆನ್ನುವರು.

ಬಂಟರ ಯಾನೆ ನಾಡವರ ಸಂಘ.

ಕೊಳೂರು ಮರಕಡ ಮಂಜಪ್ಪ-ಸೆಟ್ರು ರೂ. ೧೦. ಕೊಳೂರು ಮರಕಡ ಕೆಂಚರೆ ನಾರಾಯಣ ಸೆಟ್ರು ರೂ. ೪. ಮುಚ್ಚೈಲು ಉಪ್ಪಳ ಬಟ್ಟಂಚ್ ಥಂಡಾರಿಗಳು ರೂ. ೫. ನಿಡ್ಡೋಡಿ ಮಜ್ಜಾರ ಗುತ್ತು ಅಂತಪ್ಪ ಸೆಟ್ರು ರೂ. ೧೨. ಕುದಪ್ಪರು ನಡಿಗೋಡು ಓಮಯ್ಯ ಶೆಟ್ರು ರೂ. ೧೦. ಮೂಳೂರು ಬೀಡು ದುಗ್ಗಮ್ಮ ಶೆಟ್ಟಿರು ರೂ. ೫೦. ಅಂಜಾರು ರಾಮಣ್ಣ ಹೆಗ್ಗಡೇರು (ಲಗ್ನದ ಸಂಬಂಧ) ರೂ. ೬. ಜುಮ್ಲಾ ರೂ. ೯೭.

ತಾ. 23 - 4 - 1917. ಅ. ಬಾಲಕೃಷ್ಣ ಶೆಟ್ಟಿ, ಕೋಶಾಧಿಕಾರಿ.

ಶ್ರೀಹರಿನೃಸಿಂಹಾಷ್ಟಕಸ್ತೋತ್ರಮ್, ಕನ್ನಡ ಅರ್ಥಸಹಿತ; ಪ್ರತಿ ೧ಕ್ಕೆ ೬ಪೈ.

ನರಸಿಂಹ ವಾಸುದೇವ ಭಟ್ಟ, ರಥಬೀದಿ, ಮಂಗಳೂರು.

ಜಿನಸು ಧಾರಣೆ.

(ರಖಂ).

ಮುಸ್ಸಿ ಅಕ್ಕಿ	6— 3—0	ರಿಂದ 6— 7—0
ಗುಡ್ಡ ಸುಗ್ಗಿ	5—15—0	„ 6—12—0
ರಾಶಿ	5— 8—0	„ 5—10—0
ಅವ್ವಲ್ ಬೆಳ್ತಿಗೆ	6— 4—0	„ 6— 8—0
ಗುಡು ಬೆಳ್ತಿಗೆ	5—10—0	„ 6—12—0
ರಂಗೂನು ಬೆಳ್ತಿಗೆ ಗೋಣಿ ೧ರ	9— 6—0	„ 9—10—0
ಗೋದಿ ಗೋಣಿ ೧ರ	12—12—0	„ 12— 8—0
ಹುರುಳಿ ಗೋಣಿ ೧ರ	5— 8—0	„ 6— 2—0
ಕಡಲೆ ಗೋಣಿ ೧ರ ಬೊಂಬ್ಬೈ	9— 0—0	„ 10— 0—0
ಕೊಗರಿ ಗೋಣಿ ೧ರ		10—8—0
ಕೊಗರಿ ಬೇಳೆ ಗೋಣಿ ೧ರ 11—0—0	12— 8—0	„ 15— 8—0
ಉದ್ದು ಗೋಣಿ ೧ರ	11— 8—0	„ 11—12—0
[illegible] ಖಂಡಿ ೧ರ		„ 37— 8—0
ಉಪ್ಪು ಗೋಣಿ ೧ರ	4—12—0	„ 5— 0—0
ಕೊಬ್ರಿ ಖಂಡಿ ೧ರ	70—0—0	„ 75— 0—0
ಕೊಬ್ರಿಹಿಂಡಿ ಖಂಡಿ ೧ರ	10— 0—0	„ 18— 8—0
ಎಳ್ಳಿಂಡಿ ಖಂಡಿ ೧ರ ಬೊಂಬ್ಬೈ	28—12—0	„ 35— 0—0
ಕೊಬ್ರಿ ಎಣ್ಣೆ ಮುಡಿ ೧ರ	5— 8—0	„ 6— 4—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		„ 4— 6—0
ಹರಳೆ ಎಣ್ಣೆ ಕಟ್ಟಿಗೆ ೧ರ	6—11—6	„ 7— 9—0
ಮೋರಿಸ್ ಸಕ್ಕರೆ ಮುಡಿ ೧ರ	5—7—0	„ 5— 8—0
ಕಾಫಿ ಖಂಡಿ ೧ರ	150—0—0	„ 165—0—0
ಹೊಸಪೇಟೆ [illegible] ಖಂಡಿ ೧ರ	77— 0—0	„ 83— 0—0
ಗೇರುಬೀಜ ಮುಡಿ ೧ರ	1—12—0	„ 2— 0—0
[illegible] ಖಂಡಿ ೧ರ	106—0—0	„ 110— 0—0
[illegible] ಮುಡಿ ೧ರ	31— 0—0	„ 34— 8—0
[illegible] ಮುಡಿ ೧ರ		„ 34— 0—0
[illegible] ೧ರ	23—8—0	„ 24— 0—0
[illegible] ೧ರ		„ [illegible]
[illegible]		[illegible]—0—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆ ಸಲ ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳೆತ, ಕ್ಷಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದುನಿಶ್ಚ ಸುವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೩ಕ್ಕೇ ಆಣೆ.

ವಿಶೇಷ ಸೂಚನೆ—ದೇಶಿ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ)ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಗೆ ಹುಣ್ಣು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕರ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಇಕ್ಲಿಪ್ಸ ಡ್ರಾಪ್ಸ್ ಎಂಬ ಈ ಔಷಧವು ನರ ಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು, ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುದ್ದು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವವು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ಇಕ್ಲಿಪ್ಸ್ ಬಾಮ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ; ಕಫ, ಬೀಗು, ತಲೆಸಿಡಿತ, ತಲೆನೋವು, ಹುರುಕು, ತುರಿಕಜ್ಜಿ, ಮೂಲವ್ಯಾಧಿ, ಚೇಳಿನ ಕುಟುಕು, ಬೆಂಕಿಯ ಬೊಕ್ಕೆ, ಮೊಡವೆ, ಜೇನು, ಜಾಡರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1ಕ್ಕೆ ಆಣೆ 8. ವಿ. ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4-12-0.

☞ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಟೂರಕೆಟ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ, ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟ್, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

1 ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಬೀನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ| ರಾ| ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಸ್. ವ್ಹಿ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಡಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಫಿಜಿಸ್ಟ್, ಎಗಿಯರಿವೇನ್ ನಂ. 2, ಬೆಂಗಳೂರು ಅವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ಯಾಸೋಲ್ಯಾ, ಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ವಿಷಮಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ [illegible] ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ [illegible] ಮುಖ್ಯವಾಗಿ [illegible] ಶಿಫಾರಸ್ ಮಾಡುತ್ತೇನೆ.

ಮ| ರಾ| ಪಿ ಎಸ್. [illegible] ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಅಧಿಕಾರಿ, ಮೈಸೂರು ಗವರ್ನಮೆಂಟ್ ಅವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ [illegible]

[illegible]

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. [illegible]

ವಿಳಾಸ— ಶ್ರೀ [illegible] ವೈದ್ಯಶಾಲಾ, ಮೈಸೂರು.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯೂ (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದುಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ದೊಡ್ಡ ವಿವರ ಮತ್ತು ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ್, ಕೋರ್ಟುಫೀ, ರಿಜಿಸ್ಟ್ರೇಷನ್ ಆಕ್ಟ್, ಹಿಂದೂ ಲಾ, ಧೊಡ್ಡಿ ಆಕ್ಟ್, ಪ್ರೀಚ್ ಆಫ್ ಕಂಟ್ರಾಕ್ಟ್, ಮುಕ್ಕಳ ಮದುವೆ ಆಕ್ಟ್, ರೆವಿನ್ಯೂ ಕೋಡ್, [illegible] ಪಟೇಲರ ಕೋಡ್, ಗ್ರಾಮ [illegible] ಸೀಫ್ ಕೋರ್ಟ್ಸ್ ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, [illegible] ನಮೂನೆಗಳು. ಮತ್ತು ದಸ್ತಾವೇಜುಗಳ 40 ನಮೂನೆಗಳು ಇದರಲ್ಲಿವೆ. ಇದು ಪ್ರತಿಯೊಬ್ಬನ ಸಂಗ್ರಹದಲ್ಲಿ ಇರತಕ್ಕದ್ದು. [illegible]

[illegible] 1—8—0. [illegible] 1—12—0.

[illegible]

11 [illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು ¼ ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು ¼ ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು ¼ ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವುದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲ



ವಾರ್ಧಿಕ್ಯ ಇವುಗಳನ್ನು ನಿವಾರಣೆ ಮಾಡುವದರಲ್ಲಿ ಜ್ಞಾಪಕಶಕ್ತಿಯನ್ನು ವೃದ್ಧಿಮಾಡಿ ಬುದ್ಧಿಗೆ ತೀಕ್ಷ್ಣ್ಯವನ್ನುಂಟು ಮಾಡುವದರಲ್ಲಿಯೂ, ಮಲಸಂಬಂಧವನ್ನು ನರಗಳ ಬಲಹೀನತೆಯನ್ನೂ ಹೋಗಲಾಡಿಸುತ್ತವೆ. ೪೦ ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯಸಲಹೆಯು ಮುಫತ್ತಾಗಿ ದೊರಿಯುವದು.

144 ಪುಟಗಳ ವೈದ್ಯ ವಿದ್ಯಾ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಚೀನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದಸೆಟ್ಟು ೧ಕ್ಕೆ ೨—೦—೦. ದೊಡ್ಡ ಸೆಟ್ಟು ಉತ್ತಮತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದುಯಂ ರೂಪಾಯಿ ೧ಕ್ಕೆ ೮ ತೊಲೆ, ತೀಯಂ ರೂಪಾಯಿ ೧ಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೬ ತೊಲೆ.

ಇದಲ್ಲದೆ ಬೇರೆ ಥರ್ಡ್ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಖಾಂಬ, ಕಾಶಿ.

SIROMANI NARAYANA CHARYA & CO.,
Choukhambay,
BENARES CITY.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲ್ಯಾಫ್ ಎಸ್ಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ| ಲಲ್ಲುಬಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕ್ಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಇವರಿಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

"ಗ್ರಾಹಕರೇ ಒಮ್ಮೆಗೆ ಸಂದರ್ಶಿಸಿರಿ."

ನಮ್ಮಲ್ಲಿ ಎಲ್ಲಾ ತರದ ಸುಗಂಧ ಸಾಹಿತ್ಯಗಳೂ, ಇಂಗ್ಲಿಷ್ ಮತ್ತು ಸ್ವದೇಶಿ ಸಾಬೂನುಗಳು, ಸುಗಂಧ ತೈಲಗಳು, ಆರಾರೂಟ್, ಬಾರ್ಲಿ, ಕೊಕ್ಕೊ, ಚಾಹೊಪ್ಪು, ಬಿಸ್ಕಿಟುಗಳು, ಟೊಯಿಲೆಟ್ ಪೌಡರುಗಳು, ಸೆಕೆ ಕಾಲಕ್ಕೆ ಅನುಕೂಲವಾದ ವಿಲ್ಕ್ ಆಫ್ ರೋಜ್ ಮತ್ತು ಗ್ಲಿಸರಿನ್, ಪೋಮೆಡ್ ವೆಸ್ಲಿನ್, ಕೈ ಲಾಂದ್ರ ಮತ್ತು ಚಿಮಣಿ ಲಾಂದ್ರಗಳು, ಕಪ್ ಮತ್ತು ಸ್ಸಾಸರುಗಳು, ಚೊಕ್ಕಲೇಟ್ ಮತ್ತು ಪೆಪ್ಪರ್ ಮಿಂಟುಗಳು, ಟೇಬಲ್ ಲೇಂಪುಗಳು, ವಿಶಿಷ್ಟ ಲೇಖನ ಸಾಹಿತ್ಯಗಳು, ಮುಖ ನೋಡುವ ಕನ್ನಡಿಗಳು, ವಾಚು ಮತ್ತು ವಾಚಿನ ಸರಪಣಿಗಳು, ಮಕ್ಕಳು ಆಡುವ ಸಾಹಿತ್ಯಗಳು, ಫೌಂಟಿನ್‌ಪೇನು ಮತ್ತು ಇಂಕುಗಳು, ಕ್ಯಾಶ್ ಬೊಕ್ಸ್‌ಗಳು, ದೃಷ್ಟಿ ಚಕ್ರಗಳು, ಪೇಟೆಂಟ್ ಔಷಧಿಗಳು, ರಖಮಾಗಿಯೂ ಚಿಲ್ಲರೆಯಾಗಿಯೂ ಅತೀ ಸುಲಭ ದರದಲ್ಲಿ ದೊರಕುವವಲ್ಲದೆ ಈ ಕೆಳಗೆ ಕಾಣಿಸಿದ ಸಾಹಿತ್ಯಗಳಿಗೆ ನಾವು ಮುಖ್ಯ ಏಜಂಟರಾಗಿರುವೆವು. ಕಾವಿನಿಯಾಕ್ಸೆಲ ಮತ್ತು ಒಟ್ಟೊ-ದಿಲ್ ಬಹಾರ್ ಅತ್ತರುಗಳು ಮತ್ತು ಕಾವಿನಿಯಾ ಕಂಪೆನಿಯಲ್ಲಿ ಆಗುವ ಪ್ರತಿ ಒಂದು ಸಾಹಿತ್ಯಗಳು, ಅಮೃತಾಂಜನ, ಬಾಲಾಮೃತ, ಸೆಶಿಂತಾನ್, ಡೈಮೆಂಡ್ ಸೋಪ್ಗಳು, ಜಪಾನ್ ದೇಶದ ಬಂಶುಗಳಿಂದ ಆಗುವ ಕಡ್ಡಿಗಳು, ಇದೂ ಅಲ್ಲದೆ ಅನೇಕ ರೀತಿಯ ಹೊಸ ಸಾಹಿತ್ಯಗಳು ಹೊಸದಾಗಿ ಬಂದಿವೆ. ಒಮ್ಮೆಗೆ ನಮ್ಮಲ್ಲಿಗೆ ಬಂದು ಸಂದರ್ಶಿಸಿದರೆ ನಮ್ಮ ದರಗಳು ತಮಗೆ ಅನುಕೂಲವಾಗಿಯೇ ಇವೆಯೆಂದು ತಿಳಿಯಬಹುದು. ರೋಯಲ್ ದಂತಮಂಜನ ೬ ಡಬ್ಬಿಗಳ ಬೆಲೆ ಆಣೆ 8.

ದಿ ಯೂನಿಯನ್ ಮಾರ್ಟ್,
ಮಂಗಳೂರು, ದ. ಕ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಖುದಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಿಚ್ಛೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್ಮೆಂಟ್ ಮಾಡಿರುವುದು. ಮತ್ತು ಫಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗಜ್ಜೆ ಅದ್ದಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೋಕ್ತಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ¼ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಬಹಮಾನ್ ಪರಿಮಳದ ಕಾರ್ಡುಗಳು ಡಜನ್ 100-12-0.
ವಿ. ಪಿ. ಖರ್ಚು 0—4—0 ಜಾಸ್ತಿ.

ಪ್ರಾಮುಖ್ಯ ವಿಕ್ರೇತರು:—

ಎಚ್. ಆರ್. ಮೋದಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಮುಂಬೈ.

H. R. MODY & Co.,
10 Princess Street, Bombay.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಬಿಬುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಡುಯುತ್ತಿದ್ದಾರೆ., ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ 10 ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಿಗೆ ಬೇಕಾದ ಕನ್ನಡ, ತುಳು, ಮರಾಠಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬೇಕು ಬೇಕಾದ ವೆಚ್ಚದೊಳಗಾಗಿ ಸಕಲ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಕಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯ ಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨ **ಬಾಣಂತಿ ಮಾತ್ರೆ:**—ಪ್ರಸವವಾದ ರಾಗಾಯಿತು 30 ದಿನಗಳವರೆಗೆ ಉಪಯೋಗಿಸುವದರಿಂದ ಪಥ್ಯ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರತ್ಯಕ್ಷವಾದದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಆಸವಗಳು ಸಿಕ್ಕುತ್ತವೆ. ಪಕ್ಷಘಾತ ವಾಯುವಿನಿಂದ ಪೀಡಿತರಾದವರೂ, ಬೇಳೆರೋಗ ಇರುವವರೂ, ಉರವಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ಪಿ. ಎಸ್ ವೈದ್ಯಶೇಖರ,
ಮ್ಯುನಿಸಿಪಲ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir,
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಡೈಮಂಡ್ ಸೋಪುಗಳು.

ಈ ಡೈಮಂಡ್ ಸೋಪುಗಳು ಪ್ರತಿ ಒಬ್ಬರಿಗೂ ಹೆಚ್ಚು ಕಾಲದಿಂದ ತಿಳಿದವುಗಳೇ ಆಗಿವೆ.

ಈ ಡೈಮಂಡ್ ಸೋಪುಗಳು "ಬೊಂಬಾಯಿ ಡೈಮಂಡ್ ಸೋಪು ಕಂಪನಿಯಲ್ಲಿ ತಯಾರಿಸಲ್ಪಟ್ಟದ್ದಾಗಿವೆ. ಈ ಸೋಪುಗಳ ವಿಶೇಷವಾಗಿ ಅನೇಕ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ದೊರಕಿವೆ. ಉಪಯೋಗಕ್ಕೆ ತುಂಬಾ ಅನುಕೂಲ. ಕ್ರಯದಲ್ಲಿ ಸಹಾ ಸುಲಭ. ಈ ಕೆಳಗೆ ಕಾಣಿಸಿದ ಸೋಪುಗಳು ಬಿಕರಿಗೆ ಸಿದ್ಧವಾಗಿವೆ. ಡೈಮಂಡ್ ಬಾತ್ ಸೋಪು, ಡೈಮಂಡ್ ಮಸ್ಕ್, ಡೈಮಂಡ್ ಲಿವೆಂಡರ್, ಡೈಮಂಡ್ ಅತ್ತರು ಸೋಪು, ಡೈಮಂಡ್ ಹಲ್ಲಿನ ಸೋಪು ಮತ್ತು ಡೈಮಂಡ್ ರಂಗು ಸಾಬೂನುಗಳು, ಕ್ರಯವಗೈರೆ ಬರದು ತಿಳಿಕೊಳ್ಳಬಹುದು.

ಏಜಂಟರು:—

ದಿ ಯೂನಿಯನ್ ಮಾರ್ಟ್,
ಮಂಗಳೂರು, ದ. ಕ.

ಆರ್. ಮಾರ್ಟಿನ್ನರ ಮಾತ್ರೆಗಳು

ನಂಬ್ರ ೨.

ದಮಿಯಾನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಅದುಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶೂಲೆ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯವಶ್ಯಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳು. ಬಾಟ್ಲಿಗೆ ರೂ ೧—೧೧—೦.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಗಳು, ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು. ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳೂ ಶಾಶ್ವತವಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೨—೦.

ಆರ್. ಮಾರ್ಟಿನ್ನರ ಗ್ಲಿಟೋಡಾಯಿನ್.

ಗಂಡಸರ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತದೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಚೆನ್ನಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯ ತಕ್ಕ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೧೪—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ೧. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. 11. Frere Road,
Near Wright's Co. Fort Bombay

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ

ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಬೇಸಿಗೆಕಾಲದಲ್ಲಿ ಅನುಕೂಲವಾದ ಶರಬತ್ತುಗಳು.

ಶ್ರೀಯುತ ಕರ್ನಾಕ ಬ್ರದರ್ಸರವರು ಶಾಸ್ತ್ರೋಕ್ತ ಪರಿಶೋಧನೆಯಿಂದ ತಯಾರಿಸಿರುವರು. ಇದು ಎಂದಿಗೂ ಕೆಡಲಾರದಂತ ದ್ರಾವಕದಂತಿದೆ. ಇದು ಮಾಧುರ್ಯವಾಗಿ ತುಂಬಾ ಪರಿಮಳಿಸುವದು. ಈ ಕೆಳಗೆ ಕಾಣಿಸಿದ ಹೆಸರಿನಲ್ಲಿದೆ.

ಲಿಮನ್, ರೋಜ್‌ಬೆರೀ, ರೋಜ್ ಮತ್ತು ಪೊಮೆಗ್ರೆನೇಟ್ ಆಗಿರುವವು. 1 ಬಾಟ್ಲಿ ಸೋಡಾ ಯಾ 1 ಟಂಬ್ಲರ್ ನೀರಿನಲ್ಲಿ 1 ಚಮಚ ಈ ಶರಬತ್ತಿನ ದ್ರಾವಕವನ್ನು ಹಾಕಿದ್ದಲ್ಲಿ ಇದು ಮಧುರವಾಗಿ ದಣಿವನ್ನು ಪರಿಹರಿಸುವದು. ಪ್ರತಿ ಒಬ್ಬರು ಇದರ ವಿಷಯವಾಗಿ ಹೊಗಳುತ್ತಾರೆ. ಸೀಸೆ 1ರ ಬೆಲೆ ರೂ. 1.

ಏಜಂಟರು:—

ದಿ ಯೂನಿಯನ್ ಮಾರ್ಟ್,
ಮಂಗಳೂರು, ದ. ಕ.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಸಸ್ಯಮಿಶ್ರವಾದ ಈ ಮಿಶ್ರಣದ ಬರೇ 48 ದಿವಸಗಳ ಸೇವನೆಯಿಂದ ಶ್ವಾಸಕಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು [illegible] ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹೆವು. [illegible]

ಬೆಲೆ 1ರ ಕ್ರಯ 14 ಆಣೆ. [illegible]

[illegible]

ವಿಳಾಸ:— [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಸ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನೆಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದುವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. ಸನ್ನೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರು ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M NATH & CO *Ayurvedic Chemists*
Vepery Post MADRAS,

ಕುಂಬಳೆ ನರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಭಾಮಿನಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೨ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವುದು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಶನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ-ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಘೃತ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧ ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಕಡಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಚಪಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1-8-0.

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0-8-0

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಡಿಕೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತಷಿಲೆ ದ್ರವ್ಯಕ್ಕೆ ರೂ. 1-0-0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂದರಿ ರೋಜ

ಅತಿ ಮನೋಹರವೂ ಮೋಹಕರವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಡಮೆ ತರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಯ್ಯನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಂದರ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬೇಕಾದರೆ ಅವು ರೇಶ್ಮೆಯಂತೆ ನಯವಾಗಿ ಕಂಗೊಳಿಸುತ್ತಿರಬೇಕು. ಇಲ್ಲದೆ ಸುರುಳಿ ವಿಶೇಷ ರೀತಿಯಿಂದಾಗಿಯೂ ಕಟ್ಟಿದಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಲಾಡಿಸುವದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸುತ್ತಲೆ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿದ್ದರೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು ಮೆದುಳಿಗೆ ತಂಪನ್ನುಂಟುಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿ ರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಿಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂಡೆಗಿಜಿ 6, ಕಣ್ಣುಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅದ್ದ 1, ತಾಂಬೂಲ ಮಾತ್ರ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ಚಿತ್ರವರ್ಣ ಪೋಸ್ಟುಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಕ್ರಯ. 50 ಬಹುಮಾನಗಳ ಸಹಿತ ರೂ. 1-0-0

ವಿಳಾಸ:— ವಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಯಂ ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0-8-0
ಆಯಸಾ ಹೇರ್ ಆಯಿಲ್ ,,	1-0-0
ಮಹಾರಾಣೀ ಹೇರಾಯಿಲ್ ,,	0-12-0
ಕಾಮಿನಿಯಾ ಹೇರಾಯಿಲ್ ,,	1-0-0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0-6-0
ಅದೃಷ್ಟ ಹುಡುಗ (ದ್ವಿತೀಯ ಮುದ್ರಣ)	0-8-0
ಅಮೃತ ಪುಲಿನ ,,	0-10-0
ಇಂದಿರಾ ಕೃ. ಮು.	0-6-0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0-10-0
ಮಧುಸೂದನ ಡಿಟೆಕ್ಟಿವ್ ನಾವಿಲ್	0-4-0
ಪ್ರತಿಜ್ಞೆ ,, ,,	0-12-0
ಅಂಬಾಲಿಕೆ (ಹೊಸ ನಾವಿಲ್)	0-1-6
ಕುಸುಮ ,, ,,	0-1-0
ರಾಧಾನಾಥ ,,	0-2-0
ಸುಭದ್ರೆ ,,	0-5-0
ಚಂದ್ರಹಾಸ (ಹೊಸ ಕಥೆ)	0-1-0
ಧ್ರುವ ,,	0-2-0
ಮಕ್ಕಳ ಶಿಕ್ಷಣ (School Discipline)	0-12-0
ಪುಷ್ಪರಚನೆ (Flower Making)	0-14-0
ಕನ್ನಡ ಆಹ್ನಿಕ ಮರಿಂದ	1-0-0
,, ಸಂಗೀತ ಸಮಯಸಾರ	1-4-0
ಮಾತೃನಂದಿನಿ (ಶ್ರೀ ತಿರುಮಲಯ್ಯ)	1-4-0
ವಿಕ್ರಮ	1-3-0
ಪತಿವ್ರತ [illegible]	0-10-0
[illegible] 1[illegible]	0-1-0

ಹೊಸ ಪುಸ್ತಕ! 'ಹಿಂದೂ ಲಾ' ಹೊಸ ಪುಸ್ತಕ!

ಇದುವರೆಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅವಿಭಕ್ತಕುಟುಂಬದ ದಾಯಭಾಗ ಪಾಲು ಪಾರಿವತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯಬೋಗ್ಯ ಆಧಾರ ಅನ್ವಾದಿಪತ್ರಗಳು, ಗುರುಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಬಕ್ಕಣಗಳು ವಿಶದವಾಗಿ ಅಚ್ಚು ಮಾಡಲ್ಪಟ್ಟಿದೆ. ಕ್ರಯ ರೂ. ೧-೮-೦.

ವಿಳಾಸ:—ಬಿ. ನರಸಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು ಸಿಟಿ.

ಪ್ರಖ್ಯಾತಪಟ್ಟ ಪೆಟ್ರೋಲ್ ಗ್ಯಾಸ್‌ದೀಪಗಳು:—

ಗ್ಯಾಸ್‌ದೀಪಗಳಲ್ಲಿ ಅತಿ ಗಟ್ಟಿಯಾದವುಗಳು ಮತ್ತು ಉತ್ಕೃಷ್ಟ ದಾಹಕಗಳು. ಹಿಲ್ ಪ್ಲಾಮೆಂಟಲ್ ಯಾ ಬತ್ತಿಗಳು, ಬಹಳ ಅಗ್ಗ. ಕೆಟಲಾಗ್ ಅಥವಾ ಸಾಮಾನು ಪಟ್ಟಿಯನ್ನು ಉಚಿತವಾಗಿ ಕಳುಹಿಸಿ ಕೊಡುವೆವು.

[illegible]— ಸನ್ ಕಂಪೆನಿ,
[illegible]

ಹಲ್ಲುನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡೊಕ್ಟರುಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1-4-0.

ಅಂಚೆ ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂದರ್ ಗಾರ್ಡನ್ ಮತ್ತು ಚಂದನ್‌ಕರ್ ಸೋದರರಲ್ಲಿ ದೊರೆಯುವದು.

STANY BROTHERS
Sole Agents
M. O. C's. Toothache
Specific, Mangalore.

ಸರ್ವ ವರ್ತಕರು ಬೇಕಾಗಿದೆ.

Printed & Published by V. S. Kamath at the Mangalore Trading Association's [illegible] Press, Mangalore.

ಸ್ವದೇಶಾಭಿಮಾನಿ

ಚಂದಾದಾರ:— ವರ್ಷ 1ಕ್ಕೆ ರೂ. 1-8-0

ಮುಂಗಡ [illegible] ರೂ. 2-0-0

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುವು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೧ನೇ ಮೇ ಶುಕ್ರವಾರ ೧೯೧೭. | ಸಂಚಿಕೆ ೧೯.

ಸರ್ವರಿಗೂ ಸಾಧ್ಯ!

ಹನಿಗಳು ಕೂಡಿಯೆ ಹಳ್ಳವಾಗುವದು!

ಹಣವಂತರು ಮಾತ್ರ ಯುದ್ಧಸಾಲದಲ್ಲಿ ಹಣ ಹಾಕುವದೆಂಬ ತಪ್ಪು ಗ್ರಹಿಕೆಯು ಸರ್ವಥಾ ಇರಕೂಡದು. ಭಿಕ್ಷಾಪತಿಯೂ ಲಕ್ಷಾಧಿಪತಿಯೂ ತಮ್ಮ ಯಥಾನುಶಕ್ತಿ ಸಹಾಯಮಾಡಲು ಅವಕಾಶವಿದೆ.

ರೂ. 10, 20, 50 ಈ ಮೊಬಲಗುಗಳ ಲೆಕ್ಕವೇ ವಿಶೇಷವಾಗುವದು.

ಅಲ್ಪ ಮೊಬಲಗುಗಳ ಸಾಲ ಪಡಿಯೋಣಾಗುವದೋ ಎಂಬ ಅಂಜಿಕೆಯಿಂದ ಹಿಂಜರಿಯಬೇಡಿರಿ. ಸಾಮ್ರಾಜ್ಯದ ರಕ್ಷಣೆಗಾಗಿ ದೇಶದ ಭದ್ರತೆಗಾಗಿ ಈ ಸಾಲವು ಬೇಕಾಗಿರುವದು.

ಭದ್ರವಾದ ಜವಾಬ್ದಾರಿ.

ಖಂಡಿತವಾದ ಬಡ್ಡಿ.

ಈಗಲೇ ಬೇಕಾಗಿರುವದು.

ಯುದ್ಧಸಾಲಕ್ಕೆ ಮೊಬಲಗುಗಳನ್ನು ಸೂಚಿಸಿ ಈ ದಿನವೇ ಮನವಿಗಳನ್ನು ಬರಕೊಳ್ಳಿರಿ.

ಪೋಸ್ಟ್ ಆಫೀಸುಗಳಲ್ಲಿ, ಬೇಂಕುಗಳಲ್ಲಿ ಅಥವಾ ಇತರ ಸರಕಾರದ ಆಫೀಸುಗಳಲ್ಲಿ ಈ ಮನವಿಗಳನ್ನು ಬರಕೊಳ್ಳಬಹುದು.

ಇನ್ನೂ ವಿಶೇಷ ಮಾಹಿತಿ ಬೇಕಾದವರು ತಹಶೀಲದಾರರುಗಳಿಂದ, ಟಪ್ಪಾಲು ಮಾಸ್ತರುಗಳಿಂದ, ರೆವಿನ್ಯು ಇನ್ಸ್‌ಪೆಕ್ಟರುಗಳಿಂದ ಅಥವಾ ಆಯಾ ಕಡೆಗಳಲ್ಲಿ ಏರ್ಪಡಿಸಲ್ಪಟ್ಟಿರುವ ಕಮಿಟಿಗಳಿಂದ ತಿಳಕೊಳ್ಳಬಹುದು.

ಮನೋಲ್ಲಾಸಿನಿ ತೈಲ!

ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕುಂದಿಹೋಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದೆಂತಲೂ ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗಿರುವ ಕೂದಲನ್ನು ಕಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆಂತಲೂ ಈ ತೈಲವನ್ನು ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ 1 ಸೀಸೆಗೆ ರೂ. 0—12—0. (ವಿ. ಪಿ. ಖರ್ಚು 4 ಆಣೆ).
,, 3 ಸೀಸೆಗಳಿಗೆ ,, 2— 0—0. ,, ,, 8 ,,

ಬೆಲೆ ಸುಲಭ! ಚಿನ್-ಚಿನ್-ಬಾಂ. ಗುಣ ಅಧಿಕ!

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ಚಳಿ, ಛಾಯಿ, ಚೇಳು ಕಡಿತ, [illegible] ಮುಂತಾದ್ದು ತಕ್ಷಣ ಗುಣ. ಬೆಲೆ 1 ಡಬ್ಬಿಗೆ ಒಂದೇ ಆಣೆ. ಡಜನ್ 1ಕ್ಕೆ ರೂ. 0—10—0. ಅಂಚೆ ಹಾಸಲು ಬೇರೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್.

ಸೂಚನೆ:—ಅನೇಕ ತರದ ಮಾತ್ರೆಗಳು, ತೈಲಗಳು, [illegible], [illegible] ಗಳು, [illegible] ಗಳು, [illegible], [illegible].

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
[illegible]

ಒಳ್ಳೆ ಗೊಬ್ಬರ! ಅವ್ವಲ್ ಈಟು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಇತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡಿಸುವುದಿಲ್ಲ.

ಬೆಲೆ ಕಡಿತ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿತ!

ಈ ಗೊಬ್ಬರ ಒಂದು ಹಿಡಿ ಸಾಕಾಗ್ವಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು, ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟನೆಗಳು ಧರ್ಮಾರ್ಥವಾಗಿ ದೊರೆಯುತ್ತವೆ. ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda.
1, Royal Exchange Place, Calcutta.

ಕುಂಬಳೆ ನರಸಿಂಹ [illegible] ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗದ್ಯ ಭಾಷೆ ಪದ್ಯದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೭ ಪುಸ್ತಕಗಳು ಬೇಕಾದರೆ ೧೮ ಆಣೆಗೆ ವಿ. ಪಿ. ಮೂಲಕ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವುದು.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟಿದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ಸೇರಿದ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆಗಳನ್ನು, ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.



ಪ್ರತ್ಯೇಕ ಭಾಗಕ್ಕೆ ಕ್ರಯ ರೂ. 0—12—0. ವಿ. ಪಿ. ಛಾರ್ಜು 2 ಆಣೆ
ಎರಡು ಭಾಗಗಳು ಸೇರಿ ಕ್ರಯ ರೂ. 1— 4—0. ,, 2 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,
ಜಿಮ್ನಾಸ್ಟಿಕ್ಸ್ ಇನ್ಸ್‌ಟ್ರಕ್ಟರ್, ಪಚ್ಚೆಯಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,
Senior Gymnastic Instructor,
Pachiyappa's College, MADRAS.

N. B.—[illegible]

ಸಂಗೀತ ಪುಸ್ತಕಗಳು.

೧. ಸಂಗೀತ ಕೃತಿದರ್ಪಣ. (ತೆಲುಗು)

ಈ ಪುಸ್ತಕದಲ್ಲಿ ಸಂಗೀತವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅನೇಕ ವಿಷಯಗಳೂ, ಪ್ರಸಿದ್ಧಿಪಡೆದ ತ್ಯಾಗಯ್ಯ ಮುಂತಾದ ಭಕ್ತರಿಂದ ರಚಿಸಲ್ಪಟ್ಟ ಕೀರ್ತನೆಗಳೂ ಇವೆ. ಕೀರ್ತನೆಗಳಿಗೆಲ್ಲಾ ಸಂಪೂರ್ಣವಾಗಿ ಸ್ವರಗಳು ಹಾಕಿರುತ್ತೆ.

ಬೆಲೆ. { ಒಂದನೆಯ ಭಾಗ ೩—೪—೦ (೧೦೦ ಕೀರ್ತನೆಗಳುಳ್ಳದ್ದು)
ಎರಡನೆಯ ಭಾಗ ೩—೪—೦ (೭೫ ಕೀರ್ತನೆಗಳುಳ್ಳದ್ದು)

೨. ಸಂಗೀತ ವಿದ್ಯಾದರ್ಪಣ. (ತೆಲುಗು)

ಮೇಲ್ಕಂಡಂತೆ ಸಂಗೀತವಿದ್ಯಾರ್ಥಿಗಳಿಗೂ, ಸಂಗೀತವಿದ್ವಾಂಸರಿಗೂ ಉಪಯೋಗವಾದ ಪುಸ್ತಕ ಬೆಲೆ ರೂ. ೩—೮—೦.

೩. ಗಾಂಧರ್ವ ಕಲ್ಪವಲ್ಲಿ. (ತೆಲುಗು)

ಬೋಧಕರ ಸಹಾಯವಿಲ್ಲದೆ ಕೃತಿಗಳು, ಜಾವಡಿಗಳು, ಪಾರ್ಸಿ, ಹಿಂದುಸ್ಥಾನಿ ಮಟ್ಟುಗಳು ಇವುಗಳನ್ನು ಕಲಿಯುವಂತೆ ಸ್ವರಸಾಹಿತ್ಯಗಳನ್ನು ಕೊಟ್ಟಿರುತ್ತೆ.

ಬೆಲೆ ರೂ. ೩—೪—೦.

೪. ಸಂಗೀತ ಸಮಯಸಾರ (ಕನ್ನಡ)

ಕನ್ನಡ ಭಾಷೆಯಲ್ಲಿ ಸಂಗೀತವಿದ್ಯಾವಿಷಯಕವಾದ ಪುಸ್ತಕವು ಇದೊಂದೇ.

ಬೆಲೆ [illegible] ೧—೪—೦.

೫. ಶತಕೀರ್ತನ ಸ್ವರಾವಳಿ. (ತೆಲುಗು ಪುಸ್ತಕವು)

ಇದರಲ್ಲಿ ತ್ಯಾಗಯ್ಯನವರು ಮಾಡಿರುವ ಒಂದುನೂರು ಕೀರ್ತನೆಗಳಿರುತ್ತೆ. ಪ್ರತಿಒಂದು ಕೀರ್ತನೆಗೂ ಸ್ವರಗಳನ್ನು ಹಾಕಿರುತ್ತೆ. ಕಲಿಯತಕ್ಕವರಿಗೆ ಸುಲಭವಾಗಿರುತ್ತೆ. ಬೆಲೆ ರೂ. ೩—೧೧—೦.

೬.	ಹಾರ್ಮೋನಿಯಂ ಸ್ವಯಂ ಬೋಧಿನಿ ..	೦—೪—೦.	ಕನ್ನಡ ಪುಸ್ತಕಗಳು
೭.	ಸಂಗೀತ ಪಾರಿಜಾತ	೦—೪—೦.	
೮.	ಕಲ್ಯಾಣ ಗೀತಾವಳಿ	೦—೬—೦.	
೯.	ಬಾಲಿಕಾಗೀತ ಮುಕ್ತಾಕಲಾಪ. ...	೦—೯—೦.	

ಎಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡವೆಯು ಒಳ್ಳೆಯದೊ ಕೆಡುಕೊ ಎಂಬದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೇಲಿನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ

ಅತ್ಯುತ್ತಮವಾದ ಗೊಬ್ಬರಗಳು.

1. ನೈಟ್ರೇಟ್ ಒಫ್ ಸೋಡಾ — Nitrate of Soda.
2. ಸುಪರ್ ಫೋಸ್‌ಫೇಟ್ಸ್ — Super Phosphates.
3. ಬೆಸಿಕ್ ಸ್ಲೇಗ್ — Basic Slag.

ಇವುಗಳು ತೊಪ್ಪೆ ಸೆಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಖಂಡುಗ ಹಟ್ಟಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುಪ್ಪೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಶಿ ಹಾಕುವುದಕ್ಕಿಂತ ಒಂದು ಹಿಡಿ ಸೌಳುಪ್ಪನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲ ಮಾಹಿತಿಯನ್ನು ಕೊಡುವ ಸೂಚನಾಪತ್ರಗಳು ಬೇಕಾದ್ದಲ್ಲಿ ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. ಕೆಳಗೆ ಕಾಣಿಸಿದ ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ, ಸಾಕಷ್ಟು ರುಮಾಲು ಪಡಕೊಳ್ಳಬಹುದು.

[illegible]

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
[illegible], ಮಂಗಳೂರು.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು	225,000—0—0
Paid up Capital	200,225—0—0	ಆಗತ ಮೂಲ ಧನವು	200,225—0—0
Deposits	323,038—15—10	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	323,038—15—10
Reserve Fund	50,003—2—5	ರಕ್ಷಿತ ಧನವು	50,003—2—5

25% of the net profits are added annually to the **Reserve Fund.** Rs.28,485/ have been invested in **Government Paper** of the face value of Rs.29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ನೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುತ್ತದೆ. ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ. 29,300ರದ ಪ್ರಾಮಿಸರಿ ನೋಟುಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

Dividends of not less than 6% paid during the **past years** and a bonus of 1% to 2% paid in **addition** during the last eight years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಳೆದ 8 ವರುಷಗಳಲ್ಲಿ ಶೇಕಡಾ 1ರ ದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/-and above in multiples of **Rs. 5/ received for** 3, 6, 12 and 24 months @ 4, 4½, 5 and 5½% respectively at the discretion of **the managing committee.**

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one weeks notice of **withdrawal after** one month received @ 3½% per **annum at the discretion** of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಶೇಕಡಾ 3½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಆರಂಭಿಸಲಾಗುವವು.

Savings Bank Account opened for any sum not less than 4 As. and multiples thereof and **interest paid** @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಬಹುದು. ಈ ಠೇವಣಾತಿಗಳಿಗೆ ಶೇಕಡಾ 4½ರ ದರ ಬಡ್ಡಿಯು ಕೊಡಲ್ಪಡುವುದು.

Loans granted on proper securities and pledges.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡಲ್ಪಡುತ್ತವೆ.

Canara Bank Ltd.,
Mangalore, 1st May 1917.

P. Gopal Naik,
Secretary

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬ್ರಮ್ಹಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ
ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಪ್ರೇಮಾರಿ ನಾಶಕ. ಪ್ರೇಮಾರಿ ನಾಶಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವವರಿಗೆ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ, ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ 1. ಚಿಕ್ಕ ಸ್ಸಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಹಿದ.

ಶತಘ್ನೋತ್ತ ಘೃತ ಲೇಪ. ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಕುರು ಕಾರ್ಬಂಕಲ್‌ಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸೈಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಹಿದ.

ವೈದ್ಯರತ್ನ ಪಂಡಿತ ಡಿ, ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ: — "ಪಂಡಿಟ್", ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಸೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಇಮಿಟೇಶನ್

ವಜ್ರದ ಒಡವೆಗಳು.

ಈ ಒಡವೆಗಳು ಅಪರಂಜಿ ಭಂಗಾರಕ್ಕೆ ಸರಿಯಾದ ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿ ಬಿಳೀ ಕಲ್ಲು, ಕೆಂಪು ಕಲ್ಲುಗಳು ಇಟ್ಟು ಕಟ್ಟಿರುತ್ತದೆ. ಈ ಒಡವೆಗಳು ಅಮೇರಿಕಾ, ಇಂಗ್ಲೆಂಡ್ ದೇಶಗಳಲ್ಲಿ ತಯಾರಿಸಲ್ಪಟ್ಟವು. ಇವಕ್ಕೆ 4 ವರುಷಗಳ ವರಿವಿಗೂ ಬಣ್ಣ ಹೋಗುವದಿಲ್ಲವೆಂದು ಗ್ಯಾರಂಟಿ ಕೊಡುವೆವು. ಅಮೇರಿಕಾ, ಇಂಗ್ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ಹೇಳುವವರಿಗೆ ಅವರ ಹಣವನ್ನು ವಾಪಸು ಕೊಡುವೆವು.

ಇಮಿಟೇಶನ್ ವಜ್ರದ ಬೆಂಡೋಲೆ.



ಈ ಬೆಂಡೋಲೆಯನ್ನು ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ. ಇದನ್ನು ನೋಡುವವರು ವಜ್ರದ ಕಲ್ಲೆಂದೇ ಹೇಳುವರು. ಇದರ ಕಲ್ಲುಗಳು ಸೂರ್ಯನ ಪ್ರಕಾಶಕ್ಕೆ ಸರಿಯಾಗಿ ಥಳಥಳಿಸುವದು. ಅಚ್ಚ ವಜ್ರಗಳಿಂದಕಟ್ಟಿದ ನಗಗಳನ್ನು ಉಪಯೋಗಿಸುವವರೂ ಕೂಡ ಈ ಬೆಂಡೋಲೆಯನ್ನು ತೆಗೆದುಕೊಂಡು ಉಪಯೋಗಿಸುತ್ತಾರೆ. ಈ ಓಲೆಯು ಸವರನ್ ಭಂಗಾರಕ್ಕೆ ಸರಿಯಾದ ರೋಲ್ಡ್‌ಗೋಲ್ಡ್ ಭಂಗಾರದಿಂದ ತಯಾರಿಸಿದೆ. 7 ಕಲ್ಲಿನ ಬೆಂಡೋಲೆ ಕ್ರಯ ರೂ. 2—0—0.

ಜಂಟಲ್‌ಮೇನ್ ಲೀವರ್ ವಾಚ್.

7 ಬಹುಮಾನಗಳ ಸಹಿತ ಕ್ರಯ ರೂ. 4—0—0
5 ವರುಷಗಳ ಖಾತ್ರಿಯಾದ ಗ್ಯಾರಂಟಿ ಸಹ.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಈ ಗಡಿಯಾರವು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಗಾಳಿ, ಧೂಳು, ಸೇರದಂತೆ ಹಿಂಭಾಗದ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ.



ಒಂದನ್ನು ತರಿಸಿ ನೋಡಿರಿ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಶಾವಂತಿಗೆ ಹೂವು 1, ಸೆಂಟ್‌ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಳಿ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಭಂಗಾರದ ಉಂಗುರ 1, ಜುಮ್ಲಾ ಏಳು ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 4—0—0

ಸೊಗಸಾದ ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಇದು ಭಂಗಾರದ ಗಿಲೀಟಿನಿಂದ ಪ್ರಖ್ಯಾತಿ ಹೊಂದಿದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳಬಹುದು. ಸಾಧಾರಣ ಡಾಬುಗಳಂತೆ ತೆಗೆಯುವುದಕ್ಕೂ ಹಾಕುವುದಕ್ಕೂ ಕಷ್ಟತೋರಿಸುವುದಿಲ್ಲ. ಇದರಲ್ಲಿ ಗಣಂ ಗೆಜ್ಜೆಗಳು ಕಟ್ಟಿರುತ್ತೆ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದುಸಲ ತರಿಸಿನೋಡಿರಿ, ಭಂಗಾರದ ಗಿಲೀಟಿನ ಗೆಜ್ಜೆ ಡಾಬು 1ಕ್ಕೆ ರೂ. 3—8—0.

ಕೈಯಲ್ಲಿ ಕಟ್ಟುವ ಗಡಿಯಾರ.



ಗಡಿಯಾರವು ಉತ್ತಮವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನೋಟಕ್ಕೆ ಬಹು ಗಂಭೀರವಾಗಿಯೂ ಸುಂದರವಾಗಿಯೂ ಉಳ್ಳದ್ದು. ಇದರ ಎಲ್ಲಾ ಸಾಮಾನುಗಳುಬಹು ನಾಜೂಕಾದ ಯಂತ್ರಗಳಿಂದ ತಯಾರಿಸಲ್ಪಟ್ಟದ್ದು. ಇದನ್ನು ಜೇಬಿನಲ್ಲಿ ಹಾಕಿಕೊಂಡು ಅಥವಾ ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಷ್ಟಪಟ್ಟಾಗ್ಯೂ ನಿಲ್ಲದೆ ನಡಿಯುತ್ತಿರುವದು. ಇಷ್ಟು ಸುಲಭ ಕ್ರಯಕ್ಕೆ ಇತರ ಕಂಪೆನಿಯಲ್ಲಿ ದೊರೆಯಲಾಗದು. ಇದರ ಕ್ರಯ ರೂ. 4—8—0.

ವಿಳಾಸ:-- ಜಿ. ಪೆರುಮಾಲ್ ಎಂಡ್ ಕೊ.
28 ಹನುಮಂತರಾಯ ಕೋಯಿಲ್ ಬೀದಿ,
ಪಾರ್ಕ್‌ಟೌನ್, ಮದರಾಸು.

ಹೊಸದಾಗಿ ಕಂಡುಹಿಡಿಯಲ್ಪಟ್ಟು ಇರುವ

ಕ್ರೌನ್ ಸೋಪ್.

ಕೆಡಲಿಲ್ಲ. ಕಲೆಯಿಲ್ಲ. ಉರಿಯಿಲ್ಲ.

ಇದು ಶರೀರದ ಯಾವ ಭಾಗದಲ್ಲಾದರೂ ಹೆಚ್ಚಾಗಿ ಇರುವ ಕೂದಲನ್ನೆಲ್ಲಾ ಅತ್ಯುತ್ತಮವಾಗಿ ತೆಗೆಯುತ್ತೆ. ನೋಯುವದಿಲ್ಲ. ಚರ್ಮಕ್ಕೆ ಕಲೆಯಾಗದು. ಇತರರು ಮಾರುವ ರೋಮಸಂಹಾರಿಯನ್ನು ವ ಸೋಪನ್ನು ತೆಗೆದುಕೊಂಡು ಮೋಸಹೋಗಬೇಡಿರಿ. ಅನೇಕ ಯೋಗ್ಯತಪತ್ರಿಕೆಗಳು ಬಂದಿರುತ್ತೆ ಅದರಲ್ಲಿ ಒಂದನ್ನು ನೋಡಿರಿ.

3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 14 ಆಣೆ. 1 ಎಲೆಕ್ಟ್ರಿಕ್ ಉಂಗುರ ಇನಾಂ. ಒಂದೇ ಸಲ ಎರಡು ಪೆಟ್ಟಿಗೆ ತರಿಸಿಕೊಳ್ಳುವವರಿಗೆ ರೋಲ್ಡ್ ಗೋಲ್ಡ್ ಉಂಗುರ ಇನಾಂ. ರೂ. 1-10-0.

ಯೋಗ್ಯತಾ ಪತ್ರಿಕೆ.

ಅನೇಕಲ್ ತಾಲೂಕು ಮರವಾಳ ಗ್ರಾಮದಲ್ಲಿ ಇರುವ ಮೂಸಸ್ವಾಮಿ ಮೊದಲಿಯಾರ್—ನಿಮ್ಮ ಕಂಪನಿಯಿಂದ ತರಿಸಿದ ಕ್ರೌನ್ ಸೋಪನ್ನು ಉಪಯೋಗಿಸಿದರಿಂದ ಬಹಳ ಆನಂದವಾಯಿತು. ದಯಯಿಟ್ಟು ಇನ್ನೊಂದು ಪೆಟ್ಟಿಗೆಯನ್ನು ವಿ. ಪಿ. ಮೂಲಕ ಕಳುಹಿಸಬೇಕು.

ವಿಳಾಸ.—
ಎಂ. ಎಚ್. ಸಿಂಗ್ ಅಂಡ್ ಕೋ.,
ನಂ. 7-2ನೇ ನಾರಾಯಣ ಮೇಸ್ತ್ರಿ ಬೀದಿ,
[illegible]

ಯೂರೋಪದ ಮಹಾ ಯುದ್ಧ.

ಪಶ್ಚಿಮ ರಣರಂಗದಲ್ಲಿ ಬ್ರಿಟಿಶರು ಇನ್ನೂ ಕಠಿಣವಾದ ಕಾಳಗವನ್ನು ನಡಿಸುತ್ತಿದ್ದಾರೆ. ಶತ್ರುಗಳು ಸೋತುಹೋಗಿ ಹಿಂದಕ್ಕೆ ಸರಿದಂತೆ ಹೊಸ ಹೊಸ ಸೇನಾಂಗಗಳನ್ನು ತರಿಸಿ ಮಿತ್ರರು ಕೈವಶಮಾಡಿಕೊಂಡಿರುವ ಸ್ಥಾನಗಳನ್ನು ಹಿಂದಕ್ಕೆ ಪಡೆಕೊಳ್ಳುವ ಸಾಧನೆಯನ್ನು ಪದೇ ಪದೇ ನಡಿಸುತ್ತಿರುವರು. ಇನ್ನೂ ಸ್ವಲ್ಪ ಸಮಯದ ವರೆಗೆ ಇಲ್ಲಿ ಈ ರೀತಿ ಕದನಗಳು ನಡಿಯುತ್ತಿರಬಹುದು. ಆಂದರೆ ಜರ್ಮನರು ಯುದ್ಧರಂಗಕ್ಕೆ ಕಾದಿಟ್ಟ ಸೇನೆಗಳನ್ನು ಕಳುಹಿಸುತ್ತಿರುವದರಿಂದ ಯುದ್ಧವು ಮುಂದೆ ಸಾಗುತ್ತಲಿದೆ. ಜರ್ಮನರು ಕಾದಿಟ್ಟ ಸೇನೆಯು ೭೦೦,೦೦೦ದಿಂದ ಒಂದು ಮಿಲಿಯದೊಳಗೆ ಇತ್ತು. ಇದರಲ್ಲಿ ಇಷ್ಟರ ತನಕ ೪೦,೦೦೦ ಸೈನಿಕರನ್ನು ಮಿತ್ರರು ಸೆರೆಹಿಡಿದಿರುವರು. ಘಾಯಪಟ್ಟವರು ಕಾಣೆಯಾಗಿಹೋದವರು ಈ ಎಲ್ಲಾ ಸಂಖ್ಯೆಗಳನ್ನು ಒಟ್ಟುಮಾಡಿದರೆ ಈ ಕಾದಿಟ್ಟ ಸೇನೆಯಿಂದ ಸುಮಾರು ೩೦೦,೦೦೦ ಸೈನಿಕರ ನಷ್ಟವು ಶತ್ರುಗಳಲ್ಲಿ ಉಂಟಾಗಿರುವದು. ಇದೇ ರೀತಿ ಯುದ್ಧವು ಮುಂದರಿದರೆ ಇನ್ನು ಒಂದೆರಡು ತಿಂಗಳುಗಳಲ್ಲಿ ಜರ್ಮನರ ಕಾದಿಟ್ಟ ಸೇನೆಯು ಮುಗಿಯಬಹುದು. ಬ್ರಿಟಿಶ ಸೇನೆಗಳಲ್ಲಿಯೂ ಸೇನಾ ನಷ್ಟವು ಉಂಟಾಗಿರುವದು, ಆದರೆ ಇದು ಶತ್ರುಗಳಷ್ಟು ಹೆಚ್ಚಿನದಲ್ಲ. ಮತ್ತು ಬ್ರಿಟಿಶರಿಗೆ ಈಗ ಸೇನಾಸಂಗ್ರಹ, ಮದ್ದುಗುಂಡು ಇತ್ಯಾದಿ ಯುದ್ಧಸಾಮಾಗ್ರಿಗಳು ತುಂಬಾ ಇರುವದರಿಂದ ಜರ್ಮನರು [illegible] ಪ್ರಯತ್ನಗಳನ್ನು ನಡಿಸಿದರೂ ಇವುಗಳಿಂದ ಅವರು ತಮ್ಮ ಸೇನಾನಷ್ಟವನ್ನು ಬಲಮಾಡಿಕೊಳ್ಳುವರೇ ಹೊರತು ಮತ್ತೇನೂ ಆಗದು. ಶತ್ರುಗಳು ಸೇನೆಯನ್ನು ಕಾದಿಡದೆ ಆದನ್ನು ಮುಂದಕ್ಕೆ ತರುವಂತೆ ಮಾಡಿ ಮುಂದಕ್ಕೆ ಬಂದೊಡನೆ ಆದನ್ನು ಸಂಪೂರ್ಣ ನಾಶಗೊಳಿಸುವಂಥಾ ಯುದ್ಧತಂತ್ರವನ್ನು ಬ್ರಿಟಿಶರು ಪ್ರಕೃತ ನಡಿಸುತ್ತಿರುವರು.

ಫ್ರೆಂಚರು ತಮ್ಮ ಬ್ರಿಟಿಶ ಮಿತ್ರರೊಡನೆಯಲ್ಲಿ ಪದೇ ಪದೇ ಎದುರು ಬರುತ್ತಿರುವ ಶತ್ರುಗಳ ಸೇನಾಂಗಗಳನ್ನು ನಾಶಗೊಳಿಸುತ್ತ ಮುಂದುವರಿಯುತ್ತಿದ್ದಾರೆ. ಕ್ರೈಯೊನ್ ಪ್ರಾಂತ್ಯಗಳಲ್ಲಿ ಹಿಂಡನ್‌ಬರ್ಗರವರ ಸೇನಾವ್ಯೂಹವನ್ನು ಭೇದಿಸಿ ಹಲವು ಮೈಲುಗಳ ದೂರದ ತನಕ ತಮ್ಮ ಸೇನೆಯನ್ನು ಫ್ರೆಂಚರು ಮುಂದಕ್ಕೆ ತಕ್ಕೊಂಡುಹೋಗಿರುವರು.

ಪೂರ್ವ ರಣರಂಗದ ಕೌಕಾಸಿಯ ಪ್ರಾಂತ್ಯಗಳಲ್ಲಿ ರಶ್ಯಯನರು ತಮ್ಮ ಸೇನಾನೆಲೆಗಳನ್ನು ಬದಲಿಸಿರುವರು. ತುರ್ಕರು ಮುಷ್ ಎಂಬಲ್ಲಿ ಇದ್ದಾರೆ. ಪಶ್ಚಿಮದಲ್ಲಿ ಪೂನಿಸ್ಕ ಎಂಬುವನ್ನು ರಶ್ಯಯನರು ಮುತ್ತಿರುವರು. ರುಮೇನಿಯಾ ಪ್ರಾಂತ್ಯದಲ್ಲಿ ಶತ್ರುಗಳು ಮೇಲ್ಮಾಯಿದುಕೊಂಡು ಬಂದರೂ ರಶ್ಯಯನರು ಅವರನ್ನು ಮುಂದರಿಸಲು ಬಿಡಲಿಲ್ಲ.

ರಶ್ಯದ ಮಿಲಿಯುಕೊಫ್‌ರವರು ಇತರ ಮಿತ್ರರ ಸರಕಾರಗಳಿಗೆ ತಾವು ಶತ್ರುಗಳೊಡನೆ ಪ್ರತ್ಯೇಕವಾಗಿ ಸಂಧಾನವನ್ನು ಮಾಡುವದಿಲ್ಲವೆಂತಲೂ ಯುದ್ಧವನ್ನು ಸಮಗ್ರವಾಗಿ ನಡಿಸುವೆವೆಂತಲೂ ಬರಕೊಂಡ ಜಾಹೀರುನಾಮೆಯು ಪೆಟ್ರೊಗ್ರೇಡದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಇದು ಪ್ರಕಟವಾದೊಡನೆಯೇ ರಶ್ಯದ ಹೊಸ ಸರಕಾರದವರ ಕಡೆಯವರ ಮತ್ತು ಇವರಿಗೆ ಪ್ರತಿಕೂಲವಾಗಿರುವವರ ತಂಡವರ ಅನುಕೂಲ ಮತ್ತು ಪ್ರತಿಕೂಲ ಮತಗಳ ದರ್ಶನಗಳು ಆಯಿತು. ಸರಕಾರದವರ ಪರವಾದ ಜನಸಂದೋಹವು ರಾಶಿ ರಾಶಿಯಲ್ಲಿ ಕೂಡಿಕೊಂಡು ತಮ್ಮ ಮಂತ್ರಿಗಳ ಭಾಷಣಗಳನ್ನು ಜಯಘೋಷದಿಂದ ಕೇಳಿದರು. ಕೂಲಿಕೆಲಸದ ವರ್ಗದವರೇ ಮೊದಲಾದವರು ಸಾಯಂಕಾಲ ಗಲಭೆಯನ್ನು ಮಾಡಲು ಪ್ರಯತ್ನಿಸಿದರು. ಹೊಸ ಸರಕಾರದ ಮಂತ್ರಿಗಳು ತಮ್ಮ ಯುದ್ಧಾಪೇಕ್ಷೆಯ ಪರರಾಷ್ಟ್ರಗಳನ್ನು ಕೂಡಿಸಿಕೊಳ್ಳಲು ಅಲ್ಲ ಜಗತ್ತಿನಲ್ಲಿ ನೀತಿಕಾಪಾಡಲಿಕ್ಕಾಗಿರುವದೆಂದು ತಮ್ಮ ಮತವನ್ನು ವಿವರಿಸಿ ಹೇಳಿದ ನಂತರ ಕೂಲಿಕೆಲಸದವರ ಮತ್ತು ಸೈನಿಕರ ಪ್ರತಿನಿಧಿಗಳ ಕಾರ್ಯನಿರ್ವಾಹಕ ಮಂಡಲಿಯ ಬಹುಪಕ್ಷವು ಹೊಸ ಸರಕಾರದವರು ಮಿತ್ರರಿಗೆ ಕೊಟ್ಟಿರುವ ಸಂದೇಶಕ್ಕೆ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ.

ವಿದೇಶ ವೃತ್ತಾಂತ.

ಲಂಡನ್ ಚೇಂಬರ್ ಒಫ್ ಕಮರ್ಸಿನ ಮಿ॥ ನುಕ್ಲಿಯೊಡ್ ಎಂಬವರು ಹಿಂದೂಸ್ಥಾನದ ಸರ್. ಎಸ್. ಪಿ. ಸಿಂಹ ಮೊದಲಾದ ಪ್ರತಿನಿಧಿಗಳ ಬಹುಮಾನಾರ್ಥವಾಗಿ ಒಂದು ಔತಣವನ್ನು ಕೊಟ್ಟು ಇವರನ್ನು ಸತ್ಕರಿಸಿದರು. ಹಿಂದೂಸ್ಥಾನದ ಸ್ಟೇಟ ಸೆಕ್ರೆಟರಿಗಳೂ ಆಂಗ್ಲೇಯ ಹಲವು ಇತರ ಮಹನೀಯರೂ ಸಹ ಆಮಂತ್ರಿಸಲ್ಪಟ್ಟಿದ್ದರು. ಸಿಂಹರವರು ತಮ್ಮ ಭಾಷಣದಲ್ಲಿ ಹಿಂದೂಸ್ಥಾನದ ಆಕಾಂಕ್ಷೆಗಳನ್ನು ಮರೆಮಾಚದೆ ಈ ಸಂದರ್ಭದಲ್ಲಿ ಬ್ರಿಟಿಶ ಜನರಿಗೆ ಒತ್ತಿ ಹೇಳಿರುವರು. ಹಿಂದೂಸ್ಥಾನದ ಆಯವ್ಯಯಗಳೇ ಮೊದಲಾದ ಸಾಂಪತ್ತಿಕ ವಿಷಯಗಳಲ್ಲಿ ಹಿಂದೂಸ್ಥಾನಕ್ಕೆ ತನ್ನ ವಿದ್ಯಮಾನಗಳಿಗನುಸಾರವಾಗಿ ಅವುಗಳನ್ನು ವ್ಯವಸ್ಥೆಗೊಳಿಸುವ ಸ್ವತಂತ್ರವನ್ನು ಕೊಡುವುದು ಆಗತ್ಯವೆಂತ ಸೂಚಿಸಿರುತ್ತಾರೆ. ಮತ್ತು ಸಾಮ್ರಾಜ್ಯದ ಇತರ ಪ್ರಾಂತ್ಯದವರು ಅವರ ಸ್ವಂತ ಪ್ರಯೋಜನಾರ್ಥವಾಗಿ ಹಿಂದೂಸ್ಥಾನವನ್ನು ಪ್ರಯೋಗಿಸುವ ಉದ್ದೇಶದಿಂದಲ್ಲ ಹಿಂದೂಸ್ಥಾನದ ಏಳಿಗೆಯ ಉದ್ದೇಶದಿಂದಲೆ ಈ ದೇಶದ ವ್ಯಾಪಾರ ಕೈಗಾರಿಕೆಗಳನ್ನು ಅಭಿವೃದ್ಧಿಸಬೇಕೆಂತ ಮಿ॥ ಸಿಂಹರವರು ಬಹಳ ಗಂಭೀರವಾದ ವಾಕ್ಯಗಳಿಂದ ಹೇಳಿರುತ್ತಾರೆ. ಸಿಂಹರವರ ಈ ಸೂಚನೆಗಳನ್ನು ಅನುಮೋದಿಸಿ ಸ್ಟೇಟ್ ಸೆಕ್ರೆಟರಿಗಳವರೂ ಮಾತಾಡಿರುವರು.

ಫ್ರೆಂಚರ ಜನರಲ್ ಜೊಫ್ರೆ ಮತ್ತು ವಿವಿಯಾನಿಯವರು ಫ್ರೆಂಚ ದೇಶದ ರಾಯಭಾರಿಗಳಾಗಿ ಅಮೇರಿಕಕ್ಕೆ ಬಂದು ತಲ್ಪಿರುವರು. ಇಟೆಲಿ ದೇಶದಿಂದಲೂ ರಾಯಭಾರಿಗಳು ಅಮೇರಿಕಕ್ಕೆ ಹೊರಡುವರು.

ಹಡಗಗಳು ದೊರಕಿದೊಡನೆಯೆ ಅಮೇರಿಕದಿಂದ ಮಿತ್ರರ ಸಹಾಯಾರ್ಥವಾಗಿ ಒಂದು ಫೌಜು ಕಳುಹಿಸಲ್ಪಡಲಾಗುವದೆಂತ ಗೊತ್ತಾಗಿದೆ.

ಫ್ರಾನ್ಸ ಮತ್ತು ಇಟೆಲಿ ದೇಶಗಳಿಗೆ ೨೦ ಮಿಲಿಯ ಪವನುಗಳ ಸಾಲವನ್ನು ಕೊಡಲು ಅಮೇರಿಕದವರು ನಿಶ್ಚಯಿಸಿರುತ್ತಾರೆ.

ತಂತಿಟಪ್ಪಾಲು ಇತ್ಯಾದಿಗಳ ಮೂಲಕ ವೈರಿಗಳಿಗೆ ವರ್ತಮಾನವು ಗೊತ್ತಾಗದಂತೆ ಸುದ್ದಿಗಳ ಪರಿಶೋಧನಾಗಾರರನ್ನು ಅಮೇರಿಕಾ ಸರಕಾರದವರು ನೇಮಿಸಿರುವರು.

ಅಮೇರಿಕಕ್ಕೆ ಹೋಗಿದ್ದ ಬ್ರಿಟಿಶ ರಾಯಭಾರಿಗಳ/ಮತ್ತು ಅಮೇರಿಕದ ಅಧಿಕಾರಿಗಳ ಆಲೋಚನಾ ಸಭೆಯು ಕೂಡಿ ವೈರಿಗಳ ಸಬ್ ಮೆರೈನುಗಳ ಕಾಟವನ್ನು ಎದುರಾಡಲಿಕ್ಕೆ ಹಡಗಗಳನ್ನು ಕಟ್ಟಿಸುವಂಥಾ ಈಗಿನ ಇಪ್ಪಾಡಿನ ಪ್ಲಾನ್ನು ಮತ್ತಷ್ಟು ತೀವ್ರವಾಗಿ ನಡಿಸಬೇಕೆಂತ ನಿರ್ಣಯಿಸಿರುತ್ತಾರೆ.

ಬ್ರಿಟಿಶ ಸರಕಾರದ ಆಯವ್ಯಯಗಳ ಪಟ್ಟಿಯು ಪಾರ್ಲಿಮೆಂಟ ಸಭೆಯು ಮುಂದೆ ಇಡಲ್ಪಡಲಾಗಿರುವದು. ಬ್ರಿಟಿಶರು ಯುದ್ಧದ ಆರಂಭದಿಂದ ಮಿತ್ರರಿಗೆ ೮೨೮ ಮಿಲಿಯ ಮತ್ತು ಕೆನಡಾ ದೇಶದವರಿಗೆ ೧೪೨ ಮಿಲಿಯ ಪವನುಗಳನ್ನು ಸಾಲವಾಗಿ ಕೊಟ್ಟಿರುವರು. ಕಳೆದ ವರುಷದಲ್ಲಿಯೇ ಮಿತ್ರರಿಗೆ ೫೪೦ ಮಿಲಿಯ ಮತ್ತು ಕೆನಡಾ ದೇಶದವರಿಗೆ ೫೪ ಮಿಲಿಯಗಳನ್ನು ಸಾಲವಾಗಿ ಕೊಟ್ಟಿರುತ್ತಾರೆ. ಹೊಗೆಸೊಪ್ಪಿನ ಮೇಲಿನ ಸುಂಕವನ್ನು ರಾತ್ಲಿಗೆ ಒಂದು ಶಿಲ್ಲಿಂಗ ೧೦ ಪೆನ್ನುಗಳ ಪ್ರಕಾರ ಹೆಚ್ಚಿಸುವರು. ಈಲ್ಲಿ ವರುಷದಲ್ಲಿ ಮಿತ್ರರಿಗೆ ಸಾಲವಾಗಿ ಕೊಡಲು [illegible] ಮಿಲಿಯ ಪವನುಗಳನ್ನು ನಿಶ್ಚಯಿಸಿರುವರು. ಆದರೆ ಅಮೇರಿಕದ [illegible] [illegible]

ಅಂದಾಜು ಮಾಡಿರುತ್ತಾರೆ. ಚಾಲ್ತಿ ವರುಷದ ಖರ್ಚು ೨,೨೯೦,೩೮೧೦೦೦ ಪವನುಗಳು ಎಂತ ಪಟ್ಟಿಯಲ್ಲಿ ಸೂಚಿಸಿರುವರು.

ಕಲ್ಲಿದ್ದಲುಗಳ ಗಣಿಗಳ ಅಮೇರಿಕದ ಇಂಜನೀಯರ್‌ನೊಬ್ಬನು ಆಂಗ್ಲಾಳಕ್ಕೆ ಬಂದಿರುವನು. ಇವನು ಒಂದು ನವೀನ ಶೋಧವನ್ನು ಮಾಡಿ ಇದರ ಉಪಯೋಗವನ್ನು ಪ್ರಥಮದಲ್ಲಿ ಬ್ರಿಟಿಶರಿಂದ ಸಾಧಿಸಬೇಕೆಂದಿದ್ದಾನೆ. ವಾಯುಮಂಡಲದಲ್ಲಿರುವ ನ್ಯಾಟ್ರೋಜನ ಎಂಬ ಸಾರಜನಕ ವಾಯುವನ್ನು ಇದ್ದಲು, ಎಣ್ಣೆಗಳ ಬದಲಿಗೆ ಬಹಳ ಅಗ್ಗವಾಗಿ ಉಪಯೋಗಿಸಬಹುದೆಂತ ಈತನ ಶೋಧವಿದೆ. ಲೋಹಗಳನ್ನು ಕರಗಿಸುವದು, ಸ್ಟೀಮರುಗಳನ್ನು ಇದ್ದಲು ಇಲ್ಲದೆ ನಡಿಸುವದು, ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವದು ಮೊದಲಾದ ಅನೇಕ ಕೆಲಸಗಳಲ್ಲಿ ನ್ಯಾಟ್ರೋಜನ್ ವಾಯುವನ್ನು ಉಪಯೋಗಿಸಬಹುದೆಂದು ಈತನ ಶೋಧನೆಯಿಂದ ಕಂಡುಬರುತ್ತದೆ.

ಮಲೆಯಾ ಟ್ರ್ಯಬೂನ ಎಂಬ ಒಂದು ಪತ್ರಿಕೆಯಲ್ಲಿ ಜರ್ಮನರು ಸ್ಥಾಪಿಸಿದ ನೂತನವಾದ ಒಂದು ಕೈಗಾರಿಕೆಯ ವೃತ್ತಾಂತವು ಬಂದಿರುತ್ತದೆ. ಕೆಲವು ಕಾಲದಿಂದ ಜರ್ಮನರು ತಮ್ಮ ಶವಗಳನ್ನು ಹುಗಿಯುವ ಬದಲಿಗೆ ಅವುಗಳನ್ನು ಸುಡುತ್ತಿರುವರು. ಶವಗಳ ದಹನದಿಂದಲೆ ಒಂದು ಕೈಗಾರಿಕೆಯು ಏರ್ಪಡಿಸಲ್ಪಟ್ಟಿರುವದು. ಶವಗಳಿಂದ ಎಣ್ಣೆ ಅಥವಾ ಚರ್ಬಿಯನ್ನು ಹಿಂಡಿತೆಗೆದು ನಾನಾ ಉಳಿಯುವಂಥಾ ಮಾಂಸ ಇತ್ಯಾದಿಗಳ ಹಿಂಡಿಯನ್ನು ಹಂದಿಗಳ ಆಹಾರವಾಗಿ ಉಪಯೋಗಿಸುವರು. ಗೊಬ್ಬರವನ್ನು ತಯ್ಯಾರುಮಾಡುವ ಕಾರ್ಖಾನೆಯು ಸಹ [illegible] ಎಂಬಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಶವಗಳ ದೊಡ್ಡ ದೊಡ್ಡ ಮೂಟೆಗಳು ಈ ಕಾರ್ಖಾನೆಗೆ ಬಂದು ತಲ್ಪುತ್ತವೆ. ಕೋಲುಗಳಿಂದ ಈ ಶವದ ರಾಶಿಯನ್ನು ದೊಡ್ಡ [illegible]ಯಗಳಲ್ಲಿ ಹಾಕುವರು. ಮತ್ತು ಇವುಗಳಲ್ಲಿ ಅವನ್ನು ಬೇಯಿಸಿ ಕಳಿವಿದ ಮೇಲೆ ಬಲ್ಲದ ಎಣ್ಣೆಯನ್ನು ಸಣ್ಣ ಪೀಪಗಳಲ್ಲಿ ತುಂಬಿಸಿ ಆ ದೇಶದ ಎಲ್ಲಾ ಪ್ರಾಂತ್ಯಗಳಿಗೂ ಕಳುಹಿಸಿ ಕೊಡುತ್ತಿದ್ದಾರೆ.

ಲಂಡನಿನಲ್ಲಿ ಸೇರಿದ ಇಂಪೀರಿಯಲ್ ಕಾನ್ಫರೆನ್ಸಿನ ವೃತ್ತಾಂತದಿಂದ ವಸಾಹತುಗಳ ಸೆಕ್ರೆಟರಿಗಳವರು ಕೆಲವು ವಿಷಯಗಳನ್ನು ಪ್ರಕಟಿಸಿರುತ್ತಾರೆ. ಕಾನ್ಫರೆನ್ಸಿನಲ್ಲಿ ನಡೆದ ಕೆಲವು ಸಂಗತಿಗಳು ಯುದ್ಧವು ಮುಗಿದ ನಂತರವೆ ಗೊತ್ತಾಗತಕ್ಕವು ಹೊರತು ಅದರ ಮೊದಲು ಅವು ಗುಪ್ತವಾಗಿರುವಂಥವುಗಳೆಂತ ಈ ಪ್ರಕಟನೆಯಿಂದ ತಿಳಿದುಬರುತ್ತದೆ. ಯುದ್ಧ ಸಾಮಾಗ್ರಿಗಳ ಸಂಗ್ರಹ ಮತ್ತು ಅವುಗಳನ್ನು ಶೇಖರಿಸಿಡುವ ಕಟ್ಟಡಗಳ ವಿಷಯ ಸಾಮ್ರಾಜ್ಯದ ಎಲ್ಲಾ ಭಾಗಗಳ ಸೇನಾ ಮಹಿತಿದಾರರ ಒಂದು ಕಮಿಟಿಯನ್ನು ನಿರ್ಮಾಣಿಸಬೇಕು, ಸಾಮ್ರಾಜ್ಯದ ಪ್ರಜೆಗಳಾಗಿ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ತಕ್ಕ ಸೌಕರ್ಯಗಳನ್ನು ನಿಷ್ಕರ್ಷಿಸುವ ವಿಷಯ ಸಾಮ್ರಾಜ್ಯದ ಆಯಾ ರಾಷ್ಟ್ರಗಳೊಳಗೆ ಇರಬೇಕಾದ ಪರಸ್ಪರ ಸಂಬಂಧ, ವ್ಯಾಪಾರ, ವಲಸೆ ಸೌಕರ್ಯಗಳು, ಇತ್ಯಾದಿಗಳನ್ನೂ ಕುರಿತು ಈ ಪರಿಷತ್ತಿನಲ್ಲಿ ನಿರ್ಣಯಗಳಾಗಿವೆ.

ಆಹಾರ ಜಿನಸುಗಳಾದ ಎಲ್ಲಾ ದವಸಧಾನ್ಯಗಳನ್ನು ಸಾಧ್ಯವಿರುವ ಮಿತದಿಂದ ಉಪಯೋಗಿಸಬೇಕೆಂದು ಬ್ರಿಟಿಶ ಚಕ್ರವರ್ತಿಗಳು ಬ್ರಿಟಿಶ ದ್ವೀಪಗಳ ತಮ್ಮ ಪ್ರಜಾವರ್ಗಗಳೆಲ್ಲರಿಗೂ ಒಂದು ನಿರೂಪಣೆಯನ್ನು ಕೊಟ್ಟಿರುತ್ತಾರೆ. ಕಳದ ಫೆಬ್ರವರಿ ತಿಂಗಳಿನಿಂದಲೆ ಚಕ್ರವರ್ತಿಗಳು ತಮ್ಮ ಗೃಹಕೃತ್ಯದಲ್ಲಿಯೂ ಸಹ ದವಸಧಾನ್ಯಗಳನ್ನು ಮಿತಿಯಿಟ್ಟು ಉಪಯೋಗಿಸುತ್ತಿರುವದರಿಂದ ಚಕ್ರವರ್ತಿಗಳ ಈ ಉದಾಹರಣೆಯನ್ನು ಜನರು ಅಂಗೀಕರಿಸಬೇಕೆಂದು ಅಪೇಕ್ಷೆಯಾಗಿದೆ.

ಉತ್ತರ ಹಿಂದೂಸ್ಥಾನ.

ಪಶ್ಚಿಮ ಹಿಂದೂಸ್ಥಾನದ ಟರ್ಫ್‌ಕ್ಲಬ್ ಲೊಟರಿ ಎಂಬ ಸೊಸೈಟಿಯ ಸ್ಥಾಪಿಸೋದಾಗ್ಗ ೧೫ ದಿವಸಗಳಲ್ಲಿ ೧೦ ಲಕ್ಷ ರೂಪಾಯಿಗಳ ಮೌಲ್ಯದ ಟಿಕೇಟುಗಳು ಮಾರಲ್ಪಟ್ಟಿರುವವು. ಇದೇ ರೀತಿ ಟಿಕೇಟುಗಳು ಮಾರಲ್ಪಟ್ಟರೆ ವರ್ಷದಲ್ಲಿ ಈ ಸೊಸೈಟಿಯಿಂದ ಅರ್ಧ ಕೋಟಿ ರೂಪಾಯಿಗಳಿಗೆ ಕಮಿಮಾಡದ ಮೊಬಲಗು ಕೂಡಿಬರಬಹುದೆಂಬುದಾಗಿ ಅಂದಾಜು ಮಾಡಿರುತ್ತಾರೆ.

ತಿರುಪತಿ ಎಜ್ಯುಕೇಶನ್ ಸೊಸೈಟಿಯವರು ೧೦ ಲಕ್ಷ ರೂಪಾಯಿಗಳನ್ನು ಯುದ್ಧ ಸಾಲವಾಗಿ ಕೊಡುವೆನೆ ನಿಶ್ಚಯಿಸಿರುವರು.

ಮುಂಬಯಿಯಲ್ಲಿ ವಸ್ತ್ರಕಾರ್ಖಾನೆಗಳಲ್ಲಿರುವ ಹತ್ತಿಯ ಮೂಟೆಗಳಿಗೆ ಇತ್ತಲಾಗೆ ಪದೇ ಪದೇ ಬೆಂಕಿ ಬೀಳಲು ಪ್ರಾರಂಭವಾಗಿದೆ. ಕೊಲಾಬದಲ್ಲಿರುವ ಒಂದು ಕೋಠಡಿಗೆ ಬೆಂಕಿಬಿದ್ದು ಸುಮಾರು ೬೦೦೦ ಹತ್ತಿಮೂಟೆಗಳು ನಾಶವಾಗಿ ಹೋದವು. ಫಾಯರ್ ಇನ್ಸುರೆನ್ಸ ಕಂಪೆನಿಯವರು ಹೀಗೆ ಬೆಂಕಿಗಳ ಅಪಾಯಗಳಿಗೆ ಯಾರೂ ಕಾರಣರಾಗಿರಬಹುದೆಂದು ಊಹಿಸಿಕೊಂಡು ಅಪರಾಧಿಗಳನ್ನು ಹಿಡಿದುಕೊಟ್ಟವರಿಗೆ ರೂ. ೧೫೦೦೦ ಇನಾಮು ಕೊಡುವೆವೆಂತ ಪ್ರಕಟಿಸಿರುತ್ತಾರೆ.

ಮೆಸೊಪೊಟೊಮಿಯದ ಯುದ್ಧರಂಗದಲ್ಲಿ ಮೈಸೂರಾಯ ಪ್ರಭುಗಳ ಪುತ್ರರು ಘಾಯಪಡೆದು ಮಡಿದುಹೋದರೆಂಬುವ ವರ್ತಮಾನವನ್ನು ತಿಳಿಸಲು ವಿಷಾದಪಡುತ್ತೇವೆ.

ವಿಲಾಯಿತಿಗೆ ಸಾಮ್ರಾಜ್ಯದ ಯುದ್ಧ ಪರಿಷತ್ತಿನ ಪ್ರತಿನಿಧಿಗಳಾಗಿ ಹೋಗಿರುವ ಸರ್ ಸತ್ಯೇಂದ್ರ ಪ್ರಸನ್ನ ಸಿಂಹರವರು ಜೂನ ತಿಂಗಳ ಪ್ರಾರಂಭದಲ್ಲಿಯೇ ಕಲ್ಕತ್ತೆಗೆ ಬಂದು ತಲ್ಪುವರೆಂಬ ತಂತಿ ವಾರ್ತೆ ಕಲ್ಕತ್ತೆಗೆ ಬಂದಿದೆ.

ಸಂತಾಳ ಪರ್ಗಣಗಳಲ್ಲಿ ಅಸ್ತಿಗಳಿಯುವ ಹತಂಪುರದ ರಾಜರವರು ಯುದ್ಧರಂಗಕ್ಕೆ ಕೂಲಿಗಳಾಗಿ ಹೋಗುವ ತನ್ನ ಸಂತಾಳ ಜಾತಿಯ ಪಕ್ಕಲುಗಳಿಗೆ ಗೇಣಿ ಮಾಫಿಯ ರಿಯಾಯಿತಿಯನ್ನು ಕೊಡುತ್ತಿರುವದರಿಂದ ಹಲವು ಜನ ಕೂಲಿಯವರನ್ನು ಆ ಪ್ರಾಂತ್ಯಗಳಲ್ಲಿ ಸಂಗ್ರಹಿಸಲು ಸಾಧ್ಯವಾಯಿತೆಂಬುದಾಗಿ ತಿಳಿಯುತ್ತೇವೆ.

ಬರುವ ದಸಂಬರ ತಿಂಗಳಲ್ಲಿ ಕಲ್ಕತ್ತೆಯಲ್ಲಿ ಕೂಡುವ ರಾಷ್ಟ್ರೀಯ ಸಭೆಯ [illegible] ಪ್ರಥಮ ಸಭೆಯು ಇದೇ ಬರುವ ಜೂನ ತಿಂಗಳ ತಾ. ೧೫ರಲ್ಲಿ ಕೂಡುವದು.

ಚಿಟಿಗೊಂಗದಲ್ಲಿ ಮಾಜಿ ಡಿಪ್ಯುಟಿ ಮೇಜಸ್ಟ್ರೇಟರಾಗಿರುವ ರಮೇಶ ಚಂದ್ರ ದಾಸ ಎಂಬವರ ಮೇಲೆ ಸುಳ್ಳು ಸಾಕ್ಷಿ ಹೇಳಿದ್ದಕ್ಕೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಲು ಅಲ್ಲಿಯ ಡಿಸ್ಟ್ರಿಕ್ಟ ಜಡ್ಜರವರು ಸಂಕ್ಷನ್ ಕೊಟ್ಟಿರುತ್ತಾರೆ. ವಿದ್ಯಾಪುರದ ಡಾಕ್ಟರ ಆರ್. ಕೆ. ಗುಪ್ತರೆಂಬ ಈ ಡಿಪ್ಯುಟಿ ಮೇಜಿಸ್ಟ್ರೇಟರ ಸಹೋದರರು ಸತ್ತ ನಂತರ ಸರ್ಟಿಫಿಕೇಟನ್ನು ಪಡಿಯಲು ಒಂದು ವಿಲ್‌ನಾಮೆಯನು ದಾಖಲುಮಾಡಿದರು. ಈ ವಿಲ್‌ನಾಮೆಯು ಕೃತಕದ್ದು ಎಂತ ಜಡ್ಜರವರು ಅಭಿಪ್ರಾಯಪಟ್ಟು ಮೇಲೆ ಕಾಣಿಸಿದ ರೀತಿ ಸಂಕ್ಷನ್ ಕೊಟ್ಟಿರುತ್ತಾರೆ.

ನಾಲ್ಕು ಜನರನ್ನು ಗುಂಡು ಹೊಡೆದು ಆಭರಣಗಳನ್ನು ಬಲಾತ್ಕಾರದಿಂದ ಕೊಂಡುಹೋದ ದರೋಡೆಯ ವೃತ್ತಾಂತವು ಕಲ್ಕತ್ತೆಯಿಂದ ಬಂದಿರುವದು. ಕಲ್ಕತ್ತೆಯ ಆರ್ಮೇನಿಯನ್ ರಸ್ತೆಯಲ್ಲಿ ಮೋಹನಲಾಲ್ ಜೊಹಿಬಾಯಿ ಎಂಬ ಆಭರಣಗಳ ವ್ಯಾಪಾರಸ್ಥನ ಅಂಗಡಿಯಲ್ಲಿ ಆ ವ್ಯಾಪಾರಿಯ ಇಬ್ಬರು ಮಗಂದಿರನ್ನೂ ಒಬ್ಬ ಗುಮಾಸ್ತನನ್ನೂ ಇನ್ನೊಬ್ಬ ನೌಕರನನ್ನೂ ದರೋಡೆಯವರು ಗುಂಡುಹೊಡೆದಿರುವರು. ರಾತ್ರಿ ಸುಮಾರು [illegible] ಆಭರಣಗಳ ಅಂಗಡಿಯ ಗಿರಾಕಿಗಳಾದ ಇಬ್ಬರು ಸ್ತ್ರೀಯರು ಕೆಲವು ಆಭರಣಗಳ ವಿಷಯ ಮಾತಾಡಲಿಕ್ಕೆ ಆ ಅಂಗಡಿಗೆ ಹೋಗಿದ್ದರು. [illegible]

ಹೇಳಿದರು. ಅಂಗಡಿಗಾರನ ಮಗಂದಿಯರಿಬ್ಬರೂ ಆ ಇಬ್ಬರು ಸ್ತ್ರೀಯರು ಮತ್ತು ಈ ಯುವಕರೊಡನೆ ಮಾತಾಡುತ್ತಿದ್ದರು. ಗುಮಾಸ್ತನು ಲೆಕ್ಕಪತ್ರಗಳನ್ನು ಬರಿಯುತ್ತಿದ್ದನು. ನೌಕರನು ಏನೋ ಸ್ವಲ್ಪ ರಿಪೇರಿ ಕೆಲಸವನ್ನು ಮಾಡುತ್ತಿದ್ದನು. ಇಷ್ಟರಲ್ಲಿ ದೊಡ್ಡ ದೊಡ್ಡ ಆಭರಣಗಳ ಪೆಟ್ಟಿಗೆಗಳನ್ನು ತೆಗೆದು ಆ ಯುವಕರಿಗೆ ತೋರಿಸುತ್ತಿರುವಾಗ ಥಕ್ಕನೆ ಇನ್ನೂ ಮೂರು ಜನ ಯುವಕರು ಬಂದು ಅಂಗಡಿಯನ್ನು ಪ್ರವೇಶಿಸಿದರು. ತಮ್ಮ ಕೈಯಲ್ಲಿದ್ದ ರಿವಾಲ್ವರಿನಿಂದ ಗುಂಡು ಹಾರಿಸಿದ್ದನ್ನು ಕೇಳಿದೊಡನೆಯೇ ಆರು ಜನರೂ ಅಲ್ಲಿರುವ ಆಭರಣಗಳನ್ನು ಒಟ್ಟು ಕೂಡಿಸಲು ಪ್ರಾರಂಭಿಸಿದರು. ಈ ಎಲ್ಲಾ ಗಲಭೆಯನ್ನು ನೋಡಿ ಆ ಅಂಗಡಿಗಾರನ ಮಗಂದಿಯರಲ್ಲೊಬ್ಬನು ಟೆಲಫೋನು ಮೂಲಕ ಪೋಲೀಸರನ್ನು ಕರೆಕಳುಹಿಸಲು ಟೆಲಫೋನು ಪೆಟ್ಟಿಗೆಗೆ ಕೈಹಾಕಿದ್ದನ್ನು ಕಂಡು ಆ ಆರು ಜನರಲ್ಲೊಬ್ಬನು ಆತನ ಎದೆಗೆ ಗುರಿಯಿಟ್ಟು ಗುಂಡನ್ನು ಹಾರಿಸಿದನು. ತತಕ್ಷಣವೇ ಆತನು ಮೃತಪಟ್ಟನು. ಸಹೋದರನ ಸಹಾಯಕ್ಕೆ ಓಡಿಬಂದಂಥಾ ವ್ಯಾಪಾರಸ್ಥನ ಇನ್ನೊಬ್ಬ ಮಗನನ್ನು ಸಹ ದರೋಡೆಯವರು ಕೊಂದುಬಿಟ್ಟರು. ಗುಮಾಸ್ತನನ್ನು ತಿವಿದುಹಾಕಿದರು. ನೌಕರನ ಕಾಲುಗಂಟುಗಳಿಗೆ ಗುಂಡನ್ನು ಹೊಡೆದದರಿಂದ ಆತನೂ ಒಂದು ಕಡೆಯಲ್ಲಿ ಬಿದ್ದಿದ್ದನು. ದರೋಡೆಯವರು ಅಲ್ಲಿರುವ ಆಭರಣಗಳನ್ನೆಲ್ಲಾ ಕೂಡಿಸಿಕೊಂಡು ಪೋಲೀಸಿನವರು ಅಲ್ಲಿಗೆ ಬರುವಷ್ಟರೊಳಗೆ ತಲೆತಪ್ಪಿಸಿ ಹೋಗಿರುತ್ತಾರೆ. ಕಳವಾಗಿ ಹೋದ ಆಭರಣಗಳ ಮೌಲ್ಯವು ಸುಮಾರು ರೂ. ೧೫,೦೦೦ ಆಗಬಹುದೆಂದು ಅಂದಾಜು ಮಾಡುತ್ತಾರೆ. ಅಂಗಡಿಗೆ ಬಂದ ಇಬ್ಬರು ಸ್ತ್ರೀಯರೂ ಇಷ್ಟೆಲ್ಲ ನಡೆದದನ್ನೂ ಗುಂಡುಗಳ ಶಬ್ದಗಳನ್ನು ಕೇಳಿದೊಡನೆ ಮೂಲೆ ಹಿಡಿದು ಕೂತಿದ್ದರು. ದರೋಡೆಯವರು ಹೊರಬಂದ ಮೇಲೆ ಸುರಕ್ಷಿತವಾಗಿ ಹೊರಟುಹೋದರು. ಈ ಇಬ್ಬರನ್ನೂ ಕರೆತರಿಸಿ ಇವರ ಹೇಳಿಕೆಯನ್ನು ಪಡಕೊಂಡು ಪೋಲೀಸಿನವರು ತನಿಖೆಯನ್ನು ಮಾಡುತ್ತಿರುವರು.

ಇದೇ ರಾತ್ರಿ ಇನ್ನೊಂದು ಕೊಲೆಯು ನಡೆಯಿತು. ಒಬ್ಬ ಬಂಗಾಳಿ ಯುವಕನ ಶವವನ್ನು ನಿಟಿಪ್ಪೂರ್ ವಿಭಾಗದ ಪಟಾದದಲ್ಲಿ ತಂದು ಹಾಕಿದ್ದಾರೆ. ಈ ಕೊಲೆಯೂ ಮೇಲಿನ ದರೋಡೆಗೆ ಸಂಬಂಧಪಟ್ಟದ್ದೆಂತ ಊಹಿಸುತ್ತಾರೆ.

ಈ ತಿಂಗಳ ತಾ. ೮ರ ವರೆಗೆ ಯುದ್ಧಸಾಲದ ಆರ್ಜಿಗಳ ಜಮ್ಮಾ ಮೊಬಲಗು ರೂ. ೧೭,೯೩,೭೮,೧೨೦ ಆಗಿರುತ್ತದೆ. ಮುಂಬಯಿ ೬,೮೭,೯೭,೬೦೦; ಬಂಗಾಳ ೫,೬೫,೭೫ ೫೦೦, ಪಂಜಾಬು ೧,೩೯ ೨೭,೧೨೦ ಯುನೈಟೆಡ್ ಪ್ರಾವಿನ್ಸ್‌ಗಳು ೧,೩೨,೮೦,೬೦೦; ಮದ್ರಾಸ ೯೧,೭೭,೧೦೦; ಬರ್ಮಾ ೭೮,೩೧,೮೦೦; ಇತರ ಪ್ರಾಂತ್ಯಗಳಿಂದ ೫೧,೧೧,೯೦೦; ಮತ್ತು ಸಂಸ್ಥಾನಗಳು ೩೦,೮೯,೩೦೦; ಬಿಹಾರ ಮತ್ತು ಒರಿಸ್ಸಾ ೨೩,೧೫,೨೦೦; ಅಸ್ಸಾಮ ೩,೮೩,೭೦೦.

ಯುದ್ಧಸಾಲದ ಬಗ್ಗೆ ಸೋಡಾ ಸ್ಟೀಪ್ ಇತ್ಯಾದಿಗಳಿಗೆ ಗವರ್ನಮೆಂಟಿನವರು ತಮ್ಮ ಅನುಮತಿಯನ್ನು ಕೊಟ್ಟದ್ದು ಅನುಚಿತವೆಂಬುದಾಗಿ ಒಂದು ಮನವಿಯನ್ನು ಕಲ್ಕತ್ತೆಯ ಎಲ್ಲಾ ಪ್ರಾಟೆಸ್ಟಾಂಟ್ ಮಿಶನ್‌ನವರ ಸಭೆ ಕೂಡಿ ಇಂಡಿಯಾ ಸರಕಾರದವರಿಗೆ ಬರಕೊಳ್ಳಬೇಕೆಂಬುದಾಗಿ ನಿರ್ಣಯಿಸಿರುತ್ತಾರೆ. ಯುದ್ಧಕ್ಕೆ ಬೇಕಾದ ಸಾಲವನ್ನು ಕೊಡಬೇಕೆಂತ ಸರ್ವರನ್ನೂ ಈ ಸಭೆಯ ಮೂಲಕವೆ ವಿಜ್ಞಾಪಿಸಿಕೊಂಡಿರುವರು.

ದಕ್ಷಿಣ ಹಿಂದೂಸ್ಥಾನ.

ಶಿಕೋಟಿಲ ಮಠದ ಶ್ರೀಗಳವರು ದೇಶದ ಎಲ್ಲಾ ಕಡೆಗಳಲ್ಲಿರುವ ತಮ್ಮ ಮಠದ ಶಿಷ್ಯವರ್ಗದವರಿಗೆ ಯುದ್ಧ ಸಾಲಕ್ಕೆ ತಮ್ಮ ಯಥಾಶಕ್ತಿ ಹಣವನ್ನು ಕೊಡಬೇಕೆಂದು ಒಂದು ರಾಯಸ ಪತ್ರವನ್ನು ಹೊರಡಿಸಿರುತ್ತಾರೆ.

ಎರಡು ರೂಪಾಯಿಗಳ ಕರೆನ್ಸಿ ನೋಟುಗಳು ಕೊಲೊಂಬೊ ಪಟ್ಟಣಕ್ಕೆ ಬಂದು ತಲುಪಿ ಕಳೆದ ತಿಂಗಳ ತಾ. ೭ರಿಂದ ಚಲಾವಣೆಯಲ್ಲಿ ಹಾಕಲ್ಪಡಲಾಗಿವೆ ಎಂತ ಅಲ್ಲಿಯ ವರ್ತಮಾನ ಪತ್ರಗಳಲ್ಲಿ ಪ್ರಕಟವಾಗಿರುವದು.

ಗ್ರಾಮಾಭಿವೃದ್ಧಿಯ ಏರ್ಪಾಡುಗಳು ಮೈಸೂರು ಸಂಸ್ಥಾನದಲ್ಲಿ ಚನ್ನಾಗಿ ನಡಿಯುತ್ತಿವೆ. ೪೬,೪೫,೪೨ ಜನರು ವಾಸಮಾಗಿರುವ ೧೫,೦೦೯ ಗ್ರಾಮಗಳಲ್ಲಿ ಈ ಏರ್ಪಾಡು ಜಾರಿಯಲ್ಲಿರುವವು. ಹೊಸ ಮಾರ್ಗಗಳನ್ನು ಹಳ್ಳಿಗಳಲ್ಲಿ ಹಾಕಿಸುವದು, ಆರೋಗ್ಯಪಾಲನೆ ಇತ್ಯಾದಿ ಅಭಿವೃದ್ಧಿ ಸಾಧನೆಗಳನ್ನು ಕೈಕೊಳ್ಳಲು ಗ್ರಾಮಗಳಲ್ಲಿ ಕಮ್ಮಿಟಿಗಳು ಸ್ಥಾಪಿಸಲ್ಪಟ್ಟಿವೆ. ಈ ಕಮ್ಮಿಟಿಗೆ ಬೇಕಾದ ಹಣವು ಗ್ರಾಮಸ್ಥರುಗಳಿಂದಲೂ ಸರಕಾರದಿಂದಲೂ ಕೊಡಲ್ಪಡಲಾಗುವದು. ಮೈಸೂರು ಜಿಲ್ಲೆಯಲ್ಲಿ ಜನರೇ ರೂ. ೬೫,೫೬೪ಗಳ ಖರ್ಚಿನ ಕೆಲಸಗಳನ್ನು ನಡಿಸಿರುತ್ತಾರೆ. ಸುಮಾರು ೮೩೧ ಮೈಲುಗಳ ದೂರದ ಮಾರ್ಗವು ಮೈಸೂರು ಜಿಲ್ಲೆಯಲ್ಲಿಯೆ ಈ ಕಮ್ಮಿಟಿಯವರಿಂದ ಹಾಕಿಸಲ್ಪಡಲಾಗಿರುವದು. ಸರಕಾರದವರು ಗ್ರಾಮಾಭಿವೃದ್ಧಿಗಳ ಬಗ್ಗೆ ೧೦೬,೫೦೦ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟಿರುವರು.

ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ೨೭-೧೦-೧೯೧೬ರಲ್ಲಿ ಪ್ರಚುರವಾದ "ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು" ಎಂಬ ಉತ್ತಮ ಪ್ರಬಂಧ ಬಹುಮಾನದ ಪ್ರಕಟನೆಯಂತೆ ಬಹುಮಾನಕ್ಕಾಗಿ ಬಂದಿದ್ದ ಲೇಖನಗಳಲ್ಲಿ ಉತ್ಕೃಷ್ಟವಾದ ಲೇಖನವನ್ನು ಬರೆದ ಈಗ ಅಲಹಾಬಾದಿನಲ್ಲಿ ವಾಸವಾಗಿರುವ ಮಿ॥ ರಾ॥ ನರಹರಯ್ಯ ಬಿ. ಎ. ಎಲ್. ಎಲ್. ಬಿ.ಯವರಿಗೆ ೧೦೦ ರೂಪಾಯಿಗಳ ಬಹುಮಾನವನ್ನೂ ಎರಡನೆಯದಾದ ಲೇಖನವನ್ನೂ ಬರೆದ ಮಿ॥ ನಾರಾಯಣ ಶ್ರೀನಿವಾಸ ರಾಜಪುರೋಹಿತರವರಿಗೆ ೨೫ ರೂಪಾಯಿಗಳ ಬಹುಮಾನವನ್ನೂ ಕೊಡುವುದೆಂದು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯಿಂದ ನಿರ್ಣಯಿಸಲ್ಪಟ್ಟಿದೆ.

ಮದ್ರಾಸು ಸಂಸ್ಥಾನದಲ್ಲಿ ರೈತ್‌ವಾರಿ ಜಮೀನುಗಳ ರೈತರ ಕ್ಷೇಮಸಾಧನೆಯ ಬಗ್ಗೆಯೂ ರೈತ್‌ವಾರಿ ಜಮೀನುಗಳಲ್ಲಿ [illegible] ಕ್ರಮವನ್ನು ಕ್ರಮೇಣ ಬಲಮಾಡಿಕೊಳ್ಳುವರೆಯೂ ಪ್ರತ್ಯೇಕ ಒಂದು ಸಂಘವನ್ನು ಏರ್ಪಡಿಸಬೇಕೆಂದು ಹಲವರು ಅಪೇಕ್ಷಿಸಿರುವರು. ಇವರ ಈ ಅಪೇಕ್ಷೆ ಮೇರೆಗೆ ಇಂಥಾ ಒಂದು ಸಂಘವನ್ನು ಸ್ಥಾಪಿಸುವ ವಿಷಯವು ಈ ಸರ್ತಿ ಕೂಡಲೂರಿನಲ್ಲಿ ಕೂಡುವ ಮದ್ರಾಸು ಪ್ರಾಂತಿಕ ಸಭೆಯನಂತರ ಪರ್ಯಾಲೋಚನೆಪಡುವದು.

ಪುತ್ತೂರು:—ಇದೇ ತಿಂಗಳ ತಾ. ೧೫ರಲ್ಲಿ ಅರಿಯಾಪ್ಪು ಗ್ರಾಮದ ಪಟೇಲ ನಾಂತಪ್ಪ ಹೆಗ್ಗಡೆಯವರು ತನ್ನ ಪಕ್ಕಲು ಸದರಿ ಗ್ರಾಮದ ಕಂಚಿಗಾರ ರಾಮ ಎಂಬವನಲ್ಲಿಗೆ ಗೇಣಿ ವಸೂಲಿ ಬಗ್ಗೆ ಹೋದಾಗ್ಗೆ ಕೆಲವು ಮಾತುಗಳು ಉಂಟಾಗಿ ಕಂಚಿಗಾರ ರಾಮನು ಪಟೇಲರನ್ನು ಕೊಡಲಿಯಿಂದ ಮಂಡೆಗೆ ಹೊಡೆದುಬಿಟ್ಟನಂತೆ. ಪಟೇಲರನ್ನು ಆಸ್ಪತ್ರೆಗೆ ಒಯ್ದು [illegible] ಮರಣಕಾಲದ ಹೇಳಿಕೆ ಪಡದು, ದಾಕ್ತರು [illegible] ಮೃತಪಟ್ಟರು. ಅಪರಾಧಿಯನ್ನು ಕೃದುಮನಲ್ಲಿ [illegible] ರಿಮಾಂಡಿನಲ್ಲಿಟ್ಟಿರುವರು.

ತಿದ್ದುಪಡಿ.—ಮೇ ೪ ತಾರೀಕಿನ ಸಂಚಿಕೆಯಲ್ಲಿ [illegible] "ಹಿಂದೂಸ್ಥಾನ ಕಿಂಚ್" ಎಂಬ ಬದಲಿಗೆ [illegible] ಎಂತ ಮುದ್ರಣದಿಂದ ಓದಬೇಕು. [illegible]

[illegible]

ಅನುಕ್ರಮಣಿಕೆ.

ಅಗ್ರಲೇಖ:—	ಪಾನು.
ಮದ್ರಾಸ ಪ್ರಾಂತಿಕ ಪರಿಷತ್ತು	೪
ಸ್ಫುಟವಿಚಾರಗಳು:—	
೧ ಪಂಜಾಬ ಶಿಕ್ಷಣಪರಿಷತ್ತು—'ಈ ಚಿತ್ರವನ್ನು ನೋಡಿರಿ; ಆ ಚಿತ್ರವನ್ನು ನೋಡಿರಿ.'	,,
೨ ಅದರ ವಿವರಗಳು	,,
೩ ವಸಾಹತುವವರ ಸ್ತುತ್ಯ ಕೆಲಸ	೫
೪ ಯುದ್ಧಪರಿಷತ್ತಿನ ವರ್ತಮಾನಗಳು	,,
೫ ಹೊಸ ಕಾನಿಸ್ಟೇಬಲರು	,,
೬ ಈ ವರುಷದ ಅಧಿಕ ಮಾಸ	,,
೭ ಮದ್ರಾಸು ಸಂಸ್ಥಾನದ ಭೂಕಂದಾಯದ ವೃತ್ತಾಂತ	,,
ಸ್ಥಳಿಕ—ಮಂಗಳೂರು	,,
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೬
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದೂಸ್ಥಾನ	,,
೪ ದಕ್ಷಿಣ ಹಿಂದುಸ್ಥಾನ ವೃತ್ತಾಂತ	,,
೫ ಪಂಚಮರಿಗೆ ನಮ್ಮ ಕರ್ತವ್ಯ	೭
೬ ಲೇಖಗಳು—ಇಂಗ್ಲಿಷೂ ದೇಶಭಾಷೆಗಳೂ	,,
೭ "ಕೆನರಾ ಕ್ಷತ್ರಿಯ ಪರಸ್ಪರ ಸಹಾಯಕ ಸಂಘ"	,,

ಸ್ವದೇಶಾಭಿಮಾನಿ.

ಶಕ ೧೮೩೯ ವೈಶಾಖ ಬ. ೪ ಶುಕ್ರವಾರ.

ಮದ್ರಾಸ ಪ್ರಾಂತಿಕ ಪರಿಷತ್ತು.

ಕಡಲೂರಿನಲ್ಲಿ ಮೊನ್ನೆಯಿಂದ ಎಂದರೆ ಬುಧವಾರ ತಾ. ರಿಂದ ಮದ್ರಾಸು ಪ್ರಾಂತಿಕ ಪರಿಷತ್ತು ಪ್ರಾರಂಭವಾಗಿದೆ. ಇದು ಈ ಪರಿಷತ್ತಿನ ೨೩ನೆಯ ಅಧಿವೇಶನವು. ಸಭೆಯ ಅಧ್ಯಕ್ಷಸ್ಥಾನದಲ್ಲಿ ಮಿ. ವಿ. ಪಿ. ಮಾಧವರಾಯರು ಮೊದಲೆ ಆರಿಸಲ್ಪಟ್ಟಿದ್ದರು. ಅಧ್ಯಕ್ಷರ ಹಾಗು ಈ ಪ್ರಾಂತ್ಯದೊಳಗಿನ ಬೇರೆ ಬೇರೆ ಸನ್ಮಾನ್ಯ ಪ್ರಮುಖರ ಆಗಮನದಿಂದ ಕಡಲೂರ ಪಟ್ಟಣವು ತುಂಬಿಹೋಗಿದೆ. ಈ ಸಭೆಯ ಅಧಿವೇಶನದ ಪ್ರಥಮ ದಿವಸದಲ್ಲಿ ಸ್ವಾಗತ ಕಮಿಟಿಯ ಅಧ್ಯಕ್ಷರ ಮತ್ತು ಸಭಾಧ್ಯಕ್ಷರ ಭಾಷಣಗಳಾದವು. ಮಾರನೆಯ ದಿನ ಎಂದರೆ ನಿನ್ನೆ ವಿಷಯ ನಿರ್ಧಾಮಕ ಸಭೆ ಮತ್ತು ಠರಾವುಗಳ ನಿರ್ಣಯ. ಈ ಕಾರ್ಯಗಳು ನಡೆದಿವೆ. ಸ್ವಾ. ಕ. ಅಧ್ಯಕ್ಷರ ಭಾಷಣ ಹಾಗು ಸಭಾಧ್ಯಕ್ಷರಾದ ವಿ. ಪಿ. ಮಾಧವರಾಯರ ಭಾಷಣ ಇವೆರಡೂ ಸರ್ವಾಂಗ ಸುಂದರವಾಗಿದ್ದುವು. ಅವುಗಳ ಸಾರಾಂಶವನ್ನು ವಾಚಕರು ತಿಳಿದುಕೊಳ್ಳುವುದು ಯೋಗ್ಯವಾಗಿದೆ.

ಸ್ವಾಗತ ಸಭೆಯ ಅಧ್ಯಕ್ಷರಾದ ಮಿ. ವಿ. ಶ್ರೀನಿವಾಸಾಚಾರ್ಯರು ತಮ್ಮ ಸ್ವಾಗತದ ಭಾಷಣದಲ್ಲಿ ಈ ಕಳೆದ ಒಂದು ವರ್ಷದ ಮದ್ರಾಸ ಇಲಾಖೆಯ ಎಲ್ಲ ರಾಜಕೀಯ ಪರಿಸ್ಥಿತಿಯನ್ನು ನಿರೀಕ್ಷಿಸಿದರು. ಅಲ್ಲದೆ, ಹಿಂದುಸ್ಥಾನದ ರಾಜಕೀಯ ವಾತಾವರಣದಲ್ಲಿ ಉತ್ಪನ್ನವಾದ ಮಿ. ಕರ್ಟಿಸರ ಚಳವಳ ಪಬ್ಲಿಕ್ ಸರ್ವಿಸ್ ಕಮಿಷನಿನ ರಿಪೋರ್ಟು, ಪ್ರೆಸ್ ಎಕ್ಟು ಮೊದಲಾದ ಮಹತ್ವದ ಪ್ರಶ್ನೆಗಳ ಯೋಗ್ಯ ಪರಾಮರ್ಶವನ್ನು ತಕ್ಕೊಳ್ಳಲು ಅವರು ಮರೆತುಬಿಡಲಿಲ್ಲ. "ರೌಂಡ್ ಟೇಬಲ್" ಚಳವಳದ ಪ್ರಮುಖ ಪ್ರಚಾರಕರಾದ ಮಿ. ಕರ್ಟಿಸರು ಹಿಂದುಸ್ಥಾನದ ರಾಜ್ಯಕಾರಭಾರದಲ್ಲಿ ಇಂಗ್ಲಂಡಿನೊಟ್ಟಿಗೆನೆ ವಸಾಹತುಗಳಿಗೂ ಪ್ರವೇಶವಿರಬೇಕೆಂದು ಹೇಗೆ ಯತ್ನಿಸಿಕೊಂಡಿದ್ದರು, ಆದರೆ ಹಿಂದುಸ್ಥಾನದಲ್ಲಿ ಕೂಡಲೆ ಪ್ರಕಟವಾದ ತೀವ್ರ ಲೋಕಮತದ ಆಘಾತದಿಂದ ಅವರಿಗೆ ತಮ್ಮ "ಟೋಪಿ"ಯನ್ನು ಹೇಗೆ ತಿರುಗಿಸಬೇಕಾಗಿ ಬಂತು ಈ ಸಂಗತಿಗಳನ್ನು ಶ್ರೀನಿವಾಸಾಚಾರ್ಯರು ವಿಶದಪಡಿಸಿ ಹಿಂದುಸ್ಥಾನದ ಪಾಲಿಗೆ ಬರಿ ದೊರಗು ಸಾಮಾನಗಳನ್ನು ಪೂರೈಸುವ ಕೆಲಸವು ಬಾರದಂತೆ ಸಾಮ್ರಾಜ್ಯದ ಧೋರಣದ ಕಡೆಗೆ ನಾವು ಹೇಗೆ ಎಚ್ಚರಿಕ್ಕವರಾಗಿರಬೇಕೆಂಬುದನ್ನು ವಿವರಿಸಿದರು. ಪರದೇಶಿ ವಸ್ತ್ರಗಳ ಮೇಲೆ ಹೆಚ್ಚಿಸಿದ ಕರ, ಲಂಕಾಶಾಯರಿನವರ ಸ್ವಾರ್ಥ, ಮಿ. ಎಸ್ ಸ್ಟೆಫರ ಮಧ್ಯಸ್ಥತನದ ಉಪಾಯ ಈ ವಿಷಯಗಳನ್ನು ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯ ಸಮಾಲೋಚನೆಯಲ್ಲಿ ತಂದು ಮಿ. ಆಚಾರ್ಯರು "ಪ್ರೆಸ್ ಡೆಪ್ಯುಟೇಶನ್"ಗೆ ಲೊರ್ಡ ಚೆಮ್ಸಫೋರ್ಡ ಪ್ರಭುಗಳು ಕೊಟ್ಟ ಉತ್ತರದ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಗೊಳಿಸಿದರು. ಅನಂತರ ವಿದ್ಯಾವಿಷಯಕ ಪ್ರಶ್ನೆಗೆ ಬಂದು ಸ್ವಾಗತ ಕಮಿಟಿಯ ಅಧ್ಯಕ್ಷರು ವರಿಷ್ಠ ಕೌನ್ಸಿಲಿನಲ್ಲಿ ನಾಮ. ಶರ್ಮರು ಗೋಖಲೆಯವರ ಶಿಕ್ಷಣ ಮಸೂದೆಯ ರೀತಿಯಲ್ಲಿ ಉಚಿತ ಹಾಗು ಬಿಡ್ಡಾಯದ ಶಿಕ್ಷಣದ ವಿಷಯದಲ್ಲಿ ತಂದ ಠರಾವು ನಿರಾಕರಿಸಲ್ಪಟ್ಟಿತೆಂದು ಹೇಳಿ ನಮ್ಮ ದೇಶಬಂಧುಗಳಾದ, ಶಿಕ್ಷಣ ಮಂತ್ರಿಸ್ಥಾನದಲ್ಲಿರುವ ಮತ್ತು ವಿದ್ಯಾಪ್ರಿಯರಾದ ಶಂಕರನ್ ನಾಯರು ಗಳು ಈ ಮೇಲಿನ ಠರಾವು ಕೌನ್ಸಿಲಿನಲ್ಲಿ ಬಂದಾಗ ಅಧಿಕಾರಿಮಂಡಲದ ಧೋರಣವನ್ನು ಅತಿಕ್ರಮಿಸಲು ಅಸಮರ್ಥರಾದ ಬಗ್ಗೆ ವಿಷಾದಪಟ್ಟು ಮದ್ರಾಸು ಕೌನ್ಸಿಲಿನಲ್ಲಿ ನಡೆದ ಶಿಕ್ಷಣ ವಿಷಯದ ಮಿ. ಪಿ. ಎಸ್. ಕೃಷ್ಣರಾಯರ ಉಪಸೂಚನೆಯ ಕುರಿತು ಸಂತೋಷವನ್ನು ವ್ಯಕ್ತಗೊಳಿಸಿದರು. ಮದ್ರಾಸ ಕಾಯದೆ ಕೌನ್ಸಿಲಿನ ವಿಷಯದಲ್ಲಿ ಇವರು ಕೊಟ್ಟಿರುವ ಅಭಿಪ್ರಾಯವು ಮಹತ್ವದ್ದಿತ್ತು. ಲೋಕಪಕ್ಷದ ಸಭಾಸದರು ಅನಾವಶ್ಯಕವಾಗಿ ವಾದವಿವಾದಗಳನ್ನು ಬೆಳಿಸುವುದು ಯುಕ್ತವಲ್ಲೆಂದು ಯೋಗ್ಯವಾದ ಚರ್ಚಾಸ್ವಾತಂತ್ರ್ಯವನ್ನು ಕಡಿಮೆ ಮಾಡುವುದು ಪ್ರಶಸ್ತವಲ್ಲ. ಈ ರೀತಿಯಿಂದ ಮಿ. ಆಚಾರ್ಯರು ಮಹತ್ವದ ಅನೇಕ ವಿಷಯಗಳನ್ನು ಪರಾಂಬರಿಸಿ ಸ್ಥಾನಿಕ ಸ್ವರಾಜ್ಯ, ದಕ್ಷಿಣ ಆಫ್ರಿಕದ ಸೆಟ್ಲಮೆಂಟ್ ಮುಂತಾದ ಸ್ಥಾನಿಕ ವಿಚಾರಗಳನ್ನು ಉದ್ಘಾಟಿಸಿ ತಮ್ಮ ಸೂಕ್ತವಾದ ಭಾಷಣವನ್ನು ಮುಕ್ತಾಯಪಡಿಸಿದರು.

ಸಭಾಧ್ಯಕ್ಷರಾದ ಮಿ. ಮಾಧವರಾಯರು ಮಾಡಿದ ಭಾಷಣವಂತು ಸೋಪಪತ್ತಿಕವಾಗಿಯೂ ಶಾಂತಿಕವಾಗಿಯೂ ಇತ್ತು. ಇವರು ತಮ್ಮ ಭಾಷಣದಲ್ಲಿ ಪೋಷಿಸಿದ ತತ್ವಗಳು ಮುತ್ಸದ್ದಿಗಳಾದ ಅಧಿಕಾರಿಗಳು ನಿಜವಾಗಿ ಶಾಂತಮನಸ್ಸಿನಿಂದ ಮನನಮಾಡತಕ್ಕವುಗಳಾಗಿವೆ. ಅಧಿಕಾರಿಗಳ ಪೈಯಲ್ಲಿ ಇರತಕ್ಕ ದೋಷಗಳಾವವೆಂಬುವನ್ನು ಏನೂ ಅನುಭವವಿಲ್ಲದೆ ಹೇಳುವುದು ಬೇರೆ. ಸ್ವತಃ ಜವಾಬುದಾರಿಯ ಅಧಿಕಾರವನ್ನು ನಡಿಸಿ ಸ್ವಾನುಭವದಿಂದ ತಿಳಿದುಕೊಂಡ ದೋಷಗಳನ್ನು ಹೇಳುವುದು ಬೇರೆ. ಇಂಗ್ಲಂಡದಂಥ ಮತಸ್ವಾತಂತ್ರ್ಯವಿರುವ ದೇಶಗಳಲ್ಲಿಯ ಪದ್ಧತಿಯನ್ನು ನೋಡುವಾಗ ಈ ಹೊತ್ತು ಅಧಿಕಾರಿಗಳ ಟೀಕಾಕಾರರಾಗಿರುವವರು ನಾಳೆ ಅಧಿಕಾರಿಗಳಾಗುವರು; ಅಧಿಕಾರಿಗಳಿದ್ದವರು ಟೀಕಾಕಾರರಾಗುವರು. ಆದರೆ ಹಿಂದುಸ್ಥಾನದಲ್ಲಿ ಅಧಿಕಾರಿಗಳು ಅಧಿಕಾರಿಗಳೇ; ಟೀಕಾಕಾರರು ಟೀಕಾಕಾರರೆ. ಈ ತರದ ಸ್ಥಿತಿಯನ್ನು ತೋರಿಸಿ ಇಲ್ಲಿಯ ಟೀಕಾಕಾರರಿಗೆ ಅಧಿಕಾರದ ಅನುಭವವಿಲ್ಲ, ಟೀಕಿಸುವುದೊಂದೇ ಗೊತ್ತು ಎಂದು ಹೇಳಿ ಇಲ್ಲಿಯ ಅಧಿಕಾರಿಗಳಾದರೆ, ತತ್ಪಕ್ಷೀಯರಾದವರ ಟೀಕಾಕಾರರ ಟೀಕೆಗಳಿಗೆ ಬೆಲೆ ಕೊಡುತ್ತಿದ್ದಿಲ್ಲ. ಆದರೆ ಮೊನ್ನೆಯ ಅಧ್ಯಕ್ಷರಾದ ಮಿ. ಮಾಧವರಾಯರ ವಿಷಯದಲ್ಲಂತು ಈ ರೀತಿಯಿಂದ ಗುಣಾಗುಟ್ಟಲು ಯಾರಿಗೂ ಬಾಯಿ ಬರಲಿಕ್ಕಿಲ್ಲ. ಕಾರಣ ಮಾಧವರಾಯರು ಮೈಸೂರು, ತ್ರಾವಣಕೋರ ಮತ್ತು ಬರೋಡಾ ಈ ಸಂಸ್ಥಾನಗಳಲ್ಲಿ ಮಂತ್ರಿಸ್ಥಾನವನ್ನು ಉತ್ತರೋತ್ತರ ಯಶಸ್ವಿಯಾದ ರೀತಿಯಲ್ಲಿ ನಡಿಸಿದವರು. ಇವರ ಟೀಕೆಯೆಂದರೆ ಸ್ವಭಾವೋಕ್ತಿ ಹಾಗು ಅನುಭವ ಇವುಗಳ ಪೂರ್ಣ ಆವಿಷ್ಕರಣೆಯೆ ಸರಿ. ಆದುದರಿಂದಲೆ ಅವರ ಇಡೀ ಭಾಷಣದಲ್ಲಿ ಸುರುವಿನಿಂದ ಕೊನೆತನಕ ಬ್ಯುರೋಕ್ರಸಿ ವಿಷಯದ ಮುಖ್ಯ ಸ್ವರವು ಕೇಳಿಸುತ್ತದೆ. ಹಿಂದೂಸ್ಥಾನದ ಈಗಿನ ಆಕಾಂಕ್ಷೆಯು ಸಾಮ್ರಾಜ್ಯಾಂತರ್ಗತವಾದ ಸ್ವರಾಜ್ಯವಾಗಿರುವುದು. ಈ ವಿಷಯದಲ್ಲಿ ಅವರು ಹೇಳುವ ಮಾತು ಕೂಡ ಬ್ಯುರೋಕ್ರಸಿಯು ಸ್ಥಾನಾಂತರವೆ ಅಲ್ಲದೆ ಬೇರೆಯಲ್ಲ. ಸ್ವರಾಜ್ಯ ವಿಷಯದಲ್ಲಿ ಎರಡು ಮೂರು ಪಕ್ಷಗಳಿವೆ. ಅಂತರ್ಗತ ಸ್ವರಾಜ್ಯವನ್ನು ಒಂದೆ ಗಂಟಿನಿಂದ ಕೇಳುವವರು, ಕಂತುಕಂತಿನಿಂದ ಕೇಳುವವರು. ಹೀಗೆ ಎರಡು ಪಕ್ಷಗಳಲ್ಲಿ ಶ್ರೀಯುತ ಮಾಧವರಾಯರ ಅಭಿಪ್ರಾಯವು—ಕೊಡತಕ್ಕ ಅಂಶವನ್ನು ಎಂದರೆ ಅಂತರ್ಗತ ಸ್ವರಾಜ್ಯವನ್ನು ಏಕ ಗಂಟಿನಿಂದಲೆ ಕೊಡುವುದು ಒಳ್ಳೇದೆಂದಿರುತ್ತದೆ. ಈ ಎಲ್ಲ ವಿಷಯದಲ್ಲಿ ಸ್ವತಃ ಅಧ್ಯಕ್ಷರ ಶಬ್ದಗಳನ್ನೆ ವಾಚಕರ ಮುಂದಿಡುವುದು ಯುಕ್ತವಾಗಿದೆ.

"ನಾವು ನಮ್ಮ ಪ್ರಯತ್ನಗಳನ್ನೆಲ್ಲ ಏಕೀಕರಿಸಿ ಈಗಿನ ಬ್ಯುರೋಕ್ರಸಿಯ ಪದ್ಧತಿಯನ್ನು ಮುರಿದು ನಿಯಮದ ಪ್ರಾತಿನಿಧಿಕ ಶಾಸನ ಕ್ರಮವನ್ನು ಸ್ಥಾಪಿಸಬೇಕು. ಈ ರೀತಿಯಿಂದ ಬ್ಯುರೋಕ್ರಸಿಯನ್ನು ಮುರಿದು ಪ್ರತಿನಿಧಿ ಸತ್ತಾತ್ಮಕ ರಾಜ್ಯಕ್ರಮವನ್ನು ಸ್ಥಾಪಿಸಿದ್ದಲ್ಲಿಯೆ ಈಗ ನಮ್ಮ ಚಳವಳದಲ್ಲಿ ಉದ್ದಿಷ್ಟವಾದ ವ್ಯಾಪಾರ, ಬೇಸಾಯ, ಸಾಂಪತ್ತಿಕ ಸ್ಥಿತಿ, ಆರೋಗ್ಯ ರಕ್ಷಣೆ, ಶಿಕ್ಷಣ ಮುಂತಾದ ಪ್ರಶ್ನೆಗಳು ನಮ್ಮ ಪರವಾಗಿ ಉತ್ತರವನ್ನು ಕೊಡುವವು. ಆದುದರಿಂದ ಬ್ರಿಟಿಷ್ ರಾಜ್ಯಕರ್ತರ ಹತ್ತರ ಈ ಬಗ್ಗೆ ನಾವು ಈಗ ಕೇಳಿಕೊಳ್ಳಬೇಕಾಗಿದೆ. ಬ್ಯುರೋಕ್ರಸಿಯು ನಮಗೂ ಬ್ರಿಟಿಷ ರಾಜ್ಯಕರ್ತ್ಯ ಮಧ್ಯದಲ್ಲಿ ಸಿಂತುಕೊಂಡಿದೆ. ಅದನ್ನು ನಮ್ಮ ಮಾರ್ಗದಿಂದ ಬದಿಗೆ ಮಾಡಿ ನಮ್ಮ ಸಂಗತಿಗಳನ್ನು ಇಂಗ್ಲಂಡಿನೊಳಗಿನ ವರಿಷ್ಠ ಅಧಿಕಾರಿಗಳಿಗೆ ಪ್ರಕಟಪಡಿಸುವುದು ನಮ್ಮ ಕರ್ತವ್ಯವಾಗಿದೆ." ಕಂಪನಿ ಸರಕಾರದ ಕೈಯಿಂದ ರಾಜ್ಯಭಾರವನ್ನು ತಪ್ಪಿಸಿ ಬ್ರಿಟಿಷ ಪಾರ್ಲಮೆಂಟ್ ಈ ರಾಜ್ಯವನ್ನು ಕೈಕೊಳ್ಳಲು ಉಪಕ್ರಮಿಸುವಾಗ ಪಾರ್ಲಮೆಂಟಿನವರು ತಕ್ಕೊಂಡ ಜಾಗ್ರತೆ, ಆ ಕಾಲದಲ್ಲಿ ಅವರು ಸಾರಿದ ಉದಾರತತ್ವ, ಮಾಡಿದ ಸಮುಪ್ಯಷ್ಟಿಯ ಏರ್ಪಾಟು ಇವುಗಳನ್ನೆಲ್ಲ ಅಧ್ಯಕ್ಷರು ಸವಿಸ್ತಾರವಾಗಿ ನಿರೂಪಿಸಿ ಇದೇ ಬ್ಯುರೋಕ್ರಸಿ ವಿಷಯದಲ್ಲಿ ಪ್ರಾಮ ಹೇಳಿದ್ದೇನೆಂದರೆ, (ಹಿಂದುಸ್ಥಾನದ ಹಿತಕ್ಕಾಗಿಯಿಂದ) ಈ ಬ್ಯುರೋಕ್ರಸಿಯು ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವುದರ ಬದಲು ಆ ಸ್ವರಾಜ್ಯದ ಮಾರ್ಗದಲ್ಲಿ ವಿಘ್ನಗಳನ್ನು ತಂದೊಡ್ಡುತ್ತಿದೆ. ಲೊರ್ಡ ರಿಪನ್ ದೊರೆಗಳು ಕೊಟ್ಟಿರುವ ಸ್ಥಾನಿಕ ಸ್ವರಾಜ್ಯದ ತತ್ವಗಳ ಉದ್ದೇಶವು ಸಫಲವಾಗಲು ಈ ಬ್ಯುರೋಕ್ರಸಿಯು ಬಿಡುವದಿಲ್ಲ. ವರಿಷ್ಠ ಹಾಗು ಪ್ರಾಂತಿಕ ಕಾಯದೆ ಕೌನ್ಸಿಲುಗಳಿಗಾಗಿ ಬಂದಿರುವ "ಮಿಂಟೊ-ಮೋರ್ಲೆ ಸುಧಾರಣೆ"ಗಳನ್ನು ಇದು ಪ್ರತಿಬಂಧಿಸುತ್ತದೆ. ಈ ಬ್ಯುರೋಕ್ರಸಿಯ ಮಾಹಾತ್ಮ್ಯದಿಂದ ಹಿಂದಿಗಳಿಗೆ ವರಿಷ್ಠ ಅಧಿಕಾರಗಳು ಸಿಗದಂತಾಗಿವೆ."

ಮಿ. ಮಾಧವರಾಯರು ಹಿಂದುಸ್ಥಾನದ ಹಿಂದಿನ ಹಿಂದು ಮತ್ತು ಮೊಗಲ್ ಅರಸರ ಕಾಲದ ಇತಿಹಾಸವನ್ನು ನಿರೀಕ್ಷಿಸಿ ಅಕಬರ ಬಾದಶಹನ ಕಾಲದಲ್ಲಿ ರಾಜಾ ತೋಡರಮಲ್ಲನೆಂಥವನು ಹೇಗೆ ಜವಾಬದಾರಿಯ ಹುದ್ದೆಯನ್ನು ನಡಿಸಿದನೆಂಬುವುದನ್ನು ಸಪ್ರಮಾಣವಾಗಿ ದೃಷ್ಟಾಂತಗಳನ್ನು ಕೊಟ್ಟು "ಇಂಥ ಸಂದರ್ಭಗಳನ್ನು ಈ ನಮ್ಮ ಬ್ಯುರೊ ಕ್ರಸಿಯು ಈಗ ನಮಗೆ ಕೊಟ್ಟೀತೆ!" ಎಂದು ಕೇಳುತ್ತಾರೆ. ಬಿಕಾನೇರ ಮಹಾರಾಜರ ಸಂಗತಿಯನ್ನು ಎತ್ತಿಕೊಂಡು, ಅಧ್ಯಕ್ಷರು ಕೇಳುವ ಪ್ರಶ್ನೆಯು ಅಷ್ಟೆ ಸಮರ್ಪಕವಾಗಿದೆ. ಯುದ್ಧ ಕೌನ್ಸಿಲಿಗೆ ಆಫ್ರಿಕದ ಜನತೆಯಿಂದ ಆರಿಸಲ್ಪಟ್ಟ ಮಿ. ಸ್ಮಟ್ಸರೆಲ್ಲಿ, ಮತ್ತು ಹಿಂದುಸ್ಥಾನದ ಸರಕಾರನಿಯುಕ್ತರಾದ ಬಿಕಾನೇರ ಮಹಾರಾಜರೆಲ್ಲಿ? ಇವರಲ್ಲಿ ಯಾವ ಸಾಮ್ಯವೂ ಇಲ್ಲೆಂದು ಮಾಧವರಾಯರು ಸರಿಯಾಗಿ ತೋರಿಸಿಕೊಟ್ಟಿರುವರು. ಇರಲಿ. ಈ ಸಾರಿಯ ಪ್ರಾಂತಿಕ ಸಭೆಯ ಅಧ್ಯಕ್ಷರಾದ ಮಿ. ವಿ. ಪಿ. ಮಾಧವರಾಯರ ಭಾಷಣದಲ್ಲಿ ಇನ್ನೂ ಕೆಲವು ಮಹತ್ವದ ಸಂಗತಿಗಳಿರುವವು. ಆದರೆ ಸ್ಥಳಸಂಕೋಚದ ದೆಸೆಯಿಂದ ಈ ಸಾರಿ ಅವುಗಳನ್ನು ದಿಗ್ದರ್ಶಿಸಲು ಸಾಧ್ಯವಿಲ್ಲಾಗಿದೆ. ಆದರೂ ನಾವು ಮೇಲೆ ಹೇಳಿದಂತೆ ಅವರ ಇಡೀ ಭಾಷಣದಲ್ಲಿ ಬ್ಯುರೊಕ್ರಸಿಯ ದೋಷಗಳು ಅನುಸ್ಯೂತವಾಗಿಯೂ ಸಪ್ರಮಾಣವಾಗಿಯೂ ಗ್ರಥಿತವಾಗಿರುವವು. ಸಾರಾಂಶವಾಗಿ ಹೇಳುವುದಾದರೆ ನಮ್ಮ ಪ್ರಾಂತಿಕ ಪರಿಷತ್ತಿನ ಸ್ವಾಗತ ಕಮಿಟಿಯ ಅಧ್ಯಕ್ಷರ ಪ್ರಾಸ್ತಾವಿಕ ಭಾಷಣದಲ್ಲಿ ಹಾಗೂ ಅಧ್ಯಕ್ಷರ ಉಪನ್ಯಾಸದಲ್ಲಿ ಈಗಿನ ಲೋಕಮತದ ಪ್ರತಿಬಿಂಬವು ಸ್ಪಷ್ಟವಾಗಿ ಬಿದ್ದಿರುವುದು.

ಸ್ಫುಟವಿಚಾರಗಳು.

೧. ಪಂಜಾಬ ಸರಕಾರವು ತನ್ನ ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒತ್ತಾಯದ ಕ್ರಮದಲ್ಲಿ ಪ್ರಾರಂಭಿಸುವದಿದೆಂದು ನಾವು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಆದ ಪಂಜಾಬ ಪ್ರಾಂತವು ಕಳೆದ ವಾರ ಶಿಕ್ಷಣದ ವಿಷಯದಲ್ಲಿ ಇನ್ನೂ ಕೆಲವು ಹೆಚ್ಚಿನ ಜಾಗ್ರತೆಗಳನ್ನು ತಕ್ಕೊಂಡ ಸಂಗತಿಗಳನ್ನು ತಿಳಿಸಲು ನಾವು ತಿರಿಗಿ ಸಂತೋಷಪಡುತ್ತೇವೆ. ಪಂಜಾಬ ವಿದ್ಯಾಖಾತೆಯ ಡಿರೆಕ್ಟರರಾದ ಮಿ. ರಿಜ ಎಂಬವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಪರಿಷತ್ತು ಸೇರಿ ಅದರಲ್ಲಿ ಕೆಲವು ಮಹತ್ವದ ವಿಷಯಗಳು ಚರ್ಚಿಸಲ್ಪಟ್ಟವು. ಪರಿಷತ್ತಿನಲ್ಲಿ ಸರಕಾರಿ ಬಿನ್‌ಸರಕಾರಿ ಸಭಾಸದರು, ಶಾಲಾ ಇನ್ಸಪೆಕ್ಟರುಗಳು, ಸರಕಾರಿ ಹಾಗು ಖಾಸಗಿ ಶಾಲೆಗಳ ಹೆಡ್ ಮಾಸ್ತರರು, ಮನೆದಾರರು ಕೂಡಿ ಸಾಧಾರಣ ೪೦ ಜನರು ಹಾಜರಿದ್ದರು. ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದ ಸಂಗತಿಗಳನ್ನು ನಮ್ಮ ಮದ್ರಾಸು ಸರಕಾರವು ಪರಾಂಬರಿಸತಕ್ಕದೆಂದು ನಮ್ಮ ಸೂಚನೆಯು. ನಮ್ಮ ಕೌನ್ಸಿಲಿನ ಕಳೆದ ಅಧಿವೇಶನದಲ್ಲಿ—ಶಿಕ್ಷಣದ ವಿಷಯಕ ಕೆಲವು ಭಾವಿ ಯೋಜನೆಗಳನ್ನು ನಿಶ್ಚಿತಪಡಿಸುವುದಕ್ಕಾಗಿ ಸರಕಾರಿ ಬಿನ್‌ಸರಕಾರಿ ಗೃಹಸ್ಥರ ಒಂದು ಕಮಿಟಿಯನ್ನು ನೇಮಿಸಬೇಕೆಂಬುದಾಗಿ ಒಬ್ಬ ಲೋಕಪ್ರತಿನಿಧಿಗಳು ಒಂದು ಠರಾವನ್ನು ತಂದಾಗ ಸಭಾಧ್ಯಕ್ಷರಾದ ಲೂ. ಪೆಂಟಲೆಂಡ್ ಪ್ರಭುಗಳು "ಈ ಕೆಲಸಕ್ಕೆ ಈ ಯುದ್ಧದ ಸಮಯವಲ್ಲ"ಎಂದು ಹೇಳಿದ್ದರು. ಆದರೆ ಮೊನ್ನೆಯ ಪಂಜಾಬ ಶಿಕ್ಷಣ ಪರಿಷತ್ತಿನ ಅಧ್ಯಕ್ಷರು ಏನೆನ್ನುತ್ತಾರೆಂಬುದನ್ನು ನೋಡೋಣ: "ಯುದ್ಧಕಾಲವಾದುದರಿಂದ ಈಗ ಶಿಕ್ಷಣದ ವ್ಯಾಪವನ್ನು ವಿಸ್ತರಿಸಲು ಸಾಧ್ಯವಿಲ್ಲಾದರೂ ವಿದ್ಯಾವಿಷಯಕ ಭಾವಿಪ್ರಗತಿಗೆ ಅನುಕೂಲವಾಗುವಂತೆ ಒಂದು ಯೋಜನೆಯನ್ನು ತಯಾರಿಸಲು ಇದು ತಕ್ಕ ಸಮಯವಾಗಿದೆ. ಈಗ ತಯಾರಿಸುವ ಯೋಜನೆಯಂತೆ ಮುಂದೆ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿದೆ." ನಮ್ಮ ಮದ್ರಾಸು ಸರಕಾರದ ಅಭಿಯನ್ನು ಸ್ಮರಿಸಿ ಪಂಜಾಬ ಡಿರೆಕ್ಟರರ ಈ ಮಾತನ್ನು ಆಲೋಚಿಸಿದರೆ 'ಆ ಚಿತ್ರವನ್ನೂ ನೋಡಿರಿ, ಈ ಚಿತ್ರವನ್ನೂ ನೋಡಿರಿ' ಎಂದು ಹೇಳಬೇಕಾಗುತ್ತದೆ. ಮನಸ್ಸಿದ್ದವನಿಗೆ ಯಾವುದೂ ಸುಲಗ್ನವೆ, ಮನಸ್ಸಿಲ್ಲದವನಿಗೆ ಯಾವುದೂ ವಿಘ್ನವೆ! ಇದೆ ಮಾತು ನಿಜ.

೨. ಈ ಪಂಜಾಬ ಶಿಕ್ಷಣ ಪರಿಷತ್ತಿನಲ್ಲಿ ಹಲವು ವಿಷಯಗಳು ಚರ್ಚಿಸಲ್ಪಟ್ಟವು. ಅವುಗಳಲ್ಲಿ ದೇಶಿಭಾಷೆಯ ವಿಷಯವು ಮಹತ್ವದ್ದಾಗಿತ್ತು. ಪ್ರಾಯಶಃ ಎಲ್ಲ ವಕ್ತೃಗಳು ದೇಶಿಭಾಷೆಯ ಕಡೆಯಿಂದ ಮಾತಾಡಿದರು. ದೇಶಿಭಾಷೆಯ ಮುಖಾಂತರ ಶಿಕ್ಷಣವನ್ನು ಹೊಂದಿದವನಯೋಗ್ಯತೆಯು ಬರೆ ಇಂಗ್ಲಿಷಿನ ಪ್ರಾಧಾನ್ಯದಿಂದ ಕಲಿತವನಿಗಿಂತ ಎಷ್ಟೊ ಅಧಿಕವಾಗಿರುವುದೆಂದು ಅನೇಕರು ಅಭಿಪ್ರಾಯಪಟ್ಟಿರುತ್ತಾರೆ. "ಈಗಿನ ಕಾಲದಲ್ಲಿ ಇಂಗ್ಲಿಷ ಭಾಷೆಯ ಶಿಕ್ಷಣವು ಎಲ್ಲರ ಅಪೇಕ್ಷೆಯಲ್ಲಿದ್ದರೂ ದೇಶಿಭಾಷೆಗಳ ಪ್ರಾಮುಖ್ಯವಿಲ್ಲದೆ ಹೋದರೆ ಅದು ಜನರಿಗೆ ಹಿತವಾಗದು; ಇಂಗ್ಲಿಷ ಭಾಷೆಯ ಅಪೇಕ್ಷೆಯಾದರೂ ಜನರಲ್ಲುಂಟಾದುದು ದೊಡ್ಡ ದೊಡ್ಡ ಸರಕಾರಿ ಹುದ್ದೆಗಳ ದೃಷ್ಟಿಯಿಂದಲೆ ಅಲ್ಲದೆ ಶಿಕ್ಷಣ ಮಂದಿರದಲ್ಲಿ ಪ್ರವೇಶಿಸಲು ಅದೊಂದೇ ದ್ವಾರವೆಂಬ ತಿಳಿವಿನಿಂದ ಅಲ್ಲ; ಆಧುನಿಕ ಪದವೀಧರನು ಅಶಿಕ್ಷಿತ ದೇಶಬಾಂಧವರೊಟ್ಟಿಗೆ ಒಂದು ವಿಷಯದ ಮೇಲೆ ಸಂಭಾಷಿಸಲು ತೊಡಗಿದರೆ ಅವರಿಗೆ ತಿಳಿಯುವಂತೆ ಮಾತಾಡಲು ಅವನಿಂದಾಗದು! ಇಷ್ಟು ಶೋಚನೀಯ ಸ್ಥಿತಿಯು ಬಂದೊದಗಿದೆ." ಈ ಎಲ್ಲ ಅಭಿಪ್ರಾಯಗಳು ಬರೆ ನಮ್ಮವಲ್ಲ. ವಿದ್ಯಾಖಾತೆಯಲ್ಲಿ ಇದ್ದು ವಿದ್ಯಾದಾನ ಮಾಡುವಾಗ, ಯಾವ ಯಾವ ತೊಂದರೆಗಳು ಬರುತ್ತವೆಂಬುದನ್ನು ಅನುಭವದಿಂದ ತಿಳಿದುಕೊಂಡ ಗೃಹಸ್ಥರ ಅನುಭವದ ಮಾತುಗಳಿವು! ಎಂದ ಮೇಲೆ ಪ್ರಕೃತ ಶಿಕ್ಷಣಾಲಯಗಳಲ್ಲಿ ದೇಶಿಭಾಷೆಗಳಿಗೆ ಕೊಡಬೇಕಾದ ಸ್ಥಾನವು ಯಾವುದು; ಪ್ರಕೃತ ಯಾವುದು ಕೊಡಲ್ಪಡುತ್ತದೆ ಈ ಸಂಗತಿಯನ್ನು ಆಲೋಚಿಸಿ ನೋಡಿದರೆ ಇದನ್ನು ಹೆಚ್ಚಾಗಿ ಟೀಕಿಸಬೇಕಾದ ಅಗತ್ಯವಿಲ್ಲ. ಇರಲಿ. ಪರಿಷತ್ತಿನೊಳಗೆ ನಡೆದ ಬೇರೆ ಕಾರ್ಯಕ್ರಮಗಳಲ್ಲಿ ಹೈಸ್ಕೂಲಿನ ಶಿಕ್ಷಣದ ಕ್ರಮಿಕ ಪುಸ್ತಕಗಳ (Curriculum) ಸುಧಾರಣೆ, ಸಂಸ್ಕೃತ ಇತ್ಯಾದಿ ಉಚ್ಚತರಗತಿಯ ಭಾಷೆಗಳಂತೆಯೆ ದೇಶಿಭಾಷೆಗಳ ಪರಿಗಣನೆ, ಅವುಗಳಿಗೆ ಅವಶ್ಯಕವಿರುವ ಉಪಾಯ ಇವೆ ಮೊದಲಾದವುಗಳಾಗಿದ್ದವು. ಸಾರಾಂಶ ಪಂಜಾಬದಲ್ಲಿ ನೆರೆದ ಈ ಚಿಕ್ಕ ಶಿಕ್ಷಣ ಪರಿಷತ್ತಿನಿಂದ ಅಲ್ಲಿಯ ಜನತೆಯ ಮೇಲಿಂತೂ ಉದ್ದಿಷ್ಟ ಸುಧಾರಣೆಗಳು ಜಾರಿಯಲ್ಲಿ ಬಂದರೆ ಪ್ರಯೋಜನವಾಗಿಯೆ ಆದೀತು. ಅಲ್ಲದೆ ಅನ್ಯ ಪ್ರಾಂತೀಯ ಸರಕಾರಗಳಿಗೂ ಜನರಿಗೂ ಕೂಡ ಇದರಿಂದ ಯೋಗ್ಯ ಬೋಧವು ದೊರೆಯುವಂತಾಗಿದೆ.

೩. ಎರಡು ವಾರಗಳ ಹಿಂದೆ ಸ್ವದೇಶಾಭಿಮಾನಿಯು ಅಗ್ರಲೇಖದಲ್ಲಿ ವಸಾಹತಿನವರು ಹಿಂದುಸ್ಥಾನಕ್ಕೆ ಪ್ರತಿನಿಧಿತ್ವದ ಹಕ್ಕನ್ನು ಕೊಡಬೇಕೆಂದು ಒಂದು ಠರಾವನ್ನು ತಂದು ತಮ್ಮ ಬುದ್ಧಿಯ ಸಮತ್ವವನ್ನು ವ್ಯಕ್ತಪಡಿಸಿದ ಸಂಗತಿ ನಾವು ವಿಶದಪಡಿಸಿದ್ದೇವೆ. ಕೆನಡಾ ದೇಶದ ಪ್ರತಿನಿಧಿಗಳು ಯುದ್ಧ ಪರಿಷತ್ತಿನಲ್ಲಿ ಮಾತ್ರ ಈ ಠರಾವಿನ ಮೂಲಕ ತಮ್ಮ ಸಮತೆಯನ್ನು ವ್ಯಕ್ತಗೊಳಿಸಿದ್ದಾರೆಂದಲ್ಲ, ಆ ಕೆನಡಾ ದೇಶದ ಹಿಂದುಸ್ಥಾನದ ವಿಷಯದಲ್ಲಿ ಇದ್ದ ಪೂರ್ವಗ್ರಹವು ಬದಲಾದುದಕ್ಕೆ ಇನ್ನೊಂದು ಚಿಕ್ಕ ಉದಾಹರಣೆಯನ್ನು ಕೂಡ ತೋರಿಸಬಹುದು. ಕೆನಡದ ಪಶ್ಚಿಮ ಭಾಗದಲ್ಲಿ ವಸಾಹತು ಮಾಡಿಕೊಂಡಿದ್ದ ಶೀಖ ಜನರಿಗೆ ಹಿಂದೂಸ್ಥಾನದಿಂದ ತಮ್ಮ ಹೆಂಡತಿ ಮಕ್ಕಳನ್ನು ಕೊಂಡುಹೋಗುವುದು ತೊಂದರೆಯ ಕೆಲಸವಾಗಿತ್ತು. ಆದರೆ ಕೆಲವು ದಿವಸಗಳ ಹಿಂದೆ ಕೊಲಂಬಿಯಾ ಪ್ರಾಂತದ ಮಾಜಿ ಮೇಯರ ಸ್ಟುಅರ್ಟ ಎಂಬವರು ಹಾಗು ಸ್ಕೊಫೀಲ್ಡ್ ಎಂಬ ಒಬ್ಬ ಬಿಶಪರು ಬೇರೆ ಹತ್ತು ಜನ ಗೃಹಸ್ಥರನ್ನು ಒಟ್ಟಿಗೆ ಕರೆದುಕೊಂಡು ಕೆನಡಾ ಸಂಸ್ಥಾನದ ಮುಖ್ಯ ಮಂತ್ರಿಗಳನ್ನು ಕಂಡರು. ಶೀಖ ವಸಾಹತಿನವರಿಗೆ ಹೆಂಡರು ಮಕ್ಕಳನ್ನು ಕರೆದುಕೊಂಡು ಬರುವ ವಿಷಯದಲ್ಲಿ ಕಾನೂನಿನ ಹೆಸರಿನಿಂದ ಸಂಭವಿಸುವ ಸಂಕಟಗಳನ್ನು ಮಂತ್ರಿಗಳಿಗೆ ವಿವರಣೆ ಹೇಳಿ ಅವರು ಈ ನಿರ್ಬಂಧಗಳನ್ನು ತಗೆದುಹಾಕಲು ಆಗ್ರಹದಿಂದ ಕೇಳಿಕೊಂಡಿದ್ದಾರೆ. ಶೀಖ ಜನರ ಹೆಂಡತಿ ಮಕ್ಕಳ ವಿಷಯದಲ್ಲಿ ನಡೆಯುತ್ತಿರುವ ಈ ಅನ್ಯಾಯವು ಕೆನಡಿಯನ್ನರಿಗೆ ಸಹನವಾಗದೆ ಕೊನೆಗೆ ಅವರು ತಾವಾಗಿಯೆ ಯುದ್ಧಸಮಾಪ್ತಿಯ ಕಾಲವನ್ನು ಕೂಡ ನಿರೀಕ್ಷಿಸದೆ ಈ ರೀತಿಯಿಂದ ಹಿಂದೀ ಜನರ ಪರವಾಗಿ ಸಹಾನುಭೂತಿಯನ್ನು ತೋರಿಸಿದ್ದು ಸ್ವತಃ ಅವರಿಗೆ ಭೂಷಣಾಸ್ಪದವಾದರೂ ಶೀಖ ವಸಾಹತಿನವರಿಗೆ ಅವರ ಸಂಕಟ ಪರಂಪರೆಯಿಂದ ಒಂದನ್ನು ಕಡಿಮೆ ಮಾಡಿದ್ದು ಕೊಂಚಮಟ್ಟಿಗೆ ಅನುಕೂಲವೆ ಸರಿ ಎಂಬುದಕ್ಕೆ ಸಂಶಯವಿಲ್ಲ.

೪. ಸಾಮ್ರಾಜ್ಯ ಯುದ್ಧಮಂಡಲದವರು ನಮ್ಮ ಬಾದಶಹರಿಗೆ ರಾಜಭಕ್ತಿಯ ಮಾನಪತ್ರವನ್ನು ಸಮರ್ಪಿಸಿದರು. ಇದಿ ಬ್ರಿಟಿಷ ಸಾಮ್ರಾಜ್ಯದ ಸಂಗಡಲೆ ಮಾನವವಂಶಕ್ಕೂ ಹಾನಿಕಾರಕವಾದ ಈ ಯುದ್ಧದಲ್ಲಿ ತಾವೆಲ್ಲರು ಏಕಮತ್ಯದಿಂದಲೂ ದೃಢನಿಶ್ಚಯದಿಂದಲೂ ಸಾಮ್ರಾಜ್ಯಕ್ಕೆ ಸಾಹಾಯ್ಯ ಕೊಟ್ಟು ಕೊನೆಗೆ ಯುದ್ಧವು ಜಯಶಾಲಿಯಾಗುವಂತೆ ಯತ್ನಿಸುವೆವೆಂದು ಸೂಚಿಸಿ ಮಾನಪತ್ರ ಸಮರ್ಪಕರು ಮುಂದೆ ಹೇಳಿದ್ದೇನೆಂದರೆ, 'ನಮ್ಮ ಯುದ್ಧಮಂಡಲದಲ್ಲಿ ಆಲೋಚಿಸಿದ ಉಪಾಯಗಳ ಮೇರೆಗೆ ಪ್ರಕೃತ ಯುದ್ಧವು ನಮಗೆಯೆ ಜಯಪರಿಣಾಮಿಯಾಗಬೇಕು, ಈ ಅರ್ಥದ ಮಾನಪತ್ರವನ್ನು ಸಮರ್ಪಿಸಿದ ಅನಂತರ ಬಾದಶಹರು ಅದಕ್ಕೆ ಉತ್ತರವನ್ನು ಕೊಟ್ಟರು. ಬಾದಶಹರು ತಮ್ಮ ಉತ್ತರದಲ್ಲಿ ಸಾಮ್ರಾಜ್ಯದೊಳಗಿನ ಬಯಾ ಪ್ರತಿನಿಧಿಗಳು ವ್ಯಕ್ತಪಡಿಸಿದ ರಾಜನಿಷ್ಠೆಯ ಬಗ್ಗೆ ಯೋಗ್ಯ ಶಬ್ದಗಳಿಂದ ಆಭಾರಪ್ರದರ್ಶಿಸಿ ಪ್ರಕೃತ ಯುದ್ಧದಲ್ಲಿ ಜಯವನ್ನು ಸಂಪಾದಿಸುವುದೆ ಮಾತ್ರ ನಮ್ಮ ಧ್ಯೇಯವಲ್ಲ, ಲೋಕದಲ್ಲಿ ಯುದ್ಧಾಂತ್ಯ ಶಾಂತತೆಯು ಒಂದನಂತರ ಆ ಶಾಂತತೆಯು ಹೇಗೆ ಚಿರಕಾಲಿಕವಾಗಿ ನಿಂತೀತು ಎಂದರೆ ಶತ್ರುವಿಗೆ ಪುನಃ ತಲೆಯೆತ್ತಲು ಬಿಡದ ಶಾಂತತೆಯ ಸಾಮ್ರಾಜ್ಯವು ಲೋಕದಲ್ಲಿ ಹೇಗೆ ಪ್ರಸ್ಥಾಪಿತವಾದೀತು. ಇದೂ ನಮ್ಮ ಧ್ಯೇಯವಾಗಿದೆಂದು ಉತ್ತೇಜನಪರವಾದ ಭಾಷೆಯನ್ನು ಉಪಯೋಗಿಸಿದರು. ಸಾಮ್ರಾಜ್ಯ ಯುದ್ಧಪರಿಷತ್ತಿನಲ್ಲಿ ವಸಾಹತುಗಳೊಡನೆ ಹಿಂದುಸ್ಥಾನವು ತನ್ನ ಪ್ರತಿನಿಧಿಗಳ ಮುಖಾಂತರ ಸಮಾನಹಕ್ಕಿನಿಂದ (with equal rights) ಪರಿಷತ್ತಿನ ಚರ್ಚೆಗಳಲ್ಲಿ ಭಾಗಿಯಾದುದನ್ನು ನೋಡಿ ನಮ್ಮ ಬಾದಶಹರಿಗೆ ತುಂಬಾ ಸಂತೋಷವೂ ಸಮಾಧಾನವೂ ಉಂಟಾಗಿದೆ. ಹಿಂದುಸ್ಥಾನದ ಅಂಕಿತತ್ವವನ್ನು ತೆಗೆದು ಅದನ್ನು ಸ್ವಾಯತ್ತ ವಸಾಹತುಗಳ ಸಾಲಿನಲ್ಲಿ ಮುಖ್ಯ ಪ್ರಧಾನರಾದ ಲೊ. ಜೋರ್ಜರು ಸೇರಿಸಿ ಉಚ್ಚರಿಸಿದಂತೆ ನಮ್ಮ ಘನ ಬಾದಶಹರೂ ಕೂಡ ಹಿಂದುಸ್ಥಾನದ ಸಮಾನಹಕ್ಕುಗಳನ್ನು ನಿರ್ದೇಶಿಸಿದ್ದು ಹಿಂದುಸ್ಥಾನದ ರಾಜನಿಷ್ಠೆಗೆ ಭೂಷಣಾಸ್ಪದವಾಗಿದೆ.

೫. ಶಾಲಾ ವಿದ್ಯಾರ್ಥಿಗಳೂ ಕೊಲೆಜಿನ ಹುಡುಗರೂ ಯಾವ ರಾಜಕೀಯ ಸಭೆಗಳಲ್ಲಿಯೂ ಕೆಲಸಮಾಡಕೂಡದು, ಅಂಥ ಸಭೆಗಳಿಗೂ ಹೋಗಕೂಡದೆಂಬದಾಗಿ ನಮ್ಮ ಮದ್ರಾಸ ಸರಕಾರದ ಒಂದು ಹೊಸ ಸರಕ್ಯೂಲರು ಹೊರಟಿದೆಂದು ತಿಳಿದುಬರುತ್ತದೆ. ಹೈಸ್ಕೂಲಿನ ವಿದ್ಯಾರ್ಥಿಗಳು ಇಂಥ ಸಭೆಗಳಲ್ಲಿಯೂ ಸಂಸ್ಥೆಗಳಲ್ಲಿಯೂ ಪ್ರವೇಶಿಸಕೂಡದೆಂಬುದಾಗಿ ಮೊದಲಿನಿಂದಲೆ ನಿರ್ಬಂಧವಿತ್ತು. ಈಗ ಕೊಲೆಜುಗಳಲ್ಲಿಯ ಪ್ರೌಢ ವಿದ್ಯಾಭ್ಯಾಸವನ್ನು ಪಡೆಯುವ ಪ್ರೌಢ ವಿದ್ಯಾರ್ಥಿಗಳ ಸುತ್ತಲು ಈ ತರದ ಹೊಸ ಸರಕ್ಯೂಲರಿನ ಬೇಲಿಯನ್ನು ಸರಕಾರವು ಕಟ್ಟುವುದನ್ನು ನೋಡುವಾಗ ತುಂಬಾ ವಿಷಾದವಾಗುತ್ತದೆ. ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟ ರಾಜಕೀಯ ವಿಷಯಗಳ ಚರ್ಚೆಯಲ್ಲಿ ಸೇರುವುದಾಗಲಿ, ರಾಜಕೀಯ ಸಭೆಗಳಲ್ಲಿ ಹಾಜರಿರುವುದಾಗಲಿ, ರಾಜಕೀಯ ಸಂಸ್ಥೆಗಳೊಡನೆ ಸಂಬಂಧವನ್ನಿಡುವುದಾಗಲಿ, ಅಥವಾ ರಾಜಕೀಯ ಚಳವಳದಲ್ಲಿ ಪ್ರವರ್ತಿಸುವುದಾಗಲಿ ಶಾಲೆಯ ಹುಡುಗರಿಗೂ ಕೊಲೇಜಿನ ವಿದ್ಯಾರ್ಥಿಗಳಿಗೂ ಹಿತಾವಹವಾದುದಲ್ಲೆಂಬ ಕಾರಣವನ್ನು ತೋರಿಸಿ ಸರಕಾರವು ರಾಜಕೀಯ ಸಭೆ, ರಾಜಕೀಯ ಸಂಸ್ಥೆ, ರಾಜಕೀಯ ಚಳವಳ, ಮುಂತಾದ ತಾನು ಮಾಡಿದ ಎಲ್ಲ ವಿಧದ ನಾಮನಿರ್ದೇಶದಿಂದ ಸಂತೋಷಪಡದೆ ಶಾಲೆಯ ಅಥವಾ ಕೊಲೇಜಿನ ಅಧಿಕಾರಿಗಳ ಮತದಿಂದ ಅಹಿತಕರವಾದ ಸಭೆ, ಸಂಘಗಳಿಗೂ ವಿದ್ಯಾರ್ಥಿಗಳು ಹೋಗಕೂಡದೆಂಬುದಾಗಿ ಅಭಿಪ್ರಾಯಪಡುತ್ತದೆ. ಇಂಥ ಕಠೋರವಾದ ಸರಕ್ಯೂಲರನ್ನು ನಮ್ಮ ಮದ್ರಾಸ ಸರಕಾರವು ಯಾಕೆ ಹೊರಡಿಸಿದೆಂದು ಗೊತ್ತಾಗದು. ಸುಧಾರಿಸಿದ ಯಾವ ಸರಕಾರವೂ ಕೊಲೇಜಿನ ಪ್ರೌಢ ವಿದ್ಯಾರ್ಥಿಗಳನ್ನು ರಾಜಕೀಯ ಸಭೆಗಳಲ್ಲಿ ಬರೆ ಪ್ರೇಕ್ಷಕರಾಗಿ ಹೋಗಲು ಪ್ರತಿಬಂಧಿಸುವುದಿಲ್ಲ. ಅನುದಾರ ಮತ್ತು ಅಸಂಸ್ಕೃತ ಸ್ಥಿತಿಯಲ್ಲಿದ್ದ ಸರಕಾರಕ್ಕೆ ಒಂದು ವೇಳೆ ಇಂಥ ಅವಿಚಾರದ ಸರಕ್ಯೂಲರು ಒಪ್ಪೀತು. ಹೊರ್ಸ ಲೊ. ಪೆಂಟಲಂಡರಂಥ ಉದಾರ ಮುತ್ಸದ್ದಿಗಳ ಆಡಳಿತೆಗೆ ಇದು ಸರ್ವಥಾ ಒಪ್ಪುವುದಿಲ್ಲ. ದೇಶದೊಳಗಿನ ರಾಜಕೀಯ ಚಳವಳದ ಥರ್ಮಾಮೀಟರನ್ನು ಶಾಲಾಧಿಕಾರಿಗಳ ಕೈಯಲ್ಲಿ ಕೊಟ್ಟರೆ ಕಾಯಿದೆ ಹಾಗು ಸನದುಗಳಿಗೆ ಅನುವಾಗಿರುವ ಸಾತ್ವಿಕ ಚಳವಳಗಳಲ್ಲಿ ಕೂಡಾ ದೋಷಾರೋಪಗಳು ಉದ್ಭವಿಸಲು ಸಂದರ್ಭ ಕೊಟ್ಟಂತಾಗುತ್ತದೆ.

೬. ಪಿಂಗಳ ಸಂವತ್ಸರದಲ್ಲಿ ಅಧಿಕ ಮಾಸವು ಆಶ್ವೀಜವೇ ಆಗಿರುವುದೆಂಬುವುದರ ಕುರಿತು ಪೂನೆಯಲ್ಲಿ ಪ್ರಕಟವಾಗುತ್ತಿರುವ ಕೇಸರಿ ಪತ್ರದಲ್ಲಿ ಒಂದು ಲೇಖವು ಈ ರೀತಿ ಪ್ರಕಟಿಸಲ್ಪಟ್ಟಿರುವುದು— ಏಪ್ರಿಲ್ ತಾ. ೧೨, ೧೩ನೇ ದಿನಗಳಲ್ಲಿ ವೇಧದಿಂದ ನತಾಂಶವು ದಕ್ಷಿಣಕ್ಕೆ ೧೫೦ ಮತ್ತು ಈ ನತಾಂಶದ ಅನುರೋಧದಿಂದ ವೇಧದಿಂದ ಬಂದ ಕ್ರಾಂತಿಯ ಪ್ರಮಾಣದ ಮೇಲೆ ತಾ. ೧೩ರ ಬೆಳಿಗ್ಗೆ ಘಟಿ ೧ ಪಲ ೨೨ರ ಸಮಯ ಬಗುವ ಮೇಷ ಸಂಕ್ರಾಂತಿಯ ಸಮಯದಲ್ಲಿ ಪ್ರತ್ಯಕ್ಷ ಪ್ರಮಾಣದಿಂದ ಅಯನಾಂಶವು ೨೨ ಅಂಶ ೩೩ ಕಲೆ ಬಂದಿರುವದು. ಈ ಸಮಯದಲ್ಲಿ ಪ್ರಸಿದ್ಧ ಪ್ರಸಿದ್ಧ ಪುರುಷರು ಮತ್ತು ವಿದ್ವಾಂಸರ ಮಂಡಳಿಯು ಹಾಜರಾಗಿ ಕೂಡಿತ್ತು. ತಾ. ೧೬-೯-೧೮ರಲ್ಲಿ ಸೂರ್ಯೋದಯಕ್ಕೆ ಶುದ್ಧಸಾಯನ ರವಿ ೫-೨೯-೫೮ ಬಂದಿದೆ. ಇದರಿಂದ ಶುದ್ಧ ಅಯನಾಂಶ ೨೨-೩೩ ವಜಾ ಮಾಡಿದ್ದಲ್ಲಿ ನಿರಯಣ ರವಿ ಘಟಿ ೧ ಈ ವೇಳೆಯಲ್ಲಿ ಕನ್ಯಾ ಪ್ರವೇಶ ಮಾಡುವಾಗ ತಿಥಿಯು ಘಟಿ ೨೨ ಉಂಟು. ಅದ್ದರಿಂದ ಭಾದ್ರಪದ ಅಧಿಕವಾಗುವದಿಲ್ಲ. ಹಾಗೆಯೇ ತಾ. ೧೬—೧೦—೧೮ ಈ ದಿವಸ ಶುದ್ಧಸಾಯನ ರವಿ ೬-೨೯-೩೩ ಇದರಿಂದ ೨೨-೩೩ ಅಯನಾಂಶವು ಕಡಮೆಮಾಡಿದ್ದಲ್ಲಿ ೧೪ಗ ೩೩ ಈ ಸಮಯ ತುಲಾ ಸಂಕ್ರಾಂತಿಯು ಆಗುವದು. ಆ ದಿವಸ ಅಮಾವಾಸ್ಯೆಗಳಿಗೆ ೩ ಇರುವದರಿಂದ ಆಶ್ವೀಜ ಮಾಸದಲ್ಲಿಯೇ ಸಂಕ್ರಾಂತಿಯ ಅಭಾವ ಸ್ಪಷ್ಟ ಕಾಣುವದು. ಅರ್ಥಾತ್—ಆಶ್ವೀಜ ಮಾಸವೇ ಅಧಿಕ ಬರುವದು. ಈ ವಿಷಯ ಶಂಕೆಯಿಲ್ಲ. ಗ್ರಹಲಾಘವೀಯ ಹಾಗು ಇದಿತರ ಪಂಚಾಂಗ ಕರ್ತರುಗಳು ಮಾಡಿದ ಭಾದ್ರಪದ ಅಧಿಕ ಮಾಸವು ದೃಕ್‌ಪ್ರತ್ಯಯಕ್ಕೆ ಬಾರಲಾರದ ಗಣಿತದ ಮೇಲೆ ಮಾಡಿದ್ದಾದ್ದರಿಂದ ಅದು ತಪ್ಪಾಗಿರುವದು. ಆದರೂ ಆ ವಿಷಯ ತಜ್ಞಜನರು ಅಭಿಮಾನ ಬಿಟ್ಟು ಸೂಕ್ಷ್ಮ ವಿಚಾರ ಮಾಡಿ ಆ ವಿಷಯವನ್ನು ತಿಳಿಯಬೇಕೆಂಬುವ ವಿಜ್ಞಾಪನೆ." ನಮ್ಮ ಪ್ರಾಂತ್ಯಗಳಲ್ಲಿ ಪ್ರಕಟವಾದ ಪಂಚಾಂಗಗಳಲ್ಲಿ ಅಧಿಕ ಪಕ್ಷದವರು ಆಶ್ವೀಜವೇ ಅಧಿಕ ಮಾಸವೆಂತ ತಮ್ಮ ಪಂಚಾಂಗಗಳಲ್ಲಿ ಸೂಚಿಸಿರುತ್ತಾರೆ.

೭. ೧೯೧೫-೧೬ನೇ (ಫಸ್ಲಿ ೧೩೨೫) ವರುಷದ ಮದ್ರಾಸು ಸಂಸ್ಥಾನದ ಭೂಕಂದಾಯದ ವೃತ್ತಾಂತದಿಂದ ಭೂಸಾಗುವಳಿಯ ಜಮೀನಿನ ವಿಸ್ತಾರವು ೩೮,೧೭೦,೦೦೦ರಿಂದ ೩೯,೧೬೩,೦೦೦ ಎಕ್ರೆಗಳಿಗೆ ಹೆಚ್ಚಿರುವದಾಗಿ ತೋರಿಬರುತ್ತದೆ. ಆದರೆ ಈ ಆಧಿಕ್ಯವು ಎಲ್ಲಾ ತರದ ಬೆಳೆಗಳಲ್ಲಿಯೂ ಒಂದೇ ರೀತಿಯಾಗಿರದು. ಭತ್ತ, ನೀಲಿ, ಜೋಳ, ಕಂಬು ಇವುಗಳನ್ನು ಬಹಳ ವಿಸ್ತಾರವಾಗಿ ಬೆಳೆಸಿದ್ದಾರೆ. ಪರದೇಶಕ್ಕೆ ಸರಕುಗಳನ್ನು ಕಳುಹಿಸುವ ಸೌಕರ್ಯಗಳು ಸರಿಯಾಗಿಲ್ಲದ್ದರಿಂದ ಹತ್ತಿ, ನೆಲಕಡಲೆ ಇತ್ಯಾದಿಗಳ ಕೃಷಿಯು ಕಡಿಮೆಯಾಗಿರುವದು. ಹೊಗೆಸೊಪ್ಪು ಮತ್ತು ಎಳ್ಳಿನ ಕೃಷಿಯು ಸಹ ಇದೇ ರೀತಿ ಕಡಿಮೆಯಾಗಿದೆ. ನೀರು ಬೆಳೆಯುವಂಥಾ ಸ್ಥಳಗಳ ವಿಸ್ತೀರ್ಣವು ಸೇಕಡಾ ೨೦ರಷ್ಟು ಹೆಚ್ಚಿರುವದು. ಕೃಷಿಭೂಮಿಯ ವಿಸ್ತಾರವು ಹೆಚ್ಚಿನುದರಿಂದಲೂ ಕೆಲವು ಪ್ರಾಂತ್ಯಗಳಲ್ಲಿ ಭೂಕಂದಾಯವು ಏರಿಸಲ್ಪಟ್ಟದ್ದರಿಂದಲೂ ಸರಕಾರದವರು ಅಂದಾಜುಮಾಡಿರುವ ಉತ್ಪತ್ತಿಗಿಂತ ರೂ. ೨,೮೨,೧೬೪ ಹೆಚ್ಚು ಭೂಕಂದಾಯವಾಗಿ ದೊರಕಿರುವದು. ಭೂಕಂದಾಯದ ಈ ಆಧಿಕ್ಯಾಂಶದಲ್ಲಿ ಸುಮಾರು ಸೇಕಡಾ ೭೦ರ ಭಾಗವು ಗುಂಟೂರು, ಉತ್ತರ ಆರ್ಕಾಡು, ಮಧುರಾ ಮತ್ತು ದಕ್ಷಿಣ ಕನ್ನಡ ಈ ಜಿಲ್ಲೆಗಳಿಂದಲೆ ದೊರಕಿರುತ್ತದೆ. ನಮ್ಮ ಜಿಲ್ಲೆಯಲ್ಲಿ ಭೂಕಂದಾಯವು ಹೇಗೆ ಏರಿತೆಂಬುದು ಜಿಲ್ಲೆಯವರು ಚೆನ್ನಾಗಿ ತಿಳಕೊಂಡಿರುವರು. ಕಳೆದ ಎರಡು ಮೂರು ವರುಷಗಳ ಹಿಂದೆ ಇಲ್ಲಿಯ ದರಕಾಸ್ತು ಕ್ರಮಗಳಲ್ಲಿ ಆದ ತಿದ್ದುಪಡಿಯಿಂದ ಜನರು ತಾವು ಕಾಯಂ ಆಗಿ ಅನುಭವಿಸಿ ಬರುತ್ತಿರುವ ಕುಮಕಿ ಸ್ಥಳಗಳು ಸಹ ಸಿಕ್ಕಿದವರಿಗೆ ದರಕಾಸ್ತಿನ ಮೇಲೆ ಕೊಡೋಣಾಗುವದೆಂಬ ಅಂಜಿಕೆಯಿಂದ ವರ್ಗದಾರರು ಕುಮಕಿ ಸ್ಥಳಗಳನ್ನು ಸಹ ದರಕಾಸ್ತು ಮಾಡಿಕೊಂಡರು. ಇವೇ ಮೊದಲಾದ ಕಾರಣಗಳಿಂದ ಬಂಜರು ಸ್ಥಳಗಳು ದರಕಾಸ್ತಾಗಿ ಹೋದ್ದರಿಂದ ಈ ಜಿಲ್ಲೆಯ ಭೂಕಂದಾಯವು ವಿಶೇಷವಾಗಿ ಏರಿತು. ಪರಂಬೋಗು ಸ್ಥಳಗಳಿಂದ ೬-೫೮ ಲಕ್ಷ ರೂ. ಭೂಕಂದಾಯವಾಗಿ ದೊರಕಿರುವದು. ಭೂಕಂದಾಯವಾಗಿ ಕೊಡಿಸಿದ ಜುಮ್ಲಾ ೭೭೮ ಲಕ್ಷ ರೂಪಾಯಿಗಳಲ್ಲಿ ಆಸ್ತಿಗಳ ಮಾರಾಟದಿಂದ ವಸೂಲಾದ ಕಂದಾಯದ ಮೊಬಲಗು ರೂ. ೪೦,೬೦೦ ಆಗಿರುತ್ತದೆ. ಸಾಗುವಳಿ ಭೂಮಿಯ ಅಭಿವೃದ್ಧಿಗಾಗಿ ಸಾಲಗಳು ರೈತರಿಗೆ ಕೊಡೋಣಾಗುವ ಆಕ್ಟು ಮೇರೆಗೆ ಸರಕಾರದವರು ತೆತ್ತ ಮೊಬಲಗು ರೂ. ೮೧೮ ಲಕ್ಷದಿಂದ ರೂ. ೭.೫೮ ಲಕ್ಷಕ್ಕೆ ತಗ್ಗಿದೆ. ಈ ಸಾಲಗಳನ್ನು ಪಡೆಯುವ ಕ್ರಮಗಳಲ್ಲಿ ಬೇಕಾದ ತಿದ್ದುಪಡಿಯನ್ನು ಮಾಡಿ ರೈತರಿಗೆ ಈ ಸಾಲದ ಪ್ರಯೋಜನವು ಹೆಚ್ಚೆಚ್ಚಾಗಿ ದೊರಕುವಂತೆ ಮಾಡುವದು ಆವಶ್ಯವಾಗಿರುವದು. ಸರಕಾರದವರೊಡನೆ ಸಾಲದ ಲೇವಾದೇವಿಗಳನ್ನು ಬೆಳೆಸುವುದಕ್ಕೆ ಬೇಕಾದ ತಿಳುವು ಸಹ ರೈತರಲ್ಲಿ ಸಾಮಾನ್ಯವಾಗಿ ಇಲ್ಲದ್ದರಿಂದ ಇಂಥವರಿಗೆ ಸರಕಾರದಿಂದ ಸಾಲ ಪಡೆಯುವುದಾಗಲಿ ಸರಕಾರದವರಿಗೆ ಹಣ ಸಾಲ ಕೊಡುವದಾಗಲಿ ಎಟುಕುವದು ಕಠಿಣವಾಗಿ ತೋರುವುದು.

ಸ್ಥಳಿಕ—ಮಂಗಳೂರು.

ಇಲ್ಲಿಯ ಗೌಡ ಸಾರಸ್ವತರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ದೇವಸ್ಥಾನದ ಮೊಕ್ತೇಸರರ ಕಮಿಟಿ ಮೆಂಬರರ ಮತ್ತು ಕೌನ್ಸಿಲಿನ ಸಭೆಯು ನಿನ್ನೆ ರಾತ್ರೆ ಕೂಡಿತ್ತು. ಯುದ್ಧಸಾಲವಾಗಿ ದೇವಸ್ಥಾನದ ಭಂಡಾರದಿಂದ ಹಣಕೊಡುವ ವಿಷಯವನ್ನು ಪರ್ಯಾಲೋಚಿಸುವದೆ ಈ ಸಭೆಯ ಉದ್ದೇಶವಾಗಿತ್ತು. ಮತಸಂಸ್ಥೆಗಳ ಪಾಲನೆಯನ್ನು ಅವರವರ ಧರ್ಮಕ್ಕೂ ಆಚಾರಗಳಿಗೂ ಅನುಸಾರವಾಗಿ ನಡಿಸುತ್ತ ಬರುವ ಮತ್ತು ದೇಶದಲ್ಲಿ ಶಾಶ್ವತವಾಗಿ ಶಾಂತತೆಯನ್ನು ನೆಲೆಗೊಳಿಸಿದ ಸರಕಾರದವರ ಉಪಕಾರವನ್ನು ಶ್ರೀ ದೇವರ ಸನ್ನಿಧಿಯಲ್ಲಿ ಬಹಳ ಕೃತಜ್ಞತೆಯಿಂದ ಸ್ಮರಿಸಿದರು. ಈ ಯುದ್ಧ ಸಾಲದ ಮೂಲಕ ಸಾಮ್ರಾಜ್ಯದ ಸರಕಾರದವರಿಗೆ ಬೇಕಾಗಿರುವ ಹಣವನ್ನು ಒದಗಿಸಿ ಕೊಡುವದರಲ್ಲಿ ಸರ್ವರೂ ಯಥಾನುಶಕ್ತಿ ದ್ರವ್ಯವನ್ನು ಕೊಡುವುದು ಕರ್ತವ್ಯವಾಗಿರುವದರಿಂದ ದೇವರ ಭಂಡಾರದಿಂದ ಸಹ ಹಣವನ್ನು ಕೊಡುವದು ಆವಶ್ಯವೆಂತ ಸಭಾಸದರೆಲ್ಲರೂ ಅಭಿಪ್ರಾಯಪಟ್ಟರು. ದೇವಸ್ಥಾನದಲ್ಲಿ ಶಾಶ್ವತವಾಗಿ ನಡಿಯಬೇಕಾದ ವಿನಿಯೋಗಗಳಿಗೆ ಸ್ಥಿರಾಸ್ತಿಗಳ ಮೇಲೆ ಹಾಕಿದಂಥಾ ಭಂಡಾರದ ಹಣದ ಉತ್ಪತ್ತಿಯು ದವಸಧಾನ್ಯಗಳ ಬೆಲೆಯು ಏರಿದ ಈ ಸಮಯದಲ್ಲಿ ಸಾಕಾಗುವದಿಲ್ಲವಾದ್ದರಿಂದ ದೇವಸ್ಥಾನದ ಕೆಲವು ನಗದು ಹಣಗಳನ್ನು ವ್ಯಾಪಾರಸ್ಥರಿಗೆ ಹೆಚ್ಚಿನ ಬಡ್ಡಿ ದರದಲ್ಲಿ ಕೊಟ್ಟು ಆ ದ್ವಾರಾ ಸಿಕ್ಕುವ ಹಣದಿಂದ ವಿನಿಯೋಗಗಳನ್ನು ಸಾಂಗವಾಗಿ ನಡಿಸುತ್ತಿರುವರು. ಮತ್ತು ಈ ಹಣವನ್ನು ಸಾಲವಾಗಿ ಪಡೆದು ದೇವಸ್ಥಾನದ ಭಜಕರಲ್ಲಿ ಮಧ್ಯಮ ಕನಿಷ್ಠ ತರಗತಿಯವರು ವ್ಯಾಪಾರ ನಡಿಸಿ ಜೀವನ ಮಾಡುತ್ತಿರುವರು. ಏಪ್ರಿಲ್ ಮೇ ತಿಂಗಳುಗಳಲ್ಲಿ ಹಣವು ಸಿಲುಕಿಸಲ್ಕಿರುವದು ಸಹ ಕಡಮೆ. ಈ ವಿದ್ಯಮಾನಗಳೆಲ್ಲ ಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟವು. ಆದರೆ ಯುದ್ಧಕ್ಕೆ ಸಾಲವಾಗಿ ಕೊಡುವಂಥಾದ್ದನ್ನು ಆದಷ್ಟು ಬೇಗನೆ ಕೊಡುವದು ಯುಕ್ತವಾದ್ದರಿಂದ ಪ್ರಕೃತಕ್ಕೆ ರೂ. ೫೦೦೦ನ್ನು ಯುದ್ಧಸಾಲವಾಗಿ ಕೊಡಬೇಕೆಂತ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿತು.

ಇಲ್ಲಿಯ ಡಿಸ್ಟ್ರಿಕ್ಟ್ ಎಸೋಶಿಯೇಶನಿನವರು ಪುತ್ತೂರು ಮತ್ತು ಕುಂದಾಪುರ ತಾಲೂಕು ಬೋರ್ಡುಗಳ ಪ್ರೆಸಿಡೆಂಟ ಸ್ಥಾನಕ್ಕೆ ಸರಕಾರದ ನೌಕರರಲ್ಲದವರನ್ನು ನೇಮಿಸಬೇಕೆಂತ ಜಿಲ್ಲಾ ಕಲೆಕ್ಟರರ ಮೂಲಕ ಮದ್ರಾಸು ಸರಕಾರದವರಿಗೆ ಸ್ವಲ್ಪ ಸಮಯದ ಮುಂಚೆ ಬರಕೊಂಡಿದ್ದರು. ಕುಂದಾಪುರ ತಾಲೂಕು ಬೋರ್ಡಿನ ಪ್ರೆಸಿಡೆಂಟರಾಗಿ ಖಾನ್ ಸಾಹೇಬ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರರವರು ಇದೇ ತಿಂಗಳ ತಾ. ೮ರಿಂದ ನೇಮಿಸಲ್ಪಟ್ಟಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಈ ನಮ್ಮ ಸಂತೋಷಕ್ಕೆ ಎರಡು ಕಾರಣಗಳಿರುವವು. ಪ್ರಜಾಜನರ ಮತವನ್ನು ಕಲೆಕ್ಟರರೂ ಸರಕಾರದವರೂ ಅಂಗೀಕರಿಸಿದ್ದು ಇದೊಂದು ಕಾರಣ. ಜೋತ್ಸ್ನ್ಯರೂ ನಮ್ಮೆಲ್ಲರ ಮನ್ನಣೆಗೆ ಪಾತ್ರರೂ ಪ್ರಜಾಸೇವೆಯನ್ನು ಮಾಡಬೇಕೆಂಬ ಉತ್ಸಾಹವುಳ್ಳವರೂ ಆದ ಖಾನ್ ಸಾಹೇಬರವರು ಈ ಸ್ಥಾನಕ್ಕೆ ನೇಮಿಸಲ್ಪಟ್ಟದ್ದು ಇದು ಇನ್ನೊಂದು ಕಾರಣ. ಜನರೇ ಓಟುಗಳ ಮೂಲಕ ಕುಂದಾಪುರ ಬೋರ್ಡ ಪ್ರೆಸಿಡೆಂಟ ಸ್ಥಾನಕ್ಕೆ ಉಮೇದ್ವಾರರನ್ನು ಆರಿಸಿ ತೆಗಿಯುವವಿದ್ದರೂ ಬಹುಶಃ ಕುಂದಾಪುರ ತಾಲೂಕಿನ ಪ್ರಾಂತ್ಯದವರೆಲ್ಲರೂ ಸಾಹೇಬರನ್ನೆ ಆರಿಸುತ್ತಿದ್ದರು. ಸಾಹೇಬರವರ ಉತ್ಸಾಹಕ್ಕೆ ತಕ್ಕಂಥಾ ಸಹಕಾರವೂ ಬೋರ್ಡ ಮೆಂಬರರಿಂದಲೂ ಸಂಬಂಧಪಟ್ಟ ಸರಕಾರದ ಅಧಿಕಾರಿಗಳಿಂದಲೂ ಕೊಡೋಣಾಗಿ ಸರಕಾರದ ನೌಕರರಲ್ಲದವರಿಗೆ ಇಂಥಾ ಅಧಿಕಾರವು ಕೊಡುವುದರಿಂದ ಬೋರ್ಡುಗಳ ಮೂಲಕ ಸಾಗುವಂಥಾ ಜನರ ಹಿತಸಾಧನೆಯು ಮತ್ತಷ್ಟು ಚೆನ್ನಾಗಿ ಸಾಗುವುದೆಂಬುವದನ್ನು ಉದಹರಿಸಿ ತೋರಿಸುವರೆಂಬುದಾಗಿ ಕೋರುತ್ತೇವೆ

ಬಂಟವಾಳ ಫಿರ್ಕಿನ ತಾಲೂಕು ಬೋರ್ಡ ಮೆಂಬರುತನಕ್ಕೆ ಮ. ರಾ. ರಾ. ನರಸಿಂಹ ಮೂರ್ತಿ ಭಂಡಾರಿ ಮತ್ತು ಮ. ರಾ. ರಾ. ಎಲ್ಲೂರು ಸಂಜೀವರಾವ್ ಇವರಿಬ್ಬರು ಉಮೇದ್ವಾರರಾಗಿರುವರೆಂಬುದಾಗಿ ತಿಳಿಯುತ್ತೇವೆ.

ಬೋಳಾರದ ಇಸಾಕ್‌ಪೆಂಗಳರವರು ಸುಲೆಮಾನ್ ಮತ್ತು ನೊರ್ಬರ್ಟ ಲೊಬೊ ಇವರಿಬ್ಬರ ಮೇಲೆ ಬಲಾತ್ಕಾರದಿಂದ ರಶೀದಿಯನ್ನು ಬರಸಿಕೊಂಡರೆಂದು ಕೊಟ್ಟ ಫಿರ್ಯಾದಿಯು ಸಾಕಷ್ಟು ರುಜುವಾತಿಲ್ಲದ್ದರಿಂದ ತೆಗೆದುಹಾಕೋಣಾಗಿರುವದು.

ಇಲ್ಲಿಯ ಗೌಡಸಾರಸ್ವತರ ಶ್ರೀ ವೆಂಕಟರಮಣ ದೇವಸ್ಥಾನದ ಸಮೀಪದ ಗೌಡಸಾರಸ್ವತ ಜಾತಿಯ ತುಳಸಮ್ಮ ಎಂಬ ಸ್ತ್ರೀಯು ತನ್ನ ಪ್ರಾಯಸ್ಥ ಮಗನೊಬ್ಬನಿಗೆ ಬಹಳ ವಿಶೇಷವಾದ ಜ್ವರಬಾಧೆಯು ಉಂಟಾದ್ದನ್ನು ನೋಡಿ ಮನಸ್ಸಿನಲ್ಲಿ ಬಹಳ ಕಳವಳಗೊಂಡು ಬಾವಿಗೆ ಹಾರಿ ಆತ್ಮಹತ್ಯವನ್ನು ಮಾಡಿಕೊಂಡಳು. ತಾಯಿಯು ತೀರಿಹೋದ ಎರಡು ಮೂರು ದಿನಗಳಲ್ಲಿ ವ್ಯಾಧಿತನಾದ ಮಗನೂ ಆಸ್ಪತ್ರೆಯಲ್ಲಿ ತೀರಿಹೋದನು. ದರಿದ್ರಾವಸ್ಥೆಯಲ್ಲಿರುವ ಈ ಕುಟುಂಬಿಕರ ಯಜಮಾನನಾದ ತಂದೆಯು ಈ ಮೊದಲೇ ಊರು ಬಿಟ್ಟುಹೋಗಿದ್ದನು. ಮೃತಪಟ್ಟ ಮಗನು ತನ್ನ ತಾಯಿಯ ಮತ್ತು ಚಿಕ್ಕ ಚಿಕ್ಕ ಮೂರು [illegible] ಸಹೋದರರ ಜೀವನವನ್ನು ಬಹಳ ಕಷ್ಟದಿಂದ ನಡಿಸುತ್ತಿದ್ದನು. [illegible] ವಿಯೋಗದಿಂದಲೂ ದರಿದ್ರಾವಸ್ಥೆಯಿಂದಲೂ ಮೊದಲೆ [illegible] ಸ್ತ್ರೀಯು ಪುತ್ರನ ಅಸ್ವಸ್ಥದ ಸ್ಥಿತಿಯನ್ನು ನೋಡಿಕೊಂಡು [illegible] ಸಹಿಸಲಾರದೆ ಆತ್ಮಹತ್ಯವನ್ನು ಮಾಡಿಕೊಂಡಳು.

ಈ ವಾರದಲ್ಲಿ ೪ ಕೇಸು [illegible]

ಪಂಚಮರಿಗೆ ನಮ್ಮ ಕರ್ತವ್ಯ.

ಪಂಚಮರೆಂಬುವವರು, ಆರ್ಯರು ಈ ದೇಶಕ್ಕೆ ಬರುವುದಕ್ಕೆ ಮೊದಲು ಈ ದೇಶದಲ್ಲಿ ಸ್ವತಂತ್ರರಾಗಿದ್ದವರೆಂದೂ, ಆರ್ಯರು ಅವರನ್ನು ಜಯಿಸಿ ಈ ದೇಶದಲ್ಲಿ ನೆಲೆಗೊಂಡರೆಂದೂ ತಿಳಿಯಬರುತ್ತದೆ. ಹಾಗಾದ ಪಕ್ಷದಲ್ಲಿ ಅವರ ಈ ದುಸ್ಥಿತಿಗೆ ನಮ್ಮ ಹಿರಿಯರೇ ಕಾರಣರೆಂದು ಗೊತ್ತಾಗುವುದು. ಆದ್ದರಿಂದ ಅವರಿಗೆ ನಾವು ಮಾಡಿರುವ ಅಪಕಾರವನ್ನು ತಿಳಿದು, ಅದನ್ನು ಪರಿಹರಿಸಿ ಅವರನ್ನು ಉತ್ತಮ ಸ್ಥಿತಿಗೆ ತಂದಲ್ಲದೆ ನಾವು ಮಾಡಿದ ಕರ್ಮವು ನಮ್ಮನ್ನು ಬಿಡದು — ನಾವು ಎಷ್ಟು ಶೀಘ್ರತೆಯಲ್ಲಿ ಈ ಅಂಶವನ್ನು ತಿಳಿದು ತಕ್ಕಂತೆ ವರ್ತಿಸುವೆವೊ ಅವರಿಗೂ ನಮಗೂ ನಮ್ಮ ದೇಶಕ್ಕೂ ಪ್ರಪಂಚಕ್ಕೂ ಅಷ್ಟು ಬೇಗ ಮೇಲುಂಟಾಗುವುದು. ವಿಶೇಷ ತಿಳುವಳಿಕೆ ಇಲ್ಲದ ಕೈಲಾಗದ ಮಕ್ಕಳ ಕ್ಷೇಮಸಮಾಚಾರವನ್ನು ವಿಚಾರಿಸಿಕೊಳ್ಳದೆ ಅವರನ್ನು ತಿರಸ್ಕಾರಭಾವದಿಂದ ಕಂಡು ಅವರನ್ನು ಹೊರ ಅಟ್ಟುವ ದೊಡ್ಡ ಮಕ್ಕಳ ವಿಷಯದಲ್ಲಿ ತಂದೆಯು ಯಾವ ಬಗೆಯಲ್ಲಿ ಯೋಚಿಸುವನೊ ಹಾಗೆಯೇ ಸರ್ವಲೋಕಗಳಿಗೂ ಸಮಸ್ತ ಪ್ರಾಣಿಗಳಿಗೂ ತಂದೆಯಾದ ಭಗವಂತನು ಸಹ ತನ್ನ ಮಕ್ಕಳಾದ ಬಾಲಜೀವರನ್ನು ನಿಕೃಷ್ಟವಾಗಿ ಕಾಣುವ ನಮ್ಮ ವಿಷಯದಲ್ಲಿಯೂ ಹಾಗೆಯೇ ಯೋಚಿಸುತ್ತದೆ. ಸಹಜವೆ? ಅವರು ನಮ್ಮನ್ನು ಗೌರವಿಸುವದಿಲ್ಲವೆಂದರೆ ಅವರಿಗೆ ನಾವು ಮಾಡಿರುವ ಉಪಕಾರವೇನು. ಉಪಕಾರವ ಹಾಗಿರಲಿ, ಅವರಿಗೆ ನಾವು ಮಾಡಬೇಕಾದ ಕರ್ತವ್ಯವನ್ನು ನಾವು ಮಾಡಿದರೆ ಸಾಕು. ನಮ್ಮ ಕೀಳ್ಪಟ್ಟವರಿಗೆ ಪ್ರೇಮದಿಂದ ನಮ್ಮ ಕರ್ತವ್ಯವನ್ನು ನಾವು ನೆರವೇರಿಸದಿದ್ದರೆ ನಮ್ಮ ಮೇಲ್ಪಟ್ಟವರಿಂದ ನ್ಯಾಯಪ್ರೇಮ ಸನ್ಮಾನಗಳನ್ನು ನಾವು ನಿರೀಕ್ಷಿಸುವುದು ಹೇಗೆ? ಆದ್ದರಿಂದ ನಾವು ಇತರರಿಂದ ಬಯಸುವುದನ್ನು ...

[illegible]

ಭಾವನಗರ ಕ್ಯಾಂಪ್, ತಾ. 4-5-17. — ಕೆ. ನರಹರಿ ಶಾಸ್ತ್ರಿ.

ಇಂಗ್ಲಿಷೂ ದೇಶಿಭಾಷೆಗಳೂ.

(ರೆ. ಅಣ್ಣಾಜಿರಾವು ಶಾಸ್ತ್ರಿ ಒಡ್ಡಮನೆ.)

[illegible]

... ಸೂಚನೆಯು ಉದ್ದೇಶ (National Education) ...

[illegible]

ಯನ್ನು ಉರುಹಾಕಬೇಕಾದುದು ಒಂದನೆಯ ಕೆಲಸ. ವಿಷಯವನ್ನು ತಿಳಿದುಕೊಳ್ಳಬೇಕಾದುದು ಎರಡನೆಯ ಕೆಲಸ. ಇದರಲ್ಲಿ ಹೃದಯಂಗಮವನ್ನು ಯಾರಿಂದ ಬಾಡಿಗೆಗೆ ತರುವುದು? ಹೃದಯಂಗಮವಾಗದ್ದು ಸಾರ್ವತ್ರಿಕವಾಗದೆಂಬುದು ಸಾಮಾನ್ಯನಿಯಮ. ಆಥಾತ್, ಶಿಕ್ಷಣದ ಎರಡು ಧ್ಯೇಯಗಳು ಸಾಧ್ಯವಾಗಬೇಕಾದರೆ ದೇಶಿಭಾಷೆಗಳ ದ್ವಾರಾ ವಿಷಯ ಜ್ಞಾನವನ್ನು ಕಲಿಸುವ ಕ್ರಮವನ್ನು ಜಾರಿಯಲ್ಲಿ ತರಬೇಕು. (ಮುಂದರಿಯುವುದು).

"ಕೆನರಾ ಕ್ಷತ್ರಿಯ ಪರಸ್ಪರ ಸಹಾಯಕ ಸಂಘ"

ದಕ್ಷಿಣ ಕನ್ನಡ ಜಿಲ್ಲೆಯ ಕ್ಷತ್ರಿಯರ ಪರವಾಗಿ "ಕೆನರಾ ಕ್ಷತ್ರಿಯ ಪರಸ್ಪರ ಸಹಾಯಕ ಸಂಘ" ಎಂಬ ಒಂದು ಸಂಘವು ಕಾಸರಗೋಡು ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವುದು. ಸಂಘದಲ್ಲಿ ಒಂದು ಪಾಲಿಗೆ ರೂಪಾಯಿ ೧೦-೦-೦ರ ೨೦೦೦ ಪಾಲುಗಳಿರುವುವು. ಮೆಂಬರರಾಗತಕ್ಕವರು ಪಾಲಿನ ಬೆಲೆಗಳನ್ನು ಪ್ರವೇಶ ಹಾಸಲು ರೂಪಾಯಿ ೧-೦-೦ನ್ನು ಕೂಡಿಸಿ ಏಕಗಂಟಿನಿಂದ ಅಥವಾ ಐದು ಕಂತುಗಳಾಗಿ ಐದು ವರುಷದ ವಾಯಿದೆಯಿಂದ ತೀರಿಸಬಹುದು. ಪೂರ್ಣ ವಸೂಲಿ ಕೊಟ್ಟ ಒಂದು ಪಾಲಿಗೆ ರೂಪಾಯಿ ೧೦೦-೦-೦ರ ಸಾಲವು ದೊರಕುತ್ತದೆ. ಸ್ಥಾಪಿಸಲ್ಪಟ್ಟಂದಿನಿಂದ ಈ ತನಕ ಸ್ವಲ್ಪ ಸಮಯದೊಳಗೆ ೧೨೦ರ ಮೇಲೆ ಪಾಲುಗಳು ಖರ್ಚಾಗಿ ಸುಮಾರು ರೂಪಾಯಿ ೪೦೦೦-೦-೦ದ ಲೇವಾದೇವಿಯು ನಡೆಯುತ್ತಿದೆ. ಈ ಸಂಘವು ವೃದ್ಧಿಯಾಗುತ್ತ ಬಂದಲ್ಲಿ ಸ್ವಜಾತಿಯ ಮೆಂಬರರಲ್ಲಿ ಅನ್ಯೋನ್ಯ ವಿಶ್ವಾಸ, ಪ್ರೀತಿ, ಮಿತವ್ಯಯ, ಒಗ್ಗಟ್ಟು ಹೆಚ್ಚಿ ಜಾತಿಯು ಊರ್ಜಿತ ಸ್ಥಿತಿಯನ್ನು ಹೊಂದುವುದರಲ್ಲಿ ಸಂಶಯವಿರದು. ಆದುದರಿಂದ ಈ ಜಿಲ್ಲೆಯ ಎಲ್ಲಾ ಕಡೆಯಿಂದಲೂ ಜಾತಿಯ ಗೃಹಸ್ಥರು ಮೆಂಬರರಾಗಿ ಸೇರಿ ಸಂಘವನ್ನು ವೃದ್ಧಿಪಡಿಸುವುದರಲ್ಲಿ ಶ್ರದ್ಧೆ ತೆಗೆದುಕೊಳ್ಳುವುದು ಎಲ್ಲರ ಕರ್ತವ್ಯ. ಸಂಘವನ್ನು ಸ್ಥಾಪಿಸುವುದರಲ್ಲಿ ಹೆಚ್ಚು ಸಮಯದಿಂದ ಪ್ರಯತ್ನ ತೆಗೆದುಕೊಂಡ ಮ॥ ರಾ॥ ರಾ॥ ಬಿ. ರಾಮಚಂದ್ರರಾಯರಿಗೆ ಜಾತಿಯ ಮೆಂಬರರು ತುಂಬಾ ಕೃತಜ್ಞರಾಗಿರುವರು.

ಪ್ರತಿ ಒಬ್ಬ ವೈದಿಕನಿಗೂ ಗೃಹಸ್ಥನಿಗೂ ಆವಶ್ಯಕವಾದ—

ಶ್ರೀಹರಿನೃಸಿಂಹಾಷ್ಟಕಸ್ತೋತ್ರಂ; ಕನ್ನಡ ಅರ್ಥ ಸಹಿತ;

ಪ್ರತಿ ೧ಕ್ಕೆ ೬ ಪೈ.

ನರಸಿಂಹ ವಾಸುದೇವ ಭಟ್ಟ, ರಥಬೀದಿ, ಮಂಗಳೂರು.

Subba Rau Pai Memorial Fund.

NOTICE.

Applications in the prescribed form for scholarships out of the Ammembal Subba Rau Pai Memorial Fund from deserving poor students of the Goud Saraswath Brahmin community should reach the Secretary of the Fund by the end of May 1917.

Subba Rau Pai Memorial Fund Office, Mangalore; *16th April 1917.*

M. Mukunda Rao, *Secretary.*

WANTED

A **Writer** for Kathlekhan Coffee Estate in Kadur District, 18 miles from Tarikere Railway Station; must have good knowledge of Coffee planting and Accounts etc.

For further particulars please apply to:—

Messrs. Peirce, Leslie & Co., Ltd.

MANGALORE.

ಜೀನಸು ಧಾರಣೆ.

(ರವಿಂ).

ಮಸ್ಸಿಕ ಅಕ್ಕಿ		6—3—0 ರಿಂದ	6—7—0
ಸುದ್ದು ಸುಗ್ಗಿ		5—14—0 „	6—2—0
ರಾಶಿ		5—8—0 „	5—10—0
ಅವ್ವಲ್ ಬೆಳ್ತಿಗೆ		6—4—0 „	6—8—0
ಸುಡು ಬೆಳ್ತಿಗೆ		5—10—0 „	6—12—0
ರಂಗೂನು ಬೆಳ್ತಿಗೆ ಗೋಣಿ ೧ರ		9—6—0 „	9—10—0
ಗೋದಿ ಗೋಣಿ ೧ರ		12—12—0 „	12—8—0
ಕುರುಳಿ ಗೋಣಿ ೧ರ		5—8—0 „	6—6—0
ಕಡಲೆ ಗೋಣಿ ೧ರ ಬೊಂಬ್ಯ		9—0—0 „	10—0—0
ಹೆಸರು ಗೋಣಿ ೧ರ			10—8—0
ತೊಗರಿ ಬೇಳೆ ಗೋಣಿ ೧ರ	11—0—0	12—8—0 „	15—8—0
ಉದ್ದು ಗೋಣಿ ೧ರ		11—8—0 „	11—12—0
[illegible] ಖಂಡಿ ೧ರ			„ 37—8—0
ಉಪ್ಪು ಗೋಣಿ ೧ರ		5—0—0 „	5—8—0
ಕೊಬ್ಬರಿ ಖಂಡಿ ೧ರ		70—0—0 „	75—0—0
ಕೊಬ್ಬರಿಹಿಂಡಿ ಖಂಡಿ ೧ರ		15—8—0 „	16—0—0
ಸಕ್ಕರೆ ಖಂಡಿ ೧ರ ಬೊಂಬ್ಯ		28—12—0 „	35—0—0
ಕೊಬ್ಬರಿ ಎಣ್ಣೆ ಮಣ ೧ರ		5—8—0 „	6—4—0
ಎಳ್ಳೆಣ್ಣೆ ಮಣ ೧ರ(ಕುರಾಸನ)			„ 4—6—0
ಚಿಮ್ಣಿ ಎಣ್ಣೆ ಪೆಟ್ಟಿಗೆ ೧ರ		6—11—0 „	7—9—0
ಮೊರಿಸ್ ಸಕ್ಕರೆ ಮಣ ೧ರ		5—7—0 „	5—8—0
ಕಾಫಿ ಖಂಡಿ ೧ರ		150—0—0	165—0—0
ಹೊಸಪೇಟೆಗೋಟು ಖಂಡಿ೧ರ		77—0—0 „	83—0—0
ಗೇರುಬೀಜ ಮುಡಿ ೧ರ		1—12—0 „	1—14—0
ಕಪ್ಪು ಖಂಡಿ ೧ರ		105—0—0 „	110—0—0
ಕಾಂಬ್ಳ ತೆಗಡು ಮುಡಿ ೧ರ		31—0—0 „	34—8—0
[illegible] ಮುಡಿ ೧ರ			„ 34—0—0
[illegible] ೧ರ		23—8—0 „	24—0—0
[illegible] ಮುಡಿ ೧ರ			„ 5—4—0
[illegible]			240—0—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಕಟವಾರಿ ಗಜಕರ್ಣವು ಈ ಮಲಮಿನ ಒಂದೆ ೨ಡು ಸಾರಿ ಹಚ್ಚೋಣದಿಂದಲೇ ಶಪ್ಪವಾಗುತ್ತವೆ. ೨೦—೨೫ ವರ್ಷಗಳ ಹಳತ, ಕ್ಷಿಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ)ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,
ಗಿರಗಾಂವ ನಂ. ೪ ಮುಂಬಯಿ.

ಇಕ್ಲಿಪ್ಸ ಪಿಲ್ಸ ಎಂಬ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದರ ಅತಿಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುದ್ದು, ಮೂತ್ರಕೋಶ, ಅನ್ನಕೋಶ, ಕಲಿಜೆ ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಬೇರೊಂದಿಲ್ಲ. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು, ಈ ಮದ್ದಿನಿಂದ ಬೇಗನೇ ಉಪಶಮನವಾಗುವದು. ಮೂರೇ ದಿವಸದ ಚಿಕಿತ್ಸೆಯಿಂದ ಚಳಿಜ್ವರ, ಮಲೇರಿಯ ಜ್ವರ ಮಣಿಯುವದು. ಚಿಕಿತ್ಸಾ ಕ್ರಮ ಸೀಸೆಯೊಂದಿಗೆ.

ಸೀಸೆ 1ಕ್ಕೆ ಆಣೆ 6 ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 4—8—0.

ಇಕ್ಲಿಪ್ಸ ಬಾಮ್

ಇದರ ಉಪಯೋಗದಿಂದ ವಾತ, ಅರ್ಧಾಂಗವಾತ, ಗಂಟುನೋವು, ಸೊಂಟನೋವು, ಎದೆನೋವು, ಕೈಕಾಲುಗಳ ಎಳತ, ಕಫ, ಬೀಗು, ತಲೆಸಿಡಿತ, ತಲೆನೋವು, ಹುಳುಕು, ಕುರಿಕಜ್ಜಿ, ಮೂಲವ್ಯಾಧಿ, ಬೆಂಕಿಯ ಬೊಕ್ಕೆ, ಮೊಡವೆ, ಜೇಣು, ಚಾದರಹುಳ, ಜೇನುಹುಳುಗಳ ಕಡಿತ, ಇತ್ಯಾದಿ ರೋಗಗಳು ತಪ್ಪದೆ ಗುಣವಾಗುತ್ತದೆ. ಕ್ರಯ ಕರಡಿಗೆ 1ಕ್ಕೆ ಆಣೆ 8. ವಿ. ಪಿ. ಬೇರೆ. 1 ಡಜನ್ ಕರಡಿಗೆಗಳಿಗೆ ವಿ. ಪಿ. ಸಹಿತ ರೂ. 4-12-0.

ಶ್ರೇಷ್ಠ ತಾಜಾ ಯುಕಲಿಪ್ಟಸ್ ತೈಲ 5 ಆಣೆ. ಟೋರಚ್ ರೂ. 1-8-0; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಇಕ್ಲಿಪ್ಸ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಎಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನನ್ನ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನನ್ನ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟಿನವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ

ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾನಾ ವಿಧಗಳ ವೈದ್ಯರ ಸಮಯವನ್ನು ಕಾದು ನೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗ್ಮೋರಿ ನಂ. 2, ಚೆನ್ನಪಟ್ಟಣ ಇವರು ಬರೆಯುತ್ತಾರೆ. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು [illegible] ಅಜೀರ್ಣ, ಮಲಬದ್ಧತೆ, ಹೊಟ್ಟೆಯ ನೋವು, ಚಳಿ, ಜ್ವರ, [illegible] ರೋಗ, ಮಕ್ಕಳ ಎಳವು ವಾಯುಗಳಲ್ಲೂ ಗುಣವಾಗಿರುತ್ತದೆ. [illegible] ವೈದ್ಯರು [illegible] ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. [illegible] ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆಯುತ್ತಾರೆ. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. [illegible]

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. [illegible]

ವಿಳಾಸ— ಶ್ರೀ [illegible] ವೈದ್ಯಶಾಲಾ, ಮೈಸೂರು.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯೂ (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದುಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ [illegible] ಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟು, ಸ್ವತ್ತುಗಳ ಪರಭಾರೆ ಆಕ್ಟು, ದ್ರೋಹದ [illegible] ಮತ್ತು ಲಿಮಿಟೇಶನ್ ಆಕ್ಟು, ಸ್ಟ್ಯಾಂಪ, ಕೋರ್ಟುಫೀ, [illegible] ಹಿಂದೂ ಲಾ, ಬೋಧಿ ಆಕ್ಟು, ಬ್ರೀಚ್ ಆಫ್ ಕಂಟ್ರಾಕ್ಟ್ [illegible] ಆಕ್ಟು, ರೆವಿನ್ಯೂ ಕೋಡ್, [illegible] ಸ್ಮಾಲ್ ಕಾಸ್ ಕೋರ್ಟ ಕೋಡ್, [illegible] ಕೊಡುವ ಕೋಡ್, ಮುಂತಾದವುಗಳ [illegible] ನಮೂನೆಗಳು ಮತ್ತು ದಸ್ತಾವೇಜು 40 [illegible] ಇದು ಪ್ರತಿಯೊಬ್ಬನ [illegible]

[illegible] 1—8—0. [illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವುದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲ ವಾರ್ಧಿಕ್ಯ ಇವುಗಳನ್ನು ನಿವಾರಣೆ ಮಾಡುವದರಲ್ಲಿ ಜ್ಞಾನಕಶಕ್ತಿಯನ್ನು ವೃದ್ಧಿಮಾಡಿ ಬುದ್ಧಿಗೆ ತೀಕ್ಷ್ಣವನ್ನುಂಟುಮಾಡುವದರಲ್ಲಿಯೂ, ಮುಲಸಂಬಂಧವನ್ನು ನರಗಳ ಬಲಹೀನತೆಯನ್ನೂ ಹೋಗಲಾಡಿಸುತ್ತವೆ. 40 ಮಾತ್ರೆಗಳ ಡಬ್ಬಿ ಕ್ರಯ: ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯಸಲಹೆಯು ಮುಫತ್ತಾಗಿ ದೊರೆಯುವದು.

144 ಪುಟಗಳ ವೈದ್ಯವಿದ್ಯಾ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಜೇನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಸೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದಸೆಟ್ಟು ೧ಕ್ಕೆ ೨—೦—೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರದ ರೂಪಾಯಿಗೆ ೪ ತೊಲೆ, ಮಧ್ಯಮ ರೂಪಾಯಿಗೆ ೮ ತೊಲೆ, ತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿಗೆ ೧೬ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಧರ್ಮಾರ್ಥವಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO.,
Choukhambay,
BENARES CITY.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯ ಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ಶೀರ್ಥಮುತ್ತೂರು, ಶೀರ್ಥಹಳ್ಳಿ.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ| ಲಲ್ಲುಬಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಮ್ ರೋಜ್ ಆರ್ ಜೋಶಿರಪೆರ್, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಟುವೆರಿ:—ಮಿ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ.ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವರಿಗೆ ನ್ಯಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುತವೆ. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

"ತೋಮ್ಸನರ ಅಯೋಡೈಸಿಡ್ ಸರ್ಸಪರಿಲ್ಲಾ."

ಈ "ಸರ್ಸಪರಿಲ್ಲಾ"ಯಿಂದ ಮಾನವ ದೇಹದಲ್ಲಿಯ ರಕ್ತವು ಶುದ್ಧಿಕರಿಸಿ, ದೇಹದಲ್ಲಿಯ ಸಕಲ ತರದ ಉಷ್ಣಕಾರಕವಾದ ದೋಷಗಳು ನಿರ್ಮೂಲವಾಗುವವು. ಹೆಚ್ಚು ಕಾಲಗಳಿಂದ ಶರೀರದಲ್ಲಿ ವ್ಯಾಪಿಸಿಕೊಂಡಿರುವ (Syphillis) ಉಪದಂಶ (ಉಷ್ಣ)ದಿಂದ ದೇಹದಲ್ಲಿ ಬರುವ ಬೊಬ್ಬೆಗಳು, ಜಖಂಗಳು, ಬಾಯಿಗೆ ಮತ್ತು ಅಂಗಗಳಿಗೆ ತೂತು ಬೀಳೋಣ, ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ವೈಕೈಸಂದು ನೋಯೋಣ, ಕೈಕಾಲುಗಳಿಗೆ ಘಾಯಬೀಳೋಣ, ಮೇಹದಿಂದ ಕೈಕಾಲು ಗಂಟುಗಳು ನೋಯುವದು, ಉರಿಯುವದು, ಕೈಗಳ ಮೇಲೆ ಕರೇ ಕಲೆ ಬೀಳುವದು ಮುಂತಾದ ಉಷ್ಣಪ್ರಕೃತಿಯ ರೋಗಗಳು ಗುಣವಾಗಿ, ರಕ್ತವು ಶುದ್ಧವಾಗಿ, ಶರೀರ ಪುಷ್ಟಿಯಾಗುವದಕ್ಕೆ ಈ "ಸರ್ಸಪರಿಲ"ಯು ಉತ್ತಮೋತ್ತಮ ಔಷಧಿಯಾಗಿದೆ.

ಇವಕ್ಕೆ ಸೀಸೆ ೧ರ ಬೆಲೆ ರೂ. 1—4—0. ಅಂಚೆ ವೆಚ್ಚ 0—4—0.

ದಿ ಉಲನ್ ಮಾರ್ಟ್,
ಮಂಗಳೂರು, ದ. ಕ.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಸೋಲ್ ಏಜಂಟರು:— ಜಿ. ಎಸ್. ಸೋಜ ಮತ್ತು ಕಂಪೆನಿ,
ಮಂಗಳೂರು.

ಮದರಾಸ್ ಮೇಲ್ ವಾಚ್.

೫ ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಥಾಳಿ, ಥೋಳೀರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲು 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರವಾಣಿ 1, ಗಜ್ಜಿ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟಿದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು [illegible] ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ರೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ½ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1 0-12-0. ವಿ. ಪಿ. ಚಾರ್ಜ್ 0-4-0 ಬೇರೆ.

ಪ್ರಧಾನ ವಿಕ್ರೇತರು:—

ಎಚ್. ಆರ್. ಮೋದಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.

H. R. MODY & Co.,
10 Princess Street, BOMBAY.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಪು ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಿಗೆ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

ಮೈಸೂರು ದಸರಾ ಪ್ರದರ್ಶನದಲ್ಲಿ ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಕಳೆಕೆಮ್ಮು, ಕ್ಷಯ ಮತ್ತು ಉಬ್ಬಸ ರೋಗಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ದೀರ್ಘವಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ:**—ಪ್ರಸವವಾದ ದಾಗಾಯಿತು 30 ದಿನಗಳವರೆಗೆ ಉಪಯೋಗಿಸುವದರಿಂದ ಬೇರೆ, ಲೇಹ್ಯ ಮದ್ದುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರತ್ಯಕ್ಷವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ಪರಿಕ್ಷೆ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೇರೆ ರೋಗಗಳನ್ನು ಇರುವವರೂ, ಉದರದಂಡದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಲ್. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ **ಕಲ್ಯಾಣ** ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಡೈಮಂಡ್ ಸೋಪುಗಳು.

ಈ ಡೈಮಂಡ್ ಸೋಪುಗಳು ಪ್ರತಿ ಒಬ್ಬರಿಗೂ ಹೆಚ್ಚು ಕಾಲದಿಂದ ತಿಳಿದವುಗಳೇ ಆಗಿವೆ.

ಈ ಡೈಮಂಡ್ ಸೋಪುಗಳು "ಬೆಂಗಾಲ್ ಡೈಮಂಡ್ ಸೋಪು ಕಂಪನಿಯಲ್ಲಿ ತಯಾರಿಸಲ್ಪಟ್ಟದ್ದಾಗಿವೆ. ಈ ಸೋಪುಗಳ ವಿಷಯವಾಗಿ ಅನೇಕ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ದೊರಕಿವೆ. ಉಪಯೋಗಕ್ಕೆ ತುಂಬಾ ಅನುಕೂಲ. ಕ್ರಯದಲ್ಲಿ ಸಹಾ ಸುಲಭ. ಈ ಕೆಳಗೆ ಕಾಣಿಸಿದ ಸೋಪುಗಳು ಬಿಕರಿಗೆ ಸಿದ್ಧವಾಗಿವೆ. ಡೈಮಂಡ್ ಬಾತ್ ಸೋಪು, ಡೈಮಂಡ್ ಮಸ್ಕ, ಡೈಮಂಡ್ ಲೆವೆಂಡರ್, ಡೈಮಂಡ್ ಅತ್ತರು ಸೋಪು, ಡೈಮಂಡ್ ಹಳ್ದಿ ಸೋಪು ಮತ್ತು ಡೈಮಂಡ್ ರಂಗು ಸಾಬೂನುಗಳು. ಕ್ರಯ ವಗೈರೆ ಬರೆದು ತಿಳಕೊಳ್ಳಬಹುದು.

ವಿಕ್ರೇತರು:—

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ.

ಈ ಸಾರ್ಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಮುಖ್ಯವಾಗಿ ಕೆಟ್ಟ ರಕ್ತ ಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಮುಕ್ತಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ಏಕ್‌ಜಿಮದಿಂದುಂಟಾದ ವ್ಯಾಧಿ, ಸಿಫಿಲಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದಮ್ಯತೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿಗಳಿಗೆ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ದಾರಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ 1ಕ್ಕೆ ರೂ. ೦—೧೪—೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಚ್ಚೆ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸೋರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ೧ಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ

ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣ ಇಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಬೇಸಿಗೆಕಾಲದಲ್ಲಿ ಅನುಕೂಲವಾದ ಶರಬತ್ತುಗಳು.

ಶ್ರೀಯುತ ಕರ್ನಿಕ ಬ್ರದರ್ಸರವರು ಶಾಸ್ತ್ರೀಕ್ತ ಪರಿಶೋಧನೆಯಿಂದ ತಯಾರಿಸಿರುವರು. ಇದು ಎಂದಿಗೂ ಕೆಡಲಾರದಂತ ದ್ರಾವಕವಾಗಿದೆ. ಇದು ಮಾಧುರ್ಯವಾಗಿ ತುಂಬಾ ಪರಿಮಳಿಸುವದು. ಈ ಕೆಳಗೆ ಕಾಣಿಸಿದ ಹೆಸರಿನಲ್ಲಿದೆ.

ಲಿಮನ್, ರೋಜ್‌ಬರೀ, ರೋಜ್ ಮತ್ತು ಪೊಮಗ್ರೆನೆಟ್ ಆಗಿರುವದು. 1 ಬಾಟ್ಲಿ ಸೋಡಾ ಯಾ 1 ಟಂಬ್ಲರ್ ನೀರಿನಲ್ಲಿ 1 ಚಮಚ ಈ ಶರಬತ್ತಿನ ದ್ರಾವಕವನ್ನು ಹಾಕಿದ್ದಲ್ಲಿ ಇದು ಮಧುರವಾಗಿ ದಣುವನ್ನು ಪರಿಹರಿಸುವದು. ಪ್ರತಿ ಒಬ್ಬರು ಇದರ ವಿಷಯವಾಗಿ ಹೊಗಳುತ್ತಿರುವರು. ಶೀಸೆ 1ರ ಬೆಲೆ ಆಣೆ 9.

ವಿಕ್ರೇತರು:—

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. [illegible] ಮಿಶ್ರವಾದ ಈ ಔಷಧದ ಬರೇ 48 ದಿವಸಗಳ ಸೇವನೆಯಿಂದ ಶ್ವಾಸಕಾಸ, ಕೆಮ್ಮು, ದಮ್ಮು, ಕ್ಷಯ, ಕ್ಷಯರೋಗವು ಮೊದಲಾದ [illegible] ಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು [illegible] ಮೂತ್ರಕೃಚ್ಛ್ರ, ಅತಿಮೂತ್ರ ಮುಂತಾದ ಎಲ್ಲಾ ತರದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. [illegible]

ಶೀಸೆ 1ರ ಕ್ರಯ 14 ಆಣೆ. [illegible]

[illegible]

ವಿಳಾಸ:— [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಕವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ

೨. ಪ್ರಮೇಹಹರಿವು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

೯. ವಾಸಾವಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. ಸನ್ನೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದ, ...ವ್ಯಾಧಿಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M NATH & CO *Ayurvedic Chemists*
Vepery Post MADRAS,

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜ ಸುಂಧರಿ ರೋಜ

ಅಂಬು ಮನೋಹರವೂ ಮೋಹಕರವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಡಮೆ ತರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಾನವನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ, ಕೂದಲುಗಳು ಅಂದವಾಗಿ ಕಾಣಬೇಕಾದರೆ ಅವು ದೀರ್ಘವಾಗಿಯೂ ಮೃದುವಾಗಿ ಕಂಗೊಳಿಸುತ್ತಿರಬೇಕು. ಇಲ್ಲದೆ ತಲೆಯನ್ನು ... ಕಟ್ಟಿದಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆಯಿಸುತ್ತಿದಲ್ಲದೆ ಸರ್ವ ವ್ಯಾಧಿಗಳನ್ನು ಹೋಗಲಾಡಿಸುವುದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದುದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ... ಅದರಿಂದ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ... ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸುತ್ತಲೆ ... ಕೂದಲನ್ನು ಕಂಚಿನಂತೆ ... ಒಟ್ಟಿನಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು, ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು ಮಿದುಳಿಗೆ ತಂಪನ್ನುಂಟು ಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿ ರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಿಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂದಗಿಚ 6, ಕನ್ನಡಿಕಪ್ಪಿನ ಭರಣೆ 1, ಕುಂಕುಮದ ಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ವಾಚಸಾಪ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಕ್ರಯ. 50 ಬಹುಮಾನಗಳ ಸಹಿತ ರೂ. 1—0—0.

ವಿಳಾಸ:— ವಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಹೊಸ ಪುಸ್ತಕ! 'ಹಿಂದೂ ಲಾ' ಹೊಸ ಪುಸ್ತಕ!

ವಿಳಾಸ:—
ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
ಬೆಂಗಳೂರು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಶುಕ್ಲದೋಷ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮನಗೊಳಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಆವ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕರ್ಮುರ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—3—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಉಪಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಡಿ ರೋಗಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂದರಿರೋಜ

ಎಂಬ ಮನೋಹರವೂ ಮೋಹಕರವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಡಿಮೆ ದರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. [illegible]

ಈ ತೈಲವನ್ನು ಉಪಯೋಗಿಸುತ್ತಿದ್ದರೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಲಾಡಿಸುವದು. [illegible] ಕೂದಲುಗಳಿಗೆ ಈ ತೈಲವನ್ನು [illegible] ಅವು ಪುಷ್ಟಿಯಾಗಿ ಬೆಳೆದು [illegible] ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸುವ [illegible] ಕೂದಲನ್ನು ಕೆಂಚಾಗಿರುವ ಕಪ್ಪು ಬಣ್ಣದಿಂದೊಡನೆ [illegible] ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು ಮೆದುಳಿಗೆ ತಂಪನ್ನುಂಟು ಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಿಡಿ 6, ಕಣ್ಣು ಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅದ್ದಾ 1, ತಾಂಬೂಲ ಮುತ್ತು 30, ದಂತದ ಬಾಚಣಿಗೆ 1, ಸೊಗಸಾದ ರಾಡರಾಗೆ ಕಾರನೇಷನ್ ಪೆಟ್ಟಿಗೆ 1, ಬಣ್ಣದ ಪೋಸ್ಟು ಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1. ಕ್ರಯ 50 ಬಹುಮಾನಗಳ ಸಹಿತ ರೂ. 1—0—0.

ವಿಳಾಸ:— ವಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಹೊಸ ಪುಸ್ತಕ! 'ಹಿಂದೂಲಾ' ಹೊಸ ಪುಸ್ತಕ!

ಇದುವರಿವಿಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು [illegible] ದಾಯಭಾಗ ಪಾಲು ಪಾರಿಖತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯು ದಾವಾ ಅರ್ಜಿಗಳು, ಕ್ರಯದೋಗ್ಯ ಆಧಾರ ಅನ್ವಾದಿಪತ್ರಗಳು, ಗುರುಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಒಕ್ಕಣೆಗಳು ವಿಶದವಾಗಿ ಅಚ್ಚುಮಾಡಲ್ಪಟ್ಟಿದೆ. ಕ್ರಯ ರೂ. ೧—೮—೦.

ವಿಳಾಸ:—ಬಿ. ನರಸಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು ಸಿಟಿ.

ಪ್ರಖ್ಯಾತಪಟ್ಟ ಫೋಟೋ ಗ್ಯಾಸ್‌ದೀಪಗಳು:—
[illegible]

ಸ್ಟಾನ್ ಕಂಪೆನಿ,

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.

STANY BROTHERS
Sole Agents
M. O. C. [illegible]

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಾನಾ ಹೇರ್ ಆಯಿಲ್ „	1— [illegible]
ಮಹಾರಾಣೀ ಹೇರಾಯಿಲ್ „	0— [illegible]
ಕಾಮಿನಿಯಾ ಹೇರಾಯಿಲ್ „	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 6 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 3 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0— 6—0
ಆದಾಯಿ ಸುದುರಿ (ದ್ವಿತೀಯ ಮುದ್ರಣ)	0— 8—0
ಅಮೃತ ಪುಳಿನ „	0—10—0
ಇಂದಿರಾ ಕೃ. ಮು.	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0— 4—0
ಪ್ರತುಲ್ಲೆ „ „	0—12—0
ಅಂಬಾಲಿಕೆ (ಹೊಸ ನಾವೆಲ್)	0— 1—6
ಕುಸುಮ „	0— 1—0
ರಾಧಾನಾಥ „	0— 2—0
ಸುಭದ್ರೆ „	0— 5—0
ಚಂದ್ರಹಾಸ (ಹೊಸ ಕಥೆ)	0— 1—0
ಧ್ರುವ „	0— 2—0
ಮಕ್ಕಳ ತಿದ್ದುವಿಕೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಆಕ್ಷೀಜ ವ್ಯಾಕರಣ	1— 0—0
ಸಂಗೀತ ಪ್ರಮಾಣಸಾರ	1— 4—0
ಮಾತೃನಂದಿನಿ (ದ್ವಿತೀಯ ಮುದ್ರಣ)	1— 4—0
[illegible]	1— 2—0
[illegible]	0—10—0
[illegible]	[illegible]

ಚಂದಾ:— ವರ್ಷ 1ಕ್ಕೆ ರೂ. 1-8-

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧. ಮಂಗಳೂರು, ತಾರೀಕು ೨೫ನೇ ಮೇ ಶುಕ್ರವಾರ ೧೯೧೭. ಸಂಚಿಕೆ ೨೧.

ಸಾಲದ ಅರ್ಜಿಗಳನ್ನು ಸ್ವೀಕರಿಸೋಣಾಗುವ ಅವಧಿಯು ಇನ್ನು ಸ್ವಲ್ಪ ದಿವಸಗಳಲ್ಲಿಯೆ ಮುಗಿಯುವದು.

ತ್ವರೆಮಾಡಿರಿ!

ಒಳಗಡೆ ಸಾಲ ಕೊಡಲು ವಾಗ್ದಾನ ಮಾಡಿದವರ ಹೆಸರು ಪಟ್ಟಿಗಳನ್ನು ಓದಿ ನೋಡಿರಿ. ನಿಮ್ಮ ಹೆಸರು ಅದರಲ್ಲಿರುವದೋ ಎಂಬದನ್ನು ತಿಳಿಯಿರಿ.

ಸರ್ವರಿಗೂ ಸಾಧ್ಯ!

ಹನಿಗಳು ಕೂಡಿಯೆ ಹಳ್ಳವಾಗುವದು!

ಹಣವಂತರು ಮಾತ್ರ ಯುದ್ಧಸಾಲದಲ್ಲಿ ಹಣ ಹಾಕುವದೆಂಬ ತಪ್ಪು ಗ್ರಹಿಕೆಯು ಸರ್ವಥಾ ಇರಕೂಡದು. ಭಿಕ್ಷಾಪತಿಯೂ ಲಕ್ಷಾಧಿಪತಿಯೂ ತಮ್ಮ ಯಥಾನುಶಕ್ತಿ ಸಹಾಯಮಾಡಲು ಅವಕಾಶವಿದೆ.

ರೂ. 10, 20, 50 ಈ ಮೊಬಲಗುಗಳ ಲೆಕ್ಕವೇ ವಿಶೇಷವಾಗುವದು.

ಅಲ್ಪ ಮೊಬಲಗುಗಳ ಸಾಲ ಪಡಿಯೋಣಾಗುವದೋ ಎಂಬ ಅಂಜಿಕೆಯಿಂದ ಹಿಂಜರಿಯಬೇಡಿರಿ. ಸಾಮ್ರಾಜ್ಯದ ರಕ್ಷಣೆಗಾಗಿ ದೇಶದ ಭದ್ರತೆಗಾಗಿ ಈ ಸಾಲವು ಬೇಕಾಗಿರುವದು.

ಭದ್ರವಾದ ಜವಾಬ್ದಾರಿ. ಖಂಡಿತವಾದ ಬಡ್ಡಿ. ಈಗಲೇ ಬೇಕಾಗಿರುವದು.

ಮನೋಲ್ಲಾಸಿನಿ ತೈಲ!

ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಭ್ರಮೆ, ಕಣ್ಣುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕುಂದಿಹೋಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದೆಂತಲೂ ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನು [illegible] ಗಿರುವ ಕೂದಲನ್ನು ಕಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆಂತಲೂ ಈ ತೈಲವನ್ನು ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ 1 ಸೀಸೆಗೆ ರೂ. 0—12—0. (ವಿ. ಪಿ. ಖರ್ಚು 4 ಆಣೆ).
„ 3 ಸೀಸೆಗಳಿಗೆ„ 2—0—0. „ „ 8 „

ಬೆಲೆ ಸುಲಭ! ಚಿನ್-ಚಿನ್-ಬಾಂ. ಗುಣ ಅಧಿಕ!

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ಚಳಿ, ಛಾಯ, ಚೇಳು ಕಡಿತ, ಕೃಷ್ಣ ಮುಂತಾದ್ದು ತಕ್ಷಣ ಗುಣ. ಬೆಲೆ 1 ಡಬ್ಬಿಗೆ ಒಂದೇ ಆಣೆ, ಡಜನ್ 1ಕ್ಕೆ ರೂ. 0—10—0. ಅಂಚೆ ಹಾಸಲು ಬೇರೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್.

ಸೂಚನೆ:—ಅನೇಕ ತರದ ಮಾತ್ರೆಗಳು, ತೈಲಗಳು, ಘೃತಗಳು, ಲೇಹ್ಯಗಳು, ಅರಿಷ್ಟಗಳು, [illegible] ಕೆಳಗಿನ ವಿಳಾಸ [illegible].

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
4. [illegible] ಮಂಗಳೂರು.

ಒಳ್ಳೆ ಗೊಬ್ಬರ! ಅವ್ವಲ್ ಈಟು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ, ಮೀನ-ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು, ಎಷ್ಟು ಉಪಯೋಗಿಸಬೇಕು, ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ. ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಕುಂಬಳೆ ಪರಂಚ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ, ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಭಾಮಿನಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೦ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವುದು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 640/16.

ಮಾಣಿಕೊಳಲು ಮೈದಿನ್ ಸಾಹೇಬ, ಲವಲ ಮಹಮ್ಮದ್ ಸಾಹೇಬರ ಮಗ, ಕುಂದಾಪುರ ತಾಲ್ಲೂಕು [illegible] ಗ್ರಾಮ. — ವಾದಿ

ಮತ್ತು

ಮುರ್ಡೇಶ್ವರ ಅಬ್ಬುಮಹಮ್ಮದ್ ಯಾನೆ ಬಾಪುಸ್ಯಾಬಾ, ಅರಮಾರ ಪೈದಿನ್ ಸಾಹೇಬರ ಮಗ, ಹೊನ್ನಾವರ ತಾಲೂಕು ಮುರ್ಡೇಶ್ವರ ನವ್ಯಾತ್ ಕೇರಿಯಲ್ಲಿರುವವ. ... ... — 1ನೇ ಪ್ರತಿವಾದಿ

ವಾದಿಯ ತಂದೆ ಮೃತನಾದ ಲವಲ್ ಮಹಮ್ಮದ್ ಸಾಹೇಬಗೆ 1ನೇ ಪ್ರತಿವಾದಿಯು ಬರಕೊಟ್ಟ ಕಂತು ಕರಾರಿನ ಬಾಬ್ತು 1913, 14, 15, 16ನೇ ಇಸವಿಗಳ ಕಂತಿನ ಅಸಲು ಬಡ್ಡಿ ಹಣ ರೂಪಾಯಿ 112ನ್ನು ಬರಮಾಡಿಕೊಳ್ಳುವರೆ ದಾಖಲುಮಾಡಿದ ಸದರಿ ವ್ಯಾಜ್ಯವನ್ನು ತಾ. 6—6—17ಕ್ಕೆ ತನಿಕಿಗೆ ಸ್ಥಿರವಾದರಿಂದ 1ನೇ ಪ್ರತಿವಾದಿಯು ತಕರಾರು ಉದಾಹರಣೆ ಇರುವ ಪಕ್ಷಕ್ಕೆ ಅದನ್ನು ಆ ದಿವಸ ಪೂರ್ವಾಹ್ನ 10 ಗಂಟೆಗೆ ಕೋರ್ಟು ಮುಂದೆ ಹಾಜರುಪಡಿಸಬೇಕಾಗಿ ಈ ಮೂಲಕ ತಿಳಿಸೋಣಾಗಿದೆ.

Coondapoor, 18—5—17. K. K. Bhandari, *Pleader for Plf.*

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡವೆಯು ಒಳ್ಳೆಯದೊ ಕೆಡುಕೊ ಎಂಬದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೋಹನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ

ಅತ್ಯುತ್ತಮವಾದ ಗೊಬ್ಬರಗಳು.

1.	ನೈಟ್ರೇಟ್ ಒಫ್ ಸೋಡಾ	Nitrate of Soda.
2.	ಸುಪರ್ ಫೊಸ್‌ಫೇಟ್ಸ್	Super Phosphates.
3.	ಬೇಸಿಕ್ ಸ್ಲೆಗ್	Basic Slag.

ಇವುಗಳು ತೊಪ್ಪೆ ಸೆಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಖಂಡುಗ ಹಟ್ಟಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುಪ್ಪೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಸಿ ಹಾಕುವುದಕ್ಕಿಂತ ಒಂದು ಹಿರಳು ಸೌಳುಪ್ಪನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಿಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲ ಮಾಹಿತಿಯನ್ನು ಕೊಡುವ ಸೂಚನಾಪತ್ರಗಳು ಬೇಕಾದ್ದಕ್ಕೆ ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. ಕೆಳಗೆ ಕಾಣಿಸಿದ ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ, ಸಾಕಷ್ಟು ರಖಮಾಗಿ ಪಡಕೊಳ್ಳಬಹುದು.

ತಮ್ಮ ಅನುಭವವನ್ನು ಕುರಿತು ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ತೇರಬೀದಿ, ಮಂಗಳೂರು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಲೋ. ಸೆ. ಟೆಕ್ಸ್ಟ್ 4 ಆಣೆ, ಡಿಟೋ ನೋಟ್ಸು ಮ|| ವೆಂಕಟಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟ್ 2½ ಆಣೆ, Rama & Sita 4 as. (Do Notes 6 as., General Eng. Questions & Answers from 1901-1917 6 as., by Mr. Piobamuttu, B. A.) Gen. English by Mr. Chennakesaviah Rs. 1-2-0, ಧೂಡಿಮಣಿ 1 5 ಆಣೆ, ಡಿಟೋ IIನೇದು 5 ಆಣೆ, ಪ್ರಶ್ನೋತ್ತರ ಲೆಕ್ಕಬೋಧಿನಿ ರೂ. 1-8-0, ನವೀನ ಗಣಿತ 8 ಆಣೆ, [illegible] 10¼ ಆಣೆ, [illegible] 5 ಆಣೆ, ಡಿಟೋ 2ನೇದು 7 ಆಣೆ, ಡಿಟೋ 3ನೇದು 8½ ಆಣೆ, ದ್ವಿತೀ. ಪುಸ್ತಕ 2½ ಆಣೆ, ಮಕ್ಕಳ ತಿದ್ದುವಿಕೆ 12 ಆಣೆ, ಲೆಕ್ಕಬೋಧಿನಿ 8½ ಆಣೆ, ಕನ್ನಡ ವ್ಯಾಕರಣ 5 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

ಈ ಪುಸ್ತಕದಲ್ಲಿ:—೧ ಪಿನಲ್‌ಕೋಡು, ೨ ರೂಲ್ಸ್ ಆಕ್ಟು, ೩ ಎಕ್ಸೈಜು ರೆಗ್ಯುಲೇಶನ್, ೪ ಆಯುಧಗಳ ರೆಗ್ಯುಲೇಶನ್, ೫ [illegible] ರೆಗ್ಯುಲೇಶನ್, ೬ ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಶನ್, ೭ [illegible] ರೆಗ್ಯುಲೇಶನ್, ೮ [illegible] ರೆಗ್ಯುಲೇಶನ್, ೯ [illegible] ಲೇಶನ್, ೧೦ [illegible] ಆಕ್ಟು, ೧೧ [illegible] ಆಕ್ಟು, [illegible] ದವಂತಿವಾಗಿವೆ. ಕ್ರಯ ರೂ. 2—8—0.

ಎಸ್. ಎನ್. ರಾವ್ ಬ್ರದರ್ಸ್,
[illegible]

THE CANARA BANK. LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು	ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು	,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು	,,	225,000—0—0
Paid up Capital	200,225—0—0	ಆಗತ ಮೂಲ ಧನವು	,,	200,225—0—0
Deposits	323,038—15—10	ಠೇವಣಾತಿಯಾಗಿ ಕೊಡಲ್ಪಟ್ಟ ಮೊಬಲಗುಗಳು		323,038—15—10
Reserve Fund	50,003—2—5	ರಕ್ಷಿತ ಧನವು		50,003—2—5

25% of the net profits are added annually to the **Reserve Fund.** Rs28,485/ have been invest ed in **Government Paper** of the face value of Rs. 29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ 28,185—0—0 ಸರಕಾರದ ರೂ. 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿ ಇಡಲ್ಪಟ್ಟಿರುವುದು.

Dividends of not less than 6%. paid during the **past years** and a bonus of 1%. to 2%. paid in **addition** during the last eight years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಗಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee.

ಸ್ಥಿರ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 5ರ ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

Short-notice Deposits requiring one weeks notice of withdrawal after one month received @ 2½% per annum at the discretion of the managing committee

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

Current Deposit Account opened free of charge

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣವಾಗಬೇಕು. ಆ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.

Mangalore, 1st May 1917.

P. Gopal Naik,
Secretary

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಬೃಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಕಣ್ಮನಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ: —

ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
ಬೆಂಗಳೂರು ಸಿಟಿ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ ಅಮೃತ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಟಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಜಾನು ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ಕೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಿಡಿಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಲೆ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ
ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ
ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ,



ಪ್ಲೇಗ್ ನಿವಾರಕ. ಪ್ರತಿದಿನ ಸೇವಿಸುವ ಪ್ರಕಾರ ತಕ್ಕೊಳ್ಳುವುದರಿಂದ ಪ್ಲೇಗ್ ಜ್ವರವು ಹತ್ತಿರ ಬಾರದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಪಡಿಸುತ್ತದೆ. ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತದಿಂದ ಈ ಪ್ಲೇಗ್ ಟ್ಯೂಬೊ ಎಂಬ ಗಡ್ಡೆಯನ್ನೂ ಹುಣ್ಣನ್ನೂ ಕಪಡಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಯ
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ: —"ಪಂಡಿಟ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಸೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಯಮ್. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುವಾಸಿ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0-12-0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ ೪ ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ —

ಉನ್ಮಾದಿನಿ	0— 6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0— 8—0
ಅವ್ಯಕ್ತ ಪುಳಿನ ,,	0—10—0
ಇಂದಿರಾ ಕೃ. ಮು.	0— 6—0

(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).

ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0— 4—0
ಕ್ರತುಲ್ಲಿ ,, ,,	0—12—0
ಅಂಬಾಲಿಕೆ (ಹೊಸ ನಾವಲ್)	0— 1—6
ಕುಸುಮ ,,	0— 1—0
ರಾಧಾನಾಥ ,,	0— 2—0
ಸುಭದ್ರೆ ,,	0— 6—0
ಚಂದ್ರಹಾಸ (ಹೊಸ ಕಥೆ) ,,	0— 1—0
ಧ್ರುವ ,,	0— 2—0
ಪಾಠಶಾಲಾ ಶಿಸ್ತು (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಆಟ್ಲಸ್ ಮಂಜರಿ	1— 0—0
,, ಸಂಗೀತ ಸಮಯಸಾರ	1— 4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1— 4—0
ವಿಕ್ರಮ	1— 2—0
ಚಂದ್ರವದನಾ	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಶೀಟ್ 18×22	0— 1—0

ಯೂರೋಪಿನ ಮಹಾ ಯುದ್ಧ.

ನಿನ್ನೆ ದಿನ ಬಂದ ಪಶ್ಚಿಮ ರಣರಂಗದ ವಾರ್ತೆಯಿಂದ ಮಿತ್ರರು ಶತ್ರುಗಳ "ಹಿಂಡನ್‌ಬರ್ಗ್‌ಲೈನ್" ಎಂಬ ಸೇನಾ ನೆಲೆಗಳ ಬಹಳ ವಿಸ್ತಾರವಾದ ಸಾಲನ್ನು ಕೈವಶಮಾಡಿಕೊಂಡಿರುವರಾಗಿ ತಿಳಿದುಬರುತ್ತದೆ. ಬುಲ್ಲೆಕೋರ್ಟ್‌ದ ಒಂದು ಮೈಲು ಪೂರ್ವದಿಂದ ಈ ಸಾಲು [illegible] ವರೆಗೆ ವಿಸ್ತರಿಸಿಕೊಂಡಿರುವದು. ವಾಯುನಾವೆಗಳ ಸಹಾಯದಿಂದ ಬ್ರಿಟಿಷರು ಶತ್ರುಗಳ ಸೇನಾ ಮುಂಭಾಗದ ಕಂದಕಗಳ ಮೇಲೆ ತಮ್ಮ ದೊಡ್ಡ ತೋಪುಗಳನ್ನು ಹಾರಿಸುತ್ತಿರುವರು. ಜರ್ಮನರ ೭ ವಾಯುನಾವೆಗಳನ್ನು ಬ್ರಿಟಿಷರು ನೆಲಕ್ಕೆ ಇಳಿಸಿಬಿಟ್ಟಿರುವರು.

ಕ್ರೆಯೊನ್ ಪ್ರಾಂತ್ಯದಿಂದ ಫ್ರೆಂಚರನ್ನು ಹೊರಪಡಿಸಬೇಕೆಂಬ ಶತ್ರುಗಳ ಪ್ರಯತ್ನವು ನೆರವೇರಲಿಲ್ಲ. ಶತ್ರುಗಳು ಈ ಪ್ರಯತ್ನವನ್ನು ನಡಿಸುತ್ತಿದ್ದಾಗ ಫ್ರೆಂಚರು ಶತ್ರುಗಳ ಸೇನೆಯ ಎಡದ ನೆಲೆಯನ್ನು ಕೈವಶಮಾಡಿಕೊಂಡಿರುತ್ತಾರೆ.

ಬ್ರಿಟಿಷರ ವಾಯುವಿಮಾನಕಾರರಲ್ಲಿ ಬಹಳ ಸಮರ್ಥನಾದ ಕೆಪ್ಟನ್‌ಹೊಲ್ ಎಂಬುವನ ಪರಾಕ್ರಮದ ವೃತ್ತಾಂತವು ಲಂಡನಿನಿಂದ ಈ ರೀತಿ ಬಂದಿರುವದು. ಇದೇ ತಿಂಗಳ ತಾ. ೭ರಲ್ಲಿ ಈತನು ಇನ್ನೊಬ್ಬ ವಿಮಾನಕಾರನ ಕೂಡ ವಾಯುನಾವೆಯಲ್ಲಿ ಹೊರಟು ಶತ್ರುಗಳ ನಾಲ್ಕು ನಾವೆಗಳ ಮೇಲೆ ಮುಂದರಿಸಿ ಹೋದನು. ಇವನ ಜತೆಗಾರನು ಶತ್ರುಗಳ ಒಂದು ವಿಮಾನವನ್ನು ಮುಂದುಬಿಡುವಷ್ಟರೊಳಗೆ ಈತನ ಕೈಗಂಟು ಮುರಿದುಹೋದ್ದರಿಂದ ಈತನು ಸೇನಾ ಶಿಬಿರಕ್ಕೆ ಬಂದು ಕೂಡಬೇಕಾಯಿತು. ನಂತರ ಕೆಪ್ಟನ್‌ಹೋಲನೇ ಕಾಳಗವನ್ನು ನಡಿಸಿದನು. ಹೋಲ್‌ನಿಗೆ ಏನೂ ಸಂಭವಿಸಿಯದೆ ಎಂಬುದು ನಂತರದಲ್ಲಿ ಗೊತ್ತಾಗಲಿಲ್ಲ. ಈತನು ನಾಶಪಡಿಸಿದ ಶತ್ರುಗಳ ಆಕಾಶನಾವೆಗಳ ಸಂಖ್ಯೆಯು ಒಟ್ಟಿಗೆ ೪೧ ಆಗಿರುವದೆಂತ ಗೊತ್ತಾಗುತ್ತದೆ.

ಡನ್‌ಕರ್ಕಿಗೆ ಹೋಗುತ್ತಿದ್ದ ಜರ್ಮನರ ಡಿಸ್ಟ್ರಾಯರ ನಾವೆಗಳ ನೌಕಾ ಸಮೂಹವನ್ನು ನೋಡಿಕೊಂಡು ಫ್ರೆಂಚರ ನಾಲ್ಕು ಟೊರ್ಪೆಡೊ ನಾವೆಗಳು ಇವುಗಳನ್ನು ಇದಿರಾಡಿದವು. ಕದನವು ಪೂರ್ಣವಾಗುವಷ್ಟರೊಳಗೆ ಶತ್ರುಗಳ ನಾವೆಗಳು ತಮ್ಮ ನೌಕಾ ನೆಲೆಗೆ ಓಡಿಹೋದವು.

ಇಸೊಂಜೊ ರಣರಂಗದಲ್ಲಿ ಇಟೆಲಿಯನರು ಮಿತ್ರರು ಪಶ್ಚಿಮ ರಣರಂಗದಲ್ಲಿ ಕದನಗಳನ್ನು ನಡಿಸುವಂತೆಯೇ ಕಾಳಗಗಳನ್ನು ನಡಿಸುತ್ತಿರುವರು. ಇಟೆಲಿಯನರು ತಮ್ಮ ಮುಂದಿರುವ ಸ್ಲಾವಾ ಎಂಬ ನದಿಯನ್ನು ದಾಟಿಕೊಂಡು ಕಳ್ ಪ್ರಾಂತ್ಯದಲ್ಲಿ ಶತ್ರುಗಳ ಮೇಲೆ ಬಿದ್ದು ಇಸೊಂಜೊ ನದಿಯ ಪೂರ್ವ ದಡದಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿರುವರು. ಈ ರೀತಿ ಇಟೆಲಿಯನರು ೩೦ ಮೈಲುಗಳ ವಿಸ್ತೀರ್ಣಕ್ಕೆ ಮುಂದರಿಯುತ್ತ ಹೋಗಿರುವರು. ೮೦೩೧ ಶತ್ರುಗಳ ಸೇನಿಕರನ್ನು ಸೆರೆಹಿಡಿದಿರುವರು.

ವ್ಯಾಷಿಂಗ್ಟನ್ನು ಪ್ರಭುಗಳಿಗೆ ಬಂದ ವಾರ್ತೆಯಲ್ಲಿ ಸಹ ಸಬ್‌ಮೆರೈನುಗಳ ಮೂಲಕ ನಾಶವಾಗುವ ಹಡಗುಗಳ ಸಂಖ್ಯೆಯು ಕಡಮೆಯಾಗಿದೆಂತ ತಿಳಿದು ಬರುತ್ತದೆ.

~~~~~~

ವಿದೇಶ ವೃತ್ತಾಂತ.

ಜನರಲ್ ಪರ್ಶಿಂಗ್ ಎಂಬವರ ಕೈಕೆಳಗೆ ಅಮೇರಿಕದ ಸಂಯುಕ್ತ ಸಂಸ್ಥಾನದಿಂದ ಮಿತ್ರರ ಸಹಾಯಾರ್ಥವಾಗಿ ಸೇನೆಯು ಫ್ರಾನ್ಸಿಗೆ ಆದಷ್ಟು ಬೇಗನೆ ಕಳುಹಿಸಿ ಕೊಡೋಣವಾಗಬೇಕೆಂದು ನಿಶ್ಚಯಿಸಲ್ಪಟ್ಟಿರುವದು. ಈ ಮೊದಲೆ ಇಂಜನೀಯರರುಗಳ ೯ ಪಡೆಗಳು ಅಮೇರಿಕದಿಂದ ಫ್ರಾನ್ಸಿಗೆ ಕಳುಹಿಸಲ್ಪಟ್ಟಾಗಿದೆ.

"ಕಂಡೆನ್ಸಡ್ ಮಿಲ್ಕ್" ಎಂಬ ದಪ್ಪನೆಯ ಹಾಲು ಮತ್ತು "ಜೆಮ್" ಅಂದರೆ ಮುರಬ್ಬಗಳನ್ನು ತಯ್ಯಾರಿಸುವವರ ಹೊರತು ಸಕ್ಕರೆಯನ್ನು ಉಪಯೋಗಿಸುವ ಇತರ ಎಲ್ಲ ಕೈಗಾರಿಕೆಯವರು ಸಕ್ಕರೆಯ ಉಪಯೋಗದ ಸೇಕಡಾ ೪೦ರ ಮಿತಿಯನ್ನು ಸೇಕಡಾ ೨೫ಕ್ಕೆ ಇನ್ನೂ ಮಿತಪಡಿಸಬೇಕೆಂತ ಆಹಾರ ಸಂಗ್ರಹಗಳ ಅಧೀಸರರ ಆಜ್ಞೆಯು ಅಂಗ್ಲೆಂಡದಲ್ಲಿ ಆಗಿದೆ.

ಮಹಾ ಯುದ್ಧದ ಬಗ್ಗೆ ಬೇಕಾದ ಸೇನಿಕರನ್ನು ಜನರಿಂದ ಸಂಗ್ರಹಿಸುವ ಬಗ್ಗೆ ಕೆನಡಾ ದೇಶದ ಸರಕಾರದವರು ಜನರನ್ನು ಕಡ್ಡಾಯವಾಗಿ ಸೇನೆಗೆ ಸೇರಿಸಿಕೊಳ್ಳುವ ಪದ್ಧತಿಯನ್ನು ಸದ್ಯದಲ್ಲಿ ಜಾರಿಗೆ ತರುವರು.

ಸಬ್‌ಮೆರಾಯಿನುಗಳನ್ನು ಬ್ರಿಟಿಷರು ಕಂಡುಹಿಡಿದು ಕೆಲವು ನವೀನ ವಿಧಾನಗಳಿಂದ ಅವುಗಳನ್ನು ನಾಶಪಡಿಸುತ್ತಿರುವರೆಂತ ತಿಳಿದು ಬರುತ್ತದೆ. ಇದೇ ತಿಂಗಳ ತಾ. ೨೦ರಿಂದ ೪೮ ರೊಳಗೆ ಬ್ರಿಟಿಷರು ಜರ್ಮನರ ೯ ಸಬ್‌ಮೆರಾಯಿನುಗಳನ್ನು ನಾಶಪಡಿಸಿರುವರು.

ರುಷ್ಯದಲ್ಲಿ ಸೋಶಿಯಲಿಸ್ಟ್ ಪಂಗಡದ ಆರು ಜನ ಪ್ರತಿನಿಧಿಗಳುಳ್ಳ ಮಂತ್ರಿಮಂಡಲವು ಸ್ಥಾಪಿಸಲ್ಪಟ್ಟಿರುವದು. ಅಮೇರಿಕದ ಸಂಯುಕ್ತ ಸಂಸ್ಥಾನದ ಸಹಯುಕ ಸೇನೆಯ ವೈದ್ಯ ಅಧಿಕಾರರುಗಳ ಒಂದು ಪಂಗಡವು ಬ್ರಿಟನ ಬಂದರಿಗೆ ಬಂದು ತಲ್ಪಿರುತ್ತದೆ.

ಸಾಮ್ರಾಜ್ಯದ ಆಯಾ ಕಡೆಗಳ ಸರಕಾರದ ಮಂತ್ರಿಗಳು, ಬ್ರಿಟನ ಪ್ರಧಾನ ಮಂತ್ರಿಗಳು ಮತ್ತು ಇತರ ಮಂತ್ರಿಗಳು, ಹಿಂದೂಸ್ಥಾನದ ಸರಕಾರದವರಿಂದ ನೇಮಿಸಲ್ಪಟ್ಟ ಹಿಂದೂಸ್ಥಾನದ ಪ್ರತಿನಿಧಿಗಳು ಕೂಡಿರುವಂಥಾ "ಇಂಪೀರಿಯಲ್ ವಾರ್ ಕೆಬಿನೆಟ್"ನಂಥಾ ಸಂಸ್ಥೆಯ ಅಧಿವೇಶನಗಳನ್ನು ಪ್ರತಿ ವರುಷದಲ್ಲಿಯೂ ಅಗತ್ಯವಿದ್ದರೆ ಆಗಿಂದಾಗ್ಗೆ ಸಹ ಆಮಂತ್ರಿಸುವುದು ಯುಕ್ತವಾಗಿರುವದೆಂಬ ಬ್ರಿಟಿಷ ಮಂತ್ರಿಮಂಡಲದ ನಿರ್ಣಯವು ಬ್ರಿಟಿಷ ಪಾರ್ಲಿಮೆಂಟು ಸಭೆಯಲ್ಲಿ ಆದರಣೆಯನ್ನು ಹೊಂದಿಕೊಂಡಿದೆ.

ಬಂಗಾಳದ ಗವರ್ನರರಾಗಿದ್ದ ಕಾರ್ಮಿಕೆಲ್ ಪ್ರಭುಗಳವರು ಬ್ರಿಟಿಷ ಪಾರ್ಲಿಮೆಂಟಿನ ಪ್ರಭುಸಭೆಯ ಮೆಂಬರರಾಗಿ ಸಭೆಯಲ್ಲಿ [illegible].

ಐರಿಸ್ ಹೋಮ್‌ರೂಲಿನ ವಿಷಯ ಮಿ। ಲೊಯಿಡ್ ಜೋರ್ಜರವರು ಕೆಲವು ವ್ಯಾಖ್ಯೆಗಳನ್ನು ಸೂಚಿಸಿ ಒಂದು ಪತ್ರವನ್ನು ಮಿ। ರೆಡ್‌ಮೊಂಡ್‌ರವರಿಗೆ ಬರೆದಿರುತ್ತಾರೆ. ಆರು ಅಲ್‌ಸ್ಟರ್ ಕೌಂಟಿಗಳ ಹೊರತು ಬಾಕಿ ಐರ್ಲೆಂಡಕ್ಕೆ ಪಾರ್ಲಿಮೆಂಟು ಸಭೆಯನ್ನು ಸ್ಥಾಪಿಸುವ ಸೂಚನೆಯು ಇದರಲ್ಲಿರುವದು.

ಅಮೇರಿಕದ ಸಂಯುಕ್ತ ಮಹಾ ಸಂಸ್ಥಾನಗಳಿಂದ ಬ್ರಿಟಿಷ ನೌಕಾಪಡೆಯ ಸಹಾಯಾರ್ಥವಾಗಿ ಡಿಸ್ಟ್ರಾಯರ್ ಹಡಗುಗಳು ಕೆಲವು ಬಂದು ತಲಪಿರುವವು.

ರುಷ್ಯ ದೇಶಕ್ಕೆ ೨೦ ದಶಲಕ್ಷ ಡಾಲರಿನ ಹಣವನ್ನು ಅಮೇರಿಕದವರು ಸಾಲವಾಗಿ ಕೊಟ್ಟಿರುವರು.

ಅಮೇರಿಕದ ಸಂಯುಕ್ತ ಮಹಾ ಸಂಸ್ಥಾನಗಳಿಂದ ಮಿತ್ರರ ಸಹಾಯಕ್ಕಾಗಿ ಬರುವ ಸೇನೆಯು ಒಟ್ಟಿಗೆ ೪೦,೦೦೦ ಇರುವದು.

ಆಸ್ಟ್ರೇಲಿಯದಲ್ಲಿಯೂ ಜನರನ್ನು ಕಡ್ಡಾಯವಾಗಿ ಸೇನೆಗೆ ಸೇರಿಸಿಕೊಳ್ಳುವ ವಿಧಿಯು ಇನ್ನು ಸದ್ಯದಲ್ಲಿ ಜಾರಿಗೆ ಬರುವದೆಂಬುದಾಗಿ ತೋರುತ್ತದೆ.

[illegible]

[illegible] ಮೈನಿಗಳು ಮುಳುಗಿ ಸಮುದ್ರದಲ್ಲಿ ಬಿದ್ದುಹೋದವೆಂತ ಲಂಡನಿನಲ್ಲಿ ಪೋಸ್ಟ್ ಮಾಸ್ಟರ್ ಜನರಲವರು ಪ್ರಕಟಿಸಿರುತ್ತಾರೆ.

ಏಪ್ರಿಲ್ ತಿಂಗಳಲ್ಲಿ ವೈರಿಗಳ ಸೇನೆಯಲ್ಲಿ ಘಾಯಪಟ್ಟವರ ಮತ್ತು ಮಡಿದುಹೋದವರ ಸಂಖ್ಯೆಯು ೧೩೯,೫೩೪ ಆಗಿರುವದು. ಇದರಲ್ಲಿ ಮಡಿದು ಹೋದವರ ಸಂಖ್ಯೆಯು ೧೦೬,೯೬೪ ಆಗಿರುತ್ತದೆ.

ಬೆಲ್ಜಿಯಂ ಸಂಕಷ್ಟ ನಿವಾರಣೆಯನ್ನು ಸಂಪೂರ್ಣವಾಗಿ ಅಮೇರಿಕದ ಸರಕಾರದವರು ಕೈಕೊಂಡಿರುವದರಿಂದ ಈ ಬಗ್ಗೆ ಏರ್ಪಡಿಸಲ್ಪಟ್ಟಿದ್ದ ನೆಶನಲ್ ಕಮಿಟಿಯವರು ತಮ್ಮ ಕಾರ್ಯನಿರ್ವಾಹವನ್ನು ಪ್ರಕೃತಕ್ಕೆ ಬಾಕಿಯಿಟ್ಟಿರುವರು.

ಆಸ್ಟ್ರಿಯಹಂಗೇರಿಯದ ವಿದೇಶ ಮಂತ್ರಿಗಳೂ ಮತ್ತು ರಾಯಭಾರಿಗಳೂ ಜರ್ಮನ ಸಭದವರು ಇದ್ದಲ್ಲಿಗೆ ಹೋಗಿ ಕೌಂಟ್‌ವೊನ್‌ಬೆಡ್‌ಮನ್, ಹೊಲ್‌ವೆಗ್‌ರನ್ನು ಕಂಡು ಮಾತಾಡಿದರೆಂತಲೂ, ಸಂಧಾನ ಪ್ರಸ್ತಾಪಗಳು ಇಲ್ಲಿ ವಾದಿಸಲ್ಪಟ್ಟವೆಂದೂ ಹೇಳುತ್ತಾರೆ.

ಸ್ವೀಡನ್ನಿಯ ಎಂಬ ತಟಸ್ಥ ಯುರೋಪಿಯ ದೇಶದ ಕ್ರಿಸ್ತಿಯಾನಾ ಎಂಬಲ್ಲಿಯ ಗಾ ಕಾರ್ಖಾನೆಯವರು ಕಲ್ಲಿದ್ದಲು ಇಲ್ಲದ್ದರಿಂದ ಕಾರ್ಖಾನೆಗಳ ಕೆಲಸವನ್ನು ನಿಲ್ಲಿಸಿಟ್ಟಿರುವರು.

ಜಪಾನು ದೇಶದಲ್ಲಿ ಮೋಟಾರು ಬಂಡಿಗಳನ್ನು ಕಟ್ಟಲು ಪ್ರಾರಂಭಿಸಿರುತ್ತಾರೆ. ಅಮೇರಿಕದಲ್ಲಿ ದೊರೆಯುವ ಬಂಡಿಗಳಿಗಿಂತ ಈ ಬಂಡಿಗಳು ಸುಲಭ ಕ್ರಯದಲ್ಲಿ ದೊರೆ ಸಾಧ್ಯವಾಗುವದಂತೆ.

~~~~~~

ಉತ್ತರ ಹಿಂದೂಸ್ಥಾನ.

ಕಲ್ಕತ್ತೆಯ ಹರ್ರೀಸನ್ ರಸ್ತೆಯಲ್ಲಿ ನಡದ ದರೋಡೆ ಕಳವು ಮತ್ತು ಕೊಲೆ ಇವುಗಳ ವಿಷಯ ಗುಪ್ತಪೋಲೀಸಿನವರು ಮಾಡುತ್ತಿರುವರು. ಒಂದು ಮೋಟಾರ್ ಕೆಬನ್ನು ಡಿಸಿತ್ತಿದ್ದ ಬಂಗಾಳಿ ಯುವಕನನ್ನು ಕೈದುಮಾಡಿರುತ್ತಾರೆ. ಮೋಟಾರ್ ಕೆಬಿನ ಮಾಲಿಕನನ್ನು ಸಹ ಕೈದುಮಾಡಿ ಆತನ ಮನೆಯನ್ನು ಜಡ್ತಿ ಮಾಡಿ ೩೦,೦೦೦ ರೂಪಾಯಿಗಳ ಕ್ರಯಬಾಳುವ ಆಭರಣಗಳನ್ನು ಹಿಡಿದಿರುವರು. ಈ ದರೋಡೆ ಕಳ ಸಂಬಂಧ ಕಲ್ಕತ್ತೆಯಲ್ಲಿಯ ಒಬ್ಬ ಕೊಲೇಜ ಪ್ರೊಫೆಸರನನ್ನು ಕೈದುಮಾಡಿದರಂತೆ.

ಮುಂಬಯಿ ಹೋಮ್‌ರೂಲ್ ಲೀಗಿನ ಪ್ರಥಮ ವಾರ್ಷಿಕ ಸಭೆಯು ನಾಸಿಕದಲ್ಲಿ ಕೂಡಿತು. ಹಿಸ್ಸದರಾದ ಜೊಸೇಫ್ ಬಪ್ಟಿಸ್ತಾರವರು ಸಭೆಯ ಅಧ್ಯಕ್ಷರಾಗಿದ್ದರು. ಬಹುಮಾನಪಟ್ಟ ಮಿ। ಬೆಲ್ವಿರವರು, ಮಿ। ಉಪಾಸ್ಯ, ಮಿ। ಖಪರ್ಡೆ, ಮಿ। ಜಯಕರ್, ಕೆಲ್ಕರ, ಲೋಕಮಾನ್ಯ ತಿಲಕ ಮೊದಲಾದವರು ಸಭೆಯಲ್ಲಿ ಹಾಜರಿದ್ದರು. ಸಭೆಯಲ್ಲಿ ಓದಿದ ವೃತ್ತಾಂತದಿಂದ ಮುಂಬಯಿ ಪ್ರಾಂತ್ಯಗಳಲ್ಲಿ ೧೪,೨೧೮ ಹೋಮ್‌ರೂಲ್ ಲೀಗಿನ ಮೆಂಬರರಾಗಿರುವರೆಂತ ತಿಳಿದು ಬರುತ್ತದೆ. ಹೋಮ್‌ರೂಲ್ ಲೀಗಿನ ಮತದ ಪ್ರಸರಣೆಯನ್ನು ಅಂಗ್ಲೆಂಡದಲ್ಲಿ ಮಾಡುವದು ಅಗತ್ಯವಿದ್ದು ಈ ಬಗ್ಗೆ ಬೇಕಾದ ಏರ್ಪಾಡುಗಳನ್ನು ಬೇಗನೆ ಲೀಗಿನವರು ಮಾಡಬೇಕೆಂದು ಈ ಸಭೆಯಲ್ಲಿ ನಿರ್ಣಯವಾಗಿದೆ. ಸಭಾಂತ್ಯದಲ್ಲಿ ತಿಲಕರವರು ಹೋಮ್‌ರೂಲಿನ ವಿಷಯ ಒಂದು ಭಾಷಣವನ್ನು ಮಾಡಿದರು. ಹೋಮ್‌ರೂಲ್ ಲೀಗ್ ಕೊಂಗ್ರೆಸ್ ಸಭೆಯ ಒಂದು ಅಂಗವಾಗಿರುವದಲ್ಲದೆ ಕೊಂಗ್ರೆಸ್ ಸಭೆಗೆ ಪ್ರತಿಕೂಲವಾದದ್ದಲ್ಲ. ಕೊಂಗ್ರೆಸಿನ ಮತವನ್ನು ಪ್ರಸರಿಸುವದು ಇದರ ಮುಖ್ಯಕರ್ತವ್ಯವಾಗಿದೆ. ಸ್ವರಾಜ್ಯವೂ ಇದರೊಂದಿಗೆ ಇನ್ನು ಕೆಲವು ವಿಷಯಗಳನ್ನು ಕೊಂಗ್ರೆಸ್ ಸಭೆಯು ಪ್ರತಿಪಾದಿಸುವಾಗ ಹೋಮ್‌ರೂಲ್ ಲೀಗ್ ಸ್ವರಾಜ್ಯವನ್ನು ಮತ್ತು ಸಾರುವ ಕೊಂಗ್ರೆಸಿನ ಕಾರ್ಯನಿರ್ವಾಹಕ ಅಂಗವಾಗಿರುವದು ಎಂತ ತಿಲಕರು ಹೋಮ್‌ರೂಲ್ ಲೀಗಿನ ಧ್ಯೇಯವನ್ನು ವಿವರಿಸಿ ಹೇಳಿದರು.

ಇದೇ ಜೂನ್ ೩ನೇ ತಾ. ೧೮ರಲ್ಲಿ ಭೂವ್ಯವಸಾಯ ಶಿಕ್ಷಣದ ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ಇಂಡಿಯಾ ಸರಕಾರದವರಿಂದ ನೇಮಿಸಲ್ಪಟ್ಟ ಮೆಂಬರರ ಒಂದು ಸಭೆಯು ಸಿಮ್ಲಾದಲ್ಲಿ ಕೂಡುವದು. ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿ, ಭೂಪೇಂದ್ರನಾಥ ಬಾಸು ಮೊದಲಾದ ಬಿನ್‌ಸರಕಾರಿ ಮೆಂಬರರು ಸಹ ಈ ಸಭೆಗೆ ಆಮಂತ್ರಿಸಲ್ಪಟ್ಟಿರುವರು.

ಭೋಪಾಲದ ಬೆಗಮರವರು ತಮ್ಮ ಮಹಮ್ಮದೀಯ ಪ್ರಜೆಗಳಲ್ಲಿ ಅಮಲೇರಿದವರು ಅಥವಾ ಶರಾಬು ಇತ್ಯಾದಿಗಳನ್ನು ಒಯ್ಯುವವರು ಅಥವಾ ಶರಾಬು ಅಂಗಡಿಗಳಲ್ಲಿ ಕುಳಿತುಕೊಳ್ಳುವವರು ನೋಡಸಿಕ್ಕಿದರೆ ಇಂಥವರನ್ನು ಕೂಡಲೆ ಕೈದುಮಾಡಿ ಇಂಥವರ ಮೆ ಕ್ರಿಮಿನಲ್ ಮೊಕದ್ದಮೆಗಳನ್ನು ನಡಿಸಬೇಕೆಂಬ ರಾಜಾಜ್ಞೆಯನ್ನು ಕೊಟ್ಟಿರು.

ಯುದ್ಧಸಾಲದ ಬಗ್ಗೆ ಎಲ್ಲಾ ಭಾಗಗಳಿಂದ ಬಂದ ಅರ್ಜಿಗಳ ಮೊಬಲಗು ರೂ ೩೧,೪೮,೮೭,೯ ಆಗಿರುತ್ತದೆ. ಈ ಪೈಕಿ ನಮ್ಮ ಸಂಸ್ಥಾನದಿಂದ ರೂ. ೧,೧೪,೧೮,೭೦೦ರ ಸಾಲ ಸಂಗ್ರಹಿಸಲ್ಪಟ್ಟಿರುವದು.

ಈ ದೇಶದವರು ಪರದೇಶದ ತರಿಸಿಕೊಳ್ಳಬೇಕಾಗಿದ್ದ ಹೊಲಿಗೆಯ ಯಂತ್ರಗಳು ಈಗ ಈ ದೇಶದಲ್ಲಿ ತಯಾರಾಗುತ್ತಿರುವವು. ಜಿ. ಎಮ್. ಬಕ್ರಿ ಕಂಪೆನಿಯವರು ಲುಧಿಯಾನದಲ್ಲಿ ಇಂಥಾ ಒಂದು ಕಾರ್ಖಾನೆಯನ್ನು ಸ್ಥಾಪಿಸಿರುವರು. ಆ ಕಾರ್ಖಾನೆಯಲ್ಲಿ ಈಗ ತಿಂಗಳ ಸರಾಸರಿ ೭೫ ಯಂತ್ರಗಳಂತೆ ತಯಾರಾಗುತ್ತವೆ, ಈ ಯಂತ್ರಗಳ ಬಿಡಿಭಾಗಗಳೂ ಈ ಕಾರ್ಖಾನೆಯಲ್ಲಿಯೇ ತಯ್ಯಾರಾಗುತ್ತಿರುವವು.

ಒಂದೂವರೆ ಲಕ್ಷ ಮೂಲಧನವಿರುವ ಒಂದು ಕಾರ್ಖಾನೆಯು ಮುಂಬಾಯಿಯಲ್ಲಿ ಇತ್ತಲಾಗೆ ಸ್ಥಾಪಿಸಲ್ಪಟ್ಟಿರುವದು. ಈ ಕಾರ್ಖಾನೆಯಲ್ಲಿ ಕಾಗದ ತಯಾರಿಗೆ ಬೇಕಾಗಿರುವ ಸರಿ ಬಿದಿರಿನಿಂದ ತಯ್ಯಾರಿಸಲ್ಪಡುವದು.

ಅಲ್ಲಾಹಾಬಾದಿನ 'ಎಸಿಲ್' ಮುನ್ಸಿಫ್ ಕೋರ್ಟಿನಲ್ಲಿ ಹರಗೋವಿಂದ ಬಾಗೋಲ್ ಎಂಬ ಮುನ್ಸಿಫರು ನ್ಯಾಯಾಸನದಲ್ಲಿ ಕುಳಿತುಕೊಂಡು ಒಂದು ಮೊಕದ್ದಮೆಗೆ ಸಂಬಂಧಪಟ್ಟ ವಾದಿಪ್ರತಿವಾದಿಗಳ ಹೆಸರುಗಳನ್ನು ಕರೆಯುವಾಗ ಒಬ್ಬ ಕೋರ್ಟು ವ್ಯವಹಾರಿಯು ಕೈಯಲ್ಲಿ ಏನೊ ಒಂದು ವಸ್ತುವನ್ನು ಅಡಗಿಸಿ ಹಿಡ ಕೊಂಡು ಮುನ್ಸಿಫರು ಕುಳಿತುಕೊಂಡಿದ್ದಲ್ಲಿಗೆ ಹೋಗಿ ತನ್ನ ಕೈಯಲ್ಲಿರುವಂಥ ಒಡವೆಯನ್ನು ಮುನ್ಸಿಫರ ಕೈಗೆ ಕೊಟ್ಟನು. ತನ್ನ ಕೈಗೆ ತಂದುಕೊಟ್ಟ ಒಡವೆಯು ಒಂದು ರೂಪಾಯಿಯಾಗಿದೆ ಎನ್ನುವುದನ್ನು ತಿಳಕೊಂಡ ಕೂಡಲೆ ಮುನ್ಸಿಫರು ಇವನನ್ನು ಕೈದುಮಾಡಿಸಿ ತನಖೆಗೆ ಈತನನ್ನು ಮೇಜಿಸ್ಟ್ರೇಟರ ಬಳಿ ಕಳುಹಿಸಿ ಕೊಟ್ಟಿರುತ್ತಾರೆ.

~~~~~~

ದಕ್ಷಿಣ ಹಿಂದೂಸ್ಥಾನ.

ಮೈಸೂರು ಸಂಸ್ಥಾನದ ಕಾಡುಗಳಲ್ಲಿ ದೊರಕುವ [illegible] ಕಲ್ಲುಗಳಿಂದ ಕಬ್ಬಿಣವನ್ನು [illegible] ಮೈಸೂರು [illegible]

[illegible] ನಡಿಸಿದ ಶೋಧನೆಗಳಿಂದ ೨೫,೦೦೦ ಟನ್ನು [illegible] ತಯ್ಯಾರು ಮಾಡಲ್ಪಡಬಹುದೆಂತ ತಿಳಿದುಬಂದಿದೆ. ಈ ಸ್ಥಾಪನೆಗೆ ಬೇಕಾದ [illegible] ವೆಲ್ಲವೂ ಮೈಸೂರು ಸರಕಾರದವರಿಂದ ಕೊಡೋಣವಾಗುವದು, ಮತ್ತು ಇದರ ಆಡಳಿತವು ಟಾಟಾ ಕಂಪೆನಿಯವರ ಕೈಯಲ್ಲಿಯೇ ಇರುವದೆಂತ ಕರಾರು ಆಗಿರುವದು.

ಎರ್ನಾಕುಲಮ್‌ನಲ್ಲಿ ಟಾಟಾ ಮತ್ತು ಸನ್ಸ್‌ರವರು ತೆಂಗಿನಕಾಯಿಗಳಿಂದ ಮೊರ್ಗರಿನ್ ಎಂಬ ಬೆಣ್ಣೆಯನ್ನು ತಯ್ಯಾರಿಸುವ ಕಾರ್ಖಾನೆಯನ್ನು ಸದ್ಯದಲ್ಲಿ ಸ್ಥಾಪಿಸುವರಾಗಿ ತಿಳಿಯುತ್ತೇವೆ. ಈ ಕಾರ್ಖಾನೆಯ ಸ್ಥಾಪನೆಗೆ ಸುಮಾರು ೩೦ ಲಕ್ಷ ರೂಪಾಯಿಗಳು ತಗಲುವದೆಂತ ಅಂದಾಜುಮಾಡಿದೆ.

ಚಕ್ರವರ್ತಿಗಳ ಜನನ ದಿನವನ್ನು ಇದೇ ಜೂನ್ ತಿಂಗಳ ತಾ. ೪ರಲ್ಲಿ ಆಚರಿಸಬೇಕೆಂತ ನಿರ್ಣಯಿಸಲ್ಪಟ್ಟಿರುವದು. ಈ ಜನ್ಮ ದಿವದ ಬಹುಮಾನಾರ್ಥವಾಗಿ ವಿಶೇಷ ಸಂಭ್ರಮಗಳೇನೂ ಇರಕೂಡದೆಂತ ತಿಳಿಸಲಾಗಿದೆ.

ಅದ್ವೈತ ಸಭೆಯ ೨೩ನೇ ವರುಷದ ವಾರ್ಷಿಕ ಸಭೆಯು ಕುಂಭಕೋಣದಲ್ಲಿ ಇದೇ ಬರುವ ಜೂನ್ ತಿಂಗಳ ತಾ. ೨೪ರಲ್ಲಿ ಕೂಡುವದು.

ಮಿ। ಎಫ್. ಆರ್. ಹೆಮಿಂಗ್‌ವೆ ದೊರೆಗಳವರು ಸಹಕಾರ ಸಂಘಗಳ ರಿಜಿಸ್ಟ್ರಾರರಾಗಿ ಮಿ। ಸ್ವಾಮಿ ಕಣ್ಣಪಿಳ್ಳೆಯವರ ಸ್ಥಾನದಲ್ಲಿ ನೇಮಿಸಲ್ಪಟ್ಟಿರುವರು. ಸ್ವಾಮಿ ಕಣ್ಣಪಿಳ್ಳೆಯವರು ಜಿಲ್ಲಾ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಹೆಮಿಂಗ್‌ವೆ ದೊರೆಗಳವರು ರಜೆಯಿಂದ ಬಂದಮೇಲೆ ಸ್ವಾಮಿ ಕಣ್ಣಪಿಳ್ಳೆಯವರಿಂದ ಚಾರ್ಜು ತಕ್ಕೊಳ್ಳುವರು.

ಪಬ್ಲಿಕ್ ಸರ್ವಿಸ್ ಕಮಿಶನಿನ ರಿಪೋರ್ಟಿನ ಮೇಲೆ ಮದ್ರಾಸು ಸರಕಾರದವರು ಈ ಸಂಸ್ಥಾನದ ಪ್ರಜಾ ಸಂಸ್ಥೆಗಳಿಂದಲೂ, ನ್ಯಾಯನಿರ್ಮಾಣ ಸಭೆಯ ಮೆಂಬರುಗಳಿಂದಲೂ ಇನ್ನು ಕೆಲವು ಪ್ರಜಾ ಮುಖಂಡರುಗಳಿಂದಲೂ ಅಭಿಪ್ರಾಯಗಳನ್ನು ಕೇಳಿರುತ್ತಾರೆ. ನಮ್ಮ ಜಿಲ್ಲೆಯಲ್ಲಿ ರಾವ್ ಬಹದ್ದೂರ್ ಎನ್. ಸುಬ್ಬರಾವ್ ಮತ್ತು ಪಿ. ಎಫ್. ಎಕ್ಸ್. ಸಲ್ಡಾನಾರವರಿಂದ ಈ ವಿಷಯ ಅಭಿಪ್ರಾಯಗಳನ್ನು ಕೇಳಿರುತ್ತಾರೆ.

ವಿಲಾಯತಿಯಲ್ಲಿ ಹೇರಳವಾಗಿ ಸಾಬೂನುಗಳನ್ನು ತಯ್ಯಾರಿಸುತ್ತಿರುವ ಲಿವರ್ ಬ್ರದರ್ಸ್ ಎಂಬ ಸಾಬೂನು ಕೈಗಾರಿಕೆ ಕಾರ್ಖಾನೆಯವರು ಮಲೆಬಾರಿನಲ್ಲಿ ಒಂದು ಸಾಬೂನು ಕಾರ್ಖಾನೆಯನ್ನು ಸ್ಥಾಪಿಸುವರಂತೆ.

ಮಲಬಾರಿನಲ್ಲಿ ಎರಡು ಕಾಗದದ ಕಾರಖಾನೆಗಳು ಸ್ಥಾಪಿಸಲ್ಪಡುವವೆಂಬದಾಗಿ ತಿಳಿಯುತ್ತೇವೆ. ಒಂದು ತ್ರಿಚೂರಿನಲ್ಲಿ ಸ್ಥಾಪಿಸಲ್ಪಡುವದು. ಟಿ. ವೀರರಾಘವ ಆಚಾರ್ಯರೆಂಬ ಮರದ ಸಾಹುಕಾರರು ಬಲಿಯಾಪಟಾಮ್‌ದಲ್ಲಿ ಒಂದು ಕಾಗದ ಕಾರ್ಖಾನೆಯನ್ನು ಸ್ಥಾಪಿಸುವದರಲ್ಲಿದ್ದಾರೆ. ಈ ಬಗ್ಗೆ ಇವರು ಮಲಬಾರಿನ ಜನ್ಮಿಯವರಿಂದ ದೊಡ್ಡ ದೊಡ್ಡ ಕಾಡುಗಳನ್ನು ಗುತ್ತಿಗೆ ವಹಿಸಿಕೊಂಡಿರುವರು. ಫೆರೋಕದಲ್ಲಿ ಮೆಸರ್ಸ್ ರಿಲಿಬ್ರದರ್ಸ್‌ರವರ ಕಾಗದ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯವು ಎಷ್ಟರ ಮಟ್ಟಿಗೆ ನೆರವೇರಿದೆ ಎಂಬುದು ಗೊತ್ತಾಗಲಿಲ್ಲ.

ಉತ್ತರಕನ್ನಡದ ಬೆಲೇಕೇರಿಯಲ್ಲಿ ಒಬ್ಬ ಖಾರವೀ ಜಾತಿಯ ಮನುಷ್ಯನಿಗೆ ಸುಮಾರು ೧೫ ದಿವಸಗಳಲ್ಲಿ ಮೂರು ಸಾರಿ ಸರ್ಪವು ಕಚ್ಚಿತು. ಪ್ರತಿಸರ್ತಿ ಹತ್ತು ಹದಿನೈದು ಕೋಳಿಗಳನ್ನು ಹಚ್ಚಿ ವಿಷ ತೆಗಿಯಲಾಯಿತು. ಆ ಮನುಷ್ಯನು ಸುದೈವದಿಂದ ಇನ್ನೂ ಬದುಕಿದ್ದಾನೆ. ಏನೂ ವಿಷ ಬಾಧಕವಾಗಲಿಲ್ಲವೆಂಬ ವೃತ್ತಾಂತವು ಕುಮಟೆಯ ಕನಡಾ ವೃತ್ತದಲ್ಲಿ ಪ್ರಕಟಿಸಲ್ಪಟ್ಟಿರುವದು.

ಮೈಸೂರು ಸಂಸ್ಥಾನಕ್ಕೆ ಬೇಕಾದ ಸಬ್ ಅಸಿಸ್ಟಂಟ್ ಸರ್ಜನರನ್ನು ಮೈಸೂರು ದೇಶದಲ್ಲಿಯೆ ಶಿಕ್ಷಣಕೊಟ್ಟು ತಯ್ಯಾರಿಸಲಿಕ್ಕೆ ಆ ದೇಶದಲ್ಲಿ ಒಂದು ಮೆಡಿಕಲ್ ಸ್ಕೂಲ್ ಸ್ಥಾಪಿತವಾಗಿ ಇದೇ ಜುಲಾಯಿ ತಿಂಗಳ ತಾ. ೧ರಿಂದ ಪ್ರಾರಂಭವಾಗುವದು. ಈ ಶಾಲೆಯನ್ನು ಕ್ರಮೇಣ ಕೊಲೇಜು ತರಗತಿಗೆ ತಂದು ಮೈಸೂರು ವಿಶ್ವವಿದ್ಯಾಲಯಕ್ಕೆ ಇದನ್ನು ಸೇರಿಸುವ ಆಲೋಚನೆಯು ಮೈಸೂರು ಸರಕಾರದವರಲ್ಲಿದೆ.

ಕೊಯಂಬುತ್ತೂರಿನಲ್ಲಿ ಕೂಡಲಿಕ್ಕಿರುವ ಜಿಲ್ಲಾ ಪರಿಷತ್ತಿಗೆ ಮಿಸೆಸ್ ಎನಿ ಬೆಸೆಂಟರನ್ನು ಅಧ್ಯಕ್ಷರನ್ನಾಗಿ ಆರಿಸಿದ ವೃತ್ತಾಂತವು ವಾಚಕರು ತಿಳಿದಿರಬಹುದು. ಬ್ರಾಹ್ಮಣ — ಬ್ರಾಹ್ಮಣೇತರ, ಈ ಚಳವಳದಿಂದ ನಾನಾ ಬಗೆಯ ಗೊಂದಲಗಳು ಈ ಪರಿಷತ್ತಿನ ಪರವಾಗಿ ತಲೆದೋರುತ್ತಿರುವವು. ಆಮಂತ್ರಣಸಭೆಯ ಕೆಲವು ಮೆಂಬರರು ರಾಜಿನಾಮ ಕೊಟ್ಟಿರುವರು. ಇನ್ನು ಕೆಲವರು ಬೆಸೆಂಟರವರು ಅಧ್ಯಕ್ಷರಾಗ ಕೂಡದೆಂಬದಾಗಿ ಸೂಚಿಸಿರುವರು. ಕೊಂಗ್ರೆಸು ಮತ್ತು ಮುಸಲ್ಮಾನ ಲೀಗಿನವರ ಧ್ಯೇಯವನ್ನು ಪೂರ್ತಿಯನ್ನು ಬಿಟ್ಟು ನವೀನವಾದ ಒಂದು ಧ್ಯೇಯಕ್ಕನುಗುಣವಾಗಿ ಈ ಸಭೆಯನ್ನು ನಡಿಸಬೇಕೆಂದು ಮತ್ತು ಕೆಲವರು ವಾದಿಸುವರು. ಜಿಲ್ಲಾ ಪರಿಷತ್ತಿನ ವಿಷಯ ಇನ್ನೂ ಚಿತ್ತಶಾಂತಿಯು ಉಂಟಾಗಿರುವಂತೆ ತೋರಲುಬರುವದಿಲ್ಲ.

ತಿರುಚಿನಾಪಳ್ಳಿಯಲ್ಲಿ 'ಇಂಡಿಯನ್ ಪೆಟ್ರಿಯೋಟ್' ಎಂಬ ಮದ್ರಾಸಿನ ವೃತ್ತಪತ್ರಿಕೆಯ ಸಂಪಾದಕರಾದ ರಾ। ದಿವಾನಬಹದ್ದೂರ್ ಕರುಣಾಕರ ಮೇನನರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿಷತ್ತು ಸಭೆಯು ಜೂನು ತಿಂಗಳ ತಾ. ೪,೫, ೭ನೇ ದಿವಸಗಳಲ್ಲಿ ಕೂಡುವದು. ಎಲಿಂಬಳ್ಳಿಯ ಜಮೀನುದಾರರು ಈ ಜಿಲ್ಲಾ ಪರಿಷತ್ತಿಗೆ ಬೇಕಾಗಿರುವ ಎಲ್ಲಾ ಖರ್ಚನ್ನು ಕೊಡಲು ಸಮ್ಮತಿಸಿರುವರು. ಈ ಪರಿಷತ್ತಿನೊಂದಿಗೆ ಸಾಮಾಜಿಕ ಪರಿಷತ್ತು ಬಹುಮಾನಪಟ್ಟ ಜಸ್ಟೀಸ್ ಸದಾಶಿವ ಅಯ್ಯರರವರ ಅಧ್ಯಕ್ಷತೆಯಲ್ಲಿ ಕೂಡುವದು. ಕೃಷಿ ಮತ್ತು ಕೈಗಾರಿಕೆಗಳ ವಸ್ತು ಪ್ರದರ್ಶನಗಳು ಈ ಸಂದರ್ಭದಲ್ಲಿ ಏರ್ಪಡಿಸಲ್ಪಡುವವು.

ತಂಜಾವೂರು ಜಿಲ್ಲೆಯ ಹಿಂದೀ ಕೆಥೋಲಿಕ ಕ್ರೈಸ್ತರ ಮಹಾ ಸಭೆಯು ಈ ತಿಂಗಳ ತಾ. ೧೯ರಲ್ಲಿ ತಂಜಾವೂರಿನಲ್ಲಿ ಕೂಡಿತ್ತು. ಬೆಂಗಳೂರಿನಲ್ಲಿ ಕೂಡಿದ ಬಿಶೋಪರುಗಳ ಸಭೆಯಲ್ಲಿ ಕೆಥೋಲಿಕ ಸಮುದಾಯದವರ ಹಾನಿವೃದ್ಧಿಯ ಕುರಿತು [illegible] ನಿರ್ಣಯಗಳ ಕುರಿತು ಪರ್ಯಾಲೋಚಿಸುವರೆ ಈ ಸಭೆಯು ಕೂಡಿತ್ತು. ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಇತರ ಹಿಂದಿಗಳಂತೆಯೇ ಇವರೂ ಸಹ ವರ್ತಿಸಲು ಅಗುವಂತೆ ಮಹಾಧಿಕಾರಿಗಳಿಂದ ಯಾವ ಬಗೆಯ ಪ್ರತಿಬಂಧವೂ ಇರಕೂಡದೆಂಬ ಪ್ರಸ್ತಾಪಗಳನ್ನು ಕುರಿತು ಹಲವರು ಆ ಸಭೆಯಲ್ಲಿ [illegible] ರು. ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ [illegible] ಬೇಕಾದ ಮಾರ್ಗವನ್ನು ಸ್ಪಷ್ಟವಾಗಿ ನಿರ್ಧರಿಸುವಂತೆ ಮದ್ರಾಸಿನ [illegible] ಇಂಡಿಯನ್ ಎಸೋಶಿಯೇಶನವರು ಬೇಗನೆ ಒಂದು ಮಹಾ ಸಭೆಯನ್ನು [illegible] ಬೇಕೆಂತ ತಂಜಾವೂರಿನವರು ಈ ಸಭೆಯ ಮೂಲಕ ಸೂಚಿಸಿರುತ್ತಾರೆ.

ಯುದ್ಧ ಸಾಲ.

ಕುಂದಾಪುರ ತಾಲೂಕಿನಲ್ಲಿ: — ಕುಂದಾಪುರ — ರೂ. ೧೯೪೦. [illegible] — ರೂ. ೪೪೫೦; ಮರವಂತೆ ರೂ. ೨೦೦೦; [illegible] — ರೂ. [illegible] ಉಪ್ಪುಂದ ರೂ. ೨೫೫೦; ಸಿದ್ದಾಪುರ — ೧೧೬೦; [illegible]

ಮಂಗಳೂರು [illegible]
~~~~~~

ಅನುಕ್ರಮಣಿಕೆ.

	ಪಾನು.
ಅಗ್ರಲೇಖ:—	
ಮಾನ್ಯ ಶಾಸ್ತ್ರಿಗಳ ಭಾಷಣ	೧—೩
ಸ್ಫುಟವಿಚಾರಗಳು:—	
೧ ಹೀಕನ್ ಪತ್ರಿಕೆ, ಹಾಕಿದ ತಡೆ	,,
೨ ಐಂಡ್ ಹೋಂರೂಲಿನ ಯೋಜನೆ	,,
೩ ಭಾರತ ಸಂರಕ್ಷಕ ಸೈನ್ಯ	,,
೪ ಮದ್ರಾಸ ಕಾಯಿದೆ ಕೌನ್ಸಿಲಿನ ಅಧಿವೇಶನ	,,
ಶ್ಲೋಕ — ಮಂಗಳೂರು	,,
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೩
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದೂಸ್ಥಾನ	,,
೪ ದಕ್ಷಿಣ ಹಿಂದುಸ್ಥಾನ	,,
೫ ಲೇಖನಗಳು — ಇಂಗ್ಲಿಷ ದೇಶಭಾಷೆಗಳೂ.	೬
೬ ತಾಲ್ಲೂಕು ಬೋರ್ಡು ಮೆಂಬರರ ಚುನಾವಣೆ	,,
೭ ಪತ್ರವ್ಯವಹಾರ	,,

ಸ್ವದೇಶಾಭಿಮಾನಿ.

ಶಕ ೧೮೩೯ ಜ್ಯೇಷ್ಠ ಶು. ೪ ಶುಕ್ರವಾರ.

ಮಾನ್ಯ ಶಾಸ್ತ್ರಿಗಳ ಭಾಷಣ.

ನಮ್ಮ ಮದ್ರಾಸು ಪ್ರಾಂತ್ಯದ ನಿವಾಸಿಗಳಾದ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಕಳೆದ ವಾರ ಮುಂಬಯಿ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದಾಗ ಮಾಡಿದ ಭಾಷಣವು ವಿಚಾರಣೀಯವಾಗಿದೆ. ಆ ಪ್ರಾಂತಿಕ ಪರಿಷತ್ತು ನಮ್ಮ ಪ್ರಾಂತದ್ದಲ್ಲವಾದರೂ ಅಧ್ಯಕ್ಷರು ನಮ್ಮ ಪ್ರಾಂತದವರು. ಅವರ ಭಾಷಣವು ಒಂದೇ ಪ್ರಾಂತಕ್ಕೆ ಸಂಬಂಧಿಸಿದ್ದಲ್ಲ. ಆ ಭಾಷಣದೊಳಗಿನ ಸ್ಥಾನಿಕ ವಿಷಯಗಳನ್ನು ಬಿಟ್ಟರೆ ಉಳಿದ ಭಾಷಣವು ಸಾರ್ವಗಾಮಿಯಾಗಿರುವುದು. ಹಿಂದುಸ್ಥಾನದಲ್ಲಿ ಸದ್ಯ ಪ್ರಚಲಿತವಿರುವ ಹೋಮ್ ರೂಲಿನ ವಿಷಯದಲ್ಲಿಯಾಗಲಿ ಅಥವಾ ಈ ಯುದ್ಧ ಮೂಲಕದಿಂದ ಇದೀ ಸಾಮ್ರಾಜ್ಯದಲ್ಲಿ ಉತ್ಪನ್ನವಾಗುವ ಸಾಮ್ರಾಜ್ಯದ ಭಾವಿ ಪುನರ್ಘಟನೆಯ ವಿಷಯದಲ್ಲಿಯಾಗಲಿ ಅವರ ಅಧ್ಯಕ್ಷತೆಯ ಸ್ಥಾನದಿಂದ ಹೇಳುವ ಸರ್ವಮಾನ್ಯ ತತ್ವಗಳನ್ನು ರಾಜ್ಯಕರ್ತರೂ ಪ್ರಜಾಮುಂದಾಳುಗಳೂ ಸರಿಯಾಗಿ ವಿಮರ್ಶಿಸತಕ್ಕದ್ದು. ಈಗ ಶ್ರೀನಿವಾಸ ಶಾಸ್ತ್ರಿಗಳೆಂದರೆ ಸಾಮಾನ್ಯ ಬಂದ ವ್ಯಕ್ತಿಯಲ್ಲ. ಅವರು ವರಿಷ್ಠ ಕಾಯಿದೆ ಕೌನ್ಸಿಲಿನ ಒಬ್ಬ ಮೆಂಬರರು. ಗೋಖಲೆಯವರ "ಸರ್ವೆಂಟ್ಸ ಒಫ್ ಇಂಡಿಯಾ ಸೊಸೈಟಿ"ಯ, ಎಂದರೆ ಭಾರತ ಸೇವಕ ಸಮಾಜದ ಅಧ್ಯಕ್ಷರು. ವೈಸರಾಯರ ಮುಖಾಂತರ ಭಾವಿರಾಜ್ಯ ಸುಧಾರಣೆಯ ಮಸೂದೆಯನ್ನು ಕಳುಹಿಸಿಕೊಟ್ಟ ೧೯ ಸಭಾಸದರಲ್ಲಿ ಒಬ್ಬರು. ರಾಷ್ಟ್ರೀಯ ಸಭೆ ಮತ್ತು ಮೊಸ್ಲೆಮ್ ಲೀಗಿನವರು ತಯಾರಿಸಿದ ಸ್ವರಾಜ್ಯದ ಪ್ರಾಪ್ತಿಗಾಗಿ ವಿಲಾಯತಿಯಲ್ಲಿ ಲೋಕಮತವನ್ನು ಎಚ್ಚರಿಸಲು ಇಲ್ಲಿಂದ ಹೋಗತಕ್ಕದ್ದ ಡೆಪ್ಯುಟೇಶನಿನ ಸೆಕ್ರೆಟರಿಗಳು. ಎಂದ ಮೇಲೆ ಇವೆಂಗುಣ ವಿಶಿಷ್ಟರಾದ ಶ್ರೀನಿವಾಸ ಶಾಸ್ತ್ರಿಗಳು ಸಾಮಾನ್ಯ ವ್ಯಕ್ತಿಯಲ್ಲೆಂಬುದು ಸುಸ್ಪಷ್ಟವಾಗುವುದು. ಅರ್ಥಾತ್ ನಾಸಿಕಕ್ಷೇತ್ರದಲ್ಲಿ ನೆರೆದ ಮುಂಬಯಿ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಆಡಿತೋರಿಸಿದ ಶಾಸ್ತ್ರಿಗಳ ವಿಚಾರಗಳನ್ನು ಅನುವಾದಿಸುವುದು ಅಪ್ರಸ್ತುತ ಪ್ರಶಂಸೆಯಲ್ಲೆಂದು ವಿಚಾರವಂತರಿಗೆ ಹೇಳಬೇಕಾದ ಅಗತ್ಯವಿಲ್ಲ, ಇರಲಿ.

ಮಾನ್ಯಶಾಸ್ತ್ರಿಗಳು ಲಂಡನಿನಲ್ಲಿ ಸದ್ಯದಲ್ಲಿಯೆ ಆಗಿಹೋದ ಸಾಮ್ರಾಜ್ಯ ಪರಿಷತ್ತಿನ ಕುರಿತು ಚರ್ಚಿಸುವಾಗ ಹೀಗೆಂದರು: "ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದುಸ್ಥಾನಕ್ಕೆ ಪೂರ್ಣ ಪ್ರತಿನಿಧಿತ್ವವನ್ನು ಕೊಡಬೇಕೆಂದು ಪರಿಷತ್ತು ನಿಶ್ಚಯಿಸಿಯದೆ; ಆದರೆ ಇದರ ಅರ್ಥವೇನು! ಹಿಂದೂಸ್ಥಾನದಿಂದ ಪ್ರತಿನಿಧಿಗಳನ್ನು ಸರಕಾರವೆ ಕಳುಹಿಸುವುದಾದರೆ ಮತ್ತು ಆ ಪ್ರತಿನಿಧಿಗಳು ಯಾವ ಮತಗಳನ್ನು ವ್ಯಕ್ತಗೊಳಿಸುವರೊ ಅವು ಸರಕಾರಿ ಮತಗಳಾಗಿದ್ದರೆ ಜನತೆಯ ಮತಗಳಾಗಿಲ್ಲಾದರೆ— ಇಂಥ ಪ್ರತಿನಿಧಿತ್ವದ ಲಾಭದಿಂದ ಭೂಷಣವೇನು? ಇಲ್ಲಿಂದ ಹೋಗತಕ್ಕ ಪ್ರತಿನಿಧಿಗಳು ಲೋಕನಿಯುಕ್ತರಾಗಿರಬೇಕೆಂಬ ವಿಷಯದಲ್ಲಿ ನಾವು ತಕ್ಕ ಪ್ರಯತ್ನಗಳನ್ನು ನಡೆಯಿಸುವುದು ಅಗತ್ಯವಿದೆ. ಮೂವತ್ತು ಕೋಟಿ ಜನರ ಪ್ರತಿನಿಧಿಯು ಯಾರು? ಈ ಪ್ರಶ್ನೆಗೆ ಸ್ಟೇಟ್ ಸೆಕ್ರೆಟರಿ ಇದೇ ಉತ್ತರವು. ಈ ಕಲ್ಪನೆಯು ಶುದ್ಧ ಹಾಸ್ಯಾಸ್ಪದವಾದುದು. ಈ ವಿಷಯದಲ್ಲಿ ಮಿ. ಸಿಲಬರ್ನ ಎಂಬ ದೊರೆಗಳು ಸಹ ಅಸ್ತು ಪಟ್ಟಿದ್ದಾರೆ ಮುಂದಿನ ಸಾಮ್ರಾಜ್ಯ ಪರಿಷತ್ತಿನಲ್ಲಿ ಇಂಗ್ಲಂಡಿನ ಪರದೇಶ ವಿಷಯಕ ವ್ಯವಹಾರದಲ್ಲಿ ವಸಾಹತುಗಳಂತೆ ಹಿಂದೂಸ್ಥಾನಕ್ಕೆ ಮತಕೊಡುವ ಹಕ್ಕೆಂದು ಸಾ. ಪರಿಷತ್ತು ಒಪ್ಪಿದೆ. ಆದರೆ ಇದರಲ್ಲಿ ತಮಾಷೆಯೇನೆಂದರೆ ವಸಾಹತುಗಳಿಗೆ ಪೂರ್ಣ ಸ್ವರಾಜ್ಯದ ಪ್ರಾಪ್ತಿಯು, ಹಿಂದುಸ್ಥಾನಕ್ಕೆ ಮಾತ್ರ "ಪ್ರತ್ಯಕ್ಷದ ಅಭಾವು" [illegible] [illegible] ವಸಾಹತುಗಳಂತೆ ಹಿಂದುಸ್ಥಾನವು ಸಹ ಸಾಮ್ರಾಜ್ಯ [illegible] [illegible] ಮತ್ತೆ ಪ್ರಜಾಸತ್ತ ಯಾಕೆ?

ಮತ್ತು ಅದನ್ನು ಸರ್ ಸಿಂಹರಂಥವರು ಒಪ್ಪಿಕೊಂಡಿದ್ದು ಹೇಗೆ? ಬಾಯಿಯಿಂದ ಹೇಳುವುದು ಹಿಂದುಸ್ಥಾನವು ವಸಾಹತುಗಳೊಡನೆ ಸರಿಸಮಾನವಾದುದೆಂದು ಮತ್ತು ಕೈಯಿಂದ ಹಿಂದುಸ್ಥಾನದ ಅವಲಂಬಿತ್ವವನ್ನು ಹಾಗೆ ಇರಗೊಡುವುದು! ಇದರ ಅರ್ಥವೇನು? ನೀತಿಗೂ ಕೃತಿಗೂ ಯಾಕೆ ಏಕವಾಕ್ಯತೆ ಇಲ್ಲ? ಸಾಮ್ರಾಜ್ಯ ಪರಿಷತ್ತಿನಲ್ಲಿ ಹಿಂದುಸ್ಥಾನಕ್ಕೆ ಕೊಟ್ಟ ಮತದ ಹಕ್ಕು ಹಿಂದುಸ್ಥಾನದ ಉಪಯೋಗಕ್ಕೊ ಅಥವಾ ಇಂಗ್ಲೆಂಡಿನ ಉಪಯೋಗಕ್ಕೊ? ನಿಜವಾದ ಗುಟ್ಟು ಹೇಳಬೇಕಾದರೆ ವಸಾಹತುಗಳಂತೆ ಹಿಂದುಸ್ಥಾನಕ್ಕೆ ಸಹ ಅಂತರ್ಗತ ಸ್ವರಾಜ್ಯದ ಅಧಿಕಾರವು ಲಭಿಸಿದರೆ ಮಾತ್ರ ವಸಾಹತುಗಳಿಗೂ ಇದಕ್ಕೂ ಸಾಮ್ಯವು ಬಂದೀತು. ಮನೆಯಲ್ಲಿ ಮಾನವಿಲ್ಲದವನಿಗೆ ಪೇಟೆಯಲ್ಲಿ ಯಾರು ಕೇಳುವರು? ದೇಶದೊಳಗಿನ ಕೌನ್ಸಿಲುಗಳಲ್ಲಿ ಲೋಕಮತದ ಕಿವಿ ಬೀಳುವಂತೆ ರಾಜ್ಯಸೂತ್ರವು ಬದಲಾಗುವುದು ಅಗತ್ಯ. ಅದಾವುದಕ್ಕಿಂತ ಮುಂಚೆ ಸಾಮ್ರಾಜ್ಯ ಪರಿಷತ್ತಿನ ಸುದ್ದಿಯು ಯಾಕೆ? ಇದೆ ನಾವು ಪಾರ ಶಾಸ್ತ್ರಿಗಳು ಹೇಳುತ್ತಾರೆ, ಸಾಮ್ರಾಜ್ಯ ಪುನರ್ಘಟನ ಪ್ರಶ್ನೆಯು ಇನ್ನೂ ನಿರ್ಣಯ ಸ್ಥಿತಿಗೆ ಬಂದಿಲ್ಲ. ಆ ವಿಷಯದಲ್ಲಿ ಈಪ್ ಮುತ್ತ ದಿನಗಳಲ್ಲಿಯೇ ಕುಂಬಾ ಮತಭೇದವಿದೆ. ಆದರೆ ನಮ್ಮಿಂದ ಸ್ವರಾಜ್ಯದ ಪಕ್ಷೆಯು ಯಾವ ಗಲಿಬಿಲಿಗೆ ಆಸ್ಪದ ಕೊಡುವಂಥದ್ದಲ್ಲ ಲಖನೌದಲ್ಲಿ ಸೇರಿದ ರಾಷ್ಟ್ರ ಸಭೆ ಮತ್ತು ಮೊಸ್ಲೆಮ ಲೀಗ್ ಈ ಎರಡು ಸಂಸ್ಥೆಗಳು ಪ್ರಾತಿನಿಧಿಕ ತತ್ವಕ್ಕನುಸಾರವಾಗಿ ಸ್ವರಾಜ್ಯ ಪದ್ಧತಿಯು ಯಾವ ಸುಧಾರಣೆಗಳನ್ನು ಕೇಳಿರುವವೊ ಅವುಗಳ ಪ್ರತಿ ಒಬ್ಬ ಹಿಂದೀ ದೇಶ ಭಕ್ತನ ಅಂತರಂಗವು ಅಭಿಮಾನ ಮತ್ತು ಸಂತೋಷದಿಂದ ಉಲ್ಲಸಿತವಾಗಿರಬೇಕು. ನಮ್ಮ ಉಚ್ಚ ತರದ ಸಂಸ್ಥೆಗೂ ವಿವಿಧ ವಿದ್ಯೆಗಳಿಗೂ ಮತ್ತು ವೈಭವಶಾಲಿ ಪೂರ್ವಪರಂಪರೆಗೂ ಅನುರೂಪವಾದ ಧ್ಯೇಯವು ನಮಗೀಗ ಲಭಿಸಿದೆ. ಈ ಧ್ಯೇಯವು ಯಾವುದೆಂದರೆ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಸ್ವರಾಜ್ಯವೇ ಸರಿ.

ಈ ಪ್ರಕಾರ ಶ್ರೀನಿವಾಸ ಶಾಸ್ತ್ರಿಗಳು, ಸ್ವರಾಜ್ಯದ ಪ್ರಾಶಸ್ತ್ಯಪೂರ್ವಕ ಆವಶ್ಯಕತೆಯನ್ನು ಹಾಕಿ ಅದರ ಪ್ರಾಪ್ತಿಗೋಸ್ಕರ ಯತ್ನ ಮಾಡಲು ಉಪದೇಶಿಸಿರುವರು. "ಜಗತ್ತಿನಲ್ಲಿ ಲೋಕಸತ್ತೆಯ ಉದಾತ್ತ ತತ್ವಗಳು ಉದಿತವಾಗಿವೆ. ನಾವು ಕೂಡ ಆ ತತ್ವಗಳ ಅಂಶ ಭಾಗಿಗಳು. ನಾವು ತಾತ್ಕಾಲಿಕ ದೃಷ್ಟಿಯನ್ನು ಇಟ್ಟುಕೊಳ್ಳುವುದಿಲ್ಲ. ದೂರದೃಷ್ಟಿಯನ್ನು ಉಪಯೋಗಿಸೋಣ. ಮತ್ತು ಸ್ವರಾಜ್ಯಕ್ಕಾಗಿ ಯತ್ನಿಸೋಣ. ಹಿಂದುಸ್ಥಾನದ ರಕ್ತವೂ, ಹಣವೂ ವ್ಯರ್ಥ ವೆಚ್ಚವಾದವುಗಳಲ್ಲ. ಇಂಗ್ಲಿಷ್ ಜನರೂ, ಹಿಂದೀ ಪ್ರಜೆಗಳೂ ಇಲ್ಲಿ ಅಪೂರ್ವವಾದ ಸಮಾನಭೂತಿಯು ಉತ್ಪನ್ನವಾಗಿದೆ. ಹಿಂದುಸ್ಥಾನಕ್ಕೆ ಈಗ ಕ್ಷೇಮಗಿನ ತರಗತಿಯಲ್ಲಿ ಏರಿಸುವುದಾಗಲಿ ಇಲ್ಲವೆ ಅದರಂಗದಾಳಿಯನ್ನು ಎಬ್ಬಿಸುವ ಸ್ವಭಾವದ್ದೆಂದು ತಿಳಿಯುವುದಾಗಲಿ ಇನ್ನು ಮುಂದೆ ಶಕ್ಯವಿಲ್ಲ ಮತ್ತು ಹಿಂದುಸ್ಥಾನಕ್ಕೆ ನಿಃಶಸ್ತ್ರ ಹಾಗು ದುರ್ಬಲ ಸ್ಥಿತಿಯಲ್ಲಿಡುವ ಬುದ್ಧಿವಂತಿಕೆಯೂ ಅಲ್ಲ." ಈ ರೀತಿಯಿಂದ ಜನರಿಗೆ ಪ್ರೋತ್ಸಾಹಕರ ಮತ್ತು ಸರಕಾರಕ್ಕೆ ಬೋಧಪ್ರದವಾದ ಮಾತುಗಳನ್ನು ಹೇಳಿ ಸರಕಾರದ ಸದಾಸರ್ವದಾ ಶಂಕಿತ ದೃಷ್ಟಿಯ ಕುರಿತು ವಿವರಿಸುವಾಗ ಶಾಸ್ತ್ರಿಗಳು ಹೇಳಿದ್ದೇನೆಂದರೆ, ಐರ್ಲಂಡಿನ ಕುರಿತು ನಡೆದ ವಾದವಿವಾದವು ತೀವ್ರ ಸ್ಥಿತಿಗೆ ಬಂದಾಗ ನಮ್ಮ ಉದ್ದೇಶದ ವಿಷಯದಲ್ಲಿ ವಿರುದ್ಧ ಪಕ್ಷದವರಿಗೆ ತಪ್ಪು ತಿಳಿಯಗೊಡದಂತೆ ನಾವು ಜಾಗ್ರತೆ ಮಾತ್ರವಲ್ಲ, ಪ್ರತಿ ಬಂದು ಸಂದರ್ಭದಲ್ಲಿ "ರಾಜ್ಯಕ್ರಾಂತಿಯು ನಮಗೆ ಬೇಕಿಲ್ಲವೆಂಬು"ದನ್ನು ಸ್ಪಷ್ಟವಾಗಿ ಹೇಳಬೇಕು. ಈ ಬಗ್ಗೆ ನಾವು ಎಂದೂ ಆಲಸ್ಯ ಅಥವಾ ಔದಾಸೀನ್ಯ ಮಾಡಬಾರದೆಂದು ಶಾಸ್ತ್ರಿಗಳ ಅಭಿಪ್ರಾಯವಿದೆ. ಮತ್ತು ಅದು ಹಾಗೆ ಬೇಕಾದುದೆ. ರಾಷ್ಟ್ರೀಯ ಸಭೆಯಂಥ ಶಾಂತಸಂಸ್ಥೆಯ ಶಾಂತಸೂಚಿತ ಕೂಡ ಕ್ರಾಂತಿಕರವಾಗುವವು. ಆದರೆ ಇದು ಯಾಕೆ ಎಂದು ನಾವು ಪಾರ ಅಧ್ಯಕ್ಷರು ಕೇಳುವರು. ಪ್ರಾತಿನಿಧಿಕ ತತ್ವದ ರಾಜ್ಯವು ನಮ್ಮ ಕಡೆಗೆ ಬಂತೆಂದರೆ ವೈಸರಾಯ ಗವರ್ನರುಗಳು, ಕಾರ್ಯವಿಧಾಯಕ ಕೌನ್ಸಿಲುಗಳು, ಬೇರೆ ಬೇರೆ ಖಾತೆಗಳು ಇವೆಲ್ಲ ಹಿಂದಿನಂತೆ ನಡೆಯುವವು. ಹಾಗು ಸೈನ್ಯ, ಯುದ್ಧನಾವೆ, ಪರ ರಾಷ್ಟ್ರಗಳೊಡನೆ ಸಂಬಂಧ ಮುಂತಾದ ಈ ಸಂಗತಿಗಳು ಸರಕಾರದ ಕೈಯಲ್ಲೆ ಇರುವವು. ಇಷ್ಟು ಸಂಗತಿಗಳು ಇಂಗ್ಲಿಷರ ವಶದಲ್ಲಿರುವಾಗ ಪುನಃ ನಮ್ಮ ಸ್ವರಾಜ್ಯದ ಕೇಳುವಿಕೆಯು ಕ್ರಾಂತಿಕಾರಿಕವಾದುದು ಅಲ್ಲವೆ. ನಮ್ಮ ಸ್ವರಾಜ್ಯದಿಂದ ಆಗುವ ಫಲಿತಾಂಶವೇನೆಂದರೆ ನಮ್ಮ ಮನೆಯೊಳಗಿನ ಕಾರಭಾರವನ್ನು ಮಾತ್ರ ನಾವೆ ನಡೆಯಿಸಬೇಕಾಗುವದು. ಮತ್ತೇನಲ್ಲ. ಇದೇ ಹಿಂದೀ ಸ್ವರಾಜ್ಯದ ಸ್ವರೂಪವು.

ಹಿಂದೀ ಜನರಿಗೆ ಯಾವುದು ಕಡಿಮೆಯಿದೆ? ನಾವು ನಿಮಗೆ ಲೇಖನ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. ಭಾಷಣ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. ಇನ್ನು 'ಹಕ್ಕು' 'ಹಕ್ಕು' ಎಂದು ಬಡಕೊಳ್ಳುವುದು ಯಾಕೆ? ಈ ಆಕ್ಷೇಪಕ್ಕೆ ಅಧ್ಯಕ್ಷರು ಬಹು ಸಮರ್ಪಕವಾದ ಉತ್ತರವನ್ನು ಕೊಟ್ಟಿರುವರು. ಈಗ ಬರೆ ಮಾತಾಡುವುದಲ್ಲ, ರಾಜ್ಯ ನಡೆಯಿಸುವ ಹಕ್ಕು ನಮಗೆ ಬೇಕಾಗಿದೆ. ಕೌನ್ಸಿಲುಗಳಲ್ಲಿ ಅಥವಾ ಬೇರೆ ಕಡೆಗಳಲ್ಲಿ ಮತಪ್ರತಿಪಾದನೆಯ ಸ್ವಾತಂತ್ರ್ಯವು ಲಭಿಸಿದರೆ ಸಂತೋಷಪಡುವ ದಿವಸಗಳು ಈಗ ಇಲ್ಲ, ಅವು ಹೋದವು. ಈಗ ಬೇಕಾದುದನ್ನು ಸ್ಪಷ್ಟವಾಗಿ ಹೇಳುವದಾದರೆ, ರಾಜಕೀಯ ಸಮಯು ನಮಗೆ [illegible] ನಮ್ಮ ರಾಜ್ಯವನ್ನು ನಾವೆ ನಡೆಸುವುದು ಬೇಕಾಗಿದೆ. [illegible] [illegible]

ಲೋಯ್ಡ್ ಜೋರ್ಜರ ಅಭಿಪ್ರಾಯವನ್ನು ಆಲೋಚಿಸಿರಿ. ಮಿ. ಬೋನರಲೊ ಇವರು "ಈ ರಾಜ್ಯಪದ್ಧತಿಯು ಉತ್ಕೃಷ್ಟವಾಗಿದ್ದಲ್ಲಿಯೆ ನಿಮ್ಮ ಕೆಲಸವಾಯಿತೆಂದು ನೆನಸಬೇಡಿರಿ. ರಾಜ್ಯಪದ್ಧತಿಯು ದೋಷಯುಕ್ತವೆ ಇರಲಿ, ಕೆಟ್ಟದ್ದೇ ಇರಲಿ, ಆದರೂ ಚಿಂತೆಯಿಲ್ಲ, ಆದರೆ ಅದು ಲೋಕತಂತ್ರದಿಂದ ನಡೆಯುವುದಾಗಿದ್ದರೆ, ಅನ್ಯರ ಉತ್ತಮವಾದುದಾದರೂ ಲೋಕಪ್ರೀತಿಯು ಮತ್ತು ಸಮಾಧಾನದ ಅಡಿಗಟ್ಟಿನ ಮೇಲೆ ರಚಿಸಲ್ಪಡದಂಥ ರಾಜ್ಯಪದ್ಧತಿಗಿಂತ ಎಷ್ಟೋ ಶ್ರೇಯಸ್ಕರವಾಗಿರುವುದು" ಎಂದು ಹೇಳುವರು.

ಅಮೇರಿಕವು ಫಿಲಿಪಾಯಿನ್ ದ್ವೀಪಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟಿತು. ರುಶ್ಯವು ಪೋಲಂಡಿಗೆ ಸ್ವಾತಂತ್ರ್ಯವನ್ನು ಕೊಟ್ಟಿತು. ಇವೆರಡರಲ್ಲಿ ಅಮೇರಿಕದ ನಂಬರು ಒಂದನೆಯದು, ರುಶ್ಯದ್ದು ಎರಡನೆಯದು. ಕಾರಣ ಪೋಲಂಡಿಗೆ ಸ್ವಾತಂತ್ರ್ಯ ಕೊಡುವುದರಲ್ಲಿ ರುಶ್ಯಕ್ಕೆ ಸ್ವಾರ್ಥವಿತ್ತು. ಅಮೇರಿಕಕ್ಕೆ ಹಾಗಿರಲಿಲ್ಲ. ನಮ್ಮ ಇಂಗ್ಲೆಂಡವು ಸ್ವಾತಂತ್ರ್ಯದ ತವರು ಮನೆಯಾಗಿದ್ದು ಕೂಡ ತನ್ನ ಮೂರನೆಯ ಸ್ಥಾನವನ್ನು ಬಿಟ್ಟು ಬಿಡುತ್ತದಲ್ಲವೆ? ಈ ವಿಧದಿಂದ ನಾವು ಆಕ್ಷೇಪಿಸಿದರೆ, "ಅವಸರಪಡಬೇಡಿರಿ ಸಾವಕಾಶವಾಗಿ, ಕ್ರಮ ಕ್ರಮದಿಂದ ಹಕ್ಕುಗಳನ್ನು ಪಡಕೊಳ್ಳಿರಿ. ರಾಜಕೀಯ ವಿಷಯದಲ್ಲಿ ನೀವು ಇನ್ನೂ ನಿಪುಣರಾಗಲಿಲ್ಲ. ನಿಮ್ಮಲ್ಲಿಯ ಧಾರ್ಮಿಕ ಹಾಗು ಸಾಮಾಜಿಕ ಭೇದಗಳೂ ವೈಮನಸ್ಯಗಳೂ ಹಾಗೆ ಇವೆ. ಆದುದರಿಂದ ಸಾವಕಾಶವಾಗಿಯೇ ಹಕ್ಕುಗಳನ್ನು ಪಡಕೊಳ್ಳಿರಿ." ಎಂದು ಪ್ರತ್ಯುತ್ತರವನ್ನು ಕೊಡುವರು. ಆದರೆ ಸಾವಕಾಶವೆಂದರೆ ಇನ್ನೆಷ್ಟು ಸಮಯ ನಿರೀಕ್ಷಿಸತಕ್ಕದು? ಜಪಾನ ಮತ್ತು ಫಿಲಿಪಾಯಿನ್ ದ್ವೀಪಗಳು ನಮ್ಮನ್ನು ಯಾವಾಗಲೆ ಹಿಂದಿಟ್ಟು ಸ್ವರಾಜ್ಯವನ್ನು ಹೊಂದಿದವು! ಶಿಕ್ಷಣ, ಸಂಪತ್ತಿ, ಮತ್ತು ಸಾಮಾಜಿಕ ಪರಿಸ್ಥಿತಿ ಇವುಗಳಲ್ಲಿ ಯಾವ ದೃಷ್ಟಿಯಿಂದ ನೋಡಿದರೂ ಸ್ವರಾಜ್ಯಶೂನ್ಯ ಸ್ಥಿತಿಯಲ್ಲಿ ನಾವು ಒಂದು ಯುಗವನ್ನು ಕಳೆದೆವು. ಇದು ಉದ್ವಿಗ್ನತೆಯ ಮಾತಾಗಿದೆ. ಹೆಜ್ಜೆ ಹೆಜ್ಜೆಯಿಂದ ಅಥವಾ ಸೋಪಾನ ನ್ಯಾಯದಿಂದ ಎಂಬುದರ ಅರ್ಥವೇನು? ಇಲ್ಲಿಯ ಕೌನ್ಸಿಲುಗಳು ಮತ್ತು ಅಧಿಕಾರ ಸ್ಥಾನಗಳು ಹೀಗೆ ಎರಡು ಸಂಗತಿಗಳನ್ನು ವಿಮರ್ಶೆಗಾಗಿ ತೆಕ್ಕೊಳ್ಳೋಣ. ಕಾಯಿದೆ ಕೌನ್ಸಿಲುಗಳು ೧೮೬೧ನೇ ವರ್ಷ ಪ್ರಥಮತಃ ಅಸ್ತಿತ್ವದಲ್ಲಿ ಬಂದವು. ಅವುಗಳಲ್ಲಿಯ ಸಭಾಸದರು ಸರಕಾರ ನಿಯುಕ್ತರೇ ಇದ್ದರು, ಎಂಟು ವರ್ಷಗಳ ಅನಂತರ ಅವುಗಳಲ್ಲಿ ಹಿಂದಿ ಪ್ರತಿನಿಧಿಗಳ ಪ್ರವೇಶವಾಯಿತು. ಇನ್ನು ಮೂವತ್ತು ವರ್ಷಗಳು ಕಳೆಯಲು ಎಂದರೆ ೧೮೯೨ರಲ್ಲಿ ಆ ಕೌನ್ಸಿಲುಗಳಿಗೆ ಕೊಂಚ ಮಟ್ಟಿಗೆ ವ್ಯವಸ್ಥಿತ ಸ್ವರೂಪವು ಪ್ರಾಪ್ತವಾಯಿತು. ಎಂದರೂ ಅವುಗಳಲ್ಲಿ ಲೋಕನಿಯುಕ್ತ ಸಭಾಸದರೂ ಹೇಳುವಂತಿರಲಿಲ್ಲ. ಕೌನ್ಸಿಲುಗಳಿಗೆ ಈಗಿನ ಸ್ವರೂಪವು ಬರಬೇಕಾದರೆ ಅನಂತರ ೧೭ ವರ್ಷಗಳು ದಾಟಿಹೋಗಬೇಕಾಯಿತು. ಇದಾದರೂ ಹದಿನಾರಾಣೆಯ ರೂಪಾಯಿಯೆ? ಹೊರಗಿನ ಚಂದ, ಬರೆ ಆಶೆ ಇವುಗಳಲ್ಲದೆ ಈಗಿನ ಕೌನ್ಸಿಲುಗಳಲ್ಲಿನ್ನೇನಿದೆ? ಒಂದು ವೇಳೆ ಎರಡು ವರ್ಷಗಳು ಕಳೆದರೆ ಲೋಕಪ್ರತಿನಿಧಿಗಳ ಸಂಖ್ಯೆಯು ಇನ್ನು ಕೆಲ ವಂಶದಿಂದ ಹೆಚ್ಚಿಸಿದ ಕೌನ್ಸಿಲು ರಚನೆಯು ಬರುವುದೊ ಏನೋ! ಹೊರತು ಕೌನ್ಸಿಲುಗಳು ಪೂರ್ಣ ಲೋಕಪ್ರತಿನಿಧಿವಿಷ್ಟವಾಗಬೇಕಾದರೆ ಇನ್ನೆಷ್ಟು ವರ್ಷಗಳು ಹೋಗಬೇಕೋ ಯಾರಿಗೆ ಗೊತ್ತು? ಕೌನ್ಸಿಲುಗಳ ಸ್ಥಿತಿಯು ಹೀಗೆ, ಅಧಿಕಾರ ಸ್ಥಾನಗಳ ಕುರಿತು ವಿಚಾರಿಸಿದರೆ, ಅಲ್ಲಾದರೂ ಆಶಾಜನಕ ಪರಿಸ್ಥಿತಿಯಿರುವುದೆ? ಪಬ್ಲಿಕ್ ಸರ್ವಿಸ್ ಎಂಬೀ ಹೆಸರಿಗೆ ಒಳಪಟ್ಟ ಅಧಿಕಾರದ ಜಾಗೆಗಳನ್ನು ಕೊಡುವುದರಲ್ಲಿ ಬಹಳ ದೀರ್ಘ ಸೂತ್ರತೆಯು ನಡೆದಿದೆ. ಸರಕಾರಿ ಹುದ್ದೆಗಳಲ್ಲಿ ಹಿಂದೀ ಮತ್ತು ಯುರೋಪಿಯನ್ ಈ ಭೇದವನ್ನು ಮಾಡಕೂಡದೆಂಬುದಾಗಿ ೧೮೩೩ರಲ್ಲಿ ಪಾರ್ಲಿಮೆಂಟು ಒಂದು ನಿಬಂಧವನ್ನು ಹಾಕಿಕೊಟ್ಟಿತು. ಅನಂತರ ಮಹಾರಾಣಿಯವರು ತಮ್ಮ ಜಾಹೀರನಾಮೆಯಲ್ಲಿ ಈ ತತ್ವವನ್ನೆ ಪುನರಾವರ್ತಿಸಿದರು. ೧೮೫೦-೬೦ರ ಸರಕಾರವು ಅಧಿಕಾರಗಳನ್ನು ಕೊಡುವಾಗ ಭೇದವನ್ನುಂಟುಮಾಡಲಿಕ್ಕಿಲ್ಲೆಂದು ಹೇಳಿ ಆಯಿತು. ಇಷ್ಟೆಲ್ಲ ನಿರ್ಬಂಧವೂ, ಆಶ್ವಾಸನೆಗಳೂ, ಅಭಿವಚನಗಳೂ, ಶಬ್ದತಃ ವ್ಯಕ್ತಮಾಡಲ್ಪಟ್ಟವಾದರೂ ಮಾಡುವದೇನು? ಹೆಚ್ಚೆಂದರೆ ¼ ಜಾಗೆಗಳನ್ನು ಹಿಂದೀ ಜನರಿಗೆ ಕೊಡಬೇಕೆಂದು ನಿಯಮವು ವಿಧಿಸೋಣಾಯಿತು! ಮತ್ತು ಅಂದಿನಿಂದ ಈ ವರೆಗೆ ಅದೇ ಕ್ರಮವು ನಡೆದಿದೆ. ಮೊನ್ನೆಯ ಪಬ್ಲಿಕ್ ಸರ್ವಿಸ್ ಕಮಿಷನು ಬಂದು ಮಾಡಿದ್ದೇನು? ¼ ಜಾಗೆಗಳನ್ನು ಮಾತ್ರ ಹಿಂದಿಗಳಿಗೆ ಕೊಡಬೇಕೆಂದು ಹೇಳಿದ್ದು ಅಷ್ಟೆ ಅಲ್ಲವೆ? ಉಳಿದ ¾ ಬ್ರಿಟಿಷ್ ಜನಗಳಿಗೆ. ಈ ಬಗ್ಗೆ ಕೊಟ್ಟ ಕಾರಣಗಳಾದರೂ ಎಷ್ಟು ಸಮರ್ಪಕವಿದ್ದಾವೆಂಬುದನ್ನು ನೋಡಿದರೆ, ಬ್ರಿಟಿಷ್ ಹಿತಸಂಬಂಧದ ರಕ್ಷಣೆಗಾಗಿ ¾ ಜಾಗೆಗಳನ್ನು ಬ್ರಿಟಿಷ್ ಕೈಯಲ್ಲಿರುವುದು ಉಚಿತವಂತೆ. ಪೋಲೀಸ ಇಲಾಖೆಯಲ್ಲಂತು ¾ ಜಾಗೆಗಳನ್ನು ಬ್ರಿಟಿಷರಿಗಾಗಿ ಕಾದಿಟ್ಟು ಈ ಧೋರಣದ ಪರಮಾವಧಿಯು ಮಾಡೋಣಾಗಿದೆ. ಅಧಿಕಾರಸ್ಥಾನಗಳ ವಿಷಮತೆಯೂ ಮೊನ್ನೆಯ ಕಮಿಷನಿನಿಂದಲೂ ದೂರವಾಗಲಿಲ್ಲ. ಇಂಥ ರಿಪೋರ್ಟನ್ನು ಈ ಯುದ್ಧದ ಸಮಯದಲ್ಲಿ ಪ್ರಸಿದ್ಧಿಸಿದ್ದು ತಪ್ಪಲ್ಲವೆ? ಕಾಯಿದೆಯಂತೆ ಗಣನೆಯು ಇಲ್ಲಿಯೆ ಬ್ರಿಟಿಷರೊಡನೆ ಹಿಂದಿಗಳ ಸಮತ್ವವು ಪ್ರಸ್ಥಾಪಿತವಾಗಿ ೮೦ ವರ್ಷಗಳು ದಾಟಿದರೂ ಇನ್ನೂ ಅಧಿಕಾರದ ¾ ಜಾಗೆಗಳೂ ¼ ಜಾಗೆಗಳೂ ಇದೆ, [illegible] ನಡೆದಿದೆ. [illegible] [illegible]

ಈ ರೀತಿಯಿಂದ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಸಮರ್ಪಕವಾಗಿ ಹಿಂದುಸ್ಥಾನದ ಬ್ರಿಟಿಷ್ ಆಡಳಿತೆಯ ಕ್ರಮವನ್ನು ಪರ್ಯಾಲೋಚಿಸಿರುವರು. ಮುಂದೆ ೧೯೫೦ ನ ಕೋಪೇಶ" ಈ ನ್ಯಾಯಧಿಂದ ಅದ ಶಬ್ದಿಗೆ ಉಪಾಯವಿಲ್ಲ; ಇನ್ನು ಮುಂದೆಯಾದರೂ ನವೀನ ಯುಗಕ್ಕೆ ನವೀನ ತತ್ವಗಳನ್ನವಲಂಬಿಸಿ ರಾಜ್ಯ ಶಕಟವನ್ನು ನಡೆಯಿಸುವುದು ಬ್ರಿಟಿಷ್ ಮುತ್ಸದ್ದಿಗಳ ಕರ್ತವ್ಯವಾಗಿಧೆಂದು ರಾಜ್ಯ ಕರ್ತರಿಗೆ ಯೋಗ್ಯ ಶಬ್ದಗಳಿಂದ ಎಚ್ಚರ ಕೊಟ್ಟಿರುವರು. ಶಾಸ್ತ್ರಿಗಳ ಭಾಷಣವು ಎಷ್ಟು ಉದ್ದವಿರುವುದೊ ಅಷ್ಟೇ ಕಿಂಬಹುನಾ ಹೆಚ್ಚು ಮಹತ್ವದ್ದಿರುವುದು. ಆದರೂ ಸ್ಥಳಸಂಕೋಚದ ಕಾರಣದಿಂದ ಅದರ ಕೆಲವಂಶವನ್ನು ಮಾತ್ರ ವಾಚಕರಿಗೆ ತೋರಿಸಿದ್ದೇವೆ, ಇರಲಿ. ಮದ್ರಾಸ, ಮುಂಬಯಿ ಪ್ರಾಂತಿಕ ಪರಿಷತ್ತುಗಳ ವೃತ್ತಾಂತವನ್ನು ನೋಡುವಾಗ ವರಿಷ್ಟ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀನಿವಾಸ ಶಾಸ್ತ್ರಿಗಳಾಗಲಿ ನಿವೃತ್ತ ಮಂತ್ರಿಗಳಾದ ಮಾಧವರಾಯರೆ ಆಗಲಿ ಇವರು ತಾವು ಜಪಿಸುವ ಹಿಂದೀ ಸ್ವರಾಜ್ಯದ ಮಂತ್ರವನ್ನು ಅಧ್ಯಕ್ಷಸ್ಥಾನದ ವ್ಯಾಸಪೀಠದಿಂದ ದೇಶಭಕ್ತಿಯ ಉಚ್ಚವಾತಾವರಣದಲ್ಲಿ ಗಂಭೀರ ಸ್ವರದಿಂದ ಉದ್‌ಘೋಷಿಸುತ್ತಿದ್ದಾರೆ. ಇದು ಹಿಂದೀ ರಾಷ್ಟ್ರದ ಮಹದ್ ಭಾಗ್ಯವೆ ಸರಿ.

ಸ್ಫುಟವಿಚಾರಗಳು.

೧. ಪರರಿಗಿಟ್ಟ ಸೂಲ ತನಗೆ ಬರುವುದೆಂದು ಹೇಳುತ್ತಾರೆ. ಇಂಗ್ಲಂಡಿನೊಳಗಿನ "ನೇಶನ್" ಪತ್ರದ ಸಂಗತಿಗಳನ್ನು ಕೇಳುವಾಗ ಮೇಲಿನ ಮಾತಿಗೆ ಅಸ್ತುಪಡಬೇಕಾಗುತ್ತದೆ. ಕಳೆದ ವಾರದ ವೃತ್ತಪತ್ರಿಕೆಗಳನ್ನು ನೋಡಿದರೆ ಅವುಗಳಲ್ಲಿ "ನೇಶನ್" ಪತ್ರದ ಸಂಗತಿಯೇ ಪ್ರಾಮುಖ್ಯದಿಂದ ಕಂಡುಬರುತ್ತದೆ. ವಿಲಾಯತಿಯೊಳಗಿನ "ನೇಶನ್" ಪತ್ರದ ಮೇಲೆ ಡಿಫೆನ್ಸ್ ಎಕ್ಟನ್ನು ಲಗಾವ ಮಾಡಿ ಪರದೇಶಗಳಲ್ಲಿ ಅದನ್ನು ಕಳುಹಿಸಕೂಡದೆಂದು ವಿಲಾಯತಿ ಸರಕಾರವು ಹುಕುಮನ್ನು ಮಾಡಿದೆ. ನೇಶನ್ ಪತ್ರದ ಪೂರ್ವ ಚರಿತ್ರೆಯಾಗಲಿ ಈಗಿನ ವರ್ತನವಾಗಲಿ ರಾಜನಿಷ್ಠಾಪ್ರಚುರವಾಗಿಯೆ ಇದೆ. ಅಲ್ಲದೆ, ಯುದ್ಧದ ಘೋರಣಕ್ಕೂ ಅದು ಅನುಕೂಲವಾಗಿಯೆ ಇರುವುದು. ಎಂದ ಮೇಲೆ ಅದರ ಪರದೇಶ ಪ್ರಸಾರಣೆಯನ್ನು ನಿಲ್ಲಿಸಿದ್ದರ ಕಾರಣವೇನೆಂದು ವಾಚಕರಿಗೆ ಸಹಜವಾಗಿ ಒಂದು ಆಶಂಕೆ ಹುಟ್ಟಬಹುದು. ಅದರ ಕಾರಣವನ್ನು ಸರಕಾರವು ಕೊಡುವುದೇನೆಂದರೆ, ಸದರಿ ಪತ್ರವು ಯುದ್ಧವ್ಯವಸ್ಥೆಯ ಮೇಲೆ ಮಾಡಕೂಡದ ಟೀಕೆ ಮಾಡುತ್ತದೆ! ಶಂಕಿತಮನೋವೃತ್ತಿಗಳಿಂದ ಉದ್ಭವಿಸಿದ ವಿಲಾಯತಿ ಸರಕಾರದ ಈ ಅವಿಚಾರದ ಕೃತ್ಯವನ್ನು 'ಮೆಂಚಸ್ಟರ್ ಗಾರ್ಡಿಯನ್' ದಂಥ ಪ್ರತಿಷ್ಠಿತ ಪತ್ರಿಕೆಗಳು ನಿಷೇಧಿಸುತ್ತಿವೆ. ಹಿಂದೂಸ್ಥಾನದ ಕಾರಭಾರವನ್ನು ನಡೆಯಿಸುವ ಬ್ರಿಟಿಷ ಜನಾಂಗದವರೆ ವಿಲಾಯತಿಯನ್ನೂ ಆಳುತ್ತಾರೆ. ಇಲ್ಲಿ ಪ್ರೆಸ್ ಎಕ್ಟ್, ಡಿಫೆನ್ಸ ಎಕ್ಟ್ ಮುಂತಾದವುಗಳನ್ನು ಜಾರಿಗೆ ತಂದು ಆ ಅಭ್ಯಾಸವು ಅವರ ಮೈಯಲ್ಲಿ ಒಗ್ಗಿಹೋಗಿದೆ. ಅದರ ಗುರುತು ಮೇಲಿನ ಸಂಗತಿಯು ಆಗಿದೆ. ಇದೀಗ ಪರರಿಗಿಟ್ಟದ್ದು ತನಗೆ ಬರುವುದೆಂಬುದು. ಆದುದರಿಂದ ನಾವು ಹಿಂದಿಗಳು ಪ್ರೆಸ ಎಕ್ಟಿನಂಥ ಮತ್ತು ಡಿಫೆನ್ಸ್ ಎಕ್ಟಿನಂಥ ಕಾಯಿದೆಗಳನ್ನು ಸೌಮ್ಯಪಡಿಸಿರಿ ಎಂದು ಅಧಿಕಾರಿಗಳೊಡನೆ ಪದೇಪದೇ ಕೇಳಿಕೊಳ್ಳುತ್ತಿದ್ದೇವೆ. ಆದರೆ ಅದರ ಅರ್ಥವು ಅಧಿಕಾರಿಗಳಿಗೆ ಮಾತ್ರ ಗೊತ್ತಾಗಲಿಲ್ಲ! ಗೊತ್ತಾಗುವುದೂ ಇಲ್ಲ!!

೨. "ಐರಿಶ್ ಹೋಮ್‌ರೂಲಿ"ನ ಕಡೆಗೆ ಸ್ವತಃ ವಿಲಾಯತಿಯಲ್ಲಿ ಪ್ರಧಾನ ಮಂತ್ರಿಗಳಂಥವರು ಸಹ ಎಷ್ಟು ಸಹಾನುಭೂತಿಯಿಂದ ನೋಡುತ್ತಾರೆಂಬುದನ್ನು ನಾವು ಹಿಂದೆ ಆಗಾಗ್ಗೆ ಪ್ರಕಟಿಸಿದ ವೃತ್ತಾಂತಗಳಿಂದ ತಿಳಿದುಕೊಂಡಿದ್ದರೂ ಈಚೆಗೊಂದು ಅದೇ ವಿಷಯದಲ್ಲಿ ಮಹತ್ವದ ವರ್ತಮಾನವು ಪ್ರಸಿದ್ಧವಾಗಿದೆ. ಪಾರ್ಲಿಮೆಂಟಿನೊಳಗೆ ಮಿ. ಬೊನರ್‌ಲೊ ಇವರು ಐರಿಶ್ ಹೋಮ್ ರೂಲಿನ ಕುರಿತು ಒಂದು ಹೊಸ ಯೋಜನೆಯನ್ನು ಸರಕಾರವು ಬೇಗನೆ ತಯಾರಿಸುವುದರಲ್ಲಿದೆಂದು ಪ್ರಸ್ತಾಪಿಸಿದ ಸಂಗತಿಯನ್ನು ಸ್ವದೇಶಾಭಿಮಾನಿಯ ಈ ವರ್ಷದ ಎಪ್ರಿಲ್ ತಾ. ೬ನೆಯ ಸಂಚಿಕೆಯಲ್ಲಿ ಓದಿದ್ದನ್ನು ವಾಚಕರು ಮರೆತಿರಲಾರರು. ಅಂದು ಬೊನರ್ ಲೊ ಇವರು ಆಶ್ವಾಸನೆಯನ್ನು ಕೊಟ್ಟಂತೆ ಕಳೆದ ವಾರದಲ್ಲಿ ಮುಖ್ಯ ಮಂತ್ರಿಗಳಾದ ಮಿ. ಲೊಯ್ಡ ಜೋರ್ಜರು ಒಂದು ತಾತ್ಕಾಲಿಕ ಯೋಜನೆಯನ್ನು ತಯಾರಿಸಿರುವರು. ಮಿ. ಲೊಯ್ಡ ಜೋರ್ಜರು ಪಾರ್ಲಿಮೆಂಟನಲ್ಲಿ ಸೂಚಿಸಿದ್ದೇನೆಂದರೆ, ಐರ್ಲಂಡಿನೊಳಗಿನ ರಾಷ್ಟ್ರೀಯ ಮತ್ತು ಅಲ್‌ಸ್ಟರ ಪಕ್ಷದವರಿಗೆ ಕೂಡಿ ಒಂದು ಕೌನ್ಸಿಲು ಯಾನೆ ಪಾರ್ಲಿಮೆಂಟು ಕೊಡೋಣಾಗುವುದು. ಈ ಕೌನ್ಸಿಲಿನಲ್ಲಿ ಮೇಲಿನ ಎರಡೂ ಪಕ್ಷಗಳ ಪ್ರತಿನಿಧಿಗಳು ಸಮ ಪ್ರಮಾಣದಿಂದ ಇರುವರು. ಐರ್ಲಂಡಿಗೆ ಸಂಬಂಧಪಟ್ಟ ಕಾಯಿದೆಕಾನೂನುಗಳನ್ನು ಪ್ರತಿ ಒಂದು ಪಕ್ಷದ ಬಹುಮತದಿಂದ ಈ ಹೊಸ ಪಾರ್ಲಿಮೆಂಟು ತಯಾರಿಸತಕ್ಕದ್ದು. ಈ ಹೋಮ್‌ರೂಲ ಪಾರ್ಲಿಮೆಂಟಿನೊಳಗಿನ ಯಾವುದಾದರೊಂದು ಕಾಯಿದೆಯ ವ್ಯಾಪ್ತಿಯು ಇಲ್ಲದ ಕಡೆಯಲ್ಲಿ ಅದನ್ನು ವಿಸ್ತರಿಸಲಿಕ್ಕೂ ಹೋಮ್‌ರೂಲಿನ ಯೋಜನೆಯಲ್ಲಿ ಅಂತರ್ಭವಿಸದ ಸಂಗತಿಗಳನ್ನು ಸಮಾವೇಶಿಸಲಿಕ್ಕೂ ಈ ಸಂಸ್ಥೆಗೆ ಅಧಿಕಾರವನ್ನು ಕೊಡೋಣಾಗಿದೆ. ಆದರೆ ವಿವಾದ್ಯ ಸಂಗತಿಗಳಲ್ಲಿ ಕೊನೆಯ ತೀರ್ಮಾನ ಕೆಲಸವು [illegible] ಇರಲಿ. ಈ ಯೋಜನೆಯು ವಿವರ [illegible]

[illegible]

ರಿಗೆ ಎಷ್ಟರ ಮಟ್ಟಿಗೆ ಸಮ್ಮತವಾಗಿದೆಂದು ಇನ್ನೂ ಗೊತ್ತಾಗಬೇಕಾಗಿದೆ.

೩. ಸಿಮ್ಲಾದಿಂದ ಭಾರತ ಸಂರಕ್ಷಕ ಸೈನ್ಯದ ಕುರಿತು ಹಿಂದುಸ್ಥಾನ ಸರಕಾರವು ಇಂಡಿಯಾ ಗೆಝೆಟಿನಲ್ಲಿ ಒಂದು ಠರಾವನ್ನು ಪ್ರಸಿದ್ಧಪಡಿಸಿದೆ. ಇಡೀ ಬ್ರಿಟಿಷ್ ಹಿಂದುಸ್ಥಾನದಿಂದ ಆರು ಸಾವಿರ ಜನರು ಭಾರತ ಸಂರಕ್ಷಕ ಸೈನ್ಯದಲ್ಲಿ ಸರಕಾರಕ್ಕೆ ಬೇಕಾದದ್ದು. ವರಿಷ್ಠ ಕೌನ್ಸಿಲಿನಲ್ಲಿ ಈ ಕಾಯಿದೆಯು ಪಾಸಾಗಿ ಎರಡು ತಿಂಗಳಿನ ಸಮಯವು ಕಳೆದುಹೋಯಿತು. ಆ ಎರಡು ತಿಂಗಳಿನ ಅವಧಿಯಲ್ಲಿ ಬರೆ ೩೦೦ ಜನರು ಮಾತ್ರ ಈ ಸೈನ್ಯದಲ್ಲಿ ಸೇರಿರುವರೆಂದು ಸರಕಾರವು ಆ ಠರಾವಿನಲ್ಲಿ ಹೇಳುತ್ತದೆ. ಈ ಸ್ಥಿತಿಯು ಸರಕಾರಕ್ಕೆ ಬಹು ನಿರಾಶಾಜನಕವಾಗಿದೆ. ಈ ಠರಾವನ್ನು ನೋಡುವಾಗ ಭಾರತ ಸಂರಕ್ಷಕ ಸೈನ್ಯದಲ್ಲಿ ಸೇರುವವರಿಗೆ ಸರಕಾರವು ಹಾಕಿಕೊಟ್ಟ ಶರ್ತಗಳು ಉದಾರವಾದವುಗಳಲ್ಲ, ಅವುಗಳಲ್ಲಿ ಎಷ್ಟೊ ಅಂಶದಿಂದ ಸುಧಾರಣೆಯಾಗತಕ್ಕದು ಅವಶ್ಯವಿದೆ, ಎಂಬ ಸಂಗತಿಯು ಕೌನ್ಸಿಲಿನೊಳಗಿನ ಚರ್ಚೆಯಿಂದಲೂ ಹೊರಗಿನ ಭಾಷಣ ಲೇಖನಗಳಿಂದಲೂ ಈಗ ಸರಕಾರದ ಲಕ್ಷ್ಯದಲ್ಲಿ ಬಂದಿದೆ. ಆದರೆ ಮತಭೇದಗಳನ್ನು ವಾದಿಸಲು ಈ ಸಮಯವಲ್ಲ, ಇದು ತತ್ಕಾಲದ ನಿರ್ವಾಹಕ್ಕೆ ಮಾಡಿದ ಏರ್ಪಾಟವು, ಶರ್ತಗಳಲ್ಲಿ ಯಾವ ನ್ಯೂನತೆಗಳಿದ್ದರೂ ಅವುಗಳನ್ನು ಮನಸ್ಸಿಗೆ ತಂದುಕೊಳ್ಳದೆ, ಹಿಂದುಸ್ಥಾನದ ಕೀರ್ತಿಗೆ ಕುಂದು ಬರದಂತೆ, ಮಾತೃ ಭೂಮಿಯ ರಕ್ಷಣೆಗಾಗಿ ಈ ಸೈನ್ಯದಲ್ಲಿ ಜನರು ವಿಲಂಬಮಾಡದೆ ಸೇರುವುದು ಅಗತ್ಯವಿದೆಂದು ವೈಸರಾಯರು ಅತ್ಯಾಗ್ರಹದಿಂದ ಕೇಳಿಕೊಂಡಿರುವರು. ಕೌನ್ಸಿಲಿನಲ್ಲಿ ಕಾಯಿದೆಯು ಪಾಸಾದಂದಿನಿಂದ ಈ ವರೆಗೆ ಪ್ರಜಾಮುಖಂಡರು ಈ ಸೈನ್ಯದ ಭರತಿಯ ಬಗ್ಗೆ ಮಾಡಿದ ಪ್ರಯತ್ನಗಳನ್ನು ಕೃತಜ್ಞತೆಯಿಂದ ಹೊಗಳಿ ಸರಕಾರವು ಪುನಃ ಅವರ ಸಾಹಾಯ್ಯವನ್ನು ಕೇಳುತ್ತಿದೆ. ಇರಲಿ. ಸರಕಾರವು ಹೇಳುವಂತೆ ಭಾರತ ಸಂರಕ್ಷಕ ಸೈನಿಕರಿಗೆ ಇಟ್ಟ ಶರ್ತಗಳು ಯಾವ ತರದವುಗಳಿರಲಿ, ಅವುಗಳ ಸುಧಾರಣೆಯ ಬಗ್ಗೆ ಮಾರ್ಗ ಪ್ರತೀಕ್ಷೆಯನ್ನು ಮಾಡುವುದು ಈಗ ಯೋಗ್ಯವಲ್ಲ. ಸೈನ್ಯ ಭರತಿಯ ಸಂಖ್ಯೆಯು ಎರಡು ತಿಂಗಳಲ್ಲಿ ಮುನ್ನೂರಕ್ಕೆ ದಾಟಿ ಹೋಗಬಾರದು ಇದು ಹಿಂದೀಗಳಿಗೆ ನಿಜವಾಗಿ ಅತ್ಯಂತ ಲಾಂಛನಾಸ್ಪದವಾದುದು. ಸ್ವದೇಶ ರಕ್ಷಣೆಗಾಗಿ ಮುಂದುವರಿಯದ ಜನರು ಬರೆ ಬಾಯಿಯಿಂದ ಮಾತ್ರ ಸ್ವರಾಜ್ಯಬೇಕೆಂದು ಕೇಳುವುದು ಇನ್ನಷ್ಟು ಲಾಂಛನಾಸ್ಪದವಲ್ಲವೆ? ಇನ್ನು ಮುಂದೆಯಾದರೂ ಹಿಂದೀ ತರುಣರು ಯಾವ ಪ್ರತಿಬಂಧವನ್ನೂ ಲೆಕ್ಕಿಸದೆ ಈ ಸೈನ್ಯದಲ್ಲಿ ಸೇರಿ ಸರಕಾರದ ಅಪೇಕ್ಷೆಗೂ ಮಾತೃದೇಶದ ಆಹ್ವಾನಕ್ಕೂ ಸಮಾಧಾನಕಾರಕವಾದ ಉತ್ತರ ಕೊಟ್ಟಾರೆಂದು ನಾವು ನಂಬುತ್ತೇವೆ.

೪. ಈ ವಾರದಲ್ಲಿ ಮದ್ರಾಸ ಕಾಯಿದೆ ಕೌನ್ಸಿಲಿನ ಅಧಿವೇಶನವು ನೀಲಗಿರಿಯೊಳಗಿನ ಉಟಕಮಂಡದ ಶೀತಲ ಹವೆಯಲ್ಲಿ ಪ್ರಾರಂಭವಾಗಿದೆ. ನಾಮದಾರ ಸಭಾಸದರು ಪ್ರಶ್ನೆಗಳನ್ನು ಮಾಡುತ್ತಾರೆ. ಅವುಗಳಿಗೆ ಸರಕಾರವು ಉತ್ತರಗಳನ್ನು ಕೊಡುತ್ತದೆ. ಹಿಂದುಸ್ಥಾನದಲ್ಲಿ ನಾಲ್ಕಾರು ಕಾಯಿದೆ ಕೌನ್ಸಿಲುಗಳು ಇವೆ. ಅವುಗಳಲ್ಲಿಯ ಸರಕಾರಿ ವ್ಯಕ್ತಿಗಳು ಬೇರೆಬೇರೆಯಾದರೂ ಟಂಕಸಾಲೆಯೊಳಗಿನ ರೂಪಾಯಿ ನಾಣ್ಯಗಳು ಒಂದೆ ಅಚ್ಚಿನಿಂದ ಹೊರಡುವಂತೆ ಈ ಭಿನ್ನಭಿನ್ನ ಅಧಿಕಾರಿಗಳ ಬಾಯಿಯಿಂದ ಹೊರಡುವ ಉತ್ತರಗಳು ಒಂದೆ ಧೋರಣದವುಗಳಾಗಿರುವವು. ಈ ವಿಷಯದಲ್ಲಿ ಪ್ರಸ್ತುತ ಅಧಿವೇಶನದೊಳಗಿನ ಪ್ರಶ್ನೋತ್ತರಗಳು ಉತ್ಕೃಷ್ಟವಾದ ದೃಷ್ಟಾಂತಗಳಾಗಿವೆ. ನಾಮದಾರ ಸಭಾಸದರಲ್ಲೊಬ್ಬರು—ತುತಿಕೋರಿನ್ ಮಾರ್ಗವಾಗಿ ಸಿಲೋನಿಗೆ ಹೋಗಲು ೩ನೇ ಕ್ಲಾಸಿನ ಪ್ರಯಾಣಿಕರಿಗೆ ಪ್ರತಿಬಂಧವು ಮಾಡಲ್ಪಟ್ಟಿದೆ, ಆದರಿಂದ ಅವರಿಗೆ ಅನೇಕ ಅಡಚಣೆಗಳು ಒದಗುತ್ತವೆ, ಆದುದರಿಂದ ಸರಕಾರವು ಆ ಪ್ರತಿಬಂಧವನ್ನು ತೆಗೆದುಹಾಕಬೇಕೆಂದು ವಿಜ್ಞಾಪಿಸಿಕೊಂಡರು. ಆದರೆ ಸರಕಾರವು ಈ ಸಂಗತಿಯನ್ನು ವಿಮರ್ಶಿಸಲು ಕೂಡಾ ಒಪ್ಪಿಕೊಳ್ಳಲಿಲ್ಲ. ಇದು ಖೇದದ ಮಾತಾಗಿದೆ. ರಾಮೇಶ್ವರ ಸ್ಟೇಶನಿನಲ್ಲಿ ಪ್ರಯಾಣಿಕರಿಗೆ ಧರ್ಮಶಾಲೆಗಳನ್ನು ಕಟ್ಟಿಸಿ ಕೊಡುವ ವಿಷಯದಲ್ಲಿ ಕೇಳಿಕೊಂಡಾಗ ಸರಕಾರವು ಹೇಳುತ್ತದೆ ಏನೆಂದರೆ, ಕಳದ ವರ್ಷ ಏಜಂಟನು ವಿಚಾರಣೆಮಾಡಿದಲ್ಲಿ ಅವನಿಗೆ ರಾಮೇಶ್ವರದ ಸ್ಟೇಶನಿನಲ್ಲಿ ಅಂಥದೊಂದು ಧರ್ಮಶಾಲೆಯ ಆವಶ್ಯಕತೆಯು ಕಂಡುಬರಲಿಲ್ಲ. ಈ ಸರಕಾರೀ ಉತ್ತರದಿಂದ ಅದರ ಸಹಾನುಭೂತಿಯನ್ನು ವಾಚಕರೇ ನಿರ್ಣಯಿಸಲಿ! ಯಾತ್ರಿಕರ ಕಷ್ಟನಿವಾರಣೆಯ ಬಗ್ಗೆ ನೇಮಿಸಿದ ಪಿಲ್ಗ್ರಿಮ್ ಕಮಿಟಿಯ ಅಭಿಪ್ರಾಯವನ್ನು ಅನುವಾದಿಸುವಾಗ ಪ್ರಯಾಣಿಕರಿಗೆ ತತ್ಕಾಲ ನಿಲ್ಲುವದಕ್ಕಾಗಿ ಒಂದು "ಧರ್ಮಶಾಲೆಯು ಬೇಕಾಗಿರುವ"ದೆಂದು ಅದರಲ್ಲಿ ನಡೆದ ವಿಷಯವು ಸರಕಾರಕ್ಕೆ ಮರೆತುಹೋಗಿದೆ. ಇದು ಮಾತ್ರ ಆಶ್ಚರ್ಯವು. ೯ನೇ ಡಿವಿಜನಿನ ಜನರಲ್ ಒಫಿಸರ್ ಕಮಾಂಡಿಗ್ ಇವರಿಂದ ಬಂದ ಮಾಹಿತಿಯಂತೆ ಮೇ ೧೫ರ ವರೆಗೆ ಭಾರತ ಸಂರಕ್ಷಕಸೈನ್ಯದಲ್ಲಿ ೬೫೭ ಜನರ ಭರತಿಯು ಆಗಿದೆಂದು ತಿಳಿಯುತ್ತದೆ. "ವಿದ್ಯಾರ್ಥಿಗಳೂ ರಾಜ್ಯಕೀಯ ವಿಷಯವೂ" ಈ ವಿಷಯದಲ್ಲಿ ಪ್ರಸಿದ್ಧವಾದ ಸರಕಾರೀ ಸರ್ಕ್ಯುಲರಿನ ವಿಷಯದಲ್ಲಿ ಪ್ರಶ್ನೆಯು ಬಂದಾಗ ವಿದ್ಯಾರ್ಥಿಗಳ ಶಿಕ್ಷಣದ ಸುಸ್ಥಿತಿಗಾಗಿಯೂ ಹಿತಕ್ಕಾಗಿಯೂ ಸದರಿ ಸರ್ಕ್ಯುಲರವು ಅವಶ್ಯವಿದೆಯೆಂದು ಸರಕಾರದಿಂದ ಹೇಳೋಣಾಗಿದೆ. ಈ ಬಗ್ಗೆ ನಮ್ಮ ಬಂಧುಗಳಾದ ಮದ್ರಾಸಿನ ಹಿಂದೂ ಪತ್ರಿಕಾಕಾರರು ಕೇಳುವದೇನೆಂದರೆ ವಿದ್ಯಾರ್ಥಿಗಳ ಹಿತವನ್ನು ನೋಡುವವರು ಸರಕಾರವಲ್ಲದೇ ಬೇರೆಯವರೂ ಇರುವರು. ಮತ್ತು ಅವರ ಮತವನ್ನು ಈ ಸರ್ಕ್ಯುಲರು ವಿದ್ಯಾರ್ಥಿಗಳ ಹಿತಕ್ಕೆ ಹಾನಿಕರವಾಗುವದು. ಕೌನ್ಸಿಲಿನಲ್ಲಿ [illegible] ಪ್ರಶ್ನೆಗಳನ್ನು ಕೇಳುವ [illegible] [illegible]

ಸ್ಥಳಿಕ—ಮಂಗಳೂರು.

ಮಂಜೇಶ್ವರ ಫಿರ್ಕಾ ರೆವಿನ್ಯೂ ಇನ್ಸ್‌ಪೆಕ್ಟರರಾಗಿರುವ ರಾ. ಶ್ರೀನಿವಾಸ [illegible] ರಾ| ಎಮ್. ಅಣ್ಣಪ್ಪ ಕಾಮತರವರ ಬದಲಿಗೆ [illegible] ಕ್ಲಾರ್ಕರಾಗಿರುವ ರಾ| ಎಮ್. ಅಪ್ಪುರಾವ್ ಬಿ. ಎ. ಬಿ. ಎಲ್. [illegible] ನೇಮಿಸಲ್ಪಟ್ಟು ಮಂಜೇಶ್ವರ ಫಿರ್ಕೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ಎಕ್ಟಿಂಗ್ ೨ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ್ ಮಿ| [illegible] ಎಸ್. ಪ್ರಾಸುರವರು ಕಲೆಕ್ಟರರ ಆಫೀಸಿನ ೭ನೇ [illegible] ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾಗಿರುವ ರಾವ್ ಬಹದ್ದೂರ್ [illegible] ಸ್ವಾಮಿ ರಾವ್‌ರವರಿಗೆ ಇಲ್ಲಿಂದ ರಾಮನಾಡು ಜಿಲ್ಲೆಗೂ ರಾಮನಾಡು ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಜಡ್ಜರಾಗಿರುವ ಮಿ| ಎಲ್. ಜಿ. ಮೂರ್‌ರವರಿಗೆ ಇಲ್ಲಿಗೂ ವರ್ಗವಾಗಿರುತ್ತದೆ.

